*Pandit Teaches the Bible Series*

# Let's Read the Gospels!

## Kannada Edition

**Author: T. Pandit**

**Translators:**
**R. Prakash Naik**
**Mr. Vinayak**

## About the book

This book is a college level textbook written for a Bible college in South India.

It can also be used for Bible study groups in local churches and for individual students of the Bible. It was written it with the South Indian Christian context in mind.

T. Pandit has many years of experience as an educationist, a Bible teacher and a college principal, in India as well as in internationally. He is now retired.

R. Prakash Naik is a trained teacher, pastor of a growing church in Karnataka, and a senior teacher at Kannada Satyaveda College in Karnataka, India

Mr. Vinayak has worked as a church planter in Karnataka and as a Bible college teacher

June 2021

## Copyright waiver

The authors of this work hereby waive all claim of copyright (economic and moral) in this work and immediately place it in the public domain. It may be used, distorted or destroyed in any manner whatsoever without further attribution or notice to the creators.

The authors of this work would, **however**, object to to any republishing of this work in its entirety for the purposes of financial gain.

# ಕನ್ನಡ ಸತ್ಯವೇದ ಮಹಾವಿದ್ಯಾಲಯ ಪಠ್ಯಪುಸ್ತಕಗಳ ಸರಣಿ

# *ಸುವಾರ್ತೆಗಳನ್ನು ಓದೋಣ !*


ಪ್ರಧಾನ ಸಂಪಾದಕರು

**ಟಿ. ಪಂಡಿತ್**

ಲೇಖಕರು

**ಟಿ. ಪಂಡಿತ್**

ಅನುವಾದಕರು

**ಆರ್. ಪ್ರಕಾಶ್ ನಾಯ್ಕ್**

**ಪಾಸ್ಟರ್ ವಿನಯ್**

# ಲೇಖಕರ ಪರಿಚಯ

**ಟಿ. ಪಂಡಿತ್** ರವರು ಒಬ್ಬ ಶಿಕ್ಷಣತಜ್ಞರಾಗಿಯೂ, ಒಬ್ಬ ಸತ್ಯವೇದ ಉಪದೇಶಕರಾಗಿಯೂ ಮತ್ತು ಒಬ್ಬ ಪ್ರಾಂಶುಪಾಲರಾಗಿಯೂ ಅನೇಕ ವರ್ಷಗಳ ಅನುಭವವನ್ನು ಹೊಂದಿದ್ದಾರೆ. ಅವರು ಕನ್ನಡ ಸತ್ಯವೇದ ಮಹಾವಿದ್ಯಾಲಯದೊಂದಿಗೆ, 2006 ರಲ್ಲಿನ ಅದರ ಪ್ರಾರಂಭದಿಂದಲೂ ತಮ್ಮನ್ನು ನಿಕಟವಾಗಿ ತೊಡಗಿಸಿಕೊಂಡಿದ್ದಾರೆ.

ಎಸ್ ಸರ್ ಬಾಸ್ಟ್ ಯೂರೋಪ್ ಮೂಲದ ವರ್ಣಚಿತ್ರ ಕಲಾವಿದರಾಗಿದ್ದಾರೆ. ಈ ಪಠ್ಯದಲ್ಲಿರುವ ಅನೇಕ ನಕ್ಷೆಗಳನ್ನು ಅವರು ತಯಾರಿಸಿದ್ದಾರೆ.

**ಆರ್. ಪ್ರಕಾಶ್ ನಾಯ್ಕ್** ರವರು ಒಬ್ಬ ಎಂ.ಎ. ಮತ್ತು ಎಂ.ಡಿವ್. ಪದವೀದರರಾಗಿದ್ದು, ಕನ್ನಡ ಸತ್ಯವೇದ ಮಹಾವಿದ್ಯಾಲಯದಲ್ಲಿ 2008 ರಿಂದ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಅದಲ್ಲದೆ ಅವರು ತಮ್ಮ ಪತ್ನಿ ಪ್ರೇಮಲತಾರೊಂದಿಗೆ ಹೂವಿನಹಡಗಲಿಯಲ್ಲಿ ಸಭಾಪಾಲಕರಾಗಿ ದೇವರ ಸೇವೆ ಮಾಡುತ್ತಿದ್ದಾರೆ. ಈ ಪುಸ್ತಕವು ಮೂಲತಃವಾಗಿ ಆಂಗ್ಲಭಾಷೆಯಲ್ಲಿದ್ದು, ಇದು ಅದರ ಕನ್ನಡದ ತರ್ಜುಮೆಯಾಗಿರುತ್ತದೆ.

ಈ ಪುಸ್ತಕದ ಲೇಖಕರು ಗ್ರಂಥಕರ್ತರಾಗಿ (ಹಣಕಾಸಿನ ಮತ್ತು ನೈತಿಕ) ತಮ್ಮ ಹಕ್ಕನ್ನು ಹೊಂದಿರುತ್ತಾರೆ, ಮತ್ತು ತಕ್ಷಣದಿಂದಲೇ ಈ ಪುಸ್ತಕವು ಅವರ ಅಧಿಕಾರಕ್ಕೊಳಪಟ್ಟಿದೆ. ಆದ್ದರಿಂದ ಅವರ ಗಮನಕ್ಕೆ ತರದೆ ಈ ಪುಸ್ತಕವನ್ನು ತಿದ್ದುವುದಾಗಲಿ ಅಥವಾ ನಕಲು ಮಾಡುವುದಾಗಲಿ ಅಥವಾ ನಾಶಮಾಡುವುದಾಗಲಿ ಮಾಡಕೂಡದೆಂದು ತಿಳಿಸಲಾಗಿದೆ.

ಹೊಸ ಪ್ರತಿ ಫೆಬ್ರುವರಿ 2019

## ವಿಷಯಾಂಶಗಳು

### ನಕ್ಷೆಗಳು


ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನಿನ ನಕ್ಷ 10

ಯೇಸುವಿನ ಕಾಲದಲ್ಲಿನ ಗಲಿಲಾಯದ ನಕ್ಷೆ 11


### ಯೇಸುವಿನ ಆಗಮನದ ಕುರಿತಾದ ಹನ್ನೆರಡು ಅಧ್ಯಯನಗಳು


1. ಸ್ನಾನಿಕನಾದ ಯೋಹಾನನ ಜನನವನ್ನು ಮುಂತಿಳಿಸಿದ್ದು, ಲೂಕ 1:5-25 14
2. ಯೇಸುವಿನ ಜನನವನ್ನು ಮುಂತಿಳಿಸಿದ್ದು, ಲೂಕ 1:26-38 16
3. ಮರಿಯಳು ಎಲಿಸಬೇತಳನ್ನು ಸಂಧಿಸಿದ್ದು, ಲೂಕ 1:39-56 18
4. ಸ್ನಾನಿಕನಾದ ಯೋಹಾನನ ಜನನ, ಲೂಕ 1:57-80 20
5. ಎರಡು ವಂಶಾವಳಿಗಳು, ಮತ್ತಾಯ 1:1-17, ಮತ್ತು ಲೂಕ 3:23-38 22
6. ಯೇಸುವಿನ ಜನನ, ಮತ್ತಾಯ 1:18-25 ಮತ್ತು ಲೂಕ 2:1-7 24
7. ಕುರುಬರು ಮತ್ತು ದೇವದೂತರು, ಲೂಕ 2:8-20 27
8. ಯೇಸುವನ್ನು ಯೆರೂಸಲೇಮಿನ ದೇವಾಲಯದಲ್ಲಿ ಸಮರ್ಪಿಸಿದ್ದು, ಲೂಕ 2:21-40 30
9. ಮೂಡಣ ದೇಶದ ಜೋಯಿಸರು, ಮತ್ತಾಯ 2:1-12 32
10. ಐಗುಪ್ತಕ್ಕೆ ಪಲಾಯನ ಮತ್ತು ನಜರೇತಿಗೆ ಹಿಂತಿರುಗಿದ್ದು, ಮತ್ತಾಯ 2:13-23 36
11. ವಾಕ್ಯವು ನರಾವತಾರವೆತ್ತಿ ಬಂದದ್ದು, ಯೋಹಾನ 1:1-18 38
12. ಹನ್ನೆರಡನೆಯ ಪ್ರಾಯದಲ್ಲಿ ಯೇಸು, ಲೂಕ 2:41-52 40


### ಮಾರ್ಕನ ಸುವಾರ್ತೆಯ ಒಂದು ಅಧ್ಯಯನ


ಮಾರ್ಕ ಅಧ್ಯಾಯ 1 43

ಮಾರ್ಕ ಅಧ್ಯಾಯ 2 50

ಮಾರ್ಕ ಅಧ್ಯಾಯ 3 55

ಮಾರ್ಕ ಅಧ್ಯಾಯ 4 58

ಮಾರ್ಕ ಅಧ್ಯಾಯ 5 62

ಮಾರ್ಕ ಅಧ್ಯಾಯ 6 67

ಮಾರ್ಕ ಅಧ್ಯಾಯ 7 74

ಮಾರ್ಕ ಅಧ್ಯಾಯ 8 79

ಮಾರ್ಕ ಅಧ್ಯಾಯ 9 84

ಮಾರ್ಕ ಅಧ್ಯಾಯ 10 90

ಮಾರ್ಕ ಅಧ್ಯಾಯ 11 96

ಮಾರ್ಕ ಅಧ್ಯಾಯ 12 101

ಮಾರ್ಕ ಅಧ್ಯಾಯ 13 107

| | |
|---|---|
| ಮಾರ್ಕ ಅಧ್ಯಾಯ 14 | 112 |
| ಮಾರ್ಕ ಅಧ್ಯಾಯ 15 | 122 |
| ಮಾರ್ಕ ಅಧ್ಯಾಯ 16 | 130 |

**ಯೇಸುವಿನ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಕುರಿತಾದ ಎಂಟು ಅಧ್ಯಯನಗಳು**

| | |
|---|---|
| 1. ಪುನರುತ್ಥಾನ ಮತ್ತು ಕಾವಲುಗಾರರು, ಮತ್ತಾಯ 28:15 | 135 |
| 2. ತೋಟದಲ್ಲಿ ಮಗ್ದಲದ ಮರಿಯಳು ಮತ್ತು ಯೇಸು, ಯೋಹಾನ 20:1-18 | 136 |
| 3. ಎಮ್ಮಾಹುವಿನ ರಸ್ತೆಯಲ್ಲಿ, ಲೂಕ 24:15-35 | 138 |
| 4. ಶಿಷ್ಯರ ಒಂದು ಗುಂಪು, ಲೂಕ 24:36-49 ಮತ್ತು ಯೋಹಾನ 20:19-25 | 141 |
| 5. ಯೇಸುವು ತೋಮನಿಗೆ ಕಾಣಿಸಿಕೊಂಡದ್ದು, ಯೋಹಾನ 20:26-29 | 143 |
| 6. ಗಲಿಲಾಯ ಸಮುದ್ರದ ಬಳಿ, ಯೋಹಾನ 21:1-24 | 145 |
| 7. ಮಹಾ ಆಜ್ಞೆ, ಮತ್ತಾಯ 28:16-20 | 148 |
| 8. ಯೇಸುವು ಪರಲೋಕಕ್ಕೆ ಏರಿಹೋದದ್ದು, ಲೂಕ 24:50-53 | 149 |

**ಮತ್ತಾಯ ಮತ್ತು ಲೂಕನ ಸುವಾರ್ತೆಯಿಂದ ಮೂವತ್ತು ಅಧ್ಯಯನಗಳು**

| | |
|---|---|
| 1. ಒಬ್ಬ ಶತಾಧಿಪತಿಯ ನಂಬಿಕೆ, ಮತ್ತಾಯ 8:5-13 | 153 |
| 2. ಯೇಸುವು ಒಬ್ಬ ವಿಧವೆಯ ಮಗನನ್ನು ಬದುಕಿಸಿದ್ದು, ಲೂಕ 7:11-17 | 155 |
| 3. ಯೇಸು ಮತ್ತು ಸ್ನಾನಿಕನಾದ ಯೋಹಾನ, ಮತ್ತಾಯ 11:2-19 | 156 |
| 4. ಯೇಸು ಒಬ್ಬ ದುರಾಚಾರಿಯಾದ ಹೆಂಗಸಿನಿಂದ ಪಾದಸೇವೆ ಹೊಂದಿದ್ದು, ಲೂಕ 7:36-50 | 158 |
| 5. ಕಷ್ಟ ಮತ್ತು ವಿಶ್ರಾಂತಿ, ಮತ್ತಾಯ 11:20-30 | 160 |
| 6. ಯೋನನ ಸೂಚಕಕಾರ್ಯ, ಮತ್ತಾಯ 12:38-42 | 162 |
| 7. ಪರಲೋಕ ರಾಜ್ಯವನ್ನು ಕುರಿತ ಸಾಮ್ಯಗಳು, ಮತ್ತಾಯ 13 | 164 |
| 8. ಐದು ಸ್ವಸ್ಥತಾ ಅದ್ಭುತಗಳು | 167 |
| 9. ದೇವಾಲಯದ ತೆರಿಗೆಯನ್ನು ಕಟ್ಟುವುದು, ಮತ್ತಾಯ 17:24-27 | 171 |
| 10. ಕರುಣೆಯಿಲ್ಲದ ಸೇವಕ, ಮತ್ತಾಯ 18:21-35 | 172 |
| 11. ಶಿಷ್ಯತ್ವದ ಲಕ್ಷಣ, ಲೂಕ 9:57-63 | 174 |
| 12. ಯೇಸು ಎಪ್ಪತ್ತು ಮಂದಿ ಶಿಷ್ಯರನ್ನು ಕಳುಹಿಸಿದ್ದು, ಲೂಕ 10:1-20 | 176 |
| 13. ಶಿಷ್ಯತ್ವದ ಕ್ರಯ (ಬೆಲೆ), ಲೂಕ 14:25-33 | 179 |
| 14. ಕೆಲಸಗಾರರ ಕೊರತೆ, ಮತ್ತಾಯ 9:35-38 | 180 |
| 15. ಒಳ್ಳೆಯ ಸಮಾರ್ಯನು, ಲೂಕ 10:25-37 | 181 |
| 16. ಮಾರ್ಥಳು ಮತ್ತು ಮರಿಯಳು, ಲೂಕ 10:38-42 | 184 |
| 17. ಯೆಹೂದಿ ನಾಯಕರ ಆರು ಸಂಕಟಗಳು, ಲೂಕ 11:37-54 | 185 |
| 18. ಬುದ್ಧಿಯಿಲ್ಲದ ಐಶ್ವರ್ಯವಂತನು, ಲೂಕ 12:13-21 | 186 |

19. ಇಕ್ಕಟ್ಟಾದ ಬಾಗಿಲು, ಲೂಕ 13:22-30 188
20. ಮೂರು ಕಳೆದು ಹೋದ ಮತ್ತು ತಿರುಗಿ ಕಂಡುಕೊಂಡ ಸಾಮ್ಯಗಳು, ಲೂಕ ಅಧ್ಯಾಯ 15 190
21. ಕಳ್ಳನಾದ ಮನೆಯವಾರ್ತೆಯವನು, ಲೂಕ 16:1-9 193
22. ಐಶರ್ಯವಂತನು ಮತ್ತು ಲಾಜರನು, ಲೂಕ 16:19-31 194
23. ದೇವರ ರಾಜ್ಯದ ಬರೋಣ, ಲೂಕ 17:20-37 196
24. ಪ್ರಾರ್ಥನೆಯ ಕುರಿತಾದ ಎರಡು ಸಾಮ್ಯಗಳು, ಲೂಕ 18:1-14 199
25. ಜಕ್ಕಾಯನು, ಲೂಕ 19:1-10 201
26. ದ್ರಾಕ್ಷೆತೋಟದಲ್ಲಿನ ಕೆಲಸಗಾರರು, ಮತ್ತಾಯ 20:1-16 203
27. ಮದುವೆಯ ಭೋಜನ, ಮತ್ತಾಯ 22:1-14 204
28. ಹತ್ತು ಮಂದಿ ಕನ್ಯೆಯರು, ಮತ್ತಾಯ 25:1-13 206
29. ತಲಾಂತುಗಳು, ಮತ್ತಾಯ 25:14-30 207
30. ಕುರಿಗಳು ಮತ್ತು ಆಡುಗಳು, ಮತ್ತಾಯ 25:31-46 209

**ಯೋಹಾನನ ಸುವಾರ್ತೆಯಿಂದ ಎಂಟು ಅಧ್ಯಯನಗಳು**

1. ಯೇಸುವು ಫಿಲಿಪ್ಪ ಮತ್ತು ನತಾನಯೇಲನನ್ನು ಕರೆಯುವುದು, ಯೋಹಾನ 1:43-51 215
2. ಗಲಿಲಾಯದ ಕಾನಾ ಊರಿನಲ್ಲಿನ ಮದುವೆ, ಯೋಹಾನ 2:1-12 217
3. ಯೇಸು ಮತ್ತು ನಿಕೊದೇಮನು, ಯೋಹಾನ 3:1-18 218
4. ಯೇಸು ಮತ್ತು ಸಮಾರ್ಯದ ಸ್ತ್ರೀ, ಯೋಹಾನ 3:1-18 220
5. ಬೇಥೆಸ್ಥ ಬಳಿಯ ಅದ್ಭುತ, ಯೋಹಾನ 5:1-15 223
6. ವ್ಯಭಿಚಾರದಲ್ಲಿ ಸಿಕ್ಕ ಸ್ತ್ರೀ, ಯೋಹಾನ 8:2-11 226
7. ಯೇಸು ಹುಟ್ಟು ಕುರುಡನನ್ನು ಸ್ವಸ್ಥಪಡಿಸಿದ್ದು, ಯೋಹಾನ 9:1-41 228
8. ಯೇಸು ಸತ್ತು ಹೋಗಿದ್ದ ಲಾಜರನನ್ನು ಬದುಕಿಸಿದ್ದು, ಯೋಹಾನ 11:1-44 229

**ಯೇಸುವಿನ ಕುರಿತಾದ ಹನ್ನೆರಡು ಪಾಠಗಳು**

“ಈತನು ಬಡಗಿಯಲ್ಲವೇ?” 232
… ಸೈತಾನನಿಂದ ಶೋಧಿಸಲ್ಪಟ್ಟಿದ್ದು 234
… ಶಾಸ್ತ್ರವು ನೆರವೇರಿದ್ದು … 234
... ಮತ್ತು ಎರಡು ಮೀನು 237
ಅವರು ಯೇಸುವನ್ನು ನೋಡಿ ... 240
“ನನ್ನ ಆಲಯವನ್ನು ಕಳ್ಳರ ಗವಿ ಮಾಡುತ್ತೀರಿ” 242
“ತೀರಿತು” 244
“ಆತನು ಇಲ್ಲಿ ಇಲ್ಲ ಆತನು ಎದ್ದಿದ್ದಾನೆ” 247
“ನನ್ನ ಕರ್ತನೆ ನನ್ನ ದೇವರೇ!” 249

"ಬಂದು ಊಟ ಮಾಡಿರಿ" 252
"ನನ್ನ ಹಿಂದೆ ಬನ್ನಿರಿ!" 253
"... ನಾನು ತಿರುಗಿ ಬರುವವರೆಗೂ" 257
ಶಿಕ್ಷಕರಿಗಾಗಿ ಸಲಹೆಗಳು 260

## ಉತ್ತರಗಳು- ಯೇಸುಕ್ರಿಸ್ತನ ಆಗಮನದ ಕುರಿತಾದ ಹನ್ನೆರಡು ಅಧ್ಯಯನಗಳು

1. ಉತ್ತರಗಳು: ಸ್ನಾನಿಕನಾದ ಯೋಹಾನನ ಜನನವನ್ನು ಮುಂತಿಳಿಸಿದ್ದು, ಲೂಕ 1:5-25 262
2. ಉತ್ತರಗಳು: ಯೇಸುವಿನ ಜನನವನ್ನು ಮುಂತಿಳಿಸಿದ್ದು, ಲೂಕ 1:26-38 264
3. ಉತ್ತರಗಳು: ಮರಿಯಳು ಎಲಿಸಬೇತಳನ್ನು ಸಂಧಿಸಿದ್ದು, ಲೂಕ 1:39-56 266
4. ಉತ್ತರಗಳು: ಸ್ನಾನಿಕನಾದ ಯೋಹಾನನ ಜನನ, ಲೂಕ 1:57-80 268
5. ಉತ್ತರಗಳು: ಎರಡು ವಂಶಾವಳಿಗಳು, ಮತ್ತಾಯ 1:1-17 ಮತ್ತು ಲೂಕ 3:23-28 270
6. ಉತ್ತರಗಳು: ಯೇಸುವಿನ ಜನನ, ಮತ್ತಾಯ 1:18-25 ಮತ್ತು ಲೂಕ 2:1-7 271
7. ಉತ್ತರಗಳು: ಕುರುಬರು ಮತ್ತು ದೇವದೂತರು, ಲೂಕ 2:8-20 273
8. ಉತ್ತರಗಳು: ಯೆರೂಸಲೇಮಿನ ದೇವಾಲಯದಲ್ಲಿ ಯೇಸುವನ್ನು ಸಮರ್ಪಿಸಿದ್ದು, ಲೂಕ 2:21-40 275
9. ಉತ್ತರಗಳು: ಮೂಡಣ ದೇಶದ ಜೋಯಿಸರು, ಮತ್ತಾಯ 2:1-12 277
10. ಉತ್ತರಗಳು: ಐಗುಪ್ತಕ್ಕೆ ಪಲಾಯನ ಮತ್ತು ನಜರೇತಿಗೆ ಹಿಂತಿರುಗಿದ್ದು, ಮತ್ತಾಯ 2:13-23 279
11. ಉತ್ತರಗಳು: ವಾಕ್ಯವು ನರಾವತಾರವೆತ್ತಿ ಬಂದದ್ದು, ಯೋಹಾನ 1:1-18 281
12. ಉತ್ತರಗಳು: ಹನ್ನೆರಡು ವರ್ಷ ಪ್ರಾಯದಲ್ಲಿ ಯೇಸು, ಲೂಕ 2:41-52 282

## ಉತ್ತರಗಳು – ಮಾರ್ಕನ ಸುವಾರ್ತೆಯ ಒಂದು ಅಧ್ಯಯನ

1. ಉತ್ತರಗಳು: ಮಾರ್ಕ ಅಧ್ಯಾಯ 1 284
2. ಉತ್ತರಗಳು: ಮಾರ್ಕ ಅಧ್ಯಾಯ 2 289
3. ಉತ್ತರಗಳು: ಮಾರ್ಕ ಅಧ್ಯಾಯ 3 295
4. ಉತ್ತರಗಳು: ಮಾರ್ಕ ಅಧ್ಯಾಯ 4 299
5. ಉತ್ತರಗಳು: ಮಾರ್ಕ ಅಧ್ಯಾಯ 5 303
6. ಉತ್ತರಗಳು: ಮಾರ್ಕ ಅಧ್ಯಾಯ 6 309
7. ಉತ್ತರಗಳು: ಮಾರ್ಕ ಅಧ್ಯಾಯ 7 315
8. ಉತ್ತರಗಳು: ಮಾರ್ಕ ಅಧ್ಯಾಯ 8 319
9. ಉತ್ತರಗಳು: ಮಾರ್ಕ ಅಧ್ಯಾಯ 9 324
10. ಉತ್ತರಗಳು: ಮಾರ್ಕ ಅಧ್ಯಾಯ 10 330
11. ಉತ್ತರಗಳು: ಮಾರ್ಕ ಅಧ್ಯಾಯ 11 336
12. ಉತ್ತರಗಳು: ಮಾರ್ಕ ಅಧ್ಯಾಯ 12 340
13. ಉತ್ತರಗಳು: ಮಾರ್ಕ ಅಧ್ಯಾಯ 13 345

14. ಉತ್ತರಗಳು: ಮಾರ್ಕ ಅಧ್ಯಾಯ 14 348
15. ಉತ್ತರಗಳು: ಮಾರ್ಕ ಅಧ್ಯಾಯ 15 355
16. ಉತ್ತರಗಳು: ಮಾರ್ಕ ಅಧ್ಯಾಯ 16 360

**ಉತ್ತರಗಳು – ಯೇಸುವಿನ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಕುರಿತಾದ ಎಂಟು ಅಧ್ಯಯನಗಳು**

1. ಉತ್ತರಗಳು: ಪುನರುತ್ಥಾನ ಮತ್ತು ಕಾವಲುಗಾರರು, ಮತ್ತಾಯ 28:15 364
2. ಉತ್ತರಗಳು: ತೋಟದಲ್ಲಿ ಮಗ್ದಲದ ಮರಿಯಳು ಮತ್ತು ಯೇಸು, ಯೋಹಾನ 20:1-18 366
3. ಉತ್ತರಗಳು: ಎಮ್ಮಾಹುವಿನ ರಸ್ತೆಯಲ್ಲಿ, ಲೂಕ 24:15-35 368
4. ಉತ್ತರಗಳು: ಶಿಷ್ಯರ ಒಂದು ಗುಂಪು, ಲೂಕ 24:36-49 ಮತ್ತು ಯೋಹಾನ 20:19-25 371
5. ಉತ್ತರಗಳು: ಯೇಸುವು ತೋಮನಿಗೆ ಕಾಣಿಸಿಕೊಂಡದ್ದು, ಯೋಹಾನ 20:26-29 374
6. ಉತ್ತರಗಳು: ಗಲಿಲಾಯ ಸಮುದ್ರದ ಬಳಿ, ಯೋಹಾನ 21:1-24 375
7. ಉತ್ತರಗಳು: ಮಹಾ ಆಜ್ಞೆ, ಮತ್ತಾಯ 28:16-20 378
8. ಉತ್ತರಗಳು: ಯೇಸುವು ಪರಲೋಕಕ್ಕೆ ಏರಿಹೋದದ್ದು, ಲೂಕ 24:50-53 380

**ಉತ್ತರಗಳು – ಮತ್ತಾಯ ಮತ್ತು ಲೂಕನ ಸುವಾರ್ತೆಯಿಂದ ಮೂವತ್ತು ಅಧ್ಯಯನಗಳು**

1. ಉತ್ತರಗಳು: ಒಬ್ಬ ಶತಾಧಿಪತಿಯ ನಂಬಿಕೆ, ಮತ್ತಾಯ 8:5-13 382
2. ಉತ್ತರಗಳು: ಯೇಸುವು ಒಬ್ಬ ವಿಧವೆಯ ಮಗನನ್ನು ಬದುಕಿಸಿದ್ದು ಲೂಕ 7:11-17 384
3. ಉತ್ತರಗಳು: ಯೇಸು ಮತ್ತು ಸ್ನಾನಿಕನಾದ ಯೋಹಾನ, ಮತ್ತಾಯ 11:2-19 385
4. ಉತ್ತರಗಳು: ಯೇಸು ಒಬ್ಬ ದುರಾಚಾರಿಯಾದ ಹೆಂಗಸಿನಿಂದ ಪಾದಸೇವೆ ಹೊಂದಿದ್ದು, ಲೂಕ 7:36-50 387
5. ಉತ್ತರಗಳು: ಕಷ್ಟ ಮತ್ತು ವಿಶ್ರಾಂತಿ, ಮತ್ತಾಯ 11:20-30 389
6. ಉತ್ತರಗಳು: ಯೋನನ ಸೂಚಕಕಾರ್ಯ, ಮತ್ತಾಯ 12:38-42 391
7. ಉತ್ತರಗಳು: ಪರಲೋಕ ರಾಜ್ಯವನ್ನು ಕುರಿತ ಸಾಮ್ಯಗಳು, ಮತ್ತಾಯ 13 393
8. ಉತ್ತರಗಳು: ಐದು ಸ್ವಸ್ಥತಾ ಅದ್ಭುತಗಳು 396
9. ಉತ್ತರಗಳು: ದೇವಾಲಯದ ತೆರಿಗೆಯನ್ನು ಕಟ್ಟುವುದು, ಮತ್ತಾಯ 17:24-27 400
10. ಉತ್ತರಗಳು: ಕರುಣೆಯಿಲ್ಲದ ಸೇವಕ, ಮತ್ತಾಯ 18:21-35 401
11. ಉತ್ತರಗಳು: ಶಿಷ್ಯತ್ವದ ಲಕ್ಷಣ, ಲೂಕ 9:57-63 402
12. ಉತ್ತರಗಳು: ಯೇಸು ಎಪ್ಪತ್ತು ಮಂದಿ ಶಿಷ್ಯರನ್ನು ಕಳುಹಿಸಿದ್ದು, ಲೂಕ 10:1-20 404
13. ಉತ್ತರಗಳು: ಶಿಷ್ಯತ್ವದ ಕ್ರಯ (ಬೆಲೆ), ಲೂಕ 14:25-33 407
14. ಉತ್ತರಗಳು: ಕೆಲಸಗಾರರ ಕೊರತೆ, ಮತ್ತಾಯ 9:35-38 408
15. ಉತ್ತರಗಳು: ಒಳ್ಳೆಯ ಸಮಾರ್ಯನು, ಲೂಕ 10:25-37 410
16. ಉತ್ತರಗಳು: ಮಾರ್ಥಳು ಮತ್ತು ಮರಿಯಳು, ಲೂಕ 10:38-42 412
17. ಉತ್ತರಗಳು: ಯೆಹೂದಿ ನಾಯಕರ ಆರು ಸಾಮ್ಯಗಳು, ಲೂಕ 11:37-54 413
18. ಉತ್ತರಗಳು: ಬುದ್ಧಿಯಿಲ್ಲದ ಐಶ್ವರ್ಯವಂತನು, ಲೂಕ 12:13-21 415

19. ಉತ್ತರಗಳು: ಇಕ್ಕಟ್ಟಾದ ಬಾಗಿಲು, ಲೂಕ 13:22-30 417
20. ಉತ್ತರಗಳು: ಮೂರು ಕಳೆದು ಹೋದ ಮತ್ತು ತಿರುಗಿ ಕಂಡುಕೊಂಡ ಸಾಮ್ಯಗಳು, ಲೂಕ ಅಧ್ಯಾಯ 15 419
21. ಉತ್ತರಗಳು: ಕಳ್ಳನಾದ ಮನೆವಾರ್ತೆಯವನು, ಲೂಕ 16:1-9 423
22. ಉತ್ತರಗಳು: ಐಶ್ವರ್ಯವಂತನು ಮತ್ತು ಲಾಜರನು, ಲೂಕ 16:19-31 425
23. ಉತ್ತರಗಳು: ದೇವರ ರಾಜ್ಯದ ಬರೋಣ, ಲೂಕ 17:20-37 427
24. ಉತ್ತರಗಳು: ಪ್ರಾರ್ಥನೆಯ ಕುರಿತಾದ ಎರಡು ಸಾಮ್ಯಗಳು, ಲೂಕ 18:1-14 430
25. ಉತ್ತರಗಳು: ಜಕ್ಕಾಯನು, ಲೂಕ 19:1-10 432
26. ಉತ್ತರಗಳು: ದ್ರಾಕ್ಷೆತೋಟದಲ್ಲಿನ ಕೆಲಸಗಾರರು, ಮತ್ತಾಯ 20:1-16 434
27. ಉತ್ತರಗಳು: ಮದುವೆಯ ಭೋಜನ, ಮತ್ತಾಯ 22:1-14 436
28. ಉತ್ತರಗಳು: ಹತ್ತು ಮಂದಿ ಕನ್ಯೆಯರು, ಮತ್ತಾಯ 25:1-13 438
29. ಉತ್ತರಗಳು: ತಲಾಂತುಗಳು, ಮತ್ತಾಯ 25:14-30 440
30. ಉತ್ತರಗಳು: ಕುರಿಗಳು ಮತ್ತು ಆಡುಗಳು, ಮತ್ತಾಯ 25:31-46 442

**ಉತ್ತರಗಳು – ಯೋಹಾನನ ಸುವಾರ್ತೆಯಿಂದ ಎಂಟು ಅಧ್ಯಯನಗಳು**

1. ಉತ್ತರಗಳು: ಯೇಸುವು ಫಿಲಿಪ್ಪ ಮತ್ತು ನತಾನಯೇಲನನ್ನು ಕರೆಯುವುದು, ಯೋಹಾನ 1:43-51 445
2. ಉತ್ತರಗಳು: ಗಲಿಲಾಯದ ಕಾನಾ ಊರಿನಲ್ಲಿನ ಮದುವೆ, ಯೋಹಾನ 2:1-12 447
3. ಉತ್ತರಗಳು: ಯೇಸು ಮತ್ತು ನಿಕೊದೇಮನು, ಯೋಹಾನ 3:1-18 449
4. ಉತ್ತರಗಳು: ಯೇಸು ಮತ್ತು ಸಮಾರ್ಯದ ಸ್ತ್ರೀ, ಯೋಹಾನ 3:1-18 450
5. ಉತ್ತರಗಳು: ಬೇಥೆಸ್ಥ ಬಳಿಯ ಅದ್ಭುತ, ಯೋಹಾನ 5:1-15 452
6. ಉತ್ತರಗಳು: ವ್ಯಭಿಚಾರದಲ್ಲಿ ಸಿಕ್ಕ ಸ್ತ್ರೀ, ಯೋಹಾನ 8:2-11 454
7. ಉತ್ತರಗಳು: ಯೇಸು ಹುಟ್ಟು ಕುರುಡನನ್ನು ಸ್ವಸ್ಥಪಡಿಸಿದ್ದು, ಯೋಹಾನ 9:1-41 456
8. ಉತ್ತರಗಳು: ಯೇಸು ಸತ್ತು ಹೋಗಿದ್ದ ಲಾಜರನನ್ನು ಬದುಕಿಸಿದ್ದು, ಯೋಹಾನ 11:1-44 458

**ಉಲ್ಲೇಖ**

ಹೊಸ ಒಡಂಬಡಿಕೆಯ ಕಾಲಗಣನೆ 461
ಯೇಸುವಿನ ಜೀವನ – ನಾಲ್ಕು ಕಾಲಗಣನೆಗಳು 463
ಯೇಸುವಿನ 12 ಅಪೊಸ್ತಲರು 468
ಯೇಸುವಿನ ಸಾಮ್ಯಗಳು 470
ಯೇಸುವಿನ ಅದ್ಭುತಗಳು 472
ನಾಲ್ಕು ಸುವಾರ್ತೆಗಳು 474

ಮತ್ತಾಯನ ಸುವಾರ್ತೆ 480

ಮಾರ್ಕನ ಸುವಾರ್ತೆ 483

ಲೂಕನ ಸುವಾರ್ತೆ 486

ಯೋಹಾನನ ಸುವರ್ತೆ 488

ರೋಮನ್ ಸಾಮ್ರಾಜ್ಯ ಮತ್ತು ಪ್ಯಾಲೆಸ್ತೀನ್ 489

ಎರಡು ನಕ್ಷೆಗಳ ಕುರಿತು ಪ್ರಶ್ನೆಗಳು 493

ಐದು ಕೋಷ್ಟಕಗಳ ಕುರಿತು ಪ್ರಶ್ನೆಗಳು 495

ಆರು ಉಲ್ಲೇಖ ಲೇಖನಗಳ ಕುರಿತು ಪ್ರಶ್ನೆಗಳು 498

**ಶಿಕ್ಷಕರಿಗಾಗಿ ಅತೀ ಪ್ರಾಮುಖ್ಯವಾದದ್ದು**

ನೀನೊಬ್ಬ ಒಳ್ಳೆಯ/ಉತ್ತಮ ಶಿಕ್ಷಕ 503

ನಿಮ್ಮ ವಿಷಯವನ್ನು ಯೋಜನೆ ಮಾಡಿರಿ 504

ಒಂದು ಅಧ್ಯಯನವನ್ನು ನಾಲ್ಕು ಹಂತಗಳಲ್ಲಿ ಮುಗಿಸುವುದು ಹೇಗೆ 506

ಹೆಚ್ಚುವರಿ ಸಲಹೆ ಮತ್ತು ಟಿಪ್ಪಣಿಗಳು 507


**ಸೂಚ್ಯಂಕಗಳು**

ಈ ಪಠ್ಯಪುಸ್ತಕದಲ್ಲಿ ಅಭ್ಯಾಸಿಸಲಾದ ಮತ್ತಾಯ ಲೂಕ ಮತ್ತು ಯೋಹಾನನ ಸುವಾರ್ತೆಯ ವಾಕ್ಯಭಾಗಗಳು 511

ಈ ಅಧ್ಯಯನಗಳಲ್ಲಿ ಹೋಲಿಸಲಾದ ಪಠ್ಯಗಳ ವಾಕ್ಯಗಳ ಪಟ್ಟಿ 514

ಸಾಮಾನ್ಯ ಸೂಚ್ಯಂಕ 528

**ಪ್ಯಾಲೆಸ್ತೀನ್ ನಕ್ಷೆ**


Sidon
Damascus
ABILENE
River Jordan
River Leontes
Mount Hermon
SYRIA
Tyre
Caesarea Philippi
Mediterranean Sea
PHOENICIA
ITURAEA
TRACHONITIS
Capernaum
Sea of Galilee
TETRARCHY OF PHILIP
Tiberias
GALILEE
River Kishon
Plain of Esdraelon
Nazareth
DECAPOLIS
Caesarea
SAMARIA
Samaria
Mount Gerizim
PERAEA
Joppa
River Jordan
Jericho
Jerusalem
Bethlehem
Machaerus
Gaza
JUDAEA
Dead Sea
Masada
ARABIA PETRAEA
IDUMAEA
0 15 30 Km

## ಗಲಿಲಾಯ ನಕ್ಷೆ



Tyre
Caesarea Philippi
Kedesh
MEDITERRANEAN SEA
SYRO-PHOENICIA
GAULANITIS
Hazor
Chorazin
Bethsaida
Acco (Ptolemais)
Cabul
Capernaum
GALILEE
Magdala
Sea of Galilee
Tiberias
Cana
Mt. Tabor
Shimron
Nazareth
Gadara
Nain
Megiddo
Shunem
Jezreel
DECAPOLIS
Taanach
Scythopolis (Beth-Shean)
Jordan R.
SAMARIA

# ಯೇಸುವಿನ ಆಗಮನದ ಕುರಿತಾದ ಹನ್ನೆರಡು ಅಧ್ಯಯನಗಳು

**ಪೀಠಿಕೆ**

ಈ ಒಂದು ಘಟಕವು ಯೇಸುವು ತನ್ನ ಸೇವೆಯನ್ನು ಸಾರ್ವಜನಿಕವಾಗಿ ಪ್ರಾರಂಭಿಸುವುದಕ್ಕಿಂತ ಮುಂಚೆ ಏನಾಯಿತೆಂಬುದರ ಬಗ್ಗೆ ಮತ್ತಾಯ, ಲೂಕ ಮತ್ತು ಯೋಹಾನನ ಸುವಾರ್ತೆಗಳಿಂದಾಯ್ದ 12 ಅಧ್ಯಯನಗಳನ್ನು ಒಳಗೊಂಡಿದೆ.

1. ಸ್ನಾನಿಕನಾದ ಯೋಹಾನನ ಜನನವನ್ನು ಮುಂತಿಳಿಸಿದ್ದು, ಲೂಕ 1:5-25
2. ಯೇಸುವಿನ ಜನನವನ್ನು ಮುಂತಿಳಿಸಿದ್ದು, ಲೂಕ 1:26-38
3. ಮರಿಯಳು ಎಲಿಸಬೇತಳನ್ನು ಸಂಧಿಸಿದ್ದು, ಲೂಕ 1:39-56
4. ಸ್ನಾನಿಕನಾದ ಯೋಹಾನನ ಜನನ, ಲೂಕ 1:57-80
5. ಎರಡು ವಂಶಾವಳಿಗಳು, ಮತ್ತಾಯ 1:1-17, ಮತ್ತು ಲೂಕ 3:23-38
6. ಯೇಸುವಿನ ಜನನ, ಮತ್ತಾಯ 1:18-25 ಮತ್ತು ಲೂಕ 2:1-7
7. ಕುರುಬರು ಮತ್ತು ದೇವದೂತರು, ಲೂಕ 2:8-20
8. ಯೇಸುವನ್ನು ಯೆರೂಸಲೇಮಿನ ದೇವಾಲಯದಲ್ಲಿ ಸಮರ್ಪಿಸಿದ್ದು, ಲೂಕ 2:21-40
9. ಮೂಡಣ ದೇಶದ ಜೋಯಿಸರು, ಮತ್ತಾಯ 2:1-12
10. ಐಗುಪ್ತಕ್ಕೆ ಪಲಾಯನ ಮತ್ತು ನಜರೇತಿಗೆ ಹಿಂತಿರುಗಿದ್ದು, ಮತ್ತಾಯ 2:13-23
11. ವಾಕ್ಯವು ನರಾವತಾರವೆತ್ತಿ ಬಂದಿದ್ದು, ಯೋಹಾನ 1:1-18
12. ಹನ್ನೆರಡನೆಯ ಪ್ರಾಯದಲ್ಲಿ ಯೇಸು, ಲೂಕ 2:41-52



## 1. ಸ್ನಾನಿಕನಾದ ಯೋಹಾನನ ಜನನವನ್ನು ಮುಂತಿಳಿಸಿದ್ದು, ಲೂಕ 1:5-25

### ಪೀಠಿಕೆ ಮತ್ತು ಟಿಪ್ಪಣಿಗಳು

ನಾಲ್ಕುನೂರು ವರುಷಗಳ ಪ್ರವಾದನಾ ಮೌನವು ಮುಗಿಯಿತು. ದೇವರ ಭಯಂಕರವಾದ ನ್ಯಾಯತೀರ್ಪು ಬರುವುದಕ್ಕಿಂತ ಮುಂಚೆ ಪ್ರವಾದಿಯಾದ ಎಲೀಯನು ತಿರುಗಿ ಬರುವನೆಂಬುದಾಗಿ ಹಳೇ ಒಡಂಬಡಿಕೆಯ ಕೊನೆಯ ಪುಸ್ತಕವಾದ ಮಲಾಕಿಯ ಮೂಲಕ ದೇವರು ವಾಗ್ದಾನ ಮಾಡಿದ್ದನು (ಮಾಲಾಕಿ 4:5). ಈ ವಾಕ್ಯಭಾಗದಲ್ಲಿ ಈ ವಾಗ್ದಾನವು ನೆರವೇರಲು ಪ್ರಾರಂಭವಾಗಿದೆ. ಗಬ್ರಿಯೇಲ್ ದೂತನು ಯೆರೂಸಲೇಮಿನ ದೇವಾಲಯದಲ್ಲಿ ಕಾರ್ಯಪ್ರವೃತ್ತನಾಗಿದ್ದ ಯಾಜಕನಾದ ಜಕರೀಯನಿಗೆ ದೇವರಿಂದ ಒಂದು ಸಂದೇಶವನ್ನು ತರುತ್ತಾನೆ. ಜಕರೀಯ ಮತ್ತು ಆತನ ಪತ್ನಿಯಾದ ಎಲಿಸಬೇತರಿಬ್ಬರೂ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು ಆದರೆ ಅವರಿಗೆ ಮಕ್ಕಳಿರಲಿಲ್ಲ, ತಮ್ಮ ಪ್ರಾಯದ ಹೊರತಾಗಿಯೂ ಒಬ್ಬ ಮಗನನ್ನು ಪಡೆಯುವವರಿದ್ದರು. ಅವರ ಮಗನೇ ಈ "ಎಲೀಯನು". ಆತನು ಯೋಹಾನನೆಂಬುದಾಗಿ ಕರೆಯಲ್ಪಡುವನು ಮತ್ತು ಆತನೇ ದೇವರ ವಾಗ್ದಾನದ ಮೆಸ್ಸೀಯನಾದ ಯೇಸುಕ್ರಿಸ್ತನ ಮುಂದೂತನಾಗಿರುವ "ಸ್ನಾನಿಕನಾದ ಯೋಹಾನ"ನಾಗುವನು.

*ಯೆಹೂದ ಅರಸನಾದ ಹೆರೋದ* (ವ. 5): ಅರಸನಾದ ಹೆರೋದನು ರೋಮನ್ ಚಕ್ರವರ್ತಿಯ ಸಾರ್ವಭೌಮತ್ವದಡಿಯಲ್ಲಿ ಕ್ರಿ.ಪೂ. 37-4 ರ ವರೆಗೆ ಪ್ಯಾಲೆಸ್ತೀನನ್ನು ಆಳಿದನು.

*ಅಬೀಯನ ಯಾಜಕ ವರ್ಗ* (ವ. 5): ಯೆರೂಸಲೇಮಿನ ದೇವಾಲಯದಲ್ಲಿ ಸೇವೆ ಮಾಡುವುದಕ್ಕಾಗಿ ಅರಸನಾದ ದಾವೀದನು ಯಾಜಕರನ್ನು 24 ವರ್ಗಗಳಾಗಿ ವಿಂಗಡಿಸಿದ್ದನು (1 ಪೂರ್ವಕಾಲ ವೃತ್ತಾಂತ 24:1,3,10). ಪ್ರತಿಯೊಬ್ಬ ಯಾಜಕ ಸಹ ದೇವಾಲಯದಲ್ಲಿ ಪ್ರತಿ ಆರು ತಿಂಗಳಿಗೊಮ್ಮೆ ಒಂದು ವಾರದವರೆಗೆ ಯಾಜಕ ಸೇವೆ ಮಾಡಬೇಕಾಗಿತ್ತು.

*ಮಕ್ಕಳಿರಲಿಲ್ಲ* (ವ. 7): ಆ ದಿನಗಳಲ್ಲಿ ಮಕ್ಕಳಿಲ್ಲದಿರುವುದು ಒಂದು ರೀತಿಯ ಕಷ್ಟವಾಗಿತ್ತು. ಮೊದಲನೆಯದಾಗಿ, ಮಕ್ಕಳನ್ನು ಬೆಳೆಸುವ ಸಂತೋಷವನ್ನು ಪೋಷಕರು ಅನುಭವಿಸಲಾಗುತ್ತಿರಲಿಲ್ಲ. ಎರಡನೆಯದಾಗಿ, ಅವರು ತೀರಾ ಮುಪ್ಪಿನವರಾಗಿ ತಮ್ಮನ್ನು ತಾವು ಪೋಷಿಸಿಕೊಳ್ಳಲು ಬಲಹೀನರಾದಾಗ ಹೋರಾಟವನ್ನು ಎದುರಿಸಿದ್ದರಬಹುದು. ಕೊನೆಯದಾಗಿ, ಬಂಜೆತನವು ಒಂದು ಅವಮಾನಕರವಾದದ್ದು ಮತ್ತು ದೇವರ ರಕ್ಷಣೆಗೆ ಒಂದು ಸಂಕೇತವಾಗಿದೆಯೆಂಬುದಾಗಿ ಪರಿಗಣಿಸಿದ್ದರಿಂದ ಅವರ ನೆರೆಯವರು ಸಹ ಅವರನ್ನು ಕೀಳಾಗಿ ಕಾಣುತ್ತಿದ್ದರು.

*ಧೂಪಪೀಠ* (ವ. 11): ಈ ಪೀಠವು ಮಹಾಪರಿಶುದ್ಧ ಸ್ಥಳ ಮತ್ತು ಪರಿಶುದ್ಧ ಸ್ಥಳವನ್ನು ಬೇರ್ಪಡಿಸುವ ಪರದೆಯ ತೆರೆಯ ಮುಂಭಾಗದಲ್ಲಿತ್ತು. ಸೇವೆಯಲ್ಲಿರುವ ಯಾಜಕನು ಮುಂಜಾನೆಯ ಮತ್ತು ಸಾಯಂಕಾಲದ ಯಜ್ಞಗಳಿಗಿಂತ ಮೊದಲು ಪ್ರತಿದಿನ ಅಲ್ಲಿ ಧೂಪವನ್ನರ್ಪಿಸುತ್ತಿದ್ದನು (ವಿಮೋ. 30:6-8)

*ಯೋಹಾನ* (ವ. 13): ಇಬ್ರಿಯ ಹೆಸರಿನ ಅರ್ಥ "ದೇವರು ಕರುಣಾಮಯನಾಗಿದ್ದಾನೆ".

*ಎಲೀಯ* (ವ. 17): ಸ್ನಾನಿಕನಾದ ಯೋಹಾನನು ಮಲಾಕಿ 4:5-6 ರಲ್ಲಿ ಎಲೀಯನ ತಿರುಗಿ ಬರುವಿಕೆಯ ಬಗೆಗಿನ ಪ್ರವಾದನೆಯ ಆತ್ಮೀಕ ನೆರವೇರಿಕೆಯಾಗಿದ್ದನು ( ಹೋಲಿಸಿ ಯೋಹಾನ 1:21, ಮತ್ತಾ. 11:4).

*ಗಬ್ರಿಯೇಲನು* (ವ. 19): ದಾನಿಯೇಲ 8:16 ಮತ್ತು 9:21 ರಲ್ಲಿ ಸಹ ಇದೇ ಹೆಸರನ್ನು ತಿಳಿಸಲಾಗಿದೆ. ಈ ಇಬ್ರಿಯ ಹೆಸರಿನ ಅರ್ಥ "ದೇವರ ಮನುಷ್ಯ" ಅಥವಾ "ದೇವರು ನನ್ನ ಯುದ್ಧವೀರನಾಗಿದ್ದಾನೆ".

**ಪ್ರಶ್ನೆಗಳು**

1. ಜಕರೀಯ ಮತ್ತು ಎಲಿಸಬೇತರ ಬಗ್ಗೆ ನಾವು ಏನನ್ನು ಕಲಿಯುತ್ತೇವೆ (ವ. 5-7)?
2. ದೇವಾಲಯದಲ್ಲಿ ಜಕರೀಯನ ಕಾರ್ಯವೇನಾಗಿತ್ತು ಮತ್ತು ಈ ಒಂದು ಕಾರ್ಯವಿಧಿಯನ್ನು ಸಲ್ಲಿಸಲು ಆತನು ಹೇಗೆ ಆರಿಸಲ್ಪಟ್ಟಿದ್ದನು (ವ. 8-10)?
3. ಯೋಹಾನನ ಬಗ್ಗೆ ಜಕರೀಯನಿಗೆ ದೂತನು ಹೇಳಿದ್ದೇನು? ಪಟ್ಟಿಮಾಡಿ (ವ. 11-17)
4. ದೇವಾಲಯದಲ್ಲಿನ ಅನುಭವದ ನಂತರ ಯಾಕೆ ಜಕರೀಯನಿಗೆ ಮಾತನಾಡಲಾಗಲಿಲ್ಲ (ವ. 18-22)?
5. ತಾನು ಗರ್ಭಿಣಿಯಾಗಿದ್ದೇನೆಂಬುದನ್ನು ತಿಳಿದ ನಂತರ ಎಲಿಸಬೇತಳು ಹೇಗೆ ಪ್ರತಿಕ್ರಯಿಸಿದಳು (ವ. 23-25)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಪ್ಯಾಲೆಸ್ತೇನಿನ ಯಾವ ಭಾಗದಲ್ಲಿ ಯೆರೂಸಲೇಮ್ ನೆಲೆಗೊಂಡಿತ್ತು? ***ಯೇಸುವಿನ ಕಾಲದಲ್ಲಿ ಪ್ಯಾಲೆಸ್ತೇನ್ ನಕ್ಷೆಯಲ್ಲಿ*** ಈ ಮಾಹಿತಿಗಳನ್ನು ಕಂಡುಹಿಡಿಯಿರಿ.
2. ಹೆರೋದ ಮಹಾಶಯನ ಮರಣದ ಸಮಯದಲ್ಲಿ ಪ್ಯಾಲೆಸ್ತೇನಿಗೆ ಏನಾಯಿತು? ***ಹೊಸ ಒಡಂಬಡಿಕೆಯ ಕಾಲಗಣನೆಯಲ್ಲಿ*** ಇದರ ಮಾಹಿತಿ ಕಂಡುಹಿಡಿಯಿರಿ.
3. ಜಕರೀಯ ಮತ್ತು ಎಲಿಸಬೇತರಿಬ್ಬರೂ "ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು" ಎಂಬುದಾಗಿ ವರ್ಣಿಸಲಾಗಿದೆ (ವ. 6). ಲೂಕನು ಹೇಗೆ ವಿವರಿಸುತ್ತಿದ್ದಾನೆ?
4. ತಮಗೊಂದು ಮಗು ಹುಟ್ಟಲಿದೆಯೆಂಬುದನ್ನು ತಿಳಿದಾಗ ಜಕರೀಯ ಮತ್ತು ಎಲಿಸಬೇತರಲ್ಲಿ ಕಂಡುಬಂದ ಪ್ರತಿಕ್ರಿಯೆಯನ್ನು ಹೋಲಿಸಿರಿ.
5. ಈ ವಾಕ್ಯಭಾಗದಲ್ಲಿ ನಾವು ಬಂಜೆತನ ಅಥವಾ ಮಕ್ಕಳಿಲ್ಲದಿರುವುದಕ್ಕೆ ಕಾರಣವೇನನನ್ನಾದರೂ ನಾವು ಕಲಿಯುತ್ತೇವಾ?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ವಾಕ್ಯಭಾಗವು ಅನೇಕ ಪ್ರಾಮುಖ್ಯ ಸತ್ಯವೇದದ ವಿಷಯ ವಸ್ತುಗಳನ್ನು ತಿಳಿಸುತ್ತದೆ, ಉದಾಹರಣೆಗೆ:

- ತನ್ನ ವಾಗ್ದಾನಕ್ಕೆ ದೇವರ ನಂಬಿಗಸ್ತಿಕೆ (ಆತ್ಮೀಕ ಎಲೀಯನಾಗಿ ಯೋಹಾನ)
- ದೇವರು – ಪ್ರಾರ್ಥನೆಗೆ ಉತ್ತರಕೊಡುವ ದೇವರಾಗಿದ್ದಾನೆ (ವ. 13)
- ಶುಭವಾರ್ತೆ (ವ. 19)
- ಪವಿತ್ರಾತ್ಮನ ಪ್ರಾಮುಖ್ಯ ಪಾತ್ರ (ವ. 15)
- ದೇವರ ಸಂದೇಶಕ್ಕೆ ವಿಶ್ವಾಸಿಗಳ ಮನೋಭಾವನೆ (ಜಕರೀಯ ಮತ್ತು ಎಲಿಸಬೇತರನ್ನು ಹೋಲಿಸಿ)

ಈ ವಿಷಯ ವಸ್ತುಗಳನ್ನು ವಿಮರ್ಶಿಸಿರಿ. ನಂತರ ಈ ವಾಕ್ಯಭಾಗ ಮತ್ತು ಈ ಅಧ್ಯಯನವನ್ನಾಧರಿಸಿ ಒಂದು ಧ್ಯಾನ ಅಥವಾ ಸರಳವಾದ ಸತ್ಯವೇದ ಅಧ್ಯಯನಕ್ಕಾಗಿ ಒಂದು ರೂಪರೇಖೆಯನ್ನು ಸಿದ್ಧಪಡಿಸಿ.

## 2. ಯೇಸುವಿನ ಜನನವನ್ನು ಮುಂತಿಳಿಸಿದ್ದು, ಲೂಕ 1:26-38

### ಪೀಠಿಕೆ ಮತ್ತು ಟಿಪ್ಪಣಿಗಳು

ದೇವರ ದೂತನಾದ ಗಬ್ರಿಯೇಲನು ಆರು ತಿಂಗಳ ತರುವಾಯ ಅದೇ ರೀತಿಯ ಸಂದೇಶದೊಂದಿಗೆ ಪುನಃ ಪ್ಯಾಲೆಸ್ತೀನಿಗೆ ಭೇಟಿಕೊಡುತ್ತಾನೆ. ಆದರೆ ಈ ಬಾರಿ ಗಲಿಲಾಯದ ಒಂದು ಸಣ್ಣ ಊರಾದ ನಜರೇತಿಗೆ ಒಬ್ಬ ಕನ್ಯೆಯ ಬಳಿಗೆ ಬರುತ್ತಾನೆ. ಮತ್ತು ಆತನ ಸಂದೇಶವು ಇನ್ನೂ ಬೆರಗುಗೊಳಿಸುವಂತದ್ದಾಗಿದೆ; ಸ್ವತಃ ದೇವರೇ ತನ್ನ ಮಗನ ಮೂಲಕ ತನ್ನ ರಾಜತ್ವವನ್ನು ಸ್ಥಾಪಿಸಲು ಹೊರಟಿದ್ದಾನೆ. ಆತನ ಆಳ್ವಿಕೆ ಸದಾಕಾಲ ಇರುವದು ಮತ್ತು ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ.

*ಆರನೆಯ ತಿಂಗಳಲ್ಲಿ* (ವ. 26): ಇದು ಗಬ್ರಿಯೇಲನು ಜಕರೀಯನಿಗೆ ದೇವಾಲಯದಲ್ಲಿ ಸಂದೇಶವನ್ನು ತಂದ ಆರು ತಿಂಗಳ ನಂತರವಾಗಿದೆ (ಹೋಲಿಸಿ ವ. 36).

*ನಿಶ್ಚಿತಾರ್ಥವಾಗಿದ್ದಳು* (ವ. 27): ಯೆಹೂದಿ ನಿಶ್ಚಿತಾರ್ಥವು ಕಾನೂನಾತ್ಮಕವಾಗಿದ್ದು, ಅದನ್ನು ಕೇವಲ ವಿಚ್ಛೇದನ ಅಥವಾ ಮರಣದ ಮೂಲಕ ಮಾತ್ರ ರದ್ದುಗೊಳಿಸಬಹುದಾಗಿತ್ತು. ಮದುವೆಯವರೆಗೂ ಲೈಂಗಿಕ ಸಂಪರ್ಕಕ್ಕೆ ಅನುಮತಿಯಿರಲಿಲ್ಲ.

*ಯೇಸು* (ವ. 31): ಇದು ಯೆಹೋಶವ ಎಂಬ ಇಬ್ರಿಯ ಹೆಸರಿನ ಗ್ರೀಕ್ ರೂಪವಾಗಿದ್ದು, ಇದರರ್ಥ "ಕರ್ತನು(ಯೆಹೋವನು) ರಕ್ಷಿಸುತ್ತಾನೆ".

*ಪರಾತ್ಪರನು* (ವ. 32): ದೇವರ ಈ ಹೆಸರನ್ನು ಆದಿ. 14:18 ರಲ್ಲಿ ಮೊದಲ ಬಾರಿಗೆ ಕಾಣಬಹುದು. ಹಳೇ ಒಡಂಬಡಿಕೆಯಲ್ಲಿ ಇದು ಸಾಮಾನ್ಯವಾಗಿ ಇಬ್ರಿಯದಲ್ಲಿ "ಎಲ್-ಎಲಿಯೋನ್" ಎಂಬ "ಮಹೋನ್ನತನಾದ ದೇವರು" ಎಂಬುದರ ಹೋಲಿಕೆಯೊಂದಿಗೆ ಕಂಡುಬರುತ್ತದೆ.

*ಆತನ ಮೂಲ ಪಿತನಾದ ದಾವೀದನು* (ವ. 32): ಹಳೇ ಒಡಂಬಡಿಕೆಯ "ಪಿತ" ಎಂಬ ಪದದ ಅರ್ಥ "ಗಂಡು(ಪುರುಷ) ತಲೆಮಾರಿನವ" ಎಂದಾಗಿದೆ. ಮರಿಯಳು ಮತ್ತು ಯೋಸೇಫರಿಬ್ಬರೂ ಅರಸನಾದ ದಾವೀದನ ಮನೆತನದವರಾಗಿದ್ದರು.

*ಯಾಕೋಬ ವಂಶ* (ವ. 33): ಇಸ್ರಾಯೇಲ್ ಎಂಬುದಾಗಿ ಸಹ ಕರೆಯಲ್ಪಟ್ಟ ಯಾಕೋಬನು ಎಲ್ಲಾ ಇಸ್ರಾಯೇಲ್ಯರ ಮೂಲ ಪಿತೃವಾಗಿದ್ದಾನೆ.

*ನಿನ್ನ ಬಂಧುವಾದ ಎಲಿಸಬೇತಳು* (ವ. 36): ಯಾವ ರೀತಿಯಲ್ಲಿ ಅವರು ಸಂಬಂಧಿಗಳಾಗಿದ್ದರೆಂಬುದರ ಬಗ್ಗೆ ಮಾಹಿತಿಯಿಲ್ಲ. ಆದರೆ ಮರಿಯಳು ಯೆಹೂದ ಕುಲ(ದಾವೀದನ ಕುಲ)ಕ್ಕೆ ಸೇರಿದವಳಾಗಿದ್ದರೆ, ಎಲಿಸಬೇತಳು ಒಬ್ಬ ಲೇವಿಯಳಾಗಿದ್ದಳು (ವ. 5).

### ಪ್ರಶ್ನೆಗಳು

1. ಯೋಸೇಫನ ಕುರಿತು ನಾವು ಏನನ್ನು ಕಲಿಯುತ್ತೇವೆ (ವ. 26–28)
2. ಗಬ್ರಿಯೇಲನು ಯೇಸುವಿನ ಬಗ್ಗೆ ಮರಿಯಳ ಬಳಿ ಏನೆಂದು ಹೇಳಿದನು? ಪಟ್ಟಿ ಮಾಡಿ (29–38)
3. ಗಬ್ರಿಯೇಲನ ಭೇಟಿ ಮತ್ತು ಸಂದೇಶಕ್ಕೆ ಮರಿಯಳು ಹೇಗೆ ಪ್ರತಿಕ್ರಯಿಸುತ್ತಾಳೆ? ಪಟ್ಟಿ ಮಾಡಿ (ವ. 26–38)

### ಆಲೋಚಿಸಿರಿ ಮತ್ತು ಚರ್ಚಿಸಿರಿ


1. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನಿನ ನಕ್ಷೆಯಲ್ಲಿ*** ಗಲಿಲಾಯ ಮತ್ತು ನಜರೇತನ್ನು ಕಂಡುಹಿಡಿಯಿರಿ.
2. ಜಕರೀಯನೊಂದಿಗೆ (ವ. 18) ಗಬ್ರಿಯೇಲನೊಂದಿಗಿನ ಮರಿಯಳ ಪ್ರಶ್ನೆಯನ್ನು (ವ. 34) ಹೋಲಿಸಿರಿ. ಈ ವಾಕ್ಯಭಾಗವು ಮುಖ್ಯವಾದ ವ್ಯತ್ಯಾಸಕ್ಕೆ ಸುಳಿವನ್ನು ಕೊಡುತ್ತದೆ ವಿವರಿಸಿರಿ.

3. ಈ ಕಥೆಯಲ್ಲಿ ವಿಸ್ಮಯಕಾರಿ ಸಂಗತಿ ಯಾವುದೆಂಬುದಾಗಿ ನೀವು ಯೋಚಿಸುವಿರಿ? ಯಾಕೆ ಎಂಬುದನ್ನು ವಿವರಿಸಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ವಾಕ್ಯಭಾಗವು ಎರಡು ಮುಖ್ಯ ವ್ಯಕ್ತಿಗಳನ್ನು ಒಳಗೊಂಡಿದೆ (ದೂತರನ್ನು ಹೊರತುಪಡಿಸಿ): ತಾಯಿಯಾಗಲಿರುವ ಮರಿಯಳು ಮತ್ತು ಆಕೆಯ ಮಗನಾಗಲಿರುವ ಯೇಸು (ಆದರೂ ದೇವರ ಮಗನು). ಒಬ್ಬ ದೇವರ ಸೇವಕ/ಕಿಗೆ ಮರಿಯಳು ಒಬ್ಬ ಮಾದರಿ ವ್ಯಕ್ತಿಯಾಗಿ ಕಾಣಬಲ್ಲಳು. ಆಕೆಯು ಜನ್ಮ ನೀಡಲಿರುವ ಮಗುವಿನ ಬಗ್ಗೆ ದೂತನು ಆಕೆಗೆ ವಿವರಿಸುತ್ತಾನೆ.

ಈ ವಾಕ್ಯಭಾಗದ ಈ ಎರಡು ಮುಖ್ಯ ವ್ಯಕ್ತಿಗಳ ಬಗ್ಗೆ ವಿಮರ್ಶಿಸಿರಿ. ಹಾಗೆಯೇ ಈ ವಾಕ್ಯಭಾಗ ಮತ್ತು ಈ ಅಧ್ಯಯನವನ್ನಾಧರಿಸಿ ಎರಡು ಧ್ಯಾನ ಅಥವಾ ಸರಳವಾದ ಸತ್ಯವೇದ ಅಧ್ಯಯನಗಳಿಗಾಗಿ ರೂಪರೇಖೆಗಳನ್ನು ಸಿದ್ಧಪಡಿಸಿರಿ.



## 3. ಮರಿಯಳು ಎಲಿಸಬೇತಳನ್ನು ಸಂಧಿಸುವುದು, ಲೂಕ 1:39–56

### ಪೀಠಿಕೆ ಮತ್ತು ಟಿಪ್ಪಣಿಗಳು

ಗಬ್ರಿಯೇಲ ದೂತನು ಸಂಧಿಸಿದ ಮೇಲೆ ಮರಿಯಳು ಅವಸರದಿಂದ ಗಲಿಲಾಯದ ನಜರೇತಿನಿಂದ ಮಲೆನಾಡಿಗೆ ಹೊರಟು ಯೆಹೂದದಲ್ಲಿರುವ ತನ್ನ ಬಂಧುವಾದ ಜಕರೀಯ ಮತ್ತು ಎಲಿಸಬೇತಳ ಮನೆಗೆ ಹೋಗುತ್ತಾಳೆ. ಎಲಿಸಬೇತಳು ಗರ್ಭಿಣಿಯಾಗಿದ್ದಾಳೆ ಮತ್ತು ಬಹುಶಃ ಆಕೆಯು ಈ ತನ್ನೊಳಗಿರುವ ಯೇಸುವಿನ ಬಗ್ಗೆ ತನ್ನ ಶುಭಸಮಾಚಾರವನ್ನು ಹಂಚಿಕೊಳ್ಳಲು ಬಯಸುತ್ತಾಳೆ ಎಂಬುದಾಗಿ ಗಬ್ರಿಯೇಲ ದೂತನು ಆಕೆಗೆ ಹೇಳಿದ್ದನು. ಯೌವನಸ್ಥ ಹುಡುಗಿ ಮತ್ತು ವಯಸ್ಸಾದ ಸ್ತ್ರೀ ಮತ್ತು ಅವರ ಇಬ್ಬರು ಅಜಾತ ಗಂಡು ಮಕ್ಕಳ ನಡುವಿನ ಭೇಟಿಯು ಸಂಪೂರ್ಣವಾಗಿ ಅದ್ಭುತಮಯವಾಗಿತ್ತು.

ಅನಂತರ ಮರಿಯಳು ಉಲ್ಲಾಸಭರಿತಳಾಗಿ, "ನನ್ನ ಪ್ರಾಣವು ಕರ್ತನನ್ನು ಕೊಂಡಾಡುತ್ತದೆ" ಎಂಬ ಪದಗಳಿಂದ ಹಾಡುತ್ತಾ ದೇವರನ್ನು ಸ್ತುತಿಸುತ್ತಾಳೆ. ಕ್ರೈಸ್ತ ಸಭೆಯ ಇತಿಹಾಸದಲ್ಲಿ ಈ ಹಾಡನ್ನು ***ಕನ್ಯಾ ಮರಿಯಳ ಸ್ತೋತ್ರಗೀತ*** ಎಂಬುದಾಗಿ ಕರೆಯಲಾಗಿದೆ, ಯಾಕೆಂದರೆ ಸತ್ಯವೇದದ ಲ್ಯಾಟಿನ ಭಾಷಾಂತರದಲ್ಲಿ ಇದು ಸ್ತೋತ್ರಗೀತ ಎಂಬ ಪದದಿಂದ ಪ್ರಾರಂಭವಾಗುತ್ತದೆ. ಮರಿಯಳು ತನ್ನನ್ನು ಹಳೇ ಒಡಂಬಡಿಕೆಯ ಪದ್ಯರೂಪಿ ಶೈಲಿಯಲ್ಲಿ ವ್ಯಕ್ತಪಡಿಸಿಕೊಳ್ಳುತ್ತಾಳೆ. ಈಕೆಯ ಹಾಡು ತನ್ನ ಪುಟ್ಟ ಮಗನಾದ ಸಮುವೇಲನನ್ನು ಶಿಲೋವಿನಲ್ಲಿರುವ ದೇವಾಲಯದಲ್ಲಿ ಯಾಜಕನೊಂದಿಗೆ ಬಿಟ್ಟಾಗ 1 ಸಮುವೇಲ 2:1–10 ರಲ್ಲಿನ ಹನ್ನಳ ಪ್ರಾರ್ಥನಾ ಗೀತೆಯನ್ನು ನಮ್ಮ ಜ್ಞಾಪಕಕ್ಕೆ ತರುತ್ತದೆ.

*ಆತನಲ್ಲಿ ಭಯಭಕ್ತಿಯುಳ್ಳವರ* (ವ. 45): ದೇವರಿಗೆ ಭಯ ಪಡುವುದು ಎಂದರೆ ಆತನನ್ನು ಪ್ರೀತಿಸುವುದು ಮತ್ತು ಆತನಿಗೆ ವಿಧೇಯರಾಗುವುದು ಮತ್ತು ನಮ್ಮ ಜೀವಿತಕ್ಕಾಗಿ ಆತನ ಚಿತ್ತವನ್ನು ಪಾಲಿಸುವುದಾಗಿದೆ.

*ಆತನ ಭುಜಕ್ರಮ* (ವ. 51): ಈ ರೂಪಕಾಲಂಕಾರದ ಅರ್ಥ ದೇವರ ಅದ್ಭುತ ಕಾರ್ಯಗಳು ಎಂದಾಗಿದೆ.

*ಆತನು ತನ್ನ ಪೂರ್ವಿಕರಿಗೆ ಹೇಳಿದ್ದಕ್ಕೆ ಸರಿಯಾಗಿ ಅಬ್ರಹಾಮನಿಗೂ ಅವನ ವಂಶದವರಿಗೂ ಯಾವಾಗಲೂ ದಯೆ ತೋರಿಸಬೇಕೆಂಬುದು ನೆನಸಿಕೊಂಡು* (ವ. 54–55): ಇದು ಆದಿಕಾಂಡ 22:16–18 ರಲ್ಲಿ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನದ ಒಂದು ಉಲ್ಲೇಖವಾಗಿದೆ.

### ಪ್ರಶ್ನೆಗಳು

1. ಈ ವಾಕ್ಯಭಾಗವು ಎರಡು ಭಾಗಗಳನ್ನು ಒಳಗೊಂಡಿದೆ ಅವು ಯಾವುವು?
2. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನ್ ನಕ್ಷೆಯಲ್ಲಿ*** ಯೆಹೂದವನ್ನು ಕಂಡುಹಿಡಿಯಿರಿ.
3. ಮರಿಯಳು ಎಲಿಸಬೇತಳ ಮನೆಯೊಳಗೆ ಪ್ರವೇಶಿಸಿ ಆಕೆಯನ್ನು ವಂದಿಸಿದಾಗ ಎಲಿಸಬೇತಳ ಗರ್ಭದೊಳಗಿನ ಕೂಸು ಹೇಗೆ ಪ್ರತಿಕ್ರಯಿಸಿತು (ವ. 39–45)?
4. ಮರಿಯಳು ಹೊತ್ತಿದ್ದ ಮಗುವಿನ ಬಗ್ಗೆ ಎಲಿಸಬೇತಳು ಹೇಗೆ ವರ್ಣಿಸುತ್ತಾಳೆ (ವ. 39–45)?
5. ಮರಿಯಳು ಅಲ್ಲಿ ಎಷ್ಟು ಸಮಯ ಇದ್ದಳು?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಮರಿಯಳು ದೇವರನ್ನು ಯಾಕೆ ಕೊಂಡಾಡಿದಳು (ವ. 46–49)?
2. ತಲತಲಾಂತರದವರೆಲ್ಲಾ ಮರಿಯಳನ್ನು ಧನ್ಯಳೆಂಬುದಾಗಿ ಯಾಕೆ ಕರೆಯುತ್ತಾರೆ (ವ. 46–55)?
3. ಮರಿಯಳು ತನ್ನ ಹಾಡಿನಲ್ಲಿ ದೇವರನ್ನು ಹೇಗೆ ವರ್ಣಿಸುತ್ತಾಳೆ? ಪಟ್ಟಿಮಾಡಿರಿ (ವ. 46–55)

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಮರಿಯಳ ಮತ್ತು ಎಲಿಸಬೇತಳ ಭೇಟಿಯ ಕುರಿತಾದ ಕಥೆಯಲ್ಲಿ ಕಂಡುಬರುವಂತೆ ಇಬ್ಬರು ಅಜಾತ ಹುಡುಗರು, ಸ್ನಾನಿಕನಾದ ಯೋಹಾನನಾಗುವ ಯೋಹಾನ ಮತ್ತು ಲೋಕದ ರಕ್ಷಕನಾಗುವ ಯೇಸುವಿನ ಸಂಬಂಧವನ್ನು ವಿಮರ್ಶಿಸಿರಿ. ಆ ನಂತರ ಲೂಕ 1:39–45 ನ್ನು ಆಧರಿಸಿ ***ಯೋಹಾನ ಮತ್ತು ಯೇಸು*** ಎಂಬುದಾಗಿ ಕರೆಯಲ್ಪಡುವ ಒಂದು ಧ್ಯಾನ ಅಥವಾ ಸರಳವಾದ ಒಂದು ಸತ್ಯವೇದ ಅಧ್ಯಯನಕ್ಕಾಗಿ ರೂಪರೇಖೆಯೊಂದನ್ನು ಸಿದ್ದಪಡಿಸಿರಿ.

ಮರಿಯಳು ತನ್ನ ಮತ್ತು ದೇವರ ಕುರಿತಾಗಿ ಹಾಡಿನಲ್ಲಿ ವರ್ಣಿಸಿದ ರೀತಿಯನ್ನು ವಿಮರ್ಶಿಸಿ (ಲೂಕ 1:46–55). ಹಾಗೆಯೇ ***ಮರಿಯಳು ಮತ್ತು ಆಕೆಯ ದೇವರು*** ಎಂಬುದಾಗಿ ಕರೆಯಲ್ಪಡುವ ಒಂದು ಧ್ಯಾನ ಅಥವಾ ಸರಳವಾದ ಸತ್ಯವೇದ ಅಧ್ಯಯನಕ್ಕಾಗಿ ರೂಪರೇಖೆಯನ್ನು ಸಿದ್ದಪಡಿಸಿರಿ.



## 4. ಸ್ನಾನಿಕನಾದ ಯೋಹಾನನ ಜನನ, ಲೂಕ 1:57–80

### ಪೀಠಿಕೆ ಮತ್ತು ಟಿಪ್ಪಣಿಗಳು

ಯೆಹೂದಿ ಸಂಪ್ರದಾಯಕ್ಕೆ ಅನುಸಾರವಾಗಿ ಜನನವಾದ ಎಂಟನೇ ದಿನದಲ್ಲಿ ಯೋಹಾನನಿಗೆ ಸುನ್ನತಿಯಾಯಿತು. ಅಲ್ಲದೆ ಅದು ನಾಮಕರಣದ ದಿನ ಸಹ ಆಗಿತ್ತು. ಕೊನೆಯದಾಗಿ ಆತನಿಗೆ ಗಬ್ರಿಯೇಲ ದೂತನು ಜಕರೀಯನಿಗೆ ತಿಳಿಸಿದ "ಯೋಹಾನ" ಎಂಬ ಹೆಸರನ್ನಿಡಲಾಯಿತು. ಇದಾದ ಮೇಲೆ ಒಂಬತ್ತು ತಿಂಗಳ ಮೂಕತನದ ನಂತರ ಜಕರೀಯನು ಪುನಃ ಮಾತನಾಡುವವನಾದನು.

ಜಕರೀಯನು ಪವಿತ್ರಾತ್ಮ ಭರಿತನಾಗಿದ್ದು ದೇವರು ಮತ್ತು ತನ್ನ ಜನರಿಗಾಗಿನ ರಕ್ಷಣಾ ಯೋಜನೆಯ ಬಗ್ಗೆ ಪ್ರವಾದಿಸಿದನು. ಕ್ರೈಸ್ತ ಸಭೆಯ ಇತಿಹಾಸದಲ್ಲಿ ಈ ಪ್ರವಾದನೆಯು ***ಬೆನೆಡಿಕ್ಟಸ್*** (ಪವಿತ್ರಗೀತೆ) ಎಂದು ಕರೆಯಲ್ಪಟ್ಟಿದೆ (ಇದರರ್ಥ "ಆಶೀರ್ವಧಿಸಲ್ಪಟ್ಟ, ಧನ್ಯ" ಎಂಬುದಾಗಿದ್ದು ಸತ್ಯವೇದದ ಲ್ಯಾಟಿನ್ ಭಾಷಾಂತರದಲ್ಲಿ ಇದು ಮೊದಲ ಪದವಾಗಿದೆ). ಇದು ಹಳೇ ಒಡಂಬಡಿಕೆಯ ಪ್ರವಾದನಾ ದೇವವಾಣಿಗಳ ಶೈಲಿಯಲ್ಲಿ ಸಂಯೋಜಿಸಲ್ಪಟ್ಟಿದೆ.

*ಎಂಟನೆಯ ದಿನದಲ್ಲಿ ಅವರು ಆ ಮಗುವಿಗೆ ಸುನ್ನತಿ ಮಾಡುವುದಕ್ಕಾಗಿ ಬಂದರು* (ವ. 59): ಈ ಪದ್ದತಿಯು ಆದಿಕಾಂಡ 17:9–14 ರಲ್ಲಿ ಅಬ್ರಹಾಮನಿಗೆ ಕೊಡಲಾದ ಒಡಂಬಡಿಕೆಯ ಆಜ್ಞೆಯನ್ನು ನೆರವೇರಿಸುವುದಾಗಿತ್ತು.

*ತಂದೆಯ ಹೆಸರನ್ನು* (ವ. 59): ಇದು ಆ ಕಾಲದಲ್ಲಿದ್ದ ಯೆಹೂದ್ಯರಲ್ಲಿನ ಒಂದು ಸಾಮಾನ್ಯವಾದ ಪದ್ಧತಿಯಾಗಿತ್ತು.

*ಒಂದು ಹಲಿಗೆ* (ವ. 63): ಇದು ಬರೆಯಲು ಉಪಯೋಗಿಸುವ ಒಂದು ಮರದ ಹಲಿಗೆಯಾಗಿದೆ.

*ಅರುಣೋದಯ* (ವ. 78): ಇದು ಮೆಸ್ಸೀಯನ ಆಗಮನಕ್ಕೆ ಒಂದು ಉಲ್ಲೇಖವಾಗಿದೆ (ಯೇಶಾಯ 9:2, 60:1 ಮತ್ತು ಮಲಾಕಿ 4:2 ರಂತೆ ಪ್ರವಾದನೆಗಳ ನೆರವೇರಿಕೆಯಾಗಿ). ವ. 78–79 ಯೇಶಾಯ 60:1–3 ರನ್ನು ಪ್ರತಿಧ್ವನಿಸುತ್ತದೆ; "ಏಳು ಪ್ರಕಾಶಿಸು, ನಿನಗೆ ಬೆಳಕು ಬಂತು, ಯೆಹೋವನ ತೇಜಸ್ಸು ನಿನ್ನ ಮೇಲೆ ಉದಯಿಸಿದೆ. ಇಗೋ ಕತ್ತಲು ಭೂಮಿಯನ್ನು ಆವರಿಸಿದೆ, ಕಾರ್ಗತ್ತಲು ಜನಾಂಗಗಳನ್ನು ಮುಚ್ಚಿದೆ, ನಿನ್ನ ಮೇಲಾದರೋ ಯೆಹೋವನು ಉದಯಿಸುವನು. ಆತನ ತೇಜಸ್ಸು ನಿನ್ನಲ್ಲಿ ಕಾಣಿಸುವುದು. ಜನಾಂಗಗಳು ನಿನ್ನ ಬೆಳಕಿಗೆ ನೆರೆಯುವವು, ಅರಸರು ನಿನ್ನಲ್ಲಿನ ಉದಯ ಪ್ರಕಾಶಕ್ಕೆ ಬರುವರು".

*ಕತ್ತಲಲ್ಲಿ* (ವ. 79): ಇದು ದೇವರಲ್ಲಿ ಭಯಭಕ್ತಿಯಿಲ್ಲದ ಜೀವಿತಕ್ಕೆ ಒಂದು ರೂಪಾಲಂಕಾರವಾಗಿದೆ. ಅದು ನ್ಯಾಯತೀರ್ಪಿಗೊಳಗಾಗುವ ಜೀವನವಾಗಿದೆ. ಹಾಗಾಗಿ ಇದು ಮರಣಾಂಧಕಾರದಲ್ಲಿನ ಜೀವನವಾಗಿದೆ (ವ. 79).

### ಪ್ರಶ್ನೆಗಳು

1. ಈ ವಾಕ್ಯ ಭಾಗವು ಎರಡು ಭಾಗಗಳನ್ನು ಒಳಗೊಂಡಿದೆ. ಹೇಗೆ ಎಂಬುದನ್ನು ವಿವರಿಸಿರಿ.
2. ಯೋಹಾನನ ಜನನಕ್ಕೆ ಎಲಿಸಬೇತಳ ನೆರಹೊರೆಯವರು ಮತ್ತು ಬಂಧುಬಾಂಧವರು ಹೇಗೆ ಪ್ರತಿಕ್ರಯಿಸಿದರು(ವ. 57-58)?
3. ಜಕರೀಯನು ಯಾಕೆ ದೇವರಿಗೆ ಸ್ತೋತ್ರ ಮಾಡುತ್ತಾನೆ (ವ. 68)?
4. ತನ್ನ ಮಗ ಸ್ನಾನಿಕನಾದ ಯೋಹಾನನ ಬಗ್ಗೆ ಜಕರೀಯನು ಏನೆಂದು ಪ್ರವಾದಿಸುತ್ತಾನೆ (ವ. 76 -77)?
5. ಜಕರೀಯನು ಯೇಸುವಿನ ಬಗ್ಗೆ ಏನೆಂದು ಪ್ರವಾದಿಸುತ್ತಾನೆ (ವ. 76-79)?
6. ಸ್ನಾನಿಕನಾದ ಯೋಹಾನನ ಬಾಲ್ಯ ಮತ್ತು ಯೌವನದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಜಕರೀಯ ಮತ್ತು ಎಲಿಸಬೇತರ ಮಗನಿಗೆ ನಾಮಕರಣ ಮಾಡುವ ವೇಳೆ ಏನಾಯಿತೆಂಬುದನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ. ಯೋಹಾನನಿಗೆ ತನ್ನ ಹೆಸರು ಹೇಗೆ ಸಿಕ್ಕಿತು? ಮತ್ತು ಜನರು ಹೇಗೆ ಪ್ರತಿಕ್ರಯಿಸುತ್ತಾರೆ?
2. ಜಕರೀಯನು ದೇವರನ್ನು ಸ್ತುತಿಸುತ್ತಾನೆ, ಯಾಕೆಂದರೆ, ಆತನು "ತನ್ನ ಪ್ರಜೆಯನ್ನು ಪರಾಂಬರಿಸಿ ಅವರಿಗೆ ಬಿಡುಗಡೆಯನ್ನುಂಟುಮಾಡಿದ್ದಾನೆ" (ವ. 68). ಈ ವಚನಗಳಿಂದ ಬಿಡುಗಡೆಯ ಬಗ್ಗೆ ನಾವು ಏನನ್ನು ತಿಳಿದುಕೊಳ್ಳುತ್ತೇವೆ?
3. ಜಕರೀಯನ ಪ್ರವಾದನೆಯನ್ನು (ವ. 76–79) ಎರಡು ಭಾಗಗಳಾಗಿ ವಿಂಗಡಿಸಬಹುದಾಗಿದೆ, ಹೇಗೆಂದು ವಿವರಿಸಿರಿ?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ***ಆಲೋಚಿಸಿರಿ ಮತ್ತು ಚರ್ಚಿಸಿರಿನಲ್ಲಿನ*** ಮತ್ತು 2 ರ ಉತ್ತರವನ್ನು ವಿಮರ್ಶಿಸಿರಿ, ಅನಂತರ ***ಆತನು ಬಂದು ತನ್ನ ಜನರಿಗೆ ಬಿಡುಗಡೆಯನ್ನುಂಟುಮಾಡಿದ್ದಾನೆ*** ಎಂಬುದಾಗಿ ಕರೆಯಲ್ಪಡುವ ಒಂದು ಧ್ಯಾನ ಅಥವಾ ಸರಳವಾದ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.
2. ***ಪ್ರಶ್ನೆಗಳು*** 4 ಮತ್ತು 5 ರ ನಿಮ್ಮ ಉತ್ತರಗಳನ್ನು ವಿಮರ್ಶಿಸಿರಿ. ಅಲ್ಲದೆ ವಚನ 78–79 ರ ***ಟಿಪ್ಪಣಿಗಳನ್ನು*** ಪುನಃ ಓದಿರಿ. ಅನಂತರ ಈ ಅಂಶಗಳ ಆಧಾರದ ಮೇಲೆ ಧ್ಯಾನ ಅಥವಾ ಸರಳವಾದ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಅದಕ್ಕೆ ***ನಮ್ಮ ದೇವರ ಕರುಣೆ*** ಎಂಬುದಾಗಿ ಶೀರ್ಷಿಕೆ ಕೊಡಬಹುದು.



## 5. ಎರಡು ವಂಶಾವಳಿಗಳು, ಮತ್ತಾಯ 1:1-17 ಮತ್ತು  ಲೂಕ 3:23-38

### ಪೀಠಿಕೆ ಮತ್ತು ಟಿಪ್ಪಣಿಗಳು

ನಾಲ್ಕು ಸುವಾರ್ತೆಗಳಲ್ಲಿ ಮತ್ತಾಯ ಮತ್ತು ಲೂಕ ಮಾತ್ರ ಯೇಸುವಿನ ವಂಶಾವಳಿಗಳನ್ನು ಒಳಗೊಂಡಿವೆ. ವಾಸ್ತವಾಂಶವೇನೆಂದರೆ ಅವು ವಿಭಿನ್ನವಾಗಿದ್ದು, ಮತ್ತು ಒಂದೇ ರೀತಿಯ ಹೆಸರನ್ನು ಒಳಗೊಂಡಿರದೆ ಇದ್ದು, ನಮಗೆ ಎರಡು ಸಂಗತಿಗಳನ್ನು ಹೇಳುತ್ತವೆ:

1. ಮತ್ತಾಯ ಮತ್ತು ಲೂಕರಿಬ್ಬರೂ ತಾವು ಅರ್ಥ ಹೆಸರುಗಳುನ್ನು ಸೇರಿಸಿದ್ದಾರೆ. ಹಾಗಾಗಿ ಎರಡು ಪಟ್ಟಿಗಳು ಸಹ ಅಪೂರ್ಣವಾಗಿದ್ದು ಯೇಸುವಿನ ಮನೆತನದ ಎಲ್ಲಾ ಪೀಳಿಗೆ(ತಲೆಮಾರನ್ನು)ಯನ್ನು ಒಳಗೊಂಡಿಲ್ಲ.
2. ಈ ಅರಿಸಿಕೊಳ್ಳುವಿಕೆಯು ತಮ್ಮ ಸುವಾರ್ತೆಗಳಲ್ಲಿ ವಂಶಾವಳಿಯನ್ನು ಸೇರಿಸಲು ಮತ್ತಾಯ ಮತ್ತು ಲೂಕರಿಬ್ಬರೂ ಸಹ ಒಂದು ನಿರ್ಧಿಷ್ಟ ಕಾರಣವನ್ನು ಹೊಂದಿದ್ದರೆಂಬುದನ್ನು ತೋರಿಸುತ್ತದೆ. ಇದು ದೈವಶಾಸ್ತ್ರೀಯ ಕಾರಣವಾಗಿದೆ. ಹಾಗಾಗಿ ಓದುಗರಾದ ನಾವು ಈ ಕಾರಣವನ್ನು ಕಂಡುಹಿಡಿಯಬೇಕಿದೆ. ಮತ್ತಾಯ 1:1-17 ರಲ್ಲಿನ ವಂಶಾವಳಿಯ ಮೂಲಕ ಮತ್ತಾಯನು ತನ್ನ ಓದುಗರಿಗಾಗಿ ಹೊಂದಿರುವ ಸಂದೇಶವೇನು? ಮತ್ತು ಲೂಕ 3:23-38 ರಲ್ಲಿನ ವಂಶಾವಳಿಯ ಮೂಲಕ ಲೂಕನು ತನ್ನ ಓದುಗರಿಗಾಗಿ ಇಟ್ಟುಕೊಂಡಿರುವ ಸಂದೇಶವೇನು?

ಮತ್ತಾಯನ ಉದ್ದೇಶವೇನೆಂದರೆ ವಂಶಾವಳಿಯ ಮೂಲಕ ಯೇಸುವಿನ ಶಾಸನಬದ್ಧವಾದ ಅಬ್ರಹಾಮ ಮತ್ತು ದಾವೀದನ ಮೂಲವನ್ನು ತೋರಿಸುವುದಾಗಿದೆ. ಹಾಗಾಗಿ ಆತನು ದಾವೀದನ ಸಿಂಹಾಸನಕ್ಕೆ ಯೇಸುವಿನ ಶಾಸನಬದ್ಧವಾದ ಹೇಳಿಕೆಗೆ ಒತ್ತು ಕೊಡುತ್ತಾನೆ: ಯೇಸುವು ನಿಜವಾಗಿ ದಾವೀದನ ಕುಮಾರನಾಗಿದ್ದಾನೆ.

ಆದಾಮ ಮತ್ತು ದಾವೀದನಿಂದಾದ ಯೇಸುವಿನ ಜೈವಿಕ ಮೂಲವನ್ನು ವಂಶಾವಳಿಯೊಂದಿಗೆ ತೋರಿಸಬೇಕೆಂಬುದು ಲೂಕನ ಉದ್ದೇಶವಾಗಿದೆ. ಹಾಗಾಗಿ ಲೂಕನು ತನ್ನ ಓದುಗರಿಗೆ ಯೇಸುವು ಮನುಷ್ಯಕುಮಾರನಾಗಿದ್ದು, ಇಡೀ ಮಾನವ ಕುಲವನ್ನು ಪ್ರತಿನಿಧಿಸುವವನಾಗಿದ್ದಾನೆ. ಯೇಸುವು ಎಲ್ಲಾ ಜನಾಂಗಗಳ ನಿರೀಕ್ಷೆಯ ನೆರವೇರಿಕೆಯಾಗಿದ್ದಾನೆಂಬುದನ್ನು ತೋರಿಸಲು ಅಪೇಕ್ಷಿಸುತ್ತಾನೆ.

### ಟಿಪ್ಪಣಿಗಳು

*ದಾವೀದನ (ಮಗನು) ವಂಶದವನು* (ಮತ್ತಾಯ 1:1): ಈ ಹೇಳಿಕೆಯನ್ನು ಒಂದು ಮೆಸ್ಸೀಯನ ಹೆಸರೆಂಬುದಾಗಿ ಅರ್ಥೈಸಿಕೊಳ್ಳಬೇಕಿದೆ. ಮತ್ತಾಯನು ಯೇಸು ಕ್ರಿಸ್ತನ ವಂಶಾವಳಿಯನ್ನು ತಿಳಿಸುತ್ತಿದ್ದಾನೆಂಬುದನ್ನು ಗಮನಿಸಿ (ಕ್ರಿಸ್ತನು ಎಂಬುದು ಗ್ರೀಕಿನಲ್ಲಿ ಮೆಸ್ಸೀಯನಿಗಿರುವ ಪದವಾಗಿದೆ). ತನ್ನ ಸುವಾರ್ತೆಯಲ್ಲಿ ಮತ್ತಾಯನು ಯೇಸುವು ದಾವೀದನೊಂದಿಗಿನ ದೇವರ ಒಡಂಬಡಿಕೆಯ ನೆರವೇರಿಕೆಯಾಗಿದ್ದಾನೆಂಬುದಾಗಿ ತನ್ನ ಓದುಗರಿಗೆ ಸ್ಪಷ್ಟಪಡಿಸುತ್ತಾನೆ (ನೋಡಿ 2 ಸಮು. 7:5-6).

*ಅಬ್ರಹಾಮನ ಮಗನು (ವಂಶದವನು*)(1:1): ಈ ಹೇಳಿಕೆಯ ಮೂಲಕ ಮತ್ತಾಯನು ಯೇಸುವು ಅಬ್ರಹಾಮನೊಂದಿಗಿನ ದೇವರ ಒಡಂಬಡಿಕೆಯ ನೆರವೇರಿಕೆಯಾಗಿದ್ದಾನೆಂಬುದನ್ನು ತನ್ನ ಓದುಗರಿಗೆ ಸ್ಪಷ್ಟಪಡಿಸುತ್ತಾನೆ (ನೋಡಿ ಆದಿ. 12:1-3, 15:9-21, 17:1-27, 22:18). ಅಬ್ರಹಾಮನು ಇಸ್ರಾಯೇಲ್ ಜನಾಂಗದ ಮೂಲ ತಂದೆಯಾಗಿದ್ದಾನೆ.

*ತಾಮರ್* (ವ. 3), *ರಾಹಾಬಳು* (ವ. 5), *ರೂತಳು* (ವ. 5), *ಬೆತ್ಷೆಬೆ* (ವ. 6 ಈಕೆಯ ಹೆಸರನ್ನು ಹೇಳಿಲ್ಲ): ಮತ್ತಾಯನು ಯೇಸುವಿನ ವಂಶಾವಳಿಯಲ್ಲಿ ನಾಲ್ಕು ಸ್ತ್ರೀಯರನ್ನು (ಮರಿಯಳು ಸೇರಿ ಐದು) ಸೇರಿಸುತ್ತಾನೆ. ಅವರಲ್ಲಿನ ಮೂವರು (ತಾಮರ್, ರಾಹಾಬಳು ಮತ್ತು ರೂತಳು) ಅನ್ಯಜನಾಂಗದವರಾಗಿದ್ದಾರೆ, ಮತ್ತು ನಾಲ್ಕನೆಯವಳಾದ (ಬೆತ್ಷೆಬೆ) ಅನ್ಯನನ್ನು ಮದುವೆಯಾಗಿದ್ದಳು. ಅವರಲ್ಲೊಬ್ಬಳು ಸೂಳೆಯಾಗಿದ್ದಳು (ರಾಹಾಬಳು) ಮತ್ತು ಅವರಲ್ಲಿಬ್ಬರು (ತಾಮರ್ ಮತ್ತು ಬೆತ್ಷೆಬೆ)

ವ್ಯಭಿಚಾರಿಣಿಯರಾಗಿದ್ದರು. ಇದನ್ನೆಲ್ಲಾ ತಿಳಿಸುವಲ್ಲಿ ಮತ್ತಾಯನ ಉದ್ದೇಶವೇನಂದರೆ - ದೇವರ ಕಾರ್ಯ ಮತ್ತು ರಕ್ಷಣಾ ಯೋಜನೆಯು ಕೇವಲ ಪುರುಷರಿಗೆ ಅಥವಾ ಇಸ್ರಾಯೇಲ್ ಜನರಿಗೆ ಅಥವಾ ಒಳ್ಳೆಯ ಜನರಿಗೆ ಮಾತ್ರ ಸೀಮಿತವಾದುದ್ದಲ್ಲ, ಯೇಸುವು ಎಲ್ಲರ ರಕ್ಷಕನಾಗಿದ್ದಾನೆಂಬುದನ್ನು ತೋರಿಸುವುದಾಗಿದೆ.

*ಮರಿಯಳ ಗಂಡನಾದ ಯೋಸೇಫ* (ವ. 16): ಯೇಸುವು ಯೋಸೇಫನ ಶಾರೀರಿಕ ಮಗನಾಗದಿದ್ದರೂ ಆತನು ಯೋಸೇಫನ ಶಾಸನಾತ್ಮಕವಾದ ಮಗನಾಗಿದ್ದನು, ಆದ್ದರಿಂದ ದಾವೀದನ ಸಂತಾನದವನೆಂಬುದನ್ನು ಮತ್ತಾಯನು ತೋರಿಸುತ್ತಾನೆ.

*ಹದಿನಾಲ್ಕು ತಲೆಗಳು … ಹದಿನಾಲ್ಕು … ಹದಿನಾಲ್ಕು* (ವ. 17): ಯೇಸುವು ನಿಜವಾಗಲೂ ದಾವೀದನ ಮಗನಾಗಿದ್ದಾನೆಂಬುದನ್ನು ತೋರಿಸಲು ಮತ್ತಾಯನು ಹದಿನಾಲ್ಕನೆಯ ಅಂಕೆಯನ್ನು ಮೂರು ಬಾರಿ ಉಪಯೋಗಿಸುತ್ತಾನೆ. ಪ್ರಾಚೀನ ಇಬ್ರಿಯದಲ್ಲಿ ದಾವೀದನ ಹೆಸರಿನಲ್ಲಿನ ಮೂರು ಅಕ್ಷರಕ್ಕಾಗಿನ (DVD) ಸಂಖ್ಯಾತ್ಮಕ ಮೌಲ್ಯವನ್ನು ಹದಿನಾಲ್ಕು ಸಂಖ್ಯೆಯವರೆಗೆ ಸೇರಿಸಲಾಗಿದೆ (D ಎಂದರೆ 4 ಮತ್ತು V ಎಂದರೆ 6: 4+6+4 = 14). ಅಲ್ಲದೆ ದಾವೀದನು ಪಟ್ಟಿಯಲ್ಲಿನ ಹದಿನಾಲ್ಕನೇ ಹೆಸರಾಗಿದೆ.

*ಆತನು ಜನರ ಎಣಿಕೆಯಲ್ಲಿ ಯೋಸೇಫನ ಮಗನು* (ಲೂಕ 3:23): ಲೂಕ 1:34-35 ರಲ್ಲಿ ಲೂಕನು ಕನ್ಯಾ ಮರಿಯಳಲ್ಲಿನ ಯೇಸುವಿನ ಜನನದ ಪಟ್ಟಿ(ಲೆಕ್ಕ)ಯನ್ನು ತನ್ನ ಓದುಗರಿಗೆ ನೆನಪಿಸುತ್ತಾನೆ. ಹಾಗೆಯೇ ಇಲ್ಲಿ ಪುನಃ ಆತನು ಯೋಸೇಫನು ಯೇಸುವಿನ ಶಾರೀರಿಕ ತಂದೆಯಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಿದ್ದಾನೆ.

**ಪ್ರಶ್ನೆಗಳು**

1. ಎರಡು ವಂಶಾವಳಿಗಳ ಕಾಲಾನುಕ್ರಮವನ್ನು ಹೋಲಿಸಿರಿ ಮತ್ತು ನಿಮ್ಮ ಟಿಪ್ಪಣಿ ತಿಳಿಸಿರಿ.
2. ಮತ್ತಾಯನ ಸುವಾರ್ತೆಯಲ್ಲಿನ ಯೇಸುವಿನ ವಂಶಾವಳಿಯು ಎಷ್ಟು ಹಿಂದೆ ಹೋಗುತ್ತದೆ?
3. ಲೂಕನ ಸುವಾರ್ತೆಯಲ್ಲಿನ ಯೇಸುವಿನ ವಂಶಾವಳಿಯು ಎಷ್ಟು ಹಿಂದೆ ಹೋಗುತ್ತದೆ?
4. ಯೇಸುವಿನ ವಂಶಾವಳಿಯ ಪಟ್ಟಿಯಲ್ಲಿ ಮತ್ತಾಯನು ಐವರು ಸ್ತ್ರೀಯರನ್ನು ಪ್ರಸ್ತಾಪಿಸುತ್ತಾನೆ ಅವರಾರು?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮತ್ತಾಯ ಮತ್ತು ಲೂಕನ ಸುವಾರ್ತೆಯಲ್ಲಿನ ಯೇಸುಕ್ರಿಸ್ತನ ಎರಡು ವಂಶಾವಳಿಗಳು ಯಾಕೆ ವಿಭಿನ್ನವಾಗಿವೆಯೆಂಬುದನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
2. ಮತ್ತಾಯನ ಸುವಾರ್ತೆಯಲ್ಲಿನ ಯೇಸುವಿನ ವಂಶಾವಳಿಯು ಸ್ತ್ರೀಯರನ್ನು, ಅಲ್ಲದೆ ಅನ್ಯ ಸ್ತ್ರೀಯರು ಮತ್ತು ಕೆಟ್ಟ ಹೆಸರಿನ ಸ್ತ್ರೀಯರನ್ನೂ ಯಾಕೆ ಒಳಗೊಂಡಿದೆಯೆಂಬುದನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.



## 6. ಯೇಸುವಿನ ಜನನ , ಮತ್ತಾಯ 1:18-25 ಮತ್ತು ಲೂಕ 2:1-17

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸುವಿನ ಜನನದ ಕುರಿತಾದ ಮತ್ತಾಯನ ದಾಖಲೆಯು ಯೋಸೇಫನ ಮೇಲೆ ಕೇಂದ್ರಿಕೃತವಾಗಿದೆ. ಯೇಸುವು ಮರಿಯಳಲ್ಲಿ ಪವಿತ್ರಾತ್ಮನಿಂದ ಗರ್ಭಾಂಕುರವಾಗಿದ್ದು, ಆತನಿಗೆ ಏನೆಂದು ಹೆಸರಿಡಬೇಕೆಂಬುದನ್ನು ಸಹ ದೇವರು ಯೋಸೇಫನಿಗೆ ಕನಸಿನಲ್ಲಿ ತಿಳಿಸಿದ್ದನು. ಮತ್ತಾಯನು ಯೋಸೇಫನನ್ನು ಒಬ್ಬ ಸಜ್ಜನನು, ದೇವರಿಗೆ ಭಯಪಡುವವನೂ ಮತ್ತು ತನಗಾಗಿ ಮತ್ತು ತನ್ನ ಕುಟುಂಬಕ್ಕಾಗಿನ ದೇವರ ಯೋಜನೆಗೆ ತನ್ನನ್ನು ಒಪ್ಪಿಸಿಕೊಡುವವನೂ ಆಗಿದ್ದನೆಂಬುದಾಗಿ ಚಿತ್ರೈಸುತ್ತಾನೆ. ಒಂದು ಹಂತದಲ್ಲಿ ತನ್ನ ಕಥೆಯಲ್ಲಿ ಮತ್ತಾಯನು ಯೇಸುವಿನ ಜನನದ ಸಮಯ ಮತ್ತು ಸ್ಥಳದ ಕುರಿತಾಗಿ ಓದುಗರಿಗೆ ಯಾವುದೇ ಮಾಹಿತಿಯನ್ನು ಕೊಡದಿರಲು ನಿರ್ಧರಿಸುತ್ತಾನೆ.

ಹೇಗೇ ಇರಲಿ ಯೇಸು ಯಾವಾಗ ಮತ್ತು ಎಲ್ಲಿ ಹುಟ್ಟಿದನೆಂಬುದರ ಬಗ್ಗೆ ಲೂಕನು ಅನೇಕ ಮಾಹಿತಿಗಳನ್ನು ದಾಖಲಿಸುತ್ತಾನೆ. ಅಲ್ಲದೆ ಆತನು ಯೇಸು ಯೆಹೂದದ ಬೇತ್ಲಹೇಮಿನಲ್ಲಿಯೇ ಯಾಕೆ ಹುಟ್ಟಿದನೆಂಬುದಕ್ಕೆ ಹಿನ್ನಲೆಯನ್ನು ಸಹ ತಿಳಿಸುತ್ತಾನೆ.

*ಆಕೆಯ ಗಂಡನಾದ ಯೋಸೇಫನು* ( ಮತ್ತಾಯ 1:19): ಹಿಂದಿನ ವಚನದಲ್ಲಿ ಮತ್ತಾಯನು ಈ ಸಮಯದಲ್ಲಿ ಯೋಸೇಫ ಮತ್ತು ಮರಿಯಳ ನಡುವಿನ ಸಂಬಂಧವನ್ನು ವಿವರಿಸಲು "ನಿಶ್ಚಯ ಮಾಡಿರಲಾಗಿ" ಎಂಬ ಪದವನ್ನು ಬಳಸುತ್ತಾನೆ. ಹಾಗಾಗಿ ಅವರಿನ್ನೂ ಮದುವೆಯಾಗಿಲ್ಲ. ಆದರೂ "ಗಂಡ" ಮತ್ತು "ಹೆಂಡತಿ" ಎಂಬ ಪದಗಳನ್ನು (ಹೋಲಿಸಿ ವ. 21 ಮತ್ತು 24) ಇಸ್ರಾಯೇಲ್ಯರು ನಿಶ್ಚಿತವಾದ ದಂಪತಿಗಳಿಗಾಗಿ ಉಪಯೋಗಿಸುತ್ತಿದ್ದರು (ಹೋಲಿಸಿ ಧರ್ಮೋ. 22:23-24, ಇದು ಅಪನಂಬಿಗಸ್ಥಳಾದ ನಿಶ್ಚಿತ ಹೆಣ್ಣನ್ನು ಹೇಗೆ ರಕ್ಷಿಸಬೇಕೆಂಬುದರ ಬಗ್ಗೆ).

*ಬಿಟ್ಟು ಬಿಡಬೇಕೆಂದಿದ್ದನು* (ವ. 19): ಇದರರ್ಥ ಯೋಸೇಫನು ಒಳ್ಳೆಯವನೂ ಸಜ್ಜನನೂ ಆಗಿದ್ದು ಇದನ್ನೊಂದು ದೊಡ್ಡ ವಿಷಯವಾಗಿ ಮಾಡದೆ ವಿಚ್ಛೇದನ ಪತ್ರಕ್ಕೆ ಸಹಿ ಹಾಕಬೇಕೆಂದಿದ್ದನು. ಆತನು ಮರಿಯಳ ಸ್ಥಿತಿಯನ್ನು ಬೈಲಿಗೆ ತಂದು, ಆಕೆಯನ್ನು ನ್ಯಾಯಾಲಯಕ್ಕೆ ಕೊಂಡೊಯ್ಯಲು ಮತ್ತು ಮರಣ ದಂಡನೆಯನ್ನು ನೀಡಲು ಬಯಸಲಿಲ್ಲ.

*ನೆರವೇರುವಂತೆ* (ವ. 22): ಹಳೇ ಒಡಂಬಡಿಕೆಯ ನೆರವೇರಿಕೆಯು ಮತ್ತಾಯನ ಸುವಾರ್ತೆಯಲ್ಲಿ ಪದೇ ಪದೇ ಮರುಕಳಿಸುವ ಒಂದು ವಿಷಯವಸ್ತುವಾಗಿದೆ. ಮತ್ತಾಯನು ಹಳೇ ಒಡಂಬಡಿಕೆಯನ್ನು ಸುಮಾರು 20 ಬಾರಿ ಉಪಯೋಗಿಸುತ್ತಾನೆ. ಇದರಲ್ಲಿ ಹೆಚ್ಚಿನ ಹೇಳಿಕೆಗಳೆಲ್ಲಾ ಮೆಸ್ಸೀಯನ ಪ್ರವಾದನೆಗಳಾಗಿವೆ.

*ಇಮ್ಮಾನುವೇಲ್* (ವ. 23): ಮತ್ತಾಯನು ಯೆಶಾಯ 7:14 ರಲ್ಲಿನ ಒಂದು ಪ್ರವಾದನ ದೈವವಾಣಿಯನ್ನು ಉಪಯೋಗಿಸುತ್ತಾನೆ ಮತ್ತು ಇಮ್ಮಾನುವೇಲ್ ಎಂಬ ಇಬ್ರಿಯ ಹೆಸರಿನ ಅನುವಾದವನ್ನು ಸೇರಿಸುತ್ತಾನೆ. ಇಮ್ಮಾನುವೇಲ್ ಪ್ರವಾದನೆಯ ಐತಿಹಾಸಿಕ ಹಿನ್ನಲೆಯೇನೆಂದರೆ – ತಾನು ಯೆಹೂದ ಜನಾಂಗವನ್ನು ಅದರ ಪ್ರಸ್ತುತ ವೈರಿಗಳ ಆಕ್ರಮಣದಿಂದ ಬಿಡಿಸುತ್ತಾನೆಂಬುದಾಗಿ ಪ್ರವಾದಿಯಾದ ಯೆಶಾಯನ ಮೂಲಕ ದೇವರು ಅರಸನಾದ ಅಹಾಜನಿಗೆ ಭರವಸೆಕೊಡುವುದಾಗಿದೆ. ಈ ಪ್ರವಾದನೆಯನ್ನು "ದೇವರು ನಮ್ಮ ಕೂಡ ಇದ್ದಾನೆ" ಎಂಬುದಾಗಿ ಯೇಸು ಕ್ರಿಸ್ತನ ಕುರಿತಾದ ಪ್ರವಾದನೆಯಾಗಿ ಅನುವಾದಿಸುವಂತೆ ಪವಿತ್ರಾತ್ಮನು ಮತ್ತಾಯನನ್ನು ಪ್ರೇರೇಪಿಸಿದನು.

*ಚಕ್ರವರ್ತಿಯಾದ ಔಗುಸ್ತ ಕೈಸರ* (ವ. 2:1): ಈತನ ಮೂಲ ಹೆಸರು ಗೈಯಸ್ ಒಕ್ಟೇವಿಯಸ್ ಎಂಬುದಾಗಿತ್ತು. ಈತನು ತನ್ನ ಚಿಕ್ಕಪ್ಪನಿಂದ ದತ್ತು ಸ್ವೀಕರಿಸಲ್ಪಟ್ಟಾಗ ಕೈಸರ ಎಂಬ ಹೆಸರನ್ನು ಪಡೆದನು. ಈತನು ಕ್ರಿ.ಪೂ. 31 ರಲ್ಲಿ ರೋಮನ್

ಚಕ್ರವರ್ತಿಯಾದಾಗ, ಈತನಿಗೆ ಔಗುಸ್ತ ("ಉನ್ನತಕ್ಕೇರಿದ") ಎಂಬ ಪದವಿಯನ್ನು ಹೊಂದಿದನು. ಈತನು ಕ್ರಿ.ಶ 14 ರಲ್ಲಿ ತನ್ನ ಮರಣದವರೆಗೂ ಆಳಿದನು.

*ಖಾನೇಷುಮಾರಿ* (ವ. 1): ರೋಮನ್ನರು ತಮ್ಮ ಪ್ರಾಂತ್ಯದ ನಿವಾಸಿಗಳ ಖಾನೇಷುಮಾರಿಯನ್ನು ಯಾವಾಗಲೂ ಮಾಡುತ್ತಿದ್ದರು. ಖಾನೇಷುಮಾರಿಯನ್ನು ತೆರಿಗೆಗಾಗಿ ಮತ್ತು ಪುರುಷರನ್ನು ಸೇನೆಗಳಿಗೆ ಸೇರಿಸುವುದಕ್ಕಾಗಿ ಮಾಡಲಾಗುತ್ತಿತ್ತು.

*ಕುರೇನ್ಯನು ಸಿರಿಯಕ್ಕ ಅಧಿಪತಿಯಾಗಿದ್ದಾಗ* (ವ. 1): ಕುರೇನ್ಯನು ಕ್ರಿ.ಶ 6-9 ರಲ್ಲಿ ರೋಮನ್ ಅಧಿಪತ್ಯದ ಪ್ರಾಂತ್ಯವಾದ ಸಿರಿಯಾದ ಅಧಿಪತಿಯಾಗಿದ್ದನು ಮತ್ತು ಈ ಸಮಯದಲ್ಲಿಯೇ ಖಾನೇಷುಮಾರಿಯನ್ನು ಮಾಡಲಾಯಿತೆಂದು ಐತಿಹಾಸಿಕ ದಾಖಲೆಗಳು ತೋರಿಸುತ್ತವೆ. ಹಾಗಾಗಿ ಲೂಕನ ಹೇಳಿಕೆಯು ಹೆಚ್ಚಾಗಿ ಈ ಹಿಂದಿನ ಖಾನೇಷುಮಾರಿ ಅಂದರೆ, ಬಹುಶ: ಕ್ರಿ.ಪೂ. 6 ರಲ್ಲಿ ಇದೇ ಕುರೇನ್ಯನು ಸಿರಿಯಾದಲ್ಲಿ ರೋಮನ್ ವಿದೇಶ ವ್ಯವಹಾರಗಳ ಉಸ್ತುವಾರಿಯಲ್ಲಿರುವ ಸಂಗತಿಯನ್ನು ಸೂಚಿಸಿರಬಹುದು.

*ಮರಿಯಳ ಸಂಗಡ* (ವ. 5): ಮರಿಯಳು ಸಹ ಅರಸನಾದ ದಾವೀದನ ಮನೆತನದವಳಾಗಿದ್ದಳು. ಸಿರಿಯಾದ ರೋಮನ್ ಪ್ರಾಂತ್ಯದಲ್ಲಿ ವಯಸ್ಕ (ಪ್ರಾಯದ) ಸ್ತ್ರೀಯು ನಾಗರಿಕ ತೆರಿಗೆಯನ್ನು ಕಟ್ಟಬೇಕಾಗಿತ್ತು. ಹಾಗಾಗಿ ತಾನು ಗರ್ಭಿಣಿಯಾಗಿದ್ದರ ಹೊರತಾಗಿಯೂ ಮರಿಯಳು ಖಾನೇಷುಮಾರಿಯಲ್ಲಿ ಹೆಸರನ್ನು ದಾಖಲಿಸಬೇಕಾಗಿತ್ತು.

**ಪ್ರಶ್ನೆಗಳು**

1. ಯೋಸೇಫನು ಮರಿಯಳನ್ನು ಯಾವ ಕಾರಣಕ್ಕಾಗಿ ಸುಮ್ಮನೆ ಬಿಟ್ಟುಬಿಡಬೇಕೆಂದಿದ್ದನು (ಮತ್ತಾಯ 1:18-19)?
2. ಮರಿಯಳ ಮಗನನ್ನು "ಯೇಸು" ಎಂಬುದಾಗಿ ಕರೆಯಬೇಕೆಂದು ದೂತನು ಯೋಸೇಫನಿಗೆ ಹೇಳಿದನು (ಮತ್ತಾಯ 1:20-21). ಯಾಕೆ?
3. ಯೇಸುವಿಗೆ ಮತ್ತಾಯನು ಹೇಳುವ ಇನ್ನೊಂದು ಹೆಸರೇನು ಮತ್ತು ಆ ಹೆಸರಿನ ಅರ್ಥವೇನು (ಮತ್ತಾಯ 1:22-23)?
4. ಯೋಸೇಫನು ಮರಿಯಳೊಂದಿಗೆ ಗಲಿಲಾಯ ಸೀಮೆಯ ನಜರೇತನ್ನು ಬಿಟ್ಟು ಯಾಕೆ ಯೂದಾಯದಲ್ಲಿರುವ ಬೇತ್ಲೆಹೇಮಿಗೆ ಪ್ರಯಾಣ ಬೆಳೆಸುತ್ತಾನೆ (ಲೂಕ 2:4-5)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮತ್ತಾಯ 1:20 ರಲ್ಲಿ ಯೋಸೇಫನ ಕನಸಿಗಿಂತ ಮೊದಲು ಮತ್ತು ನಂತರ ಯೋಸೇಫ ಮತ್ತು ಮರಿಯಳ ನಡುವಿನ ಸಂಬಂಧವನ್ನು (ಕಾನೂನಾತ್ಮಕ ಮತ್ತು ಲೈಂಗಿಕ) ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
2. ಮತ್ತಾಯ 1:18-25 ಮತ್ತು ಲೂಕ 2:1-7 ರಲ್ಲಿನ ಯೇಸುವಿನ ಜನನದ ಬಗೆಗಿನ ಲೆಕ್ಕವನ್ನು ಹೋಲಿಸಿರಿ. ನಿಮ್ಮ ಅಭಿಪ್ರಾಯವೇನು?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಮತ್ತಾಯ 1:18-25 ರಲ್ಲಿ ವರ್ಣಿಸಲ್ಪಟ್ಟಂತೆ ಯೋಸೇಫನ ಬಗ್ಗೆ ವಿಮರ್ಶಿಸಿರಿ. ಅಲ್ಲದೆ ಈ ಅಧ್ಯಯನದಲ್ಲಿ ಕೊಡಲಾದ ಮಾಹಿತಿಯನ್ನು ಸಹ ಪರಿಗಣಿಸಿರಿ. ಅನಂತರ ***ಯೋಸೇಫ ನಮಗೊಂದು ಮಾದರಿ*** ಎಂಬ ಒಂದು ಧ್ಯಾನ ಅಥವಾ ಸರಳವಾದ ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.

2. ಲೂಕ 2:1-7 ರಲ್ಲಿ ವರ್ಣಿಸಲ್ಪಟ್ಟಂತೆ ಯೇಸುವಿನ ಜನನವನ್ನು ವಿಮರ್ಶಿಸಿರಿ. ಅಲ್ಲದೆ ಈ ಅಧ್ಯಯನದಲ್ಲಿನ ಮಾಹಿತಿಗಳನ್ನೂ ಪರಿಗಣಿಸಿರಿ. ಹಾಗೆಯೇ ***ಚಕ್ರವರ್ತಿ ಮತ್ತು ಒಂದು ಮಗು*** ಎಂಬ ಒಂದು ಧ್ಯಾನ ಅಥವಾ ಸರಳವಾದ ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.

## 7. ಕುರುಬರು ಮತ್ತು ದೇವದೂತರು, ಲೂಕ 2:8-20

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸುವಿನ ಬಗೆಗಿನ ಶುಭಸಮಾಚಾರವನ್ನು ಕೇಳಿದ ಮತ್ತು ಆತನ ಜನನವನ್ನು ತಿಳಿದ ಮೊದಲ ಗುಂಪಿನ ಜನರಾರೆಂದರೆ ಬೇತ್ಲೆಹೇಮಿನ ಸಮೀಪದ ಹೊಲದಲ್ಲಿ ರಾತ್ರಿವೇಳೆ ತಮ್ಮ ಕುರಿ ಹಿಂಡನ್ನು ಕಾಯುತ್ತಿದ್ದ ಕುರುಬರಾಗಿದ್ದಾರೆ. ಇದು ಅವರಿಗೆ ಕರ್ತನ ದೂತನಿಂದ ತಿಳಿಸಲ್ಪಟ್ಟಿತು, ಮತ್ತು ಅವರ ಸಂಗಡ ಪರಲೋಕ ಸೈನ್ಯದ ಒಂದು ದೊಡ್ಡ ಗುಂಪು ಹಾಡಿನೊಂದಿಗೆ ಕಾಣಿಸಿಕೊಂಡಿತು. ಗೋದಲಿಯಲ್ಲಿದ್ದ ಮಗುವನ್ನು ನೋಡುವುದಕ್ಕಾಗಿ ಕುರುಬರು ಆತುರದಿಂದ ಓಡಿದರು. ಆ ಸುಂದರವಾದ ರಾತ್ರಿಯಲ್ಲಿ ತಮಗಾದ ಅನುಭವಕ್ಕಾಗಿ ಅವರು ದೇವರನ್ನು ಸ್ತುತಿಸಿ ಕೊಂಡಾಡಿದರು. ಕ್ರೈಸ್ತ ಸಭೆಯ ಇತಿಹಾಸದಲ್ಲಿ ದೂತರ ಹಾಡನ್ನು (ವ. 14) ಗ್ಲೋರಿಯಾ (ಇದರರ್ಥ "ಮಹಿಮೆ") ಎಂಬುದಾಗಿ ಸತ್ಯವೇದದ ಲ್ಯಾಟಿನ್ ಭಾಷಾಂತರದ ಮೊದಲ ಪದದಿಂದ ಕರೆಯಲಾಗುತ್ತದೆ. ಇದನ್ನು ಇಂದೂ ಸಹ ಅನೇಕ ಸಭೆಗಳ ಕೂಟಗಳಲ್ಲಿ ಉಪಯೋಗಿಸಲಾಗುತ್ತಿದೆ.

*ಕರ್ತನ ದೂತನೊಬ್ಬನು* (ವ. 9): ಇದೇ ಹೇಳಿಕೆಯಲ್ಲಿ ಸ್ನಾನಿಕನಾದ ಯೋಹಾನ ಮತ್ತು ಯೇಸುವಿನ ಜನನದ ಕುರಿತಾದ ನಿರೂಪಣೆಯಲ್ಲಿ ಅನೇಕ ಬಾರಿ ಉಪಯೋಗಿಸಲಾಗಿದೆ (ಲೂಕ 1:11 ಮತ್ತು ಮತ್ತಾಯ 1:20,24, 2:13, 19 ನ್ನು ಹೋಲಿಸಿ). ಲೂಕ 1:19, 26 ರಲ್ಲಿ ಈ ದೂತನನ್ನು ಗಬ್ರಿಯೇಲನೆಂಬುದಾಗಿ ಗುರುತಿಸಲಾಗಿದೆ.

*ಕರ್ತನ ಪ್ರಭೆ* (ವ. 9): ಈ ಹೇಳಿಕೆಯು ಸ್ವತಃ ದೇವರ ಮಹಿಮೆಯ ಪ್ರಸನ್ನತೆಯನ್ನು ಸೂಚಿಸುತ್ತದೆ.

*ಹೆದರಬೇಡಿರಿ* (ವ. 9): ಈ ಭರವಸೆಯ ಮಾತನ್ನು ಸತ್ಯವೇದದಲ್ಲಿ ಅನೇಕ ಬಾರಿ ಕೊಡಲಾಗಿದೆ. ದೂತನ ಪ್ರತ್ಯಕ್ಷತೆಯು ಜನರನ್ನು ಭಯಭೀತರನ್ನಾಗಿಸಿತು (ಲೂಕ 1:13 ರಲ್ಲಿ ಮರಿಯಳೊಂದಿಗೆ ಹೋಲಿಸಿ) ಹಾಗಾಗಿ ಅವರಿಗೆ ಪ್ರೋತ್ಸಾಹದ ಅಗತ್ಯತೆಯಿತ್ತು.

*ದಾವೀದನೂರಲ್ಲಿ* (ವ. 11): ಬೇತ್ಲೆಹೇಮ್ ( ವಚನ 15 ರೊಂದಿಗೆ ಹೋಲಿಸಿ).

*ರಕ್ಷಕನು* (ವ. 11): ಆ ದಿನಗಳಲ್ಲಿ ಅನೇಕ ಯೆಹೂದ್ಯರು ತಮ್ಮನ್ನು ಪ್ಯಾಲೆಸ್ತೀನನ್ನು ಆಕ್ರಮಸಿರುವ ರೋಮನ್ನರಿಂದ ಬಿಡಿಸುವ ಒಬ್ಬ ರಾಜಕೀಯ ನಾಯಕನಿಗಾಗಿ ಮುನ್ನೋಡುತ್ತಿದ್ದರು. ಉಳಿದವರು ತಮ್ಮನ್ನು ರೋಗ ಮತ್ತು ಕಷ್ಟಗಳಿಂದ ಬಿಡಿಸುವ ರಕ್ಷಕನಿಗಾಗಿ ಕಾಯುತ್ತಿದ್ದರು. ಆದರೆ ಇಲ್ಲಿ ದೇವದೂತನು ಜನರನ್ನು ಪಾಪ ಮತ್ತು ಮರಣದಿಂದ ಬಿಡಿಸುವ ಒಬ್ಬ ವಿಭಿನ್ನವಾದ ಬಗೆಯ ರಕ್ಷಕನ ಜನನದ ಬಗ್ಗೆ ಪ್ರಕಟಿಸುತ್ತಿದ್ದಾನೆ ( ನೋಡಿ ಮತ್ತಾಯ 1:21, ಲೂಕ 1:77 ಮತ್ತು ಯೋಹಾನ 1:29).

*ಕರ್ತನಾಗಿರುವ ಕ್ರಿಸ್ತನೇ* (ವ. 11): ಕ್ರಿಸ್ತನು ಎಂಬುದು ಇಬ್ರಿಯದ ಮೆಸ್ಸೀಯ "ಅಭಿಷಕ್ತನು" ಎಂಬುದರ ಗ್ರೀಕ್ ಭಾಷಾಂತರವಾಗಿದೆ. ಕರ್ತನು ಎಂಬುದು ಹಳೇ ಒಡಂಬಡಿಕೆಯಲ್ಲಿನ ದೇವರ ಒಡಂಬಡಿಕೆಯ ನಾಮವಾಗಿದೆ. ಹೊಸ ಒಡಂಬಡಿಕೆಯಲ್ಲಿ ಇದನ್ನು ಒಡಂಬಡಿಕೆಯ ನರಾವತಾರದ ಕರ್ತನಾಗಿರುವ ಯೇಸುವಿನ ಕುರಿತಾಗಿ ಬಳಸಲಾಗಿದೆ ಹಾಗಾಗಿ ಮಗುವಾಗಿ ಹುಟ್ಟಿರುವ ಈ ಮೆಸ್ಸೀಯನು ಕರ್ತನಾಗಿರುವ ದೇವರೇ ಆಗಿದ್ದಾನೆಂಬುದಾಗಿ ಕುರುಬರಿಗೆ ತಿಳಿಸಲಾಯಿತು.

*ಪರಲೋಕ ಸೈನ್ಯದ ಗುಂಪು* (ವ. 13): ದೇವದೂತರು.

*ಮೇಲಣ ಲೋಕಗಳಲ್ಲಿ* (ವ. 14): ಇದು ದೇವರು ವಾಸಿಸುವ ಪರಲೋಕವನ್ನು ಸೂಚಿಸುತ್ತದೆ.

*ಮನುಷ್ಯರೊಳಗೆ ಸಮಾಧಾನ* (ವ. 14): ರೋಮನ್ ಸಾಮ್ರಾಜ್ಯವು ತನ್ನ ಪ್ಯಾಕ್ಸ್ ರೋಮಾನಾ(ರೋಮನ್ ಶಾಂತಿ)ಯ ಬಗ್ಗೆ ಹೆಮ್ಮೆಪಡುತ್ತಿತ್ತು, ಇದು ಸಾಮ್ರಾಜ್ಯದ ಮೇರೆಗಳೊಳಗೆ ಯುದ್ಧವಿಲ್ಲದಿರುವದನ್ನು ಸೂಚಿಸುತ್ತದೆ. ಆದರೆ ಇಲ್ಲಿ ದೂತರು ಹಾಡುತ್ತಿರುವುದು ವಿಭಿನ್ನ ಬಗೆಯ ಶಾಂತಿ(ಸಮಾಧಾನ)ಯ ಕುರಿತಾಗಿದೆ. ಈ ಸಮಾಧಾನವು ದೇವರು ಯಾರಿಗೆ ಒಲಿಯುತ್ತಾನೋ

ಅವರಿಗಾಗಿನ ಸಮಾಧಾನವಾಗಿದೆ. ಈ ಸಮಾಧಾನವು ಯೇಸುವನ್ನು ತಮ್ಮ ಸ್ವಂತ ರಕ್ಷಕನಾಗಿ ಅಂಗೀಕರಿಸುವ ಪ್ರತಿಯೊಬ್ಬರಿಗೂ ದೇವರು ಕೊಡುವ ಪಾಪಕ್ಷಮಾಪಣೆಯ ಫಲಿತಾಂಶದ ಸಮಾಧಾನವಾಗಿದೆ. ಆತನು ಇಡೀ ಲೋಕದ ರಕ್ಷಕನಾಗಿದ್ದಾನೆ, ಮತ್ತು ಆತನ ರಕ್ಷಣೆ ಮಾತ್ರ ನಮಗೆ ನಿಜವಾದ ಸಮಾಧಾನವನ್ನು ಕೊಡುತ್ತದೆ.

*ಕರ್ತನು ತಿಳಿಯಪಡಿಸಿದ* (ವ. 15): ದೂತರ ಮುಖಾಂತರವಾಗಿ ಮಾತನಾಡಿದವನು ದೇವರೇ ಎಂಬುದಾಗಿ ಕುರುಬರು ಮನವರಿಕೆ ಮಾಡಿಕೊಂಡರೆಂಬುದನ್ನು ಈ ಹೇಳಿಕೆಯು ತೋರಿಸುತ್ತದೆ.

**ಪ್ರಶ್ನೆಗಳು**

1. ರಕ್ಷಕನು ಹುಟ್ಟಿದ್ದಾನೆಂಬುದಕ್ಕೆ ಕುರುಬರಿಗೆ ದೂತರು ಕೊಟ್ಟ ಗುರುತೇನು?
2. ಗೋದಲಿಯಲ್ಲಿನ ಮಗುವನ್ನು ಕಂಡ ಕೂಡಲೇ ಕುರುಬರು ಮಾಡಿದ್ದೇನು?
3. ಈ ವಾಕ್ಯಭಾಗದಲ್ಲಿ ಮರಿಯಳ ಬಗ್ಗೆ ನಾವೇನನ್ನು ಕಲಿಯುತ್ತೇವೆ.

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಕುರುಬರು ಯಾಕೆ ಬೇತ್ಲೆಹೇಮಿಗೆ ಹೋಗಲು ನಿರ್ಧರಿಸಿದರು (ವ. 15)? ನಿಮ್ಮ ಉತ್ತರವು ಎರಡು ಅಂಶಗಳನ್ನು ಒಳಗೊಂಡಿರಬೇಕು.
2. "ಸಂತೋಷ" ಎಂಬುದು ಲೂಕನ ಸುವಾರ್ತೆಯಲ್ಲಿನ ಒಂದು ಮುಖ್ಯಪದವಾಗಿದೆ. ಈ ಅಧ್ಯಯದಲ್ಲಿ ಸಂತೋಷವು ವಹಿಸುವ ಪಾತ್ರವೇನು?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಯೇಸುವಿನ ಬಗ್ಗೆ ದೂತರು ಕುರುಬರಿಗೆ ತಂದ ಮಾಹಿತಿಯನ್ನು ವಿಮರ್ಶಿಸಿರಿ (ವ. 10-14). ಅಲ್ಲದೆ ಈ ಅಧ್ಯಯನ ***ಪೀಠಿಕೆಯಲ್ಲಿನ*** ಮಾಹಿತಿಯನ್ನು ಸಹ ಪರಿಗಣಿಸಿರಿ. ಅನಂತರ ***ಕುರುಬರಿಗೆ ದೂತರ ಸಂದೇಶ*** ಎಂಬ ಒಂದು ಧ್ಯಾನ ಅಥವಾ ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.
2. ಮರಿಯಳು ಎಲ್ಲವನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡು ಆ ರಾತ್ರಿಯಲ್ಲಿ ತಾನು ಕೇಳಿದ ಮತ್ತು ನೋಡಿದ ಸಂಗತಿಗಳನ್ನೆಲ್ಲ ಯೋಚಿಸುತ್ತಿದ್ದಳು. ಆ ಸಂಗತಿಗಳೇನಾಗಿದ್ದಿರಬಹುದು? ಎರಡು ಪಟ್ಟಿ ಮಾಡಿರಿ. ಒಂದು ಆಕೆಯು ತನ್ನ ಮನಸ್ಸಿನಲ್ಲಿಟ್ಟುಕೊಂಡ ಸಂಗತಿಗಳು, ಇನ್ನೊಂದು ಆಕೆಯು ಯೋಚಿಸಿದ (ವಿಮರ್ಶಿಸಿದ) ಸಂಗತಿಗಳು.



## 8. ಯೇಸುವನ್ನು ಯೆರೂಸಲೇಮಿನ ದೇವಾಲಯದಲ್ಲಿ ಸಮರ್ಪಿಸಿದ್ದು, ಲೂಕ 2:21-40

### ಪೀಠಿಕೆ ಮತ್ತು ಟಿಪ್ಪಣಿ

ಆರು ವಾರಗಳು ಕಳೆದ ಮೇಲೆ ಯೋಸೇಫ ಮತ್ತು ಮರಿಯಳು ಕರ್ತನ ಧರ್ಮಶಾಸ್ತ್ರದಂತೆ ಕರ್ತನಿಗೆ ಸಮರ್ಪಿಸವುದಕ್ಕಾಗಿ ಮಗು ಯೇಸುವನ್ನು ಯೆರೂಸಲೇಮಿನ ದೇವಾಲಯಕ್ಕೆ ತಂದರು. ಅಲ್ಲಿ ಅವರು ಇಬ್ಬರು ವೃದ್ಧ ಭಯಭಕ್ತಿಯುಳ್ಳ ವ್ಯಕ್ತಿಗಳಾದ ಸಿಮೆಯೋನ ಮತ್ತು ಅನ್ನಳನ್ನು ಸಂಧಿಸುತ್ತಾರೆ. ಅವರು ಯೇಸುವನ್ನು ಕಂಡೊಡನೆ ದೇವರನ್ನು ಕೊಂಡಾಡುತ್ತಾರೆ. ತಮ್ಮ ಮಗುವಿನ ಬಗ್ಗೆ ಸಿಮೆಯೋನ ಮತ್ತು ಅನ್ನರು ಹೇಳಿದ ಸಂಗತಿಯನ್ನು ಕೇಳಿ ಯೋಸೇಫ ಮತ್ತು ಮರಿಯಳು ಅಶ್ಚರ್ಯಗೊಳ್ಳುತ್ತಾರೆ.

*ಸೂತಕ ಕಳೆಯುವ ದಿವಸ* (ವ. 22): ಒಂದು ಮಗುವಿಗೆ ಜನ್ಮ ಕೊಟ್ಟ ನಂತರ ಯೆಹೂದಿ ತಾಯಿಯೊಬ್ಬಳು 40 ದಿನಗಳವರೆಗೆ ಅಪವಿತ್ರಳಾಗಿರುತ್ತಿದ್ದಳು. ಅನಂತರ ಆಕೆಯ ಶುದ್ಧೀಕರಣಕ್ಕಾಗಿ ಯಜ್ಞವನ್ನರ್ಪಿಸುವುದಕ್ಕಾಗಿ ಮಗುವಿನೊಂದಿಗೆ ದೇವಾಲಯಕ್ಕೆ ಹೋಗುತ್ತಿದ್ದರು.

*ಕೂಸನ್ನು ಯೆರೂಸಲೇಮಿಗೆ ತೆಗೆದುಕೊಂಡು ಹೋದರು* (ವ. 22): ಬೇತ್ಲಹೇಮ್ ಮತ್ತು ಯೆರೂಸಲೇಮಿನ ನಡುವಿನ ಅಂತರವು ಸುಮಾರು 10 ಕಿ.ಮೀಟರ್ ಗಿಂತ ಕಡಿಮೆಯಿದೆ.

*ಕರ್ತನಿಗೆ ಸಮರ್ಪಿಸಿದರು* (ವ. 24): ಧರ್ಮಶಾಸ್ತ್ರದ ಪ್ರಕಾರ ಚೊಚ್ಚಲ ಗಂಡು ಮಗು ಮತ್ತು ಗಂಡು ಪ್ರಾಣಿಯನ್ನೆಲ್ಲ ದೇವರಿಗೆ ಸಮರ್ಪಿಸಬೇಕಾಗಿತ್ತು (ನೋಡಿ ವಿಮೋ. 13:2-13 ಇದನ್ನು ಲೂಕನು ಭಾಗಶಃ ವಚನ 23 ರಲ್ಲಿ ಹೇಳುತ್ತಾನೆ). ಪಶುವು ಯಜ್ಞವಾಗಿ ಸಮರ್ಪಿಸಲ್ಪಡುವುದು ಅಥವಾ ಬಿಡುಗಡೆ ಹೊಂದುವಂತೆ, ಶಿಶು(ಮಗು)ವು ಸಹ ಶಾಶ್ವತವಾಗಿ ಬಿಡುಗಡೆಯಾಗುತ್ತಿತ್ತು (ಅರಣ್ಯಕಾಂಡ 18:14-16). ಲೇವಿಯರೆಲ್ಲರೂ ಇಸ್ರಾಯೇಲಿನಲ್ಲಿನ ಎಲ್ಲಾ ಚೊಚ್ಚಲ ಗಂಡಸರ ಸ್ಥಾನದಲ್ಲಿ ಸೇವೆ ಮಾಡುವುದಕ್ಕಾಗಿ ದೇವರಿಂದಲೇ ನೇಮಿಸಲ್ಪಟ್ಟಿದ್ದರು (ನೋಡಿ ಅರಣ್ಯಕಾಂಡ 3:11-13, 45-47).

*ಒಂದು ಜೋಡಿ ಬೆಳವಕ್ಕಿ ಅಥವಾ ಎರಡು ಪಾರಿವಾಳದ ಮರಿ* (ವ. 24): ಇದು ಯೋಸೇಫ ಮತ್ತು ಮರಿಯಳಿಬ್ಬರೂ ಬಡವರಾಗಿದ್ದರೆಂಬುದನ್ನು ತೋರಿಸುತ್ತದೆ. ಒಂದು ವರುಷದ ಕುರಿ ಮತ್ತು ಬೆಳವಕ್ಕಿ ಬದಲಾಗಿ ಅವರು ಬಡವರ ಯಜ್ಞವನ್ನು (ಎರಡು ಬೆಳವಕ್ಕಿ) ಅರ್ಪಿಸುತ್ತಾರೆ (ನೋಡಿ ಯಾಜಕಕಾಂಡ 12:2-8, ಲೂಕನು ಭಾಗಶಃ ಬಳಸಿದ್ದಾನೆ).

*ಇಸ್ರಾಯೇಲ್ ಜನರನ್ನು ಸಂತೈಸುವವನು* (ವ. 25): ಈ ಮಾತು ದೇವ ಜನರಿಗೆ ಸುಖ ಮತ್ತು ಸಂತೈಸುವಿಕೆಯನ್ನು ತರುವ ಮೆಸ್ಸೀಯನನ್ನು ಸೂಚಿಸುತ್ತದೆ (ನೋಡಿ ಯೆಶಾಯ 40:1-2).

*ಮಗುವಿನ ತಂದೆ* (ವ. 33): ಯೋಸೇಫನು ಯೇಸುವಿನ ಕಾನೂನುಬದ್ಧವಾದ ತಂದೆಯಾಗಿದ್ದನು.

*ನಿನ್ನ ಪ್ರಾಣಕ್ಕಂತೂ ಅಲಗು ನಾಟಿದಂತಾಗುವುದು* (ವ. 35): ಈ ರೂಪಾಲಂಕಾರವು ಯೇಸುವನ್ನು ಶಿಲುಬೆಗೆ ಏರಿಸುವಾಗ ಮರಿಯಳು ಅನುಭವಿಸಲಿರುವ ಭಾದೆಯನ್ನು ಸೂಚಿಸುತ್ತದೆ.

*ಯೆರೂಸಲೇಮ್* (ವ. 38): ಇಲ್ಲಿ ಯೆರೂಸಲೇಮ್ ಪಟ್ಟಣವು ಇಡೀ ಇಸ್ರಾಯೇಲ್ ರಾಷ್ಟ್ರವನ್ನು ಪ್ರತಿನಿಧಿಸುತ್ತದೆ.

*ಅವರು ಗಲಿಲಾಯಕ್ಕೆ ಹಿಂತಿರುಗಿ ಹೋದರು* (ವ. 39): ಗಮನಿಸಿ ತನ್ನ ಸಮಯದಲ್ಲಿ ಯೇಸುವಿನ ಕುಟುಂಬದ ಬಗ್ಗೆ ಲೂಕನು ಬಿಟ್ಟಿದ್ದನ್ನು ಮತ್ತಾಯನು ತಿಳಿಸುತ್ತಾನೆ: ಮೂಢಣ ದೇಶದ ಜೋಯಿಸರ ಭೇಟಿ, ಬೇತ್ಲೆಹೇಮಿನಲ್ಲಿ ಗಂಡು ಮಕ್ಕಳನ್ನೆಲ್ಲಾ ಹೆರೋದನು ಕೊಲ್ಲುವುದು, ಐಗುಪ್ತಕ್ಕೆ ಪಾಲಾಯನ ಮಾಡುವುದು ಮತ್ತು ನಜರೇತಿಗೆ ಹಿಂತಿರುಗುವುದು.

**ಪ್ರಶ್ನೆಗಳು**

1. ಯೇಸುವಿಗೆ ಎಂಟು ದಿನಗಳಾದಾಗ ಏನಾಯಿತು (ವ. 21)?
2. ಯೋಸೇಫ ಮತ್ತು ಮರಿಯರು ಯೇಸುವನ್ನು ಯೆರೂಸಲೇಮಿನ ದೇವಾಲಯಕ್ಕೆ ಯಾಕೆ ಕೊಂಡೊಯ್ಯುತ್ತಾರೆ (ವ. 22-24)?
3. ಸಿಮೆಯೋನನ ಕುರಿತು ನಾವು ಏನನ್ನು ಕಲಿಯುತ್ತೇವೆ (ವ. 25-35)?
4. ಅನ್ನಳ ಕುರಿತು ನಾವು ಏನನ್ನು ಕಲಿಯುತ್ತೇವೆ (ವ. 36-38)?
5. ಯೋಸೇಫ ಮತ್ತು ಆತನ ಕುಟುಂಬವು ದೇವಾಲಯವನ್ನು ಸಂಧಿಸಿದ ನಂತರ ಎಲ್ಲಿಗೆ ಹೋಗುತ್ತಾರೆ (ವ. 39)?
6. ಈ ವಾಕ್ಯ ಭಾಗದ ಕೊನೆಯಲ್ಲಿ ಯೇಸುವಿನ ಬೆಳವಣಿಗೆಯ ಕುರಿತು ಹೇಗೆ ವರ್ಣಿಸಲಾಗಿದೆ?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಇಂದು ದಕ್ಷಿಣ ಭಾರತದಲ್ಲಿರುವ ನಮಗೆ ಯೇಸುವಿನ ಕುರಿತಾದ ಸಿಮೆಯೋನನ ಪ್ರವಾದನೆಯು ಯಾಕೆ ಅಷ್ಟು ಪ್ರಾಮುಖ್ಯವಾಗಿದೆ?
2. ಈ ವಾಕ್ಯ ಭಾಗದಲ್ಲಿ ನಾಲ್ಕು ವಯಸ್ಕರ ಬಗ್ಗೆ (ಯೋಸೇಫ, ಮರಿಯಳು, ಸಿಮೆಯೋನ ಮತ್ತು ಅನ್ನಳು) ಲೂಕನು ಕೊಡುವ ಸಾಮಾನ್ಯ ಅನಿಸಿಕೆಯೇನು?
3. ಲೂಕನ ಸುವಾರ್ತೆಯ ಓದುಗರಿಗೆ ಯೇಸುವಿನ ಬಗ್ಗೆ ಮತ್ತು ಆತನ ಸೇವೆಯ ಬಗ್ಗೆ ಯಾವ ಹೆಚ್ಚಿನ ಮಾಹಿತಿಯನ್ನು ಈ ವಾಕ್ಯ ಭಾಗವು ಕೊಡುತ್ತದೆ?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಈ ವಾಕ್ಯ ಭಾಗದಲ್ಲಿ ನಾವು ನಾಲ್ಕು ದೇವಭಕ್ತಿಯುಳ್ಳ ಜನರನ್ನು (ಯೋಸೇಫ, ಮರಿಯಳು, ಸಿಮೆಯೋನ ಮತ್ತು ಅನ್ನ) ಸಂಧಿಸುತ್ತೇವೆ. ಲೂಕನು ಅವರನ್ನು ವರ್ಣಿಸಿದ ಬಗೆಯನ್ನು ವಿಮರ್ಶಿಸಿರಿ. ಅಲ್ಲದೇ ***ಟಿಪ್ಪಣಿಯ*** ಮತ್ತು ***ಪ್ರಶ್ನೆ*** 1-4 ರ ಉತ್ತರಗಳನ್ನು ಸಹ ವಿಮರ್ಶಿಸಿರಿ. ಹಾಗೆಯೇ ಈ ಅಂಶಗಳ ಆಧಾರದ ಮೇಲೆ ಒಂದು ಧ್ಯಾನ ಅಥವಾ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 2 ರ ಉತ್ತರವು ನಿಮ್ಮ ರೂಪರೇಖೆಯಾಗಬಹುದು.
2. ಈ ವಾಕ್ಯಭಾಗದಲ್ಲಿ ಲೂಕನು ತನ್ನ ಓದುಗರಿಗೆ ಯೇಸು ಮತ್ತು ಆತನ ಸೇವೆಯ ಬಗ್ಗೆ ಕೆಲವು ಪ್ರಾಮುಖ್ಯ ಮಾಹಿತಿಗಳನ್ನು ಕೊಡುತ್ತಾನೆ. ಈ ಮಾಹಿತಿಯನ್ನು (***ಆಲೋಚಿಸಿರಿ ಮತ್ತು ಚರ್ಚಿಸಿರಿ*** 3 ರ ಉತ್ತರವನ್ನೊಳಗೊಂಡು) ಮತ್ತು ನಿಮ್ಮ ಜೀವಿತ ಮತ್ತು ಸೇವೆಯ ಮೇಲಿನ ಪರಿಣಾಮಗಳನ್ನು ವಿಮರ್ಶಿಸಿರಿ. ಆ ಮೇಲೆ ಈ ಅಂಶಗಳ ಆಧಾರದ ಮೇಲೆ ಒಂದು ಧ್ಯಾನ ಅಥವಾ ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ. ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 3 ರ ಉತ್ತರವು ನಿಮ್ಮ ರೂಪರೇಖೆಯಾಗಬಹುದು.



## 9. ಮೂಡಣ ದೇಶದ ಜೋಯಿಸರು, ಮತ್ತಾಯ 2:1-12

### ಪೀಠಿಕೆ ಮತ್ತು ಟಿಪ್ಪಣಿ

ಲೂಕನು ತನ್ನ ಓದುಗರಿಗೆ ಬೇತ್ಲೆಹೇಮಿನ ಸಾಮಾನ್ಯ ಕುರುಬರು ಮತ್ತು ಹೇಗೆ ದೇವರು ಅವರಿಗೆ ಯೇಸುವಿನ ಜನನದ ಬಗ್ಗೆ ಶುಭಸಮಾಚಾರವನ್ನು ದೂತನ ಮೂಲಕ ತಿಳಿಸಿದನೆಂಬುದರ ಬಗ್ಗೆ ಹೇಳುತ್ತಾನೆ. ಯೇಸುವನ್ನು ನೋಡಿ, ಆರಾಧಿಸಿದವರಲ್ಲಿ ಅವರೇ ಮೊದಲಿಗರು. ಬದಲಾಗಿ ಮತ್ತಾಯನು ಹೇಗೆ ದೇವರು ಮೂಡಣ ದೇಶದ ಜೋಯಿಸರನ್ನು ಒಂದು ನಕ್ಷತ್ರದ ಸೂಚನೆಯ ಮೂಲಕ ಹೊಸದಾಗಿ ಹುಟ್ಟಿದ ಪ್ಯಾಲೆಸ್ತೇನ್ ಅರಸನ ಬಳಿಗೆ ನಡೆಸಿದನೆಂಬುದನ್ನು ದಾಖಲಿಸುತ್ತಾನೆ. ಆತನನ್ನು ಹೆರೋದ ಮಹಾಶಯನ ಅರಮನೆಯಲ್ಲಿ ಕಾಣಬಹುದೆಂಬುದಾಗಿ ಅವರು ಯೋಚಿಸಿದ್ದರು.

ಆದರೆ ಅದಕ್ಕೆ ಬದಲಾಗಿ ಅವರು ಆತನನ್ನು ಬೇತ್ಲೆಹೇಮಿನ ಬಡ ಮನೆಯೊಂದರಲ್ಲಿ ಕಂಡರು. ಅವರು ಆ ಪುಟ್ಟ ಯೇಸುವಿಗೆ ಬೆಲೆ ಬಾಳುವ ವಸ್ತುಗಳನ್ನು ಕಾಣಿಕೆಯಾಗಿ ಕೊಟ್ಟು ಆತನನ್ನು ಆರಾಧಿಸಿದರು.

*ಅರಸನಾದ ಹೆರೋದ* (ವ. 1): ಹೆರೋದ ಮಹಾಶಯನು ಒಂದು ಘನ ಇದೂಮಾಯ ಕುಟುಂಬಕ್ಕೆ ಸೇರಿದವನಾಗಿದ್ದನು (ಇದೂಮಾಯವು ದಕ್ಷಿಣ ಪ್ಯಾಲೆಸ್ತೇನಿನ ಒಂದು ಪ್ರಾಂತ್ಯವಾಗಿದೆ, ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೇನ್ ನಕ್ಷೆಯನ್ನೂ*** ನೋಡಿರಿ). ಈತನ ಪೂರ್ವಜರು ಯೆಹೂದಿ ಧರ್ಮಕ್ಕೆ ಮತಾಂತರವನ್ನು ಹೊಂದಿದ್ದರು, ಅವರು ಯೆಹೂದಿ ನಾಯಕರಿಂದ ಇನ್ನೂ ಸಹ ಹೊರಗಿನವರೆಂಬುದಾಗಿ ಪರಿಗಣಿಸಲ್ಪಟ್ಟಿದ್ದರು. ಹೆರೋದನು ರೋಮನ್ನರಿಂದ ಯೆಹೂದದ ಅರಸನಾಗಿ ನೇಮಿಸಲ್ಪಟ್ಟು ಕ್ರಿ.ಪೂ 37 ರಲ್ಲಿ ತನ್ನ ದೇಶವನ್ನು ನಿಯಂತ್ರಣಕ್ಕೆ ತೆಗೆದುಕೊಂಡನು. ಈತನು ಕ್ರಿ.ಶ. 4 ರಲ್ಲಿ ಮರಣ ಹೊಂದುತ್ತಾನೆ. ಈತನೊಬ್ಬ ಬಲಿಷ್ಠ ಮತ್ತು ಕರುಣೆಯಿಲ್ಲದ (ನಿರ್ಧಯಿ) ಆಡಳಿತಗಾರನಾಗಿದ್ದು, ತನ್ನ ಒಬ್ಬ ಹೆಂಡತಿ ಮತ್ತು ಅನೇಕ ಮಕ್ಕಳನ್ನು ಸಹ ಕೊಂದುಹಾಕಿದವನಾಗಿದ್ದಾನೆ. ಆದರೆ ಈತನೊಬ್ಬ ಮಹಾನ್ ವಾಸ್ತುಶಿಲ್ಪಿಯಾಗಿದ್ದು ಯೆರೂಸಲೇಮಿನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದ್ದಲ್ಲದೆ, ಯೆರಿಕೋದಲ್ಲಿನ ತನ್ನ ಅರಮನೆಯನ್ನೊಳಗೊಂಡು (ಇದು ಆತನ ನಿವಾಸವಾಗಿದ್ದು ಇಲ್ಲಿಯೇ ಆತನು ಮರಣ ಹೊಂದಿದನು) ಯೆರೂಸಲೇಮಿನ ಸಮೀಪದ ಹೆರೋಡಿಯಂ ಕೋಟೆ (ಇಲ್ಲಿಯೇ ಆತನನ್ನು ಹೂಣಿಡಲಾಯಿತು) ಮತ್ತು ಬಂದರು ಮತ್ತು ಮೆಡಿಟರೇನಿಯನ್ ಸಮುದ್ರದ ದಡದಲ್ಲಿನ ಸಿಸೆರಿಯಾ (ಕೈಸರೈ) ಪಟ್ಟಣ (ನಂತರ ಇದು ರೋಮನ್ ಗವರ್ನರ್ಗಳ ನಿವಾಸವಾಯಿತು, ನೋಡಿ ಅಪೊ.ಕೃ. 23:23-26), ಮತ್ತು ಅನೇಕ ಚಿತ್ರಮಂದಿರ, ಪಟ್ಟಣಗಳು, ಅರಮನೆಗಳು ಮತ್ತು ಕೋಟೆಗಳನ್ನು ಕಟ್ಟಿದನು.

*ಮೂಡಣ ದೇಶದ ಜೋಯಿಸರು* (ವ. 1): ಹೆಚ್ಚಾಗಿ ಅವರು ಪರ್ಷಿಯಾ ಅಥವಾ ದಕ್ಷಿಣ ಅರೇಬಿಯದಿಂದ ಬಂದಿರಬಹುದು. ಅವರ ಹೆಸರಾಗಲಿ ಅಥವಾ ಅವರು ಎಷ್ಟು ಜನರಿದ್ದರೆಂಬುದು ನಮಗೆ ಗೊತ್ತಿಲ್ಲ.

*ಯೆಹೂದ್ಯ ಅರಸನು* (ವ. 2): ಈ ಮಾತು ಆ ಜೋಯಿಸರು ಅನ್ಯರಾಗಿದ್ದರೆಂಬುದನ್ನು ಸೂಚಿಸುತ್ತದೆ. ಎಲ್ಲಾ ರಾಷ್ಟ್ರಗಳಿಂದ ಜನರು ಯೇಸುವನ್ನು ಆರಾಧಿಸಲು ಬಂದು ಆತನನ್ನು ಅರಸನೆಂಬುದಾಗಿ ಅರಿತುಕೊಂಡರೆಂಬುದನ್ನು ತೋರಿಸಲು ಮತ್ತಾಯನು ಬರೆಯುತ್ತಾನೆ.

*ಆತನನ್ನು ಸೂಚಿಸುವ ನಕ್ಷತ್ರ* (ವ. 2): ಮೊದಲು ಜೋಯಿಸರಿಗೆ ಕಾಣಿಸಿಕೊಂಡು ಅವರನ್ನು ಮಾರ್ಗದರ್ಶಿಸಿದ ನಕ್ಷತ್ರದ ಲಕ್ಷಣದ ಬಗ್ಗೆ ಅನೇಕ ಸಿದ್ಧಾಂತ ಮತ್ತು ಊಹಾಪೋಹಗಳಿವೆ. ಖಂಡಿತವಾಗಿ ಅದರ ನೈಜತೆಯೇನೆಂಬುದನ್ನು ತಿಳಿಯಲು ನಮಗೆ ಯಾವುದೇ ಮಾರ್ಗವಿಲ್ಲ. ಈ ಜೋಯಿಸರು ನಕ್ಷತ್ರ ನೋಡುವವರಾಗಿದ್ದು 1400 ವರ್ಷಗಳ ಹಿಂದೆ ಇಸ್ರಾಯೇಲ್ಯರು ವಾಗ್ದಾನದ ದೇಶವನ್ನು ಸಮೀಪಿಸುತ್ತಿರುವಾಗ ಮೆಸೋಪೊಟೊಮಿಯಾದ ಭವಿಷ್ಯಗಾರನಾದ ಬಿಳಾಮನು ಇವರ ಕುರಿತು ನುಡಿದ ದೈವೋಕ್ತಿಯ ಬಗ್ಗೆ ತಿಳಿದವರಾಗಿದ್ದರಬಹುದು. "ಯಾಕೋಬ ವಂಶದವರಲ್ಲಿ ನಕ್ಷತ್ರಪ್ರಾಯನೊಬ್ಬನು ಉದಯಿಸಿದ್ದಾನೆ, ಇಸ್ರಾಯೇಲ್ಯರಲ್ಲಿ ರಾಜದಂಡ

ಹಿಡಿದವನು ಕಂಡು ಬಂದಿದ್ದಾನೆ" (ಅರಣ್ಯಕಾಂಡ 24:17). ಯೆಹೂದ್ಯರು ಈ ದೈವೋಕ್ತಿಯನ್ನು ಮೆಸ್ಸೀಯನ ಕುರಿತ ಒಂದು ಪ್ರವಾದನೆ ಎಂಬುದಾಗಿ ವ್ಯಾಖ್ಯಾನಿಸಿದರು.

*ಮಹಾಯಾಜಕ* (ವ. 4): ಸದ್ದುಕಾಯರು ಯೆರೂಸಲೇಮಿನ ದೇವಾಲಯದ ಆಡಳಿತ ಮತ್ತು ದೇವಾಲಯದ ಆರಾಧನೆಯ ಮೇಲ್ವಿಚಾರಣೆಯಲ್ಲಿ ಇದ್ದರು.

*ಶಾಸ್ತ್ರಿಗಳು* (ವ. 4): ಇವರು ಆ ದಿನಗಳಲ್ಲಿ ಯೆಹೂದಿ ಪಂಡಿತರಾಗಿದ್ದರು. ಹೆಚ್ಚಿನವರೆಲ್ಲಾ ಫರಿಸಾಯರಾಗಿದ್ದರು.

*ಪ್ರವಾದಿಯ ಮುಖಾಂತರ ಬರೆದ* (ವ. 5): ಯೂದಾಯದ ಬೇತ್ಲೆಹೇಮಿನಿಂದ ಹೊರಡುವ ಭವಿಷ್ಯದ ಅಧಿಪತಿಯ ಕುರಿತಾದ ಈ ಪ್ರವಾದನೆಯು 700 ವರ್ಷಗಳ ಹಿಂದೆಯೇ ಮೀಕ ಎಂಬ ಪ್ರವಾದಿಯ ಮೂಲಕ ಹೇಳಲ್ಪಟ್ಟಿತ್ತು.

*ಆಳತಕ್ಕವನು* (ವ. 6): ಇದು ಅಧಿಪತಿಗೆ ಮತ್ತು ಅರಸನಿಗೆ ಇರುವ ಒಂದು ಸಾಮಾನ್ಯವಾದ ರೂಪಾಲಂಕಾರವಾಗಿದೆ.

*ಚಿನ್ನ, ಧೂಪ ಮತ್ತು ರಕ್ತಬೋಳಗಳ ಕಾಣಿಕೆ* (ವ. 11): ಇವೆಲ್ಲವೂ ತುಂಬಾ ಬೆಲೆಬಾಳುವ ಕಾಣಿಕೆಗಳಾಗಿವೆ. ಚಿನ್ನವು ಒಬ್ಬರಾಜನಿಗೆ ಹೊದುವಂತ ಕಾಣಿಕೆಯಾಗಿತ್ತು. ಧೂಪವು ದೇವಾಲಯದಲ್ಲಿ ಯಾಜಕರಿಂದ ಉಪಯೋಗಿಸಲ್ಪಡುತ್ತಿತ್ತು ಮತ್ತು ರಕ್ತಬೋಳವು ಬೆಲೆ ಬಾಳುವ ಪರಿಮಳ ದ್ರವ್ಯಗಳಾಗಿ ಮತ್ತು ಶವವನ್ನು ಕೆಡದಂತೆ ರಕ್ಷಿಸುವದಕ್ಕಾಗಿ ಉಪಯೋಗಿಸಲ್ಪಡುತ್ತಿತ್ತು.

**ಪ್ರಶ್ನೆಗಳು**

1. ಜೋಯಿಸರು ಮೂಡಣ ದೇಶದಿಂದ ಯೆರೂಸಲೇಮಿಗೆ ಯಾಕೆ ಬಂದರು?
2. ಯೆಹೂದ್ಯರಿಗೆ ಅರಸನಾಗ ಬೇಕಾದವನು ಹುಟ್ಟಬೇಕಾದದ್ದು ಎಲ್ಲಿ ಎಂಬುದಾಗಿ ಹೆರೋದನು ಹೇಗೆ ಕಂಡು ಹಿಡಿದನು?
3. ಜೋಯಿಸರನ್ನು ಬೇತ್ಲೆಹೇಮಿಗೆ ಕಳುಹಿಸುವಾಗ ಹೆರೋದನು ಅವರಿಗೆ ಕೊಟ್ಟ ಸಲಹೆ ಏನು?
4. ಯೇಸು ಇರುವ ಮನೆಯನ್ನು ಜೋಯಿಸರು ಹೇಗೆ ಕಂಡು ಹಿಡಿದರು?
5. ಯೆಹೂದ್ಯರ ಅರಸನಾಗಿ ಹುಟ್ಟಿದ ಬಗ್ಗೆ ತಾವು ಕಂಡದ್ದನ್ನು ಹೆರೋದನಿಗೆ ತಿಳಿಸಲು ಜೋಯಿಸರು ಯಾಕೆ ಯೆರೂಸಲೇಮಿಗೆ ಹಿಂತಿರುಗಿ ಬರಲಿಲ್ಲ?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಜೋಯಿಸರ ಭೇಟಿಯು ಅರಸನಾದ ಹೆರೋದನನ್ನು ಯಾಕೆ ಕಳವಳಕ್ಕೀಡಾಗುವಂತೆ ಮಾಡಿತ್ತು?
2. ಒಬ್ಬ ಸತ್ಯವೇದ ಪಂಡಿತರು ಈ ಕಥೆಗೆ ನಾಲ್ಕು ವಿಷಯ ವಸ್ತುಗಳನ್ನು ಮಾಡುತ್ತಾರೆ:

   ಅ. ಅನ್ಯರ ವಿಷಯವಸ್ತು

   ಆ. ನೆರವೇರಿಕೆಯ ವಿಷಯವಸ್ತು (ತದ್ವಿರುದ್ಧ)

   ಇ. ವಿರೋಧಾತ್ಮಕ ವಿಷಯವಸ್ತು

   ಈ. ಜೋತಿಶ್ಯಾಸ್ತ್ರದ ವಿಷಯವಸ್ತು

ಈ ವಿಷಯವಸ್ತುಗಳನ್ನು ಹೇಗೆ ಅರ್ಥೈಸಿಕೊಳ್ಳುವಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಪೀಠಿಕೆ ಮತ್ತು ಪ್ರಶ್ನೋತ್ತರಗಳನ್ನು ಒಳಗೊಂಡ ಈ ಕಥೆಯ ವಿವಿದ ವಿಷಯಗಳನ್ನು ವಿಮರ್ಶಿಸಿ. ಆನಂತರ ***ಜೋಯಿಸರ ಭೇಟಿ*** ಎಂಬ ಧ್ಯಾನ ಅಥವಾ ಸರಳವಾದ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿ.



## 10. ಐಗುಪ್ತಕ್ಕೆ ಪಲಾಯನ ಮತ್ತು ನಜರೇತಿಗೆ ಹಿಂತಿರುಗಿದ್ದು, ಮತ್ತಾಯ 2:13-23

### ಪೀಠಿಕೆ ಮತ್ತು ಟಿಪ್ಪಣಿಗಳು

ಜೋಯಿಸರು ಬೇತ್ಲೆಹೇಮನ್ನು ಬಿಟ್ಟು ಹೋದ ಮೇಲೆ ದೇವದೂತನೊಬ್ಬನು ಯೋಸೇಫನಿಗೆ ಕನಸಿನಲ್ಲಿ ಕಾಣಿಸಿಕೊಂಡು ಐಗುಪ್ತಕ್ಕೆ ಓಡಿ ಹೋಗಬೇಕೆಂದು ಹೇಳಿದನು.

*ಐಗುಪ್ತ* (ವ. 13): ಐಗುಪ್ತದ ಗಡಿಯು ಬೇತ್ಲೆಹೇಮಿನ ನೈರುತ್ಯಕ್ಕೆ ಸುಮಾರು 150 ಕಿ.ಮೀಟರ್ ದೂರದಲ್ಲಿತ್ತು. ಯೇಸು ಮತ್ತು ಆತನ ತಂದೆ ತಾಯಿ ಐಗುಪ್ತದಲ್ಲಿ ಎಲ್ಲಿದ್ದರೆಂಬುದು ಗೊತ್ತಿಲ್ಲ. ಎಷ್ಟು ಕಾಲ ಅಲ್ಲಿದ್ದರೆಂಬುದು ತಿಳಿದಿಲ್ಲ.

*ಹೆರೋದನು ತೀರಿ ಹೋಗುವ ತನಕ* (ವ. 15): ಅರಸನಾದ ಹೆರೋದ ಮಹಾಶಯನು ಕ್ರಿ.ಪೂ. 4 ರಲ್ಲಿ ಸತ್ತುಹೋಗುತ್ತಾನೆ.

*"ಐಗುಪ್ತದೊಳಗಿಂದ ಕರೆದೆನು"* (ವ. 15): ಈ ಮಾತು ಹೋಶೇಯ 11:1 ರಿಂದ ಬಂದಿದ್ದು, ಅಲ್ಲಿ ದೇವರು "ಇಸ್ರಾಯೇಲು ಕೇವಲ ಬಾಲ್ಯದಲ್ಲಿದ್ದಾಗ ನಾನು ಅದರ ಮೇಲೆ ಪ್ರೀತಿಯಿಟ್ಟು ಆ ನನ್ನ ಮಗನನ್ನು ಐಗುಪ್ತ ದೇಶದಿಂದ ಕರೆದೆನು" ಎಂದು ಹೇಳುತ್ತಾನೆ. (ಮೋಶೆಯ ನಾಯಕತ್ವದಡಿಯಲ್ಲಿ ಇಸ್ರಾಯೇಲ್ಯರನ್ನು ಐಗುಪ್ತದಿಂದ ತಾನು ಕರೆದುದ್ದರ ಉಲ್ಲೇಖದೊಂದಿಗೆ). ಇಲ್ಲಿ ಮತ್ತಾಯನು ಪವಿತ್ರಾತ್ಮನ ಪ್ರೇರಣೆಯಿಂದ ಈ ಮಾತನ್ನು ಯೇಸುವಿಗೆ ಅಳವಡಿಸುತ್ತಾನೆ. ಒಂದು ಬಾಲ್ಯ ಇಸ್ರಾಯೇಲು ಐಗುಪ್ತಕ್ಕೆ ಹೋದಂತೆಯೇ ಬಾಲಕನಾದ ಯೇಸು ಸಹ ಅಲ್ಲಿಗೆ ಹೋದನು. ಇಸ್ರಾಯೇಲನ್ನು ದೇವರು ಐಗುಪ್ತದೊಳಗಿಂದ ಕರೆತಂದಂತೆ, ಯೇಸುವನ್ನು ಸಹ ಅದರೊಳಗಿಂದ ಹೊರತಂದನು.

*ಎರಡು ವರುಷದೊಳಗಿನ ಗಂಡುಕೂಸುಗಳನ್ನೆಲ್ಲಾ ಕೊಲ್ಲಿಸಿದನು* (ವ. 16): ಬೇತ್ಲೆಹೇಮಿನ ಆ ಸಣ್ಣ ಹಳ್ಳಿಯಲ್ಲಿ ಎಷ್ಟು ಮುಗ್ಧ ಗಂಡುಕೂಸುಗಳು ಕೊಲ್ಲಲ್ಪಟ್ಟವೆಂಬುದು ನಮಗೆ ಗೊತ್ತಿಲ್ಲ, ಬಹುಶಃ ಮೂವತ್ತಿಕ್ಕಿಂತ ಕಡಿಮೆ ಮಕ್ಕಳಾಗಿದ್ದರಬಹುದು. ವಚನ 18, ಯೆರೆಮೀಯ 31:15 ರಿಂದ ಆರಿಸಿಕೊಂಡ ಹೇಳಿಕೆಯಾಗಿದೆ. ಈ ದೈವೋಕ್ತಿಯ ಹಿನ್ನಲೆಯು ಬಾಬೆಲಿನ ಸೆರೆ ಮತ್ತು ತನ್ನ ಜನರಿಗೆ ದೇವರು ಮಾಡಿದ ವಾಗ್ದಾನವಾಗಿದೆ. ಆತನು ಅವರನ್ನು ತಮ್ಮ ವೈರಿಗಳಿಂದ ಬಿಡಿಸಿ, ಸೆರೆಯಾಗಿ ಹೋದ ದೇಶದೊಳಗಿಂದ ತಿರುಗಿ ಕರೆತರುವನು ಮತ್ತು ಅವರೊಂದಿಗೆ ಒಂದು ಹೊಸ ಒಡಂಬಡಿಕೆಯನ್ನು ಸ್ಥಾಪಿಸುವನು. ರಾಮ ಪಟ್ಟಣವು ಯೆರೂಸಲೇಮಿನ ಉತ್ತರಕ್ಕೆ ಸುಮಾರು 8 ಕಿಲೋ ಮೀಟರ್ ದೂರದಲ್ಲಿದೆ. ಬಾಬೆಲಿಗೆ ಸೆರೆಯಾಗಿ ಹೋಗುವಾಗ ದಕ್ಷಿಣ ರಾಜ್ಯದ ಇಸ್ರಾಯೇಲ್ಯರು ಈ ಪಟ್ಟಣದ ಮೂಲಕವಾಗಿಯೇ ಹಾದು ಹೋಗಿದ್ದಿರಬೇಕು. ಯಾಕೋಬನ ಮೆಚ್ಚಿನ ಪತ್ನಿಯಾದ ರಾಹೇಲಳು ಕಳೆದುಕೊಂಡ ಮತ್ತು ಸೆರೆಯಾಗಿ ಹೋದ ಮಕ್ಕಳಿಗಾಗಿ (ಇಸ್ರಾಯೇಲ್ಯರು) ಅಳುತ್ತಿದ್ದಾಳೆ, ಯಾಕೆಂದರೆ ಅವರು ಇಲ್ಲದೆ ಹೋಗಿದ್ದಾರೆ. ಹಾಗಾಗಿ ಹೇಗೆ ಮತ್ತಾಯನು ಬಾಬೆಲಿನ ಸೆರೆ ಮತ್ತು ತನ್ನನ್ನು ಕೊಲ್ಲಲು ಹುಡುಕುತ್ತಿರುವ ಹೆರೋದನಿಂದ ತಪ್ಪಿಸಿಕೊಳ್ಳಲು ಐಗುಪ್ತಕ್ಕೆ ಓಡಿಹೋದ ಯೇಸುವಿನ ನಡುವೆ ಒಂದು ಸಮನಾಂತರತೆಯನ್ನು ತರುತ್ತಾನೆಂಬುದನ್ನು ನಾವು ಕಾಣಬಹುದು. ಅಲ್ಲದೆ ಮತ್ತಾಯನು ಯೆರೆಮೀಯ ವಾಕ್ಯಭಾಗದ ಉಳಿದರ್ಧ ಭಾಗದ ಹಿನ್ನಲೆಯನ್ನು ಸಹ ತನ್ನ ಓದುಗರಿಗೆ ಜ್ಞಾಪಿಸುತ್ತಾನೆ: ತನ್ನ ಜನರಿಗಾಗಿನ ದೇವರ ರಕ್ಷಣೆಯ ವಾಗ್ದಾನ ಮತ್ತು ತನ್ನ ಜನರೊಂದಿಗೆ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳುವುದು. ಈ ಹಳೇ ಒಡಂಬಡಿಕೆಯ ವಾಗ್ದಾನಗಳು ಯೇಸುಕ್ರಿಸ್ತನ ಮೂಲಕವೇ ನೆರವೇರುವುದಾಗಿವೆ.

*ಅರ್ಖೆಲಾಯನು* (ವ. 22): ಈತನು ಹೆರೋದ ಮಹಾಶಯನ ಮಗನಾಗಿದ್ದನು. ಕ್ರಿ.ಪೂ. 4 ರಲ್ಲಿ ತನ್ನ ತಂದೆಯ ಮರಣವಾದಾಗ ಈತನು ಇದೂಮಾಯ, ಸಮಾರ್ಯ ಮತ್ತು ಯೂದಾಯ ಪ್ರಾಂತ್ಯಗಳನ್ನು ಆಳುವವನಾದನು. ಈತನು ಬಹು ಕ್ರೂರಿಯೂ ಮತ್ತು ನಿರಂಕುಶ ಪ್ರಭುವೂ ಆಗಿದ್ದನು, ಹಾಗಾಗಿ ಕ್ರಿ.ಶ. 6 ರಲ್ಲಿ ರೋಮನ್ ಸರ್ಕಾರವು ಈತನನ್ನು ಪದಚ್ಯುತಗೊಳಿಸಿತು.

*ಗಲಿಲಾಯ ಸೀಮೆಗೆ ... ನಜರೇತೆಂಬ ಊರಿಗೆ ... ಇದರಿಂದ ನಜರಾಯನೆಂಬ ಹೆಸರು ಬರುವದು* (ವ. 22-23): ಗಲಿಲಾಯವು ಪ್ಯಾಲೆಸ್ತೀನಿನ ಉತ್ತರ ಭಾಗದಲ್ಲಿತ್ತು. ನಜರೇತು ಪ್ರಾಮುಖ್ಯತೆಯೇ ಇಲ್ಲದ ಒಂದು ಸ್ಥಳವಾಗಿತ್ತು, ಇದರ ಬಗ್ಗೆ ಹಳೇ ಒಡಂಬಡಿಕೆಯಲ್ಲಿ ಎಲ್ಲಿಯೂ ಪ್ರಸ್ತಾಪವಿಲ್ಲ. ಹಾಗೆಯೇ ಮೆಸ್ಸೀಯನು ನಜರಾಯನೆಂಬುದಾಗಿ ಕರೆಯಲ್ಪಡುವನು ಎಂಬ ಮತ್ತಾಯನ ಹೇಳಿಕೆಯು ಪ್ರವಾದಿಗಳಿಂದ ಆರಿಸಕೊಂಡ ಉಲ್ಲೇಖನವಲ್ಲ. ಬದಲಾಗಿ ಇದನ್ನು ಮೆಸ್ಸೀಯನು ತಿರಸ್ಕರಿಸ್ಪಡುವನು (ನೋಡಿ, ಕೀರ್ತನೆ 22:6, ಯೆಶಾಯ 53:3) ಎಂಬ ಹಳೇ ಒಡಂಬಡಿಕೆಯ ದೃಷ್ಟಿಕೋನಕ್ಕೆ ಉಲ್ಲೇಖವನ್ನಾಗಿ ಅರ್ಥೈಸಿಕೊಳ್ಳಬೇಕಿದೆ. ಯೇಸುವಿನ ಕಾಲದಲ್ಲಿ "ನಜರಾಯ"ನೆಂಬ ಪದವು ಹೆಚ್ಚು ಕಡಿಮೆ "ತಿರಸ್ಕರಿಸಲ್ಪಟ್ಟ" ಎಂಬ ಪದಕ್ಕೆ ಸಮಾನಾರ್ಥಕವಾಗಿತ್ತು. (ನತಾನಯೇಲನು ಫಿಲಿಪ್ಪನಿಗೆ ಕೇಳುವ "ನಜರೇತಿನಿಂದ ಏನಾದರೂ ಒಳ್ಳೆಯದು ಬಂದೀತೆ"? ಯೋಹಾನ 1:46 ಯೊಂದಿಗೆ ಹೋಲಿಸಿರಿ).

**ಪ್ರಶ್ನೆಗಳು**

1. ದೇವದೂತನು ಯೋಸೇಫನಿಗೆ ಕುಟುಂಬದೊಂದಿಗೆ ಐಗುಪ್ತಕ್ಕೆ ಯಾಕೆ ಓಡಿಹೋಗಬೇಕೆಂದು ಹೇಳಿದನು?
2. ಯೋಸೇಫನ ಕುಟುಂಬ ಐಗುಪ್ತದಲ್ಲಿ ಎಷ್ಟು ಸಮಯ ವಾಸವಾಗಿತ್ತು?
3. ಪ್ಯಾಲೆಸ್ತೀನಿಗೆ ಈಗ ತಿರುಗಿ ಹೋಗುವ ಸಮಯ ಬಂದಿದೆ ಎಂಬುದನ್ನು ಯೋಸೇಫನು ಹೇಗೆ ಕಂಡುಕೊಂಡನು?
4. ಪ್ಯಾಲೆಸ್ತೀನಿಗೆ ಹಿಂತಿರುಗಿದ ಮೇಲೆ ಯೋಸೇಫನು ತನ್ನ ಕುಟುಂಬದೊಂದಿಗೆ ಎಲ್ಲಿ ವಾಸವಾಗಿದ್ದನು?
5. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನ್ ನಕ್ಷೆಯಲ್ಲಿ*** ಈ ಐದು ಹೆಸರುಗಳನ್ನು ಕಂಡುಹಿಡಿಯಿರಿ: ಯೆರೂಸಲೇಮ್, ಬೇತ್ಲೆಹೇಮ್, ಯೂದಾಯ, ನಜರೇತ್ ಮತ್ತು ಗಲಿಲಾಯ.

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಹೆರೋದನು ಎರಡು ವರ್ಷಕ್ಕಿಂತ ಮೇಲ್ಪಟ್ಟ ಗಂಡು ಮಕ್ಕಳನ್ನು ಯಾಕೆ ಕೊಲ್ಲಿಸಲಿಲ್ಲ?
2. ಹಳೇ ಒಡಂಬಡಿಕೆಯ ಪ್ರವಾದನೆಗಳು ಮೆಸ್ಸೀಯನಾದ ಯೇಸುವಲ್ಲಿ ನೆರವೇರಿದವೆಂಬುದನ್ನು ಮತ್ತಾಯನು ಹೇಗೆ ತೋರಿಸುತ್ತಾನೆ?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯನದಲ್ಲಿ ನೀವು ಕಲಿತ ಅಂಶವನ್ನೆಲ್ಲಾ ವಿಮರ್ಶಿಸಿರಿ. ಹಾಗೆಯೇ ***ಯೇಸುವು ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನು*** ಎಂಬ ಒಂದು ಧ್ಯಾನ ಅಥವಾ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಪೀಠಿಕೆ ಮತ್ತು ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 2 ರ ಉತ್ತರದ ಮಾಹಿತಿಯನ್ನು ಉಪಯೋಗಿಸಿ.



## 11. ವಾಕ್ಯವು ನರಾವತಾರವೆತ್ತಿ ಬಂದದ್ದು, ಯೋಹಾನ 1:1-18

### ಪೀಠಿಕೆ ಮತ್ತು ಟಿಪ್ಪಣಿಗಳು

ಯೋಹಾನನ ಸುವಾರ್ತೆಯನ್ನು ಮೊದಲ ಮೂರು ಸುವಾರ್ತೆಗಳ ನಂತರ ಬರೆಯಲಾಯಿತು. ಹಾಗಾಗಿ ಈ ಪುಸ್ತಕದ ಹಿಂದಿನ ಅಧ್ಯಯನದಲ್ಲಿ ನಾವು ನೋಡಿದ ಸ್ನಾನಿಕನಾದ ಯೋಹಾನ ಮತ್ತು ಯೇಸುವಿನ ಜನನದ ಕುರಿತಾದ ಕಥೆಗಳನ್ನು ಗ್ರಂಥಕರ್ತನು ಪುನರಾವರ್ತಿಸಬೇಕಾದ ಅವಶ್ಯಕತೆಯಿಲ್ಲ. ಮತ್ತಾಯ ಮತ್ತು ಲೂಕನ ಸುವಾರ್ತೆಯಲ್ಲಿನ ಈ ಅಂಶಗಳು ಯೋಹಾನನ ಓದುಗರಿಗೆ ಚಿರಪರಿಚಿತವಾಗಿದ್ದಿರಬೇಕು. ಹಾಗಾಗಿ ಯೋಹಾನನು ತನ್ನ ಸುವಾರ್ತೆಯನ್ನು ಯೇಸುಕ್ರಿಸ್ತನ ದೈವತ್ವಕ್ಕೆ ಒತ್ತುಕೊಟ್ಟು ಮತ್ತು ಯೇಸು ಯಾರೆಂದು ಸಾಕ್ಷೀಕರಿಸುವವಂತೆ ಸ್ನಾನಿಕನಾದ ಯೋಹಾನನ ಪಾತ್ರವನ್ನು ಪರಿಚಯಿಸುವುದರ ಮೂಲಕ ಒಂದು ದೈವಶಾಸ್ತ್ರೀಯ ರೀತಿಯಲ್ಲಿ ಪ್ರಾರಂಭಿಸುತ್ತಾನೆ.

ಯೋಹಾನನ ಸುವಾರ್ತೆಯ ಕುರಿತಾದ ವಿಷಯದಲ್ಲಿ ಈ ವಾಕ್ಯಭಾಗವನ್ನು ನೀವು ಮುಂದೆ ಇನ್ನೂ ಸವಿವರವಾಗಿ ಅಭ್ಯಾಸಿಸಲಿದ್ದೀರಿ.

*ವಾಕ್ಯ* (ವ. 1): ಈ ವಾಕ್ಯ ಭಾಗದಲ್ಲಿ ಯೋಹಾನನು ಈ ವಾಕ್ಯವನ್ನು ಯೇಸುವಿನ ಕುರಿತಾಗಿ ಉಪಯೋಗಿಸುತ್ತಾನೆ. ಗ್ರೀಕರು ಈ ವಾಕ್ಯವನ್ನು (ಲೋಗೋಸ್) ಬರೀ ಆಡುವ ಮಾತನಷ್ಟೇ ಅಲ್ಲ, ಆಡದೇ ಇರುವ ಮಾತು (ಪದ), ಅಂದರೆ ಇನ್ನೂ ಮಾತನಾಡುವವರ ಮನಸ್ಸಿನಲ್ಲಿರುವ ಪದ(ಮಾತು)ಗಳ ಉಲ್ಲೇಖದೊಂದಿಗೆ ಉಪಯೋಗಿಸುತ್ತಿದ್ದರು. ಹಾಗಾಗಿ ಗ್ರೀಕರಿಗೆ ಲೋಗೋಸ್ ಎಂಬುದು "ಕಾರಣ" ಮತ್ತು "ಭೂಮಂಡಲವನ್ನು ಆಳುವ ನಿಯಮ" ಎಂಬುದಾಗಿ ಸಹ ಅರ್ಥೈಸಲ್ಪಡುತ್ತಿತ್ತು. ಯೆಹೂದ್ಯರು "ವಾಕ್ಯವನ್ನು" ಸಮಸ್ತವನ್ನು ಉಂಟು ಮಾಡಲು, ಮತ್ತು ಎಲ್ಲವನ್ನು ಆಳಲು ದೇವರು ಬಳಸಿದ ವಾಕ್ಯ ಮತ್ತು "ದೇವರ ವಾಕ್ಯ (ಮಾತು) ಧರ್ಮಶಾಸ್ತ್ರ"ದ ಉಲ್ಲೇಖದೊಂದಿಗೆ ಉಪಯೋಗಿಸುತ್ತಿದ್ದರು.

*ವಾಕ್ಯವೆಂಬುವವನು* (ವ. 2): ಗ್ರೀಕಿನಲ್ಲಿ "ವಾಕ್ಯ" ವು ಪುಲ್ಲಿಂಗವಾಗಿದೆ. ಹಾಗಾಗಿ ಇಲ್ಲಿ ಆತನ ಎಂಬ ಸರ್ವನಾಮವನ್ನು ಅದರೊಂದಿಗೆ ಬಳಸಲಾಗಿದೆ. ಒಬ್ಬ ಆಧುನಿಕ ಭಾಷಾಂತರಕಾರನು "ಆತನು" ಎಂಬ ಪದವನ್ನೇ ಉಪಯೋಗಿಸಬೇಕು (ಆಗ ಓದುಗರಿಗೆ ನೇರವಾಗಿ ಯೇಸುವೇ ಈ ವಾಕ್ಯ ಎಂಬುದು ತಿಳಿಯುತ್ತದೆ)

*ಯೋಹಾನನು* (ವ. 6): ಸ್ನಾನಿಕನಾದ ಯೋಹಾನ.

*ವಾಸಮಾಡಿದನು* (ವ. 14): ಈ ಪದವು "ಗುಡಾರ, ದೇವದರ್ಶನ ಗುಡಾರ ಎಂಬ ಪದದಿಂದ ಬಂದಿದೆ ಹಾಗೆಯೇ ಇದು ಯೋಹಾನನ ಓದುಗರಿಗೆ ಹಳೇ ಒಡಂಬಡಿಕೆಯ ದೇವರು ತನ್ನ ಮಹಿಮೆಯಿಂದ (ತೇಜಸ್ಸು) ತುಂಬಿಸಿದ "ಸಂಧಿಸುವ ಗುಡಾರ" ವನ್ನು ನೆನಪಿಸಿರಬಹುದು (ವಿಮೋ.40:34-35).

### ಪ್ರಶ್ನೆಗಳು


1. ವಚನ 1-4 ರಲ್ಲಿ ವಾಕ್ಯದ ಬಗ್ಗೆ ನಾವು ಏನನ್ನು ಕಲಿಯುತ್ತೇವೆ? ಪಟ್ಟಿ ಮಾಡಿ.
2. ವಚನ 6-8 ರಲ್ಲಿ ಸ್ನಾನಿಕನಾದ ಯೋಹಾನನ ಬಗ್ಗೆ ನಾವು ಏನನ್ನು ಕಲಿಯುತ್ತೇವೆ? ಪಟ್ಟಿ ಮಾಡಿ.
3. ವಚನ 17 ರಲ್ಲಿ ತದ್ವಿರುದ್ಧವಾಗಿರುವುದೇನು?
4. ದೇವರನ್ನು ತಿಳಿಯಪಡಿಸಿದವರಾರು (ವ. 18)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ವಚನ 9-13 ರನ್ನು ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ.

2. ವಚನ 14 ರಿಂದ ಯೋಹಾನನ ಸುವಾರ್ತೆಯ ಗ್ರಂಥಕರ್ತನ ಬಗ್ಗೆ ನಾವು ಏನನ್ನು ತಿಳಿದುಕೊಳ್ಳುತ್ತೇವೆ?

3. ವಚನ 15 ರಲ್ಲಿ ಯೇಸುವಿನ ಬಗೆಗಿನ ಯೋಹಾನನ ಸಾಕ್ಷಿಯನ್ನು ನಿಮ್ಮದೇ ಮಾತಿನಲ್ಲಿ ಹೇಳಿರಿ.



## 12. ಹನ್ನೆರಡು ವರ್ಷ ಪ್ರಾಯದಲ್ಲಿ ಯೇಸು, ಲೂಕ 2:41-52.

### ಪೀಠಿಕೆ ಮತ್ತು ಟಿಪ್ಪಣಿಗಳು

ಲೂಕನ ಸುವಾರ್ತೆಯಲ್ಲಿ ನಾವು ಹನ್ನೆರಡು ವರ್ಷ ಪ್ರಾಯದವನಾಗಿದ್ದಾಗ ಯೇಸುವು ಯೆರೂಸಲೇಮಿನ ದೇವಾಲಯದಲ್ಲಿ ದ್ದುದ್ದರ ಕುರಿತಾದ ಒಂದು ಸುಂದರ ಕಥೆಯನ್ನು ಕಾಣುತ್ತೇವೆ. ಇಲ್ಲಿ ಮಾತ್ರ ಹುಡುಗನಾಗಿದ್ದ ಯೇಸುವಿನ ಕುರಿತಾಗಿರುವುದನ್ನು ನಾವು ನೋಡುತ್ತೇವೆ.

*ಪಸ್ಕಹಬ್ಬ* (ವ. 41): ಧರ್ಮಶಾಸ್ತ್ರದ ಪ್ರಕಾರ ಮೂರು ವಾರ್ಷಿಕ ರಜಾ ದಿನಗಳಾಗಿ (ಪಸ್ಕಹಬ್ಬ, ಪಂಚಾಶತ್ತಮ ಮತ್ತು ಗುಡಾರಗಳ ಹಬ್ಬ) ಯೆರೂಸಲೇಮಿಗೆ ಪ್ರಯಾಣಿಸುತ್ತಿದ್ದರು. ಹೆಚ್ಚಾಗಿ ಅವರು ತಮ್ಮ ಕುಟುಂಬ ಸಮೇತವಾಗಿ ಹೋಗುತ್ತಿದ್ದರು. ಬಹುದೂರದಲ್ಲಿರುವವರು ಪಸ್ಕ ಹಬ್ಬಕ್ಕಾದರೂ ಹೋಗಲು ಪ್ರಯತ್ನಿಸುತ್ತಿದ್ದರು.

*ಹನ್ನೆರಡು ವರುಷದವ* (ವ. 42): ಒಬ್ಬ ಯೆಹೂದಿ ಹುಡುಗನು ತನ್ನ ಹದಿಮೂರನೆ ವರ್ಷದಲ್ಲಿ "ಒಡಂಬಡಿಕೆಯ ಮಗ" ನಾಗುವನು ಮತ್ತು ತಾನು ಹನ್ನೆರಡು ವರುಷದವನಾಗಿದ್ದಾಗಲೇ ಆ ಒಂದು ಸಂಸ್ಕಾರಕ್ಕಾಗಿ ಸಿದ್ಧನಾಗಲು ಪ್ರಾರಂಭಿಸುವನು.

*ಬೋಧಕರ* (ವ. 46): ಇವರೆಲ್ಲರೂ ಮೋಶೆಯ ಧರ್ಮಶಾಸ್ತ್ರದಲ್ಲಿ ಪರಿಣಿತರಾದ ರಬ್ಬಿಗಳಾಗಿದ್ದರು.

ವಚನ 52: ವಚನ 40 ರಲ್ಲಿ ಲೂಕನು ಯೇಸುವನ್ನು ವರ್ಣಿಸುವುದನ್ನು ಹೋಲಿಸಿ. ಅಲ್ಲದೆ 1 ಸಮುವೇಲ 2:26 ರಲ್ಲಿ ಬಾಲಕನಾದ ಸಮುವೇಲನ ವರ್ಣನೆಯನ್ನು ಸಹ ಹೋಲಿಸಿರಿ.

### ಪ್ರಶ್ನೆಗಳು

1. ಯೇಸುವಿನ ಕುಟುಂಬವು ಪಸ್ಕಹಬ್ಬವನ್ನು ಎಲ್ಲಿ ಆಚರಿಸಿತು?
2. ತಾವು ಯೇಸುವನ್ನು ಬಿಟ್ಟುಬಂದಿದ್ದೇವೆಂಬುದನ್ನು ಅರಿತುಕೊಳ್ಳುವುದಕ್ಕಿಂತ ಮುನ್ನ ಯೋಸೇಫ ಮತ್ತು ಮರಿಯಳು ಎಷ್ಟು ದೂರ ಪ್ರಯಾಣಿಸಿದ್ದರು?
3. ಯೇಸುವಿನ ಕುರಿತು ಯೆಹೂದಿ ಬೋಧಕರು ಆಶ್ಚರ್ಯಪಟ್ಟಿದ್ದು ಯಾಕೆ?
4. ಈ ವಾಕ್ಯಭಾಗದ ಕೊನೆಯಲ್ಲಿ ಮರಿಯಳ ಬಗ್ಗೆ ನಾವು ಏನನ್ನು ಕಲಿಯುತ್ತೇವೆ?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಯೋಸೇಫ ಮತ್ತು ಮರಿಯರು ಯೇಸುವು ದೇವಾಲಯದಲ್ಲಿರುವುದನ್ನು ಕಂಡಾಗ ಯಾಕೆ ಬೆರಗಾದರೆಂಬುದಾಗಿ ನೀವು ಯೋಚಿಸುವಿರಿ?
2. ಮರಿಯಳ ಪ್ರಶ್ನೆ ಮತ್ತು ಯೇಸುವಿನ ಉತ್ತರದ ನಡುವಿನ ತದ್ವಿರುದ್ಧತೆಯನ್ನು ವಿವರಿಸಿರಿ (ವ. 48-49).
3. ವಚನ 49 ರಲ್ಲಿನ ಯೇಸುವಿನ ಮಾತು ಮತ್ತು ವಚನ 51 ರಲ್ಲಿ ವರ್ಣಿಸಲ್ಪಟ್ಟಂತೆ ಆತನ ಸ್ವಭಾವದ ನಡುವಿನ ಒಂದು ಒತ್ತಡವನ್ನು ಕಾಣುತ್ತೇವೆ ಅದು ಹೇಗೆಂಬುದನ್ನು ವಿವರಿಸಿ.

# ಮಾರ್ಕನ ಸುವಾರ್ತೆಯ ಒಂದು ಅಧ್ಯಯನ


**ಪೀಠಿಕೆ**

ಈ ಘಟಕವು ಇಡೀ ಮಾರ್ಕನ ಸುವಾರ್ತೆಯನ್ನು ಓದುವುದರ ಮೇಲೆ ಆಧಾರಿತವಾಗಿದೆ. ಮಾರ್ಕನ ಬರವಣಿಗೆಯ ಶೈಲಿಯು ವೇಗವಾಗಿ ಚಲಿಸುವಂತದ್ದು ಮತ್ತು ಕೇಂದ್ರಿಕರಿಸುವಂತದ್ದಾಗಿದೆ. ಫಲಿತಾಂಶವು ಕ್ರಿಯೆಗಳಿಂದ ತುಂಬಿದ ಒಂದು ಸುವಾರ್ತೆಯಾಗಿದೆ. ಮಾರ್ಕನ ಸುವಾರ್ತೆಯ ಪಠ್ಯದ ಹರಿವನ್ನು ಅಡ್ಡಿಮಾಡುವುದನ್ನು ಬಿಟ್ಟು ಮುಂಬರುವ ಪ್ರತಿಯೊಂದು ಅಧ್ಯಯನಗಳು ಸಹ ಇಡೀ ಅಧ್ಯಯನದ ಮೇಲೆ ಆಧಾರಿತವಾಗಿದೆಯೇ ಹೊರತು ಒಂದು ವ್ಯಕ್ತಿಗತ ವಾಕ್ಯಭಾಗದ ಮೇಲಲ್ಲ. ಮಾರ್ಕನ ಸುವಾರ್ತೆಯಲ್ಲಿ 16 ಅಧ್ಯಾಯಗಳು ಇರುವಂತೆ, ಈ ಘಟಕದಲ್ಲಿ 16 ಅಧ್ಯಯನಗಳಿವೆ.

ನನ್ನ ಸಲಹೆ ಏನಂದರೆ ಈ ರೀತಿಯಾಗಿ ಪ್ರತಿಯೊಂದು ಅಧ್ಯಯನವನ್ನು ಅಭ್ಯಾಸಿಸಿರಿ:

1. ಮಾರ್ಕನ ಸುವಾರ್ತೆಯಲ್ಲಿನ ಎಲ್ಲಾ ಅಧ್ಯಾಯಗಳನ್ನು, ಸಾಧ್ಯವಾದಷ್ಟು ಒಂದಕ್ಕಿಂತ ಹೆಚ್ಚು ಭಾಷಾಂತರಗಳಲ್ಲಿ ಓದಿರಿ.
2. ***ಪೀಠಿಕೆ ಮತ್ತು ಟಿಪ್ಪಣಿಗಳ*** ಮೂಲಕ ಹೋಗಿರಿ. ಪಠ್ಯ ಟಿಪ್ಪಣಿಯು ಪ್ರಶ್ನೆಗಳನ್ನು ಉತ್ತರಿಸಲು ಅದರಲ್ಲೂ ವಿಶೇಷವಾಗಿ ***ಆಲೋಚಿಸಿರಿ ಮತ್ತು ಚರ್ಚಿಸಿರಿಯಲ್ಲಿನ*** ಕಷ್ಟಕರವಾದ ಪ್ರಶ್ನೆಗಳನ್ನು ಉತ್ತರಿಸಲು ಸಹಾಯಿಸುತ್ತದೆ.
3. ವ್ಯಕ್ತಿಗತವಾಗಿ ಅಥವಾ ಚಿಕ್ಕ ಗುಂಪುಗಳಾಗಿ ***ಪ್ರಶ್ನೆಗಳನ್ನು*** ಉತ್ತರಿಸಿ.
4. ***ಆಲೋಚಿಸಿರಿ ಮತ್ತು ಚರ್ಚಿಸಿರಿ*** ಭಾಗವನ್ನು ಸಣ್ಣ ಗುಂಪುಗಳಲ್ಲಿ ಮಾಡಿರಿ. ***ಪೀಠಿಕೆ ಮತ್ತು ಟಿಪ್ಪಣಿಯಲ್ಲಿನ*** ಪಠ್ಯ ಟಿಪ್ಪಣಿಗಳನ್ನು ಉಪಯೋಗಿಸಿರಿ.
5. ಮೇಲಿನ 3 ಮತ್ತು 4 ರ ನಿಮ್ಮ ಉತ್ತರಗಳನ್ನು ಈ ಪಠ್ಯ ಪುಸ್ತಕದ ಉತ್ತರ ವಿಭಾಗದ ಪ್ರಶ್ನೆಗಳಿಗೆ ಉತ್ತರ ಮತ್ತು ***ಆಲೋಚಿಸಿರಿ ಮತ್ತು ಚರ್ಚಿಸಿರಿ*** ಮೇಲಿನ ಟಿಪ್ಪಣಿಗಳೊಂದಿಗೆ ಹೋಲಿಸಿರಿ.
6. ***ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ*** , ಇದರಲ್ಲಿನ ಅಸೈನ್ಮೆಂಟ್ ಈಗ ಅಥವಾ ಆನಂತರ ಮಾಡಬಹುದು.

   ಈ 16 ಅಧ್ಯಯನಗಳಲ್ಲಿ ಕೆಲವು ದೀರ್ಘವಾಗಿವೆ ಮತ್ತು ಹೆಚ್ಚು ಸಮಯವನ್ನು ತೆಗೆದುಕೊಳ್ಳುತ್ತದೆ. ಹಾಗಾಗಿ ಗಡಿಬಿಡಿ ಮಾಡಿಕೊಳ್ಳಬೇಡಿರಿ.



**ಮಾರ್ಕ ಅಧ್ಯಾಯ 1**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕನು ತನ್ನ ಸುವಾರ್ತೆಯನ್ನು ಸ್ನಾನಿಕನಾದ ಯೋಹಾನನ ಸೇವೆಯ ಒಂದು ಸಂಕ್ಷಿಪ್ತವಾದ ವಿವರದೊಂದಿಗೆ ಪ್ರಾರಂಭಿಸುತ್ತಾನೆ (ವ. 1-8). ಯೇಸುವು ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳುವುದಕ್ಕಾಗಿ ಯೆಹೂದದ ಅಡವಿಯೆಡೆಗೆ ಪ್ರಯಾಣಿಸುವವರ ಮಧ್ಯದಲ್ಲಿದ್ದನು (ವ. 9-11). ಅನಂತರ ಯೇಸುವು ದೇವರಾತ್ಮ ಪ್ರೇರಿತನಾಗಿ ಅಡವಿಗೆ ಹೋಗಿ ಸೈತಾನನಿಂದ ಅಲ್ಲಿ ಶೋಧಿಸಲ್ಪಡುತ್ತಾನೆ (ವ. 12-13). ಯೇಸು ತನ್ನ ಬಹಿರಂಗ ಸೇವೆಯನ್ನು ಗಲಿಲಾಯದ ಬಳಿಯಲ್ಲಿ ದೇವರ ರಾಜ್ಯವು ಸಮೀಪಿಸಿತು ಎಂದು ಸುವಾರ್ತೆಯನ್ನು ಸಾರುತ್ತಾ ಮತ್ತು ತನ್ನನ್ನು ಹಿಂಬಾಲಿಸಬೇಕೆಂದು ನಾಲ್ಕು ಜನ ಬೆಸ್ತರನ್ನು ಕರೆಯುವುದರ ಮೂಲಕ ಪ್ರಾರಂಭಿಸುತ್ತಾನೆ (ವ. 14-20). ಉಳಿದ ಅಧ್ಯಾಯದಲ್ಲಿ ಯೇಸುವು ಅಧಿಕಾರದೊಂದಿಗೆ ಬೋಧಿಸುತ್ತಾನೆ (ಕಪೆರ್ನೌಮಿನ ಸಭಾಮಂದಿರ, ವ. 21-28 ಮತ್ತು ಬೇರೆ ಸಭಾಮಂದಿರಗಳಲ್ಲಿ ವ. 39), ದೆವ್ವಗಳನ್ನು ಬಿಡಿಸುವುದರಿಂದ ಪರಲೋಕ ರಾಜ್ಯದ ಶಕ್ತಿಯನ್ನು ಸ್ಪಷ್ಟಪಡಿಸುತ್ತಾನೆ (ವ. 23-26, 34, 39) ಮತ್ತು ಗಲಿಲಾಯದುದ್ದಕ್ಕೂ ರೋಗಪೀಡಿತರನ್ನು ಸ್ವಸ್ಥಪಡಿಸುತ್ತಾನೆ (ವ. 29-34, 40-42). ಯೇಸುವಿನ ಕುರಿತಾದ ಸುದ್ದಿಯು ಹಬ್ಬಿ ಆತನ ಬಳಿಗೆ ಬರುವವರ ಗುಂಪು ಅಧಿಕವಾಯಿತು (ವ. 37-45).

*ಪ್ರಾರಂಭವು* (ವ. 1): ಈ ಪದವು ಮಾರ್ಕನ ಓದುಗರಿಗೆ ದೇವರು ಭೂಮಿ ಮತ್ತು ಆಕಾಶವನ್ನು ಉಂಟು ಮಾಡುವುದರ ಕುರಿತಾದ ಆದಿಕಾಂಡದ ಮೊದಲ ಪದಗಳನ್ನು ನೆನಪಿಸಿರಬೇಕು. ಯೇಸುವಿನೊಂದಿಗೆ ದೇವರು ಮನುಷ್ಯರಿಗಾಗಿ ಒಂದು ಹೊಸ ಪ್ರಾರಂಭವನ್ನುಂಟುಮಾಡುತ್ತಿದ್ದಾನೆ.

*ಯೇಸು ಕ್ರಿಸ್ತನ ವಿಷಯವಾದ ಸುವಾರ್ತೆ* (ವ. 1): ಸುವಾರ್ತೆಯು ದೇವರು ಯೇಸುಕ್ರಿಸ್ತನ ಜೀವನ, ಮರಣ ಮತ್ತು ಪುನರುತ್ಥಾನದ ಮೂಲಕ ಅನುಗ್ರಹಿಸಿದ ರಕ್ಷಣೆಯಾಗಿದೆ (ಶುಭವಾರ್ತೆ). ಇದಕ್ಕನುಗುಣವಾದ ಹಳೇ ಒಡಂಬಡಿಕೆಯ ಇಬ್ರಿಯ ಪದವು "ದೇವರ ಆಳ್ವಿಕೆಯ ಬರೋಣ, ದೇವರ ರಕ್ಷಣೆ ಮತ್ತು ನ್ಯಾಯತೀರ್ಪಿನ ಬರುವಿಕೆ" ಎಂಬುದಾಗಿ ಅರ್ಥೈಸುತ್ತದೆ. ಹಾಗೆ ಹೊಸ ಒಡಂಬಡಿಕೆಯ ಶುಭವಾರ್ತೆಯು ಈ ದೇವಕುಮಾರನಾದ (ಮೆಸ್ಸೀಯ) ಯೇಸುಕ್ರಿಸ್ತನ ಆಗಮನದ ಮೂಲಕ ದೇವರು ತನ್ನ ರಾಜ್ಯವನ್ನು ಸ್ಥಾಪಿಸುತ್ತಿದ್ದಾನೆಂಬ ಸತ್ಯವನ್ನು ಒಳಗೊಂಡಿದೆ. ಯೇಸುವಿನ ಮೂಲಕ ದೇವರು ತನ್ನ ವಾಗ್ದಾನಗಳನ್ನು ನೆರವೇರಿಸುತ್ತಿದ್ದಾನೆ.

*ದೇವಕುಮಾರ* (ವ. 1): ಇದು ಹೊಸ ಒಡಂಬಡಿಕೆಯಲ್ಲಿ ಯೇಸುವಿನ ಒಂದು ಬಹು ಮುಖ್ಯ ಹೆಸರುಗಳಲ್ಲೊಂದಾಗಿದೆ (ವ. 11 ರಲ್ಲಿ ಆಕಾಶದಿಂದ ದೇವರ ಸ್ವರದೊಂದಿಗೆ ಹೋಲಿಸಿ). ಇದನ್ನು "ಮೆಸ್ಸೀಯ" ನಿಗೆ ಸಮಾನವಾಗಿ (ಕೀರ್ತನೆ 2:7, ಮತ್ತಾಯ 16:16 ರೊಂದಿಗೆ ಹೋಲಿಸಿ) ಮತ್ತು ಆತನು ತಂದೆಯಾದ ದೇವರೊಂದಿಗೆ ಹೊಂದಿರುವ ವಿಶೇಷವಾದ ಸಂಬಂಧದ ಮೂಲಕ ಯೇಸುವಿನ ದೈವತ್ವಕ್ಕೆ ಅಳವಡಿಕೆಯಾಗಿ ಅರ್ಥೈಸಿಕೊಳ್ಳಬೇಕು (ಹೋಲಿಸಿ ಯೋಹಾನ 5:18). ಯೇಸುವು "ದೇವಕುಮಾರ" ನೆಂಬುದಾಗಿ ಹೇಳಿಕೊಂಡದ್ದೇ ಯೆಹೂದಿ ನಾಯಕರು ಆತನಿಗೆ ವಿರುದ್ಧವಾಗಿ ಮಾಡಿದ ಆರೋಪವಾಗಿತ್ತು (ಮಾರ್ಕ 14:61-62).

*ಪ್ರವಾದಿಯಾದ ಯೆಶಾಯನ ಗ್ರಂಥದಲ್ಲಿ ಬರೆದಿರುವ ಪ್ರಕಾರ* (ವ. 2-3): ಎರಡು ಹೇಳಿಕೆಗಳು ಈ ಮಾತನ್ನು ಹೇಳುತ್ತವೆ, ಒಂದು ಮಲಾಕಿ 3:1 (ಮೊದಲ ಎರಡು ಸಾಲು) ಮತ್ತು ಇನ್ನೊಂದು ಯೆಶಾಯ 40:3 (ವ. 3 ರಲ್ಲಿ ಕಾಣುವ ಸಾಲುಗಳು).

*ಕರ್ತನ* (ವ. 3): ಯೆಶಾಯನು ಇದನ್ನು ದೇವರನ್ನು ಸೂಚಿಸಿ ಹೇಳಿದರೆ ಮಾರ್ಕನು ದೇವರ ನರಾವತಾರವಾದ ಯೇಸುವಿಗೆ ಅಳವಡಿಸುತ್ತಾನೆ. ಹಳೇ ಒಡಂಬಡಿಕೆಯ ಹಿನ್ನಲೆಯನ್ನು ಗಣನೆಗೆ ತೆಗೆದುಕೊಳ್ಳದೆ ಯೇಸು ಮತ್ತು ಆತನ ಸೇವೆಯನ್ನು ನಾವು ಪೂರ್ಣವಾಗಿ ಅರಿತುಕೊಳ್ಳಲಾಗಲ್ಲ.

*ಪಾಪಪರಿಹಾರಕ್ಕಾಗಿ … ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು* (ವ. 4): ಯೋಹಾನನ ದೀಕ್ಷಾಸ್ನಾನಕ್ಕೆ ಹಳೇ ಒಡಂಬಡಿಕೆಯ ಹಿನ್ನಲೆಯಾಗಿ ಯೆಶಾಯ 1:16 ರನ್ನು ಉದಾಹರಣೆಯಾಗಿ ಕಾಣಬಹುದು. "ನಿಮ್ಮನ್ನು ತೊಳೆದುಕೊಳ್ಳಿರಿ, ಶುದ್ಧಿಮಾಡಿಕೊಳ್ಳಿರಿ. ನನ್ನ ಕಣ್ಣೆದುರಿನ ನಿಮ್ಮ ದುಷ್ಕೃತ್ಯಗಳನ್ನು ತೊಲಗಿಸಿರಿ". ಹೊಸ ಒಡಂಬಡಿಕೆಯ ಕಾಲದಲ್ಲಿ ಯೆಹೂದಿ ಮತಕ್ಕೆ ಸೇರಿದವರೆಲ್ಲರೂ ದೀಕ್ಷಾಸ್ನಾನ ಮಾಡಿಸಿಕೊಂಡರು. ಹಾಗಾಗಿ ಸ್ನಾನಿಕನಾದ ಯೋಹಾನನ ಸೇವೆಯ ಕುರಿತಾದ ಆಶ್ಚರ್ಯಕರ ಸಂಗತಿ ಏನಂದರೆ ಯೆಹೂದ್ಯರನ್ನೆ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಆಹ್ವಾನಿಸಿದ್ದಾಗಿತ್ತು. ಈ ರೀತಿ ಮಾಡುವುದರ ಮೂಲಕ ಅವರು ಕಾಯುತ್ತಿರುವ ಮೆಸ್ಸೀಯನನ್ನು ಸ್ವೀಕರಿಸಲು ಅವರ ಧಾರ್ಮಿಕತೆಯು ಅವರನ್ನು ಸಿದ್ಧಗೊಳಿಸುವುದಿಲ್ಲವೆಂಬುದನ್ನು ಆತನು ಅವರಿಗೆ ತೋರಿಸಿದನು. ದೇವರೆಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳುವುದಕ್ಕಿಂತ ಮೊದಲು ಅವರಿಗೆ ಪಾಶ್ಚತ್ತಾಪದ ಅವಶ್ಯಕತೆ ಇತ್ತು.

*ಎಲ್ಲವು … ಎಲ್ಲರೂ* (ವ. 5): ಈ ಎರಡು ಪದಗಳನ್ನು "ಅತಿಶಯೋಕ್ತಿ" ಎಂಬುದಾಗಿ ಕರೆಯುವ ಶುದ್ಧಾಲಂಕಾರವಾಗಿ ಅರ್ಥೈಸಿಕೊಳ್ಳಬೇಕಾಗಿದೆ. ಹಾಗಾಗಿ "ಯೂದಾಯ ಸೀಮೆಯೆಲ್ಲವೂ" ಎಂದರೆ "ಯೂದಾಯದ ಎಲ್ಲಾ ಕಡೆಯಿಂದ" ಮತ್ತು "ಯೆರೂಸಲೇಮಿನವರೆಲ್ಲರೂ" ಎಂದರೆ "ಯೆರೂಸಲೇಮಿನಿಂದ ಅನೇಕ ಜನರು" ಎಂದರ್ಥವಾಗಿದೆ.

*ಒಂಟೆಯ ಕೂದಲಿನ ಹೊದಿಕೆಯನ್ನು ಹೊದ್ದುಕೊಂಡು, ಸೊಂಟಕ್ಕೆ ತೊಗಲಿನ ನಡುಕಟ್ಟನ್ನು ಕಟ್ಟಿಕೊಂಡಿದ್ದನು* (ವ. 6): ಯೋಹಾನನ ಉಡುಪು ಯೆಹೂದ್ಯರಿಗೆ ಹಳೇ ಒಡಂಬಡಿಕೆಯ ಪ್ರವಾದಿಯಾದ ಎಲೀಯನನ್ನು ನೆನಪಿಸಿರಬೇಕು (2 ಅರಸು 1:8).

*ಆ ದಿನಗಳಲ್ಲಿ* (ವ. 9): ಇದು ಯೇಸುಕ್ರಿಸ್ತನು ಸುಮಾರು 30 ವರ್ಷ ಪ್ರಾಯದವನಾಗಿದ್ದಾಗ ಅಂದರೆ ಸುಮಾರು ಕ್ರಿ.ಶ. 26 ರ ಆಸುಪಾಸಾಗಿದ್ದಿರಬಹುದು (ಲೂಕ 3:23 ನ್ನು ಹೋಲಿಸಿ). ಯೇಸುಕ್ರಿಸ್ತನ ಜೀವನದ ಕಾಲರೇಖೆಗಾಗಿ ***ಯೇಸು ಕ್ರಿಸ್ತನ ಜೀವನ – ನಾಲ್ಕು ವಂಶಾವಳಿಗಳನ್ನು*** ನೋಡಿರಿ.

*ಗಲಿಲಾಯದ ನಜರೇತ* (ವ. 9): ಇದು ಯೇಸುಕ್ರಿಸ್ತನ ಸ್ವಂತಊರಾಗಿತ್ತು ಇಲ್ಲಿಯೇ ಆತನು ತನ್ನ ಪ್ರಾರಂಭಿಕ ಜೀವನವನ್ನು ಹೆಚ್ಚಾಗಿ ಕಳೆದನು.

*ಕೂಡಲೇ* (ವ. 12): ಈ ಗ್ರೀಕ್ ಪದವು ಮಾರ್ಕನ ಬರವಣಿಗೆಯ ರೀತಿಯನ್ನು ವ್ಯಕ್ತಪಡಿಸುತ್ತದೆ (ಮಾರ್ಕನ ಸುವಾರ್ತೆಯಲ್ಲಿ ಇದನ್ನು 40 ಕ್ಕಿಂತ ಹೆಚ್ಚು ಬಾರಿ ಬಳಸಲಾಗಿದೆ) ಇದು ಪತ್ಯಕ್ಕೆ ವೇಗ ಮತ್ತು ಶೀಘ್ರತೆಯ ಜ್ಞಾನವನ್ನು ಕೊಡುತ್ತದೆ ಮತ್ತು ಒಂದು ಹೊಸ ಘಟನೆಯನ್ನು ಅಥವಾ ಒಂದು ಘಟನೆಯ ಒಳಗೆ ಒಂದು ಆಶ್ಚರ್ಯಕರವಾದ ತಿರುವನ್ನು ಪರಿಚಯಿಸುತ್ತದೆ.

*ಶೋಧಿಸಲ್ಪಡುವವನಾದನು* (ವ. 13): ಶೋಧನೆಯು ಪೂರ್ತಿ 40 ದಿನಗಳವರೆಗೆ ಸಾಗಿತೆಂಬುದಾಗಿ ಗ್ರೀಕ್ ವ್ಯಾಕರಣವು ಸೂಚಿಸುತ್ತದೆ. ಶೋಧಿಸಲ್ಪಡುವಿಕೆಗಾಗಿನ ಗ್ರೀಕ್ ಪದವು "ಪರೀಕ್ಷಿಸು" ಅಥವಾ "ಶೋಧಿಸು" ಎಂಬುದಾಗಿ ಸಹ ಅರ್ಥಕೊಡುತ್ತದೆ.

*ಸೈತಾನ* (ವ. 13): ಸೈತಾನನು ತಳ್ಳಲ್ಪಟ್ಟ ಆತ್ಮಗಳಲ್ಲೇ ಮುಖ್ಯವಾದವನಾಗಿದ್ದು (ದೂತರಲ್ಲೇ) ದೇವರಿಗೂ ಮತ್ತು ಮನುಷ್ಯನಿಗೂ ವಿರೋಧಿಯಾಗಿದ್ದಾನೆ. ಇದು ಇಬ್ರಿಯ ಹೆಸರಾಗಿದ್ದು (ಗ್ರೀಕಿನಲ್ಲಿ ಇದನ್ನು ಬಳಸಾಗಿದೆ) "ಎದುರಾಳಿ, ವಿರೋಧಿ" ಎಂಬುದಾಗಿ ಅರ್ಥೈಸುತ್ತದೆ. ಹೊಸ ಒಡಂಬಡಿಕೆಯಲ್ಲಿ ಸೈತಾನನಿಗೆ ಬೇರೆ ಹೆಸರುಗಳನ್ನು ಬಳಸಲಾಗಿದೆ, ಉದಾಹರಣೆಗೆ ದೆವ್ವ, ದುಷ್ಟನು (ಇದರರ್ಥ ಚಾಡಿಕೋರ) ಮತ್ತು "ಕೆಡುಕನು".

*ಯೋಹಾನನು ಸೆರೆಗೆ ಬಿದ್ದ ಮೇಲೆ* (ವ. 14): ಯೆಹೂದಿ ಇತಿಹಾಸಕಾರನಾದ ಜೋಸೆಫಸ್ಸನ ಪ್ರಕಾರ ಯೋಹಾನನು ಅರಸನಾದ ಹೆರೋದ ಅಂತಿಪನಿಂದ ಮೃತ ಸಮುದ್ರದ ಪೂರ್ವಕ್ಕಿರುವ ಮಕೀರಸ್ಸಿನ ಜೈಲಿನಲ್ಲಿ ಇಡಲ್ಪಟ್ಟಿದ್ದನು.

*ಕಾಲ ಪರಿಪೂರ್ಣವಾಯಿತು* (ವ. 15): ಎಲ್ಲಾ ಶತಮಾನಗಳ ಸಿದ್ಧತೆ ಮತ್ತು ಪ್ರವಾದನೆಗಳು ತಮ್ಮ ನೆರವೇರಿಕೆಯ ಮಟ್ಟವನ್ನು ಮುಟ್ಟಿದವು. ದೇವರು ಇತಿಹಾಸದಲ್ಲಿ ಸಂಪೂರ್ಣವಾಗಿ ಒಂದು ಹೊಸದಾದ ರೀತಿಯಲ್ಲಿ ಕಾರ್ಯ ಮಾಡಲು ಸಮಯವು ಬಂದೊದಗಿದೆ. ಯೇಸುವಿನ ಸೇವೆಯು ಅದರ ನಿತ್ಯತ್ವದ ಪ್ರಾಮುಖ್ಯತೆಯೊಂದಿಗೆ ಪ್ರಾರಂಭವಾಗಿದೆ.

*ದೇವರ ರಾಜ್ಯ* (ವ. 15): " ರಾಜ್ಯ" ಎಂಬ ಪದವು ಸತ್ಯವೇದದಲ್ಲಿ ವಿಭಿನ್ನವಾದ ಅರ್ಥಗಳನ್ನು ಕೊಡುತ್ತದೆ. ಇದು ಒಬ್ಬ ರಾಜನು ಆಳುವ ದೇಶವನ್ನು ಸೂಚಿಸಬಹುದು. ಆದರೆ ಇದು ಒಬ್ಬ ರಾಜನು ಅಧಿಕಾರ ಹೊಂದಿರುವ ಒಂದು ಜನರನ್ನು ಸೂಚಿಸಬಹುದು. ಅಂತಿಮವಾಗಿ ಇದು ನೈಜ ಆಳ್ವಿಕೆ ಅಥವಾ ಆಡಳಿತವನ್ನು ಸೂಚಿಸಬಹುದು. ಹೊಸ ಒಡಂಬಡಿಕೆಯು ದೇವರ ರಾಜ್ಯವನ್ನು ದೇವರ ಆಳ್ವಿಕೆ ಮತ್ತು ಅಧಿಕಾರವನ್ನು ಅನುಭವಿಸುವ ಕ್ಷೇತ್ರವೆಂಬುದಾಗಿ ವರ್ಣಿಸುತ್ತದೆ. ಈ ಕ್ಷೇತ್ರವು ಕೆಲವೊಮ್ಮೆ ಭವಿಷ್ಯವೆಂಬುದಾಗಿ ಚಿತ್ರಿಸಲ್ಪಟ್ಟಿದೆ. ಸ್ನಾನಿಕನಾದ ಯೋಹಾನನು ಇದರ ಹೊಸ್ತಿಲಲ್ಲಿ ನಿಂತುಕೊಂಡು ದೇವರ ರಾಜ್ಯದ ಅರಸನಾಗಿರುವ ಯೇಸುವನ್ನು ಸೂಚಿಸುತ್ತಾನೆ. ಹೀಗೆ ಯೇಸುವಿನ ಆಗಮನದೊಂದಿಗೆ, ಈ ಒಂದು ರಾಜ್ಯವು ಒಂದು ಹೊಸದಾದ ರೀತಿಯಲ್ಲಿ ವರ್ತಮಾನವಾಗಿ ಪರಣಮಿಸಿದೆ. ಆದರೆ ಅದೇ ವೇಳೆ ಇದು ಒಂದು ಭವಿಷ್ಯದ ರಾಜ್ಯವಾಗಿದ್ದು ಯೇಸುಕ್ರಿಸ್ತನ ತಿರುಗಿ ಬರೋಣದ ಮೂಲಕ ಉದ್ಘಾಟನೆಗೊಳ್ಳಲಿದೆ.

*ಸಮೀಪಿಸಿತು* (ವ. 15): ಯೇಸುಕ್ರಿಸ್ತನ ಆಗಮನವು ದೇವರ ರಾಜ್ಯವನ್ನು ಜನರ ಸಮೀಪಕ್ಕೆ ತಂದಿತು, ಮತ್ತು ದೇವರ ರಾಜ್ಯವು ಅದರ ರಾಜನಾಗಿರುವ ಯೇಸುಕ್ರಿಸ್ತನಲ್ಲಿದೆ. ಜನರ ಹೃದಯ ಮತ್ತು ಜೀವಿತಗಳ ಮೇಲಿನ ದೇವರ ಆಳ್ವಿಕೆಯು ಯೇಸುಕ್ರಿಸ್ತನೊಂದಿಗೆ ಈಗ ಸ್ಥಾಪಿಸಲ್ಪಡುತ್ತಿದೆ.

*ದೇವರ ಕಡೆಗೆ ತಿರುಗಿಕೊಂಡು, ಸುವಾರ್ತೆಯನ್ನು ನಂಬಿರಿ* (ವ. 15): ಯೇಸುವಿನ ಎರಡು ಪ್ರಚೋಧನೆಗಳು ದೇವರ ರಾಜ್ಯದ ಬರೋಣವನ್ನು ಅನುಭವಿಸಲು ನಾವು ಏನು ಮಾಡಬೇಕೆಂಬುದನ್ನು ತೋರಿಸುತ್ತವೆ. ಮೊದಲನೆಯದಾಗಿ ನಾವು "ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು" (ಗ್ರೀಕ್ ಪದದ ಅರ್ಥ "ದಿಕ್ಕನ್ನು ಬದಲಿಸುವುದು, ಒಬ್ಬರ ಮನಸ್ಸನ್ನು ಬದಲಿಸುವುದು" ಎಂಬುದಾಗಿದೆ) ಯೇಸುವು ಬಯಸುತ್ತಾನೆ. ಇದರರ್ಥ "ಹೃದಯ ಮತ್ತು ಮನಸ್ಸನ್ನು" ಬದಲಿಸಿಕೊಳ್ಳಬೇಕೆಂಬುದಾಗಿದೆ; ಅನಂತರ ಯೇಸುವು ಸುವಾರ್ತೆಯನ್ನು ನಂಬಬೇಕೆಂದು ಆಶಿಸುತ್ತಾನೆ. ಇದು ಬರೀ ನಂಬಿಕೆಯ ವಿಷಯವಲ್ಲ, ಬದಲಾಗಿ ಸಮರ್ಪಣೆ ಸಹ ಆಗಿದೆ. ಹಾಗಾಗಿ ಯೇಸುವಿನ ಮೊದಲ ಶಿಷ್ಯರು ಮಾಡಿದಂತೆ ನಾವು ಪೂರ್ತಿಯಾಗಿ ತಿರುಗಿಕೊಂಡು ಆತನನ್ನು ಹಿಂಬಾಲಿಸಬೇಕಿದೆ.

*ಗಲಿಲಾಯ ಸಮುದ್ರ* (ವ. 16): ಈ ಸುಂದರವಾದ ಸರೋವರವು ಗೆನೆಸರೇತ್ ಸರೋವರ ಮತ್ತು ತಿಬೇರಿಯ ಸಮುದ್ರವೆಂದು ಸಹ ಕರೆಯಲ್ಪಡುತ್ತದೆ. ಇದು ಸಮುದ್ರ ಮಟ್ಟದಿಂದ ಸುಮಾರು 700 ಅಡಿ ಕೆಳಭಾಗದಲ್ಲಿದ್ದು, ಸುಮಾರು 20 ಕಿ.ಮೀ. ಉದ್ದ ಮತ್ತು 10 ಕಿ.ಮೀ.ಅಗಲವಾಗಿದೆ.

*ಸೀಮೋನ … ಅಂದ್ರೆಯ … ಯಾಕೋಬ … ಯೋಹಾನ* (ವ. 16,19): ***ಯೇಸುವಿನ ಹನ್ನೆರಡು ಶಿಷ್ಯರು*** ಪಟ್ಟಿಯನ್ನು ನೋಡಿರಿ.

*ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ* (ವ. 17): ಇದು "ಸುವಾರ್ತಿಕರಿಗಾಗಿನ" ರೂಪಾಲಂಕಾರವಾಗಿದೆ (ಹೋಲಿಸಿ "ನೀವು ಮನುಷ್ಯರನ್ನು ಹಿಡಿಯುವಿರಿ" ಲೂಕ 5:10).

*ಕಪೆರ್ನೌಮ್* (ವ. 21): ಈ ಒಂದು ಪಟ್ಟಣವು ಗಲಿಲಾಯ ಸಮುದ್ರದ ಮೇಲೆ ನೆಲೆಗೊಂಡಿದೆ, ಇದರ ಬಗ್ಗೆ ಹಳೇ ಒಡಂಬಡಿಕೆಯಲ್ಲಿ ಎಲ್ಲೂ ಪ್ರಸ್ತಾಪವಿಲ್ಲ, ಆದರೆ ಇದನ್ನು ಆತನ "ಪ್ರಧಾನ ಕಚೇರಿ" ಮಾಡಿದ ನಿಮಿತ್ತ ಇದೊಂದು ಅತಿ ಪ್ರಾಮುಖ್ಯ ಸ್ಥಳವಾಗಿತ್ತೆಂಬುದಾಗಿ ತೋರುತ್ತದೆ.

*ಸಬ್ಬತ್* (ವ. 21): ಯೆಹೂದಿ ಧರ್ಮದಲ್ಲಿ ಸೃಷ್ಟಿಕಾರ್ಯದ ನಂತರ ದೇವರು ವಿಶ್ರಾಂತಿ ಪಡೆದ ದಿನ, ಅಂದರೆ ವಾರದ ಏಳನೇ ದಿನವಾಗಿದೆ (ಆದಿಕಾಂಡ 2:2-3). ಹಾಗೆ ಈ ದಿನವು ವಿಶ್ರಾಂತಿ ಮತ್ತು ಆರಾಧನೆಯ ದಿನವಾಗಿದೆ.

*ಸಭಾಮಂದಿರ* (ವ. 21): ಇಲ್ಲಿಯೇ ಯೆಹೂದ್ಯರು ಗ್ರಂಥಗಳನ್ನು ಅಧ್ಯಯನ ಮಾಡುತ್ತಾ, ದೇವರನ್ನು ಆರಾಧಿಸುತ್ತಿದ್ದರು. ಸುಮಾರು ಹತ್ತು ಮದುವೆಯಾದ ಯೆಹೂದ ಪುರುಷರಿರುವ ಒಂದು ಪಟ್ಟಣದಲ್ಲಿ ಸಭಾಮಂದಿರವೊಂದನ್ನು ಕಟ್ಟಬಹುದಾಗಿತ್ತು. ಸಬ್ಬತ್ ಕೂಟದಲ್ಲಿ ಬೋಧನೆ ಮಾಡುವುದಕ್ಕಾಗಿ ಸಭಾಮಂದಿರದ ನಾಯಕರುಗಳು ಅತಿಥಿ ಬೋಧಕರನ್ನು ಆಹ್ವಾನಿಸಬಹುದಾಗಿತ್ತು.

*ಅತ್ಯಾಶ್ಚರ್ಯಪಟ್ಟರು* (ವ. 22): ಜನರ ಅಚ್ಚರಿಯು ಮಾರ್ಕನ ಸುವಾರ್ತೆಯಲ್ಲಿನ ಒಂದು ಪ್ರಾಮುಖ್ಯವಾದ ವಿಷಯವಾಗಿದೆ.

*ಶಾಸ್ತ್ರಿಗಳು* (ವ. 22): ಯೆಹೂದಿ ಪಂಡಿತರಾದ ಇವರು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರಗತಿ, ಬೋಧನೆ ಮತ್ತುಅನ್ವಯಿಸುವಿಕೆಯಲ್ಲಿ ವೃತ್ತಿಪರವಾಗಿ ತರಬೇತಿ ಹೊಂದಿದವರಾಗಿದ್ದರು.

*ದೇವರು ಪ್ರತಿಷ್ಠಿಸಿದವನೇ* (ವ. 24): ಈ ಹೆಸರು ಯೇಸುವಿನ ದೈವಿಕ ಮೂಲವನ್ನು ಸೂಚಿಸುತ್ತದೆ.

*ಸಂಜೆ* (ವ. 32): ರೋಗಿಗಳನ್ನುಯೇಸುವಿನ ಬಳಿಗೆ ಕರೆತರುವುದಕ್ಕಾಗಿ ಜನರು ಸಬ್ಬತ್ ಮುಗಿಯುವವರೆಗೂ ಕಾದರು.

*ತಾನು ಇಂಥವನೆಂದು ಅವುಗಳಿಗೆ ತಿಳಿದಿದ್ದರಿಂದ ಆತನು ಅವುಗಳನ್ನು ಮಾತಾಡಗೊಡಿಸಲಿಲ್ಲ* (ವ. 34): ಮಾರ್ಕನ ಸುವಾರ್ತೆಯ ಒಂದು ಲಕ್ಷಣವೇನೆಂದರೆ "ಮೆಸ್ಸೀಯನ ರಹಸ್ಯ" ವಾಗಿದೆ. ಅನೇಕ ಬಾರಿ ಯೇಸುವು ತನ್ನ ಶಿಷ್ಯರು ಮತ್ತು ಇತರರಿಗೆ ತಾನು ಮಾಡಿದ ಸಂಗತಿಗಳನ್ನು ಯಾರಿಗೂ ಹೇಳಬೇಡಿರೆಂದನು. ಇದಕ್ಕೆ ಕಾರಣವೇನೆಂದರೆ ಯೇಸುವಿನ ಪೂರ್ಣವಾದ ಗುರುತು ಶಿಲುಬೆಯಲ್ಲಿ ಮಾತ್ರ ಪ್ರಕಟವಾಗುವುದೆಂಬುದನ್ನು ತನ್ನ ಓದುಗರು ತಿಳಿದುಕೊಳ್ಳಬೇಕೆಂದು ಮಾರ್ಕನು ಬಯಸುತ್ತಾನೆ. ಹಾಗೆಯೇ ಯೇಸುವು ಶಿಲುಬೆ ಮೇಲೆ ಸತ್ತದ್ದನ್ನು ಕಂಡು ರೋಮನ್ ಶತಾಧಿಪತಿಯು "ನಿಜವಾಗಿ ಈ ಮನುಷ್ಯನು ದೇವಕುಮಾರನಾಗಿದ್ದನು" (15:39) ಎಂಬುದಾಗಿ ಉದ್ಗರಿಸುತ್ತಾನೆ.

*ಗಲಿಲಾಯದಲ್ಲೆಲ್ಲಾ* (ವ. 39): ಗಲಿಲಾಯದಲ್ಲಿ ಯೇಸುವು ಮಾಡಿದ ಬೋಧನೆ ಮತ್ತು ಅನೇಕ ಸ್ವಸ್ಥತಾ ಪ್ರಮಾಣಗಳ ಕುರಿತಾದದನ್ನು ಮೊದಲ ಮೂರೂ ಸುವಾರ್ತೆಗಳಲ್ಲಿ ಕಂಡುಬರುತ್ತದೆ (ಹೋಲಿಸಿ ಲೂಕ 8:1, ಮಾರ್ಕ 6:6, ಮತ್ತಾಯ 11:1).

*ಕುಷ್ಠ ... ನನ್ನನ್ನು ಶುದ್ಧಮಾಡಬಲ್ಲೆ* (ವ. 40): ಇದು ವಿಧವಿಧವಾದ ಚರ್ಮರೋಗಗಳಿಗಾಗಿ ಬಳಸಲಾದ ಗ್ರೀಕ್ ಪದವಾಗಿದೆ. ಇದರಿಂದ ಬಾಧೆಪಡುತ್ತಿರುವ ಜನರನ್ನು ಅಶುದ್ಧರೆಂಬುದಾಗಿ ಪರಿಗಣಿಸಲಾಗುತ್ತಿತ್ತು ಮತ್ತು ಅವರು ಉಳಿದವರಿಂದ ಪ್ರತ್ಯೇಕವಾಗಿರಬೇಕಿತ್ತು (ಯಾಜಕಕಾಂಡ 13-14). ಯೇಸುವು ಆ ಮನುಷ್ಯನನ್ನು ಮುಟ್ಟಿದಾಗ (ವ. 41) ಸಂಪ್ರದಾಯಕ್ಕನುಸಾರವಾಗಿ ಆತನೂ ಅಶುದ್ಧನಾದನು.

*ಯಾಜಕನಿಗೆ ನಿನ್ನ ಮೈ ತೋರಿಸಿ* (ವ. 44): ಯಾಜಕನು ಆ ವ್ಯಕ್ತಿಯ ಮೈಯನ್ನು ಪರೀಕ್ಷಿಸಿ ಅನಂತರ ಆತನನ್ನು ಶುದ್ಧನೆಂಬುದಾಗಿ ಘೋಷಿಸುತ್ತಿದ್ದನು.

*ಅದು ಜನರಿಗೆ ಸಾಕ್ಷಿಯಾಗಲಿ* (ವ. 44): ಈ ಮನುಷ್ಯನ ಯಜ್ಞವು ತಾನು ನಿಜವಾಗಲೂ ಶುದ್ಧನಾಗಿದ್ದೇನೆಂಬುದನ್ನು ಯಾಜಕ ಮತ್ತು ಜನರಿಗೆ ತೋರಿಸುತ್ತಿತ್ತು, ಆದರೆ ಯೇಸು ಧರ್ಮಶಾಸ್ತ್ರವನ್ನು ಸಹ ಗೌರವಿಸಿದನು. ದೇವರು ಮಾತ್ರ ಕುಷ್ಠವನ್ನು ಗುಣಪಡಿಸಬಲ್ಲನೆಂಬುದಾಗಿ ಯೆಹೂದ್ಯರು ನಂಬಿದ್ದರಿಂದ, ಸ್ವಸ್ಥತೆಯ ಅದ್ಭುತವು ಯೇಸುವಿನ ದೈವಿಕ ಶಕ್ತಿಗೆ ಸಾಕ್ಷಿಯಾಗಿತ್ತು.

**ಪ್ರಶ್ನೆಗಳು**

1. ತನ್ನ ಪುಸ್ತಕವನ್ನು ಮಾರ್ಕನು ಹೇಗೆ ಪರಿಚಯಿಸುತ್ತಾನೆ (ವ. 1)?
2. ಸ್ನಾನಿಕನಾದ ಯೋಹಾನನ ಬಳಿ ಕೇಳಲು ಯಾರು ಬಂದರು (ವ. 5)?
3. ಸ್ನಾನಿಕನಾದ ಯೋಹಾನನ ಬಳಿ ಬಂದವರು ಏನು ಮಾಡಿದರು (ವ. 5)?
4. ಸ್ನಾನಿಕನಾದ ಯೋಹಾನನು ಯೇಸುವನ್ನು ಹೇಗೆ ವರ್ಣಿಸುತ್ತಾನೆ (ವ. 7-8)?
5. ಯೇಸುವು ಎಲ್ಲಿ ದೀಕ್ಷಾಸ್ನಾನ ಹೊಂದಿದನು (ವ. 9)?
6. ಯೇಸುವಿನ ದೀಕ್ಷಾಸ್ನಾನದ ವೇಳೆ ತ್ರೈಯೇಕತ್ವದ ಎಲ್ಲಾ ಮೂರು ವ್ಯಕ್ತಿಗಳು ಹೇಗೆ ಹಾಜರಿರುತ್ತಾರೆ (ವ. 9-11)?
7. 40 ದಿನಗಳ ಕಾಲ ಅಡವಿಯಲ್ಲಿ ಯೇಸುವು ಅನುಭವಿಸಿದ್ದೇನು (ವ. 13)?
8. ಯೇಸುವು ಸುವಾರ್ತೆಯನ್ನು ಎಲ್ಲಿ ಸಾರುತ್ತಾನೆ (ವ. 14)? ನಕ್ಷೆಯಲ್ಲಿ ಆ ಸ್ಥಳಗಳನ್ನು ಕಂಡುಹಿಡಿಯಿರಿ.
9. ಯೇಸುವು ತನ್ನ ಹಿಂಬಾಲಕರಾಗಲು ಕರೆದ ಆ ನಾಲ್ಕು ಜನರ ಉದ್ಯೋಗವೇನಾಗಿತ್ತು (ವ. 16-20)?
10. ***ಯೇಸುವಿನ ಕಾಲದಲ್ಲಿನ ಗಲಿಲಾಯದ ನಕ್ಷೆಯಲ್ಲಿ***, ಗಲಿಲಾಯ ಸಮುದ್ರ, ಕಪೆರ್ನೌಮ್ ಮತ್ತು ನಜರೇತನ್ನು ಕಂಡುಹಿಡಿಯಿರಿ.
11. ಯಾಕೆ ಕಪೆರ್ನೌಮಿನಲ್ಲಿನ ಜನರು ಯೇಸುವಿನ ಬೋಧನೆಗೆ ಅತ್ಯಾಶ್ಚರ್ಯಪಟ್ಟರು (ವ. 21-22,27)?
12. ಯೇಸುವಿನ ಬಗ್ಗೆ ದೆವ್ವಗಳು ಏನೆಂದು ತಿಳಿದಿದ್ದವು (ವ. 23-26)?
13. ಸೀಮೋನನ ಅತ್ತೆಗೆ ಏನಾಗಿತ್ತು (ವ. 29-31)?
14. ಸಂಜೆ ವೇಳೆಯಲ್ಲಿ ಯೇಸು ಏನು ಮಾಡಿದನು (ವ. 32-34)?
15. ಯೇಸುವು ಮರುದಿನ ಮುಂಜಾನೆ ಯಾಕೆ ಅಡವಿಗೆ ಹೋದನು (ವ. 35)?
16. ಗಲಿಲಾಯದಲ್ಲೆಲ್ಲಾ ಹೋಗಿ ಯೇಸು ಏನನ್ನು ಮಾಡಿದನು (ವ. 38-39)?
17. ಕುಷ್ಠರೋಗಿಯು ತನ್ನ ಬಳಿ ಸ್ವಸ್ಥತೆಗಾಗಿ ಬಂದಾಗ ಯೇಸುವಿಗೆ ಏನು ಅನಿಸಿತು (ವ. 40-42)?
18. ಯೇಸುವು ಬಹಿರಂಗವಾಗಿ ಇನ್ನು ಯಾವ ಊರೊಳಕ್ಕೂ ಯಾಕೆ ಹೋಗಲಾರದೆ ಇದ್ದನು (ವ. 43-45)?

**ಆಲೋಚಿಸಿರಿ ಮತ್ತುಚರ್ಚಿಸಿರಿ**

1. ಸ್ನಾನಿಕನಾದ ಯೋಹಾನ ಮತ್ತು ಆತನ ಸೇವೆಯನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ (ವ. 2-8).
2. ತನ್ನ ಮತ್ತು ಯೇಸುವಿನ ದೀಕ್ಷಾಸ್ನಾನ ನಡುವಿನ ಸ್ನಾನಿಕನಾದ ಯೋಹಾನನ ಹೋಲಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 7-8)?
3. ಮೆಸ್ಸೀಯನೂ, ದೇವಕುಮಾರನೂ ಆದ ಯೇಸು ಯಾಕೆ ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದಕ್ಕಾಗಿ ಯೊರ್ದಾಯಕ್ಕೆ ಹೋದನೆಂಬುದಾಗಿ ನೀವು ಯೋಚಿಸುವಿರಿ (ವ. 2-11)?
4. ಯೇಸುವಿನ ದೀಕ್ಷಾಸ್ನಾನದ ವೇಳೆ "ದೇವರಾತ್ಮನು ಆತನ ಮೇಲೆ ಇಳಿದು ಬಂದುದ್ದರ" ಪ್ರಾಮುಖ್ಯತೆಯೇನಿರಬಹುದು (ವ. 10-11)?
5. ಯೇಸುವು "ದೇವರ ಸುವಾರ್ತೆಯನ್ನು ಸಾರಿದನು" ಎಂಬುದಾಗಿ ಮಾರ್ಕನು ಹೇಳುವುದರ ಅರ್ಥವೇನುಂಬದಾಗಿ ನಿಮ್ಮ ಮಾತಿನಲ್ಲಿ ವಿವರಿಸಿರಿ (ವ. 14-15).
6. ಯೇಸು ಮತ್ತು ನಾಲ್ಕು ಬೆಸ್ತರ ವಿಷಯವಾಗಿನ ತನ್ನ ವಿವರದಲ್ಲಿ ಮಾರ್ಕನು ತಿಳಿಸುವ ಮುಖ್ಯ ಅಂಶವೇನೆಂಬುದಾಗಿ ನೀವು ಯೋಚಿಸುವಿರಿ (ವ. 16-20)?

7. ಕಪೆರ್ನೌಮಿನಲ್ಲಿನ ಸಭಾಮಂದಿರದ ಸೇವೆಯ ಅವಧಿಯಲ್ಲಿ ಮತ್ತು ನಂತರ ಯೇಸು ಮತ್ತು ಆತನ ಸೇವೆಯ ಬಗ್ಗೆ ಮಾರ್ಕನ ವಿವರಗಳಿಂದ ನಿಮ್ಮ ಅಭಿಪ್ರಾಯಗಳೇನು (ವ. 21-28)?
8. ಯಾಕೆ ಯೇಸುವು ದೆವ್ವಗಳಿಗೆ ಮಾತನಾಡಗೊಡಿಸಲಿಲ್ಲ (ವ. 32-34)? "ಮೆಸ್ಸೀಯನ ರಹಸ್ಯ" ಗಳನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
9. ಮಾರ್ಕನ ಲೆಕ್ಕಾಚಾರದಂತೆ ಯೇಸುವು ಮುಂಜಾನೆ ಮೊಬ್ಬಿರುವಾಗಲೇ ಪ್ರಾರ್ಥನೆ ಮಾಡಲು ಹೋಗುವಲ್ಲಿ ಯಾವ ಅಂತರ್ಗತ ಗೊಂದಲವನ್ನು ನಾವು ಕಾಣಬಹುದು (ವ. 35-39)?
10. ಯೇಸುವು ಕುಷ್ಠರೋಗಿಯನ್ನು ಮುಟ್ಟಿ ಗುಣಪಡಿಸಿದಾಗ ಯಾಕೆ ಆತನ ಶಿಷ್ಯರು ಗಾಬರಿಗೊಂಡರೆಂಬುದನ್ನು ವಿವರಿಸಿರಿ (ವ. 40-45)?
11. ಮಾರ್ಕನ ಸುವಾರ್ತೆಯ ಮೊದಲ ಅಧ್ಯಾಯವನ್ನು ಕೆಲವೇ ಮಾತುಗಳಲ್ಲಿ ಸಾರಾಂಶಗೊಳಿಸಿರಿ. ನಿಮ್ಮ ಪದಗಳನ್ನು ಉಪಯೋಗಿಸಿ ಮತ್ತು ನಿಮ್ಮ ಸತ್ಯವೇದವನ್ನು ನೋಡದಿರಲು ಪ್ರಯತ್ನಿಸಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ನೀವು ವಿಮರ್ಶಿಸಲು ಸಹಕಾರಿಯಾಗುವಂತಹ, ಕೆಲವು ವಿಷಯ(ವಸ್ತು)ಗಳನ್ನು ನಾವು ಮಾರ್ಕನ ಸುವಾರ್ತೆಯ ಮೊದಲ ಅಧ್ಯಾಯದಲ್ಲಿ ಕಾಣಬಹುದು. ಈ ವಿಷಯವಸ್ತುಗಳನ್ನು ನಾವು ಧ್ಯಾನಗಳಿಗಾಗಿ, ಸತ್ಯವೇದ ಅಧ್ಯಯನಗಳಿಗಾಗಿ ಮತ್ತು ಸಂದೇಶಗಳಿಗಾಗಿ ಸಹ ಉಪಯೋಗಿಸಬಹುದು. ಸತ್ಯವೇದದ ಪಠ್ಯ (ವಚನ ಭಾಗ) ಮತ್ತು ಈ ಅಧ್ಯಯನದ ವಿಭಿನ್ನ ನೀವು ವಿಮರ್ಶಿಸಲು ಸಹಕಾರಿಯಾಗುವಂತಹ, ಕೆಲವು ವಿಷಯ(ವಸ್ತು)ಗಳನ್ನು ನಾವು ಮಾರ್ಕನ ಸುವಾರ್ತೆಯ ಮೊದಲ ಭಾಗಗಳಲ್ಲಿ ಕಂಡುಬರುವ ಅಂಶಗಳ ಬೆಳಕಿನಡಿಯಲ್ಲಿ ಕೆಳಕಂಡ ಪ್ರಶ್ನೆಗಳನ್ನು ವಿಮರ್ಶಿಸಿರಿ (***ಪೀಠಿಕೆ, ಪ್ರಶ್ನೆಗಳಿಗೆ ಉತ್ತರ, ಆಲೋಚಿಸಿರಿ ಮತ್ತು ಚರ್ಚಿಸಿರಿ ಟಿಪ್ಪಣಿಗಳು***). ಅನಂತರ ಸತ್ಯವೇದ ಅಧ್ಯಯನಗಳಿಗಾಗಿ ರಚನೆ ಮಾಡಿರಿ (ಧ್ಯಾನ ಅಥವಾ ಪ್ರಸಂಗ). ಎಲ್ಲಾ ವಿಷಯಗಳ ಮೂಲಕ ನೀವು ಕಾರ್ಯಮಾಡಬೇಕಾಗಿಲ್ಲ. ನೀವು ಮಾಡುವ ರೂಪುರೇಖೆಗಳ ಸಂಖ್ಯೆಯನ್ನು ನೀವು ಮಿತಿಗೊಳಿಸಬಹುದು.

1. ಸ್ನಾನಿಕನಾದ ಯೋಹಾನ ಮತ್ತು ಯೇಸು: ಯೋಹಾನನು ಯಾರು? ಯೋಹಾನ ಮತ್ತು ಯೇಸುವಿನ ನಡುವಿನ ಸಂಬಂಧವೇನು? ಯೇಸುವಿನ ಕುರಿತಾದ ಯೋಹಾನನ ಸಾಕ್ಷಿಯೇನು? ನಿಮ್ಮ ಜೀವಿತ ಮತ್ತು ಸೇವೆಗಳಿಗಾಗಿ ಯೋಹಾನನಿಂದ ನಾವೇನನ್ನು ಕಲಿಯಬಹುದು?
2. ಯೇಸುವಿನ ಮೊದಲ ಶಿಷ್ಯರು: ಅವರು ಯಾರು? ಯೇಸುವಿನ ಕರೆಗೆ ಅವರು ಹೇಗೆ ಪ್ರತಿಕ್ರಯಿಸಿದರು? ಯೇಸುವಿನ ಈ ಪ್ರಾರಂಭಿಕ ಹಂತದಲ್ಲಿನ ಸೇವೆಯಲ್ಲಿ ಆತನ ಬೋಧನೆಯನ್ನು/ಪ್ರಸಂಗವನ್ನು ಅವರು ಹೇಗೆ ಅನುಭವಿಸಿರಬೇಕು ಮತ್ತು ಅರ್ಥೈಸಿಕೊಂಡಿರಬೇಕು? ದುರಾತ್ಮ ಮತ್ತು ರೋಗಗಳ ಮೇಲಿನ ಯೇಸುವಿನ ಶಕ್ತಿ ಪ್ರಯೋಗಕ್ಕೆ ಅವರು ಹೇಗೆ ಪ್ರತಿಕ್ರಯಿಸಿದರು? ಈ ಸಮಯದಲ್ಲಿನ ಯೇಸುವಿನ ಅತೀವವಾದ ಜನಪ್ರಿಯತೆಗೆ ಅವರು ಹೇಗೆ ಪ್ರತಿಕ್ರಯಿಸಿದ್ದಿರಬಹುದು? ಯೇಸುವಿನ ಪ್ರಾರಂಭಿಕ ಹಂತದ ಸೇವೆಯಲ್ಲಿ ಯೇಸುವಿನ ಗುರುತನ್ನು ಯಾವ ಮಟ್ಟಿಗೆ ಅವರು ತಿಳಿದುಕೊಂಡಿದ್ದರಬಹುದು? ಸ್ವತಃ ನಮ್ಮ ಜೀವಿತಗಳಿಗಾಗಿ ಮೊದಲ ಶಿಷ್ಯರಿಂದ ನಾವೇನನ್ನು ಕಲಿಯಬಹುದು?
3. ಗಲಿಲಾಯದಲ್ಲಿ ಯೇಸುವಿನ ಬಗ್ಗೆ ಕೇಳಿದ ಮತ್ತು ಆತನನ್ನು ನೋಡಿದ ಜನರು: ಅವರು ಯಾರಾಗಿದ್ದರು? ಯೇಸುವಿನ ಬಗ್ಗೆ ಅವರಿಗೆ ಹೇಗೆ ಗೊತ್ತಾಯಿತು? ಯೇಸುವಿನ ಬೋಧನೆಗೆ ಅವರು ಹೇಗೆ ಪ್ರತಿಕ್ರಯಿಸಿದರು? ಯೇಸುವಿನ ಸೇವೆಗೆ ಅವರು ಹೇಗೆ ಪ್ರತಿಕ್ರಯಿಸಿದರು (ದೆವ್ವ ಪೀಡಿತರನ್ನು ಓಡಿಸುವ ಮತ್ತು ರೋಗಿಗಳನ್ನು ಗುಣ ಪಡಿಸುವ ಸೇವೆ)? ಯಾವ ಮಟ್ಟಿಗೆ ಅವರು ಯೇಸುವಿನ ಗುರುತನ್ನು ತಿಳಿದುಕೊಂಡರು? ನಮ್ಮ ಬಗ್ಗೆ ಏನು? ಇಂದು ದೇವರ ರಾಜ್ಯದ ಬೆಳವಣಿಗೆಗೆ ನಾವು ಹೇಗೆ ಪ್ರತಿಕ್ರಯಿಸುತ್ತೇವೆ?

4. ಯೇಸುವಿನ ಗುರುತು: ಮಾರ್ಕನ ಸುವಾರ್ತೆಯ ಓದುಗರಾದ ನಾವು, ಮೊದಲ ಅಧ್ಯಾಯದಲ್ಲಿನ ಯೇಸುವಿನ ಗುರುತಿನ ಬಗ್ಗೆ ಏನನ್ನು ಕಲಿಯುತ್ತೇವೆ? ನಮ್ಮ ಬಗ್ಗೆ ಏನು? ಎಷ್ಟರ ಮಟ್ಟಿಗೆ ನಾವು ಯೇಸುವಿನ ಗುರುತನ್ನು ತಿಳಿದುಕೊಳ್ಳುತ್ತೇವೆ?

5. "ಮೆಸ್ಸೀಯನ ರಹಸ್ಯ": ಇದೇನಾಗಿದೆ? ಮಾರ್ಕನ ಸುವಾರ್ತೆಯ ಮೊದಲ ಮೊದಲ ಅಧ್ಯಾಯದಲ್ಲಿ ಇದನ್ನು ಎಷ್ಟು ಸಲ ನಾವು ಕಾಣುತ್ತೇವೆ?

6. ದೇವರ (ಪರಲೋಕ) ರಾಜ್ಯ: ಇದೇನಾಗಿದೆ? ಮಾರ್ಕನ ಸುವಾರ್ತೆಯ ಮೊದಲ ಅಧ್ಯಾಯದಲ್ಲಿ ದೇವರ ರಾಜ್ಯದ ಯಾವ ಅಂಶ(ಕ್ಷೇತ್ರ)ಗಳನ್ನು ನಾವು ಕಾಣಬಹುದು?

7. ಏಕಾಂತ ಸ್ಥಳಗಳಲ್ಲಿ ಮತ್ತು ಜನರ ಗುಂಪಿನ ಮಧ್ಯೆ ಯೇಸು: ಯಾಕೆ ಯೇಸುವು ಅಡವಿ ಸ್ಥಳಗಳಿಗೆ ಹೋದನು? ಆತನು ಯಾಕೆ ಅಲ್ಲೇ ಇರಲಿಲ್ಲ? ಏಕಾಂತ ಮತ್ತು ಬಹಿರಂಗ ಗಮನದ ನಡುವೆ ಯೇಸು ಅನುಭವಿಸಿದ ಸಮಸ್ಯೆಯೇನು? ಹೇಗೆ ಆತನು ಈ ಸಮಸ್ಯೆಯನ್ನು ಬಗೆಹರಿಸಿದನೆಂಬುದಾಗಿ ನೀವು ಯೋಚಿಸುವಿರಿ? ನಮ್ಮ ಜೀವಿತಗಳಿಗಾಗಿ ಈ ಕ್ಷೇತ್ರದಲ್ಲಿ ಯೇಸುವಿನಿಂದ ನಾವೇನನ್ನು ಕಲಿಯಬಹುದು?

## ಮಾರ್ಕ ಅಧ್ಯಾಯ 2

### ಪೀಠಿಕೆ ಮತ್ತು ಟಿಪ್ಪಣಿಗಳು

ಮಾರ್ಕ ಸುವಾರ್ತೆಯ ಎರಡನೇ ಅಧ್ಯಾಯದಲ್ಲಿ ನಾವು ನಾಲ್ಕು ಸಂಗತಿಗಳನ್ನು ಕಾಣುತ್ತೇವೆ:

1. ಯೇಸು ಒಬ್ಬ ಪಾರ್ಶ್ವವಾಯುರೋಗಿಯನ್ನು ಗುಣ ಪಡಿಸಿದ್ದು (ವ. 1-2)
2. ಯೇಸು ಸುಂಕಕ್ಕೆ ಕೂತಿದ್ದ ಒಬ್ಬ ಲೇವಿಯನ್ನು ಕರೆದದ್ದು (ವ. 13-17)
3. ಉಪವಾಸದ ಬಗ್ಗೆ ಯೇಸುವನ್ನು ಅಕ್ಷೇಪಿಸಿದ್ದು (ವ. 18-22)
4. ಯೇಸು ಸಬ್ಬತ್ತಿನ ಮೇಲಿನ ತನ್ನ ಒಡೆಯತ್ವವನ್ನು ತಿಳಿಸಿದ್ದು (ವ. 23-28)

*ಮೇಲ್ಚಾವಣಿಯನ್ನು ಬಿಚ್ಚಿ* (ವ. 4): ಪ್ಯಾಲೆಸ್ತೇನಿನಲ್ಲಿ ಒಂದು ರೀತಿಯ ಮನೆಯು ಚಪ್ಪಟೆಯಾದ ಮೇಲ್ಚಾವಣಿಯನ್ನು ಹೊಂದಿದ್ದು ಹೊರಗಿನ ಮೆಟ್ಟಿಲಿನಿಂದ ಅದನ್ನು ಮುಟ್ಟಬಹುದಾಗಿತ್ತು. ಆ ಮೇಲ್ಚಾವಣಿಯನ್ನು ಹೆಚ್ಚಾಗಿ ಜೇಡಿಮಣ್ಣಿನ ದಪ್ಪ ಪದರದಿಂದ ಮಾಡಲಾಗುತಿತ್ತು. ಮರದ ತೊಲೆಗಳಿಗೆ ಅಡ್ಡವಾಗಿರುವ ರೆಂಬೆಗಳ ಚಾಪೆಗಳಿಂದ ಇದಕ್ಕೆ ಆಧಾರ ಸಿಗುತ್ತಿತ್ತು.

*ಇದು ದೇವ ದೂಷಣೆ, ದೇವರೊಬ್ಬನೇ ಹೊರತು ಮತ್ತಾರು ಪಾಪಗಳನ್ನು ಕ್ಷಮಿಸಬಲ್ಲರು?* (ವ. 7): ಯೆಹೂದ್ಯ ದೈವಶಾಸ್ತ್ರದಲ್ಲಿ ಮೆಸ್ಸೀಯನು ಸಹ ಪಾಪಗಳನ್ನು ಕ್ಷಮಿಸುವಂತಿರಲಿಲ್ಲ. ಹಾಗಾಗಿ ತಾನು ಮನುಷ್ಯನ ಪಾಪಗಳನ್ನು ಕ್ಷಮಿಸಿದ್ದೇನೆಂದು ಯೇಸು ಹೇಳಿದಾಗ ನಿಜವೆಂದರೆ ಆತನು ದೇವರಾಗಿದ್ದೇನೆಂಬುದಾಗಿ ಹೇಳಿಕೊಂಡಾಯಿತು. ಇದು ಅವರ ದೃಷ್ಟಿಯಲ್ಲಿ ದೇವದೂಷಣೆಯಾಗಿತ್ತು.

*ಮನುಷ್ಯಕುಮಾರ* (ವ. 10): ಇದು ಯೇಸು ತನಗೆ ತಾನೇ ಹೇಳಿಕೊಂಡ ಒಂದು ಸಾಮಾನ್ಯವಾದ ಹೆಸರು. ಯೇಸು ಇದನ್ನು ಕ್ರಿಸ್ತನೊಂದಿಗೆ ಉಪಯೋಗಿಸಿದನು (ನೋಡಿ ಮಾರ್ಕ 8:29-31), ಆತನು ಇದನ್ನು ಮೆಸ್ಸೀಯನ ಹೆಸರೆಂಬುದಾಗಿ ಅರ್ಥೈಸಿಕೊಳ್ಳಬೇಕೆಂಬುದು ಆತನ ಅರ್ಥವಾಗಿತ್ತೆಂದು ಇದು ತೋರಿಸುತ್ತದೆ. ದಾನಿಯೇಲ 7:13-14 ರಲ್ಲಿ ಮನುಷ್ಯಕುಮಾರನು ಅಂತ್ಯಕಾಲದಲ್ಲಿ ದೇವರು "ಅಧಿಕಾರ, ಪ್ರಭಾವ ಮತ್ತು ಸಾರ್ವಭೌಮ ಶಕ್ತಿಯನ್ನು ಕೊಡುವ ಒಬ್ಬ ಪರಲೋಕದ ರೂಪವೆಂಬುದಾಗಿ ಚಿತ್ರಿಸಲಾಗಿದೆ.

*ಅಲ್ಫಾಯನ ಮಗನಾದ ಲೇವಿ* (ವ. 14): ಈತನನ್ನು ಮತ್ತಾಯನೆಂಬುದಾಗಿ ಸಹ ಕರೆಯಲಾಗುತ್ತದೆ. ಈತನ ನಿಜವಾದ ಹೆಸರು ಬಹುಶಃ ಲೇವಿ ಆಗಿತ್ತು. ***ಯೇಸುವಿನ ಹನ್ನೆರಡು ಅಪೊಸ್ತಲರು*** ಪಟ್ಟಿಯನ್ನು ನೋಡಿರಿ.

*ಸುಂಕಕ್ಕೆ ಕೂತಿದ್ದ* (ವ. 14): ಲೇವಿಯು ರೋಮನ್ನರ ಅಧೀನದಡಿಯಲ್ಲಿ ಗಲಿಲಾಯವನ್ನು ಆಳಿದ ಅರಸನಾದ ಹೆರೋದ ಅಂತಿಪನಿಗಾಗಿ ಒಬ್ಬ ಸುಂಕ ವಸೂಲಿಗಾರನಾಗಿದ್ದನು. ಸುಂಕದವರು ಯೆಹೂದ್ಯರಾಗಿದ್ದು, ಇವರನ್ನು "ಪಾಪಿಗಳು" ಎಂಬುದಾಗಿ ಪರಿಗಣಿಸಲಾಗುತ್ತಿತ್ತು. ಇವರು ಅನ್ಯಸರ್ಕಾರದ ಸಹಯೋಗದೊಂದಿಗೆ ಕೆಲಸ ಮಾಡುತ್ತಿದ್ದು, ಸಾಮಾನ್ಯವಾಗಿ ದುರಾಸೆಯುಳ್ಳವರೂ ಮತ್ತು ಅಪ್ರಾಮಾಣಿಕರೂ ಆಗಿರುತ್ತಿದ್ದರು. ಲೇವಿಯ ಸುಂಕ ಕಟ್ಟೆಯು ಬಹುಶಃ ಒಂದು ಟೋಲ್ (ಸುಂಕ) ಕಟ್ಟೆಯಾಗಿದ್ದು ಸಿರಿಯಾದ ದಮಸ್ಕದಿಂದ ಕಪೆರ್ನೌಮಿನ ಮೂಲಕ ಮೆಡಿಟರೇನಿಯನ್ ತೀರದೆಡೆಗೆ ಮತ್ತು ಅಲ್ಲಿನ ದಕ್ಷಿಣದಿಂದ ಐಗುಪ್ತಕ್ಕೆ ಹಾದು ಹೋಗುವ ಅಂತರಾಷ್ಟ್ರೀಯ ಹೆದ್ದಾರಿಯ ಮೇಲಿತ್ತು.

*ಪಾಪಿಗಳು* (ವ. 15): ಪಾಪಿಗಳು ದುಷ್ಟರೂ, ದೇವಭಕ್ತಿಯಿಲ್ಲದವರೂ ಮತ್ತು ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಜೀವಿಸದ ಜನರಾಗಿದ್ದರು. ಸುವಾರ್ತೆಯಲ್ಲಿ ಹೆಚ್ಚಾಗಿ ಸುಂಕ ವಸೂಲಿಗಾರರ ಜೊತೆಯಲ್ಲೇ ಅವರ ಬಗ್ಗೆಯೂ ತಿಳಿಸಲಾಗಿದೆ.

*ಸಂಗಡ ಊಟ ಮಾಡುವುದನ್ನೂ* (ವ. 15-16): ಒಬ್ಬ ವ್ಯಕ್ತಿಯೊಂದಿಗೆ ಊಟ ಮಾಡುವುದು ಸ್ನೇಹ ಅಥವಾ ಗೆಳೆತನದ ಒಂದು ಸಂಕೇತವಾಗಿತ್ತು. ಹಾಗಾಗಿ ಇಲ್ಲಿ ಯೇಸುವನ್ನು ಪಾಪಿಗಳ ಮತ್ತು ಸುಂಕದವರ ಗೆಳೆಯನೆಂಬುದಾಗಿ ದೂಷಿಸಿಲಾಗಿದೆ.

*ಫರಿಸಾಯರು* (ವ. 16): ಎಲ್ಲಾ ಶಾಸ್ತ್ರಿಗಳು ಫರಿಸಾಯರಾಗಿರಲಿಲ್ಲ. ಫರಿಸಾಯರು ಯೇಸುವಿನ ಕಾಲದಲ್ಲಿ ಯೆಹೂದ್ಯರ ಮಾದರಿ ವ್ಯಕ್ತಿಗಳು ಮತ್ತು ಆತ್ಮೀಕ ನಾಯಕರುಗಳಾಗಿದ್ದರು. ಅವರೆಲ್ಲರೂ ಮೋಶೆಯ ಧರ್ಮಶಾಸ್ತ್ರವನ್ನು ಅಭ್ಯಾಸಿಸುವುದರಲ್ಲಿ ಮತ್ತು ವಿವರಿಸುವುದರಲ್ಲಿ ಹೆಚ್ಚಿನ ಸಮಯ ಮತ್ತು ಬಲವನ್ನು ಕಳೆಯುತ್ತಿದ್ದರು. ಆದರೆ ಧರ್ಮಶಾಸ್ತ್ರವನ್ನು ವ್ಯಾಖ್ಯಾನಿಸುವುದಲ್ಲದೆ ಅದನ್ನವರು ಅಳವಡಿಸಿಕೊಂಡರು ಮತ್ತು ಹಬ್ಬಿಸಿದರು. ಅಲ್ಲದೆ ತಮ್ಮದೇ ಆದ ನಿಯಮಗಳನ್ನು ಸಹ ಸೇರಿಸಿದರು. ಅವರ ಉದ್ದೇಶವು "ಪರಿಶುದ್ಧ ಜೀವಿತವನ್ನು" ಜೀವಿಸಲು ಯೆಹೂದ್ಯರಿಗೆ ಸಹಾಯಿಸುವುದಾಗಿತ್ತು, ಆದರೆ ಪರಿಣಾಮವಾಗಿ ಅವರು ಕಾನೂನುವಾದಿಗಳಾದರು. ಸುವಾರ್ತೆಗಳಲ್ಲಿ ತಮ್ಮ ಕಪಟತನ, ಗರ್ವ ಮತ್ತು ಧಾರ್ಮಿಕ ನಿಯಮ ನಿಷ್ಠೆಗಳನ್ನು ದೂಷಿಸಿದ ಯೇಸುವನ್ನು ಅವರು ಬಲವಾಗಿ ವಿರೋಧಿಸುತ್ತಾರೆ.

*ನೀತಿವಂತರನ್ನಲ್ಲ, ಆದರೆ ಪಾಪಿಗಳನ್ನು* (ವ. 17): ಯೇಸುವಿನ ರಕ್ಷಣೆಯ ಅಗತ್ಯತೆ ತಮಗೆ ಉಂಟೆಂಬುದನ್ನು ಅರಿತುಕೊಳ್ಳದ ಸ್ವ-ನೀತಿವಂತರು (ಇಲ್ಲಿ ನೀತಿವಂತರೆಂದು ಕರೆಯಲಾಗಿದೆ) ಮತ್ತು ತಾವು ಪಾಪಿಗಳು ಮತ್ತು ಆತನ ರಕ್ಷಣೆಯ ಅವಶ್ಯಕತೆ ತಮಗುಂಟೆಂಬುದನ್ನು ತಿಳಿದುಕೊಂಡ "ಪಾಪಿಗಳ" ನಡುವಿನ ವ್ಯತ್ಯಾಸವಾಗಿದೆ.

*ಉಪವಾಸ* (ವ. 18): ದೋಷಪರಿಹಾರಕವಾದ ಮಹಾದಿನದಲ್ಲಿ ಮಾತ್ರ ಇಸ್ರಾಯೇಲ್ಯರು ಉಪವಾಸ ಮಾಡಬೇಕೆಂದು ಮೋಶೆಯ ಧರ್ಮಶಾಸ್ತ್ರವು ವಿಧಿಸಿತ್ತು (ನೋಡಿರಿ ಯಾಜಕಕಾಂಡ 16:29, 31 ಮತ್ತು ಅರಣ್ಯಕಾಂಡ 29:7). ಬಾಬೆಲಿಗೆ ಸೆರೆಯಾಗಿ ಹೋದ ಮೇಲೆ ವಾರ್ಷಿಕವಾಗಿ ಹೆಚ್ಚುವರಿ ಉಪವಾಸಗಳನ್ನು ಯೆಹೂದ್ಯರು ಪಾಲಿಸುತ್ತಿದ್ದರು (ನೋಡಿ ಜಕರ್ಯ 7:5, 8:19). ಹೊಸ ಒಡಂಬಡಿಕೆಯಲ್ಲಿ ಫರಿಸಾಯರೊಳಗಿನ ಕೆಲ ಕಟ್ಟಾವಾದಿಗಳ ಗುಂಪು ವಾರದಲ್ಲಿ ಎರಡು ದಿನ, ಸೋಮವಾರ ಮತ್ತು ಗುರುವಾರ ಉಪವಾಸವಿರುತ್ತಿದ್ದರು. ಉಪವಾಸವನ್ನು ಸಾಮಾನ್ಯವಾಗಿ ನಿಜವಾದ ಧರ್ಮನಿಷ್ಠೆಯ (ದೈವ ಭಕ್ತಿಯ) ಒಂದು ಸಂಕೇತ(ಗುರುತು)ವೆಂಬುದಾಗಿ ಪರಿಗಣಿಸಲಾಗುತ್ತಿತ್ತು.

*ಮದುವೆಯ ಜನರು ತಮ್ಮ ಸಂಗಡ ಮದಲಿಂಗನಿರುವಲ್ಲಿ ಉಪವಾಸ ಮಾಡುವುದುಂಟೇ?* (ವ. 19): ಒಂದು ಯೆಹೂದಿ ವಿವಾಹವು ಸಂತೋಷ ಮತ್ತು ಸಂಭ್ರಮದ ಸಂದರ್ಭವಾಗಿದ್ದು, ಹೆಚ್ಚಾಗಿ ಒಂದು ವಾರದವರೆಗೂ ನಡೆಯುತ್ತಿತ್ತು. ಆದರೆ ಉಪವಾಸವು ದುಃಖ ಮತ್ತು ಗೋಳಾಟದೊಂದಿಗೆ ಸಂಬಂಧವನ್ನಿಟ್ಟುಕೊಂಡಿರುವುದಾಗಿದೆ. ಹಾಗಾಗಿ ಮದುವೆಯ ವೇಳೆಯಲ್ಲಿ ಉಪವಾಸ ಮಾಡುವುದು ಸ್ವೀಕಾರ್ಹವಾಗಿರಲಿಲ್ಲ.

*ತೆನೆಗಳನ್ನು ಮುರುಕೊಂಡರು* (ವ. 23): ಇದಕ್ಕೆ ಧರ್ಮಶಾಸ್ತ್ರದಲ್ಲಿ ಅನುಮತಿಯಿತ್ತು (ನೋಡಿ ಧರ್ಮೋ. 23:25), ಹಾಗಾಗಿ ಶಿಷ್ಯರು ಕದ್ದುಕೊಂಡಿದ್ದಾರೆಂದು ದೂಷಿಸಲಾಗಲಿಲ್ಲ.

*ಸಬ್ಬತ್ ದಿನದಲ್ಲಿ ಮಾಡಬಾರದ* (ವ. 24): ಫರಿಸಾಯರಿಂದ ಪಾಲಿಸಲ್ಪಡುವ ಯೆಹೂದಿ ಸಂಸ್ಕೃತಿ (ಸಂಪ್ರದಾಯದ) ಪ್ರಕಾರ ಸಬ್ಬತ್ ದಿನದಲ್ಲಿ ಬೆಳೆಯನ್ನು ಕೊಯ್ಯುವುದು ನಿಷಿದ್ಧವಾಗಿತ್ತು.

*ದಾವೀದನು ಹಸಿದಾಗ ಏನು ಮಾಡಿದನೆಂಬುದನ್ನು ... ಮಹಾಯಾಜಕನಾದ ಅಬಿಯಾತಾರನ ಕಾಲದಲ್ಲಿ* (ವ. 26-26): ಯೇಸುವು ಇಲ್ಲಿ 1 ಸಮು.21:1-6 ರಲ್ಲಿನ ಕಥೆಯನ್ನು ಸೂಚಿಸಿ ಹೇಳುತ್ತಿದ್ದಾನೆ. ಅಬಿಯಾತಾರ್ ಮತ್ತು ಆತನ ಮಗನಾದ ಅಹೀಮಲೆಕರಿಬ್ಬರೂ ದೇವದರ್ಶನ ಗುಡಾರದಲ್ಲಿ (ಯೆರೂಸಲೇಮಿನ ಹತ್ತಿರದ ನೋಬದಲ್ಲಿದ್ದ) ಮಹಾಯಾಜಕರಾಗಿ ಸೇವೆಸಲ್ಲಿಸುತ್ತಿದ್ದು ಹಸಿದು ಬಂದ ದಾವೀದ ಮತ್ತು ಆತನ ಸೇವಕರಿಗೆ ನೈವೇದ್ಯದ ಮೀಸಲು ರೊಟ್ಟಿಗಳನ್ನು ತಿನ್ನಲು ಕೊಡುತ್ತಾರೆ.

*ದೇವ ಮಂದಿರ* (ವ. 26): ದೇವದರ್ಶನ ಗುಡಾರ.

*ನೈವೇದ್ಯದ ರೊಟ್ಟಿ* (ವ. 26): ಸಬ್ಬತ್ ದಿನದಲ್ಲಿ ದೇವದರ್ಶನ ಗುಡಾರದಲ್ಲಿನ ಮೇಜಿನ ಮೇಲೆ ಹನ್ನೆರಡು ತಾಜಾ ರೊಟ್ಟಿಗಳನ್ನು ಇಡಲಾಗುತ್ತಿತ್ತು (ನಂತರ ದೇವಾಲಯದಲ್ಲಿ). ಹಳೆಯ ರೊಟ್ಟಿಗಳನ್ನು ಯಾಜಕರು ತಿನ್ನುತ್ತಿದ್ದರು (ನೋಡಿ ವಿಮೋ. 25:30, ಯಾಜಕ. 24:5-9). ಬೇರೆಯವರು ಈ ರೊಟ್ಟಿಗಳನ್ನು ತಿನ್ನುವುದು ಧರ್ಮಶಾಸ್ತ್ರಕ್ಕೆ ವಿರುದ್ಧವಾದುದಾಗಿತ್ತು.

**ಪ್ರಶ್ನೆಗಳು**

1. ಯೇಸು ಕಪೆರ್ನೌಮಿನಲ್ಲಿನ ತನ್ನ ಮನೆಯಲ್ಲಿ ಏನು ಮಾಡಿದನು (ವ. 1-5)?
2. ಜನರು ಪಾರ್ಶ್ವವಾಯುರೋಗಿಯನ್ನು ಯಾಕೆ ಮನೆಯ ಮೇಲ್ಚಾವಣಿಯ ಮೇಲೆ ಕೊಂಡೊಯ್ದರು (ವ. 15)?
3. ಯೇಸು ಪಾರ್ಶ್ವವಾಯುರೋಗಿಗೆ ಏನು ಹೇಳಿದನು (ವ. 1-5)?
4. ಯೇಸು ಪಾರ್ಶ್ವವಾಯುರೋಗಿಯನ್ನು ಗುಣಪಡಿಸಿದ್ದಕ್ಕಾಗಿ ಶಾಸ್ತ್ರಿಗಳಿಗೆ ಕೊಟ್ಟ ಕಾರಣವೇನು (ವ. 6-12)?
5. ಪಾರ್ಶ್ವವಾಯುರೋಗಿಯನ್ನು ಗುಣಪಡಿಸಿದ್ದಕ್ಕೆ ಜನರು ಹೇಗೆ ಪ್ರತಿಕ್ರಯಿಸಿದರು (ವ. 8-12)?
6. ಯೇಸು ಲೇವಿಯನ್ನು ಸಂಧಿಸಿದಾಗಿನ ಸನ್ನಿವೇಶ ಎಂಥದಾಗಿತ್ತು (ವ. 13-14)?
7. ಯೇಸುವಿನ ಸಾಮಾಜಿಕ ಜೀವನದ ಬಗ್ಗೆ ಪ್ರಶ್ನೆಗಳನ್ನು ಹೊಂದಿದ್ದ ಜನರ ಕುರಿತು ನಾವು ಏನನ್ನು ಕಲಿಯುತ್ತೇವೆ (ವ. 15-16)?
8. ವಚನ 18 ರಲ್ಲಿ ಉಪವಾಸದ ಸಂಬಂಧದೊಂದಿಗೆ ಮೂರು ಗುಂಪಿನ ಶಿಷ್ಯರ ಬಗ್ಗೆ ತಿಳಿಸಲಾಗಿದೆ, ಅವರು ಯಾರು? ಯಾರು ಉಪವಾಸ ಮಾಡಿದರು ಮತ್ತು ಯಾರು ಮಾಡಲಿಲ್ಲ?
9. ಮದಲಿಂಗನ ಬಗ್ಗೆ ಯೇಸು ಏನೆಂದು ಹೇಳುತ್ತಾನೆ (ವ. 19-20)?
10. ಯಾಕೆ ಹೊಸ ಬಟ್ಟೆಯ ತುಂಡನ್ನು ಹಳೇ ಬಟ್ಟೆಗೆ ತ್ಯಾಪೆ ಹಚ್ಚುವುದು ಮೂರ್ಖತನವಾಗಿದೆ (ವ. 21)?
11. ಯಾಕೆ ಬುದ್ಧಿವಂತ ವ್ಯಕ್ತಿ ಮಾತ್ರ ಹೊಸ ದ್ರಾಕ್ಷಾರಸವನ್ನು ಹಾಕಿಡಲು ಹೊಸ ಬುದ್ದಲಿಯನ್ನೇ ಉಪಯೋಗಿಸುವನು (ವ. 22)?
12. ಯೇಸುವಿನ ಶಿಷ್ಯರ ಬಗ್ಗೆ ಫರಿಸಾಯರ ದೂರು ಏನಾಗಿದೆ (ವ. 23-24)?
13. ಸಬ್ಬತ್ತಿನ ಬಗ್ಗೆ ಯೇಸುವು ಫರಿಸಾಯರಿಗೆ ಹೇಳಿದ್ದೇನು (ವ. 27-28)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಕೆಲವು ಶಾಸ್ತ್ರಿಗಳು ಯೇಸುವು ದೇವದೂಷಣೆ ಮಾಡುತ್ತಿದ್ದನೆಂಬುದಾಗಿ ಯಾಕೆ ಯೋಚಿಸಿದರು (ವ. 1-12)?
2. ಶಾಸ್ತ್ರಿಗಳ ಮನಸ್ಸಿನಲ್ಲಿರುವ ದೂಷಣೆಗೆ ಯೇಸು ಹೇಗೆ ಪ್ರತಿಕ್ರಯಿಸಿದನು? ಮತ್ತು ಇದರಿಂದ ಆತನು ಹೇಳುವುದೇನೆಂಬುದಾಗಿ ನೀವು ಯೋಚಿಸುವಿರಿ (ವ. 1-12)?
3. ವೈದ್ಯರು ಮತ್ತು ಕ್ಷೇಮವಿಲ್ಲದವರ ಬಗೆಗಿನ ಯೇಸುವಿನ ಹೇಳಿಕೆಯನ್ನು ವಿವರಿಸಿರಿ (ವ. 13-17).
4. ಮದಲಿಂಗನು ಮತ್ತು ಮದುವೆಯ ಜನರ ಬಗೆಗಿನ ಯೇಸುವಿನ ಹೇಳಿಕೆಯನ್ನು ವಿವರಿಸಿರಿ (ವ. 18-19).
5. ಉಪವಾಸದ ವಿಷಯ (ವ. 18-20) ಮತ್ತು "ಹಳೇ ಬಟ್ಟೆಗೆ ಹೊಸ ಬಟ್ಟೆಯ ತ್ಯಾಪೆ" ಮತ್ತು "ಹಳೇ ಬುದ್ದಲಿಯಲ್ಲಿ ಹೊಸ ದ್ರಾಕ್ಷಾರಸ"(ವ. 21-22)ದ ನಡುವಿನ ಸಂಬಂಧವೇನಾಗಿದೆ?
6. ಯೇಸುವು ತನ್ನ ಶಿಷ್ಯರು ಮತ್ತು ದಾವೀದನ ನಡುವೆ ಸಮಾನತೆಯನ್ನು ಕಲ್ಪಿಸುವಾಗ ಆತನು ಕೊಡುವ ಕಾರಣವನ್ನು ನೀವು ಹೇಗೆ ಆಲೋಚಿಸುವಿರಿ (ವ. 23-28)?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಮಾರ್ಕನ ಸುವಾರ್ತೆ ಎರಡನೇ ಅಧ್ಯಾಯದಲ್ಲಿ ಕಂಡುಬರುವ ಕೆಲವು ವಿಷಯಗಳು ಇಂತಿವೆ . ಇನ್ನೂ ಹೆಚ್ಚಾಗಿ ಯೋಚಿಸಲು ಅವು ನಿಮಗೆ ಸಹಕಾರಿಯಾಗಬಲ್ಲವು. ಸತ್ಯವೇದದ ವಾಕ್ಯಭಾಗ ಮತ್ತು ಈ ಅಧ್ಯಯನದ ವಿವಿಧ ಭಾಗಗಳಲ್ಲಿನ ವಿಷಯಗಳ (ಮಾಹಿತಿ) ಬೆಳಕಿನಲ್ಲಿ ಕೆಳಕಂಡ ಪ್ರಶ್ನೆಗಳನ್ನು ವಿಮರ್ಶಿಸಿರಿ (***ಪೀಠಿಕೆ, ಪ್ರಶ್ನೆಗಳಿಗೆ ಉತ್ತರಗಳು, ಆಲೋಚಿಸಿರಿ ಮತ್ತು ಚರ್ಚಿಸಿರಿ ಟಿಪ್ಪಣಿಗಳು***). ಅನಂತರ ನಿಮ್ಮ ಆಲೋಚನೆಗಳನ್ನು ಅಂಶಗಳಾಗಿ ರಚನೆ ಮಾಡಿರಿ, ಅವುಗಳು ಸತ್ಯವೇದ ಅಧ್ಯಯನಕ್ಕಾಗಿ ರೂಪುರೇಷೆಗಳನ್ನಾಗಿ ಉಪಯೋಗಿಸುವಂತಿರಲಿ. ಎಲ್ಲಾ ವಿಷಯಗಳನ್ನು ಮಾಡಬೇಕೆಂತೇನಿಲ್ಲ.

1. ಯೇಸು ಒಬ್ಬ ಪಾರ್ಶ್ವವಾಯುರೋಗಿಯನ್ನು ಸ್ವಸ್ಥಪಡಿಸಿದ್ದು: ಈ ಕಥೆಯ ಸನ್ನಿವೇಶ (ಪರಿಸ್ಥಿತಿ) ಏನಾಗಿತ್ತು? ಪಾರ್ಶ್ವವಾಯುರೋಗಿಯನ್ನು ಯೇಸುವಿನ ಬಳಿಗೆ ಕರೆತಂದವನ ಬಗ್ಗೆ ನಾವೇನನ್ನು ತಿಳಿದುಕೊಳ್ಳುತ್ತೇವೆ? ಪಾರ್ಶ್ವವಾಯುರೋಗಿಯನ್ನು ಯೇಸುವಿನ ಮುಂದೆ ಇಳಿ ಬಿಟ್ಟಾಗ ಆತನಿಗೆ ಹೇಗೆ ಅನಿಸಿರಬೇಕೆಂಬುದಾಗಿ ನೀವು ಯೋಚಿಸುವಿರಿ? ಶಾಸ್ತ್ರಿಗಳು ಯೇಸು ಒಬ್ಬ ದೇವದೂಷಕ ಎಂಬುದಾಗಿ ಯಾಕೆ ಯೋಚಿಸಿದರು? ಯೇಸುವು ಶಾಸ್ತ್ರಿಗಳಿಗೆ ಕೇಳಿದ ಪ್ರಶ್ನೆಯನ್ನು ವಿವರಿಸಿರಿ. ಆ ಮನುಷ್ಯನು ಎದ್ದು ಮನೆಗೆ ನಡೆದು ಹೋದಾಗ ಶಾಸ್ತ್ರಿಗಳಿಗೆ ಏನನಿಸಿರಬೇಕೆಂದು ನೀವು ಯೋಚಿಸುವಿರಿ? ತಾನು ಮನೆಯತ್ತ ನಡೆದಾಗ ಆ ಮನುಷ್ಯನಿಗೆ ಏನನಿಸಿರಬೇಕು? ಅಲ್ಲಿ ನಡೆದ ಸಂಗತಿಗೆ ಜನರು ಏನೆಂದು ಯೋಚಿಸಿದರು ಮತ್ತು ಪ್ರತಿಕ್ರಿಯಿಸಿದರು? ನಮ್ಮ ಜೀವಿತ ಮತ್ತು ಸೇವೆಗಾಗಿ ಈ ಕಥೆಯಿಂದ ನಾವೇನನ್ನು ಕಲಿಯಬಹುದು?
2. ಯೇಸುವು ನೀತಿವಂತರನ್ನಲ್ಲ, ಪಾಪಿಗಳನ್ನು ಕರೆಯುವುದಕ್ಕೆ ಬಂದನು: ಲೇವಿ ಯಾರು ಮತ್ತು ಆತನು ಹೇಗೆ ಯೇಸುವಿನ ಶಿಷ್ಯರಲ್ಲೊಬ್ಬನಾದನು? ಯೇಸುವಿನ ಸ್ವಭಾವದ ಬಗ್ಗೆ ಫರಿಸಾಯರು ದೂರಿದ್ದೇಕೆ? ಯೇಸು "ನೀತಿವಂತರು" ಎಂಬುದಾಗಿ ಹೇಳಿದ್ದರ ಅರ್ಥವೇನು? ರಕ್ಷಣೆಯ ವಿಷಯ ಬಂದಾಗ ನೀತಿವಂತರ ಮೇಲೆ ಪಾಪಿಗಳು ಹೊಂದಿರುವ ಲಾಭವೇನು? ರಕ್ಷಕನಾಗಿ ತನ್ನ ಪಾತ್ರವನ್ನು ತನ್ನ ಕೇಳುಗರು ತಿಳಿದುಕೊಳ್ಳುವಂತೆ ಯೇಸುವಿನ ವೈದ್ಯ ಮತ್ತು ಕ್ಷೇಮವಿಲ್ಲದವರ ಉದಾಹರಣೆಯು ಹೇಗೆ ಸಹಕರಿಸುತ್ತದೆ? ನಮ್ಮ ಸ್ವಂತ ಜೀವಿತ ಮತ್ತು ಸೇವೆಗಾಗಿ ಈ ಕಥೆಯಿಂದ ನಾವೇನನ್ನು ಕಲಿಯಬಹುದು?
3. ಹೊಸದು ಮತ್ತು ಹಳೆಯದು: ಹೊಸ ಬಟ್ಟೆ ಮತ್ತು ಹೊಸ ದ್ರಾಕ್ಷಾರಸದ ಕುರಿತಾದ ಯೇಸುವಿನ ಸಾಮ್ಯವನ್ನು ವಿವರಿಸಿರಿ. ಯೇಸುವಿನ ಸೇವೆಯಲ್ಲಿ ಈ ಸಾಮ್ಯಗಳ ಪಾತ್ರವೇನಾಗಿತ್ತು? ಯಾಕೆ ಯೇಸು ತನ್ನ ಶಿಷ್ಯರೂ ಉಪವಾಸ ಮಾಡಬೇಕೆಂದು ಬಯಸಲಿಲ್ಲ? ಉಪವಾಸ ಮತ್ತು ಮದುವೆಯ ಜನರ ಬಗ್ಗೆ ಯೇಸು ಹೇಳುವ ಅಂಶವೇನು? ಯೇಸುವಿನ ಸೇವೆಯಲ್ಲಿ ಈ ಉದಾಹರಣೆಯ ಪಾತ್ರವೇನಾಗಿತ್ತು? ನಮ್ಮ ಸ್ವಂತ ಜೀವಿತ ಮತ್ತು ಸೇವೆಗಳಿಗಾಗಿ ಈ ವಾಕ್ಯಭಾಗದಿಂದ ನಾವೇನನ್ನು ಕಲಿಯುತ್ತೇವೆ?
4. ಸಬ್ಬತ್ತನ್ನು ತಿಳಿದುಕೊಳ್ಳಲು ಯೇಸು ನಮಗೆ ಸಹಕರಿಸುವುದು: ಫರಿಸಾಯರು ಯೇಸುವಿನ ಶಿಷ್ಯರಿಗೆ ಮಾಡಬಾರದ ಕೆಲಸವನ್ನು ಮಾಡಿದ್ದರೆಂದು ದೂಷಿಸಿದ್ದು ಯಾಕೆ? ದಾವೀದನು ಮತ್ತು ನೈವೇದ್ಯದ ರೊಟ್ಟಿಯ ಕುರಿತಾದ ಹಳೇ ಒಡಂಬಡಿಕೆಯ ಕಥೆಯನ್ನು ಇಲ್ಲಿ ಯೇಸು ತಂದಿದ್ದ್ಯಾಕೆ? ಸಬ್ಬತ್ ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ವಿನಃ ಮನುಷ್ಯರು ಸಬ್ಬತ್ ದಿನಕ್ಕೋಸ್ಕರ ಉಂಟಾಗಲಿಲ್ಲವೆಂಬುದಾಗಿ ಯೇಸು ಹೇಳಿದ್ದರ ಅರ್ಥವೇನು? ಸಬ್ಬತ್ ದಿನವನ್ನು ಪರಿಶುದ್ಧ ದಿನವನ್ನಾಗಿ ಪರಿಗಣಿಸಬೇಕೆಂಬುದರ ಬಗೆಗಿನ ದೇವರ ಒಡಂಬಡಿಕೆಯನ್ನು ಫರಿಸಾಯರು ಹೇಗೆ ವಿರೂಪಗೊಳಿಸಿದರು ಎಂಬುದನ್ನು ವಿವರಿಸಿರಿ.

   ನಮ್ಮ ಸ್ವಂತ ಜೀವಿತ ಮತ್ತು ಸೇವೆಗಾಗಿ ಈ ವಾಕ್ಯಭಾಗದಿಂದ ನಾವೇನನ್ನು ಕಲಿಯುತ್ತೇವೆ?



**ಮಾರ್ಕ ಅಧ್ಯಾಯ 3**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕನ 3 ನೇ ಅಧ್ಯಾಯದಲ್ಲಿ ಈ ಐದು ಸಂಗತಿಗಳನ್ನು ಕಾಣುತ್ತೇವೆ:

1. ಯೇಸು ಕೈಬತ್ತಿಹೋದವನೊಬ್ಬನನ್ನು ಗುಣಪಡಿಸಿದ್ದು (ವ. 1-6)
2. ಬಹುಜನರು ಯೇಸುವನ್ನು ಹಿಂಬಾಲಿಸಿದ್ದು (ವ. 7-12)
3. ಯೇಸು ಹನ್ನೆರಡು ಅಪೊಸ್ತಲರನ್ನು ನೇಮಿಸಿದ್ದು (ವ. 13:14)
4. ಯೇಸು ಮತ್ತು ದೆವ್ವಗಳ ಒಡೆಯ (ವ. 20-30)
5. ಯೇಸುವಿನ ತಾಯಿ ಮತ್ತು ತಮ್ಮಂದಿರು ಯಾರೆಂಬುದು (ವ. 31-35)

ಯೇಸುವಿನ ಸೇವೆಯ ಫಲವಾಗಿ, ಯೆಹೂದಿ ನಾಯಕರುಗಳು ಆತನನ್ನು ಕೊಲ್ಲಲು ಸಂಚುಮಾಡುತ್ತಾರೆ (ವ. 6).

*ತಪ್ಪು ಹೊರಿಸು* (ವ. 2): ಗ್ರೀಕ್ ಪದದ ಅರ್ಥ "ದೂರು ದಾಖಲಿಸು, ವಿರುದ್ಧವಾಗಿ ಕಾನೂನು ಕ್ರಮ ಕೈಗೊಳ್ಳುವುದು".

*ಹೆರೋದ್ಯರನ್ನು* (ವ. 6): ಇವರು ಹೆರೋದನ ಸಾಮ್ರಾಜ್ಯ ಮತ್ತು ಪ್ಯಾಲೆಸ್ತೀನ್ ರೋಮನ್ ಆಳ್ವಿಕೆಯನ್ನು ಬೆಂಬಲಿಸಿದವರೆಂಬುದನ್ನು ಈ ಪದವೇ ಹೇಳುತ್ತದೆ. ಹೆರೋದ್ಯರು ಒಂದು ಧಾರ್ಮಿಕ ಪಂಥದವರಾಗಲೀ ಅಥವಾ ರಾಜಕೀಯ ಪಕ್ಷದವರಾಗಲೀ ಆಗಿರಲಿಲ್ಲ. ಜನರ ಮಧ್ಯೆ ಯೇಸುವಿನ ಜನಪ್ರಿಯತೆ ಬಹಳವಾಗಿ ಹೆಚ್ಚಾಗುತ್ತಾ ಬಂತೆಂಬುದಾಗಿ ವ. 8 ತೋರಿಸುತ್ತದೆ. ಈ ವಚನದಲ್ಲಿ ತಿಳಿಸಲಾದ ಸ್ಥಳಗಳೆಲ್ಲ ಪ್ರಾಯೋಗಿಕವಾಗಿ ಎಲ್ಲಾ ಪ್ಯಾಲೆಸ್ತೀನ್ ಮತ್ತು ಹೊಸ ಒಡಂಬಡಿಕೆ ಕಾಲದ ಅದರ ನೆರೆಹೊರೆಯ ಸ್ಥಳಗಳನ್ನು ಒಳಗೊಂಡಿವೆ.

*ದೆವ್ವಗಳು ... ಆತನ ಪಾದಕ್ಕೆ ಬಿದ್ದು, "ನೀನು ದೇವಕುಮಾರನೆಂದು" ಕೂಗುತ್ತಿದ್ದವು* (ವ. 11): ದೆವ್ವಗಳು ಸಹ ಯೇಸು ಯಾರೆಂಬುದನ್ನು ತಿಳಿದುಕೊಂಡು ಆತನಿಗೆ ಅಡ್ಡಬಿದ್ದವು.

*ಆತನು ತಾನು ಇಂಥವನೆಂಬುದಾಗಿ ಯಾರಿಗೂ ಪ್ರಕಟಿಸಬಾರದೆಂದು* (ವ. 12): ಈ ಹೇಳಿಕೆಯನ್ನು ಗ್ರೀಕಿನ ಎಲ್ಲಾ ಹಸ್ತ ಪ್ರತಿಗಳಲ್ಲಿ (ಕನ್ನಡದ ಸತ್ಯವೇದ ಮತ್ತು ಪವಿತ್ರ ಗ್ರಂಥಗಳನ್ನು ಹೋಲಿಸಿ) ಕಂಡುಬರುವುದಿಲ್ಲ. ಈ ಅಪೊಸ್ತಲರು ಯೇಸು ಅಧಿಕಾರದಿಂದ ಕಳುಹಿಸಲ್ಪಟ್ಟ ಪ್ರತಿನಿಧಿಗಳು (ಇಬ್ರಿಯ 3:1 ನ್ನು ನೋಡಿ). "ಅಪೊಸ್‌ತಲ" ಎಂಬ ಗ್ರೀಕ್ ಪದದ ಅರ್ಥ "ಸಂದೇಶಕ" ಎಂಬುದಾಗಿದೆ. ಹೊಸ ಒಡಂಬಡಿಕೆಯಲ್ಲಿ "ಅಪೊಸ್ತಲ" ಎಂಬ ಪದವನ್ನು ಪೌಲ ಮತ್ತು ಬಾರ್ನಬ (ರೋಮ. 1:1, ಅ.ಕೃ. 14:14) ಮತ್ತು ಯೇಸುವಿನ ತಮ್ಮನಾದ ಯಾಕೋಬ (ಗಲಾತ್ಯ 1:19) ಮತ್ತು ಅಂದ್ರೋನಿಕ ಮತ್ತು ಯೂನ್ಯನ (ರೋಮ. 16:7) ಬಗ್ಗೆ ಸಹ ಬಳಸಲಾಗಿದೆ.

*ಆ ಹನ್ನೆರಡು ಮಂದಿ ...* (ವ. 16-17): ಈ ಪುಸ್ತಕದ ***ಉಲ್ಲೇಖ*** ಭಾಗದಲ್ಲಿನ ***ಯೇಸುವಿನ ಹನ್ನೆರಡು ಅಪೊಸ್ತಲರು*** ನೋಡಿರಿ.

*ಆತನ ಬಂಧುಗಳು....ಆತನನ್ನು ಹಿಡಿಯುವುದಕ್ಕೆ ಹೊರಟರು* (ವ. 21): ಬಹುಶಃ ಅವರು ನಜರೇತಿನಿಂದ ಕಪೆರ್ನೌಮಿಗೆ ಸುಮಾರು 40 ಕಿ.ಮೀ. ದೂರದಿಂದ ಬಂದಿದ್ದರು.

*ಯೆರೂಸಲೇಮಿನಿಂದ* (ವ. 22): ಕಪೆರ್ನೌಮಿಗೆ ಹೊರಟ ಅವರ ಪ್ರಯಾಣವನ್ನು ಸುಮಾರು 150 ಕಿ.ಮೀ ದೂರವನ್ನೊಳಗೊಂಡಿದ್ದು ಇದು ಅನೇಕ ದಿನಗಳನ್ನು ತೆಗೆದುಕೊಂಡಿರಬಹುದು.

*ಬೆಲ್ಜೆಬೂಲನು* (ವ. 22): ಇದು “ಬಾಳ – ಜೆಬೂರ್” (ಇದರರ್ಥ “ನೊಣಗಳ ಒಡೆಯ”) ಎಂಬ ಇಬ್ರಿಯ ಹೆಸರಿನ ಗ್ರೀಕ್ ರೂಪವಾಗಿದೆ. ಆ ಹೆಸರಿನಡಿಯಲ್ಲಿಯೇ ಎಕ್ರೋನಿನ ಫಿಲಿಷ್ಟಿಯರಿಂದ ಬಾಳನು ಪೂಜಿಸಲ್ಪಡುತ್ತಿದ್ದನು.

*ಸಾಮ್ಯ* (ವ. 23): ಇಲ್ಲಿ ಈ ಪದವನ್ನು ಹೋಲಿಕೆಗಳ ಸಾಮಾನ್ಯ ಅರ್ಥದಲ್ಲಿ ಬಳಸಲಾಗಿದೆ.

*ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಂಡಾನು* (ವ. 27): ಜನರನ್ನು ಸೈತಾನನ ನಿಯಂತ್ರಣದಿಂದ ಬಿಡಿಸಿದಾಗ ಯೇಸುವು ತನ್ನನ್ನು ಮತ್ತು ತನ್ನ ಸೇವೆಯನ್ನು ಕುರಿತು ಹೇಳುತ್ತಾನೆ. ಯೇಸುವಿನ ಆಗಮನದಿಂದ ಸೈತಾನನು (ಬಲಿಷ್ಠನು) ಕಟ್ಟಿಹಾಕಲ್ಪಟ್ಟಿದ್ದಾನೆ. ಜನರು ದೇವರ ರಾಜ್ಯದ ಕುರಿತ ಸುವಾರ್ತೆಯನ್ನು ಸ್ವೀಕರಿಸಿದಂತೆಲ್ಲ ಅವರು ಗುಣ ಹೊಂದಿದರು, ಬಿಡುಗಡೆ ಹೊಂದಿದರು ಮತ್ತು ಸೈತಾನನ ‘ಮನೆ’ ಸುಲಿಗೆಯಾಯಿತು ಮತ್ತು ಆತನ ಸೊತ್ತನ್ನು ಸಹ ಸುಲುಕೊಳ್ಳಲಾಯಿತು.

*ಪವಿತ್ರಾತ್ಮನನ್ನು ದೂಷಿಸಿದವನು ಎಂದಿಗೂ ಕ್ಷಮಾಪಣೆ ಹೊಂದನು. ಅವನು ಶಾಶ್ವತ ಪಾಪದೊಳಗೆ ಸೇರಿದವನಾದನು* (ವ. 29): ಸ್ವತಃ ಯೇಸು ಈ ಪಾಪದ ಲಕ್ಷಣವನ್ನು ವಿವರಿಸುತ್ತಾನೆ: ಪವಿತ್ರಾತ್ಮನನ್ನು ದೂಷಿಸುವುದೇನೆಂದರೆ (ಈ ವಾಕ್ಯಭಾಗದಲ್ಲಿ ಶಾಸ್ತ್ರಿಗಳು ಮಾಡಿದಂತೆ) ಯೇಸು ಸೈತಾನನ (ದೆವ್ವಗಳ ಒಡೆಯ) ಮೂಲಕ ಕಾರ್ಯಮಾಡುತ್ತಾನೆಯೇ ಹೊರತು ದೇವರ ಪವಿತ್ರಾತ್ಮನ ಮೂಲಕ ಅಲ್ಲ ಎಂದು ಹೇಳುವುದಾಗಿದೆ. ಆ ಪಾಪವನ್ನು ಕ್ಷಮಿಸಲಾಗಲ್ಲ, ಯಾಕೆಂದರೆ ಯೇಸುವನ್ನು ತಿರಸ್ಕರಿಸುವವರೆಗೂ (ಆತನ ದೈವತ್ವ, ಆತನ ಒಡೆಯತ್ವ ಮತ್ತು ಆತನ ರಕ್ಷಣಾ ಬಲ) ನಾವು ಆತನ ರಕ್ಷಣೆಯನ್ನು ಅನುಭವಿಸಲಾಗಲ್ಲ. ಆ ಪಾಪಕ್ಕೆ ನಿತ್ಯವಾದ ಪರಿಣಾಮಗಳಿವೆ, ಯಾಕೆಂದರೆ ಈ ಜೀವಿತದಲ್ಲಿ ಮಾತ್ರ ನಾವು ಯೇಸುವನ್ನು ಅಂಗೀಕರಿಸಿ ಆತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಅನುಭವಿಸಬಹುದು. ಒಮ್ಮೆ ನಾವು ಸತ್ತಾಗ ಅದು ತೀರಾ ಸಮಯ ಮೀರಿ ಹೋಗುತ್ತದೆ. ನಾವು ನಮ್ಮ ಅವಕಾಶವನ್ನು ಕಳೆದುಕೊಳ್ಳುತ್ತೇವೆ.

*ಯೇಸುವಿನ ತಾಯಿ ಮತ್ತು ತಮ್ಮಂದಿರು* (ವ. 31): 6:3 ರಲ್ಲಿ ಯೇಸುವಿನ ನಾಲ್ಕು ಸಹೋದರರ ಹೆಸರಿರುವುದನ್ನು ನೋಡಿರಿ. ಯೇಸುವಿನ ತಂದೆಯ ಹೆಸರನ್ನು ತಿಳಿಸಲಾಗಿಲ್ಲ ಹಾಗಾಗಿ ಬಹುಶಃ ಆತನು ಆ ಸಮಯದಲ್ಲಿ ಮರಣ ಹೊಂದಿರಬಹುದು.

**ಪ್ರಶ್ನೆಗಳು**

1. ಯೇಸುವಿನ ಮೇಲೆ ಯಾರು ತಪ್ಪುಹೊರಿಸಬೇಕೆಂದು ಹೊಂಚಿ ನೋಡುತ್ತಿದ್ದರು (ವ. 2)?
2. ಯೇಸು ಕೈಬತ್ತಿಹೋದವನಿಗೆ ಏನು ಹೇಳಿದನು (ವ. 3, 5)?
3. ಕೈಬತ್ತಿಹೋದವನನ್ನು ಸ್ವಸ್ಥಪಡಿಸಿದ್ದಕ್ಕೆ ಫರಿಸಾಯರು ಹೇಗೆ ಪ್ರತಿಕ್ರಯಿಸಿದರು (ವ. 6)?
4. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನ್ ನಕ್ಷೆಯಲ್ಲಿ*** ಕೆಳಕಂಡ ಸ್ಥಳಗಳನ್ನು ಗುರುತಿಸಿ: ಗಲಿಲಾಯ, ಯೂದಾಯ, ಯೆರೂಸಲೇಮ್, ಇದೂಮಾಯ, ತೂರ್ ಮತ್ತು ಸೀದೋನ್.
5. ***ಯೇಸುವಿನ ಕಾಲದಲ್ಲಿ ಪ್ಯಾಲೆಸ್ತೀನ್ ನಕ್ಷೆಯಲ್ಲಿ*** ಯೋರ್ದನ್ ಹೊಳೆಯ ಪೂರ್ವ(ಆಚೆ)ದಲ್ಲಿರುವ ಸ್ಥಳಗಳಾವುವು?
6. ಯೇಸು ಯಾಕೆ ಒಂದು ಸಣ್ಣ ದೋಣಿಯನ್ನು ಬಯಸಿದನು (ವ. 9-10)?
7. ಯೇಸುವನ್ನು ಕಂಡಾಗ ದೆವ್ವಗಳು ಹೇಗೆ ವರ್ತಿಸಿದವು (11-12)?
8. ಯೇಸು ಹನ್ನೆರಡು ಮಂದಿ ಅಪೊಸ್ತಲರನ್ನು ಹೇಗೆ ಆರಿಸಿಕೊಂಡನು (ವ. 13)?
9. ಮಾರ್ಕನು ಶಿಷ್ಯರ “ಕೆಲಸ” ವನ್ನು ಹೇಗೆ ವರ್ಣಿಸುತ್ತಾನೆ? ಪಟ್ಟಿ ಮಾಡಿರಿ (ವ. 14-15).
10. ಇಸ್ಕರಿಯೋತ ಯೂದನ ಬಗ್ಗೆ ಮಾರ್ಕನು ಹೇಳುವ ಹೆಚ್ಚಿನ ಮಾಹಿತಿಯೇನು (ವ. 19)?
11. ಯೇಸುವಿನ ಬಂಧುಗಳು ಆತನ ಬಗ್ಗೆ ಏನೆಂದು ಯೋಚಿಸಿದರು (ವ. 20-21)?
12. ಯೇಸುವಿನ ಸೇವೆಯ ಬಗ್ಗೆ ಶಾಸ್ತ್ರಿಗಳು ಏನೆಂದು ಹೇಳುತ್ತಾರೆ (ವ. 23, 30)?

13. ಸೈತಾನನು ತನಗೆ ವಿರೋಧವಾಗಿ ಎದ್ದು ತನ್ನಲ್ಲಿ ಬೇಧ ಹುಟ್ಟಿಸಿಕೊಂಡರೆ ಅದರ ಪರಿಣಾಮವೇನಾಗುತ್ತದೆಂಬುದಾಗಿ ಯೇಸು ಹೇಳುತ್ತಾನೆ (ವ. 26)?
14. ಯೇಸು ನೆರೆದ ಗುಂಪಿಗೆ "ತಮ್ಮ, ತಂಗಿ ಮತ್ತು ತಾಯಿ" ಯ ಅರ್ಥ ಏನೆಂಬುದಾಗಿ ಹೇಳುತ್ತಾನೆ (ವ. 31-35)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಕೈಬತ್ತಿಹೋಗಿದ್ದವನನ್ನು ಸ್ವಸ್ಥಪಡಿಸುವುದರ ವಿಷಯದಿಂದ ಮಾರ್ಕನು ಹೇಳಬಯಸುವ ಅಂಶವೇನೆಂಬುದಾಗಿ ನೀವು ಯೋಚಿಸುವಿರಿ (ವ. 1-6)?
2. ಯಾಕೆ ಯೆಹೂದ ಮುಖಂಡರು ಯೇಸುವನ್ನು ಕೊಲ್ಲಬೇಕೆಂಬ ತೀರ್ಮಾನಕ್ಕೆ ಬಂದರೆಂಬುದಾಗಿ ನೀವು ಯೋಚಿಸುವಿರಿ (ವ. 1-6)?
3. ಸಬ್ಬತ್ ದಿನದಲ್ಲಿ ಮೇಲನ್ನು ಅಥವಾ ಕೇಡನ್ನು ಮಾಡುವುದರ ಬಗ್ಗೆ ಯೆಹೂದಿ ಮುಖಂಡರಿಗೆ ಯೇಸು ಕೇಳಿದ ಪ್ರಶ್ನೆಯ ವ್ಯಂಗ್ಯವನ್ನು ವಿವರಿಸಿರಿ (ವ. 4).
4. ಯೇಸು ಯಾಕೆ ಕೋಪಗೊಂಡನೆಂಬುದಾಗಿ ನೀವು ಯೋಚಿಸುವಿರಿ (ವ. 5)?
5. ವಚನ 11-12 ರಲ್ಲಿ ನಾವು "ಮೆಸ್ಸೀಯನ ರಹಸ್ಯಕ್ಕೆ" ಇನ್ನೊಂದು ಉದಾಹರಣೆಯನ್ನು ಮಾರ್ಕನ ಸುವಾರ್ತೆಯಲ್ಲಿ ಕಾಣುತ್ತೇವೆ. ಹೇಗೆ ಎಂದು ವಿವರಿಸಿ.
6. ಯೇಸು ತನ್ನ ಸೇವೆಯ ಬಗ್ಗೆ ಏನೆಂದು ಹೇಳುತ್ತಾನೆ (ವ. 23-29)?
7. ಯಾಕೆ "ಪವಿತ್ರಾತ್ಮನನ್ನು ದೂಷಿಸುವುದು" ಶಾಶ್ವತವಾಗಿರುವ ಮತ್ತು ಎಂದೂ ಕ್ಷಮಿಸಲಾಗದ ಪಾಪವೆಂಬುದಾಗಿ ನೀವು ಆಲೋಚಿಸಿರಿ.
8. ಯೇಸುವಿನ ಕುಟುಂಬದ ಕುರಿತಾದ ವಾಕ್ಯಭಾಗದಲ್ಲಿ (ವ. 31-35) "ತಮ್ಮಂದಿರು" ಎಂಬ ಪದವನ್ನು ಎರಡು ವಿಭಿನ್ನವಾದ ರೀತಿಯಲ್ಲಿ ಬಳಸಲಾಗಿದೆ. ಹೇಗೆ ಎಂಬುದನ್ನು ವಿವಿರಿಸಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಮಾರ್ಕ ಅಧ್ಯಾಯ 2 ಮತ್ತು 3 ರಲ್ಲಿ ಯೇಸು ಮತ್ತು ಯೆಹೂದಿ ಮುಖಂಡರ (ನಾಯಕರ) ನಡುವೆ ಆರು ವಿವಾಧಗಳನ್ನು ನಾವು ಕಾಣುತ್ತೇವೆ. ಅವುಗಳು ಯಾವುವು? ಅವನ್ನು ವಿಮರ್ಶಿಸಿ. ಹಾಗೆಯೇ ***ಯೇಸು ಮತ್ತು ಯೆಹೂದಿ ನಾಯಕರು*** ಎಂಬ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.
2. ನೀವು ಅಥವಾ ನಿಮ್ಮ ಸ್ನೇಹಿತರಲ್ಲಿ ಯಾರಾದರೂ "ಪವಿತ್ರಾತ್ಮನನ್ನು ದೂಷಿಸಿದ" ಪಾಪ ಮಾಡಿದ್ದೇನೆಂಬುದಾಗಿ ಚಿಂತಿಸುತ್ತಿರುವಿರಾ? ಈ ಪಾಪದ ಬಗ್ಗೆ ವಿವರಿಸಲು ಈ ಆಧ್ಯಯನದಲ್ಲಿನ ಅಂಶಗಳನ್ನು ಉಪಯೋಗಿಸಿರಿ ಮತ್ತು ಯಾವ ಅರ್ಥದಲ್ಲಿ ಯೇಸು ಇದೊಂದು ಪಾಪವು ಶಾಶ್ವತವಾದ ಮತ್ತು ಎಂದೂ ಕ್ಷಮಿಸಲಾಗದ ಪಾಪವೆಂಬುದಾಗಿ ಹೇಳುತ್ತಾನೆ. ಈ ಕ್ಷಮಿಸಲಾದ ಮತ್ತು ಶಾಶ್ವತ ಪಾಪದಿಂದ ಕ್ಷಮಿಸಲ್ಪಡಲು ನೀವು ಮತ್ತು ನಿಮ್ಮ ಸ್ನೇಹಿತರು ಮಾಡಲೇಬೇಕಾದುದ್ದೇನೆಂಬುದನ್ನು ವಿವರಿಸಿರಿ. ಹಾಗೆಯೇ ***ಕ್ಷಮಿಸಲಾರದ ಪಾಪದ ಕ್ಷಮಾಪಣೆ*** ಎಂಬ ಸರಳವಾದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.

## ಮಾರ್ಕ ಅಧ್ಯಾಯ 4

### ಪೀಠಿಕೆ ಮತ್ತು ಟಿಪ್ಪಣಿಗಳು

ಮಾರ್ಕನ ಸುವಾರ್ತೆಯ ನಾಲ್ಕನೇ ಅಧ್ಯಾಯವು ದೇವರ ರಾಜ್ಯದ ಸಾಮ್ಯ ಮತ್ತು ಗಲಿಲಾಯ ಸಮುದ್ರದ ಮೇಲೆ ಯೇಸುವು ಬಿರುಗಾಳಿಯನ್ನು ಗದರಿಸಿದ್ದರ ಕುರಿತಾದ ಕಥೆಯೊಂದನ್ನು ಒಳಗೊಂಡಿದೆ. ಅದನ್ನು ಈ ರೀತಿ ರಚನೆ ಮಾಡಬಹುದು.

1. ಬಿತ್ತುವವನ (ವ. 1-20)
2. ದೀಪ (ವ. 21-25)
3. ಬೆಳೆಯುವ ಬೀಜ (ವ. 26-29). ಈ ಸಾಮ್ಯ ಬೇರೆ ಸುವಾರ್ತೆಗಳಲ್ಲಿ ಕಾಣಸಿಗಲ್ಲ
4. ಸಾಸಿವೆಕಾಳು (ವ. 30-34)
5. ಯೇಸು ಬಿರುಗಾಳಿಯನ್ನು ಶಾಂತಗೊಳಿಸಿದ್ದು (ವ. 35-41)

ಯೇಸುವು ಜನ ಸಮೂಹಕ್ಕೆ ಅನೇಕ ಸಂಗತಿಗಳನ್ನು ಸಾಮ್ಯರೂಪವಾಗಿ ಹೇಳಿದನೆಂಬುದಾಗಿ ಮಾರ್ಕನು ಹೇಳುತ್ತಾನೆ. ತದನಂತರ ಆತನು ತನ್ನ ಶಿಷ್ಯರೊಂದಿಗೆ ಒಬ್ಬಂಟಿಗನಾಗಿರುವಾಗ ಈ ಸಾಮ್ಯಗಳ ಅರ್ಥವನ್ನು ಅವರಿಗೆ ವಿವರಿಸುತ್ತಾನೆ. ಯಾಕೆ ಯೇಸು ಕೆಲವೊಮ್ಮೆ ಜನರೊಂದಿಗೆ ಸಾಮ್ಯರೂಪದಲ್ಲಿ ಮಾತನಾಡಿದನೆಂಬ ಪ್ರಶ್ನೆಯು ಈ ಪಠ್ಯ ಪುಸ್ತಕದಲ್ಲಿ ಕಂಡುಬರುವ ***ದೇವರ ರಾಜ್ಯ ಕುರಿತಾದ ಸಾಮ್ಯಗಳು*** ಎಂಬ ಅಧ್ಯಯನದಲ್ಲಿ ವಿವರವಾಗಿ ಚರ್ಚಿಸಲ್ಪಟ್ಟಿದೆ.

*ಕೂತುಕೊಂಡನು* (ವ. 1): ಯೆಹೂದಿ ಬೋಧಕರುಗಳು ಬೋಧಿಸುವಾಗ ನಿಲ್ಲದೇ, ಕೂತುಕೊಳ್ಳುತ್ತಿದ್ದರು (ಪರ್ವತ ಪ್ರಸಂಗದ ಪ್ರಾರಂಭದೊಂದಿಗೆ ಹೋಲಿಸಿರಿ ಮತ್ತಾಯ 5:1).

*ಸಾಮ್ಯಗಳು* (ವ. 2): ಗ್ರೀಕಿನಲ್ಲಿ ಈ ಪದವನ್ನು ಬೋಧನೆಯ ಉದ್ದೇಶಕ್ಕಾಗಿ ಎರಡು ಸಂಗತಿಗಳನ್ನು ಹೋಲಿಸುವುದಕ್ಕಾಗಿ ಬಳಸಲಾಗುತ್ತಿತ್ತು. ಹಾಗೆಯೇ ಪ್ರತಿ ಸಾಮ್ಯಕ್ಕೂ ಒಂದು ಸಂದೇಶವಿದೆ. ಇದು ಸಾಮಾನ್ಯವಾಗಿ ಒಂದು ಕಥೆಯ ರೂಪದಲ್ಲಿದೆ. ಯೇಸುವಿನ ಪ್ರತಿಯೊಂದು ಸಾಮ್ಯಗಳು ಸಹ ಒಂದು ಮುಖ್ಯ ಅಂಶವನ್ನು ಒಳಗೊಂಡಿವೆ. ಮತ್ತು ಸಾಮ್ಯದ ವಿವರಗಳೆಲ್ಲವೂ ಕಥೆಗೆ ಮೆರುಗು ಕೊಡುವುದಕ್ಕಾಗಿ ಸೇರಿಸಲ್ಪಟ್ಟಿವೆ.

*ದೇವರ ರಾಜ್ಯದ ಗುಟ್ಟು* (ವ. 11): ಹೊಸ ಒಡಂಬಡಿಕೆಯಲ್ಲಿ "ಗುಟ್ಟು" ಎಂಬ ಪದವನ್ನು ದೇವರು ತನ್ನ ಜನರಿಗೆ ಪ್ರಕಟಪಡಿಸುವ ವಿಷಯಗಳ ಕುರಿತಾಗಿ ಉಪಯೋಗಿಸಲಾಗಿದೆ. ಈ ರಹಸ್ಯವು ಹಳೇ ಒಡಂಬಡಕೆಯ ಕಾಲದಲ್ಲಿ ಅಪರಿಚಿತವಾಗಿತ್ತು ಮತ್ತು ಈಗ ಮುಕ್ತವಾಗಿ ಸಾರಲ್ಪಟ್ಟಿದೆ. ಆದರೆ ನಂಬಿಕೆಯಿರುವವರು ಮಾತ್ರ ಇದನ್ನು ಅರ್ಥೈಸಿಕೊಳ್ಳಲು ಸಾಧ್ಯ. ಮಾರ್ಕನ ಸುವಾರ್ತೆಯಲ್ಲಿ ಅರಸನಾದ ಯೇಸು ಕ್ರಿಸ್ತನ ಬರೋಣ(ಆಗಮನ)ದಲ್ಲಿ ದೇವರ ರಾಜ್ಯವು ಹತ್ತಿರಕ್ಕೆ ಬಂದಿದೆ (ಹೋಲಿಸಿ ವ. 26 ಮತ್ತು 1:15) ಎಂಬುದೇ ಈ ಗುಟ್ಟಾಗಿದೆ. ಈ ಗುಟ್ಟನ್ನು ಶಿಷ್ಯರಿಗೆ ತಿಳಿಸಲಾಯಿತು ಯಾಕೆಂದರೆ ಅವರು ನಂಬಿಕೆಯಿಂದ ಪ್ರತಿಕ್ರಯಿಸಿದರು. ಆದರೆ ಯೇಸುವಿನ ಪ್ರಕಾರ "ಹೊರಗಿನವರಿಗೆ" ಯೇಸುವಿನ ಪ್ರಾಮುಖ್ಯ ಮತ್ತು ಸೇವೆಯು "ಸಾಮ್ಯಗಳಾಗಿ" ಪರಿಣಮಿಸಿವೆ (ಅಥವಾ ಒಗಟುಗಳು) (ವ. 11). ಅವರು ಅಧ್ಯಾಯ 3 ರಲ್ಲಿನ ಯೆಹೂದಿ ನಾಯಕರಂತೆ ಅಪನಂಬಿಕೆಯಿಂದ ಕಠಿಣಗೊಂಡವಾಗಿದ್ದರು.

ವ. 12: ಯೇಸು ಯೆಶಾಯ 6:9-10 ನ್ನು ಉಪಯೋಗಿಸುತ್ತಾನೆ (ಮಾರ್ಕನು ಹಳೇ ಒಡಂಬಡಿಕೆಯ ಗ್ರೀಕ್ ಸೆಪ್ಟ್ಯಾಜಿಂಟ್ ಭಾಷಾಂತರವನ್ನು ಉಪಯೋಗಿಸುತ್ತಾನೆ). ಇದರ ಹಿನ್ನಲೆಯೇನೆಂದರೆ ದೇವರು ಪ್ರವಾದಿಯನ್ನು ಕರೆದು ಇಸ್ರಾಯೇಲ್ಯರ ಬಳಿಗೆ ಕಳುಹಿಸುತ್ತಾನೆ; ಸಂದೇಶ ಕೇಳಿದ ನಂತರ ಅವರ ಹೃದಯ ಇನ್ನೂ ಕಠಿಣವಾಗುತ್ತದೆ. ಇದೇ ರೀತಿಯಲ್ಲಿ ಸಾಮ್ಯರೂಪದಲ್ಲಿನ ಯೇಸುವಿನ ಬೋಧನೆಯು ಯೆಹೂದ ನಾಯಕರ ಹೃದಯ ಕಾಠಿಣ್ಯತೆಯನ್ನು ಬಹಿರಂಗಗೊಳಿಸಿದೆ.

*ವಾಕ್ಯ* (ವ. 14, 13): ಆ ವಾಕ್ಯವು ದೇವರ ರಾಜ್ಯದ ಕುರಿತಾದ ಸಂದೇಶವಾಗಿದೆ (ಮತ್ತಾಯ 13:19 ರೊಂದಿಗೆ ಹೋಲಿಸಿ)

*ಫಲಮಾಗಿದ ಕೂಡಲೆ ಆವನು ಸುಗ್ಗಿ ಕಾಲ ಬಂತೆಂದು ಕೊಯಿಸುತ್ತಾನೆ* (ವ. 29): ಇದು ಯೋವೇಲ 3:13 ಕ್ಕೆ ಒಂದು ಪ್ರಸ್ತಾಪವಾಗಿರಬಹುದು. ಅಲ್ಲಿ ಸುಗ್ಗಿಯನ್ನು ಕೊನೆಯ ನ್ಯಾಯತೀರ್ಪು ಮತ್ತು ದೇವರ ರಾಜ್ಯದ ಪೂರ್ಣತೆಗೆ ಒಂದು ರೂಪಾಲಂಕಾರವಾಗಿ ಬಳಸಲಾಗಿದೆ.

*ಸಾಸಿವೆಕಾಳುಗಳು....ಸಣ್ಣದಾಗಿದೆ....ದೊಡ್ಡದಾಗಿ ...* (ವ. 31-32): ಸಾಸಿವೆಕಾಳು ಅತೀ ಸಣ್ಣ ಕಾಳಲ್ಲ, ಆದರೆ ಆ ಸಮಯದಲ್ಲಿ ಇದು ಪ್ಯಾಲೆಸ್ಟೇನಿನ ರೈತರು ಮತ್ತು ತೋಟಗಾರರಿಂದ ಬೆಳೆಸಲಾದ ಅತೀ ಸಣ್ಣ ಕಾಳಾಗಿದೆ. ಕೆಲ ಅನುಕೂಲಕರ ಸನ್ನಿವೇಶಗಳಲ್ಲಿ ಈ ಗಿಡವು ಸುಮಾರು ಹತ್ತು ಅಡಿ ಎತ್ತರ ಬೆಳೆಯುತ್ತದೆ.

*ಗಿಡಗಳಿಗಿಂತ ... ಆದರ ನೆರಳಿನಲ್ಲಿ* (ವ. 32): ಇದು ದಾನಿಯೇಲ 4:21 ಕ್ಕೆ ಒಂದು ಪ್ರಸ್ತಾಪವಾಗಿದ್ದು ದೇವರ ರಾಜ್ಯವು ಇಡೀ ಲೋಕಕ್ಕೆಲ್ಲಾ ಹಬ್ಬಿಕೊಂಡು ಎಲ್ಲಾ ರಾಷ್ಟ್ರಗಳ ಜನರಿಗೆ ಆಶ್ರಯವಾಗುವುದೆಂಬುದನ್ನು ಸೂಚಿಸುತ್ತದೆ. ಗಮನಿಸಿ ಮತ್ತಾಯನು "ಮರ" ಮತ್ತು "ಕೊಂಬೆಗಳ"ನ್ನು ಬಳಸುತ್ತಾನೆ (ಮತ್ತಾ.13:32).

*ಸಾಮ್ಯವಿಲ್ಲದೆ* (ವ. 34): ಇದು "ಅತಿಶಯೋಕ್ತಿ" ಎಂಬುದಾಗಿ ಕರೆಯುವ ಒಂದು ಶಬ್ದಾಲಂಕಾರವಾಗಿದೆ. ಈ ಮಾತಿನ ಅರ್ಥ ತನ್ನ ಶಿಷ್ಯರಿಗೆ ಬೋಧಿಸುವಾಗಲೆಲ್ಲಾ ಯೇಸು ಕ್ರಮವಾಗಿ ಸಾಮ್ಯಗಳನ್ನು ಉಪಯೋಗಿಸುತ್ತಿದ್ದನೆಂಬುದಾಗಿದೆ. ಆತನು ಬರೀ ಸಾಮ್ಯಗಳಲ್ಲೇ ಮಾತನಾಡಿದನೆಂದು ಇದರರ್ಥವಲ್ಲ.

*ಆಚೇದಡಕ್ಕೆ* (ವ. 35): ಯೇಸು ಮತ್ತು ಆತನ ಸ್ನೇಹಿತರು ದೋಣಿಯಲ್ಲಿ ಗಲಿಲಾಯ ಗಡಿಯನ್ನು ಬಿಟ್ಟು, ಗಲಿಲಾಯ ಸಮುದ್ರವನ್ನು ದಾಟಿ ಗೆರಸೇನರ ಸೀಮೆಯನ್ನು ಮುಟ್ಟಿದರು (5:1).

**ಪ್ರಶ್ನೆಗಳು**

1. ಈ ಸಂದರ್ಭದಲ್ಲಿ ಯೇಸು ಬಳಸಿದ "ತರಗತಿ" ಯನ್ನು ವಿವರಿಸಿರಿ (ವ. 1-2).
2. ಬಂಡೆಯ ಮೇಲೆ ಬಿದ್ದ ಬೀಜಗಳು ಏನಾದವು (ವ. 3-8)?
3. ಒಳ್ಳೆಯ ನೆಲದ ಮೇಲೆ ಬಿದ್ದ ಬೀಜಗಳು ಏನಾದವು (ವ. 3-8)?
4. ರೈತನು ಯಾವ "ಬೀಜ" ವನ್ನು ಬಿತ್ತುತ್ತಾನೆ (ವ. 14-20)?
5. ವಾಕ್ಯವು ಬಿತ್ತಲ್ಪಟ್ಟ ದಾರಿಯ ಮಗ್ಗುಲಾಗಿರುವ ಜನರ ಬಗ್ಗೆ ಯೇಸು ಏನೆಂದು ಹೇಳುತ್ತಾನೆ (ವ. 14-20)?
6. ಬೀಜ ಬಿದ್ದ ಬಂಡೆಯ ನೆಲವಾಗಿರುವವರ ಬಗ್ಗೆ ಯೇಸು ಏನನ್ನುತ್ತಾರೆ (ವ. 14-20)?
7. ಮುಳ್ಳುಗಿಡಗಳಲ್ಲಿ ಬೀಜ ಬಿದ್ದ ನೆಲವಾಗಿರುವವರ ಬಗ್ಗೆ ಯೇಸು ಏನನ್ನುತ್ತಾರೆ (ವ. 14-20)?
8. ಬೀಜ ಬಿದ್ದ ಒಳ್ಳೆಯ ನೆಲವಾಗಿರುವವರ ಬಗ್ಗೆ ಯೇಸು ಹೇಳುವುದೇನು (ವ. 14-20)?
9. ಫಲವು ಮಾಗಿದಾಗ ಏನಾಗುತ್ತದೆ (ವ. 26-29)?
10. ಸಾಸಿವೆ ಕಾಳಿನ ಸಾಮ್ಯವು ಯಾವುದರ ಕುರಿತಾಗಿದೆ (ವ. 30-32)?
11. ಶಿಷ್ಯರೊಂದಿಗೆ ಏಕಾಂತದಲ್ಲಿರುವಾಗ ಯೇಸು ಏನನ್ನು ಮಾಡಿದನು (ವ. 34)?
12. ಬಿರುಗಾಳಿ ಎದ್ದಾಗ ಯೇಸು ಏನು ಮಾಡುತ್ತಿದ್ದನು (ವ. 35-41)?
13. ಯಾವುದರ ಬಗ್ಗೆ ಶಿಷ್ಯರು ಯೇಸುವನ್ನು ದೂರಿದರು (ವ. 35-41)?
14. ಯೇಸು ತನ್ನ ಶಿಷ್ಯರನ್ನು ಯಾಕೆ ಗದರಿಸಿದನು (ವ. 35-41)?
15. ಗಲಿಲಾಯ ಸಮುದ್ರದ ಮೇಲೆ ನಡೆದ ಅದ್ಭುತಕ್ಕೆ ಶಿಷ್ಯರು ಹೇಗೆ ಪ್ರತಿಕ್ರಿಯಿಸಿದರು (ವ. 35-41)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವಚನ 9 ರಲ್ಲಿನ ಯೇಸುವಿನ ಹೇಳಿಕೆಯ ಅರ್ಥವೇನು?
2. ಯೇಸುವಿನ ಶಿಷ್ಯರು ಆತನ ಸಾಮ್ಯದ ಬಗ್ಗೆ ಯಾಕೆ ಕೇಳಿದರೆಂಬುದಾಗಿ ನೀವು ಯೋಚಿಸುವಿರಿ (ವ. 10)?
3. ಯೇಸು "ದೇವರ ರಾಜ್ಯದ ಗುಟ್ಟುಗಳು ತನ್ನ ಶಿಷ್ಯರಿಗೇ ಕೊಡಲ್ಪಟ್ಟಿವೆ ಹೊರತು ಹೊರಗಿನವರಿಗಲ್ಲ" ಎಂಬುದಾಗಿ ಯಾಕೆ ಹೇಳಿರಬಹದು (ವ. 11)?
4. ವಚನ 13 ರಲ್ಲಿ ಯೇಸುವು ತನ್ನ ಶಿಷ್ಯರಿಗೆ ಕೇಳುವ ಪ್ರಶ್ನೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 13)?
5. ವಚನ 21-25 ರಲ್ಲಿ ಯೇಸು ಮೂರು ಸಂಗತಿಗಳ ಬಗ್ಗೆ ಮಾತನಾಡುತ್ತಾನೆ. ಅವುಗಳೇನಂದರೆ: ದೀಪ, ರಹಸ್ಯವಾಗಿರುವುದು ಮತ್ತು ಅಳತೆ. ಯೇಸುವಿನ ಮಾತಿನ ಹಿನ್ನಲೆಯಾಗಿರುವ ದೇವರ ರಾಜ್ಯಕ್ಕೆ ಈ ಸಂಗತಿಗಳು ಹೇಗೆ ಸಂಬಂಧಿಸುತ್ತವೆ?
6. ಬೀಜ ಬೆಳೆಯುವ ಸಾಮ್ಯದಲ್ಲಿನ ಯೇಸುವಿನ ಸಂದೇಶವನ್ನು ವಿವರಿಸಿರಿ (ವ. 26-29).
7. ಸಾಸಿವೆ ಕಾಳಿನ ಸಾಮ್ಯದಲ್ಲಿ ಯೇಸು ಹೇಳುವ ಮುಖ್ಯ ಅಂಶವೇನೆಂಬುದಾಗಿ ನೀವು ಯೋಚಿಸುವಿರಿ (ವ. 30-32)?
8. ಯೇಸು ಬಿರುಗಾಳಿಯನ್ನು ಶಾಂತಗೊಳಿಸುವ ಕುರಿತಾದ ಕಥೆಯಲ್ಲಿ ಶಿಷ್ಯರು ಮತ್ತು ಯೇಸುವಿನ ನಡುವಿನ ಒತ್ತಡವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 35-41)?
9. ನಿಮ್ಮ ಸತ್ಯವೇದವನ್ನು ನೋಡದೆ "ಯೇಸು ಬಿರುಗಾಳಿಯನ್ನು ನಿಲ್ಲಿಸಿದ್ದು" (ವ. 35-41) ಕಥೆಯನ್ನು ಪುನಃ ಹೇಳಿರಿ. ನಿಮ್ಮದೇ ಪದಗಳನ್ನು ಬಳಸಿರಿ ಮತ್ತು ಕಥೆಯನ್ನು ನಾಟಕೀಯವಾಗಿ ಮತ್ತು ಕೇಳಲು ಉತ್ಸಾಹಭರಿತವಾಗಿ ಮಾಡಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಮಾತನಾಡುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಕೆಳಕಂಡ ಅಂಶಗಳ ಮೂಲಕ ಬಿತ್ತುವವನ ಸಾಮ್ಯವನ್ನು ವಿಮರ್ಶಿಸಿರಿ:

   ಅ. ಸಾಮ್ಯವನ್ನು ಜ್ಞಾಪಿಸಿಕೊಳ್ಳಿರಿ. ಸತ್ಯವೇದವನ್ನು ನೋಡದಿರಲು ಪ್ರಯತ್ನಿಸಿ. ಹಾಗೆಯೇ ಯೇಸು ಸಾಮ್ಯವನ್ನು ವಿವರಿಸಿದ್ದನ್ನು ಜ್ಞಾಪಿಸಿಕೊಳ್ಳಿರಿ. ಪುನಃ ಸತ್ಯವೇದವನ್ನು ನೋಡದಿರಲು ಪ್ರಯತ್ನಿಸಿ.

   ಆ. ಈ ಸಾಮ್ಯವನ್ನು ಎರಡು ದೃಷ್ಟಿಕೋನಗಳಿಂದ ಓದಬಹುದು:

   1) ದೇವರ ರಾಜ್ಯದ ಸುವಾರ್ತೆಯ ಸ್ವೀಕಾರ: ನಾಲ್ಕು ವಿಭಿನ್ನ ಬಗೆಯ ನೆಲಗಳು ಮತ್ತು ಸುವಾರ್ತೆಯನ್ನು ಕೇಳಿ ಅದಕ್ಕೆ ಪ್ರತಿಕ್ರಿಯಿಸುವ ನಾಲ್ಕು ವಿಭಿನ್ನ ಬಗೆಯ ಜನರು.
   2) ದೇವರ ರಾಜ್ಯದ ಸುವಾರ್ತೆಯನ್ನು ಹರಡುವುದು: ಬಿತ್ತುವವನು. ಎಲ್ಲಾ ರೀತಿಯ ಸನ್ನಿವೇಶಗಳಲ್ಲಿ ಸುವಾರ್ತೆಯನ್ನು ಸಾರಲಾಗಿದ್ದು ಮತ್ತು ಸುವಾರ್ತೆಯ ಸಾರೋಣದ ಫಲ ವಾಸ್ತವಾಂಶವಾಗಿದೆ. ಸಾಮ್ಯ ಹೇಳುವುದರಲ್ಲಿ ಯಾವ ದೃಷ್ಟಿಕೋನವು ಮೇಲುಗೈ ಸಾಧಿಸುತ್ತದೆಂಬುದಾಗಿ ನೀವು ಯೋಚಿಸುವಿರಿ? ಮತ್ತು ಯೇಸುವಿನ ಸಾಮ್ಯ ವಿವರಣೆಯಲ್ಲಿ ಯಾವುದು ಮೇಲುಗೈ ಸಾಧಿಸುತ್ತದೆ? ನಿಮ್ಮ ಕಾರಣಗಳನ್ನು ತಿಳಿಸಿರಿ.

   ಇ. ದಕ್ಷಿಣ ಭಾರತದ ವಿಶ್ವಾಸಿಯಾದ ನೀವು ಈ ಸಾಮ್ಯದಿಂದ ಏನನ್ನು ಕಲಿಯುವಿರಿ?

   ಈ. ದಕ್ಷಿಣ ಭಾರತದ ಸುವಾರ್ತಾ ಸೇವಕರಾದ ನೀವು ಇಂದು ನಿಮ್ಮ ಸೇವೆಗಾಗಿ ಈ ಸಾಮ್ಯದಿಂದ ಏನನ್ನು ಕಲಿಯುವಿರಿ?

   ಉ. ದಕ್ಷಿಣ ಭಾರದಲ್ಲಿನ ಸಭೆಯು ಇಂದು ಈ ಸಾಮ್ಯದಿಂದ ಏನನ್ನು ಕಲಿಯಬಹುದು?

***ಬಿತ್ತುವವನು ಮತ್ತು ಬೀಜ*** ಎಂಬ ಸತ್ಯವೇದ ಅಧ್ಯಯನಕ್ಕಾಗಿ ಒಂದು ರೂಪುರೇಖೆಯನ್ನು ಸಿದ್ಧಪಡಿಸಲು ನಿಮ್ಮ ಉತ್ತರಗಳನ್ನು ಉಪಯೋಗಿಸಿರಿ.

2. ಈ ಪ್ರಶ್ನೆಗಳನ್ನು ಉತ್ತರಿಸುವುದರಿಂದ ಬೀಜ ಬೆಳೆಯುವ ಸಾಮ್ಯವನ್ನು ವಿಮರ್ಶಿಸಿರಿ:

ಅ. ಈ ಸಾಮ್ಯವು ಯಾವುದರ ಕುರಿತಾಗಿದೆ?

ಆ. ಬೀಜವು ಬೆಳೆಯುವುದನ್ನು ಹೇಗೆ ವರ್ಣಿಸಲಾಗಿದೆ? ಸುಗ್ಗಿಯ ಕಾಲವನ್ನು ಹೇಗೆ ವರ್ಣಿಸಲಾಗಿದೆ?

ಇ. ಈ ಸಾಮ್ಯವು ದೇವರ ರಾಜ್ಯದ ಯಾವ ವಿಷಯವನ್ನು ತಿಳಿಸುತ್ತದೆ?

ಈ. ದಕ್ಷಿಣ ಭಾರತದ ವಿಶ್ವಾಸಿಯಾದ ನೀವು ಇಂದು ಈ ಸಾಮ್ಯದಿಂದ ಏನನ್ನು ಕಲಿಯುವಿರಿ?

ಉ. ದಕ್ಷಿಣ ಭಾರತದ ಒಬ್ಬ ಸುವಾರ್ತಾ ಸೇವಕರಾಗಿ ನೀವು ಇಂದು ಈ ಸಾಮ್ಯದಿಂದ ನಿಮ್ಮ ಸೇವೆಗಾಗಿ ಏನನ್ನು ಕಲಿಯುವಿರಿ?

ಊ. ದಕ್ಷಿಣ ಭಾರತದಲ್ಲಿನ ಸಭೆಯು ಇಂದು ಈ ಸಾಮ್ಯದಿಂದ ಏನನ್ನು ಕಲಿಯಬಹುದು?

***ಬೀಜವು ಬೆಳೆಯುವುದರ*** ಎಂಬ ಸತ್ಯವೇದ ಅಧ್ಯಯನ ರೂಪುರೇಖೆಯನ್ನು ಸಿದ್ಧಪಡಿಸಲು ನಿಮ್ಮ ಉತ್ತರಗಳನ್ನು ಉಪಯೋಗಿಸಿರಿ.

3. ಈ ಪ್ರಶ್ನೆಗಳನ್ನು ಉತ್ತರಿಸುವುದರಿಂದ ***ಯೇಸು ಬಿರುಗಾಳಿಯನ್ನು ಶಾಂತಪಡಿಸಿದ್ದು*** ಎಂಬ ವಾಕ್ಯಭಾಗವನ್ನು ವಿಮರ್ಶಿಸಿರಿ.

ಅ. ಸಮುದ್ರದುದ್ದಕ್ಕು ಸಾಗುವ ಪ್ರಯಾಣವನ್ನು ಮಾರ್ಕನು ಹೇಗೆ ವರ್ಣಿಸುತ್ತಾನೆ? ಮೊದಲು ತೀರ್ಮಾನಿಸಿದವರಾರು? ಅವರು ಯಾಕೆ ದೋಣಿಯಲ್ಲಿ ಪ್ರಯಾಣಿಸುತ್ತಿದ್ದರು? ಅವರು ಏಕಾಂಗಿಗಳಾಗಿದ್ದರಾ? ಸ್ವಲ್ಪ ಕಾಲವಾದ ಮೇಲೆ ಏನಾಗುತ್ತದೆ?

ಆ. ಶಿಷ್ಯರನ್ನು ಮಾರ್ಕನು ಹೇಗೆ ವರ್ಣಿಸುತ್ತಾನೆ? ಅವರಿಗೆ ಹೇಗನಿಸಿರಬೇಕು (ಪ್ರಾರಂಭದಲ್ಲಿ, ಅಲೆಗಳು ಎದ್ದಾಗ, ಬಿರುಗಾಳಿ ನಿಂತ ನಂತರ)? ಅವರು ಯೇಸುವನ್ನು ಎಬ್ಬಿಸಿದ್ದು ಯಾಕೆ? ಯೇಸುವನ್ನು ಅವರು ಏನೆಂದು ದೂರಿದರು? ಅಲ್ಲದೆ ಅದ್ಭುತಕ್ಕೆ ಅವರು ಹೇಗೆ ಪ್ರತಿಕ್ರಯಿಸಿದರು?

ಇ. ಮಾರ್ಕನು ಯೇಸುವನ್ನು ಹೇಗೆ ವರ್ಣಿಸುತ್ತಾನೆ? ಆತನು ಬಿರುಗಳಿಯ ಹೊರತಾಗಿಯೂ ಯಾಕೆ ಮಲಗಿದ್ದನೆಂಬುದಾಗಿ ನೀವು ಯೋಚಿಸುವಿರಿ? ಶಿಷ್ಯರು ಆತನ ಬಳಿಗೆ ತಂದ ಸಮಸ್ಯೆಯನ್ನು ಆತನು ಹೇಗೆ ಬಗೆಹರಿಸುತ್ತಾನೆ? ಆತನು ತನ್ನ ಶಿಷ್ಯರಿಗೆ ಹೇಗೆ ಛೀಮಾರಿ ಹಾಕುತ್ತಾನೆ?

ಈ. ಈ ಕಥೆಯಿಂದ ಯೇಸುವಿನ ಬಗ್ಗೆ ನಾವೇನನ್ನು ಕಲಿಯುತ್ತೇವೆ?

ಉ. ಈ ಕಥೆಯಿಂದ ಶಿಷ್ಯತ್ವದ ಬಗ್ಗೆ ನಾವೇನನ್ನು ಕಲಿಯಬಹುದು?

ಒಂದು ಸತ್ಯವೇದ ಅಧ್ಯಯನಕ್ಕಾಗಿ ರೂಪುರೇಖೆಯೊಂದನ್ನು ಸಿದ್ಧಪಡಿಸಲು ನಿಮ್ಮ ಉತ್ತರಗಳನ್ನು ಉಪಯೋಗಿಸಿರಿ.

**ಮಾರ್ಕ ಅಧ್ಯಾಯ 5**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕನ ಸುವಾರ್ತೆಯ ಐದನೇ ಅಧ್ಯಾಯವು ಎರಡು ಮುಖ್ಯ ಅಂಶ(ವಾಕ್ಯಭಾಗ)ಗಳನ್ನು ಒಳಗೊಂಡಿದೆ:

1. ದೆವ್ವ ಹಿಡಿದವನೊಬ್ಬನನ್ನು ಸ್ವಸ್ಥಪಡಿಸುವುದು (ವ. 1-20)
2. ಒಬ್ಬ ಸತ್ತ ಹುಡುಗಿ ಮತ್ತು ರಕ್ತ ಕುಸುಮರೋಗದ ಸ್ತ್ರೀ (ವ. 21-43)

ಮೊದಲ ಕಥೆಯಲ್ಲಿ ಯೇಸು ತನ್ನ ಸೇವೆಯನ್ನು ಗಲಿಲಾಯ ಸಮುದ್ರದ ಪೂರ್ವ ಭಾಗದ ಅನ್ಯ ಜನರ ಸೀಮೆಯೊಳಕ್ಕೆ ಕೊಂಡೊಯ್ಯುತ್ತಿದ್ದಾನೆ. ಅನಂತರ ಆತನು ಗಲಿಲಾಯಕ್ಕೆ ಹಿಂತಿರುಗಿ ಬಂದು ತನ್ನ ಸ್ವಂತ ಜನರಾದ ಯೆಹೂದ್ಯರ ಮಧ್ಯೆ ಸೇವೆ ಮಾಡುತ್ತಿದ್ದಾನೆ. ಎರಡನೇ ವಾಕ್ಯ ಭಾಗದಲ್ಲಿ ಮಾರ್ಕನು ಬಹುಶಃ ಕಪೆರ್ನೌಮಿನಲ್ಲಿ ನಡೆದಿರಬಹುದಾದ ಎರಡು ಅದ್ಭುತದ ಕಥೆಗಳನ್ನು ತಿಳಿಸುತ್ತಿದ್ದಾನೆ: ಯೇಸುವು ಯಾಯೀರನ ಅಸ್ವಸ್ಥ ಮಗಳನ್ನು ನೋಡಲು ಹೋಗುತ್ತಿದ್ದ ಮಾರ್ಗದಲ್ಲಿ ಹನ್ನೆರಡು ವರ್ಷದಿಂದ ರಕ್ತ ಕುಸುಮರೋಗದಿಂದ ಬಳಲುತ್ತಿದ್ದ ಸ್ತ್ರೀಯೊಬ್ಬಳು ಯೇಸುವಿನ ಉಡುಪನ್ನು ಮುಟ್ಟಿದಾಗ ಗುಣ ಹೊಂದಿದಳು. ಅದೇ ವೇಳೆ ಆ ಹುಡುಗಿ ಸತ್ತು ಹೋಗಿರುತ್ತಾಳೆ, ಆದರೆ ಯೇಸು ಆಕೆಯನ್ನು ಬದುಕಿಸುತ್ತಾನೆ.

*ಆಚೆ ದಡಕ್ಕೆ … ಗೆರಸೇನರ* ಸೀಮೆಗೆ (ವ. 1): ಗಲಿಲಾಯ ಸಮುದ್ರದ ಪೂರ್ವ ಭಾಗವು ಮುಖ್ಯವಾಗಿ ಅನ್ಯಜನರಿಂದಲೇ ತುಂಬಿಕೊಂಡ ಸೀಮೆಯಾಗಿತ್ತು. ಗೆರಸ ಪಟ್ಟಣವು ದೆಕಪೊಲಿ ದೇಶದಲ್ಲಿ ಗಲಿಲಾಯ ಸಮುದ್ರದಿಂದ ಆಗ್ನೇಯಕ್ಕೆ ಸುಮಾರು 60 ಕಿ.ಮೀ. ದೂರದಲ್ಲಿ ನೆಲೆಯಾಗಿತ್ತು. ಸಮುದ್ರ ತೀರದ ಪೂರ್ವಭಾಗಕ್ಕೆ ಭೂಭಾಗವಿದ್ದಂತೆ ತೋರುತ್ತಿದ್ದು, ಇದರ ಹೆಸರನ್ನು ಇಟ್ಟ ಆ ಸಣ್ಣ ಹಳ್ಳಿಯು ಈಗ ಖೆರ್ಸಾ ಎಂದು ಪರಿಚಿತವಾಗಿದೆ. ಸುಮಾರು ಒಂದು ಮೈಲು ದೂರದಲ್ಲಿ ದಕ್ಷಿಣಕ್ಕೆ ಸಮುದ್ರ ತೀರದಿಂದ 40 ಮೀ. ಅಂತರದಲ್ಲಿ ಕಡಿದಾದ ಇಳಿಜಾರುಗಳಿವೆ, ಅಲ್ಲಿಂದ ಸ್ವಲ್ಪವೇ ದೂರದಲ್ಲಿ ಗುಹೆಗಳಿವೆ ಅವಗಳನ್ನು ವಾಸಸ್ಥಾನಗಳಾಗಿ ಉಪಯೋಗಿಸಿದಂತೆ ತೋರುತ್ತದೆ.

ಸಮಾಧಿಯ ಗವಿಗಳೊಳಗಿಂದ (ವ. 3): ಆ ದಿನಗಳಲ್ಲಿ ಅದೇ ಗವಿಗಳನ್ನು ಸತ್ತವರನ್ನು ಹೂಣಿಡುವದಕ್ಕಾಗಿ ಮತ್ತು ಕಡು ಬಡವರು ವಾಸಿಸುವದಕ್ಕಾಗಿ ಸಹ ಉಪಯೋಗಿಸಲಾಗುತಿತ್ತು.

*ನನ್ನ ಹೆಸರು ದಂಡು, ನಾವು ಬಹು ಮಂದಿ ಇದ್ದೇವೆ* (ವ. 9): ಒಂದು ರೋಮನ್ ದಂಡು 6000 ಪುರುಷರನ್ನು ಒಳಗೊಂಡ ಒಂದು ಸೇನಾ ಘಟಕವಾಗಿತ್ತು. ಇಲ್ಲಿನ ಹೆಸರು ಆ ಮನುಷ್ಯನು ಅನೇಕ ದೆವ್ವಗಳಿಂದ ಪೀಡಿತವಾಗಿದ್ದನೆಂಬುದನ್ನು ಸೂಚಿಸುತ್ತದೆ.

*ಈ ಸೀಮೆಯಿಂದ ಹೊರಡಿಸಬೇಡ* (ವ. 10): ಯೇಸುವು ತಮ್ಮನ್ನು ನಿತ್ಯವಾದ ದಂಡನೆಗೆ ತಳ್ಳುತ್ತಾನೆ ಎಂಬುದಾಗಿ ದೆವ್ವಗಳು ಭಯಪಟ್ಟವು (ಹೋಲಿಸಿ "ಪಾತಾಳಕ್ಕೆ ಹೋಗಿ ಬಿಡುವಂತೆ ನಮಗೆ ಆಜ್ಞೆ ಮಾಡಬೇಡ ಎಂದು ಅವು ಆತನನ್ನು ಬೇಡಿಕೊಂಡವು" ಲೂಕ 8:31). ಪಾತಾಳವು ದುರಾತ್ಮಗಳು ಮತ್ತು ಸೈತಾನನನ್ನು ಬಂಧನದಲ್ಲಿಡುವ ಸ್ಥಳವಾಗಿದೆ (ಹೋಲಿಸಿ ಪ್ರಕಟನೆ 9:1).

*ಹಂದಿಗಳು* (ವ. 12): ಹಂದಿಗಳು ಯೆಹೂದ್ಯರಿಗೆ ಅಶುದ್ಧ ಪ್ರಾಣಿಗಳಾಗಿದ್ದವು ಮತ್ತು ಅವುಗಳನ್ನು ತಿನ್ನಲು ಅನುಮತಿ ಇರಲಿಲ್ಲ (ಯಾಜಕ 11:7-8 ನ್ನು ನೋಡಿ). ಈ ಕಥೆಯು ಸಂಪೂರ್ಣವಾಗಿ ಒಂದು ಅನ್ಯಜನಾಂಗದ ಪ್ರದೇಶವಾಗಿರುವ ದೆಕಪೊಲಿ ಎಂಬ ಸ್ಥಳದಲ್ಲಿ ಸಂಭವಿಸುತ್ತದೆ.

*ದೆಕಪೊಲಿ* (ವ. 20): ದೆಕಪೊಲಿ ದೇಶವು ಸ್ವತಂತ್ರ ಗ್ರೀಕ್ ಪಟ್ಟಣಗಳ ಒಂದು ಒಕ್ಕೂಟವನ್ನು ಒಳಗೊಂಡಿತ್ತು. ಅವುಗಳಲ್ಲಿ ಹೆಚ್ಚಿನವೆಲ್ಲ ಯೊರ್ದನ್ ಹೊಳೆಯ ಪೂರ್ವ ಭಾಗದಲ್ಲಿ ಇದ್ದವು. ಈ ಹೆಸರಿನ ಅರ್ಥವೇನೆಂದರೆ "ಹತ್ತು ಪಟ್ಟಣಗಳು", ಆದರೆ ಹೊಸ

ಒಡಂಬಡಿಕೆಯ ಕಾಲದಲ್ಲಿ ಈ ಒಕ್ಕೂಟವು ಹತ್ತಕ್ಕಿಂತ ಹೆಚ್ಚು ಪಟ್ಟಣಗಳನ್ನು ಒಳಗೊಂಡಿತ್ತು. ದೆಕಪೊಲಿಯು ಪ್ರಧಾನವಾಗಿ ಅನ್ಯಜನರು ನೆಲಸಿರುವ ಹಾಗೂ ಗ್ರೀಕ್ ಭಾಷೆಯನ್ನು ಆಡುವ ಒಂದು ಪ್ರದೇಶವಾಗಿತ್ತು.

*ಸಭಾಮಂದಿರದ ಅಧಿಕಾರಿಗಳು* (ವ. 22): ಸಭಾಮಂದಿರದ ಅಧಿಕಾರಿಯು ಒಬ್ಬ ಶ್ರೀಸಾಮಾನ್ಯನಾಗಿದ್ದು ಹೆಚ್ಚಾಗಿ ಒಬ್ಬ ಫರಿಸಾಯನಾಗಿರುತ್ತಿದ್ದನು. ಈತನು ಸಭಾಮಂದಿರದ ಆಡಳಿತಾಧಿಕಾರಿಯಾಗಿದ್ದನು. ಆ ಕಟ್ಟಡವನ್ನು ನೋಡಿಕೊಳ್ಳುತ್ತಿದ್ದನು. ಅಲ್ಲದೆ ಕಾರ್ಯಕ್ರಮಗಳಲ್ಲಿ ಸಹ ಬೋಧಿಸುವುದು ಮತ್ತು ಮೇಲ್ವಿಚಾರಣೆಯನ್ನು ಸಹ ಮಾಡುತ್ತಿದ್ದನು. ಹೆಚ್ಚಿನ ಸಭಾ ಮಂದಿರಗಳಿಗೆ ಒಬ್ಬನೇ ಅಧಿಕಾರಿಯಿರುತ್ತಿದ್ದನು.

*ಹನ್ನೆರಡು ವರುಷದಿಂದ ರಕ್ತ ಕುಸುಮರೋಗವಿದ್ದ* (ವ. 25): ಆಕೆಯ ರಕ್ತ ಸೋರಿಕೆಯು ಆಕೆಯನ್ನು ಸಾಂಪ್ರದಾಯಿಕ (ಔಪಚಾರಿಕವಾಗಿ) ಅಶುದ್ಧಳಾಗಿಸಿತ್ತು (ನೋಡಿ ಯಾಜಕ 15:25-28). ತನ್ನ ಪರಿಸ್ಥಿತಿಯ ಜಾಗೃತಿಯನ್ನು ಜನರಲ್ಲಿ ಮೂಡಿಸದೆ ಆಕೆಯು ಸಾರ್ವಜನಿಕ ಸ್ಥಳಗಳಲ್ಲಿ ಓಡಾಡಲು ಅನುಮತಿಯಿರಲಿಲ್ಲ. ಯೇಸುವಿನ ಉಡುಪನ್ನು ಮುಟ್ಟುವುದರ ಮುಖಾಂತರ ಆಕೆ ಯೇಸುವನ್ನು ಮೈಲಿಗೆ ಮಾಡಿದಳು.

*ಮಗಳೇ* (ವ. 34): ಇದು ಯೆಹೂದ್ಯರ ನಡುವೆ ಒಂದು ಗೌರವದ ಸಂಕೇತವಾಗಿದೆ. ಆದರೆ ಈ ಮಾತನ್ನು ಉಪಯೋಗಿಸುವುದರ ಮೂಲಕ ಯೇಸು ಆ ಸ್ತ್ರೀಯನ್ನು ಸಹ ದೇವರ ಕುಟುಂಬಕ್ಕೆ ಸ್ವಾಗತಿಸಿದನು.

*ಸ್ವಸ್ಥ ಮಾಡಿತು* (ವ. 34): ಗ್ರೀಕ್ ಪದದ ಅರ್ಥ "ಸ್ವಸ್ಥ" ಮತ್ತು "ರಕ್ಷಿಸು" ಎಂಬುದಾಗಿದೆ. ಶಾರೀರಿಕ ಸ್ವಸ್ಥತೆಗಾಗಿ ಯೇಸು ಕ್ರಿಸ್ತನಲ್ಲಿನ ಸ್ತ್ರೀಯ ನಂಬಿಕೆ, ಅದೇ ಸಮಯದಲ್ಲಿ ಪಾಪಗಳಿಂದ ರಕ್ಷಣೆಗಾಗಿ ಆತನಲ್ಲಿನ ನಂಬಿಕೆಯಾಗುವುದಾಗಿದೆ (2:1-12 ರಲ್ಲಿ ಪಾರ್ಶ್ವವಾಯುರೋಗಿಗೆ ಏನಾಗುತ್ತದೆಂಬುದರೊಂದಿಗೆ ಹೋಲಿಸಿ).

*ಪೇತ್ರ, ಯಾಕೋಬ ಮತ್ತು ಯೋಹಾನ* (ವ. 37): ಈ ಮೂರು ಶಿಷ್ಯರುಗಳು ಪ್ರತ್ಯೇಕವಾಗಿ ಯೇಸುವಿನೊಂದಿಗೆ ಒಂದು ನಿಕಟವಾದ ಸಂಬಂಧವನ್ನಿಟ್ಟುಕೊಂಡಿದ್ದರು. ಹಾಗಾಗಿ ಈ ಸಂದರ್ಭದಲ್ಲಿ ಯೇಸುವಿನೊಂದಿಗೆ ಹೋಗುವುದಕ್ಕಾಗಿ ಈ ನಿಕಟ ಶಿಷ್ಯರನ್ನು ಮಾತ್ರ ಆಹ್ವಾನಿಸಲಾಯಿತು.

*ಅಳುವುದನ್ನೂ, ಗೋಳಾಡುವುದನ್ನೂ* (ವ. 38): ಆ ದಿನಗಳಲ್ಲಿ ಮರಣದ ಸಮಯದಲ್ಲಿ ವೃತ್ತಿ ಪರವಾಗಿ ಗೋಳಾಡುವವರನ್ನು ಉಪಯೋಗಿಸುವುದು ಸಾಮಾನ್ಯವಾಗಿತ್ತು. ಆದರೆ ಆ ಹುಡುಗಿಯು ಆಗಷ್ಟೇ ಸತ್ತದ್ದರಿಂದ ಗೋಳಾಡುವವರನ್ನು ಸಿದ್ಧಗೊಳಿಸಲು ಅಲ್ಲಿ ಸಾಕಾಷ್ಟು ಸಮಯವಿರಲಿಲ್ಲ.

*ಸತ್ತಿಲ್ಲ, ನಿದ್ರೆ ಮಾಡುತ್ತಾಳೆ* (ವ. 39-40): ಹುಡುಗಿಯು ಶಾಶ್ವತವಾಗಿ ಸತ್ತಿಲ್ಲ ಆಕೆಯು ಬೇಗನೇ ಬದುಕುವಳು ಎಂಬುದು ಯೇಸುವಿನ ಮಾತಿನ ಅರ್ಥವಾಗಿದೆ. ಆದರೆ ಜನರು ಮತ್ತು ಗೋಳಾಡುವವರು ಯೇಸು ಹಾಸ್ಯ ಮಾಡುತ್ತಿದ್ದನೆಂಬುದಾಗಿ ಯೋಚಿಸಿದರು (ವ. 40).

*ಅವಳ ಕೈ ಹಿಡಿದು* (ವ. 41): ಸತ್ತ ವ್ಯಕ್ತಿಯನ್ನು ಮುಟ್ಟುವವನು ಸಾಂಪ್ರದಾಯಿಕವಾಗಿ ಅಶುದ್ಧನಾಗುವನು ಎಂಬುದಾಗಿ ಯೆಹೂದಿ ಶಾಸ್ತ್ರವು ಬೋಧಿಸಿತ್ತು (ಯಾಜಕ 22:4).

*ತಲಿಥಾ ಕೂಮ್* (ವ. 41): ಸುವಾರ್ತಾ ಬರಹಗಾರರಲ್ಲಿ ಮಾರ್ಕನೊಬ್ಬನೇ ಅರಾಮಿಕ್ ಹೇಳಿಕೆಯನ್ನು ಉಪಯೋಗಿಸಿದ್ದಾನೆ. ಆ ಸಮಯದಲ್ಲಿ ಪ್ಯಾಲೆಸ್ತೇನಿನ ಒಂದು ಭಾಷೆಯಾಗಿತ್ತು. ಸಾಮಾನ್ಯವಾಗಿ ಇದು ಯೇಸು ಮತ್ತು ಆತನ ಶಿಷ್ಯರ ಮಾತೃ ಭಾಷೆಯಾಗಿದ್ದಿರಬೇಕು. ಆದರೆ ಬಹುಶಃ ಅವರು ಇಬ್ರಿಯ ಮತ್ತು ಗ್ರೀಕ್ ಭಾಷೆಯನ್ನು ಸಹ ಬಲ್ಲವರಾಗಿದ್ದರು.

*ಆತನು ಇದು ಯಾರಿಗೂ ತಿಳಿಯಬಾರದೆಂದು ಬಹುಖಂಡಿತವಾಗಿ ಹೇಳಿದನು* (ವ. 43): 1:34 ರಲ್ಲಿ "ಮೆಸ್ಸೀಯನ ರಹಸ್ಯಗಳು" ಕುರಿತಾದುದ್ದನ್ನು ನೋಡಿ

**ಪ್ರಶ್ನೆಗಳು**

1. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೇನ್ ನಕ್ಷೆಯಲ್ಲಿ*** ಗಲಿಲಾಯ ಸಮುದ್ರ ಮತ್ತು ದೆಕಪೊಲಿಯನ್ನು ಗುರುತಿಸಿ.
2. ದೆವ್ವ ಹಿಡಿದವನ ಕರುಣಾಜನಕ ಸ್ಥಿತಿಯನ್ನು ಮಾರ್ಕನು ಹೇಗೆ ವರ್ಣಿಸುತ್ತಾನೆ? ಪಟ್ಟಿ ಮಾಡಿರಿ ( ವ. 2-5).
3. ಯೇಸುವನ್ನು ಕಂಡೊಡನೆ ದೆವ್ವ ಹಿಡಿದವನು ಏನು ಮಾಡಿದನು (ವ. 6-7)?
4. ದೆವ್ವಗಳು ಯೇಸುವನ್ನು ಏನೆಂದು ಬೇಡಿಕೊಂಡವು (ವ. 10-10)?
5. ದೆವ್ವಗಳಿಗೆ ಏನಾಯಿತು (ವ. 11-13)?
6. ಯೇಸುವು ದೆವ್ವಗಳಿಂದ ಬಿಡಿಸಿದ ಮೇಲೆ, ಆ ಮನುಷ್ಯನ ಸ್ಥಿತಿಯನ್ನು ಮಾರ್ಕನು ಹೇಗೆ ವರ್ಣಿಸುತ್ತಾನೆ (ವ. 15)?
7. ದೆವ್ವ ಹಿಡಿದಿದ್ದವನು ಬಿಡುಗಡೆಯಾದುದ್ದಕ್ಕೆ ಗೆರಸೇನರ ಸೀಮೆಯ ಜನರು ಹೇಗೆ ಪ್ರತಿಕ್ರಯಿಸುತ್ತಾರೆ? ಪಟ್ಟಿ ಮಾಡಿ (ವ. 14-20).
8. ದೆವ್ವಗಳಿಂದ ಬಿಡುಗಡೆಯಾದವನಿಗೆ ಯೇಸು ಏನು ಮಾಡಬೇಕೆಂದು ಹೇಳಿದನು (ವ. 18-20)?
9. ಯಾಯೀರನು ಯಾರು ಮತ್ತು ಯಾಕೆ ಆತನು ಯೇಸುವಿನ ಬಳಿ ಬಂದನು (ವ. 22-23)?
10. ಜನರ ಗುಂಪಿನ ಮಧ್ಯೆ ಸ್ತ್ರೀಯ ಬಗ್ಗೆ ನಾವು ಏನನ್ನು ಕಲಿಯುತ್ತೇವೆ? ಪಟ್ಟಿ ಮಾಡಿರಿ (ವ. 25-33).
11. ಯೇಸು ಜನರಿಗೆ ನನ್ನ ಉಡುಪನ್ನು ಯಾರು ಮುಟ್ಟಿದರು ಎಂದು ಯಾಕೆ ಹೇಳಿದನು (ವ. 30)?
12. ಯೇಸುವಿನ ಪ್ರಶ್ನೆಗೆ ಶಿಷ್ಯರು ಹೇಗೆ ಪ್ರತಿಕ್ರಯಿಸಿದರು (ವ. 31)?
13. ಯಾಯೀರನ ಕಡೆಯವರು ಗುರುವಿಗೆ ಇನ್ನೇಕೆ ತೊಂದರೆ ಕೊಡುವುದು ಎಂದು ಯಾಕೆ ಹೇಳಿದರು (ವ. 35)?
14. ಯಾಯೀರನ ಮನೆಗೆ ಯೇಸುವಿನೊಂದಿಗೆ ಹೋದ ಶಿಷ್ಯರು ಯಾರು? ಮತ್ತು ಯಾಕೆ ಉಳಿದ ಶಿಷ್ಯರು ಹಿಂದೆಯೇ ಉಳಿದರು (ವ. 37-38)?
15. ಜನರು ಯೇಸುವಿಗೆ ಯಾಕೆ ಹಾಸ್ಯ ಮಾಡಿದರು (ವ. 39-40)?
16. "ತಲಿಥಾ ಕೂಮ್" ಎಂಬ ಅರಾಮಿಕ್ ಹೇಳಿಕೆಯ ಅರ್ಥವೇನು (ವ. 41)?
17. ಹುಡುಗಿಯ ವಯಸ್ಸು ಎಷ್ಟಾಗಿತ್ತು (ವ. 42)?
18. ಅದ್ಭುತಕ್ಕೆ ಹುಡುಗಿಯ ತಂದೆತಾಯಿ ಹೇಗೆ ಪ್ರತಿಕ್ರಯಿಸಿದರು (ವ. 42)?
19. ಹಡುಗಿಯ ಮನೆಯವರಿಗೆ ಯೇಸು ಏನು ಮಾಡಬೇಕೆಂದು ಹೇಳಿದನು (ವ. 43)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಸತ್ಯವೇದವನ್ನು ನೋಡದೆ ಯೇಸು ಮತ್ತು ದೆವ್ವ ಹಿಡಿದ ಮನುಷ್ಯನ ನಡುವಿನ ಮುಖಾಮುಖಿಯನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
2. ಯಾಕೆ ಗೆರಸೇನರ ಪ್ರಾಂತ್ಯದವರು ಯೇಸುವಿನ ಬಳಿ ತಮ್ಮ ಸೀಮೆಯನ್ನು ಬಿಟ್ಟು ಹೋಗಬೇಕೆಂದು ಕೇಳಿಕೊಂಡರೆಂಬುದಾಗಿ ನೀವು ಯೋಚಿಸುವಿರಿ? ಯಾಕೆ ಅವರು ಯೇಸುವಿನ ಬಳಿ ಇನ್ನು ಅಲ್ಲೇ ಇರಬೇಕೆಂದು ಮತ್ತು ಇನ್ನೂ ಹೆಚ್ಚಿನ ಅದ್ಭುತಗಳನ್ನು ಮಾಡಬೇಕೆಂದು ಕೇಳಿಕೊಳ್ಳಲಿಲ್ಲ? ಅವರ ಆಧ್ಯತೆಯೇನೆಂಬುದಾಗಿ ನೀವು ಆಲೋಚಿಸುವಿರಿ?

3. ಮತ್ತಾಯ 8:28-34, ಮಾರ್ಕ 5:1-20 ಮತ್ತು ಲೂಕ 8:26-37 ರಲ್ಲಿ ಯೇಸು ದೆವ್ವ ಹಿಡಿದ ಮನುಷ್ಯನನ್ನು ಬಿಡಿಸುವ ಸಮಾಂತರವಾದ ವಿಷಯಗಳನ್ನು ಹೋಲಿಸಿರಿ ಮತ್ತು ಕೆಲವು ವ್ಯತ್ಯಾಸಗಳನ್ನು ಪಟ್ಟಿಮಾಡಿರಿ. ಈ ವ್ಯಾತ್ಯಾಸಗಳನ್ನು ನೀವು ಹೇಗೆ ವಿವರಿಸುವಿರಿ?
4. ಯೇಸು ಸ್ತ್ರೀಗೆ ಹೇಳುವ "ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು" ಎಂಬ ಹೇಳಿಕೆ ಮತ್ತು ಯಾಯೀರನಿಗೆ ಹೇಳುವ "ಅಂಜಬೇಡ, ನಂಬಿಕೆ ಮಾತ್ರ ಇರಲಿ" ಎಂಬ ಆಧರಣೆಯ ಅರ್ಥವೇನೆಂಬುದಾಗಿ ನೀವು ಯೋಚಿಸುವಿರಿ?
5. ವಚನ 21-43 ರಲ್ಲಿ ಹೆಣೆದುಕೊಂಡಿರುವ ಎರಡು ಕಥೆಗಳಲ್ಲಿರುವ ಸಾಮಾನ್ಯ ಅಂಶಗಳಾವುವು?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಈ ಅಧ್ಯಯನದಲ್ಲಿ ನೀವು ಕಲಿತಿರುವ ಅಂಶಗಳ ಬೆಳಕಿನಡೆಯಲ್ಲಿ ಯೇಸು ದೆವ್ವಹಿಡಿದ ಮನುಷ್ಯನನ್ನು ಬಿಡಿಸುವ ಕಥೆಯನ್ನು (ವ. 1-20) ವಿಮರ್ಶಿಸಿರಿ.
   - ಕಥೆಯ ಸ್ಥಳ ಮತ್ತು ಸಂದರ್ಭ
   - ದೆವ್ವ ಹಿಡಿದವನ ದಯನೀಯ ಪರಿಸ್ಥಿತಿ
   - ಯೇಸು ಮತ್ತು ದೆವ್ವಗಳ ನಡುವಿನ ಮುಖಾಮುಖಿ
   - ತನ್ನ ಬಿಡುಗಡೆಯ ಮೂಲಕ ಆ ಮನುಷ್ಯನು ಅನುಭವಿಸಿದ ಮಹತ್ತರವಾದ ಬದಲಾವಣೆ
   - ಸ್ಥಳಿಯ ಜನರ ಪ್ರತಿಕ್ರಿಯೆಗಳು: ಬದಲಾದ ಮನುಷ್ಯನನ್ನು ಕಂಡಾಗ ಅವರಲ್ಲಾದ ಭಯ, ಬಿಡಿಸಿದ್ದಕ್ಕಾಗಿ ಯೇಸುವಿನ ಮೇಲಣ ಅವರ ಕೋಪ, ಆ ಮನುಷ್ಯನ ಸಾಕ್ಷಿಯನ್ನು ಕೇಳಿದಾಗ ಕಂಡುಬಂದ ಅವರ ಅಚ್ಚರಿ.

ಈ ಕಥೆಯ ಬೆಳಕಿನಡಿಯಲ್ಲಿ ನಿಮ್ಮನ್ನು, ನಿಮ್ಮ ಜೀವನ ಮತ್ತು ನಿಮ್ಮ ಸೇವೆನ್ನು ವಿಮರ್ಶಿಸಿರಿ.

ಈ ಕಥೆಯಲ್ಲಿ ನಿಮ್ಮನ್ನು ನೀವು ಎಲ್ಲಿ ಕಾಣುವಿರಿ: ಶಿಷ್ಯರಂತೆ ಯೇಸು ಮಾಡುವುದನ್ನು ನೀವು ನೋಡುವವರಾಗಿದ್ದೀರಾ? ನೀವೊಬ್ಬ ಬಿಡುಗಡೆಯನ್ನು ಬಯಸುವ ವ್ಯಕ್ತಿಯಾಗಿದ್ದೀರಾ? ನೀವೊಬ್ಬ ಆಸ್ತಿ ಮತ್ತು ಸಂಪತ್ತುಳ್ಳ ವ್ಯಕ್ತಿಯಾಗಿದ್ದು ಯೇಸುವಿನ ಬಿಡುಗಡೆಯ ಕಾರ್ಯದಿಂದ ನಕಾರಾತ್ಮಕವಾದ ಪರಿಣಾಮ ಎದರಿಸುತ್ತಿರುವಿರಾ? ಯೇಸುವಿನ ಬಳಿ ಇಲ್ಲಿಂದ ಬಿಟ್ಟು, ಬೇರೆಡೆ ಹೋಗಿ ಕಾರ್ಯ ಮಾಡು ಎಂಬುದಾಗಿ ಕೇಳುರುವಿರಾ? ಗುಣ ಹೊಂದಿದ ಮತ್ತು ಬಿಡುಗಡೆ ಹೊಂದಿದವರೊಂದಿಗೆ ಸಂತೋಷ ಪಡುವ ಒಬ್ಬ ವ್ಯಕ್ತಿ ನೀವಾಗಿರುವಿರಾ? ಯೇಸು ನಿಮ್ಮ ಜೀವನದಲ್ಲಿ ಮಾಡಿದ ಸಂಗತಿಗಳ ಬಗ್ಗೆ ಸಾಕ್ಷಿ ಹೇಳುವ ವ್ಯಕ್ತಿ ನೀವಾಗಿರುವಿರಾ?

ಈ ಕಥೆಯಲ್ಲಿ ನಿಮ್ಮ ಸಭೆ ಮತ್ತು ಸೇವೆಯನ್ನು ನೀವು ಎಲ್ಲಿ ಕಾಣುವಿರಿ? ಈ ರೀತಿಯ ಬಲವಾದ ಮುಖಾಮುಖಿಯನ್ನು ನೀವು ಅನುಭವಿಸಿರುವಿರಾ? ಈ ರೀತಿಯ ನಾಟಕೀಯ ಬಿಡುಗಡೆಯನ್ನು ನೀವು ಕಂಡಿರುವಿರಾ? ದೇವರ ಕಾರ್ಯಕ್ಕೆ ಈ ರೀತಿಯ ಲೌಕಿಕ ಪ್ರತಿಕ್ರಿಯೆ ಮತ್ತು ತಿರಸ್ಕಾರವನ್ನು ಹಾದು ಹೋಗಿರುವಿರಾ? ಕೊನೆಯದಾಗಿ ಈ ಕಥೆ ಮತ್ತು ಈ ಅಧ್ಯಯನದಲ್ಲಿನ ಮಾಹಿತಿಗಳ ಆಧಾರದ ಮೇಲೆ ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ. ಊಹೆಗಳು ಬೇಡ.

2. ರಕ್ತ ಕುಸುಮರೋಗದಿಂದ ಬಳಲುತ್ತಿದ್ದ ಸ್ತ್ರೀಯನ್ನು ಯೇಸು ಗುಣಪಡಿಸಿದ್ದರ ಕುರಿತಾದ ಕಥೆಯನ್ನು (ವ. 24-34) ಈ ಅಧ್ಯಯನದಲ್ಲಿ ಕಲಿತ ವಿಷಯಗಳ ಬೆಳಕಿನಡಿಯಲ್ಲಿ ವಿಮರ್ಶಿಸಿರಿ:
   - ಕಥೆಯ ಸ್ಥಳ ಮತ್ತು ಸಂದರ್ಭ
   - ಯಾಯೀರನ ಪರಿಸ್ಥಿತಿಯು ತೀರಾ ಕೆಟ್ಟದಾಗುವುದು
   - ಅಂಜಬೇಡ, ನಂಬಿಕೆಯಿರಲಿ ಎಂಬ ಯೇಸುವಿನ ಆದರಣೆ
   - ಜನರು ಯೇಸುವನ್ನು ಹಾಸ್ಯಮಾಡುವುದು

- ಅದ್ಭುತ
- ಯೇಸು “ಪುನರುತ್ಥಾನ ಮತ್ತು ಜೀವ”
- ಹುಡುಗಿಗಾಗಿ ಯೇಸುವಿನ ಕಾಳಜಿ

ಅನಂತರ ಈ ಕಥೆಯ ಆಧಾರದ ಮೇಲೆ ಒಂದು ಸತ್ಯವೇದ ಅಧ್ಯಯನ ಅಥವಾ ಒಂದು ಧ್ಯಾನ ಅಥವಾ ಪ್ರಸಂಗವನ್ನು ಸಿದ್ಧಪಡಿಸಿರಿ.



**ಮಾರ್ಕ ಅಧ್ಯಾಯ 6**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕ 6 ನೇ ಅಧ್ಯಾಯವು ಆರು ವಾಕ್ಯಭಾಗಗಳನ್ನು ಒಳಗೊಂಡಿದೆ:

1. ಯೇಸು ನಜರೇತಿನಲ್ಲಿ ತಿರಸ್ಕಾರ (ತಾತ್ಸಾರ) ಹೊಂದಿದ್ದು, ವ. 1-6
2. ಯೇಸು 12 ಮಂದಿಯನ್ನು ಕಳುಹಿಸುವುದು, ವ. 7-13
3. ಸ್ನಾನಿಕನಾದ ಯೋಹಾನನ ತಲೆ ಹೊಯಿಸಿದ್ದು, ವ. 14-29
4. ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು, ವ. 30-44
5. ಯೇಸು ನೀರಿನ ಮೇಲೆ ನಡೆದದ್ದು, ವ. 45-52
6. ಯೇಸು ಗೆನೆಜರೇತಿನಲ್ಲಿ ರೋಗಿಯನ್ನು ಗುಣಪಡಿಸಿದ್ದು, 53-66

ಈ ಅಧ್ಯಾಯವು ಬಾಲ್ಯದಿಂದಲೂ ತನ್ನನ್ನು ಅರಿತ ಜನರು ಯೇಸುವನ್ನು ತಿರಸ್ಕರಿಸುವುದರೊಂದಿಗೆ ಪ್ರಾರಂಭವಾಗುತ್ತದೆ. ಇದು ಯೇಸು ಒಬ್ಬ ಪ್ರಸಿದ್ಧ ಮತ್ತು ಜನಪ್ರಿಯ ವೈದ್ಯನಾಗಿ, ಗಲಿಲಾಯದಲ್ಲಿ ಕಾರ್ಯ ಮಾಡುವ ಒಂದು ಸಾರಾಂಶದೊಂದಿಗೆ ಮುಕ್ತಾಯವಾಗುತ್ತದೆ. ಸ್ನಾನಿಕನಾದ ಯೋಹಾನನ ಸಾವಿನ ಕುರಿತಾದ ಕಥೆಯು ಅಪೊಸ್ತಲರ ಯಶಸ್ವಿ ಸೇವಾ ಪ್ರಯಾಣದ ಕುರಿತಾದ ವಿಷಯದ ಮಧ್ಯದಲ್ಲಿ ಇಡಲ್ಪಟ್ಟಿದೆ.

*ತನ್ನ ಊರಿಗೆ* (ವ. 1): ನಜರೇತ್ ಯೇಸುವಿನ ಸ್ವಂತ ಊರಾಗಿತ್ತು.

*ಬಡಗಿಯಲ್ಲವೇ* (ವ. 3): ಇದಕ್ಕೆ ಸಮಾನವಾದ ಮತ್ತಾಯನ ಸುವಾರ್ತೆಯಲ್ಲಿ "ಬಡಗಿಯ ಮಗನಲ್ಲವೇ" ಎಂದಿದೆ (ಮತ್ತಾ. 13:55). ಕೇವಲ ಮಾರ್ಕನು ಮಾತ್ರ ಸ್ವತಃ ಯೇಸುವನ್ನು ಬಡಗಿ ಎಂದು ಹೇಳುತ್ತಾನೆ. ಗ್ರೀಕ್ ಪದವು "ಕಲ್ಲು ಕೆಲಸದವನು, ಅಕ್ಕಸಾಲಿಗ ಅಥವಾ ಕಟ್ಟಡ ಕೆಲಸದವನು" ಎಂಬುದಾಗಿ ಅರ್ಥ ಕೊಡುತ್ತದೆ. ಇದೊಂದು ಅಲಂಕಾರಿಕ ಪ್ರಶ್ನೆಯಾಗಿದ್ದು, ಇದನ್ನು "ಯೇಸುವಿನ ಕುರಿತಾದ ಒಂದು ನಕಾರಾತ್ಮಕ ಹೇಳಿಕೆ", "ಈತನೂ ನಮ್ಮಂತೆ ಒಬ್ಬ ಸಾಮಾನ್ಯ ಕೆಲಸದವನಲ್ಲವೇ" ಎಂಬುದಾಗಿ ಅರ್ಥೈಸಿಕೊಳ್ಳಬೇಕು.

*ಮರಿಯಳ ಮಗನಲ್ಲವೇ* (ವ. 3): ಇದೊಂದು ಅಸಭ್ಯ ಮತ್ತು ನಕರಾತ್ಮಕ ಹೇಳಿಕೆಯಾಗಿದೆ. ಈ ವೇಳೆಯಲ್ಲಿ ಯೇಸೇಫನು ಸತ್ತಿದ್ದರೂ ಜನರು ಯೇಸುವನ್ನು "ಯೋಸೇಫನ ಮಗನು" ಎಂಬುದಾಗಿ ಕರೆಯಬಹುದಾಗಿತ್ತು. "ಮರಿಯಳ ಮಗನಲ್ಲವೇ" ಎಂದು ಹೇಳುವುದರ ಮೂಲಕ ಅವರು ಯೇಸುವು ಹಾದರಕ್ಕೆ ಹುಟ್ಟಿದವನೆಂಬುದಾಗಿ ಅರ್ಥ ಕಲ್ಪಿಸುತ್ತಾರೆ.

*ಯಾಕೋಬ, ಯೋಸೆ, ಯೂದ, ಸೀಮೋನರ ಅಣ್ಣನಲ್ಲವೇ* (ವ. 3): ಯೇಸುವಿನ ತಮ್ಮಂದಿರು ಮತ್ತು ತಂಗಿಯಂದಿರು ಮರಿಯಳು ಮತ್ತು ಯೋಸೇಫನಿಗೆ ಹುಟ್ಟಿದವರಾಗಿದ್ದರು. ಅವರೆಲ್ಲರೂ ಆತನ ಮಲಸಹೋದರ, ಸಹೋದರಿಯರಾಗಿದ್ದರು. ತದನಂತರದಲ್ಲಿ ಯಾಕೋಬನು ಯೆರೂಸಲೇಮಿನಲ್ಲಿನ ಸಭೆಯಲ್ಲಿ ಒಬ್ಬ ನಾಯಕನಾಗುತ್ತಾನೆ. ಈತನ ತಮ್ಮನಾದ ಯೂದನು ಬಹುಶಃ ಯೂದನು ಬರೆದ ಪತ್ರಿಕೆಯ ಗ್ರಂಥಕರ್ತನಾಗಿರಬಹುದು. ಯೋಸೆ ಮತ್ತು ಸೀಮೋನರ ಬಗ್ಗೆ ನಮಗೇನು ಮಾಹಿತಿಯಿಲ್ಲ.

ವ. 4: ಇಬ್ರಿಯ ಮತ್ತು ಗ್ರೀಕ್ ಸಾಹಿತ್ಯಗಳೆರಡರಲ್ಲೂ ಕಂಡುಬರುವ ಜ್ಞಾನೋಕ್ತಿ(ಗಾದೆ)ಯೊಂದನ್ನು ಯೇಸು ಇಲ್ಲಿ ಉಪಯೋಗಿಸುತ್ತಾನೆ.

*ಹೊರೆತು ಬೇರೆ ಯಾವ ಮಹತ್ಕಾರ್ಯವನ್ನೂ ಮಾಡುವುದಕ್ಕಾಗಲಿಲ್ಲ* (ವ. 5): ಹೃದಯ ಕಠಿಣ ಮಾಡಿಕೊಂಡು ಯೇಸುವನ್ನು ತಿರಸ್ಕರಿಸಿದ್ದರಿಂದ ನಜರೇತಿನ ಜನರಿಗೆ ದೇವರ ರಾಜ್ಯದ ಸ್ವಸ್ಥತೆಯ ಶಕ್ತಿಯನ್ನು ಅನುಭವಿಸಲಾಗಲಿಲ್ಲ (ಹೋಲಿಸಿ ಮತ್ತಾ.

13:48). ತನ್ನ ರಾಜ್ಯ ಮತ್ತು ತನ್ನ ರಕ್ಷಕನನ್ನು ತಿರಸ್ಕರಿಸುವ ಅಪನಂಬಿಕೆಯ ಮತ್ತು ಹಗೆಯ ಜನರ ಮೇಲೆ ದೇವರು ತನ್ನ ಅದ್ಭುತಗಳನ್ನು ಮತ್ತು ರಕ್ಷಣೆಯನ್ನು ಬಲವಂತ ಮಾಡುವುದಿಲ್ಲ.

*ಹನ್ನೆರಡು ಮಂದಿ ಶಿಷ್ಯರನ್ನು ಹತ್ತಿರಕ್ಕೆ ಕರೆದು ಅವರನ್ನು ಇಬ್ಬಿಬ್ಬರಾಗಿ ಕಳುಹಿಸಲಾರಂಭಿಸಿದನು* (ವ. 7): ಹನ್ನೆರಡು ಅಪೊಸ್ತಲರ ನೇಮಕದ ಕುರಿತಾದ ವಾಕ್ಯಭಾಗದೊಂದಿಗೆ ಹೋಲಿಸಿರಿ: "ಆತನು ಹನ್ನೆರಡು ಮಂದಿಯನ್ನು ಆರಿಸಿ ಅವರು ತನ್ನ ಸಂಗಡ ಇರಬೇಕೆಂತಲೂ, ದೆವ್ವಗಳನ್ನು ಬಿಡಿಸುವ ಅಧಿಕಾರವುಳ್ಳವರಾಗಿ ಸುವಾರ್ತೆಯನ್ನು ಸಾರುವುದಕ್ಕೆ ತಾನು ಅವರನ್ನು ಕಳುಹಿಸುವೆನೆಂತಲೂ ಆ ಹನ್ನೆರಡು ಮಂದಿಯನ್ನು ಆರಿಸಿ ನೇಮಿಸಿದನು" (ಮಾರ್ಕ 3:14-15). ಈ ಹನ್ನೆರಡು ಮಂದಿಯೂ ಕೆಲ ಸಮಯ ಯೇಸುವಿನ ಜೊತೆಯಲ್ಲಿದ್ದು, ಈಗ ಹೊರಗೆ ಕಳುಹಿಸಲು ಸಿದ್ಧರಾಗಿದ್ದಾರೆ.

*ಇಬ್ಬಿಬ್ಬರಾಗಿ* (ವ. 7): ಸಂದೇಶಕರನ್ನು "ಇಬ್ಬಿಬ್ಬರಾಗಿ" ಕಳುಹಿಸುವುದು ಒಂದು ಯೆಹೂದಿ ಸಂಪ್ರದಾಯವಾಗಿತ್ತೆಂಬುದಾಗಿ ತೋರಿಸುತ್ತದೆ (ಹೋಲಿಸಿ 11:1, 14:3, ಅಪೊ.ಕೃತ್ಯ 13:2). ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಒಂದು ಸಾಕ್ಷಿಯು ಮಾನ್ಯವಾಗಿರಬೇಕಾದರೆ ಕನಿಷ್ಠವೆಂದರೆ ಎರಡು ಸಾಕ್ಷಿದಾರರ ಅವಶ್ಯಕತೆಯಿತ್ತು (ಧರ್ಮೋ. 17:6).

*ಎರಡು ಅಂಗಿಗಳು* (ವ. 9): ಹೆಚ್ಚುವರಿ ಅಂಗಿಯನ್ನು ರಾತ್ರಿ ವೇಳೆ ಹೊದಿಕೆಯಾಗಿ ಉಪಯೋಗಿಸಬಹುದಾಗಿತ್ತು.

*ಕಾಲಿಗೆ ಹತ್ತಿದ ದೂಳನ್ನು ಝಾಡಿಸಿಬಿಡಿರಿ* (ವ. 11): ಯಾವುದಾದರೊಂದು ಅಶುದ್ಧವಾದ ಅನ್ಯಜನರ ಸೀಮೆಯನ್ನು ಬಿಟ್ಟು "ಪವಿತ್ರ ನೆಲಕ್ಕೆ" ಹಿಂತಿರುಗುವ ವೇಳೆಯಲ್ಲಿ ಫರಿಸಾಯರು ಈ ಪದ್ಧತಿಯನ್ನು ಅನುಸರಿಸುತ್ತಿದ್ದರು. ಹೊಸ ಒಡಂಬಡಿಕೆಯಲ್ಲಿ ಕಾಲಿನ ದೂಳನ್ನು ಝಾಡಿಸುವುದು ದೇವರ ಸಂದೇಶವನ್ನು ತಿರಸ್ಕರಿಸುವವರಿಗಾಗಿನ ಗಂಭೀರವಾದ ಎಚ್ಚರಿಕೆಯನ್ನು ಸೂಚಿಸುತ್ತದೆ.

*ಅರಸನಾದ ಹೆರೋದನು* (ವ. 14): ಹೆರೋದ ಮಹಾಶಯನ ಮಕ್ಕಳಲೊಬ್ಬನಾದ ಹೆರೋದ ಅಂತಿಪನು ತನ್ನ ತಂದೆಯು ಕ್ರಿ.ಪೂ. 4 ರಲ್ಲಿ ಸತ್ತಾಗ ಗಲಿಲಾಯ ಮತ್ತು ಪೆರಿಯಾದಲ್ಲಿ ಪಾಳೆಯಗಾರನಾಗುತ್ತಾನೆ. ಈತನು ಕ್ರಿ.ಶ. 39 ರವರೆಗೆ ಆಳ್ವಿಕೆ ಮಾಡುತ್ತಾನೆ.

*ಇವನು ಎಲೀಯನೆಂತಲೂ* (ವ. 15): ಇದು ಮಲಾಕಿಯಲ್ಲಿನ ಪ್ರವಾದನೆಯ ಉಲ್ಲೇಖವಾಗಿದೆ. "ಯೆಹೋವನ ಆಗಮನದ ಭಯಂಕವಾದ ಮಹಾದಿನವು ಬರುವದಕ್ಕಿಂತ ಮುಂಚೆಯೇ ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು" (ಮಲಾಕಿ 4:5).

*ಹೆರೋದ್ಯಳು ಹೆರೋದನ ಅಣ್ಣನಾದ ಫಿಲಿಪ್ಪನ ಹೆಂಡತಿ* (ವ. 17): ಹೆರೋದ್ಯಳು ಹೆರೋದ ಮಹಾಶಯನ ಮೊಮ್ಮಗಳಾಗಿದ್ದಳು, ಅವಳು ರೋಮಿನಲ್ಲಿ ವಾಸವಾಗಿದ್ದ ತನ್ನ ಚಿಕ್ಕಪ್ಪನಾದ ಹೆರೋದ ಫಿಲಿಪ್ಪನನ್ನು ಮದುವೆಯಾಗಿದ್ದಳು. ಹೆರೋದ ಅಂತಿಪನು ಆಕೆಯ ಬಳಿ ತನ್ನ ಗಂಡನನ್ನು ಬಿಟ್ಟು ತನ್ನನ್ನು ಮದುವೆಯಾಗಬೇಕೆಂದು ಮನವೊಲಿಸಿದನು.

*ಇಟ್ಟುಕೊಂಡಿರುವುದು ಧರ್ಮವಲ್ಲ* (ವ. 18): ಅಣ್ಣನು ಇನ್ನೂ ಜೀವಂತನಾಗಿರುವಾಗಲೇ ಅವನ ಹೆಂಡತಿಯನ್ನು ಮದುವೆಯಾಗುವುದು ಮೋಶೆಯ ಧರ್ಮಶಾಸ್ತ್ರದಲ್ಲಿ ನಿಶಿದ್ಧವಾಗಿತ್ತು (ಯಾಕಜ 18:6).

*ಹೆರೋದ್ಯಳ ಮಗಳು* (ವ. 22): ಯೆಹೂದಿ ಇತಿಹಾಸಕಾರನಾದ ಜೋಸೆಫಸ್ ಪ್ರಾಕಾರ ಆಕೆಯ ಮಗಳ ಹೆಸರು ಸಲೋಮೆ ಆಗಿತ್ತು. ಆ ಸಮಯದಲ್ಲಿ ಆಕೆ ಯೌವನಸ್ಥಳಾಗಿದ್ದಳು. ನಂತರದಲ್ಲಿ ಆಕೆ ಹೆರೋದ ಮಹಾಶಯನ ಮಗನಾದ ಈಕೆಯ ದೊಡ್ಡಪ್ಪನು ಆದವನೊಬ್ಬನನ್ನು ಮದುವೆ ಆಗುತ್ತಾಳೆ.

*ನನ್ನ ರಾಜ್ಯದಲ್ಲಿ ಅರ್ಧ ರಾಜ್ಯವನ್ನು* (ವ. 23): ಇದೊಂದು ಉದಾರತೆಯ ಹೇಳಿಕೆಯಾಗಿದ್ದು ಅಕ್ಷರಶಃವಾಗಿ ತೆಗೆದುಕೊಳ್ಳಬೇಕೆಂದು ಅರ್ಥವಲ್ಲ.

*ಅವರು ದೋಣಿಯಲ್ಲಿ ಹೊರಟು* (ವ. 32): ಅವರು ಬೇತ್ಸಾಯಿದಕ್ಕೆ ಹೋದರೆಂಬುದಾಗಿ ಲೂಕನು ಹೇಳುತ್ತಾನೆ. ಆದರೆ ಆತನು ಅವರು ಹೇಗೆ ಪ್ರಯಾಣಿಸಿದರೆಂಬುದರ ಬಗ್ಗೆ ಏನನ್ನೂ ಹೇಳುವುದಿಲ್ಲ (ಲೂಕ 9:10). ಹಾಗೆಯೇ ಐದು ಸಾವಿರ ಜನರಿಗೆ ಊಟ ಬಡಿಸಿದ್ದು ಗಲಿಲಾಯ ಸಮುದ್ರ ತೀರದ ಮೇಲಿನ ಬೇತ್ಸಾಯಿದದ ಸಮೀಪವಾಗಿದೆ (ಹೋಲಿಸಿ ವ. 45).

*ಇನ್ನೂರು ಹಣ* (ವ. 37): ಒಬ್ಬ ಕೂಲಿಯವನಿಗೆ ಒಂದು ದಿನಕ್ಕೆ ಒಂದು ದಿನರಿ(ಹಣ)ಯನ್ನು ಕೊಡಲಾಗುತ್ತಿತ್ತು. ಹಾಗಾಗಿ ಈ ಒಂದು ಮೊತ್ತವು ಎಂಟು ತಿಂಗಳ ಕೂಲಿಗೆ ಸಮಾನವಾಗಿತ್ತು.

*ರೊಟ್ಟಿಗಳು* (ವ. 37): ಇವು ಜವೆಗೋದಿಯ ರೊಟ್ಟಿಗಳಾಗಿದ್ದವು. ಅವು ಚಪ್ಪಟೆ ಮತ್ತು ಸಣ್ಣ ಗಾತ್ರದಲ್ಲಿದ್ದು ಒಂದು ಊಟಕ್ಕೆ ಒಬ್ಬ ಮನುಷ್ಯನು ಸುಲುಭವಾಗಿ ಅನೇಕ ರೊಟ್ಟಿಗಳನ್ನು ತಿನ್ನಬಹುದಾಗಿತ್ತು.

*ಹಸಿರು ಹುಲ್ಲು* (ವ. 39): ಚಳಿಗಾಲದ ನಂತರ ಅಥವಾ ವಸಂತ ಕಾಲದ ನಂತರ ಗಲಿಲಾಯ ಸಮುದ್ರದ ಸುತ್ತಲಿನ ಹುಲ್ಲು ಹಸಿರಾಗಿರುತ್ತಿತ್ತು.


*ಹನ್ನೆರಡು ಪುಟ್ಟಿ ತುಂಬಿತು* (ವ. 43): ಯೆಹೂದ್ಯರಿಗೆ ರೊಟ್ಟಿಯು ದೇವರ ವರವಾಗಿತ್ತು ಮತ್ತು ಊಟದ ವೇಳೆ ನೆಲದ ಮೇಲೆ ಬಿದ್ದ ತುಂಡುಗಳನ್ನು ಆರಿಸಿಕೊಳ್ಳಬೇಕಿತ್ತು. ಹನ್ನೆರಡು ಪುಟ್ಟಿಗಳು ಬಹುಶಃ ಹನ್ನೆರಡು ಶಿಷ್ಯರ ಊಟದ ಡಬ್ಬಿಗಳಾಗಿರಬೇಕು.

*ಐದು ಸಾವಿರ ಗಂಡಸರು* (ವ. 44): ಹತ್ತಿರದ ಕಪೆರ್ನೌಮ್ ಮತ್ತು ಬೇತ್ಸಾಯಿದ ಪಟ್ಟಣದ ಜನ ಸಂಖ್ಯೆಯು ತಲಾ 2000 ದಿಂದ 3000, ಈ ವಾಸ್ತವಾಂಶವನ್ನು ಪರಿಗಣಿಸಿದರೆ ಅಲ್ಲಿ ಬಂದ ಜನಸಮೂಹವು ಅಚ್ಚರಿಯದಾಗಿತ್ತು.

*ರಾತ್ರಿಯ ನಾಲ್ಕನೆಯ ಜಾವದಲ್ಲಿ* (ವ. 48): ಇದು ಮುಂಜಾನೆ 3 ರಿಂದ 6 ಗಂಟೆವರೆಗಿನ ಸಮಯವಾಗಿದೆ.


*ಭೂತವೆಂದು* (ವ. 49): ಅನೇಕ ಯೆಹೂದ್ಯರು ಮೂಢ ನಂಬಿಕೆಯವರಾಗಿದ್ದು, ರಾತ್ರಿ ವೇಳೆಯಲ್ಲಿ ಕಾಣಿಸುವ ಆತ್ಮಗಳು ಆಪತ್ತನ್ನು ತರುತ್ತವೆಂಬುದಾಗಿ ಯೋಚಿಸುವವರಾಗಿದ್ದರು. ಇಲ್ಲಿ ಶಿಷ್ಯರು ಅಪಾಯಕಾರಿ ಸನ್ನಿವೇಶದ ನಿಮಿತ್ತ ತೀರಾ ಕಳವಳಕ್ಕೀಡಾಗಿ ಯೇಸುವನ್ನು ತಮ್ಮನ್ನು ಮೋಸಗೊಳಿಸಲು ಪ್ರಯತ್ನಿಸುವ ಆತ್ಮವೆಂಬುದಾಗಿ ತಪ್ಪಾಗಿ ಗ್ರಹಿಸಿದರು.

*ಗೆನೆಜರೇತ್* (ವ. 53): ಇದು ಕಪೆರ್ನೌಮಿನ ನೈರುತ್ಯಕ್ಕೆ ಗಲಿಲಾಯ ಸಮುದ್ರದ ಸಮೀಪದಲ್ಲಿರುವ ಒಂದು ಸಣ್ಣ ಮತ್ತು ಫಲವತ್ತಾದ ಮೈದಾನ (ಬಯಲು) ಪ್ರದೇಶವಾಗಿತ್ತು. ಈ ಮೈದಾನದಲ್ಲಿ ಒಂದು ಪಟ್ಟಣವಿದ್ದು ಅದನ್ನು ಗೆನೆಜರೇತ್ ಎಂಬುದಾಗಿ ಕರೆಯಲಾಗುತ್ತಿತ್ತು.



**ಪ್ರಶ್ನೆಗಳು**

1. ಯೇಸು ತನ್ನ ಊರಿನಲ್ಲಿ ಏನು ಮಾಡಿದನು (ವ. 1-6)?
2. ಜನರು ಯಾಕೆ ಅತ್ಯಾಶ್ಚರ್ಯ ಪಟ್ಟರು (ವ. 1-6)?
3. ಜನರು ಯೇಸುವಿನ ವಿಷಯವಾಗಿ ಯಾಕೆ ಬೇಸರಗೊಂಡರು (ವ. 1-6)?
4. ಯೇಸು ನಜರೇತಿನ ಜನರನ್ನು ನೋಡಿ ಯಾಕೆ ಆಶ್ಚರ್ಯಪಟ್ಟನು (ವ. 1-6)?
5. ಯೇಸು ನಜರೇತನ್ನು ಸಂಧಿಸಿದ ನಂತರ ಏನು ಮಾಡಿದನು (ವ. 6-13)?
6. ಅಪೊಸ್ತಲರ ಸೇವೆಯನ್ನು ಮಾರ್ಕನು ಹೇಗೆ ವರ್ಣಿಸುತ್ತಾನೆ (ವ. 7-13)?
7. ಅರಸನಾದ ಹೆರೋದನು ಯೇಸುವನ್ನು ಯಾರೆಂಬುದಾಗಿ ಯೋಚಿಸಿದ್ದನು (ವ. 14-16)?
8. ಅರಸನಾದ ಹೆರೋದನು ಸ್ನಾನಿಕನಾದ ಯೋಹಾನನ್ನು ಯಾಕೆ ಸೆರೆಯಲ್ಲಿ ಹಾಕಿಸಿದ್ದನು (ವ. 17-18)
9. ಸ್ನಾನಿಕನಾದ ಯೋಹಾನನೊಂದಿಗೆ ಅರಸನಾದ ಹೆರೋದನ ಸಂಬಂಧವನ್ನು ಮಾರ್ಕನು ಹೇಗೆ ವರ್ಣಿಸುತ್ತಾನೆ (ವ. 17-20)?
10. ಅರಸನಾದ ಹೆರೋದನ ಹುಟ್ಟಿದ ದಿನದಂದು ಏನಾಗುತ್ತದೆ (ವ. 21-28)?
11. ಸ್ನಾನಿಕನಾದ ಯೋಹಾನನ ದೇಹವು ಏನಾಯಿತು (ವ. 29)?
12. ವ. 30 ರ ಹಿನ್ನಲೆ ಏನು?
13. ಯೇಸು ಮತ್ತು ಆತನ ಶಿಷ್ಯರು ಯಾಕೆ ದೋಣಿಯಲ್ಲಿ ಹೋಗುತ್ತಾರೆ (ವ. 30-44)?
14. ಬಹು ಮಂದಿಯು ತನ್ನಡೆಗೆ ಬರುವುದನ್ನು ನೋಡಿ ಯೇಸುವಿಗೆ ಏನನಿಸಿತು ಮತ್ತು ಆತನು ಏನು ಮಾಡುತ್ತಾನೆ (ವ. 30-44)?
15. ಜನರಿಗೆ ನೀವೇ ಆಹಾರವನ್ನು ಕೊಡಿರಿ ಎಂಬುದಾಗಿ ಯೇಸು ಹೇಳಿದಾಗ ಶಿಷ್ಯರು ಹೇಗೆ ಪ್ರತಿಕ್ರಯಿಸಿದರು (ವ 30-44)?
16. ಯೇಸು ಐದು ರೊಟ್ಟಿ ಎರಡು ಮೀನನ್ನು ಏನು ಮಾಡಿದನು (ವ. 30-44)?
17. ಮಿಕ್ಕ ಆಹಾರವನ್ನು ಏನು ಮಾಡಿದರು (ವ. 30-44)?
18. ***ಯೇಸುವಿನ ಕಾಲದಲ್ಲಿನ ಗಲಿಲಾಯದ ನಕ್ಷೆಯಲ್ಲಿ*** ಬೇತ್ಸಾಯಿದವನ್ನು ಕಂಡು ಹಿಡಿಯಿರಿ.
19. ಐದು ಸಾವಿರ ಮಂದಿಗೆ ಊಟ ಬಡಿಸಿದ ನಂತರ ಯೇಸು ಶಿಷ್ಯರಿಗೆ ಏನನ್ನು ಮಾಡಲು ಹೇಳಿದನು ಮತ್ತು ತಾನು ಏನನ್ನು ಮಾಡುತ್ತಿದ್ದನು (ವ. 45-46)?
20. ಯೇಸುವು ನೀರಿನ ಮೇಲೆ ನಡೆಯುವುದನ್ನು ಕಂಡಾಗ ಶಿಷ್ಯರು ತತ್ತರಿಸಿ ಹೋಗಿದ್ದು ಯಾಕೆ (ವ. 47-50)?
21. ಯೇಸುವು ದೋಣಿಯೊಳಕ್ಕೆ ಬಂದ ಮೇಲೆ ಏನಾಯಿತು (ವ. 51)?
22. ಯೇಸುವು ಬಂದದ್ದನ್ನು ತಿಳಿದುಕೊಂಡಾಗ ಗೆನೆಜರೇತ ಸೀಮೆಯ ಜನರು ಹೇಗೆ ಪ್ರತಿಕ್ರಯಿಸಿದರು (ವ. 53-56)?
23. ಯೇಸುವಿನ ಸ್ವಸ್ಥತಾ ಸೇವೆಯನ್ನು ಮಾರ್ಕನು ಹೇಗೆ ಸಾರಾಂಶಗೊಳಿಸುತ್ತಾನೆ (ವ. 55-56)? ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನು ಉಪಯೋಗಿಸಿರಿ.



**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯೇಸು ಒಬ್ಬ "ಬಡಗಿ" (ಮಾರ್ಕ 6:3) ಅಥವಾ "ಬಡಗಿಯ ಮಗ" ನಾಗಿದ್ದನೆಂಬುದಾಗಿ ನೀವು ಯೋಚಿಸುವಿರಾ (ಮತ್ತಾ. 13:55)?
2. ಯೇಸು ತನ್ನ ಊರಾದ ನಜರೇತಿಗೆ ಬಂದಾಗ ಏನಾಯಿತೆಂಬುದನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ (ವ. 1-6). ಸತ್ಯವೇದ ನೋಡಬೇಡಿರಿ.
3. ಯೇಸು ಯಾಕೆ ಅಪೊಸ್ತಲರನ್ನು "ಇಬ್ಬಿಬ್ಬರಾಗಿ" ಕಳುಹಿಸಿದನೆಂಬುದಾಗಿ ನೀವು ಯೋಚಿಸುವಿರಿ (ವ. 7-13)?
4. ಯೇಸು ತನ್ನ ಅಪೊಸ್ತಲರಿಗೆ ತಮ್ಮ ಸೇವಾ ಪ್ರಯಾಣದಲ್ಲಿ ಬುತ್ತಿ, ಹಣ ಮತ್ತು ಹೆಚ್ಚು ಬಟ್ಟೆಗಳನ್ನು ಕೊಂಡೊಯ್ಯಬಾರದೆಂಬುದಾಗಿ ಯಾಕೆ ಹೇಳಿದನೆಂದು ನೀವು ಯೋಚಿಸುವಿರಿ (ವ. 7-13)?
5. ಹುಡುಗಿಯ ಬೇಡಿಕೆಯನ್ನು ನೆರವೇರಿಸಿದ ನಂತರ ಹೆರೋದನಿಗೆ ಹೇಗೆ ಅನಿಸಿರಬೇಕೆಂಬುದಾಗಿ ನೀವು ಯೋಚಿಸುವಿರಿ (ವ. 14-29)?
6. ಸ್ನಾನಿಕನಾದ ಯೋಹಾನನ ಮರಣದ ಕುರಿತಾದ ತನ್ನ ವರ್ಣನೆಯ ಮೂಲಕ ಮಾರ್ಕನು ತನ್ನ ಓದುಗರಿಗೆ ಅರಸನಾದ ಹೆರೋದನ ಯಾವ ರೀತಿಯ ಅನಿಸಿಕೆಯನ್ನು ನೀಡುತ್ತಿದ್ದಾನೆ (ವ. 14-29)?
7. ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ ಕಥೆಯನ್ನು ನಿಮ್ಮದೇ ಮಾತಿನಲ್ಲಿ ಹೇಳಿರಿ (ವ. 30-44). ನಿಮ್ಮ ಕಥೆಯು ಆಸಕ್ತಿಕರವಾಗಿರಲಿ. ನೀವು ಒಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬದಾಗಿ ಕಲ್ಪಿಸಿಕೊಳ್ಳಿ, ಸತ್ಯವೇದ ವಚನಗಳನ್ನು ಉಲ್ಲೇಖಿಸುವುದು ಬೇಡ.
8. ಐದು ಸಾವಿರ ಜನರಿಗೆ ಊಟ ಮಾಡಿಸಿದ ನಂತರ ಶಿಷ್ಯರಿಗೆ ಏನನಿಸಿರಬೇಕೆಂಬುದಾಗಿ ನೀವು ಯೋಚಿಸುವಿರಿ (ವ. 30-44)?
9. ಶಿಷ್ಯರ ಬೆರಗಾಗುವಿಕೆ (ಯೇಸುವಿನ ಆಗಮನದಿಂದ ಸಮುದ್ರದ ಮೇಲಣ ಗಾಳಿ ನಿಂತು ಹೋದಾಗ) ಮತ್ತು ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ ಅದ್ಭುತದ (ವ. 51-52) ನಡುವೆ ಮಾರ್ಕನು ಮಾಡುವ ಸಂಬಂಧ(ಜೋಡಣೆ)ವನ್ನು ವಿವರಿಸಿರಿ.
10. ಐದು ಸಾವಿರ ಜನರಿಗೆ ಊಟ ಮಾಡಿಸಿದ ಅದ್ಭುತದ ನಂತರ ಯಾಕೆ ಯೇಸು ಗಡಿಬಿಡಿಯಲ್ಲಿ ತನ್ನ ಶಿಷ್ಯರನ್ನು ದೋಣಿಯೊಳಕ್ಕೆ ಕಳುಹಿಸಿದನೆಂಬುದಾಗಿ (ವ. 45) ನೀವು ಯೋಚಿಸುವಿರಿ? ಇದಕ್ಕೆ ಸಮಾನವಾಗಿ ಯೋಹಾನನ ಸುವಾರ್ತೆಯಲ್ಲಿ ವಾಕ್ಯಭಾಗದೊಂದಿಗೆ ಹೋಲಿಸಿ (ಯೋಹಾನ 6:14-15).
11. ಯೇಸು ನೀರಿನ ಮೇಲೆ ನಡೆಯುವ ಕಥೆಯನ್ನು (ವ. 45-52) ಮತ್ತಾಯದಲ್ಲಿ (14:22-33) ಮತ್ತು ಯೋಹಾನದಲ್ಲಿ (6:16-21) ಸಹ ಕಾಣಬಹುದು. ಈ ಮೂರು ವಾಕ್ಯ ಭಾಗಗಳನ್ನು ಹೋಲಿಸಿರಿ.

12. ಅಧ್ಯಾಯ 6 ರಲ್ಲಿ ಕಂಡುಬರುವ 6 ಕಥೆಗಳನ್ನು ಯೇಸುವಿನ ಶಿಷ್ಯರ ದೃಷ್ಟಿಕೋನದಿಂದ ನೋಡಿರಿ. ಅದರಲ್ಲಿ ಅವರ ಪಾತ್ರವೇನು? ಅವರು ಹೇಗೆ ಭಾವಿಸಿರಬೇಕೆಂದು ನೀವು ಯೋಚಿಸುವಿರಿ? ಈ ಪ್ರತಿ ಕಥೆಯಲ್ಲೂ ನೀವು ಅವರನ್ನು ಹೇಗೆ ಮೌಲ್ಯಮಾಪನ ಮಾಡುವಿರಿ?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ತನ್ನ ಊರಿನ ಜನರಿಂದಲೇ ತಿರಸ್ಕರಿಸಲ್ಪಟ್ಟಾಗ ಯೇಸುವಿಗೆ ಏನನಿಸಿರಬೇಕೆಂಬುದನ್ನು ವಿಮರ್ಶಿಸಿರಿ. ಬಹುಶಃ ನೀವೂ ಸಹ ನಿಮ್ಮ ಸ್ವಂತ ಕುಟುಂಬದಿಂದ ಅಥವಾ ಸೇವೆಯಲ್ಲಿ ಇದೇ ರೀತಿಯ ಅನುಭವ ಎದುರಿಸಿರಬಹುದು. ನಿನ್ನನ್ನೂ ನಿನ್ನ ಸಾಕ್ಷಿಯನ್ನೂ ತಿರಸ್ಕರಿಸಿದ್ದಕ್ಕಾಗಿ ಬಹುಶಃ ನಿಮ್ಮ ಕುಟುಂಬ ಮತ್ತು ನೆರೆಯವರು ದೇವರ ರಾಜ್ಯದ ಆಶೀರ್ವಾದವನ್ನು ಕಳೆದುಕೊಂಡಿರಬಹುದು. ಇದನ್ನು ನಿಮ್ಮ ಗುಂಪಿನಲ್ಲಿ ಹಂಚಿಕೊಂಡು ಇದರ ಕುರಿತಾದ ನಿರಾಶೆ ಮತ್ತು ಕಾಳಜಿಯನ್ನು ಪ್ರಾರ್ಥನೆಯ ಮೂಲಕ ದೇವರ ಮುಂದಿಡಿರಿ. ಹಾಗಯೇ ***ತಿರಸ್ಕಾರ*** ಎಂಬ ಸಣ್ಣ ಧ್ಯಾನವನ್ನು ಬರೆಯಿರಿ. ಇದು ಮಾರ್ಕನ ಸುವಾರ್ತೆ 6:1-6 ಮತ್ತು ನಿಮ್ಮ ಸ್ವಂತ ಅನುಭವಗಳನ್ನು ಒಳಗೊಂಡಿರಲಿ. ಓದುಗರಿಗೆ ಹೃದಯವನ್ನು ಕಠಿಣ ಮಾಡಿಕೊಂಡು, ದೇವರ ರಾಜ್ಯದ ಕೊಡುಗೆಯನ್ನು ತಿರಸ್ಕಾರ ಮಾಡಬೇಡಿರೆಂಬ ಮನವಿಯೊಂದಿಗೆ ನಿಮ್ಮ ಧ್ಯಾನವನ್ನು ಮುಕ್ತಾಯಗೊಳಿಸಿರಿ.
2. ***"ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು"*** (ವ. 31-44) ಈ ಕಥೆಯನ್ನು ವಿಮರ್ಶಿಸಿರಿ. ಯೇಸುವಿನ ಬಗ್ಗೆ ಕೆಲವು ಅಂಶಗಳನ್ನು ಪಟ್ಟಿಮಾಡಿ:

   ಅ. ಜನರ ಮೇಲಿನ ಆತನ ಕನಿಕರ (ವ. 34): ಆತನವರನ್ನು ಸುಮ್ಮನೆ ಕಳುಹಿಸಲಿಲ್ಲ ಆದರೆ ಅವರ ಅಗತ್ಯತೆಯನ್ನು ನೋಡಿದನು:

   - ಮಾರ್ಗದರ್ಶನಕ್ಕಾಗಿನ ಅವರ ಅಗತ್ಯತೆ (ವ. 34)
   - ಆಹಾರದ ಅಗತ್ಯತೆ

   ಆ. ತನ್ನ ಶಿಷ್ಯರೊಂದಿಗಿನ ವ್ಯವಹಾರ:

   - ಆತನು ಅವರನ್ನು ಪರೀಕ್ಷೆಗೆ ಒಡ್ಡಿದನು (ವ. 37)
   - ಆತನು ಅವರನ್ನು ಅದ್ಭುತದಲ್ಲಿ ಸಹಕರಿಸುವಂತೆ ಅನುಮತಿಸಿದನು (ವ. 38, 41, 43)

   ಇ. ಯೇಸು ನಿಮಗೆ ಯಾರಾಗಿದ್ದಾನೆ: ಆತನು ನಿಮ್ಮ ಬೋಧಕನಾ? ಆತನು ನಿಮಗೆ ಒದಗಿಸುವವನಾ? ದೇವರ ರಾಜ್ಯದ ಮಹಿಮೆಗಾಗಿ ನೀವು ಆತನಿಂದ ಉಪಯೋಗಿಸಲ್ಪಟ್ಟಿರುವಿರಾ?


   ನಂತರ ಈ ಕಥೆ ಮತ್ತು ಈ ಅಧ್ಯಾಯದಲ್ಲಿನ ಮಾಹಿತಿಗಳ ಆಧಾರದ ಮೇಲೆ ಒಂದು ಧ್ಯಾನ(ಸತ್ಯವೇದ ಅಧ್ಯಯನ ಅಥವಾ ಪ್ರಸಂಗ)ವನ್ನು ಸಿದ್ಧಪಡಿಸಿರಿ.
3. ಮಾರ್ಕನ ಸುವಾರ್ತೆ 6 ಅಧ್ಯಾಯದಲ್ಲಿ ಯೇಸುವಿನ ಶಿಷ್ಯರು ವಹಿಸುವ ಮುಖ್ಯ ಪಾತ್ರವಿರುವ ವಾಕ್ಯಭಾಗದ ಬೆಳಕಿನಲ್ಲಿ ದೇವ ಮನುಷ್ಯ ಮತ್ತು ಸ್ತ್ರೀಯರ ಯಶಸ್ಸು ಮತ್ತು ಸೋಲಿನ (ವೈಫಲ್ಯ) ನಡುವಿನ ಒಂದು ಸಣ್ಣ ಗೆರೆ(ಎಳೆ)ಯನ್ನು ವಿಮರ್ಶಿಸಿರಿ:

   ಅ. ಯೇಸು ಹನ್ನೆರಡು ಮಂದಿಯನ್ನು ಕಳುಹಿಸುವುದು, ವ. 7-13

   ಆ. ಯೇಸು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು, ವ. 30-44

   ಇ. ಯೇಸು ನೀರಿನ ಮೇಲೆ ನಡೆಯುವುದು, ವ. 45-52

***ಶಿಷ್ಯರ ಯಶಸ್ಸು ಮತ್ತು ಸೋಲು (ವೈಫಲ್ಯ)*** ಎಂದು ಕರೆಯಲ್ಪಡುವ ಒಂದು ಸತ್ಯವೇದ ಅಧ್ಯಯನಕ್ಕಾಗಿ ರೂಪುರೇಖೆಯೊಂದನ್ನು ಸಿದ್ಧಪಡಿಸಲು ನಿಮ್ಮ ನಿರ್ಣಯಗಳನ್ನು (ಈ ಅಧ್ಯಯನದ ಮಾಹಿತಿಗಳೊಂದಿಗೆ) ಬಳಸಿರಿ.



**ಮಾರ್ಕ ಅಧ್ಯಾಯ 7**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕನ ಏಳನೇ ಅಧ್ಯಾಯವು ಮೂರು ವಾಕ್ಯಭಾಗಗಳನ್ನು ಒಳಗೊಂಡಿದೆ.

1. ಶುದ್ಧ ಮತ್ತು ಅಶುದ್ಧ (ಮೈಲಿಗೆ), ವ. 1-23
2. ಒಬ್ಬ ಸುರೋಪೋಯಿನಿಕ್ಯರ ಹೆಂಗಸಿನ ನಂಬಿಕೆ, ವ. 24-30
3. ಯೇಸು ಒಬ್ಬ ಕಿವುಡನನ್ನು ಗುಣಪಡಿಸಿದ್ದು, ವ. 31-37

ಮೊದಲ ವಾಕ್ಯಭಾಗದ ಚರ್ಚೆ(ಸಂಭಾಷಣೆ)ಯನ್ನು ಒಂದು ಸಂಕ್ಷಿಪ್ತ ಮಾತಿನಲ್ಲಿ ಸಾರಾಂಶಗೊಳಿಸಬಹುದು: ದೇವರೊಂದಿಗಿನ ಒಬ್ಬ ವ್ಯಕ್ತಿಯ ಅನೋನ್ಯತೆಯು ಪಾಪದಿಂದ ಮುರಿದು ಬೀಳುತ್ತದೆಯೇ ವಿನಃ ಮೈಲಿಗೆಯ ಕೈಯಿಂದ ಅಥವಾ ಅಶುದ್ಧ ಆಹಾರದಿಂದಲ್ಲ. ಹಾಗೆಯೇ ಮುಂದಿನ ಎರಡು ಸ್ವಸ್ಥತೆಯ ಅದ್ಭುತಗಳು ಯೆಹೂದಿಯೇತರ ಸ್ಥಳಗಳಲ್ಲಿ ನಡೆಯುತ್ತದೆ. ದೆಕಪೊಲಿಯಲ್ಲಿ ಕಿವುಡನನ್ನು ಗುಣಪಡಿಸಿದ ಕಥೆಯನ್ನು ಬೇರೆ ಯಾವ ಸುವಾರ್ತೆಯಲ್ಲೂ ಕಾಣಲಾಗುವುದಿಲ್ಲ.

*ಯೆರೂಸಲೇಮಿನಿಂದ ಬಂದಿದ್ದ ಫರಿಸಾಯರೂ* (ವ. 1): 3:22 ನ್ನು ಹೋಲಿಸಿ, ಇಲ್ಲಿ ಮಾರ್ಕನು ಯೇಸುವಿನ ಬಗ್ಗೆ ಮತ್ತು ಆತನ ಸೇವೆಯ ಬಗ್ಗೆ ತಿಳುದುಕೊಳ್ಳಲು ಯೆರೂಸಲೇಮಿನಿಂದ ಗಲಿಲಾಯಕ್ಕೆ ವಾಸ್ತವಾಂಶವನ್ನು ಕಂಡುಹಿಡಿಯಲು ಬಂದ ಯೆಹೂದಿ ಧಾರ್ಮಿಕ ಮುಖಂಡರ ನಿಯೋಗದ ಬಗ್ಗೆ ಈ ಹಿಂದೆಯೇ ಪ್ರಸ್ತಾಪಿಸುತ್ತಾನೆ.

ವಚನ 3-4: ಮಾರ್ಕನು ತನ್ನ ಅನ್ಯಹಿನ್ನಲೆಯ ಓದುಗರಿಗೆ ಕೈ ತೊಳೆದುಕೊಳ್ಳುವ ಯೆಹೂದಿ ಸಂಪ್ರದಾಯದ ಬಗ್ಗೆ ವಿವರಿಸುತ್ತಾನೆ. ಈ ಪದ್ಧತಿಯು ಹಿರಿಯರ ಸಂಪ್ರದಾಯವನ್ನು ಆಧರಿಸಿದೆ. ಒಬ್ಬ ವ್ಯಕ್ತಿಯ ಜೀವನವನ್ನು ಕ್ರಮ ಪಡಿಸುವುದೇ ಇದರ ಉದ್ದೇಶವಾಗಿದ್ದು, ಸಂತತಿಯಿಂದ ಸಂತತಿಗೆ ಇದನ್ನು ಮುಂದುವರೆಸುವುದಾಗಿತ್ತು. ಉದಾಹರಣೆಗೆ ಯೆಹೂದ್ಯರು ದೈನಂದಿನ ಜೀವನದ ಕಾರ್ಯಗಳಲ್ಲಿ ಸಾಂಪ್ರದಾಯಿಕವಾಗಿ ಮೈಲಿಗೆಯಾಗುತ್ತಿದ್ದುದ್ದರಿಂದ ಕೈಗಳನ್ನು ತೊಳೆದುಕೊಳ್ಳುವುದರಿಂದ ಶುದ್ಧಿಮಾಡಿಕೊಳ್ಳುತ್ತಿದ್ದರು.

*ಯೆಶಾಯನು ಪ್ರವಾದಿಸಿದ್ದಾನೆ* (ವ. 6-7): ಹಿರಿಯರ ಸಂಪ್ರದಾಯವನ್ನು "ಮನುಷ್ಯರು ಕಲ್ಪಿಸಿದ ಕಟ್ಟಳೆ"ಗಳೆಂಬುದಾಗಿ ವಿವರಿಸಲು ಯೇಸು ಯೆಶಾಯ 29:13 ನ್ನು ಉಪಯೋಗಿಸುತ್ತಾನೆ, ಇಲ್ಲಿ ದೇವರು ಪ್ರವಾದಿಗಳ ಕಾಲದಲ್ಲಿನ ಧಾರ್ಮಿಕ ನಾಯಕರನ್ನು ಖಂಡಿಸುತ್ತಾನೆ.

*ಕಪಟಿ* (ವ. 6): ಇವನು ದೇವರನ್ನು ಹೃದಯದಿಂದ ಆರಾಧಿಸದೆ, ಹೊರಗಿನ ತೋರಿಕೆಗಷ್ಟೇ ಆರಾಧಿಸುವ ವ್ಯಕ್ತಿಯಾಗಿದ್ದಾನೆ. ಫರಿಸಾಯರ ಹೊರಗಣ ಭಕ್ತಿಯು ದೇವರೊಂದಿಗಿನ ಯಥಾರ್ಥವಾದ ಸಮರ್ಪಣೆಯ ಜೀವಿತದೊಂದಿಗೆ ಸರಿಹೊಂದುತ್ತಿರಲಿಲ್ಲ. ವ. 8-9 ರಲ್ಲಿ ಯೇಸು, ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರ ಸಂಪ್ರದಾಯವನ್ನು ಹಿಡಿದುದ್ದಕ್ಕೆ ಪುನಃ ಫರಿಸಾಯರನ್ನು ಖಂಡಿಸುತ್ತಾನೆ (ವ. 13 ನ್ನು ಸಹ ನೋಡಿರಿ).

ವ. 10: ಇಲ್ಲಿ ಯೇಸು ಐದನೇ ಆಜ್ಞೆಯನ್ನು ಅದರ ಸಕಾರಾತ್ಮಕ ಮತ್ತು ನಕಾರಾತ್ಮಕ ರೂಪದಲ್ಲಿ ಉಪಯೋಗಿಸುತ್ತಾನೆ.

*ಕೊರ್ಬಾನ್* (ವ. 11): ಈ ಇಬ್ರಿಯ/ಅರಾಮಿಕ್ ಪದದ ಅರ್ಥ "ಕಾಣಿಕೆ". ಕೇವಲ ಜವಾಬ್ದಾರಿಯಲ್ಲಿ ಮಗನು ಮಾತ್ರ ಈ ಪದವನ್ನು ಬಳಸುತ್ತಿದ್ದು, ತನ್ನ ತಂದೆತಾಯಿಗಳ ಪೋಷಣೆಗಾಗಿ ಕೊಡಬೇಕಾದ ಹಣವನ್ನು ದೇವರಿಗಾಗಿ (ಅಥವಾ ದೇವಾಲಯಕ್ಕೆ) ಒಪ್ಪಿಸುತ್ತಿದ್ದನು. ಈ ಹಣವನ್ನು ಧಾರ್ಮಿಕ ಉದ್ದೇಶಕ್ಕಾಗಿ ಬಳಸುವ ಅಗತ್ಯತೆಯಿರಲಿಲ್ಲ. ಮೋಶೆಯ ಧರ್ಮಶಾಸ್ತ್ರದಲ್ಲಿ ಹೇಳಿದಂತೆ ಮಕ್ಕಳು ತಂದೆ ತಾಯಿಗಳನ್ನು ನೋಡಿಕೊಳ್ಳಬೇಕೆಂಬ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಕೊರ್ಬನ್ ಸೂತ್ರವು ಒಂದು

ಮಾರ್ಗವಾಯಿತು. ಫರಿಸಾಯರು ದೇವರ ವಾಕ್ಯವನ್ನು ಬಿಟ್ಟು ಪಾಲಿಸುವ ಸಂಪ್ರದಾಯಗಳಲ್ಲಿ ಇದೂ ಒಂದು ಸಂಪ್ರದಾಯವಾಗಿತ್ತು (ನೋಡಿ ವ. 13).

ವ. 16 ನ್ನು ಗ್ರೀಕ್ ಹಸ್ತ ಪ್ರತಿಗಳಲ್ಲಿ ಕಾಣಲಾಗುವದಿಲ್ಲ.

*ತಿನ್ನುವ ಪದಾರ್ಥಗಳೆಲ್ಲಾ ಶುದ್ಧವೆಂದು ಸೂಚಿಸಿದನು* (ವ. 19): ಅವರಿಗಾಗಿನ ಯೇಸುವಿನ ನಿರ್ಣಯಗಳ ಪ್ರಾಮುಖ್ಯತೆಯನ್ನು ಕಾಣಲು ಓದುಗರಿಗೆ ಸಹಾಯಕವಾಗಲು ಮಾರ್ಕನು ಈ ಮಾತನ್ನು ಸೇರಿಸುತ್ತಾನೆ.

*ಮನುಷ್ಯನನ್ನು ಹೊಲೆ ಮಾಡುವುದು* (ವ. 20-21): ಯೇಸು ಯೆಹೂದ್ಯರ ಅಶುದ್ಧತೆಯ ಕುರಿತಾದ ಸಾಮಾನ್ಯ ತಿಳುವಳಿಕೆಯನ್ನು ಅಶುದ್ಧತೆಯು ಅಶುದ್ಧವಾದ ಹೃದಯದಿಂದ ಬರುತ್ತದೆಯೇ ವಿನಃ ಹೊರಗಿನ ಕಟ್ಟಳೆಗಳನ್ನು ಮೀರುವುದರಿಂದಲ್ಲ ಎಂಬ ಸತ್ಯದೊಂದಿಗೆ ಬದಲಿಸುತ್ತಾನೆ. ದೇವರೊಂದಿಗಿನ ಅನ್ಯೋನ್ಯತೆಯು ಕಲೆಯಾದ ಕೈಯಿಂದಾಗಲೀ ಅಥವಾ ಅಶುದ್ಧವಾದ ಆಹಾರದಿಂದಾಗಲೀ ಕ್ಷೀಣಿಸುವುದಿಲ್ಲ ಆದರೆ ಅದು ಪಾಪದಿಂದ ಹದಗೆಡುತ್ತದೆ (ನೋಡಿ ವ. 21-23)

*ತೂರ್* (ವ. 24): ಇದು ಗಲಿಲಾಯದ ನೈರುತ್ಯಕ್ಕಿರುವ ಮೆಡಿಟರೇನಿಯನ್ ಕರಾವಳಿ ಪ್ರದೇಶದ ಮೇಲಿನ ಫೊಯಿನಿಕ್ಯದಲ್ಲಿ ನೆಲೆಗೊಂಡಿರುವ ಒಂದು ಅನ್ಯಜನರ ಪಟ್ಟಣವಾಗಿದೆ. ಕೆಪರ್ನೌಮಿನಿಂದ ತೂರಿಗಿರುವ ಅಂತರ ಸುಮಾರು 50 ಕಿ.ಮೀ.

*ಗ್ರೀಕ್* (ವ. 26): ಸಾಮಾನ್ಯವಾಗಿ ಈ ಪದವನ್ನು "ಅನ್ಯ ಮತಕ್ಕೆ" ಸಮಾನವಾಗಿ ಉಪಯೋಗಿಸಲಾಗುತ್ತದೆ.

ಸರೋಫೊಯಿನಿಕ್ಯ (ವ. 26): ಆ ಸಮಯದಲ್ಲಿ ಫೊಯಿನಿಕ್ಯವು ಸಿರಿಯಾದ ರೋಮನ್ ಪ್ರಾಂತ್ಯದ ಒಂದು ಭಾಗವಾಗಿತ್ತು. ಉತ್ತರ ಆಫ್ರಿಕಾದ ಲಿಬಿಯಾ ಫೊಯಿನಿಕ್ಯರಿಂದ ವ್ಯತ್ಯಾಸವನ್ನು ತಿಳಿಸಲು ಮಾರ್ಕನು ಬಹುಶಃ ಈ ಹೇಳಿಕೆ(ಪದ)ಯನ್ನು ಉಪಯೋಗಿಸುತ್ತಾನೆ.

*ಮಕ್ಕಳು* (ವ. 27): ಯೇಸು ಇಸ್ರಾಯೇಲ್ಯರನ್ನು ದೇವರ ಮಕ್ಕಳೆಂಬುದಾಗಿ ಸೂಚಿಸಿ ಹೇಳುತ್ತಾನೆ. ಮತ್ತಾಯದಲ್ಲಿ ಇದಕ್ಕೆ ಸಮಾನವಾಗಿ ಕಂಡುಬರುವ ವಾಕ್ಯಭಾಗದಲ್ಲಿ ಯೇಸು ಮೊದಲು ತನ್ನ ಶಿಷ್ಯರಿಗೆ, (ಮತ್ತು ಸ್ತ್ರೀಯು ಆತನ ಮಾತುಗಳನ್ನು ಕೇಳುತ್ತಿದ್ದಿರಬೇಕು ) "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲಿನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" ಅಂದನು, ಹಾಗೆಯೇ ಆಕೆಗೆ ನೇರವಾಗಿ "ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿ ಮರಿಗಳಿಗೆ ಹಾಕುವುದು ಸರಿಯಲ್ಲ" ಅಂದನು (ಮತ್ತಾಯ 15:24, 26).

*ರೊಟ್ಟಿಯನ್ನು ... ಮೇಜಿನ ಕೆಳಗಿರುವ ನಾಯಿ ಮರಿಗಳು ... ತುಂಡುಗಳನ್ನು* (ವ. 27-28): ಯೇಸು ದೇವರ ಒಡಂಬಡಿಕೆಯ ಆಶೀರ್ವಾದಗಳಿಗೆ ರೂಪಾಲಂಕಾರವಾಗಿ "ರೊಟ್ಟಿ" ಎಂಬ ಪದವನ್ನು ಬಳಸುತ್ತಾನೆ. ಯೇಸು ಹೇಳುವ ಅಂಶವೇನಂದರೆ ಸುವಾರ್ತೆಯು ದೇವರ ಒಡಂಬಡಿಕೆಯ ಜನರಾಗಿರುವ ಯೆಹೂದ್ಯರಿಗಾಗಿ ಕೊಡಲು ಇರುವಂಥದಾಗಿದೆ. ತನ್ನ ಪ್ರತ್ಯುತ್ತರದಲ್ಲಿ ಆ ಸ್ತ್ರೀಯು "ದೇವರ ಮಿಕ್ಕ ಆಶೀರ್ವಾದಗಳು ಯೆಹೂದ್ಯರಲ್ಲದವರಿಗಾಗಿ ಇರುವುದಾಗಿದೆ" ಎಂಬ ಹೇಳಿಕೆಯನ್ನು ಉಪಯೋಗಿಸಿ ಯೇಸುವಿನ ರೂಪಾಲಂಕಾರವನ್ನು ಆಕೆ ಇನ್ನು ವಿಸ್ತರಿಸುತ್ತಾಳೆ.

*"ಸೀದೋನ್ ಪಟ್ಟಣದ ಮಾರ್ಗವಾಗಿ ... ಗಲಿಲಾಯ ಸಮುದ್ರಕ್ಕೆ ಬಂದನು"* (ವ. 31): ಹೀಗೆ ಯೇಸು ಉತ್ತರಕ್ಕೆ ತೂರಿನಿಂದ ಸೀದೋನಿಗೆ (ಸುಮಾರು 40 ಕಿ.ಮೀ) ಮತ್ತು ವಾಯುವ್ಯಕ್ಕೆ ಎರಡನೇ ಹೆರೋದ ಫಿಲಪ್ಪನ (ಹೆರೋದ್ಯಳ ಮೊದಲ ಗಂಡನಾಗಿದ್ದ ಹೆರೋದ ಫಿಲಿಪ್ಪನ ಸಹೋದರ, 6:17 ರ ಟಿಪ್ಪಣಿ ನೋಡಿ) ಸೀಮೆಯ ಮೂಲಕ ಗಲಿಲಾಯ ಸಮುದ್ರದ ಪೂರ್ವ ಭಾಗಕ್ಕೆ ಹೋದನು. ಇದೊಂದು ವೃತ್ತಾಕಾರದ ಮಾರ್ಗವಾಗಿತ್ತು, ಬಹುಶಃ ಯೇಸು ಹೆರೋದ ಅಂತಿಪನು ಅಧಿಕಾರದಲ್ಲಿರುವ (ನೋಡಿ 6:14-29) ಗಲಿಲಾಯದ ಮೂಲಕ ಪ್ರಯಾಣಿಸಲು ಬಯಸಲಿಲ್ಲ, ಮತ್ತು ಅಲ್ಲಿ ಅನೇಕ ಜನರು ಬಲವಂತದಿಂದ ಆತನನ್ನು ಅರಸನನ್ನಾಗಿ ಮಾಡಬೇಕೆಂದಿದ್ದರು (ನೋಡಿ ಯೋಹಾನ 6:14-15).

*"ದೆಕಪೊಲಿ"* (ವ. 31): 5:20 ರ ಟಿಪ್ಪಣಿಯನ್ನು ನೋಡಿರಿ.

*"ಎಪ್ಫಥಾ!"* (ವ. 34): ಇದೊಂದು ಅರಾಮಿಕ್ ಪದವಾಗಿದ್ದು, ತನ್ನ ಅನ್ಯಮತಸ್ಥ ಓದುಗರಿಗಾಗಿ ಮಾರ್ಕನು ಇದನ್ನು ಅನುವಾದಿಸುತ್ತಾನೆ.

*"ಯಾರಿಗೂ ತಿಳಿಸಬಾರದೆಂದು ಅವರಿಗೆ ಖಂಡಿತವಾಗಿ ಹೇಳಿದನು"* (ವ. 36): 1:34 ರ ಟಿಪ್ಪಣಿಯನ್ನು ನೋಡಿರಿ.

*"ಅವನ ಕಿವಿ ತೆರೆದವು, ಅವನ ನಾಲಿಗೆ ಕಟ್ಟು ಬಿಚ್ಚಿಹೋಯಿತು"* (ವ. 35): ತಾನು ಜನರನ್ನು ವಿಮೋಚಿಸಲು (ಬಿಡಿಸಲು) ಬಂದಾಗ, ದೇವರು ಏನನ್ನು ಮಾಡಬೇಕೆಂದು ವಾಗ್ದಾನ ಮಾಡಿದ್ದನೋ ಅದನ್ನೇ ಯೇಸು ಮಾಡುತ್ತಿದ್ದನು (ನೋಡಿ ಯೆಶಾಯ 35:5-6). ಜನರು ಅತ್ಯಂತ ಆಶ್ಚರ್ಯ ಪಟ್ಟರು (ವ. 37). ಯೇಸು, ಅವರು ನಿರೀಕ್ಷಿಸುವಂತೆ ಒಬ್ಬ ರಾಜಕೀಯ ವಿಮೋಚಕನಂತೆ ಕಾಣಿಸಿಕೊಳ್ಳದಿದ್ದರೂ, ಆತನೇ ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನೆಂಬುದಾಗಿ ಅವರ ಮಧ್ಯದಲ್ಲಿದ್ದ ಯೆಹೂದ್ಯರು ಗ್ರಹಿಸಿಕೊಂಡಿರಬೇಕು.

**ಪ್ರಶ್ನೆಗಳು**

1. ಮೊದಲ ವಾಕ್ಯಭಾಗದಲ್ಲಿ (ವ. 1-23) ಯೇಸು ಅನೇಕ ಗುಂಪಿನ ಜನರನ್ನು ಸಂಬೋಧಿಸುತ್ತಾನೆ (ಸಂಭಾಷಣೆ). ಅವರು ಯಾರು? ಪಟ್ಟಿ ಮಾಡಿರಿ.
2. ಎಲ್ಲಾ ಯೆಹೂದ್ಯರೂ ಪಾಲಿಸಬೇಕೆಂಬುದಾಗಿ ಫರಿಸಾಯರು ಅಪೇಕ್ಷಿಸಿದ ಕೆಲವು ಶುದ್ಧಾಚಾರಗಳನ್ನು ಮಾರ್ಕನು ತಿಳಿಸುತ್ತಾನೆ. ಅವು ಯಾವುವು (1-5)?
3. ಪ್ರವಾದಿಯಾದ ಯೆಶಾಯನ ದಿನಗಳಲ್ಲಿ ಕಪಟಿಗಳು ದೇವರಿಗೆ ತೋರಿಸುವ ಭಕ್ತಿಯು ವ್ಯರ್ಥವಾಗಿತ್ತು (ವ. 6-8). ಯಾಕೆ?
4. ಮೋಶೆಯ ಧರ್ಮಶಾಸ್ತ್ರದ ವಿಷಯದಲ್ಲಿ ಯೇಸು ಫರಿಸಾಯರಿಗೆ ಏನೆಂದು ದೂಷಿಸುತ್ತಾನೆ (ವ. 8-13)?
5. ಯೇಸುವಿನ ಪ್ರಕಾರ ಯಾವುದು ಮನುಷ್ಯನನ್ನು ಹೊಲೆ ಮಾಡುವುದಿಲ್ಲ (ವ. 14-23)?
6. ಯೇಸುವಿನ ಪ್ರಕಾರ ಯಾವುದು ಒಬ್ಬ ಮನುಷ್ಯನನ್ನು ಹೊಲೆ ಮಾಡುತ್ತದೆ (ವ. 14-23)?
7. ***ಯೇಸುವಿನ ಕಾಲದಲ್ಲಿ ಪ್ಯಾಲೆಸ್ತೀನ್ ನಕ್ಷೆಯಲ್ಲಿ*** ಫೊಯಿನಿಕ್ಯ, ತೂರ್, ಸೀದೋನ್ ಮತ್ತು ದೆಕಪೊಲಿಯನ್ನು ಕಂಡುಹಿಡಿಯಿರಿ.
8. ತೂರಿನಲ್ಲಿ ಯೇಸು ಸಂಧಿಸಿದ ಸ್ತ್ರೀಯ (ಹೆಂಗಸಿನ) ಹಿನ್ನಲೆಯ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 24-26)?
9. ಆ ಹೆಂಗಸಿಗೆ (ಸ್ತ್ರೀಗೆ) ಸಹಾಯ ಮಾಡದಿರಲು ಯೇಸುವಿನ ನೆಪವೇನು (ವ. 26-27)?
10. ಯೇಸು ತನ್ನ ಮನಸ್ಸನ್ನು ಯಾಕೆ ಬದಲಿಸಿಕೊಂಡು, ಆ ಹೆಂಗಸಿನ ಮಗಳನ್ನು ಗುಣಪಡಿಸುತ್ತಾನೆ (ವ. 28-30)?
11. ದೆಕಪೊಲಿ ಸೀಮೆಯಿಂದ ಯೇಸುವಿನ ಬಳಿಗೆ ಕರೆತಂದ ಮನುಷ್ಯನಿಗೆ ಏನಾಗಿತ್ತು (ವ. 31-32)?
12. ಕಿವುಡನನ್ನು ಯೇಸು ಎಲ್ಲಿ ಗುಣಪಡಿಸುತ್ತಾನೆ (ವ. 31-33)?
13. ಕಿವುಡನನ್ನು ಗುಣಪಡಿಸಿದ್ದಕ್ಕೆ ಜನರು ಹೇಗೆ ಪ್ರತಿಕ್ರಯಿಸುತ್ತಾರೆ (ವ. 36-37)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮಾರ್ಕನು ತನ್ನ ಸುವಾರ್ತೆಯನ್ನು ಅನ್ಯಮತಸ್ಥರನ್ನು ಕುರಿತು ಹೇಳುತ್ತಿದ್ದಾನೆಂಬುದನ್ನು ಮೊದಲ ವಾಕ್ಯ ಭಾಗದ ಪಠ್ಯದಿಂದ ಹೇಗೆ ತಿಳಿದುಕೊಳ್ಳುವಿರಿ (ವ. 1-23)?

2. “ಶುದ್ಧ ಮತ್ತು ಮೈಲಿಗೆ” ಯ ಕುರಿತಾದ ವಾದವನ್ನು ಸಾರಾಂಶಗೊಳಿಸಿರಿ (ವ. 1-23). ನಿಮ್ಮದೇ ಪದಗಳನ್ನು ಉಪಯೋಗಿಸಿರಿ, ಸತ್ಯವೇದ ನೋಡಬೇಡಿರಿ.
3. ತೂರ್ ಪ್ರಾಂತ್ಯದ ಸ್ತ್ರೀಯು ಹೇಗೆ ನಮಗೊಂದು ಉದಾಹರಣೆಯಾಗಿದ್ದಾಳೆ ಅಥವಾ ಮಾದರಿಯಾಗಿದ್ದಾಳೆ ಎಂಬುದನ್ನು ವಿವರಿಸಿರಿ (ವ. 24-31).
4. ತೂರ್ ಊರಿನ ಅನ್ಯಮತಸ್ಥ ಹೆಂಗಸಿನ ಕುರಿತಾಗಿ ಮತ್ತಾಯ ಮತ್ತು ಮಾರ್ಕನ ಸುವಾರ್ತೆಯಲ್ಲಿ ಕಂಡುಬರುವ ಸಮಾಂತರದ ಕಥೆಗಳನ್ನು ಹೋಲಿಸಿರಿ (ವ. 24-30 ಮತ್ತು ಮತ್ತಾ. 15:21-28).
5. ಸತ್ಯವೇದವನ್ನು ನೋಡದೆ ಯೇಸು ಕಿವುಡನನ್ನು ಗುಣಪಡಿಸುವ ಕಥೆಯನ್ನು ಪುನಃ ಹೇಳಿರಿ (ವ. 31-37). ನಿಮ್ಮದೇ ಪದಗಳನ್ನು ಉಪಯೋಗಿಸಿ ಮತ್ತು ಕಥೆಯು ಕೇಳುವುದಕ್ಕೆ ಕುತೂಹಲಕರವಾಗಿರಲಿ. ನೀವು ಒಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿ.

**ವಿಮರ್ಶಿಸಿರಿ ಮತ್ತು ಚರ್ಚಿಸಿರಿ**

1. ಅಧ್ಯಾಯ 7 ರ ಮೊದಲ ಭಾಗದಲ್ಲಿನ (ವ. 1-23) ಯೇಸುವಿನ ಬೋಧನೆಯ ಬೆಳಕಿನಲ್ಲಿ ನಿಮ್ಮ ಸ್ವಂತ ಜೀವನ ಮತ್ತು ಪರಿಶುದ್ಧತೆಯ ಕುರಿತಾದ ನಿಮ್ಮ ತಿಳುವಳಿಕೆಯನ್ನು ವಿಮರ್ಶಿಸಿರಿ. ಫರಿಸಾಯರಂತೆ ನೀವು ಕಪಟಿಗಳಾ? ಯಾಕೆ – ಯಾಕಲ್ಲ? ಸಾಧ್ಯವಾದಷ್ಟು ಪ್ರಾಮಾಣಿಕರಾಗಿರಿ. ನಿಮಗಿರುವ ಕಾಳಜಿಯನ್ನು ಪ್ರಾರ್ಥನೆಯಲ್ಲಿ ದೇವರ ಮುಂದಿಡಿರಿ. ನಿಮ್ಮ ತೀರ್ಮಾನಗಳನ್ನು ***ಶುದ್ಧತೆ ಮತ್ತು ಅಶುದ್ಧತೆ (ಮೈಲಿಗೆ)*** ಎಂಬುದಾಗಿ ಕರೆಯಲ್ಪಡುವ ಸತ್ಯವೇದ ಅಧ್ಯಯನಕ್ಕೆ ಒಂದು ರೂಪುರೇಖೆಯನ್ನು ಸಿದ್ಧಪಡಿಸಲು ಉಪಯೋಗಿಸಿರಿ.
2. ಮಾರ್ಕ 7:24-31 ಮತ್ತು ಮತ್ತಾಯ 15:21-28 ರಲ್ಲಿ ಕಂಡುಬರುವ ತೂರ್ ಊರಿನ ಸ್ತ್ರೀಯ ಕಥೆಯನ್ನು ವಿಮರ್ಶಿಸಿರಿ. ಅಲ್ಲದೆ ಈ ಅಧ್ಯಯನದಲ್ಲಿ ಕಥೆಯ ಕುರಿತಾಗಿ ಲಭ್ಯವಿರುವ ಮಾಹಿತಿಗಳನ್ನು ಸಹ ವಿಮರ್ಶಿಸಿರಿ. ಹಾಗೆಯೇ ***ಅಚಲ ನಂಬಿಕೆಯ ಸ್ತ್ರೀ*** ಎಂಬ ಒಂದು ಸತ್ಯವೇದ ಅಧ್ಯಯನ(ಅಥವಾ ಧ್ಯಾನ ಅಥವಾ ಪ್ರಸಂಗ)ವನ್ನು ಸಿದ್ಧಪಡಿಸಿರಿ. ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 3 ರ ಉತ್ತರವನ್ನು ರೂಪುರೇಖೆಯಾಗಿ ಬಳಸಬಹುದು.



**ಮಾರ್ಕ ಅಧ್ಯಾಯ 8**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕನ ಸುವಾರ್ತೆಯ ಎಂಟನೇ ಅಧ್ಯಾಯವು ಈ ಬಾರಿ ಹೆಚ್ಚಾಗಿ ಗ್ರೀಕ್ ಮಾತನಾಡುವ ದೆಕಪೊಲಿಯ ಸೀಮೆಯಲ್ಲಿ ಸಾವಿರಾರು ಜನರಿಗೆ ಊಟ ಮಾಡಿಸಿದ ಎರಡನೇ ಅದ್ಭುತದೊಂದಿಗೆ ಪ್ರಾರಂಭವಾಗುತ್ತಿದ್ದು, ಇದನ್ನು ಏಳು ವಾಕ್ಯಭಾಗಗಳಾಗಿ ವಿಂಗಡಿಸಬಹುದು:

1. ಯೇಸು ನಾಲ್ಕು ಸಾವಿರ ಜನರಿಗೆ ಊಟ ಮಾಡಿಸಿದ್ದು, ವ. 1-10
2. ಫರಿಸಾಯರು ಯೇಸುವಿನ ಬಳಿ ಸೂಚಕಕಾರ್ಯ ತೋರಿಸಬೇಕೆಂದು ಕೇಳುವುದು, ವ. 11-13
3. ಫರಿಸಾಯರ ಮತ್ತು ಹೆರೋದನ ಹುಳಿ ಹಿಟ್ಟು, ವ. 14-21
4. ಯೇಸು ಬೇತ್ಸಾಯಿದದ ಬಳಿ ಒಬ್ಬ ಕುರಡನನ್ನು ಗುಣಪಡಿಸಿದ್ದು, ವ. 22-26,

   ಈ ಕಥೆಯನ್ನು ಬೇರಾವ ಸುವಾರ್ತೆಗಳಲ್ಲೂ ಕಾಣಲಾಗುವುದಿಲ್ಲ.

5. ಪೇತ್ರನು ಯೇಸುವನ್ನು ಕ್ರಿಸ್ತನೆಂಬುದಾಗಿ ಅರಿಕೆ ಮಾಡುವುದು, ವ. 27-30
6. ಯೇಸು ತನ್ನ ಮರಣವನ್ನು ಮುಂತಿಳಿಸಿದ್ದು, ವ. 31-33
7. ಯೇಸುವನ್ನು ಹಿಂಬಾಲಿಸುವುದರ ಕ್ರಯ, ವ. 34, 9:1

*"ಜನರು ಗುಂಪು ಕೂಡಿ ಬಂದಾಗ"* (ವ. 1): ಈ ಕಥೆಯು ದೆಕಪೊಲಿ ಪ್ರಾಂತ್ಯದಲ್ಲಿ ನಡೆಯುತ್ತದೆ (ನೋಡಿ 7:1), ಹಾಗಾಗಿ ಜನರ ಗುಂಪು ಬಹುಶಃ ಯೆಹೂದ್ಯರು ಮತ್ತು ಅನ್ಯಮತಸ್ಥರನ್ನು ಒಳಗೊಂಡಿತ್ತು.

*"ಜನರನ್ನು ನೋಡಿ ಕನಿಕರಪಡುತ್ತೇನೆ"* (ವ. 1-2): ಐದು ಸಾವಿರ ಜನರಿಗೆ ಊಟ ಮಾಡಿಸಿದ ಕಥೆಯೊಂದಿಗೆ ಇದನ್ನು ಹೋಲಿಸಿರಿ. ಹಾಗೆಯೇ ಈ ಜನರು "ಕುರುಬನಿಲ್ಲದ ಕುರಿಗಳಂತಿ"ರುವದರಿಂದ ಯೇಸುವಿಗೆ ಕನಿಕರವುಂಟಾಯಿತು (ವ. 6:34). ಮೂರು ದಿನಗಳಿಂದ ಊಟವಿಲ್ಲದ ನಿಮಿತ್ತ ಈಗ ಯೇಸು ಅವರ ಮೇಲೆ ಕನಿಕರಪಟ್ಟನು. ಯೇಸು ತನ್ನ ಬಳಿಗೆ ಬಂದ ಜನರ ಶಾರೀರಿಕ ಅಗತ್ಯತೆ, ಆತ್ಮೀಕ ಅಗತ್ಯತೆ ಮತ್ತು ಅನೇಕ ಬಗೆಯ ಅಗತ್ಯತೆಗಳಿಗಾಗಿ ಕಾಳಜಿವಹಿಸಿದನು.

*"ಏಳು ಹೆಡಿಗೆ ಆದವು"* (ವ. 8): ಇಲ್ಲಿ ಮಾರ್ಕನು 6:43 ರಲ್ಲಿ ಹೇಳಿರುವದಕ್ಕಿಂತ ವಿಭಿನ್ನವಾದ ಪದವನ್ನು ಪುಟ್ಟಿಗೆ ಉಪಯೋಗಿಸುತ್ತಾನೆ. ಈ ಮೊದಲು ಊಟ ಮಾಡಿಸಿದ್ದ ಅದ್ಭುತಗಳಲ್ಲಿದ್ದ ಪುಟ್ಟಿಗಳು ಸಣ್ಣ ಊಟದ ಡಬ್ಬಿಗಳಾಗಿದ್ದವು. ಆದರೆ ಇಲ್ಲಿ ದೊಡ್ಡದಾದ ಪುಟ್ಟಿಗಳಾಗಿವೆ. ಮುಂದೆ ಯೇಸು ಊಟ ಬಡಿಸಿದ ಎರಡು ಅಧ್ಭುತಗಳ ಬಗ್ಗೆ ತನ್ನ ಶಿಷ್ಯರಿಗೆ ಜ್ಞಾಪಿಸುವಾಗ, ಪುನಃ ಮಾರ್ಕನು ಅದೇ ಪದಗಳನ್ನು ಬಳಸುತ್ತಾನೆ (ವ. 19-20).

*"ದಲ್ಮನೂಥ"* (ವ. 10): ಇದು ಮಗ್ದಲದ ಸಮೀಪ, ಗಲಿಲಾಯ ಸಮುದ್ರದ ಪಶ್ಚಿಮ ಕರಾವಳಿಯ ಮೇಲಿನ ಒಂದು ಹಳ್ಳಿಯಾಗಿತ್ತು (ಮತ್ತಾಯ 15:39 ರಲ್ಲಿ ಇದೇ ಹಿನ್ನೆಲೆಯಲ್ಲಿ ತಿಳಿಸಲಾಗಿದೆ).

*"ಫರಿಸಾಯರು"* (ವ. 11): ಈ ಹಿಂದೆ ಎರಡು ಬಾರಿ ಫರಿಸಾಯರು ಯೇಸುವನ್ನು ಪರೀಕ್ಷಿಸಲು ಬಂದದ್ದರೊಂದಿಗೆ ಹೋಲಿಸಿ (3:22 ಮತ್ತು 7:1).

*"ಪರೀಕ್ಷಿಸುವುದಕ್ಕಾಗಿ ಆಕಾಶದಲ್ಲಿ ಒಂದು ಸೂಚಕ ಕಾರ್ಯ"* (ವ. 11): ಸೂಚಕಕಾರ್ಯವನ್ನು ತೋರಿಸಬೇಕೆಂಬ ಫರಿಸಾಯರ ಬೇಡಿಕೆಯು ಯಥಾರ್ಥವಾಗಿರಲಿಲ್ಲವೆಂದು ಅದರ ಹಿನ್ನಲೆಯೇ ತಿಳಿಸುತ್ತದೆ. ಅವರ ಉದ್ದೇಶ ಯೇಸುವನ್ನು ಶೋಧಿಸುವುದಾಗಿತ್ತು.

*"ಆಚೆ ದಡಕ್ಕೆ"* (ವ. 15): ಯೇಸು ಮತ್ತು ಆತನ ಶಿಷ್ಯರು ಗಲಿಲಾಯವನ್ನು ಬಿಟ್ಟು (ಹೋಲಿಸಿ ವ. 10), ಪುನಃ ಗಲಿಲಾಯ ಸಮುದ್ರವನ್ನು ಬಿಟ್ಟು ಅದರ ಪೂರ್ವ ತೀರಕ್ಕೆ ಹೋಗುತ್ತಾರೆ.

*"ಹುಳಿ ಹಿಟ್ಟು"* (ವ. 15): ಹುಳಿ ಹಿಟ್ಟು ಕೆಟ್ಟ ಪ್ರಭಾವವನ್ನು ಸೂಚಿಸುತ್ತದೆ. ಸಣ್ಣ ಪ್ರಮಾಣದ ಹುಳಿ ಹಿಟ್ಟು ಇಡೀ ರೊಟ್ಟಿಯನ್ನೆಲ್ಲಾ ಹುಳಿಯಾಗಿಸುತ್ತದೆ, ಅದೇ ರೀತಿ ಕೆಟ್ಟತನದ ಪ್ರಭಾವವು ಜನರ ನಡುವೆ ಹಬ್ಬುತ್ತದೆ. ಇಲ್ಲಿ ಯೇಸು "ಫರಿಸಾಯರ ಮತ್ತು ಹೆರೋದನ ಹುಳಿ ಹಿಟ್ಟು" ಎಂಬ ಹೇಳಿಕೆಯನ್ನುಪಯೋಗಿಸಿ ಯೇಸುವಿನ ಗುರುತನ್ನು ಸಾಬೀತುಪಡಿಸಲು ದೇವರಿಂದ ಒಂದು ಸೂಚಕ ಕಾರ್ಯವನ್ನು ತೋರಿಸಬೇಕೆಂಬ ಫರಿಸಾಯರ ಬಯಕೆ ಮತ್ತು ಯೇಸುವಿನ ಗುರುತಿನ ಬಗ್ಗೆ ಹೆರೋದನ ಗೊಂದಲವನ್ನು (ಹೋಲಿಸಿ 6:16) ತಿಳಿಸುತ್ತಾನೆ.

*"ಹೆರೋದ"* (ವ. 15): ಅರಸನಾದ ಹೆರೋದ ಅಂತಿಪ (ಟಿಪ್ಪಣಿ 6:14 ನೋಡಿ).

*"ಮನಸ್ಸು ಕಲ್ಲಾಗಿ"* (ವ. 18): ಇದರರ್ಥ "ತಿಳುವಳಿಕೆಯ ಕೊರತೆ".

*"ಬೇತ್ಸಾಯಿದ* (ವ. 22): ಇದು ಗಲಿಲಾಯ ಸಮುದ್ರದ ಉತ್ತರ ತೀರದ ಮೇಲಿರುವ ಒಂದು ಸಣ್ಣ ಪಟ್ಟಣವಾಗಿತ್ತು. ಇದು ಕೆಲ ಅಪೊಸ್ತಲರ ತವರಾಗಿತ್ತು (ಫಿಲಿಪ್ಪ, ಅಂದ್ರೆಯ ಮತ್ತು ಪೇತ್ರನ ಬಗ್ಗೆ ತಿಳಿಸಲಾದ ಯೋಹಾನ 1:44 ನ್ನು ನೋಡಿರಿ).

*"ಇವನನ್ನು ಮುಟ್ಟಬೇಕು"* (ವ. 22): ಯೇಸು ಆತನನ್ನು ಗುಣಪಡಿಸಬೇಕೆಂದು ಅವರು ಬಯಸಿದರು.

*"ಫಿಲಿಪ್ಪನ ಕೈಸರೈಯ"* (ವ. 27): ಇದು ಪ್ಯಾಲೆಸ್ತೇನಿನ ಉತ್ತರ ಗಡಿಯಲ್ಲಿನ ಹೆರ್ಮೋನ್ ಪರ್ವತದ ಸಮೀಪದ ಒಂದು ಪಟ್ಟಣವಾಗಿತ್ತು. ಎರಡನೇ ಹೆರೋದ ಫಿಲಿಪ್ಪನು (ಹೆರೋದ ಮಹಾಶಯನ ಮಗ) ಇದನ್ನು ಸ್ಥಾಪಿಸಿ, ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು ಮತ್ತು ಮೆಡಿಟರೇನಿಯನ್ ಸಮುದ್ರದ ಬಳಿಯಲ್ಲಿ ಯೂದಾಯದಲ್ಲಿನ ರೋಮನ್ ಪ್ರಾಂತ್ಯದ ರಾಜಧಾನಿಯಾಗಿರುವ ಪ್ರಸಿದ್ಧ ಕೈಸರೈ ಪಟ್ಟಣದಿಂದ ಇದನ್ನು ಬೇರ್ಪಡಿಸುವುದಕ್ಕಾಗಿ ಇದಕ್ಕೆ ಫಿಲಿಪ್ಪನ ಕೈಸರೈಯ ಎಂದು ಹೆಸರಿಟ್ಟನು.

*"ಕ್ರಿಸ್ತನು"* (ವ. 29): ಗ್ರೀಕ್ ಪದದ ಅರ್ಥ "ಅಭಿಷಕ್ತನು" ಎಂಬುದಾಗಿದೆ ಮತ್ತು "ಮೆಸ್ಸೀಯ"ನಿಗಾಗಿನ ಇಬ್ರಿಯ ಪದದ ಭಾಷಾಂತರವಾಗಿದೆ. ಯೇಸುವಿನ ಕಾಲದಲ್ಲಿನ ಯೆಹೂದ್ಯರು ಈ ಹೆಸರನ್ನು ಒಬ್ಬ ರಾಜಕೀಯ ಮತ್ತು ರಾಷ್ಟ್ರೀಯ ನಾಯಕನ ಆಗಮನದೊಂದಿಗೆ ಸಂಬಂಧ ಕಲ್ಪಿಸುತ್ತಿದ್ದರು. ಆ ಕಾರಣಕ್ಕಾಗಿಯೇ ಯೇಸು ಈ ಹೆಸರನ್ನು ವಿರಳವಾಗಿ ಬಳಸಿದ್ದಾನೆ. ಏನೇ ಆಗಲಿ ಮಾರ್ಕನು, ಯೇಸುವನ್ನು ಕ್ರಿಸ್ತನೆಂಬುದಾಗಿ ಗುರುತಿಸುವುದರೊಂದಿಗೆ ತನ್ನ ಸುವಾರ್ತೆಯನ್ನು ಪ್ರಾರಂಭಿಸುತ್ತಾನೆ (ವ. 1:1). ***ಕುರುಬರು (ಒಡೆಯರು) ಮತ್ತು ದೇವದೂತರು*** ಎಂಬ ಅಧ್ಯಯನದಲ್ಲಿನ ಲೂಕ 2:11 ರ ಟಿಪ್ಪಣಿ ನೋಡಿರಿ.

*"ಯಾರಿಗೂ ಹೇಳಬೇಡಿರಿ ಎಂದು ಅವರಿಗೆ ಖಂಡಿತವಾಗಿ ಹೇಳಿದನು"* (ವ. 30): "ಮೆಸ್ಸೀಯನ ರಹಸ್ಯಗಳು", ಟಿಪ್ಪಣಿ 1:34 ನ್ನು ನೋಡಿರಿ.

*"ಮನುಷ್ಯಕುಮಾರನು"* (ವ. 31): ಮೂರು ಬಾರಿ ಯೇಸು ತನ್ನ ಮರಣದ ಕುರಿತು ಮುಂತಿಳಿಸುವುದನ್ನು ಮಾರ್ಕನು ಬರೆಯುತ್ತಾನೆ (ನೋಡಿ 9:31, 10:33-34). ಯೆಹೋವನ ಸೇವಕನ ಬಾಧೆಯು ಪ್ರವಾದಿಯಾದ ಯೆಶಾಯನಿಂದ ಮುಂತಿಳಿಸಲ್ಪಟ್ಟಿತ್ತು (ನೋಡಿ ಯೆಶಾಯ 52:13, 53:12).

*"ಹಿರಿಯರಿಂದಲೂ, ಮಹಾಯಾಜಕರಿಂದಲೂ, ಶಾಸ್ತ್ರಿಗಳಿಂದಲೂ* (ವ. 31): ಈ ಹಿರಿಯರು ಯೆಹೂದಿ ಮಹಾಮಂಡಳಿಯ ಸದಸ್ಯರಾಗಿದ್ದರು (ಇದು ಯೆಹೂದ್ಯರ ಉಚ್ಛನ್ಯಾಯಾಲಯ ಮತ್ತು ಮಂಡಳಿಯಾಗಿತ್ತು). ಮುಖ್ಯ ಯಾಜಕರುಗಳು ಸದ್ದುಕಾಯರಾಗಿದ್ದು ಯೆರೂಸಲೇಮಿನ ದೇವಾಲಯದಲ್ಲಿ ಆರಾಧನೆಯನ್ನು ನೋಡಿಕೊಳ್ಳುವವರಾಗಿದ್ದರು. ಧರ್ಮಶಾಸ್ತ್ರದ

ಬೋಧಕರುಗಳು (ಶಾಸ್ತ್ರಿಗಳು) ಹೆಚ್ಚಾಗಿ ಫರಿಸಾಯರಾಗಿದ್ದು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಬೋಧಿಸಲು ಮತ್ತು ಅಳವಡಿಸಿಕೊಳ್ಳಲು ವೃತ್ತಿಪರ ತರಬೇತಿ ಹೋದಿದವರಾಗಿದ್ದರು. ಯೆಹೂದಿ ಮಹಾ ಮಂಡಳಿ(ಮಹಾಸಭೆ)ಯು ಈ ಮೂರು ಗುಂಪುಗಳ ಪ್ರತಿನಿಧಿಗಳನ್ನು ಒಳಗೊಂಡಿತ್ತು.

*"ತನ್ನ ಶಿಲುಬೆಯನ್ನು ಹೊತ್ತುಕೊಂಡು"* (ವ. 34): ಯೇಸುವಿನ ಕಾಲದಲ್ಲಿ ಈ ಮಾತಿನ ಅರ್ಥ ಸಾಮಾನ್ಯ ರೀತಿಯಲ್ಲಿ "ಬಾಧೆ ಪಡು" ಎಂಬುದಾಗಿರಲಿಲ್ಲ. ಯೇಸುವಿಗೆ ಶಿಲುಬೆಯು ಒಂದು ಮರಣದಂಡನೆಯ ಸಾಧನವಾಗಿತ್ತು. ಆತನು ತನ್ನ ಮರಣ ದಂಡನೆಗಾಗಿ ಮಾರ್ಗದುದ್ದಕ್ಕೂ ತನ್ನ ಶಿಲುಬೆಯನ್ನು ತಾನೇ ಹೊರಬೇಕಾಗಿತ್ತು. ಹಾಗಾಗಿ ಯೇಸು ತನ್ನ ಶಿಷ್ಯರು ಮತ್ತು ಹಿಂಬಾಲಕರು "ತಮ್ಮ ಶಿಲುಬೆಯನ್ನು ಹೊತ್ತುಕೊಳ್ಳಬೇಕೆಂದು" ಅಪೇಕ್ಷಿಸುವಾಗ, ಅವರು ತಮ್ಮ ಜೀವಿತವನ್ನು ಆತನಿಗೆ ಯಾವುದೇ ಷರತ್ತಿಲ್ಲದೆ ಒಪ್ಪಿಸಬೇಕೆಂಬುದಾಗಿ ಆತನು ಬಯಸುತ್ತಾನೆ. ಶಿಲುಬೆಗೇರಿಸುವಿಕೆಯು ಒಬ್ಬ ವ್ಯಕ್ತಿಯನ್ನು ಕ್ರೂರವಾಗಿ ಮತ್ತು ಅಪಮಾನಕರವಾಗಿ ಮರಣದಂಡನೆಗೊಪ್ಪಿಸುವ ಒಂದು ವಿಧವಾಗಿತ್ತು. ರೋಮನ್ನರು ಗಂಭೀರವಾದ ಅಪರಾಧಗಳನ್ನು ಮಾಡಿದವರಿಗಾಗಿ ಈ ದಂಡನೆಯನ್ನು ಮೀಸಲಾಗಿಟ್ಟಿದ್ದರು.

*"ಪ್ರಾಣವನ್ನು"* (ವ. 35-37): ಈ ವಚನಗಳಲ್ಲಿ ಯೇಸು "ಪ್ರಾಣವನ್ನು" ಎರಡು ರೀತಿಯಲ್ಲಿ ಬಳಸುತ್ತಾನೆ: "ಶಾರೀರಿಕ ಪ್ರಾಣ" ಮತ್ತು "ಆತ್ಮೀಕ/ನಿತ್ಯವಾದ ಪ್ರಾಣ". ಹಾಗಾಗಿ ವಚನ 35 ಒಂದು ರೀತಿಯ "ಶಬ್ಧಚಮತ್ಕಾರ"ವಾಗಿದೆ. "ತನ್ನ (ಶಾರೀರಿಕ) ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ತನ್ನ (ಆತ್ಮೀಕ/ನಿತ್ಯವಾದ) ಪ್ರಾಣವನ್ನು ಕಳಕೊಳ್ಳುವನು ಮತ್ತು ನನ್ನ ನಿಮಿತ್ತವಾಗಿಯೂ, ಸುವಾರ್ತೆಯ ನಿಮಿತ್ತವಾಗಿಯೂ ತನ್ನ (ಶಾರೀರಿಕ) ಪ್ರಾಣವನ್ನು ಕಳಕೊಂಡವನು ಅದನ್ನು (ಆತ್ಮೀಕ/ನಿತ್ಯವಾದ ಪ್ರಾಣ) ಉಳಿಸಿಕೊಳ್ಳುವನು"

*"ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಬಲವಾಗಿ ಬಂದಿರುವದನ್ನು ನೋಡುವ ತನಕ ಮರಣ ಹೊಂದುವುದಿಲ್ಲ"* (ವ. 9:1): ಯೇಸುವಿನ ಈ ಮಾತು ಅನೇಕ ಸತ್ಯವೇದ ಓದುಗರನ್ನು ಗಲಿಬಿಲಿಗೊಳಿಸಿದೆ. ಆದರೆ ಒಂದಂತೂ ಸತ್ಯ; ಇಲ್ಲಿ ಯೇಸು ತನ್ನ ಎರಡನೇ ಬರೋಣವನ್ನು ಸೂಚಿಸಿ ಹೇಳುತ್ತಿಲ್ಲ. ಹಾಗಾಗಿ ಆ ಸಮಯದಲ್ಲಿ ಯೇಸುವಿನ ಮಾತನ್ನು ಕೇಳಿಸಿಕೊಂಡವರಲ್ಲಿ ಕೆಲವರು, ಆತನ ಎರಡನೇ ಬರೋಣದವರಿಗೂ ಜೀವಂತವಾಗಿರುವರು ಎಂದರ್ಥವಲ್ಲ. ಮತ್ತು ತನ್ನ ಎರಡನೇ ಬರೋಣವು, ತನ್ನ ಕೆಲವು ಕೇಳುಗರ ಜೀವಿತಾವಧಿಯೊಳಗೇ ಆಗುತ್ತದೆಂಬುದಾಗಿ ಯೇಸು ಬೋಧಿಸಿ, ಗಲಿಬಿಲಿಗೊಳಿಸಿದ್ದಾನೆಂದು ಸಹ ಅರ್ಥವಲ್ಲ. ಹಾಗಾದರೆ ಇದರ ಅರ್ಥವೇನು? ಸತ್ಯವೇದ ಪಂಡಿತರು ಐದು ಅಥವಾ ಅದಕ್ಕಿಂತ ಹೆಚ್ಚು ಅಥವಾ ಕಡಿಮೆ ಸಮಂಜಸವಾದ ವ್ಯಾಖ್ಯಾನಗಳನ್ನು ಕೊಡುತ್ತಾರೆ.

1. ಇದು ಒಂದು ವಾರದ ನಂತರ ಸಂಭವಿಸಿದ ರೂಪಾಂತರದ ಕಾಲಜ್ಞಾನವಾಗಿದೆ (9:2 ನ್ನು ನೋಡಿ). ಮತ್ತು ಯೇಸು "ತನ್ನ ತಂದೆಯ ಪ್ರಭಾವದೊಡನೆ ಹಿಂತಿರುಗಿ ಬರುವನೆಂಬುದನ್ನು" ಇದು ತಿಳಿಸುತ್ತದೆ (8:38).
2. ಯೇಸುವಿನ ಪುನರುತ್ಥಾನ
3. ಪಂಚಾಶತ್ತಾಮದ ದಿನ ಆತ್ಮನ ಬರೋಣ
4. ಆದಿ ಸಭೆಯ ಸೇವೆಯ ಮೂಲಕ ದೇವರ ರಾಜ್ಯದ ಹರಡುವಿಕೆ
5. ಯೆರೂಸಲೇಮಿನ ದೇವಾಲಯದ ನಾಶನ – ಕ್ರಿ.ಶ. 70

**ಪ್ರಶ್ನೆಗಳು**

1. ***ಯೇಸುವಿನ ಕಾಲದಲ್ಲಿ ಗಲಿಲಾಯ ನಕ್ಷೆಯಲ್ಲಿ*** ಮಗ್ದಲ, ಬೇತ್ಸಾಯಿದ ಮತ್ತು ಫಿಲಿಪ್ಪನ ಕೈಸರೈಯನ್ನು ಗುರುತಿಸಿರಿ. ಅಲ್ಲದೇ ***ಯೇಸುವಿನ ಕಾಲದಲ್ಲಿ ಪ್ಯಾಲೆಸ್ತೇನ್ ನಕ್ಷೆಯಲ್ಲಿ*** ಫಿಲಿಪ್ಪನ ಕೈಸರೈಯ, ಫಿಲಿಪ್ಪನ ಪಾಳಯ, ಮೆಡಿಟರೇನಿಯನ್ ಸಮುದ್ರ ಮತ್ತು ಕೈಸರೈಯನ್ನು ಗುರುತಿಸಿರಿ.
2. ಯೇಸು ಯಾಕೆ ಜನರ ಗುಂಪಿನ ಮೇಲೆ ಕನಿಕರಪಟ್ಟನು (ವ. 1-4)?
3. ಊಟ ಮಾಡಿಸಿದ ಅದ್ಭುತಕ್ಕಿಂತ ಮುಂಚೆ ಶಿಷ್ಯರ ಬಳಿ ಎಷ್ಟು ಆಹಾರವಿತ್ತು ಮತ್ತು ನಂತರ ಎಷ್ಟು ಉಳಿಯಿತು (ವ. 1-10)?
4. ಫರಿಸಾಯರು ಯೇಸುವಿನ ಬಳಿ ತಂದ ಮನವಿ ಏನು (ವ. 11-13)?
5. ಫರಿಸಾಯರ ಬೇಡಿಕೆಗೆ ಯೇಸು ಏನು ಮಾಡಿದನು (ವ. 11-13)?
6. ಯೇಸು ಮತ್ತು ಆತನ ಶಿಷ್ಯರು ದಲ್ಮನೂಥದಿಂದ ಬೇತ್ಸಾಯಿದಕ್ಕೆ ಹೇಗೆ ಪ್ರಯಾಣಿಸಿದರು ಮತ್ತು ತಮ್ಮ ಪ್ರಯಾಣದ ವೇಳೆ ಅವರು ಎದುರಿಸಿದ ಸಮಸ್ಯೆಯೇನು (ವ. 19-22)?
7. ಯಾವುದರ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು (ವ. 14-16)?
8. ಯಾವುದಕ್ಕಾಗಿ ಯೇಸು ಶಿಷ್ಯರನ್ನು ಬೈದನು (ವ. 17-21)?
9. ಬೇತ್ಸಾಯಿದಲ್ಲಿ ಕುರುಡನಿಗೆ ಎಲ್ಲಿ ಸ್ವಸ್ಥತೆಯುಂಟಾಗುತ್ತದೆ (ವ. 22-26)?
10. ಬೇತ್ಸಾಯಿದದಲ್ಲಿ ಕುರುಡನಿಗಾದ “ಎರಡು – ಹಂತದ” ಸ್ವಸ್ಥತೆಯನ್ನು ವಿವರಿಸಿರಿ (ವ. 22-26)?



11. ಪ್ಯಾಲೆಸ್ತೇನಿನ ಉತ್ತರ ಭಾಗದ ಜನರು ಯೇಸುವನ್ನು ಯಾರೆಂಬುದಾಗಿ ಯೋಚಿಸಿದರು (ವ. 27-30)?
12. ಯೇಸು ಯಾರೆಂಬುದಾಗಿ ಪೇತ್ರನು ಯೋಚಿಸಿದನು (ವ. 27-30)?
13. ತನ್ನ ಕುರಿತು ಯಾವ ಹೆಸರನ್ನು ಉಪಯೋಗಿಸಿ ಯೇಸು ತನ್ನ ಬಾಧೆ ಮತ್ತು ಮರಣವನ್ನು ಮುಂತಿಳಿಸುತ್ತಾನೆ (ವ. 31)?
14. ಯಾಕೆ ಪೇತ್ರನು ಯೇಸುವನ್ನು ಪಕ್ಕಕ್ಕೆ ಕರೆದು ಕೈಹಿಡಿದುಕೊಂಡು ಗದರಿಸಿದನು (ವ. 31-33)?
15. ಪೇತ್ರನ ಗದರಿಕೆಯನ್ನು ಯೇಸು ಹೇಗೆ ಮೌಲ್ಯಮಾಪನ ಮಾಡುತ್ತಾನೆ (ವ. 31-33)?
16. 8:34 – 9:1 ರಲ್ಲಿ ಯೇಸು ಯಾರನ್ನು ಸಂಬೋಧಿಸುತ್ತಾನೆ?
17. ವಚನ 34 ರ ಪ್ರಕಾರ ತನ್ನ ಶಿಷ್ಯರಾಗಬೇಕೆಂದಿರುವವರು ಏನು ಮಾಡಬೇಕೆಂದು ಯೇಸು ಹೇಳುತ್ತಾನೆ?
18. ವಚನ 35 ರಲ್ಲಿನ ಯೇಸುವಿನ ಹೇಳಿಕೆಯ ಪ್ರಕಾರ ಯಾರು ತಮ್ಮ ಪ್ರಾಣವನ್ನು ಉಳಿಸಿಕೊಳ್ಳುತ್ತಾರೆ?
19. ಯೇಸು ಮತ್ತು ಆತನ ಮಾತುಗಳಿಗೆ ನಂಬಿಕೊಳ್ಳುವವರಿಗೆ ಏನಾಗುತ್ತದೆ (ವ. 38)?
20. ಶಿಷ್ಯತ್ವದ ಬಗ್ಗೆ ತನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಕೆಲವು ಜನರ ಬಗ್ಗೆ ಯೇಸು ಏನೆಂದು ಹೇಳುತ್ತಾನೆ (9:1)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಸತ್ಯವೇದ ನೋಡದೆ "ಯೇಸು ನಾಲ್ಕು ಸಾವಿರ ಜನರಿಗೆ ಊಟ ಮಾಡಿಸಿದ ಕಥೆಯನ್ನು ಪುನಃ ಹೇಳಿರಿ (ವ. 1-10). ನಿಮ್ಮದೇ ಪದ ಬಳಸಿರಿ ಮತ್ತು ಕಥೆಯು ಕೇಳುವುದಕ್ಕೆ ಕುತೂಹಲಕಾರಿಯಾಗಿರಲಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂದು ಕಲ್ಪಿಸಿಕೊಳ್ಳಿ.
2. ಯಾಕೆ ಫರಿಸಾಯರು ಯೇಸುವಿನ ಬಳಿ "ಆಕಾಶದಲ್ಲಿ ಒಂದು ಸೂಚಕಕಾರ್ಯವನ್ನು ಕೇಳಿದರು? ಯಾಕೆ ಯೇಸು ಆ ರೀತಿಯಲ್ಲಿ ಅವರಿಗೆ ಉತ್ತರಿಸಿದನೆಂಬುದಾಗಿ ನೀವು ಯೋಚಿಸುವಿರಿ (ವ. 11-13)?
3. ಯೇಸು "ಹುಳಿಹಿಟ್ಟು" ಎಂಬ ರೂಪಾಲಂಕಾರವನ್ನು ಒಟ್ಟು ಐದು ಬಾರಿ ಬಳಸುತ್ತಾನೆ, ಎರಡು ಬಾರಿ ದೇವರ ರಾಜ್ಯದ ಬಗ್ಗೆ ಒಂದು ಸಕಾರಾತ್ಮಕ ರೀತಿಯಲ್ಲಿ (ಮತ್ತಾ. 13:33 ಮತ್ತು ಲೂಕ 13:21) ಮತ್ತು ಫರಿಸಾಯರ ಸಂಬಂಧದಲ್ಲಿ ಮೂರು ಬಾರಿ ನಕಾರಾತ್ಮಕ ರೀತಿಯಲ್ಲಿ (ಮತ್ತಾ. 16:6-12, ಮಾರ್ಕ 8:15, ಲೂಕ 21:1) ಉಪಯೋಗಿಸುತ್ತಾನೆ. ಈ ಐದು ವಾಕ್ಯಭಾಗಗಳಲ್ಲಿ "ಹುಳಿಹಿಟ್ಟು" ಏನನ್ನು ಸೂಚಿಸುತ್ತದೆಂಬುದನ್ನು ವಿವರಿಸಿರಿ.
4. "ಫರಿಸಾಯರ ಮತ್ತು ಹೆರೋದನ ಹುಳಿಹಿಟ್ಟು" ವಾಕ್ಯಭಾಗದಲ್ಲಿ (ವ. 14-21) ಯೇಸು ತನ್ನ ಶಿಷ್ಯರಿಗಾಗಿ ಇಟ್ಟುಕೊಂಡಿರುವ ಸಂದೇಶವನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
5. ತಾನು "ಮೆಸ್ಸೀಯ"ನೆಂಬುದಾಗಿ ಯಾರಿಗೂ ಹೇಳಬಾರದೆಂದು ಶಿಷ್ಯರ ಬಳಿ ಹೇಳುವಲ್ಲಿ ಯೇಸು ಯಾಕೆ ಅಷ್ಟು ಕಟ್ಟುನಿಟ್ಟಾಗಿದ್ದನೆಂಬುದಾಗಿ ನೀವು ಯೋಚಿಸುವಿರಿ (ವ. 27-30)?
6. ಯಾಕೆ ಯೇಸು ಪೇತ್ರನನ್ನು "ಸೈತಾನ"ನೆಂಬುದಾಗಿ ಕರೆಯುವಷ್ಟು ಕಠೋರವಾಗಿ ಗದರಿಸಿದನೆಂಬುದಾಗಿ ನೀವು ಯೋಚಿಸುವಿರಿ (ವ. 31-33)?
7. ವಚನ 35 ರಲ್ಲಿ "ಪ್ರಾಣ" ಕುರಿತಾಗಿನ ತನ್ನ ಹೇಳಿಕೆಯಿಂದ ತನ್ನ ಕೇಳುಗರು ಯಾವ ರೀತಿಯ ಸಾರಾಂಶಕ್ಕೆ ಬರಬೇಕೆಂದು ಯೇಸು ಬಯಸಿದನೆಂಬುದಾಗಿ ನೀವು ಯೋಚಿಸುವಿರಿ?
8. ಯಾಕೆ ವಚನ 36-37 ರಲ್ಲಿನ ಯೇಸುವಿನ ಎರಡು ಪ್ರಶ್ನೆಗಳು ಅಲಂಕಾರಿಕವಾಗಿವೆಯೆಂಬುದನ್ನು ವಿವರಿಸಿರಿ.
9. ವಚನ 38 ರಲ್ಲಿ ಯೇಸುವಿನ ಹೇಳಿಕೆಯನ್ನು ವಿವರಿಸಿರಿ. ನಿಮ್ಮದೇ ಪದ ಬಳಸಿರಿ, ಸತ್ಯವೇದ ನೋಡಬೇಡಿರಿ.
10. ವಚನ 34-38 ರಲ್ಲಿನ ಯೇಸುವಿನ ಮಾತುಗಳಿಂದ ಶಿಷ್ಯತ್ವದ ಬಗ್ಗೆ ನಾವೇನನ್ನು ಕಲಿಯುತ್ತೇವೆ?
11. ಟಿಪ್ಪಣಿ 9:1 ಕ್ಕೆ ಹೋಗಿರಿ, "ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಭಲವಾಗಿ ಬಂದಿರುವುದನ್ನು ನೋಡುವ ತನಕ ಮರಣ ಹೊಂದುವುದಿಲ್ಲ" ಯೇಸುವಿನ ಈ ಹೇಳಿಕೆಯ ಯಾವ ಅರ್ಥವಿವರಣೆಗೆ ನೀವು ಆಧ್ಯತೆ ಕೊಡುವಿರಿ? ಯಾಕೆ ಎಂದು ವಿವರಿಸಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯನದ ಬೆಳಕಿನಡಿಯಲ್ಲಿ "ಶಿಷ್ಯತ್ವವನ್ನು" ವಿಮರ್ಶಿಸಿರಿ. ಹಾಗೆಯೇ ***ಶಿಷ್ಯತ್ವ*** ಎಂಬ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ನನ್ನ ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 10 ರ ಉತ್ತರವನ್ನು ಇದಕ್ಕೆ ರೂಪುರೇಖೆಯಾಗಿ ಬಳಸಬಹುದು.

**ಮಾರ್ಕ ಅಧ್ಯಾಯ 9**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕನ 9 ನೇ ಅಧ್ಯಾಯವು ಆರು ವಾಕ್ಯಭಾಗಗಳನ್ನು ಒಳಗೊಂಡಿದೆ:

1. ಯೇಸುವಿನ ರೂಪಾಂತರ, ವ. 2-13
2. ಯೇಸು ಮೂರ್ಛಾರೋಗಿ(ಅಶುದ್ಧ ಆತ್ಮ ಹಿಡಿದಿದ್ದವ)ಯನ್ನು ಗುಣಪಡಿಸಿದ್ದು, ವ. 14-29
3. ಪುನಃ ಯೇಸು ತನ್ನ ಮರಣವನ್ನು ಮುಂತಿಳಿಸಿದ್ದು, ವ. 30-32
4. ಹಿರಿಮೆ/ದೊಡ್ಡತನದ ಕುರಿತು, ವ. 33-37
5. ಪರ ಅಥವಾ ವಿರೋಧಿ, ವ. 38-41
6. ಅಡ್ಡಿ, ವ. 42-50

ಯೇಸುವಿನೊಂದಿಗೆ ಬೆಟ್ಟದ ಮೇಲೆ ಹೋಗಿ ಆತನು ರೂಪಾಂತರವಾಗುವುದನ್ನು ನೋಡಲು ಕೇವಲ ಆತನ ಆಪ್ತ ನಿಕಟ ಶಿಷ್ಯರಿಗೆ ಮಾತ್ರ ಅನುಮತಿಸಲಾಗಿತ್ತು. ಮುಂದೆ ತಾನು ಯೇಸುವಿನ ಕುರಿತು ವರ್ಣಿಸುವಾಗ ಪೇತ್ರನು ಈ ದಿನವನ್ನು ನೆನಪಿಸಿಕೊಳ್ಳುತ್ತಾನೆ: "ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಕ್ತಿಯನ್ನು ಪ್ರತ್ಯಕ್ಷತೆಯನ್ನೂ ನಿಮಗೆ ತಿಳಿಯಪಡಿಸಿದ್ದರಲ್ಲಿ ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಅನುಸರಿಸುವವರಾಗಿರಲಿಲ್ಲ. ಆತನ ಮಹತ್ವನ್ನು ಕಣ್ಣಾರೆ ಕಂಡವರಾಗಿಯೇ ತಿಳಿಯಪಡಿಸಿದೆವು, ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ಮೆಚ್ಚಿದ್ದೇನೆ ಎಂಬಂಥ ವಾಣಿಯು ಸರ್ವೋತ್ಕೃಷ್ಟಪ್ರಭಾವದಿಂದ ಆತನಿಗೆ ಉಂಟಾದದ್ದರಲ್ಲಿ ಆತನು ತಂದೆಯಾದ ದೇವರಿಂದ ಘನಮಾನಗಳನ್ನು ಹೊಂದಿದವನಲ್ಲವೇ" (2 ಪೇತ್ರ 1:16-17). ಯೇಸು ಫಿಲಿಪ್ಪನ ಕೈಸರೈಯ ಪ್ರಾಂತ್ಯದಿಂದ ಗಲಿಲಾಯಕ್ಕೆ ಹಿಂತಿರುಗಿದಾಗ ಆತನ ಬಹಿರಂಗ ಸೇವೆಯು ಮುಕ್ತಾಯಗೊಂಡಿತು. ಆ ಮೇಲೆ ಆತನು ಜನ ಸಮೂಹಕ್ಕೆ ಬೋಧಿಸುವುದಾಗಲೀ ಅಥವಾ ಅದ್ಭುತಗಳನ್ನಾಗಲಿ ಮಾಡಲಿಲ್ಲ, ಬದಲಾಗಿ ಆತನು ತನ್ನ ಶಿಷ್ಯರಿಗೆ ಬೋಧಿಸುವುದರಲ್ಲಿ ಮತ್ತು ಯೆರೂಸಲೇಮಿನಲ್ಲಿನ ತನ್ನ ಬಾಧೆ, ಮರಣ ಮತ್ತು ಪುನರುತ್ಥಾನಕ್ಕಾಗಿ ಅವರನ್ನು ಸಿದ್ಧಪಡಿಸುವುದರಲ್ಲಿ ಸಮಯ ಕಳೆದನು.

*"ಎತ್ತರವಾದ ಬೆಟ್ಟಕ್ಕೆ"* (ವ. 2): ಯಾವ ಬೆಟ್ಟದ ಮೇಲೆ ಯೇಸುವಿನ ರೂಪಾಂತರವು ಸಂಭವಿಸಿತೆಂಬುದನ್ನು ತಿಳಿಯಲು ಮಾರ್ಗವಿಲ್ಲ, ಆದರೆ ಹೆಚ್ಚಾಗಿ ಹೆರ್ಮೋನ್ ಬೆಟ್ಟವಿರಬಹುದು. ಇದು ಎತ್ತರವಾಗಿದ್ದು, ಫಿಲಿಪ್ಪನ ಕೈಸರೈಯ ಸಮೀಪವಿದೆ. ತಾಬೋರ್ ಬೆಟ್ಟದ ಸಾಂಪ್ರದಾಯಿಕ ಪ್ರದೇಶವಂತೂ ಅಸಂಭವನೀಯವಾಗಿದೆ. ಸತ್ಯವೇದದ ಸಮಯಗಳಲ್ಲಿ ಬೆಟ್ಟಗಳೆಲ್ಲಾ ಏಕಾಂತತೆ, ಪ್ರಾರ್ಥನೆ ಮತ್ತು ದೈವಿಕ ಪ್ರಸನ್ನತೆಯ ಸ್ಥಳಗಳಾಗಿದ್ದವು (ಉದಾ: ಹಳೇ ಒಡಂಬಡಿಕೆಯ ಸೀನಾಯ್ ಬೆಟ್ಟ, ಹೋಲಿಸಿ ಮಾರ್ಕ 3:13 ಮತ್ತು 6:46).

*"ಆತನ ರೂಪ ಬೇರೆಯಾಯಿತು"* (ವ. 2): ಮೂವರು ಶಿಷ್ಯರು ಯೇಸುವಿನ ಮಹಿಮೆಯ ರೂಪವನ್ನು ನೋಡುತ್ತಾರೆ (ನೋಡಿ ಯೋಹಾನ 17:5, 2 ಪೇತ್ರ 1:17).

*"ಎಲೀಯನೂ, ಮೋಶೆಯೂ"* (ವ. 4): ಮೋಶೆಯು ಹಳೇ ಒಡಂಬಡಿಕೆ ಮತ್ತು ಧರ್ಮಶಾಸ್ತ್ರವನ್ನು ಪ್ರತಿನಿಧಿಸುತ್ತಾನೆ. ಆತನು ಇಸ್ರಾಯೇಲ್ಯರನ್ನು ಐಗುಪ್ತದಲ್ಲಿನ ಬಂಧನದಿಂದ ಬಿಡಿಸಿದವನಾಗಿದ್ದು, ಬೇಗನೆ ಯೇಸುವಿನ ಮರಣದಲ್ಲಿ ನೆರವೇರಲಿರುವ ಪಾಪದ ಬಂಧನದಿಂದ ಸಿಗುವ ರಕ್ಷಣೆಯ ಮುನ್ಸೂಚನೆಯಾಗಿದ್ದಾನೆ. ಎಲೀಯನು ಪ್ರವಾದಿಗಳನ್ನು ಪ್ರತಿನಿಧಿಸಿದ್ದು ಎಲ್ಲಾ ಸಂಗತಿಗಳೂ ನೇಮಿಸಲ್ಪಟ್ಟ ಪುನರ್ ಸ್ಥಾಪಕವಾಗಿ ಕಾಣಿಸಿಕೊಂಡಿದ್ದಾನೆ (ನೋಡಿ ಮಲಾಕಿ 4:5-6 ಮತ್ತು ಮಾರ್ಕ9:11-13).

*"ಮೋಡವು"* (ವ. 7): ಹಳೇ ಒಡಂಬಡಿಕೆಯಲ್ಲಿ ಮೋಡವು ದೈವಿಕ ಪ್ರಸನ್ನತೆಯ ಗುರುತಾಗಿದೆ (ಉದಾ: ವಿಮೋ.13:21, 19:9, 33:9, ಅರಣ್ಯ. 9:15 ನ್ನು ನೋಡಿ)

*"ಆಕಾಶವಾಣಿ"* (ವ. 7): ಯೇಸುವಿನ ದೀಕ್ಷಾಸ್ನಾನದ ವೇಳೆ ಕೇಳಿಸಿದ ವಾಣಿಯೊಂದಿಗೆ ಹೋಲಿಸಿ, 1:11.

*"ಯಾರಿಗೂ ತಿಳಿಸಬಾರದೆಂದು ಖಂಡಿತವಾಗಿ ಹೇಳಿದನು"* (ವ. 9): ಈ ಸಂದರ್ಭದಲ್ಲಿ "ಮೆಸ್ಸೀಯನ ರಹಸ್ಯ"ಕ್ಕೆ ಒಂದು *ಕಾಲಮಿತಿಯನ್ನು ಸೇರಿಸಿದ್ದಾನೆ* (ಹೋಲಿಸಿ, 1:34 ರ ಟಿಪ್ಪಣಿ): "ಮನುಷ್ಯಕುಮಾರನು ಸತ್ತು ಜೀವಿತನಾಗಿ ಎದ್ದು ಬರುವತನಕ": ಈ ರಹಸ್ಯವು ಯೇಸುವಿನ ಮರಣ ಮತ್ತು ಪುನರುತ್ಥಾನದೊಂದಿಗೆ ಪ್ರಕಟವಾಗುತ್ತದೆಂದು ತಿಳಿಸುತ್ತದೆ. ಕೇವಲ ಅವುಗಳ ಮೂಲಕ ಮಾತ್ರ ಆತನ ನಿಜವಾದ ಗುರುತು ಮತ್ತು ಮೆಸ್ಸೀಯನ ಪೂರ್ಣ ವ್ಯಕ್ತಿತ್ವವು ಪ್ರಕಟವಾಗುತ್ತದೆ.

*"ಸತ್ತು ಜೀವಿತಾನಾಗಿ ಏಳುವುದಂದರೇನು"* (ವ. 10): ಹೆಚ್ಚಿನ ಯೆಹೂದ್ಯರಂತೆ ಶಿಷ್ಯರೂ ಶಾರೀರಿಕ ಪುನರುತ್ಥಾನವನ್ನು ಒಪ್ಪುತ್ತಿದ್ದರು. ಆದರೆ ಮನುಷ್ಯಕುಮಾರನ ಪುನರುತ್ಥಾನದ ಬಗ್ಗೆ ಅವರಲ್ಲಿ ಗಲಿಬಿಲಿಯಿತ್ತು. ಯಾಕೆಂದರೆ ಮೆಸ್ಸೀಯನ ಕುರಿತ ಅವರ ತಿಳುವಳಿಕೆಯು ಆತನ ಬಾಧೆ ಮತ್ತು ಮರಣವನ್ನು ಒಳಗೊಂಡಿರಲಿಲ್ಲ.

*"ಎಲೀಯನು ಮೊದಲು ಬಂದು"* (ವ. 11): ಮಲಾಕಿ 4:5-6 ರನ್ನು ಆಧರಿಸಿ ಸಾಂಪ್ರದಾಯಿಕ ಯೆಹೂದ ಅಂತಿಮಗತಿಶಾಸ್ತ್ರವು ಮೆಸ್ಸೀಯನ ಆಗಮನಕ್ಕಿಂತ ಮೊದಲು ಎಲೀಯನು ಪ್ರತ್ಯಕ್ಷನಾಗುವನೆಂಬುದಾಗಿ ಹೇಳಿತ್ತು. ಒಂದು ವೇಳೆ ರೂಪಾಂತರಗೊಂಡತೆ ಯೇಸುವೇ ನಿಜವಾದ ಮೆಸ್ಸೀಯನಾಗಿದ್ದರೆ, ಯಾಕೆ ಎಲೀಯ ಪ್ರತ್ಯಕ್ಷನಾಗಿಲ್ಲವೆಂದು ಶಿಷ್ಯರು ಯೋಚಿಸಿದರು.

*"ಎಲೀಯನು ಮೊದಲು ಬಂದು ಎಲ್ಲವನ್ನು ತಿರುಗಿ ಸರಿಮಾಡುವುದು ನಿಜ, ಮತ್ತು ಮನುಷ್ಯಕುಮಾರನ ವಿಷಯವಾಗಿ ಅವನು ಬಹು ಕಷ್ಟಗಳನ್ನನುಭವಿಸಿ ಹೀನೈಸಲ್ಪಡಬೇಕೆಂಬುದಾಗಿ ಬರೆದದೆ, ಇದು ಹೇಗೆ?"* (ವ. 12): ಎಲೀಯನು ಸ್ನಾನಿಕನಾದ ಯೋಹಾನನೊಂದಿಗೆ ಪ್ರತ್ಯಕ್ಷವಾಗಿ ಮೆಸ್ಸೀಯನ ಬರೋಣಕ್ಕಾಗಿ ಮಾರ್ಗವನ್ನು ಸಿದ್ಧಪಡಿಸಿ "ಸಿದ್ಧವಾದ ಜನರನ್ನು ಕರ್ತನಿಗೆ ಒದಗಿಸುವನು" (ಲೂಕ 1:17) ಎಂದು ಯೇಸು ಹೇಳಿದನು. ಸ್ನಾನಿಕನಾದ ಯೋಹಾನನ ಬಾಧೆ ಮತ್ತು ಮರಣವು ಯೇಸುವಿನ ಬಾಧೆ ಮತ್ತು ಮರಣಕ್ಕಾಗಿ ಒಂದು ಮಾದರಿಯನ್ನು (ಮುನ್ಸೂಚನೆ) ಸಿದ್ಧಪಡಿಸಿತು. ಯೇಸು ಇದನ್ನು ಮತ್ತಾ. 17:2 ರಲ್ಲಿ ಸ್ಪಷ್ಟಪಡಿಸುತ್ತಾನೆ:"ಅವನಿಗಾದಂತೆ ಮನುಷ್ಯಕುಮಾರನಿಗೆ ಸಹ ಅವರ ಕಡೆಯಿಂದ ಹಿಂಸೆಯಾಗುವದು".

*"ಎಲೀಯನು ಬಂದನು ಮತ್ತು ಅವನ ವಿಷಯವಾಗಿ ಬರೆದಿರುವ ಪ್ರಕಾರ ಜನರು ತಮ್ಮ ಮನಸ್ಸಿಗೆ ಬಂದಂತೆ ಅವನಿಗೆ ಮಾಡಿದರು"* (ವ. 13): ಇಲ್ಲಿ ಯೇಸು ಹೆಸರನ್ನು ಹೇಳದೆ ಸ್ನಾನಿಕನಾದ ಯೋಹಾನನನ್ನು ಸೂಚಿಸಿ ಹೇಳುತ್ತಿದ್ದಾನೆ. ಅರಸನಾದ ಅಹಾಬ ಮತ್ತು ರಾಣಿಯಾದ ಈಜಬೆಲಳ ಆಳ್ವಿಕೆಯಡಿಯಲ್ಲಿ ಎಲೀಯ ಮತ್ತು ಆತನ ಬಾಧೆಯ ಕುರಿತಾದ (ನೋಡಿ, 1 ಅರಸು. 19:1-12) ಹಳೇ ಒಡಂಬಡಿಕೆಯ ವಾಕ್ಯಭಾಗವು, ಅರಸನಾದ ಹೆರೋದ ಮತ್ತು ರಾಣಿಯಾದ ಹೆರೋದ್ಯಳ ಆಳ್ವಿಕೆಯಲ್ಲಿ ಸ್ನಾನಿಕ ಯೋಹಾನನಿಗಾದ ಬಾಧೆಗೆ ಮುನ್ಸೂಚನೆಯಂತಿತ್ತು (ಮಾರ್ಕ 6:14-28).

*"ಅವನನ್ನು ಕೆಡುತ್ತದೆ"* (ವ. 18): ದೆವ್ವದ ಕಾಟವೇ ಆ ಹುಡುಗನ ಅನಾರೋಗ್ಯಕ್ಕೆ ಕಾರಣವಾಗಿತ್ತು. ಎಲ್ಲಾ ಅಸ್ವಸ್ಥತೆಯು ದೆವ್ವ ಕಾಟದ ಪರಿಣಾಮವಾಗಿರಲಿಲ್ಲ. ಆದರೆ ಇದಾಗಿತ್ತು.

*"ನಂಬಿಕೆಯಿಲ್ಲದಂಥ ಸಂತಾನವೇ"* (ವ. 9): ಈ ಮಾತುಗಳಿಂದ ಯೇಸು ತನ್ನ ಶಿಷ್ಯರು ಮತ್ತು ಅವರಲ್ಲಿನ ನಂಬಿಕೆ ಮತ್ತು ತಿಳುವಳಿಕೆಯ ಕೊರತೆ ಬಗ್ಗೆ ಬೇಸರವನ್ನು ವ್ಯಕ್ತಪಡಿಸುತ್ತಾನೆ.

*"ಗಲಿಲಾಯವನ್ನು ಹಾದು ಹೋಗುತ್ತಿದ್ದರು"* (ವ. 30): ಗಲಿಲಾಯದಲ್ಲಿ ಮತ್ತು ಅದರ ಸುತ್ತಮುತ್ತಲಿನ ಯೇಸುವಿನ ಸೇವೆಯು ಈಗಾಗಲೇ ಮುಗಿದಿದ್ದು (ನೋಡಿ, 7:24 ರ ಟಿಪ್ಪಣಿ), ಈಗ ಆತನು ಬಾಧೆ ಪಟ್ಟು ಸಾಯುವುದಕ್ಕಾಗಿ ಯೆರೂಸಲೇಮಿಗೆ ಹೋಗುತ್ತಿದ್ದನು.

*"ಆತನು ಕೂತುಕೊಂಡು"* (ವ. 35): ದೇವರ ರಾಜ್ಯದ ಕುರಿತಾದ ಪ್ರಮುಖ ಸತ್ಯಗಳನ್ನು ತನ್ನ ಶಿಷ್ಯರಿಗೆ ಬೋಧಿಸುವಾಗ ಯೇಸು ಯೆಹೂದಿ ರಬ್ಬಿಗಳಂತೆ ಕೂತುಕೊಂಡಿದ್ದನು.

*"ನಿಮಗೆ ಸತ್ಯವಾಗಿ ಹೇಳುತ್ತೇನೆ"* (ವ. 41): ತನ್ನ ಮಾತಿನ ಅಧಿಕಾರವನ್ನು ಒತ್ತಿ ಹೇಳುವುದಕ್ಕಾಗಿ ಯೇಸು ಸುವಾರ್ತೆಗಳಲ್ಲಿ ಈ ಮಾತನ್ನು ಸುಮಾರು 80 ಬಾರಿ ಉಪಯೋಗಿಸಿದ್ದಾನೆ (ಮಾರ್ಕ 3:28, 8:12, 9:1, 10:15,29, 11:23, 12:43, 13:30, 14:9, 18, 25, 30).

*"ನನ್ನನ್ನು ನಂಬುವ ಈ ಚಿಕ್ಕವರಲ್ಲಿ ಒಬ್ಬನಿಗೆ"* (ವ. 42): ಯೇಸು ವ. 37 ರಲ್ಲಿ "ಚಿಕ್ಕಮಕ್ಕಳಿಗೆ" ಅಥವಾ ನಂಬಿಕೆಯಲ್ಲಿ 'ಚಿಕ್ಕವರ'ನ್ನು ಸೂಚಿಸಿ ಹೇಳಿರಬಹುದು (ಯೋಹಾನನು ಯೇಸುವಿನ ಬಳಿ ಹೇಳಿದಂತ ಹೊಸ ವಿಶ್ವಾಸಿಗಳು ವ. 38-41).

*"ಬೀಸುವ ಕಲ್ಲು"* (ವ. 42): ಇದು ಧಾನ್ಯವನ್ನು ಅರೆಯುವುದಕ್ಕಾಗಿ ಬಳಸಲಾದ ಒಂದು ಭಾರವಾದ ಕಲ್ಲಿನ ಹಲಿಗೆ.

*"ಕತ್ತರಿಸಿಬಿಡು"* (ವ. 43): ಈ ಶಬ್ದಾಲಂಕಾರವನ್ನು ಅತಿಶಯೋಕ್ತಿ ಎಂದು ಕರೆಯುವರು. ನಿಮ್ಮ ಜೀವಿತದಲ್ಲಿನ ಪಾಪದ ಕುರಿತು ಮಾಡಬೇಕಾದ ಸಂಗತಿಯನ್ನು ಒತ್ತಿ ಹೇಳಲು ಯೇಸು ಇದನ್ನು ಬಳಸಿದ್ದಾನೆ.

ವಚನ 44 ಮತ್ತು 46 ನ್ನು ಇಬ್ರಿಯ ಹಸ್ತಪ್ರತಿಗಳಲ್ಲಿ ಕಾಣಲಾಗುವುದಿಲ್ಲ.

ವ. 48 ರಲ್ಲಿ ದೇವರಿಗೆ ವಿರುದ್ಧವಾಗಿ ಏಳುವುದಕ್ಕೆ ಆಗುವ ಶಿಕ್ಷೆಯನ್ನು ಕುರಿತಾಗಿ ಯೆಶಾಯ 66:24 ರ ಮಾತನ್ನು ಬಳಸಲಾಗಿದೆ. ಈ ವಾಕ್ಯಭಾಗವನ್ನು ಮುಂದೆ ನಿತ್ಯನಾಶನಕ್ಕಾಗಿನ ಒಂದು ಚಿತ್ರಣವಾಗಿ ಬಳಸಲಾಗಿದೆ.

*"ಪ್ರತಿಯೊಬ್ಬನಿಗೂ ಬೆಂಕಿಯೆಂಬ ಉಪ್ಪಿನ ಹದವು ಕೊಡಲ್ಪಡಬೇಕು"* (ವ. 49): ಈ ಹೇಳಿಕೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಆದರೆ ಬಹುಶಃ ಇದು ಪ್ರತಿ ವಿಶ್ವಾಸಿಯೂ ಸಹ ಈ ಜೀವಿತದಲ್ಲಿ ಬಾಧೆಯ ಬೆಂಕಿ ಮತ್ತು ಶುದ್ಧೀಕರಣವನ್ನು ಹಾದು ಹೋಗಬೇಕೆಂಬುದನ್ನು ಅಪೇಕ್ಷಿಸಬಹುದು ಎಂಬರ್ಥವಾಗಿದೆ. ಕ್ರೈಸ್ತೀಯ ಜೀವಿತವನ್ನು ಹಳೇ ಒಡಂಬಡಿಕೆಗೆ ಹೋಲಿಸಿದರೆ, ಯಾಜಕಕಾಂಡ 2:13 ರ ಪ್ರಕಾರ ಎಲ್ಲವನ್ನೂ ಉಪ್ಪಿನೊಂದಿಗೇ ಅರ್ಪಿಸಬೇಕಾಗಿತ್ತು. ಬೆಂಕಿಯು ಬಾಧೆ ಮತ್ತು ಹೋರಾಟಕ್ಕೆ ಒಂದು ರೂಪಾಲಂಕಾರವಾಗಿದೆ (ಹೋಲಿಸಿ 1 ಪೇತ್ರ 1:6-7).

*"ಉಪ್ಪು"* (ವ. 50): ಇಲ್ಲಿ ಉಪ್ಪನ್ನು ಒಳ್ಳೆಯದೆಂಬ ಅರ್ಥದಲ್ಲಿ ಬಳಸಲಾಗಿದೆ. ಪ್ರಾಚೀನ ಜಗತ್ತಿನಲ್ಲಿ ಉಪ್ಪು ಪ್ರಾಮುಖ್ಯವಾದ ಪಾತ್ರವನ್ನು ವಹಿಸಿತು. ಇದು ಜೀವನಕ್ಕೆ ಮತ್ತು ಆಹಾರ ಹಾಳಾಗದಂತೆ ಸಂರಕ್ಷಿಸಿಡುವುದಕ್ಕಾಗಿ ಅತೀ ಅವಶ್ಯಕವಾಗಿತ್ತು. ಆದರೆ ಉಪ್ಪು ತನ್ನ ರುಚಿಯನ್ನು ಕಳಕೊಳ್ಳಬಹುದು. ಇಲ್ಲಿ ಯೇಸು ತನ್ನ ಶಿಷ್ಯರಿಗೆ ತನ್ನ ವಿಶ್ವಾಸಿಗಳಿಗೆ ತಮ್ಮ ಗುರುತನ್ನು ಕಳಕೊಳ್ಳಬಾರದು ಮತ್ತು ಒಬ್ಬರಿಗೊಬ್ಬರು ಸಮಾಧಾನದಿಂದ ಇರಬೇಕೆಂದು ಎಚ್ಚರಿಸುತ್ತಾನೆ (ಈ ಹಿಂದೆ ವ. 34 ರಲ್ಲಿನ ಹಿರಿತನದ ಕುರಿತಾದ ವಾದದೊಂದಿಗೆ ಹೋಲಿಸಿ).

**ಪ್ರಶ್ನೆಗಳು**

1. ರೂಪಾಂತರದ ಕಥೆಯ ಹಿನ್ನಲೆ ಏನಾಗಿದೆ? ಇದು ಎಲ್ಲಿ ಸಂಭವಿಸುತ್ತದೆ? ಯೇಸುವಿನೊಂದಿಗೆ ಯಾರು ಯಾರು ಇದ್ದರು (ವ. 2)?

2. ಬೆಟ್ಟದಲ್ಲಿ ಯೇಸು ಹೇಗೆ ಬದಲಾದನು (ವ. 2-3)?
3. ಬೆಟ್ಟದ ಮೇಲೆ ಯೇಸುವಿನೊಂದಿಗೆ ಮಾತಾಡಿದ ಇಬ್ಬರು ಪುರುಷರು ಯಾರು (ವ. 4)?
4. ಯೇಸುವಿನ ರೂಪಾಂತರಕ್ಕೆ ಶಿಷ್ಯರು ಹೇಗೆ ಪ್ರತಿಕ್ರಯಿಸುತ್ತಾರೆ (ವ. 5-6)?
5. ಮೋಡದೊಳಗಿಂದ ಬಂದ ಆಕಾಶವಾಣಿಯ ಸಂದೇಶವೇನು (ವ. 7)?
6. ಬೆಟ್ಟವಿಳಿದು ಬರುವಾಗ ಯೇಸು ತನ್ನ ಶಿಷ್ಯರಿಗೆ ಏನೆಂದು ಆಜ್ಞಾಪಿಸಿದನು (ವ. 9)?
7. ಬೆಟ್ಟವಿಳಿದು ಬರುವಾಗ ಯಾವ ಎರಡು ಸಂಗತಿಗಳ ಬಗ್ಗೆ ಶಿಷ್ಯರು ಗೊಂದಲಕ್ಕೀಡಾಗಿದ್ದರು (ವ. 10-13)?
8. ಮೂರ್ಛಾರೋಗಿಯ ಸುತ್ತ ಯಾರೆಲ್ಲಾ ಸೇರಿದ್ದರು (ವ. 14-17)?
9. ಮೂಗದೆವ್ವವು ಆ ಹುಡುಗನನ್ನು ಹೇಗೆ ಪೀಡಿಸಿತು (ವ. 17-20) ಮತ್ತು ಯೇಸು ಅದನ್ನು ಹೇಗೆ (ಸಂಬೋಧಿಸಿ) ಎದುರಿಸಿದನು (ವ. 25)?
10. ಯೇಸು ಗದರಿಸಿದಾಗ ಮೂಗ ದೆವ್ವಕ್ಕೆ ಏನಾಯಿತು (ವ. 25-27)?
11. ಆ ಹುಡುಗನನ್ನು ಗುಣಪಡಿಸಿದ ನಂತರ ಶಿಷ್ಯರು ಯೇಸುವಿನ ಬಳಿ ಏನೆಂದು ಪ್ರಶ್ನಿಸುತ್ತಾರೆ, ಮತ್ತು ಯೇಸು ಅವರಿಗೆ ಏನೆಂದು ಉತ್ತರಿಸುತ್ತಾನೆ (ವ. 28-29)?
12. ಯೇಸು ಗಲಿಲಾಯವನ್ನು ಹಾದು ಹೋಗುವಾಗ, ಆತನ ಸೇವೆಯ ಕುರಿತು ನಾವೇನನ್ನು ಕಲಿಯುತ್ತೇವೆ (ವ. 32)?
13. ಶಿಷ್ಯರು ಯಾಕೆ ಯೇಸುವಿನ ಬೋಧನೆಯ ಅರ್ಥವೇನೆಂಬುದಾಗಿ ಕೇಳಲಿಲ್ಲ (ವ. 30-32)?
14. ಕಪೆರ್ನೌಮಿನ ರಸ್ತೆಯಲ್ಲಿ ಶಿಷ್ಯರು ಯಾವುದರ ಬಗ್ಗೆ ವಾದಿಸುತ್ತಿದ್ದರು (ವ. 33-37)?
15. ಪರಲೋಕದಲ್ಲಿನ ಹಿರಿಮೆಯ (ಹೆಚ್ಚಿನವರ) ಬಗ್ಗೆ ಯೇಸು ಹೇಗೆ ವಿವರಿಸುತ್ತಾನೆ (ವ. 33-36)?
16. ಯೋಹಾನನು ಯೇಸುವಿನ ಬಳಿ ಯಾವ ದೂರನ್ನು ತರುತ್ತಾನೆ (ವ. 38-41)?
17. ಯೋಹಾನನ ದೂರಿಗೆ ಯೇಸು ಹೇಗೆ ಪ್ರತಿಕ್ರಯಿಸುತ್ತಾನೆ (ವ. 38-41)?
18. ವಚನ 43-48 ರಲ್ಲಿ ಒಬ್ಬ ವಿಶ್ವಾಸಿಯನ್ನು ಪಾಪದಲ್ಲಿ ಬೀಳಿಸುವ ದೇಹದ ಕೆಲವು ಅಂಗಗಳ ಕುರಿತು ಹೇಳುತ್ತಾನೆ. ಅವು ಯಾವುವು?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಎಲೀಯ ಮತ್ತು ಮೋಶೆ ಯೇಸುವಿನೊಂದಿಗೆ ಮಾತನಾಡುತ್ತಿದ್ದರೆಂಬುದಾಗಿ ಮಾರ್ಕನು ಹೇಳುತ್ತಾನೆ (ವ. 4), ಆದರೆ ಅವರು ಯಾವುದರ ಬಗ್ಗೆ ಮಾತನಾಡುತ್ತಿದ್ದರು? ಈ ಘಟನೆಯ ಕುರಿತು ಲೂಕನ ವಾಕ್ಯಭಾಗದಲ್ಲಿ ಇದರ ಮಾಹಿತಿಯನ್ನು ಕಂಡುಹಿಡಿಯಿರಿ (ಲೂಕ 9:29-36).
2. ಯಾಕೆ ಪೇತ್ರನು ಯೇಸು, ಮೋಶೆ ಮತ್ತು ಎಲೀಯರಿಗಾಗಿ ಪರ್ಣಶಾಲೆಗಳನ್ನು ಕಟ್ಟಬೇಕೆಂದು ಬಯಸಿದನು (ವ. 5)?
3. ರೂಪಾಂತರದ ಘಟನೆಯನ್ನು ಹೋಲಿಸಿರಿ (ಮಾರ್ಕ 9:2-14, ಮತ್ತಾಯ 17:1-13, ಲೂಕ 9:29-36). ಮುಖ್ಯ ವ್ಯತ್ಯಾಸಗಳನ್ನು ಪಟ್ಟಿಮಾಡಿರಿ.
4. ಸುವಾರ್ತಾ ನಿರೂಪಣೆಯ ಹಿನ್ನಲೆಯಲ್ಲಿ ರೂಪಾಂತರ ವಿಷಯದ ಪ್ರಾಮುಖ್ಯತೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
5. ಎಲೀಯನ ಕುರಿತಾದ ಯೇಸುವಿನ ಮಾತುಗಳನ್ನು ವಿವರಿಸಿರಿ (ವ. 11-13).
6. “ನಂಬುವವನಿಗೆ ಎಲ್ಲಾ ಆಗುವುದು” (ವ. 23) ಎಂಬ ಯೇಸುವಿನ ಹೇಳಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

7. ವಚನ 29 ನ್ನು ಕನ್ನಡದ ಪವಿತ್ರಗ್ರಂಥ ಮತ್ತು ಸತ್ಯವೇದ ಭಾಷಾಂತರದಲ್ಲಿ ಹೋಲಿಸಿ ನೋಡಿರಿ. ಅವು ಹೇಗೆ ಭಿನ್ನವಾಗಿವೆ? ಈ ಭಿನ್ನತೆಗೆ ಕಾರಣವೇನೆಂಬುದಾಗಿ ನೀವು ಯೋಚಿಸುವಿರಿ?
8. ವಚನ 29 ರಲ್ಲಿ ಯೇಸುವಿನ ವಿವರಣೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
9. ವಚನ 33-37 ರಿಂದ ಪರಲೋಕದಲ್ಲಿನ ನಿಜವಾದ ಹಿರಿತನದ ಬಗ್ಗೆ ನಾವೇನನ್ನು ತಿಳಿದುಕೊಳ್ಳುತ್ತೇವೆ? ನಿಮ್ಮದೇ ಪದ ಬಳಸಿರಿ.
10. ವಚನ 40 ("ನಮ್ಮನ್ನು ಎದುರಿಸದವನು ನಮ್ಮ ಪಕ್ಷದವನೇ") ಮತ್ತು ಮತ್ತಾಯ 12:30 ರಲ್ಲಿನ ("ನನ್ನ ಪಕ್ಷ ಹಿಡಿಯದವನು ನನ್ನ ವಿರೋಧಿ) ಯೇಸುವಿನ ಮಾತಿನ ನಡುವೆ ಒಂದು ವಿವಾದ ಅಥವಾ ವಿರೋಧತೆಯಿದೆ ಎಂಬುದಾಗಿ ನೀವು ಯೋಚಿಸುವಿರಾ? ವಿವರಿಸಿ.
11. ವಚನ 43-48 ನ್ನು ಕನ್ನಡದ ಪವಿತ್ರಗ್ರಂಥ ಮತ್ತು ಸತ್ಯವೇದ ಭಾಷಾಂತರಗಳಲ್ಲಿ ಹೋಲಿಸಿ ನೋಡಿರಿ. ನಿಮಗೇನು ತೋರುತ್ತದೆ?
12. ವಚನ 47 ರಲ್ಲಿ ಅತಿಶಯೋಕ್ತಿ ಎಂಬ ಶಬ್ದಾಲಂಕಾರವನ್ನು ಯೇಸು ಹೇಗೆ ಉಪಯೋಗಿಸುತ್ತಾನೆಂಬುದನ್ನು ವಿವರಿಸಿರಿ.
13. ವಚನ 49 ಮತ್ತು ವಚನ 50 ರಲ್ಲಿ "ಉಪ್ಪು" ಏನನ್ನು ಸೂಚಿಸುತ್ತದೆಂಬುದಾಗಿ ನೀವು ಯೋಚಿಸುವಿರಿ?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಈ ಅಧ್ಯಯನದಲ್ಲಿನ ಮಾಹಿತಿಗಳ ಬೆಳಕಿನಲ್ಲಿ ಯೇಸುವಿನ ರೂಪಾಂತರದ ಕಥೆಯನ್ನು ವಿಮರ್ಶಿಸಿರಿ (ವ. 2-13). ಈ ಪ್ರಶ್ನೆಗಳನ್ನು ಬಳಸಿರಿ:

   ಅ. ಬೆಟ್ಟದಲ್ಲಿ ಏನಾಯಿತು? ಮೋಶೆ ಮತ್ತು ಎಲೀಯ ಏನನ್ನು ಪ್ರತಿನಿಧಿಸುತ್ತಾರೆ? ಅವರು ಯೇಸುವಿನ ಜೊತೆ ಯಾವುದರ ಬಗ್ಗೆ ಮಾತನಾಡುತ್ತಾರೆ? ಆಕಾಶವಾಣಿ ಏನೆಂದು ಹೇಳಿತು?

   ಆ. ಈ ಅನುಭವವು ಯೇಸುವಿಗೆ ಏನನ್ನು ಸೂಚಿಸುತ್ತದೆ? ಆತನ ಬಾಧೆ ಮತ್ತು ಮರಣಕ್ಕಾಗಿ ಇದು ಆತನನ್ನು ಹೇಗೆ ಸಿದ್ಧಪಡಿಸಿತು?
   ಇ. ಬೆಟ್ಟದಲ್ಲಿದ್ದ ಆ ಮೂವರು ಶಿಷ್ಯರಿಗೆ ಇದು ಹೇಗೆ ಪರಿಣಾಮ ಬೀರಿತು? ಯೇಸುವಿನ ಮರಣ ಮತ್ತು ಪುನರುತ್ಥಾನಕ್ಕಾಗಿ ಇದು ಅವರನ್ನು ಹೇಗೆ ಸಿದ್ಧಪಡಿಸಿರಬಹುದು? ಮರಣ ಮತ್ತು ಪುನರುತ್ಥಾನದ ನಂತರದ ಯೇಸುವಿನ ಕುರಿತಾದ ಅವರ ತಿಳುವಳಿಕೆಯನ್ನು ಅದು ಹೇಗೆ ಆಳವಾಗಿಸಿತು?
   ಈ. ಬೆಟ್ಟದಿಂದ ಇಳಿದು ಬರುವಾಗ ಶಿಷ್ಯರ ಪ್ರಶ್ನೆಗಳು: ಯೇಸುವಿನ ಮರಣ ಮತ್ತು ಪನರುತ್ಥಾನದ ಕುರಿತು? ಎಲೀಯನ ಬರೋಣದ ಬಗ್ಗೆ? ಎಲೀಯ ಮತ್ತು ಸ್ನಾನಿಕನಾದ ಯೋಹಾನನ ಕುರಿತು ಯೇಸುವಿನ ವಿವರಣೆ.
   ಉ. ಈ ಕಥೆಯಿಂದ (ವಾಕ್ಯಭಾಗ) ನಾವೇನನ್ನು ಕಲಿಯುತ್ತೇವೆ?

   ಅನಂತರ ***ರೂಪಾಂತರ*** ಎಂಬ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಮೇಲ್ಕಂಡ ಐದು ಅಂಶಗಳನ್ನು ರೂಪುರೇಖೆಗಳಾಗಿ ಬಳಸಬಹುದು.

2. ಈ ಅಧ್ಯಯನದಲ್ಲಿ ಕೊಡಲಾದ ವಿಷಯ (ಮಾಹಿತಿ) ಬೆಳಕಿನಲ್ಲಿ "ನಂಬಿಕೆ" ಯನ್ನು ವಿಮರ್ಶಿಸಿರಿ. ಶಿಷ್ಯರ ನಂಬಿಕೆಯ ಬಗ್ಗೆ ನಾವೇನನ್ನು ಕಲಿಯುತ್ತೇವೆ? ದೆವ್ವಹಿಡಿದ ಹುಡುಗನ ತಂದೆಯ ನಂಬಿಕೆಯ ಬಗ್ಗೆ ನಾವೇನನ್ನು ಕಲಿಯುತ್ತೇವೆ? ನಿಮ್ಮ ನಂಬಿಕೆ ಹೇಗಿದೆ?
   ದೆವ್ವಹಿಡಿದ ಹುಡುಗನ ತಂದೆ ಮತ್ತು ಆತನ ನಂಬಿಕೆಯ ಬಗ್ಗೆ ಒಂದು "ಧ್ಯಾನವನ್ನು" ಸಿದ್ಧಪಡಿಸಿರಿ.

3. ವಚನ 39-50 ರಲ್ಲಿ ಕಂಡುಬಂದಂತೆ ದೇವರ ರಾಜ್ಯದ ಕುರಿತಾದ ಸತ್ಯತೆಗಳ ಬಗ್ಗೆ ಈ ಅಧ್ಯಯನದಲ್ಲಿನ ಮಾಹಿತಿಗಳ ಬೆಳಕಿನಲ್ಲಿ ವಿಮರ್ಶಿಸಿರಿ. ಕೆಲ ಅಂಶಗಳು ಇಂತಿವೆ:

ಅ. ದೊಡ್ಡತನ(ಹಿರಿಮೆ)ವು ಸೇವಕ ಮನೋಭಾವದ ಮೂಲಕ ತೋರಿಸಲ್ಪಟ್ಟಿದೆ.

ಆ. ನಿಜವಾದ ಹಿರಿತನವು "ಚಿಕ್ಕವರನ್ನು" ನಾವು ಹೇಗೆ ಸತ್ಕರಿಸುತ್ತೇವೆ ಮತ್ತು ಬಾಯಾರಿದವರಿಗೆ ಒಂದು ಲೋಟ ನೀರುವ ಕೊಡುವುದರಿಂದ ಮೌಲ್ಯಮಾಪನ ಮಾಡಲಾಗಿದೆ.


ಇ. ಜೀವ ಮತ್ತು ದೇವರ ರಾಜ್ಯದೊಳಗೆ ಸೇರಲು ಪಾಪದ ಗಂಭೀರತೆಯು ಅಡ್ಡಿಯಾಗಿರುವುದು.

ಈ. ಪ್ರತಿ ವಿಶ್ವಾಸಿಗೂ ಸಹ ಬೆಂಕಿಯೆಂಬ ಉಪ್ಪಿನ ಹದ ಕೊಡಲ್ಪಡಬೇಕು: ಬಾಧೆ ಮತ್ತು ಹೋರಾಟ(ಶೋಧನೆ)ಗಳ ಬಗ್ಗೆ .

ಉ. ಉಪ್ಪು: ದೇವರ ರಾಜ್ಯದ ನಿಜವಾದ ಜನರಾಗಿ ನಮ್ಮ ಗುರುತನ್ನು ಕಳಕೊಳ್ಳುವುದರ ಅಪಾಯದ ಕುರಿತು.

ಈ ಐದು ಅಂಶಗಳಲ್ಲಿ ವಿಮರ್ಶಿಸುವಾಗ ನಿಮ್ಮ ಜೀವಿತವು ಹೇಗಿದೆ?

***ದೇವರ ರಾಜ್ಯದ ಜನರಾದ ನಮ್ಮ ಜೀವಿತ*** ಎಂಬ ಒಂದು ಸತ್ಯವೇದ ಅಧ್ಯಯನ(ಅಥವಾ ಒಂದು ಧ್ಯಾನ ಅಥವಾ ಪ್ರಸಂಗ)ವನ್ನು ಸಿದ್ಧಪಡಿಸಿರಿ. ಮೇಲಿನ ಐದು ಅಂಶಗಳನ್ನು ರೂಪುರೇಖೆಯಾಗಿ ಬಳಸಬಹುದು.



## ಮಾರ್ಕ ಅಧ್ಯಾಯ 10

### ಪೀಠಿಕೆ ಮತ್ತು ಟಿಪ್ಪಣಿಗಳು

ಮಾರ್ಕನ 10 ನೇ ಅಧ್ಯಾಯವು ಆರು ವಾಕ್ಯ ಭಾಗಗಳನ್ನು (ವಿಷಯ) ಒಳಗೊಂಡಿದೆ:

1. ಪರಿತ್ಯಾಗ(ವಿಚ್ಛೇದನ)ದ ಕುರಿತು, ವ. 1-15
2. ಚಿಕ್ಕ ಮಕ್ಕಳು ಮತ್ತು ಯೇಸು, ವ. 13-16
3. ಐಶ್ವರ್ಯವಂತ, ವ. 17-31
4. ಮೂರನೇ ಬಾರಿ ಯೇಸು ತನ್ನ ಮರಣವನ್ನು ಮುಂತಿಳಿಸಿದ್ದು, ವ. 32-34
5. ಯಾಕೋಬ ಮತ್ತು ಯೋಹಾನರ ಬೇಡಿಕೆ, ವ. 35-45
6. ಯೇಸು ಬಾರ್ತಿಮಾಯನೆಂಬ ಕುರುಡನನ್ನು ಗುಣಪಡಿಸಿದ್ದು, ವ. 46-52

ಪುನಃ ಯೇಸುವಿನಲ್ಲಿ ತಪ್ಪನ್ನು ಕಂಡುಹಿಡಿಯುವುದಕ್ಕಾಗಿ ಯೆಹೂದಿ ನಾಯಕರು ಬರುತ್ತಾರೆ. ಈ ಬಾರಿ ಅವರು ಯೆಹೂದಿ ರಬ್ಬಿಗಳು ಒಪ್ಪದೇ ಇರುವ ವಿಚ್ಛೇದನದ ನ್ಯಾಯಸಮ್ಮತತೆ ಕುರಿತಾಗಿ ಉಪಾಯಕಾರಿ ಪ್ರಶ್ನೆಯಿಂದ ಆತನನ್ನು ಹಿಡಿಯಲು (ಸಿಕ್ಕಿಸಲು) ಪ್ರಯತ್ನಿಸುತ್ತಾರೆ. ಯೇಸುವಿನ ಉತ್ತರವು ನಮ್ಮನ್ನು ಮೋಶೆಯ ಧರ್ಮಶಾಸ್ತ್ರಕ್ಕಿಂತ ಮಿಗಿಲಾಗಿ, ಮದುವೆಯ ಕುರಿತ ದೇವರ ಉದ್ದೇಶದೆಡೆಗೆ ಕೊಂಡೊಯ್ಯುತ್ತದೆ: "ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು" (ವ. 9). ಆದರೆ ಈ ಅಧ್ಯಾಯದ ಮುಖ್ಯ ವಿಷಯವು ಶಿಷ್ಯತ್ವವಾಗಿದೆ. ಐಶ್ವರ್ಯವಂತನ ಕುರಿತಾದ ಕಥೆಯಲ್ಲಿ ಆಸ್ತಿ ಅಥವಾ ಸಂಪತ್ತು ಒಬ್ಬ ಮನುಷ್ಯನು ಯೇಸುವನ್ನು ಹಿಂಬಾಲಿಸಲು ಮತ್ತು ದೇವರ ರಾಜ್ಯದೊಳಗೆ ಸೇರಲು ಒಂದು ಹೆಚ್ಚುವರಿಯಾದ ಅಡ್ಡಿಯಾಗುವುದೆಂಬುದನ್ನು ನಾವು ಕಾಣುತ್ತೇವೆ (ವ. 23). ನಿಜವಾದ ದೊಡ್ಡತನ(ಹಿರಿತನ)ವು ದೀನ ಮತ್ತು ಸಮರ್ಪಣಾ ಸೇವಾ ಮನೋಭಾವದ ಮೂಲಕ ಬರುತ್ತದೆಂಬುದರ ಕುರಿತಾದ ಬೋಧನೆಯ ನಂತರ (ವ. 43-44) ಯೇಸುವಿನ ಮರಣ ಮತ್ತು ಪುನರುತ್ಥಾನದ ಕುರಿತ ಮೂರನೇ ಮುನ್ಸೂಚನೆ ಕಂಡು ಬರುತ್ತದೆ. ತನ್ನ ಸ್ವಂತ ಸೇವೆಯ ಬಗ್ಗೆ ಯೇಸುವಿನ ದೃಢೀಕರಣದಲ್ಲಿ ಇದು ಅಂತ್ಯಗೊಳ್ಳುತ್ತದೆ. "ಮನುಷ್ಯಕುಮಾರನು ಸಹ ಸೇವೆ ಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ, ಸೇವೆ ಮಾಡುವುದಕ್ಕೂ, ಅನೇಕರನ್ನು ಬಿಡಿಸಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವುದಕ್ಕೂ ಬಂದನು" (ವ. 45). ಬಾರ್ತಿಮಾಯನ ಸ್ವಸ್ಥತೆಯು ಮಾರ್ಕನ ಸುವಾರ್ತೆಯಲ್ಲಿ ದಾಖಲಿಸಲ್ಪಟ್ಟ ಕೊನೆಯ ಸ್ವಸ್ಥತಾ ಅದ್ಭುತವಾಗಿದೆ.

*"ಯೂದಾಯ ಪ್ರಾಂತ್ಯಕ್ಕೂ"* (ವ. 1): ಯೂದಾಯವು ಪ್ಯಾಲೆಸ್ತೇನಿನ ದಕ್ಷಿಣ ಭಾಗವನ್ನು ಒಳಗೊಂಡಿತ್ತು. ಯೂದಾಯ ಎಂಬುದು ಹಳೇ ಒಡಂಬಡಿಕೆಯ ಯೆಹೂದ ಸೀಮೆಗೆ ಕೊಡಲ್ಪಟ್ಟ ರೋಮನ್ ಹೆಸರಾಗಿತ್ತು (ದಕ್ಷಿಣ ಇಸ್ರಾಯೇಲ್ ರಾಜ್ಯ).

*"ಯೋರ್ದನ್ ಹೊಳೆಯ ಆಚೆಯ ಸೀಮೆ"* (ವ. 1): ಯೇಸುವಿನ ಪ್ರಯಾಣವು ದಕ್ಷಿಣಕ್ಕೆ ಗಲಿಲಾಯದಿಂದ ಸಮಾರ್ಯದ ಬೆಟ್ಟಗಳ ಮೇಲಿಂದ ಯೂದಾಯಕ್ಕೆ ಮತ್ತು ಹಾಗೆಯೇ ಪೂರ್ವಕ್ಕೆ ಯೋರ್ದನ್ ಹೊಳೆಯ ಆಚೆ, ಹೆರೋದ ಅಂತಿಪನು ಆಳಿದ ಪೆರಿಯದವರೆಗೆ ಸಾಗಿತ್ತು.

*"ಬಂದು ಆತನನ್ನು ಪರೀಕ್ಷಿಸಬೇಕೆಂಬ ಯೋಚನೆಯಿಂದ ... ಕೇಳಿದರು"* (ವ. 2): ಫರಿಸಾಯರ ಪ್ರಶ್ನೆಯು ಯಥಾರ್ಥವಾಗಿರದೆ, ಹಗೆತನದಿಂದ ಕೂಡಿತ್ತು. ಅವರು ಆತನನ್ನು ಪರೀಕ್ಷಿಸುತ್ತಾ ತಾವು ಒಪ್ಪದೆ ಇರುವ ಕೆಲವು ವಿಷಯಗಳಲ್ಲಿ ಆತನನ್ನು ಸಿಕ್ಕಿಸಿಹಾಕಬೇಕೆಂದು ಪ್ರಯತ್ನಿಸುತ್ತಿದ್ದರು. ಅರಸನಾದ ಹೆರೋದ ಅಂತಿಪನ ನ್ಯಾಯಸಮ್ಮತವಲ್ಲದ ವಿಚ್ಛೇದನ ಮತ್ತು ಹೆರೋದ್ಯಳನ್ನು ಮರುವಿವಾಹಕ್ಕಾಗಿ (ನೋಡಿ 6:17-18) ಸ್ನಾನಿಕನಾದ ಯೋಹಾನನು ಆತನನ್ನು ದೂರುತ್ತಿದ್ದನು. ಇದರ ಪರಿಣಾಮವಾಗಿ ಆತನು ಸೆರೆಯಲ್ಲಿ ಹಾಕಲ್ಪಟ್ಟು, ನಂತರ ಕೊಲ್ಲಲ್ಪಟ್ಟನು. ಈಗ ಯೇಸುವು ಅರಸನಾದ ಹೆರೋದನ

ನ್ಯಾಯಾಂಗದೊಳಗಿದ್ದನು ಮತ್ತು ಯೇಸುವಿನ ಉತ್ತರವು ರಾಜನನ್ನು ಕೆರಳಿಸುವಂತೆ ಮಾಡಿ ಆಗ ಆತನು ಯೋಹಾನನಿಗೆ ಮಾಡಿದಂತೆ ಯೇಸುವಿನ ಸೇವೆಗೊಂದು ಅಂತ್ಯಕಾಣಿಸಬಹುದೆಂದು ಫರಿಸಾಯರು ನಿರೀಕ್ಷಿಸಿದರು.

*"ಒಬ್ಬನು ಹೆಂಡತಿಯನ್ನು ಬಿಟ್ಟು ಬಿಡುವುದು ಧರ್ಮವೋ ಹೇಗೆ?"* (ವ. 2): ಆ ದಿನಗಳಲ್ಲಿ ಯೆಹೂದ್ಯರು ವಿಚ್ಛೇದನವು ನ್ಯಾಯಸಮ್ಮತವಾದುದೆಂಬ ನಿಯಮವನ್ನು ಒಪ್ಪುವವರಾಗಿದ್ದರು. ಆದರೆ ಅವರು ವಿಚ್ಛೇದನಕ್ಕಾಗಿನ ಆಧಾರವನ್ನು ಒಪ್ಪುತ್ತಿರಲಿಲ್ಲ.

*"ನಿಮ್ಮ ಮೊಂಡುತನವನ್ನು ನೋಡಿ"* (ವ. 5): ಮನುಷ್ಯನ ಬಲಹೀನತೆಯ ನಿಮಿತ್ತ ವಿಚ್ಛೇದನವು ಅವಶ್ಯಕವಾಗಿಬಿಟ್ಟಿತು. ದೇವರ ಚಿತ್ತಕ್ಕೆ ಎಂದೂ ವಿಧೇಯರಾಗದಿರುವುದನ್ನು ನಿಯಂತ್ರಿಸುವುದಕ್ಕಾಗಿ ಯೆಹೂದಿ ಸಮಾಜದಲ್ಲಿ ಇದನ್ನು ಉಪಯೋಗಿಸಲಾಯಿತು. ಆದರೆ ಇದು ಮೂಲತಃ ಉದ್ದೇಶಿಸಿದ ಒಂದು ಸಂಪ್ರದಾಯವಾಗಿರಲಿಲ್ಲ. ಧರ್ಮೋ. 24:1 ರ ಉದ್ದೇಶವು ವಿಚ್ಛೇದನದ ಪರಿಣಾಮದ ಸಂಕಷ್ಟವನ್ನು ಕಡಿಮೆಮಾಡುವುದಾಗಿದೆ.

*"ಸೃಷ್ಟಿಯ ಮೊದಲಿನಿಂದಲೇ"* (ವ. 6): ಯೇಸು ಮೋಶೆಯ ಧರ್ಮಶಾಸ್ತ್ರವನ್ನು ಪ್ರಶ್ನಿಸಲಿಲ್ಲ ಆದರೆ ಮದುವೆಯ ಕುರಿತ ದೇವರ ಮೂಲ ಉದ್ದೇಶಕ್ಕೆ ಹೋಗುವುದರೊಂದಿಗೆ ಆತನು ಫರಿಸಾಯರಿಗೆ ಉತ್ತರಿಸಿದನು. ವಿಚ್ಛೇದನಕ್ಕೆ ಮೋಶೆಯ ಅನುಮತಿಯು ಮನುಷ್ಯನ ಬಲಹೀನತೆಗೆ ಒಂದು ಹೊಂದಾಣಿಕೆಯಾಗಿತ್ತು. ಆದರೆ ವಿಚ್ಛೇದನವು ದೇವರು ಮದುವೆಯಲ್ಲಿ ಉದ್ದೇಶಿಸಿದ ಒಂದು ಅಂಶವಾಗಿರಲಿಲ್ಲ. ಗಂಡು ಹೆಣ್ಣನ್ನು ಸೃಷ್ಟಿಸುವಲ್ಲಿನ ಆತನ ಉದ್ದೇಶವು , ಮದುವೆಯು ಎಂದೂ ಮುರಿದುಹೋಗದ ಜೀವನ ಪರ್ಯಂತರದ ಒಂದು ಸಂಬಂಧವಾಗಿರಬೇಕೆಂಬುದಾಗಿತ್ತು (ಆದಿ. 2:18-24 ನೋಡಿ). ಮದುವೆಯು ಒಂದು ತಾತ್ಕಾಲಿಕ ವ್ಯವಸ್ಥೆಯಾಗಿದ್ದು ತಮಗೆ ಸರಿಯೆನಿಸಿದಾಗ ಅದನ್ನು ಕೊನೆಗೊಳಸಬಹುದೆಂದು ದೇವರ ಉದ್ದೇಶವಾಗಿರಲಿಲ್ಲ.

*"ಮುಟ್ಟಿಸಬೇಕೆಂದು"* (ವ. 13): ಇಲ್ಲಿ ಮಾರ್ಕನು ಈ ಪದವನ್ನು "ಅವರನ್ನು ಆಶೀರ್ವದಿಸುವದಕ್ಕಾಗಿ" ಒಂದು ಸಮಾನಾರ್ಥಕವಾಗಿ ಬಳಸಿದ್ದಾನೆ.

*"ನಿತ್ಯಜೀವಕ್ಕೆ ಬಾಧ್ಯಸ್ಥನಾಗಬೇಕಾದರೆ"* (ವ. 17): ಸುವಾರ್ತೆಗಳಲ್ಲಿ ಈ ಹೇಳಿಕೆಯು "ದೇವರ ರಾಜ್ಯದಲ್ಲಿ ಸೇರುವುದು" (ವ. 24) ಮತ್ತು "ರಕ್ಷಣೆಯಾಗುವುದು" (ವ. 26-27) ಸಹ ಒಂದೇ ಅರ್ಥವನ್ನು ಕೊಡುತ್ತದೆ.

*ಮೋಸ ಮಾಡಬಾರದು* (ವ. 19): ಬಹುಶಃ ದಶಾಜ್ಞೆಗೆ ಒಂದು ಉದ್ದೇಶವಾಗಿರಬಹುದು (ಲೋಭದ ವಿರುದ್ಧವಾಗಿ). ಹೀಗೆ ಯೇಸು ಬೇರೊಬ್ಬರ ವಿರುದ್ಧವಾಗಿ ತಪ್ಪಾದ ಕಾರ್ಯ ಮತ್ತು ಮನೋಭಾವನೆಯನ್ನು ನಿರ್ಭಂಧಿಸುವ ಎಲ್ಲಾ ಆರು ಆಜ್ಞೆಗಳನ್ನು ತಿಳಿಸಿದ್ದಾನೆ.

*ನಾನು ಚಿಕ್ಕಂದಿನಿಂದಲೂ* (ವ. 20): ಈ ಐಶ್ವರ್ಯವಂತನು 13 ನೇ ವಯಸ್ಸಿನಲ್ಲಿ ತಾನೊಬ್ಬ "ಆಜ್ಞೆಯ ಮಗನಾದುದ್ದನ್ನು" ಯೋಚಿಸಿದ್ದಿರಬಹುದು.

*ಪರಲೋಕದಲ್ಲಿ ನಿನಗೆ ಸಂಪತ್ತಿರುವುದು* (ವ. 21): "ರಕ್ಷಣೆ" ಅಥವಾ "ನಿತ್ಯಜೀವದ ವರ"ಕ್ಕೆ ಇನ್ನೊಂದು ಉಲ್ಲೇಖವಾಗಿದೆ.

*ಒಂಟೆಯು ಸೂಜಿಕಣ್ಣಿನಲ್ಲಿ ನುಗ್ಗಿ ಹೋಗುವುದು ಸುಲಭ* (ವ. 25): ಈ ಚಿತ್ರಣದ ಅರ್ಥವು "ಅಸಾಧ್ಯ" ಎಂಬುದಾಗಿದೆ. ಒಂದು ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗಿ ಹೋಗುವುದು ಎಷ್ಟು ಅಸಾಧ್ಯವೋ ಅದೇ ರೀತಿಯಲ್ಲಿ ಆಜ್ಞೆಗಳನ್ನು ಪಾಲಿಸುವುದರಿಂದ ಐಶ್ವರ್ಯವಂತನು ತನ್ನ ರಕ್ಷಣೆಯನ್ನು ಸಂಪಾಧಿಸುವುದು ಅಸಾಧ್ಯವಾದುದ್ದಾಗಿದೆ.

*ಯಾರಿಗೆ ರಕ್ಷಣೆಯಾದೀತು? ... ಇದು ಮನುಷ್ಯರಿಗೆ ಅಸಾಧ್ಯ, ದೇವರಿಗೆ ಅಸಾಧ್ಯವಲ್ಲ* (ವ. 27): ರಕ್ಷಣೆಯು ಸಂಪೂರ್ಣವಾಗಿ ದೇವರ ಕಾರ್ಯವಾಗಿದೆ. ಮನುಷ್ಯನ ಸಾಧನೆ ಅಥವಾ ಅರ್ಹತೆಯಿಂದ ದೇವರ ರಾಜ್ಯವನ್ನು ಪ್ರವೇಶಿಸುವುದು ಅಸಾಧ್ಯವಾಗಿದೆ. ದೇವರ ಕೃಪೆಯ ಹೊರತು ಯಾರೊಬ್ಬರೂ ರಕ್ಷಿಸಲ್ಪಡಲು ಸಾಧ್ಯವಿಲ್ಲ (ಹೋಲಿಸಿ ಎಫೆಸ 2:8-9).

*ಈಗಿನ ಕಾಲದಲ್ಲಿ … ಮುಂದಣ ಲೋಕದಲ್ಲಿ* (ವ. 30): ಈಗಿನ ಕಾಲವು ಆದಾಮ ಮತ್ತು ಹವ್ವರ ಬೀಳುವಿಕೆಯ ದೇವರ ನಿತ್ಯರಾಜ್ಯದ ಪ್ರತ್ಯಕ್ಷತೆಯವರೆಗಿನ ಕಾಲವನ್ನು ಒಳಗೊಂಡಿದೆ. ಈ ಪ್ರಸ್ತುತ ಕಾಲವು ಕೆಟ್ಟದ್ದಾಗಿದೆ (ಗಲಾತ್ಯ 1:4 ನ್ನು ನೋಡಿ). ಆದರೆ ಮುಂಬರುವ ಕಾಲವು ಅಂದರೆ ಯೇಸುವಿನ ಎರಡನೇ ಬರೋಣದಿಂದ ಪ್ರಾರಂಭವಾಗಿ ಸದಾಕಾಲವು ಮುಂದುವರೆಯುವ ಕಾಲವು ದೇವರ ನೀತಿಯ ಆಳ್ವಿಕೆ ಕಾಲವಾಗಿದೆ.

*ನೂರರಷ್ಟು* (ವ. 30): ದೇವರ ರಾಜ್ಯದ ಕುರಿತಾದ ವಾಕ್ಯದ ಸಮೃದ್ಧವಾದ ಫಲದ ಒಂದು ವರ್ಣನೆಯಾಗಿದೆ. (ಹೋಲಿಸಿ 4:8).

*ಹಿಂಸೆಗಳು ಸಹಿತವಾಗಿ* (ವ. 30): ಶಿಷ್ಯತ್ವದ ಜೀವಿತವು ವಾಗ್ದಾನ ಮತ್ತು ಹಿಂಸೆ, ಆಶೀರ್ವಾದ ಮತ್ತು ಬಾಧೆ(ಹಿಂಸೆ)ಗಳ ಸಂಯೋಗವಾಗಿದೆ.

*ನಿತ್ಯಜೀವ* (ವ. 30): ದೇವರೊಂದಿಗಿನ ನಿತ್ಯಜೀವವು ಈ ಕೆಟ್ಟ ಯುಗವು ಅಂತ್ಯವಾದ ಮೇಲೆ ಸಿಗುವುದಾಗಿದೆ.

*ಮೊದಲನೆಯವರು, ಕಡೆಯವರಾಗುವರು* (ವ. 31): ಯೇಸು ಇದನ್ನು ಭವಿಷ್ಯದಲ್ಲಿ ದೇವರು ಜನರ ಜೀವಿತವೆಲ್ಲವನ್ನು ಮೌಲ್ಯಮಾಪನ ಮಾಡುವಾಗ ಮತ್ತು ಮನುಷ್ಯರ ಮೌಲ್ಯಗಳೆಲ್ಲವೂ ವ್ಯತಿರಿಕ್ತವಾಗುವುದನ್ನು ಸೂಚಿಸುತ್ತಾನೆ. ಈಗ ಶ್ರೇಣಿ ಮತ್ತು ಸ್ಥಾನವನ್ನು ಹೊಂದಿರುವವರು ಆಗ ಅದನ್ನು ಹೊಂದಿರಲಾರರು. ಈಗ ಅದಾವುದೂ ಇಲ್ಲದವರು ಆಗ (ಮುಂದೆ) ಅದನ್ನು ಹೊಂದುವರು.

*ಬೆರಗಾದರು* (ವ. 32): ಯೇಸು ಯೆರೂಸಲೇಮಿನ ದಾರಿಯನ್ನು ಹಿಡಿದು ಅವರ ಮುಂದೆ ಮುಂದೆ ಹೋಗುವ ಆತನ ನಿರ್ಣಯದಿಂದ ಬಹುಶಃ ಶಿಷ್ಯರು ಬೆರಗಾಗಿರಬಹುದು (ಹೋಲಿಸಿ ಯೆಶಾಯ 50:7).

*ಆತನ ಹಿಂದೆ ಬರುವವರು* (ವ. 32): ಈ ಜನರು ಹೆಚ್ಚಾಗಿ ಯೆರೂಸಲೇಮಿನಲ್ಲಿ ಪಸ್ಕಹಬ್ಬವನ್ನು ಆಚರಿಸುವುದಕ್ಕಾಗಿ ಆ ಮಾರ್ಗದಲ್ಲಿ ಹೋಗುತ್ತಿರುವ ಯಾತ್ರಾರ್ಥಿಗಳಾಗಿದ್ದಿರಬಹುದು.

*ಅನ್ಯರ … ಕೊಂದು ಹಾಕುವರು* (ವ. 33-34): "ಶಿಲುಬೆಗೆ ಹಾಕಿಸು" ಎಂಬ ಪದ ಮಾರ್ಕನ ಸುವಾರ್ತೆಯಲ್ಲಿ ಯೇಸುವಿನ ಬಾಧೆಯ ಕುರಿತಾಗಿ ಮುಂತಿಳಿಸುವುದರಲ್ಲಿ ಕಂಡುಬರುವುದಿಲ್ಲ. ಆದರೆ ಯೇಸುವು ಅನ್ಯರ ಕೈಗೆ ಒಪ್ಪಿಸಲ್ಪಟ್ಟು ಕೊಲ್ಲಲ್ಪಡುವನು ಎಂಬ ಹೇಳಿಕೆಯು ಸಾಮಾನ್ಯವಾಗಿ ರೋಮನ್ನರು ಇತರ ಕೈದಿಗಳನ್ನು ಶಿಕ್ಷಿಸುವ ವಿಧವಾದ ಶಿಲುಬೆಗೇರಿಸುವಿಕೆಯನ್ನು ಸೂಚಿಸುತ್ತದೆ.

*ನಿನ್ನ ಬಲಗಡೆಯಲ್ಲೂ … ನಿನ್ನ ಎಡಗಡೆಯಲ್ಲೂ ಕೂತುಕೊಳ್ಳುವಂತೆ* (ವ. 37): ಈ ಸ್ಥಳಗಳು ಘನತೆಯ ಸ್ಥಾನ ಮತ್ತು ಅಧಿಕಾರವನ್ನು ಸೂಚಿಸುತ್ತವೆ.

*ನಾನು ಕುಡಿಯುವ ಪಾತ್ರೆ* (ವ. 38): ಈ ಯೆಹೂದಿ ಹೇಳಿಕೆಯು ಇನ್ನೊಬ್ಬ ವ್ಯಕ್ತಿಯ ದುರ್ದೈವವನ್ನು (ವಿಧಿ) ಹಂಚಿಕೊಳ್ಳುವುದನ್ನು ವ್ಯಕ್ತಪಡಿಸುತ್ತದೆ. ಹಳೇ ಒಡಂಬಡಿಕೆಯು "ಮದ್ಯದ ಪಾತ್ರೆ" ಯನ್ನು ಪಾಪ ಮತ್ತು ತಿರುಗಿಬೀಳುವಿಕೆಗಾಗಿ ಮನುಷ್ಯನ ಮೇಲಿನ ದೇವರ ಕೋಪಕ್ಕೆ ಒಂದು ರೂಪಾಲಂಕಾರವಾಗಿ ಬಳಸುತ್ತದೆ (ಹೋಲಿಸಿ ಯೆರೆಮೀಯ 25:15-16). ಹಾಗಾಗಿ ಯೇಸು ಕುಡಿಯುವ ಪಾತ್ರೆಯು ನಮ್ಮ ಬಿಡುಗಡೆಗಾಗಿ ಯೇಸು ಹೊತ್ತ ಮನುಕುಲದ ಪಾಪಗಳ ಮೇಲಿನ ದೇವರ ದಂಡನೆಯನ್ನು ಸೂಚಿಸುತ್ತದೆ (ಹೋಲಿಸಿ ವ. 45).

*ನನಗಾಗುವ ದೀಕ್ಷಾಸ್ನಾನವನ್ನು ಹೊಂದುವುದು* (ವ. 38): "ದೀಕ್ಷಾಸ್ನಾನವು" ಬಾಧೆ ಮತ್ತು ಮರಣಕ್ಕೆ ಒಂದು ರೂಪಾಲಂಕಾರವಾಗಿದೆ. ಈ ಇಡೀ ಹೇಳಿಕೆಯು ಇನ್ನೊಬ್ಬ ವ್ಯಕ್ತಿಯ ಪಾತ್ರೆಯಲ್ಲಿ ಕುಡಿಯುವ ಕುರಿತಾದ ಈ ಹಿಂದಿನ ಹೇಳಿಕೆಗೆ ಸಮಾನಾರ್ಥಕವಾಗಿದೆ.

*ಹತ್ತು ಮಂದಿ* (ವ. 41): ಯಾಕೋಬ ಮತ್ತು ಯೋಹಾನನನ್ನು ಬಿಟ್ಟು ಉಳಿದ ಹತ್ತು ಮಂದಿ ಶಿಷ್ಯರು.

*ಈಡು ಕೊಡುವುದು* (ವ. 45): ಆ ದಿನಗಳಲ್ಲಿ ಒಬ್ಬ ಗುಲಾಮ ಅಥವಾ ದಾಸನನ್ನು ಬಿಡಿಸಿಕೊಳ್ಳುವುದಕ್ಕಾಗಿ ಕಟ್ಟುವ ಬೆಲೆಯೇ ಈಡು ಕೊಡುವುದಾಗಿತ್ತು. ಹೊಸ ಒಡಂಬಡಿಕೆಯಲ್ಲಿ "ಈಡು ಕೊಡುವುದು" ಎಂಬ ಪದವು ಮನುಷ್ಯರ ರಕ್ಷಣೆಗಾಗಿ ಶಿಲುಬೆ ಮೇಲೆ ಯೇಸು ಕೊಟ್ಟ ಬಿಡುಗಡೆಯ ಕ್ರಯವನ್ನು ಸೂಚಿಸುತ್ತದೆ (ಹೋಲಿಸಿ 1 ತಿಮೊ. 2:6).

*ಯೆರಿಕೋವಿಗೆ ... ಹೊರಟು ಹೋಗುತ್ತಿರುವಾಗ* (ವ. 46): ಯೆರಿಕೋ ಪಟ್ಟಣವು ಯೊರ್ದನ್ ಹೊಳೆಯ ಪಶ್ಚಿಮಕ್ಕೆ ಸುಮಾರು 8 ಕಿ.ಮೀ ಮತ್ತು ಯೆರೂಸಲೇಮಿನಿಂದ ಉತ್ತರಕ್ಕೆ 25 ಕಿ.ಮೀ ದೂರದಲ್ಲಿತ್ತು. ಹಳೆಯ ಯೆರಕೋ ಮತ್ತು ಹೆರೋದ ಮಹಾಶಯನಿಂದ ಕಟ್ಟಲ್ಪಟ್ಟ ಯೆರಿಕೋ ಇತ್ತು. ಈ ಕಥೆಯು ಬಹುಶಃ ಇಸ್ರಾಯೇಲ್ಯರ ಹಳೆಯ ಹೊಸ ಪಟ್ಟಣಗಳ ನಡುವೆ ಎಲ್ಲೋ ನಡೆದಿರಬೇಕು: ಮತ್ತಾಯ ಮತ್ತು ಮಾರ್ಕರು ಯೇಸು ಆ ಪಟ್ಟಣವನ್ನು ಬಿಡುವಾಗ ಎಂದು ಬರೆದಿರುವಲ್ಲಿ, ಲೂಕನು ಯೇಸು ಆ ಪಟ್ಟಣದೊಳಕ್ಕೆ ಹೋದನು ಎಂದು ಬರೆಯುತ್ತಾನೆ.

*ತಿಮಾಯನ ಮಗನಾದ ಬಾರ್ತಿಮಾಯನು* (ವ. 46): "ಬಾರ್ತಿಮಾಯ" ಎಂಬ ಹೆಸರಿನ ಅರ್ಥ ಇಬ್ರಿಯ/ಅರಾಮಿಕಿನಲ್ಲಿ "ತಿಮಾಯನ ಮಗ" ಎಂದಾಗಿದೆ.

ದಾವೀದನ ಕುಮಾರನೇ (ವ. 47): ಇದು ಒಂದು ಮೆಸ್ಸೀಯನ ಹೆಸರಾಗಿದೆ.

**ಪ್ರಶ್ನೆಗಳು**

1. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನ್ ನಕ್ಷೆಯಲ್ಲಿ*** ಯೂದಾಯ, ಯೊರ್ದನ್ ಹೊಳೆ ಮತ್ತು ಪೆರಿಯವನ್ನು ಕಂಡುಹಿಡಿರಯಿರಿ.
2. ಈ ಅಧ್ಯಾಯದ ಘಟನೆಗಳೆಲ್ಲ ಎಲ್ಲಿ ಜರುಗುತ್ತವೆ (ವ. 1)?
3. ಯಾಕೆ ಕೆಲ ಫರಿಸಾಯರು ಯೇಸುವನ್ನು ನೋಡಲು ಬರುತ್ತಾರೆ (ವ. 2)?
4. ವಚನ 5-12 ರಲ್ಲಿ ಮದುವೆಯ ಕುರಿತ ತನ್ನ ಬೋಧನೆಯನ್ನು ಯೇಸು ಹೇಗೆ ಸಾರಾಂಶಗೊಳಿಸುತ್ತಾನೆ?
5. ಯಾಕೆ ಜನರು ತಮ್ಮ ಚಿಕ್ಕ ಮಕ್ಕಳನ್ನು ಯೇಸುವಿನ ಬಳಿಗೆ ಕರೆತರುತ್ತಾರೆ (ವ. 13-16)?
6. ಚಿಕ್ಕ ಮಕ್ಕಳನ್ನು ಕಂಡಾಗ ಶಿಷ್ಯರು ಹೇಗೆ ಪ್ರತಿಕ್ರಯಿಸುತ್ತಾರೆ (ವ. 13-16)?
7. ಶಿಷ್ಯರು ನಡಕೊಂಡ ರೀತಿಗೆ ಯೇಸು ಹೇಗೆ ಪ್ರತಿಕ್ರಯಿಸುತ್ತಾನೆ (ವ. 13-16)?
8. ಯೇಸು ಚಿಕ್ಕ ಮಕ್ಕಳನ್ನು ಹೇಗೆ ನೋಡಿಕೊಳ್ಳುತ್ತಾನೆ (ವ. 13-16)?
9. ಆ ಒಬ್ಬ ಮನುಷ್ಯನು ಯಾವ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಯೇಸು ಸಹಕರಿಸಬೇಕೆಂದು ಬಯಸಿದನು (ವ. 17-18)?
10. ತನ್ನ ಪ್ರತ್ಯುತ್ತರದಿಂದ ಆ ಮನುಷ್ಯನು ದಶಾಜ್ಞೆಗಳನ್ನು ಪಾಲಿಸಿದ್ದರ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 18-21)?
11. ಆ ಮನುಷ್ಯನಿಗೆ ಏನು ಮಾಡಬೇಕೆಂದು ಯೇಸು ಹೇಳಿದನು (ವ. 20-22)?
12. ಯಾಕೆ ಆ ಮನುಷ್ಯನು ಯೇಸುವನ್ನು ಬಿಟ್ಟು ಹೋದನು (ವ. 20-22)?
13. ತನ್ನನ್ನು ಬಿಟ್ಟು ಹೋಗುತ್ತಿರುವ ಆ ಮನುಷ್ಯನಿಗೆ ಯೇಸು ಹೇಗೆ ಪ್ರತಿಕ್ರಯಿಸಿದನು (ವ. 22-25)?
14. ಒಂಟೆ ಮತ್ತು ಸೂಜಿ ಕಣ್ಣಿನ ಕುರಿತಾಗಿ ಯೇಸು ಹೇಳಿದ ಮಾತಿನ ಅರ್ಥವೇನು (ವ. 25)?
15. ರಕ್ಷಣೆಯ ಕುರಿತಾಗಿ ಶಿಷ್ಯರಲ್ಲಿ ಉದ್ಭವಿಸಿದ್ದ ಪ್ರಶ್ನೆಗೆ ಯೇಸು ಹೇಗೆ ಉತ್ತರಿಸುತ್ತಾನೆ (ವ. 23-27)?
16. ಯೇಸುವಿನ ಮೊದಲ ಶಿಷ್ಯರ ಸಮರ್ಪಣೆಯನ್ನು ಪೇತ್ರನು ಹೇಗೆ ವರ್ಣಿಸುತ್ತಾನೆ (ವ. 28-31)?

17. ವಚನ 29-31 ರಲ್ಲಿ ತನ್ನ ಶಿಷ್ಯರಿಗೆ ಯೇಸು ಮಾಡಿದ ವಾಗ್ದಾನಗಳನ್ನು ಪಟ್ಟಿಮಾಡಿರಿ.
18. "ಬಹುಮಂದಿ ಮೊದಲಿನವರು ಕಡೆಯವರಾಗುವರು, ಕಡೆಯವರು ಮೊದಲಿನವರಾಗುವರು" (ವ. 31) ಎಂಬ ಯೇಸುವಿನ ಹೇಳಿಕೆಯನ್ನು ವಿವರಿಸಿರಿ.
19. ಯೆರೂಸಲೇಮಿನ ದಾರಿಯಲ್ಲಿ ಯೇಸು ತನ್ನ ಶಿಷ್ಯರಿಗೆ ಏನನ್ನು ಪ್ರಕಟಿಸಿದನು (ವ. 33-34)?
20. ಯಾಕೋಬ ಮತ್ತು ಯೋಹಾನರು ಯೇಸುವಿನ ಬಳಿಗೆ ತಂದ ಬೇಡಿಕೆಯೇನು (ವ. 35-37)?
21. ಯಾಕೋಬ ಮತ್ತು ಯೋಹಾನರ ಬೇಡಿಕೆಗೆ ಯೇಸು ಹೇಗೆ ಸವಾಲೆಸೆಯುತ್ತಾನೆ (ವ. 35-38)?
22. ವಚನ 39 ರಲ್ಲಿ ಯೇಸು ಬಳಸುವ ಅಲಂಕಾರಿಕ ಭಾಷೆಯನ್ನು ವಿವರಿಸಿರಿ.
23. ಯಾಕೆ ಯೇಸುವಿಗೆ ಯಾಕೋಬ ಮತ್ತು ಯೋಹಾನರ ಮನವಿಯನ್ನು ಈಡೇರಿಸಲಾಗಲಿಲ್ಲ (ವ. 40)?
24. ಈಗಿನ ಲೋಕದ ಆಳುವವರನ್ನು ಯೇಸು ಹೇಗೆ ವಿವರಿಸುತ್ತಾನೆ?
25. ಪರಲೋಕದಲ್ಲಿನ ಹಿರಿಮೆ(ಹಿರಿತನ)ಯನ್ನು ಯೇಸು ಹೇಗೆ ವಿವರಿಸುತ್ತಾನೆ (ವ. 44-45)?
26. ಸ್ವತಃ ತನ್ನ ಸೇವೆಯನ್ನು ಯೇಸು ಹೇಗೆ ವರ್ಣಿಸುತ್ತಾನೆ (ವ. 45)?
27. ಬಾರ್ತಿಮಾಯನು ಯಾರು (ವ. 46-52)?
28. ಜನರು ಸುಮ್ಮನಿರು ಎಂದಾಗ ಬಾರ್ತಿಮಾಯನು ಏನು ಮಾಡಿದನು (ವ. 46-52)?
29. ಯೇಸು ಬಾರ್ತಿಮಾಯನಿಗೆ ಏನು ಮಾಡಿದನು ಮತ್ತು ಆ ಮೇಲೆ ಏನಾಯಿತು (ವ. 46-52)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಸತ್ಯವೇದವನ್ನು ನೋಡದೆ ವಿಚ್ಛೇದನದ ಕುರಿತ ವಾಕ್ಯಭಾಗನ್ನು ನಿಮ್ಮದೇ ಮಾತಿನಲ್ಲಿ ಸಾರಾಂಶಗೊಳಿಸಿರಿ (ವ. 2-12).
2. ಚಿಕ್ಕ ಮಕ್ಕಳ ಕುರಿತಾದ ವಾಕ್ಯಭಾಗದಲ್ಲಿ ಯೇಸು ತನ್ನ ಶಿಷ್ಯರಿಗೆ ಕೊಟ್ಟ ಎರಡು ಪಾಠಗಳನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ (ವ. 13-16).
3. ನಿತ್ಯಜೀವದ ಕುರಿತ ಪ್ರಶ್ನೆಯೊಂದಿಗೆ ಯೇಸುವಿನ ಬಳಿಗೆ ಬಂದ ಐಶ್ವರ್ಯವಂತನ ಕುರಿತಾದ ಕಥೆಯಲ್ಲಿ ರಕ್ಷಣೆಯ ಬಗ್ಗೆ ಯೇಸು ಕೊಟ್ಟ ಬೋಧನೆಯನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ (ವ. 17-27).
4. ತನ್ನನ್ನು ಹಿಂಬಾಲಿಸುವವರಿಗೆ "ಈಗಿನ ಕಾಲದಲ್ಲಿ ಮನೆ, ಅಣ್ಣ-ತಮ್ಮ, ಅಕ್ಕ-ತಂಗಿ, ತಾಯಿ-ಮಕ್ಕಳು, ಭೂಮಿ ಇವೆಲ್ಲವೂ ಹಿಂಸೆಗಳ ಸಹಿತವಾಗಿ ನೂರರಷ್ಟು ಸಿಕ್ಕೇ ಸಿಕ್ಕುತ್ತವೆ" (ವ. 30) ಎಂಬ ಯೇಸುವಿನ ಹೇಳಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
5. ಈ ಪಟ್ಟಿಯನ್ನು ತುಂಬುವುದರೊಂದಿಗೆ ಮಾರ್ಕನ ಸುವಾರ್ತೆಯಲ್ಲಿ ಯೇಸುವಿನ ಬಾಧೆಯ ಮೂರು ಮುಖ್ಯ ಮುನ್ಸೂಚನೆಗಳನ್ನು ಹೋಲಿಸಿರಿ (9:31-37, 10:33-45).

| **ಯೇಸುವಿನ ಮರಣದ ಘೋಷಣೆ** | **ಶಿಷ್ಯರ ವಿಫಲತೆ** | **ಶಿಷ್ಯತ್ವದ ಕುರಿತು ಯೇಸು ಬೋಧಿಸುವುದು** |
|---|---|---|
| (ನೋಡಿ 8:31) | (ನೋಡಿ 8:32-33) | (ನೋಡಿ 8:33-38) |
| (ನೋಡಿ 9:31) | (ನೋಡಿ 9:32) | (ನೋಡಿ 9:33-37) |
| (ನೋಡಿ 10:33-34) | (ನೋಡಿ 10:35-37) | (ನೋಡಿ 10:38-45) |

6. ವಚನ 41-45 ರಲ್ಲಿ ಕಂಡುಬರುವಂತೆ ಪರಲೋಕದಲ್ಲಿ ಯಾರು ದೊಡ್ಡವರು (ಹಿರಿಯ) ಎಂಬುದರ ಕುರಿತ ಯೇಸುವಿನ ಬೋಧನೆಯನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
7. ಯಾಕೆ ಯೇಸು ಬಾರ್ತಿಮಾಯನನ್ನು ಗುಣಪಡಿಸಿದನೆಂಬುದಾಗಿ ನೀವು ಯೋಚಿಸುವಿರಿ (ವ. 46-52).

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ವಚನ 2-12 ರಲ್ಲಿ ವಿಚ್ಛೇದನದ ಕುರಿತ ಯೇಸುವಿನ ಬೋಧನೆಯನ್ನು ವಿಮರ್ಶಿಸಿರಿ. ಇಂದು ದಕ್ಷಿಣ ಭಾರತದ ಸಭೆಗಳಲ್ಲಿ ನಿಮ್ಮ ಪರಿಸ್ಥಿತಿಗಳಿಗೆ ಯಾವ ರೀತಿ ಪ್ರಾಯೋಗಿಕವಾಗಿ ಅನ್ವಯಿಸಬಹುದಾಗಿದೆ? 1 ಕೊರಿಂಥ 7:2-15 ರಲ್ಲಿನ ಪೌಲನ ಬೋಧನೆಯನ್ನು ಸಹ ಪರಿಗಣಿಸಿರಿ. ಸಭಾನಾಯಕರ ಒಂದು ಗುಂಪಿಗೆ ವಿಮರ್ಶಿಸುವುದಕ್ಕಾಗಿ ಕೆಲವು ಅಂಶಗಳನ್ನು ಸಿದ್ಧಪಡಿಸಿರಿ.
2. ಯೇಸುವಿನ ಬಾಧೆ, ಮರಣ ಮತ್ತು ಪುನರುತ್ಥಾನದ ಕುರಿತ ಮೂರು ಮುನ್ಸೂಚನೆಗಳು, ಶಿಷ್ಯರ ಪ್ರತಿಕ್ರಿಯೆ ಮತ್ತು ಶಿಷ್ಯತ್ವದ ಕುರಿತ ಯೇಸುವಿನ ಬೋಧನೆಗಳನ್ನು ವಿಮರ್ಶಿಸಿರಿ. (ಈ ಅಧ್ಯಯನದಲ್ಲಿನ ಮಾಹಿತಿ, ವಿಶೇಷವಾಗಿ ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 5 ನ್ನು ನೋಡಿರಿ). ಅನಂತರ ***ಯೇಸು ಮತ್ತು ಆತನ ಶಿಷ್ಯರು*** ಎಂಬ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 5 ರಲ್ಲಿನ ತುಂಬಿದ ಪಟ್ಟಿಯನ್ನು ರೂಪುರೇಖೆಯಾಗಿ ಬಳಸಬಹುದು.
3. ಈ ಅಧ್ಯಯನದ ಬೆಳಕಿನಲ್ಲಿ ಪರಲೋಕದಲ್ಲಿನ ಹಿರಿಮೆಯನ್ನು ವಿಮರ್ಶಿಸಿರಿ. ಹಾಗೆಯೇ ***ಪರಲೋಕದಲ್ಲಿನ ಹಿರಮೆ/ದೊಡ್ಡತನ*** ಎಂಬ ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.



**ಮಾರ್ಕ ಅಧ್ಯಾಯ 11**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕ 11 ನೇ ಅಧ್ಯಾಯವನ್ನು ಈ ರೀತಿಯಾಗಿ ರಚನೆಮಾಡಬಹುದು:

1. ಯೇಸು ಅರಸನಂತೆ ಯೆರೂಸಲೇಮಿನೊಳಗೆ ಪ್ರವೇಶಿಸಿದ್ದು, ವ. 1-11
2. ಯೇಸು ಅಂಜೂರದ ಮರವನ್ನು ಶಪಿಸಿದ್ದು, ವ. 12-14
3. ಯೇಸು ದೇವಾಲಯವನ್ನು ಸ್ವಚ್ಛಗೊಳಿಸಿದ್ದು, ವ. 15-19
4. ಒಣಗಿ ಹೋದ ಅಂಜೂರದ ಮರ, ವ. 20-27
5. ಯೆಹೂದಿ ನಾಯಕರು ಯೇಸುವಿನ ಅಧಿಕಾರವನ್ನು ವಿಚಾರಿಸಿದ್ದು, ವ. 28-33

ಯೇಸು ಅರಸನಂತೆ ಯೆರೂಸಲೇಮನ್ನು ಪ್ರವೇಶಿಸಿದ ಘಟನೆಯು ಆತನು ಶ್ರಮೆ, ಮರಣ ಮತ್ತು ಪುನರುತ್ಥಾನದ ವಾರದ ಭಾನುವಾರದಂದು ಸಂಭವಿಸಿರುತ್ತದೆ. ಇದು ಇಸ್ರಾಯೇಲ್ಯರು ಐಗುಪ್ತದಲ್ಲಿನ ದಾಸತ್ವದಿಂದ ಬಿಡುಗಡೆಯಾಗಿ ಬಂದದ್ದನ್ನು ನೆನಪುಮಾಡಿಕೊಳ್ಳುವ ಹಬ್ಬವಾದ ಪಸ್ಕಹಬ್ಬವನ್ನು ಯೆಹೂದ್ಯರು ಆಚರಿಸುವ ವಾರವಾಗಿತ್ತು. ಪಸ್ಕಹಬ್ಬವನ್ನು ಆಚರಿಸುವುದಕ್ಕಾಗಿ ಯೆರೂಸಲೇಮಿಗೆ ಬಂದಿದ್ದ ಅಪಾರ ಸಂಖ್ಯೆಯ ಯಾತ್ರಾರ್ಥಿಗಳು ತಮ್ಮನ್ನು ಪ್ಯಾಲೆಸ್ಟೇನ್ ಮೇಲಿನ ರೋಮನ್ ನಿಯಂತ್ರಣದಿಂದ ಬಿಡುಸುವ ಒಬ್ಬ ಅರಸನಾದ ಮೆಸ್ಸೀಯನ ಕುರಿತ ಹಳೇ ಒಡಂಬಡಿಕೆಯ ಪ್ರವಾದನೆಯ ನೆರವೇರಿಕೆಯನ್ನು ಮುನ್ನೋಡುತ್ತಿದ್ದರು. ರಾತ್ರಿ ಬೆಳಗಾಗುವುದರೊಳಗೆ ಒಣಗಿ ಹೋಗುವ ಅಂಜೂರ ಮರದ ಕುರಿತಾದ ಕಥೆಯು ವ್ಯಾಖ್ಯಾನಕಾರರಿಗೆ ಬಹು ದೊಡ್ಡ ತಲೆನೋವನ್ನುಂಟುಮಾಡಿದೆ. ಇದನ್ನು ಬಹುಶಃ ಕ್ರಿ.ಶ. 70 ರಲ್ಲಿ ರೋಮನ್ನರಿಂದ ಸಂಪೂರ್ಣವಾಗಿ ನಾಶ ಮಾಡಲ್ಪಟ್ಟ ಯೆರೂಸಲೇಮ್ ಪಟ್ಟಣದ ಮೇಲಿನ ಒಂದು ಸಾಂಕೇತಿಕ ಪ್ರವಾದನ ನ್ಯಾಯತೀರ್ಪು ಎಂಬುದಾಗಿ ಅರ್ಥೈಸಿಕೊಳ್ಳಬೇಕಿದೆ. ದೇವಾಲಯದೊಳಗಿಂದ ಕೊಳ್ಳುವವರನ್ನು, ಮಾರುವವರನ್ನು ಹೊರಡಿಸುವುದರ ಮೂಲಕ ಯೇಸು ತನ್ನ ಅಧಿಕಾರವನ್ನು ಪ್ರದರ್ಶಿಸಿದನು, ಈ ಅಧಿಕಾರವೇ ನಂತರದ ದಿನದಲ್ಲಿ ಯೆಹೂದಿ ನಾಯಕರಿಂದ ಪ್ರಶ್ನಿಸಲ್ಪಟ್ಟಿತ್ತು.

*ಬೇತ್ಫಗೆ* (ವ. 1): ಈ ಹೆಸರಿನ ಅರ್ಥ "ಅಂಜೂರದ ಹಣ್ಣುಗಳ ಮನೆ" ಎಂಬುದಾಗಿದೆ. ಇದು ಯೇಸು ಯೆರೂಸಲೇಮಿನೊಳಕ್ಕೆ ಅರಸನಂತೆ ಪ್ರವೇಶಿಸಿದ ಸಂಬಂಧದಲ್ಲಿ ಮಾತ್ರ ಸತ್ಯವೇದದಲ್ಲಿ ತಿಳಿಸಿಲ್ಪಟ್ಟಿದೆ ಆದರೆ ಇದರ ಸರಿಯಾದ ಸ್ಥಳವು ಪರಿಚಿತವಾಗಿದೆ. ಇದು ಬಹುಶಃ ಯೇಸು ಎರಡನೇ ವಚನದಲ್ಲಿ "ನಿಮ್ಮೆದುರಿಗೆ ಇರುವ ಹಳ್ಳಿ" ಎಂಬುದಾಗಿ ಹೇಳುವ ಸ್ಥಳವಾಗಿರಬಹುದು.

*ಬೇಥಾನ್ಯ* (ವ. 1): ಈ ಹೆಸರಿನ ಅರ್ಥ "ಮಾಗದೆ ಇರುವ ಖರ್ಜೂರ ಅಥವಾ ಅಂಜೂರದ ಹಣ್ಣುಗಳ ಮನೆ" ಎಂಬುದಾಗಿದೆ. ಇದು ಎಣ್ಣೇಮರಗಳ ಗುಡ್ಡದ ಪೂರ್ವ ಇಳಿಜಾರಿನ ಮೇಲೆ ಒಂದು ಹಳ್ಳಿಯಾಗಿತ್ತು, ಇದು ಯೆರೂಸಲೇಮಿನಿಂದ ಸುಮಾರು 3 ಕಿ.ಮೀ ದೂರದಲ್ಲಿದ್ದು ಯೆರಿಕೋದಿಂದ ಯೆರೂಸಲೇಮಿಗೆ ಹೋಗುವ ಮಾರ್ಗದಲ್ಲಿನ ಕೊನೆಯ ನಿಲ್ದಾಣವಾಗಿತ್ತು. ಇದು ಮರಿಯಳು, ಮಾರ್ಥ ಮತ್ತು ಲಾಜರನ ತವರಾಗಿತ್ತು.

*ಎಣ್ಣೇಮರಗಳ ಗುಡ್ಡ* (ವ. 1): ಕಿದ್ರೋನ್ ತಗ್ಗಿನ ಮೂಲಕ ಪಟ್ಟಣದಿಂದ ಬೇರ್ಪಡಿಸಲ್ಪಟ್ಟ ಯೆರೂಸಲೇಮಿನ ಪೂರ್ವಕ್ಕಿರುವ ಎತ್ತರವಾದ ಈ ಬೆಟ್ಟದ ಮೇಲಿನಿಂದ ಪಟ್ಟಣದ, ಅದರಲ್ಲೂ ವಿಶೇಷವಾಗಿ ದೇವಾಲಯದ ವಿಹಂಗಮವಾದ ಒಂದು ನೋಟವು ಕಾಣಿಸುತ್ತಿತ್ತು.

*ಸ್ವಾಮಿಯವರಿಗೆ* (ವ. 3): ಈ ಪದವು ದೇವರು, ಯೇಸು ಅಥವಾ ಕತ್ತೆಮರಿಯ ಒಡೆಯನಿಗೆ ಸೂಚಿಸುತ್ತದೆ.

ವಚನ 7-10: ಹಳೇ ಒಡಂಬಡಿಕೆಗೆ ಪರಿಚಿತರಾಗಿರುವ ಮಾರ್ಕನ ಓದುಗರಿಗೆ ಈ ವಚನಗಳು ಜಕರ್ಯ 9:9 ರಲ್ಲಿ ಕಂಡು ಬರುವ ಮೆಸ್ಸೀಯನ ಕುರಿತ ಪ್ರವಾದನೆಯನ್ನು ಪ್ರತಿಧ್ವನಿಸುತ್ತವೆ. "ಚೀಯೋನ್ ನಗರಿಯೇ ಬಹು ಸಂತೋಷ ಪಡು; ಯೆರೂಸಲೇಮ್ ಪುರಿಯೇ ಹರ್ಷಧ್ವನಿಗೈ! ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ; ಆತನು ನ್ಯಾಯವಂತನು, ಸುರಕ್ಷಿತನು; ಶಾಂತಗುಣವುಳ್ಳವನಾಗಿಯೂ ಕತ್ತೆಯನ್ನು, ಹೌದು, ಪ್ರಾಯದ ಕತ್ತೆಮರಿಯನ್ನು ಹತ್ತಿದವನಾಗಿಯೂ ಬರುತ್ತಾನೆ" (ಮತ್ತಾಯ 21:4-5 ರೊಂದಿಗೆ ಹೋಲಿಸಿರಿ).

*"ಹೋಸನ್ನ"* (ವ. 9): ಈ ಇಬ್ರಿಯ ಹೇಳಿಕೆಯನ್ನು ಕೀರ್ತನೆ 108:2 ರಲ್ಲಿ ಉಪಯೋಗಿಸಲಾಗಿದ್ದು, ಇದರರ್ಥ "ಈಗಲೇ ರಕ್ಷಿಸಬೇಕೆಂದು ನಾವು ಪ್ರಾರ್ಥಿಸುತ್ತೇವೆ" ಎಂಬುದಾಗಿದೆ. ಇದು ಯೆಹೂದ್ಯರಿಂದ ಒಂದು ಸ್ತುತಿ ಘೋಷವಾಗಿ ಬಳಸಲ್ಪಟ್ಟಿದೆ. ಯೆಹೂದ್ಯರ ಅಂತಿಮ ಗತಿಶಾಸ್ತ್ರದ ನಿರೀಕ್ಷೆಯನ್ನು ವ್ಯಕ್ತಪಡಿಸಲು ಸಹ ಇದನ್ನು ಬಳಸಲಾಗಿದೆ.

*ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ* (ವ. 9): ಇದು ಕೀರ್ತನೆ 118:26 ರ ಒಂದು ಹೇಳಿಕೆಯಾಗಿದೆ. ಕೀರ್ತನೆ 118 "ಸ್ತೋತ್ರ (ಸ್ತುತಿ) ಕೀರ್ತನೆ"ಗಳಲ್ಲಿ ಒಂದಾಗಿದ್ದು ಇದನ್ನು ಪಸ್ಕಹಬ್ಬದ ಊಟದ ವೇಳೆ ಹಾಡಲಾಗುತ್ತಿತ್ತು.

ವಚನ 10: "ನಮ್ಮ ಪಿತೃವಾದ ದಾವೀದನ ರಾಜ್ಯಕ್ಕೆ ಆಶೀರ್ವಾದ" ಎಂದರೆ ದಾವೀದನ ಕುಮಾರನಿಗೆ ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನ ರಾಜ್ಯವೆಂಬುದು ಸ್ಪಷ್ಟವಾಗುತ್ತದೆ.

*ದೇವಾಲಯಕ್ಕೆ* (ವ. 11): ಇಡೀ ದೇವಾಲಯದ ಪ್ರದೇಶವನ್ನೆಲ್ಲ ಒಳಗೊಂಡು, ದೇವಾಲಯವು ಹೆರೋದ ಮಹಾಶಯನಿಂದ ಕಟ್ಟಲ್ಪಟ್ಟು, ಅಂಗಳವನ್ನೆಲ್ಲ ವಿಸ್ತರಿಸಲಾಯಿತು. ಇದನ್ನು ಕಟ್ಟುವುದಕ್ಕಾಗಿ ಆಗ್ನೇಯದಲ್ಲಿನ ನೆಲವು ಹಾನಿಯಾಗದಂತೆ ತಪ್ಪಿಸಲು ಬೃಹತ್ತಾದ ವೇದಿಕೆಯನ್ನು ಸ್ಥಾಪಿಸಬೇಕಾಗಿತ್ತು. ವೇದಿಕೆಯನ್ನು ಬಲಪಡಿಸುವುದಕ್ಕಾಗಿ ದೊಡ್ಡ ದೊಡ್ಡ ಕಲ್ಲುಗಳಿಂದ ಒಂದು ಬೃಹತ್ತಾದ ತಡೆ ಗೋಡೆಯನ್ನು ನಿರ್ಮಿಸಲಾಯಿತು. ಆ ವೇದಿಕೆಯ ಮೇಲೆ ದೇವಾಲಯ, ದ್ವಾರ ಮಂಟಪಗಳು ಮತ್ತು ಸುಂದರವಾದ ಕಂಬಗಳ ಸಾಲಿನಿಂದ ಸುತ್ತುವರಿಯಲ್ಪಟ್ಟ ಅಂಗಳಗಳು ನಿರ್ಮಿತವಾದವು.

*ಮರುದಿನ* (ವ. 12): ಇದು ಶ್ರಮವಾರದ ಸೋಮವಾರವಾಗಿತ್ತು.

*ಎಲೆಬಿಟ್ಟಿದ್ದ ಒಂದು ಅಂಜೂರದ ಮರ … ಅಂಜೂರದ ಹಣ್ಣಿನ ಕಾಲವಲ್ಲ* (ವ. 13): ಯೆರೂಸಲೇಮಿನ ಸುತ್ತಲಿರುವ ಮರಗಳು ಸಾಮಾನ್ಯವಾಗಿ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ತುಂಬಿದ್ದು, ಜೂನಿನಲ್ಲಿ ಎಲೆಗಳು ಬೀಳುವವರೆಗೂ ಹಣ್ಣುಗಳು ಬಲಿಯುತ್ತಿರಲಿಲ್ಲ. ಹಳೇ ಒಡಂಬಡಿಕೆಯಲ್ಲಿ ಅಂಜೂರದ ಮರವು ಕೆಲವೊಮ್ಮೆ ಇಸ್ರಾಯೇಲ್ ಜನಾಂಗ (ರಾಷ್ಟ್ರ) ಮತ್ತು ಅದರ ಪಟ್ಟಣಗಳನ್ನು ಪ್ರತಿನಿಧಿಸುತ್ತದೆ (ಉದಾ. ನೋಡಿ ಯೆರೆಮಿಯಾ 8:13, ಹೋಶೇಯ 9:10, 16).

*ಇನ್ನು ಮೇಲೆ ಒಬ್ಬರೂ ನಿನ್ನಲ್ಲಿ ಹಣ್ಣನ್ನು ಎಂದಿಗೂ ತಿನ್ನದ ಹಾಗಾಗಲಿ* (ವ. 14): ಅಂಜೂರದ ಮರದ ಕುರಿತಾದ ಕಥೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂದು ಸತ್ಯವೇದ ಪಂಡಿತರು ಬಹಳಷ್ಟು ಹೋರಾಟವನ್ನನುಭವಿಸಿದ್ದಾರೆ. ಕೆಲವರು ಇದನ್ನು ನ್ಯಾಯತೀರ್ಪಿನ ಒಂದು ಸಾಮ್ಯವೆಂಬುದಾಗಿ ವ್ಯಾಖ್ಯಾನಿಸಿದ್ದಾರೆ (ಹಣ್ಣಿಲ್ಲದ ಅಂಜೂರದ ಮರ, ಯೇಸುವಿನಿಂದ ಶಪಿಸಲ್ಪಟ್ಟು ಒಣಗಿ ಹೋಗಿದ್ದು, ವ. 20). ಈ ವ್ಯಾಖ್ಯಾನವು ಕಥೆಯ ಮಧ್ಯಭಾಗದಲ್ಲಿ ಇಡಲ್ಪಟ್ಟ ದೇವಾಲಯವನ್ನು ಶುದ್ಧಿಗೊಳಿಸುವ (ವ. 12-19) ವಾಕ್ಯ ಭಾಗದ ವಾಸ್ತವಾಂಶದಿಂದ ಬೆಂಬಲಿಸಲ್ಪಟ್ಟಿದೆ. ಬದಲಾಗಿ ಇದನ್ನು ಕ್ರಿ.ಶ 70 ರಲ್ಲಿ ರೋಮನ್ನರಿಂದ ಸಂಪೂರ್ಣವಾಗಿ ನಾಶಮಾಡಲ್ಪಟ್ಟ ಯೆರೂಸಲೇಮ್ ಪಟ್ಟಣದ ಬೀಳುವಿಕೆ(ಪತನ)ಯನ್ನು ಕುರಿತಾದ ಒಂದು ಸಾಂಕೇತಿಕ ಪ್ರವಾದನೆಯೆಂಬುದಾಗಿ ಅರ್ಥೈಸಿಕೊಳ್ಳಬಹುದು.

*ದೇವಾಲಯಕ್ಕೆ* (ವ. 15): "ಅನ್ಯರ ಅಂಗಳ" ವೆನಿಸುವ ಸ್ಥಳದಲ್ಲಿ ಯೇಸು ಶುಚಿಮಾಡಿದನು. ಇದೊಂದು ಸ್ಥಳದಲ್ಲಿ ಅನ್ಯರು ಆರಾಧಿಸಲು ಮತ್ತು ಪ್ರಾರ್ಥಿಸಲು ಸೇರಬಹುದಾಗಿತ್ತು (ಹೋಲಿಸಿ ವ. 17).

*ಮಾರುವವರನ್ನೂ, ಕೊಳ್ಳುವವರನ್ನೂ ... ಚಿನಿವಾರರ ಮೇಜುಗಳನ್ನೂ, ಪಾರಿವಾಳ ಮಾರುವವರ ಕಾಲ್ಮಣೆಗಳನ್ನು* (ವ. 15-16): ದೇವಾಲಯಕ್ಕೆ ಬರುವ ಯಾತ್ರಿಗಳು ಯಜ್ಞ ಮಾಡುವುದಕ್ಕಾಗಿ ಪ್ರಾಣಿಗಳನ್ನು ಕೊಂಡುಕೊಳ್ಳಬೇಕಾಗಿತ್ತು. ಹಾಗಾಗಿ ಅದಕ್ಕೆ ಅನುಕೂಲಕರವಾಗುವಂತೆ ಮಾರುವವರು ಪ್ರಾಣಿಗಳನ್ನು ಅನ್ಯರಿಗಾಗಿನ ಅಂಗಳದಲ್ಲಿ ಇಟ್ಟುಕೊಳ್ಳುತ್ತಿದ್ದರು. ಅಲ್ಲದೇ ಯಾತ್ರಿಗಳು ತಮ್ಮ ಹಣವನ್ನು ಸ್ಥಳೀಯ ಕರೆನ್ಸಿಗೆ ಬದಲಿಸಬೇಕಿತ್ತು, ಯಾಕೆಂದರೆ ದೇವಾಲಯದ ವಾರ್ಷಿಕ ತೆರಿಗೆಯನ್ನು ಕೇವಲ ಸ್ಥಳೀಯ ಹಣದಿಂದ ಮಾತ್ರ ಕಟ್ಟಬಹುದಾಗಿತ್ತು. ಪಾರಿವಾಳಗಳು ವಿಭಿನ್ನ ಬಗೆಯ ಯಜ್ಞಗಳನ್ನು ಮಾಡುವುದಕ್ಕಾಗಿ ಅವಶ್ಯಕವಾಗಿದ್ದವು. ಉದಾಹರಣೆಗೆ ಸ್ತ್ರೀಯರ ಶುದ್ಧೀಕರಣ ಮತ್ತು ವಿವಿಧ ಚರ್ಮ ರೋಗಗಳ ಶುದ್ಧೀಕರಣಕ್ಕಾಗಿ ಇದನ್ನು ಬಳಸಲಾಗುತ್ತಿತ್ತು. ಅಲ್ಲದೇ ಪಾರಿವಾಳಗಳು ಬಡಜನರ ಸಾಮಾನ್ಯ ಕಾಣಿಕೆಗಳಾಗಿದ್ದವು.

*ಹೊತ್ತುಕೊಂಡು ದೇವಾಲಯದೊಳಗೆ ಹಾದು ಹೋಗಲಿಲ್ಲ* (ವ. 16): ಇದರರ್ಥ ಜನರು ದೇವಾಲಯದ ಜಾಗವನ್ನು ಪಟ್ಟಣ ಮತ್ತು ಎಣ್ಣೇಮರಗಳ ಗುಡ್ಡದ ನಡುವಿನ ಒಂದು ನೇರ ಮಾರ್ಗವಾಗಿ ಬಳಸುತ್ತಿದ್ದರೆಂಬುದಾಗಿದೆ.

*ನನ್ನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾಲಯವೆನಿಸಿಕೊಳ್ಳುವುದು ... ಕಳ್ಳರ ಗವಿ* (ವ. 17): ಈ ವಚನದ ಮೊದಲ ಭಾಗವು ಯೆಶಾಯ 56:7 ರ ಒಂದು ಭಾಗವಾಗಿದೆ. ಅನ್ಯಜನರು ಸೇರುವ ಅಂಗಳವನ್ನು ಗಲಾಟೆಯಿಂದ ತುಂಬಿದ ಮಾರುಕಟ್ಟೆಯನ್ನಾಗಿ ಮಾಡಲು ಅನುಮತಿಸುವುದರ ಮೂಲಕ ಯೆಹೂದಿ ನಾಯಕರು ಭಯ ಭಕ್ತಿಯುಳ್ಳ ಅನ್ಯಜನರ ಆರಾಧನೆಗೆ ಅಡ್ಡಿಯನ್ನುಂಟು ಮಾಡುತ್ತಿದ್ದರೂ "ಕಳ್ಳರ ಗವಿ" ಎಂಬುದು ಯೆರೆಮೀಯ 7:11 ರ ಒಂದು ಹೇಳಿಕೆಯಾಗಿದೆ. ಅಲ್ಲಿ ನಡೆಯುತ್ತಿದ್ದ ವ್ಯಾಪಾರ ಚಟುವಟಿಕೆಗಳು ದೇವಾಲಯದ ಪವಿತ್ರತೆಯನ್ನು ಲೂಟಿಗೈದಿದ್ದವು.

*ಬೆಳಿಗ್ಗೆ* (ವ. 20): ಇದು ಶ್ರಮವಾರದ ಮಂಗಳವಾರವಾಗಿತ್ತು.

*ಈ ಬೆಟ್ಟಕ್ಕೆ ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ...* (ವ. 23): ಯೇಸು ಎಣ್ಣೇಮರಗಳ ಗುಡ್ಡದ ಮೇಲೆ ನಿಂತಿಕೊಂಡಿದ್ದನು, ಅಲ್ಲಿಂದ ಮೃತ ಸಮುದ್ರವು ಸ್ಪಷ್ಟವಾಗಿ ಕಾಣಿಸುತ್ತಿತ್ತು. ಖಂಡಿತವಾಗಿ ಯೇಸು ಅಲಂಕಾರಿಕವಾಗಿ ಮತ್ತು ಅತಿಶಯೋಕ್ತಿ ರೂಪದಲ್ಲಿ ಮಾತಾಡುತ್ತಿದ್ದನು. ಒಂದು ಬೆಟ್ಟವನ್ನು ಚಲಿಸುವಂತೆ ಮಾಡುವುದು ಅಸಾಧ್ಯವಾಗಿದೆ (ಹೋಲಿಸಿ ಯೆಶಾಯ 40:4, 49:11, 54:10). ಯೇಸುವಿನ ಮಾತಿನಿಂದ, ಮಾರ್ಕನು ಈ ಹಿಂದೆ ತನ್ನ ಸುವಾರ್ತೆಯಲ್ಲಿ ತನ್ನ ಓದುಗರಿಗೆ ನಾವು ಕಾಣುವ ಅನೇಕ ಜನರು ಮಾಡಲು ಹಿಂಜರಿಯುವ ನಂಬಿಕೆಯ ಒಂದು ಕಠಿಣ ಸಮರ್ಪಣೆಯ ಅಗತ್ಯತೆಯಿದೆ ಎಂಬುದನ್ನು ಜ್ಞಾಪಿಸುತ್ತಾನೆ. ಆದರೆ ದೇವರಿಗೆ ಅಸಾಧ್ಯವಾದದ್ದು ಯಾವುದೂ ಅಲ್ಲವೆಂಬುದನ್ನು ತನ್ನ ಹಿಂಬಾಲಕರು ಭರಸೆಯಿಂದ ನಂಬಬೇಕೆಂದು ಯೇಸು ಬಯಸುತ್ತಾನೆ.

ವಚನ 26: ಇದು ಗ್ರೀಕ್ ಹಸ್ತಪ್ರತಿಗಳಲ್ಲಿ ಕಂಡುಬರುವುದಿಲ್ಲ. ಹಾಗಾಗಿ ಇದು ಬಹುಶಃ ಮಾರ್ಕನ ಮೂಲ ಪತ್ರದ ಭಾಗವಾಗಿರಲಿಲ್ಲ.

*ಅಧಿಕಾರ* (ವ. 28): ಅಧಿಕೃತವೆಂಬುದಾಗಿ ತೋರುವ ಕಾರ್ಯವನ್ನು ಯಾಕೆ ಮಾಡಿದೆ ಎಂಬುದಾಗಿ ಯೆಹೂದಿ ನಾಯಕರು ಯೇಸುವನ್ನು ಪ್ರಶ್ನಿಸುತ್ತಾರೆ (ದೇವಾಲಯದ ಅಂಗಳವನ್ನು ಶುಚಿಗೊಳಿಸುವುದು). ಅದನ್ನು ಮಾಡುವುದಕ್ಕೆ ಆತನಿಗೆ ಅಧಿಕೃತ ಸ್ಥಾನಮಾನವಿರಲಿಲ್ಲ.

*ಪರಲೋಕದಿಂದ* (ವ. 30): ಯೆಹೂದ್ಯರ ಈ ಒಂದು ಸಾಮಾನ್ಯ ಮಾತಿನ ಅರ್ಥವೇನೆಂದರೆ "ದೇವರಿಂದ" ಎಂಬುದಾಗಿದೆ. ದೇವರ ಪರಿಶುದ್ಧತೆಯೆಡೆಗಿನ ಗೌರವದ ನಿಮಿತ್ತ ಅನೇಕ ಯೆಹೂದ್ಯರು ನೇರವಾಗಿ ದೇವರ ಹೆಸರನ್ನು ಸೂಚಿಸಿ ಹೇಳುತ್ತಿರಲಿಲ್ಲ.

**ಪ್ರಶ್ನೆಗಳು**

1. ಯೇಸು ಯಾಕೆ ತನ್ನ ಇಬ್ಬರು ಶಿಷ್ಯರನ್ನು ಮುಂದಾಗಿ ಹಳ್ಳಿಗೆ ಕಳುಹಿಸಿದನು (ವ. 1-7)?
2. ಯೇಸು ಕತ್ತೆ ಮರಿಯೊಂದಿಗೆ ಏನು ಮಾಡಿದನು (ವ. 1-7)?
3. ಯೇಸು ಯೆರೂಸಲೇಮಿನೊಳಕ್ಕೆ ಬರುವುದನ್ನು ಕಂಡ ಜನರು ಏನು ಮಾಡಿದರು (ವ. 7-10)?
4. ಯೇಸು ಯೆರೂಸಲೇಮಿಗೆ ಬಂದ ಮೇಲೆ ಏನು ಮಾಡಿದನು (ವ. 11)?
5. ಯೇಸು ಅಂಜೂರದ ಮರದ ಬಗ್ಗೆ ಏನನ್ನು ಹೇಳಿದ್ದನ್ನು ಶಿಷ್ಯರು ಕೇಳಿಸಿಕೊಂಡರು (ವ. 12-14)?
6. ಯೇಸು ದೇವಾಲಯದಲ್ಲಿ ಏನು ಮಾಡಿದನು (ವ. 15-17)?
7. ಯೇಸು ದೇವಾಲಯದಲ್ಲಿ ಮಾಡಿದ್ದೆಲ್ಲದರ ಬಗ್ಗೆ ಕೇಳಿಸಿಕೊಂಡಾಗ ಯೆಹೂದಿ ನಾಯಕರು ಹೇಗೆ ಪ್ರತಿಕ್ರಿಯಿಸಿದರು (ವ. 15-18)?
8. ಯಾಕೆ ಯೆಹೂದಿ ನಾಯಕರು ಯೇಸುವಿಗೆ ಹೆದರಿದರು (ವ. 18)?
9. ಮರುದಿನ ಬೆಳಿಗ್ಗೆ ಅಂಜೂರದ ಮರಕ್ಕೆ ಏನಾಯಿತು (ವ. 20-21)?
10. ಅಂಜೂರದ ಮರವು ಒಣಗಿ ಹೋಗಿದೆ ಎಂದು ಪೇತ್ರನು ಹೇಳಿದ್ದಕ್ಕೆ ಯೇಸು ಏನೆಂದು ಹೇಳಿದನು (ವ. 20-23)?
11. ಅಂಜೂರದ ಮರವು ಒಣಗಿ ಹೋದ ನಂತರ ತನ್ನ ಶಿಷ್ಯರಿಗೆ ಯೇಸು ಹೇಳಿದ ಮಾತಿನ ಕೊನೇ ಭಾಗದಲ್ಲಿನ ಮುಖ್ಯ ಪದಗಳಾವುವು (ವ. 22-25)?
12. ಯೆಹೂದಿ ನಾಯಕರು ಯೇಸುವನ್ನು ಯಾಕೆ ಪ್ರಶ್ನಿಸಿದರು (ವ. 28)?
13. ಸ್ನಾನಿಕನಾದ ಯೋಹಾನನ ಸೇವೆಯ ಕುರಿತಾದ ಯೇಸುವಿನ ಪ್ರಶ್ನೆಗೆ ಯೆಹೂದಿ ನಾಯಕರು ಕೊಟ್ಟ ಉತ್ತರವೇನು (ವ. 29-33)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯೇಸು ಅರಸನಂತೆ ಯೆರೂಸಲೇಮಿನೊಳಗೆ ಪ್ರವೇಶಿಸಿದ ಕಥೆಯನ್ನು ಎಲ್ಲಾ ನಾಲ್ಕು ಸುವಾರ್ತೆಗಳು ಒಳಗೊಂಡಿವೆ (ನೋಡಿ ಮತ್ತಾ. 21:1-11, ಮಾರ್ಕ 11:1-11, ಲೂಕ 19:28-40 ಮತ್ತು ಯೋಹಾನ 12:12-16). ಈ ನಾಲ್ಕು ವಾಕ್ಯಭಾಗಗಳನ್ನು ಹೋಲಿಸಿರಿ. ಗಮನಿಸಿದ ಕೆಲ ಅಂಶಗಳನ್ನು ಪಟ್ಟಿಮಾಡಿರಿ.
2. ಅಂಜೂರದ ಮರದ ಕಥೆಯನ್ನು ಲೂಕನು ತನ್ನ ಸುವಾರ್ತೆಯಲ್ಲಿ ಸೇರಿಸಿಲ್ಲ. ಅದರ ಜಾಗದಲ್ಲಿ ಆತನು ಯೇಸು ಯೆರೂಸಲೇಮ್ ಪಟ್ಟಣವನ್ನು ನೋಡಿ ಕಣ್ಣೀರಿಡುವ (ಅಳುವ) ಒಂದು ವಿಶಿಷ್ಟವಾದ ವಾಕ್ಯಭಾಗವನ್ನು ಸೇರಿಸಿದ್ದಾನೆ (ಲೂಕ 19:41-44). ಮಾರ್ಕನ ಸುವಾರ್ತೆಯಲ್ಲಿನ ಅಂಜೂರದ ಮರದ ಕಥೆಯನ್ನು (11:12-14 ಮತ್ತು 20-21) ವ್ಯಾಖ್ಯಾನಿಸಲು ಈ ವಾಸ್ತವಾಂಶವು ನಮಗೆ ಹೇಗೆ ಸಹಕರಿಸಬಲ್ಲದು?
3. ಫರಿಸಾಯರು ಸ್ನಾನಿಕನಾದ ಯೋಹಾನನ ಸೇವೆಯ ಕುರಿತ ಯೇಸುವಿನ ಪ್ರಶ್ನೆಗೆ ಉತ್ತರಿಸಲು ಯಾಕೆ ಹಿಂಜರಿಯುತ್ತಾರೆ (ವ. 29-33)?
4. ಒಣಗಿ ಹೋದ ಅಂಜೂರ ಮರದ ಕುರಿತ ಕಥೆಯ ಸಂಬಂಧದಲ್ಲಿ ಯೇಸು ತನ್ನ ಶಿಷ್ಯರಿಗೆ ನಂಬಿಕೆ, ಪ್ರಾರ್ಥನೆ ಮತ್ತು ಕ್ಷಮೆಯ ಬಗ್ಗೆ ಬೋಧಿಸಿದನು. ಈ ಮೂರು ಆತ್ಮಿಕ ಸಂಗತಿಗಳ ನಡುವಿನ ಸಂಬಂಧವೇನಿರಬಹುದು?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಈ ಅಧ್ಯಯನದಲ್ಲಿ ವಿಷಯ(ಮಾಹಿತಿ)ಗಳ ಬೆಳಕಿನಲ್ಲಿ, ನಾಲ್ಕು ಸುವಾರ್ತೆಗಳಲ್ಲಿ ದಾಖಲಾದ ಯೇಸುವಿನ ಯೆರೂಸಲೇಮ್ ಪ್ರವೇಶವನ್ನು ವಿಮರ್ಶಿಸಿರಿ. ವಿಭಿನ್ನ ದೃಷ್ಟಿಕೋನಗಳಿಂದ ಈ ಕಥೆಯನ್ನು ವಿಮರ್ಶಿಸಿರಿ:

   ಅ. ಯೇಸುವಿನ ದೃಷ್ಟಿಕೋನದಿಂದ: ಯೇಸುವಿಗೆ ಹೇಗೆ ಅನಿಸಿರಬಹುದು? ತನ್ನನ್ನು ತಾನು ಅರ್ಥಮಾಡಿಕೊಳ್ಳುವುದರಲ್ಲಿ ಇದು ಹೇಗೆ ಅವನಿಗೆ ಖಚಿತಪಡಿಸಿತು? ಈ ಒಂದು ಸಂದರ್ಭದಲ್ಲಿ ಮರಣವನ್ನು ಹೊಂದುತ್ತಿರುವ ಈ ನೆರಳು ಹೇಗೆ ಆತನ ಮೇಲೆ ಪರಿಣಾಮ ಬೀರಿರಬಹುದು?

   ಆ. ಶಿಷ್ಯರ ದೃಷ್ಟಿಕೋನದಿಂದ: ಸಂಭ್ರಮದಲ್ಲಿ ಅವರೆಷ್ಟು ಭಾಗಿಯಾಗುತ್ತಾರೆ? ಅವರೆಷ್ಟಾಗಿ ತಿಳಿದುಕೊಳ್ಳುತ್ತಾರೆ (ಯೇಸುವಿನ ಗುರುತು ಮತ್ತು ಕೆಲ ದಿನಗಳಲ್ಲಿ ಆತನಿಗೆ ಏನಾಗುತ್ತದೆಂಬುದಾಗಿ).

   ಇ. ಜನಸಮೂಹದ ದೃಷ್ಟಿಕೋನದಿಂದ: ಅವರು ಯಾರಾಗಿದ್ದರು (ಸ್ಥಳೀಯ ಜನರಾ? ಯೆಹೂದಿ ಯಾತ್ರಿಗಳಾ? ಯೇಸುವಿನ ಹಿಂಬಾಲಕರಾ?) ತಾವು ಏನೆಂಬುದಾಗಿ ಘೋಷಣೆ ಕೂಗುತ್ತೇವೆ ಮತ್ತು ಏನಾಗುತ್ತಿದೆ ಎಂಬುದರ ಬಗ್ಗೆ ಅವರಿಗೆಷ್ಟು ತಿಳುವಳಿಕೆಯಿತ್ತು? ಯೇಸುವಿನಿಂದ ಅವರು ಏನನ್ನು ಅಪೇಕ್ಷಿಸಿದರು? ಕೆಲದಿನಗಳ ನಂತರ ಯೇಸು ಶಿಲುಬೆಯ ಮೇಲೆ ಮರಣ ಹೊಂದಿದಾಗ ಈ ದಿನವನ್ನು ಅವರೆಷ್ಟಾಗಿ ನೆನಪುಮಾಡಿಕೊಂಡಿರಬಹುದು?

   ಈ. ದಕ್ಷಿಣ ಭಾರತದ ನಿವಾಸಿಗಳಾದ ನಮ್ಮ ದೃಷ್ಟಿಕೋನದಿಂದ: ಈ ಕಥೆಯಿಂದ ನಾವೇನನ್ನು ಕಲಿಯುತ್ತೇವೆ? ಯೇಸುವಿನ ಮರಣ, ಪುನರುತ್ಥಾನ, ಸ್ವರ್ಗಾರೋಹಣ ಮತ್ತು ಎರಡನೇ ಬರೋಣದ ಬೆಳಕಿನಲ್ಲಿ ಈ ಘಟನೆಯ (ಸಂದರ್ಭದ) ಕುರಿತಾದ ನಮ್ಮ ತಿಳುವಳಿಕೆಯು ನಮ್ಮ ದೈನಂದಿನ ಜೀವಿತವನ್ನು ರೂಪುಗೊಳಿಸಬಹುದಾಗಿದೆ?

   ಹಾಗೆಯೇ ***ಅರಸನಂತೆ ಯೇಸುವಿನ ಯೆರೂಸಲೇಮಿನ ಪ್ರವೇಶ*** ಎಂಬ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

2. ಈ ಅಧ್ಯಯನದಲ್ಲಿ ತಿಳಿಸಲಾದ ಮಾಹಿತಿ(ವಿಷಯ)ಗಳ ಬೆಳಕಿನಲ್ಲಿ ಯೇಸು ದೇವಾಲಯವನ್ನು ಶುಚಿಗೊಳಿಸುವ ವಾಕ್ಯಭಾಗವನ್ನು ವಿಮರ್ಶಿಸಿರಿ. ಹಾಗೆಯೇ ಈ ಎರಡು ಪ್ರಶ್ನೆಗಳನ್ನು ವಿಮರ್ಶಿಸಿರಿ:

   ಅ. ಯಾಕೆ ಯೇಸು ದೇವಾಲಯವನ್ನು ಶುಚಿಗೊಳಿಸಿದನು?

   ಆ. ಇಂದು ಯೇಸು ನಮ್ಮ ಸಭೆಗಳನ್ನು ಸಂಧಿಸಿದರೆ ಆತನು ಏನನ್ನು ಶುಚಿಗೊಳಿಸಬಹುದು?

ಅನಂತರ ***ಯೇಸು ದೇವಾಲಯವನ್ನು ಶುಚಿಗೊಳಿಸಿದ್ದು*** ಎಂಬ ಒಂದು ಸತ್ಯವೇದ ಅಧ್ಯಯನ(ಧ್ಯಾನ ಅಥವಾ ಪ್ರಸಂಗ)ವನ್ನು ಸಿದ್ಧಪಡಿಸಿರಿ. ಮೇಲಿನ ಎರಡು ಅಂಶಗಳನ್ನು ನಿಮ್ಮ ರೂಪುರೇಖೆಯಾಗಿ ಬಳಸಬಹುದು.



**ಮಾರ್ಕ ಅಧ್ಯಾಯ 12**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕನ ಸುವಾರ್ತೆಯ 12 ನೇ ಅಧ್ಯಾಯವನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ಒಕ್ಕಲಿಗರ (ಬಾಡಿಗೆದಾರರ) ಸಾಮ್ಯ, ವ. 1-2
2. ಚಕ್ರವರ್ತಿ(ಕೈಸರನಿಗೆ)ಗೆ ತೆರಿಗೆಯನ್ನು ಕೊಡುವುದು, ವ. 13-17
3. ಪುನರುತ್ಥಾನದ ವಿವಾಹ (ಮದುವೆ), ವ. 18-27
4. ಮಹಾ ಆಜ್ಞೆ, ವ . 28-34
5. ಧರ್ಮಶಾಸ್ತ್ರದ ಬೋಧಕ, ವ. 35-40
6. ವಿಧವೆಯ ಕಾಣಿಕೆ, ವ. 41-44

ಒಕ್ಕಲಿಗರ ಸಾಮ್ಯವು ಸಾಂಕೇತಿಕ ಲಕ್ಷಣಗಳನ್ನು ಒಳಗೊಂಡಿದೆ. ಆದರೆ ಕಥೆಯ ಪ್ರತಿ ವಿವರಣೆಯಲ್ಲೂ ಒಂದು ರಹಸ್ಯವಾದ ಅರ್ಥವನ್ನು ಹುಡುಕುವುದು ತಪ್ಪಾಗಬಹುದು. ದ್ರಾಕ್ಷೆಯ ತೋಟವು ಇಸ್ರಾಯೇಲ್ ಆಗಿದೆ. ಅದರ ಯಜಮಾನನು ದೇವರಾಗಿದ್ದಾನೆ. ಒಕ್ಕಲಿಗರೆಂದರೆ ಹಿಂದಿನ ಮತ್ತು ಪ್ರಸಕ್ತ ಯೆಹೂದಿ ನಾಯಕರು, ಆಳುಗಳು, ಪ್ರವಾದಿಗಳು ಮತ್ತು ಬಾಧ್ಯಸ್ಥನಾದ ಒಬ್ಬನೇ ಮಗನೆಂದರೆ ಯೇಸು. ನಾವು ಈ ಐದು ಪ್ರಾಮುಖ್ಯ ಅಂಶಗಳನ್ನು ಮೀರಿ ನೋಡಬಾರದು. ಯೇಸು ಈ ಸಾಮ್ಯವನ್ನು ಯೆಹೂದಿ ನಾಯಕರ ಬಳಿ ಹೇಳುತ್ತಿದ್ದಾನೆ. ಇದು ಆತನನ್ನು ಕೊಲ್ಲಬೇಕೆಂದು ಮಾಡಿಕೊಂಡ ಅವರ ಉಪಾಯವನ್ನು ಬಹಿರಂಗಪಡಿಸಿತು. ಅಲ್ಲದೆ ಇದು ಉಪಾಯ ಕಲ್ಪಿಸಿದವರ ಮೇಲಿನ ದೇವರ ನ್ಯಾಯತೀರ್ಪನ್ನು ಸಹ ಪ್ರಕಟಿಸುತ್ತದೆ. ಕ್ರೈಸ್ತ ವಿಶ್ವಾಸಿಗಳಾದ ನಮಗೆ ಈ ಲೋಕದಲ್ಲಿ ಎರಡು ರೀತಿಯಲ್ಲಿ ಜವಾಬ್ದಾರಿ(ಹಂಗು)ಗಳಿವೆ. ಆದರೆ ದೇವರು ಮತ್ತು ಆತನ ರಾಜ್ಯಕ್ಕಾಗಿನ ಜವಾಬ್ದಾರಿ ಮೊದಲು ಬರಬೇಕೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಪ್ರೀತಿಯ ಕುರಿತಾಗಿ ಹಳೇ ಒಡಂಬಡಿಕೆಯನ್ನು ಯೇಸು ಎರಡು ಆಜ್ಞೆಗಳಲ್ಲಿ ಸಾರಾಂಶಗೊಳಿಸುತ್ತಾನೆ. ಮೊಟ್ಟ ಮೊದಲನೆಯದಾಗಿ ನಾವು ನಮ್ಮ ಒಡಂಬಡಿಕೆಯ ಕರ್ತನಾದ ದೇವರನ್ನು ಪ್ರೀತಿಸಬೇಕು. ನಮ್ಮ ನೆರೆಯವರನ್ನು ಪ್ರೀತಿಸುವ ಆಜ್ಞೆಯು ದೇವರಿಗಾಗಿನ ಈ ಪ್ರೀತಿಯಲ್ಲಿ ಹುಟ್ಟಿಕೊಳ್ಳುತ್ತದೆ. ಅಲ್ಲದೆ ಈ ಅಧ್ಯಾಯವು ಶಿಷ್ಯತ್ವದ ಕುರಿತಾಗಿ ಎರಡು ಪ್ರಮುಖ ಪಾಠಗಳನ್ನು ಒಳಗೊಂಡಿದೆ ಅವುಗಳೆಂದರೆ: ಶಾಸ್ತ್ರಿಗಳಂತೆ ಗರ್ವಿಷ್ಟರೂ, ಸ್ವಾರ್ಥಿಗಳೂ ಮತ್ತು ಕಪಟಿಗಳೂ ಆಗಿರಬಾರದು, ಆದರೆ ಬಡ ವಿಧವೆಯಂತೆ ತ್ಯಾಗಪೂರ್ವಕವಾಗಿ ಉದಾರಿಗಳಾಗಿರಬೇಕು.

*ಒಬ್ಬ ಮನುಷ್ಯನು ಒಂದು ದ್ರಾಕ್ಷೆ ತೋಟವನ್ನು ಮಾಡಿ* (ವ. 1): ದ್ರಾಕ್ಷೆ ತೋಟದ ಕುರಿತ ಯೇಸುವಿನ ವರ್ಣನೆಯು ಆತನ ಓದುಗರಿಗೆ "ದ್ರಾಕ್ಷೆ ತೋಟದ ಗೀತ" ವನ್ನು ಜ್ಞಾಪಕಕ್ಕೆ ತಂದಿರಬಹುದು (ಯೆಶಾಯ 5:1-7). ಇಲ್ಲಿ ದ್ರಾಕ್ಷೆ ತೋಟವು ಸ್ಪಷ್ಟವಾಗಿ ಇಸ್ರಾಯೇಲಿನ ಸಂಕೇತವಾಗಿದೆ.

*ಒಬ್ಬ ಆಳನ್ನು … ಮತ್ತೊಬ್ಬ ಆಳನ್ನು* (ವ. 2, 4): ಯೇಸುವಿನ ಮಾತನ್ನು ಕೇಳಿಸಿಕೊಳ್ಳುತ್ತಿದ್ದವರಿಗೆ ಇಸ್ರಾಯೇಲ್ಯರನ್ನು ಎಚ್ಚರಿಸುವುದಕ್ಕಾಗಿ ಪದೇ ಪದೇ ದೇವರು ಕಳುಹಿಸಿದ ಹಳೇ ಒಡಂಬಡಿಕೆಯ ಪ್ರವಾದಿಗಳು ಜ್ಞಾಪಕಕ್ಕೆ ಬಂದಿರಬಹುದು.

*ಅವನ ಮುದ್ದು ಮಗನೇ* (ವ. 6): ಯೇಸು ರೂಪಾಂತರಗೊಂಡ ಬೆಟ್ಟದ ಮೇಲಿನ ಆಕಾಶವಾಣಿಯ ಮಾತುಗಳೊಂದಿಗೆ ಹೋಲಿಸಿರಿ (ವ. 9:7).

*ಆಗ ಸ್ವಾಸ್ಥ್ಯ ನಮ್ಮದಾಗುವುದು* (ವ. 7): ಯೆಹೂದಿ ಕಾನೂನಿನ (ಧರ್ಮಶಾಸ್ತ್ರ) ಪ್ರಕಾರ ಒಂದು ತುಂಡು ಆಸ್ತಿಯನ್ನು ಬಾಧ್ಯಸ್ಥನು ಅದು ತನ್ನದೆಂದು ಹಕ್ಕು ಸಾಧಿಸದಿದ್ದರೆ ಅದನ್ನು ಒಡೆಯನಿಲ್ಲದ್ದು ಅಥವಾ ಯಾರಿಗೂ ಸೇರದೇ ಇರುವಂಥದೆಂಬುದಾಗಿ

ಘೋಷಿಸಲಾಗುತ್ತಿತ್ತು, ಹಾಗಾಗಿ ಈ ಮಗನು ಆ ಆಸ್ತಿಗೆ ತಾನೇ ಬಾಧ್ಯಸ್ಥನೆಂಬುದಾಗಿ ಹಕ್ಕು ಸಾಧಿಸಲು ಬಂದಿದ್ದಾನೆ, ಆತನನ್ನು ಕೊಂದು ಹಾಕಿದರೆ ಆ ಭೂಮಿ(ಆಸ್ತಿ)ಗೆ ತಾವೇ ವಾರಸುದಾರರೆಂಬುದಾಗಿ ಹಕ್ಕುಸಾಧಿಸಬಹುದೆಂಬುದಾಗಿ ಆ ಒಕ್ಕಲಿಗರು ಊಹಿಸಿದ್ದರು.

ವಚನ 10-11: ಕೀರ್ತನೆ 118:22-23 ರ ಉಲ್ಲೇಖನವನ್ನು ಒಳಗೊಂಡಿದೆ, ಮಾರ್ಕನ ಈ ಹಿಂದಿನ ಅಧ್ಯಾಯದಲ್ಲಿ ಇದೇ ಕೀರ್ತನೆಯಿಂದ ಜನಸಮೂಹವು ಯೇಸುವನ್ನು ಯೆರೂಸಲೇಮಿನೊಳಕ್ಕೆ ಸ್ವಾಗತಿಸಿತು ("ಯೆಹೋವನ ಹೆಸರಿನಲ್ಲಿ ಒಳಗೆ ಬರುವವನಿಗೆ ಆಶೀರ್ವಾದ", ಕೀರ್ತನೆ 118:26).

*ಹೆರೋದ್ಯರು* (ವ. 13): 3:6 ರ ಟಿಪ್ಪಣಿಯನ್ನು ನೋಡಿ.

*ಕೈಸರನಿಗೆ ತೆರಿಗೆ ಕೊಡಬೇಕೋ ಬೇಡವೋ* (ವ. 14-15): ರೋಮನ್ನರ ಅಪ್ಪಣೆಯಂತೆ ಯೆಹೂದ್ಯರು ಕೈಸರನ ಖಜಾನೆಗೆ ಕಪ್ಪವನ್ನು (ಒಂದು ರೀತಿಯ ತೆರಿಗೆ) ಕೊಡಬೇಕಾಗಿತ್ತು. ಫರಿಸಾಯರು ಇದನ್ನು ಮನಸ್ಸಿಲ್ಲದೆ ಕಟ್ಟುತ್ತಿದ್ದರು ಮತ್ತು ಸಕ್ರಿಯವಾಗಿ ಇದನ್ನು ವಿರೋಧಿಸಲಿಲ್ಲ. ಇನ್ನೊಂದೆಡೆ ಹೆರೋದ್ಯರಲ್ಲಿಯೂ ಸಹ ತೆರಿಗೆ ಕೊಡುವುದರಲ್ಲಿ ವಿರೋಧವಿರಲಿಲ್ಲ. ಆದರೆ ಯೆಹೂದ್ಯರಲ್ಲಿ ಅನೇಕರು ತಾವು ಇಷ್ಟಪಡದೇ ಇರುವ ಸರ್ಕಾರಕ್ಕೆ ತೆರಿಗೆಯನ್ನು ಕೊಡಲು ಸ್ಪಷ್ಟವಾಗಿ ನಿರಾಕರಿಸಿದರು (ಉದಾ: ಮತಾಂಧರು). ಯೇಸು ತನ್ನನ್ನು ಮತಾಂಧರೊಂದಿಗೋ ಅಥವಾ ಹೆರೋದ್ಯರೊಂದಿಗೆ ಗುರುತಿಸಿಕೊಳ್ಳುತ್ತಾನೆನ್ನುವುದನ್ನು ನೇರವಾಗಿ ಆತನು ಉತ್ತರಿಸಬೇಕೆಂದು ಆತನನ್ನು ಒತ್ತಾಯಿಸುವುದೇ ಈ ಪ್ರಶ್ನೆಯ ಉದ್ದೇಶವಾಗಿತ್ತು.

*ಸದ್ದುಕಾಯರು ... ಪುನರುತ್ಥಾನವಿಲ್ಲ ಅನ್ನುವವರು* (ವ. 18): ಇವರು ಶ್ರೀಮಂತ ಮತ್ತು ಸುಸಂಸ್ಕೃತ ವರ್ಗಗಳನ್ನು ಪ್ರತಿನಿಧಿಸುವ ಒಂದು ಯೆಹೂದಿ ಪಕ್ಷದವರಾಗಿದ್ದಾರೆ. ಇವರು ಹೆಚ್ಚಾಗಿ ಯೆರೂಸಲೇಮಿನಲ್ಲಿ ಕಂಡುಬರುತ್ತಿದ್ದು, ಹೆಚ್ಚಾಗಿ ದೇವಾಲಯ ಮತ್ತು ಅದರ ಆಡಳಿತ ಕಾರ್ಯಗಳಲ್ಲಿ ತೊಡಗಿಸಿಕೊಂಡವರಾಗಿದ್ದರು. ಅವರು ಸಂಖ್ಯೆಯಲ್ಲಿ ತೀರಾ ಕಡಿಮೆಯಿದ್ದರೂ ಹೊಸ ಒಡಂಬಡಿಕೆಯ ಸಮಯದಲ್ಲಿ ಅವರ ರಾಜಕೀಯ ಮತ್ತು ಧಾರ್ಮಿಕ ಪ್ರಭಾವವು ಬಹು ಬಲವಾಗಿತ್ತು. ಅವರು ಪುನರುತ್ಥಾನವನ್ನು ಅಲ್ಲಗಳೆಯುವವರಾಗಿದ್ದು, ಮೋಶೆಯ ಐದು ಪುಸ್ತಕಗಳು ಮಾತ್ರ ಅಧಿಕೃತವೆಂಬುದಾಗಿ ಅವನ್ನು ಮಾತ್ರ ಒಪ್ಪುತ್ತಿದ್ದರು. ಅವರ ರೋಮನ್ ಆಳ್ವಿಕೆಗೆ ಕೊಡುವ ಬೆಂಬಲ, ಅವರ ಗ್ರೀಕ್ ಜೀವನಶೈಲಿ ಮತ್ತು ಅವರ ನಂಬಿಕೆಗಳು ಅವರನ್ನು ಫರಿಸಾಯರು ಮತ್ತು ಸಾಮಾನ್ಯ ಯೆಹೂದ್ಯ ಸಮೂಹದೊಂದಿಗೆ ಜನಪ್ರಿಯವಲ್ಲದಂತೆ ಮಾಡಿತು.

*ಮೋಶೆಯು ನಮಗೆ ಬರೆದಿಟ್ಟನಷ್ಟೆ* (ವ. 19): ಇಲ್ಲಿ ಸದ್ದುಕಾಯರು ಧರ್ಮೋಪದೇಶಕಾಂಡ 25:5-6 ನ್ನು ಸೂಚಿಸಿ ಹೇಳುತ್ತಿದ್ದಾರೆ, ಅಲ್ಲಿ ಒಬ್ಬನು ಸಂತಾನವಿಲ್ಲದೆ ಸತ್ತು ಹೋದರೆ, ಅವನ ತಮ್ಮನು ಆತನ ವಿಧವಾ ಪತ್ನಿಯನ್ನು ವಿವಾಹವಾಗಬೇಕೆಂಬುದಾಗಿ ಬರೆದಿತ್ತು. ಶಾಸ್ತ್ರದ ಉದ್ದೇಶವು ವಿಧವೆಯನ್ನು ಸಂರಕ್ಷಿಸುವುದು ಮತ್ತು ಸಂತತಿಯು ಮುಂದುವರೆಯಲು ಹೊಣೆಗಾರರಾಗಿಸುವುದಾಗಿತ್ತು. ಏಳು ಗಂಡಂದಿರ ಸಂತಾನವಿಲ್ಲದ (ಮಕ್ಕಳಿಲ್ಲದ) ವಿಧವೆಯ ಕಾಲ್ಪನಿಕ ವಿಚಾರವು ಸದ್ದುಕಾಯರು ಫರಿಸಾಯರ ಪುನರುತ್ಥಾನದ ಸಿದ್ಧಾಂತದ ಬಗ್ಗೆ ಉಪಯೋಗಿಸಿದ ಒಂದು ಹಾಸ್ಯವೋ ಎಂಬಂತೆ ಉತ್ಪ್ರೇಕ್ಷಿತವಾಗಿತ್ತು.

*ಮೋಶೆಯ ಗ್ರಂಥದಲ್ಲಿ ಪೊದೆಯ ಸಂಗತಿ* (ವ. 26): "ಮೋಶೆಯ ಗ್ರಂಥ"ವು ಹಳೇ ಒಡಂಬಡಿಕೆಯ ಮೊದಲ ಐದು ಪುಸ್ತಕಗಳನ್ನೊಳಗೊಂಡ ಪಂಚಕಾಂಡವಾಗಿದೆ. ಯೇಸುವಿನ ಸಮಯದಲ್ಲಿ ಹಳೇ ಒಡಂಬಡಿಕೆಯ ಪುಸ್ತಕಗಳನ್ನು ಅದುವರೆಗೂ ಅಧ್ಯಾಯ ಮತ್ತು ವಚನಗಳಾಗಿ ವಿಂಗಡಿಸಿರಲಿಲ್ಲ. ಹಾಗಾಗಿ "ಪೊದೆಯ ಕುರಿತ ಸಂಗತಿ"ಯನ್ನು ವಿಮೋಚನಕಾಂಡ 3:1-6 ಕ್ಕೆ ಉಲ್ಲೇಖಿಸುವುದು ಸಾಮಾನ್ಯವಾದ ವಿಧವಾಗಿತ್ತು.

*ಶಾಸ್ತ್ರಿಗಳಲ್ಲಿ ಒಬ್ಬನು* (ವ. 28): ಬಹುಶಃ ಈತನೊಬ್ಬ ಫರಿಸಾಯನಾಗಿದ್ದು ಯೇಸು ಸದ್ದುಕಾಯರಿಗೆ ವಿರೋಧವಾಗಿ ಪುರುತ್ಥಾನದ ಸಿದ್ಧಾಂತವನ್ನು ಅತ್ಯುತ್ತಮವಾಗಿ ಸಮರ್ಥಿಸಿಕೊಂಡದ್ದಕ್ಕಾಗಿ ಸಂತೋಷವುಳ್ಳವನಾಗಿದ್ದನು.

*ಎಲ್ಲಾ ಆಜ್ಞೆಗಳಲ್ಲಿ ಮೊದಲನೆಯದು ಯಾವುದು?* (ವ. 28): ಯೆಹೂದಿ ರಬ್ಬಿಗಳು ಧರ್ಮಶಾಸ್ತ್ರದಲ್ಲಿ 613 ವೈಯಕ್ತಿಕ ಶಾಸನಗಳನ್ನು (ವಿಧಿ) ಎಣಿಸಿದ್ದರು. ಹೆಚ್ಚು ಪ್ರಾಮುಖ್ಯ ಮತ್ತು ಕಡಿಮೆ ಪ್ರಾಮುಖ್ಯವಿರುವ ಆಜ್ಞೆಗಳ ನಡುವೆ ವಿಂಗಡನೆಯನ್ನು ಮಾಡಲು ಅವರು ಪ್ರಯತ್ನಿಸಿದರು.

ವಚನ 29-31: ಯೇಸು ಹಳೇ ಒಡಂಬಡಿಕೆಯ ಎರಡು ವಾಕ್ಯಭಾಗಗಳನ್ನು ಉಪಯೋಗಿಸಿ ಶಾಸ್ತ್ರೀಯ ಪ್ರಶ್ನೆಗೆ ಉತ್ತರಿಸುತ್ತಾನೆ. ಮೊದಲನೆಯದು, ಧರ್ಮೋಪದೇಶಕಾಂಡ 6:4-5, ಇದು ಇಂದಿಗೂ ಸಹ, ಪ್ರತಿ ಮುಂಜಾನೆ ಮತ್ತು ಸಂಜೆ ಭಕ್ತಿವಂತ ಯೆಹೂದ್ಯರಿಂದ ಪಠಿಸಲ್ಪಡುವ ಒಂದು ನಂಬಿಕೆಯ ಅರಿಕೆಯಾಗಿದೆ. ಇದು ಎರಡು ಸಂಗತಿಗಳನ್ನು ದೃಢಪಡಿಸುತ್ತದೆ: ದೇವರ ಐಕ್ಯತೆ ಮತ್ತು ಯೆಹೂದಿ ಜನರೊಂದಿಗಿನ ದೇವರ ಒಡಂಬಡಿಕೆಯ ಸಂಬಂಧ. ದೇವರು ಪೂರ್ತಿಯಾಗಿ ಮತ್ತು ಸಂಪೂರ್ಣವಾಗಿ ಪ್ರೀತಿಸಲ್ಪಡಬೇಕು, ಯಾಕೆಂದರೆ ಆತನೊಬ್ಬನೇ ದೇವರಾಗಿದ್ದಾನೆ ಮತ್ತು ಆತನು ತನ್ನ ಜನರೊಂದಿಗೆ ಒಂದು ಪ್ರೀತಿಯ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾನೆ. ಒಡಂಬಡಿಕೆಯಲ್ಲಿ ದೇವರು ಪೂರ್ಣ ಪ್ರೀತಿಯೊಂದಿಗೆ ತನ್ನನ್ನೇ ತನ್ನ ಜನರಿಗೆ ಕೊಡುವವನಾಗಿದ್ದಾನೆ. ಆ ನಿಮಿತ್ತ ಆತನು ತನ್ನ ಜನರು ಪೂರ್ಣ ಪ್ರೀತಿಯನ್ನು ತನಗೆ ಕೊಡಬೇಕೆಂದು ಅಪೇಕ್ಷಿಸುತ್ತಾನೆ. ಎರಡನೆಯದು, ಯಾಜಕಕಾಂಡ 19:18, ಇದು ಒಂದು ಸ್ವಾಭಾವಿಕ ಮತ್ತು ತಾರ್ಕಿಕ ಬಾಹ್ಯವೃದ್ಧಿಯಾಗಿದೆ. ಯಾಜಕಕಾಂಡ 19:18 "ನಾನು ಯೆಹೋವನು" ಎಂಬುದಾಗಿ ಮುಕ್ತಾಯವಾಗುವುದನ್ನು ಗಮನಿಸಿ. ಈ ಎರಡೂ ಆಜ್ಞೆಗಳು ಪರಸ್ಪರ ಒಂದಕ್ಕೊಂದು ಸೇರಿದವುಗಳಾಗಿವೆ, ಅವನ್ನು ಬೇರ್ಪಡಿಸಲು ಸಾಧ್ಯವಿಲ್ಲ.

*ಕ್ರಿಸ್ತನನ್ನು ದಾವೀದನ ಮಗನೆಂದು* (35): ಯೆಹೂದ್ಯರು, ನಾಯಕರಷ್ಟೇ ಅಲ್ಲದೆ ಸಾಮಾನ್ಯ ಜನರೂ ಸಹ ಮೆಸ್ಸೀಯನು (ಕ್ರಿಸ್ತನು) ದಾವೀದನ ಕುಲ(ಸಂತಾನ)ದವನಾಗಿರುವನೆಂಬುದನ್ನು ತಿಳಿದವರಾಗಿದ್ದರು. "ದಾವೀದನ ಮಗ" ಎಂಬ ಹೆಸರನ್ನು ಅವರು ರಾಜಯೋಗ್ಯ ಮತ್ತು ರಾಜಕೀಯ ರೂಪಗಳಲ್ಲಿ ಅರ್ಥೈಸಿಕೊಂಡಿದ್ದರು: ಮೆಸ್ಸೀಯನು ದಾವೀದನಂತ ಅರಸನಾಗಿರುವನು, ಮತ್ತು ರಾಜನಾದ ದಾವೀದನಂತೆಯೇ ಆತನು ಇಸ್ರಾಯೇಲ್ಯರ ಎಲ್ಲಾ ವೈರಿಗಳನ್ನು ಸದೆಬಡಿಯುವನು.

*"ಕರ್ತನು ನನ್ನ ಒಡೆಯನಿಗೆ ನುಡಿದನು" ಎಂಬುದಾಗಿ ... ದಾವಿದನೇ ಹೇಳಿದನು ...* (ವ. 36-37): ಇಲ್ಲಿ ಯೇಸು ಕೀರ್ತನೆ 110:1 ರಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ. ಕೀರ್ತನೆ 110 ಅರಸನಾದ ದಾವೀದನಿಂದ ಬರೆಯಲ್ಪಟ್ಟಿದೆ ಎಂಬುದನ್ನು ಆತನ ಎಲ್ಲಾ ಕೇಳುಗರು ಒಪ್ಪಿದ್ದರು. ಈ ಕೀರ್ತನೆಯಲ್ಲಿ ಅರಸನಾದ ದಾವೀದನು ಮೆಸ್ಸೀಯನನ್ನು "ನನ್ನ ಒಡೆಯ" ಎಂಬುದಾಗಿ ಕರೆಯುತ್ತಾನೆಂಬುದನ್ನು ಅವರಿಗೆ (ಸೂಚಿಸಿ) ಒತ್ತಿ ಹೇಳಿ, ಯೇಸು ಇದನ್ನು ಮೆಸ್ಸೀಯನದೆಂಬುದಾಗಿ ವ್ಯಾಖ್ಯಾನಿಸುತ್ತಾನೆ. ಮೆಸ್ಸೀಯನು ಒಂದೇ ಬಾರಿ ದಾವೀದನ ಮಗ ಮತ್ತು ದಾವೀದನ ಒಡೆಯನಾಗಲು ಹೇಗೇ ಸಾಧ್ಯ? ಅವರು ಮೆಸ್ಸೀಯನ ದೈವಿಕ ಮೂಲವು (ಆತನು ಒಡೆಯ) ಆತನ ರಾಜ ಮೂಲಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದುದೆಂಬುದನ್ನು ಅರಿತುಕೊಳ್ಳಬೇಕೆಂದು ಯೇಸು ಬಯಸುತ್ತಾನೆ. ದಾವೀದನ ಮಗ ಸಹ ಪ್ರಾಥಮಿಕವಾಗಿ ದೇವರ ಮಗನಾಗಿದ್ದಾನೆ.

*ನನ್ನ ಬಲಗಡೆಯಲ್ಲಿ* (ವ. 36): ಇದೊಂದು ಗೌರವದ ಸ್ಥಾನವಾಗಿದೆ.

*ನಿಲುವಂಗಿಗಳನ್ನು* (ವ. 38): ಶಾಸ್ತ್ರಿಗಳು ಉದ್ದದ ನಿಲುವಂಗಿಗಳನ್ನು ತೊಡುತ್ತಿದ್ದರು.

*ಸಭಾಮಂದಿರಗಳಲ್ಲಿ ಮುಖ್ಯಪೀಠಗಳು* (ವ. 39): ಈ ಪೀಠಗಳು ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಸುರುಳಿಗಳನ್ನೊಳಗೊಂಡಿದ್ದ ಮಂಜೂಷದ ಮುಂದೆ ಇಡುತ್ತಿದ್ದವು. ಅಲ್ಲಿ ಕುಳಿತಿರುವವರು ಸಭಾಮಂದಿರದ ಎಲ್ಲಾ ಆರಾಧಕರಿಗೆ ಕಾಣುತ್ತಿದ್ದರು.

*ವಿಧವೆಯರ ಮನೆಗಳನ್ನು ನುಂಗಿ* (ವ. 40): ಶಾಸ್ತ್ರಿಗಳಿಗೆ ನಿಯಮಿತವಾದ ಸಂಬಳವಿರಲಿಲ್ಲ. ಹಾಗಾಗಿ ಅವರು ತಮ್ಮ ಜೀವನೋಪಾಯಕ್ಕಾಗಿ ಸಹಾಯ ಮಾಡುವವರ ಉಧಾರತೆಯನ್ನೇ ಅವಲಂಬಿಸಿದವರಾಗಿದ್ದರು. ಇಂತಹ ಒಂದು ಪದ್ಧತಿಯು ದುರುಪಯೋಗಕ್ಕೆ ಮಾರ್ಗವಾಗಿದ್ದು, ವಿಶೇಷವಾಗಿ ದುರ್ಬಲರಾದ ವಿಧವೆಯರು ಶೋಷಣೆಗೊಳಗಾಗುತ್ತಿದ್ದರು.

*ಇವರು ಹೆಚ್ಚಾದ ದಂಡನೆಯನ್ನು ಹೊಂದುವರು* (ವ. 40): ಬೇರೆಯವರಿಂದ ಅತ್ಯುನ್ನತವಾಗಿ ಗೌರವಿಸಲ್ಪಡುವ ಒಬ್ಬ ವ್ಯಕ್ತಿಯು ಖಂಡಿತವಾಗಿ ಒಬ್ಬ ಪ್ರಾಮಾಣಿಕತೆ ಮತ್ತು ನ್ಯಾಯದ ವ್ಯಕ್ತಿಯಾಗಿರಬೇಕೆಂಬ ಜನರ ಅಪೇಕ್ಷೆಗೆ ತಕ್ಕಂತೆ ಜೀವಿಸಬೇಕು ಮತ್ತು ಆತನು ಹೆಚ್ಚು ಕಪಟಿಯಾದಂತೆ ಜನರು ಆತನನ್ನು ಇನ್ನೂ ಕಟುವಾಗಿ ಖಂಡಿಸುವರು.

*ಬೊಕ್ಕಸ* (ವ. 41): ದೇವಾಲಯದ ಬೊಕ್ಕಸವು ಸ್ತ್ರೀಯರ ಅಂಗಳದಲ್ಲಿತ್ತು ಮತ್ತು ಇದು ಆರಾಧಿಸಲು ಬರುವವರು ತರುವ ಕಾಣಿಕೆಗಳನ್ನು ಹಾಕುವುದಕ್ಕಾಗಿ ಹದಿಮೂರು ತುತ್ತೂರಿಯಾಕಾರದ ತೊಟ್ಟಿಗಳನ್ನು ಒಳಗೊಂಡಿತ್ತು. ಇಲ್ಲಿ ಸ್ತ್ರೀ ಮತ್ತು ಪುರಷರಿಬ್ಬರಿಗೂ ಸಹ ಅನುಮತಿಯಿತ್ತು, ಆದರೆ ಸ್ತ್ರೀಯರು ಇನ್ನು ಮುಂದೆ ದೇವಾಲಯದೊಳಗೆ ಹೋಗುವಂತಿರಲಿಲ್ಲ.

*ಒಂದು ದುಗ್ಗಾಣಿ* (ವ. 42): ಈ ನಾಣ್ಯಗಳು ಪ್ಯಾಲೆಸ್ತೀನಿನಲ್ಲಿ ಚಲಾವಣೆಯಲ್ಲಿದ್ದ ಅತೀ ಸಣ್ಣ ನಾಣ್ಯಗಳಾಗಿದ್ದವು.

**ಪ್ರಶ್ನೆಗಳು**

1. ದ್ರಾಕ್ಷೆತೋಟದ ಧಣಿಯು ಒಕ್ಕಲಿಗರ ಬಳಿಗೆ ತನ್ನ ಆಳನ್ನು ಯಾಕೆ ಕಳುಹಿಸಿದನು (ವ. 1-12)?
2. ಒಕ್ಕಲಿಗರು ಆ ಆಳುಗಳಿಗೆ ಏನು ಮಾಡಿದರು (ವ. 1-12)?
3. ದ್ರಾಕ್ಷೆತೋಟದ ಧಣಿಯು ಯಾಕೆ ತನ್ನ ಮಗನನ್ನು ಕಳುಹಿಸಬೇಕೆಂದು ತೀರ್ಮಾನಿಸಿದನು (ವ. 1-12)?
4. ಧಣಿಯ ಮಗನಿಗೆ ಏನಾಯಿತು (ವ. 1-12)?
5. ಒಕ್ಕಲಿಗರಿಗೆ ಏನಾಯಿತು (ವ. 1-12)?
6. ಯೇಸು ತನ್ನ ಸಾಮ್ಯವನ್ನು ಹೇಗೆ ಮುಗಿಸುತ್ತಾನೆ (ವ. 1-12)?
7. ಈ ಸಾಮ್ಯಕ್ಕೆ ಕೇಳುಗರು ಹೇಗೆ ಪ್ರತಿಕ್ರಯಿಸಿದರು (ವ. 1-12)?
8. ಫರಿಸಾಯರು ಮತ್ತು ಹೆರೋದ್ಯರು ಯೇಸುವನ್ನು ಹೇಗೆ ಶ್ಲಾಘಿಸಿದರು (ವ. 13-17)?
9. ಯೇಸು ಫರಿಸಾಯರು ಮತ್ತು ಸದ್ದುಕಾಯರಿಗೆ ಯಾಕೆ ತನ್ನದೇ ಆದ ರೀತಿಯಲ್ಲಿ ಉತ್ತರಿಸಿದನು (ವ. 13-17)?
10. ಫರಿಸಾಯರು ಮತ್ತು ಹೆರೋದ್ಯರಿಗೆ ಯೇಸು ಕೊಟ್ಟ ಉತ್ತರವೇನು, ಮತ್ತು ಅದಕ್ಕೆ ಅವರು ಹೇಗೆ ಪ್ರತಿಕ್ರಯಿಸಿದರು (ವ. 13-17)?
11. ಪುನರುತ್ಥಾನದ ಕುರಿತ ಪ್ರಶ್ನೆಯೊಂದಿಗೆ ಯೇಸುವಿನ ಬಳಿಗೆ ಬಂದವರಾರು (ವ. 18-19)?
12. ಅವರು ಯೇಸುವಿನ ಮುಂದೆ ಯಾವ "ಸಾಂದರ್ಭಿಕ ಕಥೆಯನ್ನು" ಮುಂದಿಡುತ್ತಾರೆ ಮತ್ತು ಅವರ ಪ್ರಶ್ನೆಯೇನಾಗಿತ್ತು (ವ. 20-23)?
13. ಯೇಸು ಎರಡು ಅಪಾದನೆಗಳೊಂದಿಗೆ ಸದ್ದುಕಾಯರಿಗೆ ಪ್ರತಿಕ್ರಯಿಸುತ್ತಾನೆ. ಅವು ಯಾವುವು (ವ. 24)?
14. "ದೇವರು ಜೀವಿತರಿಗೆ ದೇವರಾಗಿದ್ದಾನೆ ಹೊರತು ಜೀವವಿಲ್ಲದವರಿಗೆ ಅಲ್ಲ" ಎಂಬ ತನ್ನ ಹೇಳಿಕೆಯನ್ನು ಬೆಂಬಲಿಸಲು ಯೇಸು ಹಳೇ ಒಡಂಬಡಿಕೆಯಲ್ಲಿನ ಯಾವ ಕಥೆಯನ್ನು ಸೂಚಿಸುತ್ತಾನೆ (ವ. 24-27)?
15. ಅತೀ ಪ್ರಾಮುಖ್ಯವಾದ ಆಜ್ಞೆ ಯಾವುದೆಂಬ ಪ್ರಶ್ನೆಯೊಂದಿಗೆ ಯೇಸುವಿನ ಬಳಿಗೆ ಬಂದವರಾರು (ವ. 28)?
16. ಅತಿ ಪ್ರಾಮುಖ್ಯ ಅಥವಾ ಮೊದಲ ಆಜ್ಞೆ ಯಾವುದೆಂಬ ಪ್ರಶ್ನೆಗೆ ಯೇಸು ಏನೆಂದು ಉತ್ತರ ಕೊಡುತ್ತಾನೆ (ವ. 29-31)?
17. ಯೇಸುವಿನ ಉತ್ತರಕ್ಕೆ ಶಾಸ್ತ್ರೀಯು ಹೇಗೆ ಪ್ರತಿಕ್ರಯಿಸುತ್ತಾನೆ (ವ. 32-33)?
18. ಶಾಸ್ತ್ರಿ ಮತ್ತು ಆತನ ಹೇಳಿಕೆಯ ಬಗ್ಗೆ ಯೇಸುವಿನ ಮೌಲ್ಯ ಮಾಪನವೇನು (ವ. 34)?
19. ಕ್ರಿಸ್ತನ ಗುರುತಿನ ಬಗ್ಗೆ ದೇವಾಲಯದಲ್ಲಿನ ಯೇಸುವಿನ ಬೋಧನೆಗೆ ಜನಸಮೂಹ ಹೇಗೆ ಪ್ರತಿಕ್ರಯಿಸಿತು (ವ. 35-37)?
20. ವಚನ 38-40 ರಲ್ಲಿ ಶಾಸ್ತ್ರಿಗಳ ಬಗ್ಗೆ ಯೇಸು ಮಾಡಿದ ಟೀಕೆಗಳ ಪಟ್ಟಿಮಾಡಿರಿ.
21. ವಿಧವೆಯ ಕಾಣಿಕೆಯ ಕುರಿತಾದ ಕಥೆಯು ನಡೆದದ್ದೆಲ್ಲಿ (ವ. 41-44)?

22. ಯಾಕೆ ಯೇಸು ವಿಧವೆಯನ್ನು ಹೊಗಳುತ್ತಾನೆ (ವ. 41-44)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಒಕ್ಕಲಿಗರ ಸಾಮ್ಯವನ್ನು ಯೇಸು ಯಾರಿಗೆ ಹೇಳಿದನು ಮತ್ತು ಅದು ತಮ್ಮ ಕುರಿತಾಗಿಯೇ ಎಂದು ಅವರು ಯೋಚಿಸುವಂತೆ ಮಾಡಿದ್ದಾವುದು (ವ. 1-12)?
2. ಕೈಸರನಿಗೆ ತೆರಿಗೆಯನ್ನು ಕೊಡುವುದರ ಕುರಿತ ಪ್ರಶ್ನೆಯಿಂದ ಯೆಹೂದಿ ನಾಯಕರು ಯೇಸುವನ್ನು ಸಿಕ್ಕಿ ಹಾಕಲು ಹೆಣೆದ ಬಲೆಯಿಂದ ಯೇಸು ಹೇಗೆ ತಪ್ಪಿಸಿಕೊಂಡನು (ವ. 13-17)?
3. ಇಂದಿನ ದಕ್ಷಿಣ ಭಾರತದ ವಿಶ್ವಾಸಿಗಳು ಸರ್ಕಾರಕ್ಕೆ ತೆರಿಗೆಯನ್ನು ಕಟ್ಟಬೇಕಾ? ಯಾಕೆ, ಯಾಕಿಲ್ಲ?
4. ಸದ್ದುಕಾಯರು ಮತ್ತು ಯೇಸುವಿನ ಕುರಿತ ವಾಕ್ಯಭಾಗವನ್ನು ನಿಮ್ಮದೇ ಮಾತಿನಲ್ಲಿ ಹೇಳಿರಿ (ವ. 18-27). ಸತ್ಯವೇದ ನೋಡಬೇಡಿ. ಪುನರುತ್ಥಾನದ ವಿಷಯದಲ್ಲಿನ ಸದ್ದುಕಾಯರ ತಿಳುವಳಿಕೆ ತಪ್ಪೆಂದು ಯೇಸು ಹೇಗೆ ನಿರೂಪಿಸದನೆಂಬುದನ್ನು ವಿವರಿಸಿರಿ.
5. ವಚನ 35-37 ರಲ್ಲಿ ಮೆಸ್ಸೀಯನ ಗುರುತಿನ ಕುರಿತು ಯೇಸು ಹೇಗೆ ವಾದಿಸುತ್ತಾನೆಂಬುದನ್ನು ವಿವರಿಸಿರಿ.
6. ಶಾಸ್ತ್ರಿಗಳನ್ನು ಕುರಿತು ಯೇಸುವಿನ ಟೀಕೆಗಳನ್ನು ವಿವರಿಸಿರಿ (ವ. 38-40). ಸಾಧ್ಯವಾದಷ್ಟು ನಿಮ್ಮದೇ ಪದಗಳನ್ನು ಬಳಸಿರಿ. ಯೇಸು ಶಾಸ್ತ್ರಿಗಳ ಕುರಿತು ಹೇಳಿದ ನಕರಾತ್ಮಕ ಅಂಶಗಳಿಗೆ ಸಮಾನರಾಗಿರುವ ಆಧುನಿಕ ದಕ್ಷಿಣ ಭಾರತದವರನ್ನು ಕಂಡುಹಿಡಿಯಲು ಪ್ರಯತ್ನಿಸಿರಿ.
7. ವಿಧವೆಯ ಕಾಣಿಕೆಯ ಕುರಿತ ಕಥೆಯಲ್ಲಿ ಕಂಡು ಬರುವ ತದ್ವಿರುದ್ಧತೆಯನ್ನು ವಿವರಿಸಿರಿ (ವ. 41-44).

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಈ ಅಧ್ಯಯನದಲ್ಲಿ ಕಂಡುಬರುವ ಮಾಹಿತಿಗಳ ಬೆಳಕಿನಲ್ಲಿ ಎಲ್ಲಾ ಆಜ್ಞೆಗಳಲ್ಲಿ ಮೊಲನೆಯದು (ಮುಖ್ಯವಾದದ್ದು) ಯಾವುದು ಎಂಬುದರ ಕುರಿತ ಯೇಸುವಿನ ಉಪದೇಶವನ್ನು ವಿಮರ್ಶಿಸಿರಿ (ವ. 28-34). ಹಾಗೆಯೇ ಈ ಎರಡು ಪ್ರಶ್ನೆಗಳನ್ನು ವಿಮರ್ಶಿಸಿರಿ: ದೇವರಿಗೆ ಪ್ರೀತಿಯನ್ನು ನೀವು ಹೇಗೆ ತೋರಿಸುತ್ತೀರಿ? ನಿಮ್ಮ ನೆರೆಯವರಿಗೆ ನೀವು ಪ್ರೀತಿಯನ್ನು ಹೇಗೆ ತೋರಿಸುತ್ತೀರಿ? ನಿಮ್ಮ ದೈನಂದಿನ ಜೀವನದಲ್ಲಿ ದೇವರನ್ನು ಮತ್ತು ನೆರೆಯವನನ್ನು ಪ್ರೀತಿಸುವುದರ ನಡುವೆ ಸಮತೋಲನತೆಯುಂಟಾ? ಒಂದು ಧ್ಯಾನಕ್ಕಾಗಿ ಬಳಸಬಹುದಾದ ಕೆಲ ಆಲೋಚನೆಗಳನ್ನು ಪಟ್ಟಿಮಾಡಿರಿ.
2. ಈ ಅಧ್ಯಯನದ ಬೆಳಕಿನಲ್ಲಿ ವಚನ 38-40 ನ್ನು ವಿಮರ್ಶಿಸಿರಿ. (ವಿಶೇಷವಾಗಿ ***ಪ್ರಶ್ನೋತ್ತರ*** 18 ಮತ್ತು ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 6) ನಿಮ್ಮ ಜೀವನ ಮತ್ತು ಸೇವೆಯನ್ನು ಮೌಲ್ಯಮಾಪನ ಮಾಡಿರಿ. ಯಾವ ಕ್ಷೇತ್ರದಲ್ಲಿ ಕಪಟತೆಯ ಬಗ್ಗೆ ನೀವು ಎಚ್ಚರದಿಂದಿರಬೇಕು?
3. ವಿಧವೆಯ ಕಾಣಿಕೆಯ ಕುರಿತ ಕಥೆಯನ್ನು ವಿಮರ್ಶಿಸಿರಿ (ವ. 41-44). ದಕ್ಷಿಣ ಭಾರತದ ವಿಶ್ವಾಸಿಗಳಾದ ನಾವು ಇಂದು ಈ ಕಥೆಯಿಂದ ಏನನ್ನು ಕಲಿಯುತ್ತೇವೆ? ನಂತರ ***ನಮ್ಮ ಕಾಣಿಕೆ*** ಎಂಬ ಧ್ಯಾನ(ಚಿಕ್ಕ ಸತ್ಯವೇದ ಅಧ್ಯಯನ)ವೊಂದನ್ನು ಸಿದ್ಧಪಡಿಸಿ.



**ಮಾರ್ಕ ಅಧ್ಯಾಯ 13**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕನ 13 ನೇ ಅಧ್ಯಾಯವು ರಚನೆ ಮಾಡಲು ಕ್ಲಿಷ್ಟಕರವಾಗಿದೆ. ಇದರ ರಚನೆಯು ಮುಂದಣ (ಭವಿಷ್ಯ) ಸಂಗತಿಗಳ ಕುರಿತ ಯೇಸುವಿನ ದೀರ್ಘವಾದ ಉಪದೇಶದ ವಿಭಿನ್ನ ಭಾಗಗಳನ್ನು ನೀವು ಹೇಗೆ ವ್ಯಾಖ್ಯಾನಿಸುತ್ತೀರೆಂಬುದರ ಮೇಲೆ ಅವಲಂಬಿತಗೊಂಡಿದೆ. ಇದೊಂದು ವಿಧವಾಗಿ ಇದನ್ನು ರಚಿಸಬಹುದಾಗಿದೆ:

1. ದೇವಾಲಯದ ಬಗ್ಗೆ ಎಚ್ಚರಿಸುವುದು, (ವ. 1-4)
2. ವಿಶ್ವಾಸಿಗಳು ನಿರಂತರವಾಗಿ ಕಷ್ಟವನ್ನು ಅನುಭವಿಸುವುದು, ವ. 5-13
3. ಯೆರೂಸಲೇಮಿನ ನಾಶನ, ವ. 14-23
4. ಎಲ್ಲವುಗಳ ಅಂತ್ಯ, ವ. 24-27
5. ಅಂತ್ಯಕಾಲದಲ್ಲಿ ಎಚ್ಚರವಾಗಿರುವುದು (ಯೇಸುವಿನಿಂದ ಅಂತ್ಯದವರೆಗೆ), ವ. 28-37

ಈ ಉಪದೇಶವನ್ನು ಎಣ್ಣೇಮರಗಳ ಗುಡ್ಡದ ಮೇಲೆ ಮಾಡಿದ ನಿಮಿತ್ತ ಈ ಅಧ್ಯಾಯವನ್ನು "ಎಣ್ಣೇಮರಗಳ ಪ್ರವಚನ" ಎಂದೂ ಸಹ ಕರೆಯಲಾಗುತ್ತದೆ. ಇದು ಯೇಸು ದೇವಾಲಯ ಮತ್ತು ಪಟ್ಟಣವನ್ನು ಬಿಟ್ಟು ಎಣ್ಣೇಮರಗಳ ಗುಡ್ಡಕ್ಕೆ ಹೋಗುವುದರೊಂದಿಗೆ ಪ್ರಾರಂಭವಾಗುತ್ತದೆ. ಆತನು ಅಲ್ಲಿ ಕೂತುಕೊಂಡು ಯೆರೂಸಲೇಮನ್ನು ನೋಡುತ್ತಿದ್ದಾಗ, ಆತನ ನಾಲ್ಕು ಶಿಷ್ಯರು ಅದರ ಭವಿಷ್ಯ, ನಾಶನದ ಕಾಲ ಮತ್ತು ಗುರುತುಗಳ ಬಗ್ಗೆ ಪ್ರಶ್ನಿಸುತ್ತಾರೆ (ವ. 4). ಯೇಸು ಅವರ ಪ್ರಶ್ನೆಯನ್ನು ಸ್ಪಷ್ಟವಾಗಿ ಅಥವಾ ಸರಿಯಾದ ರೀತಿಯಲ್ಲಿ ಉತ್ತರಿಸುವುದಿಲ್ಲ. ಆತನು ಹೇಳಿದ್ದು ಭವಿಷ್ಯದ ಘಟನೆಗಳ ಕುರಿತ ನಮ್ಮ ಕುತೂಹಲವನ್ನು ತೃಪ್ತಿಪಡಿಸದೇ ಇರಬಹುದು. ಬದಲಾಗಿ ಆತನು ತನ್ನ ಶಿಷ್ಯರು ಮತ್ತು ಮುಂದಿನ ಎಲ್ಲಾ ವಿಶ್ವಾಸಿಗಳಿಗೆ ಕ್ರಿ.ಶ 70 ರಲ್ಲಿ ಯೆರೂಸಲೇಮ್ ಮತ್ತು ಅದರ ದೇವಾಲಯದ ಮೂಲಕ ಮತ್ತು ಮನುಷ್ಯಕುಮಾರನು ಬಹು ಬಲದಿಂದಲೂ ಮಹಿಮೆಯಿಂದಲೂ ಮೇಘಗಳಲ್ಲಿ ಬರುವುದನ್ನು ಕಾಣುವವರೆಗೆ (ವ. 27) ಪ್ರತಿಕೂಲವಾದ ಲೋಕದಲ್ಲಿ ಹೇಗೆ ಜೀವಿಸಬೇಕು ಮತ್ತು ಹೇಗೆ ಸಾಕ್ಷಿಯಾಗಿರಬೇಕೆಂಬುದರ ಬಗ್ಗೆ ಪ್ರಾಯೋಗಿಕ ಮತ್ತು ನೈತಿಕ ಉಪದೇಶವನ್ನು ಕೊಡುತ್ತಾನೆ. "ಇದಲ್ಲದೆ ಆ ದಿನದ ವಿಷಯವಾಗಲಿ ಆ ಗಳಿಗೆಯ ವಿಷಯವಾಗಲಿ ನನ್ನ ತಂದೆಗೆ ತಿಳಿಯುವುದೇ ಹೊರತು ಮತ್ತಾರಿಗೂ ತಿಳಿಯದು"(ವ. 32). ಯೇಸು ತನ್ನ ಉಪದೇಶವನ್ನು "ಯಾರಾದರೂ ನಿಮ್ಮನ್ನು ಮೋಸಗೊಳಿಸಾರು ನೋಡಿಕೊಳ್ಳಿರಿ" (ವ. 33) ಎಂಬುದರೊಂದಿಗೆ ಪ್ರಾರಂಭಿಸಿ "ನೋಡಿಕೊಳ್ಳಿರಿ, ಜಾಗರೂಕರಾಗಿರಿ" (ವ. 33), "ಎಚ್ಚರವಾಗಿರಿ" (ವ. 37) ಎಂಬ ಎಚ್ಚರಿಕೆಗಳೊಂದಿಗೆ ಮುಗಿಸುತ್ತಾನೆ. ಶಿಷ್ಯತ್ವದ ಈ ಎಚ್ಚರಿಕೆ ಮತ್ತು ಜಾಗರೂಕತೆಯ ಸ್ವಭಾವವು ಭವಿಷ್ಯದ ಎರಡು ಮುಖ್ಯ ಘಟನೆಗಳೊಂದಿಗೆ ನಿಕಟವಾದ ಸಂಬಂಧ ಹೊಂದಿದೆ: ಕ್ರಿ.ಶ. 70 ರಲ್ಲಿ ಯೆರೂಸಲೇಮ್ ಪಟ್ಟಣದ ನಾಶನ ಮತ್ತು ಯೇಸುವಿನ ಬರೋಣದೊಂದಿಗೆ ಈ ಪ್ರಸ್ತುತ ಯುಗದ ಅಂತ್ಯ ಈ ಎರಡು ಘಟನೆಗಳಿಗೆ ಪಠ್ಯದ ವಿವಿಧ ವಿವರಗಳನ್ನು ಹೇಗೆ ಅಳವಡಿಸಬೇಕೆಂಬುದಕ್ಕೆ, ಸತ್ಯವೇದ ಪಂಡಿತರು ಅನೇಕ ಪರಿಹಾರಗಳನ್ನು ಮತ್ತು ದೂರದ ಭವಿಷ್ಯದ ನಡುವೆ ಒಂದು ಬದಲಾವಣೆಯನ್ನು ಕಾಣುತ್ತಾರೆ (ವ. 5-27). ಇದು ಈ ವಿವರಗಳ ಎರಡು ರೀತಿಯ ನೆರವೇರಿಕೆಯನ್ನು ಸೂಚಿಸುತ್ತಿರಬಹುದು. ಮೊದಲನೆಯ ಬಾರಿ ಯೆರೂಸಲೇಮಿನ ನಾಶನದ ವೇಳೆ, ಅನಂತರ ಈ ಯುಗದ ಅಂತ್ಯದ ವೇಳೆ.

*ದೇವಾಲಯ ... ಎಂಥಾ ಕಲ್ಲುಗಳು! ಎಂಥಾ ಕಟ್ಟಡಗಳು* (ವ. 1): ಹೆರೋದನು ಕಟ್ಟಿದ ದೇವಾಲಯವು ಸೊಲೊಮೋನನು ಯೆರೂಸಲೇಮಿನಲ್ಲಿ ಕಟ್ಟಿಸಿದ ಮೂಲ ದೇವಾಲಯಕ್ಕಿಂತ ಎರಡರಷ್ಟು ದೊಡ್ಡದಾಗಿತ್ತು. ಇದು ಅನೇಕ ಸುಂದರವಾದ ವಿನ್ಯಾಸಗಳನ್ನು ಒಳಗೊಂಡಿತ್ತು. ಇದು ಕ್ರಿ.ಶ 70 ರಲ್ಲಿನ ಯೆಹೂದಿ ಯುದ್ಧದ ವೇಳೆ ವೆಸ್ಪೇಸಿಯನ್ ಚಕ್ರವರ್ತಿಯ ಮಗನೂ, ಉತ್ತರಾಧಿಕಾರಿಯೂ ಆದ ರೋಮನ್ ಸೇನಾಪತಿ ಟೈಟಸ್ ನಿಂದ ಕೆಡವಲ್ಪಟ್ಟಿತು.

*ಎಣ್ಣೇಮರಗಳ ಗುಡ್ಡ* (ವ. 3): 11:1 ರ ಟಿಪ್ಪಣಿಯನ್ನು ನೋಡಿ.

ವಚನ 4: ದೇವಾಲಯದ ನಾಶನವು ಈ ಪ್ರಸ್ತುತ ಯುಗಕ್ಕೆ ಅಂತ್ಯವನ್ನು ಹೇಳುತ್ತದೆಂಬುದಾಗಿ ಶಿಷ್ಯರು ಯೋಚಿಸಿದರು.

*ಸೂಚನೆ* (ವ. 4): ದೇವಾಲಯದ ನಾಶನ, ಮತ್ತು ಯುಗದ ಸಮಾಪ್ತಿ ಯಾವಾಗ ಆಗುವುದೆಂಬುದನ್ನು ಶಿಷ್ಯರಿಗೆ ತೋರಿಸಬೇಕಾದ ಸೂಚನೆ.

*"ನಾನು ಕ್ರಿಸ್ತನು"* (ವ. 6): "ನಾನು ಮೆಸ್ಸೀಯನು".

*ಅಂತ್ಯ* (ವ. 7): ಯೆರೂಸಲೇಮಿನ ನಾಶನವಲ್ಲ, ಆದರೆ ಯುಗದ ಸಮಾಪ್ತಿ (ಮತ್ತಾಯ 24:3 ರೊಂದಿಗೆ ಹೋಲಿಸಿ).

*ಪ್ರಸವವೇದನೆ* (ವ. 8): ಯೇಸುವಿನ ಕಾಲದಲ್ಲಿನ ಯೆಹೂದಿ ರಬ್ಬಿಗಳು ಮೆಸ್ಸೀಯನ ಬರೋಣಕ್ಕೆ ಮುಂಚೆ ಸಂಭವಿಸಲಿರುವ ಹಿಂಸೆಗಳಿಗೆ "ಪ್ರಸವವೇದನೆ" ಎಂಬ ಪದವನ್ನು ಉಪಯೋಗಿಸುತ್ತಿದ್ದರು. ಅವರು ಇದನ್ನು ನ್ಯಾಯತೀರ್ಪಿನ ಮತ್ತು ಯುದ್ಧದ ಬಾಧೆಗೆ ರೂಪಾಲಂಕಾರವಾಗಿ ಬಳಸಿದ ಹಳೇ ಒಡಂಬಡಿಕೆಯ ಪ್ರವಾದಿಗಳಿಂದ ಇದನ್ನು ಪಡೆದರು (ಉದಾ: ನೋಡಿ ಯೆಶಾಯ 13:8).

*ನ್ಯಾಯ ವಿಚಾರಣೆಯ ಸಭೆಗೆ* (ವ. 9): ಇವೆಲ್ಲ ಕೆಳದರ್ಜೆಯ ನ್ಯಾಯಾಲಯಗಳಾಗಿದ್ದು ಹೆಚ್ಚು ಗಂಭೀರವಲ್ಲದ ಕೇಸುಗಳನ್ನು ವಿಚಾರಿಸಿ ಅಪರಾಧಿಯೆಂದು ಸಾಬೀತಾದವರನ್ನು ಹೊಡಿಸುತ್ತಿದ್ದರು. ಈ ನ್ಯಾಯಾಲಯಗಳು ಸಭಾ ಮಂದಿರಗಳ ಸಂಪರ್ಕದಲ್ಲಿರುತ್ತಿದ್ದವು.

*ಮೊದಲು* (ವ. 10): ಯುಗದ ಸಮಾಪ್ತಿಗಿಂತ ಮುಂಚೆ (ಹೋಲಿಸಿ ಮತ್ತಾ. 12:14).

*ಕಡೇವರೆಗೂ ತಾಳುವವನು* (ವ. 13): ಹೋಲಿಸಿ ಇಬ್ರಿಯ 3:6,14, 6:11-12.

*ಹಾಳುಮಾಡುವ ಅಸಹ್ಯ ವಸ್ತುವು* (ವ. 14): ಇದರರ್ಥ ಅಸಹ್ಯ ವಸ್ತುವು ಪವಿತ್ರ ಸ್ಥಳದ ನಾಶನಕ್ಕೆ ನಡೆಸುವಂಥದ್ದಾಗಿದೆ. ದಾನಿಯೇಲ ಪುಸ್ತಕದಲ್ಲಿನ ಪ್ರಾಥಮಿಕ ಉಲ್ಲೇಖವು (ದಾನಿ. 9:27, 11:31, 12:11) ಕ್ರಿ.ಪೂ. 168 ಸೆಲ್ಯೂಶಿಯಾದ ಅರಸನಾದ ಅಂಟಿಯೋಕಸ್ ಎಪಿಫೇನೆಸನು ಯೆರೂಸಲೇಮಿನ ದೇವಾಲಯದ ಪವಿತ್ರವಾದ ವೇದಿಯ ಮೇಲೆ ಜೀಯುಸ್ ದೇವರಿಗೆ ಒಂದು ಅನ್ಯದೇವತಾ ವೇದಿಯನ್ನು ಕಟ್ಟಿರುವುದನ್ನು ಸೂಚಿಸುತ್ತದೆ. ಹೊಸ ಒಡಂಬಡಿಕೆಯು ಆ ಘಟನೆಯನ್ನು ಭವಿಷ್ಯದ ಘಟನೆಗೆ ಒಂದು ಮುನ್ಸೂಚನೆಯೆಂಬುದಾಗಿ ನೋಡುತ್ತದೆ. ಅಂತಹ ಭವಿಷ್ಯದ ಘಟನೆಯು ಕ್ರಿ.ಶ 70 ರಲ್ಲಿ ರೋಮನ್ನರು ದೇವಾಲಯವನ್ನು ಹೊಕ್ಕು ಹೊಲೆಮಾಡಿ ಕೆಡವಿಹಾಕಿದ್ದಾಗಿದೆ. ಆ ಸಮಯದಲ್ಲಿ ರೋಮನ್ನರು ತಮ್ಮ ಸೇನೆಯನ್ನು (ರೋಮನ್ ಹದ್ದು ಮತ್ತು ಚಕ್ರವರ್ತಿಯ ಚಿತ್ರಗಳೊಂದಿಗೆ) ದೇವಾಲಯದೊಳಕ್ಕೆ ನುಗ್ಗಿಸಿ ದೇವಾಲಯವನ್ನು ಸುಟ್ಟು ನಾಶಗೊಳಿಸುವುದಕ್ಕಿಂತ ಮೊದಲು ಯಜ್ಞವನ್ನರ್ಪಿಸಿದರು. ಭವಿಷ್ಯದ ಅಂತಹ ಎರಡನೇ ಘಟನೆಯು ಯುಗದ ಅಂತ್ಯದಲ್ಲಿ (ಅಂತ್ಯಕಾಲದಲ್ಲಿ) ಅಧರ್ಮಸ್ವರೂಪನ (ಅಂತ್ಯಕ್ರಿಸ್ತ) ಆಗಮನ ಮತ್ತು ಆತನು ದೇವಾಲಯವನ್ನು ಹೊಲೆ ಮಾಡುವುದರೊಂದಿಗೆ ಸಂಭವಿಸುವುದಾಗಿದೆ (ಹೋಲಿಸಿ 2 ಥೆಸ. 2:4, ಪ್ರಕ. 13:14-15). ಕೆಲವು ಸತ್ಯವೇದ ಪಂಡಿತರು ಈ ದೇವಾಲಯವು, ಯೆರೂಸಲೇಮಿನಲ್ಲಿ ಪುನಃ ಕಟ್ಟಿದ ಅಕ್ಷರಶಃ ದೇವಾಲಯವಾಗಿರುವುದೆಂಬುದಾಗಿ ಅರ್ಥೈಸಿಕೊಂಡರೆ, ಇತರ ಸತ್ಯವೇದ ಪಂಡಿತರು ಈ ದೇವಾಲಯವು ದೇವ ಜನರಾಗಿರುವರೆಂಬುದಾಗಿ ಅರ್ಥೈಸಿಕೊಳ್ಳುತ್ತಾರೆ (ಹೋಲಿಸಿ ರೋಮಾ 9:4, 1 ಕೊರಿಂಥ 3:16, 2 ಕೊರಿಂಥ 6:16, ಎಫೆಸ 2:21).

*ಇದನ್ನು ಓದುವವನು ತಿಳುಕೊಳ್ಳಲಿ* (ವ. 14): ಇವು ತಾವು ಓದಿದ್ದನ್ನು ಅರ್ಥೈಸಿಕೊಳ್ಳುವದಕ್ಕೆ, ದಾನಿಯೇಲನ ಪ್ರವಾದನೆಯ ಓದುಗರಿಗೆ ಯೇಸುವಿನ ಎಚ್ಚರಿಕೆಯ ನುಡಿಗಳಾಗಿರಬಹುದು (ಮತ್ತಾ. 24:15 ರಲ್ಲಿ ಸಹ ಕಾಣಬಹುದು).

*ಬೆಟ್ಟಗಳಿಗೆ ಓಡಿಹೋಗಲಿ* (ವ. 14): ಕ್ರಿ.ಶ 70 ರಲ್ಲಿ ರೋಮನ್ನರು ಯೆರೂಸಲೇಮನ್ನು ಮುತ್ತಿಗೆ ಹಾಕುವುದಕ್ಕಿಂತ ಸ್ವಲ್ಪ ಮುಂಚೆ ಕ್ರೈಸ್ತರು ಯೆರೂಸಲೇಮಿನಿಂದ ಯೊರ್ದನ್ ಹೊಳೆಯ ಪೂರ್ವಕ್ಕಿರುವ ಬೆಟ್ಟಗಳಿಗೆ ಓಡಿ ಹೋಗಿದ್ದರು.

*ಚಳಿಗಾಲ* (ವ. 18): ಪ್ಯಾಲೆಸ್ತೀನ್ನಲ್ಲಿ ಚಳಿಯು ಮಳೆಗಾಲದಲ್ಲಿರುತ್ತಿದ್ದು, ಆ ಸಮಯದಲ್ಲಿ ಹೊಳೆ ಮತ್ತು ತೊರೆಗಳನ್ನು ದಾಟುವುದು ಅಸಾಧ್ಯ ಅಥವಾ ಕಷ್ಟಕರವಾಗಿತ್ತು.

*ಅಂಥ ಸಂಕಟವು ದೇವರು ಮಾಡಿದ ಸೃಷ್ಟಿ ಮೊದಲುಗೊಂಡು ಇಂದಿನವರೆಗೂ ಆಗಲಿಲ್ಲ* (ವ. 19): ಕ್ರಿ.ಶ 70 ರಲ್ಲಿ ಯೆರೂಸಲೇಮಿನ ನಾಶನದ ವೇಳೆ ಯೆಹೂದಿ ಇತಿಹಾಸಕಾರನಾದ ಜೋಸೆಫಸ್ಸನು ಹಾಜರಿದ್ದನು. ಕೆಲ ವರ್ಷಗಳ ನಂತರ ತಾನು ಬರೆದ "ಯೆಹೂದ್ಯರ ಯುದ್ಧಗಳು" ಎಂಬ ಪುಸ್ತಕದಲ್ಲಿ ಆತನು ಇದೇ ರೀತಿಯ ಹೇಳಿಕೆಗಳನ್ನು ಬಳಸುತ್ತಾನೆ.

ತಾನು ಆದುಕೊಂಡವರಿಗೋಸ್ಕರ (ವ. 20): ಈ ಹೇಳಿಕೆಯ ಅರ್ಥ "ದೇವರ ಜನರು" ಎಂಬುದಾಗಿದೆ (ನೋಡಿ ವ. 22, 27).

*ಆ ದಿನಗಳಲ್ಲಿ* (ವ. 24): ಇದು ಮೆಸ್ಸೀಯನ ಯುಗ ಮತ್ತು ಇಸ್ರಾಯೇಲ್ಯರ ಅಂತಿಮ ವಿಮೋಚನೆಯ ಕಾಲವನ್ನು ಸೂಚಿಸುವ ಹಳೇ ಒಡಂಬಡಿಕೆಯ ಒಂದು ಸಾಮಾನ್ಯ ಹೇಳಿಕೆಯಾಗಿದೆ (ಉದಾ: ನೋಡಿ ಯೆರೆಮೀಯ 3:16, ಯೋವೇಲ 3:1, ಜಕರ್ಯ 8:23).

ವಚನ 24-25: ಚಿತ್ರಣ ಮತ್ತು ಭಾಷೆಯೆಲ್ಲವೂ ಕರ್ತನ ದಿನದ ಕುರಿತ ಹಳೇ ಒಡಂಬಡಿಕೆಯ ವರ್ಣನೆಗಳನ್ನು ಆಧರಿಸಿವೆ (ಹೋಲಿಸಿ ಯೆಶಾಯ 13:10, 24:23, 34:4, ಯೆಹೆಜ್ಕೇಲ 32:7-8, ಯೋವೇಲ 2:10, 30-31, 3:15, ಆಮೋಸ 8:9). ಪದ್ಯರೂಪಿ ಭಾಷೆಯನ್ನು ಅಕ್ಷರಶಃವಾಗಿ ಅರ್ಥೈಸಿಕೊಳ್ಳಬೇಕೋ ಅಥವಾ ಅಲಂಕಾರಿಕವಾಗಿ ಅರ್ಥೈಸಿಕೊಳ್ಳಬೇಕೋ ಎಂಬುದನ್ನು ತಿಳಿದುಕೊಳ್ಳುವುದು ಕ್ಲಿಷ್ಟಕರವಾಗಿದೆ (ಕರ್ತನ ದಿನವನ್ನು ಇದೇ ರೀತಿಯ ಭಾಷೆಯಲ್ಲಿ ವರ್ಣಿಸಲಾದ 2 ಪೇತ್ರ 3:10 ರೊಂದಿಗೆ ಹೋಲಿಸಿ).

*ಮನುಷ್ಯಕುಮಾರನು ಮೇಘಗಳಲ್ಲಿ ಬರುವುದನ್ನು* (ವ. 26): ಇದು ದಾನಿಯೇಲ 7:13 ರ ಹೇಳಿಕೆಯಾಗಿದೆ. ಹೋಲಿಸಿ ಮಾರ್ಕ 9:7.

*ತಾನು ಆದುಕೊಂಡವರನ್ನು ಒಟ್ಟುಗೂಡಿಸುವನು* (ವ. 27): ಹಳೇ ಒಡಂಬಡಿಕೆಯಲ್ಲಿ ಈ ಹೇಳಿಕೆಯನ್ನು (ಮಾತನ್ನು) ದೇವರು ಚದುರಿಹೋದ ತನ್ನ ಜನರನ್ನು ಒಟ್ಟುಗೂಡಿಸುವುದರ ಬಗ್ಗೆ ಬಳಸಲಾಗಿದೆ (ಉದಾ: ನೋಡಿ ಧರ್ಮೋ. 30:34, ಯೆಶಾಯ 43:6, ಯೆರೆಮೀಯ 32:37, ಯೆಹೆಜ್ಕೇಲ 34:13).

*ನಾಲ್ಕು ದಿಕ್ಕುಗಳಿಂದ* (ವ. 27): ಇದರರ್ಥ "ಎಲ್ಲಾ ದಿಕ್ಕುಗಳಿಂದ".

ವಚನ 29: ಕನ್ನಡದ ಪವಿತ್ರ ಗ್ರಂಥ ಮತ್ತು ಸತ್ಯವೇದ ಭಾಷಾಂತರವನ್ನು ಹೋಲಿಸಿರಿ. ಗ್ರೀಕ್ ಹೇಳಿಕೆಯನ್ನು "ಹತ್ತಿರವದೆ" (ವಚನ 14 ರಲ್ಲಿನ "ಹಾಳು ಮಾಡುವ ಅಸಹ್ಯ ವಸ್ತುವು" ಇದಕ್ಕೆ ಅಥವಾ ದೇವರ ರಾಜ್ಯಕ್ಕೆ ಉಲ್ಲೇಖವಾಗಿ) ಎಂಬುದಾಗಿ ಅಥವಾ "ಆತನು ಹತ್ತಿರದಲ್ಲಿದ್ದಾನೆ" (ವಚನ 26 ರಲ್ಲಿ "ಮನುಷ್ಯಕುಮಾರನು ಮೇಘಗಳಲ್ಲಿ ಬರುವುದನ್ನು…." ಇದಕ್ಕೆ ಉಲ್ಲೇಖ) ಎಂಬುದಾಗಿ ಸಹ ವ್ಯಾಖ್ಯಾನಿಸಬಹುದು.

*ಈ ಸಂತತಿಯು* (ವ. 30): ಈ ಮಾತನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಯೇಸು ಇದನ್ನು "ಜನಸಾಮಾನ್ಯರನ್ನು" ಅಥವಾ "ಯೆಹೂದಿ ಜನರನ್ನು", "ಕ್ರೈಸ್ತ ವಿಶ್ವಾಸಿಗಳನ್ನು", "ಈ ಸಂಗತಿಗಳ ಪ್ರಾರಂಭವನ್ನು ನೋಡುವ ಭವಿಷ್ಯದ ಸಂತತಿ" (ವ. 29) ಅಥವಾ "ಯೇಸುವಿನ ಎರಡನೇ ಬರೋಣಕ್ಕಾಗಿ ಕಾದಿರುವ ಪ್ರತಿಯೊಂದು ಜನಾಂಗ" ವನ್ನು ಸೂಚಿಸಿರಬಹುದು (ಹೋಲಿಸಿ 2 ಪೇತ್ರ 3:9-10).

*ಆ ದಿನ* (ವ. 32): ಈ ಹೇಳಿಕೆಯನ್ನು (ಮಾತನ್ನು) ಹಳೇ ಒಡಂಬಡಿಕೆಯಲ್ಲಿ ದೇವರ ನ್ಯಾಯತೀರ್ಪಿನ ದಿನವಾದ "ಕರ್ತನ ದಿನ" ದ ಕುರಿತಾಗಿ ಉಪಯೋಗಿಸಲಾಗಿದೆ. ಇಲ್ಲಿ ಸ್ಪಷ್ಟವಾಗಿ ಯೇಸುವಿನ ಎರಡನೇ ಬರೋಣವನ್ನು ಸೂಚಿಸುತ್ತದೆ.



**ಪ್ರಶ್ನೆಗಳು**

1. ಈ ಅಧ್ಯಾಯದ ಪ್ರಾರಂಭದಲ್ಲಿನ ಸಂದರ್ಭ ಯಾವುದಾಗಿದೆ (ವ. 1-12)?
2. ಯೇಸುವಿನ ಪ್ರಕಾರ ಯೆರೂಸಲೇಮಿನ ದೇವಾಲಯದ ವಿಧಿ ಏನಾಗಿದೆ (ವ. 1-2)?
3. ಈ ಅಧ್ಯಾಯದ ಮುಖ್ಯಭಾಗದ ಸಂದರ್ಭ ಯಾವುದಾಗಿದೆ (ವ. 3-37)?
4. "ಸೂಚನೆ ಮತ್ತು ಸಮಯ" ದ ಕುರಿತಾದ ಶಿಷ್ಯರ ಪ್ರಶ್ನೆಗೆ ಯೇಸು ಹೇಗೆ ಉತ್ತರಿಸುತ್ತಾನೆ (ವ. 4-6)?
5. ಯುದ್ಧವಾಗುವ ಹಾಗಿದೆ ಎಂಬ ಸುದ್ದಿಗಳನ್ನು ಕೇಳುವಾಗ ಏನು ಮಾಡಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳುತ್ತಾನೆ (ವ. 7)?
6. "ಪ್ರಸವವೇದನೆಯ ಪ್ರಾರಂಭ" ವನ್ನು ಯೇಸು ಹೇಗೆ ವರ್ಣಿಸಿದ್ದಾನೆ (ವ. 8)?
7. ತನ್ನ ಶಿಷ್ಯರಿಗೆ ಏನಾಗುವುದೆಂಬುದಾಗಿ ಯೇಸು ಹೇಳುತ್ತಾನೆ (ವ. 9-13)?
8. ಸುವಾರ್ತೆಯು ಏನಾಗಬೇಕೆಂಬುದಾಗಿ ಯೇಸು ಹೇಳುತ್ತಾನೆ (ವ. 9-13)?
9. "ಹಾಳು ಮಾಡುವ ಅಸಹ್ಯ ವಸ್ತುವು" ಎಂಬ ಈ ಹೇಳಿಕೆಯನ್ನು ವಿವರಿಸಿರಿ (ವ. 14).
10. ಯಾಕೆ ಕರ್ತನು "ಆ ದಿನವನ್ನು ಕಡಿಮೆ ಮಾಡಬೇಕು" (ವ. 20)?
11. ಏನನ್ನು ನಂಬಬಾರದೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು (ವ. 21-22)?
12. ತನ್ನ ತಿರುಗಿ ಬರೋಣವನ್ನು ಯೇಸು ಹೇಗೆ ವರ್ಣಿಸುತ್ತಾನೆ (ವ. 24-27)?
13. ಅಂಜೂರದ ಮರವು ಎಲೆ ಬಿಡುವಾಗ ಏನಾಗುವುದೆಂಬುದನ್ನು ಜನರು ತಿಳಿದುಕೊಳ್ಳುತ್ತಾರೆ (ವ. 28)?
14. ವಚನ 31 ರಲ್ಲಿನ ಯೇಸುವಿನ ಮಾತುಗಳ ಬಗ್ಗೆ ನಾವೇನನ್ನು ಕಲಿಯುತ್ತೇವೆ?
15. ತನ್ನ ಎರಡನೇ ಬರೋಣದ ಬಗ್ಗೆ ಯೇಸು ತನ್ನ ಶಿಷ್ಯರಿಗೆ ಏನೆಂದು ಹೇಳಿದನು (ವ. 32-37)?
16. ತನ್ನ ಎರಡನೇ ಬರೋಣದ ಸಂಬಂಧದಲ್ಲಿ ಯೇಸು ತನ್ನ ಶಿಷ್ಯರಿಗೆ ಕೊಟ್ಟ ಮುಖ್ಯ ಎಚ್ಚರಿಕೆಯೇನಾಗಿತ್ತು (ವ. 32-37)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮಾರ್ಕನ 13 ನೇ ಅಧ್ಯಾಯವನ್ನು ಒಂದು ಅಥವಾ ಎರಡು ವಾಕ್ಯಗಳಲ್ಲಿ ಸಾರಾಂಶಗೊಳಿಸಿರಿ.
2. ವಚನ 14-19 ನ್ನು ನಿಮ್ಮದೇ ಮಾತಿನಲ್ಲಿ ಸಾರಾಂಶಗೊಳಿಸಿರಿ. ಸತ್ಯವೇದ ನೋಡಬೇಡಿ.

3. “ಅಂಜೂರ ಮರದ ಪಾಠ” ವನ್ನು ವಿವರಿಸಿರಿ (ವ. 28-31).
4. ವಚನ 30 ರಲ್ಲಿನ “ಈ ಸಂತತಿ” ಯನ್ನು ಯೇಸು ಏನನ್ನು ಸೂಚಿಸಿ ಹೇಳಿರಬಹುದು?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯನದ ಬೆಳಕಿನಲ್ಲಿ ಮಾರ್ಕನ 13 ನೇ ಅಧ್ಯಾಯವನ್ನು ವಿಮರ್ಶಿಸಿರಿ. ಹಾಗೆಯೇ ***ಎಚ್ಚರವಾಗಿರಿ! ನಿದ್ರೆ ಮಾಡಬೇಡಿ! ಎಚ್ಚರದಿಂದಿರಿ!*** ಎಂಬ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.

## ಮಾರ್ಕ ಅಧ್ಯಾಯ 14

### ಪೀಠಿಕೆ ಮತ್ತು ಟಿಪ್ಪಣಿಗಳು

ಮಾರ್ಕನ 14 ನೇ ಅಧ್ಯಾಯವನ್ನು ಈ ರೀತಿಯಾಗಿ ರಚನೆಮಾಡಬಹುದು:

1. ಯೇಸುವನ್ನು ಕೊಲ್ಲಲು ಉಪಾಯ ಮಾಡಿದ್ದು, ವ. 1-2
2. ಯೇಸು ಬೇಥಾನ್ಯದಲ್ಲಿ ಅಭಿಷೇಕಿಸಲ್ಪಟ್ಟದ್ದು, ವ. 3-9
3. ಯೂದನು ಯೇಸುವನ್ನು ಹಿಡಿದುಕೊಡಲು ನಿರ್ಧರಿಸಿದ್ದು, ವ. 10-11
4. ಯೇಸು ತನ್ನ ಶಿಷ್ಯರೊಂದಿಗೆ ಪಸ್ಕದ ಊಟ ಮಾಡಿದ್ದು, ವ. 12-16
5. ಪೇತ್ರನ ಅಲ್ಲಗಳೆಯುವಿಕೆಯನ್ನು ಯೇಸು ಮುಂತಿಳಿಸಿದ್ದು, ವ. 27-31
6. ಗೆತ್ಸೇಮನೆ ತೋಟದಲ್ಲಿ, ವ. 32-42
7. ಯೇಸು ಬಂಧನಕ್ಕೊಳಗಾದದ್ದು, ವ. 43-52
8. ಯೇಸುವನ್ನು ಯೆಹೂದಿ ಸಭೆಯ ಮುಂದೆ ಕೊಂಡೊಯ್ದದ್ದು, ವ. 53-65
9. ಪೇತ್ರನು ಯೇಸುವನ್ನು ಅಲ್ಲಗಳೆದದ್ದು, ವ. 66-72

ಮಾರ್ಕ ಮತ್ತು ಮತ್ತಾಯ ಯೇಸು ಭೇಥಾನ್ಯದಲ್ಲಿ ಪರಿಮಳ ತೈಲದಿಂದ ಅಭಿಷೇಕಿಸಲ್ಪಟ್ಟದ್ದರ ಕುರಿತಾದ ಕಥೆಯನ್ನು ಆತನನ್ನು ಕೊಲ್ಲಲು ಮಾಡಿದ ಉಪಾಯ (ವ. 1-12) ಮತ್ತು ಹಿಡಿದುಕೊಡುವಿಕೆ (ವ. 10-11) ಹಿನ್ನಲೆಯಲ್ಲಿ ಸೇರಿಸಿದ್ದಾರೆ. ಅನಂತರ ಅವರು ಧಾರ್ಮಿಕ ನಾಯಕರ ದ್ವೇಷ ಮತ್ತು ಪ್ರೀತಿಯಿಂದ ಯೂದನ ನಂಬಿಕೆ ದ್ರೋಹವನ್ನು ಯೇಸುವಿನ ತಲೆಯ ಮೇಲೆ ಪರಿಮಳ ದ್ರವ್ಯ ಹೊಯಿದ ಸ್ತ್ರೀಯ ಭಕ್ತಿಯೊಂದಿಗೆ ತದ್ವಿರುದ್ಧವಾಗಿ ತೋರಿಸಿದ್ದಾರೆ. ಈ ಘಟನೆಯು ಶ್ರಮೆವಾರದ ಪ್ರಾರಂಭಕ್ಕಿಂತ ಮೊದಲೇ ನಡೆದಿದೆ ಎಂಬುದಾಗಿ ಯೋಹಾನನ ಸುವಾರ್ತೆಯು ತೋರಿಸುತ್ತದೆ.

ಯೇಸು ಮತ್ತು ಆತನ ಶಿಷ್ಯರು ಪಸ್ಕಹಬ್ಬದ ಭೋಜನವನ್ನು ಯೆರೂಸಲೇಮಿನಲ್ಲಿ ಸ್ನೇಹಿತನೊಬ್ಬನ ಮೇಲಂತಸ್ತಿನ ಕೋಣೆಯಲ್ಲಿ ಆಚರಿಸುತ್ತಾರೆ. ಈ ಭೋಜನವನ್ನು ("ಕರ್ತನ ಭೋಜನ") ಶಿಲುಬೆ ಮೇಲೆ ಯೇಸುವು ಮನುಷ್ಯರ ರಕ್ಷಣೆಗಾಗಿ ಒಡಂಬಡಿಕೆಯ ರಕ್ತವನ್ನು ಸುರಿಸಿ ಹೊಂದಲಿರುವ ಮರಣವನ್ನು ಸೂಚಿಸುತ್ತದೆ. ತಡರಾತ್ರಿ ಗೆತ್ಸೇಮನೆ ತೋಟದಲ್ಲಿ ಆತನು ತನ್ನ ಜೀವಿತವನ್ನು ದೇವರ ಚಿತ್ತಕ್ಕೆ ಒಪ್ಪಿಸಿಕೊಡುತ್ತಾನೆ. ಆನಂತರ ಆತನು ಕತ್ತಿದೊಣ್ಣೆಗಳನ್ನು ಹಿಡಿದುಕೊಂಡು ಬಂದಿದ್ದ ಗುಂಪಿನಿಂದ ಬಂಧಿಸಲ್ಪಡುತ್ತಾನೆ. ಈಗ ಯೇಸುವು ಶಿಷ್ಯರೆಲ್ಲರಿಂದ ಕೈಬಿಡಲ್ಪಟ್ಟು ಏಕಾಂಗಿಯಾಗಿ ಮರಣವನ್ನು ಎದುರಿಸಬೇಕಾಗುತ್ತದೆ. ಯೂದನು ಆತನಿಗೆ ನಂಬಿಕೆ ದ್ರೋಹ ಮಾಡಿ ಹಿಡಿದುಕೊಟ್ಟನು. ಪೇತ್ರನು ಆತನನ್ನು ಅಲ್ಲಗಳೆಯುತ್ತಾನೆ. ಆತನ ಶಿಷ್ಯರೆಲ್ಲರೂ ಗೆತ್ಸೇಮನೆ ತೋಟದಲ್ಲಿ ನಿದ್ರೆಗೆ ಜಾರಿದರು ಮತ್ತು ಯೇಸುವನ್ನು ಬಂಧಿಸಲು ಬಂದಾಗ ಅವರೆಲ್ಲರೂ ಓಡಿಹೋದರು.

ಗೆತ್ಸೇಮನೆಯಿಂದ ಯೇಸುವನ್ನು ವಿಚಾರಣೆಗೆ ಕೊಂಡೊಯ್ಯಲಾಯಿತು, ಆ ವಿಚಾರಣೆಯು ಎರಡು ಹಂತಗಳಲ್ಲಿ (ಅಂದರೆ ಒಂದು ಯೆಹೂದಿ ಮತ್ತು ಇನ್ನೊಂದು ರೋಮನ್) ನಡೆಯುತ್ತದೆ. ಈ ಅಧ್ಯಾಯದ ಅಂತ್ಯದಲ್ಲಿ ಯೆಹೂದಿ ಹಿರೀಸಭೆಯು ಯೇಸು ಒಬ್ಬ ದೇವದೂಷನಾಗಿದ್ದಾನೆ, ಮರಣದಂಡನೆಗೆ ತಕ್ಕವನಾಗಿದ್ದಾನೆಂಬ ತೀರ್ಮಾನಕ್ಕೆ ಬರುತ್ತದೆ.

*ಪಸ್ಕದ ಮತ್ತು ಹುಳಿಯಿಲ್ಲದ ರೊಟ್ಟಿಯ ಹಬ್ಬ* (ವ. 1): ಕರ್ತನ ದೂತನು ಇಸ್ರಾಯೇಲ್ಯರ ಮನೆಗಳನ್ನು ಹಾದು ಹೋಗಿ ಐಗುಪ್ತದಲ್ಲಿನ ಎಲ್ಲಾ ಚೊಚ್ಚಲ ಮಕ್ಕಳನ್ನು ಸಂಹರಿಸುವ ರಾತ್ರಿಯನ್ನು ನೆನಪು ಮಾಡಿಕೊಳ್ಳುವುದಕ್ಕೋಸ್ಕರ ಪಸ್ಕಹಬ್ಬವನ್ನು ಆಚರಿಸಲಾಗುತ್ತಿತ್ತು (ನೋಡಿ ವಿಮೋಚನಕಾಂಡ 12:1). ಯೆಹೂದಿ ನಿಸಾನ್ ತಿಂಗಳಿನ 14 ನೇ ದಿನದಲ್ಲಿ ಊಟಕ್ಕಾಗಿ ಕುರಿಗಳನ್ನು ಕೊಯ್ದು (ಮಾರ್ಚ್-ಏಪ್ರಿಲ್ ನಲ್ಲಿ), ಅದೇ ರಾತ್ರಿಯಲ್ಲಿ ಊಟ ಮಾಡುತ್ತಿದ್ದರು. ಯೆಹೂದಿ ದಿನವು ಸೂರ್ಯೋದಯದಲ್ಲಿ

ಪ್ರಾರಂಭವಾಗುತ್ತಿತ್ತು. ಹಾಗೇ ಪಸ್ಕಹಬ್ಬದ ಊಟವು (ಭೋಜನವು) ನಿಸಾನ್ ತಿಂಗಳಿನ 15 ನೇ ದಿನದಲ್ಲಿ ನಡೆಯುತ್ತಿತ್ತು. ಹುಳಿಯಿಲ್ಲದ ರೊಟ್ಟಿಯ ಹಬ್ಬವು ಪಸ್ಕಹಬ್ಬದ ನಂತರ ಸುಮಾರು ಏಳು ದಿನಗಳವರೆಗೆ ನಡೆಯುತ್ತಿತ್ತು (ನೋಡಿ. ವಿಮೋ. 23:15).

*ಹಬ್ಬದಲ್ಲಿ ಹಿಡಿಯಬಾರದು, ಜನರಲ್ಲಿ ಗದ್ದಲವಾದೀತು* (ವ. 2): ಈ ಹಬ್ಬಗಳ ಸಂದರ್ಭದಲ್ಲಿ ಬಹುದೊಡ್ಡ ಸಂಖ್ಯೆ ಯಾತ್ರಿಗಳ ಗುಂಪು ಯೆರೂಸಲೇಮಿಗೆ ಬರುತ್ತಿತ್ತು ಮತ್ತು ಆಗ ಅಲ್ಲಿನ ಜನಸಂಖ್ಯೆ ಸುಮಾರು 50 ಸಾವಿರದಿಂದ ಅನೇಕ ಲಕ್ಷಗಳಿಗೆ ಏರುತ್ತಿತ್ತು. ಹಾಗಾಗಿ ಅಷ್ಟೊಂದು ಜನರಿರುವಾಗ ಯೇಸುವನ್ನು ಹಿಡಿಯುವುದು ಕ್ಲಿಷ್ಟಕರವಾಗಿತ್ತು.

*ಬೇಥಾನ್ಯ* (ವ. 3): 11:1 ರ ಟಿಪ್ಪಣಿಯನ್ನು ನೋಡಿರಿ.

*ಊಟಕ್ಕೆ ಕೂತಿದ್ದಾಗ* (ವ. 3): ಆ ದಿನಗಳಲ್ಲಿ ಅತಿಥಿಗಳು ಕೂತುಕೊಳ್ಳುತ್ತಿರಲಿಲ್ಲ, ಬದಲಾಗಿ ಭೋಜನದ ಮೇಜಿನ ಮೇಲೆ ಚಾಚಿ (ಒರಗಿ) ಕೊಂಡಿರುತ್ತಿದ್ದರು.

*ಕುಷ್ಠರೋಗಿಯಾದ ಸೀಮೋನ* (ವ. 3): ಸೀಮೋನ ಎಂಬ ಹೆಸರು ಯೆಹೂದ್ಯರಲ್ಲಿ ಸಾಮಾನ್ಯವಾಗಿತ್ತು. ಈ ಸೀಮೋನನನ್ನು ಇಲ್ಲಿ ಮತ್ತು ಮತ್ತಾಯದಲ್ಲಿ ಇದಕ್ಕೆ ಸಮಾನವಾದ ಕಥೆಯಲ್ಲಿ ಮಾತ್ರ (ಮತ್ತಾ. 26:6) ಕಾಣಬಹುದು. ಆತನು ತನ್ನ ಕುಷ್ಠರೋಗದಿಂದ ಗುಣಹೊಂದಿದ್ದಿರಬಹುದು ಅಥವಾ ಆತನಿಗೆ ತನ್ನ ಮನೆಯಲ್ಲಿ ಊಟಕ್ಕಾಗಿ ಯಾರನ್ನೂ ಆಮಂತ್ರಿಸುವ ಅನುಮತಿಯಿರಲಿಲ್ಲ. ಈತನು ಮಾರ್ಥ, ಮರಿಯಳು ಮತ್ತು ಲಾಜರನ ತಂದೆಯಾಗಿರಬಹುದು ಅಥವಾ ಮಾರ್ಥಳ ಗಂಡನೂ ಆಗಿದ್ದಿರಬಹದು.

*ಒಬ್ಬ ಸ್ತ್ರೀಯು* (ವ. 3): ಯೋಹಾನನು ತನ್ನ ಸುವಾರ್ತೆಯ 12 ನೇ ಅಧ್ಯಾಯದಲ್ಲಿ ಇದೇ ಘಟನೆಯನ್ನು ಪುನಃ ತಿಳಿಸುತ್ತಾನೆ. ಅಲ್ಲಿ ಆತನು ಈ ಸ್ತ್ರೀಯು ಮಾರ್ಥ ಮತ್ತು ಲಾಜರನ ಸಹೋದರಿಯಾಗಿದ್ದಳೆಂಬುದಾಗಿ ಹೇಳುತ್ತಾನೆ (ಯೋಹಾನ 12:3)

*ಅಚ್ಚ ಜಟಾಮಾಂಸಿ ತೈಲದ ಭರಣಿ* (ವ. 3): ಜಟಾಮಾಂಸಿ ತೈಲವು ತುಂಬಾ ಬೆಲೆಬಾಳುವ ಪರಿಮಳ ದ್ರವ್ಯವಾಗಿದ್ದು, ಇದನ್ನು ಮುಖ್ಯವಾಗಿ ಹಿಮಾಲಯಗಳಲ್ಲಿ ಬೆಳೆದಿರುವ ಒಂದು ಗಿಡದ ಬೇರು ಮತ್ತು ಕಾಂಡದಿಂದ ತಯಾರಿಸಲಾಗುತ್ತಿತ್ತು. ಪ್ಯಾಲೆಸ್ತೀನಿನಲ್ಲಿ ಇದನ್ನು ವಿಶೇಷ ಸಮಾರಂಭಗಳಲ್ಲಿ, ಉದಾಹರಣೆಗೆ ಗೌರವಾನ್ವಿತ ವ್ಯಕ್ತಿಗಳಿಗೆ ಅಭಿಷೇಕಿಸಲು ಬಳಸಲಾಗುತ್ತಿತ್ತು. ಹೆಚ್ಚಾಗಿ ಇದನ್ನು ಉದ್ದವಾದ ಕೆತ್ತಿರುವ ಒಂದು ಸಣ್ಣ ಭರಣಿಗಳಲ್ಲಿ ಹಾಕಿಡಲಾಗುತ್ತಿತ್ತು. ಭರಣಿಯನ್ನು ಪುನಃ ಮುಚ್ಚಲಾಗುತ್ತಿರಲಿಲ್ಲ, ಒಡೆದ ಕೂಡಲೇ ಉಪಯೋಗಿಸಬೇಕಾಗಿತ್ತು.

*ಮುನ್ನೂರು ಹಣ* (ವ. 4): ಒಂದು ಹಣ(ದೆನಾರಿ)ವು ಒಬ್ಬ ಕೂಲಿಯವನ ಒಂದು ದಿನದ ಕೂಲಿಗೆ ಸಮವಾಗಿತ್ತು. ಆ ಸ್ತ್ರೀಯು ಬಳಸಿದ ಈ ತೈಲವು ಬಹು ಬೆಲೆಯುಳ್ಳದ್ದೆಂಬುದನ್ನು ತೋರಿಸುತ್ತದೆ.

*ಬಡವರಿಗೆ ಕೊಡಬಹುದಾಗಿತ್ತಲ್ಲಾ* (ವ. 4): ಪಸ್ಕಹಬ್ಬದ ಸಾಯಂಕಾಲ ಬಡವರಿಗೆ ಉಡುಗೊರೆಗಳನ್ನು ಕೊಡುವುದು ಒಂದು ಯೆಹೂದಿ ಸಂಪ್ರದಾಯಾಗಿತ್ತು (ಹೋಲಿಸಿ ಯೋಹಾನ 13:29).

*ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ* (ವ. 7): ಇಲ್ಲಿ ಯೇಸು ಬರೀ ವಾಸ್ತವಾಂಶವನ್ನು ಹೇಳುತ್ತಿದ್ದಾನೆಯೇ ವಿನಃ ಇಲ್ಲಿ ಆತನು ಬಡವರಿಗೆ ಕಾಳಜಿ ತೋರಿಸಬಾರದೆಂದರ್ಥವಲ್ಲ. ಮುಖ್ಯವಾಗಿ ಆತನು ಧರ್ಮೋಪದೇಶಕಾಂಡ 15:11 ಉಪಯೋಗಿಸುತ್ತಾನೆ. ಅದರಲ್ಲಿ ಇಸ್ರಾಯೇಲ್ಯರು ಬಡವರಿಗೆ ಮತ್ತು ನಿರ್ಗತಿಕರಿಗೆ ಉದಾರವಾಗಿ ಸಹಾಯ ಮಾಡಬೇಕೆಂಬುದಾಗಿದೆ.

*ನನ್ನ ಉತ್ತರ ಕ್ರಿಯೆಗೋಸ್ಕರ ನನ್ನ ದೇಹಕ್ಕೆ ತೈಲವನ್ನು ಹಚ್ಚಿದ್ದಾಳೆ* (ವ. 8): ಸಮಾಧಿ ಮಾಡುವುದಕ್ಕಿಂತ ಮುನ್ನ ಮೃತದೇಹವನ್ನು ಪರಿಮಳ ತೈಲಗಳನ್ನು ಹಚ್ಚಿ ಸಿದ್ಧಪಡಿಸುವುದು ಯೆಹೂದಿ ಪದ್ಧತಿಯಾಗಿತ್ತು.

*ಇಸ್ಕರಿಯೋತ ಯೂದನು* (ವ. 10): "ಇಸ್ಕರಿಯೋತ" ಎಂಬ ಆತನ ಅಡ್ಡ ಹೆಸರಿನ ಅರ್ಥ "ಕೆರಿಯೋತಿನವನು" ಎಂಬುದಾಗಿದೆ. ಬಹುಶಃ ಇದು ಯೆಹೂದದ ದಕ್ಷಿಣಕ್ಕಿರುವ ಕೆರಿಯೋತ್ ಹೆಜ್ರೋನ್ ಪಟ್ಟಣವನ್ನು ಸೂಚಿಸುತ್ತಿರಬಹುದು.

*ಹಣ* (ವ. 11): ಇದಕ್ಕೆ ಸಮನಾರ್ಥಕವಾಗಿ ಮತ್ತಾಯನ ಸುವಾರ್ತೆಯಲ್ಲಿ ಕಂಡುಬರುವ ವಾಕ್ಯಭಾಗದಿಂದ ಒಪ್ಪಿಕೊಂಡ ಹಣವು "ಮೂವತ್ತು ಬೆಳ್ಳಿಯ ನಾಣ್ಯ" ಗಳಾಗಿತ್ತು ಎಂಬುದನ್ನು ನಾವು ತಿಳಿದಿದ್ದೇವೆ (ಮತ್ತಾಯ 6:12).

*ಸಿದ್ಧ ಮಾಡಬೇಕು* (ವ. 12): ಸಿದ್ಧತೆಯೆಂದರೆ ಪಸ್ಕಹಬ್ಬದ ಕೂಟಕ್ಕಾಗಿ ಬೇಕಾದ ಆಹಾರವನ್ನು ತರುವುದು, ಇದು ಹುಳಿಯಿಲ್ಲದ ರೊಟ್ಟಿ, ದ್ರಾಕ್ಷಾರಸ, ಕಹಿಯಾದ ಗಿಡಮೂಲಿಕೆಗಳು ಮತ್ತು ಒಂದು ಕುರಿಯನ್ನು ಒಳಗೊಂಡಿತ್ತು.

*ತನ್ನ ಶಿಷ್ಯರಲ್ಲಿ ಇಬ್ಬರನ್ನು* (ವ. 13): ಆ ಶಿಷ್ಯರು ಪೇತ್ರ ಮತ್ತು ಯೋಹಾನ ಎಂಬುದಾಗಿ ಲೂಕನು ಹೇಳುತ್ತಾನೆ (ಲೂಕ 22:11).

*ಬೋಧಕನು ಕೇಳುತ್ತಾನೆ* (ವ. 14): ಯೆರೂಸಲೇಮಿನ ಯಾರಲ್ಲಾದರೂ ಕೋಣೆಯು ಲಭ್ಯವಿದ್ದರೆ ಅದನ್ನು ಪಸ್ಕಹಬ್ಬದ ಭೋಜನವನ್ನು ಆಚರಿಸುವುದಕ್ಕಾಗಿ ಅದನ್ನು ಯಾತ್ರಿಗಳಿಗೆ ಕೊಡುವುದು ಒಂದು ಯೆಹೂದಿ ಸಂಪ್ರದಾಯವಾಗಿತ್ತು. ಹಾಗಾಗಿ ಯೇಸು ಆ ಮನೆ ಯಜಮಾನನೊಂದಿಗೆ ಮೊದಲೇ ಸಿದ್ಧತೆ ಮಾಡಿಕೊಂಡಿರಬೇಕು.

*ಸಂಜೆಯಾದಾಗ* (ವ. 17): ಇದು ಶ್ರಮೆವಾರದ ಗುರುವಾರದ ದಿನವಾಗಿತ್ತು.

*ನನ್ನ ಸಂಗಡ ಬಟ್ಟಲಲ್ಲಿ ಕೈ ಅದ್ದುವವನೇ* (ವ. 20): ಒಂದು ರೊಟ್ಟಿಯ ತುಂಡನ್ನು ಅಥವಾ ರೊಟ್ಟಿಯಿಂದ ಸುತ್ತಲ್ಪಟ್ಟ ಒಂದು ಮಾಂಸದ ತುಂಡನ್ನು ಮೇಜಿನ ಮೇಲೆ ಇಟ್ಟಿರುವ ಬೇಯಿಸಿದ ಹಣ್ಣುಗಳಿಂದ ಮಾಡಿದ ಮಸಾಲೆಯ ಪಾತ್ರೆಯೊಳಗೆ ಅದ್ದಿ ತಿನ್ನುವುದು ಆ ದಿನಗಳಲ್ಲಿ ಒಂದು ಪದ್ಧತಿಯಾಗಿತ್ತು.

*ಮನುಷ್ಯ ಕುಮಾರನು ಹೊರಟು ಹೋಗುತ್ತಾನೆ ಸರಿ ಹಾಗೆ ಆತನ ವಿಷಯಯವಾಗಿ ಬರೆದದೆಯಲ್ಲ ... ಅವನ ಗತಿಯನ್ನು ಏನು ಹೇಳಲಿ* (ವ. 21): ಯೇಸು ಯೆಶಾಯ 53 ನೇ ಅಧ್ಯಾಯದಲ್ಲಿನ ಪ್ರವಾದನೆಯನ್ನು ಸೂಚಿಸಿರಬಹುದು ಹಾಗಾಗಿ ಯೂದನ ಕಾರ್ಯದ ಹಿಂದೆ ದೇವರ ಯೋಜನೆ ಸಾಗಿ ಬಂದಿದೆ. ಆದರೆ ಹಿಡುಕೊಡುವವನ ಗತಿಯ ಕುರಿತು ಯೇಸು ಹೇಳಿದ ಮಾತು ತನ್ನ ಈ ದುಷ್ಟಕಾರ್ಯದಲ್ಲಿ ಯೂದನಿಗೆ ವೈಯಕ್ತಿಕವಾದ ಒಂದು ಜವಾಬ್ಧಾರಿ ಇತ್ತೆಂಬುದನ್ನು ಇದು ತೋರಿಸುತ್ತದೆ.

*ರೊಟ್ಟಿಯನ್ನು ತೆಗೆದುಕೊಂಡು ಮುರಿದು ಅವರಿಗೆ ಕೊಟ್ಟು* (ವ. 22): ಯೇಸು ತೆಗೆದುಕೊಂಡ ರೊಟ್ಟಿಯು ಪಸ್ಕಹಬ್ಬದ ಊಟದ ವೇಳೆ ತಿನ್ನುವ ಹುಳಿಯಲ್ಲದ ರೊಟ್ಟಿಯಾಗಿತ್ತು. ಈ ರೊಟ್ಟಿಯು ಯೇಸುವಿನ ದೇಹವನ್ನು, ನೆಲೆಗೊಳ್ಳುವ ಆತನ ಪ್ರಸನ್ನತೆಯನ್ನು ಸೂಚಿಸುತ್ತದೆ. ಯಾವಾಗ ಮತ್ತು ಎಲ್ಲೆಲ್ಲಿ ತನ್ನ ಜನರು ಕರ್ತನ ಭೋಜನವನ್ನು ಆಚರಿಸುತ್ತಾರೋ ಅಲ್ಲೆಲ್ಲಾ ನಿಜವಾಗಿ ತಾನೂ ಇರುತ್ತೇನೆ ಎಂಬುದಾಗಿ ಯೇಸು ತಾನೂ ಶಿಲುಬೆಗೇರುವ ಹಿಂದಿನ ರಾತ್ರಿಯಲ್ಲಿ ತನ್ನ ಶಿಷ್ಯರಿಗೆ ವಾಗ್ದಾನ ಮಾಡುತ್ತಾನೆ. "ರೊಟ್ಟಿಯನ್ನು ಮುರಿಯುವುದು" ಎಂಬ ಯೆಹೂದಿ ಮಾತನ್ನು ಊಟವನ್ನು ಹಂಚಿಕೊಳ್ಳುವುದು, ಒಟ್ಟಾಗಿ ಊಟ ಮಾಡುವುದರ ಬಗ್ಗೆ ಬಳಸಲಾಗುತ್ತಿತ್ತು. ಹಾಗಾಗಿ ಯೇಸು ರೊಟ್ಟಿಯನ್ನು "ಮುರಿದ" ವಾಸ್ತವಾಂಶವನ್ನು ಅತಿಯಾಗಿ ಓದುವುದರ ಕುರಿತು ಎಚ್ಚರವಾಗಿರಬೇಕು. ಯೇಸುವಿನ ದೇಹವು ಶಿಲುಬೆಯ ಮೇಲೆ ಜಡಿಯಲ್ಪಟ್ಟಿದ್ದರೂ ಸಹ ಅದು ಮರಿಯಲ್ಪಟ್ಟಿಲ್ಲ ("ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮತ್ತ ಅವನು ಜಜ್ಜಲ್ಪಟ್ಟನು. ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು, ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು"). ಯೆಶಾಯ 53:5 ರ ಈ ಮಾತುಗಳನ್ನು ಬಹುಶಃ ಈ ರೀತಿಯಾಗಿ ಅರ್ಥೈಸಿಕೊಳ್ಳಬೇಕಾಗಿದೆ: ಯೇಸುವಿನ ಶಾರೀರಿಕ ಮತ್ತು ಮಾನಸಿಕ ಬಾಧೆಗಳು ಮತ್ತು ಶಿಲುಬೆಯ ಮೇಲಿನ ಆತನ ಮರಣವು ಆತನ ಜನರಿಗೆ ಶಾರೀರಿಕ ಸ್ವಸ್ಥತೆ ಮತ್ತು ಮಾನಸಿಕ ಶಾಂತಿಯನ್ನು ತರುತ್ತದೆ.

*ಪಾತ್ರೆಯನ್ನು ತೆಗೆದುಕೊಂಡು* (ವ. 23): ಇದು ಪಸ್ಕಹಬ್ಬದ ಊಟದಲ್ಲಿನ ಸುಮಾರು ಮೂರ್ನಾಲ್ಕು ಲೋಟ ದ್ರಾಕ್ಷಾರಸವಾಗಿತ್ತು. ಈ ಪಾತ್ರೆಯಲ್ಲಿನ ದ್ರಾಕ್ಷಾರಸವನ್ನು ("ಆಶೀರ್ವಾದದ ಪಾತ್ರೆ" ಅಥವಾ "ಬಿಡುಗಡೆಯ ಪಾತ್ರೆ" ಎಂಬುದಾಗಿ ಕರೆಯುವರು, ವಿಮೋ. 6:6 ರಲ್ಲಿನ ದೇವರ ವಾಗ್ದಾನದೊಂದಿಗೆ ಹೋಲಿಸಿ) ಊಟವಾದ ನಂತರ ಕುಡಿಯಲಾಗುತ್ತಿತ್ತು. ಯೇಸು ಪಾತ್ರೆಯನ್ನು ತೆಗೆದುಕೊಂಡು ಅದನ್ನು ತನ್ನ ಶಿಷ್ಯರಿಗೆ ಕುಡಿಯಲು ಕೊಟ್ಟಾಗ, ಆ ದ್ರಾಕ್ಷಾರಸವು ಶಿಲುಬೆ ಮೇಲೆ ಆತನು ಸುರಿಸಲಿರುವ ಆತನ ರಕ್ತವನ್ನು ಸೂಚಿಸುತ್ತಿತ್ತು.

*ಒಡಂಬಡಿಕೆಯ ರಕ್ತ, ಇದು ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ* (ವ. 24): "ಒಡಂಬಡಿಕೆಯ ರಕ್ತ" ಎಂಬ ಹೇಳಿಕೆಯು ವಿಮೋಚನಕಾಂಡ 24:8 ನ್ನು ಪ್ರತಿಧ್ವನಿಸುತ್ತದೆ ("ಆಗ ಮೋಶೆ ರಕ್ತವನ್ನು ತೆಗೆದುಕೊಂಡು ಜನರ ಮೇಲೆ ಚಿಮುಕಿಸಿ ಇಗೋ ಈ ಗ್ರಂಥದಲ್ಲಿ ಹೇಳಿರುವ ಎಲ್ಲಾ ಆಜ್ಞೆಗಳ ಪ್ರಕಾರ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತವು ಇದೇ ಅಂದನು"). ಹಾಗಾಗಿ ಯೇಸು ತನ್ನ ಶಿಷ್ಯರಿಗೆ ಕುಡಿಯಲು ಕೊಟ್ಟ ಪಾನ ಪಾತ್ರೆಯು (ದ್ರಾಕ್ಷಾರಸ) ಯಜ್ಞದ ಮತ್ತು ಒಡಂಬಡಿಕೆಯ ಹಿನ್ನಲೆಯಲ್ಲಿ ಇಟ್ಟಿರುವಂತದ್ದಾಗಿದೆ. ಒಡಂಬಡಿಕೆಯು ನಮಗಾಗಿನ ದೇವರ ಪ್ರೀತಿ ಮತ್ತು ಆತನಿಗೆ ವಿಧೇಯಪೂರ್ವಕವಾಗಿ ತೋರುವ ನಮ್ಮ ಪ್ರತಿಕ್ರಿಯೆಯ ಸಂಬಂಧವನ್ನು ಸೂಚಿಸುತ್ತದೆ. ಈ ಸಂಬಂಧವನ್ನು ಯೇಸುಕ್ರಿಸ್ತನ ರಕ್ತದಿಂದ ಅಸ್ತಿತ್ವಕ್ಕೆ ಬಂದಿದೆ. ಯೇಸುವಿನ ಮರಣವು ದೇವರು ಮತ್ತು ಆತನ ಜನರ ನಡುವೆ ಒಂದು ಹೊಸ ಒಡಂಬಡಿಕೆಯನ್ನು, ಒಂದು ಹೊಸ ಸಂಬಂಧವನ್ನು, ಯೆರೆಮೀಯನು ಪ್ರವಾದಿಸಿದಂತೆ ಒಂದು ಹೊಸ ಯುಗವನ್ನು ಉದ್ಘಾಟಿಸಿತು (ಯೆರೆಮೀಯ 31:31-34). ಮರುದಿನವೇ ಯೇಸುವಿನ ಮರಣದೊಂದಿಗೆ ಶಿಲುಬೆಯ ಮೇಲೆ ಸುರಿಸಲ್ಪಡುವ ರಕ್ತವೇ ಒಡಂಬಡಿಕೆಯನ್ನು ಸ್ಥಾಪಿಸುವ ರಕ್ತವಾಗಿದ್ದು ಇದು "ಬಹುಜನರಿಗೋಸ್ಕರ", ಎಲ್ಲಾ ಮನುಷ್ಯರಿಗೋಸ್ಕರ ಸುರಿಸಲ್ಪಡಬೇಕಾಗಿತ್ತು (ಹೋಲಿಸಿ, 53:12, ಇಲ್ಲಿ "ಬಹುಜನ" ಎಂಬ ಪದವಿದೆ. ಹೋಲಿಸಿ ರೋಮಾ 5:15).

ದೇವರ ರಾಜ್ಯದಲ್ಲಿ ದ್ರಾಕ್ಷಾರಸವನ್ನು ಹೊಸದಾಗಿ ಕುಡಿಯುವ ದಿನದವರೆಗೂ (ವ. 25): ದೇವರ ರಾಜ್ಯ ಪೂರ್ಣವಾಗಿ ಬರುವವರೆಗೂ ಮತ್ತು "ಮೆಸ್ಸೀಯನ ಭೋಜನ" ದವರೆಗೂ ಇದು ತನ್ನ ಶಿಷ್ಯರೊಂದಿಗಿನ ಕೊನೆಯ ಹಬ್ಬದ ಭೋಜನವಾಗಿರುವುದೆಂಬುದಾಗಿ ಯೇಸು ಹೇಳುತ್ತಾನೆ (ಹೋಲಿಸಿ ಯೆಶಾಯ 23:6, ಮತ್ತಾ. 8:11, ಲೂಕ 22:29-30, ಲೂಕ 14:15 ಮತ್ತು ಪ್ರಕ. 19:6-9).

*ಕೀರ್ತನೆ ಹಾಡಿ* (ವ. 26): ಯೆಹೂದಿ ಪಸ್ಕಹಬ್ಬದ ಊಟವು ಹಲ್ಲೆಲೂಯ ಕೀರ್ತನೆಗಳ ಎರಡನೇ ಗುಂಪನ್ನು ಹಾಡುವುದರೊಂದಿಗೆ ಮುಕ್ತಾಯವಾಗುತ್ತದೆ (ಕೀರ್ತನೆ 115-118).

ವಚನ 27: ಯೇಸು ಜಕರ್ಯ 13:17 ನ್ನು ಉಪಯೋಗಿಸಿ, ಇದನ್ನು ತನ್ನನ್ನು ಹಿಡಿದುಕೊಡುವಾಗ ಶಿಷ್ಯರುಗಳು ಚದುರಿಹೋಗುವರೆಂಬುದರ ಕುರಿತ ಪ್ರವಾದನೆಯಂತೆ ವ್ಯಾಖ್ಯಾನಿಸುತ್ತಾನೆ.

*ಗೆತ್ಸೇಮನೆ* (ವ. 32): ಈ ತೋಟದ ಹೆಸರು ಅರಾಮಿಕ್ ಮೂಲದ್ದಾಗಿದೆ. ಇದರರ್ಥ "ಗಾಣ" (ಎಣ್ಣೆಯನ್ನು ತೆಗೆಯುವ ಸ್ಥಳ) ಎಂದಾಗಿದೆ. ಬಹುಶಃ ಇದು ಎಣ್ಣೇಮರಗಳ ಗುಡ್ಡದ ತಗ್ಗಾದ ಇಳಿಜಾರುಗಳ ಮೇಲೆ ಇದ್ದಿರಬಹುದು (ಪಸ್ಕದ ಊಟವಾದ ನಂತರ ಯೇಸು ಮತ್ತು ಆತನ ಶಿಷ್ಯರು ಇಲ್ಲಿಗೇ ಹೋದರು ವ. 26).

*ಅಪ್ಪಾ* (ವ. 36): ಇದು "ತಂದೆ" ಗಾಗಿ ಇರುವ ಒಂದು ಅರಾಮಿಕ್ ಪದವಾಗಿದೆ. ಇದು ಅನ್ಯೋನ್ಯತೆಯನ್ನು ವ್ಯಕ್ತಪಡಿಸುತ್ತದೆ.

*ಈ ಪಾತ್ರೆಯನ್ನು* (ವ. 36): "ಪಾತ್ರೆ" ಎಂಬುದು ದೇವರ ಕೋಪ, ಶಿಕ್ಷೆ ಮತ್ತು ನ್ಯಾಯತೀರ್ಪಿಗಾಗಿ ಇರುವ ಹಳೇ ಒಡಂಬಡಿಕೆಯ ಒಂದು ಸಾಮಾನ್ಯವಾದ ರೂಪಾಲಂಕಾರವಾಗಿದೆ (ಉದಾ: ನೋಡಿ ಯೆಶಾಯ 51:7, ಯೆರೆಮೀಯ 25:15-18, ಹೋಲಿಸಿ ಪ್ರಕ. 14:10, 16:19). ಇಲ್ಲಿ ಯೇಸು ಅದನ್ನು ತನ್ನ ಬಾಧೆ ಮತ್ತು ಮರಣದ ಕುರಿತು ಉಪಯೋಗಿಸುತ್ತಾನೆ.

*ಸಿಮೋನನೇ* (ವ. 37): ಇದು ಪೇತ್ರನ ಯೆಹೂದಿ ಹೆಸರಾಗಿತ್ತು.

*ಶೋಧನೆಗೆ ಒಳಗಾಗದಂತೆ* (ವ. 28): ಶಿಷ್ಯರು ಮುಂದೆ ಬೆದರಿಕೆಯ ಪರಿಸ್ಥಿತಿಗಳನ್ನು ಎದುರಿಸುವಾಗ ಅಪನಂಬಿಗಸ್ತರಾಗುವ ಶೋಧನೆಗೆ ಒಳಗಾಗಬಹುದಿತ್ತು.

*ಮನಸ್ಸು ಸಿದ್ಧವಾಗಿದೆ* (ವ. 38): ಯೇಸು ಈ ಹೇಳಿಕೆಯನ್ನು, ದಾವೀದನು ದೇವರ ಬಳಿ ನನ್ನಲ್ಲಿ ಸಿದ್ಧಮನಸ್ಸನ್ನು ಹುಟ್ಟಿಸಿ ನನಗೆ ಆಧಾರನಾಗು ಎಂದು ಬೇಡಿಕೊಳ್ಳುವ ಕೀರ್ತನೆ 51:12 ರಿಂದ ತೆಗೆದುಕೊಂಡಿದ್ದಾನೆ.

*ಒಂದು ಗುಂಪು ಕತ್ತಿ ದೊಣ್ಣೆಗಳನ್ನು ಹಿಡುಕೊಂಡು* (ವ. 43): ಈ ಜನರು ದೇವಾಲಯದ ಸ್ಥಳದಾಚೆ ಸಾರ್ವಜನಿಕ ಆದೇಶವನ್ನು ಪಾಲಿಸುವದಕ್ಕಾಗಿ ಪೋಲಿಸರಿಂದ ಅಥವಾ ನ್ಯಾಯಾಲಯ(ಹಿರಿಸಭೆ)ದಿಂದ ನೇಮಿಸಲ್ಪಟ್ಟವರಾಗಿದ್ದಾರೆ. ಈ ಗುಂಪು ರೋಮನ್ ಸೈನಿಕರು ಮತ್ತು ದೇವಾಲಯವನ್ನು ಕಾಯುವ ಅಧಿಕಾರಿಗಳನ್ನು ಒಳಗೊಂಡಿತ್ತು ಎಂಬುದಾಗಿ ಯೋಹಾನನ ಸುವಾರ್ತೆಯಲ್ಲಿನ ವಾಕ್ಯಭಾಗವು ತಿಳಿಸುತ್ತದೆ (ಯೋಹಾನ 18:3).

*ಗುರುವೇ (ರಬ್ಬಿ)* (ವ. 45): ಈ ಇಬ್ರಿಯ ಪದದ ಅರ್ಥ "ಬೋಧಕ".

*ಆತನಿಗೆ ಮುದ್ದಿಡಲು* (ವ. 45): ವಾಡಿಕೆಯಂತೆ ಶಿಷ್ಯರು ತಮ್ಮ ಗುರುವನ್ನು ಮುದ್ದಿಟ್ಟು ವಂದಿಸುತ್ತಿದ್ದರು. ಹಾಗಾಗಿ ಯೂದನು ಯೇಸುವನ್ನು ಆತನನ್ನು ಹಿಡುಕೊಡುವವರಿಗೆ ಪೂರ್ವಸಿದ್ಧತೆಯ ರೀತಿಯಲ್ಲಿ ಗುರುತಿಸಿಕೊಟ್ಟದ್ದು, ಅದೊಂದು ನಂಬಿಕೆ ದ್ರೋಹದ ಕಾರ್ಯವೆಂಬುದಾಗಿ ಶಂಕಿಸಲಾಗದಂತಿತ್ತು. ಯೂದನು ಯೇಸುವನ್ನು ಬಂಧಿಸಲು ತನ್ನೊಂದಿಗೆ ಬಂದ ಜನರ ಗುಂಪು ತಪ್ಪಾದ ವ್ಯಕ್ತಿಯನ್ನು ಹಿಡಿಯದಂತೆ ಭರವಸೆ ಕೊಡಬೇಕಾಗಿತ್ತು.

*ಹತ್ತಿರ ನಿಂತಿದ್ದವರಲ್ಲಿ ಒಬ್ಬನು* (ವ. 47): ಈ ವ್ಯಕ್ತಿಯು ಪೇತ್ರನೆಂಬುದಾಗಿ ಯೋಹಾನನ ಸುವಾರ್ತೆಯು ತಿಳಿಸುತ್ತದೆ (ಯೋಹಾನ 18:10).

*ಮಹಾಯಾಜಕನ ಆಳನ್ನು* (ವ. 47): ಈ ಆಳಿನ ಹೆಸರು 'ಮಲ್ಕನು' ಎಂಬುದಾಗಿ ಯೋಹಾನನ ಸುವಾರ್ತೆ ತಿಳಿಸುತ್ತದೆ (ಯೋಹಾನ 18:10). ಮತ್ತಾಯನಿಂದ ನಾವು ಯೇಸು ಪೇತ್ರನನ್ನು ಗದರಿಸಿದ್ದನ್ನು ತಿಳಿದರೆ (ಮತ್ತಾ. 26:52) ಲೂಕನಿಂದ ಆತನು ಆ ಆಳನ್ನು ಗುಣಪಡಿಸಿದ್ದನು ತಿಳಿಯುತ್ತೇವೆ (ಲೂಕ 22:51).

*ಶಾಸ್ತ್ರವಚನಗಳು ನೆರವೇರುವಂತೆ* (ವ. 49): ಕೆಲ ತಾಸುಗಳ ಹಿಂದೆ ತನ್ನ ಶಿಷ್ಯರಿಗೆ ಹೇಳಿದ ಜಕರ್ಯ 13:7 ನ್ನು ಯೇಸು ಯೋಚಿಸುತ್ತಿದ್ದಿರಬಹುದು (ವ. 27 ನ್ನು ನೋಡಿ, ವಚನ 50 ನ್ನು ಹೋಲಿಸಿ). ಅಥವಾ ಬಹುಶಃ ಯೆಶಾಯ 53 ನೇ ಅಧ್ಯಾಯವನ್ನು ಯೋಚಿಸುತ್ತಿದ್ದಿರಬೇಕು.

*ಒಬ್ಬಾನೊಬ್ಬ ಯೌವನಸ್ಥನು* (ವ. 51): ಈ ಘಟನೆಯನ್ನು ಉಳಿದ ಸುವಾರ್ತೆಗಳಲ್ಲಿ ಕಾಣಲಾಗುವುದಿಲ್ಲ. ಮಾರ್ಕನಿಗೆ ಅವನನ್ನು ಗುರುತಿಸಲಾಗಲಿಲ್ಲ, ಆದರೆ ಆತನು ಮಾರ್ಕನ ಸುವಾರ್ತೆಯನ್ನು ಬರೆದ ಯೋಹಾನನೆನಿಸಿಕೊಳ್ಳುವ ಮಾರ್ಕನಾಗಿದ್ದಾನೆಂಬುದಾಗಿ ಸಭಾ ಸಂಪ್ರದಾಯವು ಹೇಳುತ್ತದೆ.

*ಮಹಾಯಾಜಕ* (ವ. 53): ಆ ಸಮಯದಲ್ಲಿನ ಮಹಾಯಾಜಕನು ರೋಮನ್ನರಿಂದ ನೇಮಿಸಲ್ಪಟ್ಟ ಕಾಯಿಫನಾಗಿದ್ದನು. ಈತನು ಕ್ರಿ.ಶ 15 ರಲ್ಲಿ ರೋಮನ್ನರಿಂದ ತನ್ನ ಕೆಲಸದಿಂದ ತೆಗೆದುಹಾಕಲ್ಪಟ್ಟ ಮಾಜಿ ಮಹಾಯಾಜಕನಾದ ಅನ್ನನ ಅಳಿಯನಾಗಿದ್ದನು.

*ಮಹಾಯಾಜಕರು, ಹಿರಿಯರು, ಶಾಸ್ತ್ರಿಗಳು ಕೂಡಿಬಂದರು* (ವ. 53): ಹೀಗೆ ಯೇಸುವನ್ನು ಯೆಹೂದಿ ಹಿರೀಸಭೆಯ (ಮಂಡಳಿಯ) ಮುಂದೆ ಪರೀಕ್ಷಿಸಲಾಯಿತು.

*ಮಹಾಯಾಜಕನ ಮಠದ ಅಂಗಳ* (ವ. 54): ಹಿರೀಸಭೆಯವರು ಒಂದು ಮಾರುಕಟ್ಟೆಯ ಸಭಾಂಗಣಗಳಲ್ಲಿ ಸಭೆ ಸೇರುತ್ತಿದ್ದರು. ಹಾಗೆಯೇ ಈ ಸಂದರ್ಭದಲ್ಲಿ ಅವರು ಗೌಪ್ಯತೆಯನ್ನು ಬಯಸಿದ ನಿಮಿತ್ತ ಕಾಯಿಫನ ಅಂಗಳವನ್ನು ಬಳಸಿರಬೇಕು.

*ಅವರ ಸಾಕ್ಷಿ ಒಂದಕ್ಕೊಂದು ಸರಿ ಬೀಳಲಿಲ್ಲ* (ವ. 56, 57, 58 ನ್ನು ಹೋಲಿಸಿ): ಯೆಹೂದಿ ಶಾಸ್ತ್ರದ ಪ್ರಕಾರ ಒಬ್ಬ ವ್ಯಕ್ತಿಗೆ ಮರಣಶಿಕ್ಷೆಯನ್ನು ವಿಧಿಸುವುದಕ್ಕೆ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಸಾಕ್ಷಿಗಳು ಬೇಕಾಗಿತ್ತು (ಧರ್ಮೋ. 17:6-7).

ವಚನ 58: ಸುಳ್ಳು ಸಾಕ್ಷಿ ಹೇಳುವವರು ಯೋಹಾನ 2:19-21 ರಲ್ಲಿ ದಾಖಲಿಸಲ್ಪಟ್ಟ ಯೇಸುವಿನ ಹೇಳಿಕೆಯನ್ನು ಸೂಚಿಸುತ್ತದೆ. ಅಲ್ಲಿ ಯೇಸು ತನ್ನ ದೇಹವೆಂಬ ದೇವಾಲಯದ ಕುರಿತು ಹೇಳಿದನೇ ಹೊರತು ಯೆರೂಸಲೇಮಿನ ದೇವಾಲಯದ ಬಗ್ಗೆಯಲ್ಲ. ಯೆರೂಸಲೇಮಿನ ದೇವಾಲಯದ ನಾಶನದ ಕುರಿತ ಯೇಸುವಿನ ಮುನ್ಸೂಚನೆಯೊಂದಿಗೆ ಹೋಲಿಸಿ (ಮಾರ್ಕ 13:1-2)

*ಆತನು ಸುಮ್ಮನಿದ್ದು ಏನೂ ಉತ್ತರ ಹೇಳಲಿಲ್ಲ* (ವ. 61): ಯೆಶಾಯ 53:7 ರೊಂದಿಗೆ ಹೋಲಿಸಿರಿ.

*ಭಗವಂತನ ಕುಮಾರನಾದ ಕ್ರಿಸ್ತನೋ ನೀನು?* (ವ. 61): ಯೆಹೂದ್ಯರು "ದೇವರು" ಎಂಬ ಪದದ ಬದಲು ಅನೇಕ ಪದಗಳನ್ನು ಬಳಸಿದರು. ಅಂಥ ಪದಗಳಲ್ಲಿ "ಭಗವಂತ" ಎಂಬುದೂ ಒಂದಾಗಿದೆ (ಇನ್ನೊಂದು ಸರ್ವಶಕ್ತ ವ. 62). "ಭಗವಂತನ ಕುಮಾರ" ಎಂಬುದು "ದೇವಕುಮಾರನಿಗೆ" ಸಮನಾರ್ಥಕವಾಗಿದೆ. ಇದು ಮೆಸ್ಸೀಯನ ಹೆಸರುಗಳಲ್ಲಿ ಒಂದಾಗಿದೆ. ಮೆಸ್ಸೀಯನು ದಾವೀದನ ಕುಲದಲ್ಲಿ ಹುಟ್ಟುವನು, ಆದರೆ ದೇವರಾಗಿರುವುದಿಲ್ಲ, ಹಾಗಾಗಿ ಯೇಸು ತಾನು ದೇವರೆಂಬುದಾಗಿ ಅಥವಾ ದೇವರಿಗೆ ಸಮಾನನಾಗಿರುವೆನೆಂಬುದಾಗಿ ಹೇಳಿದ್ದಾನೋ ಎಂದು ಮಹಾಯಾಜಕನು ಪ್ರಶ್ನಿಸಲಿಲ್ಲ.

*ಯೇಸು – "ನಾನೇ"* (ವ. 62): ಈ ಮಾತು ತಾನು ಯಾರೆಂಬುದು ದೇವರ ಪ್ರಕಟಣೆ ಮತ್ತು ಮೋಶೆಗೆ ಆತನು ತಿಳಿಸಿದ "ಇರುವಾತನೇ" ಆಗಿದ್ದೇನೆ ಎಂಬ ಹೆಸರನ್ನು ಪ್ರತಿಧ್ವನಿಸುತ್ತದೆ (ವಿಮೋ. 3:14). ಮತ್ತು ಇದನ್ನು ತಾನು ದೇವರಾಗಿದ್ದಾನೆಂಬುದಾಗಿ ಹೇಳುವ ಮಾತೆಂದು ಅರ್ಥೈಸಿಕೊಳ್ಳಲಾಗಿದೆ, ಇದನ್ನು ಯೆಹೂದ್ಯರು ದೇವದೂಷಣೆಯೆಂಬುದಾಗಿ ಪರಿಗಣಿಸಿದರು.

*ಮನುಷ್ಯಕುಮಾರನು* (ವ. 62): ಟಿಪ್ಪಣಿ 2:10 ನ್ನು ನೋಡಿ.

ವಚನ 62: ಯೇಸು ಹಳೇ ಒಡಂಬಡಿಕೆಯ ಎರಡು ಮೆಸ್ಸೀಯನ ಕುರಿತ ಪಠ್ಯ(ವಚನ)ಗಳಾದ ಕೀರ್ತನೆ 110:1 (ದೇವರೊಂದಿಗೆ ಸಿಂಹಾಸೀನನಾಗುವುದು) ಮತ್ತು ದಾನಿಯೇಲ 7:13 (ತನ್ನ ಬರೋಣದ ಕುರಿತು)ಗಳನ್ನು ಉಪಯೋಗಿಸಿ ತನ್ನ ಗುರುತನ್ನು ಪ್ರಕಟಿಸುವುದನ್ನು ಮುಂದುವರಿಸುತ್ತಾನೆ. ಆ ಮೂಲಕ ಯೇಸು ತಾನೇ ಮೆಸ್ಸೀಯನೆಂಬುದನ್ನು ಮುಕ್ತವಾಗಿ ಹೇಳಿದನು, ಆದರೆ ಆತನಿದನ್ನು ಈ ರೀತಿಯಲ್ಲಿ ಹೇಳಿದರೂ, ಅದನ್ನೂ ಸಹ ದೇವದ್ರೋಹವೆಂಬುದಾಗಿ ಪರಿಗಣಿಸಲಾಯಿತು. "ಬಲಗಡೆಯಲ್ಲಿ ಆಸೀನನಾಗುವುದೆಂದರೆ" ಗೌರವದ ಸ್ಥಾನ ಕೊಡಲ್ಪಡುವುದಾಗಿದೆ (ಹೋಲಿಸಿ 12:36 ಮತ್ತು 16:19).

*ತನ್ನ ಅಂಗಿಗಳನ್ನು ಹರಕೊಂಡು* (ವ. 63): ಇದು ಅತಿಯಾದ ದುಃಖ ಅಥವಾ ಅಚ್ಚರಿ(ದಿಗ್ಭ್ರಮೆ)ಯನ್ನು ವ್ಯಕ್ತಪಡಿಸುವ ಒಂದು ಸಾಂಕೇತಿಕ ಲಕ್ಷಣವಾಗಿದೆ. ಇಲ್ಲಿ ತನ್ನ ಅಭಿಪ್ರಾಯದಲ್ಲಿ ಯೇಸುವು ದೇವದ್ರೋಹದ ಪಾಪವನ್ನು ಮಾಡಿದ್ದಾನೆಂಬುದನ್ನು ಮಹಾಯಾಜಕನು ತೋರ್ಪಡಿಸುತ್ತಾನೆ.

*ದೂಷಣೆ* (ವ. 64): ವಚನ 62 ರ ಟಿಪ್ಪಣಿಯನ್ನು ನೋಡಿರಿ. ದೇವದೂಷಣೆಗೆ ಕೊಡುವ ಶಿಕ್ಷೆ ಕಲ್ಲೆಸೆದು ಕೊಲ್ಲುವುದಾಗಿತ್ತು (ಯಾಜಕಕಾಂಡ 24:16).

ವಚನ. 65: ಯೆಶಾಯ 50:6 ರೊಂದಿಗೆ ಹೋಲಿಸಿ.

*ಪ್ರವಾದನೆ ಹೇಳು!* (ವ. 65): ಅವರು, ಯೇಸು ತನ್ನನ್ನು ಹೊಡೆದವರು ಯಾರೆಂಬುದನ್ನು ಹೇಳಬೇಕು ಮತ್ತು ಆ ಮೂಲಕ ಆತನ ಮೆಸ್ಸೀಯನ ಕುರಿತ ಹೇಳಿಕೆಯನ್ನು ಪರಿಹಾಸ್ಯ ಮಾಡಬೇಕೆಂದು ಬಯಸಿದರು.

*ನಜರೇತ್* (ವ. 67): ***ಐಗುಪ್ತಕ್ಕೆ ಪಲಾಯನ ಮತ್ತು ನಜರೇತಿಗೆ ಹಿಂದಿರುಗಿದ್ದು*** ಎಂಬ ಅಧ್ಯಯನದಲ್ಲಿ ಮತ್ತಾ. 2:22-23 ರ ಟಿಪ್ಪಣಿ ನೋಡಿರಿ.

*ಗಲಿಲಾಯದವನಷ್ಟೆ* (ವ. 70): ಅವರಲ್ಲೊಬ್ಬನು ಪೇತ್ರನು ಗಲಿಲಾಯದವನೆಂಬುದಾಗಿ ಹೇಳುತ್ತಾನೆ. ಅಂಗಳದಲ್ಲಿ ಯೂದಾಯದ ಜನರು ಪೇತ್ರನು ಯೇಸುವಿನ ಶಿಷ್ಯನೇ ಆಗಿರಬೇಕೆಂಬುದಾಗಿ ಯೋಚಿಸಿದರು.

*ಮೂರು ಸಾರಿ ನನ್ನ ವಿಷಯವಾಗಿ ಅವನನ್ನು ಅರಿಯೆನೆಂಬುದಾಗಿ ಹೇಳುವಿ ... ಎಂದು ಯೇಸು ತನಗೆ ಹೇಳಿದ ಮಾತನ್ನು* (ವ. 72): ವಚನ 30 ನ್ನು ನೋಡಿ.

**ಪ್ರಶ್ನೆಗಳು**

1. ವರ್ಷದ ಯಾವ ಅವಧಿಯಲ್ಲಿ ಈ ಅಧ್ಯಾಯದಲ್ಲಿನ ಘಟನೆಗಳು ಜರುಗಿದವು (ವ. 1 ಮತ್ತು ಟಿಪ್ಪಣಿ)?
2. ಹಬ್ಬದ ವೇಳೆ ಯೇಸುವನ್ನು ಹಿಡಿಯಲು ಯೆಹೂದಿ ನಾಯಕರು ಯಾಕೆ ಹೆದರಿದರು (ವ. 1-2)?
3. ಯೇಸು ಬೇಥಾನ್ಯದಲ್ಲಿ ಏನು ಮಾಡುತ್ತಿದ್ದನು (ವ. 3)?
4. ಆ ಸ್ತ್ರೀಯು ಜಟಾಮಾಂಸಿ ತೈಲದ ಭರಣಿಯನ್ನು ಏನು ಮಾಡಿದಳು (ವ. 4-5)?
5. ಆ ಸ್ತ್ರೀ ಮಾಡಿದ್ದನ್ನು ಕಂಡು ಅಲ್ಲಿದ್ದವರಲ್ಲಿ ಕೆಲವರು ಯಾಕೆ ಬೇಸರಗೊಂಡರು ( ವ. 4-5)?
6. ಆ ಸ್ತ್ರೀಯ ಸ್ವಭಾವವನ್ನು ಯೇಸು ಹೇಗೆ ಮೌಲ್ಯಮಾಪನ ಮಾಡುತ್ತಾನೆ ( ವ. 5-8)?
7. ಯೇಸುವಿನ ಪ್ರಕಾರ ಈ ಸ್ತ್ರೀಯನ್ನು ಹೇಗೆ ನೆನೆಸಲಾಗುತ್ತದೆ (ವ. 9)?
8. ಯಾಕೆ ಇಸ್ಕರಿಯೋತ ಯೂದನು ಮಹಾಯಾಜಕನ ಬಳಿಗೆ ಹೋದನು ಮತ್ತು ಅವರೊಂದಿಗೆ ಆತನು ಯಾವ ಒಪ್ಪಂದವನ್ನು ಮಾಡಿಕೊಂಡನು (ವ. 10-11)?
9. ಯೇಸು ಮತ್ತು ಆತನ ಶಿಷ್ಯರು ಪಸ್ಕಹಬ್ಬದ ಭೋಜನವನ್ನು ಎಲ್ಲಿ ಆಚರಿಸಿದರು (ವ. 12-16)?
10. ಯಾಕೆ ಶಿಷ್ಯರು ದುಃಖಿತರಾದರು (ವ. 17-19)?
11. ತನ್ನನ್ನು ಹಿಡುಕೊಡುವವನ ಗುರುತಿಗಾಗಿ ಯೇಸು ಕೊಟ್ಟ ಮೂರು ಸುಳಿವುಗಳಾವುವು (ವ. 17-21)?
12. ರೊಟ್ಟಿಯ ಬಗ್ಗೆ ಯೇಸು ಏನನ್ನುತ್ತಾನೆ (ವ. 22)?
13. ಪಾತ್ರೆಯ ಬಗ್ಗೆ ಯೇಸು ಏನನ್ನುತ್ತಾನೆ (ವ. 23-24)?
14. ವಚನ 24 ನ್ನು ಕನ್ನಡದ ಪವಿತ್ರಗ್ರಂಥ ಮತ್ತು ಸತ್ಯವೇದ ಭಾಷಾಂತರಗಳಲ್ಲಿ ಹೋಲಿಸಿರಿ. ಯಾವ ವ್ಯತ್ಯಾಸವನ್ನು ನೀವು ಕಾಣಿವಿರಿ?
15. ಭವಿಷ್ಯದ ಬಗ್ಗೆ ಯೇಸು ಏನನ್ನುತ್ತಾನೆ (ವ. 25)?
16. ಊಟವಾದ ನಂತರ ಯೇಸು ಮತ್ತು ಆತನ ಶಿಷ್ಯರು ಎಲ್ಲಿಗೆ ಹೋಗುತ್ತಾರೆ (ವ. 28)?
17. ತನ್ನನ್ನು ಹಿಡಿಯುವಾಗ ತನ್ನ ಶಿಷ್ಯರಿಗೆ ಏನಾಗುತ್ತದೆಂದು ಯೇಸು ಹೇಳುತ್ತಾನೆ (ವ. 27)?
18. ತನ್ನ ಪುನರುತ್ಥಾನದ ನಂತರ ಶಿಷ್ಯರನ್ನು ತಾನು ಎಲ್ಲಿ ಭೇಟಿಯಾಗುವೆನೆಂಬುದಾಗಿ ಯೇಸು ಹೇಳುತ್ತಾನೆ (ವ. 28)?
19. ಆ ರಾತ್ರಿ ಪೇತ್ರನು ಏನು ಮಾಡುವನೆಂಬುದಾಗಿ ಯೇಸು ಹೇಳುತ್ತಾನೆ (ವ. 29-31)?

20. ಎಲ್ಲಾ ಶಿಷ್ಯರು ಯೇಸುವಿಗೆ ಏನೆಂದು ಭರವಸೆಕೊಟ್ಟರು (ವ. 29-31)?
21. ಯಾಕೆ ಯೇಸು ಗೆತ್ಸೇಮನೆ ತೋಟಕ್ಕೆ ಹೋದನು (ವ. 32)?
22. ಪೇತ್ರ, ಯಾಕೋಬ ಮತ್ತು ಯೋಹಾನರೊಂದಿಗೆ ಹೋಗುತ್ತಿರುವಾಗ ಯೇಸು ಯಾವ ರೀತಿಯ ಭಾವನೆಗೆ ಒಳಗಾದನು (ವ. 32-34)?
23. ತಾನು ಪ್ರಾರ್ಥಿಸುವಾಗ ಶಿಷ್ಯರಿಗೆ ಏನನ್ನು ಮಾಡಬೇಕೆಂದು ಯೇಸು ಹೇಳಿದನು (ವ. 34)?
24. ಯೇಸು ಏನೆಂದು ಪ್ರಾರ್ಥಿಸಿದನು (ವ. 35-36)?
25. ಯೇಸು ಪ್ರಾರ್ಥಿಸುವಾಗ ಆತನ ಮೂವರು ಶಿಷ್ಯರಿಗೇನಾಯಿತು (ವ. 37)?
26. ಒಂದೇ ಸಂಗತಿ ಎಷ್ಟು ಬಾರಿ ಸಂಭವಿಸುತ್ತದೆ (ವ. 37-41)?
27. ಯೇಸು ತನಗೆ ಏನಾಗುತ್ತದೆಂಬುದಾಗಿ ಹೇಳುತ್ತಾನೆ (ವ. 41-42)?
28. ಯೇಸುವನ್ನು ಹಿಡಿಯಲು ಬಂದವರಿಗೆ ಇಸ್ಕರಿಯೋತ ಯೂದನು ಆತನನ್ನು ಹೇಗೆ ಗುರುತಿಸಿಕೊಟ್ಟನು (ವ. 43-46)?
29. ತನ್ನ ಬಂಧನದ ಬಗ್ಗೆ ಯೇಸು ಏನೆಂದು ಆರೋಪಿಸುತ್ತಾನೆ (ದೂರುತ್ತಾನೆ) (ವ. 48-49)?
30. ಯೇಸುವನ್ನು ಬಂಧಿಸುವಾಗ ಶಿಷ್ಯರು ಏನು ಮಾಡುತ್ತಾರೆ (ವ. 50)?
31. ಬಂಧನದ ವೇಳೆ ಯೌವನಸ್ಥನು ಏನು ಮಾಡುತ್ತಾನೆ (ವ. 51-52)?
32. ಬಂಧಿಸಿದ ನಂತರ ಯೇಸುವನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಾರೆ (ವ. 53-54)?
33. ಯೇಸು ಯೆಹೂದಿ ಹಿರೀಸಭೆ(ಮಂಡಲಿ)ಯಿಂದ ವಿಚಾರಣೆಗೊಳಗಾಗುವಾಗ ಪೇತ್ರನು ಎಲ್ಲಿದ್ದನು (ವ. 53-55)?
34. ಯೇಸುವನ್ನು ಮರಣದಂಡನೆಗೆ ಒಪ್ಪಿಸಲು ಪ್ರಯತ್ನಿಸಿದಾಗ ಯೆಹೂದ ಸಭೆಯವರು ಎದುರಿಸಿದ ಸಮಸ್ಯೆಗಳಾವುವು (ವ. 55-59)?
35. ತನ್ನ ವಿರುದ್ಧವಾದ ದೂಷಣೆಗಳಿಗೆ (ಆರೋಪಗಳಿಗೆ) ಯೇಸು ಹೇಗೆ ಪ್ರತಿಕ್ರಯಿಸುತ್ತಾನೆ (ವ. 60-61)?
36. ತಾನು ಯಾರೆಂಬುದರ ಕುರಿತ ಮಹಾಯಾಜಕನ ಪ್ರಶ್ನೆಗೆ ಯೇಸು ಹೇಗೆ ಉತ್ತರಿಸುತ್ತಾನೆ (ವ. 61-62)?
37. ಯಾಕೆ ಯೆಹೂದಿ ಮಹಾಸಭೆಯವರು ಯೇಸು ಮರಣದಂಡನೆ ಹೊಂದತಕ್ಕವನೆಂದು ತೀರ್ಪುಕೊಡುತ್ತಾರೆ (ವ. 61-64)?
38. ಯಾವ ರೀತಿಯಲ್ಲಿ ಕೆಲವು ದೂಷಕರು ಯೇಸುವಿಗೆ ಪರಿಹಾಸ್ಯ ಮಾಡುತ್ತಾರೆ (ವ. 65)?
39. ಒಬ್ಬ ದಾಸಿಯು ಪೇತ್ರನನ್ನು ಮೊದಲು ಏನೆಂದು ದೂರುತ್ತಾಳೆ ಮತ್ತು ಆತನು ಅದಕ್ಕೆ ಹೇಗೆ ಪ್ರತಿಕ್ರಯಿಸುತ್ತಾನೆ (ವ. 67-68)?
40. ಸ್ವಲ್ಪ ಸಮಯದ ನಂತರ ಆ ದಾಸಿಯು ಏನು ಮಾಡುತ್ತಾಳೆ ಮತ್ತು ಅದಕ್ಕೆ ಪೇತ್ರನು ಹೇಗೆ ಪ್ರತಿಕ್ರಯಿಸುತ್ತಾನೆ (ವ. 68-70)?
41. ಪೇತ್ರನು ಗಲಿಲಾಯದವನಾಗಿರುವದರಿಂದ, ಅಲ್ಲಿ ನಿಂತವರು ಇವನು ಯೇಸುವಿನ ಹಿಂಬಾಲಕರಲ್ಲೊಬ್ಬನೆಂಬುದಾಗಿ ಹೇಳಿದಾಗ ಪೇತ್ರನು ಹೇಗೆ ಪ್ರತಿಕ್ರಯಿಸಿದನು (ವ. 70-71)?
42. ಎರಡನೆಯ ಬಾರಿ ಕೋಳಿ ಕೂಗಿದ್ದನ್ನು ಕೇಳಿಸಿಕೊಂಡಾಗ ಪೇತ್ರನು ಏನನ್ನು ನೆನಪುಮಾಡಿಕೊಂಡನು ಮತ್ತು ಆಗ ಏನು ಮಾಡಿದನು (ವ. 72)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಜಟಾಮಾಂಸಿ ತೈಲದ ಭರಣಿಯನ್ನು ತಂದ ಸ್ತ್ರೀಯ ಕುರಿತಾದ ಕಥೆಯನ್ನು (ವ. 3-9) ನಿಮ್ಮ ಮಾತಿನಲ್ಲಿ ಹೇಳಿರಿ. ಸತ್ಯವೇದವನ್ನು ನೋಡಬೇಡಿ.

2. ಜಟಾಮಾಂಸಿ ತೈಲದೊಂದಿಗಿನ ಸ್ತ್ರೀಯ ಕುರಿತ ಯೇಸುವಿನ ಮೌಲ್ಯಮಾಪನವನ್ನು ನೀವು ಒಪ್ಪುತ್ತೀರಾ (ವ. 3-9)? ಯಾಕೆ – ಯಾಕೆ ಒಪ್ಪಲ್ಲ?
3. ಯೇಸುವನ್ನು ಹಿಡುಕೊಡುವುದರ (ವಿಶ್ವಾಸಘಾತುಕತವಾದ) ಎರಡು ಅಂಶಗಳನ್ನು ವಿವರಿಸಿರಿ. ದೇವರ ಉದ್ದೇಶ ನೆರವೇರಬೇಕಾಗಿದ್ದು ಮತ್ತು ಈ ಕಾರ್ಯಕ್ಕಾಗಿ ಇಸ್ಕರಿಯೋತ ಯೂದನ ಜವಾಬ್ದಾರಿ (ಪ್ರತಿಕ್ರಿಯೆ) (ವ. 17-21).
4. ಕರ್ತನ ಭೋಜನದ ಕುರಿತ ಹೊಸ ಒಡಂಬಡಿಕೆಯ ನಾಲ್ಕು ವಾಕ್ಯಭಾಗಗಳನ್ನು ಓದಿರಿ ಮತ್ತು ಹೋಲಿಸಿರಿ (ಮತ್ತಾ. 26:26-29, ಮಾರ್ಕ 14:22-25, ಲೂಕ 22:14-20, 1 ಕೊರಿಂಥ 11:23-26). ನಿಮ್ಮ ಅನಿಸಿಕೆಗಳನ್ನು ಪಟ್ಟಿಮಾಡಿರಿ.
5. ಕರ್ತನ ಭೋಜನದ (ಎರಡು ವಸ್ತು) ಅಂಶಗಳ (ರೊಟ್ಟಿ ಮತ್ತು ದ್ರಾಕ್ಷಾರಸ (ಪಾತ್ರೆ) ಮಹತ್ವ ಅಥವಾ ಅರ್ಥವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 22-25)?
6. ಯೇಸುವಿನ "ಸಾಕು" ಎಂಬ ಕೂಗಾಟವನ್ನು (ಮಾತನ್ನು) ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 41)?
7. ಗೆತ್ಸೇಮನೆಯಲ್ಲಿದ್ದ ಯೇಸು ಮತ್ತು ಆತನ ಶಿಷ್ಯರ ಕುರಿತ ಕಥೆಯನ್ನು ನೀವು ನಿಮ್ಮದೇ ಮಾತಿನಲ್ಲಿ ಹೇಳಿರಿ, ಸತ್ಯವೇದ ನೋಡಬೇಡಿ. ನಿಮ್ಮ ಕಥೆಯು ಕೇಳುವವರ ಹೃದಯ ಸ್ಪರ್ಶಿಸುವಷ್ಟು ಉತ್ಸಾಹಭರಿತವಾಗಿರಿ.
8. ಗೆತ್ಸೇಮನೆಯಲ್ಲಿ ಯೇಸುವನ್ನು ಬಂಧಿಸಿದ್ದರ ಕುರಿತ ಕಥೆಯನ್ನು ನಿಮ್ಮದೇ ಮಾತಿನಲ್ಲಿ ಹೇಳಿರಿ (ವ. 43-52). ಸತ್ಯವೇದ ನೋಡಬೇಡಿ. ನಿಮ್ಮ ಕಥೆಯು ಉತ್ಸಾಹಭರಿತವಾಗಿ ಮತ್ತು ಆಸಕ್ತಿಕರವಾಗಿರಲಿ.
9. ಯೆಹೂದಿ ಮಂಡಳಿ(ಹಿರೀಸಭೆ)ಯು ಯೇಸುವನ್ನು ವಿಚಾರಣೆ ಮಾಡುವ ವೇಳೆ ಏನಾಯಿತೆಂಬುದನ್ನು ವಿವರಿಸಿರಿ (ವ. 53-85).
10. ಮಹಾಯಾಜಕನ ಅರಮನೆಯ ಅಂಗಳದಲ್ಲಿ ಪೇತ್ರನು ಯೇಸುವನ್ನು ಅಲ್ಲಗಳೆಯುವುದರ ಕುರಿತಾದ ಕಥೆಯನ್ನು (ವ. 54, 66-72) ನಿಮ್ಮದೇ ಮಾತಿನಲ್ಲಿ ಹೇಳಿರಿ. ಸತ್ಯವೇದ ನೋಡಬೇಡಿ. ನಿಮ್ಮ ಕಥೆಯು ಉತ್ಸಾಹಕರವಾಗಿ ಮತ್ತು ಆಸಕ್ತಕರವಾಗಿರಲಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಅಚ್ಚ ಜಟಾಮಾಂಸಿ ತೈಲದೊಂದಿಗಿನ ಸ್ತ್ರೀಯ ಕಥೆಯನ್ನು ವಿಮರ್ಶಿಸಿರಿ (ವ. 3-9). ಯಾವ ರೀತಿಯಲ್ಲಿ ಆಕೆ ಇಂದಿನ ವಿಶ್ವಾಸಿಗಳಿಗೆ ಒಂದು ಮಾದರಿಯಾಗಿದ್ದಾಳೆ? ***ಯೇಸುವಿಗೆ ತೈಲ ಹಚ್ಚಿದ ಸ್ತ್ರೀ*** ಎಂಬ ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಲು ಈ ಅಧ್ಯಯನದಲ್ಲಿನ ಮಾಹಿತಿಗಳನ್ನು ಉಪಯೋಗಿಸಿರಿ.
2. ಕರ್ತನ ಭೋಜನದ ಕುರಿತ ಮಾರ್ಕನ ವಾಕ್ಯಭಾಗಗಳನ್ನು ವಿಮರ್ಶಿಸಿರಿ (ವ. 22-26). ಹಾಗೆಯೇ ಈ ವಾಕ್ಯಭಾಗವನ್ನು ಉಳಿದ ಮೂರು ಸಮಾನಾರ್ಥಕ ವಾಕ್ಯಭಾಗಗಳೊಂದಿಗೆ ಹೋಲಿಸಿರಿ (***ಆಲೋಚಿಸಿರಿ ಮತ್ತು ಚರ್ಚಿಸಿರಿ*** 4 ರ ಉತ್ತರ ನೋಡಿ), ಮತ್ತು ಈ ಅಧ್ಯಯನದಲ್ಲಿ ಅದಕ್ಕೆ ಹೋಲುವಂತ ಮಾಹಿತಿಗಳಿಗೆ ಹೋಗಿರಿ. ಅಂತಿಮವಾಗಿ ಸಭೆಯ ಒಂದು ಯೌವನಸ್ಥರ ಗುಂಪಿಗಾಗಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ. ಊಹೆಗಳಿಂದ ದೂರವಿರಿ. ಇದಕ್ಕೆ ***ಕರ್ತನ ಭೋಜನ*** ಎಂದು ಹೆಸರಿಡಿರಿ.
3. ಯೇಸು ಗೆತ್ಸೇಮನೆ ತೋಟದಲ್ಲಿರುವುದರ ಕುರಿತ ಕಥೆಯನ್ನು ವಿಮರ್ಶಿಸಿರಿ (ವ. 32-41):

   ಅ. ಮೊದಲನೆಯದಾಗಿ ಯೇಸುವಿನ ದೃಷ್ಟಿಕೋನದಿಂದ (ಆತನು ಪಟ್ಟ ಹೋರಾಟವೇನಾಗಿತ್ತು? ಆತನ ಭಾವನೆ ಹೇಗಿತ್ತು? ಹೋರಾಟದ ಸಂದರ್ಭದಲ್ಲಿ? ಕೊನೆಯಲ್ಲಿ?

   ಆ. ಮೂವರು ಶಿಷ್ಯರ ದೃಷ್ಟಿಕೋನದಿಂದ (ಅವರು ಕಂಡದ್ದೇನು? ಅವರು ತಿಳಿದುಕೊಂಡದ್ದೇನು? ಯಾಕೆ ಅವರು ನಿದ್ರೆ ಮಾಡಿದರು? ಅವರ ಭಾವನೆ ಹೇಗಿತ್ತು?

   ಇ. ಕೊನೆಯದಾಗಿ ಈ ಕಥೆಯ ಒಂದು ಅಂಶ(ಭಾವನೆ)ವನ್ನು ಸೆರೆಹಿಡಿದು ಒಂದು ಪದ್ಯ ಕವನವನ್ನು ಬರೆಯಿರಿ

.



**ಮಾರ್ಕ ಅಧ್ಯಾಯ 15**

**ಪೀಠಿಕೆ ಮತ್ತು ಟಿಪ್ಪಣಿಗಳು**

ಮಾರ್ಕನ 15 ನೇ ಅಧ್ಯಾಯವನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ಪಿಲಾತನ ಮುಂದೆ ಯೇಸು, ವ. 1-15
2. ಯೇಸುವಿಗೆ ಹಾಸ್ಯಮಾಡಿದ್ದು, ವ. 16-20
3. ಯೇಸುವನ್ನು ಶಿಲುಬೆಗೇರಿಸಿದ್ದು, ವ. 21-32
4. ಯೇಸು ಮರಣ ಹೊಂದಿದ್ದು, ವ. 33-41
5. ಯೇಸುವು ಹೂಣಲ್ಪಟ್ಟಿದ್ದು, 42-47

ಹಿಂದಿನ ಅಧ್ಯಾಯದಲ್ಲಿ ಯೇಸುವನ್ನು ಯೆಹೂದಿ ಹಿರೀಸಭೆಯ (ಮಂಡಳಿ) ಮುಂದೆ ವಿಚಾರಣೆಗೊಳಪಡಿಸಿ ದೇವದೂಷಣೆಯ ಆರೋಪ ಹೊರಿಸಲಾಯಿತು (ವ. 14:63-64). ಅನಂತರ ಆತನನ್ನು ಗಲ್ಲಿಗೇರಿಸುವುದಕ್ಕಾಗಿ ರೋಮನ್ ರಾಜ್ಯಪಾಲನಾದ ಪೊಂತ್ಯ ಪಿಲಾತನಿಗೆ ಅವರು ಒಪ್ಪಿಸುತ್ತಾರೆ (ವ. 1): ಆದರೆ ಪಿಲಾತನಿಗೆ ಈ ಕೇಸಿನಲ್ಲಿ ಪ್ರಾಮಾಣಿಕತೆಯು ಕಾಣುವುದಿಲ್ಲ ಮತ್ತು ಜನರು ಯೇಸುವನ್ನು ಬಿಟ್ಟುಕೊಡಬೇಕೆಂದು ಕೇಳಬಹುದೆಂಬುದಾಗಿ ನಿರೀಕ್ಷಿಸಿದನು. ಆದರೆ ಜನರು ಮಹಾಯಾಜಕರ ಒತ್ತಾಯದಿಂದ ಕೊಲೆಗಡುಕನಾದ ಬರಬ್ಬನನ್ನು ಬಿಟ್ಟುಕೊಡಬೇಕೆಂದು ಕೇಳಿಕೊಂಡರು (ವ. 6-14).

ಯೇಸುವಿನ ವಿಚಾರಣೆಯು ಎರಡು ಹಂತಗಳಲ್ಲಿ ಸಾಗುತ್ತದೆ. ಪ್ರತೀ ಹಂತವು ಮೂರು ಉಪಕಥೆಗಳನ್ನು ಒಳಗೊಂಡಿದೆ. ( ಎಲ್ಲಾ ಸುವಾರ್ತೆಗಳಲ್ಲಿ ದಾಖಲಾಗಿಲ್ಲ):

ಅ. ಮೂರು ಉಪಕಥೆಗಳಲ್ಲಿ ಯೆಹೂದಿ ವಿಚಾರಣೆ:

- ಮಾಜಿ ಮಹಾಯಾಜಕನಾದ ಅನ್ನನ ಮುಂದೆ ಪ್ರಾಥಮಿಕ ವಿಚಾರಣೆ, ಕೇವಲ ಯೋಹಾನನಿಂದ ತಿಳಿಸಲ್ಪಟ್ಟಿದೆ (18:12-14, 19-23).
- ಮಹಾಯಾಜಕನಾದ ಕಾಯಫ ಮತ್ತು ಹಿರೀಸಭೆಯ ಮುಂದೆ ವಿಚಾರಣೆ. ಇದು ಎಲ್ಲಾ ಸುವಾರ್ತೆಗಳಲ್ಲಿ ತಿಳಿಸಲ್ಪಟ್ಟಿದೆ (ಮಾರ್ಕ 14:57-65, ಮತ್ತಾ. 26:57-68, ಲೂಕ 22:54-65, ಯೋಹಾನ 18:24).
- ಮಹಾಮಂಡಳಿಯ ಕೊನೆಯ ವಿಚಾರಣೆ. (ಮಾರ್ಕ 15:1, ಮತ್ತಾ. 27:1, ಲೂಕ 22:66-71).

ಆ. ಮೂರು ಉಪಕಥೆಗಳಲ್ಲಿ ರೋಮನ್ ವಿಚಾರಣೆ:

- ರೋಮನ್ ರಾಜ್ಯಪಾಲನಾದ ಪಿಲಾತನ ಮುಂದೆ ವಿಚಾರಣೆ. ಎಲ್ಲಾ ಸುವಾರ್ತೆಗಳಲ್ಲಿ ತಿಳಿಸಲ್ಪಟ್ಟಿದೆ (ಮಾರ್ಕ15:2-5, ಮತ್ತಾ. 27:11-26, ಲೂಕ 23:1-5, ಯೋಹಾನ 18:28, 19:16).
- ಅರಸನಾದ ಹೆರೋದ ಅಂತಿಪನ ಮುಂದೆ ವಿಚಾರಣೆ, ಲೂಕನ ಸುವಾರ್ತೆಯಲ್ಲಿ ಮಾತ್ರ ತಿಳಿಸಲ್ಪಟ್ಟಿದೆ (23:6-12).
- ಪಿಲಾತನ ಮುಂದಿನ ವಿಚಾರಣೆ ಮುಂದುವರೆದು ಮುಕ್ತಾಯವಾಗುತ್ತದೆ (ಮಾರ್ಕ 15:6-15 ಮತ್ತು ಉಳಿದ ಸುವಾರ್ತೆಗಳು). ಮತ್ತಾಯ, ಮಾರ್ಕ ಮತ್ತು ಯೋಹಾನರು ಅರಸನಾದ ಹೆರೋದ ಅಂತಿಪನ ಮುಂದೆ ಯೇಸುವನ್ನು ವಿಚಾರಿಸಿದ ಕುರಿತು ಏನನ್ನು ಹೇಳಿಲ್ಲ. ಹಾಗೆಯೇ ಪಿಲಾತನ ಮುಂದಿನ ವಿಚಾರಣೆಯು ಈ ಮೂರು ಸುವಾರ್ತೆಗಳಲ್ಲಿ ನಿರಂತರವಾಗಿ ಸಾಗುವ ಕಥನವಾಗಿದೆ.

ಪಿಲಾತನು ಯೇಸುವನ್ನು ಅಪರಾಧಿಯನ್ನು ಕೊಲ್ಲುವಷ್ಟು ಕ್ರೂರವಾಗಿರುವ ಚಾಟಿಯಿಂದ ಹೊಡೆಯುವ ಶಿಕ್ಷೆಗೆ ಮತ್ತು ಶಿಲುಬೆಗೆ ಹಾಕಿಸುವುದಕ್ಕೆ ಒಪ್ಪಿಸಿಕೊಡುತ್ತಾನೆ. ಶಿಲುಬೆಗೆ ಹಾಕಲ್ಪಡುವುದು ಒಂದು ಅವಮಾನಕಾರಿ ಮರಣದಂಡನೆಯಾಗಿದ್ದು ರೋಮನ್ನರು

ಇದನ್ನು ಗಂಭೀರವಾದ ಅಪರಾಧಗಳನ್ನು ಮಾಡಿದ ಗುಲಾಮರಿಗೆ ಮತ್ತು ಅನ್ಯದೇಶದವರಿಗಾಗಿ ಮೀಸಲಿಟ್ಟಿದ್ದರು. ಯೇಸು ಶ್ರಮೆವಾರದ ಶುಕ್ರವಾರ ಮಧ್ಯಾಹ್ನ ಶಿಲುಬೆಯ ಮರಣ ಹೊಂದಿದನು. ಅದೇ ದಿನ ಸಂಜೆ ಆತನನ್ನು ಯೆಹೂದಿ ಹಿರೀಸಭೆಯವರಲ್ಲಿ ಘನವಂತನಾದ ಅರಿಮಥಾಯದ ಯೋಸೇಫನು ಒಂದು ಕಲ್ಲಿನ ಸಮಾಧಿಯಲ್ಲಿ ಹೂಣಿಡುತ್ತಾನೆ.

*ಬೆಳಗಾದ ಕೂಡಲೆ* (ವ. 1): ಇದು ಶ್ರಮೆವಾರದ ಶುಕ್ರವಾರವಾಗಿತ್ತು. ರೋಮನ್ ಅಧಿಕಾರಿಗಳಿಗೆ ಕೆಲಸಮಾಡಲು ಹಗಲು ಆಗಲೇ ಪ್ರಾರಂಭವಾಗಿತ್ತು.

*ಹಿರೀಸಭೆಯವರೆಲ್ಲರೂ ... ಪಿಲಾತನಿಗೆ ಒಪ್ಪಿಸಿದರು* (ವ. 1): ಯೆಹೂದಿ ಹಿರೀಸಭೆಯವರು ಯೇಸು ದೇವದೂಷಣೆಯ ಅಪರಾಧ ಮಾಡಿದ್ದಾನೆಂದು ಕಂಡುಕೊಳ್ಳುತ್ತಾರೆ (14:63-64). ಇದೊಂದು ಗಂಭೀರವಾದ ಅಪರಾಧವಾಗಿದ್ದು ಯೆಹೂದಿ ಶಾಸ್ತ್ರದ ಪ್ರಕಾರ ಮರಣದಂಡನೆಗೆ ನಡೆಸುತ್ತಿತ್ತು, ಆದರೆ ರೋಮನ್ ಅಧಿಕಾರದ ಪ್ರಕಾರವಲ್ಲ. ಹಾಗಾಗಿ ಯೆಹೂದಿ ಹಿರೀಸಭೆಯವರು ಪಿಲಾತನಿಗೆ ಯೇಸುವು ರೋಮನ್ ಸರ್ಕಾರಕ್ಕೆ ಒಂದು ಕಂಟಕವಾಗಿದ್ದಾನೆಂಬುದಾಗಿ (ದೇಶದವರ ಮನಸ್ಸನ್ನು ಕೆಡಿಸುತ್ತಾನೆ, ತೆರಿಗೆಯನ್ನು ವಿರೋಧಿಸುತ್ತಾನೆ, ಅರಸನಾಗಿದ್ದೇನೆಂದು ಹೇಳುತ್ತಾನೆ, ಲೂಕ. 23:1-2 ನ್ನು ನೋಡಿ) ಹೇಳಿದರು. ಮರಣದಂಡನೆಗೆ ಒಪ್ಪಿಸಲು ಯೆಹೂದಿ ಹಿರೀಸಭೆಗೆ ಹೊಸ ಒಡಂಬಡಿಕೆಯ ಸಮಯದಲ್ಲಿ ಅಧಿಕಾರವಿರಲಿಲ್ಲವೆನಿಸುತ್ತದೆ. (ಯೋಹಾನ 18:31 ರಲ್ಲಿ ಯೆಹೂದಿನಾಯಕರು ಪಿಲಾತನಿಗೆ "ಮರಣ ದಂಡನೆಯನ್ನು ವಿಧಿಸುವ ಅಧಿಕಾರವು ನಮಗಿಲ್ಲ ಅಂದರು" ಆದರೆ ಅ.ಕೃ. 7:57-59 ಯೆಹೂದಿ ಮಂಡಳಿ (ಸಭೆಯವರು) ಸ್ತೆಫನನನ್ನು ಕಲ್ಲೆಸೆದು ಕೊಲ್ಲುತ್ತಾರೆ. ಅಲ್ಲದೆ ಮರಣದಂಡನೆ ವಿಧಿಸುತ್ತಾರೆ). ದೂರು ಏನೇ ಆಗಿರಲಿ ತಮಗಿಂತಲೂ, ಜನಪ್ರಿಯವಲ್ಲದ ರೋಮನ್ ಅಧಿಕಾರಿಯು ಯೇಸುವಿನಂಥ ಜನಪ್ರಿಯ ವ್ಯಕ್ತಿಗೆ ಮರಣದಂಡನೆಯನ್ನು ವಿಧಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳುವುದು ಯೆಹೂದಿ ನಾಯಕರಿಗೆ ಸುರಕ್ಷಿತವಾದುದ್ದಾಗಿತ್ತು, ಅಲ್ಲದೆ ಇದು ಯೇಸು ಎಂತಹ ಮರಣವನ್ನು ಹೊಂದುವನೆಂಬ ಪ್ರವಾದನೆ ನೆರವೇರಿಕೆಯಾಗಿತ್ತೆಂದು ಯೋಹಾನನು (ಯೋಹಾನ 19:32) ಸೇರಿಸುತ್ತಾನೆ. (ಮರದ ಮೇಲೆ ಹೊರತು ಕಲ್ಲೆಸೆಯುವುದರಿಂದ ಅಲ್ಲ, ಹೋಲಿಸಿ ಯೋಹಾನ 12:32-34, ಧರ್ಮೋ 21:22-23).

*ಪಿಲಾತನು* (ವ. 1): ಪೊಂತ್ಯ ಪಿಲಾತನು ಕ್ರಿ.ಶ. 26-36 ರಲ್ಲಿ ಯೂದಾಯದ ರೋಮನ್ ರಾಜ್ಯಪಾಲ (ಗವರ್ನರ್) ಆಗಿದ್ದನು. ಈತನ ಮುಖ್ಯ ಕಛೇರಿಯು ಕೈಸರೈದಲ್ಲಿತ್ತು, ಆದರೆ ಆತನು ಪಸ್ಕಹಬ್ಬದ ಸಂಧರ್ಭದಲ್ಲಿ ಆದೇಶ ಪಾಲಿಸುವುದಕ್ಕಾಗಿ ಯೆರೂಸಲೇಮಿಗೆ ಬಂದಿದ್ದನು. ಪಿಲಾತನು ಯೆಹೂದಿ ನಾಯಕರೊಂದಿಗೆ ಅಷ್ಟು ಜನಪ್ರಿಯನಾಗಿರಲಿಲ್ಲ. ಈತನು ಕ್ರೂರ ವ್ಯಕ್ತಿಯಾಗಿದ್ದು ಸ್ಥಳೀಯ ಯೆಹೂದಿ ಧಾರ್ಮಿಕ ಭಾವನೆಗಳನ್ನು ಗೌರವಿಸುವವನಾಗಿರಲಿಲ್ಲ ಎಂಬುದಾಗಿ ಯೆಹೂದಿ ಇತಿಹಾಸಕಾರನಾದ ಜೋಸೆಫಸ್ಸನು ವರ್ಣಿಸುತ್ತಾನೆ.

*"ನೀನು ಯೆಹೂದ್ಯರ ಅರಸನು ಹೌದೋ?" ಆತನು "ನೀನೇ ಹೇಳಿದ್ದಿ" ಎಂದು ಉತ್ತರಕೊಟ್ಟನು* (ವ. 2): ನಾಲ್ಕು ಸುವಾರ್ತೆಗಳಲ್ಲೂ ಪಿಲಾತನು ಯೇಸುವಿನ ವಿಚಾರಣೆಯನ್ನು ಆತನ ಅರಸತ್ವದ ಕುರಿತ ಪ್ರಶ್ನೆಯೊಂದಿಗೆ ಪ್ರಾರಂಭಿಸುತ್ತಾನೆ (ನೋಡಿ ಯೋಹಾನ 18:33-38). ಯೇಸುವಿನ ಉತ್ತರವು ಅಸ್ಪಷ್ಟವಾಗಿದೆ: ಅದು "ಹೌದು" ಎಂದಾಗಬಹುದು ಅಥವಾ "ನೀನೆ ಹೇಳಿದ್ದೀ" ಎಂಬ ಅರ್ಥವನ್ನು ಸಹ ಕೊಡಬಹುದು. ಇದೇ ಸಂಧಿಗ್ಧತೆಯನ್ನು ಯೇಸು ಪ್ರತಿನಿಧಿಸುವ ರಾಜ್ಯದ ಕುರಿತು ಸಹ ಕಾಣಬಹುದು; ಅದು ಈ ಲೋಕದ ರಾಜ್ಯ ಅಥವಾ ಇದು ಬೇರೆ ರೀತಿಯ ರಾಜ್ಯ ( ನೋಡಿ ಯೋಹಾನ 18:36)?

*ಆತನ ಮೇಲೆ ತುಂಬಾ ದೂರು ಹೇಳುತ್ತಿದ್ದರು* (ವ. 3): ವಚನ 1 ರ ಟಿಪ್ಪಣಿ ನೋಡಿರಿ.

*ನೀನು ಏನೂ ಉತ್ತರಕೊಡುವುದಿಲ್ಲವೇ?* (ವ. 4): ರೋಮನ್ ಕಾನೂನಿನ ಪ್ರಕಾರ ದೂಷಣೆಗೊಳಗಾದ ವ್ಯಕ್ತಿಯು ತನ್ನ ಪರವಾಗಿ ಮಾತನಾಡಬೇಕಿತ್ತು.

*ಯೇಸು ಇನ್ನೇನೂ ಉತ್ತರ ಕೊಡಲಿಲ್ಲ* (ವ. 5): 14:61 ರ ಟಿಪ್ಪಣಿ ನೋಡಿರಿ.

*ಬರಬ್ಬ* (ವ. 7): ಸುವಾರ್ತೆಗಳಲ್ಲಿ ಈತನನ್ನು ದಂಗೆಗಾರ ಮತ್ತು ಕೊಲೆಗಾರನೆಂಬುದಾಗಿ ವರ್ಣಿಸಲಾಗಿದೆ. ಹಾಗಾಗಿ ಬಹುಶಃ ಈತನು ರೋಮನ್ ಸರ್ಕಾರವನ್ನು ಹಿಂಸಾತ್ಮಕವಾಗಿ ವಿರೋಧಿಸಿದ ಒಂದು ಯೆಹೂದಿ ಕ್ರಾಂತಿಕಾರಿ ಮತಾಂಧರ ಗುಂಪಿನ ಒಬ್ಬ ಸದಸ್ಯನಾಗಿದ್ದನು. ಪ್ಯಾಲೆಸ್ತೀನಿನಲ್ಲಿ ರೋಮನ್ ಆಳ್ವಿಕೆಗೆ ವಿರೋಧವಾಗಿ ಏಳುವುದು ಸಾಮಾನ್ಯವಾಗಿತ್ತು (ಹೋಲಿಸಿ 1:1).

*ಶಿಲುಬೆಗೆ ಹಾಕಿಸು* (ವ. 13): 8:34 ಮತ್ತು 10:33-34 ರ ಟಿಪ್ಪಣಿಯನ್ನು ನೋಡಿ.

*ಕೊರಡೆಗಳಿಂದ ಹೊಡಿಸಿ* (ವ. 15): ರೋಮನ್ನರು ತುದಿಯಲ್ಲಿ ಎಲುಬು ಮತ್ತು ಲೋಹದ ತುಂಡುಗಳನ್ನು ಸೇರಿಸಿ ಅನೇಕ ಚರ್ಮದ ಪಟ್ಟಿಗಳಿಂದ ಮಾಡಿದ ಬಾರುಕೋಲನ್ನು ಉಪಯೋಗಿಸುತ್ತಿದ್ದರು. ಅಪರಾಧಿಯನ್ನು ಸಾಯುವವರೆಗೂ ಹೊಡೆಯಲಾಗುತ್ತಿತ್ತು. ಯೆಹೂದಿ ಶಾಸ್ತ್ರವು ಹೊಡೆತವನ್ನು 40 ಪೆಟ್ಟುಗಳಿಗೆ ಸೀಮಿತಗೊಳಿಸಿತು (ಧರ್ಮೋ. 25:3). ಆದರೆ ಹೆಚ್ಚೆಂದರೆ 39 ಪೆಟ್ಟುಗಳನ್ನು ಪ್ರಯೋಗಿಸಲಾಗುತ್ತಿತ್ತು.

*ಅರಮನೆಗೆ* (ವ. 16): ಗ್ರೀಕ್ ಪಠ್ಯವು ರೋಮನ್ ಅಧಿಪತಿಯ ನಿವಾಸದ ಬಗ್ಗೆ "ಅರಮನೆ" ಮತ್ತು ಚಕ್ರವರ್ತಿಯ ವಾಸಸ್ಥಾನ ಎಂಬ ಎರಡು ಪದಗಳನ್ನು ಬಳಸುತ್ತಾರೆ. ನಿವಾಸವು ಅಧಿಪತಿಯು ಯೆರೂಸಲೇಮಿನಲ್ಲಿರುವಾಗ ಬಳಸುವ ಒಂದು ತಾತ್ಕಾಲಿಕ ಮುಖ್ಯ ಕೇಂದ್ರವಾಗಿತ್ತು. ಇದು ಬಹುಶಃ ಅರಸನಾದ ಹೆರೋದ ಮಹಾಶಯನ ಅರಮನೆಯಲ್ಲಿದ್ದಿರಬಹುದು.

*ಪಟಾಲಮು* (ವ. 17): ಹೊಸ ಒಡಂಬಡಿಕೆಯ ಸಮಯದಲ್ಲಿ ಯೆಹೂದದಲ್ಲಿ ಐದು ರೋಮನ್ ಪಟಾಲಮುಗಳು ಬೀಡುಬಿಟ್ಟಿದ್ದವು. ಪ್ರತಿಯೊಂದು ಪಟಾಲಮು ಸಹ 600 ಸೈನಿಕರನ್ನು ಒಳಗೊಂಡಿತ್ತು. ಒಂದು ಪಟಾಲಮನ್ನು ಯಾವಾಗಲೂ ಯೆರೂಸಲೇಮಿನಲ್ಲಿ ಇರಿಸಲಾಗಿತ್ತು. ಆದರೆ ಹಬ್ಬದ ಸಂದರ್ಭಗಳಲ್ಲಿ ಪಟ್ಟಣಕ್ಕೆ ಹೆಚ್ಚುವರಿ ಸೇನಾಪಡೆಗಳನ್ನು ಇರಿಸಲಾಗುತ್ತಿತ್ತು. ನೇಮಕಗೊಂಡ ಸೈನಿಕರೆಲ್ಲರೂ ಯೆಹೂದಿಗಳಾಗಿರಲಿಲ್ಲ.

*ಕೆಂಪು ಒಲ್ಲಿಯನ್ನು* (ವ. 17): ಇದು ಬಹುಶಃ ಕಡುಗೆಂಪು ಬಣ್ಣದ ಹಳೆಯ ಮಿಲಿಟರಿ ವಸ್ತ್ರವಾಗಿದ್ದಿರಬಹುದು.

*ಕುರೇನೆ* (ವ. 21): ಇದು ಉತ್ತರ ಆಫ್ರಿಕಾದ ಲಿಬಿಯಾದಲ್ಲಿನ ಒಂದು ಗ್ರೀಕ್ ಪಟ್ಟಣವಾಗಿತ್ತು. ಇದು ಒಂದು ರೋಮನ್ ಸಂಸ್ಥಾನದ ರಾಜಧಾನಿಯಾಗಿತ್ತು. ಅಲ್ಲಿ ಅನೇಕ ಯೆಹೂದ್ಯರು ವಾಸವಾಗಿದ್ದರು.

*ಅಲೆಕ್ಸಾಂದ್ರ ಮತ್ತು ರೂಫರ ತಂದೆಯಾದ ಸಿಮೋನನು* (ವ. 21): ಸಿಮೋನನು ಹೆಚ್ಚಾಗಿ ಯೆರೂಸಲೇಮಿಗೆ ಪಸ್ಕಹಬ್ಬವನ್ನು ಆಚರಿಸುವುದಕ್ಕಾಗಿ ಯಾತ್ರಿಯಾಗಿ ಬಂದ ಒಬ್ಬ ಯೆಹೂದಿಯಾಗಿರಬೇಕು. ಈತನ ಮಕ್ಕಳಾದ ಅಲೆಕ್ಸಾಂದ್ರ ಮತ್ತು ರೂಫರು ಗ್ರೀಕ್/ರೋಮನ್ ಹೆಸರುಗಳನ್ನು ಹೊಂದಿದ್ದಾರೆ.

*ಶಿಲುಬೆಯನ್ನು ಹೊರುವುದಕ್ಕೆ* (ವ. 21): ಮರಣದಂಡನೆಗೆ ಗುರಿಯಾದ ವ್ಯಕ್ತಿಯು ಶಿಲುಬೆಯನ್ನು ತನ್ನನ್ನು ಗಲ್ಲಿಗೇರಿಸುವ ಸ್ಥಳಕ್ಕೆ ಹೊತ್ತೊಯ್ಯಬೇಕಾಗಿತ್ತು.

*ಗೊಲ್ಗೊಥಾ* (ವ. 22): ಈ ಅರಾಮಿಕ್ ಹೆಸರಿನ ಅರ್ಥ "ಕಪಾಲ"/ತಲೆಬುರುಡೆ ಎಂಬುದಾಗಿದೆ. ಯೇಸು ಕ್ರಿಸ್ತನನ್ನು ಶಿಲುಬೆಗೇರಿಸಿದ ಸ್ಥಳವು ತಲೆಬುರುಡೆಯಂತೆ ಇರುವ ದಿಬ್ಬವಾಗಿತ್ತು ಎಂಬುದನ್ನು ಇದು ಸೂಚಿಸುತ್ತದೆ. ಕಲ್ವಾರಿ ಎಂಬ ಇಂಗ್ಲೀಷ್ ಹೆಸರು ಲ್ಯಾಟಿನ್ ಭಾಷಾಂತರದಿಂದ ಬಂದ "ಬೋಳಾದ ತಲೆಬುರುಡೆ" ಎಂಬ ಅರ್ಥವನ್ನು ಕೊಡುತ್ತದೆ.

*ರಕ್ತಬೋಳ ಬೆರೆಸಿದ ದ್ರಾಕ್ಷಾರಸ* (ವ. 23): ದೂಪದ್ರವ್ಯ ಮಿಶ್ರಿತ ದ್ರಾಕ್ಷಾರಸವನ್ನು ಒಂದು ನೋವುನಿವಾರಕವಾಗಿ ಉಪಯೋಗಿಸಲಾಗುತ್ತಿತ್ತೆಂಬುದಾಗಿ ಯೆಹೂದಿ ಸಾಹಿತ್ಯವು ತಿಳಿಸುತ್ತದೆ. ರಕ್ತಬೋಳವು ಅರೇಬಿಯ ಮತ್ತು ಆಫ್ರಿಕಾದ ಕೆಲ ಕಡೆಗಳಲ್ಲಿ ಕಂಡುಬರುವ ಒಂದು ಮರುಭೂಮಿಯ ಗಿಡದಿಂದ ಮಾಡಿದ ಒಂದು ಮಸಾಲೆಯಾಗಿದೆ.

*ಅವನನ್ನು ಶಿಲುಬೆಗೆ ಹಾಕಿ* (ವ. 24): ಅಪರಾಧಿಯ ಮಣಿಕಟ್ಟು ಮತ್ತು ಹಿಮ್ಮಡಿಯ ಮೂಳೆಗಳಲ್ಲಿ ಕಬ್ಬಿಣದ ಮೊಳೆಗಳನ್ನು ಹೊಡೆಯಲಾಗುತ್ತಿತ್ತು. ಸಿಸಿರೋ ಎಂಬ ಒಬ್ಬ ಪ್ರಸಿದ್ಧ ರೋಮನ್ ರಾಜಕಾರಣಿ ಮತ್ತು ಬರಹಗಾರನು, ಶಿಲುಬೆಗೇರಿಸುವಿಕೆಯು ಅತೀ ಕ್ರೂರ ಮತ್ತು ಭೀಕರವಾದ ಶಿಕ್ಷೆಯಾಗಿತ್ತೆಂಬುದಾಗಿ ಹೇಳುತ್ತಾನೆ. ಕೆಲವುಬಾರಿ ಅಪರಾಧಿಯು ಸಾಯಲು ದಿನಗಳೇ ಬೇಕಾಗಿತ್ತು. ಈ ಪ್ರಕ್ರಿಯೆಯನ್ನು ಶೀಘ್ರಗೊಳಿಸಲು ಅಪರಾಧಿಯ ಕಾಲುಗಳನ್ನು ಮುರಿದು, ಉಸಿರುಗಟ್ಟಿಸಿ ಕೊಲ್ಲಲಾಗುತ್ತಿತ್ತು (ಹೋಲಿಸಿ ಯೋಹಾನ 19:33).

*ಬಟ್ಟೆಗಳಲ್ಲಿ ಪಾಲುಮಾಡಿಕೊಂಡರು* (ವ. 24): ಮರಣದಂಡನೆ ಕೊಡುವ ತಂಡವು ಅಪರಾಧಿಯ ಮೈಮೇಲೆ ಕಡಿಮೆ ಬೆಲೆಯುಳ್ಳ ವಸ್ತುಗಳನ್ನು ಮಾತ್ರ ಇಟ್ಟುಕೊಳ್ಳಲು ಅನುಮತಿಸುತಿತ್ತು. ಯೇಸುವಿನ ಬಳಿ ಒಂದು ಒಳ ಉಡುಪು, ಒಂದು ಹೊರ ಉಡುಪು, ಒಂದು ಬೆಲ್ಟ್ (ಸೊಂಟದ ಪಟ್ಟಿ), ಚಪ್ಪಲಿ ಮತ್ತು ತಲೆಗೆ ಸುತ್ತುವ ವಸ್ತ್ರ ಮಾತ್ರ ಇದ್ದಿರಬಹುದು.

*ಚೀಟು ಹಾಕಿ* (ವ. 24): ಇದು ಕೀರ್ತನೆ 22:18 ರಲ್ಲಿನ ಪ್ರವಾದನೆಯ ನೆರವೇರಿಕೆಯಾಗಿತ್ತು (ನೋಡಿ ಯೋಹಾನ 19:23-24).

*ಹೊತ್ತಾರೆ ಒಂಬತ್ತು ಗಂಟೆ* (ವ. 25): ಯೋಹಾನನ ಸುವಾರ್ತೆಯಲ್ಲಿ ಸಮಯ ಸ್ವಲ್ಪ ಭಿನ್ನವಾಗಿ ತೋರುತ್ತದೆ (ಯೋಹಾನ 19:14).

*ಹೊರಿಸಿದ ಅಪರಾಧ* (ವ. 26): ಹೆಚ್ಚಾಗಿ ಅಪರಾಧಿಗೆ ಹೊರಿಸಿದ ಅಪರಾಧವನ್ನು ಒಂದು ಮರದ ಹಲಿಗೆಯಲ್ಲಿ ಬರೆದು ಆತನನ್ನು ಮರಣದಂಡನೆ ವಿಧಿಸುವ ಸ್ಥಳಕ್ಕೆ ಕರೆದೊಯ್ಯುವಾಗ ಆತನ ಮುಂದೆಯೇ ಅದನ್ನು ಕೊಂಡೊಯ್ಯಲಾಗುತ್ತಿತ್ತು. ಅನಂತರ ಆ ಹಲಿಗೆಯನ್ನು ಆತನ ತಲೆಯ ಮೇಲ್ಭಾಗದಲ್ಲಿ ಶಿಲುಬೆಗೆ ಹೊಡೆಯಲಾಗುತ್ತಿತ್ತು.

*ಇಬ್ಬರು ಕಳ್ಳರನ್ನು* (ವ. 27): ಗ್ರೀಕ್ ಪದದ ಅರ್ಥ "ಕಳ್ಳ" ಮತ್ತು "ದಂಗೆಕೋರ" ಎಂಬುದಾಗಿದೆ. ರೋಮನ್ ಕಾನೂನಿನ ಪ್ರಕಾರ ಕಳ್ಳತನವು ಮಹಾ ಅಪರಾಧವಾಗಿರಲಿಲ್ಲ.

ವಚನ 28: ಇದನ್ನು ಗ್ರೀಕಿನ ಮೂಲ ಹಸ್ತಪ್ರತಿಗಳಲ್ಲಿ ಕಾಣಲಾಗುವುದಿಲ್ಲ. ಹಾಗಾಗಿ ಇದನ್ನು ನಂತರದ ಹಂತಗಳಲ್ಲಿ ಲೂಕ 22:37 ರಿಂದ ಸೇರಿಸಿರಬಹುದು. ಇದು ಯೆಶಾಯ 5:12 ರಿಂದ ಒಂದು ಹೇಳಿಕೆಯನ್ನು ಒಳಗೊಂಡಿದೆ.

*ದೇವಾಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ* (ವ. 29): 14:58 ರ ಟಿಪ್ಪಣಿಯನ್ನು ನೋಡಿರಿ.

ವಚನ 34: ಯೇಸು 22 ನೇ ಕೀರ್ತನೆಯ ಮೊದಲ ವಚನದ ಒಂದು ಭಾಗವನ್ನು ಅರಾಮಿಕಿನಲ್ಲಿ ಬಳಸಲಿದ್ದಾನೆ. ಅರಾಮಿಕ್ ಯೇಸುವಿನ ಮಾತೃಭಾಷೆಯಾಗಿದ್ದಲ್ಲದೆ ಹೊಸ ಹೊಡಂಬಡಿಕೆಯ ಸಮಯದಲ್ಲಿ ಪ್ಯಾಲೆಸ್ತೀನಿನಲ್ಲಿನ ಒಂದು ಮುಖ್ಯ ಭಾಷೆಯಾಗಿತ್ತು. ತನ್ನ ಯೆಹೂದೇತರ ಓದುಗರ ಪ್ರಯೋಜನಕ್ಕಾಗಿ ಮಾರ್ಕನು ಯೇಸುವಿನ ಮಾತನ್ನು ಗ್ರೀಕಿಗೆ ಭಾಷಾಂತರಿಸುತ್ತಾನೆ.

*ಎಲೀಯನನ್ನು* (ವ. 35): ಪಕ್ಕದಲ್ಲಿ ನಿಂತಿದ್ದವರು ಯೇಸು ಎಲೀಯನನ್ನು ಕರೆಯುತ್ತಿದ್ದಾನೆಂಬುದಾಗಿ ಯೋಚಿಸಿದರು. ಎಲೀಯನು ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದ್ದಾನೆ ಮತ್ತು ನಿಷ್ಕಳಂಕರನ್ನು ರಕ್ಷಿಸಲು ಮತ್ತು ನೀತಿವಂತರನ್ನು ಬಿಡಿಸಲು ಆತನು ಬರುವನೆಂಬುದಾಗಿ ಅನೇಕರು ನಂಬಿದ್ದರು (ನೋಡಿ ವ. 36)

*ಹುಳಿರಸ* (ವ. 36): ಇದು ಆ ದಿನಗಳಲ್ಲಿ ಕೂಲಿಕೆಲಸಗಾರರ ಮತ್ತು ಸೈನಿಕರ ಒಂದು ಸಾಮಾನ್ಯ ಪಾನೀಯವಾಗಿತ್ತು.

*ದೇವಾಲಯದ ತೆರೆಯು* (ವ. 38): ಈ ಪರದೆಯು ಯೆರೂಸಲೇಮಿನ ದೇವಾಲಯದಲ್ಲಿನ ಪರಿಶುದ್ಧಸ್ಥಳವನ್ನು ಮಹಾಪರಿಶುದ್ಧಸ್ಥಳದಿಂದ ಪ್ರತ್ಯೇಕಿಸುತ್ತಿತ್ತು (ಹೋಲಿಸಿ ವಿಮೋಚನಕಾಂಡ 26:31-35). ಯೇಸು ಮರಣ ಹೊಂದುವಾಗ ಇದು

ಹರಿದು ಹೋಯಿತು. ಮನುಷ್ಯನು ದೇವರ ಸಾನಿಧ್ಯಕ್ಕೆ ಪ್ರವೇಶಿಸಲು ಇದೊಂದು ದಾರಿಯನ್ನು ತೆರೆಯಿತೆಂಬುದನ್ನು ಇದು ತೋರಿಸುತ್ತದೆ (ನೋಡಿ ಇಬ್ರಿಯ 10:19-20).

*ನಿಜವಾಗಿ ಈ ಮನುಷ್ಯನು ದೇವಕುಮಾರನಾಗಿದ್ದನು* (ವ. 39): ಯೆಹೂದ್ಯನಲ್ಲದ ಒಬ್ಬ ರೋಮನ್ ಅಧಿಕಾರಿಯ ಈ ಮಾತು ಯೇಸುವಿನ ಶ್ರಮೆಯ ಕುರಿತ ಮಾರ್ಕನ ಕಥೆಯಲ್ಲಿ ಕ್ಲೈಮಾಕ್ಸ್(ಪರಾಕಾಷ್ಠತೆ)ಯಾಗಿ ಪರಿಣಮಿಸುತ್ತದೆ. "ಮೆಸ್ಸೀಯನ ರಹಸ್ಯವು" (1:36 ರ ಟಿಪ್ಪಣಿ ನೋಡಿ, ಹೋಲಿಸಿ 5:43, 8:30, 9:9) ಶಿಲುಬೆಯಲ್ಲಿ ಪೂರ್ಣವಾಗಿ ಬಹಿರಂಗಗೊಂಡಿದೆ. "ಕ್ರಿಸ್ತನು ದೇವಕುಮಾರ"ನೆಂಬುದಾಗಿ (1:1) ಓದುಗರು ಮಾತ್ರ ಈಗ ಯೇಸುವಿನ ಗುರತನ್ನು ತಿಳಿದುಕೊಳ್ಳಬಲ್ಲರು.

*ಮಗ್ದಲದ ಮರಿಯ* (ವ. 40): ಯೇಸು ಈಕೆಯನ್ನು ಏಳು ದೆವ್ವಗಳಿಂದ ಬಿಡಿಸಿದ್ದನು (ನೋಡಿ 16:9, ಲೂಕ 8:2).

*ಚಿಕ್ಕ ಯಾಕೋಬ ಮತ್ತು ಯೋಸೆಯ ತಾಯಿಯಾದ ಮರಿಯ* (ವ. 40): ಈ ಮರಿಯ ಮತ್ತು ಆಕೆಯ ಮಕ್ಕಳ ಬಗ್ಗೆ ಹೆಚ್ಚು ಮಾಹಿತಿಯಿಲ್ಲ. ಬಹುಶಃ ಈಕೆಯು ಕ್ಲೋಪನ ಹೆಂಡತಿಯಾಗಿದ್ದಿರಬಹುದು (ಯೋಹಾನ 19:25 ರಲ್ಲಿ ತಿಳಿಸಿದಂತೆ). ಇವರ ಮಕ್ಕಳು ಆದಿಸಭೆಯಲ್ಲಿ ಚಿರಪರಿಚಿತರಾಗಿದ್ದರೇನೋ ಎಂಬಂತೆ ಮಾರ್ಕನು ತಿಳಿಸುತ್ತಾನೆ. ಮತ್ತಾಯನು ಯೋಸೆಯ ಬದಲು ಯೋಸೇಫ ಎಂದು ಬಳಸುತ್ತಾನೆ (ಮತ್ತಾಯ 27:56 ಕನ್ನಡ ಭಾಷಾಂತರದಲ್ಲಿಲ್ಲ).

*ಸಲೋಮೆ* (ವ. 42): ಈಕೆಯು ಬಹುಶಃ ಜೆಬೆದಾಯನ ಪತ್ನಿಯೂ ಮತ್ತು ಯಾಕೋಬ, ಯೋಹಾನರ ತಾಯಿಯೂ ಇದ್ದಿರಬಹುದು (ಹೋಲಿಸಿ ಮತ್ತಾ. 27:56).

*ಸೌರಣೆಯ ದಿನ* (ವ. 42): ಇದು ಹಬ್ಬದ ಅಥವಾ ಸಬ್ಬತ್ ದಿನದ ಮೊದಲಿನ ದಿನದ ಹೆಸರಾಗಿತ್ತು. ಶುಕ್ರವಾರ ಮಧ್ಯಾಹ್ನ ಸಮಯ ಆಗುತ್ತಲೇ ಇತ್ತು. ಎಲ್ಲ ನಿರ್ಬಂಧಗಳನ್ನೊಳಗೊಂಡ ಸಬ್ಬತ್ತು ಸೂರ್ಯೋದಯದೊಂದಿಗೆ ಪ್ರಾರಂಭವಾಗುತ್ತಿತ್ತು. ಹಾಗಾಗಿ ಯೇಸುವನ್ನು ಹೂಣಿಡಲು ಯೋಸೇಫನು ಆತುರದಲ್ಲಿದ್ದನು.

*ಹಿರೀಸಭೆಯವರಲ್ಲಿ ಘನವಂತನಾದ ಅರಿಮಥಾಯದ ಯೋಸೇಫನು* (ವ. 43): ಯೇಸುವಿನ ಶಿಷ್ಯನಾಗಿ ಮಾರ್ಪಟ್ಟ ಧನವಂತನಾದ ಯೋಸೇಫನು (ಮತ್ತಾಯ 27:57 ನ್ನು ನೋಡಿ) ಯೇಸು ದೇವದೂಷಣೆ ಮಾಡಿದ್ದನೆಂಬುದಾಗಿ ಕಂಡುಕೊಳ್ಳುವಾಗ ಸೇರಿದ ಯೆಹೂದಿ ಹಿರೀಸಭೆಯಲ್ಲಿ ಭಾಗಿಯಾಗದೇ ಇದ್ದಿರಬಹುದು. ಅರಿಮಥಾಯವು ಯೆರೂಸಲೇಮಿನಿಂದ ನೈರುತ್ಯಕ್ಕೆ ಸುಮಾರು 30 ಕಿ.ಮೀ. ದೂರದ ಪರ್ವತ ಪ್ರದೇಶದಲ್ಲಿನ ಒಂದು ಹಳ್ಳಿಯಾಗಿತ್ತು.

*ಪಿಲಾತನು – ಅವನು ಇಷ್ಟು ಬೇಗ ಸತ್ತನೋ ಎಂದು ಆಶ್ಚರ್ಯಪಟ್ಟು* (ವ. 44): ಶಿಲುಬೆಗೆ ಹಾಕಲ್ಪಟ್ಟವರು ಹೆಚ್ಚಾಗಿ ಸಾಯುವುದಕ್ಕಿಂತ ಮುಂಚೆ ಸುಮಾರು ಎರಡು – ಮೂರು ದಿನ ಜೀವಂತವಾಗಿರುತ್ತಿದ್ದರು, ಹಾಗಾಗಿ ಯೇಸು ಅಷ್ಟು ಬೇಗ ಸತ್ತದ್ದನ್ನು ಕಂಡು ಪಿಲಾತನು ಆಶ್ಚರ್ಯಗೊಳ್ಳುತ್ತಾನೆ.

*ಬಂಡೆಯಲ್ಲಿ ತೋಡಿದ್ದ ಸಮಾಧಿ* (ವ. 46): ಮತ್ತಾಯ 27:60 ರಿಂದ ಈ ಸಮಾಧಿಯು ಯೋಸೇಫನಿಗೆ ಸೇರಿದ್ದು ಈವರೆಗೂ ಅದನ್ನು ಉಪಯೋಗಿಸಿರಲಿಲ್ಲವೆಂಬುದನ್ನು ನಾವು ಕಲಿಯುತ್ತೇವೆ. ಅದು ಶಿಲುಬೆಗೆ ಹಾಕುವ ಸ್ಥಳದ ಸಮೀಪವಿರುವ ಒಂದು ತೋಟದಲ್ಲಿತ್ತು (ಯೋಹಾನ 19:41). ಈ ರೀತಿಯ ಸಮಾಧಿಯನ್ನು ಬಾಗಿಲಿಗೆ ದೊಡ್ಡ ಕಲ್ಲನ್ನು ಅಡ್ಡ ಇಟ್ಟು ಮುಚ್ಚಲಾಗುತ್ತಿತ್ತು (ಹೋಲಿಸಿ 16:4).

**ಪ್ರಶ್ನೆಗಳು**

1. ಯಾವ ಅವಧಿಯಲ್ಲಿ ಯೆಹೂದಿ ನಾಯಕರುಗಳು ಯೇಸುವನ್ನು ರೋಮನ್ ಅಧಿಪತಿಯ ಮುಂದೆ ಕರೆತರುತ್ತಾರೆ (ವ 1)?
2. ಪಿಲಾತನು ಯೇಸುವಿಗೆ ಕೇಳಿದ ಮೊದಲ ಪ್ರಶ್ನೆ ಏನಾಗಿತ್ತು ಮತ್ತು ಆತನು ಯಾಕೆ ಆ ಪ್ರಶ್ನೆಯನ್ನು ಕೇಳುತ್ತಾನೆ (ವ 2)?

3. ಯೇಸುವಿನ ಮೇಲಿನ ಅನೇಕ ದೂರುಗಳಾವುವು (ವ. 3 ಮತ್ತು ವ. 1 ಟಿಪ್ಪಣಿ)?
4. ಬರಬ್ಬನು ಯಾರು (ವ. 7 ಮತ್ತು ಟಿಪ್ಪಣಿ)?
5. ಯಾಕೆ ಪಿಲಾತನು ಯೇಸುವನ್ನು ಬಿಟ್ಟುಕೊಡಬೇಕೆಂದಿದ್ದನು (ವ. 9-10)?
6. ಯಾಕೆ ಜನರು ಯೇಸುವಿನ ಬದಲು ಬರಬ್ಬನನ್ನೇ ಬಿಟ್ಟುಕೊಡಬೇಕೆಂದು ಪಿಲಾತನನ್ನು ಒತ್ತಾಯಿಸಿದರು (ವ 11-12)?
7. ಯಾಕೆ ಪಿಲಾತನು ಕೊನೆಯಲ್ಲಿ ಯೇಸುವಿನ ಬದಲು ಬರಬ್ಬನನ್ನೇ ಬಿಟ್ಟುಕೊಟ್ಟನು (ವ. 15)?
8. ಸಿಪಾಯಿಗಳು ಯೇಸುವಿನೊಂದಿಗೆ ಯಾವ ಯಾವ ರೀತಿಯಲ್ಲಿ ವರ್ತನೆ ಮತ್ತು ಪರಿಹಾಸ್ಯ ಮಾಡಿದರೆಂಬುದನ್ನು ಪಟ್ಟಿ ಮಾಡಿರಿ (ವ. 16-19).
9. ಸಿಪಾಯಿಗಳು ಯೇಸುವಿಗೆ ಪರಿಹಾಸ್ಯ ಮಾಡಿದ ನಂತರ ಆತನನ್ನು ಏನು ಮಾಡಿದರು (ವ. 20)?
10. ಕುರೇನೆಯ ಸಿಮೋನನಿಗೆ ಏನನ್ನು ಮಾಡಲು ಹಚ್ಚಿದರು (ವ. 21)?
11. ಯೇಸುವನ್ನು ಎಲ್ಲಿಗೆ ಕೊಂಡೊಯ್ಯಲಾಯಿತು (ವ. 22)?
12. ಯಾಕೆ ಯೇಸುವಿಗೆ ರಕ್ತಬೋಳ ಮಿಶ್ರಿತ ದ್ರಾಕ್ಷಾರಸವನ್ನು ಕೊಟ್ಟರು (ವ. 23)?
13. ಯೇಸುವಿಗೆ ಸೇರಿದ ವಸ್ತ್ರಗಳನ್ನೆಲ್ಲಾ ಏನು ಮಾಡಿದರು (ವ. 24)?
14. ದಿನದ ಯಾವ ಸಮಯದಲ್ಲಿ ಯೇಸುವನ್ನು ಶಿಲುಬೆಗೇರಿಸಲಾಯಿತು (ವ. 25)?
15. ಯೇಸುವಿನ ಮೇಲೆ ಹೊರಿಸಿದ ಅಪರಾಧವೇನಾಗಿತ್ತು (ವ. 26)?
16. ಯೇಸುವು ಶಿಲುಬೆಯಲ್ಲಿ ತೂಗಾಡುತ್ತಿರುವಾಗ ಆತನನ್ನು ಹೇಗೆ ಪರಿಹಾಸ್ಯ ಮಾಡಲಾಯಿತು (ವ. 29-32)?
17. ಎಷ್ಟು ಸಮಯ ಯೇಸು ಶಿಲುಬೆ ಮೇಲೆ ಬಾಧೆಪಟ್ಟನು?
18. ತಾನು ಶಿಲುಬೆ ಮೇಲೆ ಸಾಯುತ್ತಿರುವಾಗ ಯೇಸು ಹಳೇ ಒಡಂಬಡಿಕೆಯ ಯಾವ ಕೀರ್ತನೆಯನ್ನು ಉಪಯೋಗಿಸುತ್ತಾನೆ (ವ. 34 ಮತ್ತು ಟಿಪ್ಪಣಿ)?
19. ಹತ್ತಿರ ನಿಂತಿದ್ದವರು ಯೇಸು ಕೂಗುವುದನ್ನು ಯಾವ ರೀತಿಯಲ್ಲಿ ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ (ವ. 34-36)?
20. ಯೇಸು ಸತ್ತಾಗ ಯೆರೂಸಲೇಮಿನ ದೇವಾಲಯದಲ್ಲಿ ಏನಾಯಿತು (ವ. 37-38)?
21. ಯೇಸು ಸತ್ತಾಗ ರೋಮನ್ ಶತಾಧಿಪತಿ(ಅಧಿಕಾರಿ)ಯು ಏನೆಂದು ಅರಿತುಕೊಂಡನು (ವ. 39)?
22. ಯೇಸುವನ್ನು ಶಿಲುಬೆಗೇರಿಸುವಾಗ ಅಲ್ಲಿ ನೆರೆದಿದ್ದ ಸ್ತ್ರೀಯರ ಕುರಿತು ಮಾರ್ಕನು ತನ್ನ ಓದುಗರಿಗೆ ಏನೆಂದು ಹೇಳುತ್ತಾನೆ (ವ. 40-41)?
23. ವಚನ 41 ರಿಂದ ಯೇಸುವನ್ನು ಹಿಂಬಾಲಿಸಿದವರ ಕುರಿತು ನಾವೇನನ್ನು ಕಂಡುಕೊಳ್ಳುತ್ತೇವೆ?
24. ಅರಿಮಥಾಯದ ಯೋಸೇಫನ ಬಗ್ಗೆ ನಮಗೇನು ತಿಳಿದಿದೆ (ವ. 43-46 ಮತ್ತು ವ. 43 ರ ಟಿಪ್ಪಣಿ)?
25. ಯೇಸುವನ್ನು ಎಲ್ಲಿ ಹೂಣಿಡಲಾಯಿತು (ವ. 46)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಪಿಲಾತನು ಯಾಕೆ ಆಶ್ಚರ್ಯಪಟ್ಟನೆಂಬುದಾಗಿ ನೀವು ಯೋಚಿಸುವಿರಿ (ವ. 5)?
2. ಪಿಲಾತನ ಪದ್ಧತಿಯೇನಾಗಿತ್ತು ಎಂಬುದನ್ನು ವಿವರಿಸಿರಿ ಮತ್ತು ಯೇಸುವನ್ನು ಬಿಟ್ಟುಕೊಡಬೇಕೆಂಬ ಪ್ರಯತ್ನದಲ್ಲಿ ಈ ಪದ್ಧತಿಯನ್ನು ಆತನು ಹೇಗೆ ಉಪಯೋಗಿಸಿದನು (ವ. 6-15). ನಿಮ್ಮ ಪದ ಬಳಸಿರಿ, ಸತ್ಯವೇದ ನೋಡಬೇಡಿ. ಪಿಲಾತನ ವಿಫಲತೆಯ ವ್ಯಂಗ್ಯವನ್ನು ಸಹ ವಿವರಿಸಿರಿ.

3. ಸೈನಿಕರು ಯೇಸುವಿನೊಂದಿಗೆ ನಡಕೊಂಡ ರೀತಿಯ ಕಥೆಯನ್ನು (ವ. 16-20) ನಿಮ್ಮದೇ ಮಾತಿನಲ್ಲಿ ಹೇಳಿರಿ. ಸತ್ಯವೇದ ನೋಡಬೇಡಿರಿ.

4. ಕುರೇನೆ ಪಟ್ಟಣದ ಸಿಮೋನನ ಕುರಿತ ಮಾಹಿತಿಯನ್ನು ಯೇಸುವಿನ ಸ್ಥಿತಿಯ ಬಗ್ಗೆ ನಮಗೇನನ್ನು ಹೇಳುತ್ತದೆ (ವ. 21 ಮತ್ತು ಟಿಪ್ಪಣಿ)?

5. ಯಾಕೆ ಯೇಸು ತನಗೆ ಕೊಟ್ಟ ರಕ್ತಬೋಳ ಮಿಶ್ರಿತ ದ್ರಾಕ್ಷಾರಸವನ್ನು ಕುಡಿಯಲು ನಿರಾಕರಿಸಿದನು (ವ. 23)?

6. ಯೇಸು ಶಿಲುಬೆ ಮೇಲೆ ತೂಗಾಡುತ್ತಿರುವ ಸನ್ನಿವೇಶದಲ್ಲಿನ ದುರಂತಮಯ ವ್ಯಂಗ್ಯವನ್ನು ವಿವರಿಸಿರಿ (ವ. 25-32).

7. ಅನೇಕ ಸಭೆಗಳಲ್ಲಿ ಶುಭಶುಕ್ರವಾರದ ಕೂಟವು "ಯೇಸು ಶಿಲುಬೆ ಮೇಲೆ ಆಡಿದ ಏಳು ಮಾತುಗಳ" ಕೇಂದ್ರೀಕೃತವಾಗಿರುತ್ತದೆ. ಸುವಾರ್ತೆಗಳಲ್ಲಿ ಈ "ಏಳು ಮಾತುಗಳನ್ನು" ಕಂಡುಹಿಡಿಯಿರಿ (ಮತ್ತಾ. 27:45-50, ಮಾರ್ಕ 15:33-37, ಲೂಕ 23:32-46, ಯೋಹಾನ 19:18-30). ಅವುಗಳ ಪಟ್ಟಿಮಾಡಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಈ ಅಧ್ಯಯನಯದಲ್ಲಿ ಕಂಡುಬರುವ ಮಾಹಿತಿಗಳ ಬೆಳಕಿನಡಿಯಲ್ಲಿ ಯೇಸು ಪರಿಹಾಸ್ಯಕ್ಕೊಳಗಾದುದ್ದನ್ನು ಕುರಿತ ಮಾರ್ಕನ ವಿವರವನ್ನು ವಿಮರ್ಶಿಸಿರಿ. (ಮಾರ್ಕ 15:16-20 ಮತ್ತು 25-32). ಕೆಳಕಂಡ ಒಂದು ಅಸ್ಸೈನ್ಮೆಂಟನ್ನು (ಪ್ರಬಂಧವನ್ನು) ಆರಿಸಿಕೊಳ್ಳಿ.

   ಅ. ***"ಆತನು ಧಿಕ್ಕರಿಸಲ್ಪಟ್ಟನು ಮತ್ತು ತಿರಸ್ಕರಿಸಲ್ಪಟ್ಟನು"*** (ಯೆಶಾಯ 53:30) ಎಂಬ ಸತ್ಯವೇದ ಅಧ್ಯಯನವೊಂದನ್ನು ಸಿದ್ಧಪಡಿಸಿರಿ.


   ಆ. ಈ ಕಥೆಯ ಒಂದು ಭಾವನೆ(ಅಂಶ)ಯನ್ನು ಸೆರೆಹಿಡಿಯುವ ಪದ್ಯ/ಕವನವೊಂದನ್ನು ಬರೆಯಿರಿ. ಇದನ್ನು ***"ಯೆಹೂದ್ಯರ ಅರಸನಿಗೆ ನಮಸ್ಕಾರ!"*** ಎಂದು ಕರೆಯಬಹುದು.

2. ಈ ಅಧ್ಯಯನದಲ್ಲಿ ಕಂಡುಬರುವ ಮಾಹಿತಿಗಳ ಬೆಳಕಿನಲ್ಲಿ ಲೂಕನು ಹೇಳುವಂತೆ ಶಿಲುಬೆಗೆ ಏರಿಸುವಾಗ ಅಲ್ಲಿದ್ದ ಒಳ್ಳೆಯ ಜನರಾದ ಸ್ತ್ರೀಯರು (ಮಾರ್ಕ 15:41,47) ಮತ್ತು ಮರಿಮಥಾಯದ ಯೋಸೇಫನನ್ನು (ಮಾರ್ಕ 15:42-46) ವಿಮರ್ಶಿಸಿರಿ. ಕೆಳಕಂಡ ಒಂದು ಅಸ್ಸೈನ್ಮೆಂಟನ್ನು ಆರಿಸಿಕೊಳ್ಳಿ.

   ಅ. ಆ ಸ್ತ್ರೀಯರು ಅಥವಾ ಯೋಸೇಫನ ಕುರಿತ ಒಂದು ಸತ್ಯವೇದ ಅಧ್ಯಯನ(ಅಥವಾ ಒಂದು ಧ್ಯಾನ/ಪ್ರಸಂಗ)ವನ್ನು ಸಿದ್ಧಪಡಿಸಿರಿ.

   ಆ. ಸ್ತ್ರೀಯರು ಅಥವಾ ಅರಿಮಥಾಯದ ಯೋಸೇಫನ ಬಗ್ಗೆ ಒಂದು ಪದ್ಯ/ಕವನವನ್ನು ಬರೆಯಿರಿ.

3. ಯೇಸು ಶಿಲುಬೆ ಮೇಲೆ ಆಡಿದ "ಏಳು ಮಾತುಗಳನ್ನು" ವಿಮರ್ಶಿಸಿರಿ (***ಆಲೋಚಿಸಿರಿ ಮತ್ತು ಚರ್ಚಿಸಿರಿ*** 7 ನ್ನು ನೋಡಿ). ಅನಂತರ ಈ ಏಳು ಮಾತುಗಳನ್ನು ಆಧರಿಸಿ ಒಂದು ಸತ್ಯವೇದ ಅಧ್ಯಯನವನ್ನು ಸಿದ್ಧಪಡಿಸಿರಿ.



## ಮಾರ್ಕ ಅಧ್ಯಾಯ 16

### ಪೀಠಿಕೆ ಮತ್ತು ಟಿಪ್ಪಣಿಗಳು

ಮಾರ್ಕನ ಸುವಾರ್ತೆಯ 16 ನೇ ಅಧ್ಯಾಯವನ್ನು ಎಚ್ಚರಿಕೆಯಿಂದ ಓದುವವರು ವಚನ 8 ರ ನಂತರ ನಿರೂಪಣೆ(ಕಥೆ)ಯಲ್ಲಿ ಒಂದು ವಿರಾಮವನ್ನು ಕಾಣುವರು. ವಚನ 9-20 ಮೂಲತಃ ಈ ಸುವಾರ್ತೆಗೆ ಸೇರಿದವುಗಳಲ್ಲ ಎಂಬುದಾಗಿ ಹೆಚ್ಚಿನ ಸತ್ಯವೇದ ಪಂಡಿತರು ಯೋಚಿಸುತ್ತಾರೆ (ಅವನ್ನು ಮೊದಲ ಗ್ರೀಕ್ ಹಸ್ತಪ್ರತಿಗಳಲ್ಲಿ ಕಂಡುಬರುವುದಿಲ್ಲ ಮತ್ತು ಅವುಗಳ ಶೈಲಿಯು ಪುಸ್ತಕದ ಉಳಿದ ಭಾಗಕ್ಕಿಂತ ವಿಭಿನ್ನವಾಗಿವೆ. ಕನ್ನಡ ಸತ್ಯವೇದ ಭಾಷಾಂತರದಲ್ಲಿ ಇದನ್ನು ಆವರಣ ಚಿಹ್ನೆಗಳಿಂದ ಸೂಚಿಸಲಾಗಿದೆ). ಇದು ಬೇರೊಬ್ಬ ವ್ಯಕ್ತಿಯಿಂದ ರಚಿಸಲ್ಪಟ್ಟ ಪುನರುತ್ಥಾನದ ನಂತರದ ನೋಟದ ಒಂದು ಪ್ರತ್ಯೇಕ ಸಾರಾಂಶವನ್ನೊಳಗೊಂಡಿದೆ ಎಂಬುದಾಗಿ ಅವರು ಯೋಚಿಸುತ್ತಾರೆ. ಮಾರ್ಕನು ತನ್ನ ಸುವಾರ್ತೆಯನ್ನು ಸ್ವಲ್ಪ ಥಟ್ಟನೆ ಮತ್ತು ವಚನ ಎಂಟಕ್ಕಿಂತ ಸಕಾರಾತ್ಮಕವಾಗಿ ಮುಕ್ತಾಯಗೊಳಿಸಿರಬೇಕು ಮತ್ತು ಮಾರ್ಕನ ಮೂಲ ಮುಕ್ತಾಯವು ಕಳೆದು ಹೋಗಿದೆ ಎಂಬುದಾಗಿ ಸಹ ಹೆಚ್ಚಿನ ಪಂಡಿತರು ಯೋಚಿಸುತ್ತಾರೆ.

ಈ ಅಧ್ಯಾಯವನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ಯೇಸುವಿನ ಪುನರುತ್ಥಾನ, ವ. 1-8
2. ಪುನರುತ್ಥಾನದ ನಂತರ ಕಾಣಿಸಿಕೊಂಡದ್ದು ಮತ್ತು ಆರೋಹಣ (ವ. 9-20)

   ಅ. ಯೇಸು ಮಗ್ದಲದ ಮರಿಯಳಿಗೆ ಕಾಣಿಸಿಕೊಂಡದ್ದು, ವ. 9-11

   ಆ. ಯೇಸು ಇಬ್ಬರು ಶಿಷ್ಯರಿಗೆ ಕಾಣಿಸಿಕೊಂಡದ್ದು, ವ. 12-13

   ಇ. ಯೇಸು 11 ಮಂದಿ ಶಿಷ್ಯರಿಗೆ ಕಾಣಿಸಿಕೊಂಡದ್ದು ಮತ್ತು ಮಹಾ ಆಜ್ಞೆ, ವ. 14-18

   ಈ. ಯೇಸುವಿನ ಸ್ವರ್ಗಾರೋಹಣ, ವ. 19-20

*ಸಬ್ಬತ್ ದಿನ ಕಳೆದ ಮೇಲೆ (ವ.* 1): ಶನಿವಾರ ಸಂಜೆ ಸುಮಾರು ಆರು ಗಂಟೆಗೆ ಸಬ್ಬತ್ತು ಮುಗಿದಿತ್ತು. ಆ ನಂತರ ಮಾತ್ರ ಸ್ತ್ರೀಯರು ತಮಗೆ ಬೇಕಾದದ್ದನ್ನು ಖರೀದಿಸಬಹುದಾಗಿತ್ತು. ಆದರೆ ತಾವು ಸಮಾಧಿಗೆ ಹೋಗುವುದಕ್ಕಿಂತ ಮುಂಚೆ ಭಾನುವಾರ ಬೆಳಗಾಗುವವರೆಗೂ ಅವರು ಕಾಯಬೇಕಾಗಿತ್ತು.

*ಸುಗಂಧದ್ರವ್ಯಗಳು* (ವ. 1): ಯೆಹೂದ್ಯರು ಸತ್ತು ಹೋದವರನ್ನು ಸಂರಕ್ಷಿಸಿ ಇಡುತ್ತಿರಲಿಲ್ಲ. ಹಾಗಾಗಿ ಸುಗಂಧದ್ರವ್ಯಗಳು ಯೇಸುವಿನ ದೇಹವನ್ನು ಸಂರಕ್ಷಿಸಿ ಇಡುವುದಕ್ಕಾಗಿ ಉಪಯೋಗಿಸುವದಾಗಿರಲಿಲ್ಲ. ಯೇಸುವಿಗೆ ತೈಲವನ್ನು ಹಚ್ಚುವುದು ಒಂದು ಪ್ರೀತಿಯ ಮತ್ತು ಭಕ್ತಿಯ ಕಾರ್ಯವಾಗಿತ್ತು.

*ವಾರದ ಮೊದಲನೆಯ ದಿನದ ಬೆಳಿಗ್ಗೆ* (ವ. 2): ಇದು ಭಾನುವಾರದ ಮುಂಜಾನೆಯಾಗಿತ್ತು.

*ಆತನು ನಿಮಗೆ ಹೇಳಿದಂತೆ … ಗಲಿಲಾಯಕ್ಕೆ* (ವ. 7): 14:28 ನ್ನು ನೋಡಿ.

*ಮಗ್ದಲದ ಮರಿಯಳಿಗೆ ಮೊದಲು ಕಾಣಿಸಿಕೊಂಡನು* (ವ. 9): ನೋಡಿ ಯೋಹಾನ 20:11-18

*ಶಿಷ್ಯರಲ್ಲಿ ಇಬ್ಬರಿಗೆ ರೂಪಾಂತರದಿಂದ ಕಾಣಿಸಿಕೊಂಡನು* (ವ. 12): ಲೂಕ 24:13-32 ನ್ನು ನೋಡಿ.

*ಹನ್ನೊಂದು ಮಂದಿ ಶಿಷ್ಯರಿಗೆ ಕಾಣಿಸಕೊಂಡನು* (ವ. 14): ಲೂಕ 24:36-43 ನ್ನು ನೋಡಿ. ಇಸ್ಕರಿಯೋತ ಯೂದನು ಉರುಲುಹಾಕಿಕೊಂಡು ಸತ್ತಮೇಲೆ ಹನ್ನೊಂದು ಮಂದಿ ಶಿಷ್ಯರು ಉಳಿದಿದ್ದರು (ವ. 27:5 ನ್ನು ನೋಡಿರಿ).

*ಅವರು ದೆವ್ವಗಳನ್ನು ಬಿಡಿಸುವವರು* (ವ. 17): ಹೋಲಿಸಿ ಅ.ಕೃ. 5:16, 8:7, 16:18, 19:12.

*ಹೊಸ ಭಾಷೆಗಳಿಂದ ಮಾತಾಡುವವರು* (ವ. 17): ಹೋಲಿಸಿ ಅ.ಕೃ. 2:4, 10:46, 19:6.

*ಹಾವುಗಳನ್ನು ಎತ್ತುವವರು* (ವ. 18): ಹೋಲಿಸಿ ಅ.ಕೃ. 28:11-5.

*ವಿಷಪದಾರ್ಥವೇನಾದರು ಕುಡಿದರು ಅವರಿಗೆ ಯಾವ ಕೇಡು ಆಗುವುದಿಲ್ಲ* (ವ. 18): ಹೊಸ ಒಡಂಬಡಿಕೆಯಲ್ಲಿ ಈ ರೀತಿಯಾಗಿದ್ದು ಎಲ್ಲಿಯೂ ಕಂಡು ಬರುವುದಿಲ್ಲ.

*ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವುದು* (ವ. 18): ಹೋಲಿಸಿ ಅ.ಕೃ. 9:12,17, 28:8

*ದೇವರ ಬಲಗಡೆಯಲ್ಲಿ* (ವ. 19): ಹೋಲಿಸಿ 12:36 ಮತ್ತು 14:62



**ಪ್ರಶ್ನೆಗಳು**

1. ಸ್ತ್ರೀಯರು ಯಾವಾಗ ಮತ್ತು ಯಾಕೆ ಯೇಸುವಿನ ಸಮಾಧಿಯ ಬಳಿಗೆ ಹೋದರು (ವ. 1 ಮತ್ತು 2 ಟಿಪ್ಪಣಿಗಳೊಂದಿಗೆ)?
2. ಯೇಸುವಿನ ಸಮಾಧಿಯೆಡೆಗೆ ನಡೆದುಕೊಂಡು ಹೋಗುವಾಗ ಆ ಸ್ತ್ರೀಯರು ಯಾವುದರ ಕುರಿತು ಚಿಂತಿಸುತ್ತಿದ್ದರು (ವ. 3)?
3. ಸಮಾಧಿಯ ಬಳಿಗೆ ಬಂದಾಗ ಸ್ತ್ರೀಯರು ಏನನ್ನು ಕಂಡರು ಮತ್ತು ಅವರು ಹೇಗೆ ಪ್ರತಿಕ್ರಯಿಸಿದರು (ವ. 4- 5)?
4. ಸ್ತ್ರೀಯರಿಗೆ ಸಿಕ್ಕ ಸಂದೇಶವೇನು (ವ. 5-7)?
5. ಸಮಾಧಿಯ ಬಳಿಯಿಂದ ಓಡಿ ಹೋಗುವಾಗ ಸ್ತ್ರೀಯರ ಭಾವನೆ ಹೇಗಿತ್ತು (ವ. 8)?
6. ಮಗ್ದಲದ ಮರಿಯಳ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 9-10)?
7. ಯೇಸುವು ಬದುಕಿದ್ದಾನೆಂಬ ಸುದ್ದಿಯನ್ನು ಕೇಳಿದಾಗ ಶಿಷ್ಯರು ಹೇಗೆ ಪ್ರತಿಕ್ರಯಿಸಿದರು (ವ. 11)?
8. ತಾನು ಹನ್ನೊಂದು ಮಂದಿ ಶಿಷ್ಯರಿಗೆ ಕಾಣಿಸಿಕೊಂಡಾಗ ಯೇಸು ಏನು ಮಾಡಿದನು (ವ. 14)?
9. ಯೇಸು ತನ್ನ ಶಿಷ್ಯರಿಗೆ ಯಾವ ಆಜ್ಞೆಯನ್ನು ಕೊಡುತ್ತಾನೆ (ವ. 15)?
10. ಯಾರು ರಕ್ಷಣೆ ಹೊಂದುವರು ಎಂಬುದಾಗಿ ಯೇಸು ಹೇಳುತ್ತಾನೆ? ಮತ್ತು ಯಾರು ದಂಡನೆಗೆ ಗುರಿಯಾಗುವರು (ವ. 15-16)?
11. ವಿಶ್ವಾಸಿಗಳ ಜೀವನ ಮತ್ತು ಸೇವೆಯನ್ನು ಯೇಸು ಹೇಗೆ ವರ್ಣಿಸುತ್ತಾನೆ (ವ. 17-18)? ಅದರ ಪಟ್ಟಿಮಾಡಿ.

12. ಯೇಸುವಿನ ಸ್ವರ್ಗಾರೋಹಣದ ನಂತರ ಶಿಷ್ಯರು ಏನನ್ನು ಮಾಡುತ್ತಾರೆ (ವ. 19-20)?
13. ಯೇಸು ಸುವಾರ್ತೆ ಸಾರುವುದನ್ನು ಹೇಗೆ ದೃಢಪಡಿಸಿದನು (ವ. 20)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯೇಸುವಿನ ಸಮಾಧಿಯಲ್ಲಿದ್ದ ಯೌವನಸ್ಥನು ಒಬ್ಬ ದೇವದೂತನಾಗಿದ್ದನೆಂದು ನೀವು ಹೇಗೆ ತೀರ್ಮಾನಿಸುವಿರಿ (ವ. 5-8)?
2. ಈ ಅಧ್ಯಾಯದ ಕಡೆಯ ಭಾಗವು (ವ. 9-20) ಮಾರ್ಕನ ಸುವಾರ್ತೆಯ ಮೂಲ ಪತ್ರದ ಭಾಗವಾಗಿರಲಿಲ್ಲವೆಂಬುದಾಗಿ ನೀವು ಯೋಚಿಸುವಿರಾ? ಯಾಕೆ-ಯಾಕಿಲ್ಲ?
3. ವಚನ 9-18 ರ ಮುಖ್ಯ ವಿಷಯವೇನು? ಹೇಗೆಂದು ವಿವರಿಸಿರಿ.
4. ಎಲ್ಲಾ ನಾಲ್ಕು ಸುವಾರ್ತೆಗಳೂ ಸಹ "ಮಹಾ ಆಜ್ಞೆಯನ್ನು" ಒಳಗೊಂಡಿವೆ (ಮತ್ತಾ. 28:18-20, ಮಾರ್ಕ 16:15, ಲೂಕ 24:46-49, ಅ.ಕೃ. 1:8, ಯೋಹಾನ 20:21-23). ಅವೆಲ್ಲವನ್ನು ಹೋಲಿಸಿರಿ. ಕೆಲವು ಅಂಶಗಳನ್ನು ಪಟ್ಟಿ ಮಾಡಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. ಮಾರ್ಕ 16:9-18 ಮತ್ತು ಈ ಅಧ್ಯಯನದಲ್ಲಿನ ಮಾಹಿತಿಗಳ ಬೆಳಕಿನಲ್ಲಿ "ನಂಬುವುದು – ನಂಬದೇ ಇರುವುದು" ಎಂಬ ವಿಷಯವನ್ನು ವಿಮರ್ಶಿಸಿರಿ. ನಾವು ಏನನ್ನು ನಂಬಬೇಕು? ಯಾಕೆ ಇದು ನಂಬಲು ಅಷ್ಟು ಪ್ರಾಮುಖ್ಯವಾಗಿದೆ?
   ಅನಂತರ ***ನಂಬಿರಿ ಮತ್ತು ರಕ್ಷಣೆ ಹೊಂದಿಕೊಳ್ಳಿರಿ!*** ಎಂಬ ಒಂದು ಸುವಾರ್ತಾ ಸಂದೇಶವನ್ನು ಸಿದ್ಧಪಡಿಸಿರಿ. ಸುವಾರ್ತೆ ಯೇಸುವಿನ ಬಾಧೆ, ಮರಣ ಮತ್ತು ಪುನರುತ್ಥಾನ ಮತ್ತು ಈ ಸುವಾರ್ತೆಯನ್ನು ನಾವು ನಂಬುವ ಅವಶ್ಯಕತೆಯ ಮೇಲೆ ಒತ್ತುಕೊಡಿರಿ. (ಪಶ್ಚಾತ್ತಾಪಪಡುವುದು ಮತ್ತು ನಮ್ಮ ಪಾಪಗಳಿಗಾಗಿ ಕ್ಷಮಾಪಣೆ ಹೊಂದುವುದು).
2. ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 4 ರ ಟಿಪ್ಪಣಿಯ ಬೆಳಕಿನಲ್ಲಿ ನಾಲ್ಕು ಸುವಾರ್ತೆಗಳಲ್ಲಿ ಯೇಸು ತನ್ನ ಶಿಷ್ಯರಿಗೆ ಕೊಟ್ಟ ಆಜ್ಞೆಗಳನ್ನು ವಿಮರ್ಶಿಸಿರಿ. ಅನಂತರ ***ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಯೇಸುವಿನ ಕುರಿತ ಸುವಾರ್ತೆಯನ್ನು ಸಾರಿರಿ!*** ಎಂಬ ಸತ್ಯವೇದ ಅಧ್ಯಯನ(ಸಂದೇಶ)ವನ್ನು ಸಿದ್ಧಪಡಿಸಿರಿ.

# ಯೇಸುವಿನ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಕುರಿತಾದ ಎಂಟು ಅಧ್ಯಯನಗಳು

**ಪೀಠಿಕೆ**

ಈ ವಿಭಾಗವು ಮತ್ತಾಯ, ಲೂಕ ಮತ್ತು ಯೋಹಾನನ ಸುವಾರ್ತೆಗಳಿಂದ ಯೇಸುವಿನ ಮತ್ತು ಆತನ ಪುನರುತ್ಥಾನದ ನಂತರ ಆತನ ಶಿಷ್ಯರ ಕುರಿತ ಎಂಟು ಅಧ್ಯಯನಗಳನ್ನು ಒಳಗೊಂಡಿದೆ. ಈ ಘಟನೆಗಳೆಲ್ಲವೂ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ನಡುವಿನ 40 ದಿನಗಳ ಅವಧಿಯಲ್ಲಿ ಯೂದಾಯ (ಯೆರೂಸಲೇಮು ಮತ್ತು ಅದರ ಹತ್ತಿರ) ಮತ್ತು ಗಲಿಲಾಯದಲ್ಲಿ ವಿವಿಧ ಸಂಧರ್ಭಗಳಲ್ಲಿ ಸಂಭವಿಸಿವೆ.

ಪುನರುತ್ಥಾನವಾದ ಭಾನುವಾರ ಮುಂಜಾನೆ ಯೆರೂಸಲೇಮಿನಲ್ಲಿ:

1. ಪುನರುತ್ಥಾನ ಮತ್ತು ಕಾವಲುಗಾರರು, ಮತ್ತಾಯ 28:1-15
2. ತೋಟದಲ್ಲಿ ಮಗ್ದಲದ ಮರಿಯಳು ಮತ್ತು ಯೇಸು, ಯೋಹಾನ 20:1-18.

ಪುನರುತ್ಥಾನವಾದ ಭಾನುವಾರ ಸಂಜೆ ಯೂದಾಯದಲ್ಲಿ:

3. ಎಮ್ಮಾಹುವಿನ ರಸ್ತೆಯಲ್ಲಿ, ಲೂಕ 24:13-35.
4. ಯೇಸು ಶಿಷ್ಯರ ಒಂದು ಗುಂಪಿಗೆ ಕಾಣಿಸಿಕೊಂಡಿದ್ದು, ಲೂಕ 24:36-49, ಮತ್ತು ಯೋಹಾನ 20:19-25.

ಒಂದು ವಾರದ ನಂತರ ಯೆರೂಸಲೇಮಿನಲ್ಲಿ:

5. ಯೇಸು ತೋಮನಿಗೆ ಕಾಣಿಸಿಕೊಂಡದ್ದು, ಯೋಹಾನ 20:26-29.

ತರುವಾಯ ಗಲಿಲಾಯದಲ್ಲಿ:

6. ಯೇಸು ಗಲಿಲಾಯ ಸಮುದ್ರದ ಬಳಿ ಏಳು ಮಂದಿ ಶಿಷ್ಯರಿಗೆ ಕಾಣಿಸಿಕೊಂಡದ್ದು ಯೋಹಾನ 21:1-24.
7. ಮಹಾ ಆಜ್ಞೆ, ಮತ್ತಾ. 28:16-20.

ಪುನರುತ್ಥಾನಗೊಂಡು ನಲವತ್ತು ದಿನಗಳ ನಂತರ ಯೆರೂಸಲೇಮಿನ ಬಳಿ ಸ್ವರ್ಗಾರೋಹಣ:

8. ಯೇಸು ಪರಲೋಕಕ್ಕೆ ಒಯ್ಯಲ್ಪಟ್ಟದ್ದು, ಲೂಕ 24:50-53.

## 1. ಪುನರುತ್ಥಾನ ಮತ್ತು ಕಾವಲುಗಾರರು, ಮತ್ತಾಯ 28:1-15

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸು ಪುನರುತ್ಥಾನಗೊಂಡ ಮುಂಜಾನೆಯಲ್ಲಿ ಖಾಲಿ ಸಮಾಧಿಯನ್ನು ನೋಡಿದವರಲ್ಲಿ ಯೇಸುವನ್ನು ಹಿಂಬಾಲಿಸಿದ ಸ್ತ್ರೀಯರು ಮೊದಲಿಗರಾಗಿದ್ದರು ಎಂಬುದನ್ನು ಎಲ್ಲಾ ನಾಲ್ಕು ಸುವಾರ್ತೆಗಳು ತಿಳಿಸುತ್ತವೆ. ಆದರೆ ಈ ವಿಷಯದ ವಿವರಗಳು ವಿಭಿನ್ನವಾಗಿವೆ. ಲೂಕನು ಪೇತ್ರನು ಬಂದು ನೋಡುವುದನ್ನು ಸಹ ತಿಳಿಸುತ್ತಾನೆ ಮತ್ತು ಯೋಹಾನನು ಪೇತ್ರನು ಇನ್ನೊಬ್ಬ ಶಿಷ್ಯನ ಜೊತೆ ಬಂದನೆಂಬುದನ್ನು ಸೇರಿಸಿ ಹೇಳುತ್ತಾನೆ (ಸ್ವತಃ ಯೋಹಾನನೇ).

ಈ ಅಧ್ಯಯನದಲ್ಲಿ ನಾವು ಮತ್ತಾಯನ ವಿವರಗಳನ್ನು ನೋಡುತ್ತೇವೆ.

*ವಾರದ ಮೊದಲನೆಯ ದಿವಸ* (ವ. 1): ಇದು ಭಾನುವಾರ ಅಂದರೆ ಸಬ್ಬತ್ತಿನ ಮರುದಿನವಾಗಿತ್ತು.

*ಕಾವಲುಗಾರರು* (ವ. 4,11): ಯೆಹೂದಿ ನಾಯಕರು ಯೇಸುವಿನ ಸಮಾಧಿಯ ಬಳಿ ಕಾಯುವುದಕ್ಕೆ ಕಾವಲುಗಾರರನ್ನಿಟ್ಟಿದ್ದರೆಂದು ಮತ್ತಾಯನು ಮಾತ್ರ ತಿಳಿಸುತ್ತಾನೆ (ನೋಡಿ ಮತ್ತಾಯ 27:62-66).

*ಆ ಬೇರೆ ಮರಿಯಳೂ* (ವ. 1): ಈಕೆಯು ಬಹುಶಃ ಯಾಕೋಬ ಮತ್ತು ಯೋಸೇಯರ ತಾಯಿಯಾಗಿರಬಹುದು (ಹೋಲಿಸಿ 27:56 ಮತ್ತು ಮಾರ್ಕ 16:1).

### ಪ್ರಶ್ನೆಗಳು

1. ಭೂಕಂಪಕ್ಕೆ ಕಾರಣವೇನು (ವ. 1-2)?
2. ಭೂಕಂಪದ ಪರಿಣಾಮ ಏನಾಯಿತು (ವ. 2-4)?
3. ದೂತನು ಸ್ತ್ರೀಯರಿಗೆ ಹೇಳಿದ ಸಂದೇಶವೇನು (ವ. 5-7)?
4. ದೂತನ ಸಂದೇಶಕ್ಕೆ ಸ್ತ್ರೀಯರು ಹೇಗೆ ಪ್ರತಿಕ್ರಯಿಸಿದರು (ವ. 8)?
5. ಸ್ತ್ರೀಯರಿಗಾಗಿ ಯೇಸುವಿನ ಸಂದೇಶವೇನಾಗಿತ್ತು (ವ. 9-10)?
6. ಸಮಾಧಿಯು ಖಾಲಿಯಾದ ಬಗ್ಗೆ ಯೆಹೂದಿ ನಾಯಕರಿಗೆ ಹೇಗೆ ತಿಳಿಯಿತು (ವ. 11)?
7. ಯೆಹೂದಿ ನಾಯಕರು ಕಾವಲುಗಾರರೊಂದಿಗೆ ಯಾವ ಒಪ್ಪಂದವನ್ನು ಮಾಡಿಕೊಳ್ಳುತ್ತಾರೆ?
8. ಮತ್ತಾಯನು ತನ್ನ ಸುವಾರ್ತೆಯನ್ನು ಬರೆಯುವ ಕಾಲದವರೆಗೂ ಯೆಹೂದ್ಯರಲ್ಲಿ ಹಬ್ಬಿದ್ದ ಮಾತು (ಕತೆ) ಯಾವುದಾಗಿದೆ (ವ. 15)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಬರಿದಾದ ಸಮಾಧಿಯ ಬಳಿಯಲ್ಲಿನ ಸ್ತ್ರೀಯರ ಕುರಿತಾದ ಮತ್ತಾಯನ ಕಥೆಯನ್ನು ಸತ್ಯವೇದವನ್ನು ನೋಡದೆ ನಿಮ್ಮದೇ ಮಾತಿನಲ್ಲಿ ಹೇಳಿರಿ. ಅದು ನಾಟಕೀಯವಾಗಿ ಮತ್ತು ಉತ್ಸುಕವಾಗಿರಲಿ. ನೀವು ಒಂದು ಹಳ್ಳಿಜನರ ಗುಂಪಿನೊಂದಿಗೆ ಮಾತನಾಡುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.
2. ಬರಿದಾದ ಸಮಾಧಿಯ ಕುರಿತ ಸಮಸ್ಯೆಯೊಂದಿಗೆ ಯೆಹೂದಿ ನಾಯಕರು ವ್ಯವಹರಿಸಿದ ರೀತಿಯನ್ನು ನೀವು ಹೇಗೆ ಮೌಲ್ಯಮಾಪನ ಮಾಡುವಿರಿ?

## 2. ತೋಟದಲ್ಲಿ ಮಗ್ದಲದ ಮರಿಯಳು ಮತ್ತು ಯೇಸು, ಯೋಹಾನ 20:1-18

### ಪೀಠಿಕೆ ಮತ್ತು ಟಿಪ್ಪಣಿ

ಯೇಸುವಿನ ಪುನರುತ್ಥಾನದ ಮುಂಜಾನೆಯ ಈ ಘಟನೆಗಳ ಕುರಿತ ವಿವರದಲ್ಲಿ ಯೋಹಾನನು ಮಗ್ದಲದ ಮರಿಯಳು ಮತ್ತು ಪುನರುತ್ಥಾನ ಹೊಂದಿದ ಯೇಸುವಿನೊಂದಿಗಿನ ಆಕೆಯ ಭೇಟಿಯ ಮೇಲೆ ಹೆಚ್ಚು ಒತ್ತುಕೊಡುತ್ತಾನೆ. ಅಲ್ಲದೆ ಆತನು ಪೇತ್ರ ಮತ್ತು ಯೇಸುವಿಗೆ ಪ್ರಿಯನಾಗಿದ್ದ ಇನ್ನೊಬ್ಬ ಶಿಷ್ಯ ಸಹ ಸಮಾಧಿಗೆ ಓಡಿಹೋಗಿ ನೋಡುವುದನ್ನು ತಿಳಿಸುತ್ತಾನೆ.

*ಮಗ್ದಲದ ಮರಿಯಳು* (ವ. 1): ಗಲಿಲಾಯದ ಯೇಸುವಿನ ನಂಬಿಗಸ್ತ ಹಿಂಬಾಲಕರಲ್ಲಿ ಇವಳೊಬ್ಬಳಾಗಿದ್ದಳು. ಯೇಸು ಇವಳನ್ನು ಏಳು ದೆವ್ವಗಳಿಂದ ಬಿಡಿಸುತ್ತಾನೆ.

*ಯೇಸುವಿಗೆ ಪ್ರಿಯನಾಗಿದ್ದ* (ವ. 2): ತನ್ನ ಸುವಾರ್ತೆಯ ಎರಡನೇ ಭಾಗದಲ್ಲಿ ಯೋಹಾನನು ಈ ಪದಗಳಿಂದ ತನ್ನನ್ನೇ ವರ್ಣಿಸಿಕೊಳ್ಳುತ್ತಾನೆ. ಯೇಸು ಉಳಿದ ಶಿಷ್ಯರಿಗಿಂತ ಹೆಚ್ಚಾಗಿ ಯೋಹಾನನನ್ನು ಪ್ರೀತಿಸಿದನೆಂಬುದಾಗಿ ನಾವು ಅರ್ಥೈಸಿಕೊಳ್ಳಬಾರದು.

*ಅಳುತ್ತಾ* (ವ. 11): ಈ ಗ್ರೀಕ್ ಪದದ ಅರ್ಥ "ಗೋಳಾಡುವುದು" ದುಃಖವನ್ನು ಜೋರಾಗಿ ವ್ಯಕ್ತಪಡಿಸುವುದು.

*ರಬ್ಬೂನಿ* (ವ. 16): ಈ ಅರಾಮಿಕ್ ಪದವು "ರಬ್ಬಿ" ಎಂಬ ಸಾಮಾನ್ಯ ಪದದ ಇನ್ನೂ ಬಲವಾದ ಒಂದು ರೂಪವಾಗಿದೆ. ಇವರೆಡರ ಅರ್ಥ "(ನನ್ನ)ಗುರು" ಎಂಬುದಾಗಿದೆ.

*ನನ್ನ ಸಹೋದರರ* (ವ. 17): ಇಲ್ಲಿ ಯೇಸು ಬಹುಶಃ ತನ್ನ ಶಿಷ್ಯರನ್ನು ಕುರಿತು ಹೇಳುತ್ತಿರುವನು.

### ಪ್ರಶ್ನೆಗಳು

1. ಮಗ್ದಲದ ಮರಿಯಳು ಯೇಸುವಿನ ಸಮಾಧಿಯ ಬಳಿಗೆ ಯಾವಾಗ ಹೋದಳು (ವ. 1)?
2. ಸಮಾಧಿಯು ತೆರೆದಿರುವುದನ್ನು ಕಂಡಾಗ ಮರಿಯಳು ಏನು ಮಾಡಿದಳು (ವ. 2)?
3. ಇಬ್ಬರು ಶಿಷ್ಯರಿಗೆ ಮರಿಯಳು ಕೊಟ್ಟ ಸಂದೇಶವೇನು (ವ. 2)?
4. ಯಾಕೆ ಪೇತ್ರನು ಇನ್ನೊಬ್ಬ ಶಿಷ್ಯನ ಹಿಂದೆ (ನಂತರ) ಯೇಸುವಿನ ಸಮಾಧಿಯ ಬಳಿಗೆ ಹೋಗುತ್ತಾನೆ (ವ. 3-4)?
5. ಯೇಸುವಿನ ಸಮಾಧಿಯ ಒಳಗೆ ಮೊದಲು ಹೋದವರಾರು (ವ. 6-8)
6. ಆ ಇಬ್ಬರು ಶಿಷ್ಯರು ಸಮಾಧಿಯೊಳಗೆ ಏನನ್ನು ಕಂಡರು (ವ. 5-7)?
7. ಶಾಸ್ತ್ರದಲ್ಲಿ ಬರೆದಿರುವ ಯಾವ ಮಾತನ್ನು ಅರಿತುಕೊಳ್ಳುವಲ್ಲಿ ಶಿಷ್ಯರು ವಿಫಲರಾದರು (ವ. 9)?
8. ಇಬ್ಬರು ಶಿಷ್ಯರು ಸಮಾಧಿಯ ಬಳಿಯಿಂದ ಹೊರಟು ಹೋದ ಮೇಲೆ ಮರಿಯಳು ಏನನ್ನು ಮಾಡುತ್ತಿದ್ದಳು (ವ. 11)?
9. ಸಮಾಧಿಯೊಳಗೆ ನೋಡಿದಾಗ ಮರಿಯಳು ಏನನ್ನು ಕಂಡಳು (ವ. 11-12)?
10. ತಾನು ಅಳುತ್ತಿರುವುದಕ್ಕೆ ಮರಿಯಳು ಯಾವ ಕಾರಣ ಕೊಡುತ್ತಾಳೆ (ವ. 13)?
11. ಯೇಸು ಸಮಾಧಿಯ ಬಳಿ ನಿಂತಿರುವುದನ್ನು ನೋಡಿ ಮರಿಯಳು ಆತನನ್ನು ಯಾರೆಂಬುದಾಗಿ ನೆನೆಸಿದಳು (ವ. 14-15)?
12. ಮರಿಯಳು ಯೇಸುವನ್ನು ಹೇಗೆ ಗುರುತಿಸಿದಳು (ವ. 16)?
13. ಯೇಸು ಮರಿಯಳಿಗೆ ತನ್ನನ್ನು ಹಿಡಿಯಲು ಯಾಕೆ ಬಿಡುವುದಿಲ್ಲ (ವ. 17)?
14. ಶಿಷ್ಯರಿಗಾಗಿ ಮರಿಯಳು ಹೊಂದಿದ್ದ ಸಂದೇಶವೇನು (ವ. 17-18)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಶಿಷ್ಯನು ನೋಡಿ ನಂಬಿದನು ಎಂಬುದಾಗಿ ಯೋಹಾನನು ಬರೆಯುತ್ತಾನೆ (ವ. 8). ಆತನು ಏನನ್ನು ನಂಬಿದವನೆಂಬುದಾಗಿ ನೀವು ಯೋಚಿಸುವಿರಿ, ಮತ್ತು ಯಾಕೆ?
2. ತಾನು ತೋಟದಲ್ಲಿ ಸಂಧಿಸಿದ ವ್ಯಕ್ತಿಯ ಗುರುತನ್ನು ಹಿಡಿಯುವಲ್ಲಿ ಮರಿಯಳು ಯಾಕೆ ಗಲಿಬಿಲಿ(ಗೊಂದಲ)ಗೊಂಡಳೆಂಬುದಾಗಿ ನೀವು ಯೋಚಿಸುವಿರಿ (ವ. 11-16)?
3. ಯೇಸು ಮರಿಯಳಿಗೆ ತನ್ನನ್ನು ಹಿಡಿಯಬೇಡವೆಂದು ಯಾಕೆ ಹೇಳಿದನೆಂಬುದಾಗಿ ನೀವು ಯೋಚಿಸುವಿರಿ (ವ. 17)?
4. ಬರಿದಾದ ಸಮಾಧಿಯ ಬಳಿಗೆ ಹೋದ ಮಗ್ದಲದ ಮರಿಯ ಮತ್ತು ಇಬ್ಬರು ಶಿಷ್ಯರ ಕುರಿತ ಕಥೆಯನ್ನು ಪುನಃ ಹೇಳಿರಿ (ವ. 1-18). ನಿಮ್ಮ ಪದ ಬಳಸಿರಿ, ಸತ್ಯವೇದ ನೋಡಬೇಡಿರಿ. ನಾಟಕೀಯವಾಗಿ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

1. "ಯೇಸುವಿಗೆ ಪ್ರಿಯನಾಗಿದ್ದ" ಶಿಷ್ಯನ ದೃಷ್ಟಿಕೋನದಿಂದ ಯೋಹಾನ 20:1-8 ನ್ನು ವಿಮರ್ಶಿಸಿರಿ. ಆ ಮುಂಜಾನೆ ಆತನ ಅನುಭವ ಹೇಗಿತ್ತು? ತೆರೆದ ಸಮಾಧಿಯ ಕುರಿತು ಮರಿಯಳ ಮಾಹಿತಿಯನ್ನು ಕೇಳಿದಾಗ ಆತನು ಏನೆಂದು ಭಾವಿಸಿದನು? ಯಾವಾಗ ಆತನು ಅದರೊಳಗೆ ಬೊಗ್ಗಿ ನೋಡಿದನು? ಆತನು ಏನನ್ನು ತಿಳಿದುಕೊಂಡನು? ಆತನು ಏನನ್ನು ನಂಬಿದನು? ಆತನ ಜೀವನ ಹೇಗೆ ಬದಲಾಯಿತು?

   ಕೆಳಗಿನವುಗಳಲ್ಲಿ ಒಂದನ್ನು ಆರಿಸಿಕೊಳ್ಳಿ:

   - ***ಆತನು ನೋಡಿ ನಂಬಿದನು*** ಎಂಬ ಒಂದು ಧ್ಯಾನ(ಸತ್ಯವೇದ ಅಧ್ಯಯನ ಅಥವಾ ಸಂದೇಶ)ವನ್ನು ಸಿದ್ಧಪಡಿಸಿರಿ.
   - ***ನಾನು ನೋಡಿದೆನು ಮತ್ತು ನಂಬಿದೆನು*** ಎಂಬ ಒಂದು ಏಕಭಾಷಾ(ಪಾತ್ರಾ)ಭಿನಯವನ್ನು ಬರೆಯಿರಿ.
   - ಈ ಶಿಷ್ಯನ ದೃಷ್ಟಿಕೋನದಿಂದ ಒಂದು ಪದ್ಯ/ಕವನ ಬರೆಯಿರಿ.

2. ಮಗ್ದಲದ ಮರಿಯಳ ದೃಷ್ಟಿಕೋನದಿಂದ ಯೋಹಾನ 20:1-18 ನ್ನು ವಿಮರ್ಶಿಸಿರಿ. ಆಕೆಯ ಭಾವನೆ ಹೇಗಿತ್ತು ಮತ್ತು ಸಮಾಧಿಯ ಕಲ್ಲು ಉರುಳಿಸಲ್ಪಟ್ಟದ್ದನ್ನು ಕಂಡಾಗ ಆಕೆ ಏನೆಂದು ಯೋಚಿಸಿದಳು? ಯಾವಾಗ ಆಕೆ ಸಮಾಧಿಯ ಹೊರಗೆ ಅಳುತ್ತಾ ಕೂತಳು? ಆಕೆ ಯಾವಾಗ ಇಬ್ಬರು ದೂತರನ್ನು ಕಂಡಳು? ಯಾವಾಗ ಆಕೆ "ತೋಟಗಾರನು" ಸಮಾಧಿಯ ಬಳಿ ನಿಂತಿರುವುದನ್ನು ಕಂಡಳು? ಆತನು ಯೇಸುವಾಗಿದ್ದಾನೆಂದು ಯಾವಾಗ ಆಕೆ ಗ್ರಹಿಸಿಕೊಂಡಳು? ಯಾವಾಗ ಆಕೆ ಯೇಸುವಿನ ಮಾತನ್ನು ಕೇಳಿದಳು? ಆಕೆ ತನ್ನ ಅನುಭವ ಮತ್ತು ಕೇಳಿಸಿಕೊಂಡದ್ದನ್ನು ಶಿಷ್ಯರಿಗೆ ಯಾವಾಗ ತಿಳಿಸಿದಳು?

   ಕೆಳಗಿನವುಗಳಲ್ಲಿ ಒಂದನ್ನು ಆರಿಸಿಕೊಳ್ಳಿರಿ:

   - ***ಮಗ್ದಲದ ಮರಿಯಳು ಮತ್ತು ಅವಳ ಕರ್ತನು*** ಎಂಬ ಒಂದು ಧ್ಯಾನವನ್ನು ಸಿದ್ಧಪಡಿಸಿರಿ.
   - ***ಎಂಥಾ ಮುಂಜಾನೆ*** ಎಂಬ ಒಂದು ಏಕಪಾತ್ರಾಭಿನಯವನ್ನು ಬರೆಯಿರಿ.
   - ಮಗ್ದಲದ ಮರಿಯಳ ದೃಷ್ಟಿಕೋನದಿಂದ ಒಂದು ಪದ್ಯ/ಕವನವನ್ನು ಬರೆಯಿರಿ.

## 3. ಎಮ್ಮಾಹುವಿನ ರಸ್ತೆಯಲ್ಲಿ, ಲೂಕ 24:13-35

### ಪೀಠಿಕೆ ಮತ್ತು ಟಿಪ್ಪಣಿಗಳು

ತೋಟದಲ್ಲಿ ಯೇಸುವನ್ನು ಮೊದಲ ಬಾರಿ ನೋಡಿದಾಗ ಮಗ್ದಲದ ಮರಿಯಳಿಗೆ ಆತನನ್ನು ಗುರುತಿಸಲಾಗಲಿಲ್ಲ. ಆತನನ್ನು ಜೀವಂತವಾಗಿ ಪುನಃ ನೋಡುತ್ತೇನೆಂಬುದಾಗಿ ಆಕೆ ಅಪೇಕ್ಷಿರಲಿಲ್ಲ ಮತ್ತು ಆಕೆ ಜ್ಞಾಪಿಸಿಕೊಂಡದದ್ದಕ್ಕಿಂತ ಬಹುಶಃ ಆತನು ವಿಭಿನ್ನವಾಗಿ ಕಂಡನು. ಅದೇ ದಿನ ಮಧ್ಯಾಹ್ನ ಯೆರೂಸಲೇಮಿನಿಂದ ತಮ್ಮೂರಿಗೆ ಹೋಗುತ್ತಿದ್ದ ಯೇಸುವಿನ ಇಬ್ಬರು ಶಿಷ್ಯರು ಸಹ ಮಾರ್ಗಮಧ್ಯೆ ಅದೇ ಸಮಸ್ಯೆ ಎದುರಿಸುತ್ತಾರೆ. ಯೇಸು ತಾನೇ ಹತ್ತಿರಕ್ಕೆ ಬಂದು ಅವರ ಜೊತೆಯಲ್ಲಿ ರಸ್ತೆ ಮೇಲೆ ನಡೆದುಕೊಂಡು ಹೋದನು. ಆದರೆ ಸಂಜೆಯ ಊಟದ ವೇಳೆ ಯೇಸು ತಾನೇ ರೊಟ್ಟಿಯನ್ನು ಮುರಿದು ಅವರಿಗೆ ಕೊಡುವಾಗ ಅವರ ಕಣ್ಣುಗಳು ತೆರೆಯುವವರೆಗೂ ಅವರಿಗೆ ಆತನನ್ನು ಗುರುತಿಸಲಾಗಲಿಲ್ಲ. ಆ ಶಿಷ್ಯರಲ್ಲಿ ಒಬ್ಬನ ಹೆಸರು *ಕ್ಲೆಯೊಫ* (ವ. 18). ಇನ್ನೊಬ್ಬ ವ್ಯಕ್ತಿ ಬಹುಶಃ ಆತನ ಹೆಂಡತಿಯಾಗಿದ್ದಿರಬಹುದು. ಕೇವಲ ಲೂಕನು ಮಾತ್ರ ಈ ಸುಂದರವಾದ ಕಥೆಯನ್ನು ತನ್ನ ಸುವಾರ್ತೆಯಲ್ಲಿ ಸೇರಿಸಿದ್ದಾನೆ.

*ಶಿಷ್ಯರಲ್ಲಿ ಇಬ್ಬರು* (ವ. 13): ಇದರಲ್ಲೊಬ್ಬನು ಕ್ಲೆಯೊಫನಾಗಿದ್ದನು (ವ. 18). ಅವರು ಯೇಸುವಿನ ಹನ್ನೆರಡು ಶಿಷ್ಯರ ಮಧ್ಯದಲ್ಲಿರುವವರಾಗಿರಲಿಲ್ಲ, ಆದರೆ ಯೇಸುವಿನ ವಿಶಾಲ ದೃಷ್ಠಿಯ ಶಿಷ್ಯರಾಗಿದ್ದರು (ಹೋಲಿಸಿ "ನಿರೀಕ್ಷಿಸಿಕೊಂಡಿದ್ದೆವು", "ನಮ್ಮಲ್ಲಿ", "ನಮಗೆ" ಮತ್ತು "ನಮ್ಮ ಸಂಗಡ ಇದ್ದವರು" ವ. 21-24).

*ಎಮ್ಮಾಹು ಎಂಬ ಹಳ್ಳಿ* (ವ. 13): ಈ ಹಳ್ಳಿಯ ಸ್ಥಳ ಇಂದು ಎಲ್ಲಿದೆ ಎಂಬುದು ತಿಳಿದಿಲ್ಲ.

*ಇಸ್ರಾಯೇಲ್ ಜನರನ್ನು* (ವ. 21): ಇಬ್ಬರು ವ್ಯಕ್ತಿಗಳು ಬಹುಶಃ ಯೆಹೂದಿ ಜನರನ್ನು ರೋಮಿನ ಬಂಧನದೊಳಗಿಂದ ಮತ್ತು ದೇವರ ರಾಜ್ಯದೊಂದಿಗಿನ ಬಿಡುಗಡೆಯ ಕುರಿತು ಹೇಳುತ್ತಾರೆ (ಹೋಲಿಸಿ ಲೂಕ 1:68, 2:38, 21:28,31).

*ಮೋಶೆಯ ಮತ್ತು ಎಲ್ಲಾ ಪ್ರವಾದಿಗಳ* (ವ. 7): ಈ ಹೇಳಿಕೆಯು ಹಳೇ ಒಡಂಬಡಿಕೆಯ ಇದೇ ಸಂಗ್ರಹವನ್ನು ಸೂಚಿಸುವ ಒಂದು ಹೇಳಿಕೆಯಾಗಿದೆ.

### ಪ್ರಶ್ನೆಗಳು

1. ಯೆರೂಸಲೇಮಿನಿಂದ ಎಮ್ಮಾಹುವಿಗೆ ನಡೆದುಕೊಂಡು ಹೋಗುತ್ತಿರುವಾಗ ಆ ಇಬ್ಬರು ಶಿಷ್ಯರು ಏನೆಂದು ಮಾತಾಡುತ್ತಿದ್ದರು (ವ. 14)?
2. ಆ ಇಬ್ಬರಿಗೆ ಯೇಸು ಏನೆಂದು ಕೇಳಿದನು (ವ. 17)?
3. ಯೇಸುವಿನ ಪ್ರಶ್ನೆಗೆ ಅವರು ಯಾಕೆ ಆಶ್ಚರ್ಯಪಟ್ಟರು (ವ. 18)?
4. ಅವರು ಯೇಸುವಿನ ಬಗ್ಗೆ ಆತನಿಗೇ ಹೇಗೆ ವರ್ಣಿಸುತ್ತಾರೆ (ವ. 19)?
5. ಯೇಸುವಿಗೆ ಏನಾಯಿತೆಂಬುದಾಗಿ ಅವರು ಹೇಳುತ್ತಾರೆ (ವ. 20)?
6. ಯೇಸುವಿನ ಮೇಲೆ ಅವರು ಯಾವ ನಿರೀಕ್ಷೆಯನ್ನಿಟ್ಟುಕೊಂಡಿದ್ದರು (ವ. 21)?
7. ಆ ದಿನ ಮುಂಜಾನೆ ಅವರಿಗೆ ಅತ್ಯಾಶ್ಚರ್ಯವನ್ನುಂಟು ಮಾಡಿದ್ದು ಯಾವುದು (ವ. 22-24)?
8. ಯಾಕೆ ಯೇಸು ಅವರನ್ನು "ಬುದ್ಧಿಯಿಲ್ಲದವರೇ" ಮತ್ತು "ಮಂದ ಹೃದಯರೇ" ಎಂಬುದಾಗಿ ಕರೆಯುತ್ತಾನೆ (ವ. 25-26)?
9. ಯೇಸು ಆ ಇಬ್ಬರಿಗೆ ಮೆಸ್ಸೀಯ(ಕ್ರಿಸ್ತ)ನನ್ನು ಹೇಗೆ ವರ್ಣಿಸುತ್ತಾನೆ (ವ. 26)?

10. ಯೆಹೂದಿ ನಾಯಕರಿಂದ ಕೊಲ್ಲಲ್ಪಟ್ಟ ಪ್ರವಾದಿಯು ನಿಜವಾಗಿ ಕ್ರಿಸ್ತ(ಮೆಸ್ಸೀಯ)ನಾಗಿದ್ದನೆಂಬುದನ್ನು ಯೇಸು ಅವರಿಗೆ ಹೇಗೆ ಸಾಬೀತುಪಡಿಸುತ್ತಾನೆ (ವ. 26-27)?
11. ಯಾಕೆ ಅವರು ಆ ರಾತ್ರಿಯನ್ನು ತಮ್ಮ ಹಳ್ಳಿಯಲ್ಲಿ ಕಳೆಯಬೇಕೆಂದು (ತಂಗಬೇಕೆಂದು) ಯೇಸುವಿಗೆ ಬಲವಂತಮಾಡಿದರು (ವ. 28-29)?
12. ಯಾವಾಗ ಅವರ ಕಣ್ಣುಗಳು ತೆರೆದು, ತಮ್ಮ ಮನೆಗೆ ತಾವು ಆಮಂತ್ರಿಸಿದ ವ್ಯಕ್ತಿ ಯೇಸುವೇ ಆಗಿದ್ದಾನೆಂಬುದನ್ನು ಅವರು ಗ್ರಹಿಸುವಂತಾಯಿತು (ವ. 30-31)?
13. ಆ ದಿನ ರಸ್ತೆಯಲ್ಲಿ ತಮಗಾದ ಅನುಭವವನ್ನು ಅವರು ಹೇಗೆ ವಿವರಿಸುತ್ತಾರೆ (ವ. 32)?
14. ಯೇಸು ಅವರನ್ನು ಬಿಟ್ಟು ಹೋದ ಕೂಡಲೇ ಅವರು ಏನು ಮಾಡಿದರು (ವ. 33)?
15. ತಮ್ಮ ಸ್ನೇಹಿತರಿಂದ ಅವರು ಏನನ್ನು ತಿಳಿದು (ಕಂಡು)ಕೊಂಡರು (ವ. 33-34)?
16. ಯೆರೂಸಲೇಮಿನಲ್ಲಿನ ತಮ್ಮ ಸ್ನೇಹಿತರಿಗೆ ಅವರು ಏನೆಂದು ಸಾಕ್ಷಿಕೊಟ್ಟರು (ವ. 35)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. "ಅವರ ಕಣ್ಣು ಕಟ್ಟಿದ ಹಾಗಾಯಿತು" ಎಂಬ ಹೇಳಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 16)?
2. ಯಾಕೆ ಆ ಇಬ್ಬರು ಶಿಷ್ಯರು ಯೇಸುವಿನ ಬಗ್ಗೆ "ಪ್ರವಾದಿ" ಎಂಬ ಹೆಸರನ್ನು ಬಳಸುತ್ತಾರೆಂಬುದಾಗಿ ನೀವು ಯೋಚಿಸುವಿರಿ?
3. "ಅವರ ಕಣ್ಣುಗಳು ತೆರೆದವು" (ವ. 31) ಎಂಬ ಮಾತನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
4. ಆ ಇಬ್ಬರು ಶಿಷ್ಯರು ಮತ್ತು ಯೇಸುವಿನ ಕುರಿತ ಯೋಹಾನನ ಕಥೆಯನ್ನು ನಿಮ್ಮ ಮಾತಿನಲ್ಲಿ ಹೇಳಿರಿ, ಸತ್ಯವೇದ ನೋಡಬೇಡಿರಿ. ನೀವೊಂದು ಹಳ್ಳಿಜನರ ಗುಂಪಿಗೆ ಮಾತಾಡುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯದಲ್ಲಿನ ವಿಷಯ (ಮಾಹಿತಿ)ಗಳ ಬೆಳಕಿನಲ್ಲಿ ಲೂಕ 24:13-35 ನ್ನು ವಿಮರ್ಶಿಸಿ. ಎಮ್ಮಾಹುವಿನ ರಸ್ತೆಯಲ್ಲಿ ಏನಾಯಿತು? ಸಂಜೆ ಊಟದ ವೇಳೆ ಎಮ್ಮಾಹುವಿನಲ್ಲಿ ಏನಾಯಿತು? ಯೇಸು ತಮ್ಮೊಂದಿಗೆ ಬರುವುದಕ್ಕಿಂತ ಮೊದಲು ಆ ಇಬ್ಬರು ಶಿಷ್ಯರ ಭಾವನೆ ಏನಾಗಿತ್ತು? "ಅವರು ಆತನನ್ನು ಗುರುತಿಸಲಾರದಂತೆ ಅವರ ಕಣ್ಣು ಕಟ್ಟಿದ ಹಾಗಾಯಿತು" ಎಂಬುದರ ಅರ್ಥವೇನು? ಯೇಸುವು ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ವ್ಯಾಖ್ಯಾನಿಸುವಾಗ ಅವರಿಗೆ ಏನು ಅನ್ನಿಸಿತು? ಯೇಸು ರೊಟ್ಟಿಯನ್ನು ಮುರಿಯುವಾಗ ಅವರಿಗೆ ಏನು ಅನ್ನಿಸಿತು? "ಅವರ ಕಣ್ಣುಗಳು ತೆರೆದವು" ಎಂಬುದರ ಅರ್ಥವೇನು? ಆ ದಿನ ಸಂಜೆ ಅವರು ಏನು ಮಾಡಿದರು? ಅವರ ಜೀವನ ಹೇಗೆ ಬದಲಾಯಿತು?

ಕೆಳಕಂಡ ಒಂದನ್ನು ಆರಿಸಿಕೊಳ್ಳಿರಿ:

- ***ಅವರ ಕಣ್ಣುಗಳು ತೆರೆದವು*** ಎಂಬ ಒಂದು ಧ್ಯಾನವನ್ನು ಸಿದ್ಧಪಡಿಸಿರಿ.
- ***ನನ್ನ ಕಣ್ಣುಗಳು ತೆರೆದವು*** ಎಂಬ ಒಂದು ಏಕಪಾತ್ರಾಭಿನಯವನ್ನು ಬರೆಯಿರಿ. ಈ ಏಕಪಾತ್ರಾಭಿನಯವು ಆ ಇಬ್ಬರಲ್ಲಿ ಒಬ್ಬರ ದೃಷ್ಟಿಕೋನದಿಂದರಲಿ.
- ಇಬ್ಬರಲ್ಲಿ ಒಬ್ಬ ಶಿಷ್ಯನ ದೃಷ್ಟಿಕೋನದಿಂದ ಒಂದು ಪದ್ಯ/ಕವನವನ್ನು ಬರೆಯಿರಿ.



## 4. ಶಿಷ್ಯರ ಒಂದು ಗುಂಪು, ಲೂಕ 24:36-44 ಮತ್ತು ಯೋಹಾನ 20:1-25

### ಪೀಠಿಕೆ ಮತ್ತು ಟಿಪ್ಪಣಿಗಳು

ತನ್ನ ಪುನರುತ್ಥಾನ ದಿನದ ಸಂಜೆಯಲ್ಲಿ ಯೇಸು ತನ್ನ ಶಿಷ್ಯರಿಗೆ ಕಾಣಿಸಿಕೊಂಡಿದ್ದನ್ನು ಲೂಕ ಮತ್ತು ಯೋಹಾನರಿಬ್ಬರೂ ದಾಖಲಿಸುತ್ತಾರೆ. ಆ ಸಮಯದಲ್ಲಿ ತೋಮನು ಇರಲಿಲ್ಲ ಎಂಬುದನ್ನು ಯೋಹಾನನು ಸೇರಿಸುತ್ತಾನೆ. ಈ ಎರಡು ವಾಕ್ಯಭಾಗಗಳ ನಡುವೆ ಇತರೆ ಭಿನ್ನತೆಗಳಿವೆ, ಉದಾಹರಣಗೆ: ಶಿಷ್ಯರು ಹೇಗೆ ಆತನ ಪ್ರತ್ಯಕ್ಷತೆಗೆ ಪ್ರತಿಕ್ರಯಿಸಿದರು ಮತ್ತು ಅವರ ಪ್ರತಿಕ್ರಿಯೆಗೆ ಯೇಸು ಹೇಗೆ ಪ್ರತಿಕ್ರಯಿಸಿದನು. ಆದರೆ ಎರಡೂ ವಾಕ್ಯಭಾಗಗಳೂ ಸಹ ಯೇಸುವಿನ ಮೂಲಕ ಸಿಗುವ ರಕ್ಷಣೆ ಮತ್ತು ಪಾಪಕ್ಷಮಾಪಣೆಯ ಸುವಾರ್ತೆಯನ್ನು ಸಾರುವ ತಮ್ಮ ಮುಂಬರುವ ಸೇವೆಯನ್ನು ಸೂಚಿಸುತ್ತವೆ.

*ಅವರ* (ಲೂಕ 24:36): ಇವರು ಹಿಂದಿನ ಕಥೆಯಲ್ಲಿ ಆ ಇಬ್ಬರು ಶಿಷ್ಯರು (ವ. 13:35), ಕ್ಲೆಯೊಫ ಮತ್ತು ಅನಾಮಧೇಯ ವ್ಯಕ್ತಿ, ಬಹುಶಃ ಆತನ ಪತ್ನಿ.

*ನಿಮಗೆ ಮನಶ್ಶಾಂತಿಯಾಗಲಿ* (ಲೂಕ 24:36): ಇದು ಸಾಮಾನ್ಯವಾಗಿ ಯೆಹೂದ್ಯರು ಒಬ್ಬರನ್ನೊಬ್ಬರು ಪರಸ್ಪರ ವಂದಿಸುವ ರೀತಿಯಾಗಿತ್ತು.

*ಮೋಶೆಯ ಧರ್ಮಶಾಸ್ತ್ರದಲ್ಲಿಯೂ, ಪ್ರವಾದಿಗಳ ಗ್ರಂಥಗಳಲ್ಲಿಯೂ, ಕೀರ್ತನೆಗಳಲ್ಲಿಯೂ* (ಲೂಕ 24:44): ಕೀರ್ತನೆಗಳು ಇಬ್ರಿಯ ಸತ್ಯವೇದದ ಮೂರನೆ ವಿಭಾಗದ, ಬರಹಗಳ ಬಹು ಪ್ರಾಮುಖ್ಯವಾದ ಭಾಗವಾಗಿತ್ತು. ಬಾಧೆಪಡುವ ಮೆಸ್ಸೀಯನ ಕುರಿತ ಹಳೇ ಒಡಂಬಡಿಕೆಯ ಪ್ರವಾದನೆಗಳೆಲ್ಲಾ ತನ್ನಲ್ಲಿ ನೆರವೇರಿವೆ ಎಂಬುದನ್ನು ಯೇಸು ಹೇಳಿದ್ದಾನೆ.

*ಆತನು ಅವರ ಬುದ್ಧಿಯನ್ನು ತೆರೆದು* (ಲೂಕ 24:45): ಪ್ರಸ್ತುತ ಇರುವವರಿಗೆ ಹಳೇ ಒಡಂಬಡಿಕೆಯ ಶಾಸ್ತ್ರಗಳನ್ನು ವಿವರಿಸಲು ಹಾಗೆ ಮಾಡಿದನು.

*ನನ್ನ ತಂದೆಯು ವಾಗ್ದಾನ ಮಾಡಿದ್ದನ್ನು ... ಮೇಲಣ ಲೋಕದಿಂದ ಶಕ್ತಿಯನ್ನು* (ಲೂಕ 24:49): ದೇವ ಜನರ ಮೇಲೆ ಸುರಿಯುವ ಪವಿತ್ರಾತ್ಮನ ವಾಗ್ದಾನ (ಹೋಲಿಸಿ ಯೋವೇಲ 2:28-29).

*ಶಿಷ್ಯರು* (ಯೋಹಾನ 20:19): ಈ ಶಿಷ್ಯರು ಯಾರೆಂಬುದು ನಮಗೆ ಗೊತ್ತಿಲ್ಲ. ಆದರೆ ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ತೋಮನು ಅವರ ಸಂಗಡ ಇರಲಿಲ್ಲ ಎಂಬುದಾಗಿ ಯೋಹಾನನು ಹೇಳುತ್ತಾನೆ (ವ. 24) ಮತ್ತು ಲೂಕನು ಹೇಳುವಂತೆ, ಇಬ್ಬರು ಹೆಚ್ಚುವರಿ ಶಿಷ್ಯರಾದ ಕ್ಲೆಯೊಫ ಮತ್ತು ಆತನ ಸಂಗಡಿಗನು ಸಹ ಇದ್ದರು ಎಂಬುದಾಗಿ ನಾವು ತಿಳಿದಿದ್ದೇವೆ (ನೋಡಿ ಲೂಕ 24:35-36). ಇನ್ನಿತರರು, ಉದಾಹರಣೆಗೆ ಗಲಿಲಾಯದಿಂದ ಯೇಸುವನ್ನು ಹಿಂಬಾಲಿಸಿದ ಕೆಲ ಸ್ತ್ರೀಯರೂ ಸಹ ಇದ್ದಿರಬಹುದು.

*ಯೆಹೂದ್ಯರ* (ಯೋಹಾನ 20:19): ಇದು ಯೋಹಾನನು ಯೆಹೂದಿ ನಾಯಕರನ್ನು ಉಲ್ಲೇಖಿಸುವ ರೀತಿಯಾಗಿದೆ.

ಯೋಹಾನ 20:23: ಗ್ರೀಕ್ ಪದವು ಒಂದು ಅಸಾಮಾನ್ಯವಾದ ವ್ಯಾಕರಣ ರಚನೆಯನ್ನು ಹೊಂದಿದೆ, ಅದು ಈ ರೀತಿಯಾಗಿದೆ: “ನೀವು ಯಾರ ಪಾಪಗಳನ್ನು ಕ್ಷಮಿಸಿಬಿಡುತ್ತೀರೋ ಅವರಿಗೆ ಅವುಗಳ ಕ್ಷಮಾಪಣೆಯಾಗುತ್ತದೆ, ಯಾರ ಪಾಪಗಳನ್ನು ಕ್ಷಮಿಸದೆ ಉಳಿಸುತ್ತೀರೋ ಅವರಿಗೆ ಅವುಗಳು ಉಳಿಯುತ್ತವೆ”. ದೇವರು ಪಾಪಗಳನ್ನು ಕ್ಷಮಿಸುವುದಿಲ್ಲ, ಯಾಕೆಂದರೆ ವಿಶ್ವಾಸಿಗಳು ಅದನ್ನು ಮಾಡಲು ನಿರ್ಧರಿಸಬೇಕಿದೆ. ಆದರೆ ಲೋಕ ರಕ್ಷಕನಾದ ಯೇಸುವಿನ ಕುರಿತಾದ ಸುವಾರ್ತೆಯನ್ನು ನಾವು ಸಾರುವಾಗ ದೇವರ ಕ್ಷಮಾಪಣೆಯನ್ನು ಘೋಷಿಸುತ್ತೇವೆ. ಎಲ್ಲೆಲ್ಲಿ ಸುವಾರ್ತೆಯು ಅಂಗೀಕರಿಸಲ್ಪಡುತ್ತದೋ ಅಲ್ಲಿ ಪಾಪಗಳು ಕ್ಷಮಿಸಲ್ಪಡುತ್ತವೆ. ಎಲ್ಲೆಲ್ಲಿ ಸುವಾರ್ತೆಯು ತಿರಸ್ಕರಿಸಲ್ಪಡುತ್ತದೋ ಅಲ್ಲಿ ಪಾಪಗಳು ಕ್ಷಮಿಸಲ್ಪಡುವುದಿಲ್ಲ.

*ದಿದುಮನೆನೆಸಿಕೊಳ್ಳುವ ತೋಮನು* (ಯೋಹಾನ 20:24): ಇಬ್ರಿಯ ಪದದಿಂದ ಬರುವ 'ತೋಮ' ಎಂಬ ಹೆಸರಿನ ಅರ್ಥ "ಅವಳಿ" ಎಂದಾಗಿದೆ. ದಿದುಮ ಎಂಬುದು "ಅವಳಿ" ಗಾಗಿನ ಗ್ರೀಕ್ ಪದವಾಗಿದೆ.

**ಪ್ರಶ್ನೆಗಳು**

1. ಲೂಕನು ಹೇಳುವ ವಾಕ್ಯಭಾಗ(ವಿಷಯ)ದ ಹಿನ್ನಲೆ (ಸಂದರ್ಭ) ಏನಾಗಿದೆ (ಲೂಕ 24:36) ಮತ್ತು ಟಿಪ್ಪಣಿಗಳಾವುವು?
2. ಯೇಸು ತನ್ನ ಶಿಷ್ಯರನ್ನು ಹೇಗೆ ವಂದಿಸುತ್ತಾನೆ (ಲೂಕ 24:36)?
3. ಶಿಷ್ಯರು ಯಾಕೆ ಭಯಹಿಡಿದವರಾದರು (ಲೂಕ 24:37)?
4. ನಿಜವಾಗಲೂ ತಾನೇ ಆಗಿದ್ದೇನೆಂಬುದನ್ನು ಶಿಷ್ಯರಿಗೆ ಮನವರಿಕೆ ಮಾಡಲು ಯೇಸು ಹೇಗೆ ಪ್ರಯತ್ನಿಸುತ್ತಾನೆ (ಲೂಕ 24:38-39)?
5. ಯೇಸುವನ್ನು ಕಂಡಾಗ ಶಿಷ್ಯರಲ್ಲಿ ಮಿಶ್ರ ಭಾವನೆಯುಂಟಾಯಿತು (ಲೂಕ 24:4) ಅದು ಯಾವ ರೀತಿಯಲ್ಲಿ?
6. ಯಾಕೆ ಯೇಸು ಆಹಾರವನ್ನು ಕೇಳಿದನು (ಲೂಕ 24:41-42)?
7. ಯಾವುದಕ್ಕೆ ತನ್ನ ಶಿಷ್ಯರು ಸಾಕ್ಷಿಗಳಾಗುವರು ಎಂಬುದಾಗಿ ಯೇಸು ಹೇಳುತ್ತಾನೆ (ಲೂಕ 24:44-48) ಮತ್ತು ವಚನ 44 ರ ಟಿಪ್ಪಣಿ)?
8. ಯೆರೂಸಲೇಮಿನಲ್ಲಿ ಏನನ್ನು ಪ್ರಾರಂಭಿಸಬೇಕೆಂದು ಯೇಸು ಹೇಳುತ್ತಾನೆ (ಲೂಕ 24:46-47)?
9. ಯಾಕೆ ಯೇಸು ತನ್ನ ಶಿಷ್ಯರಿಗೆ ಯೆರೂಸಲೇಮಿನಲ್ಲಿ ಕಾದುಕೊಂಡಿರಿ ಎಂದು ಹೇಳುತ್ತಾನೆ (ಲೂಕ 24:49 ಮತ್ತು ಟಿಪ್ಪಣಿ)?
10. ಯೋಹಾನ ಹೇಳುವ ವಿಷಯ(ವಾಕ್ಯಭಾಗ)ದ ಸಂದರ್ಭವೇನಾಗಿದೆ (ಯೋಹಾನ 20:19)?
11. ಯಾಕೆ ಮನೆಯ ಬಾಗಿಲುಗಳನ್ನು ಮುಚ್ಚಲಾಗಿತ್ತು (ಯೋಹಾನ 20:19)?
12. ಯೇಸುವನ್ನು ಕಂಡಾಗ ಶಿಷ್ಯರು ಹೇಗೆ ಪ್ರತಿಕ್ರಯಿಸುತ್ತಾರೆ (ಯೋಹಾನ 20:21)?
13. ತನ್ನ ಶಿಷ್ಯರಿಗೆ ಆಜ್ಞಾಪಿಸುವಾಗ ಯೇಸು ಯಾವ ಪದಗಳನ್ನು ಉಪಯೋಗಿಸುತ್ತಾನೆ (ಯೋಹಾನ 20:21)?
14. ತಾವು ಯೇಸುವನ್ನು ನೋಡಿದ್ದೇವೆಂಬುದಾಗಿ ಉಳಿದ ಶಿಷ್ಯರು ಹೇಳುವಾಗ ತೋಮನು ಹೇಗೆ ಪ್ರತಿಕ್ರಯಿಸುತ್ತಾನೆ (ಯೋಹಾನ 20:24-25)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಎರಡೂ ವಾಕ್ಯಭಾಗಗಳನ್ನು ಹೋಲಿಸಿ (ಲೂಕ 24:36-49 ಮತ್ತು ಯೋಹಾನ 20:19-25), ಗಮನಕ್ಕೆ ಬಂದ ಅಂಶಗಳನ್ನು ಪಟ್ಟಿಮಾಡಿರಿ.
2. ಯೇಸು ತನ್ನ ಶಿಷ್ಯರ ಮೇಲೆ ಊದುವುದರ ಬಗ್ಗೆ ಯೋಹಾನ 20:22 ನ್ನು ಹೇಗೆ ಅರ್ಥೈಸಿಕೊಳ್ಳುವಿರಿ?
3. ತನ್ನ ಶಿಷ್ಯರು ಜನರ ಪಾಪಗಳನ್ನು ಕ್ಷಮಿಸುವುದರ ಕುರಿತಾದ ಯೇಸುವಿನ ಮಾತನ್ನು ನಿಮ್ಮದೇ ಮಾತಿನಲ್ಲಿ (ಪದಗಳಲ್ಲಿ) ವಿವರಿಸಿರಿ.
4. ಯೇಸು ತನ್ನ ಶಿಷ್ಯರಿಗೆ ಕಾಣಿಸಿಕೊಳ್ಳುವುದರ ಕುರಿತಾದ ಯೋಹಾನನು ಹೇಳುವ ಕಥೆಯನ್ನು ಪುನಃ ಹೇಳಿರಿ ಮತ್ತು ಎರಡೂ ವಾಕ್ಯಭಾಗಗಳನ್ನು (ಲೂಕ 24:36-49 ಮತ್ತು ಯೋಹಾನ 20:19-25) ಒಂದಾಗಿ ಸೇರಿಸಿರಿ. ನಿಮ್ಮದೇ ಪದಗಳನ್ನು ಬಳಸಿರಿ, ಸತ್ಯವೇದದಲ್ಲಿ ನೋಡಬೇಡಿರಿ. ನಾಟಕೀಯವಾಗಿ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.

## 5. ಯೇಸು ತೋಮನಿಗೆ ಕಾಣಿಸಿಕೊಂಡದ್ದು, ಯೋಹಾನ 20:26-29

### ಪೀಠಿಕೆ ಮತ್ತು ಟಿಪ್ಪಣಿಗಳು

ಒಂದು ವಾರದ ನಂತರ ತೋಮನು ಈ ಹಿಂದೆ ಕೇಳಿಕೊಂಡಿದ್ದ ದೈಹಿಕ ಪುರಾವೆಯನ್ನು ಹೊಂದಿಕೊಳ್ಳುತ್ತಾನೆ. ಯೋಹಾನನ ಸುವಾರ್ತೆಯಲ್ಲಿ ಈ ವಿಷಯ ಭಾಗವು ಈ ಹಿಂದಿನ ಪುನರುತ್ಥಾನದ ಸಂಜೆ ಯೇಸು ಒಂದು ಗುಂಪು ಶಿಷ್ಯರಿಗೆ ಕಾಣಿಸಿಕೊಂಡಿದ್ದರ ಕುರಿತಾದ ಕಥೆಯೊಂದಿಗೆ ಸಂಬಂಧವನ್ನು ಹೊಂದಿದೆ (ವ. 19-25). ಆಗ ತೋಮನು ಇರಲಿಲ್ಲ, ಆದರೆ ಈಗ ಆತನಿದ್ದಾನೆ.

*ನನ್ನ ಸ್ವಾಮಿ, ನನ್ನ ದೇವರು* (ವ. 28): ಯೇಸುವನ್ನು "ನನ್ನ ದೇವರು" ಎಂದು ಕರೆಯುವಾಗ ತೋಮನು ಒಂದು ಬಲವಾದ ಹೇಳಿಕೆಯನ್ನು ಕೊಡುತ್ತಾನೆ. ಯೆಹೂದಿ ಹಿನ್ನಲೆಯ ಪ್ರಕಾರ ಇದೊಂದು ದೇವದೂಷಣೆಯಾಗಿದ್ದು, ಅಂಥವರನ್ನು ಕಲ್ಲೆಸೆದು ಕೊಲ್ಲಬೇಕಾಗಿತ್ತು (ಹೋಲಿಸಿ ಯೋಹಾನ 10:33).

### ಪ್ರಶ್ನೆಗಳು

1. ಈ ವಾಕ್ಯಭಾಗದ (ಕಥೆಯ) ಸಂದರ್ಭವೇನಾಗಿದೆ (ವ. 26)?
2. ಯೇಸುವಿನ ಪ್ರತ್ಯಕ್ಷತೆಯ ಬಗ್ಗೆ ಅಸ್ವಾಭಾವಿಕ(ಅಸಮಾನ್ಯ)ವಾದುದ್ದೇನು (ವ. 26)?
3. ಯೇಸು ತನ್ನ ಶಿಷ್ಯರನ್ನು ಹೇಗೆ ವಂದಿಸುತ್ತಾನೆ (ವ. 26)?
4. ತೋಮನಿಗೆ ಏನನ್ನು ಮಾಡಬೇಕೆಂದು ಯೇಸು ಹೇಳಿದನು (ಕೇಳಿದನು) (ವ. 27)?
5. ಯೇಸುವಿನ ಕೋರಿಕೆಗೆ ತೋಮನು ಹೇಗೆ ಪ್ರತಿಕ್ರಯಿಸುತ್ತಾನೆ (ವ. 28)?
6. ಈ ವಾಕ್ಯಭಾಗದ ಕೊನೆಯಲ್ಲಿ ಯೇಸು ಯಾರನ್ನು "ಧನ್ಯರು" ಎಂಬುದಾಗಿ ಕರೆಯುತ್ತಾನೆ (ವ. 29)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ತೋಮನನ್ನು "ಸಂದೇಹ ಪಡುವ ತೋಮ" ಎಂಬುದಾಗಿ ಸಹ ಕರೆಯಲಾಗುತ್ತದೆ. ಆದರೆ ಆತನನ್ನು "ನಂಬುವ ತೋಮ" ಎಂಬುದಾಗಿ ಕರೆಯುವುದು ಹೆಚ್ಚು ಸಮಂಜಸವೆನಿಸುತ್ತದೆ. ಈ ಮಾತನ್ನು ನೀವು ಒಪ್ಪುವಿರಾ? ಯಾಕೆ? ಯಾಕೆ ಒಪ್ಪುವುದಿಲ್ಲ?
2. ಯೇಸು ತೋಮನಿಗೆ ಕಾಣಿಸಿಕೊಳ್ಳುವುದರ ಕುರಿತು ಯೋಹಾನನು ಹೇಳುವ ಕಥೆಯನ್ನು ಪುನಃ ಹೇಳಿರಿ (ಯೋಹಾನ 24:29). ತನಗಾದ ಅನುಭವಕ್ಕಿಂತ ಮೊದಲು ಮತ್ತು ನಂತರ ಆತನ ಭಾವನೆ ಹೇಗಿತ್ತು? ನಿಮ್ಮದೇ ಪದ ಬಳಸಿರಿ. ಸತ್ಯವೇದದಲ್ಲಿ ನೋಡಬೇಡಿರಿ. ನಾಟಕೀಯ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಮಾತಾಡುತ್ತಿರೆಂಬುದಾಗಿ ಕಲ್ಪಿಸಿಕೊಳ್ಳಿ.

### ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ

ಈ ಅಧ್ಯಯನ ಮತ್ತು ಹಿಂದಿನ ಅಧ್ಯಯನದಲ್ಲಿ ಯೇಸು ತನ್ನ ಶಿಷ್ಯರಿಗೆ ಕಾಣಿಸಿಕೊಂಡ ಎರಡು ಸಂದರ್ಭಗಳನ್ನೊಳಗೊಂಡ ವಾಕ್ಯಭಾಗಗಳನ್ನು (ಲೂಕ 24:36-39 ಮತ್ತು ಯೋಹಾನ 20:19-29), ವಿಮರ್ಶಿಸಿರಿ. ಈ ಅಧ್ಯಯನಗಳಲ್ಲಿನ ವಿಷಯ(ಮಾಹಿತಿ)ಗಳ ಬೆಳಕಿನಲ್ಲಿ ಇದನ್ನು ಮಾಡಿರಿ. ನಂತರ ಕೆಳಕಂಡ ಒಂದು ಅಸೈನ್ಮೆಂಟನ್ನು ಆರಿಸಿಕೊಳ್ಳಿರಿ:

1. ಈ ವಿಷಯ(ಮಾಹಿತಿ)ದ ಭಾಗಗಳ ಆಧಾರದ ಮೇಲೆ ಒಂದು ಧ್ಯಾನವನ್ನು (ಒಂದು ಸತ್ಯವೇದ ಅಥವಾ ಒಂದು ಸಂದೇಶ) ಸಿದ್ಧಪಡಿಸಿರಿ. ಕೆಳಗಿನ ಶೀರ್ಷಿಕೆಗಳಲ್ಲಿ (ತಲೆಬರಹ) ಒಂದನ್ನು ಆರಿಸಿಕೊಳ್ಳಿರಿ:
   - ***ನನ್ನ ಸ್ವಾಮಿ , ನನ್ನ ದೇವರು!***
   - ***ನಿಮಗೆ ಮನಶ್ಶಾಂತಿಯಾಗಲಿ!***

- ***ನಾವು ನೋಡದಿದ್ದರು ನಂಬುವುವೆವು!***

2. ತೋಮನ ದೃಷ್ಟಿಕೋನದಿಂದ "ನನ್ನ ಸ್ವಾಮಿ ನನ್ನ ದೇವರು" ಎಂಬ ಒಂದು ಏಕಪಾತ್ರಾಭಿನಯವನ್ನು ಬರೆಯಿರಿ.
3. ಮೊದಲ ಸಂಧರ್ಭದಲ್ಲಿ ಯೇಸು ಅವರಿಗೆ ಕಾಣಿಸಿಕೊಂಡಾಗ ಅಲ್ಲಿದ್ದ ಶಿಷ್ಯರಲ್ಲೊಬ್ಬನ ದೃಷ್ಟಿಕೋನದಿಂದ ಒಂದು ಪದ್ಯ/ಕವನವನ್ನು ಬರೆಯಿರಿ.



## 6. ಯೇಸು ಗಲಿಲಾಯ ಸಮುದ್ರದ ಬಳಿ ಏಳು ಮಂದಿ ಶಿಷ್ಯರಿಗೆ ಕಾಣಿಸಿಕೊಂಡದ್ದು ಯೋಹಾನ 21:1-24.

**ಪೀಠಿಕೆ ಮತ್ತು ಟಿಪ್ಪಣಿಗಳು**

ತನ್ನ ಪುನರುತ್ಥಾನದ ನಂತರ ಯೇಸು ತನ್ನ ಶಿಷ್ಯರಿಗೆ ನೀವು ಗಲಿಲಾಯಕ್ಕೆ ಹೋಗಿ, ಅಲ್ಲಿ ತಾನು ನಿಮ್ಮನ್ನು ಸಂಧಿಸುವುನೆಂಬುದಾಗಿ ಹೇಳುತ್ತಾನೆ (ನೋಡಿ ಮತ್ತಾ. 28:10, ಮಾರ್ಕ 16:7). ಯೇಸು ಒಂದು ದಿನ ಮುಂಜಾನೆ ಗಲಿಲಾಯ ಸಮುದ್ರದ ಬಳಿಯಲ್ಲಿ ಏಳು ಮಂದಿ ಶಿಷ್ಯರನ್ನು ಹೇಗೆ ಸಂಧಿಸುತ್ತಾನೆಂಬುದನ್ನು ಯೋಹಾನನು ದಾಖಲಿಸುತ್ತಾನೆ. ಈ ವಾಕ್ಯಭಾಗವು ಯೇಸು ಈ ಹಿಂದೆ ಆತನನ್ನು ನಿರಾಕರಿಸಿದ್ದ ಪೇತ್ರನನ್ನು ಮರುಸ್ಥಾಪಿಸು(ಬಲಪಡಿಸು)ವುದರೊಂದಿಗೆ ಮುಕ್ತಾಯವಾಗುತ್ತದೆ. (ಉದಾಹರಣೆಗೆ ನೋಡಿ ಮಾರ್ಕ 14:72).

*ತಿಬೇರಿಯ ಸಮುದ್ರ* (ವ. 1): ಇದು ಗಲಿಲಾಯ ಸಮುದ್ರಕ್ಕಿರುವ ಇನ್ನೊಂದು ಹೆಸರಾಗಿದೆ. ತಿಬೇರಿಯ ಸಮುದ್ರದ ಪಶ್ಚಿಮ ತೀರದ ಮೇಲಿನ ಒಂದು ಪ್ರಾಮುಖ್ಯವಾದ ಪಟ್ಟಣವಾಗಿದೆ. ಇದು ಗಲಿಲಾಯದ ರಾಜಧಾನಿಯಾಗಿದ್ದು ಅರಸನಾದ ಹೆರೋದ ಅಂತಿಪನಿಂದ ಕಟ್ಟಲ್ಪಟ್ಟಿತು.

*ಗಲಿಲಾಯದ ಕಾನಾ ಊರಿನ ನತಾನಯೇಲನು* (ವ. 2): ನೋಡಿ ಯೋಹಾನ 1:45-49. ಈತನು ಯೇಸುವಿನ ಹನ್ನೆರಡು ಮಂದಿ ಅಪೊಸ್ತಲರಲ್ಲಿ ಒಬ್ಬನಾಗಿದ್ದನು. ಉಳಿದ ಸುವಾರ್ತೆಗಳಲ್ಲಿ ಬಾರ್ತಲೋಮಾಯನೆಂಬುದಾಗಿ ಕರೆಯಲ್ಪಟ್ಟಿದ್ದಾನೆ.

*ಜೆಬೆದಾಯನ ಕುಮಾರರೂ* (ವ. 2): ಯೇಸುವಿನ ಹನ್ನೆರಡು ಮಂದಿ ಅಪೊಸ್ತಲರಲ್ಲಿ ಇಬ್ಬರಾದ ಯಾಕೋಬ ಮತ್ತು ಯೋಹಾನ (ನೋಡಿ. ಮತ್ತಾ. 4:21).

*ಆ ರಾತ್ರಿಯಲ್ಲಿ* (ವ. 3): ಪ್ರಾಚೀನ ಕಾಲದಲ್ಲಿ ರಾತ್ರಿಯ ಜಾವಗಳಲ್ಲಿ ಮೀನನ್ನು ಹಿಡಿಯಲಾಗುತ್ತಿತ್ತು.

*ಶಿಷ್ಯರು ಆತನನ್ನು ಯೇಸುವೆಂದು ತಿಳಿಯಲಿಲ್ಲ* (ವ. 4): ಸಮಾಧಿಯಿರುವ ತೋಟದಲ್ಲಿನ ಮಗ್ದಲದ ಮರಿಯಳು ಮತ್ತು ಎಮ್ಮಾಹುವಿನ ರಸ್ತೆಬಳಿಯಲ್ಲಿನ ಶಿಷ್ಯರೊಂದಿಗೆ ಹೋಲಿಸಿ (ಯೋಹಾನ 20:14, ಲೂಕ 24:13-16).

*ಯೇಸುವಿಗೆ ಪ್ರಿಯನಾಗಿದ್ದ ಶಿಷ್ಯನು* (ವ. 7): ತನ್ನ ಸುವಾರ್ತೆಯಲ್ಲಿ ಯೋಹಾನನು ತನ್ನನ್ನು ಈ ರೀತಿಯಲ್ಲಿ ವರ್ಣಿಸಿಕೊಳ್ಳುತ್ತಾನೆ.

*ಒಲ್ಲಿಯನ್ನು ಸುತ್ತಿಕೊಂಡು* (ವ. 7): ಬಹುಶಃ ಪೇತ್ರನು ತಾನು ತನ್ನ ಸ್ವಾಮಿಯನ್ನು ವಂದಿಸುವಾಗ ಸರಿಯಾದ ರೀತಿಯಲ್ಲಿ ಬಟ್ಟೆಯನ್ನು ಧರಿಸಿಕೊಳ್ಳಬೇಕೆಂದು ಬಯಸಿದನು.

*ನೂರೈವತ್ತು ಮೂರು ದೊಡ್ಡ ಮೀನುಗಳಿಂದ* (ವ. 11): ಸಂಖ್ಯೆಯನ್ನು ಸಾಂಕೇತಿಕವಾಗಿ ವ್ಯಾಖ್ಯಾನಿಸಲು ಅನೇಕ ಪ್ರಯತ್ನ ನಡೆದಿದೆ. ಯಾವುದೂ ಸಮರ್ಪಕವಾಗಿಲ್ಲ. ಹೆಚ್ಚಾಗಿ ಇದು ಅವರು ಹಿಡಿದ ಮೀನುಗಳ ಸಂಖ್ಯೆಯನ್ನು ಸೂಚಿಸುತ್ತದೆ. ಆ ದಿನಗಳಲ್ಲಿ ಮೀನುಗಾರರು ಸಾಮಾನ್ಯವಾಗಿ ಮಾರುಕಟ್ಟೆಗೆ ಮೀನುಗಳನ್ನು ಮಾರಲು ಕೊಂಡೊಯ್ಯುವುದಕ್ಕಿಂದ ಮೊದಲು ಅವುಗಳ ಲೆಕ್ಕ ಮಾಡುತ್ತಿದ್ದರು.

*ಮೂರನೆಯ ಸಾರಿ* (ವ. 14): ಇದು ಯೇಸು ಶಿಷ್ಯರ ಗುಂಪಿಗೆ ಕಾಣಿಸಿಕೊಂಡಿದ್ದು ಮೂರನೆಯ ಬಾರಿಯಾಗಿತ್ತು, ಆದರೆ ಇತರ ಸಮಯದಲ್ಲಿ ಸಹ ಆತನು ಕಾಣಿಸಿಕೊಂಡನು, ಉದಾಹರಣಗೆ ಮಗ್ದಲದ ಮರಿಯಳಿಗೆ ಮತ್ತು ಎಮ್ಮಾಹುವಿನ ರಸ್ತೆಬಳಿ ಇಬ್ಬರು ಶಿಷ್ಯರಿಗೆ.

*ಪ್ರೀತಿ* (ವ. 15-17): ಈ ವಚನಗಳಲ್ಲಿ "ಪ್ರೀತಿಗೆ" ಎರಡು ವಿಭಿನ್ನ ಗ್ರೀಕ್ ಪದಗಳನ್ನು ಉಪಯೋಗಿಸಿ ಅನೇಕ ವ್ಯಾಖ್ಯಾನಕಾರರು ಒಂದು ವಾಸ್ತವಾಂಶವನ್ನು ಹೊರತಂದಿದ್ದಾರೆ, ಇದು ಎರಡು ಹಂತದ ಪ್ರೀತಿ ಮತ್ತು ಪರಿಣಾಮವಾಗಿ ಎರಡು ಹಂತದ ಸಮರ್ಪಣೆಯ

ಕುರಿತಾದ ಒಂದು ಕಥೆಯಾಗಿದೆ ಎಂದು ಅವರು ಹೇಳುತ್ತಾರೆ. ಎರಡು ಕಾರಣಗಳಿಂದ ಈ ವ್ಯಾಖ್ಯಾನವು ಅಷ್ಟು ಪೂರಕವಾಗಿಲ್ಲ: ಮೊದಲನೆಯದಾಗಿ ಇದು "ನನ್ನನ್ನು ಹಿಂಬಾಲಿಸು" ಎಂಬ ಮಾತಿನಿಂದ ಯೇಸು ಪೇತ್ರನನ್ನು ಮರುಸ್ಥಾಪಿಸುವ ಕುರಿತಾದ ಕಥೆಯಲ್ಲಿ ಯಾವುದೇ ಅರ್ಥವನ್ನು ಕೊಡುವುದಿಲ್ಲ. ಎರಡನೆಯದಾಗಿ ಯೋಹಾನನ ಸುವಾರ್ತೆಯಲ್ಲಿ ಬೇರೆ ಎಲ್ಲೂ ಸಹ ಪ್ರೀತಿಗಾಗಿನ ಈ ಎರಡು ಪದಗಳ ನಡುವೆ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ.

*ಇವರಿಗಿಂತ ಹೆಚ್ಚಾಗಿ* (ವ. 15): ಈ ಹೇಳಿಕೆಯು "ಈ ವ್ಯಕ್ತಿಗಳು ನನ್ನನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ" ಎಂದು ಅಥವಾ "ನೀನು ಈ ಅಂಶ/ವಸ್ತುಗಳನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ" ಎಂಬುದಾಗಿ ಸಹ ಅರ್ಥಕೊಡುತ್ತದೆ. ಪೇತ್ರನ ಭಕ್ತಿ ಕುರಿತ ಮೊದಲ ಹೇಳಿಕೆಗಿಂತ, ಎರಡನೇಯದು ಅತ್ಯುತ್ತಮವಾಗಿ ತೋರುತ್ತದೆ (ನೋಡಿ ಮಾರ್ಕ 14:29).

*ನಿನ್ನ ಕೈಗಳನ್ನು ಚಾಚುವಿ* (ವ. 18): ಆದಿ ಸಭೆಯು ಇದನ್ನು ಶಿಲುಬೆಗೆ ಹಾಕುವುದರ ಕುರಿತಾದ ಪ್ರವಾದನೆಯೆಂಬುದಾಗಿ ಅರ್ಥೈಸಿಕೊಂಡಿತು (ಮುಂದಿನ "ಎಂಥಾ ಸಾವಿನಿಂದ" ಎಂಬ ವಚನದೊಂದಿಗೆ ಹೋಲಿಸಿ). ಸಂಪ್ರದಾಯದ ಪ್ರಕಾರ ಪೇತ್ರನು ಕ್ರಿ.ಶ. 65 ರಲ್ಲಿ ನೀರೋ ಚಕ್ರವರ್ತಿಯ ಹಿಂಸೆಯ ಸಂದರ್ಭದಲ್ಲಿ ರೋಮಿನಲ್ಲಿ ಶಿಲುಬೆಗೆ ಹಾಕಲ್ಪಟ್ಟನು.

ಊಟದಲ್ಲಿ (ವ. 20): ನೋಡಿ ಯೋಹಾನ 13:23-25

*ಈ ಸಂಗತಿಗಳನ್ನು* (ವ. 24): ಈ ಹೇಳಿಕೆ ಇಡೀ ಯೋಹಾನನ ಸುವಾರ್ತೆಯನ್ನು ಸೂಚಿಸುತ್ತದೆ.

**ಪ್ರಶ್ನೆಗಳು**

1. ಈ ಪುನರುತ್ಥಾನಗೊಂಡ ನಂತರದ ಪ್ರತ್ಯಕ್ಷತೆಯ ಸಂದರ್ಭ ಯಾವುದಾಗಿತ್ತು (ವ. 1-4)?
2. ಆ ರಾತ್ರಿ ಮೀನು ಹಿಡಿಯುವುದಕ್ಕಾಗಿ ಮೊದಲು ಮುಂದಾದವರು ಯಾರು (ವ. 1-4)?
3. ರಾತ್ರಿ ವೇಳೆ ಏನಾಯಿತು (ವ. 3)?
4. ಬೆಳಗಾಗುವಾಗ (ಮುಂಜಾನೆ) ಬೆಸ್ತರು ಹಿಂತಿರುಗುವಾಗ ಯೇಸು ಎಲ್ಲಿದ್ದನು (ವ. 4)?
5. ಯೇಸು ಅವರಿಗೆ ಏನೆಂದು ಪ್ರಶ್ನಿಸಿದನು ಮತ್ತು ಆತನು ಅವರಿಗೆ ಏನನ್ನು ಮಾಡಲು ಹೇಳಿದನು (ವ. 5-6)?
6. ಶಿಷ್ಯರು ಯಾವ ಸಮಸ್ಯೆಯನ್ನು ಎದುರಿಸಬೇಕಾಯಿತು (ವ. 6)?
7. ಯಾಕೆ ಪೇತ್ರನು ದೋಣಿಯನ್ನು ಬಿಟ್ಟು ಹೋದನು (ವ. 7)?
8. ಉಳಿದ ಬೆಸ್ತರು ಏನು ಮಾಡಿದರು (ವ. 8)?
9. ಯೇಸು ದಡ ತೀರ)ದ ಮೇಲೆ ಏನು ಮಾಡುತ್ತಿದ್ದನು (ವ. 9)?
10. ಪೇತ್ರನು ಯಾಕೆ ದೋಣಿಗೆ ಹಿಂತಿರುಗಿದನು (ವ. 10-11)?
11. ಯಾಕೆ ಬಲೆಯು ಹರಿಯದೇ ಇರುವುದು ಆಶ್ಚರ್ಯಕರವಾಗಿತ್ತು (ವ. 11)?
12. ಯೇಸು ಶಿಷ್ಯರಿಗೆ ಏನನ್ನು ಮಾಡಬೇಕೆಂದು ಹೇಳುತ್ತಾನೆ (ವ. 12)?
13. ಯೇಸು ರೊಟ್ಟಿ ಮತ್ತು ಮೀನನ್ನು ಏನು ಮಾಡಿದನು (ವ. 13)?
14. ಊಟ ಮಾಡಿದ ಮೇಲೆ ಯೇಸು ಪೇತ್ರನಿಗೆ ಮೂರು ಪ್ರಶ್ನೆಗಳನ್ನು ಕೇಳುತ್ತಾನೆ. ಆತನು ಏನೆಂದು ಕೇಳುತ್ತಾನೆ (ವ. 15-17)?
15. ಯೇಸುವಿನ ಪ್ರಶ್ನೆಗೆ ಪೇತ್ರನ ಉತ್ತರಗಳೇನಾಗಿದ್ದವು (ವ. 15-17)?
16. ಯೇಸು ಪೇತ್ರನಿಗೆ ಕೊಟ್ಟ ಅಸೈನ್ಮೆಂಟ್ (ಕೆಲಸ) ಏನು (ವ. 15-17)?
17. ಪೇತ್ರನ ಭವಿಷ್ಯದ ಬಗ್ಗೆ ಯೇಸು ಆತನಿಗೆ ಏನೆಂದು ಹೇಳುತ್ತಾನೆ (ವ. 18-19)?
18. ವಚನ 20 ರಲ್ಲಿ ಯೋಹಾನನು ತನ್ನ ಬಗ್ಗೆ ಏನೆಂದು/ಯಾವ ಮಾಹಿತಿ ಕೊಡುತ್ತಾನೆ?

19. ಪೇತ್ರನನ್ನು ಮರುಸ್ಥಾಪಿಸಲು ಅಥವಾ ಬಲಪಡಿಸಲು ಯೇಸು ಯಾವ ಪದಗಳನ್ನು ಉಪಯೋಗಿಸುತ್ತಾನೆ(ವ 19,22)?
20. ಯೋಹಾನನ ಬಗ್ಗೆ ಯೇಸು ಪೇತ್ರನಿಗೆ ಏನೆಂದು ಹೇಳುತ್ತಾನೆ (ವ. 21-23)?
21. ಯೋಹಾನನ ಕುರಿತು ಆದಿಸಭೆಯಲ್ಲಿ ಏನೆಂದು ಸುದ್ದಿ ಹಬ್ಬಿತು (ವ. 23)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ದಡದ ಮೇಲಿದ್ದವನು ಯೇಸುವೇ ಎಂಬುದಾಗಿ ಯೋಹಾನನು ಹೇಗೆ ಗ್ರಹಿಸಿಕೊಂಡನು (ವ. 4-7)?
2. ಮೀನು ಹಿಡಿಯುವುದರ ಕುರಿತ ಕಥೆಯ ವಿಭಿನ್ನ ಹಂತಗಳಲ್ಲಿ ಪೇತ್ರನ ಭಾವನೆ ಹೇಗಿತ್ತೆಂಬುದಾಗಿ ನೀವು ಯೋಚಿಸುವಿರಿ (ವ. 1-14)?
3. ಆತನು ಪ್ರೀತಿಸಿದರೂ ಸಹ ಯಾಕೆ ಯೇಸು ಪೇತ್ರನನ್ನು ಮೂರು ಬಾರಿ ಪ್ರಶ್ನಿಸುತ್ತಾನೆ? ಒಂದು ಬಾರಿ ಕೇಳಿದರೆ ಸಾಕಾಗುತ್ತಿರಲಿಲ್ಲವಾ?
4. ಯಾಕೆ ಆದಿಸಭೆಯಲ್ಲಿ ಯೋಹಾನನು ಸಾಯುವುದಿಲ್ಲವೆಂಬ ಸುದ್ದಿ ಹಬ್ಬಿತೆಂಬುದನ್ನು ವಿವರಿಸಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯನದಲ್ಲಿನ ವಿಷಯ(ಮಾಹಿತಿ)ಗಳ ಬೆಳಕಿನಲ್ಲಿ ಈ ವಾಕ್ಯಭಾಗವನ್ನು (ಯೋಹಾನ 21:1-24) ವಿಮರ್ಶಿಸಿರಿ. ಅನಂತರ ಕೆಳಗಿನ ಒಂದು ಅಸೈನ್ಮೆಂಟ್ ಅನ್ನು ಆರಿಸಿಕೊಳ್ಳಿರಿ:

1. ಯೋಹಾನನ ದೃಷ್ಟಿಕೋನದಿಂದ (ವ. 1-14 ನ್ನು ಆಧರಿಸಿ) ***ಯೇಸುವಿನೊಂದಿಗೆ ಉಪಹಾರ*** ಎಂಬ ಒಂದು ಏಕಪಾತ್ರಾಭಿನಯವನ್ನು ಸಿದ್ಧಪಡಿಸಿರಿ.
2. ಪೇತ್ರನ ದೃಷ್ಟಿಕೋನದಿಂದ (ವ. 15-22 ನ್ನು ಆಧರಿಸಿ) ***ತಿರುಗಿ ವೃತ್ತಿಗೆ!*** ಎಂಬ ಒಂದು ಏಕಪಾತ್ರಾಭಿನಯವನ್ನು ಸಿದ್ಧಪಡಿಸಿರಿ.



## 7. ಮಹಾ ಆಜ್ಞೆ (ಆದೇಶ), ಮತ್ತಾಯ 28:16-20

### ಪೀಠಿಕೆ ಮತ್ತು ಟಿಪ್ಪಣಿಗಳು

ಪುನರುತ್ಥಾನ ದಿನದಲ್ಲಾದ ಘಟನೆಗಳ ಕುರಿತಾದ ಮತ್ತಾಯನ ಮಾಹಿತಿಯು ಕಾವಲುಗಾರರು ಮತ್ತು ಯೆಹೂದಿ ನಾಯಕರು ಪರಸ್ಪರ ಒಪ್ಪಂದ ಮಾಡಿಕೊಂಡು ಶಿಷ್ಯರು ರಾತ್ರಿಯಲ್ಲಿ ಬಂದು ಯೇಸುವಿನ ದೇಹವನ್ನು ಕದ್ದುಕೊಂಡು ಹೋಗಿದ್ದಾರೆ (ಮತ್ತಾ. 28:15) ಎಂಬುದಾಗಿ ತೆರೆದ ಸಮಾಧಿಯ ಬಗ್ಗೆ ವಿವರಿಸುವುರೊಂದಿಗೆ ಮುಕ್ತಾಯವಾಗುತ್ತದೆ. ಈ ವಾಕ್ಯಭಾಗದಲ್ಲಿ ಮುಂದೆ ಮತ್ತಾಯನು ಮಹಾ ಆಜ್ಞೆಯೊಂದಿಗೆ ತನ್ನ ಸುವಾರ್ತೆಯನ್ನು ಮುಕ್ತಾಯಗೊಳಿಸುತ್ತಾನೆ. ಆ ಒಂದು ಸ್ಥಳವು ಯೇಸು ತನ್ನನ್ನು ಸಂಧಿಸಿರಿ ಎಂದು ಮೊದಲೇ ಗೊತ್ತುಮಾಡಿದ್ದ ಗಲಿಲಾಯದಲ್ಲಿನ ಒಂದು ಬೆಟ್ಟವಾಗಿತ್ತು.

*ಬೆಟ್ಟಕ್ಕೆ* (ವ. 16): ಮತ್ತಾಯನು ಈ ಬೆಟ್ಟದ ಹೆಸರನ್ನು ತಿಳಿಸುವುದಿಲ್ಲ.

*ಹನ್ನೊಂದು ಮಂದಿ ಶಿಷ್ಯರು* (ವ. 16): ಇವರು ಇಸ್ಕರಿಯೋತ ಯೂದನು ಆತ್ಮಹತ್ಯೆ ಮಾಡಿಕೊಂಡು ಸತ್ತನಂತರ ಉಳಿದಿದ್ದ ಹನ್ನೊಂದು ಮಂದಿ ಶಿಷ್ಯರುಗಳು ( ನೋಡಿ ಮತ್ತಾ. 27:5).

*ಯೇಸು ತಮಗೆ ಗೊತ್ತು ಮಾಡಿದ್ದ ಬೆಟ್ಟಕ್ಕೆ* (ವ. 16): ಹೋಲಿಸಿ ಮತ್ತಾ. 26:34, 28:7,10.

*ಅಧಿಕಾರ* (ವ. 18): ಹೋಲಿಸಿ ಮತ್ತಾ. 16:1 ಮತ್ತು ಯೋಹಾನ 17:2.

### ಪ್ರಶ್ನೆಗಳು

1. ಈ ಕಥೆಯು ನಡೆದ ಸ್ಥಳ ಯಾವುದು (ವ. 16)?
2. ಯೇಸುವನ್ನು ಬೆಟ್ಟದ ಮೇಲೆ ಕಂಡಾಗ ಶಿಷ್ಯರು ಹೇಗೆ ಪ್ರತಿಕ್ರಯಿಸಿದರು (ವ. 17)?
3. ತನ್ನ ಬಗ್ಗೆ ಯೇಸು ಶಿಷ್ಯರಿಗೆ ಏನೆಂದು ಹೇಳುತ್ತಾನೆ (ವ. 18)?
4. ಯೇಸು ತನ್ನ ಶಿಷ್ಯರಿಗೆ ಏನನ್ನು ಮಾಡಬೇಕೆಂದು ಹೇಳುತ್ತಾನೆ (ವ. 19)?
5. ಮಹಾ ಆಜ್ಞೆಯಲ್ಲಿ ದೇವರನ್ನು ಹೇಗೆ ಸಂಭೋಧಿಸಲಾಗಿದೆ (ವ. 19)?
6. ಯೇಸು ತನ್ನ ಶಿಷ್ಯರಿಗೆ ಏನೆಂದು ವಾಗ್ದಾನ ಮಾಡಿದನು (ವ. 20)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಯೇಸುವಿನ ಕೆಲ ಶಿಷ್ಯರು ಸಂದೇಹಪಟ್ಟರು (ವ. 17). ಅವರು ಯಾವುದರ ಬಗ್ಗೆ ಸಂದೇಹಪಟ್ಟರು ಎಂಬುದಾಗಿ ನೀವು ಯೋಚಿಸುವಿರಿ?
2. ಮಹಾ ಆಜ್ಞೆಯ ಪ್ರಕಾರ ಶಿಷ್ಯತ್ವ ಎಂದರೆ ಏನಾಗಿದೆ (ವ. 18-20)?
3. ತಾನು ಬಹುಬೇಗನೆ ಅವರನ್ನು ಬಿಟ್ಟು ಪರಲೋಕಕ್ಕೆ ತನ್ನ ತಂದೆಯ ಬಳಿಗೆ ಏರಿ ಹೋಗಲಿರುವಾಗ (ನೋಡಿ ಲೂಕ 24:50-51) ಹೇಗೆ ತಾನೇ ಯೇಸು ತನ್ನ ಶಿಷ್ಯರಿಗೆ ತಾನು ಯಾವಾಗಲೂ ನಿಮ್ಮೊಂದಿಗಿರುತ್ತೇನೆಂದು ವಾಗ್ದಾನ ಮಾಡಲು ಸಾಧ್ಯ (ವ. 20)?
4. ನಿಮ್ಮ ಸಭೆಯು ಎಷ್ಟರಮಟ್ಟಿಗೆ ಮತ್ತು ಹೇಗೆ ಮಹಾ ಆಜ್ಞೆಯನ್ನು ನೆರವೇರಿಸುತ್ತದೆ? ಗುಂಪಿನಲ್ಲಿ ಹಂಚಿಕೊಳ್ಳಿರಿ.

## 8.ಯೇಸುವು ಪರಲೋಕಕ್ಕೆ ಒಯ್ಯಲ್ಪಟ್ಟದ್ದು, ಲೂಕ 24:50-53

### ಪೀಠಿಕೆ ಮತ್ತು ಟಿಪ್ಪಣಿಗಳು

ಲೂಕನು ತನ್ನ ಓದುಗರಿಗೆ ಯೇಸುವಿನ ಸ್ವರ್ಗಾರೋಹಣದ ಎರಡು ವಿವರ(ವಾಕ್ಯಭಾಗ)ಗಳನ್ನು ಕೊಡುತ್ತಾನೆ, ಒಂದು ತನ್ನ ಸುವಾರ್ತೆಯಲ್ಲಿ ಮತ್ತು ಇನ್ನೊಂದು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ (ಅ.ಕೃ. 1:9-11) ಕಾಣಬಹುದು. ಮಾರ್ಕನ "ದೀರ್ಘವಾದ ಮುಕ್ತಾಯ"ವು ಸಹ ಈ ಘಟನೆಯ ಸಾರಾಂಶವನ್ನು ಒಳಗೊಂಡಿದೆ (ಮಾರ್ಕ 16:19).

*ಬೇಥಾನ್ಯ* (ವ. 50): ಇದು ಯೆರೂಸಲೇಮಿನ ಹತ್ತಿರದ ಎಣ್ಣೇಮರಗಳ ಗುಡ್ಡದ ಮೇಲಿರುವ ಒಂದು ಹಳ್ಳಿಯಾಗಿತ್ತು. ಇದು ಲಾಜರ ಮತ್ತು ಆತನ ಸಹೋದರಿಯರಾದ ಮಾರ್ಥ ಮತ್ತು ಮರಿಯಳ ತವರಾಗಿತ್ತು.

*ಅವರನ್ನು ಬಿಟ್ಟು* (ವ. 51): ಅಪೊಸ್ತಲರ ಕೃತ್ಯದಲ್ಲಿ ಲೂಕನು ಯೇಸುವು ಮೋಡದಳೊಗಿಂದ ಒಯ್ಯಲ್ಪಟ್ಟನು ಎಂಬುದಾಗಿ ಸೇರಿಸುತ್ತಾನೆ (ಅ.ಕೃ. 1:9).

### ಪ್ರಶ್ನೆಗಳು

1. ಯೇಸು ತನ್ನ ಶಿಷ್ಯರನ್ನು ಆಶೀರ್ವದಿಸುತ್ತಿರುವಾಗ ಏನಾಯಿತು (ವ. 50-51)?
2. ತಾವು ಯೇರೂಸಲೇಮಿಗೆ ಹಿಂತಿರುವುದಕ್ಕಿಂತ ಮೊದಲು ಶಿಷ್ಯರು ಏನು ಮಾಡಿದರು (ವ. 52)?
3. ಶಿಷ್ಯರು ಯೆರೂಸಲೇಮಿನಲ್ಲಿ ಏನು ಮಾಡಿದರು (ವ. 52)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

ಯೇಸುವಿನ ಸ್ವರ್ಗಾರೋಹಣದ ಕುರಿತ ಎರಡು ಸುವಾರ್ತಾ ವಾಕ್ಯಭಾಗಗಳನ್ನು ಹೋಲಿಸಿರಿ (ಲೂಕ 24:50-52 ಮತ್ತು ಮಾರ್ಕ 16:19). ಗಮನಿಸಿದ ಅಂಶಗಳನ್ನು ಬರೆಯಿರಿ.



# ಮತ್ತಾಯ ಮತ್ತು ಲೂಕನ ಸುವಾರ್ತೆಯಿಂದ

# ಮೂವತ್ತು ಅಧ್ಯಯನಗಳು

**ಪೀಠಿಕೆ**

ಈ ವಿಭಾಗವು ಯೇಸುವಿನ ಬಗ್ಗೆ ಮತ್ತು ಆತನ ಸೇವೆಯ ಕುರಿತಾಗಿ ಮತ್ತಾಯ ಮತ್ತು ಲೂಕನ ಸುವಾರ್ತೆಗಳಿಂದ ಮೂವತ್ತು ಅಧ್ಯಾಯಗಳನ್ನು ಒಳಗೊಂಡಿದೆ. ಇದು ಪುಸ್ತಕದ ಹಿಂದಿನ ವಿಭಾಗದಲ್ಲಿ ಮತ್ತು ಮಾರ್ಕನ ಸುವಾರ್ತೆಯಲ್ಲಿ ಇದಕ್ಕೆ ಸಮಾನಾರ್ಥಕವಾಗಿರುವ ವಾಕ್ಯಭಾಗದಲ್ಲಾಗಲಿ ಕಂಡುಬರದೇ ಇರುವ ವಿಷಯ(ಸಂಗತಿ)ಗಳನ್ನು ಮಾತ್ರ ಒಳಗೊಂಡಿದೆ. ಅಲ್ಲದೆ ಪರ್ವತ ಪ್ರಸಂಗವನ್ನು ಸಹ ನಾನು ಇದರಲ್ಲಿ ಸೇರಿಸಿಲ್ಲ (ಮತ್ತಾಯ ಅಧ್ಯಾಯಗಳು 5-7, ಲೂಕನ ಸುವಾರ್ತೆಯಲ್ಲಿ ಇದಕ್ಕೆ ಸಮಾಂತರವಾಗಿರುವ), ಯಾಕೆಂದರೆ ಈ ವಾಕ್ಯಭಾಗಗಳು "ದೇವರ ರಾಜ್ಯ" ಎಂಬ ಪಠ್ಯಪುಸ್ತಕ ಸರಣಿಯಲ್ಲಿವೆ.

ಈ ಅಧ್ಯಯನಗಳು ಹೆಚ್ಚು ಕಡಿಮೆ ಕಾಲಾನುಕ್ರಮದಲ್ಲಿದ್ದು ಗಲಿಲಾಯದಲ್ಲಿ ಯೇಸುವಿನ ಸೇವೆಯೊಂದಿಗೆ ಪ್ರಾರಂಭವಾಗಿ ನಾಲ್ಕು ಸುವಾರ್ತೆ ಮತ್ತು ಒಂದು "ಬೇರ್ಪಡಿಸುವ ದೃಶ್ಯ"ದೊಂದಿಗೆ ಮುಕ್ತಾಯವಾಗುತ್ತದೆ. ಯೇಸು ಈ ಸಾಮ್ಯಗಳನ್ನೆಲ್ಲಾ ತಾನು ಹಿಡಿಯಲ್ಪಟ್ಟು ಯೆರೂಸಲೇಮಿನಲ್ಲಿ ಶಿಲುಬೆಗೆ ಹಾಕಲ್ಪಡುವುದಕ್ಕಿಂತ ಸ್ವಲ್ಪ ಮೊದಲು ಯೇಸುವಿನ ಎರಡನೇ ಬರೋಣದ ಬೆಳಕಿನಲ್ಲಿ ದೇವರ ರಾಜ್ಯದ ದೃಷ್ಟಿಕೋನದಿಂದ ಬೋಧಿಸುತ್ತಾನೆ. "ಬೇರ್ಪಡಿಸುವ ದೃಶ್ಯ"ದಲ್ಲಿ ಮನುಷ್ಯಕುಮಾರನು ಮಹಿಮಾ ಸಿಂಹಾಸನದ ಮೇಲೆ ಕೂತುಕೊಂಡು ಒಬ್ಬ ಕುರುಬನು ಆಡುಗಳಿಂದ ಕುರಿಗಳನ್ನು ಬೇರ್ಪಡಿಸುವಂತೆ ಜನರನ್ನು ಬೇರ್ಪಡಿಸುತ್ತಾನೆ.

ಅಧ್ಯಯನದ ಪಠ್ಯಗಳನ್ನು ಅನಿವಾರ್ಯವಾಗಿ ಅವುಗಳ ಮೂಲ ಸುವಾರ್ತಾ ಹಿನ್ನಲೆಯಿಂದ ತೆಗೆಯಲಾಗಿದೆ. ನನ್ನ ಪೀಠಿಕೆಯ ಟಿಪ್ಪಣಿ ಮತ್ತು ಕೆಲ ಪ್ರಶ್ನೆಗಳು ಭಾಗಶಃ ಹಾನಿಯನ್ನು ತುಂಬುತ್ತವೆ.

ಮೂವತ್ತು ಅಧ್ಯಯನಗಳು ಮತ್ತು ಅವುಗಳಿಗೆ ಆಧಾರವಾದ ಪಠ್ಯಗಳ (ವಾಕ್ಯಭಾಗಗಳ) ಪಟ್ಟಿ ಇಂತಿದೆ:

1. ಒಬ್ಬ ಶತಾಧಿಪತಿಯ ನಂಬಿಕೆ, ಮತ್ತಾಯ 8:5-13
2. ಯೇಸುವು ಒಬ್ಬ ವಿಧವೆಯ ಮಗನನ್ನು ಬದುಕಿಸಿದ್ದು, ಲೂಕ 7:11-17
3. ಯೇಸು ಮತ್ತು ಸ್ನಾನಿಕನಾದ ಯೋಹಾನ, ಮತ್ತಾಯ 11:2-19
4. ಯೇಸು ಒಬ್ಬ ದುರಾಚಾರಿಯಾದ ಹೆಂಗಸಿನಿಂದ ಅಭಿಷೇಕಿಸಲ್ಪಟ್ಟದ್ದು, ಲೂಕ 7:36-50
5. ಕಷ್ಟ ಮತ್ತು ವಿಶ್ರಾಂತಿ, ಮತ್ತಾಯ 11:20-30
6. ಯೋನನ ಸೂಚಕಕಾರ್ಯ, ಮತ್ತಾಯ 12:38-42
7. ಪರಲೋಕ ರಾಜ್ಯವನ್ನು ಕುರಿತ ಸಾಮ್ಯಗಳು, ಮತ್ತಾಯ 13
8. ಐದು ಸ್ವಸ್ಥತಾ ಅದ್ಭುತಗಳು
9. ದೇವಾಲಯದ ತೆರಿಗೆಯನ್ನು ಕಟ್ಟುವುದು, ಮತ್ತಾಯ 17:24-27
10. ಕರುಣೆಯಿಲ್ಲದ ಸೇವಕ, ಮತ್ತಾಯ 18:21-35
11. ಶಿಷ್ಯತ್ವದ ಲಕ್ಷಣ, ಲೂಕ 9:57-63
12. ಯೇಸು ಎಪ್ಪತ್ತು ಮಂದಿ ಶಿಷ್ಯರನ್ನು ಕಳುಹಿಸಿದ್ದು, ಲೂಕ 10:1-20
13. ಶಿಷ್ಯತ್ವದ ಕ್ರಯ (ಬೆಲೆ), ಲೂಕ 14:25-33
14. ಕೆಲಸಗಾರರ ಕೊರತೆ, ಮತ್ತಾಯ 9:35-38
15. ಒಳ್ಳೆಯ ಸಮಾರ್ಯನು, ಲೂಕ 10:25-37
16. ಮಾರ್ಥಳು ಮತ್ತು ಮರಿಯಳು, ಲೂಕ 10:38-42

17. ಯೆಹೂದಿ ನಾಯಕರ ಆರು ಸಮಸ್ಯೆಗಳು, ಲೂಕ 11:37-54
18. ಬುದ್ಧಿಯಿಲ್ಲದ ಐಶ್ವರ್ಯವಂತನು, ಲೂಕ 12:13-21
19. ಇಕ್ಕಟ್ಟಾದ ಬಾಗಿಲು, ಲೂಕ 13:22-30
20. ಮೂರು ಕಳೆದು ಹೋದ ಮತ್ತು ತಿರುಗಿ ಕಂಡುಕೊಂಡ ಸಾಮ್ಯಗಳು, ಲೂಕ ಅಧ್ಯಾಯ 15
21. ಕಳ್ಳನಾದ ಮನೆಯವಾರ್ತೆಯವನು, ಲೂಕ 16:1-9
22. ಐಶ್ವರ್ಯವಂತನು ಮತ್ತು ಲಾಜರನು, ಲೂಕ 16:19-31
23. ದೇವರ ರಾಜ್ಯದ ಬರೋಣ, ಲೂಕ 17:20-37
24. ಪ್ರಾರ್ಥನೆಯ ಕುರಿತಾದ ಎರಡು ಸಾಮ್ಯಗಳು, ಲೂಕ 18:1-14
25. ಜಕ್ಕಾಯನು, ಲೂಕ 19:1-10
26. ದ್ರಾಕ್ಷೆತೋಟದಲ್ಲಿನ ಕೆಲಸಗಾರರು, ಮತ್ತಾಯ 20:1-16
27. ಮದುವೆಯ ಭೋಜನ, ಮತ್ತಾಯ 22:1-14
28. ಹತ್ತು ಮಂದಿ ಕನ್ಯೆಯರು, ಮತ್ತಾಯ 25:1-13
29. ತಲಾಂತುಗಳು, ಮತ್ತಾಯ 25:14-30
30. ಕುರಿಗಳು ಮತ್ತು ಆಡುಗಳು, ಮತ್ತಾಯ 25:31-46

## 1. ಒಬ್ಬ ಶತಾಧಿಪತಿಯ ನಂಬಿಕೆ, ಮತ್ತಾಯ 8:5-13

### ಪೀಠಿಕೆ ಮತ್ತು ಟಿಪ್ಪಣಿಗಳು

ಒಬ್ಬ ರೋಮನ್ ಅಧಿಕಾರಿಯ ಆಳನ್ನು ಸ್ವಸ್ಥ ಮಾಡುವ ಕುರಿತ ಈ ಕಥೆಯಲ್ಲಿ ಯೇಸು ಒಬ್ಬ ಅನ್ಯಮತಸ್ಥನ ನಂಬಿಕೆಯು, ತಮ್ಮನ್ನು ದೇವರ ರಾಜ್ಯಕ್ಕೆ ಬಾಧ್ಯರೆಂಬುದಾಗಿ ಪರಿಗಣಿಸಿದ ಯೆಹೂದ್ಯರ ಅಲ್ಪ ನಂಬಿಕೆಗಿಂತ ವ್ಯತ್ಯಾಸವಾಗಿದೆ ಎಂಬುದನ್ನು ತೋರಿಸುತ್ತದೆ. ಆದರೆ ನಮ್ಮ ನಂಬಿಕೆಯು ನಮ್ಮ ನಿತ್ಯತ್ವದ ಮೇಲೆ ಗಂಭೀರವಾದ ಪರಿಣಾಮವನ್ನು ಹೊಂದಿದೆ ಎಂಬುದನ್ನು ನಾವೂ ಸಹ ಇದರಲ್ಲಿ ಕಂಡುಕೊಳ್ಳುತ್ತೇವೆ. ಈ ಕಥೆಯನ್ನು ಲೂಕ 7:1-10 ರಲ್ಲಿ ಸಹ ಕಾಣಬಹುದು.

*ಕಪೆರ್ನೌಮಿಗೆ ... ಶತಾಧಿಪತಿ* (ವ. 5): ಆ ದಿನಗಳಲ್ಲಿ ಕಪೆರ್ನೌಮು ಗಲಿಲಾಯದಲ್ಲಿನ ಒಂದು ಪ್ರಮುಖವಾದ ಪಟ್ಟಣವಾಗಿತ್ತು. ಒಬ್ಬ ಶತಾಧಿಪತಿಯು ಸಾಮಾನ್ಯವಾಗಿ 80 ಸೈನಿಕರ ಮೇಲೆ ಅಧಿಕಾರ ಹೊಂದಿರುವ ಒಬ್ಬ ರೋಮನ್ ಸೇನಾ ಅಧಿಕಾರಿಯಾಗಿದ್ದನು (ತಲೆಬರಹದಂತೆ ಯಾವಾಗಲೂ 100 ಸೈನಿಕರಿರುತ್ತಿರಲಿಲ್ಲ).

*ಪರಲೋಕ ರಾಜ್ಯದಲ್ಲಿ ... ಊಟಕ್ಕೆ* (ವ. 11): ಯೇಸುವು ದೇವರು ಮತ್ತು ಆತನ ಜನರ ನಡುವಿನ ಭವಿಷ್ಯದ ಅನ್ಯೋನ್ಯತೆಯ ಆಶೀರ್ವಾದದ ಸಂಕೇತವಾಗಿರುವ ಭವಿಷ್ಯದ ಮೆಸ್ಸೀಯನ ಭೋಜನವನ್ನು ಕುರಿತ ಹಳೇ ಒಡಂಬಡಿಕೆಯ ಪ್ರವಾದನೆಯನ್ನು ಉಲ್ಲೇಖಿಸುತ್ತಿದ್ದಾನೆ (ನೋಡಿ ಯೆಶಾಯ 25:6-9). ಪರಲೋಕರಾಜ್ಯ ಎಂಬ ಹೇಳಿಕೆಯಲ್ಲಿ "ದೇವರ" ಬದಲು, "ಪರಲೋಕ" ಎಂಬ ಪದ ಬಳಸುವುದರ ಮೂಲಕ ಮತ್ತಾಯನು ಹೆಚ್ಚಾಗಿ ಯೆಹೂದಿ ಸಂಪ್ರದಾಯವನ್ನು ಪಾಲಿಸುತ್ತಿದ್ದಾನೆ (ಇದು ದೇವರ ಹೆಸರನ್ನು ಗೌರವಿಸಿ ಕರೆಯುವುದು).

*ಆ ರಾಜ್ಯದ ಬಾಧ್ಯಸ್ಥರು* (ವ. 12): ಇಲ್ಲಿ ಯೇಸು ತಮ್ಮನ್ನು ಅಬ್ರಹಾಮನ ಮಕ್ಕಳೆಂಬುದಾಗಿ ಕರೆದುಕೊಳ್ಳುವ ಮತ್ತು ತಮ್ಮ ಯೆಹೂದಿ ಮತವು ಪರಲೋಕ ರಾಜ್ಯಕ್ಕೆ ಸೇರಿಸಲು ತಮ್ಮನ್ನು ಸುಲಭವಾಗಿ ತೇರ್ಗಡೆಗೊಳಿಸುತ್ತದೆಂಬುದಾಗಿ ನಂಬಿರುವ ಯೆಹೂದ್ಯರನ್ನು ಸೂಚಿಸಿ ಹೇಳುತ್ತಿದ್ದಾನೆ.

### ಪ್ರಶ್ನೆಗಳು


1. ಈ ಘಟನೆ ನಡೆದ ಸ್ಥಳ ಯಾವುದು (ವ. 5)? ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೇನ್ ನಕ್ಷೆಯಲ್ಲಿ*** ಈ ಸ್ಥಳವನ್ನು ಕಂಡುಹಿಡಿಯಿರಿ.
2. ಶತಾಧಿಪತಿಯು ಯೇಸುವಿನ ಮುಂದಿಟ್ಟ ಅಗತ್ಯತೆಯೇನು (ವ. 5-6)?
3. ಯಾಕೆ ಶತಾಧಿಪತಿಯು ಯೇಸುವು ತನ್ನ ಮನೆಗೆ ಬರಬೇಕೆಂದು ಬಯಸಲಿಲ್ಲ (ವ. 7-8)?
4. ಯೇಸು ಶತಾಧಿಪತಿಯ ಮಾತಿಗೆ ಯಾಕೆ ಆಶ್ಚರ್ಯಪಟ್ಟನು (ವ. 9-10)?
5. ಪರಲೋಕರಾಜ್ಯದಲ್ಲಿನ ಊಟ (ಭೋಜನಕೂಟ)ದ ಬಗ್ಗೆ ಯೇಸು ಏನೆಂದು ಹೇಳುತ್ತಾನೆ (ವ. 11)?
6. ಭವಿಷ್ಯದ ದೇವರ ರಾಜ್ಯಕ್ಕೆ ಸೇರದವರ ಗತಿ/ಸ್ವಾಸ್ಥ್ಯವಾದ "ನರಕ"ವನ್ನು ಯೇಸು ಹೇಗೆ ವರ್ಣಿಸುತ್ತಾನೆ (ವ. 12)?
7. ಶತಾಧಿಪತಿಯ ಆಳಿಗೆ ಏನಾಯಿತು (ವ. 13)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಕ್ರೈಸ್ತರಾದ ನಾವು ಈ ಕಥೆಯಿಂದ ಏನನ್ನು ಕಲಿಯಬಹುದೆಂಬುದಾಗಿ ನೀವು ಯೋಚಿಸುವಿರಿ?

2. ಮತ್ತಾಯ (8:5-13) ಮತ್ತು ಲೂಕ (7:1-10) ರಲ್ಲಿ ಈ ಘಟನೆಯ ಸಮವಾಗಿರುವ ವಾಕ್ಯಭಾಗಗಳನ್ನು (ವಿವರ) ಹೋಲಿಸಿ ಮತ್ತು ಮೂರು ಮುಖ್ಯ ವ್ಯತ್ಯಾಸಗಳನ್ನು ಪಟ್ಟಿಮಾಡಿರಿ.

3. ಮತ್ತಾಯದಲ್ಲಿ ಮತ್ತು ಲೂಕದಲ್ಲಿ ಯೇಸು ಒಬ್ಬ ಶತಾಧಿಪತಿಯ ಆಳನ್ನು ಗುಣಪಡಿಸುವ ವಾಕ್ಯಭಾಗವನ್ನು ಯೋಹಾನ 4:46-54 ರಲ್ಲಿ ಯೇಸು ಒಬ್ಬ ಅಧಿಕಾರಿಯ ಮಗನನ್ನು ಗುಣಪಡಿಸುವ ವಾಕ್ಯಭಾಗದೊಂದಿಗೆ ಹೋಲಿಸಿರಿ. ಅವೆರಡೂ ಸಹ ಒಂದೇ ಘಟನೆಯನ್ನು ವರ್ಣಿಸುತ್ತವೆಂಬುದಾಗಿ ನೀವು ಯೋಚಿಸುವಿರಾ? ಯಾಕೆ? ಯಾಕಿಲ್ಲ?



## 2. ಯೇಸು ಒಬ್ಬ ವಿಧವೆಯ ಮಗನನ್ನು ಬದುಕಿಸಿದ್ದು, ಲೂಕ 7:11-17

**ಪೀಠಿಕೆ ಮತ್ತು ಟಿಪ್ಪಣಿಗಳು**

ಯೇಸು ಒಬ್ಬ ಬಡ ವಿಧವೆಯ ಮೇಲೆ ಕನಿಕರಪಡುವ ಈ ಕಥೆಯನ್ನು ಕೇವಲ ಲೂಕನ ಸುವಾರ್ತೆಯಲ್ಲಿ ಮಾತ್ರ ನಾವು ಕಾಣಬಹುದು. ಇದು ಗಲಿಲಾಯದ ದಕ್ಷಿಣಭಾಗದಲ್ಲಿ ಸಂಭವಿಸುತ್ತದೆ.

*ನಾಯಿನ* (ವ. 11): ದಕ್ಷಿಣ ಗಲಿಲಾಯದಲ್ಲಿ ನಜರೇತಿನಿಂದ ದಕ್ಷಿಣಕ್ಕೆ 9 ಕಿ.ಮೀ. ದೂರದಲ್ಲಿ ನೆಲೆಗೊಂಡಿರುವ ನಾಯಿನೆಂಬ ಈ ಸಣ್ಣ ಪಟ್ಟಣವು ಇದೊಂದೇ ಬಾರಿ ಸುವಾರ್ತೆಯಲ್ಲಿ ಕಂಡುಬರುತ್ತದೆ.

*ಚಟ್ಟವನ್ನು ಮುಟ್ಟಲು* (ವ. 14): ಈ ರೀತಿ ಮಾಡುವುದರ ಮೂಲಕ ಯೇಸು ಸಾಂಪ್ರದಾಯಿಕವಾಗಿ ಮೈಲಿಗೆಯ ಸಮಸ್ಯೆಗೆ ಒಳಗಾದನು.

**ಪ್ರಶ್ನೆಗಳು**

1. ಈ ಕಥೆಯ ಹಿನ್ನಲೆಯೇನು (ಲೂಕ ಅಧ್ಯಾಯ 7)?
2. ಇದು ಎಲ್ಲಿ ನಡೆಯುತ್ತದೆ (ವ. 11)? ***ಯೇಸುವಿನ ಕಾಲದಲ್ಲಿನ ಗಲಿಲಾಯ ನಕ್ಷೆಯಲ್ಲಿ*** ಈ ಸ್ಥಳವನ್ನು ಕಂಡುಹಿಡಿಯಿರಿ.
3. ಮಗ ಸತ್ತುಹೋಗಿದ್ದ ವಿಧವೆಯ ಸ್ಥಿತಿಯ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 12)?
4. ಆ ವಿಧವೆಯ ಪರಿಸ್ಥಿತಿಗೆ ಯೇಸು ಹೇಗೆ ಪ್ರತಿಕ್ರಯಿಸುತ್ತಾನೆ (ವ. 13)?
5. ವಿಧವೆಯ ಪರಿಸ್ಥಿತಿಯ ಬಗ್ಗೆ ಯೇಸು ಏನು ಮಾಡುತ್ತಾನೆ (ವ. 14-15)?
6. ಆ ಅದ್ಭುತಕ್ಕೆ ಜನರು ಹೇಗೆ ಪ್ರತಿಕ್ರಯಿಸುತ್ತಾರೆ (ವ. 16)?
7. ಈ ಅದ್ಭುತದ ಪರಿಣಾಮವಾಗಿ ಜನರು ಯೇಸುವಿನ ಬಗ್ಗೆ ಏನೆಂದು ತಿಳಿದುಕೊಳ್ಳುತ್ತಾರೆ (ವ. 16)?
8. ಈ ಅದ್ಭುತದ ಪರಿಣಾಮವೇನಾಗಿತ್ತು (ವ. 17)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಕಥೆಯ ಬೇರೆ ಬೇರೆ ಭಾಗಗಳಲ್ಲಿನ ಭಾವನೆಗಳನ್ನು ನೀವು ಹೇಗೆ ವರ್ಣಿಸುವಿರಿ?
2. ನಾಯಿನೂರಿನ ಬಡ ವಿಧವೆಯ ಮಗನ ಕುರಿತ ಕಥೆಯನ್ನು ಪುನಃ ಹೇಳಿರಿ (ಲೂಕ 7:11-17). ನಿಮ್ಮದೇ ಪದ ಬಳಸಿರಿ. ಸತ್ಯವೇದವನ್ನು ನೋಡಬೇಡಿ. ನಾಟಕೀಯವಾಗಿ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.

## 3. ಯೇಸು ಮತ್ತು ಸ್ನಾನಿಕನಾದ ಯೋಹಾನ, ಮತ್ತಾ. 11:2-19

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ವಿಷಯವನ್ನು ಲೂಕ 7:18-35 ರಲ್ಲಿ ಸಹ ಕಾಣಬಹುದು. ಯೇಸುಕ್ರಿಸ್ತನು ಮೆಸ್ಸೀಯನಾಗಿದ್ದನೆಂಬುದರ ಕುರಿತು ಸ್ನಾನಿಕನಾದ ಯೋಹಾನನ ಬಳಿಯೊಂದು ಪ್ರಶ್ನೆಯಿದೆ. ಯೇಸು ಆತನಿಗಾಗಿ ಒಂದು ಉತ್ತಮವಾದ ಉತ್ತರವನ್ನು ಹೊಂದಿದ್ದಾನೆ: "ನನ್ನ ಸೇವೆಯ ಮೂಲಕ ಏನಾಗುತ್ತಿದೆ ಎಂಬುದನ್ನು ನೋಡು!". ಅನಂತರ ಯೇಸು ಸ್ನಾನಿಕನಾದ ಯೋಹಾನನ ಗುರುತು ಮತ್ತು ಆತನ ಸೇವೆಯ ಕುರಿತು ತಿಳಿಸುತ್ತಾನೆ.

*ಯೋಹಾನನು ಸೆರೆಮನೆಯಲ್ಲಿ* (ವ. 2): ಸ್ನಾನಿಕನಾದ ಯೋಹಾನನು ಅರಸನಾದ ಹೆರೋದ ಅಗ್ರಿಪ್ಪನಿಂದ ಸೆರೆಯಲ್ಲಿ ಹಾಕಲ್ಪಟ್ಟಿದ್ದನು (ನೋಡಿ ಮಾರ್ಕ 1:14 ರ ಟಿಪ್ಪಣಿ), ಆತನೇ ಅವನನ್ನು ನಂತರ ಶಿರಚ್ಛೇದ ಮಾಡುತ್ತಾನೆ (ನೋಡಿ ಮಾರ್ಕ 6:14-29 ಟಿಪ್ಪಣಿಯೊಂದಿಗೆ).

*ಬರಬೇಕಾದವನು* (ವ. 3): ಯೇಸು ನಿಜವಾಗಲೂ ಮೆಸ್ಸೀಯನು ಹೌದೋ ಎಂಬುದನ್ನು ಸ್ನಾನಿಕನಾದ ಯೋಹಾನನು ತಿಳಿದುಕೊಳ್ಳಲು ಬಯಸಿದನು.

*ನನ್ನ ವಿಷಯದಲ್ಲಿ ಸಂಶಯಪಡದವನೇ* (ವ. 6): ಸ್ನಾನಿಕನಾದ ಯೋಹಾನನು ಬೇಸರ ಮತ್ತು ಸಂದೇಹದಿಂದ ತನ್ನ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳಬಾರದೆಂಬುದಾಗಿ ಯೇಸು ಬಯಸಿದನು.

*ಪ್ರವಾದಿಗಿಂತಲೂ ಹೆಚ್ಚಿನವನು* (ವ. 9): ಸ್ನಾನಿಕನಾದ ಯೋಹಾನನು ಒಬ್ಬ ಪ್ರವಾದಿಯಾಗಿದ್ದು ವಿಶೇಷವಾದ ರೀತಿಯಲ್ಲಿ ಮೆಸ್ಸೀಯನಿಗಾಗಿ ದಾರಿಯನ್ನು ಸರಿಮಾಡುತ್ತಾನೆ.

ವಚನ 10: ಮಲಾಕಿ 3:1 ರ ಹೇಳಿಕೆಯೊಂದಿಗೆ.

*ಪರಲೋಕ ರಾಜ್ಯದಲ್ಲಿರುವ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು* (ವ. 11): ಸ್ನಾನಿಕನಾದ ಯೋಹಾನನು ಹಳೆಯ ಒಡಂಬಡಿಕೆಗೆ ಸೇರಿದವನಾಗಿದ್ದು ಅಲ್ಲಿ ಆತನೇ ಪ್ರಮುಖ ಪ್ರವಾದಿಯಾಗಿದ್ದನು. ಆದರೆ ಹೊಸ ಒಡಂಬಡಿಕೆಯು ಒಂದು ಶ್ರೇಷ್ಠವಾದ ಒಡಂಬಡಿಕೆಯಾಗಿದೆ. ಹಾಗಾಗಿ ಪರಲೋಕ ರಾಜ್ಯದಲ್ಲಿರುವ ಚಿಕ್ಕವನೂ ಸಹ ಯೋಹಾನನಿಕ್ಕಿಂತ ದೊಡ್ಡವನಾಗಿರುತ್ತಾನೆ.

ವಚನ 12: ಈ ವಚನದ ಅರ್ಥದೊಂದಿಗೆ ಸತ್ಯವೇದ ಪಂಡಿತರು ಪರದಾಡುತ್ತಾರೆ. ಇದನ್ನು ಅರ್ಥೈಸಿಕೊಳ್ಳುವ ಒಂದು ಬಗೆ ಇಂತಿದೆ: ಯೇಸುವಿನ ಸೇವೆಯ ಪ್ರಾರಂಭದಿಂದಲೂ (ಸ್ನಾನಿಕನಾದ ಯೋಹಾನನ ಕಾಲದಿಂದ) ದೇವರ ರಾಜ್ಯವು ಬಲವಂತವಾಗಿ ಮುಂದುವರೆದಿದೆ. ಆದರೆ ಈ ಮುನ್ನಡೆಯು ಕೆಲ ಬಲಾತ್ಕಾರಿ (ಹಿಂಸಾತ್ಮಕ) ಜನರ ನಿರಂತರವಾದ ಬಲಾತ್ಕಾರದಡಿಯಲ್ಲಿ ಸಾಗುತ್ತಿದೆ (ಬಲಾತ್ಕಾರಿಗಳು "ಸ್ವಾಧೀನ ಮಾಡಿಕೊಳ್ಳುತ್ತಾರೆ"). ಹಾಗಾಗಿ ಈ ರೀತಿಯಲ್ಲಿ ದೇವರ ರಾಜ್ಯದ ಜನರು ನಿರಂತರವಾಗಿ ಹಿಂಸೆಗೊಳಗಾಗುತ್ತಿರುವ ಕಾರಣದಿಂದ ಸ್ನಾನಿಕನಾದ ಯೋಹಾನನು ಯೇಸು ನಿಜವಾಗಲೂ ಮೆಸ್ಸೀಯನಾಗಿದ್ದಾನೋ ಎಂಬುದಾಗಿ ಸಂದೇಹಪಟ್ಟನು.

*ಬರತಕ್ಕ ಎಲೀಯನು* (ವ. 14): ಇಲ್ಲಿ ಯೇಸು ಕರ್ತನ ದಿನವು ಬರುವುದಕ್ಕಿಂತ ಮುಂಚೆ ಎಲೀಯನು ಬರುವನೆಂಬುದಾಗಿ ಹೇಳುವ ಮಲಾಕಿ 4:5 ನ್ನು ಉಲ್ಲೇಖಿಸುತ್ತಾನೆ. ಜನರು ಸ್ನಾನಿಕನಾದ ಯೋಹಾನನ ಬಳಿ ನೀನು ಎಲೀಯನೋ ಎಂಬುದಾಗಿ ನೇರವಾಗಿ ಕೇಳಿದಾಗ ಆತನು ಅಲ್ಲಗಳೆದನು (ನೋಡಿ ಯೋಹಾನ 1:21). ಖಂಡಿತವಾಗಿ ಯೋಹಾನನು ಎಲೀಯನ ಮರು ನರಾವತಾರವಾಗಿರಲಿಲ್ಲ, ಆದರೆ ಆತನು ಎಲೀಯನ ಕಾರ್ಯ ಮತ್ತು ಪಾತ್ರವನ್ನು ನೆರವೇರಿಸಿದನು (ನೋಡಿ ಮಾರ್ಕ 9:11-13).

*ಪೇಟೆಗಳಲ್ಲಿ ಕೂತುಕೊಂಡು ... ಕೊಳಲೂದಿದೆವು ... ಗೋಳಾಡಿದೆವು* (ವ. 16-19): ಜನರು ವಿಭಿನ್ನ ಕಾರಣಗಳಿಗಾಗಿ ಯೋಹಾನ ಮತ್ತು ಯೇಸು ಇಬ್ಬರನ್ನೂ ತಿರಸ್ಕರಿಸಿದರು. ಜನರು ಕೊಳಲೂದುವಾಗ (ಮದುವೆಯಲ್ಲಿ ನಡೆಯುವಂತೆ) ನಾಟ್ಯಮಾಡುವುದಕ್ಕೆ ಅಥವಾ ಸ್ಮಶಾನ(ಚಮರ)ಗೀತೆ ಹಾಡುವುದಕ್ಕೆ ತಿರಸ್ಕರಿಸುವ ಮಕ್ಕಳಂತಿದ್ದರು. ಅವರು ಯೋಹಾನನ್ನಾಗಲೀ (ಆತನ ಜೀವನ ಶೈಲಿ ತುಂಬಾ ಕಟ್ಟುನಿಟ್ಟಾಗಿತ್ತು, ಯಾಕೆಂದರೆ ಆತನು ಅನ್ನಪಾನಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ) ಯೇಸುವನ್ನಾಗಲೀ (ಈತನ ಜೀವನ ಶೈಲಿ ತೀರಾ ಸಡಿಲವಾಗಿತ್ತು, ಯಾಕೆಂದರೆ ಈತನು ಸುಂಕದವರು ಮತ್ತು ಪಾಪಿಗಳ ಜೊತೆ ಸೇರುತ್ತಿದ್ದನು) ಒಪ್ಪಿಕೊಳ್ಳಲಿಲ್ಲ.

*ಜ್ಞಾನವು ತನ್ನ ಕೆಲಸಗಳಿಂದ ಜ್ಞಾನವೇ ಎಂದು ಗೊತ್ತಾಗುವುದು* (ವ. 19): ದೇವರ ಜ್ಞಾನವು ಅವರ ವಿಭಿನ್ನವಾದ ಜೀವನಶೈಲಿಗಳ ಹೊರತಾಗಿಯೂ ಸ್ನಾನಿಕನಾದ ಯೋಹಾನ ಮತ್ತು ಯೇಸುವಿನಲ್ಲಿ ದೃಢಪಡಿಸಲ್ಪಟ್ಟಿದೆ.

**ಪ್ರಶ್ನೆಗಳು**

1. ಯೇಸುವಿನ ಬಗ್ಗೆ ಸ್ನಾನಿಕನಾದ ಯೋಹಾನನಲ್ಲಿರುವ ಪ್ರಶ್ನೆ ಏನು (ವ. 2-3)?
2. ಯೋಹಾನನ ಪ್ರಶ್ನೆಗೆ ಯೇಸು ಹೇಗೆ ಉತ್ತರಿಸುತ್ತಾನೆ (ವ. 4-5)?
3. ವಚನ 7-9 ರಲ್ಲಿ ಯೇಸುವಿನ ಮಾತುಗಳಿಂದ ಸ್ನಾನಿಕನಾದ ಯೋಹಾನನ ಯಾವ ಚಿತ್ರಣವು ನಮಗೆ ಸಿಗುತ್ತದೆ?
4. ವಚನ 10 ಮತ್ತು ಟಿಪ್ಪಣಿಯಲ್ಲಿ ಯೇಸು ಸ್ನಾನಿಕನಾದ ಯೋಹಾನನ ಬಗ್ಗೆ ಯಾವ ಹೇಳಿಕೆ ಕೊಡುತ್ತಾನೆ?
5. ವಚನ 11 ಮತ್ತು ಟಿಪ್ಪಣಿಯಲ್ಲಿ ಯೇಸು ಸ್ನಾನಿಕನಾದ ಯೋಹಾನನ ಬಗ್ಗೆ ಯಾವ ಹೇಳಿಕೆ ಕೊಡುತ್ತಾನೆ?
6. ಜನರು ಸ್ನಾನಿಕನಾದ ಯೋಹಾನನ ಬಗ್ಗೆ ಏನೆಂದು ಹೇಳುತ್ತಾರೆ ಮತ್ತು ಅವರು ಯಾಕೆ ಹಾಗೆ ಹೇಳುತ್ತಾರೆ (ವ. 18)?
7. ಮನುಷ್ಯಕುಮಾರನ ಬಗ್ಗೆ (ಯೇಸು) ಜನರು ಏನೆಂದು ಹೇಳುತ್ತಾರೆ, ಮತ್ತು ಅವರು ಯಾಕೆ ಹಾಗೆ ಹೇಳುತ್ತಾರೆ (ವ. 19)?
8. ಸ್ನಾನಿಕನಾದ ಯೋಹಾನನ ಮತ್ತು ತನ್ನ ಕುರಿತಾದ ಮಾತನ್ನು ಯೇಸು ಹೇಗೆ ಮುಕ್ತಾಯಗೊಳಿಸುತ್ತಾನೆ (ವ. 19)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವಚನ 12 ನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
2. ಸ್ನಾನಿಕನಾದ ಯೋಹಾನನು ಎಲೀಯನೋ ಅಥವಾ ಅಲ್ಲವೋ (ವ. 14 ಟಿಪ್ಪಣಿಯೊಂದಿಗೆ)?
3. ಈ ವಾಕ್ಯಭಾಗದ ಅಂತ್ಯದಲ್ಲಿ ಜ್ಞಾನದ ಕುರಿತಾದ ಯೇಸುವಿನ ಹೇಳಿಕೆಯನ್ನು ವಿವರಿಸಿರಿ.



## 4. ಯೇಸು ಒಬ್ಬ ದುರಾಚಾರಿಯಾದ ಹೆಂಗಸಿನಿಂದ ಅಭಿಷೇಕಿಸಲ್ಪಟ್ಟದ್ದು, ಲೂಕ 7:36-50

### ಪೀಠಿಕೆ ಮತ್ತು ಟಿಪ್ಪಣಿಗಳು

ಸುವಾರ್ತೆಗಳಲ್ಲಿ ಎರಡು ಸಂದರ್ಭಗಳಲ್ಲಿ ಯೇಸು ಒಬ್ಬ ಸ್ತ್ರೀಯಿಂದ ಅಭಿಷೇಕಿಸಲ್ಪಟ್ಟದ್ದನು ನಾವು ಕಾಣುತ್ತೇವೆ. ಮೊದಲ ಬಾರಿ ಗಲಿಲಾಯದಲ್ಲಿ ಯೇಸುವು ಸೀಮೋನನೆಂಬ ಫರಿಸಾಯನ ಮನೆಯಲ್ಲಿ ಊಟಕ್ಕೆ ಕೂತಿರುವಾಗ ಒಬ್ಬ ದುರಾಚಾರಿಯಾದ ಹೆಂಗಸು ಅಡ್ಡಿಯನ್ನುಂಟುಮಾಡುತ್ತಾಳೆ. ಈ ಕಥೆಯು ಲೂಕನ ಸುವಾರ್ತೆಯಲ್ಲಿ ಮಾತ್ರ ದಾಖಲಿಸಲ್ಪಟ್ಟಿದೆ. ಇದು ಈ ಪ್ರಸ್ತುತ ಅಧ್ಯಯನದ ವಿಷಯವಾಗಿದೆ.

ತನ್ನನ್ನು ಶಿಲುಬೆಗೆ ಹಾಕುವುದಕ್ಕಿಂತ ಮೂರು ದಿನ ಮೊದಲು ಎರಡನೇ ಬಾರಿಗೆ ಯೇಸು ಅಭಿಷೇಕಿಸಲ್ಪಡುತ್ತಾನೆ. ಇದು ಯೆರೂಸಲೇಮಿನ ಸಮೀಪ ಬೇಥಾನ್ಯದಲ್ಲಿ ಕುಷ್ಠರೋಗಿಯಾದ ಸೀಮೋನನ ಮನೆಯಲ್ಲಿ ಸಂಭವಿಸುತ್ತದೆ. ಲಾಜರ ಮತ್ತು ಮಾರ್ಥಳ ಸಹೋದರಿಯಾದ ಮರಿಯಳು ಬೆಲೆಯುಳ್ಳ ಅಚ್ಚಜಟಾಮಾಂಸಿ ತೈಲವನ್ನು ಯೇಸುವಿನ ತಲೆಯ ಮೇಲೆ ಹೊಯ್ಯುತ್ತಾಳೆ. ಈ ಕಥೆಯು ಯೋಹಾನ, ಮತ್ತಾಯ ಮತ್ತು ಮಾರ್ಕನ ಸುವಾರ್ತೆಗಳಲ್ಲಿ ದಾಖಲಿಸಲ್ಪಟ್ಟಿದೆ (ನೋಡಿ ಮಾರ್ಕ 14:3-9).

*ಸುಗಂಧ ತೈಲದ ಭರಣಿ* (ವ. 37): ಮಾರ್ಕ 14:3 ನ್ನು ಟಿಪ್ಪಣಿಯೊಂದಿಗೆ ನೋಡಿ.

*ಆತನ ಪಾದಗಳ ಬಳಿಯಲ್ಲಿ ನಿಂತುಕೊಂಡು* (ವ. 38): ಆ ದಿನಗಳಲ್ಲಿನ ಪದ್ಧತಿಯಂತೆ ಯೇಸು ಕಾಲನ್ನು ಚಾಚಿಕೊಂಡು ಮೇಜಿಗೆ ಒರಗಿಕೊಂಡಿದ್ದನು. ಹಾಗಾಗಿ ಇದು ಆ ಹೆಂಗಸಿಗೆ ಊಟಕ್ಕೆ ಅಡ್ಡಿಯಾಗದಂತೆ ಆತನ ಪಾದಗಳನ್ನು ತನ್ನ ಕೂದಲಿನಿಂದ ಒರೆಸಲು ಸಹಾಯವಾಯಿತು.

*ಸೀಮೋನನೇ* (ವ. 40): ಇದು ಆ ಕಾಲದಲ್ಲಿನ ಒಂದು ಸಾಮಾನ್ಯವಾದ ಹೆಸರಾಗಿತ್ತು. ಹೊಸ ಒಡಂಬಡಿಕೆಯಲ್ಲಿ ಸೀಮೋನ ಎಂಬುದಾಗಿ ಕರೆಯಲ್ಪಡುವ ಒಂಬತ್ತು ಜನರಿದ್ದಾರೆ.

*ಐನೂರು ಹಣ* (ವ. 41): ಒಂದು ಹಣ(ದೆನಾರಿ)ವು ಒಬ್ಬ ಕೂಲಿಯವನ ಒಂದು ದಿನದ ಕೂಲಿಗೆ ಸಮವಾಗಿತ್ತು.

ನನ್ನ ಕಾಲಿಗೆ ನೀರು ಕೊಡಲಿಲ್ಲ (ವ. 44): ಅತಿಥಿ ಸತ್ಕಾರದಲ್ಲಿ ಬಂದಂತ ಅತಿಥಿಗಳಿಗೆ ಕಾಲನ್ನು ತೊಳೆಯುವುದಕ್ಕಾಗಿ ನೀರನ್ನು ಕೊಡಲೇಬೇಕಾಗಿತ್ತು.

*ಮುದ್ದಿಡಲಿಲ್ಲ* (ವ. 45): ಅತಿಥಿ ಸತ್ಕಾರದಲ್ಲಿ ಗೌರವಾನ್ವಿತ ಅತಿಥಿಯನ್ನು ಸ್ವಾಗತಿಸಲು ಮುದ್ದಿನೊಂದಿಗೆ ವಂದಿಸಬೇಕಾಗಿತ್ತು.

*ನನ್ನ ತಲೆಗೆ ಎಣ್ಣೆ ಹಚ್ಚಲಿಲ್ಲ* (ವ. 46): ಪ್ರಾಚೀನ ಕಾಲದಲ್ಲಿ ಪ್ರಾಮುಖ್ಯವಾದ ಅತಿಥಿಗಳಿಗೆ ಒಂದು ಗೌರವದ ಸಂಕೇತವಾಗಿ ಎಣ್ಣೆ ಹಚ್ಚಲಾಗುತ್ತಿತ್ತು.

### ಪ್ರಶ್ನೆಗಳು

1. ಈ ಸಂದರ್ಭದಲ್ಲಿ ಯೇಸು ಆ ಫರಿಸಾಯನ ಮನೆಗೆ ಯಾಕೆ ಹೋದನು (ವ. 36)?
2. ಕಥೆಯ ಪ್ರಾರಂಭದಲ್ಲಿ ಹೆಂಗಸಿನ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 37-38)?
3. ಯೇಸುವಿನ ಬಗ್ಗೆ ಸೀಮೋನನು ಹೊಂದಿದ್ದ ಯೋಚನೆಯೇನು (ವ. 39)?
4. ಸೀಮೋನನ ಯೋಚನೆಯೊಂದಿಗೆ ಯೇಸು ಹೇಗೆ ವ್ಯವಹರಿಸುತ್ತಾನೆ (ವ. 40-42)?
5. ಯೇಸುವಿನ ಪ್ರಶ್ನೆಗೆ ಸೀಮೋನನು ಹೇಗೆ ಉತ್ತರಿಸಿದನು (ವ. 44)?
6. ಯಾವ ರೀತಿಯಲ್ಲಿ ಸೀಮೋನನು ಯೇಸುವನ್ನು ತನ್ನ ಮನೆಗೆ ಗೌರವದಿಂದ ಸ್ವಾಗತಿಸಲಿಲ್ಲ (ವ. 44-46)?

7. ಆ ಹೆಂಗಸು ಯೇಸುವಿಗೆ ತೋರಿಸಿದ ಪ್ರೀತಿಯ ಗುರುತುಗಳೇನು (ವ. 44-46)?

8. ವಚನ 47 ರಲ್ಲಿ ಪ್ರೀತಿ ಮತ್ತು ಕ್ಷಮೆಯ ಬಗ್ಗೆ ಯೇಸು ಹೇಳುವ ಅಂಶಗಳಾವುವು?

9. ಯೇಸು ಆ ಹೆಂಗಸಿಗೆ ಹೇಳಿದ ಮಾತುಗಳಿಗೆ ಉಳಿದ ಅತಿಥಿಗಳು ಯಾಕೆ ಅಚ್ಚರಿಗೊಂಡರು (ವ. 48-49)?

10. ಆ ಹೆಂಗಸು ಹೇಗೆ ರಕ್ಷಣೆಯನ್ನು ಹೊಂದಿಕೊಳ್ಳುತ್ತಾಳೆ (ವ. 50)?

11. ಆ ಸ್ತ್ರೀಗಾಗಿ ಯೇಸು ಮಾಡಿದ ಕೊನೆಯ ಆಶೀರ್ವಾದವೇನು (ವ. 50)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯೇಸು ಪ್ರವಾದಿಯಲ್ಲವೆಂಬುದಾಗಿ ಸೀಮೋನನು ಯೋಚಿಸಿದಾಗ ಯೇಸು ಆತನ ಯೋಚನೆಯು ಹೇಗೆ ತಪ್ಪಾಗಿದೆಯೆಂಬುದಾಗಿ ತಿಳಿಸುತ್ತಾನೆ?
2. ಯೇಸುವಿಗೆ ತೈಲ ಹಚ್ಚಿದ ಸ್ತ್ರೀಯ ಕುರಿತಾದ ಕಥೆಯಲ್ಲಿ ಕಾಣುವಂತೆ ಪ್ರಿತಿ ಮತ್ತು ಕ್ಷಮೆಯ ನಡುವಿನ ಸಂಬಂಧವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ.
3. ಯೇಸುವಿಗೆ ತೈಲ ಹಚ್ಚಿದ ಸ್ತ್ರೀ ಕುರಿತಾದ ಕಥೆಯನ್ನು ಪುನಃ ಹೇಳಿರಿ (ಲೂಕ 7:11-17). ನಿಮ್ಮದೇ ಪದಗಳನ್ನು ಬಳಸಿರಿ, ಸತ್ಯವೇದದಲ್ಲಿ ನೋಡಬೇಡಿ. ನಾಟಕೀಯವಾಗಿ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಯೇಸು ಒಬ್ಬ ದುರಾಚಾರಿಯಾದ ಹೆಂಗಸಿನಿಂದ ಅಭಿಷೇಕಿಸಲ್ಪಟ್ಟ (ತೈಲ ಹಚ್ಚಿಸಿಕೊಂಡ) ಕಥೆಯನ್ನು ವಿಮರ್ಶಿಸಿರಿ (ಲೂಕ 7:36-50). ಇದು ಈ ಅಧ್ಯಯನದಲ್ಲಿನ ಮಾಹಿತಿಗಳ ಬೆಳಕಿನಲ್ಲಿರಲಿ. ಅನಂತರ ***ನಿನ್ನ ನಂಬಿಕೆಯೇ ನಿನ್ನನ್ನು ರಕ್ಷಿಸಿ ಅದೆ; ಸಮಾಧಾನದಿಂದ ಹೋಗು*** ಎಂಬ ಒಂದು ಧ್ಯಾನವನ್ನು (ಅಥವಾ ಒಂದು ಸತ್ಯವೇದ ಅಧ್ಯಯನ ಅಥವಾ ಪ್ರಸಂಗ) ಸಿದ್ಧಪಡಿಸಿರಿ.



## 5. ಕಷ್ಟ (ಸಂಕಟ) ಮತ್ತು ವಿಶ್ರಾಂತಿ, ಮತ್ತಾಯ 11:20-30

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ಪಠ್ಯವನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ಯೇಸು ಗಲಿಲಾಯದಲ್ಲಿನ ಮನತಿರುಗದ ಊರುಗಳನ್ನು ಗದರಿಸಿದ್ದು, ವ. 20-24
2. ಯೇಸು ತನ್ನ ಪರಲೋಕದ ತಂದೆಯನ್ನು ಕೊಂಡಾಡಿದ್ದು, ವ. 25-27
3. ಯೇಸು ಕಷ್ಟಪಡುವವರಿಗೆ ಮತ್ತು ಭಾರಹೊತ್ತವರಿಗೆ ವಿಶ್ರಾಂತಿಯನ್ನು ವಾಗ್ದಾನ ಮಾಡುವುದು, ವ. 28-30

ಲೂಕ 10:13-22 ಮೊದಲ ಎರಡು ಅಂಶಗಳಿಗೆ ಸಮಾನಾರ್ಥಕವಾದ ಅಂಶ ಹೊಂದಿದೆ. ಆದರೆ ಕಷ್ಟಪಡುವವರಿಗೆ ಮತ್ತು ಭಾರಹೊತ್ತವರಿಗಾಗಿನ ಯೇಸುವಿನ ವಾಗ್ದಾನವು ಮತ್ತಾಯನ ಸುವಾರ್ತೆಯಲ್ಲಿ ಮಾತ್ರ ಕಂಡುಬರುತ್ತದೆ.

*ಖೊರಾಜಿನೇ* (ವ. 21): ಈ ಪಟ್ಟಣವು ಕಪೆರ್ನೌಮಿನ ಉತ್ತರಕ್ಕೆ ಕೆಲವು ಕಿ.ಮೀ. ದೂರದಲ್ಲಿದೆ. ಇಲ್ಲಿ ಮಾತ್ರ ಇದರ ಬಗ್ಗೆ ಹೇಳಲಾಗಿದೆ.

*ಗೋಣೀತಟ್ಟು ಹೊದ್ದುಕೊಂಡು … ಬೂದಿಯಲ್ಲಿ … ಕೂತುಕೊಂಡು* (ವ. 21): ಇದು ಒಂದು ಪಶ್ಚಾತ್ತಾಪ ಮತ್ತು ದುಃಖವನ್ನು ವ್ಯಕ್ತಪಡಿಸುವಿಕೆಯಾಗಿದ್ದು, ಒಬ್ಬರು ಗೋಣಿ ತಟ್ಟನ್ನು ಹೊದ್ದುಕೊಂಡು ಬೂದಿಯನ್ನು ಎರಚಿಕೊಳ್ಳುತ್ತಿದ್ದರು (ಹೋಲಿಸಿ ಎಸ್ತೇರ್ 4:1,3 ಯೆರೆಮೀಯ 6:26, ದಾನಿಯೇಲ 9:3).

*ಬೇತ್ಸಾಯಿದ* (ವ. 21): ಈ ಪಟ್ಟಣವು ಗಲಿಲಾಯ ಸಮುದ್ರದ ಈಶಾನ್ಯ ತೀರದ ಮೇಲಿತ್ತು.

*ತೂರ್ ಮತ್ತು ಸೀದೋನ್* (ವ. 22): ಇವು ಪ್ಯಾಲೆಸ್ತೀನ್ ಉತ್ತರಕ್ಕೆ ಮೆಡಿಟರೇನಿಯನ್ ಕರಾವಳಿ ಮೇಲಿನ ಎರಡು ಪ್ರಮುಖ ಫೊಯಿನಿಕ್ಯ ಪಟ್ಟಣಗಳಾಗಿವೆ. ಹಳೇ ಒಡಂಬಡಿಕೆಯ ಪ್ರವಾದಿಗಳು ಇವುಗಳ ಮೇಲೆ ದೇವರ ನ್ಯಾಯತೀರ್ಪ(ದಂಡನೆ)ನ್ನು ಸಾರಿದರು, ಯಾಕೆಂದರೆ ಇವರು ಬಾಳನನ್ನು ಪೂಜಿಸಿ, ಇಸ್ರಾಯೇಲ್ ಜನರೊಂದಿಗೆ ದ್ವೇಷ ಸಾಧಿಸುತ್ತಿದ್ದರು.

*ಸೊದೋಮ್* (ವ. 23-24): ಇದರ ಪಾಪದ ನಿಮಿತ್ತ ಈ ಪಟ್ಟಣವು ಅಬ್ರಹಾಮನ ಕಾಲದಲ್ಲಿ ದೇವರಿಂದ ನಾಶನವನ್ನು ಹೊಂದಿತು (ಆದಿಕಾಂಡ 19 ನೇ ಅಧ್ಯಾಯವನ್ನು ನೋಡಿ).

*ಬಾಲಕರಿಗೆ* (ವ. 25): ಈ ಪದವನ್ನು ಅಲಂಕಾರಿಕವಾಗಿ ಮುಗ್ಧ ಮತ್ತು ಸಾಮಾನ್ಯ (ಸರಳ) ಜನರ ಬಗ್ಗೆ ಬಳಸಬಹುದಾಗಿದೆ. ಹಾಗೆಯೇ ಈ ವಚನದಲ್ಲಿ ಇದು "ಜ್ಞಾನಿಗಳಲ್ಲದವರನ್ನು ಮತ್ತು ಬುದ್ಧಿಯಿಲ್ಲದವರನ್ನು" ಸೂಚಿಸುತ್ತದೆ.

*ಎಲ್ಲವನ್ನೂ* (ವ. 27): ಇಲ್ಲಿ ಯೇಸು ದೇವರ ಪೂರ್ಣಪ್ರಮಾಣದ ಪ್ರಕಟಣೆಯನ್ನು ಸೂಚಿಸುತ್ತಿದ್ದಾನೆ (ಹೋಲಿಸಿ ವ. 25).

*ಕಷ್ಟಪಡುವವರೇ, ಹೊರೆಹೊತ್ತವರೇ* (ವ. 28): ಬಹುಶಃ ಯೇಸು ಫರಿಸಾಯರ ಹಳೇ ಒಡಂಬಡಿಕೆಯ ಶಾಸನಾತ್ಮಕವಾದ ವ್ಯಾಖ್ಯಾನವನ್ನು ಆಗ್ರಹಿಸಿ ಹೇಳುವುದರ ಮೂಲಕ ಜನರ ಮೇಲೆ ಭಾರವಾದ ಹೊರೆಗಳನ್ನು ಹೊರಿಸುತ್ತಿರುವುದಕ್ಕಾಗಿ ಹೊರೆಹೊತ್ತವರೇ ಎಂಬುದಾಗಿ ಉಲ್ಲೇಖಿಸುತ್ತಾನೆ (ಹೋಲಿಸಿ ಮತ್ತಾಯ 23:4).

*ನೊಗ* (ವ. 29-30): ಈ ದಿನನಿತ್ಯದ ಪದವನ್ನು ಪ್ರಾಚೀನ ದಿನಗಳಲ್ಲಿ ಹೆಚ್ಚಾಗಿ ಅಲಂಕಾರಿಕವಾಗಿ ಉಪಯೋಗಿಸಲಾಗುತಿತ್ತು. ಉದಾಹರಣೆಗೆ ಇದು ರಾಜಕೀಯ ಶೋಷಣೆ ಅಥವಾ ಆತ್ಮೀಕ ದಾಸತ್ವದ ಸಂಕೇತವಾಗಬಹುದು. ಅಲ್ಲದೇ ಇದನ್ನು ಒಂದು ಸಕಾರಾತ್ಮಕ ರೀತಿಯಲ್ಲಿ ತನ್ನ ಒಡಂಬಡಿಕೆ ಮತ್ತು ವಾಕ್ಯದ ಮೂಲಕ ತನ್ನ ಜನರ ಮೇಲಿನ ದೇವರ ಅಧಿಕಾರದ ಕುರಿತಾಗಿ ಸಹ ಬಳಸಬಹುದಾಗಿದೆ. ಈ ವಾಕ್ಯಭಾಗದಲ್ಲಿ ರೂಪಾಲಂಕಾರದ ಸಕರಾತ್ಮಕ ಮತ್ತು ನಕರಾತ್ಮಕ ಅಂಶಗಳೆರಡನ್ನು ಸಹ ಅಳವಡಿಸಲಾಗಿದೆ:

ಫರಿಸಾಯರ ನೊಗವು (ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಕುರಿತಾದ ಅವರ ಶಾಸನಾತ್ಮಕ ಮತ್ತು ಪ್ರಯಾಸ ಅರ್ಥ ವಿವರಣೆ) ಭಾರ ಮತ್ತು ದಮನಕಾರಿಯಾಗಿತ್ತು. ಆದರೆ ಯೇಸುವಿನ ನೊಗವು (ಯೇಸುಕ್ರಿಸ್ತನ ಆಳ್ವಿಕೆಯಡಿಯಲ್ಲಿ ದೇವರ ರಾಜ್ಯದಲ್ಲಿನ ಜೀವನ) ಮೃಧು ಮತ್ತು ಹಗುರವಾಗಿತ್ತು. ನಾವು ಯೇಸುಕ್ರಿಸ್ತನ ಬಳಿಗೆ ಬರುವಾಗ ("ನಮ್ಮ ಮೇಲೆ ಆತನ ನೊಗವನ್ನು ತಗೆದುಕೊಂಡಾಗ") ನಮ್ಮ ಆತ್ಮಗಳಿಗೆ ನಾವು ವಿಶ್ರಾಂತಿಯನ್ನು ಕಂಡುಕೊಳ್ಳುತ್ತೇವೆ.

**ಪ್ರಶ್ನೆಗಳು**

1. ***ಯೇಸುವಿನ ಕಾಲದಲ್ಲಿನ ಗಲಿಲಾಯದ ನಕ್ಷೆಯಲ್ಲಿ*** ಖೊರಾಜಿನ್, ಬೇತ್ಸಾಯಿದ ಮತ್ತು ಕಪೆರ್ನೌಮನ್ನು ಕಂಡುಹಿಡಿಯಿರಿ.
2. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ಟೇನ್ ನಕ್ಷೆಯಲ್ಲಿ*** ತೂರ್ ಮತ್ತು ಸೀದೋನ್ ಕಂಡುಹಿಡಿಯಿರಿ.
3. ಯಾಕೆ ಯೇಸು ಮೂರು ಗಲಿಲಾಯದ ಪಟ್ಟಣಗಳಾದ ಕಪೆರ್ನೌಮೆ, ಬೇತ್ಸಾಯಿದ ಮತ್ತು ಖೊರಾಜಿನ್ನನ್ನು ಗದರಿಸಿದನು (ವ. 21-24)?
4. ವ. 25-26 ರಲ್ಲಿ ಯೇಸು ಯಾಕೆ ಪರಲೋಕದ ತಂದೆಯನ್ನು ಕೊಂಡಾಡುತ್ತಾನೆ?
5. "ಎಲ್ಲವನ್ನೂ" ಎಂಬ ಯೇಸುವಿನ ಮಾತಿನ ಅರ್ಥವೇನು (ವ. 27)?
6. ವ. 27 ರಲ್ಲಿ ನಮ್ಮ ಪರಲೋಕದ ತಂದೆಯನ್ನು ತಿಳಿದುಕೊಳ್ಳುವುದರ ಬಗ್ಗೆ ನಾವೇನನ್ನು ಕಲಿಯುತ್ತೇವೆ?
7. "ನೊಗ" ಎಂಬ ರೂಪಾಲಂಕಾರವು ಏನೆಂದು ಅರ್ಥ ಕೊಡುತ್ತದೆ (ವ. 28-30)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ನ್ಯಾಯವಿಚಾರಣೆಯ ದಿನದಲ್ಲಿ ಸೊದೋಮ್ ಪಟ್ಟಣದ ಗತಿಯು ಕಪೆರ್ನೌಮಿನ ಗತಿಗಿಂತಲೂ ಮೇಲಾಗಿರುವುದು (ವ. 23-24) ಎಂಬ ಯೇಸುವಿನ ಹೇಳಿಕೆಯ ಅರ್ಥವೇನೆಂಬುದನ್ನು ವಿವರಿಸಿ.
2. ವ. 25-27 ರಲ್ಲಿನ ಯೇಸುವಿನ ಮಾತುಗಳ ಬೆಳಕಿನಲ್ಲಿ ನಿಮ್ಮನ್ನು ಮತ್ತು ನಿಮ್ಮ ಸಭೆಯ ವಿಶ್ವಾಸಿಗಳನ್ನು ಮೌಲ್ಯಮಾಪನ ಮಾಡಿರಿ.
3. ವ. 28-30 ರಲ್ಲಿನ ಯೇಸುವಿನ ಆಹ್ವಾನ(ಆಮಂತ್ರಣ)ವನ್ನು ವಿವರಿಸಿರಿ. ನಿಮ್ಮದೇ ಪದಗಳನ್ನು ಉಪಯೋಗಿಸಿರಿ, ಸತ್ಯವೇದವನ್ನು ನೋಡಬೇಡಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ನನ್ನ ಬಳಿಗೆ ಬಂದು ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಳ್ಳಿರಿ ಎಂಬ ಯೇಸುವಿನ ಆಹ್ವಾನವನ್ನು (ಮತ್ತಾ. 11-28) ಈ ಅಧ್ಯಯನದಲ್ಲಿ ಕಂಡುಬರುವ ವಿಷಯದ ಬೆಳಕಿನಲ್ಲಿ ವಿಮರ್ಶಿಸಿರಿ. ಅನಂತರ ***ನಿಮ್ಮ ಆತ್ಮಗಳಿಗೆ ವಿಶ್ರಾಂತಿ*** ಎಂಬ ಒಂದು ಧ್ಯಾನವನ್ನು ಸಿದ್ಧಪಡಿಸಿರಿ.

## 6. ಯೋನನಲ್ಲಿನ ಸೂಚಕಕಾರ್ಯ, ಮತ್ತಾಯ 12:38-42

### ಪೀಠಿಕೆ ಮತ್ತು ಟಿಪ್ಪಣಿಗಳು

ಮತ್ತಾಯನು ಫರಿಸಾಯರು ಮತ್ತು ಶಾಸ್ತ್ರಿಗಳು ಯೇಸುವಿನ ಬಳಿ ಸೂಚಕಕಾರ್ಯವನ್ನು ನೋಡಬೇಕೆಂದು ಕೇಳುವುದರ ಕುರಿತಾದ ವಾಕ್ಯಭಾಗವನ್ನು ಯೇಸುವು ಯಾವ ಅಧಿಕಾರದಿಂದ ದೆವ್ವಗಳನ್ನು ಬಿಡುಸುತ್ತಾನೆ ಎಂಬುದರ ಕುರಿತಾದ ವಾಗ್ವಾದ ಮತ್ತು ಯೇಸುವಿನ ನಿಜವಾದ ತಾಯಿ ಮತ್ತು ಸಹೋದರರು ಯಾರೆಂಬುದರ ಕುರಿತಾದ ಪ್ರಶ್ನೆಯ ನಡುವೆ ಇಡುತ್ತಾನೆ (ನೋಡಿ ಮಾರ್ಕ 3:20 ಮತ್ತು ಟಿಪ್ಪಣಿ, ಮಾರ್ಕ 3:31-35 ಮತ್ತು ಟಿಪ್ಪಣಿ).

ದೆವ್ವಹಿಡಿದವರನ್ನು ಬಿಡಿಸಿದ್ದು ಮತ್ತು ಅಸ್ವಸ್ಥರನ್ನು ಗುಣಪಡಿಸಿದ ಸೂಚಕಕಾರ್ಯಗಳು ಸಾಕಾಗದೆ ಇನ್ನೊಂದು ಸೂಚಕಕಾರ್ಯವನ್ನು ನೋಡಬೇಕೆಂಬ ಮನವಿಯ ಕುರಿತಾಗಿ ಯೇಸು ಸ್ಪಷ್ಟವಾಗಿ ನಿರಾಶೆಗೊಳ್ಳುತ್ತಾನೆ. ಹಾಗಾಗಿ ಆತನು ಯೆಹೂದಿ ನಾಯಕರನ್ನು "ವ್ಯಭಿಚಾರದಂತಿರುವ ಈ ಕೆಟ್ಟ ಸಂತತಿ" ಎಂಬುದಾಗಿ ಕರೆಯುತ್ತಾನೆ. ಅನಂತರ ಅವರಿಗೆ "ಯೋನನೆಂಬ ಪ್ರವಾದಿಯಲ್ಲಿ ಆದ ಸೂಚಕಕಾರ್ಯವೇ" ಹೊರತು ಬೇರೇನು ಸಿಗುವುದಿಲ್ಲ ಎಂದು ಹೇಳುತ್ತಾನೆ. ನಂತರ ಮತ್ತಾಯದಲ್ಲಿ "ಈ ಯೋನನ ಸೂಚಕಕಾರ್ಯಕ್ಕೆ" ಪುನಃ ಉಲ್ಲೇಖವನ್ನು ಕೊಡುತ್ತಾನೆ (ನೋಡಿ 16:4). ಲೂಕನು ಸಹ "ಯೋನನಲ್ಲಿನ ಸೂಚಕಕಾರ್ಯ"ದ ಬಗ್ಗೆ ಯೇಸುವಿನ ಮಾತೊಂದನ್ನು ಸೇರಿಸುತ್ತಾನೆ (ನೋಡಿ 11:29-32). ಆದರೆ ಮಾರ್ಕ ಮತ್ತು ಯೋಹಾನರು ಇದರ ಬಗ್ಗೆ ಹೇಳುವುದಿಲ್ಲ.

*ಸೂಚಕಕಾರ್ಯ* (ವ. 38): ಬಹುಶಃ ಫರಿಸಾಯರು ಆಕಾಶದಲ್ಲಿ ಒಂದು ನಯನಮನೋಹರವಾದ ಅದ್ಭುತವನ್ನು ನೋಡಬೇಕೆಂದು ಬಯಸಿದ್ದಿರಬಹುದು (ಹೋಲಿಸಿ ಲೂಕ 11:16).

*ವ್ಯಭಿಚಾರಿಣಿ* (ವ. 39): ಯೇಸು ಈ ಪದವನ್ನು ಒಂದು ಆತ್ಮೀಕವಾದ ದೃಷ್ಟಿಯಲ್ಲಿ ಹೇಳಿದನು: ತಾವು ಹಳೇ ಒಡಂಬಡಿಕೆಯನ್ನು ಅರ್ಥವಿವರಿಸುವ ರೀತಿ(ಬಗೆ)ಯಲ್ಲಿ ಯೆಹೂದಿ ನಾಯಕರು ದೇವರಿಗೆ ಮತ್ತು ಆತನ ಒಡಂಬಡಿಕೆಗೆ ಅವಿಧೇಯರಾಗಿದ್ದರು.

*ಯೋನನೆಂಬ ಪ್ರವಾದಿ* (ವ. 39): ಯೋನನು ಹಳೇ ಒಡಂಬಡಿಕೆಯ ಯೋನನ ಪುಸ್ತಕದ ಮುಖ್ಯ ವ್ಯಕ್ತಿಯಾಗಿದ್ದಾನೆ. ನಿನವೆಯ ಜನರ ಮೇಲೆ ದೇವರ ನ್ಯಾಯತೀರ್ಪನ್ನು ಪ್ರಕಟಿಸಲು ದೇವರು ಯೋನನನ್ನು ನಿನವೆ ಪಟ್ಟಣಕ್ಕೆ ಕಳುಹಿಸುತ್ತಾನೆ. ಆದರೆ ಅವರು ಯೋನನ ಮಾತುಗಳಿಗೆ ಕಿವಿಗೊಟ್ಟು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡುತ್ತಾರೆ. ಹಾಗಾಗಿ ದೇವರು ಅವರನ್ನು ಕ್ಷಮಿಸಿ ಅವರ ಪಟ್ಟಣವನ್ನು ಉಳಿಸುತ್ತಾನೆ.

*ಮೂರು ದಿನ ರಾತ್ರಿ ಹಗಲು* (ವ. 40): ಈ ಯೆಹೂದಿ ಹೇಳಿಕೆಯು "ಮೂರು ದಿನಗಳಿಗೆ" ಸಮಾನವಾಗಿದೆ. ಯೆಹೂದ್ಯರು ದಿನದ ಒಂದು ಭಾಗವನ್ನು ಸಹ "ಒಂದು ದಿನ" ಎಂಬುದಾಗಿ ಕರೆಯುತ್ತಿದ್ದರು. ಈ ಹೇಳಿಕೆಯ ನಡುವೆ ಯಾವುದೇ ಭಿನ್ನಾಭಿಪ್ರಾಯವಿರಲಿಲ್ಲ ಮತ್ತು ವಾಸ್ತವಾಂಶವೆಂದರೆ ಯೇಸು ಬರೀ ಶುಕ್ರವಾರ ಮಧ್ಯಾಹ್ನದಿಂದ ಭಾನುವಾರ ಬೆಳಗ್ಗೆಯ ತನಕವಷ್ಟೇ ಸಮಾಧಿಯಲ್ಲಿದ್ದನು.

*ದೊಡ್ಡ ಮೀನು* (ವ. 40): ಗ್ರೀಕ್ ಪದದ ಅರ್ಥ "ಸಮುದ್ರ ಜೀವಿ" ಎಂದಾಗಿದ್ದು ಇದನ್ನು ಒಂದು ದೊಡ್ಡ ಗಾತ್ರದ ಮೀನಿಗೂ ಇದನ್ನು ಬಳಸಬಹುದಾಗಿದೆ.

*ಮನುಷ್ಯಕುಮಾರನು* (ವ. 40): ಇದು ಸುವಾರ್ತೆಗಳಲ್ಲಿ ಯೇಸು ತನ್ನ ಕುರಿತಾಗಿ ಉಪಯೋಗಿಸುವ ಒಂದು ಸಾಮಾನ್ಯವಾದ ಹೆಸರಾಗಿದೆ.

*ಭೂಗರ್ಭದೊಳಗೆ* (ವ. 40): ಇಲ್ಲಿ ಯೇಸು ತನ್ನ ಸಮಾಧಿಯಲ್ಲಿ ಕಳೆಯಲಿರುವ ಸಮಯವನ್ನು ಸೂಚಿಸುತ್ತದೆ, ಅದನ್ನು ಯೋನನು ಮೀನಿನ ಹೊಟ್ಟೆಯೊಳಗೆ ಕಳೆದ ಸಮಯಕ್ಕೆ ಹೋಲಿಸುತ್ತಾನೆ.

ನಿನವೆ (ವ. 41): ಇದು ಹಳೇ ಒಡಂಬಡಿಕೆಯ ಅಶ್ಶೂರ್ಯ ಸಾಮ್ರಾಜ್ಯದ ರಾಜಧಾನಿಯಾಗಿತ್ತು. ಇದು ಕ್ರಿ.ಶ. 612 ರಲ್ಲಿ ಬಾಬೆಲಿನವರಿಂದ ಕೆಡವಲ್ಪಟ್ಟಿತ್ತು.

ದಕ್ಷಿಣ ದೇಶದ ರಾಣಿಯು (ವ. 42): 1ಅರಸುಗಳು ಅಧ್ಯಾಯ 10 ರಲ್ಲಿ ಶೆಬದ ರಾಣಿಯು ಅರಸನಾದ ಸೊಲೊಮೋನನನ್ನು ಭೇಟಿಯಾಗುವುದಕ್ಕೆ ಬರುವುದರ ಕುರಿತಾಗಿ ನಾವು ಓದುತ್ತೇವೆ (ಇದು ನೈರುತ್ಯ ಅರೇಬಿಯಾದಲ್ಲಿನ ಒಂದು ದೇಶವಾಗಿದ್ದು ಪ್ರಸ್ತುತ ಯೆಮನ್ ಆಗಿದೆ).

ಸೊಲೊಮೋನ (ವ. 42): ಸೊಲೊಮೋನನು ಕ್ರಿ.ಪೂ. 930 ರಲ್ಲಿನ ಅವಿಭಾಜ್ಯ ಇಸ್ರಾಯೇಲ್ ರಾಜ್ಯದ ರಾಜನಾಗಿದ್ದನು.

**ಪ್ರಶ್ನೆಗಳು**

1. ಯೆಹೂದಿ ನಾಯಕರು ಯೇಸುವಿನ ಬಳಿ ಕೇಳಿಕೊಂಡ ಬೇಡಿಕೆ ಏನು (ವ. 38)?
2. ಯೆಹೂದಿ ನಾಯಕರ ಕೋರಿಕೆಗೆ ಯೇಸು ಹೇಗೆ ಪ್ರತಿಕ್ರಯಿಸುತ್ತಾನೆ (ವ. 39)?
3. ವ. 40 ರಲ್ಲಿ ಯೋನ ಮತ್ತು ಮನುಷ್ಯಕುಮಾರನ ನಡುವೆ ಯಾವ ಹೋಲಿಕೆಯನ್ನು ಮಾಡುತ್ತಾನೆ?
4. ಯೇಸುವಿನ ಪ್ರಕಾರ ನ್ಯಾಯತೀರ್ಪಿನ ವೇಳೆ ಯೆಹೂದಿ ನಾಯಕರು ನಿನವೆ ಜನರಿಂದ ಯಾಕೆ ಖಂಡಿಸಲ್ಪಡುವರು (ವ. 42)?
5. ವ. 41 ರಲ್ಲಿ ಯೋನ ಮತ್ತು ಸ್ವತಃ ತನ್ನ ನಡುವೆ ಯೇಸು ಯಾವ ಹೋಲಿಕೆಯನ್ನು ಮಾಡುತ್ತಾನೆ?
6. ಯೇಸುವಿನ ಪ್ರಕಾರ ನ್ಯಾಯತೀರ್ಪಿನ ವೇಳೆ ಯಾಕೆ ಯೆಹೂದಿ ನಾಯಕರು ದಕ್ಷಿಣ ದೇಶದ ರಾಣಿಯಿಂದ ಖಂಡಿಸಲ್ಪಡುವರು (ವ. 42)?
7. ಸೊಲೊಮೋನ ಮತ್ತು ಸ್ವತಃ ತನ್ನ ನಡುವೆ ವ. 42 ರಲ್ಲಿ ಯೇಸು ಯಾವ ಹೋಲಿಕೆಯನ್ನು ಮಾಡುತ್ತಾನೆ?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. "ಯೋನನಲ್ಲಿನ ಸೂಚಕಕಾರ್ಯ" ವನ್ನು ವಿವರಿಸಿರಿ.
2. ಸಮಾನಾಂತರ ವಿಷಯಭಾಗಗಳಾದ "ಯೋನನಲ್ಲಿನ ಸೂಚಕಕಾರ್ಯ" (ಮತ್ತಾಯ 12:38-42 ಮತ್ತು ಲೂಕ 11:29-32) ವನ್ನು ಹೋಲಿಸಿ ಅವುಗಳ ನಡುವಿನ ಮುಖ್ಯ ವ್ಯತ್ಯಾಸಗಳಾವುವು?
3. ಯೇಸು ತನ್ನ ಸ್ವಂತ ಸಂತತಿಯ ಯೆಹೂದಿ ನಾಯಕರನ್ನು (ಅವರನ್ನು ವ್ಯಭಿಚಾರಿಣಿಯಂತಿರುವ ಕೆಟ್ಟ ಸಂತತಿ ಎಂದು ಕರೆದು) "ನಿನವೆ ಮತ್ತು ದಕ್ಷಿಣ ದೇಶದ ರಾಣಿಯೊಂದಿಗೆ ತದ್ವಿರುದ್ಧವಾಗಿ ತೋರಿಸುವುದರ ಕುರಿತಾದ ಗಮನಾರ್ಹವಾದ ವಾಸ್ತವಾಂಶವೇನಾಗಿದೆ?
4. ಇಂದಿನ ಕ್ರೈಸ್ತ ವಿಶ್ವಾಸಿಗಳಿಗೆ "ಯೋನನಲ್ಲಿನ ಸೂಚಕಕಾರ್ಯವು" ಯಾವ ಪಾಠವನ್ನು ಹೊಂದಿದೆ?

## 7. ಪರಲೋಕ ರಾಜ್ಯ ಕುರಿತ ಸಾಮ್ಯಗಳು, ಮತ್ತಾಯ ಅಧ್ಯಾಯ 13

### ಪೀಠಿಕೆ ಮತ್ತು ಟಿಪ್ಪಣಿಗಳು

ಮತ್ತಾಯನ ಸುವಾರ್ತೆಯ 13 ನೇ ಅಧ್ಯಾಯವು ಪರಲೋಕ ರಾಜ್ಯದ ಕುರಿತ ಅನೇಕ ಸಾಮ್ಯಗಳನ್ನು ಒಳಗೊಂಡಿದೆ. ಅವುಗಳಲ್ಲಿ ಎರಡನ್ನು ನಾವು ಈಗಾಗಲೇ ಅಭ್ಯಾಸಿಸಿದ್ದು ("ಬಿತ್ತುವವನು" ಮತ್ತು "ಸಾಸಿವೆ ಕಾಳು") ಇವನ್ನು ಮಾರ್ಕನು ತನ್ನ ಸುವಾರ್ತೆಯಲ್ಲಿ ಸೇರಿಸಿದ್ದಾನೆ (ನೋಡಿ ಮಾರ್ಕ 4:1-20, 30:2 ಟಿಪ್ಪಣಿಯೊಂದಿಗೆ).

ಮತ್ತಾಯನ 13 ನೇ ಅಧ್ಯಾಯದಲ್ಲಿ ಯೇಸು ಗಲಿಲಾಯ ಸಮುದ್ರದ ಮೇಲೆ ನೆರೆದಿರುವ ಒಂದು ಜನಸಮೂಹಕ್ಕೆ ಪರಲೋಕ ರಾಜ್ಯದ ಕುರಿತ ಈ ಸಾಮ್ಯಗಳನ್ನು ಮೊದಲು ಹೇಳುತ್ತಾನೆ. ಎಲ್ಲಾ ಜನರು ತೀರದ ಮೇಲೆ ನಿಂತುಕೊಂಡು ಕೇಳುತ್ತಿರುವಾಗ ಯೇಸು ತಾನೊಬ್ಬನೇ ದೋಣಿಯೊಳಕ್ಕೆ ಹೋಗಿ ಕೂತುಕೊಳ್ಳುತ್ತಾನೆ (ಮತ್ತಾ. 13:1-2). ಆ ಮೇಲೆ ಆತನು ಅವರಿಗೆ ಖಾಸಗಿಯಾಗಿ ಬೋಧಿಸಲು ತನ್ನ ಶಿಷ್ಯರೊಂದಿಗೆ ಒಂದು ಮನೆಗೆ ಹೋಗುತ್ತಾನೆ (ವ. 36).

ಈ ಅಧ್ಯಯನದಲ್ಲಿ ನಾವು ಪರಲೋಕ ರಾಜ್ಯದ ಕುರಿತ ಐದು ಸಾಮ್ಯಗಳನ್ನು ನೋಡಲಿದ್ದೇವೆ. ಆದರೆ ಮೊದಲು ನಾವು ಸುವಾರ್ತೆಯ ಓದುಗರನ್ನು ಕೆಲವೊಮ್ಮೆ ಗೊಂದಲಗೊಳಿಸುವ ವಿಷಯವೊಂದನ್ನು ಚರ್ಚಿಸಲಿದ್ದೇವೆ:

1. ಯಾಕೆ ಯೇಸು ಸಾಮ್ಯರೂಪಗಳಲ್ಲಿ ಮಾತನಾಡಿದನು, ವ. 10-17, 34-36, 51-52
2. ಹಣಜಿಯ ಸಾಮ್ಯ, ವ. 24-30 ಮತ್ತು 36-43
3. ಹುಳಿ ಹಿಟ್ಟಿನ ಸಾಮ್ಯ, ವ. 33
4. ಹೂಳಿಟ್ಟ ದ್ರವ್ಯ(ನಿಧಿ)ದ ಸಾಮ್ಯ, ವ. 44
5. ಬೆಲೆಬಾಳುವ ಮುತ್ತಿನ ಸಾಮ್ಯ, ವ. 45-46
6. ಬಲೆಯ ಸಾಮ್ಯ, ವ. 47-50

"ಸಾಮ್ಯದ" ಗ್ರೀಕ್ ಪದವು ಆಂಗ್ಲ ಭಾಷೆಯ ಪ್ಯಾರಬಲ್ ಎಂಬ ಪದಕ್ಕಿಂತಲೂ ವಿಶಾಲವಾದ ಅರ್ಥವನ್ನು ಹೊಂದಿದೆ. ಇದು "ಜ್ಞಾನೋಕ್ತಿ, ಕಟ್ಟುಕಥೆ, ಶಬ್ಧಾಲಂಕಾರ ಸಂಕೇತ" ಎಂಬ ಅರ್ಥವನ್ನು ಸಹ ಕೊಡುತ್ತದೆ, ಆದರೆ ಇದು ಬೋಧನೆಯ ಉದ್ದೇಶಕ್ಕಾಗಿ ಯಾವಾಗಲು ಎರಡು ವಸ್ತುಗಳ ಒಂದು ಹೋಲಿಕೆಯನ್ನು ಒಳಗೊಂಡಿದ್ದು ಅದು ಹೆಚ್ಚಾಗಿ ಒಂದು ಕಥೆಯ ರೂಪದಲ್ಲಿರುತ್ತದೆ ಮತ್ತು ಸಾಮಾನ್ಯವಾಗಿ ಒಂದು ಮುಖ್ಯ ಅಂಶದ ಉಲ್ಲೇಖದೊಂದಿಗಿರುತ್ತದೆ. ಸತ್ಯವೇದ ಪಂಡಿತರು ಒಂದು ಸಾಮ್ಯವನ್ನು ಹಲವಾರು ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಹೊಸ ಒಡಂಬಡಿಕೆಯ ಸಾಮ್ಯಗಳ ಸಂಖ್ಯೆಯು 33 ಮತ್ತು 79 ರ ನಡುವೆಯಿದೆ. ಆದರೆ ಅದು ನಿಮ್ಮ ವ್ಯಾಖ್ಯಾನದ ಆಧಾರದ ಮೇಲೆ ಅವಲಂಬನೆಯಾಗಿರುತ್ತದೆ.

ಒಂದು ಬೋಧನಾ ವಿಧಾನವಾಗಿ ಸಾಮ್ಯಗಳ ಉಪಯೋಗವು ಎರಡು ಬದಿಗಳನ್ನು ಹೊಂದಿದೆ: ಜನರು ಇದನ್ನು ಸುಲಭವಾಗಿ ಅರ್ಥೈಸಿಕೊಂಡು ಮತ್ತು ನೆನಪಿನಲ್ಲಿಟ್ಟುಕೊಳ್ಳುವಂತೆ ಇದು ಒಂದು ಅಂಶವನ್ನು ಸ್ಪಷ್ಟೀಕರಿಸುವ ಒಂದು ವಿಧವಾಗಿರಲೂಬಹುದು. ಅಥವಾ ಆಂತರಿಕ ಜ್ಞಾನ(ತಿಳುವಳಿಕೆ)ವುಳ್ಳವರು ಮಾತ್ರ ಅರ್ಥೈಸಿಕೊಳ್ಳುವಂತೆ ಇದು "ಗುಪ್ತ/ರಹಸ್ಯವಾಗಿಡುವ" ಒಂದು ವಿಧವೂ ಆಗಿರಬಹುದು. ಯೇಸು ಸಾಮ್ಯಗಳನ್ನು ಈ ಎರಡೂ ರೀತಿಯಲ್ಲಿ ಉಪಯೋಗಿಸಿದನು. ಈ ಅಧ್ಯಯನದಲ್ಲಿನ ಪರಲೋಕ ರಾಜ್ಯದ ಸಾಮ್ಯಗಳು ಈ ಎರಡನೇ ವರ್ಗಕ್ಕೆ ಸೇರಿವೆ.

ಯೇಸುವಿನ ಸೇವೆಯು ಬೆಳೆದಂತೆ ಮತ್ತು ಯೆಹೂದಿ ನಾಯಕರಿಂದ ವಿರೋಧವು ಹೆಚ್ಚಾದಂತೆಲ್ಲಾ ಯೇಸು ತನ್ನ ಬೋಧನೆಯಲ್ಲಿ ಹೆಚ್ಚಾಗಿ ಸಾಮ್ಯಗಳನ್ನು ಬಳಸಿದಂತೆ ತೋರುತ್ತದೆ. ವಚನ 10 ರಲ್ಲಿ ಆತನ ಶಿಷ್ಯರೂ ಸಹ ಯಾಕೆ ಸಾಮ್ಯರೂಪವಾಗಿ ಹೇಳುತ್ತೀ

ಎಂಬುದಾಗಿ ಕೇಳುತ್ತಾರೆ. ಯೇಸುವು ಇಸ್ರಾಯೇಲಿನ ವಾಗ್ದಾನ ಮಾಡಲ್ಪಟ್ಟ ಅರಸನಾದ ಮೆಸ್ಸೀಯನಾಗಿ ಬಂದನು. ಯೆಹೂದಿ ನಾಯಕರು ಆತನ ಮಾತುಗಳನ್ನೆಲ್ಲ ತಿರಸ್ಕರಿಸಿದ ನಂತರವಷ್ಟೇ ಆತನು ಪರಲೋಕ ರಾಜ್ಯದ ಕುರಿತು ಸತ್ಯಗಳನ್ನು ಕೊಡುವ "ಸಾಮ್ಯದ ವಿಧಾನ" ವನ್ನು ಬಳಸುತ್ತಾನೆ (ವ. 11).

*ಸಾಮ್ಯರೂಪವಾಗಿ ಅವರ ಸಂಗಡ ಮಾತಾಡುತ್ತೀ* (ವ. 10): ಮೇಲ್ಕಂಡ ವಿವರ ನೋಡಿ.

ವಚನ 13: ಧರ್ಮೋಪದೇಶಕಾಂಡದಿಂದ ಒಂದು ಹೇಳಿಕೆಯನ್ನು ಒಳಗೊಂಡಿದೆ.

ವಚನ 14: ಯೆಶಾಯ 6: 4-10 ರಿಂದ ಒಂದು ಹೇಳಿಕೆಯನ್ನು ಒಳಗೊಂಡಿದೆ.

ವಚನಗಳು 24-30: ಹಣಜಿಯ ಸಾಮ್ಯವು ಅನೇಕ ರೀತಿಯ ಅರ್ಥವನ್ನು ಕೊಡುತ್ತದೆ (ಹೋಲಿಸಿ ವಚನ 37-43), ಹಾಗಾಗಿ ಇದನ್ನು ಬಹುಶಃ ಒಂದು ಸಾಂಕೇತಿಕ ನಿರೂಪಣೆ ಎಂಬುದಾಗಿ ವರ್ಗೀಕರಿಸಬಹುದಾಗಿದೆ. ಒಂದು ನಿಜವಾದ ಸಾಮ್ಯವು ಒಂದೇ ಮುಖ್ಯ ಅಂಶದ ಅರ್ಥವನ್ನು ಕೊಡುತ್ತದೆ.

*ಹಣಜಿ* (ವ. 25): ಈ ರೀತಿಯ ಹಣಜಿಯು ಎಳೆಯದಾಗಿರುವಾಗ ಇದು ಗೋಧಿಯಂತೆಯೇ ಕಾಣುತ್ತದೆ, ಆದರೆ ಇದು ಬೆಳೆದಂತೆಲ್ಲ ಗೋಧಿಗಿಂತ ವಿಭಿನ್ನವಾಗಿ ತೋರುತ್ತದೆ.

*ಸುಗ್ಗೀಕಾಲ* (ವ. 30): ಹಳೇ ಒಡಂಬಡಿಕೆ (ಉದಾ: ಯೋವೇಲ 3:13) ಮತ್ತು ಹೊಸ  ಒಡಂಬಡಿಕೆಗಳೆರಡರಲ್ಲೂ (ಉದಾ: ಪ್ರಕಟಣೆ 14:14-20) ಸಹ ಸುಗ್ಗೀಕಾಲವು ದೇವರ ಅಂತಿಮ ನ್ಯಾಯತೀರ್ಪಿಗೆ ಒಂದು ರೂಪಾಲಂಕಾರವಾಗಿದೆ). ಯೇಸು ಹಣಜಿಯ ಕುರಿತಾದ ಸಾಮ್ಯದ ತನ್ನ ಸ್ವಂತ ವಿವರಣೆಯಲ್ಲಿ "ಸುಗ್ಗೀಕಾಲ ಅಂದರೆ ಯುಗದ ಸಮಾಪ್ತಿ" (ವ. 39) ಎಂಬುದಾಗಿ ಹೇಳುತ್ತಾನೆ.

*ಹುಳಿಹಿಟ್ಟು* (ವ. 33): ಸತ್ಯವೇದದಲ್ಲಿ ಹುಳಿಹಿಟ್ಟು ಸಾಮಾನ್ಯವಾಗಿ ಕೆಟ್ಟತನ ಅಥವಾ ಅಶುದ್ಧತೆ(ಹೊಲಸು)ಗೆ ಒಂದು ರೂಪಾಲಂಕಾರವಾಗಿದೆ (ನೋಡಿ ಮಾರ್ಕ 8:15 ರ ಟಿಪ್ಪಣಿ). ಆದರೆ ಇಲ್ಲಿ ಯೇಸು ಇದನ್ನು ಬೆಳವಣಿಗೆಗೆ ಒಂದು ಸಂಕೇತವಾಗಿ ಮತ್ತು ಸಕಾರಾತ್ಮಕವಾದ ಪ್ರಭಾವವಾಗಿ ಉಪಯೋಗಿಸುತ್ತಾನೆ.

ವಚನ 35: ಕೀರ್ತನೆ 78:2 ರಿಂದ ಒಂದು ಹೇಳಿಕೆಯನ್ನು ಒಳಗೊಂಡಿದೆ. ಈಗ ಯೇಸು ಹೊರಪಡಿಸುವ (ಪ್ರಕಟಿಸುವ) "ಮರೆಯಾಗಿದ್ದವುಗಳನ್ನು" ಯೇಸು ಕ್ರಿಸ್ತನ ಮೂಲಕ ತನ್ನ ಜನರ ಬಿಡುಗಡೆಯಲ್ಲಿನ ದೇವರ ನೀತಿಯುತ ಕಾರ್ಯಗಳಾಗಿವೆ ಎಂಬುದಾಗಿ ಅರ್ಥೈಸಿಕೊಳ್ಳಬಹುದಾಗಿದೆ (ಆತನ ಭೋದನೆ, ಆತನ ಅದ್ಭುತಗಳು, ಆತನ ಮರಣ ಮತ್ತು ಪುನರುತ್ಥಾನ).

*ಬೆಂಕೀಕೊಂಡ* (ವ. 42): (ಅಪೋಕೆಲೈಪ್ಟಿಕ್) ಕಾಲಜ್ಞಾನದ ಸಾಹಿತ್ಯದಲ್ಲಿ ಬೆಂಕಿಯು ಹೆಚ್ಚಾಗಿ ಅಂತಿಮ ನ್ಯಾಯತೀರ್ಪಿನೊಂದಿಗಿನ ಸಂಬಂಧದಲ್ಲಿ ಪ್ರಸ್ತಾಪಿಸಲ್ಪಟ್ಟಿದೆ (ಹೋಲಿಸಿ ಪ್ರಕ. 19:20, 20:14)

ನೀತಿವಂತರು ಸೂರ್ಯನಂತೆ ಪ್ರಕಾಶಿಸುವರು (ವ. 43): ಇದು ದಾನಿಯೇಲ 12:3 ಕ್ಕೆ ಒಂದು ಪ್ರಸ್ತಾಪವಾಗಿದೆ.

**ಪ್ರಶ್ನೆಗಳು**

1. ಯೇಸುವು ಜನರ ಗುಂಪಿಗೆ ಬಿತ್ತುವವನ ಸಾಮ್ಯವನ್ನು ಹೇಳಿ ಮುಗಿಸಿದ ನಂತರ (ಮತ್ತಾ. 13:3-9), ಶಿಷ್ಯರು ಆತನಿಗೊಂದು ಪ್ರಶ್ನೆಯನ್ನು ಕೇಳುತ್ತಾರೆ. ಆ ಪ್ರಶ್ನೆ ಏನಾಗಿತ್ತು (ವ. 10)?
2. ಶಿಷ್ಯರಿಗೆ ತಾನು ಕೊಟ್ಟ ಉತ್ತರದಲ್ಲಿ ಯೇಸು ಎರಡು ವರ್ಗದ ಜನರ ಬಗ್ಗೆ ತಿಳಿಸುತ್ತಾನೆ. ಅವರು ಯಾರಾಗಿದ್ದರು (ವ. 11)?
3. ವಚನ 13-14 ರಲ್ಲಿ ಸಾಮ್ಯರೂಪದಲ್ಲಿ ಮಾತನಾಡುವುದಕ್ಕೆ ಯೇಸು ಯಾವ ಕಾರಣವನ್ನು ಕೊಡುತ್ತಾನೆ (ಪೀಠಿಕೆಯಲ್ಲಿ ಸಹ ನೋಡಿ)?

4. ವಚನ 34 ರಿಂದ ಯೇಸುವಿನ ಸೇವೆಯಲ್ಲಿನ ಈ ಒಂದು ವಿಷಯದಲ್ಲಿ ಯೇಸುವಿನ ಬೋಧನಾ ರೀತಿಯ ಬಗ್ಗೆ ನಾವೇನನ್ನು ಕಲಿಯುತ್ತೇವೆ?
5. ವಚನ 36 ರಲ್ಲಿ ಯಾವ ರೀತಿಯ ದೃಶ್ಯ ಬದಲಾವಣೆಯನ್ನು ನಾವು ಕಾಣುತ್ತೇವೆ? ಆ ದೃಶ್ಯ ಬದಲಾವಣೆಯ ಅರ್ಥವೇನು?
6. ವಚನ 51 ರಲ್ಲಿ ಶಿಷ್ಯರಿಗೆ ಯೇಸು ಕೇಳುವ ಪ್ರಶ್ನೆಯೇನಾಗಿದೆ? ಮತ್ತು ಅವರ ಉತ್ತರವೇನಾಗಿತ್ತು?
7. ಹಣಜಿಯ ಸಾಮ್ಯವನ್ನು (ವ. 24-30), ಅದರ ಕುರಿತ ಯೇಸುವಿನ ವಿವರಣೆಯೊಂದಿಗೆ (ವ. 37-43) ಹೋಲಿಸಿರಿ, ಮತ್ತು ಅಂಶಗಳ ಅರ್ಥವನ್ನು ಪಟ್ಟಿಮಾಡಿರಿ.
8. ಯೇಸುವಿನ ಹಣಜಿ ಕುರಿತ ಸಾಮ್ಯದ ವಿವರಣೆಯಲ್ಲಿ ಮನುಷ್ಯಕುಮಾರನು ವಹಿಸುವ ಪಾತ್ರವೇನು (ವ. 37-43)?
9. ಹಣಜಿಯ ಸಾಮ್ಯದ ಕುರಿತ ತನ್ನ ವಿವರಣೆಯಲ್ಲಿ ಯೇಸು "ಕಂಟಕರ/ದುಷ್ಟರ" ಮತ್ತು "ನೀತಿವಂತರ" ಅಂತ್ಯವನ್ನು ಹೇಗೆ ವರ್ಣಿಸುತ್ತಾನೆ (ವ. 37-43)?
10. ಹುಳಿಹಿಟ್ಟಿನ ಸಾಮ್ಯದಲ್ಲಿ "ಹುಳಿಹಿಟ್ಟು" ಏನನ್ನು ಸೂಚಿಸುತ್ತದೆ (ವ. 33 ಟಿಪ್ಪಣಿಯೊಂದಿಗೆ)?
11. ಹೂಳಿಟ್ಟ ದ್ರವ್ಯದ ಸಾಮ್ಯದಲ್ಲಿ ಈ ದ್ರವ್ಯವನ್ನು ಪಡಕೊಳ್ಳುವುದಕ್ಕಾಗಿ ಏನು ಮಾಡುತ್ತಾನೆ (ವ. 44)?
12. ಮುತ್ತುಗಳ ಸಾಮ್ಯದಲ್ಲಿ ಆ ಮುತ್ತನ್ನು ಪಡಕೊಳ್ಳುವುದಕ್ಕಾಗಿ ಆ ಮನುಷ್ಯನು ಏನನ್ನು ಮಾಡುತ್ತಾನೆ (ವ 45-46)?
13. ಒಂದು ಬಲೆಯ ಸಾಮ್ಯದಲ್ಲಿ ಮೀನು ಹೇಗೆ ವರ್ಣಿಸಲ್ಪಟ್ಟಿದೆ (ವ. 47-48)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. "ಯಾಕೆ ಯೇಸು ಸಾಮ್ಯಗಳನ್ನು ಉಪಯೋಗಿಸಿದನು"? ಎಂಬ ಪ್ರಶ್ನೆಯನ್ನು ನೀವು ಹೇಗೆ ಉತ್ತರಿಸುವಿರಿ?
2. ವಚನ 51-52 ರಲ್ಲಿ ಯೇಸು ಹೇಳುವ ಅಂಶವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?
3. ಹಣಜಿಯ ಸಾಮ್ಯದ ಸಂದೇಶವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 24:30, 37-43)?
4. ಹುಳಿಹಿಟ್ಟಿನ ಸಾಮ್ಯದ ಸಂದೇಶವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 33)?
5. ಹೂಳಿಟ್ಟ ದ್ರವ್ಯದ ಸಾಮ್ಯದ ಸಂದೇಶವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 44)?
6. ಬೆಲೆಯುಳ್ಳ ಮುತ್ತಿನ ಸಾಮ್ಯದ ಸಂದೇಶವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 45-46)?
7. ಬಲೆಯ ಸಾಮ್ಯದಲ್ಲಿ ಉಲ್ಲೇಖಿಸಿದ ಅಂಶಗಳ ಅರ್ಥವನ್ನು (ವ. 47-48) ಮತ್ತು ಆ ಸಾಮ್ಯವನ್ನು ಕುರಿತ ಯೇಸುವಿನ ಅರ್ಥವಿವರಣೆಯನ್ನು (ವ. 49-50) ಪಟ್ಟಿಮಾಡಿರಿ. ಈ ಸಾಮ್ಯದ ಸಂದೇಶವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ.

## 8. ಐದು ಸ್ವಸ್ಥತಾ ಅದ್ಭುತಗಳು, ಮತ್ತಾಯ 9:27-34, ಲೂಕ 13:10-17, 14:1-6, 17:11-19

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ಅಧ್ಯಯನವು ಮತ್ತಾಯ ಮತ್ತು ಲೂಕನ ಸುವಾರ್ತೆಗಳಲ್ಲಿ ಕಂಡುಬರುವ ಐದು ಸ್ವಸ್ಥತೆಯ ಅದ್ಭುತಗಳನ್ನು ಒಳಗೊಂಡಿದೆ:

1. ಯೇಸು ಇಬ್ಬರು ಕುರುಡರನ್ನು ಗುಣಪಡಿಸಿದ್ದು, ಮತ್ತಾ. 9:27-31
2. ಯೇಸು ದೆವ್ವಹಿಡಿದ ಒಬ್ಬ ಮೂಕನನ್ನು ಗುಣಪಡಿಸಿದ್ದು, ಮತ್ತಾ. 9:32-34
3. ಯೇಸು ಒಬ್ಬ ನಡುಬೊಗ್ಗಿಹೋಗಿದ್ದ ಸ್ತ್ರೀಯನ್ನು ಗುಣಪಡಿಸಿದ್ದು, ಲೂಕ 13:10-17
4. ಯೇಸು ಜಲೋದರವುಳ್ಳ ಒಬ್ಬ ಮನುಷ್ಯನನ್ನು ಗುಣಪಡಿಸಿದ್ದು, ಲೂಕ 14:1-16
5. ಯೇಸು ಹತ್ತು ಮಂದಿ ಕುಷ್ಠರೋಗಿಗಳನ್ನು ಗುಣಪಡಿಸಿದ್ದು, ಲೂಕ 17:11-19

*ಅಲ್ಲಿಂದ* (ಮತ್ತಾ. 9:27): ಮತ್ತಾಯ ಹೇಳುವ ಹಿಂದಿನ ಘಟನೆಯು (ಸತ್ತ ಹುಡುಗಿಯನ್ನು ಎಬ್ಬಿಸಿದ್ದು ಮತ್ತು ರಕ್ತ ಕುಸುಮರೋಗವಿದ್ದ ಸ್ತ್ರೀಯನ್ನು ಗುಣಪಡಿಸಿದ್ದು) ಗಲಿಲಾಯದ ಕಪೆರ್ನೌಮಿನಲ್ಲಿ ನಡೆದಿರುತ್ತದೆ.

*ದಾವೀದನ ಕುಮಾರನೇ* (ಮತ್ತಾ. 9:27): ಇದು ದಾವೀದನೊಂದಿಗಿನ ದೇವರ ಒಡಂಬಡಿಕೆಯನ್ನು ನೆರವೇರಿಸುವ ಅರಸನಾದ, ಬರಲಿರುವ ಮೆಸ್ಸೀಯನಿಗಾಗಿ ಬಳಸುವ ಒಂದು ಜನಪ್ರಿಯ ಯೆಹೂದಿ ಹೆಸರಾಗಿದೆ (ನೋಡಿ 2.ಸಮುವೇಲ 7:5-16). ಮತ್ತಾಯನ ಸುವಾರ್ತೆಯಲ್ಲಿ ಇದೇ ಮೊದಲ ಬಾರಿಗೆ ಜನರು ಯೇಸುವನ್ನು "ದಾವೀದನ ಕುಮಾರನೇ" ಎಂದು ಕರೆಯುತ್ತಾರೆ. ಹಾಗಾಗಿ ಇಬ್ಬರು ಕುರುಡರು ಯೇಸುವನ್ನು ಮೆಸ್ಸೀಯನೆಂಬುದಾಗಿ ಅರಿಕೆ ಮಾಡುವುದು ಪ್ರಾಮುಖ್ಯವಾದುದ್ದಾಗಿದೆ.

*ನೀವು ನಂಬಿದಂತೆ* (ಮತ್ತಾ. 9:29): ಇದರರ್ಥ "ನಿನ್ನಲ್ಲಿ ನಂಬಿಕೆಯಿದೆ" ಎಂದರ್ಥ. ಹೀಗೆ ಯೇಸು ಕುರುಡರನ್ನು ಅವರ ನಂಬಿಕೆಯ ಹಿರಿಮೆಗನುಸಾರವಾಗಿ ಗುಣಪಡಿಸಲಿಲ್ಲ ಆದರೆ ಆತನು ತಮ್ಮನ್ನು ಗುಣಪಡಿಸಬಲ್ಲನೆಂಬುದಾಗಿ ಅವರು ಆತನಲ್ಲಿ ನಂಬಿಕೆಯಿಟ್ಟ ನಿಮಿತ್ತ ಗುಣವಾದರು.

*ಬಿಡುಗಡೆಯಾಯಿತು* (ಲೂಕ 13:12): ಸ್ತ್ರೀಯು ದೆವ್ವದಿಂದ ಮತ್ತು ಶಾರೀರಿಕ ಅಂಗವಿಕಲತೆಯಿಂದ ಬಿಡುಗಡೆಯನ್ನು ಹೊಂದಿದಳು.

*ಸಬ್ಬತ್ ದಿನದಲ್ಲಿ ಸ್ವಸ್ಥಮಾಡಿದನಲ್ಲಾ* (ಲೂಕ 13:14): ಸಬ್ಬತ್ ದಿನದಲ್ಲಿ ಯೇಸು ಮಾಡಿದ ಕಾರ್ಯಗಳ ಮೇಲಿನ ವಿವಾದವೇ ಸುವಾರ್ತೆಗಳಲ್ಲಿನ ಬಹುಮುಖ್ಯ ವಿಷಯವಸ್ತುವಾಗಿದೆ. ಯೇಸುವು ಸಬ್ಬತ್ತನ್ನು ಪಾಲಿಸುವುದಿಲ್ಲವೆಂಬುದಾಗಿ ಯೆಹೂದಿ ನಾಯಕರು ದೂರುತ್ತಾರೆ.

*"ಕೆಲಸ ಮಾಡುವುದಕ್ಕೆ ಆರು ದಿವಸಗಳು" ಅವೆಯಷ್ಟೆ* (ಲೂಕ 13:14): ಸಭಾಮಂದಿರದ ನಾಯಕನು ಹಳೇ ಒಡಂಬಡಿಕೆಯ ಸಬ್ಬತ್ ಶಾಸ್ತ್ರವನ್ನು ಹೇಳುತ್ತಾನೆ (ವಿಮೋ. 20:9-10).

*ಕಪಟಿಗಳು* (ಲೂಕ 13:15): ಗ್ರೀಕ್ ಪದದ ಅರ್ಥ "ನಟನೆಪ್ರಿಯ" ಎಂದಾಗಿದೆ. ಯೇಸು ತಮ್ಮನ್ನು ಭಕ್ತಿವಂತರೆಂಬುದಾಗಿ ತೋರ್ಪಡಿಸಿಕೊಂಡವರಿಗಾಗಿ ಈ ಪದ ಬಳಸುತ್ತಾನೆ. ಈ ಒಂದು ವಿಷಯದಲ್ಲಿ ಯೆಹೂದಿ ನಾಯಕರುಗಳು ನಡುಬೊಗ್ಗಿ ಹೋದ ಸ್ತ್ರೀಯ ಅಗತ್ಯತೆಗಿಂತ ಹೆಚ್ಚಾಗಿ ಒಂದು ಪ್ರಾಣಿಯ ಅಗತ್ಯತೆಗೆ ಹೆಚ್ಚಿನ ಕಾಳಜಿಯುಳ್ಳವರಾಗಿದ್ದರು. ಅವರು ಧರ್ಮಶಾಸ್ತ್ರಕ್ಕಾಗಿ ಶ್ರದ್ಧೆಯುಳ್ಳವರೆಂಬುದಾಗಿ ನಟಿಸುತ್ತಿದ್ದರು, ಆದರೆ ಅವರ ಉದ್ದೇಶವು ಯೇಸುವಿನ ಮೇಲೆ ಆಕ್ರಮಣ ಮಾಡುವುದಕ್ಕಾಗಿತ್ತು.

*ಅಬ್ರಹಾಮನ ವಂಶದವಳೂ* (ಲೂಕ 13:16): ಇದು ಆ ಸ್ತ್ರೀಯು ಯೆಹೂದಿಯಾಗಿದ್ದಾಳೆಂಬುದಾಗಿ ಅರ್ಥಕೊಡುತ್ತದೆ.

*ಸಬ್ಬತ್ ದಿನದಲ್ಲಿ ಊಟಕ್ಕೆ ಹೋದಾಗ* (ಲೂಕ 14:1): ಸಬ್ಬತ್ ದಿನದಲ್ಲಿ ಊಟವನ್ನು ತಯಾರಿಸಲು ಅನುಮತಿ ಇರಲಿಲ್ಲ, ಹಾಗಾಗಿ ಅದರ ಮುಂಚಿನ ದಿನವೇ ಫರಿಸಾಯನ ಮನೆಯಲ್ಲಿ ಸಿದ್ಧಪಡಿಸಿಡಲಾಗಿತ್ತು.

*ಜಲೋದರವುಳ್ಳ* (ಲೂಕ 14:2): ಈ ಮನುಷ್ಯನ ದೇಹದಲ್ಲಿ ವಿಪರೀತವಾಗಿ ನೀರು ತುಂಬಿಕೊಂಡಿತ್ತು. ವೈದ್ಯಕೀಯ ರೂಪದ ಗ್ರೀಕ್ ಪದವನ್ನು ಹೊಸ ಒಡಂಬಡಿಕೆಯಲ್ಲಿ ಇಲ್ಲಿ ಮಾತ್ರ ಉಪಯೋಗಿಸಲಾಗಿದೆ. ಲೂಕನ ಸುವಾರ್ತೆಯನ್ನು ಬರೆದ ಲೂಕನು ಒಬ್ಬ ವೈದ್ಯನಾಗಿದ್ದನು.

*"ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವುದು ಸರಿಯೋ? ಸರಿಯಲ್ಲವೋ?"* (ಲೂಕ 14:13): ಮೋಶೆಯ ಧರ್ಮಶಾಸ್ತ್ರವು ಇದನ್ನು ನಿಷೇದಿಸಿಲ್ಲ ಆದರೆ ಯೆಹೂದಿ ಶಾಸ್ತ್ರಿಗಳು ಮತ್ತು ವಕೀಲರು ಅದನ್ನು "ಕಾನೂನು ಬಾಹಿರ" ಎಂಬುವ ರೀತಿಯಲ್ಲಿ ಧರ್ಮಶಾಸ್ತ್ರವನ್ನು ವ್ಯಾಖ್ಯಾನಿಸಿದ್ದಾರೆ ಹಾಗಾಗಿ ಯೇಸುವಿನ ಪ್ರಶ್ನೆಯು ಫರಿಸಾಯರು ಮತ್ತು ವಕೀಲರಿಗೆ ಉತ್ತರಿಸಲು ಕಷ್ಟಕರವಾಗಿತ್ತು. ಅವರು ಸುಮ್ಮನಿರುವುದನ್ನು ಆರಿಸಿಕೊಂಡರು (ವ. 4).

*ಮಗನಾಗಲಿ/ಎತ್ತಾಗಲಿ* (ಲೂಕ 14): ಕೆಲವು ಗ್ರೀಕ್ ಹಸ್ತಪ್ರತಿಗಳಲ್ಲಿ "ಮಗ" ಎಂದಿದ್ದರೆ ಬೇರೆಯವುಗಳಲ್ಲಿ "ಕತ್ತೆ" ಎಂದಿದೆ. ಕನ್ನಡ ಭಾಷಾಂತರವನ್ನು ಹೋಲಿಸಿ: ಪವಿತ್ರ ಗ್ರಂಥದಲ್ಲಿ "ಕತ್ತೆ" ಎಂದಿದ್ದರೆ, ಸತ್ಯವೇದದಲ್ಲಿ "ಮಗ" ಎಂದಿದೆ. ಸಬ್ಬತ್ ದಿನದಲ್ಲಿ ಯೇಸು ಮತ್ತು ಫರಿಸಾಯರ ನಡುವೆ ನಡೆದ ಇದೇ ರೀತಿಯ ಚರ್ಚೆ ಮತ್ತಾಯನ ಸುವಾರ್ತೆಯಲ್ಲಿದೆ, ಅಲ್ಲಿ "ಕುರಿ"ಯ ವಿಷಯದೊಂದಿಗೂ ಸಹ ಇದೇ ರೀತಿಯ ವಾದವನ್ನು ಉಪಯೋಗಿಸುತ್ತಾನೆ (ವ. 12:11).

*ಕುಷ್ಠರೋಗ* (ಲೂಕ 17:12): ಸತ್ಯವೇದದ ಕಾಲಗಳಲ್ಲಿ "ಕುಷ್ಠ" ಎಂಬ ಪದವನ್ನು ಎಲ್ಲಾ ರೀತಿಯ ಚರ್ಮರೋಗಗಳ ಕುರಿತಾಗಿ ಉಪಯೋಗಿಸಲಾಗುತ್ತಿತ್ತು.

*ದೂರದಲ್ಲಿ ನಿಂತು* (ವ. 17:12): ಚರ್ಮರೋಗಗಳು ಅಂಟುರೋಗಗಳಾಗಿರುವದರಿಂದ ಕುಷ್ಠರೋಗದಿಂದ ಬಳಲುತ್ತಿರುವವರನ್ನು ಇತರ ಜನರಿಂದ ದೂರವಿಡಲಾಗುತ್ತಿತ್ತು. ಅವರು ಆ ದಿನದಲ್ಲಿ ಅಕ್ಷರಶಃ "ಅಸ್ಪೃಶ್ಯರಾಗಿದ್ದರು".

*ಯಾಜಕರಿಗೆ ಮೈತೋರಿಸಿಕೊಳ್ಳಿ* (ಲೂಕ 17:14): ಚರ್ಮರೋಗದಿಂದ ಬಳಲುತ್ತಿದ್ದ ಒಬ್ಬ ವ್ಯಕ್ತಿಯು ಗುಣವಾಗಿದ್ದಾನೋ ಅಥವಾ ಇಲ್ಲವೋ ಎಂಬುದನ್ನು ಯಾಜಕರು ನಿರ್ಧರಿಸುತ್ತಿದ್ದರೆಂದು ಮೋಶೆಯ ಧರ್ಮಶಾಸ್ತ್ರವು ಹೇಳುತ್ತದೆ (ನೋಡಿ ಯಾಜಕ. 13:2-3, 14:2-32).

*ಸಮಾರ್ಯದವನು* (ಲೂಕ 17:16): ಯೆಹೂದ್ಯರು ಬಾಬೆಲಿನ ಸೆರೆಯಿಂದ ಹಿಂತಿರುಗಿ ಬಂದ ನೂರಾರು ವರ್ಷಗಳ ಹಿಂದೆಯೇ ಯೆಹೂದ್ಯರು ಮತ್ತು ಸಮಾರ್ಯದ ಜನರ ನಡುವೆ ಒಂದು ರೀತಿಯ ಜಗಳ ಮತ್ತು ವೈರತ್ವವಿತ್ತು. ಸಮಾರ್ಯದವರ ಮಿಶ್ರಪರಂಪರೆ ಮತ್ತು ಅವರ ಯೆಹೂದ್ಯೇತರ ಧಾರ್ಮಿಕ ಆಚರಣೆಗಳ ನಿಮಿತ್ತ ಯೆಹೂದ್ಯರು ಅವರನ್ನು ಕೀಳಾಗಿ ನೋಡುತ್ತಿದ್ದರು. ಹೊಸ ಒಡಂಬಡಿಕೆಯ ದಿನಗಳಲ್ಲಿ ಯೆಹೂದ್ಯರು ಮತ್ತು ಸಮಾರ್ಯದವರು ಪರಸ್ಪರ ಬೆರೆಯುತ್ತಿರಲಿಲ್ಲ.

*ಸ್ವಸ್ಥ ಮಾಡಿಯದೆ* (ಲೂಕ 17:19): ಗ್ರೀಕ್ ಕ್ರಿಯಾಪದದ ಅರ್ಥ "ರಕ್ಷಿಸುವುದು ಮತ್ತು ಸ್ವಸ್ಥಮಾಡುವುದು" ಎಂದಾಗಿದೆ.

**ಪ್ರಶ್ನೆಗಳು**

1. ಯೇಸುವಿನ ಹಿಂದೆ ಹೋಗುತ್ತಿದ್ದ ಕುರುಡರು ಏನೆಂದು ಕೂಗಿಕೊಂಡರು (ಮತ್ತಾ. 9:27)?
2. ಕುರುಡರಿಗೆ ಯೇಸು ಯಾವ ಪ್ರಶ್ನೆ ಕೇಳುತ್ತಾನೆ (ಮತ್ತಾ. 9:28)?
3. ಇಬ್ಬರು ಕುರುಡರು ಯೇಸುವಿನ ಸಲಹೆಗೆ ವಿಧೇಯರಾಗುತ್ತಾರಾ (ಮತ್ತಾ. 9:30-31)?
4. ದೆವ್ವಹಿಡಿದಿದ್ದ ಮೂಕನು ಯೇಸುವಿನ ಬಳಿಗೆ ಹೇಗೆ ಬರುತ್ತಾನೆ (ಮತ್ತಾ. 9:32)?

5. ದೆವ್ವಹಿಡಿದಿದ್ದ ಮೂಕನ ಸ್ವಸ್ಥತೆಗೆ ಜನರು ಹೇಗೆ ಪ್ರತಿಕ್ರಯಿಸಿದರು (ಮತ್ತಾ. 9:33)?
6. ದೆವ್ವಹಿಡಿದಿದ್ದ ಮೂಕನ ಸ್ವಸ್ಥತೆಗೆ ಫರಿಸಾಯರು ಹೇಗೆ ಪ್ರತಿಕ್ರಯಿಸುತ್ತಾರೆ (ಮತ್ತಾ. 9:33)?
7. ಸಬ್ಬತ್ ದಿನದಲ್ಲಿ ಸಭಾಮಂದಿರದಲ್ಲಿ ಯೇಸು ಏನು ಮಾಡುತ್ತಿದ್ದನು (ಲೂಕ 13:10)?
8. ಸಭಾಮಂದಿರದಲ್ಲಿನ ಸ್ತ್ರೀಯ ಬಗ್ಗೆ ಲೂಕನು ತನ್ನ ಓದುಗರಿಗೆ ಏನೆಂದು ಮಾಹಿತಿಕೊಡುತ್ತಾನೆ (ಲೂಕ 13:11)?
9. ಯೇಸು ನಡುಬೊಗ್ಗಿ ಹೋಗಿದ್ದ ಸ್ತ್ರೀಯನ್ನು ಹೇಗೆ ಗುಣಪಡಿಸುತ್ತಾನೆ (ಲೂಕ 13:12-13)?
10. ಯಾಕೆ ಸಭಾಮಂದಿರದ ಅಧಿಕಾರಿಯು ಯೇಸುವಿನ ಮೇಲೆ ರೋಷಗೊಳ್ಳುತ್ತಾನೆ (ಲೂಕ 13:14)?
11. ಯಾಕೆ ಯೇಸು ಯೆಹೂದಿ ನಾಯಕರನ್ನು "ಕಪಟಿಗಳು" ಎಂದು ಕರೆಯುತ್ತಾನೆ (ಲೂಕ 13:15-16)?
12. ನಡುಬೊಗ್ಗಿ ಹೋಗಿದ್ದ ಸ್ತ್ರೀಯ ಸ್ವಸ್ಥತೆಯ ಕುರಿತಾದ ವಾದದ ಪರಿಣಾಮವೇನಾಗಿತ್ತು (ಲೂಕ 13:17)?
13. ಜಲೋದರವುಳ್ಳ ವ್ಯಕ್ತಿಯ ಸ್ವಸ್ಥತೆಯು ಯಾವಾಗ ಮತ್ತು ಎಲ್ಲಿ ಸಂಭವಿಸುತ್ತದೆ (ಲೂಕ 14:1-2)?
14. ಜಲೋದರವುಳ್ಳ ವ್ಯಕ್ತಿಯ ಸ್ವಸ್ಥತೆಯ ಕಥೆಯಲ್ಲಿನ ಘಟನೆಗಳ ಕ್ರಮವನ್ನು ಪಟ್ಟಿಮಾಡಿರಿ (ಲೂಕ 14:1-6)?
15. ಯೇಸು ಹತ್ತು ಮಂದಿ ಕುಷ್ಠರೋಗಿಗಳನ್ನು ಗುಣಪಡಿಸಿದ್ದರ ಕುರಿತ ಕಥೆಯು ಎಲ್ಲಿ ನಡೆಯುತ್ತದೆ (ಲೂಕ 17:11-12)?
16. ಯಾಕೆ ಯೇಸು ಕುಷ್ಠರೋಗಿಗಳಿಗೆ ಹೋಗಿ ಯಾಜಕರಿಗೆ ನಿಮ್ಮ ಮೈಯನ್ನು ತೋರಿಸಿಕೊಳ್ಳಿರಿ ಎಂದು ಹೇಳಿದನು (ಲೂಕ 17:14)?
17. ತಾನು ಗುಣಮುಖನಾದ ನಂತರ ಯೇಸುವಿನ ಬಳಿಗೆ ತಿರುಗಿ ಬಂದ ವ್ಯಕ್ತಿಯ ಬಗ್ಗೆ ಲೂಕನು ತನ್ನ ಓದುಗರಿಗೆ ಏನೆಂದು ಹೇಳುತ್ತಾನೆ (ಲೂಕ 17:15-16)?
18. ಆ ಮನುಷ್ಯನನ್ನು ಯೇಸು ಹೇಗೆ ವರ್ಣಿಸುತ್ತಾನೆ (ಲೂಕ 17:18)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಇಬ್ಬರು ಕುರುಡರ ಸ್ವಸ್ಥತೆಯ ಕುರಿತಾದ ಕಥೆಯನ್ನು ಪುನಃ ಹೇಳಿರಿ (ಮತ್ತಾ. 9:27-31). ನಿಮ್ಮದೇ ಪದ ಬಳಸಿರಿ, ಸತ್ಯವೇದದಲ್ಲಿ ನೋಡಬೇಡಿರಿ. ನಾಟಕೀಯ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.
2. ದೆವ್ವಹಿಡಿದ ಮೂಕ ವ್ಯಕ್ತಿಯ ಸ್ವಸ್ಥತೆಯ ಕುರಿತ ಕಥೆಯನ್ನು (ಮತ್ತಾ. 9:32-34) ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದದಲ್ಲಿ ನೋಡಬೇಡಿರಿ. ನಾಟಕೀಯ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.
3. ನಡುಬೊಗ್ಗಿಹೋಗಿದ್ದ ಸ್ತ್ರೀಯ ಸ್ವಸ್ಥತೆಯ ಕುರಿತ ಕಥೆಯನ್ನು (ಲೂಕ 13:10-17) ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದಲ್ಲಿ ನೋಡಬೇಡಿ. ನಾಟಕೀಯ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವರೆಂಬುದಾಗಿ ಕಲ್ಪಿಸಿಕೊಳ್ಳಿರಿ.
4. ಜಲೋದರರೋಗದಿಂದ ಬಳಲುತ್ತಿದ್ದವನ ಸ್ವಸ್ಥತೆಯ ಕುರಿತ ಕಥೆಯನ್ನು (ಲೂಕ 14:1-6) ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದಲ್ಲಿ ನೋಡಬೇಡಿ. ನಾಟಕೀಯ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವರೆಂಬುದಾಗಿ ಕಲ್ಪಿಸಿಕೊಳ್ಳಿರಿ.
5. ಕುಷ್ಠರೋಗದಿಂದ ಬಳಲುತ್ತಿದ್ದ ಹತ್ತು ಜನರ ಸ್ವಸ್ಥತೆಯ ಕುರಿತಾದ ಕಥೆಯನ್ನು (ಲೂಕ 17:11-19) ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದಲ್ಲಿ ನೋಡಬೇಡಿ. ನಾಟಕೀಯ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.

6. ಸ್ವಸ್ಥತೆಯ ಕುರಿತಾದ ಈ ಐದು ಕಥೆಗಳಲ್ಲಿ ನಂಬಿಕೆಯು ಯಾವ ಪಾತ್ರವನ್ನು ವಹಿಸುತ್ತದೆ? ನಮ್ಮ ಸ್ವಂತ ಜೀವಿತ ಮತ್ತು ಸೇವೆಗಾಗಿ ನಂಬಿಕೆಯ ಬಗ್ಗೆ ಅವರಿಂದ ನಾವೇನನ್ನು ಕಲಿಯಬಹುದು?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯನದಲ್ಲಿ ಕಂಡುಬರುವ ಐದು ಸ್ವಸ್ಥತಾ ಅದ್ಭುತಗಳು ಮತ್ತು ಮಾಹಿತಿಯನ್ನು ವಿಮರ್ಶಿಸಿರಿ. ಅನಂತರ ***ಆಲೋಚಿಸಿರಿ ಮತ್ತು ಚರ್ಚಿಸಿರಿ*** 6 ರ ಟಿಪ್ಪಣಿಗಳನ್ನು ಉಪಯೋಗಿಸಿರಿ. ***ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿ ಅದೆ!*** ಎಂಬ ಧ್ಯಾನವೊಂದನ್ನು (ಸತ್ಯವೇದ ಅಧ್ಯಯನ ಅಥವಾ ಸಂದೇಶ) ಸಿದ್ಧಪಡಿಸಿರಿ.



## 9. ದೇವಾಲಯದ ತೆರಿಗೆಯನ್ನು ಕಟ್ಟುವದು, ಮತ್ತಾಯ 17:24-27

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ಕಥೆಯನ್ನು ಮತ್ತಾಯನ ಸುವಾರ್ತೆಯಲ್ಲಿ ಮಾತ್ರ ಕಾಣಬಹುದಾಗಿದ್ದು, ಇದು ಅರ್ಥೈಸಿಕೊಳ್ಳಲು ಅಷ್ಟು ಸುಲಭವಾಗಿಲ್ಲ. ಮುಖ್ಯವಾಗಿ ಇದು ಸ್ವಾತಂತ್ರ್ಯ ಮತ್ತು ಅಪರಾಧಕ್ಕಾಗಿ ಸ್ವಾತಂತ್ರ್ಯವನ್ನು ಉಪಯೋಗಿಸದೇ ಇರುವುದರ ಕುರಿತಾಗಿದೆ. ಆದರೆ ಯೇಸು ಯಾರಿಗೆ ಸ್ವಾತಂತ್ರ್ಯವನ್ನು ಸೂಚಿಸುತ್ತಿದ್ದಾನೆ? ಮತ್ತು ಯಾವುದರಿಂದ ಸ್ವಾತಂತ್ರ್ಯ?

*ದೇವಾಲಯದ ತೆರಿಗೆ* (ವ. 24, 27): ಇದು ವಯಸ್ಕ ಯೆಹೂದಿ ಪುರುಷರು ಕಟ್ಟಬೇಕಾಗಿದ್ದ ವಾರ್ಷಿಕ ದೇವಾಲಯದ ತೆರಿಗೆಯಾಗಿತ್ತು. ಇದು ಒಂದು ರೂಪಾಯಿ ಮೌಲ್ಯದ್ದಾಗಿದ್ದು (ಒಬ್ಬ ಕೆಲಸಗಾರನ ಎರಡು ದಿನಗಳ ಕೂಲಿಯಷ್ಟು) ಇದನ್ನು ದೇವಾಲಯದ ದುರಸ್ಥಿಗಾಗಿ ಉಪಯೋಗಿಸಲಾಗುತ್ತಿತ್ತು (ಹೋಲಿಸಿ ವಿಮೋಚನಕಾಂಡ 30:11-16). ಗ್ರೀಕ್ ನಾಣ್ಯವು ಒಂದು ರೋಮನ್ ದಿನಾರಿಗೆ ಸಮನಾಗಿತ್ತು. ಯೆಹೂದಿ ಸಮುದಾಯದೊಂದಿಗೆ ಸೌಹಾರ್ದ(ಐಕ್ಯಮತ್ಯ)ದಿಂದ ಇರುವುಕ್ಕಾಗಿ ದೇವಾಲಯದ ತೆರಿಗೆಯನ್ನು ಕಟ್ಟುವುದು ಅತೀ ಪ್ರಾಮುಖ್ಯವಾಗಿತ್ತು.

### ಪ್ರಶ್ನೆಗಳು

1. ದೇವಾಲಯಕ್ಕಾಗಿ ತೆರಿಗೆಯನ್ನು ಎತ್ತುವವರು ಪೇತ್ರನ ಬಳಿ ಏನೆಂದು ಕೇಳುತ್ತಾರೆ ಮತ್ತು ಅವರಿಗೆ ಪೇತ್ರನು ಹೇಗೆ ಉತ್ತರಿಸುತ್ತಾನೆ (ವ. 24-25)?
2. ವಚನ 25-26 ರಲ್ಲಿ "ಅರಸರ ಮಕ್ಕಳು" ಮತ್ತು "ಬೇರೆಯವರು" ನಡುವೆ ನಾವು ಯಾವ ವ್ಯತ್ಯಾಸವನ್ನು ಕಾಣುತ್ತೇವೆ?
3. ಯಾಕೆ ಯೇಸು ಪೇತ್ರನಿಗೆ ಸಮುದ್ರಕ್ಕೆ ಹೋಗಿ ಗಾಳ ಹಾಕಿ ಬಾಯಲ್ಲಿ ನಾಣ್ಯವಿರುವ ಮೀನನ್ನು ಹಿಡಿ ಎಂಬುದಾಗಿ ಹೇಳುತ್ತಾನೆ (ವ. 27)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಸುಂಕ ಮತ್ತು ಮಂಡೇತೆರಿಗೆಯನ್ನು ಕಟ್ಟುವುದರ ಉಲ್ಲೇಖದಲ್ಲಿ ಯಾಕೆ "ಅರಸರ ಮಕ್ಕಳು" ಮತ್ತು "ಬೇರೆಯವರ" ನಡುವೆ ಒಂದು ವ್ಯತ್ಯಾಸವಿರಬೇಕು (ವ. 25-26)?
2. ವಚನ 27 ರಲ್ಲಿ ಬೇಸರದ ಬಗ್ಗೆ ಯೇಸುವಿನ ಪ್ರಸ್ತಾಪವನ್ನು ವಿವರಿಸಿರಿ.
3. ಈ ವಾಕ್ಯಭಾಗದ ಸಂದೇಶವೇನಿರಬಹುದೆಂಬುದಾಗಿ ನೀವು ಯೋಚಿಸುವಿರಿ?

## 10. ಕರುಣೆಯಿಲ್ಲದ (ನಿಷ್ಕರುಣೆ) ಸೇವಕ, ಮತ್ತಾಯ 18:21-35

### ಪೀಠಿಕೆ ಮತ್ತು ಟಿಪ್ಪಣಿಗಳು

ನಿಷ್ಕರುಣೆಯಾದ ಸೇವಕನ ಸಾಮ್ಯವು ಕ್ಷಮೆ, ದೇವರ ಮತ್ತು ಪರಲೋಕ ರಾಜ್ಯದ ಕುರಿತಾಗಿದ್ದಾಗಿದೆ.

*ಏಳು ಸಾರಿ ... ಏಳೆಪ್ಪತ್ತು ಸಾರಿ* (ವ. 21-22): ಒಬ್ಬ ವ್ಯಕ್ತಿಯನ್ನು ಮೂರು ಬಾರಿ ಕ್ಷಮಿಸಿದರೆ ಸಾಕೆಂಬುದಾಗಿ ಯೆಹೂದಿ ಬೋಧಕರು ಯೋಚಿಸಿದ್ದರು. ಹಾಗೆಯೇ ಪೇತ್ರನು ಉಧಾರ ಹೃದಯದ ಭಾವನೆಯಿಂದ ಏಳು ಬಾರಿ ಎಂಬುದಾಗಿ ಹೇಳಿರಬಹುದು. ಆದರೆ ಯೇಸು "ಏಳೆಪ್ಪತ್ತು ಸಾರಿ" ಎಂಬುದಾಗಿ ಆತನಿಗೆ ಹೇಳುತ್ತಾನೆ. ಯೇಸುವು ತನ್ನ ಮನಸ್ಸಿನಲ್ಲಿ ಕ್ಷಮಾಪಣೆಗೆ ಯಾವುದೇ ನಿರ್ಧಿಷ್ಟ ಸಂಖ್ಯೆಯನ್ನು ಹೊಂದಿರಲಿಲ್ಲವೆಂಬುದನ್ನು ಈ ಸಾಮ್ಯವು ತೋರಿಸುತ್ತದೆ: ದೇವರ ರಾಜ್ಯದಲ್ಲಿ ಕ್ಷಮಾಪಣೆಯು ಅನಿಯಮಿತವಾಗಿದೆ. ನಾವೆಂದಿಗೂ ಕ್ಷಮಿಸುವುದಕ್ಕಿಂತ ಹೆಚ್ಚಾಗಿ ನಾವು ಕ್ಷಮಿಸಲ್ಪಟ್ಟಿದ್ದೇವೆ.

*ಕೋಟ್ಯಂತರ ಸಾಲ* (ವ. 24): ಅನೇಕ ಕೋಟಿ ರೂಪಾಯಿಗಳಿಗೆ ಸಮ.

*ನೂರು ಹಣ* (ವ. 28): ಇದು ಮೂರು ತಿಂಗಳ ಕೂಲಿಗೆ ಸಮವಾದದ್ದು.

### ಪ್ರಶ್ನೆಗಳು

1. ಕರುಣೆಯಿಲ್ಲದ ಸೇವಕನ ಕುರಿತಾದ ಸಾಮ್ಯದ ಸಂದರ್ಭ ಯಾವುದಾಗಿದೆ (ವ. 21-23)?
2. ಕರುಣೆಯಿಲ್ಲದ ಸೇವಕನ ಸಾಮ್ಯವು ಯಾವುದರ ಕುರಿತಾಗಿದೆ (ವ. 23)?
3. ಮೊದಲ ಸೇವಕನನ್ನು ಯಜಮಾನನ ಮನೆಗೆ ಯಾಕೆ ಕರೆತರಲಾಯಿತು (ವ. 24)?
4. ಯಾಕೆ ಒಡೆಯನು ಮೊದಲ ಸೇವಕನನ್ನು ಮತ್ತು ಅವನ ಹೆಂಡತಿ ಮಕ್ಕಳನ್ನೂ ಮಾರಿಬಿಡಬೇಕೆಂದು ಅಪ್ಪಣೆ ಮಾಡಿದನು (ವ. 25)?
5. ಒಡೆಯನು ಮೊದಲ ಸೇವಕನ ಸಾಲವನ್ನು ಯಾಕೆ ಬಿಟ್ಟುಬಿಟ್ಟನು (. 27)?
6. ಇಬ್ಬರು ಸೇವಕರ ಸಾಲದ ನಡುವಿನ ವ್ಯತ್ಯಾಸವನ್ನು ವಿವರಿಸಿರಿ (ವ. 24 ಮತ್ತು 28 ಟಿಪ್ಪಣಿಯೊಂದಿಗೆ)?
7. ಮೊದಲ ಸೇವಕನ ಸ್ವಭಾವವನ್ನು ಒಡೆಯನು ಹೇಗೆ ತಿಳಿದುಕೊಳ್ಳುತ್ತಾನೆ (ವ. 31)?
8. ಯಾಕೆ ಒಡೆಯನು ಮೊದಲ ಸೇವಕನನ್ನು "ನೀಚನೇ" ಎಂಬುದಾಗಿ ಕರೆಯುತ್ತಾನೆ (ವ. 32-33)?
9. ಯೇಸು ಪೇತ್ರನಿಗೆ ಯಾವ ಎಚ್ಚರಿಕೆಯನ್ನು ಕೊಡುತ್ತಾನೆ (ವ. 35)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ನಿಷ್ಕರುಣೆಯಾದ ಸೇವಕನ ಸಾಮ್ಯವನ್ನು (ಮತ್ತಾ. 18:21-35) ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದದಲ್ಲಿ ನೋಡಬೇಡಿ. ನಾಟಕೀಯವಾಗಿ ಮತ್ತು ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಊಹಿಸಿಕೊಳ್ಳಿ.
2. ನಿಷ್ಕರುಣೆಯಾದ ಸೇವಕನ ಸಾಮ್ಯದ ಸಂದೇಶವನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

### ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ

ಈ ಅಧ್ಯಯನದಲ್ಲಿ ಕಂಡುಬಂದ ವಿಷಯ(ಮಾಹಿತಿ)ಗಳ ಬೆಳಕಿನಲ್ಲಿ ಕರುಣೆಯಿಲ್ಲದ ಸೇವಕನ ಸಾಮ್ಯವನ್ನು ವಿಮರ್ಶಿಸಿರಿ. ಅನಂತರ ***ಪರಲೋಕ ರಾಜ್ಯದಲ್ಲಿನ ಕ್ಷಮೆ*** ಎಂಬ ಧ್ಯಾನವೊಂದನ್ನು ಸಿದ್ಧಪಡಿಸಿರಿ.



*The unmerciful servant*



## 11. ಶಿಷ್ಯತ್ವದ ಲಕ್ಷಣ (ಸ್ವಭಾವ), ಲೂಕ 9:57-62

**ಪೀಠಿಕೆ ಮತ್ತು ಟಿಪ್ಪಣಿಗಳು**

ಈ ವಾಕ್ಯಭಾಗದಲ್ಲಿ ನಾವು ಯೇಸು ಗಲಿಲಾಯದಿಂದ ಸಮಾರ್ಯದ ಮೂಲಕ ಯೆರೂಸಲೇಮಿನ ಕಡೆಗೆ ಹೋಗುವ ದಾರಿಯಲ್ಲಿ ಆತನು ಮೂರು ಮಂದಿಯನ್ನು ಎದುರಿಸುವ ರೀತಿಯಿಂದ ಕ್ರೈಸ್ತೀಯ ಶಿಷ್ಯತ್ವದ ಬಗ್ಗೆ ಪ್ರಾಮುಖ್ಯವಾದ ಸತ್ಯಗಳನ್ನು ಕಲಿಯುತ್ತೇವೆ.

*ದಾರಿಯಲ್ಲಿ* (ವ. 57): ಯೇಸು ಮತ್ತು ಆತನ ಶಿಷ್ಯರು ಸಮಾರ್ಯದ ಮೂಲಕ ಯೆರೂಸಲೇಮಿಗೆ ಪ್ರಯಾಣಿಸುತ್ತಿದ್ದರು. ಯೇಸುವಿಗೆ ಈ ಮಾರ್ಗವು ಆತನ ಶಿಲುಬೆಗೇರಿಸುವಿಕೆಯೊಂದಿಗೆ ಮುಕ್ತಾಯವಾಯಿತು.

*ನೀವು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆ* (ವ. 57): ಆ ಮನುಷ್ಯನು ಯೇಸುವನ್ನು ನಾನೂ ಸಹ ನಿನ್ನ ಶಿಷ್ಯನಾಗಲು ಬಯಸುತ್ತೇನೆಂಬುದಾಗಿ ಹೇಳಿದನು.

*ತಂದೆಯ ಉತ್ತರ ಕ್ರಿಯೆಗಳನ್ನು ಮಾಡಿ ಬರುವಂತೆ* (ವ. 59): ಈ ಮನುಷ್ಯನು ಹೇಳುವುದರ ಅರ್ಥವೇನೆಂದರೆ ಯೇಸುವನ್ನು ಹಿಂಬಾಲಿಸಲು ತನ್ನನ್ನು ಸಮರ್ಪಿಸುವುದಕ್ಕಿಂತ ಮೊದಲು, ತನ್ನ ತಂದೆಯು ಸಾಯುವವರೆಗೆ ಆತನು ಕಾಯಬೇಕೆಂದಿದ್ದನು ಎಂಬುದಾಗಿದೆ. ಒಂದು ವೇಳೆ ಆತನ ತಂದೆಯು ಆಗಷ್ಟೇ ಸತ್ತಿದ್ದರೆ ಆತನು ಉತ್ತರಕ್ರಿಯೆಯಲ್ಲಿ ನಿರತನಾಗಿರುತ್ತಿದ್ದಿರಬಹುದು.

*ನೇಗಿಲ ಮೇಲೆ ತನ್ನ ಕೈಯನ್ನು ಹಾಕಿ ಹಿಂದೆ ನೋಡಿದರೆ* (ವ. 62): ಒಬ್ಬ ವ್ಯಕ್ತಿಯು ಉಳುವಾಗ ಹಿಂದೆ ತಿರುಗಿ ನೋಡಿದರೆ ಖಂಡಿತವಾಗಿ ಆತನು ತಕ್ಷಣ ಹೋಗುವವನಾಗಿದ್ದಾನೆ.

**ಪ್ರಶ್ನೆಗಳು**


1. ಈ ವಾಕ್ಯಭಾಗದ ಸಂದರ್ಭ ಯಾವುದಾಗಿದೆ (ವ. 57)?
2. ಒಬ್ಬ ಮನುಷ್ಯನು ಯೇಸುವಿಗೆ ಏನೆಂದು ಹೇಳುತ್ತಾನೆ (ವ. 57)?
3. ಯೇಸು ತನ್ನ ಜೀವನವನ್ನು ಹೇಗೆ ವರ್ಣಿಸುತ್ತಾನೆ (ವ. 58)?
4. ಯೇಸುವನ್ನು ಹಿಂಬಾಲಿಸದೇ ಇರುವುದಕ್ಕೆ ಎರಡನೆಯವನು ಕೊಡುವ ನೆಪವೇನಾಗಿದೆ (ವ. 59)?
5. ಎರಡನೆಯವನಿಗೆ ಯೇಸು ಏನನ್ನು ಮಾಡಬೇಕೆಂದು ಹೇಳುತ್ತಾನೆ (ವ. 60)?
6. ಯೇಸುವನ್ನು ಹಿಂಬಾಲಿಸದೆ ಇರಲು ಮೂರನೆಯವನು ಏನೆಂದು ನೆಪ ಹೇಳುತ್ತಾನೆ (ವ. 61)?
7. ಯೇಸು ಮೂರನೆಯವನಿಗೆ ಏನೆಂದು ಹೇಳುತ್ತಾನೆ (ವ. 62)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ವಾಕ್ಯಭಾಗದಲ್ಲಿನ ಮುಖ್ಯ ಹೇಳಿಕೆ ಏನು (ಲೂಕ 9:57-62)? ಯಾಕೆ ಎಂಬುದನ್ನು ವಿವರಿಸಿರಿ.
2. ಲೂಕ 9:57-62 ಮತ್ತು ಮತ್ತಾ. 8:19-22 ನ್ನು ಹೋಲಿಸಿರಿ. ಗಮನಿಸಿದ ಅಂಶಗಳ ಪಟ್ಟಿ ಮಾಡಿರಿ.
3. ಇಂದಿನ ವಿಶ್ವಾಸಿಗಳಿಗಾಗಿ ಲೂಕ 9:57-62 ರಲ್ಲಿನ ಸಂದೇಶವನ್ನು ನೀವು ಹೇಗೆ ಅನ್ವಯಿಸಿಕೊಳ್ಳುವಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯನದಲ್ಲಿ ತಿಳಿಸಿದ ವಿಷಯ(ಮಾಹಿತಿ)ಗಳ ಬೆಳಕಿನಲ್ಲಿ ಲೂಕ 9:57-62 ನ್ನು ವಿಮರ್ಶಿಸಿ. ಅನಂತರ ***ದೇವರ ರಾಜ್ಯದಲ್ಲಿ ಸೇವೆಗಾಗಿ ಸನ್ನದ್ಧರಾಗಿರುವುದು*** ಎಂಬ ಧ್ಯಾನವೊಂದನ್ನು (ಅಥವಾ ಸತ್ಯವೇದ ಅಧ್ಯಯನ ಅಥವಾ ಸಂದೇಶ) ಸಿದ್ಧಪಡಿಸಿರಿ.



## 12. ಯೇಸು ಎಪ್ಪತ್ತು ಮಂದಿ ಶಿಷ್ಯರನ್ನು ಕಳುಹಿಸಿಕೊಡುವುದು, ಲೂಕ 10:1-20

### ಪೀಠಿಕೆ ಮತ್ತು ಟಿಪ್ಪಣಿಗಳು

ಎಲ್ಲಾ ಮೂರು ಸಮನಾಂತರ ಸುವಾರ್ತೆಗಳೂ ಸಹ ಯೇಸು ಹನ್ನೆರಡು ಮಂದಿ ಅಪೊಸ್ತರನ್ನು ನೇಮಿಸಿ ಕಳುಹಿಸಿಕೊಡುವ ವಿಷಯವನ್ನು ಒಳಗೊಂಡಿವೆ (ಮತ್ತಾ. 10:1-16, 11:1, ಮಾರ್ಕ 3:14-19, 6:7-13, ಲೂಕ 6:13-16, 9:1-6). ಆದರೆ ಲೂಕನು ಮಾತ್ರ ಯೇಸುವು "ಇತರೆ" ಎಪ್ಪತ್ತು ಮಂದಿಯನ್ನು (ಅಥವಾ ಎಪ್ಪತ್ತೆರಡು) ನೇಮಿಸಿ ಕಳುಹಿಸಿಕೊಡುವ ವಿಷಯವನ್ನು ಹೆಚ್ಚುವರಿಯಾಗಿ ತಿಳಿಸುತ್ತಾನೆ. ಈ ಇತರೆ "ಇನ್ನೂ ಎಪ್ಪತ್ತು ಮಂದಿಯು" ಹನ್ನೆರಡು ಮಂದಿ ಶಿಷ್ಯರನ್ನು ಹೊರತುಪಡಿಸಿ ಯೇಸುವಿನ ಇತರೆ ಶಿಷ್ಯರಾಗಿದ್ದಿರಬಹುದು.

*ಎಪ್ಪತ್ತು ಮಂದಿ/ಎಪ್ಪತ್ತೆರಡು* (ವ. 1): ಗ್ರೀಕ್ ಉತ್ತಮವಾದ ಹಸ್ತಪ್ರತಿಯಲ್ಲಿ "ಎಪ್ಪತ್ತೆರಡು" ಎಂದಿದೆ. ಬಹುಶಃ ಈ ಸಂಖ್ಯೆಯು ಲೋಕದ ಎಲ್ಲಾ ಜನರ ಸಂಕೇತವಾಗಿರಬಹುದು (ಆದಿಕಾಂಡ ಅಧ್ಯಾಯ 10 ರಲ್ಲಿ ಪಟ್ಟಿಯಲ್ಲಿ ಹಳೇ ಒಡಂಬಡಿಕೆಯ ಗ್ರೀಕ್ ಸೆಪ್ಟುಜೆಂಟ್ ಭಾಷಾಂತರದಲ್ಲಿ 72 ಹೆಸರುಗಳಿವೆ ಮತ್ತು ಗುಣಮಟ್ಟದ ಇಬ್ರಿಯ ಹಳೇ ಒಡಂಬಡಿಕೆಯ ಪಠ್ಯದಲ್ಲಿ 70 ಹೆಸರುಗಳಿವೆ, ಇದನ್ನು ಹೋಲಿಸಿ). ಈ ಇತರರನ್ನು ಯೇಸು ತಾನು ಹೋಗಬೇಕೆಂದಿದ್ದ ಪ್ರತಿಯೊಂದೂರಿಗೂ ಪ್ರತಿಯೊಂದು ಸ್ಥಳಕ್ಕೂ ಮುಂದಾಗಿ ಕಳುಹಿಸಿದನು; ಸಭೆಯ ಸೇವಾ ಹಿನ್ನಲೆಯಲ್ಲಿ ಇದು ಇಡೀ ಜಗತ್ತು ಮತ್ತು ಎಲ್ಲಾ ರಾಷ್ಟ್ರಗಳನ್ನು ಸೂಚಿಸುತ್ತದೆ. ಹಳೇ ಒಡಂಬಡಿಕೆಯ ಇಸ್ರಾಯೇಲ್ಯರ ಇತಿಹಾಸದಲ್ಲಿ 70 ಸಂಖ್ಯೆ ಎರಡು ಬಾರಿ ಕಂಡುಬರುವುದನ್ನು ಸತ್ಯವೇದ ಪಂಡಿತರು ಗುರುತಿಸಿದ್ದಾರೆ: ಎಪ್ಪತ್ತು ಐಗುಪ್ತದಲ್ಲಿ ನೆಲೆಗೊಂಡ ಯಾಕೋಬನ ಕುಟುಂಬದ ಜನರ ಒಟ್ಟು ಸಂಖ್ಯೆಯಾಗಿತ್ತು (ಆದಿಕಾಂಡ 46:27). ಅಲ್ಲದೆ ಮರುಳುಗಾಡಿನಲ್ಲಿ ಅಲೆದಾಡುವಾಗ ತನಗೆ ಸಹಕರಿಸುವುದಕ್ಕಾಗಿ ಮೋಶೆಯು ನೇಮಿಸಿದ ಹಿರಿಯರ ಸಂಖ್ಯೆ ಸಹ ಎಪ್ಪತ್ತಾಗಿತ್ತು (ಅರಣ್ಯ. 11:16-17). ಹಾಗಾಗಿ ಈ ಪಂಡಿತರುಗಳು ಹನ್ನೆರಡು ಅಪೊಸ್ತಲರು ಇಸ್ರಾಯೇಲಿನ ಹನ್ನೆರಡು ಪಿತೃಗಳನ್ನು ಅಥವಾ ಹೊಸ ಒಡಂಬಡಿಕೆಯ ನಾಯಕತ್ವವನ್ನು ಸೂಚಿಸುತ್ತವೆ ಮತ್ತು ಇತರೆ ಎಪ್ಪತ್ತು ಮಂದಿ ಶಿಷ್ಯರು ಇಡೀ ಇಸ್ರಾಯೇಲ್ ಜನಾಂಗ (ರಾಷ್ಟ್ರ) ಅಥವಾ ಇಡೀ ಹೊಸ ಒಡಂಬಡಿಕೆಯ ಸಭೆಯನ್ನು ಸೂಚಿಸುತ್ತವೆಂಬುದಾಗಿ ಅರ್ಥೈಸಿಕೊಳ್ಳಬೇಕೆಂದು ಸೂಚಿಸುತ್ತಾರೆ.

*ಇಬ್ಬಿಬ್ಬರಾಗಿ* (ವ. 1): ಯೇಸು ಹನ್ನೆರಡು ಮಂದಿ ಅಪೊಸ್ತಲರನ್ನು "ಇಬ್ಬಿಬ್ಬರಾಗಿ" ಕಳುಹಿಸುವುದರೊಂದಿಗೆ ಹೋಲಿಸಿ (ಮಾರ್ಕ 6:7). ಅಂತಿಯೋಕ್ಯದ ಸಭೆಯಿಂದ ಪ್ರತ್ಯೇಕಿಸಿ, ಕಳುಹಿಸಲ್ಪಟ್ಟ ಮೊದಲ ಮಿಶನರಿಗಳಾದ ಬಾರ್ನಬ ಮತ್ತು ಸೌಲ/ಪೌಲ ಸಹ ಇಬ್ಬರೇ ಆಗಿದ್ದರು (ಅ.ಕೃ. 13:2).

*ತೋಳಗಳ ನಡುವೆ ಕುರಿಮರಿಗಳನ್ನು* (ವ. 3): ಪ್ರಾಚೀನ ಇಸ್ರಾಯೇಲಿನಲ್ಲಿ ತೋಳಗಳು ಕುರಿಗಳ ಸ್ವಾಭಾವಿಕ ವೈರಿಗಳಾಗಿದ್ದವು. ಪೌಲನು ಎಫೆಸದಲ್ಲಿನ ಹಿರಿಯರಿಗೆ ಹೇಳುವ ತನ್ನ ಉಪದೇಶದಲ್ಲಿ ಇದೇ ರೀತಿಯ ಉಪಮೆ/ಹೋಲಿಕೆಯನ್ನು ಉಪಯೋಗಿಸುತ್ತಾನೆ (ಅ.ಕೃ. 20:29).

*ದಾರಿಯಲ್ಲಿ ಯಾರಿಗೂ ವಂದಿಸಬೇಡಿರಿ* (ವ. 4): ಯೇಸುವಿನ ಅರ್ಥ ಒರಟುತನವಲ್ಲ ಬದಲಾಗಿ ಅವಸರವಾಗಿದೆ.

*ಆಳು ತನ್ನ ಕೂಲಿಗೆ ಯೋಗ್ಯನಷ್ಟೆ* (ವ. 7): ಪೌಲನು ತನ್ನ ಎರಡು ಪತ್ರಿಕೆಗಳಲ್ಲಿ ಈ ಹೇಳಿಕೆಯನ್ನು ಉಲ್ಲೇಖಿಸುತ್ತಾನೆ (1 ಕೊರಿಂಥ 9:3-12, 1 ತಿಮೋಥಿ 5:18).

*ದೂಳನ್ನು ಒರೆಸಿಬಿಡುತ್ತೇವೆ* (ವ. 11): ನಿಮ್ಮ ಕಾಲಿಗೆ ಹತ್ತಿದ ದೂಳನ್ನು ಜಾಡಿಸಿಬಿಡುವುದು ದೂಳು ಹತ್ತಿದ ಆ ಸೀಮೆಯ ಮೇಲೆ ನೀವು ಎಂದೂ ಜವಾಬ್ದಾರರಲ್ಲ ಎಂಬುದನ್ನು ಸೂಚಿಸುತ್ತದೆ. ಆ ಕ್ಷೇತ್ರವನ್ನು ನೀವು ದೇವರ ನ್ಯಾಯತೀರ್ಪಿಗೆ ಬಿಟ್ಟುಬಿಟ್ಟಿರುವಿರಿ.

ವಚನ 13-15: ಯೇಸು ಖೊರಾಜಿನ್, ಬೇತ್ಸಾಯಿದ ಮತ್ತು ಕಪೆರ್ನೌಮ್ ಪಟ್ಟಣಗಳನ್ನು ಗದರಿಸುವುದನ್ನು ಸಮಾನಾರ್ಥಕ ಪಠ್ಯವಾದ ಮತ್ತಾ. 11:20-24 ರ ಅಧ್ಯಯನದಲ್ಲಿ ಚರ್ಚಿಸಲಾಗಿದೆ (***ಕಷ್ಟ ಮತ್ತು ವಿಶ್ರಾಂತಿ*** ಅಧ್ಯಾಯ ನೋಡಿರಿ).

*ಸೈತಾನನು ಬೀಳುವುದನ್ನು ಕಂಡೆನು* (ವ. 18): ಯೇಸುವಿನ ಮಾತುಗಳು ಬಾಬೆಲಿನ ಅರಸನ ಪತನವನ್ನು ಬಿಂಬಿಸುವ ಪ್ರವಾದನೆಯಾದ ಯೆಶಾಯ 14:12 ನ್ನು ಪ್ರತಿಧ್ವನಿಸುತ್ತದೆ. ಶಿಷ್ಯರುಗಳು ದೆವ್ವಗಳನ್ನು ಬಿಡಿಸಿದಾಗ ದುರಾತ್ಮನ ಬಲಗಳು ಕದಲಿದವು ಮತ್ತು ಸೈತಾನನು ತಾನೇ ಸೋಲಿಸಲ್ಪಟ್ಟನು. ಆತನು ಸಿಡಿಲಿನಂತೆ ಆಕಾಶದಿಂದ ಬೀಳುವುದನ್ನು ಯೇಸು ಕಂಡನು.

*ನಿಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ* (ವ. 20): ತಮ್ಮ ರಕ್ಷಣೆಗಾಗಿ ಸಂತೋಷಪಡಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು. ದೇವರ ನಂಬಿಗಸ್ತರಾದ ಜನರ ಹೆಸರುಗಳು ಪರಲೋಕದಲ್ಲಿರುವ ಪುಸ್ತಕದಲ್ಲಿ ಬರೆದಿರುತ್ತವೆ ಎಂಬ ವಿಚಾರ ಸತ್ಯವೇದದಲ್ಲಿ ಹಲವುಬಾರಿ ಕಂಡುಬರುತ್ತದೆ (ಉದಾ: ನೋಡಿ ವಿಮೋಚನಕಾಂಡ 32:32-33, ಕೀರ್ತನೆ 69:28, ದಾನಿಯೇಲ 12:1, ಮಲಾಕಿ 3:16, ಪ್ರಕ. 20:12-15).

**ಪ್ರಶ್ನೆಗಳು**

1. ಇನ್ನೂ ಎಪ್ಪತ್ತು ಮಂದಿ ಶಿಷ್ಯರನ್ನು ಯೇಸು ಎಲ್ಲಿಗೆ ಕಳುಹಿಸಿದನು (ವ. 1)?
2. ಯೇಸು ತನ್ನ ಶಿಷ್ಯರಿಗೆ ಯಾವುದಕ್ಕಾಗಿ ಪ್ರಾರ್ಥಿಸಬೇಕೆಂದು ಹೇಳಿದನು (ವ. 2)?
3. ಅವರ ಪ್ರಯಾಣದ ಅಪಾಯವನ್ನು ವರ್ಣಿಸಲು ಯೇಸು ಯಾವ ಉಪಮೆ/ಹೋಲಿಕೆಯನ್ನು ಬಳಸುತ್ತಾನೆ (ವ. 3)?
4. ಯೇಸು ತನ್ನ ಶಿಷ್ಯರಿಗೆ ಅವರ ಪ್ರಯಾಣದಲ್ಲಿ ಏನನ್ನು ಒಯ್ಯಬಾರದು ಮತ್ತು ಪ್ರಯಾಣಿಸುವಾಗ ಏನೆಲ್ಲ ಮಾಡಬಾರದೆಂಬುದಾಗಿ ಹೇಳುತ್ತಾನೆ (ವ. 4)?
5. ಅವರು ಒಂದು ಮನೆಗೆ ಹೋದಾಗ ಮನೆಯವರನ್ನು ಹೇಗೆ ವಂದಿಸಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳುತ್ತಾನೆ (ವ 5)?
6. ಜನರ ಮನೆಯಲ್ಲಿ ಉಳಿದುಕೊಂಡಿರುವಾಗ ಹೇಗೆ ಇರಬೇಕೆಂಬುದಾಗಿ ಯೇಸು ತನ್ನ ಶಿಷ್ಯರಿಗೆ ತಿಳಿಸುತ್ತಾನೆ (ವ. 6)?
7. ಒಂದು ಊರಿನಲ್ಲಿ ಉಳಿದುಕೊಂಡಿರುವಾಗ ಶಿಷ್ಯರಿಗೆ ಏನು ಮಾಡಬೇಕೆಂದು ಯೇಸು ಹೇಳುತ್ತಾನೆ (ವ. 8-9)?
8. ಒಂದು ಊರಿನವರು ಶಿಷ್ಯರನ್ನು ಸೇರಿಸಿಕೊಳ್ಳದಿದ್ದರೆ ಏನನ್ನು ಮಾಡಬೇಕೆಂದು ಯೇಸು ಅವರಿಗೆ ಹೇಳುತ್ತಾನೆ (ವ 10-11)?
9. ವಚನ 11 ರಲ್ಲಿ ತನ್ನ ಶಿಷ್ಯರನ್ನು ತಿರಸ್ಕರಿಸುವ ಜನರ ಬಗ್ಗೆ ಯೇಸು ಏನೆಂದು ಹೇಳುತ್ತಾನೆ?
10. ತಮ್ಮ ಸೇವಾ ಯಾತ್ರೆಯ ಬಗ್ಗೆ ಎಪ್ಪತ್ತು ಮಂದಿ ಶಿಷ್ಯರು ಏನೆಂದು ಭಾವಿಸುತ್ತಾರೆ (ವ. 17)?
11. ಶಿಷ್ಯರ ಸೇವಾ ಯಾತ್ರೆಯ ಯಶಸ್ಸನ್ನು ಯೇಸು ಹೇಗೆ ವರ್ಣಿಸುತ್ತಾನೆ (ವ. 18)?
12. ತನ್ನ ಶಿಷ್ಯರಿಗೆ ತಾನು ಯಾವ ಅಧಿಕಾರವನ್ನು ಕೊಟ್ಟಿದ್ದೇನೆಂಬುದಾಗಿ ಯೇಸು ಹೇಳುತ್ತಾನೆ (ವ. 19)?
13. ಯಾಕೆ ಸಂತೋಷವಾಗಿರಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳುತ್ತಾನೆ (ವ. 20)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಕೆಳಕಂಡ ಚಿತ್ರಣವನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ:

   ಅ. ಬೆಳೆಯು ಬಹಳ (ವ. 2):

   ಆ. ತೋಳಗಳ ನಡುವೆ ಕುರಿಮರಿಗಳನ್ನು (ವ. 2):

   ಇ. ಹಣದ ಚೀಲವನ್ನಾಗಲೀ, ಹಸಿಬೆಯನ್ನಾಗಲೀ (ಬ್ಯಾಗ್ ಚೀಲ), ಕೆರಗಳನ್ನಾಗಲೀ ತೆಗೆದುಕೊಂಡು ಹೋಗಬೇಡಿರಿ (ವ. 4):

   ಈ. ದಾರಿಯಲ್ಲಿ ಯಾರಿಗೂ ವಂದಿಸಬೇಡಿರಿ (ವ. 4):

   ಉ. ಕಾಲುಗಳಿಗೆ ಹತ್ತಿದ ದೂಳನ್ನು ಒರಸಿಬಿಡುತ್ತೇವೆ (ವ. 11):


ಊ. ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವುದನ್ನು ಕಂಡೆನು (ವ. 18):

ಋ. ನಿಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ (ವ. 20):

2. ಯೇಸು ಎಪ್ಪತ್ತು ಮಂದಿ ಶಿಷ್ಯರಿಗೆ ಕೊಡುವ ಆದೇಶದ ಕುರಿತಾದ ಕಥೆಯ ದೃಷ್ಟಿಕೋನದಿಂದ ಸಭೆಯ ಸೇವೆಯನ್ನು ವಿವರಿಸಿರಿ (ಲೂಕ 10:1-20).
3. ಈ ಹಿಂದಿನ ಪ್ರಶ್ನೆಯ ಉತ್ತರದ ಬೆಳಕಿನಲ್ಲಿ ನಿಮ್ಮ ಸ್ವಂತ ಸೇವೆ ಮತ್ತು ನಿಮ್ಮ ಸಭಾ ಸೇವೆಯನ್ನು ಮೌಲ್ಯಮಾಪನ ಮಾಡಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ ೧**

ಈ ಅಧ್ಯಯನದಲ್ಲಿ ತಿಳಿಸಲಾದ ವಿಷಯ(ಮಾಹಿತಿ)ಗಳ ಬೆಳಕಿನಲ್ಲಿ ಲೂಕ 10:1-20 ನ್ನು ವಿಮರ್ಶಿಸಿರಿ. ಅನಂತರ ಈ ವಿಷಯಗಳ ಆಧಾರದ ಮೇಲೆ ಒಂದು ಧ್ಯಾನ(ಒಂದು ಸತ್ಯವೇದ ಅಧ್ಯಯನ ಅಥವಾ ಒಂದು ಪ್ರಸಂಗ)ವನ್ನು ಸಿದ್ಧಪಡಿಸಿರಿ. ಅದಕ್ಕೆ ***ಸಭೆಯ ಆದೇಶ*** ಎಂದು ಹೆಸರಿಡಬಹುದು.



## 13. ಶಿಷ್ಯತ್ವದ ಕ್ರಯ (ಬೆಲೆ), ಲೂಕ 14:25-33

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸು ಯೆರೂಸಲೇಮಿಗೆ ಪ್ರಯಾಣಿಸುತ್ತಿದ್ದಾಗ ಮಾರ್ಗದುದ್ದಕ್ಕೂ ಭಾರೀ ಜನಸಮೂಹ ಆತನೊಂದಿಗೆ ಸಾಗುತ್ತದೆ. ಈ ಅವಕಾಶವನ್ನು ಬಳಸಿಕೊಂಡು ಆತನು ನಿಜವಾದ ಕ್ರೈಸ್ತೀಯ ಶಿಷ್ಯತ್ವದ ಅರ್ಥವನ್ನು ಕುರಿತ ಹೆಚ್ಚುವರಿ ಸತ್ಯಗಳನ್ನು ಅವರಿಗೆ ಬೋಧಿಸುತ್ತಾನೆ.

*ತನ್ನ ತಂದೆಯನ್ನು ... .ಹಗೆ ಮಾಡದಿದ್ದರೆ* (ವ. 26): ಇದು ಸತ್ಯವೇದದಲ್ಲಿ ಹಲವಾರು ಬಾರಿ ಕಂಡುಬರುವ ಒಂದು ಶಬ್ದಾಲಂಕಾರಕ್ಕೆ ಉದಾಹರಣೆಯಾಗಿದೆ (ಉದಾಹರಣೆಗೆ ನೋಡಿ ಮಲಾಕಿ 1:2-3, ಮತ್ತಾ. 5:29-30). ಇದನ್ನು "ಅತಿಶಯೋಕ್ತಿ" ಎಂದು ಕರೆಯುವರು. "ಮಾತು ಮತ್ತು ಪದ್ಯರೂಪಿ ಕಾರಣಗಳಿಗಾಗಿ ಉದ್ದೇಶಪೂರ್ವಕವಾದ ಅತಿಶಯತೆ" ಎಂಬುದಾಗಿ ಇದನ್ನು ವಿವರಿಸಬಹುದು. ಅತಿಶಯೋಕ್ತಿಯನ್ನು ಅಕ್ಷರಶಃವಾಗಿ ತೆಗೆದುಕೊಳ್ಳಬೇಕೆಂದರ್ಥವಲ್ಲ. ತನ್ನ ಶಿಷ್ಯರು ತಮ್ಮ ಕುಟುಂಬ ಮತ್ತು ಸ್ವಂತ ಜೀವಿತಗಳನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ತನ್ನನ್ನು ಪ್ರೀತಿಸಬೇಕೆಂಬುದು ಯೇಸು ಹೇಳುವ ಮಾತಿನ ಅರ್ಥವಾಗಿದೆ.

*ಶಿಲುಬೆಯನ್ನು ಹೊತ್ತುಕೊಂಡು* (ವ. 27): ರೋಮನ್ನರು ಒಬ್ಬ ಅಪರಾಧಿಯನ್ನು ಶಿಲುಬೆಗೆ ಹಾಕುವುದಕ್ಕಾಗಿ ಕೊಂಡೊಯ್ಯುವಾಗ ಸ್ವತಃ ಆತನೇ ಆ ಶಿಲುಬೆಯನ್ನು ಹೊತ್ತುಕೊಂಡು ಹೋಗಬೇಕಿತ್ತು. ಈ ಅಲಂಕಾರಿಕ ಹೇಳಿಕೆಯ ಅರ್ಥವೇನೆಂದರೆ "ಕಷ್ಟ, ಬಾಧೆ ಮತ್ತು ಮರಣವನ್ನು ಸಹ ಹಾದುಹೋಗಲು ಸಿದ್ಧರಿರುವುದು" ಎಂದಾಗಿದೆ.

### ಪ್ರಶ್ನೆಗಳು

1. ಈ ವಾಕ್ಯಭಾಗದಲ್ಲಿ ಯೇಸು ಯಾರನ್ನು ಸಂಬೋಧಿಸುತ್ತಾನೆ (ವ. 25)?
2. ಯೇಸು ತಿಳಿಸಿದ ಶಿಷ್ಯತ್ವದ ಮೊದಲ "ಕ್ರಯ"ವೇನು (ವ. 26)?
3. ಯೇಸು ತಿಳಿಸಿದ ಶಿಷ್ಯತ್ವದ ಎರಡನೇ ಕ್ರಯವೇನು (ವ. 27)?
4. ಬುರುಜನ್ನು ಕಟ್ಟಿಸುವುದಕ್ಕಿಂತ ಮೊದಲು ಅದಕ್ಕೆ ಆಗುವ ಖರ್ಚನ್ನು ಲೆಕ್ಕ ಮಾಡಬೇಕಾದ ಅವಶ್ಯಕತೆಯ ಬಗ್ಗೆ ಯೇಸು ಎರಡು ಉದಾಹರಣೆಗಳನ್ನು ತಿಳಿಸುತ್ತಾನೆ. ಆ ಉದಾಹರಣೆಗಳಾವುವು (ವ. 28-32)?
5. ಯೇಸು ತಿಳಿಸಿದ ಶಿಷ್ಯತ್ವದ ಮೂರನೇ ಕ್ರಯ ಯಾವುದು (ವ. 33)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಯೇಸು ಹೇಳುವ ಶಿಷ್ಯತ್ವದ ಮೂರು ಕ್ರಯಗಳನ್ನು (ಲೂಕ 14:25-33) ನಿಮ್ಮದೇ ಮಾತಿನಲ್ಲಿ ವಿವರಿಸಿರಿ:

   ಅ. ನಿನ್ನನ್ನು ಮತ್ತು ನಿನ್ನ ಕುಟುಂಬವನ್ನು ಹಗೆ ಮಾಡುವುದು:

   ಆ. ನಿನ್ನ ಶಿಲುಬೆಯನ್ನು ಹೊತ್ತುಕೊಂಡು ಬರುವುದು:

   ಇ. ತನಗಿರುವುದನ್ನೆಲ್ಲಾ ಬಿಟ್ಟುಬಿಡುವುದು:
2. ಈ ಹಿಂದಿನ ಪ್ರಶ್ನೆಯ ಉತ್ತರದ ಬೆಳಕಿನಲ್ಲಿ ನಿನ್ನ ವೈಯಕ್ತಿಕ ಶಿಷ್ಯತ್ವವನ್ನು ಮೌಲ್ಯಮಾಪನ ಮಾಡಿರಿ.

## 14. ಕೆಲಸಗಾರರ ಕೊರತೆ, ಮತ್ತಾಯ 9:35-38

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸು ಮತ್ತು ಆತನ ಸೇವೆಯ ಕುರಿತಾದ ಈ ಸಣ್ಣ ವಾಕ್ಯಭಾಗವು ಕ್ರೈಸ್ತಸಭೆಯ ಇತಿಹಾಸದುದ್ದಕ್ಕೂ ವಿಶ್ವಾಸಿಗಳಿಗೆ ಸವಾಲನ್ನೊಡ್ಡಿದೆ. ಈ ಲೋಕದಲ್ಲಿ ಜನರ ಶೋಚನೀಯ ಪರಿಸ್ಥಿತಿಯು ಅವರೊಂದಿಗೆ ದೇವರ ರಾಜ್ಯದ ಕುರಿತಾದ ಶುಭವಾರ್ತೆಯನ್ನು ಹಂಚಿಕೊಳ್ಳಲು ನಮ್ಮೊಳಗೆ ಕನಿಕರವನ್ನು ತುಂಬಿಸಿ ನಮ್ಮನ್ನು ಪ್ರೇರೇಪಿಸಬೇಕು.

*ಕನಿಕರಪಟ್ಟನು* (ವ. 36): ಜನರಿಗಾಗಿನ ಯೇಸುವಿನ ಕನಿಕರವು ಸುವಾರ್ತೆಯಲ್ಲಿ ಪದೇ ಪದೇ ಕಂಡುಬರುತ್ತದೆ (ಉದಾ. ನೋಡಿ ಮತ್ತಾ. 14:14, 20:34, ಮಾರ್ಕ 1:41, 8:2). ನಾವಿದನ್ನು ಮಾರ್ಕ 6:34 ರಲ್ಲಿ ಸಹ ಕಾಣಬಹುದು: "ಆತನು ಹೊರಗೆ ಬಂದು ಬಹುಜನರ ಗುಂಪನ್ನು ಕಂಡು ಇವರು ಕುರುಬನಿಲ್ಲದ ಕುರಿಗಳ ಹಾಗಿದ್ದಾರಲ್ಲಾ ಎಂದು ಕನಿಕರಪಟ್ಟು ಅವರಿಗೆ ಬಹಳ ಉಪದೇಶ ಮಾಡುತ್ತಿದ್ದನು".

*ಕುರುಬನಿಲ್ಲದ ಕುರಿಗಳ ಹಾಗೆ* (ವ. 36): ಹಳೇ ಒಡಂಬಡಿಕೆಯ ಪ್ರವಾದಿಗಳು "ಕುರಿ ಮತ್ತು ಕುರುಬ"ರ ಚಿತ್ರಣವನ್ನು (ನೋಡಿ ಯೆಹೆಜ್ಕೇಲ 34:5, ಜಕರ್ಯ 10:2, 13:1) ಇಸ್ರಾಯೇಲ್ ಜನರು ಮತ್ತು ಅವರ ನಾಯಕರುಗಳ ಬಗ್ಗೆ ಉಪಯೋಗಿಸಿದರು. ಇದನ್ನು ಹೊಸ ಒಡಂಬಡಿಕೆಯಲ್ಲಿ ಸಹ ಉಪಯೋಗಿಸಲಾಗಿದೆ.

### ಪ್ರಶ್ನೆಗಳು

1. ವಚನ 35 ರಲ್ಲಿ ಮತ್ತಾಯನು ಯೇಸುವಿನ ಸೇವೆಯನ್ನು ಹೇಗೆ ವರ್ಣಿಸಿದ್ದಾನೆ? ಪಟ್ಟಿ ಮಾಡಿರಿ.
2. ಯಾವಾಗ ಮತ್ತು ಯಾಕೆ ಯೇಸು ಜನರನ್ನು ನೋಡಿ ಕನಿಕರಪಟ್ಟನು (ವ. 36)?
3. ಜನರ ಪರಿಸ್ಥಿತಿಯನ್ನು ವರ್ಣಿಸಲು ಮತ್ತಾಯನು ಯಾವ ಉಪಮೇಯವನ್ನು ಬಳಸುತ್ತಾನೆ (ವ. 36)?
4. ಈ ವಾಕ್ಯಭಾಗದ ಕೊನೆಯ ವಚನದಲ್ಲಿ ಯೇಸು ಯಾರನ್ನು ಸಂಭೋಧಿಸುತ್ತಾನೆ?
5. ಪರಿಸ್ಥಿತಿ(ಸನ್ನಿವೇಶ)ಯನ್ನು ವರ್ಣಿಸಲು ಯೇಸು ಯಾವ ರೂಪಾಲಂಕಾರವನ್ನು ಬಳಸುತ್ತಾನೆ (ವ. 37-38)? ಪಟ್ಟಿ ಮಾಡಿರಿ.
6. ಯೇಸು ತನ್ನ ಶಿಷ್ಯರಿಗೆ ಏನನ್ನು ಮಾಡಬೇಕೆಂದು ಹೇಳುತ್ತಾನೆ (ವ. 38)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಮತ್ತಾಯನು ತನ್ನ ಸುವಾರ್ತೆಯಲ್ಲಿ ಕೆಲವೊಮ್ಮೆ ಯೇಸುವಿನ ಸೇವೆಯನ್ನು ಒಂದೇ ವಚನದಲ್ಲಿ ಸಾರಾಂಶಗೊಳಿಸುತ್ತಾನೆ, ಉದಾಹರಣೆಗೆ 4:23 ಮತ್ತು 4:35. ಈ ಎರಡು ವಚನಗಳನ್ನು ಹೋಲಿಸಿರಿ. ನಿಮ್ಮ ಟಿಪ್ಪಣಿ ಬರೆಯಿರಿ.
2. ಯಾವ ರೀತಿಯಲ್ಲಿ ಈ ವಾಕ್ಯಭಾಗವು (ಮತ್ತಾ. 9:35-38) ನಿಮಗೆ ಮತ್ತು ನಿಮ್ಮ ಸಭೆಗೆ ಒಂದು ಸವಾಲಾಗಿದೆ? ನಿಮ್ಮ ತೀರ್ಮಾನ ಬರೆಯಿರಿ.

### ವಿಮರ್ಶಿಸಿ ಮತ್ತು ಸಿದ್ಧಪಡಿಸರಿ

ಈ ಅಧ್ಯಯನದಲ್ಲಿನ ವಿಷಯ/ಮಾಹಿತಿಗಳ ಬೆಳಕಿನಲ್ಲಿ ಮತ್ತಾಯ 9:35-38 ನ್ನು ವಿಮರ್ಶಿಸಿರಿ. ಅನಂತರ ಈ ವಿಷಯದ ಆಧಾರದ ಮೇಲೆ ಒಂದು ಧ್ಯಾನವನ್ನು ಸಿದ್ಧಪಡಿಸಿರಿ. ಇದನ್ನು ***ಬೆಳೆಯು ಬಹಳ, ಕೆಲಸದವರು ಸ್ವಲ್ಪ*** ಎಂದು ಕರೆಯಬಹುದು.

## 15. ಒಳ್ಳೆಯ ಸಮಾರ್ಯನು, ಲೂಕ 10:25-37

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ವಾಕ್ಯಭಾಗವು ಜಗತ್ತಿನ ಸಾಹಿತ್ಯದಲ್ಲಿನ ಪ್ರಸಿದ್ಧ ಕಥೆಗಳಲ್ಲಿ ಒಂದಾಗಿದೆ. ಯೇಸುವಿನ ಒಳ್ಳೆಯ ಸಮಾರ್ಯನ ಸಾಮ್ಯವನ್ನು ಒಳಗೊಂಡಿದೆ. ಇದನ್ನು ಒಬ್ಬ ಯೆಹೂದಿ ವಕೀಲನು ಕೇಳಿದ "ನನ್ನ ನೆರೆಯವನು ಯಾರು?" ಎಂಬ ಪ್ರಶ್ನೆಗೆ ಉತ್ತರವಾಗಿ ಹೇಳಲಾಗಿದೆ.

*ಒಬ್ಬ ಧರ್ಮೋಪದೇಶಕನು* (ವ. 25): ಈ ಮನುಷ್ಯನು ಒಬ್ಬ "ಶಾಸ್ತ್ರೀಯೂ" ಮತ್ತು "ಧರ್ಮಶಾಸ್ತ್ರದಲ್ಲಿ ಪರಿಣಿತನೂ" ಆಗಿದ್ದನು. ಈತನೊಬ್ಬ ರಬ್ಬಿಯೂ, ಮೋಶೆಯ ಧರ್ಮಶಾಸ್ತ್ರದಲ್ಲಿ ಮತ್ತು ಧರ್ಮಶಾಸ್ತ್ರವನ್ನು ಹೇಗೆ ವ್ಯಾಖ್ಯಾನಿಸಬೇಕೆಂಬ ಯೆಹೂದಿ ಸಂಪ್ರದಾಯದಲ್ಲಿ ವಿಶೇಷತೆ ಹೊಂದಿದ ಫರಿಸಾಯನೂ ಆಗಿದ್ದರು.

*ಪರೀಕ್ಷಿಸುವುದಕ್ಕಾಗಿ* (ವ. 25): ಈ ಗ್ರೀಕ್ ಪದವನ್ನು ಸಕಾರಾತ್ಮಕವಾಗಿ ("ಈ ಪ್ರಮುಖ ಪ್ರಶ್ನೆಗೆ ಯೇಸುವು ಉತ್ತಮವಾದ ಉತ್ತರವನ್ನು ಹೊಂದಿದ್ದಾನೋ ಎಂಬುದನ್ನು ಪರೀಕ್ಷಿಸಲು") ಅಥವಾ ನಕಾರಾತ್ಮಕವಾಗಿ ("ಈ ವಿಷಯದ ಬಗ್ಗೆ ವಿವಾದಾತ್ಮಕವಾಗಿ ಹೇಳಿದ್ದಕ್ಕಾಗಿ ಆತನನ್ನು ಸಿಕ್ಕಿಸಿಹಾಕಲು") ಸಹ ಬಳಸಬಹುದಾಗಿದೆ. "ನಿತ್ಯಜೀವ" ಮತ್ತು ಧರ್ಮಶಾಸ್ತ್ರದಲ್ಲಿನ ಬಹುಮುಖ್ಯವಾದ ಆಜ್ಞೆಗಳ ಕುರಿತಾದ ಪ್ರಶ್ನೆಗಳು ಆ ದಿನಗಳಲ್ಲಿನ ಯೆಹೂದಿ ಬೋಧಕರುಗಳ ನಡುವಿನ ಚರ್ಚೆಗಳಲ್ಲಿ ಸಾಮಾನ್ಯವಾಗಿದ್ದವು.

*ನಿನ್ನ ದೇವರಾಗಿರುವ ಕರ್ತನನ್ನು ... ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು* (ವ. 27): ಆ ಧರ್ಮೋಪದೇಶಕನ ಉತ್ತರವು ಎರಡು ಹಳೇ ಒಡಂಬಡಿಕೆಯ ಆಜ್ಞೆಗಳ ಸಂಯೋಜನೆಯನ್ನು ಒಳಗೊಂಡಿದೆ (ಧರ್ಮೋ. 6:5 ಮತ್ತು ಯಾಜಕ 18:18). ಅತಿದೊಡ್ಡ ಆಜ್ಞೆ ಯಾವುದು ಎಂಬುದರ ಕುರಿತಾದ ಪ್ರಶ್ನೆಗೆ ತನ್ನ ಉತ್ತರದಲ್ಲಿ ಸಹ ಯೇಸು ಇದೇ ಪಠ್ಯವನ್ನು ಉಪಯೋಗಿಸುತ್ತಾನೆ (ನೋಡಿ ಮತ್ತಾ. 22:35-40, ಮಾರ್ಕ 12:28-31).

*ಜೀವಿಸುವಿ* (ವ. 28): ಈ ಪದವು "ಸದಾಕಾಲವೂ ಜೀವಿಸುವಿ" , "ನಿತ್ಯಜೀವವನ್ನು ಹೊಂದುವಿ" ಎಂಬುದರ ಸಂಕ್ಷಿಪ್ತ ರೂಪವಾಗಿದೆ.

*ತನ್ನನ್ನು ನೀತಿವಂತನೆಂದು ತೋರಿಸಿಕೊಳ್ಳುವುದಕ್ಕೆ ಅಪೇಕ್ಷಿಸಿ* (ವ. 29): ಈ ಧರ್ಮೋಪದೇಶಕನು ತನ್ನನ್ನು ನೀತಿವಂತನೆಂಬುದಾಗಿ ತೋರಿಸಲು ಬಯಸಿದನು, ಇವರು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಸಾರಾಂಶಗೊಳಿಸಿದ ಎರಡು ಉಲ್ಲೇಖನಗಳಿಗೆ ಅನುಸಾರವಾಗಿ ಜೀವಿಸಿದ ಮನುಷ್ಯನಾಗಿದ್ದನು. ಈತನು ಅಲ್ಲಿದ್ದವರೆಲ್ಲರಿಗೂ ತನ್ನ ನೀತಿವಂತಿಕೆಯನ್ನು ತೋರ್ಪಡಿಸಬೇಕೆಂದು ಬಯಸಿದನು. ಹಾಗಾಗಿ ಆತನು ಯೇಸುವಿಗೆ ಒಂದು ಮುನ್ನಡೆಯ ಪ್ರಶ್ನೆಯನ್ನು ಕೇಳುತ್ತಾನೆ ("ನನ್ನ ನೆರೆಯವನು ಯಾರು?")

*ಯಾಜಕನು* (ವ. 31): ಯಾಜಕನು ಯೆರೂಸಲೇಮಿನ ದೇವಾಲಯದಲ್ಲಿ ಅದರಲ್ಲೂ ವಿಶೇಷವಾಗಿ ದೇವಾಲಯದ ಕಾರ್ಯಕ್ರಮಗಳಲ್ಲಿ ಮತ್ತು ಯಜ್ಞಮಾಡುವುದರಲ್ಲಿ ಸೇವೆ ಸಲ್ಲಿಸುವವನಾಗಿದ್ದಾನೆ. ಈ ಯಾಜಕನು ಯೆರೂಸಲೇಮಿನ ದೇವಾಲಯದ ದಾರಿಯಲ್ಲಿ ಹೋಗುತ್ತಿದ್ದನು. ಯೆಹೂದಿ ಕಟ್ಟಾ ಶುದ್ಧಾಚಾರವು ಈತನು ಒಬ್ಬ ಸತ್ತ ವ್ಯಕ್ತಿಯನ್ನು ಮುಟ್ಟದಂತೆ ನಿಷೇದ ಹೇರಿರಬಹುದು. ಹಾಗಾಗಿ ರಸ್ತೆ ಬಳಿಯಲ್ಲಿ ಬಿದ್ದಿದ್ದ ವ್ಯಕ್ತಿಯು ಸತ್ತು ಹೋಗಿರಬಹುದೆಂಬ ಭಯದಲ್ಲಿ ಆತನು ನಿಲ್ಲುವುದಿಲ್ಲ.

*ಲೇವಿಯನು* (ವ. 32): ಲೇವಿಯನು ಯೆರೂಸಲೇಮಿನ ದೇವಾಲಯದಲ್ಲಿ ಅನೇಕ ಕಾರ್ಯಗಳಲ್ಲಿ ಯಾಜಕರಿಗೆ ಸಹಾಯಕರಾಗಿರುತ್ತಿದ್ದರು. ಹಾಗಾಗಿ ಪ್ರಯಾಣಿಸುತ್ತಿರುವ ಈ ಲೇವಿಯನು ಸಹ ಆ ಯಾಜಕನಂತೆಯೇ ಶುದ್ಧಾಚಾರದ ಸಮಸ್ಯೆ ಎದುರಿಸುತ್ತಾನೆ.

*ಸಮಾರ್ಯದವನು* (ವ. 33): ಸಮಾರ್ಯದವರು ಮಿಶ್ರ ಪರಂಪರೆ ಮತ್ತು ಅವರ ಯಹೂಧ್ಯೇತರ ಧಾರ್ಮಿಕ ಆಚರಣೆಗಳ ನಿಮಿತ್ತ ಯೆಹೂದ್ಯರು ಇವರನ್ನು ಕೀಳಾಗಿ ನೋಡುತ್ತಿದ್ದರು. ಹೊಸ ಒಡಂಬಡಕೆಯ ದಿನಗಳಲ್ಲೇ ಯೆಹೂದ್ಯರು ಮತ್ತು ಸಮಾರ್ಯದವರು ಪರಸ್ಪರ ಬೆರೆಯುತ್ತಿರಲಿಲ್ಲ. ಅಲ್ಲದೇ ಈ ಎರಡು ಸಮುದಾಯಗಳ ನಡುವೆ ಮುಕ್ತವಾಗದ ಹಗೆತನವಿತ್ತು.

*ಅವನ ಗಾಯಗಳಲ್ಲಿ ಎಣ್ಣೆಯನ್ನು ದ್ರಾಕ್ಷಾರಸವನ್ನು ಹೊಯ್ದು* (ವ. 34): ಆ ದಿನಗಳಲ್ಲಿ ಗಾಯಗೊಂಡವರನ್ನು ಈ ರೀತಿ ಆರೈಕೆಮಾಡುತ್ತಿದ್ದರು.

*ಎರಡು ಹಣ* (ವ. 35): ಇದು ಒಬ್ಬ ಕೂಲಿಯವನ ಎರಡು ದಿನದ ಕೂಲಿಗೆ ಸಮನಾಗಿತ್ತು. ಈ ಹಣವು ಗಾಯಗೊಂಡವನನ್ನು ಎರಡು ತಿಂಗಳಗಳವರೆಗೆ ಛತ್ರದಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಕಾಗುವಷ್ಟಾಗಿತ್ತು.

**ಪ್ರಶ್ನೆಗಳು**

1. ಧರ್ಮೋಪದೇಶಕನು ಯೇಸುವಿಗೆ ಕೇಳುವ ಪ್ರಶ್ನೆ ಯಾವುದು (ವ. 25)?
2. ಧರ್ಮೋಪದೇಶಕನ ಪ್ರಶ್ನೆಗೆ ಯೇಸು ಹೇಗೆ ಉತ್ತರಿಸುತ್ತಾನೆ (ವ. 26)?
3. ಧರ್ಮೋಪದೇಶಕನ ಉತ್ತರವು ಹಳೇ ಒಡಂಬಡಿಕೆಯ ಎರಡು ವಚನಗಳನ್ನು ಒಳಗೊಂಡಿತ್ತು. ಆತನು ಯಾವ ಪುಸ್ತಕಗಳನ್ನು ಉಪಯೋಗಿಸುತ್ತಾನೆ (ವ. 27 ಟಿಪ್ಪಣಿ)?
4. ಯೇಸುವು ಧರ್ಮೋಪದೇಶಕನ ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಸಾರಾಂಶದ ಬಗ್ಗೆ ಏನೆಂದು ಯೋಚಿಸುತ್ತಾನೆ ಮತ್ತು ಆತನು ಅವನಿಗೆ ಏನನ್ನು ಮಾಡಲು ಹೇಳುತ್ತಾನೆ (ವ. 28)?
5. ನೆರೆದಿದ್ದ ಜನರ ಮುಂದೆ ತಾನು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ನೆರವೇರಿಸುವ ಒಬ್ಬ ನೀತಿವಂತ ವ್ಯಕ್ತಿಯಾಗಿ ತೋರಿಸಿಕೊಳ್ಳುವುದಕ್ಕಾಗಿ ಆ ಧರ್ಮೋಪದೇಶಕನು ಏನನ್ನು ಮಾಡುತ್ತಾನೆ (ಟಿಪ್ಪಣಿಯೊಂದಿಗೆ ವ. 29).
6. ಯೇಸುವಿನ ಒಳ್ಳೆ ಸಮಾರ್ಯದವನ ಸಾಮ್ಯವು ಯೆಹೂದಿ ಧರ್ಮೋಪದೇಶಕನು ಆತನಿಗೆ ಕೇಳಿದ ಪ್ರಶ್ನೆಗೆ ಕೊಡುವ ಉತ್ತರದಲ್ಲಿ ಹೇಳಲಾಗಿದೆ. ಆ ಪ್ರಶ್ನೆ ಏನಾಗಿತ್ತು (ವ. 29-30)?
7. ಯೆರೂಸಲೇಮಿನಿಂದ ಯೆರಿಕೋವಿಗೆ ಪ್ರಯಾಣಿಸುತ್ತಿದ್ದ ವ್ಯಕ್ತಿಗೆ ಏನಾಯಿತು (ವ. 30)?
8. ಗಾಯಗೊಂಡ ವ್ಯಕ್ತಿಯನ್ನು ಇಬ್ಬರು ಹಾದು ಹೋಗುತ್ತಾರೆ . ಅವರು ಯಾರು (ವ. 31-32)?
9. ಮೂರನೇಯ ವ್ಯಕ್ತಿಯು ಗಾಯಗೊಂಡ ವ್ಯಕ್ತಿಯನ್ನು ದಾಟಿ ಹೋಗದೆ ಅಲ್ಲೇ ನಿಲ್ಲುತ್ತಾನೆ. ಅವನು ಯಾರು (ವ. 33)?
10. ಮೂರನೇಯ ವ್ಯಕ್ತಿಯು ಗಾಯಗೊಂಡವನಿಗೆ ಹೇಗೆ ಸಹಾಯ ಮಾಡುತ್ತಾನೆ (ವ. 34-35)?
11. ಗಾಯಗೊಂಡವನ "ನೆರೆಯವನ" ಕುರಿತಾದ ಯೇಸುವಿನ ಪ್ರಶ್ನೆಗೆ ಧರ್ಮೋಪದೇಶಕನು ಹೇಗೆ ಉತ್ತರಿಸುತ್ತಾನೆ (ವ. 36-37)?
12. ಯೇಸುವು ಧರ್ಮೋಪದೇಶಕನಿಗೆ ಏನನ್ನು ಮಾಡಬೇಕೆಂದು ಹೇಳುತ್ತಾನೆ (ವ. 37)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಧರ್ಮೋಪದೇಶಕನಿಗೆ ಯೇಸುವಿನ ಬುದ್ಧಿವಾದ (ವ. 37) ಮತ್ತು ತನ್ನನ್ನು ನೀತಿವಂತನೆಂಬುದಾಗಿ ತೋರ್ಪಡಿಸಿಕೊಳ್ಳಬೇಕೆಂಬ ಧರ್ಮೋಪದೇಶಕನ ಬಯಕೆಯ (ವ. 29) ನಡುವಿನ ಸಂಬಂಧವನ್ನು ವಿವರಿಸಿರಿ.
2. "ನೀನೂ....ಅದರಂತೆ ಮಾಡು" ಎಂಬ ಯೇಸುವಿನ ಉಪದೇಶದ (ಬುದ್ಧಿವಾದ) ಬಗ್ಗೆ ಧರ್ಮೋಪದೇಶಕನಿಗೆ ಏನು ಅನಿಸಿರಬೇಕೆಂದು ನೀವು ಯೋಚಿಸುವಿರಿ? ಯಾಕೆ ಆತನು ಆ ರೀತಿ ಭಾವಿಸಿರಬೇಕು?
3. ಯಾಕೆ ಒಳ್ಳೇ ಸಮಾರ್ಯನ ಸಾಮ್ಯವು ಸುವಾರ್ತೆಯನ್ನು ಸಾರುವುದಕ್ಕಾಗಿನ ಒಂದು ವಾಕ್ಯಭಾಗಕ್ಕಿಂತ ಸಭೆಯಲ್ಲಿ ಒಂದು ಸತ್ಯವೇದ ಅಧ್ಯಯನಕ್ಕಾಗಿ ಸರಿ ಹೊಂದುವಂತಹ ಒಂದು ಪಠ್ಯವಾಗಿದೆ?

4. ಒಳ್ಳೇ ಸಮಾರ್ಯನ ಸಾಮ್ಯವನ್ನು ಒಳಗೊಂಡು ಇಡೀ ವಾಕ್ಯಭಾಗವನ್ನು (ಲೂಕ 10:25-37) ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದದಲ್ಲಿ ನೋಡಬೇಡಿರಿ. ನಾಟಕೀಯವಾಗಿ ಮತ್ತು ಉತ್ಸಾಹಭರಿತವಾಗಿರ್ರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿ.



## 16. ಮಾರ್ಥಳು ಮತ್ತು ಮರಿಯಳು, ಲೂಕ 10:38-42

### ಪೀಠಿಕೆ ಮತ್ತು ಟಿಪ್ಪಣಿಗಳು

ಇದು ಶಿಷ್ಯತ್ವದ ಕುರಿತಾದ ಒಂದು ಕಥೆಯಾಗಿದೆ. ಯೇಸುವನ್ನು ಹಿಂಬಾಲಿಸುತ್ತೇವೆಂದು ಹೇಳುವ ನಮಗೆ ಒಂದು ಸಂಗತಿ ಅತೀ ಪ್ರಾಮುಖ್ಯವಾದುದ್ದೆಂಬುದಾಗಿ ಯೇಸು ನೆನಪಿಸುತ್ತಾನೆ.

*ಹಳ್ಳಿಗೆ* (ವ. 38): ಎಣ್ಣೇಮರಗಳ ಪೂರ್ವದ ತಪ್ಪಲಿನಲ್ಲಿರುವ ಬೇಥಾನ್ಯ ಎಂಬ ಈ ಹಳ್ಳಿಯು ಯೆರೂಸಲೇಮಿನಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿತ್ತು. ಇದು ಲಾಜರ ಮತ್ತು ಆತನ ಸಹೋದರಿಯರಾದ ಮಾರ್ಥ ಮತ್ತು ಮರಿಯಳ ತವರೂರಾಗಿತ್ತು (ನೋಡಿ ಯೋಹಾನ 12:1-3).

### ಪ್ರಶ್ನೆಗಳು

1. ಈ ಒಂದು ಸಂದರ್ಭದಲ್ಲಿಆತಿಥ್ಯವನ್ನು ಏರ್ಪಡಿಸಿದವರು ಯಾರು?
2. ಮರಿಯಳು ಏನು ಮಾಡಿದಳು (ವ. 38-39)?
3. ಯಾಕೆ ಮಾರ್ಥಳು ತುಂಬ ಕಾರ್ಯನಿರತಳಾಗಿದ್ದಳು (ವ. 40)?
4. ಮಾರ್ಥಳು ಯೇಸುವಿಗೆ ಏನೆಂದು ದೂರಿದಳು ಮತ್ತು ಯೇಸು ಏನು ಮಾಡಬೇಕೆಂದು ಆಕೆ ಬಯಸಿದಳು (ವ. 40)?
5. ಯೇಸು ಮಾರ್ಥಳನ್ನು ಹೇಗೆ ವರ್ಣಿಸುತ್ತಾನೆ (ವ. 41)?
6. ಯೇಸು ಮಾರ್ಥಳಿಗೆ ಏನೆಂದು ಹೇಳುತ್ತಾನೆ (ವ. 42)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. "ಕೆಲವು ಮಾತ್ರ ಬೇಕಾದದ್ದು ಅಥವಾ ಒಂದೇ, ಮರಿಯಳು ಆ ಉತ್ತಮ ಭಾಗವನ್ನು ಆರಿಸಿಕೊಂಡಿದ್ದಾಳೆ", ಎಂಬ ಯೇಸುವಿನ ಮಾತಿನ ಅರ್ಥವೇನಿರಬಹುದೆಂಬುದಾಗಿ ನೀವು ಯೋಚಿಸುವಿರಿ (ವ. 42)?
2. ಈ ಕಥೆಯ ಬೆಳಕಿನಲ್ಲಿ ನಿಮ್ಮನ್ನು ಮೌಲ್ಯಮಾಪನ ಮಾಡಿಕೊಳ್ಳಿರಿ.

## 17. ಯೆಹೂದಿ ನಾಯಕರ ಆರು ಸಂಕಟಗಳು, ಲೂಕ 11:37-54

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ವಾಕ್ಯಭಾಗವು ಒಬ್ಬ ಫರಿಸಾಯನ ಮನೆಯಲ್ಲಿ ಊಟಕ್ಕೆ ಕೂತಿರುವ ವೇಳೆ ಯೇಸು ಮತ್ತು ಯೆಹೂದಿ ನಾಯಕರ ನಡುವೆ ಆದ ಘರ್ಷಣೆಯನ್ನು ವಿವರಿಸುತ್ತದೆ. ಮತ್ತಾಯ 23 ನೇ ಅಧ್ಯಾಯವು ಇದೇ ರೀತಿಯ ವಿಷಯವನ್ನು ಒಂದು ವಿಭಿನ್ನ ಹಿನ್ನಲೆಯಲ್ಲಿ, ಹೆಚ್ಚಿನ ವಿವರದೊಂದಿಗೆ ಒಳಗೊಂಡಿದೆ. ಇಲ್ಲಿ ಯೇಸು ಶಾಸ್ತ್ರಿಗಳು ಮತ್ತು ಫರಿಸಾಯರ ಬೋಧನೆಯ ಬಗ್ಗೆ ತನ್ನ ಶಿಷ್ಯರಿಗೆ ಮತ್ತು ಜನರಿಗೆ ಎಚ್ಚರಿಸುತ್ತಾನೆ.

*ತೊಳಕೊಳ್ಳದೇ ಊಟಕ್ಕೆ ಕೂತದ್ದನ್ನು* (ವ. 38): ಊಟಕ್ಕಿಂತ ಮೊದಲು ಕೈತೊಳೆದುಕೊಳ್ಳಬೇಕೆಂಬ ಆಚಾರವು ಧರ್ಮಶಾಸ್ತ್ರದಲ್ಲಿ ಇರಲಿಲ್ಲ, ಆದರೆ ನಂತರದಲ್ಲಿ ಈ ನಿಯಮವನ್ನು ಫರಿಸಾಯರ ಸಂಪ್ರದಾಯದಲ್ಲಿ ಸೇರಿಸಲಾಯಿತು.

*ಹತ್ತರಲ್ಲೊಂದು ಪಾಲು ಕೊಡುತ್ತೀರಿ* (ವ. 42): ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರಕಾರ ಒಂದು ಕುಟುಂಬವು ತಮ್ಮ ಬೆಳೆಯ ಹತ್ತರಲ್ಲಿ ಒಂದು ಪಾಲನ್ನು ದೇವರಿಗೆ ಕೊಡಬೇಕಾಗಿತ್ತು (ನೋಡಿ ಧರ್ಮೋಪದೇಶಕಾಂಡ 14:22-29).

*ನೆಲಸಮವಾದ ಸಮಾಧಿಗಳು* (ವ. 44): ಯಾವುದೇ ರೀತಿಯಲ್ಲಿ ಒಂದು ಸತ್ತ ಶವವನ್ನು ಮುಟ್ಟಿದರೂ ಸಹ ಅದರಿಂದ ಅಶುದ್ಧರಾಗುತ್ತಿದ್ದರೂ ಯೇಸು ಈ ಉಪಮೇಯವನ್ನು ವ್ಯಂಗ್ಯವಾಗಿ ಫರಿಸಾಯರ ಬಗ್ಗೆ ಉಪಯೋಗಿಸುತ್ತಾನೆ: ಅಂದರೆ ಒಬ್ಬ ಫರಿಸಾಯನ ಸಂಪರ್ಕಕ್ಕೆ ಯಾರಾದರೂ ಬಂದರೆ ಅವರು ಆತ್ಮೀಕವಾಗಿ ಅಶುದ್ಧರಾಗುತ್ತಿದ್ದರು.

*ದೇವರ ಜ್ಞಾನವು ಹೇಳಿದ್ದೇನೆಂದರೆ* (ವ. 49): ಯೇಸು ಯಾವುದೇ ಹಳೇ ಒಡಂಬಡಿಕೆಯ ಹೇಳಿಕೆಯನ್ನು ಉಪಯೋಗಿಸುವುದಿಲ್ಲ. ಹಾಗಾಗಿ ಯೇಸು ಇಲ್ಲಿ ಐತಿಹಾಸಿಕ ಸತ್ಯವೊಂದನ್ನು ಒಂದು ಹೇಳಿಕೆಯ ರೂಪದಲ್ಲಿ ಮುಂದಿಡುತ್ತಿದ್ದಾನೆಂಬುದಾಗಿ ಈ ಮಾತಿನಿಂದ ನಾವು ತಿಳುದುಕೊಳ್ಳಬಹುದು. ಅವರು ತಿರಸ್ಕರಿಸಲ್ಪಡುತ್ತಾರೆಂಬುದು ತಿಳಿದಿದ್ದರೂ ಸಹ ದೇವರು ಪ್ರವಾದಿಗಳನ್ನು ಮತ್ತು ಅಪೊಸ್ತಲರನ್ನು ಕಳುಹಿಸಲು ನಿರ್ಧರಿಸಿದನು.

*ಹೇಬೆಲನ ರಕ್ತವು ಮೊದಲುಗೊಂಡು ಜಕರೀಯನ ರಕ್ತದವರೆಗೂ* (ವ. 51): ಹೇಬೆಲನ ಕೊಲೆಯು ಇಬ್ರಿಯ ಸತ್ಯವೇದದ ಮೊದಲ ಪುಸ್ತಕದಲ್ಲಿ (ಆದಿ. 4:8) ಕಂಡುಬಂದರೆ, ಜಕರೀಯನ ಕೊಲೆಯು ಇಬ್ರಿಯ ಸತ್ಯವೇದದ ಕೊನೆಯ ಪುಸ್ತಕದಲ್ಲಿ (2 ಪೂರ್ವಕಾಲ ವೃತ್ತಾಂತ 24:21) ಕಂಡುಬರುತ್ತದೆ. ಹೀಗೆ ಯೇಸು ಪ್ರಾರಂಭದಿಂದ ಕೊನೆಯವರೆಗಿನ ಹಳೇ ಒಡಂಬಡಿಕೆಯ ರಕ್ತ ಸಾಕ್ಷಿಯ ಚರಿತ್ರೆಯನ್ನು ಸಾರಂಶಗೊಳಿಸುತ್ತಾನೆ.

*ಜ್ಞಾನಕ್ಕೆ ಸಾಧನವಾದ ಬೀಗದ ಕೈಯನ್ನು ತೆಗೆದುಬಿಟ್ಟಿರಿ* (ವ. 52): ಯೆಹೂದಿ ನಾಯಕರು ಜನರ ಮನಸ್ಸನ್ನು ಧರ್ಮಶಾಸ್ತ್ರದೆಡೆಗೆ ತೆರೆಯಬಹುದಾಗಿತ್ತು. ಬದಲಾಗಿ ಧರ್ಮಶಾಸ್ತ್ರದ ಅವರ ವ್ಯಾಖ್ಯಾನವು ಜನರನ್ನು ತಪ್ಪು ದಾರಿಗೆ ನಡೆಸಿತು. ನಾಯಕರುಗಳು ರಕ್ಷಣೆಯ ಮಾರ್ಗದ ಬಗ್ಗೆ ತಮ್ಮನ್ನು ಮತ್ತು ತಮ್ಮ ಜನರನ್ನು ಕತ್ತಲೆಯಲ್ಲಿರಿಸಿದರು. ಮತ್ತಾಯದಲ್ಲಿನ ಸಮಾನಾರ್ಥಕ ಪಠ್ಯವೊಂದರಲ್ಲಿ ಯೇಸು ಹೀಗೆ ಹೇಳುತ್ತಾನೆ “ಪರಲೋಕ ರಾಜ್ಯದ ಬಾಗಿಲನ್ನು ಮನುಷ್ಯರ ಎದುರಿಗೆ ಮುಚ್ಚಿಬಿಡುತ್ತೀರಿ. ನೀವಂತೂ ಒಳಕ್ಕೆ ಹೋಗುವುದಿಲ್ಲ, ಒಳಕ್ಕೆ ಹೋಗಬೇಕೆಂದಿರುವವರನ್ನೂ ಹೋಗಗೊಡಿಸುವುದಿಲ್ಲ” (ಮತ್ತಾ. 23:13).

### ಪ್ರಶ್ನೆಗಳು

1. ಈ ವಾಕ್ಯಭಾಗದ ಸಂದರ್ಭವೇನಾಗಿದೆ (ವ. 37)?
2. ಯಾಕೆ ಫರಿಸಾಯನು ಯೇಸುವಿನ ಬಗ್ಗೆ ಆಶ್ಚರ್ಯಪಟ್ಟನು (ವ. 38)?
3. ಯೇಸು ಫರಿಸಾಯನನ್ನು ಯಾಕೆ ದೂರುತ್ತಾನೆ (ವ. 39-41)?

4. ಫರಿಸಾಯನಿಗೆ ಏನನ್ನು ಮಾಡಬೇಕೆಂದು ಯೇಸು ಹೇಳುತ್ತಾನೆ (ವ. 39-41)?
5. ಮೊದಲ ಮೂರು ಸಮಸ್ಯೆಗಳಲ್ಲಿ ಯೇಸು ಯಾರನ್ನು ಸಂಭೋಧಿಸುತ್ತಾನೆ (ವ. 38-44)?
6. ಮೊದಲ ಸಮಸ್ಯೆಯು ಯಾವುದರ ಕುರಿತಾಗಿದೆ (ವ. 42)?
7. ಎರಡನೇಯ ಸಮಸ್ಯೆಯು ಯಾವುದರ ಕುರಿತಾಗಿದೆ (ವ. 43)?
8. ಮೂರನೇಯ ಸಮಸ್ಯೆಯು ಯಾವುದರ ಕುರಿತಾಗಿದೆ (ವ. 44)?
9. ಯಾವುದಕ್ಕಾಗಿ ಧರ್ಮೋಪದೇಶಕನು ಯೇಸುವನ್ನು ದೂರುತ್ತಾನೆ (ವ. 45)?
10. ಕೊನೆಯ ಮೂರು ಸಮಸ್ಯೆಗಳಲ್ಲಿ ಯೇಸು ಯಾರನ್ನು ಸಂಭೋಧಿಸುತ್ತಾನೆ (ವ. 46-52)?
11. ನಾಲ್ಕನೇಯ ಸಮಸ್ಯೆಯು ಯಾವುದರ ಕುರಿತಾಗಿದೆ (ವ. 46)?
12. ಐದನೇಯ ಸಮಸ್ಯೆಯು ಯಾವುದರ ಕುರಿತಾಗಿದೆ (ವ. 47-51)?
13. ಆರನೇಯ ಸಮಸ್ಯೆಯು ಯಾವುದರ ಕುರಿತಾಗಿದೆ (ವ. 52)?
14. ಯೇಸು ಮತ್ತು ಯೆಹೂದಿ ನಾಯಕನ ನಡುವಿನ ಮುಖಾಮುಖಿಯ ಪರಿಣಾಮವೇನಾಯಿತು (ವ. 53-54)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ವಾಕ್ಯಭಾಗದಲ್ಲಿ ಯೇಸು (ವ. 37-54) ಕಟ್ಟಾ ಧಾರ್ಮಿಕ ವ್ಯಕ್ತಿಗಳ ಕೆಲವು ಸಾಮಾನ್ಯ ಪಾಪ ಸ್ವಭಾವಗಳನ್ನು ಹೊರಗೆಡವುತ್ತಾನೆ. ಆ ಪಾಪಗಳ ಪಟ್ಟಿ ಮಾಡಿರಿ.
2. ಈ ವಾಕ್ಯಭಾಗದ ಬೆಳಕಿನಲ್ಲಿ ನಿಮ್ಮನ್ನೇ ಮೌಲ್ಯಮಾಪನ ಮಾಡಿಕೊಳ್ಳಿರಿ. ಈ ಯಾವುದಾದರೂ ಕ್ಷೇತ್ರಗಳಲ್ಲಿ ನೀವು ಯೆಹೂದಿ ನಾಯಕರಂತಿರುವಿರಾ? ಹಾಗಿದ್ದರೆ ಅದರ ಬಗ್ಗೆ ಏನನ್ನು ಮಾಡಬೇಕೆಂದು ನೀವು ಯೋಚಿಸುವಿರಿ?



## 18. ಬುದ್ಧಿಹೀನ (ಬುದ್ಧಿಯಿಲ್ಲದ) ಐಶ್ವರ್ಯವಂತನು, ಲೂಕ 12:13-21

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸು ಆ ಐಶ್ವರ್ಯವಂತನನ್ನು "ಬುದ್ಧಿಹೀನನು ನೀನು" ಎಂದು ಕರೆಯುತ್ತಾನೆ. ತನ್ನಲ್ಲಿ ಸಾಕಷ್ಟು ಆಸ್ತಿ – ಸಂಪತ್ತಿದೆ ಎಂದು ಯೋಚಿಸಿದ ಮತ್ತು ಬರೀ ಐಶ್ವರ್ಯವಂತನಲ್ಲದೆ ಆಸೆಬುರುಕನಾದ ಒಬ್ಬ ಮನುಷ್ಯನ ಕುರಿತಾದ ದೇವರ ಮೌಲ್ಯಮಾಪನ ಇದಾಗಿದೆ.

*ಆಸ್ತಿಯನ್ನು ಪಾಲು ಮಾಡಿ* (ವ. 13): ಹಳೇ ಒಡಂಬಡಿಕೆಯ ಶಾಸ್ತ್ರದ ಪ್ರಕಾರ ಹಿರಿಯ ಮಗನು ತಂದೆಯ ಆಸ್ತಿಯಲ್ಲಿ ಎರಡರಷ್ಟು ಪಾಲನ್ನು ಹೊಂದುತ್ತಿದ್ದನು (ನೋಡಿ ಧರ್ಮೋ. 21:17).

*ವಿಶ್ರಮಿಸಿಕೋ, ಊಟ ಮಾಡು, ಕುಡಿ* (ವ. 19): ಗೋಳಾಡಬೇಕಾದ ಸಮಯದಲ್ಲಿ ಜನರ ಸ್ವಭಾವವನ್ನು ದೇವರು ಈ ರೀತಿ ವರ್ಣಿಸಿದ್ದಾನೆ (ನೋಡಿ ಯೆಶಾಯ 22:13).

ವಚನ 21: ಗ್ರೀಕ್ ಪಠ್ಯವು ಎರಡು ಹೇಳಿಕೆಗಳನ್ನು "ತನಗೋಸ್ಕರ" ಮತ್ತು "ದೇವರ ವಿಷಯಗಳಲ್ಲಿ" ತದ್ವಿರುದ್ಧವಾಗಿ ತೋರಿಸುತ್ತದೆ. ಪರ್ವತ ಪ್ರಸಂಗದಲ್ಲಿನ ಯೇಸುವಿನ ಮಾತುಗಳೊಂದಿಗೆ ಹೋಲಿಸಿರಿ (ಮತ್ತಾ. 6:19-20).

### ಪ್ರಶ್ನೆಗಳು

1. ಒಬ್ಬನು ಯೇಸುವಿನ ಬಳಿಗೆ ತಂದ ಮನವಿಯೇನು (ವ. 13)?
2. ಆ ಮನುಷ್ಯನ ಮನವಿಯನ್ನು ಯೇಸು ಹೇಗೆ ನಿಭಾಯಿಸುತ್ತಾನೆ (ವ. 14)?
3. ಯೇಸು ಜನರಿಗೆ ಯಾವುದಕ್ಕೆ ಎಚ್ಚರಿಕೆಯಾಗಿರಬೇಕೆಂದು ಹೇಳುತ್ತಾನೆ (ವ. 15)?
4. ಈ ವಾಕ್ಯಭಾಗದಲ್ಲಿ ನಾವು ಯಾವ ಪ್ರಕಾರದ ಸಾಹಿತ್ಯದ ಶೈಲಿಯನ್ನು ಕಾಣುತ್ತೇವೆ (ವ. 16)?
5. ಐಶ್ವರ್ಯವಂತನು ಯಾವ ಸಮಸ್ಯೆಯನ್ನು ಎದುರಿಸುತ್ತಾನೆ ಮತ್ತು ತನ್ನ ಸಮಸ್ಯೆಯ ಬಗ್ಗೆ ಆತನು ಏನನ್ನು ಮಾಡುತ್ತಾನೆ (ವ. 17-18)?
6. ಐಶ್ವರ್ಯವಂತನು ತನ್ನ ಪರಿಸ್ಥಿತಿಯನ್ನು ಹೇಗೆ ಮೌಲ್ಯಮಾಪನ ಮಾಡುತ್ತಾನೆ (ವ. 19)?
7. ಈ ಮನುಷ್ಯನಿಗಾಗಿನ ದೇವರ ಸಂದೇಶವೇನು (ವ. 20)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಬುದ್ಧಿಯಿಲ್ಲದ ಐಶ್ವರ್ಯವಂತನ ಸಾಮ್ಯವು (ವ. 16-21) ಯಾವ ಆತ್ಮೀಕ ಸತ್ಯವನ್ನು ತಿಳಿಸುತ್ತದೆ?
2. ಐಶ್ವರ್ಯವಂತನನ್ನು ಮೌಲ್ಯಮಾಪನ ಮಾಡಿರಿ.
3. ಈ ವಾಕ್ಯಭಾಗದ ಬೆಳಕಿನಲ್ಲಿ ನಿಮ್ಮನ್ನೇ ಮೌಲ್ಯಮಾಪನ ಮಾಡಿಕೊಳ್ಳಿರಿ.

## 19. ಇಕ್ಕಟ್ಟಾದ ಬಾಗಿಲು, ಲೂಕ 13:22-30

### ಪೀಠಿಕೆ ಮತ್ತು ಟಿಪ್ಪಣಿಗಳು

ಪರಲೋಕ ರಾಜ್ಯಕ್ಕೆ ಹೋಗುವ ಬಾಗಿಲನ್ನು ಯೇಸು "ಇಕ್ಕಟ್ಟಾದ ಬಾಗಿಲು" ಎಂಬುದಾಗಿ ವರ್ಣಿಸುತ್ತಾನೆ. ರಕ್ಷಣೆಯನ್ನು ಹೊಂದುವುದು "ಕಷ್ಟ" ಎಂಬುದಾಗಿ ಅರ್ಥೈಸಿಕೊಳ್ಳಬೇಕಾದ ಅವಶ್ಯಕತೆಯಿಲ್ಲ. ಆದರೆ ಒಬ್ಬ ವ್ಯಕ್ತಿಯು ಯಾವಾಗ ಮತ್ತು ಹೇಗೆ ರಕ್ಷಿಸಲ್ಪಡುವನು ಎಂಬ ಷರತ್ತಿಗನುಗುಣವಾಗಿರುತ್ತದೆ.

*ಊರೂರಿಗೂ ಗ್ರಾಮಗ್ರಾಮಕ್ಕೂ* (ವ. 22): ಈ ಸಮಯದಲ್ಲಿ ಯೇಸು ಬಹುಶಃ ಯೊರ್ದನ್ ಹೊಳೆಯ ಪೂರ್ವಕ್ಕಿರುವ ಪೆರಿಯದ ಮೂಲಕ ಹಾದು ಹೋಗುತ್ತಿದ್ದಿರಬಹುದು (***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನ್ ನಕ್ಷೆ*** ನೋಡಿರಿ).

*ಸ್ವಾಮಿ, ರಕ್ಷಣೆ ಹೊಂದುವವರು ಸ್ವಲ್ಪ ಜನರೋ* (ವ. 22): ಈ ಪ್ರಶ್ನೆಯ ಬಗ್ಗೆ ಯೆಹೂದಿ ರಬ್ಬಿಗಳು ಆ ದಿನಗಳಲ್ಲಿ ವಿಭಿನ್ನವಾದ ಅಭಿಪ್ರಾಯಗಳನ್ನು ಹೊಂದಿದ್ದರು. ಬಹುಶಃ ಈ ಸಂದರ್ಭದಲ್ಲಿ ಈ ಪ್ರಶ್ನೆಯನ್ನು ಕೇಳಿದ ವ್ಯಕ್ತಿಯು ಬಹುದೊಡ್ಡ ಜನಸಮೂಹ ಯೇಸುವನ್ನು ಹಿಂಬಾಲಿಸುತ್ತಿದ್ದರು ಮತ್ತು ಯೇಸು ಅನೇಕ ಸ್ವಸ್ಥತೆಯ ಅದ್ಭುತಗಳನ್ನು ಮಾಡಿದ್ದರ ಹೊರತಾಗಿಯೂ ಯಾಕೆ ಕೇವಲ ಕೆಲವು ಮಂದಿ ಮಾತ್ರ ಯೇಸುವಿನ ಯಥಾರ್ಥ ಹಿಂಬಾಲಕರಾಗುವುದಕ್ಕಾಗಿ ತಮ್ಮನ್ನು ಒಪ್ಪಿಸಿಕೊಟ್ಟಿದ್ದಾರಲ್ಲಾ ಎಂಬುದಾಗಿ ಆಶ್ಚರ್ಯಗೊಂಡಿದ್ದನು.

*ಇಕ್ಕಟ್ಟಾದ ಬಾಗಿಲು* (ವ. 24): ಹೊಸ ಒಡಂಬಡಿಕೆಯಲ್ಲಿ "ಬಾಗಿಲನ್ನು" ಹೆಚ್ಚಾಗಿ ಅಲಂಕಾರಿಕ ರೂಪದಲ್ಲಿ ಬಳಸಲಾಗಿದೆ. ಯೋಹಾನನ ಸುವಾರ್ತೆಯಲ್ಲಿ ಯೇಸು ತನ್ನನ್ನು "ಬಾಗಿಲು" ಎಂಬುದಾಗಿ ಹೇಳಿದ್ದಾನೆ (ಯೋಹಾನ 10:1, 2, 7). ಪ್ರಸ್ತುತ ಹಿನ್ನಲೆಯು ಎಷ್ಟು ಜನರು ರಕ್ಷಣೆ ಹೊಂದುವವರು ಎಂಬುದರ ಕುರಿತ ಆ ವ್ಯಕ್ತಿಯ ಪ್ರಶ್ನೆಯಾಗಿದೆ. ರಕ್ಷಣೆಯ ಮಾರ್ಗ(ಬಾಗಿಲು)ವು ಇಕ್ಕಟ್ಟಾಗಿದೆ ಎಂಬುದಾಗಿ ಯೇಸು ಎರಡು ರೀತಿಯಲ್ಲಿ ಉತ್ತರಿಸುತ್ತಾನೆ. ಮೊದಲನೆಯದಾಗಿ ಅದು ಸೀಮಿತ ಕಾಲದ್ದಾಗಿದೆ, ಯಾಕೆಂದರೆ ಅದರೊಳಗೆ "ಈಗಲೇ" ಪ್ರವೇಶಿಸಬೇಕಿದೆ (ಈ ಪ್ರಸ್ತುತ ಕಾಲದಲ್ಲಿ). ಎರಡನೆಯದಾಗಿ ಹೇಗೆ ಇದನ್ನು ಪ್ರವೇಶಿಸುತ್ತೇವೆಂಬ ಗೌರವದೊಂದಿಗೆ ಸಹ ಇದು ಸೀಮಿತವಾದುದ್ದಾಗಿದೆ. ಪರಲೋಕ ರಾಜ್ಯದೊಳಕ್ಕೆ ಪ್ರವೇಶಿಸಲು ಇರುವ ಏಕೈಕ ಮಾರ್ಗವೆಂದರೆ, ಸ್ವತಃ ಬಾಗಿಲಾಗಿರುವ ಯೇಸುವಿನ ಮೂಲಕ ಮಾತ್ರವಾಗಿದೆ.

*ನಿಮ್ಮ ಗುರುತು ನನಗಿಲ್ಲ* (ವ. 25, 27): ಮತ್ತಾಯ 7:23 ಮತ್ತು ಮತ್ತಾ. 25:12 ರೊಂದಿಗೆ ಹೋಲಿಸಿ.

*ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ದಿಕ್ಕುಗಳಿಂದಲೂ ಜನರು ಬಂದು ದೇವರ ರಾಜ್ಯದಲ್ಲಿ ಊಟಕ್ಕೆ ಕೂಡ್ರುವರು* (ವ. 29): ದೇವರು ಮತ್ತು ಆತನ ಜನರ ನಡುವಿನ ಭವಿಷ್ಯದ ಅನ್ಯೋನ್ಯತೆಯ ಆಶೀರ್ವಾದವನ್ನು ಸೂಚಿಸುವ (ಹೋಲಿಸಿ 14:15 ಮತ್ತು ಮತ್ತಾ. 8:11) ಮೆಸ್ಸೀಯನ ಔತಣ ಕೂಟದಲ್ಲಿ ಜಗತ್ತಿನ ಎಲ್ಲಾ ಕಡೆಯ ಜನರು ಭಾಗವಹಿಸುವರು (ಹೋಲಿಸಿ ಕೀರ್ತನೆ 107:3).

### ಪ್ರಶ್ನೆಗಳು

1. ಈ ವಾಕ್ಯಭಾಗ್ಯದ ಸಂದರ್ಭವೇನಾಗಿದೆ (ವ. 22)?
2. ಈ ವಾಕ್ಯಭಾಗದಲ್ಲಿ ಯೇಸುವಿಗೆ ಕೇಳಿದ ಪ್ರಶ್ನೆಯೇನು (ವ. 23)?
3. ಬಾಗಿಲನ್ನು ಯೇಸು ಹೇಗೆ ವರ್ಣಿಸಿದ್ದಾನೆ (ವ. 24)?
4. ಈ ಬಾಗಿಲಿಗೆ ಏನಾಗುತ್ತದೆ(ವ. 25)?
5. ಯಾಕೆ ಮನೆ ಯಜಮಾನನು ಬಾಗಿಲನ್ನು ತೆರೆಯಲು ನಿರಾಕರಿಸುತ್ತಾನೆ (ವ. 25-27)?
6. ಮುಚ್ಚಿದ ಬಾಗಿಲ ಬಳಿಯಲ್ಲಿ ನಿಂತಜನರು ಯಾಕೆ ತಾವು ಒಳಗೆ ಹೋಗಲು ಅನುಮತಿಸಬೇಕೆಂದು ಯೋಚಿಸುತ್ತಾರೆ (ವ. 26)?

7. ಬಾಗಿಲನ್ನು ಹಾಕಿದ ನಂತರವೂ ಅದರೊಳಗೆ ಹೋಗಬೇಕೆಂದು ಪ್ರಯತ್ನಿಸುವ ಜನರನ್ನು ಯಜಮಾನನು ಹೇಗೆ ವರ್ಣಿಸುತ್ತಾನೆ (ವ. 27)?
8. ವಚನ 28 ರಲ್ಲಿ ಯಾವ ಎರಡು ಗುಂಪಿನ ಜನರು ತದ್ವಿರುದ್ಧವಾಗಿದ್ದಾರೆ?
9. ಪರಲೋಕರಾಜ್ಯದಲ್ಲಿ ಊಟಕ್ಕೆ ಕೂಡ್ರುವವರನ್ನು ಹೇಗೆ ವರ್ಣಿಸಲಾಗಿದೆ (ವ. 29)?
10. ಮೊದಲನೆಯವರಾಗಬೇಕಿದ್ದವರಿಗೆ ಏನಾಯಿತು (ವ. 30)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಎಷ್ಟು ಜನರು ರಕ್ಷಿಸಲ್ಪಡುವವರು ಎಂಬುದರ ಕುರಿತಾದ ಒಬ್ಬ ವ್ಯಕ್ತಿಯ ಪ್ರಶ್ನೆಗೆ ಯೇಸು ಹೇಗೆ ಉತ್ತರಿಸುತ್ತಾನೆ?
2. ಯಾವ ರೀತಿಯಲ್ಲಿ ರಕ್ಷಣೆಯ ಬಾಗಿಲು "ಇಕ್ಕಟ್ಟಾಗಿದೆ' ಎಂಬುದನ್ನು ವಿವರಿಸಿರಿ?
3. ವಚನ 29-30 ರಲ್ಲಿ "ಇಗೋ ನೀವು" ಎಂಬುದಾಗಿ ಯೇಸು ಯಾರನ್ನು ಸೂಚಿಸಿ ಹೇಳುತ್ತಿದ್ದಾನೆ?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯನದಲ್ಲಿ ತಿಳಿಸಲಾದ ವಿಷಯ/ಮಾಹಿತಿಗಳ ಬೆಳಕಿನಲ್ಲಿ ಲೂಕ 13:22-30 ನ್ನು ವಿಮರ್ಶಿಸಿರಿ. ಅನಂತರ ***ಇಕ್ಕಾಟ್ಟಾದ ಬಾಗಿಲು*** ಎಂಬ ಧ್ಯಾನ( ಸತ್ಯವೇದ ಅಧ್ಯಯನ ಅಥವಾ ಪ್ರಸಂಗ)ವನ್ನು ಸಿದ್ಧಪಡಿಸಿರಿ.



## 20. ಕಳೆದುಹೋದ ಮತ್ತು ತಿರುಗಿ ಕಂಡುಕೊಂಡ ಮೂರು ಸಾಮ್ಯಗಳು, ಲೂಕ ಅಧ್ಯಾಯ 15

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸು ತನ್ನನ್ನು ಪಾಪಿಗಳೊಂದಿಗೆ ಒಡನಾಟ ಮಾಡುತ್ತೇನೆಂದು ದೂಷಿಸುವ ಫರಿಸಾಯರಿಗೆ ಮತ್ತು ಶಾಸ್ತ್ರಿಗಳಿಗೆ ಈ ಅಧ್ಯಾಯದಲ್ಲಿ ಮೂರು ಸಾಮ್ಯಗಳನ್ನು ಹೇಳುತ್ತಾನೆ. ಸಾಮ್ಯಗಳೆಲ್ಲವೂ ಸಹ "ಕಳೆದುಕೊಂಡು ತಿರುಗಿ ಪಡಕೊಂಡದ್ದು" ಎಂಬ ರೀತಿಯ ವಿಷಯ ವಸ್ತುವಿನ ಮೇಲಿವೆ:

1. ಕಳೆದು ಹೋದ ಕುರಿಯ ಸಾಮ್ಯ, ವ. 3-7 ( ಮತ್ತಾಯನೂ ತನ್ನ ಸುವಾರ್ತೆಯಲ್ಲಿ ಈ ಸಾಮ್ಯವನ್ನು ಸೇರಿಸಿದ್ದಾನೆ, 18;12-14)
2. ಕಳೆದುಹೋದ ಪಾವಲಿಯ ಸಾಮ್ಯ, ವ. 8-10
3. ಕಳೆದುಹೋದ ಮಗನ ಸಾಮ್ಯ, ವ. 11-32

*ಸುಂಕದವರೂ ಪಾಪಿಗಳೂ* (ವ. 1): ಸುಂಕದವರು ಯೆಹೂದಿ ಸಮುದಾಯದಿಂದ ದ್ರೋಹಿಗಳೆಂಬುದಾಗಿ ಪರಿಗಣಿಸಲ್ಪಡುತ್ತಿದ್ದರು. ರೋಮನ್ ನಿವಾಸಿಗಳ ಪರವಾಗಿ ತಮ್ಮ ಸ್ವಂತ ಜನರಿಂದ ತೆರಿಗೆ ವಸೂಲಿ ಮಾಡುವ ಅವರ ಕೆಲಸವನ್ನು ಅಪ್ರಾಮಾಣಿಕತೆ ಮತ್ತು ಅನೈತಿಕವೆಂಬುದಾಗಿ ಕಾಣಲಾಗುತ್ತಿತ್ತು. ಯೆಹೂದಿ ನಾಯಕರುಗಳು ಇವರನ್ನು ತಮ್ಮ ಜೀವನ ಶೈಲಿಯು ಹಳೇ ಒಡಂಬಡಿಕೆಯ ಆಜ್ಞೆಗಳಿಗೆ ಅನುಸಾರವಾಗಿರದ ಪಾಪಿಗಳ ಗುಂಪಿಗೆ ಸೇರಿಸಿದರು.

*ಅವರ ಜೊತೆಯಲ್ಲಿ ಊಟಮಾಡುತ್ತಾನೆ* (ವ. 2): ಒಬ್ಬರೊಂದಿಗೆ ಊಟ ಮಾಡುವುದು ನೀವು ಅವರೊಂದಿಗೆ ಒಡನಾಟ ಹೊಂದಿ, ಆ ವ್ಯಕ್ತಿಯನ್ನು ಒಪ್ಪಿಕೊಂಡು ಅವರೊಂದಿಗೆ ನೀವು ಸ್ನೇಹಿತರಾಗಿದ್ದೀರೆಂಬುದಾಗಿ ಅರ್ಥೈಸುತ್ತಿತ್ತು.

*ದೇವರ ಕಡೆಗೆ ತಿರುಗಿಕೊಳ್ಳುವುದಕ್ಕೆ ಅವಶ್ಯವಿಲ್ಲದ* (ವ. 7): ಫರಿಸಾಯರು ತಾವು ನೀತಿವಂತರು ತಮಗೆ ಪಶ್ಚಾತ್ತಾಪ ಪಡಬೇಕಾದ ಅವಶ್ಯಕತೆಯಿಲ್ಲ ಎಂಬುದಾಗಿ ಪರಿಗಣಿಸಿದ್ದರು. ಆದರೆ ದೇವರ ಮುಂದೆ ಯಾರೂ ಸಹ ನೀತಿವಂತರಲ್ಲ (ನೋಡಿ ರೋಮಾ. 3:10), ಅವರೂ ಸಹ ಪಾಪಿಗಳು ಮತ್ತು ಸುಂಕದವರಂತೆ ಮನತಿರುಗಿಸಬೇಕಾಗಿದೆ.

*ಎಚ್ಚರದಿಂದ ಹುಡುಕದೆ* (ವ. 8): ಆ ದಿನಗಳಲ್ಲಿ ಹೆಚ್ಚಿನ ಮನೆಗಳ ನೆಲವು ಮಣ್ಣಿನಿಂದ ಮಾಡಿದ್ದು ಅವುಗಳಿಗೆ ಯಾವುದೇ ಕಿಟಕಿಗಳಿರಲಿಲ್ಲ. ಹಾಗಾಗಿ ನೆಲದ ಮೇಲೆ ಬಿದ್ದ ಪಾವಲಿಯನ್ನು ಹುಡುಕುವುದು ಅಷ್ಟು ಸುಲಭವಾಗಿರಲಿಲ್ಲ.

*ತಂದೆಯು ಬದುಕನ್ನು ಅವರಿಗೆ ಹಂಚಿಕೊಟ್ಟನು* (ವ. 12-13): ತಂದೆಯು ತನ್ನ ಆಸ್ತಿಯನ್ನು ಭಾಗ ಮಾಡಿಕೊಟ್ಟಿರಬಹುದು (ಹಿರಿಯ ಮಗನಿಗೆ ಎರಡು ಪಾಲು ಸಿಗುತ್ತಿತ್ತು). ಆದರೆ ಆತನು ತಾನು ಸಾಯುವವರೆಗೂ ಆ ಆಸ್ತಿಯ ಆದಾಯವನ್ನು ಆತನೇ ಇಟ್ಟುಕೊಳ್ಳಬಹುದಾಗಿತ್ತು. ಕೋರಿಕೆಯ ಮೇರೆಗೆ ಕಿರಿಯ ಮಗನಿಗೆ ತನ್ನ ಆಸ್ತಿಯಿಂದ ಪಾಲನ್ನು ಕೊಡುವುದು ಅಷ್ಟು ಸಮಂಜಸವಾಗಿರಲಿಲ್ಲ.

*ಕಿರೀ ಮಗನು ಎಲ್ಲಾ ಕೂಡಿಸಿಕೊಂಡು ದೂರದೇಶಕ್ಕೆ ಹೊರಟು ಹೋಗಿ* (ವ. 13): ಆತನು ತನ್ನ ತಂದೆಯ ಅಧಿಕಾರದಿಂದ ಸ್ವತಂತ್ರನಾಗಿ ತನಗಿಷ್ಟ ಬಂದಂತೆ ತನ್ನ ಕುಟುಂಬದ ಸಂಪತ್ತಿನ ಪಾಲನ್ನು ವ್ಯಯಿಸಬೇಕೆಂದಿದ್ದನು. ಆತನ ಕ್ರಿಯಗಳೇ ಆತನ ಸ್ವಾರ್ಥ ಉದ್ದೇಶ ಮತ್ತು ನಿಷ್ಕಾಳಜಿಯ ವ್ಯಕ್ತಿತ್ವವನ್ನು ತೋರ್ಪಡಿಸುತ್ತವೆ. ಬಿಟ್ಟು ಹೋದ ನಂತರ ತಿರುಗಿ ಬಂದಾಗ ಆತನಿಗೆ ಏನೂ ಇರಲಿಲ್ಲ.

*ಹಂದಿಗಳನ್ನು ಮೇಯಿಸುವುದಕ್ಕೆ* (ವ. 15): ಆತನು ಎಷ್ಟು ಹತಾಶನಾದನೆಂಬುದನ್ನು ಈ ಕೆಲಸವೇ ತೋರಿಸುತ್ತದೆ. ಹಂದಿಗಳು ಯೆಹೂದ್ಯರಿಗೆ ಅಶುದ್ಧವಾದ ಪ್ರಾಣಿಗಳಾಗಿದ್ದವು (ನೋಡಿ ಯಾಜಕ. 11:7).

*ಶ್ರೇಷ್ಠವಾದ ನಿಲುವಂಗಿ … ಕೈಗೆ ಉಂಗುರ … ಕಾಲಿಗೆ ಜೋಡು … ಕೊಬ್ಬಿದ ಕರು …* (ವ. 22-23): ಇವೆಲ್ಲವೂ ಸ್ವಾಗತ ಮತ್ತು ಸ್ವೀಕಾರದ ಸಂಕೇತಗಳಾಗಿವೆ (ಫರೋಹನು ಯೋಸೇಫನನ್ನು ಹೇಗೆ ಮಾನ್ಯತೆ ಕೊಟ್ಟನೆಂಬುದನ್ನು ಹೋಲಿಸಿರಿ ಆದಿಕಾಂಡ 41:42). ನಿಲುವಂಗಿಯು ಭಿನ್ನತೆಯ ಸಂಕೇತವಾಗಿದೆ. ಕೈ ಉಂಗುರವು ಅಧಿಕಾರವನ್ನು ಸೂಚಿಸುತ್ತದೆ. ಜೋಡುಗಳು ಪುತ್ರತ್ವದ ಸಂಕೇತವಾಗಿವೆ (ದಾಸರುಗಳು ಬರೀಕಾಲಿನಲ್ಲಿ ನಡೆಯುತ್ತಿದ್ದರು). ಕೊಬ್ಬಿದ ಕರುವನ್ನು ವಿಶೇಷವಾದ ಸಂದರ್ಭಗಳನ್ನು ಆಚರಿಸುವುದಕ್ಕಾಗಿ ಇಡಲಾಗುತ್ತಿತ್ತು.

*ಆಡನ್ನಾದರೂ* (ವ. 29): ಆ ದಿನಗಳಲ್ಲಿ ಆಡಿನ ಮಾಂಸವು ಕೊಬ್ಬಿದ ಕರುವಿನ ಮಾಂಸಕ್ಕಿಂತ ಸರಳವಾದ ಆಹಾರವಾಗಿತ್ತು.

*ಈ ನಿನ್ನ ಮಗನು….ಈ ನಿನ್ನ ತಮ್ಮ* (ವ. 30, 32): ಹಿರೀ ಅಣ್ಣನು ಬಹಳವಾಗಿ ಕುಪಿತಗೊಂಡು, ದ್ವೇಷವುಳ್ಳವನಾಗಿ ಹಿಂತಿರುಗಿ ಬಂದವನನ್ನು "ನನ್ನ ತಮ್ಮ" ನೆಂದು ಕರೆಯಲು ಸಹ ನಿರಾಕರಿಸಿದನು. ಆದರೆ ಅವರ ತಂದೆಯು ಆತನಿಗೆ ಅವರ ಭ್ರಾತೃತ್ವವನ್ನು ನೆನಪಿಸುತ್ತಾನೆ.

**ಪ್ರಶ್ನೆಗಳು**

1. ಯೇಸುವಿನ ಉಪದೇಶವನ್ನು ಕೇಳಲು ಯಾವ ರೀತಿಯ ಜನರು ಬಂದರು (ವ. 1)?
2. ಯಾಕೆ ಯೆಹೂದಿ ನಾಯಕರು ಯೇಸುವಿನ ಮೇಲೆ ಮುನಿಸಿಕೊಳ್ಳುತ್ತಾರೆ (ವ. 2)?
3. ಕಳೆದು ಹೋದ ಕುರಿಯ ಸಾಮ್ಯದ ಸಂದರ್ಭ ಯಾವುದಾಗಿದೆ (ವ. 2)?
4. ನೂರು ಕುರಿಯುಳ್ಳ ವ್ಯಕ್ತಿಯು ಯಾಕೆ ತನ್ನ ಸ್ನೇಹಿತರನ್ನು ಮತ್ತು ನೆರೆಹೊರೆಯವರನ್ನೂ ಕೂಡಿಸುತ್ತಾನೆ (ವ. 4-6)?
5. ಕಳೆದು ಹೋದ ಕುರಿಯ ಸಾಮ್ಯದಲ್ಲಿ ಯೇಸು ಯಾವ ಅಂಶವನ್ನು ಹೋಲಿಕೆ ಮಾಡುತ್ತಾನೆ (ವ. 4-7)?
6. ತನ್ನ ಪಾವಲಿಯನ್ನು ಕಳೆದುಕೊಂಡ ಹೆಂಗಸು ಅದನ್ನು ಕಂಡುಕೊಳ್ಳುವುದಕ್ಕಾಗಿ ಏನು ಮಾಡುತ್ತಾಳೆ (ವ. 8)?
7. ಕಳೆದು ಹೋದ ನಾಣ್ಯದ ಸಾಮ್ಯದಲ್ಲಿ ಯೇಸು ಯಾವ ಅಂಶವನ್ನು ಹೋಲಿಕೆ ಮಾಡುತ್ತಾನೆ (ವ. 8-10)?
8. ಕಿರೀ ಮಗನು ತಂದೆ ಬಳಿ ಏನೆಂದು ಕೇಳಿಕೊಳ್ಳುತ್ತಾನೆ (ವ. 12)?
9. ಕಿರೀ ಮಗನು ತನ್ನ ಆಸ್ತಿಯನ್ನು ಏನು ಮಾಡುತ್ತಾನೆ (ವ. 13-14)?
10. ಕಿರೀ ಮಗನು ಯಾಕೆ ಹಂದಿಗಳನ್ನು ಮೇಯಿಸಬೇಕಾಯಿತು (ವ. 14-15)?
11. ಕಿರೀ ಮಗನು ಯಾಕೆ ತನ್ನ ತಂದೆಯ ಮನೆಗೆ ಹಿಂತಿರುಗಬೇಕೆಂದು ನಿರ್ಧರಿಸಿದನು (ವ. 17-18)?
12. ತನ್ನ ಕಿರೀ ಮಗನು ಮನೆಯ ಕಡೆಯತ್ತ ಬರುತ್ತಿರುವುದನ್ನು ಕಂಡ ತಂದೆಯು ಹೇಗೆ ಪ್ರತಿಕ್ರಯಿಸಿದನು (ವ. 20)?
13. ಕಿರೀ ಮಗನು ತನ್ನ ಪಶ್ಚಾತ್ತಾಪವನ್ನು ಹೇಗೆ ವ್ಯಕ್ತಪಡಿಸುತ್ತಾನೆ (ವ. 21)?
14. ತಂದೆಯು ತನ್ನ ಕಿರಿಯ ಮಗನನ್ನು ಹೇಗೆ ಸನ್ಮಾನಿಸುತ್ತಾನೆ (ವ. 22-24)?
15. ಆ ದಿನ ಸಂಜೆ ಹೊಲದಿಂದ ಮನೆಗೆ ಬರುತ್ತಿದ್ದಾಗ ಅಣ್ಣನನ್ನು ಅಚ್ಚರಿಗೊಳಿಸಿದ್ದು ಯಾವುದು (ವ. 25-26)?
16. ಅಣ್ಣನು ತನ್ನ ಕೋಪವನ್ನು ಹೇಗೆ ತೋರ್ಪಡಿಸಿಕೊಳ್ಳುತ್ತಾನೆ (ವ. 28-30)?
17. ಆ ಸಂಭ್ರಮಕ್ಕೆ ತಂದೆಯು ಏನೆಂದು ಕಾರಣ ಕೊಡುತ್ತಾನೆ (ವ. 32)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಕಳೆದು ಹೋದ ಕುರಿಯ ಸಾಮ್ಯ (ವ. 3-7):

   ಅ. "ಕೆಟ್ಟ ಜನರು" (ಸುಂಕದವರು ಮತ್ತು ಪಾಪಿಗಳು) ಈ ಸಾಮ್ಯಕ್ಕೆ ಎಲ್ಲಿ ಹೊಂದಿಕೆಯಾಗುತ್ತಾರೆ?

   ಆ. "ಒಳ್ಳೆಯ ಜನರು" (ಫರಿಸಾಯರು ಮತ್ತು ಶಾಸ್ತ್ರಿಗಳು) ಈ ಸಾಮ್ಯಕ್ಕೆ ಎಲ್ಲಿ ಹೊಂದಿಕೆಯಾಗುತ್ತಾರೆ?

ಇ. ಯೇಸುವಿನ ಉಪದೇಶವನ್ನು ಕೇಳಿದ ಜನರಿಗಾಗಿ ಹಳೇ ಒಡಂಬಡಿಕೆಯ "ಕುರಿ" ಮತ್ತು "ಕುರುಬರು" ನಡುವಿನ ಸಂಬಂಧ ಎಂಥದ್ದಾಗಿದೆ.

ಈ. ಯಾಕೆ "ಕಳೆದು ಹೋದ ಕುರಿಯು" ಒಬ್ಬ "ಪಾಪಿಗೆ" ಒಂದು ಸೂಕ್ತವಾದ ರೂಪಾಲಂಕಾರವಾಗಿದೆ?

ಉ. "ದೇವರ ಕಡೆಗೆ ತಿರುಗಿಕೊಳ್ಳುವುದಕ್ಕೆ ಅವಶ್ಯವಿಲ್ಲದ ನೀತಿವಂತರಿಗಿಂತ" ಎಂಬ ಯೇಸುವಿನ ಹೇಳಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ?

2. ಕಳೆದು ಹೋದ ಕುರಿ ಮತ್ತು ಪಾವಲಿಯ ಸಾಮ್ಯವನ್ನು (ಲೂಕ 15:1-10) ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದದಲ್ಲಿ ನೋಡಬೇಡಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿ.

3. ಕಳೆದು ಹೋದ ಮಗನ ಸಾಮ್ಯ (ವ. 1-3, 11-32):

ಅ. ಈ ಹಿಂದಿನ ಎರಡು ಸಾಮ್ಯಗಳ ರಚನೆಗಿಂತ ಈ ಸಾಮ್ಯದ ರಚನೆಯು ಯಾವ ರೀತಿಯಲ್ಲಿ ವಿಭಿನ್ನವಾಗಿದೆ?

ಆ. ಈ ಹಿಂದಿನ ಎರಡು ಸಾಮ್ಯಗಳಿಗೆ ಹೋಲಿಸಿದರೆ ಯಾವ ರೀತಿಯಲ್ಲಿ ಈ ಸಾಮ್ಯದಲ್ಲಿ ಪ್ರಾರಂಭಿಕ (ಮೊದಲ ಹೆಜ್ಜೆ ತೆಗೆದುಕೊಳ್ಳುವುದು) ಬದಲಾವಣೆಯಿದೆ?

ಇ. "ಕೆಟ್ಟ ಜನರು" (ಸುಂಕದವರು ಮತ್ತು ಪಾಪಿಗಳು) ಈ ಸಾಮ್ಯದಲ್ಲಿ ಎಲ್ಲಿ ಹೊಂದಿಕೆಯಾಗುತ್ತಾರೆ?

ಈ. "ಒಳ್ಳೆಜನರು" (ಫರಿಸಾಯರು ಮತ್ತು ಶಾಸ್ತ್ರಿಗಳು) ಈ ಸಾಮ್ಯದಲ್ಲಿ ಎಲ್ಲಿ ಹೊಂದಿಕೆಯಾಗುತ್ತಾರೆ?

ಉ. ಯೇಸುವಿನ ಉಪದೇಶವನ್ನು ಕೇಳಿದ ಜನರಿಗಾಗಿ "ತಂದೆಯು" ಯಾವ ರೀತಿಯ ಸಂಬಂಧವನ್ನು ಹೊಂದಿರಬಹುದು?

4. ಕಳೆದು ಹೋದ ಮಗನ ಸಾಮ್ಯವನ್ನು (ಲೂಕ 15:11-32) ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದದಲ್ಲಿ ನೋಡಬೇಡಿರಿ. ನಾಟಕೀಯವಾಗಿ, ಉತ್ಸಾಹಭರಿತವಾಗಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.

5. ಮೂರು "ಕಳಕೊಂಡು ಪಡಕೊಂಡ" ಸಾಮ್ಯಗಳ ಬೆಳಕಿನಲ್ಲಿ ವಚನ 1-2 ನ್ನು ವಿವರಿಸಿರಿ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯನದಲ್ಲಿ ತಿಳಿಸಿದ ಮಾಹಿತಿಗಳ ಬೆಳಕಿನಲ್ಲಿ ಲೂಕ 15:1-3, 11-32 ನ್ನು ವಿಮರ್ಶಿಸಿರಿ. ಅನಂತರ ***ಕಳೆದು ಹೋದ ಮಗ*** ಎಂಬ ಧ್ಯಾನವೊಂದನ್ನು ಸಿದ್ಧಪಡಿಸಿರಿ.

## 21. ಕಳ್ಳನಾದ ಮನೆವಾರ್ತೆಯವನು, ಲೂಕ 16:1-9

### ಪೀಠಿಕೆ ಮತ್ತು ಟಿಪ್ಪಣಿಗಳು

ಲೂಕನ ಸುವಾರ್ತೆಯ 16 ನೇ ಅಧ್ಯಾಯವು ಎರಡು ಸಾಮ್ಯಗಳನ್ನು ಒಳಗೊಂಡಿದೆ. ಮೊದಲನೆಯದು ಕಳ್ಳನಾದ ಮನೆವಾರ್ತೆಯವನು (ವ. 1-9), ಇದರಲ್ಲಿ ಯೇಸು ತನ್ನ ಶಿಷ್ಯರನ್ನು ಸಂಬೋಧಿಸುತ್ತಾನೆ (ವ. 1). ಎರಡನೆಯದು ಐಶ್ವರ್ಯವಂತನು ಮತ್ತು ಲಾಜರನು (ವ. 13-31), ಇಲ್ಲಿ ಯೇಸು ಫರಿಸಾಯರನ್ನು ಸಂಬೋಧಿಸುತ್ತಾನೆ (ವ. 14). ಈ ಕ್ಲಿಷ್ಟಕರವಾದ ಮತ್ತು ಗೊಂದಲಮಯ ಸಾಮ್ಯಗಳಿಗಾಗಿ ನಾವು ಎರಡು ಅಧ್ಯಯನಗಳನ್ನು ಉಪಯೋಗಿಸೋಣ. ನಮ್ಮ ಗಮನವು ಪ್ರತಿ ಸಾಮ್ಯದ ಹೋಲಿಕೆಯ ಅಂಶ ಅಂದರೆ, ಎರಡು ಗುಂಪಿನವರಿಗೆ ಯೇಸು ತಿಳಿಸಬಯಸಿದ ಸಂದೇಶದ ಮೇಲಾಗಿದೆ.

*ಶಿಷ್ಯರಿಗೂ* (ವ. 1): ಇಲ್ಲಿ ಲೂಕನು ಬಹುಶಃ ಯೇಸುವಿನ ಬಹುದೊಡ್ಡ ಗುಂಪಿನ ಹಿಂಬಾಲಕರನ್ನು ಸೂಚಿಸಿರಬಹುದು.

*ಮನೆವಾರ್ತೆಯವನು* (ವ. 1): ಇವನು ಐಶ್ವರ್ಯವಂತನಾದ ತನ್ನ ಯಜಮಾನನ ಉದ್ದಿಮೆಯ ವ್ಯವಹಾರಗಳನ್ನು ನೋಡಿಕೊಳ್ಳುವ ಒಬ್ಬ ಮನೆವಾರ್ತೆಯವನಾಗಿದ್ದನು.

*ಬೆಳಕಿನ ರಾಜ್ಯದವರು* (ವ. 8): ಇದು ದೇವ ಜನರಿಗಾಗಿನ ಒಂದು ರೂಪಾಲಂಕಾರವಾಗಿದೆ (ಎಫೆಸ. 5:8, 1 ಥೆಸಲೋನಿಕ 5:5).

*ಅನ್ಯಾಯದ ಧನ* (ವ. 9): ಈ ಹೇಳಿಕೆಯು ಅನ್ಯಾಯವಾಗಿ ಗಳಿಸಿದ ಸಂಪತ್ತು ಎಂದರ್ಥವಲ್ಲ. ಸತ್ಯವೇದವು ಅಂತವರನ್ನು ಬೆಂಬಲಿಸುವುದಿಲ್ಲ. ಇದನ್ನು ನಾವು "ಈ ಅನ್ಯಾಯದ ಲೋಕದಲ್ಲಿನ ಸಂಪತ್ತು" ಎಂಬುದರ ಸಂಕ್ಷಿಪ್ತ ಪದವೆಂಬುದಾಗಿ ಅರ್ಥೈಸಿಕೊಳ್ಳಬೇಕಿದೆ. ನಾವು ನಮ್ಮ ಲೌಕಿಕ ಸಂಪನ್ಮೂಲಗಳನ್ನು ಅವು ನಿತ್ಯತ್ವಕ್ಕಾಗಿ ಫಲಕೊಡುವಂತಹ ರೀತಿಯಲ್ಲಿ ಉಪಯೋಗಿಸಬೇಕೆಂದು ಯೇಸು ಬಯಸುತ್ತಾನೆ.

### ಪ್ರಶ್ನೆಗಳು

1. ಈ ಸಾಮ್ಯದಿಂದ ಯೇಸು ಯಾವ ಗುಂಪಿನ ಜನರನ್ನು ಸಂಬೋಧಿಸುತ್ತಾನೆ (ವ. 1)?
2. ಮನೆವಾರ್ತೆಯವನ ಮೇಲಿನ ದೂರು ಏನಾಗಿದೆ (ವ. 1)?
3. ಐಶ್ವರ್ಯವಂತನು ಮನೆವಾರ್ತೆಯವನಿಗೆ ಏನನ್ನು ಮಾಡಬೇಕೆಂದು ಹೇಳುತ್ತಾನೆ (ವ. 2)?
4. ಮನೆವಾರ್ತೆಯವನಿಗೆ ಏನಾಗುವುದಕ್ಕಿತ್ತು (ವ. 3)?
5. ತನ್ನ ಭವಿಷ್ಯವನ್ನು ಭದ್ರಪಡಿಸಿಕೊಳ್ಳಲು ಮನೆವಾರ್ತೆಯವನು ಏನು ಮಾಡುತ್ತಾನೆ (ವ. 4-7)?
6. ತನ್ನ ಮನೆವಾರ್ತೆಯವನ ಕಾರ್ಯವನ್ನು ಐಶ್ವರ್ಯವಂತನು ಹೇಗೆ ಮೌಲ್ಯಮಾಪನ ಮಾಡುತ್ತಾನೆ (ವ. 8)?
7. ವ. 8 ರಲ್ಲಿ ಯೇಸು ಯಾವ ಎರಡು ಗುಂಪಿನ ಜನರನ್ನು ತದ್ವಿರುದ್ಧವಾಗಿ ತೋರಿಸುತ್ತಾನೆ?
8. ಯೇಸು ತನ್ನ ಶಿಷ್ಯರಿಗೆ ಏನೆಂದು ಶಿಫಾರಸ್ಸು (ಸೂಚನೆ) ಮಾಡುತ್ತಾನೆ (ವ. 9)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಕಳ್ಳನಾದ ಮನೆವಾರ್ತೆಯವನ ಸಾಮ್ಯವು ತದ್ವಿರುದ್ಧತೆ(ವ್ಯತ್ಯಾಸ)ಗಳನ್ನು ಹೊಂದಿದ್ದು ಅದು ನಮಗೆ ಶಿಷ್ಯರಿಗಾಗಿನ ಯೇಸುವಿನ ಸಂದೇಶವನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಈ ತದ್ವಿರುದ್ಧತೆಗಳು ಯಾವುವು?
2. ಈ ಸಾಮ್ಯದಲ್ಲಿ ಯೇಸು ಯಾವ ಅಂಶವನ್ನು ಹೋಲಿಕೆ ಮಾಡುತ್ತಾನೆ?
3. ಕಳ್ಳನಾದ ಮನೆವಾರ್ತೆಯವನ ಸಾಮ್ಯದ ಸಂದೇಶವನ್ನು ವಿವರಿಸಿರಿ.

## 22. ಐಶ್ವರ್ಯವಂತನು ಮತ್ತು ಲಾಜರನು, ಲೂಕ 16:19-31

### ಪೀಠಿಕೆ ಮತ್ತು ಟಿಪ್ಪಣಿಗಳು

ಫರಿಸಾಯರು ಹಣವನ್ನು ಪ್ರೀತಿಸಿದರು. ಹಾಗಾಗಿ ಯೇಸು ತನ್ನ ಉಪದೇಶವನ್ನು ಕೇಳುವವರಿಗೆ ನೀವು ದೇವರನ್ನೂ, ಧನವನ್ನೂ ಸೇವಿಸಲಾರಿರಿ ಎಂದು ಹೇಳಿದಾಗ ಅವರು ಆತನನ್ನು ಅಪಹಾಸ್ಯ ಮಾಡಿದರು (ವ. 13-14). ಫರಿಸಾಯರು ಎರಡು ರೀತಿಯ ಜೀವನವನ್ನು ಜೀವಿಸಿದರು. ಅವರ ಧಾರ್ಮಿಕ ಜೀವನ, ಅವರ ನಂಬಿಕೆಗಳು ಮತ್ತು ಆಚರಣೆಗಳು ಅವರನ್ನು ಫರಿಸಾಯರನ್ನಾಗಿ (ಪ್ರತ್ಯೇಕಿಸಲ್ಪಟ್ಟವು, ಪರಿಶುದ್ಧ ಮತ್ತು ನೀತಿವಂತ ಜನರು) ಮಾಡಿದವು. ಹಣದಾಸೆಯು ತಮ್ಮ ಧಾರ್ಮಿಕ ಸ್ಥಿತಿಯ ಮೇಲೆ ಪರಿಣಾಮಬೀರದು ಎಂಬುದಾಗಿ ಅವರು ಹೇಳಿದರು. ಹಾಗಾಗಿ ಈಗ ಅವರು ಅವರ ಸಂಪತ್ತನ್ನು (ಆಸ್ತಿ) ನಿಭಾಯಿಸುತ್ತಿರುವ ಬಗೆಯು ನಿತ್ಯತ್ವದಲ್ಲಿ ಅವರ ಜೀವನದ ಮೇಲೆ ಪರಿಣಾಮ ಬೀರಬಹುದೆಂಬುದಾಗಿ ಯೇಸು ಹೇಳಿದಾಗ ಅವರು ಆತನನ್ನು ಹಾಸ್ಯಮಾಡಿದರು. ಆಗ ಯೇಸು ಅವರಿಗೆ ಈಗಾಗಲೇ ಬೋಧಿಸಿದ ಸತ್ಯವನ್ನು ಉದಾಹರಿಸಿ ಈ ಸಾಮ್ಯವನ್ನು ಹೇಳುತ್ತಾನೆ.

*ಸಕಲಾತಿ ನಯವಾದ ನಾರುಮಡಿ* (ವ. 19): ಐಶ್ವರ್ಯವಂತನು ಬಹು ಬೆಲೆಬಾಳುವ ದುಬಾರಿ ಬಟ್ಟೆಗಳನ್ನು ಧರಿಸಿದ್ದನು. ನಯವಾದ ನಾರುಮಡಿಯು ಬಣ್ಣಹಾಕಿದ ಬಟ್ಟೆಯಾಗಿದ್ದು ಶ್ರೀಮಂತರು ಇದನ್ನು ಧರಿಸುತ್ತಿದ್ದರು.

*ಲಾಜರ* (ವ. 20): ಇದು ಎಲೀಯೇಜರ್ ಎಂಬ ("ದೇವರು ಸಹಾಯ ಮಾಡುತ್ತಾನೆ") ಇಬ್ರಿಯ ಹೆಸರಿನ ಗ್ರೀಕ್ ರೂಪ (ಅನುವಾದವಾಗಿದೆ, ಸುವಾರ್ತೆಗಳಲ್ಲಿ ಈ ಹೆಸರಿನ ಇಬ್ಬರು ವ್ಯಕ್ತಿಗಳಿದ್ದಾರೆ: ಬೇಥಾನ್ಯದಲ್ಲಿನ ಯೇಸುವಿನ ಸ್ನೇಹಿತ (ಮಾರ್ಥ ಮತ್ತು ಮರಿಯರು ಆತನ ಸಹೋದರಿಯರು) ಮತ್ತು ಈ ಸಾಮ್ಯದಲ್ಲಿನ ಬಡ ಭಿಕ್ಷುಕ.

*ನಾಯಿಗಳು* (ವ. 21): ಸತ್ಯವೇದದ ಸಮಯದಲ್ಲಿ ನಾಯಿಗಳನ್ನು ಅಶುದ್ಧಪ್ರಾಣಿಗಳೆಂಬುದಾಗಿ ಪರಿಗಣಿಸಲಾಗುತ್ತಿತ್ತು. ಲಾಜರನ ಪರಿಸ್ಥಿತಿಯು ಕರುಣಾಜನಕ(ಶೋಚನೀಯ)ವಾಗಿತ್ತು.

*ದೇವದೂತರು ಅವನನ್ನು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು* (ವ. 22): ಯೆಹೂದಿ ರಬ್ಬಿಗಳ ಗ್ರಂಥಗಳಲ್ಲಿ "ಪರದೈಸು" ಮತ್ತು "ಅಬ್ರಹಾಮನ ಎದೆ" ಯನ್ನು ನೀತಿವಂತರ ಅಂತಿಮ ನಿವಾಸ ಎಂಬುದಾಗಿ ತಿಳಿಸಲಾಗಿದೆ. ಇದೊಂದು ಸೌಭಾಗ್ಯ ಮತ್ತು ಪರಮಾನಂದದ ಸ್ಥಳವಾಗಿದೆ.

*ಪಾತಾಳ (ನರಕ)* (ವ. 23): ಗ್ರೀಕ್ ಪಠ್ಯವು ಸತ್ತವರ ಸ್ಥಳವಾಗಿರುವ ಭೂಗತಲೋಕಕ್ಕೆ (ಅಧೋಲೋಕ) ಇರುವ ಗ್ರೀಕ್ ಹೆಸರಾದ "ಪಾತಾಳ"ವನ್ನು ಉಪಯೋಗಿಸುತ್ತದೆ. ಈ ಕಥೆಯಲ್ಲಿ ಪಾತಾಳವು ಲಾಜರನ ಆಶೀರ್ವಾದದ ಸ್ಥಿತಿ ಮತ್ತು ಸ್ಥಾನಕ್ಕೆ ತದ್ವಿರುದ್ಧವಾಗಿ ನಿಲ್ಲುತ್ತದೆ.

*ಅವುಗಳನ್ನು ಕೇಳಲಿ* (ವ. 29): ಈ ಹೇಳಿಕೆಯು "ಓದು , ತಿಳಿದುಕೊಳ್ಳು ಮತ್ತು ವಿಧೇಯನಾಗಿ" ಎಂದು ಅರ್ಥಕೊಡುತ್ತದೆ.

*ಮೋಶೆಯ ಮತ್ತು ಪ್ರವಾದಿಗಳ* (ವ. 29): ಇದು 'ಹಳೇ ಒಡಂಬಡಿಕೆಯ ಬರಹ/ಶಾಸ್ತ್ರಗಳು' ಎಂಬುದರ ಇನ್ನೊಂದು ಬಗೆಯಾಗಿದೆ.


### ಪ್ರಶ್ನೆಗಳು

1. ಐಶ್ವರ್ಯವಂತನನ್ನು ಹೇಗೆ ವರ್ಣಿಸಲಾಗಿದೆ (ವ. 19)?
2. ಲಾಜರನನ್ನು ಹೇಗೆ ವರ್ಣಿಸಲಾಗಿದೆ (ವ. 20-21)?
3. ಈ ಇಬ್ಬರಿಗೂ ಏನಾಗುತ್ತದೆ (ವ. 22)?
4. ಐಶ್ವರ್ಯವಂತನು ಅಬ್ರಹಾಮನಿಗೆ ಏನೆಂದು ಕೇಳಿಕೊಳ್ಳುತ್ತಾನೆ (ವ. 24)?

5. ಐಶ್ವರ್ಯವಂತನ ಮನವಿಯನ್ನು (ಕೇಳಿದ್ದನ್ನು) ಅನುಗ್ರಹಿಸುವುದು ಅಬ್ರಹಾಮನಿಗೆ ಯಾಕೆ ಅಸಾಧ್ಯವಾಗಿದೆ (ವ. 25-26)?
6. ಐಶ್ವರ್ಯವಂತನ ಕಳಕಳಿ(ಕಾಳಜಿ)ಯೇನು (ವ. 27-28)?
7. ಐಶ್ವರ್ಯವಂತನ ಕಳಕಳಿಗೆ ಅಬ್ರಹಾಮನು ಹೇಗೆ ಪ್ರತಿಕ್ರಯಿಸುತ್ತಾನೆ (ವ. 29)?
8. ಐಶ್ವರ್ಯವಂತನು ಅಬ್ರಹಾಮನಿಗೆ ಹೇಳುವ ವಾದವೇನು (ವ. 30)?
9. ಐಶ್ವರ್ಯವಂತನಿಗೆ ಅಬ್ರಹಾಮನು ಹೇಳುವ ಕೊನೆಯ ಹೇಳಿಕೆಯೇನು (ವ. 31)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಐಶ್ವರ್ಯವಂತ ಮತ್ತು ಲಾಜರನ ಸಾಮ್ಯದಲ್ಲಿನ ಮುಖ್ಯ ವ್ಯಕ್ತಿ ಯಾರು?
2. ಈ ಸಾಮ್ಯದ ಮೂಲಕ ಯೇಸು ಫರಿಸಾಯರಿಗೆ ಹೇಳುವ ಸಂದೇಶವೇನು?
3. ಐಶ್ವರ್ಯವಂತ ಮತ್ತು ಲಾಜರನ ಸಾಮ್ಯದಲ್ಲಿ ನೀವು ಅನುಭವವಿಲ್ಲದ ಸತ್ಯವೇದ ಓದುಗರಿಗೆ ಇರುವ ಯಾವ ಅಪಾಯಗಳನ್ನು ಕಾಣುವಿರಿ?
4. ಲೂಕನ 16 ನೇ ಅಧ್ಯಾಯದಲ್ಲಿನ ಯೇಸುವಿನ ಎರಡು ಸಾಮ್ಯಗಳ ಬೆಳಕಿನಲ್ಲಿ ನಿಮ್ಮನ್ನು ಮೌಲ್ಯಮಾಪನ ಮಾಡಿಕೊಳ್ಳಿರಿ.



## 23. ದೇವರ ರಾಜ್ಯದ ಬರೋಣ, ಲೂಕ 17:20-37

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸುವಿನ ಎರಡನೇ ಬರೋಣವು ಕ್ರೈಸ್ತ ಸಭೆಯ ಇತಿಹಾಸದುದ್ದಕ್ಕೂ ವಿಶ್ವಾಸಿಗಳನ್ನು ಆಕರ್ಷಿಸಿದ ಒಂದು ವಿಷಯವಾಗಿದೆ. ಸತ್ಯವೇದ ಪಂಡಿತರು ಮತ್ತು ಬೋಧಕರುಗಳು ತಿಳಿಸಿದ ಅವರ ಸಿದ್ಧಾಂತಗಳು ಮತ್ತು ಊಹೆಗಳು ಕೇಳುಗರಲ್ಲಿ ಕುತೂಹಲ ಮತ್ತು ಗಲಿಬಿಲಿಯನ್ನು ಸಹ ಉಂಟುಮಾಡಿದೆ. ಈ ಅಧ್ಯಯನದಲ್ಲಿ ನಾವು ಈ ವಿಷಯದ ಮೇಲೆ ಯಾವುದೇ ಊಹೆಗಳಿಲ್ಲದೆ ಯೇಸುವಿನ ಸ್ವಂತ ಬೋಧನೆಗಳನ್ನು ನೋಡಲಿದ್ದೇವೆ.

*ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ* (ವ. 21): ಈ ಗ್ರೀಕ್ ಹೇಳಿಕೆಯು "ನಿಮ್ಮಲ್ಲಿ" (ಇದು ಸಾಮಾನ್ಯವಾಗಿ ಭಾಷಾಂತರಿಸಿದ್ದಾಗಿದೆ, ಉದಾ: ನೋಡಿ ಕನ್ನಡದ ಪವಿತ್ರಗ್ರಂಥ ಮತ್ತು ಸತ್ಯವೇದ ಭಾಷಾಂತರ) ಅಥವಾ "ನಿಮ್ಮ ಮಧ್ಯದಲ್ಲಿ, ನಿಮ್ಮೊಳಗೆ" ಎಂದೂ ಅರ್ಥೈಸಲ್ಪಟ್ಟಿದೆ. ಹಾಗಾಗಿ ಯೇಸುವಿನ ಹೇಳಿಕೆಯನ್ನು "ದೇವರ ರಾಜ್ಯವು ಒಂದು ಆತ್ಮೀಕವಾದ ರಾಜ್ಯ" ಎಂಬುದಾಗಿ (ಆದುದರಿಂದ ಇದನ್ನು ಬರಿಗಣ್ಣಿನಿಂದ ಕಾಣಲಾಗದು) ಅಥವಾ "ದೇವರ ರಾಜ್ಯವು ನಿಮ್ಮೊಂದಿಗಿದೆ ಏಕೆಂದರೆ ಆ ರಾಜ್ಯದ ರಾಜನಾದ ನಾನು ನಿಮ್ಮ ಮಧ್ಯದಲ್ಲಿದ್ದೇನೆ". (ಆದುದರಿಂದ ಫರಿಸಾಯರು ನೀವು ಆತ್ಮೀಕವಾಗಿ ಕುರುಡರಾಗಿರಬೇಕು: ನಾನು ದೇವರ ರಾಜ್ಯವನ್ನು ತಂದಿದ್ದೇನೆ ಎಂಬುದನ್ನು ನೀವು ಕಾಣುವುದಿಲ್ಲವೇ) ಎಂಬುದಾಗಿ ಸಹ ಅರ್ಥ ಮಾಡಿಕೊಳ್ಳಲಾಗುವುದು.

*ನೋಡಬೇಕೆಂದು ಅಪೇಕ್ಷಿಸಿದರು* (ವ. 22): ಯೇಸು ಕ್ರಿಸ್ತನ ಎರಡನೇ ಬರೋಣದೊಂದಿಗೆ ದೇವರ ರಾಜ್ಯದ ಸಂಪೂರ್ಣತೆಗಾಗಿ ಕಾಯುತ್ತಿರುವ ವೇಳೆಯಲ್ಲಿ ಶಿಷ್ಯರುಗಳು ಕಷ್ಟಗಳನ್ನು ಎದುರಿಸುವರು ಎಂಬುದು ಈ ಮಾತಿನ ಅರ್ಥವಾಗಿದೆ. ಆದರೆ ದೇವರ ರಾಜ್ಯವು ಆಮೇಲೆ, ಅನಂತರ ಬರುವುದಾಗಿದೆ.

*ಮನುಷ್ಯಕುಮಾರನ ದಿವಸಗಳೊಳಗೆ ಒಂದು ದಿನವನ್ನು* (ವ. 22): ಇದರ ಅರ್ಥ "ಮನುಷ್ಯಕುಮಾರನು ಹಿಂತಿರುಗಿ ಬರುವ ದಿನ" ಎಂಬುದಾಗಿದೆ ಅಥವಾ ಮನುಷ್ಯಕುಮಾರನು ಆಳುವ ಸಮಯ" ಎಂಬುದಾಗಿದೆ.

*ನೋಹನ ದಿವಸಗಳಲ್ಲಿ ... ನಾವೆಯಲ್ಲಿ ... ಜಲಪ್ರಳಯವು* (ವ. 26-27): ನೋಹ ಮತ್ತು ಜಲಪ್ರಳಯದ ಕುರಿತಾದ ಕಥೆಯನ್ನು ಆದಿಕಾಂಡದ ಅಧ್ಯಾಯ 6-8 ರಲ್ಲಿ ಕಾಣಬಹುದು.

*ಲೋಟನ ದಿವಸಗಳಲ್ಲಿ ... ಸೊದೋಮ್* (ವ. 28-29): ಲೋಟನ ದಿನಗಳಲ್ಲಿ ಸೊದೋಮ್ ಪಟ್ಟಣವನ್ನು ನಾಶ ಮಾಡಿದ ಕುರಿತ ಕಥೆಯನ್ನು ಆದಿಕಾಂಡ 18:16-18, 28 ರಲ್ಲಿ ಕಾಣಬಹುದು.

*ಮನುಷ್ಯಕುಮಾರನು ಪ್ರತ್ಯಕ್ಷವಾಗುವ ದಿವಸದಲ್ಲಿ* (ವ. 30): ಯೇಸುವಿನ ಎರಡನೇ ಬರೋಣದಲ್ಲಿ ಆತನು ಎಲ್ಲರಿಗೂ ಕಾಣಿಸಿಕೊಳ್ಳುವನು.

*ಮಾಳಿಗೆ ಮೇಲಿರುವವನು* (ವ. 31): ಆ ದಿನಗಳಲ್ಲಿನ ಮನೆಗಳಲ್ಲಿ ಸಮತಟ್ಟಾದ ಮೇಲ್ಛಾವಣಿ (ಮಾಳಿಗೆ) ಇರುತ್ತಿದ್ದು ಅದರಲ್ಲಿ ಜನರು ವಿಶ್ರಮಿಸಬಹುದಾಗಿತ್ತು.

*ಲೋಟನ ಹೆಂಡತಿಯನ್ನು ನೆನಪಿಗೆ ತಂದುಕೊಳ್ಳಿರಿ* (ವ. 32): ಲೋಟನ ಹೆಂಡತಿಯು ದಹಿಸುತ್ತಿರುವ ಸೊದೋಮ್ ಪಟ್ಟಣವನ್ನು ಹಿಂತಿರುಗಿ ನೋಡುವಾಗ ಉಪ್ಪಿನ ಕಂಬವಾಗಿ ಮಾರ್ಪಡುತ್ತಾಳೆ (ಆದಿಕಾಂಡ 19:26).

ವ. 33: ಸತ್ಯವೇದದಲ್ಲಿ "ಜೀವ" ಎಂಬ ಪದವು ಎರಡು ಅರ್ಥಗಳನ್ನು ಹೊಂದಿದೆ. ಇದು "ಪ್ರಾಣ, ಆತ್ಮ ಮತ್ತು ಶಾರೀರಿಕ ಜೀವ" ಎಂಬ ಅರ್ಥವನ್ನು ಸಹ ಕೊಡುತ್ತದೆ. ಹಾಗೆಯೇ ಯೇಸು ತನ್ನ ಹೇಳಿಕೆಯಲ್ಲಿ ಜೀವ ಎಂಬ ಪದದ ಎರಡು ಅರ್ಥಗಳನ್ನು

ಹೊಂದಿದ್ದಾನೆ: ಈ ಪ್ರಸ್ತುತ ದುಷ್ಟಯುಗಕ್ಕೆ ಸಂಬಂಧಿಸಿದ ಪ್ರಾಣವನ್ನು ರಕ್ಷಿಸಿಕೊಳ್ಳಬೇಕೆಂದು ನೀವು ಪ್ರಯತ್ನಿಸಿದರೆ, ನೀವು ನಿನ್ನ ಆತ್ಮೀಕ ಮತ್ತು ನಿತ್ಯಜೀವವನ್ನು ಕಳಕೊಳ್ಳುವಿ. ಹಾಗಾಗಿ ನೀನು ದೇವರ ರಾಜ್ಯವನ್ನು ಪ್ರವೇಶಿಸಬೇಕಾದರೆ ನಿಮ್ಮ ಜೀವಿತವು ಪರಲೋಕ ರಾಜ್ಯದ ಭಾವವನ್ನು ಹೊಂದಿರಬೇಕು.

ವ. 36: ಈ ವಚನವು ಗ್ರೀಕ್ ಹಸ್ತ ಪ್ರತಿಗಳಲ್ಲಿ ಕಂಡುಬರುವುದಿಲ್ಲ ಹಾಗಾಗಿ ಬೆರಳಚ್ಚು ಪ್ರತಿಮಾಡುವವರು ಇದನ್ನು ಮತ್ತಾಯ 24:40 ರಿಂದ ಸೇರಿಸಿರಬಹುದು.

*"ಹೆಣ ಎಲ್ಲಿಯೋ ಅಲ್ಲಿಯೇ ಹದ್ದುಗಳು ಕೂಡುವವು"* (ವ. 37): ಯೇಸು ಈ ಗಾದೆಯನ್ನು ಆತನ ಬರೋಣವು ಎಲ್ಲಿ ಆಗುವುದು ಎಂಬ ಶಿಷ್ಯರ ಪ್ರಶ್ನೆಗೆ ಪ್ರತ್ಯುತ್ತರವಾಗಿ ಬಳಸುತ್ತಾನೆ. ಹೆಣಗಳು ಬಿದ್ದಿರುವಲ್ಲಿ ಹದ್ದುಗಳು ಕೂಡಿರುವಂತೆ ಎಲ್ಲಿ ಜನರು ಸೇರಿರುತ್ತಾರೋ ಈ ಸಂಗತಿಗಳು ಆಗುವವು. ಯೇಸುವಿನ ಎರಡನೇ ಬರೋಣವು ಪ್ರತಿಯೊಬ್ಬರಿಗೂ ಕಾಳಜಿಯುಳ್ಳದ್ದಾಗಿದೆ ಅಥವಾ ಸಂಬಂಧಪಟ್ಟದ್ದಾಗಿದೆ.

**ಪ್ರಶ್ನೆಗಳು**

1. ದೇವರ ರಾಜ್ಯದ ಬರೋಣದ ಕುರಿತಾದ ತನ್ನ ಉಪದೇಶದಲ್ಲಿ ಯೇಸು ಯಾರನ್ನು ಸಂಭೋದಿಸುತ್ತಾನೆ (ವ 20,22)?
2. ಫರಿಸಾಯರು ಯೇಸುವಿಗೆ ಏನೆಂದು ಪ್ರಶ್ನಿಸುತ್ತಾರೆ (ವ. 20)?
3. ದೇವರ ರಾಜ್ಯದ ಕುರಿತಾಗಿ ತನ್ನ ಕೇಳುಗರಿಗೆ ಯೇಸು ಏನೆಂದು ಮಾಹಿತಿ ಕೊಡುತ್ತಾನೆ (ವ. 20-21)?
4. ಯೇಸುವಿನ ಶಿಷ್ಯರು ಆತನ ಎರಡನೇ ಬರೋಣಕ್ಕಾಗಿ ಆತುರದಿಂದ ನಿರೀಕ್ಷಿಸುತ್ತಿರುವ ಸಮಯದಲ್ಲಿ ದೇವರ ರಾಜ್ಯದ ಬಗ್ಗೆ ಜನರು ಏನೆಂದು ಹೇಳುವರು (ವ. 23)?
5. ತನ್ನ ಎರಡನೇ ಬರೋಣವನ್ನು ವರ್ಣಿಸಲು ಯೇಸು ಯಾವ ಉಪಮೇ(ಹೋಲಿಕೆ)ಯನ್ನು ಬಳಸುತ್ತಾನೆ(ವ. 24)?
6. ತನ್ನ ಬರೋಣಕ್ಕಿಂತ ಮೊದಲು ಏನೆಲ್ಲಾ ಆಗಬೇಕೆಂಬುದಾಗಿ ಯೇಸು ಹೇಳುತ್ತಾನೆ (ವ. 24)?
7. ತನ್ನ ಎರಡನೇ ಬರೋಣದ ಸಮಯದಲ್ಲಿನ ಮನುಷ್ಯನ ಜೀವಿತವನ್ನು ವರ್ಣಿಸಲು ಯೇಸು ಹಳೇ ಒಡಂಬಡಿಕೆಯ ಯಾವ ಕಥೆಯನ್ನು ಉಪಯೋಗಿಸುತ್ತಾನೆ (ವ. 26-30)?
8. ಹಳೇ ಒಡಂಬಡಿಕೆ ಕಥೆಗಳು ಮತ್ತು ತನ್ನ ಎರಡನೇ ಬರೋಣದ ನಡುವಿನ ಹೋಲಿಕೆಯಿಂದ ಯೇಸು ಹೇಳುವ ಅಂಶವೇನು (ವ. 26-30)?
9. ಯೇಸು ತನ್ನ ಓದುಗರಿಗೆ ಯಾವ ವಿಧಿಯನ್ನು ನೆನಪಿಸುತ್ತಾನೆ (ವ. 32)?
10. ವ. 34-35 ರಲ್ಲಿನ ಯೇಸುವಿನ ಎರಡು ಉದಾಹರಣೆಗಳ ನಡುವಿನ ಸಮಾನತೆ ಏನು?
11. ಶಿಷ್ಯರು ಯೇಸುವಿನ ಬಳಿ ಯಾವ ಪ್ರಶ್ನೆಯನ್ನು ಕೇಳುತ್ತಾರೆ (ವ. 37)?
12. ಶಿಷ್ಯರ ಪ್ರಶ್ನೆಗೆ ಯೇಸು ಹೇಗೆ ಉತ್ತರಿಸುತ್ತಾನೆ (ವ. 37)?
13. ಈ ವಾಕ್ಯಭಾಗದಲ್ಲಿ ತನ್ನ ಎರಡನೇ ಬರೋಣದೊಂದಿಗಿನ ದೇವರ ರಾಜ್ಯದ ಪ್ರತ್ಯಕ್ಷತೆಯ ಬಗ್ಗೆ ಯೇಸು ಅನೇಕ ಹೇಳಿಕೆಗಳನ್ನು ಬಳಸುತ್ತಾನೆ (ವ. 22-35) ಅವುಗಳನ್ನು ಪಟ್ಟಿಮಾಡಿರಿ.

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವ. 21 ರಲ್ಲಿನ ಗ್ರೀಕ್ ಹೇಳಿಕೆಯನ್ನು ಅತ್ಯುತ್ತಮವಾಗಿ ಅರ್ಥೈಸಿಕೊಳ್ಳುವ ರೀತಿ ಯಾವುದೆಂಬುದಾಗಿ ನೀವು ಯೋಚಿಸುವಿರಿ (ಕೆಲ ಸತ್ಯವೇದ ಪಂಡಿತರಿಂದ "ನಿಮ್ಮಲ್ಲಿ" ಎಂಬುದಾಗಿ ಮತ್ತು ಇತರರಿಂದ "ನಿಮ್ಮ ಮಧ್ಯೆ", ನಿಮ್ಮೊಳಗೆ ಎಂಬುದಾಗಿ ಭಾಷಾಂತರಿಸಲ್ಪಟ್ಟಿದೆ)? ಮತ್ತು ಯಾಕೆ?

2. ವಚನ 31 ರಿಂದ 33 ರಲ್ಲಿ ಪ್ರಾಣವನ್ನು ಉಳಿಸಿಕೊಳ್ಳುವ ಮತ್ತು ಪ್ರಾಣವನ್ನು ಕಳೆದುಕೊಳ್ಳುವ ಕುರಿತಾಗಿನ ಯೇಸು ಹೇಳುವ ಅಂಶವನ್ನು ವಿವರಿಸಿರಿ.
3. ಶಿಷ್ಯರ ಪ್ರಶ್ನೆಗೆ ಯೇಸುವಿನ ಪ್ರತ್ಯುತ್ತರವನ್ನು ವಿವರಿಸಿರಿ (ವ. 37)?
4. ದೇವರ ರಾಜ್ಯದ ಬರೋಣದ ಕುರಿತಾದ ಈ ವಾಕ್ಯಭಾಗವನ್ನು ಸಾರಾಂಶಗೊಳಿಸಿರಿ (ವ. 20-37). ನಿಮ್ಮದೇ ಪದಗಳನ್ನು ಉಪಯೋಗಿಸಿ ಮತ್ತು ಸತ್ಯವೇದ ನೋಡಬೇಡಿರಿ.

**ವಿಮರ್ಶಿಸಿ**

ಈ ಅಧ್ಯಯನದಲ್ಲಿ ತಿಳಿಸಲಾದ ವಿಷಯಗಳ ಬೆಳಕಿನಲ್ಲಿ ಲೂಕ 17:20-37 ನ್ನು ವಿಮರ್ಶಿಸಿ. ಅನಂತರ ***ಯೇಸುವಿನ ಎರಡನೇ ಬರೋಣ*** ಎಂಬ ಧ್ಯಾನವೊಂದನ್ನು ಸಿದ್ಧಪಡಿಸಿರಿ. ಊಹೆ ಮಾಡಿಕೊಳ್ಳಬೇಡಿರಿ ಮತ್ತು ಇತರೆ ಸತ್ಯವೇದದ ವಾಕ್ಯಗಳನ್ನು ಅಥವಾ ಬೇರೆ ಮೂಲಗಳಿಂದ ಮಾಹಿತಿಗಳನ್ನು ಸೇರಿಸಬೇಡಿರಿ.

ಆದರೆ ಕೇಳುಗರಿಗೆ ಒಂದು ಮನವಿಯೊಂದಿಗೆ ಮುಕ್ತಾಯಗೊಳಿಸಿರಿ. ಅದು ಈ ರೀತಿಯಾಗಿರಲಿ.

- ಸಿದ್ಧರಾಗಿರಿ
- ಸಿದ್ಧರಾಗುವುದು ಹೇಗೆ?
    - ಯೇಸುವನ್ನು ನಿಮ್ಮ ಸ್ವಂತ ರಕ್ಷಕನಾಗಿ ಸ್ವೀಕರಿಸಿ. ಆಗ ದೇವರ ರಾಜ್ಯವು ನಿಮ್ಮೊಳಗೆ ಇರುವುದು.
    - ಲೋಟನ ಹೆಂಡತಿಯನ್ನು ಜ್ಞಾಪಕ ಮಾಡಿಕೊಳ್ಳಿರಿ. ಆಕೆಯ ಜೀವಿತವನ್ನು ಆರಿಸಿಕೊಂಡರೆ ನೀವು ದೇವರ ರಾಜ್ಯದಲ್ಲಿನ ನಿತ್ಯಜೀವವನ್ನು ಕಳೆದುಕೊಳ್ಳುವಿರಿ. ಈಗಲೇ "ದೇವರ ರಾಜ್ಯದ ಜೀವಿತವನ್ನು" ಜೀವಿಸಿರಿ ಮತ್ತು ನೀವು ದೇವರ ರಾಜ್ಯದಲ್ಲಿ ಸದಾಕಾಲವೂ ಜೀವಿಸುವಿರಿ!.

## 24. ಪ್ರಾರ್ಥನೆ ಕುರಿತ ಎರಡು ಸಾಮ್ಯಗಳು, ಲೂಕ 18:1-14

### ಪೀಠಿಕೆ ಮತ್ತು ಟಿಪ್ಪಣಿಗಳು

ಮೊದಲನೆಯ ಸಾಮ್ಯವು ಕ್ರೈಸ್ತ ವಿಶ್ವಾಸಿಗಳಿಗೆ ನಂಬಿಗಸ್ತರಾಗಿ ಮತ್ತು ಧೈರ್ಯದಿಂದ ಪ್ರಾರ್ಥಿಸುವಂತೆ ಉತ್ತೇಜಿಸುತ್ತದೆ. ಅಲ್ಲದೆ ಇದು ದೇವರನ್ನು ಒಬ್ಬ ಅನ್ಯಾಯದ ತೀರ್ಪುಗಾರನೊಂದಿಗೆ ತದ್ವಿರುದ್ಧವಾಗಿ ತೋರಿಸುತ್ತದೆ. ಎರಡನೆಯ ಸಾಮ್ಯವು ನಮಗೆ ಪ್ರಾರ್ಥಿಸುವಾಗ ನಾವು ದೇವರೊಂದಿಗೆ ಸರಿಯಾದ ಮನೋಭಾವವನ್ನಿಟ್ಟುಕೊಳ್ಳಬೇಕೆಂಬುದನ್ನು ನೆನಪಿಸುತ್ತದೆ.

*ಪ್ರಾರ್ಥನೆ ಮಾಡಬೇಕೆಂದು ದೇವಾಲಯಕ್ಕೆ ಹೋದರು* (ವ. 10): ವೃತ್ತಿಪರ ಪ್ರಾರ್ಥನೆಗಳನ್ನು ಯೆರೂಸಲೇಮಿನ ದೇವಾಲಯದಲ್ಲಿ ಮುಂಜಾನೆ ಮತ್ತು ಸಾಯಂಕಾಲದ ಯಜ್ಞದ ವೇಳೆಯಲ್ಲಿ ಮಾಡಲಾಗುತ್ತಿತ್ತು. ವೈಯಕ್ತಿಕ ಪ್ರಾರ್ಥನೆಗಾಗಿ ಜನರು ಅಲ್ಲಿಗೆ ಯಾವಾಗಬೇಕಾದರೂ ಹೋಗಬಹುದಾಗಿತ್ತು.

*ವಾರಕ್ಕೆ ಎರಡಾವರ್ತಿ ಉಪವಾಸ* (ವ. 12): ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದಲ್ಲಿ ಪ್ರಾಯಶ್ಚಿತ ಬಲಿಯ ದಿನದಂದು ಮಾತ್ರ ಉಪವಾಸವಿರಬೇಕೆಂದು ಆಜ್ಞಾಪಿಸಲಾಗಿತ್ತು. ಆದರೆ ಫರಿಸಾಯರು ಸೋಮವಾರ ಮತ್ತು ಮಂಗಳವಾರ ಸಹ ಉಪವಾಸ ಮಾಡುತ್ತಿದ್ದರು.

*ಸಂಪಾದಿಸುವ ಎಲ್ಲಾದರಲ್ಲಿಯೂ ಹತ್ತರಲ್ಲೊಂದು ಪಾಲು ಕೊಡುತ್ತೇನೆ* (ವ. 12): ಯೆಹೂದ್ಯರು ತಾವು ಸಂಪಾದಿಸುವ ಪ್ರತಿಯೊಂದರಲ್ಲಿಯೂ ಸಹ ದಶಮಾಂಶವನ್ನು ಕೊಡಬೇಕಾಗಿತ್ತು. ಆದರೆ ಫರಿಸಾಯರು ತಾವು ಖರೀದಿಸಿದ ಪ್ರತಿಯೊಂದರಿಂದಲೂ ಸಹ ದಶಮಾಂಶ ಕೊಡುತ್ತಿದ್ದರು.

*ಎದೆಯನ್ನು ಬಡಕೊಳ್ಳುತ್ತಾ* (ವ. 13): ಇದು ದುಃಖ ಮತ್ತು ಪಶ್ಚಾತ್ತಾಪದ ಸಂಕೇತವಾಗಿದೆ.

### ಪ್ರಶ್ನೆಗಳು

1. ಪ್ರಾರ್ಥನೆಯ ಕುರಿತ ಈ ಸಾಮ್ಯದಲ್ಲಿ ಯಾರನ್ನು ಕುರಿತು ಹೇಳಲಾಗಿದೆ (ವ. 1, 9)?
2. ವಿಧವೆ ಮತ್ತು ನ್ಯಾಯಾಧಿಪತಿಯ ಸಾಮ್ಯದ ಉದ್ದೇಶವೇನಾಗಿದೆ (ವ. 1)?
3. ನ್ಯಾಯಾಧಿಪತಿಯ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 2, 4, 6)?
4. ವಿಧವೆ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 3, 5)?
5. ಯಾಕೆ ನ್ಯಾಯಾಧಿಪತಿಯು ಕೊನೆಗೂ ವಿಧವೆಗೆ ನ್ಯಾಯವನ್ನು ಒದಗಿಸಿಕೊಡುತ್ತಾನೆ (ವ. 5)?
6. ದೇವರ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 7, 8)?
7. ಎರಡನೇ ಸಾಮ್ಯದಲ್ಲಿ ಯೇಸು ಸಂಬೋಧಿಸುವ ಜನರ ಗುಂಪನ್ನು ಲೂಕನು ಹೇಗೆ ವರ್ಣಿಸುತ್ತಾನೆ (ವ. 9)?
8. ಇಬ್ಬರು ಮನುಷ್ಯರು ದೇವಾಲಯಕ್ಕೆ ಯಾಕೆ ಹೋಗುತ್ತಾರೆ ಮತ್ತು ಅವರು ಯಾರು (ವ. 10)?
9. ಫರಿಸಾಯನು ಹೇಗೆ ಪ್ರಾರ್ಥಿಸುತ್ತಾನೆ (ವ. 11-12)?
10. ಸುಂಕದವನು ಹೇಗೆ ಪ್ರಾರ್ಥಿಸುತ್ತಾನೆ (ವ. 13)?
11. ಈ ಇಬ್ಬರು ಮನುಷ್ಯರ ಪ್ರಾರ್ಥನೆಗಳನ್ನು ಯೇಸು ಹೇಗೆ ಮೌಲ್ಯಮಾಪನ ಮಾಡುತ್ತಾನೆ (ವ. 14)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಅನ್ಯಾಯದ ನ್ಯಾಯಾಧಿಪತಿ ಮತ್ತು ದೇವರ ಬಗ್ಗೆ ಯೇಸು ಹೇಳುವ ಅಂಶವೇನು (ವ. 6-8)?
2. ವ. 8 ರಲ್ಲಿ ತನ್ನ ಶಿಷ್ಯರಿಗೆ ಕೇಳುವ ಯೇಸುವಿನ ಪ್ರಶ್ನೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ.

3. ಎರಡನೇ ಸಾಮ್ಯದ ಬೆಳಕಿನಲ್ಲಿ ನಿಮ್ಮ ಪ್ರಾರ್ಥನಾ ಜೀವಿತವನ್ನು ಮೌಲ್ಯಮಾಪನ ಮಾಡಿರಿ (ವ. 9-14).

## 25. ಜಕ್ಕಾಯನು, ಲೂಕ 19:1-10

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸು ಮತ್ತು ಜಕ್ಕಾಯನ ಕುರಿತ ಕಥೆಯು ಯೇಸುವನ್ನು ಸಂಧಿಸಿ, ರಕ್ಷಣೆಯನ್ನು ಹೊಂದಿ ಮತ್ತು ಸಂಪೂರ್ಣವಾಗಿ ತನ್ನ ಜೀವನದಲ್ಲಿ ಬದಲಾವಣೆಯನ್ನು ಹೊಂದಿದ ಒಬ್ಬ ಮನುಷ್ಯನ ಕುರಿತಾಗಿದೆ.

*ಯೆರಿಕೋ (ವ.* 1): ಈ ಪ್ರಾಚೀನ ಪಟ್ಟಣವು ಯೊರ್ದನ್ ಹೊಳೆಯಿಂದ ಪಶ್ಚಿಮಕ್ಕೆ 8 ಕಿ.ಮೀ.ಮತ್ತು ಯೆರೂಸಲೇಮಿನಿಂದ ಈಶಾನ್ಯಕ್ಕೆ ಸುಮಾರು 25 ಕಿ.ಮೀ. ದೂರದಲ್ಲಿದೆ. ಯೇಸುವಿನ ಸಮಯದಲ್ಲಿ ಹಳೆಯ ಪಟ್ಟಣವನ್ನು ಸಂಪೂರ್ಣವಾಗಿ ಬಿಟ್ಟುಬಿಡಲಾಯಿತು. ಸ್ವಲ್ಪ ದಕ್ಷಿಣಕ್ಕೆ ಒಂದು ಹೊಸ ಪಟ್ಟಣವು ಅರಸನಾದ ಹೆರೋದ ಮಹಾಶಯನಿಂದ ಕಟ್ಟಲ್ಪಟ್ಟಿತ್ತು.

*ಸುಂಕದ ಗುತ್ತಿಗೆದಾರನು* (ವ. 2): ಬಹುಶಃ ಜಕ್ಕಾಯನು ತನ್ನ ಕೈಕೆಳಗೆ ಇತರ ಸುಂಕದವರನ್ನು ಹೊಂದಿದ್ದು ಇಡೀ ಜಿಲ್ಲೆಯ ಸುಂಕ ವಸೂಲಿಮಾಡುವ ಜವಾಬ್ದಾರಿಯನ್ನು ಹೊಂದಿದವನಾಗಿದ್ದಿರಬಹುದು. ಯೆರಿಕೋ ಪ್ರಾಂತ್ಯವು ಶ್ರೀಮಂತ ಪ್ರಾಂತ್ಯವಾಗಿತ್ತು. ಈ ನಿಮತ್ತ ಆತನು ಯಾಕೆ ಅಷ್ಟೊಂದು ಐಶ್ವರ್ಯವಂತನಾದನೆಂಬುದಾಗಿ ನಾವು ತಿಳಿದುಕೊಳ್ಳಬಹುದು. ಸುಂಕದ ವಸೂಲಿದಾರರು ರೋಮನ್ನರೊಂದಿಗೆ ಸಹಕರಿಸುತ್ತಿದ್ದರು. ಇದರಿಂದಾಗಿ ಅವರನ್ನು ದ್ರೋಹಿಗಳು ಮತ್ತು ಪಾಪಿಗಳು ಎಂಬುದಾಗಿ ಪರಿಗಣಿಸಲಾಯಿತು. ಅವರು ಯೆಹೂದಿ ಸಮುದಾಯದಿಂದ ಪ್ರತ್ಯೇಕಿಸಲ್ಪಟ್ಟಿದ್ದರು.

*ಆಲದ ಮರ* (ವ. 4): ಗಟ್ಟಿಮುಟ್ಟಾದ ಈ ಒಂದು ಮರವು ಗಿಡ್ಡದಾದ ಕಾಂಡ ಮತ್ತು ಅಗಲವಾದ ರೆಂಬೆಗಳನ್ನು ಹೊಂದಿತ್ತು.

*ನಾನು ಈ ಹೊತ್ತು ನಿನ್ನ ಮನೆಯಲ್ಲಿ ಇಳಕೊಳ್ಳಬೇಕು* (ವ. 5): ಜಕ್ಕಾಯನನ್ನು ಯೇಸು ಸಂಧಿಸುವುದು ದೇವರ ಉದ್ದೇಶವಾಗಿತ್ತು ಎಂಬುದಾಗಿ ಈ ವಚನವು ಸೂಚಿಸುತ್ತದೆ.

*ನಾಲ್ಕರಷ್ಟು* (ವ. 8): ಇದು ಹಳೇ ಒಡಂಬಡಿಕೆಯಲ್ಲಿ ಕಳ್ಳತನಕ್ಕಾಗಿ ದಂಡ ಕಟ್ಟಬೇಕಾದ ಒಂದು ಕಟ್ಟುನಿಟ್ಟಾದ ಮಟ್ಟವಾಗಿತ್ತು.

*ಅಬ್ರಹಾಮನ ವಂಶಿಕನಲ್ಲವೇ* (ವ. 9): ಯೆಹೂದಿ ಸಮುದಾಯದ ದೃಷ್ಟಿಯಲ್ಲಿ ಜಕ್ಕಾಯನು ತಿರಸ್ಕರಿಸಲ್ಪಟ್ಟ ಒಬ್ಬ ಪಾಪಿಯಾಗಿದ್ದನು, ಯಾಕೆಂದರೆ ಆತನು ಒಬ್ಬ ಸುಂಕ ವಸೂಲಿಗಾರನಾಗಿದ್ದನು. ಆದರೆ ಯೇಸು ಈತನನ್ನು ಒಬ್ಬ ನಿಜವಾದ ಯೆಹೂದ್ಯನು ಕೇವಲ ಅಬ್ರಹಾಮನ ವಂಶದಲ್ಲಿ ಹುಟ್ಟಿದವನಲ್ಲದೇ ಯೇಸುಕ್ರಿಸ್ತನಲ್ಲಿ ತನ್ನ ನಂಬಿಕೆ ಮೂಲಕ ರಕ್ಷಣೆಯನ್ನು ಸಹ ಅನುಭವಿಸಿದ ಒಬ್ಬ ಮನುಷ್ಯನೆಂಬುದಾಗಿ ಕರೆಯುತ್ತಾನೆ.

### ಪ್ರಶ್ನೆಗಳು

1. ***ಯೇಸುವಿನ ಸಮಯದಲ್ಲಿನ ಪ್ಯಾಲೆಸ್ತೀನ್ ನಕ್ಷೆಯಲ್ಲಿ*** ಯೆರಿಕೋವನ್ನು ಕಂಡುಹಿಡಿಯಿರಿ.
2. ಜಕ್ಕಾಯನನ್ನು ಹೇಗೆ ವರ್ಣಿಸಲಾಗಿದೆ (ವ. 2-3)?
3. ಯಾಕೆ ಜಕ್ಕಾಯನು ಆಲದ ಮರವನ್ನು ಹತ್ತಿದನು (ವ. 5)?
4. ಜಕ್ಕಾಯನಿಗಾಗಿ ಯೇಸುವಿನ ಸಂದೇಶವೇನು (ವ. 5)?
5. ಯೇಸುವಿನ ಸಂದೇಶವನ್ನು ಜಕ್ಕಾಯನು ಹೇಗೆ ಸ್ವೀಕರಿಸುತ್ತಾನೆ (ವ. 6)?
6. ಯೇಸುವಿನ ಸಂದೇಶಕ್ಕೆ ಸುತ್ತಣ ಜನರು ಹೇಗೆ ಪ್ರತಿಕ್ರಿಯಿಸುತ್ತಾರೆ (ವ. 7)?
7. ಬಡವರಿಗೆ ತಾನೇನು ಮಾಡುತ್ತೇನೆಂಬುದಾಗಿ ಜಕ್ಕಾಯನು ಹೇಳುತ್ತಾನೆ (ವ. 8)?
8. ತಾನು ಮೋಸ ಮಾಡಿದವರಿಗೆ ಅದರ ಹಾನಿಯನ್ನು ಜಕ್ಕಾಯನು ಹೇಗೆ ತುಂಬಿಕೊಡಬಲ್ಲನು (ವ. 9)?
9. ಈ ಲೋಕದಲ್ಲಿನ ತನ್ನ ಸೇವೆಯನ್ನು ಯೇಸು ಹೇಗೆ ವರ್ಣಿಸಿದ್ದಾನೆ (ವ. 10)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಯೇಸುವನ್ನು ಸಂಧಿಸುವದಕ್ಕಿಂತ ಮೊದಲು ಇದ್ದ ಜಕ್ಕಾಯನ ಜೀವನವನ್ನು ನೀವು ಹೇಗೆ ವರ್ಣಿಸುವಿರಿ?
2. ಯೇಸುವನ್ನು ಸಂಧಿಸಿದ ನಂತರದ ಜಕ್ಕಾಯನ ಜೀವನವನ್ನು ನೀವು ಹೇಗೆ ವರ್ಣಿಸುವಿರಿ?
3. ಜಕ್ಕಾಯನ ಕುರಿತ ಕಥೆಯನ್ನು ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ (ಲೂಕ 19:1-10). ಸತ್ಯವೇದ ನೋಡಬೇಡಿರಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.

**ವಿಮರ್ಶಿಸಿ ಮತ್ತು ಚರ್ಚಿಸಿ**

ಈ ಅಧ್ಯಯನದಲ್ಲಿ ತಿಳಿಸಿದಂತೆ ವಿಷಯಗಳ ಬೆಳಕಿನಲ್ಲಿ ಲೂಕ 9:1-10 ನ್ನು ವಿಮರ್ಶಿಸಿರಿ. ಅನಂತರ ***ಜಕ್ಕಾಯ – ಯೇಸುವನ್ನು ಸಂಧಿಸಿದ ಒಬ್ಬ ಮನುಷ್ಯ*** ಎಂಬ ಒಂದು ಸುವಾರ್ತಾ ಸಂದೇಶವನ್ನು ಸಿದ್ಧಪಡಿಸಿರಿ. ನೆನಪಿಡಿರಿ ಜಕ್ಕಾಯನು ತನ್ನ ಒಳ್ಳೆಯ ಕ್ರಿಯೆಗಳಿಂದ ಅಥವಾ ತನ್ನ ಬದಲಾದ ಜೀವನದ ಕಾರಣ ರಕ್ಷಣೆ ಹೊಂದಲಿಲ್ಲ, ಆದರೆ ಯೇಸುವನ್ನು ಸಂಧಿಸಿ ಆತನಲ್ಲಿ ನಂಬಿಕೆಯಿಟ್ಟ ನಿಮಿತ್ತ ರಕ್ಷಣೆ ಹೊಂದಿದನು.



## 26. ದ್ರಾಕ್ಷೇತೋಟದಲ್ಲಿನ ಆಳುಗಳು, ಮತ್ತಾಯ 20:1-16

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ಸಾಮ್ಯವು ದೇವರ ರಾಜ್ಯದ ಯಜಮಾನ(ಕರ್ತನ)ನ ಕಾರಣವಿಲ್ಲದ ಉಧಾರತೆಯ ಕುರಿತಾಗಿದೆ.

*ಒಂದು ಪಾವಲಿ* (ವ. 2): ಇದು ಒಂದು ಮಾಮೂಲಿ ದಿನಗೂಲಿಯಾಗಿತ್ತು. ಒಬ್ಬ ರೋಮನ್ ಸೈನಿಕನಿಗೆ ಸಹ ದಿನಕ್ಕೆ ಒಂದು ಪಾವಲಿಯನ್ನು ಕೊಡಲಾಗುತ್ತಿತ್ತು.

*ಸಂಜೇಹೊತ್ತಿಗೆ* (ವ. 8): ಒಬ್ಬ ಆಳಿಗೆ ಪ್ರತಿದಿನ ಕೆಲಸವಾದ ನಂತರ ಸಂಬಳ ಕೊಡಬೇಕೆಂಬುದಾಗಿ ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವು ಬೋಧಿಸಿತ್ತು (ಧರ್ಮೋ. 24:14-15).

### ಪ್ರಶ್ನೆಗಳು

1. ಈ ಸಾಮ್ಯವು ಯಾವುದರ ಕುರಿತಾಗಿದೆ (ವ. 1)?
2. ಮನೆಯ ಯಜಮಾನನು ಬೆಳಿಗ್ಗೆ ಏನು ಮಾಡುತ್ತಾನೆ (ವ. 1)?
3. ತನ್ನ ಆಳುಗಳಿಗೆ ದಿನಕ್ಕೆ ಎಷ್ಟು ಕೂಲಿಯನ್ನು ಕೊಡಲು ಆತನು ಒಪ್ಪುತ್ತಾನೆ (ವ. 2)?
4. ಅದೇ ದಿನ ನಂತರ ಆತನು ಸಂಧಿಸಿದ ಕೆಲಸವಿಲ್ಲದೆ ಸುಮ್ಮನೆ ನಿಂತಿದ್ದ ಜನರೊಂದಿಗೆ ಮನೇ ಯಜಮಾನನು ಏನು ಮಾಡುತ್ತಾನೆ (ವ. 3-7)?
5. ಆ ದಿನದ ಕೆಲಸಕ್ಕಾಗಿ ಯಜಮಾನನು ಎಷ್ಟು ಗಂಟೆಗೆ ಕೊನೆಯ ಕೆಲಸಗಾರರನ್ನು ಕೆಲಸಕ್ಕೆ ಸೇರಿಸಿಕೊಳ್ಳುತ್ತಾನೆ (ವ 6-7)?
6. ಯಜಮಾನನು ತನ್ನ ಪಾರುಪತ್ಯಗಾರನಿಗೆ ಕೂಲಿಯ ಬಗ್ಗೆ ಏನೆಂದು ಸೂಚನೆ ಕೊಡುತ್ತಾನೆ (ವ. 8)?
7. ಆಳುಗಳಿಗೆ ಎಷ್ಟು ಕೂಲಿ(ಸಂಬಳ) ಕೊಡಲಾಯಿತು (ವ. 9-10)?
8. ಯಾಕೆ ಕೆಲ ಆಳುಗಳು ಕೂಲಿಯ ಬಗ್ಗೆ ಯಜಮಾನನನ್ನು ದೂರಿದರು (ವ. 11-12)?
9. ಆ ದೂರಿಗೆ ಯಜಮಾನನು ಹೇಗೆ ಪ್ರತ್ಯುತ್ತರಿಸುತ್ತಾನೆ (ವ. 13-15)?
10. ಯೇಸು ಈ ಸಾಮ್ಯವನ್ನು ಹೇಗೆ ಮುಗಿಸುತ್ತಾನೆ (ವ. 16)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಆಳುಗಳೊಂದಿಗೆ ಅನ್ಯಾಯವಾಗಿ ನಡಕೊಂಡದ್ದರ ಬಗ್ಗೆ ನೀವೇನೆಂದು ಯೋಚಿಸುವಿರಿ? ವಿವರಿಸಿರಿ.
2. ಈ ಸಾಮ್ಯದ ಸಂದೇಶವೇನು?
3. ವಚನ 16 ರಲ್ಲಿನ ಯೇಸುವಿನ ತೀರ್ಮಾನವನ್ನು ವಿವರಿಸಿರಿ.
4. ದ್ರಾಕ್ಷೆತೋಟದಲ್ಲಿನ ಕೆಲಸಗಾರರು (ಆಳುಗಳು) ಸಾಮ್ಯವನ್ನು ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದ ನೋಡಬೇಡಿ. ನಾಟಕೀಯ ಮತ್ತು ಉತ್ಸಾಹಭರಿತಾವಾಗಿರಲಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.

## 27. ಮದುವೆಯ ಭೋಜನ, ಮತ್ತಾಯ 22:1-14

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ಸಾಮ್ಯವು ಪರಲೋಕ ರಾಜ್ಯದ ಕುರಿತಾದುದ್ದಾಗಿದೆ. ಓದುಗನು ತನ್ನ ಮಗನ ಮದುವೆಯ ಭೋಜನಕ್ಕಾಗಿನ ರಾಜನ ಆಹ್ವಾನದ ಕುರಿತಾದ ಕಥೆಯ ಪ್ರತಿಯೊಂದು ವಿವರಕ್ಕಾಗಿ ಉಲ್ಲೇಖಗಳನ್ನು ಕಂಡುಹಿಡಿಯಲು ಇದೊಂದು ಸಾಂಕೇತಿಕ ನಿರೂಪಣೆಯಲ್ಲ. ಅದು ಅಸಂಬದ್ಧತೆಗೆ ನಡೆಸಬಲ್ಲದು.

ಆದರೆ ಯೇಸು ಈ ಸಾಮ್ಯದಲ್ಲಿ ಓದುಗರು ಪ್ರಾಮುಖ್ಯವಾದ ಹಳೇ ಒಡಂಬಡಿಕೆಯ ಪ್ರತಿಧ್ವನಿಯನ್ನು ಕಂಡುಹಿಡಿಯಬೇಕೆಂದು ಅಪೇಕ್ಷಿಸಿದನೆಂಬುದಾಗಿ ನಾನು ಯೋಚಿಸುತ್ತೇನೆ. ಖಂಡಿತವಾಗಿ ಈ ಭೋಜನವೇ ಯೆಶಾಯ 25:6 ರ ಮೆಸ್ಸೀಯನ ಭೋಜನವನ್ನು ಪ್ರತಿಧ್ವನಿಸುತ್ತದೆ (ಕೆಲಬಾರಿ ಸುವಾರ್ತೆಯಲ್ಲಿ ಸಹ ಪ್ರಸ್ತಾಪಿಸಲಾಗಿದೆ, ಮಾರ್ಕ 14:25 ರ ಟಿಪ್ಪಣಿ ಸಹ ನೋಡಿರಿ). ಅರಸನ ಆಳುಗಳನ್ನು ಕೊಂದುಹಾಕುವುದು ಕೆಲವು ಹಳೇ ಒಡಂಬಡಿಕೆಯ ಪ್ರವಾದಿಗಳ ವಿಧಿಯನ್ನು ಪ್ರತಿಧ್ವನಿಸುತ್ತದೆ. ಮದುವೆಗೆ ಬಂದ ಅತಿಥಿಗಳ ಸ್ಪಂದಿಸದಿರುವ ಮನೋಭಾವವು ಮುಖ್ಯವಾಗಿ ದೇವರು ಮತ್ತು ಒಡಂಬಡಿಕೆಗೆ ಇಸ್ರಾಯೇಲ್ಯರ ಅಪನಂಬಿಗಸ್ತಿಕೆಯನ್ನು ಪ್ರತಿಧ್ವನಿಸುತ್ತದೆ. ಈ ಐತಿಹಾಸಿಕ ಸ್ಪಂದಿಸದಿರುವ ಮನೋಭಾವವು ಫರಿಸಾಯರು ಯೇಸುವನ್ನು ಮತ್ತು ಆತನ ಸೇವೆಯನ್ನು ತಿರಸ್ಕರಿಸುವದರಲ್ಲಿಯೂ ಮರುಕಳಿಸಿದೆ.

*ಪರಲೋಕ ರಾಜ್ಯವು (ವ.* 2): ಈ ಮಾತನ್ನು ಹೆಚ್ಚಾಗಿ ಮತ್ತಾಯನ ಸುವಾರ್ತೆಯಲ್ಲಿ "ದೇವರರಾಜ್ಯ" ಕ್ಕೆ ಸಮಾನಾರ್ಥಕವಾಗಿ ಬಳಸಲಾಗಿದೆ.

*ಮದುವೆಗೆ ಹೇಳಿಸಿಕೊಂಡವರನ್ನು* (ವ. 3): ಮದುವೆಗಿಂತ ಮೊದಲೇ ಪೂರ್ವಭಾವಿಯಾಗಿ (ಮುಂಚಿತವಾಗಿ) ಆಮಂತ್ರಣವನ್ನು ಕಳುಹಿಸುವುದು ಪದ್ಧತಿಯಾಗಿತ್ತು. ಹಾಗಾಗಿ ಈ ಅತಿಥಿಗಳು ಮದುವೆಗೆ ಬರುವರೆಂಬುದಾಗಿ ಅಪೇಕ್ಷಿಸಲಾಗುತ್ತಿತ್ತು.

*ಮದುವೆಯ ಬಟ್ಟೆಯನ್ನು ಹಾಕಿಕೊಳ್ಳದ* (ವ. 11): ಕೆಲವೊಮ್ಮೆ ಅತಿಥೇಯರು ತಮ್ಮ ಅತಿಥಿಗಳಿಗೆ ಮದುವೆ ಬಟ್ಟೆಯನ್ನು ಸಹ ಕೊಡುತ್ತಿದ್ದರು. ಆ ಔತಣ ಕೂಟದಲ್ಲಿ ಅದು ಅತೀ ಅವಶ್ಯಕವಾಗಿತ್ತು, ಯಾಕೆಂದರೆ ಅತಿಥಿಗಳನ್ನು ನೇರವಾಗಿ ಬೀದಿಗಳಿಂದ ಕರೆತರಲಾಗುತ್ತಿತ್ತು.

*ಹೊರಗೆ ಕತ್ತಲೆಗೆ* (ವ. 13): ಇದು ದೇವರಿಲ್ಲದ ನಿತ್ಯತ್ವಕ್ಕೆ ಒಂದು ರೂಪಾಲಂಕಾರವಾಗಿದೆ.

*ಕಟಕಟನೆ ಹಲ್ಲು ಕಡಿಯೋಣವು* (ವ. 13): ಯೇಸು ಈ ರೂಪಾಲಂಕಾರವನ್ನು ಮತ್ತಾಯನ ಸುವಾರ್ತೆಯಲ್ಲಿ ಹಲವು ಬಾರಿ ಖಂಡನೆಗೊಳಗಾದವರ ಬಗ್ಗೆ ಉಪಯೋಗಿಸುತ್ತಾನೆ (ನೋಡಿ 8:12, 13:42, 13:50, 24:51, 25:30). "ಗೋಳಾಟ ಮತ್ತು ಕಟಕಟನೆ ಹಲ್ಲು ಕಡಿಯೋಣವು" ದುಃಖ (ವಿಪತ್ತು) ಮತ್ತು ಪರಿತಾಪವನ್ನು ವ್ಯಕ್ತಪಡಿಸುವುದಾಗಿದೆ.

*ಕರೆಯಲ್ಪಟ್ಟವರು ಬಹುಜನ ಆಯಲ್ಪಟ್ಟವರು ಸ್ವಲ್ಪಜನ* (ವ. 14): ಅರಾಮಿಕಿನಲ್ಲಿ (ಯೇಸು ಮಾತನಾಡಿದ ಭಾಷೆ) "ಬಹಳ" ಮತ್ತು "ಎಲ್ಲಾ" ಇವೆರಡನ್ನು ಸಮಾನಾರ್ಥಕಗಳಾಗಿ ಬಳಸಬಹುದಾಗಿದೆ. ಪರಲೋಕದಲ್ಲಿನ ಮಹಾ ಔತಣಕೂಟಕ್ಕೆ ಎಲ್ಲರೂ ಆಹ್ವಾನಿಸಲ್ಪಟ್ಟಿದ್ದಾರೆ. ಆದರೆ ಆಮಂತ್ರಣಕ್ಕೆ ಪ್ರತಿಕ್ರಯಿಸಿದವರು ಮಾತ್ರ ("ಆಯಲ್ಪಟ್ಟವರು ಸ್ವಲ್ಪ ಜನ") ಅದರಲ್ಲಿ ಭಾಗವಹಿಸುವುರು.

### ಪ್ರಶ್ನೆಗಳು

1. ಈ ಸಾಮ್ಯವು ಯಾವುದರ ಕುರಿತಾಗಿದೆ (ವ. 2)?

2. ಮದುವೆಗೆ ಹೇಳಿಸಿಕೊಂಡ ಅತಿಥಿಗಳನ್ನು ಕರೆಯಲು ಮೊದಲ ಬಾರಿಗೆ ಅರಸನ ಆಳುಗಳು ಹೋದಾಗ ಏನಾಯಿತು (ವ. 3)?
3. ಮದುವೆ ಊಟದಲ್ಲಿ ಪಾಲ್ಗೊಳ್ಳಲು ಅತಿಥಿಗಳನ್ನು ಕರೆಯಲು ಅರಸನ ಆಳುಗಳು ಎರಡನೇ ಬಾರಿ ಹೋದಾಗ ಏನಾಯಿತು (ವ. 4-6)?
4. ಅರಸನು ತನ್ನ ಕೋಪವನ್ನು ಹೇಗೆ ವ್ಯಕ್ತಪಡಿಸುತ್ತಾನೆ (ವ. 7)?
5. ಮದುವೆ ಊಟಕ್ಕೆ ಮೂಲತಃ ಆಹ್ವಾನಿಸಲ್ಪಟ್ಟವರ ಬಗ್ಗೆ ಅರಸನ ಅಭಿಪ್ರಾಯವೇನು (ವ. 8)?
6. ಊಟಕ್ಕಾಗಿ ಹೊಸ ಅತಿಥಿಗಳನ್ನು ಹುಡುಕುವುದಕ್ಕಾಗಿ ಅರಸನು ತನ್ನ ಆಳುಗಳನ್ನು ಎಲ್ಲಿಗೆ ಕಳುಹಿಸುತ್ತಾನೆ (ವ 10)?
7. ಈ ಹೊಸ ಅತಿಥಿಗಳು ಹೇಗೆ ವರ್ಣಿಸಲ್ಪಟ್ಟಿದ್ದಾರೆ (ವ. 10)?
8. ಮದುವೇ ಮನೆಯಲ್ಲಿದ್ದ ಒಬ್ಬ ಮನುಷ್ಯನ ಸಮಸ್ಯೆಯೇನಾಗಿತ್ತು (ವ. 11-12)?
9. ಈ ಮನುಷ್ಯನಿಗೆ ಏನಾಯಿತು (ವ. 13)?
10. ಯೇಸು ಈ ಸಾಮ್ಯವನ್ನು ಹೇಗೆ ಮುಕ್ತಾಯಗೊಳಿಸುತ್ತಾನೆ (ವ. 14)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಸಾಮ್ಯದಲ್ಲಿ ಎರಡು (ಅಥವಾ ಮೂರು) ಹೋಲಿಕೆಯ ಅಂಶಗಳಿರುವಂತೆ ಮೊದಲ ಭಾಗದಲ್ಲಿ ಒಂದು (ಅಥವಾ ಎರಡು) (ಮದುವೆ ಊಟಕ್ಕೆ ಕರೆಯಲ್ಪಟ್ಟವರು ವ. 2-10) ಮತ್ತು ಎರಡನೇ ಭಾಗದಲ್ಲಿ ಇನ್ನೊಂದು (ಮದುವೆ ಬಟ್ಟೆಯನ್ನು ಹಾಕಿಕೊಳ್ಳದ ಒಬ್ಬನ ಬಗ್ಗೆ, ವ. 11-13) ತೋರುತ್ತದೆ. ಈ ಹೋಲಿಕೆಯ ಅಂಶಗಳನ್ನು ವಿವರಿಸಿರಿ.
2. ಯೇಸು, ಪರಲೋಕರಾಜ್ಯವು ಮಗನಿಗೆ ಮದುವೆ ಮಾಡಿದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ ಎಂಬುದನ್ನು ಹೇಳುತ್ತಾನೆ (ವ. 2). ಹೇಗೆ ಎಂದು ವಿವರಿಸಿರಿ.
3. ಲೂಕನು ತನ್ನ ಸುವಾರ್ತೆಯಲ್ಲಿ ಇದೇ ರೀತಿಯ ಸಾಮ್ಯವನ್ನು ಸೇರಿಸಿದ್ದಾನೆ. ಎರಡೂ ಸಾಮ್ಯಗಳನ್ನು ಹೋಲಿಸಿರಿ (ಮತ್ತಾ. 22:1-14 ಮತ್ತು ಲೂಕ 14:15-16). ನಿಮ್ಮ ಗಮನಕ್ಕೆ ಬಂದ ಅಂಶಗಳನ್ನು ಪಟ್ಟಿಮಾಡಿರಿ.

## 28. ಹತ್ತು ಮಂದಿ ಕನ್ಯೆಯರು, ಮತ್ತಾಯ 25:14-30

**ಪೀಠಿಕೆ ಮತ್ತು ಟಿಪ್ಪಣಿಗಳು**

ಈ ಸಾಮ್ಯವು ಯೇಸುವಿನ ಎರಡನೇ ಬರೋಣಕ್ಕಾಗಿ ಸಿದ್ಧರಾಗಬೇಕಾದ ಪ್ರಾಮುಖ್ಯತೆಯ ಕುರಿತಾಗಿದೆ.

*ಪರಲೋಕ ರಾಜ್ಯವು* (ವ. 1): ಈ ಪದವು "ದೇವರ ರಾಜ್ಯಕ್ಕೆ" ಸಮಾನಾರ್ಥಕವಾಗಿದೆ.

*ಹತ್ತು ಮಂದಿ ಕನ್ಯೆಯರು* (ವ. 1): ಇವರೆಲ್ಲರೂ ವರನನ್ನು ಸಂಧಿಸುವುದಕ್ಕಾಗಿ ವಧುವನ್ನು ಸಿದ್ಧಪಡಿಸಿ ಮತ್ತು ವರನ ಮನೆಯವರೆಗೂ ಆಕೆಯೊಂದಿಗೆ ಹೋದ ವಧುವಿನ ಗೆಳತಿಯರಾಗಿದ್ದಾರೆ.

*ಆರತಿಗಳನ್ನು* (ವ. 2): ಆರತಿಗಳೆಲ್ಲವೂ ಮರದ ಕೋಲಿನ ತುದಿಗೆ ಎಣ್ಣೆಮಿಶ್ರಿತ ಬತ್ತಿಯನ್ನು ಸುತ್ತಿ ಮಾಡಿದಂತ ದೀಪಗಳಾಗಿವೆ. ಇವು ಹೆಚ್ಚು ಹೊತ್ತು ಉರಿಯುತ್ತಿರಲಿಲ್ಲ. ಅನಂತರ ಬತ್ತಿಯನ್ನು ಬದಲಿಸಿ ಹೆಚ್ಚು ಎಣ್ಣೆಯನ್ನು ಹಚ್ಚುತ್ತಿದ್ದರು.

*ಅರ್ಧರಾತ್ರಿಯಲ್ಲಿ* (ವ. 6): ಮದಲಿಂಗನು ತನ್ನ ಸ್ನೇಹಿತರೊಂದಿಗೆ ಮತ್ತು ಮದಲಗಿತ್ತಿಯು ತನ್ನ ಗೆಳತಿಯರೊಂದಿಗೆ ಸೇರಿ ಪ್ರತ್ಯೇಕ ಸ್ಥಳಗಳಲ್ಲಿ ಇಡೀ ದಿನವೆಲ್ಲ ನೃತ್ಯಮಾಡಿ ಸಂಭ್ರಮಿಸುವುದರಲ್ಲಿ ಕಳೆಯುತ್ತಿದ್ದರು. ಅನಂತರ ಮದಲಿಂಗನ ಸಂಭ್ರಮ ಮುಗಿದು ಸಾಯಂಕಾಲ ಅಥವಾ ರಾತ್ರಿ ವೇಳೆ ಯಾವಾಗ ಬೇಕಾದರೂ ಆತನನ್ನು ಕರೆತರಬಹುದಾಗಿತ್ತು. ಹಾಗಾಗಿ ರಾತ್ರಿವೇಳೆಯಲ್ಲಿನ ಮದುವೆಯ ಮೆರವಣಿಗೆಗಾಗಿ ಆರತಿ(ದೀಪ)ಗಳನ್ನು ಸಿದ್ಧವಾಗಿಡುವದು ಅವಶ್ಯಕವಾಗಿತ್ತು.

*ನೆಟ್ಟಗೆ ಮಾಡಿದರು* (ವ. 7): ಬತ್ತಿಯ ಉರಿದು ಹೋದ ತುದಿಯನ್ನು ಕತ್ತರಿಸಿ ಅದಕ್ಕೆ ಹೆಚ್ಚಿನ ಎಣ್ಣೆಯನ್ನು ಸೇರಿಸಿ ಪುನಃ ದೀಪಗಳನ್ನು ಹಚ್ಚಲಾಗುತ್ತಿತ್ತು.

**ಪ್ರಶ್ನೆಗಳು**

1. ಈ ಸಾಮ್ಯವು ಯಾವುದರ ಕುರಿತಾಗಿದೆ (ವ. 1)?
2. ವಧು (ಮದಲಗಿತ್ತಿಯ) ಗೆಳತಿಯರ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 1-4)?
3. ಯಾಕೆ ಕನ್ಯೆಯರೆಲ್ಲಾ ಮಲಗಿದರು (ವ. 5)?
4. ಕೊನೆಗೂ ಅರ್ಧರಾತ್ರಿಯಲ್ಲಿ ಮದಲಿಂಗನು ಬಂದಾಗ ಏನಾಯಿತು (ವ. 6-9)?
5. ಐದು ಬುದ್ಧಿಯಿಲ್ಲದ ಕನ್ಯೆಯರಿಗೆ ಏನಾಯಿತು (ವ. 10-12)?
6. ಯೇಸು ಈ ಸಾಮ್ಯವನ್ನು ಹೇಗೆ ಮುಗಿಸುತ್ತಾನೆ (ವ. 13)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಸಾಮ್ಯದಲ್ಲಿನ ಹೋಲಿಕೆಯ ಅಂಶವೇನು?
2. ಯಾಕೆ ಸಭಾಪಾಲಕರುಗಳು ಈ ಕಥೆಯನ್ನು ಸಾಂಕೇತಿಕವಾಗಿ ಅರ್ಥವಿವರಣೆಗೊಳಿಸುವ ಶೋಧನೆಗೆ ಒಳಗಾಗುತ್ತಾರೆಂಬುದಾಗಿ ನೀವು ಯೋಚಿಸುವಿರಿ?

## 29. ತಲಾಂತುಗಳು, ಮತ್ತಾಯ 25:14-30

### ಪೀಠಿಕೆ ಮತ್ತು ಟಿಪ್ಪಣಿಗಳು

ತಲಾಂತುಗಳ ಈ ಸಾಮ್ಯದಲ್ಲಿನ ಮುಖ್ಯಪದವು "ನಂಬಿಗಸ್ತ" ಎಂಬುದಾಗಿದೆ. ಇಬ್ಬರು ಆಳುಗಳು ನಂಬಿಗಸ್ತರಾಗಿದ್ದರೆ ಒಬ್ಬನು ಅಪನಂಬಿಗಸ್ತನಾಗಿರುತ್ತಾನೆ.

*ಒಪ್ಪಿಸಿಕೊಟ್ಟಂತಿರುವದು* (ವ. 14): ಈ ಮಾತು ಈ ಹಿಂದಿನ ಸಾಮ್ಯದ ವಿಷಯವಾಗಿರುವ ಪರಲೋಕ ರಾಜ್ಯ (ಕನ್ನಡದ ಪವಿತ್ರಗ್ರಂಥದಲ್ಲಿ ಸ್ಪಷ್ಟವಾಗಿದೆ), ಅಥವಾ ಯೇಸುವಿನ ಎರಡನೇ ಬರೋಣವನ್ನು (ಆತನ ಮುಕ್ತಾಯದ ಎಚ್ಚರಿಕೆಯನ್ನು ನೋಡಿ ಹಿಂದಿನ ವಚನ: "ಆ ದಿನವಾದರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದುದರಿಂದ ಎಚ್ಚರಿಕೆಯಾಗಿರಿ") ಸೂಚಿಸುತ್ತಿರಬಹುದು.

*ತಲಾಂತು* (ವ. 15): ಒಂದು ತಲಾಂತು ಮೂಲತಃ ತೂಕದ ಒಂದು ಘಟಕವಾಗಿದೆ (ಸುಮಾರು 34 ಕೆ.ಜಿ ಬೆಳ್ಳಿ). ಹೊಸ ಒಡಂಬಡಿಕೆಯ ಸಮಯದಲ್ಲಿ ಇದನ್ನು ಹಣದ ಒಂದು ಘಟಕವೆಂಬುದಾಗಿ ಉಪಯೋಗಿಸಲಾಯಿತು. ಒಂದು ತಲಾಂತು ಸುಮಾರು 6000 ಪಾವಲಿಯಾಗಿದ್ದು, ಇದು ಒಬ್ಬ ಕೆಲಸಗಾರನ ಇಪ್ಪತ್ತು ವರ್ಷಗಳ ಕೂಲಿಗೆ ಸಮನಾಗಿತ್ತು.

*ಸಾಹುಕಾರರು* (ವ. 27): ಸಾಮಾನ್ಯ ರೀತಿಯ ಬ್ಯಾಂಕಿಂಗ್ ವ್ಯವಸ್ಥೆಯನ್ನು ಹೊಸ ಒಡಂಬಡಿಕೆಯ ಕಾಲದಲ್ಲಿ ಯೆಹೂದ್ಯರು ಮತ್ತು ಅನ್ಯರ ನಡುವೆ ಸಹ ಕಾಣಬಹುದಾಗಿದೆ. ಯೆಹೂದ್ಯರು ಪರಸ್ಪರ ಬಡ್ಡಿಯನ್ನು ಕೇಳುವಂತಿರಲಿಲ್ಲ (ವಿಮೋ.22:25), ಆದರೆ ಅವರು ಪರದೇಶದವರಿಗೆ (ಅನ್ಯರಿಗೆ) ಬಡ್ಡಿಗೆ ಸಾಲವನ್ನು ಕೊಡಬಹುದಾಗಿತ್ತು (ಧರ್ಮೋ. 23:20).

*ಹೊರಗೆ ಕತ್ತಲೆಗೆ … ಹಲ್ಲುಕಡಿಯೋಣವೂ* (ವ. 30): ***ಮದುವೆಯ ಊಟ/ಭೋಜನ*** ಎಂಬ ಅಧ್ಯಯನದಲ್ಲಿನ ಮತ್ತಾಯ 22:13 ರ ಟಿಪ್ಪಣಿ ನೋಡಿರಿ.

### ಪ್ರಶ್ನೆಗಳು


1. ಒಬ್ಬ ಮನುಷ್ಯನು ಯಾಕೆ ತನ್ನ ಆಸ್ತಿಯನ್ನು ತನ್ನ ಆಳುಗಳಿಗೆ ಒಪ್ಪಿಸಿಕೊಡುತ್ತಾನೆ (ವ. 14)?
2. ಇಬ್ಬರು ಆಳುಗಳು ತಮಗೆ ಒಪ್ಪಿಸಿಕೊಟ್ಟ ದೊಡ್ಡ ಮೊತ್ತದ ಹಣವನ್ನು ಏನು ಮಾಡುತ್ತಾರೆ (ವ. 16-17)?
3. ಸಣ್ಣ ಮೊತ್ತದ ಹಣವನ್ನು ಸ್ವೀಕರಿಸಿದ ಆಳು ತನಗೆ ಒಪ್ಪಿಸಿಕೊಟ್ಟಿದ್ದನ್ನು ಏನು ಮಾಡುತ್ತಾನೆ (ವ. 18)?
4. ತಮ್ಮ ಯಜಮಾನನು ತಿರುಗಿ ಬಂದಾಗ ಮೊದಲ ಇಬ್ಬರು ಆಳುಗಳಿಗೆ ಏನಾಗುತ್ತದೆ (ವ. 19-24)?
5. ತನ್ನ ವಿಫಲತೆಗಾಗಿ ಮೂರನೇ ಆಳು ಏನೆಂದು ಕಾರಣ ಕೊಡುತ್ತಾನೆ (ವ. 24-25)?
6. ಮೂರನೇ ಆಳನ್ನು ಯಜಮಾನನು ಎನೆಂದು ಕರೆಯುತ್ತಾನೆ? ಮತ್ತು ಆತನ ಬಗ್ಗೆ ಅವನು ಯಾಕೆ ಅಷ್ಟೊಂದು ಕಠಿಣ ಪದವನ್ನು ಬಳಸುತ್ತಾನೆ (ವ. 26)?
7. ಮೂರನೇ ಆಳಿಗೆ ಏನಾಗುತ್ತದೆ (ವ. 28-30)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಈ ಸಾಮ್ಯದಲ್ಲಿನ ಹೋಲಿಕೆಯ ಅಂಶವೇನು?
2. ಈ ರೀತಿಯ ಸಂದೇಶದ ಬಗ್ಗೆ ನಿಮ್ಮ ಅಭಿಪ್ರಾಯವೇನಾಗಿರಬಹುದು: ಒಬ್ಬ ಸಭಾಪಾಲಕರು ತಲಾಂತುಗಳ ಸಾಮ್ಯದ ಆಧಾರದ ಮೇಲೆ ಒಂದು ಪ್ರಸಂಗ ಮಾಡುತ್ತಾರೆ. ಅವರು ಸಾಮ್ಯದಲ್ಲಿನ ಯಜಮಾನನು ಯೇಸುವಾಗಿದ್ದು ತನ್ನ ಸ್ವರ್ಗಾರೋಹಣದ ಸಮಯದಲ್ಲಿ ಸಭೆಯ ಸೇವೆಯನ್ನು ಎಲ್ಲಾ ವಿಶ್ವಾಸಿಗಳಿಗೆ ಒಪ್ಪಿಸಿಕೊಟ್ಟಿದ್ದಾನೆ. ಕೆಲ ವಿಶ್ವಾಸಿಗಳಿಗೆ ಆತನು ಹೆಚ್ಚು ಜವಾಬ್ದಾರಿಯನ್ನು, ಪ್ರತಿಯೊಬ್ಬರ ಸಾಮಾರ್ಥ್ಯಕ್ಕೆ ತಕ್ಕಂತೆ ಇತರ ವಿಶ್ವಾಸಿಗಳಿಗೆ ಸ್ವಲ್ಪ ಜವಾಬ್ಧಾರಿಯನ್ನು ಕೊಟ್ಟಿದ್ದಾನೆ.

ಯೇಸುವು ತಿರುಗಿ ಬರುವಾಗ ಪ್ರತಿಯೊಬ್ಬ ವಿಶ್ವಾಸಿಗಳ ಬಳಿಯಲ್ಲಿಯೂ ಅವರು ತಮ್ಮ ಜವಾಬ್ದಾರಿಗಳನ್ನು ಹೇಗೆ ನಿರ್ವಹಿಸಿದರೆಂಬುದರ ಲೆಕ್ಕವನ್ನು ಕೇಳುತ್ತಾನೆ. ತಮ್ಮ ಜವಾಬ್ದಾರಿಯನ್ನು ಉತ್ತಮವಾಗಿ ನಿರ್ವಹಿಸಿದ ವಿಶ್ವಾಸಿಗಳನ್ನು ಆತನು ಹೊಗಳಿ ಅವರನ್ನು ಪರಲೋಕದಲ್ಲಿನ ತನ್ನ ಆನಂದಕ್ಕೆ ಆಹ್ವಾನಿಸುತ್ತಾನೆ. ಆದರೆ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದ ಮತ್ತು ನಂಬಿಗಸ್ತರಾಗಿರದ ವಿಶ್ವಾಸಿಗಳನ್ನು ಬೈದು, ಅವರನ್ನು ಖಂಡಿಸಿ ನರಕದಲ್ಲಿನ ಶಾಶ್ವತವಾದ ಶಿಕ್ಷೆಗೆ ತಳ್ಳುವನು ಎನ್ನುತ್ತಾನೆ.

3. ಲೂಕನು ಈ ಸುವಾರ್ತೆಯ ಒಂದು ವಿಭಿನ್ನ ರೂಪವನ್ನು ಹೊಂದಿದ್ದಾನೆ (ನೋಡಿ ಲೂಕ 19:12-27). ಮುಖ್ಯ ವ್ಯತ್ಯಾಸಗಳೇನು? ಕೆಲ ಅಂಶಗಳನ್ನು ಪಟ್ಟಿಮಾಡಿರಿ.



## 30. ಕುರಿಗಳು ಮತ್ತು ಆಡುಗಳು, ಮತ್ತಾಯ 25:31-46

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ವಿವರವನ್ನು ಮತ್ತಾಯನ ಸುವಾರ್ತೆಯಲ್ಲಿ ಮಾತ್ರ ಕಾಣಬಹುದಾಗಿದೆ. "ಕುರುಬನು ಆಡುಗಳನ್ನು ಕುರಿಗಳನ್ನು ಬೇರೆ ಬೇರೆ ಮಾಡುವ ಪ್ರಕಾರ" ಎಂಬ ಚಿತ್ರಣ ಇದೊಂದು ಸಾಮ್ಯವೋ ಎಂಬ ಆಲೋಚನೆಯನ್ನು ಓದುಗರಲ್ಲಿ ಮೂಡಿಸಿದರೂ ನಿಜಾರ್ಥದಲ್ಲಿ ಇದೊಂದು ಸಾಮ್ಯವಲ್ಲ. ಅಲ್ಲದೆ ವಾಸ್ತವಿಕವಾಗಿ ಇದೊಂದು ನ್ಯಾಯತೀರ್ಪಿನ ದೃಶ್ಯವೂ ಅಲ್ಲ, ಬದಲಾಗಿ ಒಂದು "ಪ್ರತ್ಯೇಕತೆಯ ದೃಶ್ಯವಾಗಿದೆ". ಮನುಷ್ಯಕುಮಾರನು ತನ್ನ ಮಹಿಮೆಯೊಂದಿಗೆ ಬರುವಾಗ ಆತನು ತನ್ನ ಮಹಿಮಾ ಸಿಂಹಾಸನದ ಮೇಲೆ ಕೂತುಕೊಂಡು ಒಬ್ಬ ಕುರುಬನು ಕುರಿಗಳನ್ನೂ ಆಡುಗಳನ್ನೂ ಬೇರೆ ಬೇರೆ ಮಾಡುವಂತೆ ಜನರನ್ನು ಒಬ್ಬರಿಂದೊಬ್ಬರನ್ನು ಬೇರೆ ಬೇರೆ ಮಾಡುವನು. ತಂದೆಯ ಆಶೀರ್ವಾದ ಹೊಂದಿದವರು ಲೋಕಾದಿಯಿಂದ ಅವರಿಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ಥ್ಯಕ್ಕೆ ಬಾಧ್ಯರಾಗುವರು. ಆದರೆ ಶಾಪಗ್ರಸ್ಥರು ಪಿಶಾಚನಿಗೂ, ಅವನ ದೂತರಿಗೂ ಸಿದ್ಧಮಾಡಿದ ನಿತ್ಯಬೆಂಕಿಯೊಳಕ್ಕೆ ಹೋಗುವರು.

ಸತ್ಯವೇದ ಪಂಡಿತರು ಈ ವಾಕ್ಯಭಾಗವನ್ನು ಮತ್ತು ಇದರ ವಿವರಗಳನ್ನು ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಇದರಿಂದ ಅವರು ಕ್ರೈಸ್ತೀಯ ಸಾಮಾಜಿಕ ಕಾರ್ಯಗಳ ಪ್ರಾಮುಖ್ಯತೆ ಅಥವಾ ಅಂತ್ಯಕಾಲದ ಮೇಲಿನ ತಮ್ಮ ಸಿದ್ಧಾಂತಗಳಿಗೆ ಬೆಂಬಲವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಕೆಲವು ವ್ಯಾಖ್ಯಾನುಗಳನ್ನು ನಾನು ನನ್ನ ಟಿಪ್ಪಣಿಯಲ್ಲಿ ತಿಳಿಸಿದ್ದೇನೆ. ಈ ವಾಕ್ಯಭಾಗದ ಕುರಿತ ನನ್ನ ಓದು ಎರಡು ಮೂಲ ಊಹೆಗಳನ್ನು ಆಧರಿಸಿದೆ: ಮೊದಲನೇಯದು, ಈ ಪುಸ್ತಕದ ಹಿನ್ನಲೆಯು ಇದು ಯೇಸುವಿನ ಎರಡನೇ ಬರೋಣವನ್ನು ಸೂಚಿಸುತ್ತದೆಂಬುದಾಗಿ ಹೇಳುತ್ತದೆ. ಎರಡನೇಯದು, "ಕೃಪೆಯಿಂದಲೇ ರಕ್ಷಣೆ" ಎಂಬ ಸಿದ್ಧಾಂತದ ಬಗ್ಗೆ ಹೊಸ ಒಡಂಬಡಿಕೆಯು ಸಂಪೂರ್ಣವಾಗಿ ಸ್ಪಷ್ಟವಾಗಿದೆ. ಹಾಗಾಗಿ "ಯೇಸುವಿನ ಸಹೋದರರಲ್ಲಿ ಕೇವಲ ಅಲ್ಪವಾದವನೊಬ್ಬನಿಗೆ" ತಾವು ಏನನ್ನು ಮಾಡಿದರೋ ಅದರಿಂದ "ಕುರಿಗಳು" ರಕ್ಷಿಸಲ್ಪಟ್ಟಿದ್ದಾರೆಂಬ ಯಾವುದೇ ಸಲಹೆಗಳು ತಪ್ಪಾದವುಗಳಾಗಿವೆ.

*ಮನುಷ್ಯಕುಮಾರನು ತನ್ನ ಮಹಿಮೆಯಿಂದ ...* ಕೂಡಿಬರುವಾಗ (ವ. 31): ಅತೀ ಸ್ವಾಭಾವಿಕವಾದ ರೀತಿಯಲ್ಲಿ ಇದನ್ನು "ಯೇಸುವಿನ ಎರಡನೇ ಬರೋಣದಲ್ಲಿ" ಎಂದು ವ್ಯಾಖ್ಯಾನಿಸಬಹುದು (ಹೋಲಿಸಿ ಮತ್ತಾ. 16:27, 24:30).

*ತನ್ನ ಮಹಿಮೆಯ ಸಿಂಹಾಸನದಲ್ಲಿ* (ವ. 31): ಈ ಸಿಂಹಾಸನವು ಅಧಿಕಾರ, ಉನ್ನತ ಸ್ಥಾನ, ರಾಜಯೋಗ್ಯ ಘನತೆಯ ಸಂಕೇತವಾಗಿದೆ.

*ಎಲ್ಲಾ ದೇಶಗಳ* (ವ. 32): ಈ ಮಾತು ಯೆಹೂದ್ಯ ಮತ್ತು ಅನ್ಯಮತಸ್ಥರೆಲ್ಲರನ್ನೂ ಸೂಚಿಸುತ್ತದೆ. ಇದು ಇಲ್ಲಿ ನಾವು ಕಾಣುವ ಕೇವಲ ಅನ್ಯಮತಸ್ಥ ದೇಶಗಳು ಮಾತ್ರ ಭಾಗವಹಿಸುವ ನ್ಯಾಯತೀರ್ಪಿನ ದೃಶ್ಯದ ವ್ಯಾಖ್ಯಾನಕ್ಕಿಂತ ಸಮಂಜಸವಾದುದ್ದಾಗಿದೆ. ಅಪೊಸ್ತಲರು "ಎಲ್ಲಾ ದೇಶಗಳ"ನ್ನು ಅವರು ಮಹಾ ಆಜ್ಞೆಗೆ ವಿಧೇಯರಾಗಿ (ಮತ್ತಾ. 28:19) ಸುವಾರ್ತೆಯನ್ನು ಯೆರೂಸಲೇಮು ಮೊದಲುಗೊಂಡು ಯೂದಾಯ, ಸಮಾರ್ಯ ಮತ್ತು ರೋಮನ್ ಸಾಮ್ರಾಜ್ಯದುದ್ದಕ್ಕೂ ಸಾರಿದ ರೀತಿಯಲ್ಲಿ ಅರ್ಥೈಸಿಕೊಂಡರು. ಪೌಲನು ಸುವಾರ್ತೆಯ ಕುರಿತು ಹೇಳಿದಂತೆ "ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟು ಮಾಡುವಂಥದ್ದಾಗಿದೆ (ರೋಮಾ. 1:16).

*ಬೇರೆ ಬೇರೆ ಮಾಡಿ* (ವ. 32): ಜನರನ್ನು ಪ್ರತ್ಯೇಕಿಸುವ ಕುರಿತಾದ ಮತ್ತಾಯನ ಈ ಹಿಂದಿನ ಎರಡು ವಿವರಗಳನ್ನು 7:21-23, ಮತ್ತಾ. 13:40-43 ಹೋಲಿಸಿರಿ.

*ಆಡುಗಳನ್ನೂ ಕುರಿಗಳನ್ನೂ* (ವ. 32): ಪ್ರಾಚೀನ ಪ್ಯಾಲೆಸ್ತೀನ್ ಹಳ್ಳಿ ಪ್ರದೇಶಗಳಲ್ಲಿ ಹಗಲಿನ ವೇಳೆ ಕುರಿ ಮತ್ತು ಆಡುಗಳು ಒಟ್ಟಿಗೇ ಇರುತ್ತಿದ್ದವು. ಆದರೆ ರಾತ್ರಿ ವೇಳೆ ಅವು ಬೇರ್ಪಡುತ್ತಿದ್ದವು. ಕುರಿಯು ಶೀತಗಾಳಿಗೆ ಹೊಂದಿಕೊಳ್ಳುತ್ತಿತ್ತು, ಆದರೆ ಬೆಚ್ಚಗಿರುವುದಕ್ಕಾಗಿ ಆಡನ್ನು ಹಿಂಡಿನೊಂದಿಗೆ ಸೇರಿಸಬೇಕಾಗಿತ್ತು. ಕುರಿಗಳು ಆಡಿಗಿಂತಲೂ ಅಮೂಲ್ಯವಾದವುಗಳಾಗಿದ್ದವು.

*ತನ್ನ ಬಲಗಡೆಯಲ್ಲಿ* (ವ. 32): ಬಲಗಡೆಯು ಬಲ ಮತ್ತು ಗೌರವದ ಸ್ಥಾನವಾಗಿತ್ತು.

*ಅರಸನು* (ವ. 34): ಯೇಸು ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಂಡಿರುತ್ತಾನೆ (ಹೋಲಿಸಿ ವ. 31).

ಸ್ವಾಸ್ಥ್ಯ (ವ. 34): ಹೋಲಿಸಿ ಎಫೆಸ. 1:14,18, ಕೊಲೆಸ್ಸೆ 1:12, ಇಬ್ರಿಯ 9:15, 2 ಪೇತ್ರ 1:4.

*"ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ, ನಾನು ಬಾಯಾರಿದ್ದೆನು, ನನಗೆ ಕುಡಿಯುವುದಕ್ಕೆ ಕೊಟ್ಟಿರಿ, ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ, ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವುದಕ್ಕೆ ಕೊಟ್ಟಿರಿ, ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವುದಕ್ಕೆ ಬಂದಿರಿ, ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವುದಕ್ಕೆ ಬಂದಿರಿ"* (ವ. 35-36): ಇದು ಹೊಸ ಒಡಂಬಡಿಕೆಯ ಕಾಲದಲ್ಲಿನ ಒಳ್ಳೆಯ ಯೆಹೂದಿ ನೀತಿಶಾಸ್ತ್ರದ ಸಾರಾಂಶವಾಗಿದೆ. ಇವೆಲ್ಲವೂ ಎಲ್ಲಾ ಸಭ್ಯ ಯೆಹೂದ್ಯರು ಮಾಡಬೇಕೆಂದು ಅಪೇಕ್ಷಿಸಿದ ಒಳ್ಳೆಯ ಕಾರ್ಯಗಳಾಗಿದ್ದವು. ಹೀಗಾಗಿ ಈ ರೀತಿಯ ಸಾಮಾಜಿಕ ಕಾರ್ಯದಲ್ಲಿ ಭಾಗಿಯಾಗುವುದು ಒಬ್ಬ ವ್ಯಕ್ತಿಯನ್ನು ನಿತ್ಯವಾದ ದೇವರ ರಾಜ್ಯದಲ್ಲಿ ಆಶೀರ್ವದಿಸಲ್ಪಟ್ಟವರ ನಡುವಿನ ಸ್ಥಾನಕ್ಕೆ ಅರ್ಹನನ್ನಾಗಿ ಮಾಡುತ್ತದೆಂದು ಹೇಳುವುದು ಸಮಂಜಸವಾಗಿ ತೋರುವುದಿಲ್ಲ.

*ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ* (ವ. 40): ಈ ಹೇಳಿಕೆಯು ಹೆಚ್ಚು ಕಡಿಮೆ ಐದು ರೀತಿಯಲ್ಲಿ ವ್ಯಾಖ್ಯಾನಿಸಲ್ಪಟ್ಟಿದೆ: 1. ಬಡವರು ಮತ್ತು ಕೊರತೆಯಲ್ಲಿರುವವರೆಲ್ಲರು, 2. ಕ್ರೈಸ್ತೀಯ ಸುವಾರ್ತಾ ಕೆಲಸಗಾರರು ಮತ್ತು ಮಿಶನರಿಗಳು (ಬೇರೆ ದೇಶಗಳಿಗೆ ಸುವಾರ್ತೆಯನ್ನು ಕೊಂಡೊಯ್ಯುವವರು), 3. ಯೇಸುವಿನ ಶಿಷ್ಯರು (ಹೋಲಿಸಿ ಮತ್ತಾ. 12:46-50 ಮತ್ತು 28:8-10), 4.ಎಲ್ಲಾ ಕ್ರೈಸ್ತ ವಿಶ್ವಾಸಿಗಳು, ಸಭೆ ಮತ್ತು 5. ಯೆಹೂದಿ ಜನಾಂಗ (ರಾಷ್ಟ್ರ). ಇಡೀ ಹೊಸ ಒಡಂಬಡಿಕೆಯ ಹಿನ್ನಲೆಯಲ್ಲಿ 5 ನೇ ಸಂಖ್ಯೆಗೆ ಯಾವ ಅರ್ಥವು ಇಲ್ಲ. ಸಂಖ್ಯೆ 1 ತುಂಬಾ ವಿಶಾಲವಾಗಿ ತೋರಿದರೆ, ಸಂಖ್ಯೆ 2 ತೀರಾ ಇಕ್ಕಟ್ಟಾಗಿ/ಸಣ್ಣದಾಗಿ ಮತ್ತು ಸಂಖ್ಯೆ 3 ತೀರಾ ಸೀಮಿತವಾಗಿ ತೋರುತ್ತವೆ. ಹಾಗಾಗಿ ಯೇಸು ಬಹುಶಃ ಪರಲೋಕ ರಾಜ್ಯದಲ್ಲಿನ ತನ್ನ ಸಹ ಸಹೋದರರನ್ನು, ಎಲ್ಲಾ ಕ್ರೈಸ್ತ ವಿಶ್ವಾಸಿಗಳನ್ನು, ಸಭೆಯನ್ನು ಸೂಚಿಸುತ್ತಿರಬಹುದು (ಸಂಖ್ಯೆ 4).

*ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯಬೆಂಕಿಯೊಳಕ್ಕೆ* (ವ. 41): ಪ್ರಕಟಣೆ 19:20, 20:10,15 ಯೂದ 7 ರೊಂದಿಗೆ ಹೋಲಿಸಿ.

*ನಿತ್ಯಶಿಕ್ಷೆಗೂ … ನಿತ್ಯಜೀವಕ್ಕೂ* (ವ. 46): ಹೋಲಿಸಿ ದಾನಿಯೇಲ 12:2, ಯೋಹಾನ 5:24, 28-29, ಗಲಾತ್ಯ 6:8.

**ಪ್ರಶ್ನೆಗಳು**

1. "ಜನರನ್ನು ಬೇರೆ ಬೇರೆ ಮಾಡುವ" ವಾಕ್ಯಭಾಗದ ಹಿನ್ನಲೆಯೇನು (ವ. 31)?
2. ಈ "ಬೇರ್ಪಡಿಸುವಿಕೆ"ಯನ್ನು ವರ್ಣಿಸಲು ಯಾವ ಉಪಮೇಯವನ್ನು ಉಪಯೋಗಿಸಲಾಗಿದೆ (ವ. 32-33)?
3. ಜನರನ್ನು ದೇವರ ರಾಜ್ಯಕ್ಕೆ ಆಹ್ವಾನಿಸುವವರು ಯಾರು (ವ. 34)?
4. ರಾಜ್ಯವು ಹೇಗೆ ವರ್ಣಿಸಲ್ಪಟ್ಟಿದೆ (ವ. 34)?
5. ಆಶೀರ್ವಾದ ಹೊಂದಿದವರು ಹೇಗೆ ವರ್ಣಿಸಲ್ಪಟ್ಟಿದ್ದಾರೆ (ವ. 35-37)?
6. ನೀತಿವಂತರು ಯಾಕೆ ಆಶ್ಚರ್ಯಪಡುತ್ತಾರೆ (ವ. 37-39)?

7. ಅರಸನು ನೀತಿವಂತರಿಗೆ ಯಾವ (ಏನೆಂದು) ಖಚಿತತೆಯನ್ನು ಕೊಡುತ್ತಾನೆ (ವ. 40)?
8. ಶಾಪಗ್ರಸ್ತರಿಗೆ ಏನಾಗುತ್ತದೆ (ವ. 41)?
9. ಶಾಪಗ್ರಸ್ತರು ಹೇಗೆ ವರ್ಣಿಸಲ್ಪಟ್ಟಿದ್ದಾರೆ (ವ. 42-43,46)?
10. ಶಾಪಗ್ರಸ್ತರು ಯಾಕೆ ಆಶ್ಚರ್ಯಪಡುತ್ತಾರೆ (ವ. 44)?
11. ಶಾಪಗ್ರಸ್ತರಿಗೆ ಅರಸನು ಏನೆಂದು ಖಚಿತತೆಯನ್ನು ಕೊಡುತ್ತಾನೆ (ವ. 45)?
12. "ಜನರನ್ನು ಬೇರೆ ಬೇರೆ ಮಾಡುವ" ವಾಕ್ಯಭಾಗವನ್ನು (ವಿಷಯ) ಯೇಸು ಹೇಗೆ ಮುಕ್ತಾಯಗೊಳಿಸುತ್ತಾನೆ (ವ. 46)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ವಾಕ್ಯಭಾಗವನ್ನು ಹೇಗೆ ವ್ಯಾಖ್ಯಾನಿಸಬೇಕೆಂಬುದರ ಬಗ್ಗೆ ವಿಶ್ವಾಸಿಗಳು ಯಾಕೆ ಅಷ್ಟೊಂದು ವಾಧಿಸುತ್ತಾರೆಂಬುದಾಗಿ ನೀವು ಯೋಚಿಸುವಿರಿ?
2. ನೀತಿವಂತರು ಮತ್ತು "ಕ್ರಿಯೆಗಳಿಂದ ರಕ್ಷಣೆಯ" ದೈವಶಾಸ್ತ್ರವನ್ನು ಅಳವಡಿಸಿಕೊಳ್ಳದೆ ಒಳ್ಳೆಯ ಕಾರ್ಯಗಳ ಪಟ್ಟಿಯ ನಡುವಿನ ಸಂಬಂಧವನ್ನು ನೀವು ಹೇಗೆ ವಿವರಿಸುವಿರಿ?

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ**

ಈ ಅಧ್ಯಯನದಲ್ಲಿನ ವಿಷಯಗಳ ಬೆಳಕಿನಲ್ಲಿ ಮತ್ತಾ. 25:31-46 ನ್ನು ವಿಮರ್ಶಿಸಿ. ಆನಂತರ ಸಭೆಯಲ್ಲಿನ ಯೌವನವನಸ್ಥರ ಗುಂಪಿಗೆ "ಜನರನ್ನು ಪ್ರತ್ಯೇಕಿಸುವುದರ" ಕುರಿತಾಗಿ ಈ ವಾಕ್ಯಭಾಗದ ವಿವರಣೆಯನ್ನು ಸಿದ್ಧಪಡಿಸಿ. ಊಹೆಗಳನ್ನು, ಮರ್ಮಗಳನ್ನು ಆಳವಾದ ಸತ್ಯಗಳನ್ನು ವಿಸರ್ಜಿಸಿರಿ. ನಿಮ್ಮ ವಿವರಣೆಯು ಈ ಪ್ರಶ್ನೆಗಳ ಉತ್ತರಗಳ ಮೇಲೆ ಆಧಾರವಾಗಿರಲಿ.

- ಯಾವಾಗ ಈ ಬೇರ್ಪಡಿಸುವಿಕೆಯು ಆಗುತ್ತದೆ? ಉತ್ತರ: ಯೇಸುವಿನ ಎರಡನೇ ಬರೋಣದಲ್ಲಿ.
- ಈ ಬೇರ್ಪಡಿಸುವಿಕೆಗೆ ಯಾರೆಲ್ಲಾ ಸಂಭಂದಪಟ್ಟಿರುವವರು? ಉತ್ತರ: ಎಲ್ಲಾ ಜನರು, ಯೆಹೂದ್ಯರು ಮತ್ತು ಅನ್ಯರು.
- ಯಾವ ಎರಡು ಗುಂಪಿನ ಜನರು ಪ್ರತ್ಯೇಕಿಸಲ್ಪಡುವವರು? ಉತ್ತರ: ಆಶೀರ್ವಾದ ಹೊಂದಿದವರು ಮತ್ತು ಶಾಪಗ್ರಸ್ಥರು.
- ಆಶೀರ್ವಾದ ಹೊಂದಿದವರಿಗೆ ಏನಾಗುತ್ತದೆ? ಉತ್ತರ: ಅವರು ದೇವರ ರಾಜ್ಯದೊಳಗೆ ಸೇರುವರು.
- ಯಾಕೆ ಅವರು ಆಶೀರ್ವಾದ ಹೊಂದಿದವರಾಗಿದ್ದಾರೆ? ಉತ್ತರ: ಇದು ಈ ವಾಕ್ಯಭಾಗದಲ್ಲಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿಲ್ಲ, ಆದರೆ ಯೇಸುವನ್ನು ತಮ್ಮ ಸ್ವಂತ ರಕ್ಷಕನಾಗಿ ಅಂಗೀಕರಿಸಿದವರು ಆಶೀರ್ವಾದ ಹೊಂದಿದವರಾಗಿದ್ದಾರೆ ಮತ್ತು ಅವರು ದೇವರ ರಾಜ್ಯಕ್ಕೆ ಬಾಧ್ಯರಾಗುವವರು ಎಂಬುದನ್ನು ಯೇಸುಕ್ರಿಸ್ತನ ಮತ್ತು ಪೌಲನ ಭೋದನೆಗಳಿಂದ ತಿಳಿದವರಾಗಿದ್ದೇವೆ.
- ಶಾಪಗ್ರಸ್ಥರಿಗೆ ಏನಾಗುತ್ತದೆ? ಉತ್ತರ: ಅವರು ನಿತ್ಯ ಬೆಂಕಿಯೊಳಗೆ ಹಾಕಲ್ಪಡುವರು.
- ಆ ಶಾಪಗ್ರಸ್ಥರು ಯಾರು? ಉತ್ತರ: ವಾಕ್ಯಭಾಗದಲ್ಲಿ ಇದನ್ನು ಸ್ಪಷ್ಟವಾಗಿ ತಿಳಿಸಿಲ್ಲ, ಆದರೆ ಯೇಸುಕ್ರಿಸ್ತನನ್ನು ತಮ್ಮ ಸ್ವಂತ ರಕ್ಷಕನಾಗಿ ಅಂಗೀಕರಿಸದೆ ಇರುವವರು ನಿತ್ಯ ಜೀವಕ್ಕೆ ಬಾಧ್ಯರಾಗುವುದಿಲ್ಲ ಮತ್ತು ಅವರು ದೇವರ ರಾಜ್ಯಕ್ಕೂ ಸೇರುವುದಿಲ್ಲ ಎಂಬುದನ್ನು ಯೇಸುವಿನ ಮತ್ತು ಪೌಲನ ಬೋಧನೆಗಳಿಂದ ತಿಳಿದಿದ್ದೇವೆ.
- ಆಶೀರ್ವಾದ ಹೊಂದಿದವರು ಮತ್ತು ಶಾಪಗ್ರಸ್ಥರನ್ನು ಹೇಗೆ ವರ್ಣಿಸಲಾಗಿದೆ? ಉತ್ತರ: ಆಶೀರ್ವಾದ ಹೊಂದಿದವರು ತಮ್ಮಲ್ಲಿ ಪವಿತ್ರಾತ್ಮನ ಫಲಗಳು ಕಾಣುವುದರಿಂದ ಮತ್ತು ತಮ್ಮ ಜೀವಿತದಲ್ಲಿ ಪವಿತ್ರಾತ್ಮ ಅವರ ಮೂಲಕ ಕಾರ್ಯ ಮಾಡುವುದಕ್ಕೆ ಅವರು ತಮ್ಮನ್ನು ಒಪ್ಪಿಸಿಕೊಟ್ಟ ರೀತಿಯಿಂದ ತಾವು ಯೇಸುಕ್ರಿಸ್ತನಿಗೆ ಸೇರಿದವರಾಗಿದ್ದೇವೆ ಎಂಬುದನ್ನು ತೋರ್ಪಡಿಸಿದ್ದಾರೆ. ಶಾಪಗ್ರಸ್ಥರ ಮನೋಭಾವನೆಯೇ ಅವರು ಯೇಸುಕ್ರಿಸ್ತನಿಗೆ ಮತ್ತು ಆತನ ರಾಜ್ಯಕ್ಕೆ ಸೇರಿದವರಲ್ಲ ಎಂಬುದನ್ನು ಪ್ರಕಟಿಸುತ್ತದೆ.

- ಈ ಬೇರ್ಪಡಿಸುವಿಕೆಯು ಎಲ್ಲಿ ನಡೆಯುತ್ತದೆ? ಉತ್ತರ: ಈ ಬೇರ್ಪಡಿಸುವಿಕೆಯು ಯೇಸುಕ್ರಿಸ್ತನ ಬರೋಣದ ವೇಳೆ ಆಗುತ್ತದೆ. ಆದರೆ ಒಂದು ರೀತಿಯಲ್ಲಿ ಇದು ಈ ಪ್ರಸ್ತುತ ಯುಗದಲ್ಲಿ ಈಗಾಗಲೇ ಆಗಿದೆ. ಇದು ಜನರು ಯೇಸುವನ್ನು ಸ್ವೀಕರಿಸಿ ಅಥವಾ ತಿರಸ್ಕರಿಸಿದಾಗೆಲ್ಲಾ ಆಗುತ್ತದೆ. ಆತನನ್ನು ಅಂಗೀಕರಿಸಿದವರೆಲ್ಲರೂ ಆಶೀರ್ವಾದ ಹೊಂದಿದವರಾಗುತ್ತಾರೆ. ಆತನನ್ನು ತಿರಸ್ಕರಿಸಿದವರೆಲ್ಲರೂ ಶಾಪಗ್ರಸ್ಥರಾಗುತ್ತಾರೆ. ಹಾಗಾಗಿ ಈ ಪ್ರಸ್ತುತ ಕಾಲದಲ್ಲಿನ ನಮ್ಮ ನಿರ್ಧಾರಗಳು ನಮ್ಮ ನಿತ್ಯತ್ವವನ್ನು ನಿರ್ಧರಿಸುತ್ತವೆ.



# ಯೋಹಾನನ ಸುವಾರ್ತೆಯಿಂದ ಎಂಟು ಅಧ್ಯಯನಗಳು

**ಪೀಠಿಕೆ**

ಈ ಒಂದು ಘಟಕವು ಯೇಸು ಮತ್ತು ಆತನ ಸೇವೆ ಕುರಿತಾಗಿ ಯೋಹಾನನ ಸುವಾರ್ತೆಯಿಂದ ಎಂಟು ಅಧ್ಯಯನಗಳನ್ನು ಒಳಗೊಂಡಿದೆ. ಇದು ಪುಸ್ತಕದ ಈ ಹಿಂದಿನ ವಿಭಾಗಗಳಲ್ಲಿ ಕಂಡು ಬರದೆ ಇರುವ ವಿಷಯಗಳನ್ನು ಮಾತ್ರ ಒಳಗೊಂಡಿದೆ. ಇದರ ಗಮನವು ಮುಖ್ಯವಾಗಿ ಘಟನೆಗಳು ಮತ್ತು ಕಥೆಗಳ ಮೇಲಾಗಿದೆ, ಯೋಹಾನನ ಸುವಾರ್ತೆ ಮತ್ತು ಅದರ ಸಂದೇಶವನ್ನು ಬೇರೆ ಪ್ರತ್ಯೇಕವಾದ ಅಧ್ಯಯನದಲ್ಲಿ ಇನ್ನೂ ವಿವರವಾಗಿ ಅಭ್ಯಾಸಿಸಲಿದ್ದೇವೆ.

1. ಯೇಸುವು ಫಿಲಿಪ್ಪ ಮತ್ತು ನತಾನಯೇಲನನ್ನು ಕರೆಯುವುದು, ಯೋಹಾನ 1:43-51
2. ಗಲಿಲಾಯದ ಕಾನಾ ಊರಿನ ಮದುವೆ, ಯೋಹಾನ 2:1-12
3. ಯೇಸು ಮತ್ತು ನಿಕೊದೇಮನು, ಯೋಹಾನ 3:1-18
4. ಯೇಸು ಮತ್ತು ಸಮಾರ್ಯದ ಸ್ತ್ರೀ, ಯೋಹಾನ 4:3-42
5. ಬೇಥೆಸ್ಥ ಬಳಿಯ ಅದ್ಭುತ, ಯೋಹಾನ 5:1-15
6. ವ್ಯಭಿಚಾರದಲ್ಲಿ ಸಿಕ್ಕ ಸ್ತ್ರೀ, ಯೋಹಾನ 8:2-11
7. ಯೇಸು ಹುಟ್ಟು ಕುರುಡನನ್ನು ಸ್ವಸ್ಥಪಡಿಸಿದ್ದು, ಯೋಹಾನ 9:1-41
8. ಯೇಸು ಸತ್ತುಹೋಗಿದ್ದ ಲಾಜರನನ್ನು ಬದುಕಿಸಿದ್ದು, ಯೋಹಾನ 11:1-44

## 1. ಯೇಸು ಫಿಲಿಪ್ಪ ಮತ್ತು ನತಾನಯೇಲನನ್ನು ಕರೆಯುವುದು, ಯೋಹಾನ 1:43-51

### ಪೀಠಿಕೆ ಮತ್ತು ಟಿಪ್ಪಣಿಗಳು

ಯೋಹಾನನ ಸುವಾರ್ತೆಯ ಮೊದಲನೇ ಅಧ್ಯಯನದಲ್ಲಿ ಸ್ನಾನಿಕನಾದ ಯೋಹಾನನು ಯೊರ್ದನ್ ಹೊಳೆಯ ಪೂರ್ವ ತೀರದಲ್ಲಿ ಸೇವೆ ಮಾಡುವುದನ್ನು ನಾವು ಕಾಣಬಹುದು (ಯೋಹಾನ 1:28). ಯೇಸುವು ಆತನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದಕ್ಕಾಗಿ ಬರುತ್ತಾನೆ. ಆನಂತರ ಆತನು ಸೈತಾನನಿಂದ ಶೋಧಿಸಲ್ಪಡುವುದಕ್ಕಾಗಿ ನಲ್ವತ್ತು ದಿನಗಳ ಕಾಲ ಅಡವಿಗೆ ಹೋಗುತ್ತಾನೆ (ಮಾರ್ಕ 1:9-13). ಯೇಸುವು ಹಿಂತಿರುಗಿ ಯೊರ್ದನಿಗೆ ಬಂದಾಗ ಆತನನ್ನು ಕಂಡ ಸ್ನಾನಿಕನಾದ ಯೋಹಾನನು ಈ ರೀತಿಯಾಗಿ ಉದ್ಗರಿಸುತ್ತಾನೆ, "ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು. ಈತನೇ ದೇವಕುಮಾರನು" (ಯೋಹಾನ 1:29-34). ಯೋಹಾನನ ಇಬ್ಬರು ಶಿಷ್ಯರು ಯೋಹಾನನ ಸಾಕ್ಷಿಯನ್ನು ಕೇಳಿ ಯೇಸುವನ್ನು ಹಿಂಬಾಲಿಸಲು ನಿರ್ಧರಿಸುತ್ತಾರೆ. ಆನಂತರ ಅವರು ಅನೇಕ ಶಿಷ್ಯರನ್ನು ಯೇಸುವಿನ ಬಳಿಗೆ ಕರೆತರುತ್ತಾರೆ.

*ಫಿಲಿಪ್ಪ ... ಅಂದ್ರೇಯ ಮತ್ತು ಪೇತ್ರ* (ವ. 43-44): ಇವರು ಯೇಸುವಿನ ಹನ್ನೆರಡು ಮಂದಿ ಅಪೊಸ್ತಲರಲ್ಲಿ ಮೂವರಾಗಿದ್ದಾರೆ. ಇವರೆಲ್ಲರೂ ಗಲಿಲಾಯದ ಸಮುದ್ರದ ಉತ್ತರ ತೀರದ ಮೇಲಿರುವ ಬೇತ್ಸಾಯಿದ ಊರಿನಿಂದ ಬಂದವರಾಗಿದ್ದಾರೆ. ಯೂದಾಯದಲ್ಲಿ ಸೇವೆ ಮಾಡುತ್ತಿರುವ ಸ್ನಾನಿಕನಾದ ಯೋಹಾನನನ್ನು ಸೇರಿಕೊಳ್ಳುವುದಕ್ಕಾಗಿ ಇವರು ತಮ್ಮ ಮನೆಯನ್ನು ಬಿಟ್ಟು ಬಂದಿರಬೇಕು.

*ನತಾನಯೇಲ* (ವ. 45): ಈತನು ಸಹ ಹನ್ನೆರಡು ಮಂದಿಯಲ್ಲಿ ಒಬ್ಬನಾಗಿದ್ದಾನೆ (ವ. 22:2 ನ್ನು ಹೋಲಿಸಿ ಇಲ್ಲಿ ಈತನು ಗಲಿಲಾಯದಲ್ಲಿನ ಕಾನಾದಿಂದ ಬಂದವನೆಂಬುದಾಗಿ ಹೇಳಲಾಗಿದೆ). ಸಮನಾಂತರ ಸುವಾರ್ತೆಗಳಲ್ಲಿ ಈತನನ್ನು ಬಾರ್ತೊಲೊಮಾಯ ಎಂಬುದಾಗಿ ಕರೆಯಲಾಗಿದೆ (ನೋಡಿ ಮತ್ತಾ. 10:3, ಮಾರ್ಕ 3:18, ಲೂಕ 6:14).

*ಯೋಸೇಫನ ಮಗನಾದ ನಜರೇತಿನ ಯೇಸು* (ವ. 45): ಯೇಸುವು ಯೂದಾಯದ ಬೇತ್ಲೆಹೇಮಿನಲ್ಲಿ ಹುಟ್ಟಿದನು, ಆದರೆ ಗಲಿಲಾಯದ ನಜರೇತಿನಲ್ಲಿ ಆತನು ಬೆಳೆದದ್ದರಿಂದ ಅದುವೇ ಆತನ ತವರು ನೆಲವಾಯಿತು. ಆತನು ಪವಿತ್ರಾತ್ಮನಿಂದ ಗರ್ಭತಳಿದಿದ್ದನು ಆದರೆ ಮರಿಯಳ ಗಂಡನಾದ ಯೋಸೇಫನು ಆತನ ಶಾಸನಾತ್ಮಕ ತಂದೆಯಾಗಿದ್ದಾನೆ.

*ಅಂಜೂರದ ಮರ* (ವ. 48): ಅಂಜೂರದ ಮರದ ನೆರಳು ಅಧ್ಯಯನ ಮಾಡುವುದಕ್ಕೆ ಮತ್ತು ಪ್ರಾಚೀನ ಪ್ಯಾಲೆಸ್ತೇನಿನಲ್ಲಿ ಬೇಸಿಗೆಕಾಲದಲ್ಲಿ ಪ್ರಾರ್ಥನೆ ಮಾಡುವುದಕ್ಕೆ ಒಂದು ಉತ್ತಮ ಸ್ಥಳವಾಗಿತ್ತು.

*ಪರಲೋಕವು ತೆರೆದಿರುವುದನ್ನು ... ಮನುಷ್ಯಕುಮಾರನ ಮೇಲೆ* (ವ. 51): ಯೇಸುವಿನ ಮಾತುಗಳು ಯಾಕೋಬನ ಕನಸನ್ನು ಪ್ರತಿಧ್ವನಿಸುತ್ತವೆ (ನೋಡಿ ಆದಿಕಾಂಡ 28:12). ಯೆಹೂದಿ ಸಂಪ್ರದಾಯದಲ್ಲಿ ಯಾಕೋಬನ ಏಣಿಯು ಭೂಮಿ ಮತ್ತು ಪರಲೋಕದ ನಡುವಿನ ಸಂಬಂಧವನ್ನು ಸೂಚಿಸುತ್ತದೆ. ಮನುಷ್ಯಕುಮಾರನಾದ ಯೇಸುವು ತನ್ನ ವಿಮೋಚನೆಯ ಕಾರ್ಯದ ಮೂಲಕ ಭೂಮಿ ಮತ್ತು ಆಕಾಶ (ಪರಲೋಕ) ಎರಡನ್ನು ಒಂದು ಹೊಸದಾದ ರೀತಿಯಲ್ಲಿ ಒಟ್ಟಿಗೆ ಸೇರಿಸುವವನಾಗಿದ್ದಾನೆ.

### ಪ್ರಶ್ನೆಗಳು

1. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೇನ್ ನಕ್ಷೆಯಲ್ಲಿ*** ಯೂದಾಯ, ಯೊರ್ದನ್ ಹೊಳೆ ಮತ್ತು ಗಲಿಲಾಯವನ್ನು ಕಂಡುಹಿಡಿಯಿರಿ.
2. ***ಯೇಸುವಿನ ಕಾಲದಲ್ಲಿನ ಗಲಿಲಾಯದ ನಕ್ಷೆಯಲ್ಲಿ*** ಗಲಿಲಾಯ ಸಮುದ್ರ, ಬೇತ್ಸಾಯಿದ, ನಜರೇತ್ ಮತ್ತು ಕಾನಾವನ್ನು ಕಂಡುಹಿಡಿಯಿರಿ.
3. ಯೇಸು ಎಲ್ಲಿಗೆ ಹೋಗಬೇಕೆಂದು ನಿರ್ಧರಿಸಿದನು (ವ. 43)?

4. ತನ್ನೊಂದಿಗೆ ಬರಬೇಕೆಂದು ಯೇಸು ಯಾರನ್ನು ಕೇಳಿಕೊಂಡನು (ವ. 43)?
5. ಫಿಲಿಪ್ಪನು ನತಾನಯೇಲನಿಗೆ ಯೇಸುವಿನ ಬಗ್ಗೆ ಏನೆಂದು ಹೇಳಿದನು (ವ. 45)?
6. ಯಾಕೆ ನತಾನಯೇಲನು ಯೇಸುವಿನ ಬಗ್ಗೆ ಸಂದೇಹ ಹೊಂದಿದ್ದನು (ವ. 46)?
7. ನತಾನಯೇಲನಿಗೆ ಮನವರಿಕೆ ಮಾಡಲು ಫಿಲಿಪ್ಪನು ಏನನ್ನು ಮಾಡುತ್ತಾನೆ (ವ. 46)?
8. ಯೇಸು ನತಾನಯೇಲನನ್ನು ಹೇಗೆ ವರ್ಣಿಸುತ್ತಾನೆ (ವ. 47)?
9. ಯೇಸು ನತಾನಯೇಲನನ್ನು ಈ ಹಿಂದೆ ಎಲ್ಲಿ ನೋಡಿದ್ದನು (ವ. 48)?
10. ಯೇಸುವಿನ ಬಗ್ಗೆ ನತಾನಯೇಲನು ಯಾವ ಹೆಸರನ್ನು ಬಳಸುತ್ತಾನೆ (ವ. 49)?
11. ಯೇಸು ಸ್ವತಃ ತನ್ನನ್ನು ಏನೆಂದು ಕರೆದುಕೊಳ್ಳುತ್ತಾನೆ (ವ. 51)?
12. ಯೇಸು ನತಾನಯೇಲನಿಗೆ ಏನೆಂದು ವಾಗ್ದಾನ ಮಾಡುತ್ತಾನೆ (ವ. 50-51)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಮೊದಲ ಶಿಷ್ಯರು ಹೇಗೆ ಯೇಸುವನ್ನು ಕೂಡಿಕೊಂಡರೆಂಬ ಯೋಹಾನನ ವಿವರವು (ಯೋಹಾನ 1:35-42), ನಾವು ಸಮನಾಂತರ ಸುವಾರ್ತೆಗಳಲ್ಲಿ ಕಾಣುವುದಕ್ಕಿಂತ ವಿಭಿನ್ನವಾಗಿದೆ (ನೋಡಿ ಮಾರ್ಕ 1:14-20). ಈ ವ್ಯತ್ಯಾಸವನ್ನು ನೀವು ಹೇಗೆ ವಿವರಿಸುವಿರಿ?
2. ಯೋಹಾನ 1:40-49 ರಿಂದ ಯೇಸುವಿನ ಬಳಿಗೆ ಜನರನ್ನು ಕರೆತರುವುದರ ಬಗ್ಗೆ ನಾವೇನನ್ನು ಕಲಿಯುತ್ತೇವೆ?



## 2. ಗಲಿಲಾಯದ ಕಾನಾ ಊರಿನಲ್ಲಿನ ಮದುವೆ, ಯೋಹಾನ 2:1-12

**ಪೀಠಿಕೆ ಮತ್ತು ಟಿಪ್ಪಣಿಗಳು**

ಯೂದಾಯದಲ್ಲಿ ಸ್ನಾನಿಕನಾದ ಯೋಹಾನನನ್ನು ಸಂಧಿಸಿದ ನಂತರ ಗಲಿಲಾಯಕ್ಕೆ ಬಂದೊಡನೆ ಯೇಸು ತನ್ನ ಕುಟುಂಬ ಮತ್ತು ಸ್ನೇಹಿತರೊಂದಿಗೆ ಒಂದು ಮದುವೆಗೆ ಹೋಗುತ್ತಾನೆ. ಅಲ್ಲಿಯೇ ಯೇಸು ತನ್ನ ಮೊದಲನೆಯ ಅದ್ಭುತಕಾರ್ಯವನ್ನು ಮಾಡಿದನೆಂಬುದಾಗಿ ಯೋಹಾನನು ಬರೆಯುತ್ತಾನೆ.

*ಮೂರನೆಯ ದಿನದಲ್ಲಿ* (ವ. 1): ಬಹುಶಃ ಯೇಸು ಯೂದಾಯದಿಂದ ಬಂದ ನಂತರವಿರಬಹುದು (ಹೋಲಿಸಿ 1:43).

*ಮದುವೆ* (ವ. 1): ಆ ದಿನಗಳಲ್ಲಿ ಮದುವೆಗಳು ಸಾಮಾನ್ಯವಾಗಿ ಅನೇಕ ದಿನಗಳವರೆಗೆ ನಡೆಯುತ್ತಿದ್ದವು. ಹಾಗಾಗಿ ಅತಿಥಿಗಳಿಗಾಗಿ ಸಾಕಷ್ಟು ಪ್ರಮಾಣದ ಆಹಾರ ಮತ್ತು ಪಾನಗಳನ್ನು ಒದಗಿಸಬೇಕಾಗಿತ್ತು.

*ಶುದ್ಧಾಚಾರದ ಪದ್ಧತಿಯ ಪ್ರಕಾರ ... ಕಲ್ಲಿನ ಬಾನೆಗಳನ್ನು* (ವ. 6): ದೈನಂದಿನ ಕೆಲಸ ಕಾರ್ಯದ ವೇಳೆ ಯೆಹೂದ್ಯರು ಶಾಸ್ತ್ರೋಕ್ತವಾಗಿ ಮೈಲಿಗೆಯಾಗುತ್ತಿದ್ದರು. ತಮ್ಮ ಕೈಗಳ ಮೇಲೆ ನೀರನ್ನು ಹೊಯ್ದುಕೊಳ್ಳುವುದರಿಂದ ಅವರು ಶುದ್ಧರಾಗುತ್ತಿದ್ದರು. ಹಲವಾರು ಅತಿಥಿಗಳಿರುವ ಒಂದು ದೀರ್ಘವಾದ ಹಬ್ಬದಲ್ಲಿ ಇದಕ್ಕಾಗಿ ಸಾಕಷ್ಟು ಪ್ರಮಾಣದ ನೀರು ಬೇಕಾಗಿತ್ತು. ಹಾಗಾಗಿ ಅಲ್ಲಿದ್ದ ಆರು ಬಾನೆಗಳು ದೊಡ್ಡಗಾತ್ರದ ಪಾತ್ರೆಗಳಾಗಿದ್ದು, ಪ್ರತಿ ಬಾನೆ ಸಹ ಸುಮಾರು 100 ಲೀಟರ್ ನೀರನ್ನು ಹಿಡಿಯುವ ಸಾಮಾರ್ಥ್ಯ ಹೊಂದಿದ್ದವು.

*ಸೂಚಕಕಾರ್ಯ* (ವ. 11): ನನ್ನ ಪ್ರಶ್ನೆ 6 ರ ಉತ್ತರವನ್ನು ನೋಡಿ.

**ಪ್ರಶ್ನೆಗಳು**

1. ಕಾನಾ ಊರಿನ ಮದುವೆಯ ವೇಳೆ ಯಾವ ಸಮಸ್ಯೆಯುಂಟಾಯಿತು (ವ. 3)?
2. ಈ ಸಮಸ್ಯೆಯ ಬಗ್ಗೆ ತನ್ನ ತಾಯಿಯಾದ ಮರಿಯಳು ಹೇಳಿದಾಗ ಯೇಸು ಅದಕ್ಕೆ ಹೇಗೆ ಪ್ರತಿಕ್ರಯಿಸಿದನು (ವ. 3-4)
3. ಮರಿಯಳು ಸೇವಕರಿಗೆ ಏನೆಂದು ಸೂಚನೆ ಕೊಡುತ್ತಾಳೆ (ವ. 5)?
4. ಯೇಸು ಸೇವಕರಿಗೆ ಏನೆಂದು ಸೂಚನೆ ಕೊಡುತ್ತಾನೆ (ವ. 7-8)?
5. ಯಾಕೆ ಪಾರುಪತ್ಯಗಾರನು ದ್ರಾಕ್ಷಾರಸದ ಬಗ್ಗೆ ಆಶ್ಚರ್ಯಗೊಳ್ಳುತ್ತಾನೆ (ವ. 10)?
6. ಗಲಿಲಾಯದ ಕಾನಾ ಊರಿನಲ್ಲಾದ ಘಟನೆಯನ್ನು ಯೋಹಾನನು ಹೇಗೆ ವರ್ಣಿಸುತ್ತಾನೆ (ವ. 11)?
7. ಮದುವೆಯ ನಂತರ ಯೇಸು ಎಲ್ಲಿಗೆ ಹೋಗುತ್ತಾನೆ (ವ. 12)?
8. ***ಯೇಸುವಿನ ಕಾಲದಲ್ಲಿನ ಗಲಿಲಾಯದ ನಕ್ಷೆಯಲ್ಲಿ*** ಕಾನಾ ಮತ್ತು ಕಪೆರ್ನೌಮನ್ನು ಕಂಡುಹಿಡಿಯಿರಿ.

**ಆಲೋಚಿಸಿರಿ ಮತ್ತು ಚರ್ಚಿಸಿರಿ**

ಗಲಿಲಾಯದಲ್ಲಿನ ಕಾನಾ ಊರಿನ ಮದುವೆಯ ಕುರಿತ ಕಥೆಯನ್ನು ಪುನಃ ಹೇಳಿರಿ. ನಿಮ್ಮ ಪದ ಬಳಸಿ, ಸತ್ಯವೇದ ನೋಡಬೇಡಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಊಹಿಸಿಕೊಳ್ಳಿರಿ.

## 3. ಯೇಸು ಮತ್ತು ನಿಕೊದೇಮನು, ಯೋಹಾನ 3:1-8

### ಪೀಠಿಕೆ ಮತ್ತು ಟಿಪ್ಪಣಿಗಳು

ಗಲಿಲಾಯದಲ್ಲಿ ಸ್ವಲ್ಪ ಸಮಯ ಕಳೆದ ಮೇಲೆ ಯೇಸು ಯೆರೂಸಲೇಮಿನಲ್ಲಿನ ಪಸ್ಕಹಬ್ಬದಲ್ಲಿ ಭಾಗವಹಿಸುವುದಕ್ಕಾಗಿ ಯೂದಾಯಕ್ಕೆ ಹಿಂತಿರುಗುತ್ತಾನೆ (2:13). ಅಲ್ಲಿ ಆತನು ಒಬ್ಬ ವಿಭಿನ್ನ ಯೆಹೂದಿ ನಾಯಕನಾದ ನಿಕೊದೇಮನೆಂಬ ಫರಿಸಾಯನೊಬ್ಬನನ್ನು ಸಂದಿಸುತ್ತಾನೆ. ಈ ವಾಕ್ಯಭಾಗವು ಅತಿ ಜನಪ್ರಿಯ ವಚನವನ್ನು ಒಳಗೊಂಡಿದೆ. ಆ 16 ನೇ ವಚನವು ಸುವಾರ್ತೆಯನ್ನು ಸಂಕ್ಷಿಪ್ತವಾಗಿ ಸಾರಾಂಶಗೊಳಿಸುತ್ತದೆ.

*ಹೊಸದಾಗಿ ಹುಟ್ಟಬೇಕು* (ವ. 3, 7): "ಹೊಸದಾಗಿ" ಎಂಬ ಗ್ರೀಕ್ ಪದದ ಅರ್ಥ "ಮೇಲಣಿಂದ" ಎಂಬುದಾಗಿದೆ (ಹೋಲಿಸಿ 1:13 ರಲ್ಲಿನ "ದೇವರಿಂದ"). ಆದರೆ ಇದೂ ಸಹ "ಹೊಸದಾಗಿ/ಪುನಃ" ಎಂಬರ್ಥವನ್ನು ಕೊಡುತ್ತದೆ.

*ನೀರಿನಿಂದಲೂ ಆತ್ಮದಿಂದಲೂ ಹುಟ್ಟದಿದ್ದರೆ* (ವ. 5): ಬಹುಶಃ ಈ ಮಾತನ್ನು "ಆತ್ಮದಿಂದ ಹುಟ್ಟುವುದು" ಇದರ ಮುಂದುವರೆದ ಒಂದು ಬದಲಾವಣೆಯೆಂಬಂತೆ ಅರ್ಥೈಸಿಕೊಳ್ಳಬೇಕಿದೆ ("ನೀರಿನಿಂದ ಹುಟ್ಟುವುದೆಂದರೆ" ಆತ್ಮನಿಂದ ಎಂದಾಗಿದೆ). ಪೌಲನ ಮಾತುಗಳೊಂದಿಗೆ ಹೋಲಿಸಿ, "ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟುಮಾಡುವುದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು (ತೀತ 3:5). ಅಲ್ಲದೆ ಸಮಾರ್ಯದ ಸ್ತ್ರೀಗೆ ಹೇಳುವ ನಿತ್ಯಜೀವವನ್ನು ಕೊಡುವ "ಜೀವ ಕೊಡುವ ನೀರಿನ" ಕುರಿತಾದ ಯೋಹಾನ 4:10,13 ರಲ್ಲಿನ ಯೇಸುವಿನ ಮಾತನ್ನು ಹೋಲಿಸಿರಿ. ಗಮನಿಸಿ, "ನೀರನ್ನು" ಕೆಲವೊಮ್ಮೆ ಹಳೇ ಒಡಂಬಡಿಕೆಯಲ್ಲಿ ದೇವರಾತ್ಮನ ಕುರಿತಾಗಿ ಅಲಂಕಾರಿಕವಾಗಿ ಸಹ ಉಪಯೋಗಿಸಲಾಗಿದೆ (ಉದಾ: ನೋಡಿ ಯೆಶಾಯ 44:3-4, ಯೆಹೆಜ್ಕೇಲ 36:25-26, ಯೋವೇಲ 2:23, 28).

*ನೀವು ... ನಿನಗೆ* (ವ. 7): ಮೊದಲು ನೀವು ಎಂಬುದು ಬಹುವಚನವಾಗಿದ್ದು (ಯೇಸು ಇಲ್ಲಿ ಎಲ್ಲರಿಗೂ ಅನ್ವಯವಾಗುವಂಥ ಒಂದು ಸಾಮಾನ್ಯ ಹೇಳಿಕೆಯನ್ನು ಹೇಳುತ್ತಾನೆ), ಎರಡನೇ "ನಿನಗೆ" ಎಂಬುದು ಏಕವಚನವಾಗಿದೆ (ಯೇಸು ನಿಕೊದೇಮನಿಗೆ ಹೇಳುತ್ತಾನೆ).

*ಮೋಶೆ ಸರ್ಪವನ್ನು ಎತ್ತರದಲ್ಲಿಟ್ಟ ಹಾಗೆಯೇ* (ವ. 14,15): ಮರುಭೂಮಿಯಲ್ಲಿ ಅಲೆದಾಡುವ ವೇಳೆಯಲ್ಲಿ ದೇವರು ಮೋಶೆಗೆ ತಾಮ್ರದ ಸರ್ಪಗಳನ್ನು ಮಾಡಲು ಹೇಳಿದ್ದರ ಕುರಿತಾದ ಅರಣ್ಯಕಾಂಡ 21:4-9 ನ್ನ ನೋಡಿರಿ. ಯೋಹಾನ 8:28, 12:3 ನ್ನು ಹೋಲಿಸಿರಿ. ಇಲ್ಲಿ ಯೇಸು ತನ್ನ ಶಿಲುಬೆಗೇರಿಸುವುದರ ಕುರಿತಾಗಿ "ಎತ್ತಲ್ಪಡಬೇಕು" ಎಂಬ ಮಾತನ್ನು ಬಳಸುತ್ತಾನೆ.

### ಪ್ರಶ್ನೆಗಳು

1. ನಿಕೊದೇಮನ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 1-2)?
2. ವ. 3 ರಲ್ಲಿ ದೇವರ ರಾಜ್ಯವನ್ನು ಕಾಣುವುದರ ಬಗ್ಗೆ ಯೇಸು ಯಾವ ರೂಪಾಲಂಕಾರವನ್ನು ಬಳಸುತ್ತಾನೆ?
3. ಯೇಸುವಿನ ರೂಪಾಲಂಕಾರಕ್ಕೆ ನಿಕೊದೇಮನು ಹೇಗೆ ಪ್ರತಿಕ್ರಯಿಸುತ್ತಾನೆ (ವ. 4)?
4. ತನ್ನ ಆ ರೂಪಾಲಂಕಾರವನ್ನು ಯೇಸು ಹೇಗೆ ವಿವರಿಸುತ್ತಾನೆ (ವ. 5-6)?
5. ನಿಕೊದೇಮನು ಯೇಸುವಿಗೆ ಯಾವ ಮುಂಬರಿಕೆಯ ಪ್ರಶ್ನೆಯನ್ನು ಕೇಳುತ್ತಾನೆ (ವ. 9)?
6. ತಾಮ್ರದ ಸರ್ಪ ಮತ್ತು ಶಿಲುಬೆಯ ಮೇಲಿನ ತನ್ನ ಸ್ವಂತ ಸಾವಿನ ನಡುವೆ ಯೇಸು ಯಾವ ಹೋಲಿಕೆಯನ್ನು ಮಾಡುತ್ತಾನೆ (ವ. 14-15)?
7. ಯೇಸು ಯಾಕೆ ಲೋಕಕ್ಕೆ ಕಳುಹಿಸಲ್ಪಟ್ಟಿದ್ದಾನೆ (ವ. 16)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಯಾಕೆ ನಿಕೊದೇಮನು ಯೇಸುವನ್ನು ನೋಡಲು ಬಂದನೆಂಬುದಾಗಿ ನೀವು ಯೋಚಿಸುವಿರಿ? ಮತ್ತು ಯಾಕೆ ಆತನು ರಾತ್ರಿಯ ವೇಳೆ ಬಂದನೆಂಬುದಾಗಿ ಯೋಚಿಸುವಿರಿ?
2. ಯೇಸು ಮತ್ತು ನಿಕೊದೇಮನ ಕುರಿತ ಕಥೆಯನ್ನು ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದದಲ್ಲಿ ನೋಡಬೇಡಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರಿ ಎಂಬುದಾಗಿ ಊಹಿಸಿಕೊಳ್ಳಿರಿ.



## 4. ಯೇಸು ಮತ್ತು ಸಮಾರ್ಯದ ಸ್ತ್ರೀ, ಯೋಹಾನ 4:3-42

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸುವು ಯೆರೂಸಲೇಮಿನಿಂದ ಗಲಿಲಾಯಕ್ಕೆ ಪ್ರಯಾಣಿಸಿದಂತೆ ದೇವರು ತನ್ನನ್ನು ಸಮಾರ್ಯದ ಮಾರ್ಗದ ಮೂಲಕ ನಡೆಸುತ್ತಿದ್ದಾನೆ ಎಂಬುದಾಗಿ ಭಾವಿಸಿದನು. ಈ ಮಾರ್ಗವು ಹತ್ತಿರದ ಮಾರ್ಗವಾಗಿದ್ದು ಯೆಹೂದ್ಯರು ಮತ್ತು ಸಮಾರ್ಯದವರ ನಡುವಿನ ಸಮಸ್ಯೆಯ ನಿಮಿತ್ತ ಯೆಹೂದ್ಯರು ಈ ಮಾರ್ಗವಾಗಿ ಹೋಗಲು ನಿರಾಕರಿಸುತ್ತಿದ್ದರು.

ಈ ವಾಕ್ಯಭಾಗವನ್ನು ಈ ರೀತಿಯಾಗಿ ರಚನೆ ಮಾಡಬಹುದು:

1. ಯೇಸು ಮತ್ತು ಸಮಾರ್ಯದ ಸ್ತ್ರೀ ಯಾಕೋಬನು ತೆಗೆಸಿದ ಬಾವಿಯ ಬಳಿಯಲ್ಲಿ ಸಂಧಿಸುವುದು, ವ. 5-26
2. ಶಿಷ್ಯರು ಹಿಂತಿರುಗುವುದು ಮತ್ತು ಆ ಸ್ತ್ರೀ ತನ್ನ ಊರಿನ ಜನರಿಗೆಲ್ಲಾ ಯೇಸುವಿನ ಬಗ್ಗೆ ಸಾಕ್ಷಿ ಹೇಳುವುದು, ವ. 27-38
3. ಆ ಸ್ತ್ರೀಯ ಸಾಕ್ಷಿಯ ನಿಮಿತ್ತ ಅನೇಕ ಸಮಾರ್ಯದವರು ಯೇಸುವಿನ ಮೇಲೆ ನಂಬಿಕೆ ಇಡುವುದು, ವ. 39-42

ನಮ್ಮ ಹಿಂದಿನ ಅಧ್ಯಯನದಲ್ಲಿ "ಹೊಸದಾಗಿ ಹುಟ್ಟಬೇಕು" ಎಂಬ ಯೇಸುವಿನ ರೂಪಾಲಂಕಾರವನ್ನು ನಿಕೊದೇಮನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾನೆ. ಈ ತಪ್ಪು ತಿಳುವಳಿಕೆಯು ಯೇಸುವು ಆತನಿಗೆ (ಮತ್ತು ನಮಗೆ) ರಕ್ಷಣೆಯ ಬಗ್ಗೆ ಪ್ರಾಮುಖ್ಯವಾದ ಸತ್ಯವನ್ನು ವಿವರಿಸುವಂತೆ ಮಾಡಿತ್ತು. ಈ ಅಧ್ಯಯನದಲ್ಲಿ ಸಮಾರ್ಯದ ಸ್ತ್ರೀಯೊಂದಿಗೂ ಸಹ ಯೇಸು ಇದೇ ರೀತಿಯ ಬೋಧನಾ ವಿಧಾನವನ್ನು ಬಳಸುತ್ತಾನೆ. ಆಕೆ ಸಹ ಆತನು ಜೀವ ಕೊಡುವ "ನೀರಿನ" ಕುರಿತಾದ ರೂಪಾಲಂಕಾರವನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾಳೆ. ಆತನಲ್ಲಿ ನಂಬಿಕೆಯಿಡುವ ನಮ್ಮೆಲ್ಲರಿಗೂ ಸಹ ಯೇಸು ನಿತ್ಯಜೀವದ ನೀರನ್ನು ಕೊಡುತ್ತಾನೆ.

*ಸುಖರೆಂಬ ಊರಿನ ಬಳಿಯಲ್ಲಿ ಯಾಕೋಬನು ತನ್ನ ಮಗನಾದ ಯೋಸೇಫನಿಗೆ ಕೊಟ್ಟ ಭೂಮಿಯ ಹತ್ತಿರದಲ್ಲಿ ಇತ್ತು ಯಾಕೋಬನು ತೆಗೆಸಿದ ಬಾವಿ* (ವ. 5-6): ಸುಖರೆಂಬ ಊರಿನ ಗುರುತಿನ ಬಗ್ಗೆ ಸತ್ಯವೇದ ಪಂಡಿತರಿಗೆ ಅಷ್ಟೊಂದು ಸ್ಪಷ್ಟನೆಯಿಲ್ಲ. ಬಹುಶಃ ಇದು ಸಮಾರ್ಯದ ಆಗ್ನೇಯಕ್ಕೆ ಸುಮಾರು 10 ಕಿ.ಮೀ ದೂರದಲ್ಲಿರುವ ಒಂದು ಪ್ರಾಚೀನ ಪಟ್ಟಣ, ಸಮಾರ್ಯವೆಂದು ಕರೆಯುವ ಪ್ರಾಂತ್ಯದ ರಾಜಧಾನಿಯಾದ ಶೆಕೆಮ್ ಊರಿನ ಇನ್ನೊಂದು ಹೆಸರಾಗಿರಬಹುದು. ಯಾಕೋಬನು ಶೆಕೆಮಿನ ಸಮೀಪ ಒಂದು ತುಂಡು ಭೂಮಿಯನ್ನು ಖರೀದಿಸಿದ್ದನು (ನೋಡಿ, ಆದಿಕಾಂಡ 33:18-19), ಇದನ್ನು ಆತನು ನಂತರ ತನ್ನ ಮಗನಾದ ಯೋಸೇಫನಿಗೆ ಕೊಟ್ಟಿದ್ದಿರಬಹುದು (ಆದಿಕಾಂಡ 48:21-22 ರೊಂದಿಗೆ ಹೋಲಿಸಿ). ಯಾಕೋಬನ ಬಾವಿಯ ಬಗ್ಗೆ ಹಳೇ ಒಡಂಬಡಿಕೆಯಲ್ಲಿ ಯಾವ ಪ್ರಸ್ತಾಪವಿಲ್ಲ, ಆದರೆ ಸಂಪ್ರದಾಯಗಳು ಇದನ್ನು ಗೆರಿಜಿಮ್ ಬೆಟ್ಟದ ಬುಡದಲ್ಲಿರುವ ಆಳವಾದ ಬಾವಿಯೊಂದಿಗೆ ಸಂಬಂಧ ಕಲ್ಪಿಸುತ್ತಾರೆ (ವ. 21 ರಲ್ಲಿನ "ಈ ಬೆಟ್ಟ" ದೊಂದಿಗೆ ಹೋಲಿಸಿರಿ.

*ಯೆಹೂದ್ಯರಿಗೂ ಸಮಾರ್ಯರಿಗೂ ಬಳಕೆಯಿಲ್ಲದಿರಲಾಗಿ* (ವ. 9): ಹೊಸ ಒಡಂಬಡಿಕೆಯ ಸಮಯದಲ್ಲಿ ಯೆಹೂದ್ಯರು ಮತ್ತು ಸಮಾರ್ಯರ ನಡುವಿನ ಸಂಘರ್ಷಕ್ಕೆ ಐತಿಹಾಸಿಕ ಮತ್ತು ಧಾರ್ಮಿಕ ಕಾರಣಗಳಿದ್ದವು. ಇಲ್ಲಿ ಒಬ್ಬ ಯೆಹೂದ್ಯನಾದ ಯೇಸು ಸಮಾರ್ಯಳಾದ ಒಬ್ಬ ಹೆಂಗಸು ಕೊಡುವ ಪಾತ್ರೆಯಿಂದ ನೀರನ್ನು ಕುಡಿದರೆ ಆತನು ಶುದ್ಧಾಚಾರದ ಪ್ರಕಾರ ಮೈಲಿಗೆಯಾಗುವನೆಂಬುದು ಆ ಸ್ತ್ರೀಯ ಅಭಿಪ್ರಾಯವಾಗಿತ್ತು. ಯಾಕೆಂದರೆ ಯೆಹೂದ್ಯರು ಸಮಾರ್ಯರನ್ನು ಅಶುದ್ಧರೆಂಬುದಾಗಿ ಪರಿಗಣಿಸುತ್ತಿದ್ದರು.

*"ಜೀವಕರವಾದ ನೀರು"* (ವ. 10): ಈ ಹೇಳಿಕೆಯ ಅರ್ಥ "ಹರಿಯುವ ನೀರು" ಅಥವಾ "ಒಂದು ಒರತೆಯ ನೀರು" ಎಂದಾಗಿದ್ದು ಇದು "ನಿಂತನೀರು" ಅಥವಾ "ಬಾವಿಯಲ್ಲಿ ಇಟ್ಟ ನೀರಿಗೆ" ತದ್ವಿರುದ್ಧವಾದುದ್ದಾಗಿದೆ. ಯೇಸು ಇದನ್ನು "ಜೀವ ಕೊಡುವ ನೀರು" ಅಥವಾ

"ಆತ್ಮೀಕ ಜೀವವನ್ನು ಕೊಡುವ ನೀರಿಗೆ" ಒಂದು ರೂಪಾಲಂಕಾರವಾಗಿ ಉಪಯೋಗಿಸುತ್ತಾನೆ, ಆದರೆ ಆ ಸ್ತ್ರೀ ಆತನ ರೂಪಾಲಂಕಾರವನ್ನು ಅರ್ಥೈಸಿಕೊಳ್ಳಲಿಲ್ಲ.

*ಆಳವಾಗಿದೆ* (ವ. 11): "ಯಾಕೋಬನ ಬಾವಿ" ಯನ್ನು 1935 ರಲ್ಲಿ ಸ್ವಚ್ಛಗೊಳಿಸಲಾಗಿದ್ದು, ಅದು 42 ಮೀಟರ್ ಆಳವಾಗಿದೆ ಎಂಬುದಾಗಿ ಕಂಡುಹಿಡಿಯಲಾಗಿದೆ.

*ಐದು ಮಂದಿ ಗಂಡಂದಿರು* (ವ. 18): ಯೆಹೂದ್ಯರಲ್ಲಿ ಒಬ್ಬ ಸ್ತ್ರೀಯು ಮೂರು ಬಾರಿ ವಿಚ್ಛೇದನ ಪಡೆಯಲು ಅನುಮತಿಯಿತ್ತು, ಹಾಗಾಗಿ ಈ ಸಮಾರ್ಯದ ಸ್ತ್ರೀಯನ್ನು ಅವರು ಅನೈತಿಕಳೆಂಬುದಾಗಿ ಪರಿಗಣಿಸಿರಬಹುದು. ಈಗ ಆಕೆಯು ಕಾನೂನಾತ್ಮಕವಾಗಿ ವಿವಾಹವಾಗದೆ ಇರುವ ಪುರುಷನೊಂದಿಗೆ ಇದ್ದಾಳೆ.

*ಈ ಬೆಟ್ಟದಲ್ಲಿ* (ವ. 20): ಈ ಸ್ತ್ರೀಯು ಸಮಾರ್ಯರು ಪವಿತ್ರವೆಂಬುದಾಗಿ ಪರಿಗಣಿಸುವ ಗೆರಿಜಿಮ್ ಬೆಟ್ಟವನ್ನು ಸೂಚಿಸುತ್ತಿದ್ದಾಳೆ. ಅವರು ಈ ಬೆಟ್ಟದ ಮೇಲೆ ಕ್ರಿ.ಪೂ. 400 ರಲ್ಲಿ ಒಂದು ದೇವಾಲಯವನ್ನು ಕಟ್ಟಿದ್ದರು. ನಂತರ ಇದು ಯೆಹೂದ್ಯರಿಂದ ಕೆಡವಲ್ಪಟ್ಟಿತು. ದೇವಾಲಯದ ನಿರ್ಮಾಣ ಮತ್ತು ನಾಶನವೆರಡೂ ಸಹ ಯೆಹೂದ್ಯರು ಮತ್ತು ಸಮಾರ್ಯರ ನಡುವಿನ ವೈರತ್ವಕ್ಕೆ ಕಾರಣವಾಗಿದೆ.

*ನೀವು ಅರಿಯದೆ ಇರುವಂಥದನ್ನು ಆರಾಧಿಸುವವರು* (ವ. 22): ಸಮಾರ್ಯರು ಕೇವಲ ಪಂಚಕಾಂಡವನ್ನು ಮಾತ್ರ ತಮ್ಮ ಕಟ್ಟಳೆಯೆಂಬುದಾಗಿ ಒಪ್ಪಿದ್ದರು. ಅವರು ಸತ್ಯ (ನಿಜ) ದೇವರನ್ನು ಆರಾಧಿಸಿದರು. ಆದರೆ ಹಳೇ ಒಡಂಬಡಿಕೆಯ ಉಳಿದ ಪುಸ್ತಕಗಳಲ್ಲಿ ದಾಖಲಿಸಲ್ಪಟ್ಟ ದೇವರ ಹೆಚ್ಚಿನ ಪ್ರಕಟಣೆಗಳನ್ನು ಅಂಗೀಕರಿಸಿದೆ ಇರುವ ಕಾರಣದಿಂದ ಆತನ ಬಗ್ಗೆ ಅವರು ಹೆಚ್ಚಾಗಿ ಅರಿಯದವರಾಗಿದ್ದಾರೆ.

*ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ* (ವ. 22): ಮೆಸ್ಸೀಯನು ದೇವರ ಐತಿಹಾಸಿಕ ಜನರಾದ ಯೆಹೂದ್ಯರೊಳಗಿಂದ ಬರುವವನಾಗಿದ್ದಾನೆ.

*ಮೆಸ್ಸೀಯನು ... ಬಂದ ಮೇಲೆ....ನಮಗೆ ಎಲ್ಲಾ ತಿಳಿಸುವನು* (ವ. 25): ಸಮಾರ್ಯರು ಮೆಸ್ಸೀಯನನ್ನು ನಿರೀಕ್ಷಿಸಿದರು. ಆದರೆ ಅವರು ಆತನ ಬಗ್ಗೆ ಹೆಚ್ಚಾಗಿ ತಿಳಿದಿರಲಿಲ್ಲ, ಯಾಕೆಂದರೆ ಅವರು ಕೀರ್ತನೆಗಳು ಮತ್ತು ಪ್ರವಾದಿಗಳ ಪುಸ್ತಕಗಳನ್ನು ದೇವರ ಮಾತೆಂಬುದಾಗಿ ಒಪ್ಪುತ್ತಿರಲಿಲ್ಲ. ಹಾಗಾಗಿ ಅವರು ಆತನನ್ನು ಒಬ್ಬ ಬೋಧಕನೆಂಬುದಾಗಿ ಪರಿಗಣಿಸಿದ್ದರು.

*ಆತನು ಒಬ್ಬ ಹೆಂಗಸಿನ ಸಂಗಡ ಮಾತಾಡುತ್ತಿರುವುದನ್ನು ಕಂಡು* ಆಶ್ಚರ್ಯಪಟ್ಟರು (ವ. 27): ಯೆಹೂದಿ ಧಾರ್ಮಿಕ ಬೋಧಕರುಗಳು ಒಬ್ಬ ಹೆಂಗಸಿನೊಂದಿಗೆ ಸಾರ್ವಜನಿಕವಾಗಿ ಮಾತನಾಡುತ್ತಿರಲಿಲ್ಲ.

*ಇನ್ನು ನಾಲ್ಕು ತಿಂಗಳಿಗೆ ಸುಗ್ಗಿ ಬರುವುದೆಂದು* (ವ. 35): ಇಲ್ಲಿ ಯೇಸು "ಫಲಗಳು ಬೆಳೆಯುವುದಕ್ಕೆ ತಮ್ಮದೇ ಸಮಯ ತೆಗೆದುಕೊಳ್ಳುತ್ತವೆ" ಎಂಬಂತ ಅರ್ಥ ಕೊಡುವ ಗಾದೆಯನ್ನು ಬಳಸಿ ಹೇಳುತ್ತಿರಬಹುದು. ಆದರೆ ಇಲ್ಲಿ ಯೇಸು ಅಲಂಕಾರಿಕವಾಗಿ "ಆತ್ಮೀಕವಾದ ಸುಗ್ಗಿ" ಯ ಬಗ್ಗೆ ಮಾತಾನಾಡುತ್ತಿದ್ದಾನೆ. ಬೆಳೆಯು ಜನರಾಗಿದ್ದು, ಅವರನ್ನು ದೇವರ ರಾಜ್ಯಕ್ಕೆ ತರುವುದರ ಮೂಲಕ ಸುಗ್ಗಿಯನ್ನು ಕೊಯ್ಯುವುದಾಗಿದೆ. ಅವರನ್ನು ನಿತ್ಯ ಜೀವಕ್ಕಾಗಿ ಸುಗ್ಗಿ ಮಾಡಲಾಗುತ್ತದೆ (ವ. 36). ಹೊಲಗಳು ಈ ಲೋಕದಲ್ಲಿ ವಾಸಿಸುವ ಜನರನ್ನು ಸೂಚಿಸುತ್ತವೆ. ಅವು ಈಗಾಗಲೇ ಸುಗ್ಗಿಗಾಗಿ ಮಾಗಿ ನಿಂತಿವೆ. ಹಾಗೆ ಸುವಾರ್ತೆಯನ್ನು ಸ್ವೀಕರಿಸಲು ಅವರು ಸಿದ್ಧರಾಗಿದ್ದಾರೆ.

*ಕೊಯ್ಯುವವನಿಗೆ ... ಬಿತ್ತುವವನಿಗೂ ... ಬಿತ್ತುವವನೊಬ್ಬ ... ಕೊಯ್ಯುವವನೊಬ್ಬ.ಬೇರೊಬ್ಬರು ಕಷ್ಟಮಾಡಿದ್ದಾರೆ; ನೀವು ನಡುವೆ ಅವರ ಕಷ್ಟದಲ್ಲಿ ಸೇರಿದ್ದೀರಿ* (ವ. 36-38): ಯೇಸು ತನ್ನ ಮನಸ್ಸಲ್ಲಿಟ್ಟುಕೊಂಡಿರುವ "ಬಿತ್ತುವವರು" ಮತ್ತು

“ಬೇರೊಬ್ಬರು” ಬಹುಶಃ ಹಳೇ ಒಡಂಬಡಿಕೆಯ ಪ್ರವಾದಿಗಳು ಮತ್ತು ಸ್ನಾನಿಕನಾದ ಯೋಹಾನನಿರಬಹುದು. ಆದರೆ ಯೇಸು ತನ್ನ ಶಿಷ್ಯರು ಬಿತ್ತುವವರು ಮತ್ತು ಕೊಯ್ಯುವವರೂ ಆಗಿರಬೇಕೆಂಬುದಾಗಿ ಅಪೇಕ್ಷಿಸಿದನು.

*ಲೋಕರಕ್ಷಕನ್ನೇ* (ವ. 42): ಸುವಾರ್ತೆಗಳಲ್ಲಿ ಇದೊಂದು ಬಾರಿ ಈ ಹೇಳಿಕೆಯನ್ನು ಉಪಯೋಗಿಸಲಾಗಿದೆ. ನಾವಿದನ್ನು 1 ಯೋಹಾನ 4:14 ರಲ್ಲಿ ಸಹ ಕಾಣಬಹುದು.

**ಪ್ರಶ್ನೆಗಳು**

1. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನ್ ನಕ್ಷೆಯಲ್ಲಿ*** ಸಮಾರ್ಯ ಮತ್ತು ಗೆರಿಜಿಮ್ ಬೆಟ್ಟವನ್ನು ಕಂಡುಹಿಡಿಯಿರಿ.
2. ಯಾಕೆ ಯೇಸು ಸುಖರೆಂಬ ಊರಿನ ಬಾವಿಯ ಬಳಿಯಲ್ಲಿ ಕೂತಿದ್ದನು (ವ. 6)?
3. ಯಾವ ಸಮಯದಲ್ಲಿ ಸಮಾರ್ಯದ ಸ್ತ್ರೀಯು ನೀರನ್ನು ಸೇದುವುದಕ್ಕೆ ಬಾವಿಯ ಬಳಿಗೆ ಬಂದಳು (ವ. 6-7)?
4. ಆ ಸಮಯದಲ್ಲಿ ಶಿಷ್ಯರು ಯಾಕೆ ಅಲ್ಲಿ ಇರಲಿಲ್ಲ (ವ. 8)?
5. ಯೇಸುವು ಕುಡಿಯುವದಕ್ಕೆ ನೀರು ಕೇಳಿದಾಗ ಆ ಸ್ತ್ರೀಯು ಯಾಕೆ ಆಶ್ಚರ್ಯಗೊಂಡಳು (ವ. 7-9)?
6. ಯೇಸುವಿನ ಜೀವಕರವಾದ ನೀರಿನ ಕೊಡುಗೆಯನ್ನು ಆ ಸ್ತ್ರೀಯು ತಪ್ಪಾಗಿ ಅರ್ಥೈಸಿಕೊಂಡಳೆಂಬುದನ್ನು ಯಾವುದು ತೋರಿಸುತ್ತದೆ (ವ. 11-12)?
7. “ಜೀವಕರವಾದ ನೀರನ್ನು” ಯೇಸು ಹೇಗೆ ವರ್ಣಿಸುತ್ತಾನೆ (ವ. 13-14)?
8. ಯೇಸುವಿನ ಜೀವಕರವಾದ ನೀರಿನ ಕುರಿತಾದ ವಿವರಣೆಯನ್ನು ಪುನಃ ಆ ಸ್ತ್ರೀಯು ಅರ್ಥೈಸಿಕೊಂಡಳೆಂಬುದನ್ನು ಯಾವುದು ತೋರಿಸುತ್ತದೆ (ವ. 15)?
9. ಆ ಸ್ತ್ರೀಯ ಕುಟುಂಬದ ಸ್ಥಿತಿಯ ಬಗ್ಗೆ ನಾವೇನನ್ನು ಕಾಣುತ್ತೇವೆ (ವ. 16-18)?
10. ಯೇಸು ಒಬ್ಬ ಪ್ರವಾದಿ ಆಗಿದ್ದಾನೆ ಎಂಬುದನ್ನು ಆ ಸ್ತ್ರೀ ಹೇಗೆ ಅರಿತುಕೊಳ್ಳುತ್ತಾಳೆ (ವ. 17-19)?
11. ಸಮಾರ್ಯರ ಮತ್ತು ಯೆಹೂದ್ಯರ ನಡುವಿನ ಯಾವ ಧಾರ್ಮಿಕ ಭಿನ್ನತೆಯನ್ನು ಆ ಸ್ತ್ರೀಯು ತಿಳಿಸುತ್ತಾಳೆ (ವ. 20)?
12. ರಕ್ಷಣೆಯ ಬಗ್ಗೆ ಆ ಸ್ತ್ರೀಗೆ ಯೇಸು ಏನೆಂದು ಹೇಳುತ್ತಾನೆ (ವ. 22)?
13. ಆರಾಧನೆಯ ಬಗ್ಗೆ ಆ ಸ್ತ್ರೀಗೆ ಯೇಸು ಏನೆಂದು ಹೇಳುತ್ತಾನೆ (ವ. 21-24)?
14. ಮೆಸ್ಸೀಯನ ಬಗ್ಗೆ ಆ ಸ್ತ್ರೀಗೆ ಯೇಸು ಏನೆಂದು ಹೇಳುತ್ತಾನೆ (ವ. 25)?
15. ಆ ಸ್ತ್ರೀಯ ಬೇಡಿಕೆಗೆ ಯೇಸು ಹೇಗೆ ಪ್ರತ್ಯುತ್ತರಿಸುತ್ತಾನೆ (ವ. 26)?
16. ಆಹಾರದೊಂದಿಗೆ ಹಿಂತಿರುಗಿದಾಗ ಶಿಷ್ಯರು ಯಾಕೆ ಆಶ್ಚರ್ಯಪಡುತ್ತಾರೆ (ವ. 27)?
17. ಊರಿನ ಜನರೆಲ್ಲಾ ಯಾಕೆ ಯೇಸುವನ್ನು ನೋಡಲು ಬರುತ್ತಾರೆ (ವ. 28-30)?
18. “ನನ್ನ ಆಹಾರ” ಎಂದು ಯೇಸು ಹೇಳಿದ್ದರ ಅರ್ಥವೇನು (ವ. 34)?
19. “ಹೊಲಗಳು ಕೊಯಿಲ್ಲಿಗೆ ಬಂದಿವೆ” ಎಂಬ ಯೇಸುವಿನ ಮಾತಿನ ಅರ್ಥವೇನು (ವ. 35 ಟಿಪ್ಪಣಿಯೊಂದಿಗೆ)?
20. ಯಾಕೆ ಸುಖರೆಂಬ ಊರಿನ ಅನೇಕ ಸಮಾರ್ಯರು ಯೇಸುವಿನ ಮೇಲೆ ನಂಬಿಕೆಯಿಟ್ಟರು (ವ. 39)?
21. ಮುಂದಿನ ಎರಡು ದಿನಗಳಲ್ಲಿ ಸುಖರೆಂಬ ಊರಲ್ಲಿ ಏನಾಯಿತು (ವ. 40-41)?
22. ಯೇಸು ಸುಖರೆಂಬ ಊರಲ್ಲಿ ಎರಡು ದಿನ ಉಳಿದ ನಂತರ ಆ ಊರಿನ ಜನರು ಕೊನೆಯಲ್ಲಿ ಏನೆಂದು ತಿಳಿದುಕೊಂಡರು (ವ. 42)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. “ಜೀವಕರವಾದ ನೀರಿನ” ಕುರಿತಾಗಿ ಸಮಾರ್ಯದ ಸ್ತ್ರೀ ಮತ್ತು ಯೇಸುವಿನ ನಡುವಿನ ತಪ್ಪು ತಿಳುವಳಿಕೆಯನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ. ಸತ್ಯವೇದ ನೋಡಬೇಡಿರಿ (ವ. 7-15).
2. “ಆಹಾರ” ದ (ವ. 31-34) ಬಗ್ಗೆ ಶಿಷ್ಯರು ಮತ್ತು ಯೇಸುವಿನ ನಡುವಿನ ತಪ್ಪು ತಿಳುವಳಿಕೆಯನ್ನು ನಿಮ್ಮದೇ ಮಾತಿನಲ್ಲಿ ವಿವರಿಸಿರಿ. ಸತ್ಯವೇದ ನೋಡಬೇಡಿರಿ.
3. ಯಾವ ರೀತಿಯಲ್ಲಿ ಸಮಾರ್ಯದ ಸ್ತ್ರೀಯು ಇಂದು ದಕ್ಷಿಣ ಭಾರತದಲ್ಲಿನ ವಿಶ್ವಾಸಿಗಳಿಗೆ ಒಂದು ಮಾದರಿಯಾಗಬಲ್ಲಳೆಂಬುದಾಗಿ ನೀವು ಯೋಚಿಸುವಿರಿ? ಪಟ್ಟಿಮಾಡಿ.
4. ಇಂದಿನ ದಕ್ಷಿಣ ಭಾರತದಲ್ಲಿನ ಕ್ರೈಸ್ತ ಸಭೆಗಳಿಗಾಗಿ ಈ ವಾಕ್ಯಭಾಗದ ಮುಖ್ಯ ಪಾಠವನ್ನು (ಯೋಹಾನ 4:3-42) ನೀವು ಹೇಗೆ ಸಾರಾಂಶಗೊಳಿಸುವಿರಿ? ಪಟ್ಟಿ ಮಾಡಿರಿ.



## 5. ಬೇಥೆಸ್ಥ ಬಳಿಯ ಸ್ವಸ್ಥತೆ, ಯೋಹಾ 5:1-15

### ಪೀಠಿಕೆ ಮತ್ತು ಟಿಪ್ಪಣಿಗಳು

ಒಂದು ಮುಖ್ಯ ಯೆಹೂದಿ ಹಬ್ಬವನ್ನು ಆಚರಿಸುವುದಕ್ಕಾಗಿ ಯೇಸು ಪುನಃ ಯೆರೂಸಲೇಮಿಗೆ ಹೋಗುತ್ತಾನೆ .ಬೇಥೆಸ್ಥ ಕೊಳದ ಬಳಿ ಒಬ್ಬ ಮನುಷ್ಯನನ್ನು ಯೇಸು ಗುಣಪಡಿಸುವ ಕಥೆಯು ಸಮನಾಂತರ ಸುವಾರ್ತೆಗಳಲ್ಲಿ ಕಂಡುಬರುವುದಿಲ್ಲ. ಈ ಮನುಷ್ಯನು ಮೂವತ್ತೆಂಟು ವರ್ಷದಿಂದ ರೋಗಿಯಾಗಿದ್ದನು.

*ಕುರೀ ಆಗಸೇಬಾಗಿಲಿನ ಹತ್ತಿರ ... ಬೇಥೆಸ್ಥ* (ವ. 2, 3): ಕುರೀ ಅಗಸೇ ಬಾಗಿಲು ದೇವಾಲಯದ ಉತ್ತರದಲ್ಲಿದೆ. ಈ ಕೊಳದ ಹೆಸರು ಗ್ರೀಕ್ ಹಸ್ತಪ್ರತಿಗಳಲ್ಲಿ ವಿಭಿನ್ನವಾಗಿದೆ. ಕನ್ನಡ ಸತ್ಯವೇದವು "ಬೇತ್ಸಥಾ" ವನ್ನು ಆರಿಸಿಕೊಂಡರೆ ("ಎಣ್ಣೆಯ ಮನೆ" ಎಂದರ್ಥ), ಹೆಚ್ಚಿನ ಆಧುನಿಕ ಭಾಷಾಂತರಕಾರರಿದನ್ನು "ಬೇಥೆಸ್ಥ" ("ಕರುಣೆಯ ಮನೆ" ಅಥವಾ "ಹರಿಯುವ ನೀರಿನ ಮನೆ" ಎಂದರ್ಥ) ಎಂದು ಓದುತ್ತಾರೆ.

ವಚನ 3-4: ಪ್ರಾರಂಭಿಕ ಗ್ರೀಕ್ ಹಸ್ತಪ್ರತಿಗಳು ವಚನ 3 ರ ಕೊನೇ ಭಾಗ ಮತ್ತು ವಚನ 4 ನ್ನು ಹೊಂದಿಲ್ಲ ("ಒಬ್ಬ ದೇವ ದೂತನು ಆಗಾಗ್ಗ ಕೊಳದಲ್ಲಿ ಇಳಿದು ಬಂದು ನೀರನ್ನು ಉಕ್ಕಿಸುವನು, ನೀರನ್ನು ಉಕ್ಕಿಸಿದ ಮೇಲೆ ಮೊದಲು ಒಳಗೆ ಹೋದವನು ಯಾವ ರೋಗದಲ್ಲಿ ಬಿದ್ದಿದ್ದರೂ ಸ್ವಸ್ಥವಾಗುವನು) ಈ ಮಾತುಗಳು ಯೋಹಾವ ಸುವಾರ್ತೆಯ ಮೂಲ ಪಠ್ಯದ ಭಾಗವಲ್ಲ, ಇವುಗಳನ್ನು ನಂತರ ಸೇರಿಸಲಾಗಿದೆ. ಕನ್ನಡದ ಭಾಷಾಂತರಗಳಲ್ಲಿ ಪವಿತ್ರಗ್ರಂಥವು ದೀರ್ಘವಾದ ರೂಪವನ್ನು ಆರಿಸಿಕೊಂಡರೆ, ಸತ್ಯವೇದವು ಸಂಕ್ಷಿಪ್ತವಾದ ರೂಪವನ್ನು ಆರಿಸಿಕೊಂಡಿದೆ.

*ಈ ಹೊತ್ತು ಸಬ್ಬತ್ ದಿನವಾಗಿದೆ, ನೀನು ಹಾಸಿಗೆಯನ್ನು ಹೊರುವುದು ಸರಿಯಲ್ಲ* (ವ. 10): ಇದು ಮೋಶೆಯ ಧರ್ಮಶಾಸ್ತ್ರದಲ್ಲಿ ನಿಷೇಧಿತವಾಗಿರಲಿಲ್ಲ, ಆದರೆ ಯೆಹೂದಿ ಶಾಸ್ತ್ರಿಗಳು ಮಾಡಿದ ಸಾಂಪ್ರದಾಯಿಕ ವ್ಯಾಖ್ಯಾನುಗಳಲ್ಲಿ ಇದನ್ನು ಸೇರಿಸಿದರು.


### ಪ್ರಶ್ನೆಗಳು

1. ಯೇಸು ಯಾಕೆ ಯೆರೂಸಲೇಮಿಗೆ ಹೋದನು (ವ. 1)?
2. ಯೇಸು ಬೇಥೆಸ್ಥ ಬಳಿ ಎಂತಹ ಜನರನ್ನು ಕಾಣುತ್ತಾನೆ (ವ. 3)?
3. ಮೂವತ್ತೆಂಟು ವರ್ಷಗಳಿಂದ ರೋಗಿಯಾಗಿ ಬಿದ್ದವನ ಬಳಿ ಯೇಸು ಏನೆಂದು ಕೇಳುತ್ತಾನೆ (ವ. 6)?
4. ಯೇಸುವಿನ ಪ್ರಶ್ನೆಗೆ ಆ ಮನುಷ್ಯನ ಉತ್ತರವೇನಾಗಿತ್ತು (ವ. 7)?
5. ಆ ಮನುಷ್ಯನಿಗೆ ಯೇಸು ಏನನ್ನು ಮಾಡಲು ಹೇಳಿದನು (ವ. 8)?
6. ಯೆಹೂದಿ ನಾಯಕರು ಯಾಕೆ ಆ ಮನುಷ್ಯನನ್ನು ಬೈಯುತ್ತಾರೆ (ವ. 9-10)?
7. ಆ ಮನುಷ್ಯನು ಯೆಹೂದಿ ನಾಯಕರಿಗೆ ಏನೆಂದು ನೆಪ ಹೇಳುತ್ತಾನೆ (ವ. 11)?
8. ಯಾಕೆ ಆ ಮನುಷ್ಯನು ತನ್ನನ್ನು ಗುಣಪಡಿಸಿದವನ ಹೆಸರನ್ನು ತಿಳಿದಿರಲಿಲ್ಲ (ವ. 13)?
9. ಯೇಸು ಆ ಮನುಷ್ಯನನ್ನು ಎರಡನೇ ಬಾರಿ ಎಲ್ಲಿ ಸಂಧಿಸುತ್ತಾನೆ (ವ. 14)?
10. ಆ ಮನುಷ್ಯನನ್ನು ಗುಣಪಡಿಸಿದವನು ಯೇಸುವೇ ಎಂಬುದಾಗಿ ಯೆಹೂದಿ ನಾಯಕರು ಹೇಗೆ ತಿಳಿದುಕೊಂಡರು (ವ. 15)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

1. ಯೇಸು ಆ ಮನುಷ್ಯನಿಗೆ ಕೊಟ್ಟ ಎಚ್ಚರಿಕೆಯನ್ನು ನೀವು ಹೇಗೆ ಅರ್ಥೈಸಿಕೊಳ್ಳುವಿರಿ (ವ. 14)?

2. ಯೇಸು ಮತ್ತು ಬೇಥೆಸ್ಥ ಕೊಳದ ಬಳಿ ಗುಣಹೊಂದಿದ ಮನುಷ್ಯನ ಕುರಿತಾದ ಕಥೆಯನ್ನು ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದ ನೋಡಬೇಡಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿ.



## 6. ವ್ಯಭಿಚಾರದಲ್ಲಿ ಸಿಕ್ಕ ಒಬ್ಬ ಸ್ತ್ರೀ, ಯೋಹಾನ 8:2-11

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸು ಮತ್ತು ವ್ಯಭಿಚಾರದಲ್ಲಿ ಸಿಕ್ಕ ಒಬ್ಬ ಸ್ತ್ರೀ ಕುರಿತಾದ ಸುಂದರವಾದ ಕಥೆಯು ಹೊಸ ಒಡಂಬಡಿಕೆಯ ಯಾವುದೇ ಹಳೆಯ ಗ್ರೀಕ್ ಹಸ್ತಪ್ರತಿಗಳಲ್ಲಿ ಕಂಡುಬರುವುದಿಲ್ಲ. ಹಾಗಾಗಿ ಮೂಲತಃ ಇದು ಯೋಹಾನನ ಸುವಾರ್ತೆಗೆ ಸೇರಿದ್ದಲ್ಲ. ಹಾಗಾಗಿ ಹೆಚ್ಚಿನ ಆಧುನಿಕ ಸತ್ಯವೇದ ಆವೃತ್ತಿಗಳು (ಕನ್ನಡದ ಸತ್ಯವೇದದಲ್ಲಿರುವಂತೆ) ಇದನ್ನು ಆವರಣದೊಳಗೆ ಇಟ್ಟಿದ್ದಾರೆ. ಹೊಸ ಒಡಂಬಡಿಕೆಯ ಕಟ್ಟಳೆಯನ್ನು ರೂಪಿಸಿದಾಗ ಇದನ್ನು ಇಂದು ನಾವು ಕಾಣುವ ಯೋಹಾನನ ಸುವಾರ್ತೆಯಲ್ಲಿ ಇಡಲಾಯಿತು. ಇದರರ್ಥ ಸುವಾರ್ತೆಯ ಉಳಿದೆಲ್ಲ ಭಾಗಗಳಂತೆಯೇ ಇದನ್ನೂ ಸಹ ತನ್ನ ಜನರಿಗಾಗಿನ ದೇವಪ್ರೇರಿತ ಮಾತೆಂಬುದಾಗಿ ಪರಿಗಣಿಸಬೇಕೆಂಬುದಾಗಿದೆ. ಈ ಕಥೆಯನ್ನು ಸಮನಾಂತರ ಸುವಾರ್ತೆಯಲ್ಲಿ ಸೇರಿಸಿಲ್ಲ.

*ವ್ಯಭಿಚಾರದಲ್ಲಿ ಸಿಕ್ಕಿದ ಒಬ್ಬ ಹೆಂಗಸು* (ವ. 3): ವ್ಯಭಿಚಾರದ ಪಾಪವು ಒಬ್ಬರಿಂದ ಆಗುವಂಥದಲ್ಲ. ಫರಿಸಾಯರು ಪುರುಷನನ್ನು ಬಿಟ್ಟು ಯಾಕೆ ಬರೀ ಹೆಂಗಸನ್ನು ಮಾತ್ರ ಹಿಡುಕೊಂಡು ಬಂದಿರಬಹುದೆಂದು ಅಲ್ಲಿ ನೆರದಿದ್ದ ಜನರು ಆಶ್ಚರ್ಯಗೊಂಡಿರಬಹುದು.

*ವ್ಯಭಿಚಾರ ಮಾಡುತ್ತಿರುವಾಗಲೇ ಕೈಗೆ ಸಿಕ್ಕಿದಳು* (ವ. 4): ಯೆಹೂದಿ ಶಾಸ್ತ್ರಕ್ಕೆ ಆ ಕಾರ್ಯಕ್ಕೆ ಸಾಕ್ಷಿಯೂ ಬೇಕಿತ್ತು.

*ಇಂಥವರನ್ನು ಕಲ್ಲೆಸೆದು ಕೊಲ್ಲಬೇಕೆಂದು ಮೋಶೆಯು ಧರ್ಮಶಾಸ್ತ್ರದಲ್ಲಿ ನಮಗೆ ಅಪ್ಪಣೆ ಕೊಟ್ಟಿದ್ದಾನೆ* (ವ. 5): ಫರಿಸಾಯರು ಕಾನೂನನ್ನು ಸರಿಯಾಗಿ ಪ್ರಸ್ತುತಪಡಿಸಲಿಲ್ಲ. ಮೊದಲನೇಯದಾಗಿ ಆ ಸ್ತ್ರೀಯು ಮದುವೆಗಾಗಿ ನಿಶ್ಚಿತಳಾಗಿದ್ದರಷ್ಟೇ ಕಲ್ಲೆಸೆದು ಕೊಲ್ಲಬೇಕಿತ್ತು (ಧರ್ಮೋ. 22:23-24). ಎರಡನೆಯದಾಗಿ ವ್ಯಭಿಚಾರದ ವಿಷಯದಲ್ಲಿ ಪುರಷ ಮತ್ತು ಸ್ತ್ರೀಯರಿಬ್ಬರನ್ನೂ ಮರಣದಂಡನೆಗೆ ಗುರಿಪಡಿಸಬೇಕೆಂದು ಶಾಸ್ತ್ರ ಹೇಳಿತ್ತು (ಧರ್ಮೋ. 22:22, ಯಾಜಕಕಾಂಡ 20:10).

*ಆತನ ಮೇಲೆ ತಪ್ಪು ಹೊರಿಸುವುದಕ್ಕೆ … ಈತನು ಏನನ್ನುತ್ತಾನೋ ನೋಡೋಣ ಎಂದು ಹಾಗೆ ಕೇಳಿದರು* (ವ. 6): ಒಂದು ವೇಳೆ ಯೇಸು ಫರಿಸಾಯರಿಗೆ ಆ ಸ್ತ್ರೀಯನ್ನು ಹೋಗಲು ಬಿಡಿ ಎಂದಿದ್ದರೆ, ಆತನು ಮೋಶೆಯ ಧರ್ಮಶಾಸ್ತ್ರವನ್ನು ಪಾಲಿಸುವುದಿಲ್ಲ ಎಂದು ಅವರು ಹೇಳುತ್ತಿದ್ದರು. ಒಂದು ವೇಳೆ ಯೇಸು ಅವರಿಗೆ ಆ ಸ್ತ್ರೀಯನ್ನು ಕಲ್ಲೆಸೆದು ಕೊಲ್ಲಿ ಎಂದು ಹೇಳಿದ್ದರೆ ಜನಸಾಮಾನ್ಯರೆಲ್ಲರೂ ಬಡವರು ಮತ್ತು ಕೊರತೆಯಲ್ಲಿರುವವರಿಗಾಗಿನ ಯೇಸುವಿನ ಕರುಣೆಯನ್ನು ಅವರು ಸಂದೇಹ ಪಡುತ್ತಿದ್ದರು ಮತ್ತು ವ್ಯಭಿಚಾರದಲ್ಲಿ ಪಾಲ್ಗೊಂಡ ಪುರಷನನ್ನು ಯಾಕೆ ಹಿಡಿಯಲಿಲ್ಲವೆಂಬುದಾಗಿ ಆಶ್ಚರ್ಯಪಡುತ್ತಿದ್ದರು.

*ಬೆರಳಿನಿಂದ ಬರೆಯುತ್ತಾ ಇದ್ದನು* (ವ. 6): ದೇವರ ಬೆರಳಿನಿಂದ ಬರೆದ ಎರಡು ಕಲ್ಲಿನ ಹಲಗೆಗಳೊಂದಿಗೆ ಹೋಲಿಸಿ (ವಿಮೋ. 31:18).

*ನಿಮ್ಮಲ್ಲಿ ಪಾಪವಿಲ್ಲದವನು ಯಾರೋ ಅವನೇ ಮೊದಲು ಆಕೆಯ ಮೇಲೆ ಕಲ್ಲು ಹಾಕಲಿ* (ವ. 7): ಯೆಹೂದಿ ಧರ್ಮಶಾಸ್ತ್ರದಲ್ಲಿ ಮರಣದಂಡನೆಗೆ ಗುರಿಯಾದ ವ್ಯಕ್ತಿಯ ಮೇಲೆ ಕಲ್ಲೆಸೆಯಲು ಸಾಕ್ಷಿಗಳು ಬೇಕಿತ್ತು. ಆ ಸ್ತ್ರೀಯನ್ನು ಯೇಸುವಿನ ಬಳಿಗೆ ಕರೆತಂದ ಯೆಹೂದಿ ನಾಯಕರಲ್ಲಿ ಹೆಚ್ಚಿನವರೆಲ್ಲ ಕೆಳಕಂಡ ಕೆಲವೊಂದು ಪಾಪಪ್ರಜ್ಞೆಯುಳ್ಳವರಾಗಿದ್ದರು: ಯೇಸುವಿನ ತಪ್ಪು ಹೊರಿಸುವುದಕ್ಕಾಗಿ ಸ್ತ್ರೀಯನ್ನು ಉಪಯೋಗಿಸುವುದು, ಅಥವಾ ಸ್ತ್ರೀಯೊಂದಿಗಿನ ಪುರುಷನನ್ನು ಹೋಗಲು ಬಿಡುವುದರ ಮೂಲಕ ವ್ಯಭಿಚಾರವನ್ನು ಕ್ಷಮಿಸಿದ್ದು ತಾವೆಲ್ಲರೂ ಅಪರಾಧ ಮನೋಭಾವದವರೆಂಬುದು ಅವರೆಲ್ಲರಿಗೂ ತಿಳಿದಿತ್ತು.

### ಪ್ರಶ್ನೆಗಳು

1. ಈ ಕಥೆಯು ನಡೆದ ಸ್ಥಳ ಯಾವುದು (ವ. 2)?
2. ಯಾಕೆ ಅನೇಕ ಜನರು ಯೇಸುವಿನ ಸುತ್ತ ಸೇರಿದ್ದರು (ವ. 2)?

3. ಸ್ತ್ರೀಯನ್ನು ಯೇಸುವಿನ ಬಳಿಗೆ ಕರೆತಂದವರು ಯಾರು (ವ. 3)?
4. ಸ್ತ್ರೀಯ ಮೇಲಿನ ಆರೋಪವೇನು (ವ. 4)?
5. ಯೇಸು ಏನನ್ನು ಮಾಡಬೇಕೆಂದು ಯೆಹೂದಿ ನಾಯಕರು ಬಯಸಿದರು (ವ. 5)?
6. ಯಾಕೆ ಯೇಸು ಅವರ ಪ್ರಶ್ನೆಗೆ (ಬೇಡಿಕೆಗೆ) ಕೊನೆಗೂ ಪ್ರತ್ಯುತ್ತರಿಸಿದನು (ವ. 7)?
7. ಯೇಸು ಯೆಹೂದಿ ನಾಯಕರಿಗೆ ಕೊಟ್ಟ ಉತ್ತರವೇನು (ವ. 7)?
8. ಯೆಹೂದಿ ನಾಯಕರಿಗೆ ಏನಾಯಿತು (ವ. 9)?
9. ಯೇಸು ಆ ಸ್ತ್ರೀಗೆ ಎರಡು ಸಂಗತಿಗಳನ್ನು ಹೇಳಿದನು. ಅವು ಯಾವುವು (ವ. 11)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. ಈ ಒಂದು ಘಟನೆಗೆ ನೀವು ಸಾಕ್ಷಿಗಳಾಗಿದ್ದರೆ ಯಾವ ಪರಿಸ್ಥಿತಿಯು ನಾಯಕರ ಮತ್ತು ಅವರ ಉದ್ದೇಶಗಳ ಬಗ್ಗೆ ನಿಮಗೆ ಸಂಶಯವನ್ನು ಹುಟ್ಟಿಸುತ್ತಿತ್ತು?
2. ಯೇಸುವನ್ನು ಪರೀಕ್ಷಿಸಲು ಮಾಡಿದ ಯೆಹೂದಿ ನಾಯಕರ ಪ್ರಯತ್ನವನ್ನು ವರ್ಣಿಸಿರಿ (ವಿವರಿಸಿರಿ).
3. ಯಾಕೆ ಯೇಸು ಬೆರಳಿನಿಂದ ನೆಲದ ಮೆಲೆ ಬರೆದನೆಂಬುದಾಗಿ ಯೋಚಿಸುವಿರಿ?
4. ಯೇಸು ಮತ್ತು ವ್ಯಭಿಚಾರದಲ್ಲಿ ಸಿಕ್ಕ ಸ್ತ್ರೀಯ ಕುರಿತಾದ ಕಥೆಯನ್ನು ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದ ನೋಡಬೇಡಿರಿ. ಉತ್ಸಾಹಭರಿತವಾಗಿ ಮತ್ತು ನಾಟಕೀಯ ರೂಪದಲ್ಲಿರಿ. ನೀವೊಂದು ಹಳ್ಳಿ ಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿ.



## 7. ಯೇಸು ಒಬ್ಬ ಹುಟ್ಟುಕುರುಡನನ್ನು ಸ್ವಸ್ಥಪಡಿಸಿದ್ದು, ಯೋಹಾನ 9:1-41

### ಪೀಠಿಕೆ ಮತ್ತು ಟಿಪ್ಪಣಿಗಳು

ಯೇಸು ಒಬ್ಬ ಹುಟ್ಟುಕುರಡನನ್ನು ಗುಣಪಡಿಸುವ ಮತ್ತು ಇದರ ಪರಿಣಾಮಗಳ ಕುರಿತ ಈ ದೀರ್ಘವಾದ ವಾಕ್ಯಭಾಗವನ್ನು ಯೋಹಾನನ ಸುವಾರ್ತೆಯಲ್ಲಿ ಇನ್ನೂ ವಿವರವಾಗಿ ನೋಡಲಿದ್ದೇವೆ.

ಇವನು ಕುರುಡನಾಗಿ ಹುಟ್ಟಿರುವುದಕ್ಕೆ ಯಾರು ಪಾಪ ಮಾಡಿದರು? ಇವನೋ? ಇವನ ತಂದೆ ತಾಯಿಗಳೋ? (ವ. 2): ಶಿಷ್ಯರ ಪ್ರಶ್ನೆಯು ಆ ಸಮಯದಲ್ಲಿನ ಯೆಹೂದಿ ನಾಯಕರ ಬೋಧನೆಯನ್ನು ಪ್ರತಿಬಿಂಬಿಸುತ್ತದೆ (ಹೋಲಿಸಿ ವ. 34). ಆದರೆ ಯೇಸು ಅದನ್ನು ಒಪ್ಪುವುದಿಲ್ಲ. ಅನಾರೋಗ್ಯಕ್ಕೆ ಅನೇಕ ಕಾರಣಗಳಿವೆ. ಅವುಗಳಲ್ಲಿ ವೈಯಕ್ತಿಕ ಪಾಪವು ಒಂದಾಗಿರಬಹುದು. ಆದರೆ ಸತ್ಯವೇದದ ವಿಶಾಲವಾದ ಚಿತ್ರಣದಲ್ಲಿ ಅನಾರೋಗ್ಯ ಮತ್ತು ಮರಣವು ಈ ಪ್ರಸ್ತುತ ಯುಗದಲ್ಲಿ ಮಾನವನ ಅಸ್ತಿತ್ವದ ಭಾಗಗಳಾಗಿವೆ. ಅವು ಪಾಪದ ಪರಿಣಾಮಗಳಾಗಿವೆ.

*ಸಿಲೋವ ಕೊಳ* (ವ. 7): ಇದು ಮುಖ್ಯ ಬೆಟ್ಟದ ದಕ್ಷಿಣ ತುದಿ ಮೇಲೆ ಕಲ್ಲನ್ನು ಕಡಿದು ಮಾಡಲಾದ ಕೊಳವಾಗಿದ್ದು ಈ ಬೆಟ್ಟದ ಮೇಲೆಯೇ ಯೆರೂಸಲೇಮು ಕಟ್ಟಲ್ಪಟ್ಟಿದೆ. ಈ ಒಂದು ಕೊಳವು ಕ್ರಿ.ಪೂ, 700 ಕ್ಕಿಂತ ಮೊದಲೇ ಅರಸನಾದ ಹಿಜ್ಕೀಯನಿಂದ ಕಟ್ಟಲ್ಪಟ್ಟ ಒಂದು ಮುಖ್ಯ ನೀರಿನ ವ್ಯವಸ್ಥೆಗೆ ಸೇರಿದ್ದಾಗಿದೆ.

*ಬಹಿಷ್ಕಾರ ಹಾಕಬೇಕೆಂದು* (ವ. 22): ಯೆಹೂದ್ಯರ ಬಹಿಷ್ಕಾರವು ಬಹುಶಃ ಬಾಬೆಲಿನ ಸೆರೆಯ ನಂತರ ಪ್ರಾರಂಭವಾಗಿರಬಹುದು (ನೋಡಿ ಎಜ್ರ 10:8). ಹೋಲಿಸಿ 34-35.

*ನೀನು ದೇವರಿಗೆ ಮಾನ ಬರುವಂತೆ ಹೇಳು* (ವ. 24): ಇದರ್ಥ “ಸತ್ಯವನ್ನು ಹೇಳು” ಎಂದಾಗಿದೆ.

*ಕಣ್ಣು ಬರುವವು ... ಕುರುಡರಾಗುವರು* (ವ. 39-41): ಈ ಪದಗಳನ್ನು ಈ ವಚನಗಳಲ್ಲಿ ಅಕ್ಷರಶಃವಾಗಿ (ಶಾರೀರಿಕ ದೃಷ್ಟಿ/ಕುರುಡತನ) ಮತ್ತು ಅಲಂಕಾರಿಕವಾಗಿ (ಆತ್ಮೀಕ ದೃಷ್ಟಿ/ಕುರುಡುತನ) ಬಳಸಲಾಗಿದೆ.

### ಪ್ರಶ್ನೆಗಳು

1. ಆ ಮನುಷ್ಯನ ಕುರುಡತನಕ್ಕೆ ಯೇಸು ಶಿಷ್ಯರಿಗೆ ಕೊಡುವ ಉತ್ತರವೇನು (ವ. 1-3)?
2. ಹುಟ್ಟುಕುರುಡನನ್ನು ಗುಣಪಡಿಸಲು ಯೇಸು ಬಳಸಿದ ವಿಧಾನವನ್ನು ವಿವರಿಸಿರಿ (ವ. 6-11)?
3. ಯೇಸುವಿನ ಪರ ಮತ್ತು ವಿರೋಧವಾಗಿದ್ದ ವಾದಗಳೇನು (ವ. 13-16)?
4. ಆ ಮನುಷ್ಯನು ನಿಜವಾಗಲೂ ಹುಟ್ಟುಕುರುಡನಾಗಿದ್ದನೆಂಬುದನ್ನು ಯೆಹೂದಿ ನಾಯಕರು ಹೇಗೆ ಪರಿಶೀಲಿಸಿದರು (ವ. 18-20)?
5. ಆ ಕುರುಡನನ್ನು ಯೇಸುವೇ ಗುಣಪಡಿಸಿದನೆಂದು ಆತನ ತಂದೆತಾಯಿಗಳು ಯಾಕೆ ತಿಳಿಸಲಿಲ್ಲ (ವ. 21-23)?
6. ಹುಟ್ಟುಕುರುಡನು ಯೇಸುವಿನ ಕುರಿತಾಗಿ ಯಾವ ಚಿತ್ರಣವನ್ನು ಕೊಡುತ್ತಾನೆ (ವ. 17:25-33)?
7. ಯೇಸುವಿನೊಂದಿಗಿನ ಆ ಮನುಷ್ಯನ ಸಂಬಂಧದ ಬಗ್ಗೆ ನಾವೇನನ್ನು ಕಂಡುಕೊಳ್ಳುತ್ತೇವೆ (ವ. 27-39)?

### ಆಲೋಚಿಸಿರಿ ಮತ್ತು ಚರ್ಚಿಸಿರಿ

ಹುಟ್ಟುಕುರುಡನು ಗುಣಹೊಂದಿದ್ದನ್ನು ಖಚಿತಪಡಿಸಲು ಯೆಹೂದಿ ನಾಯಕರು ಯಾಕೆ ಅಷ್ಟೊಂದು ಆತುರಗೊಂಡಿದ್ದರು (ನೋಡಿ ವಚನ 22, 29-33, ಹೋಲಿಸಿ ಯೆಶಾಯ 29:18, 35:5, 42:7)?

## 8. ಯೇಸು ಸತ್ತು ಹೋಗಿದ್ದ ಲಾಜರನನ್ನು ಬದುಕಿಸಿದ್ದು, ಯೋಹಾನ 11:1-44

### ಪೀಠಿಕೆ ಮತ್ತು ಟಿಪ್ಪಣಿಗಳು

ಈ ಸುಂದರವಾದ ಕಥೆಯನ್ನು (ಯೋಹಾನ ಸುವಾರ್ತೆಯಲ್ಲಿ ಮಾತ್ರ ಕಂಡುಬರುವ) ಮೂರು ಭಾಗಗಳಾಗಿ ರಚನೆ ಮಾಡಬಹುದು:

1. ಬೇಥಾನ್ಯದ ಲಾಜರನ ಅನಾರೋಗ್ಯ ಮತ್ತು ಮರಣ, ವಚನ 1-16
2. ಮಾರ್ಥ ಮತ್ತು ಮರಿಯಳ ಭೇಟಿ ಮತ್ತು ಯೇಸುವಿನ ದುಃಖ, ವ. 17-37
3. ಲಾಜರನನ್ನು ಮರಣದಿಂದ ಎಬ್ಬಿಸಿದ್ದು, ವ. 38-44

ಇದಾದ ನಂತರ ಯೆಹೂದಿ ನಾಯಕರು ಯೇಸುವನ್ನು ಕೊಲ್ಲಬೇಕೆಂದು ನಿರ್ಧರಿಸಿದರು (ವ. 45-47).

*ಬೇಥಾನ್ಯದ ಲಾಜರ* (ವ. 1): ಲಾಜರನು ಯೋಹಾನನ ಸುವಾರ್ತೆಯಲ್ಲಿ 11 ಮತ್ತು 12 ನೇ ಅಧ್ಯಾಯದಲ್ಲಿ ಮಾತ್ರ ಕಂಡುಬರುತ್ತಾನೆ. "ಲಾಜರ" ಎಂಬ ಹೆಸರನ್ನು (ಇದು ಇಬ್ರಿಯದ "ಎಲೀಯೇಜರ್", "ದೇವರು ಸಹಾಯ ಮಾಡುತ್ತಾನೆ" ಹೆಸರಿನ ಗ್ರೀಕ್ ರೂಪವಾಗಿದೆ) ಯೇಸುವಿನ ಒಂದು ಸಾಮ್ಯದಲ್ಲಿ ಸಹ ಕಾಣಬಹುದು (ಲೂಕ 10:38-42). ಬೇಥಾನ್ಯವು ಯೆರೂಸಲೇಮಿನ ಆಗ್ನೇಯಕ್ಕೆ ಸುಮಾರು 3 ಕಿ.ಮೀ ದೂರದಲ್ಲಿರುವ ಒಂದು ಹಳ್ಳಿಯಾಗಿತ್ತು (ವ. 18 ನ್ನು ಸಹ ನೋಡಿರಿ).

*ಮಾರ್ಥಳು, ಮರಿಯಳು* (ವ. 1-2): ಮರಿಯಳು ಯೇಸುವಿನ ಪಾದಕ್ಕೆ ತೈಲ ಹಚ್ಚುವ ಕಥೆಯನ್ನು 12:1-8 ರಲ್ಲಿ ಕಂಡುಬರುತ್ತದೆ. ಈ ಇಬ್ಬರು ಸಹೋದರಿಯರು ಲೂಕನ ಸುವಾರ್ತೆಯಲ್ಲಿನ ಒಂದು ಕಥೆಯಲ್ಲಿ ಸಹ ಕಂಡುಬರುತ್ತಾರೆ (ಲೂಕ 10:38-42).

*ತಾನಿದ್ದ ಸ್ಥಳದಲ್ಲೇ* (ವ. 6): ಯೇಸು ಮತ್ತು ಆತನ ಶಿಷ್ಯರು ಯೊರ್ದನ್ ಹೊಳೆಯ ಪೂರ್ವಕ್ಕಿರುವ ಪೆರಿಯದಲ್ಲಿದ್ದರು (ನೋಡಿ. 10:40).

*ಯೆಹೂದ್ಯರು ನಿನ್ನನ್ನು ಕಲ್ಲೆಸೆದು ಕೊಲ್ಲಬೇಕೆಂದಿದ್ದರು* (ವ. 8): ಯೋಹಾನನ ಸುವಾರ್ತೆಯಲ್ಲಿನ "ಯೆಹೂದ್ಯರ" ಎಂಬ ಮಾತು ಸಾಮಾನ್ಯವಾಗಿ ಯೆಹೂದ ನಾಯಕರನ್ನು ಸೂಚಿಸುತ್ತದೆ. ಇಲ್ಲಿ ಸೂಚಿಸಿದ ಘಟನೆಯನ್ನು ಹಿಂದಿನ ಅಧ್ಯಾಯದಲ್ಲಿ ಕಾಣಬಹುದು (ನೋಡಿ 10:31).

*ಬೆಳಕು* (ವ. 9-10): ಯೇಸು ಬೆಳಕನ್ನು ಮೊದಲು ಅಕ್ಷರಶಃ ರೂಪದಲ್ಲಿ (ವ. 9), ಅನಂತರ ಅಲಂಕಾರಿಕವಾಗಿ ಅವನಿಗೆ ಬೆಳಕಿಲ್ಲದ್ದರಿಂದ, ವ. 10) ಉಪಯೋಗಿಸುತ್ತಾನೆ. ಹೋಲಿಸಿ ಮತ್ತಾ. 6:22-23.

*ನಿದ್ರೆ ಮಾಡುತ್ತಾನೆ* (ವ. 11): "ನಿದ್ರಿಸುವುದು" "ಸತ್ತವರಿಗಾಗಿನ" ಒಂದು ಸಾಮಾನ್ಯವಾದ ಸೌಮ್ಯೋಕ್ತಿಯಾಗಿದೆ (ಮಾರ್ಕ 5:39 ರ ಟಿಪ್ಪಣಿಯೊಂದಿಗೆ ಹೋಲಿಸಿರಿ). ಇತಿಹಾಸದುದ್ದಕ್ಕೂ ಅನೇಕ ಸಂಸ್ಕೃತಿಗಳಲ್ಲಿ ಇದನ್ನು ಬಳಸಲಾಗಿದೆ.

*ತೋಮನು* (ವ. 16): ಈತನು ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾಗಿದ್ದನು. ಈತನ ಹೆಸರು ಅರಾಮಿಕ್ ದಾಗಿದ್ದು, ಇದರರ್ಥ "ಅವಳಿ" ಎಂದಾಗಿದೆ. ಸಮನಾಂತರ ಸುವಾರ್ತೆಗಳಿಗಿಂತ ಯೋಹಾನನ ಸುವಾರ್ತೆಯಲ್ಲಿ ತೋಮನು ಬಹುಮುಖ್ಯ ಪಾತ್ರವನ್ನು ವಹಿಸುತ್ತಾನೆ.

*ನಾಲ್ಕು ದಿವಸ* (ವ. 17): ಸತ್ತನಂತರ ಮೂರು ದಿನಗಳವರೆಗೆ ಆತ್ಮವು ತಿರುಗಿ ದೇಹಕ್ಕೆ ಸೇರಬೇಕೆಂಬ ನಿರೀಕ್ಷೆಯಿಂದ ದೇಹದ ಸಮೀಪವೇ ಇರುತ್ತದೆಂಬುದಾಗಿ ಅನೇಕ ಯೆಹೂದ್ಯರು ನಂಬಿದ್ದರು. ಆದರೆ ನಾಲ್ಕನೇ ದಿನಕ್ಕೆ ಎಲ್ಲಾ ನಿರೀಕ್ಷೆ ಕಳೆದು ಹೋಗುತ್ತಿತ್ತು. ಹೀಗೆ ಲಾಜರನು ಯಾವುದೇ ಸಂದೇಹವನ್ನು ಮೀರಿ ಸತ್ತುಹೋಗಿದ್ದನು.

*ಜೀವವೂ/ಬದುಕುವವನು* (ವ. 25-26): ಯೇಸು "ಜೀವ" ಮತ್ತು "ಬದುಕುವವನು" ಎಂಬ ಎರಡೂ ಪದವನ್ನು ಅಕ್ಷರಶಃವಾಗಿ ("ಶಾರೀರಿಕ ಜೀವ") ಮತ್ತು ಆತ್ಮೀಕವಾಗಿ (ದೇವರ ರಾಜ್ಯದಲ್ಲಿನ ನಿತ್ಯಜೀವವನ್ನು ಸೂಚಿಸಿ) ಉಪಯೋಗಿಸುತ್ತಾನೆ.

*ಸಮಾಧಿಯು ಗವಿಯಾಗಿತ್ತು, ಅದರ ಬಾಯಿಗೆ ಒಂದು ಕಲ್ಲು ಅನಿಸಿತ್ತು* (ವ. 28): ಈ ರೀತಿಯ ಸಮಾಧಿಯು ಪ್ರಾಚೀನ ಪ್ಯಾಲೇಸ್ಟೈನ್ನಲ್ಲಿ, ಅದರಲ್ಲೂ ವಿಶೇಷವಾಗಿ ಶ್ರೀಮಂತರಲ್ಲಿ ಸಾಮಾನ್ಯವಾಗಿತ್ತು. ಯೇಸು ಸಹ ಇದೇ ರೀತಿಯ ಸಮಾಧಿಯಲ್ಲಿ ಇಡಲ್ಪಟ್ಟನು (ನೋಡಿ ಮಾರ್ಕ 15:46, ಹೋಲಿಸಿ ಯೆಶಾಯ 53:9).

**ಪ್ರಶ್ನೆಗಳು**


1. ಈ ವಿವರ/ಕಥೆಯ ಪ್ರಾರಂಭದಲ್ಲಿ ಲಾಜರ ಮತ್ತು ಆತನ ಕುಟುಂಬದ ಬಗ್ಗೆ ನಾವೇನನ್ನು ಕಲಿಯುತ್ತೇವೆ (ವ. 1-2, 5)?
2. ಲಾಜರನ ಅಸ್ವಸ್ಥತೆಯ ಕುರಿತಾದ ಸುದ್ದಿ ತಿಳಿದೊಡನೆ ಯೇಸು ಹೇಗೆ ಪ್ರತಿಕ್ರಯಿಸುತ್ತಾನೆ (ವ. 3-4)?
3. ಯೇಸು ತಾನು ತಿರುಗಿ ಯೂದಾಯಕ್ಕೆ ಹೋಗುತ್ತೇನೆಂಬುದಾಗಿ ಹೇಳಿದಾಗ ಶಿಷ್ಯರು ಯಾಕೆ ಆಶ್ಚರ್ಯಪಟ್ಟರು (ವ. 7-8)?
4. ಯೇಸು ಲಾಜರನ ಬಗ್ಗೆ ತನ್ನ ಶಿಷ್ಯರಿಗೆ ಏನೆಂದು ಹೇಳುತ್ತಾನೆ ಮತ್ತು ಅವರು ಹೇಗೆ ಆತನ ಮಾತನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾರೆ (ವ. 11-14)?
5. ಲಾಜರನು ಸತ್ತಾಗ ತಾನು ಅಲ್ಲಿ ಇಲ್ಲದೆ ಇರುವುದಕ್ಕಾಗಿ ಯಾಕೆ ಯೇಸು ಸಂತೋಷಪಡುತ್ತಾನೆ (ವ. 15)?
6. ಯೂದಾಯಕ್ಕೆ ತಿರುಗಿ ಹೋಗುವುದರ ಬಗ್ಗೆ ತೋಮನು ಏನೆಂದು ಭಾವಿಸುತ್ತಾನೆ (ವ. 16)?
7. ಯೇಸು ಮತ್ತು ಆತನ ಶಿಷ್ಯರು ಅಲ್ಲಿಗೆ ಬಂದಾಗ ಲಾಜರನು ಸತ್ತು ಎಷ್ಟು ದಿವಸವಾಗಿತ್ತು (ವ. 17)?
8. ಯೇಸು ಬರುತ್ತಿದ್ದಾನೆಂಬುದನ್ನು ತಿಳಿದಾಗ ಮಾರ್ಥಳು ಏನು ಮಾಡಿದಳು (ವ. 19-20)?
9. ಲಾಜರನ ಬಗ್ಗೆ ಯೇಸು ಮಾರ್ಥಳಿಗೆ ಏನೆಂದು ಹೇಳುತ್ತಾನೆ ಮತ್ತು ಆಕೆ ಹೇಗೆ ಆತನ ಮಾತನ್ನು ತಪ್ಪಾಗಿ ಅರ್ಥೈಸಿಕೊಳ್ಳುತ್ತಾಳೆ (ವ. 21-24)?
10. ಕ್ರಿಸ್ತನಲ್ಲಿನ ತನ್ನ ನಂಬಿಕೆಯನ್ನು ಮಾರ್ಥಳು ಹೇಗೆ ಅರಿಕೆ ಮಾಡುತ್ತಾಳೆ (ವ. 25-27)?
11. ಯೇಸು ಅಲ್ಲಿ ಕಾಯುತಿದ್ದನೆಂಬುದನ್ನು ಮರಿಯಳು ಹೇಗೆ ಕಂಡುಕೊಂಡಳು (ವ. 28-30)?
12. ಪ್ರಸ್ತುತ ಸನ್ನಿವೇಶ/ಪರಿಸ್ಥಿತಿಯ ಬಗ್ಗೆ ಮರಿಯಳು ಯೇಸುವನ್ನು ದೂರುತ್ತಾಳೆ ಅದು ಹೇಗೆ (ವ. 32)?
13. ಮರಿಯಳ ದುಃಖ/ಗೋಳಾಟವನ್ನು ನೋಡಿದಾಗ ಯೇಸು ಹೇಗೆ ಪ್ರತಿಕ್ರಯಿಸುತ್ತಾನೆ (ವ. 33-36)?
14. ಪ್ರಸ್ತುತ ಪರಿಸ್ಥಿತಿಗಾಗಿ ಕೆಲ ಜನರು ಸಹ ಯೇಸುವನ್ನು ದೂರುತ್ತಾರೆ. ಹೇಗೆ (ವ. 37)?
15. ಯಾಕೆ ಮರಿಯಳು ಸಮಾಧಿಗೆ ಮುಚ್ಚಿದ್ದ ಕಲ್ಲನ್ನು ತೆಗೆಯಲು ಹಿಂಜರಿದಳು (ವ. 38-40)?
16. ಯೇಸು ಹೇಗೆ ಲಾಜರನನ್ನು ತಿರುಗಿ ಬದುಕಿಸಿದನೆಂಬುದನ್ನು ವಿವರಿಸಿರಿ (ವ. 41-44)?

**ಆಲೋಚಿಸಿರಿ ಮತ್ತು ಚರ್ಚಿಸಿರಿ**

1. "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ, ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವುದಿಲ್ಲ" ಎಂಬ ಪ್ರಸಿದ್ಧ ಹೇಳಿಕೆಯನ್ನು ಯೇಸು ಯಾವ ಹಿನ್ನಲೆಯಲ್ಲಿ ಹೇಳುತ್ತಾನೆಂಬುದನ್ನು ವಿವರಿಸಿರಿ.
2. ಯೇಸು ಸತ್ತ ಲಾಜರನನ್ನು ಮರಳಿ ಬದುಕಿಸುವ ಕಥೆಯನ್ನು ನಿಮ್ಮದೇ ಮಾತಿನಲ್ಲಿ ಪುನಃ ಹೇಳಿರಿ. ಸತ್ಯವೇದ ನೋಡಬೇಡಿ. ಉತ್ಸಾಹಭರಿತವಾಗಿರಿ ಮತ್ತು ನಾಟಕೀಯರೂಪವಾಗಿರ್ರಿ. ನೀವೊಂದು ಹಳ್ಳಿಜನರ ಗುಂಪಿಗೆ ಹೇಳುತ್ತಿರುವಿರೆಂಬುದಾಗಿ ಕಲ್ಪಿಸಿಕೊಳ್ಳಿರಿ.

# ಯೇಸುವಿನ ಕುರಿತಾದ ಹನ್ನೆರಡು ಪಾಠಗಳು

## “ಇವನು ಆ ಬಡಗಿಯ ಮಗನಲ್ಲವೇ?”



***ಮೇಲ್ಕಂಡ ಚಿತ್ರವನ್ನು ಅಭ್ಯಾಸಿಸಿರಿ***

1. ಚಿತ್ರವನ್ನು ವಿವರಸಿರಿ
2. ಈ ಚಿತ್ರವು ನಿಮಗೆ ಕೊಡುವ ಯೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ
3. ಹೇಗೆ ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತಾ ಕಥೆಗಳೊಂದಿಗೆ ಸಂಬಂಧವನ್ನು ಹೊಂದಬಲ್ಲದೆಂಬುದನ್ನು ವಿವರಿಸಿರಿ.

***ಈ ವಾಕ್ಯಭಾಗಗಳನ್ನು ಓದಿರಿ.***

*ತರುವಾಯ ಆತನು ತನ್ನ ಊರಿಗೆ ಬಂದು ಅಲ್ಲಿರುವ ಸಭಾಮಂದಿರದಲ್ಲಿ ಜನರಿಗೆ ಉಪದೇಶಮಾಡುತ್ತಿದ್ದನು. ಅವರು ಕೇಳಿ ಆತ್ಯಾಶ್ಚರ್ಯಪಟ್ಟು – ಇವನಿಗೆ ಈ ಜ್ಞಾನವೂ ಈ ಮಹಾತ್ಕಾರ್ಯಗಳೂ ಎಲ್ಲಿಂದ ಬಂದಿದ್ದಾವು? ಇವನು ಆ ಬಡಗಿಯ ಮಗನಲ್ಲವೇ. ಇವನ ತಾಯಿ ಮರಿಯಳೆಂಬವಳಲ್ಲವೇ. ಯಾಕೋಬ ಯೋಸೇಫ ಸೀಮೋನ ಯೂದ ಇವರು ಇವನ ತಮ್ಮಂದಿರಲ್ಲವೇ. ಇವನ ತಂಗಿಯರೆಲ್ಲರು ನಮ್ಮಲ್ಲಿ ಇದ್ದಾರಲ್ಲವೇ. ಹಾಗಾದರೆ ಇವೆಲ್ಲಾ ಇವನಿಗೆ ಎಲ್ಲಿಂದ ಬಂದಿದ್ದಾವು? ಎಂದು ಮಾತಾಡಿಕೊಂಡು ಆತನ ವಿಷಯವಾಗಿ ಬೇಸರಗೊಂಡರು. ಆದರೆ ಯೇಸು ಅವರಿಗೆ “ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶದಲ್ಲಿಯೂ ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆಯಿಲ್ಲ” ಅಂದನು (ಮತ್ತಾ. 13:54-57).*

*“ನನ್ನಲ್ಲಿ ತಂದೆಯು ಇದ್ದಾನೆಂತಲೂ ತಂದೆಯಲ್ಲಿ ನಾನು ಇದ್ದೇನೆಂತಲೂ ನೀವು ತಿಳುಕೊಂಡು ಮನನ ಮಾಡಕೊಳ್ಳುವಿರಿ” (ಯೋಹಾನ 10:38).*

*“ನಾನು ತಂದೆಯಲ್ಲಿ ಇದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆಂಬುವ ನನ್ನ ಮಾತನ್ನು ನಂಬಿರಿ” (ಯೋಹಾನ 14:11).*

*“ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂತಲೂ ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನು ಉಂಟುಮಾಡಿ ಭೂಪರಲೋಕಗಳಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆಮಾಡಿದನು” (ಕೊಲೊಸ್ಸೆ 1:19-20).*

*"ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ" (1 ತಿಮೊ. 2:5).*

***ಈ ಸತ್ಯಾಂಶಗಳ ಮೇಲೆ ಚಿಂತನೆ ಮಾಡಿರಿ***

1. ಹೊಸ ಒಡಂಬಡಿಕೆಯು ಈ ಒಂದು ಸತ್ಯದ ಕುರಿತು ಸಂಪೂರ್ಣವಾಗಿ ಸ್ಪಷ್ಟವಾಗಿದೆ: ಯೇಸು ಬರೀ ದೇವರು ಮಾತ್ರವಾಗಿರಲಿಲ್ಲ. ಆತನು ಮನುಷ್ಯನು ಸಹ ಆಗಿದ್ದನು. ಆತನು ಅರ್ಧ ದೇವರು ಮತ್ತು ಅರ್ಧ ಮನುಷ್ಯನಲ್ಲ, ಬದಲಾಗಿ ಪೂರ್ಣವಾಗಿ ದೇವರು ಮತ್ತು ಪೂರ್ಣ ಮನುಷ್ಯ. ಆತನು ದೇವರ ಮನುಷ್ಯಾವತಾರವಾಗಿದ್ದನು. ಯೆಹೂದಿ ನಾಯಕರು ಈ ಸತ್ಯವನ್ನು ಅಲ್ಲಗಳೆಯುತ್ತಾರೆ. ಅವರು ಆತನ ದೈವತ್ವವನ್ನು ಒಪ್ಪುತ್ತಿರಲಿಲ್ಲ. ಅವರು ಯೇಸು ಬರೀ ಮನುಷ್ಯನಾಗಿದ್ದಾನೆಂದು ಹೇಳುತ್ತಿದ್ದರು. ಅಲ್ಲದೇ ಅನೇಕ ಕ್ರೈಸ್ತ ಪಂಗಡಗಳು ಸಹ ಈ ಸತ್ಯವನ್ನು ಅಲ್ಲಗಳೆದರು. ಅವರು ಆತನ ಮಾನವತ್ವವನ್ನು ಒಪ್ಪುತ್ತಿರಲಿಲ್ಲ. ಯೇಸು ಬರೀ ದೇವರಾಗಿದ್ದನೆಂಬುದಾಗಿ ಅವರು ಹೇಳಿದರು.
2. ದೇವಕುಮಾರನಾದ ಯೇಸುವಿಗೆ ಮಾನುಷಿಕವಾದ ಒಂದು ಕುಟುಂಬವಿತ್ತು. ತಾನು ಬೆಳೆದ ಪಟ್ಟಣವಾದ ನಜರೇತಿನಲ್ಲಿ ಆತನಿಗೊಂದು ಮನೆಯಿತ್ತು. ತನ್ನ ಶಾಸನಾತ್ಮಕ ತಂದೆಯಾದ ಯೋಸೇಫನಿಂದ ಕಲಿತ ಒಂದು ಉದ್ಯೋಗ ಆತನಿಗಿತ್ತು. ಆತನೊಬ್ಬ ಬಡಗಿಯ ಮಗನಾಗಿದ್ದನು ಮತ್ತು ಸ್ವತಃ ಆತನೇ ಒಬ್ಬ ಬಡಗಿಯಾಗಿದ್ದನು. ಯೇಸು ಮತ್ತು ಆತನ ಕುಟುಂಬ ನೆರೆಹೊರೆಯವರಿಗೆ ಚಿರಪರಿಚಿತರಾಗಿದ್ದರು. ಆದರೆ ಆತನ ನಿಕಟತೆ(ಜನಪ್ರಿಯತೆ)ಯು ಅಗೌರವ ಮತ್ತು ತಿರಸ್ಕಾರವನ್ನು ಹುಟ್ಟುಹಾಕಿತು. ಬಡಗಿಯಾದ ಈ ಯೇಸು ಒಬ್ಬ ಪ್ರವಾದಿಯಾಗಲು ಮತ್ತು ಇಂತಹ ಜ್ಞಾನದ ಮಾತುಗಳನ್ನು ಆಡಲು ಹೇಗೆ ಸಾಧ್ಯ? ಇಂತಹ ಅದ್ಭುತಗಳನ್ನು ಮಾಡಲು ಈ ಯೇಸು ದೇವರಿಂದ ಉಪಯೋಗಿಸಲ್ಪಡಲು ಹೇಗೆ ಸಾಧ್ಯ?


***ನೀವಾಗಿಯೇ ಈ ಪ್ರಶ್ನೆಯನ್ನು ಉತ್ತರಿಸಿ.***

1. ಯೇಸು ನರಾವತಾರವೆತ್ತ ದೇವರಾಗಿದ್ದನು. ಯೇಸು ಮತ್ತು ಆತನ ಗುರುತಿನ ಕುರಿತಾದ ಈ ಸತ್ಯವನ್ನು ಒಪ್ಪಿಕೊಳ್ಳಲು ನಿಮಗೆದುರಾದ ಸಮಸ್ಯೆಯೇನು? ಯೇಸುವಿನ ಗುರುತನ್ನು ಇನ್ನೂ ಉತ್ತಮವಾಗಿ ಅರ್ಥೈಸಿಕೊಳ್ಳಲು ನೀವೇನನ್ನು ಮಾಡುವಿರಿ?
2. "ಜನಪ್ರಿಯತೆಯು ತಿರಸ್ಕಾರವನ್ನು ಹುಟ್ಟುಹಾಕುತ್ತದೆ"! ನಜರೇತಿನ ಜನರ ಬಗ್ಗೆ ಈ ಮಾತು ಸತ್ಯವಾಗಿತ್ತು. ಆದರೆ ನಿನ್ನ ಬಗ್ಗೆಯೂ ಸಹ ಸತ್ಯವಾ/ನಿಜವಾ? ಯೇಸುವಿನೊಂದಿಗಿನ ನಿನ್ನ ನಿಕಟತೆ/ಜನಪ್ರಿಯತೆ ನಿನ್ನನ್ನು ಆತನಿಗೆ ಮತ್ತು ಆತನ ರಕ್ಷಣಾ ಕಾರ್ಯಕ್ಕೆ ಗೌರವವನ್ನುಂಟುಮಾಡುವ ಪಾಪಯವು ನಿಮ್ಮ ಜೀವನದಲ್ಲಿದೆಯಾ? ನಿಮ್ಮ ಜೀವಿತದಲ್ಲಿನ ಈ ರೀತಿ ಜಯಿಸಲು ನೀವೇನು ಮಾಡಬಲ್ಲಿರಿ? ಯೇಸುವಿನೊಂದಿಗೆ ಅನ್ಯೋನ್ಯ ಮತ್ತು ವೈಯಕ್ತಿಕ ಅನ್ಯೋನ್ಯತೆ ಮತ್ತು ನಿಮ್ಮ ಒಡೆಯ ಮತ್ತು ದೇವರಾಗಿ ಆತನೊಂದಿಗೆ ಆರಾಧನಾತ್ಮಕ ಗೌರವದ ನಡುವೆ ಒಂದು ಉತ್ತಮವಾದ ಸಮತೋಲನೆಯನ್ನು ಕಾಪಾಡಿಕೊಳ್ಳಲು ನೀವೇನು ಮಾಡಬಲ್ಲಿರಿ?
3. ಯೇಸು ಒಬ್ಬ ಬಡಗಿಯಾಗಿದ್ದು ಗಲಿಲಾಯದ ಒಂದು ಸಣ್ಣ ಊರಿನಲ್ಲಿ ಹಲವು ವರ್ಷಗಳ ಕಾಲ ಇದ್ದು ಅಲ್ಲಿ ಕೆಲಸ ಮಾಡಿದನು. ಈ ಭೂಮಿ ಮೇಲಣ ತನ್ನ ಅಲ್ಪಾವಧಿಯ ಜೀವಿತದಲ್ಲಿ ಆತನಿಗೊಂದು ಕುಟುಂಬ, ಒಬ್ಬ ತಾಯಿ, ಸಹೋದರರು ಮತ್ತು ಸಹೋದರಿಯರಿದ್ದರು. ಕೆಲಸ ಮತ್ತು ಕುಟುಂಬದೊಂದಿಗಿನ ನಿಮ್ಮ ದೈನಂದಿನ ಹೋರಾಟಗಳಲ್ಲಿ ಈ ಸತ್ಯಗಳು ನಿಮಗೆ ಸಹಕರಿಸಬಲ್ಲವು?

***ಪ್ರಾರ್ಥಿಸಿ***

ಕೆಲಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ಈ ಪಾಠದಲ್ಲಿ ಉದ್ಭವಿಸಿದ ವಿಷಯಗಳ ಮೇಲೆ ನಿಮ್ಮ ಪ್ರಾರ್ಥನೆಯು ಕೇಂದ್ರವಾಗಿರಲಿ. ಏನೇ ಕಳಕಳಿಯಿದ್ದರೆ ಅದನ್ನು ದೇವರ ಮುಂದೆ ತಂದು ಪ್ರಾರ್ಥಿಸಿರಿ.

## ... ಸೈತಾನನಿಂದ ಶೋಧಿಸಲ್ಪಟ್ಟದ್ದು



### *ಈ ಚಿತ್ರವನ್ನು ಅಭ್ಯಾಸಿಸಿರಿ*

1. ಈ ಚಿತ್ರವನ್ನು ವಿವರಿಸಿರಿ
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ
3. ಹೇಗೆ ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತೆ ಕಥೆಗಳೊಂದಿಗೆ ಸಂಬಂಧಿಸಬಲ್ಲದೆಂಬುದನ್ನು ವಿವರಿಸಿರಿ

### *ಈ ವಾಕ್ಯಭಾಗವನ್ನು ಓದಿರಿ*

*ಯೇಸು ಪವಿತ್ರಾತ್ಮಭರಿತನಾಗಿ ಯೊರ್ದನ್ ಹೊಳೆಯಿಂದ ಹಿಂತಿರುಗಿ ದೇವರಾತ್ಮನಿಂದ ನಾಲ್ವತ್ತು ದಿವಸ ಅಡವಿಯಲ್ಲಿ ನಡಿಸಲ್ಪಡುತ್ತಾ ಸೈತಾನನಿಂದ ಶೋಧಿಸಲ್ಪಟ್ಟನು. ಆ ದಿವಸಗಳಲ್ಲಿ ಆತನು ಏನೂ ತಿನ್ನಲಿಲ್ಲ. ಅವು ಕಳೆದ ಮೇಲೆ ಆತನಿಗೆ ಹಸಿವಾಯಿತು. ಆಗ ಸೈತಾನನು ಆತನಿಗೆ - "ನೀನು ದೇವರ ಮಗನಾಗಿದ್ದರೆ ಈ ಕಲ್ಲು ರೊಟ್ಟಿಯಾಗುವಂತೆ ಇದಕ್ಕೆ ಅಪ್ಪಣೆ ಕೊಡು" ಎಂದು ಹೇಳಲು ಯೇಸು ಅವನಿಗೆ - "ಮನುಷ್ಯನು ರೊಟ್ಟಿತಿಂದ ಮಾತ್ರದಿಂದ ಬದುಕುವುದಿಲ್ಲ" ಎಂದು ಬರೆದದೆ ಎಂತ ಉತ್ತರಕೊಟ್ಟನು.*

*ಬಳಿಕ ಸೈತಾನನು ಆತನನ್ನು ಮೇಲಕ್ಕೆ ಕರೆದುಕೊಂಡು ಹೋಗಿ ಕ್ಷಣಮಾತ್ರದಲ್ಲಿ ಲೋಕದ ಎಲ್ಲಾ ರಾಜ್ಯಗಳನ್ನು ಆತನಿಗೆ ತೋರಿಸಿ - "ಇವೆಲ್ಲವುಗಳ ಅಧಿಕಾರವನ್ನೂ ಇವುಗಳ ವೈಭವವನ್ನೂ ನಿನಗೆ ಕೊಡುವೆನು; ಇದೆಲ್ಲಾ ನನಗೆ ಕೊಟ್ಟದೆ, ಇದನ್ನು ನನ್ನ ಮನಸ್ಸು ಬಂದವನಿಗೆ ಕೊಡುತ್ತೇನೆ; ನೀನು ನನ್ನ ಮುಂದೆ ಅಡ್ಡಬಿದ್ದರೆ ಇದೆಲ್ಲಾ ನಿನ್ನದಾಗುವದು" ಎಂದು ಆತನಿಗೆ ಹೇಳಿದನು. ಅದಕ್ಕೆ ಯೇಸು – "ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು" ಎಂಬುದಾಗಿ ಬರೆದದೆ ಎಂದು ಉತ್ತರಕೊಟ್ಟನು.*

*ಇದಲ್ಲದೆ ಅವನು ಆತನನ್ನು ಯೆರೂಸಲೇಮಿಗೆ ಕರೆದುಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ – "ನೀನು ದೇವರ ಮಗನಾಗಿದ್ದರೆ ಇಲ್ಲಿಂದ ಕೆಳಕ್ಕೆ ಧುಮುಕು. ನಿನ್ನನ್ನು ಕಾಯುವುದಕ್ಕೆ ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು; ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು" ಎಂಬುದಾಗಿ ಬರೆದದೆಯಲ್ಲಾ ಎಂದು ಹೇಳಿದನು. ಅದಕ್ಕೆ ಯೇಸು – "ನಿನ್ನ ದೇವರಾಗಿರುವ ಕರ್ತನನ್ನು ಪರೀಕ್ಷಿಸಬಾರದೆಂದು ಹೇಳಿಯದೆ" ಎಂತ ಉತ್ತರಕೊಟ್ಟನು. ಸೈತಾನನು ಸಕಲ ವಿಧವಾದ ಶೋಧನೆಯನ್ನು ಮುಗಿಸಿ ಸ್ವಲ್ಪಕಾಲ ಆತನನ್ನು ಬಿಟ್ಟು ಹೊರಟು ಹೋದನು (ಲೂಕ 4:2-13).*

*“ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವುದರಿಂದ ಶೋಧಿಸಲ್ಪಡುವವರಿಗೆ ಸಹಾಯ ಮಾಡುವುದಕ್ಕೆ ಶಕ್ತನಾಗಿದ್ದಾನೆ” (ಇಬ್ರಿಯ 2:18).*

*“ಮನುಷ್ಯರು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವದೂ ನಿಮಗೆ ಸಂಭವಿಸಲಿಲ್ಲ. ದೇವರು ನಂಬಿಗಸ್ತನು; ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವುದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು” (1 ಕೊರಿಂಥ 10:13).*

*“ಯಾವನಾದರೂ ಪಾಪಮಾಡುವುದಕ್ಕೆ ಪ್ರೇರೇಪಿಸಲ್ಪಡುವಾಗ – ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. ದೇವರು ಕೆಟ್ಟದ್ದಕ್ಕೇನು ಸಂಬಂಧಪಟ್ಟವನಲ್ಲ. ಆತನು ಯಾರನ್ನು ಪಾಪಕ್ಕೆ ಪ್ರೇರೇಪಿಸುವುದಿಲ್ಲ” (ಯಾಕೋಬ 1:13).*

***ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ***

1. ಯೇಸು ಸೈತಾನನಿಂದ ಶೋಧಿಸಲ್ಪಡುವುದಕ್ಕಾಗಿ ಆತ್ಮನು ಆತನನ್ನು ಅಡವಿಗೆ ಒಯ್ದನು (ನೋಡಿ ಮತ್ತಾ. 4:1). ಹೀಗೆ ತಂದೆಯಾದ ದೇವರು ತನ್ನ ಮಗನನ್ನು ಶೋಧಿಸಲ್ಪಡುವುದಕ್ಕೆ ಬಿಟ್ಟನು. ಮನುಷ್ಯನ ಶೋಧನೆಯ ಕ್ಷೇತ್ರದಲ್ಲಿ ಸಹ, ಯೇಸುವು ಮನುಷ್ಯರ ಪರಿಸ್ಥಿತಿ(ಸ್ಥಿತಿ)ಯನ್ನು ಅನುಭವಿಸಬೇಕೆಂದು ಆತನು ಬಯಸಿದ್ದನು.
2. ಯೇಸು ಸ್ವತಃ ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವುದರಿಂದ ಆತನು ನಮ್ಮನ್ನ ಅರ್ಥೈಸಿಕೊಂಡು, ನಾವು ಶೋಧನೆಯಿಂದ ಬಾಧಿಸಲ್ಪಡುವಾಗೆಲ್ಲಾ ನಮಗೆ ಸಹಾಯ ಮಾಡಲು ಶಕ್ತನಾಗಿದ್ದಾನೆ. ದೇವರು ನಂಬಿಗಸ್ತನು ಮತ್ತು ಕರುಣೆಯುಳ್ಳವನು. ಆತನು ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾಗಿದ್ದಾನೆ (ಇಬ್ರಿಯ 2:17). ದೇವಜನರಾದ ನಾವು ಸಹಿಸಲಾಗದಷ್ಟು ಶೋಧಿಸಲ್ಪಡುವುದಿಲ್ಲ.
3. ಹೊಸ ಒಡಂಬಡಿಕೆಯು “ಶೋಧಿಸು” ಮತ್ತು “ಪರೀಕ್ಷಿಸು” ಇವೆರಡಕ್ಕೂ ಒಂದೆ ಪದವನ್ನು ಉಪಯೋಗಿಸುತ್ತದೆ. ದೇವರು ನಮ್ಮನ್ನು ಪರೀಕ್ಷಿಸುವಾಗ, ಆತನು ಪ್ರೀತಿಯ ಉದ್ದೇಶದಿಂದ ಪರೀಕ್ಷಿಸುತ್ತಾನೆ. ದೇವರು ಯಾವಾಗಲೂ ನಮಗೆ ನಮ್ಮ ರಕ್ಷಣೆಗೆ ಒಳ್ಳೇದಾಗಿರುವುದನ್ನೇ ಬಯಸುತ್ತಾನೆ. ಸೈತಾನನು ನಮ್ಮನ್ನು ಶೋಧಿಸುವಾಗ ಆತನದನ್ನು ದುರುದ್ದೇಶಗಳೊಂದಿಗೆ ಶೋಧಿಸುತ್ತಾನೆ. ಸೈತಾನನು ಯಾವಾಗಲೂ ನಮಗೆ ಕೆಟ್ಟದ್ದಾಗಿರುವುದನ್ನೇ, ನಾಶನವನ್ನು ಬಯಸುತ್ತಾನೆ.
4. ಪರೀಕ್ಷೆ ಮತ್ತು ಶೋಧನೆಯ ಸಮಯಗಳಲ್ಲಿ ನಾವು ಬಲ ಮತ್ತು ಜ್ಞಾನಕ್ಕಾಗಿ ಯೇಸುವಿನಂತೆ ದೇವರ ವಾಕ್ಯದೆಡೆಗೆ ತಿರುಗಬೇಕಾಗಿದೆ. ಅಲ್ಲದೆ ನಾವು ಪ್ರಾರ್ಥನೆಯಲ್ಲಿ ದೇವರೆಡೆಗೆ ಬಂದು ತನ್ನ ಆತ್ಮನ ಮೂಲಕ ನಮ್ಮನ್ನು ಮಾರ್ಗದರ್ಶಿಸಿ ಬಲಪಡಿಸಬೇಕೆಂದು ಬೇಡಿಕೊಳ್ಳಬೇಕು.
5. ನಾವು ಶೋಧನೆಗೆ ಒಳಗಾಗಿ ಪಾಪ ಮಾಡಿದಾಗ, ಮಾಡಬಹುದಾದ ಒಳ್ಳೆಯ ಕೆಲಸವೆಂದರೆ ಯೇಸು ಕ್ರಿಸ್ತನ ಬಳಿಗೆ ಓಡಿಬಂದು ಆತನ ಕರುಣೆ ಮತ್ತು ಕ್ಷಮೆಯನ್ನು ಕೇಳಬೇಕು. ಆತನು ನಮ್ಮ ಕರುಣೆಯುಳ್ಳ ಮಹಾಯಾಜಕನಾಗಿದ್ದು ನಮ್ಮ ಪಾಪಗಳಿಗಾಗಿ ತನ್ನನ್ನೇ ಒಂದು ಪರಿಪೂರ್ಣ ಯಜ್ಞವಾಗಿ ಸಮರ್ಪಿಸಿದ್ದಾನೆ (ಇಬ್ರಿಯ 10:10).

***ನೀವಾಗಿಯೇ ಈ ಪ್ರಶ್ನೆಗಳನ್ನು ಉತ್ತರಿಸಿಕೊಳ್ಳಿರಿ***


1. ಈ ಸಮಯದಲ್ಲಿ ನೀವು ನಿಮ್ಮ ಜೀವಿತದಲ್ಲಿ ಪರೀಕ್ಷಿಸಲ್ಪಟ್ಟು ಶೋಧಿಸಲ್ಪಟ್ಟಿರುವಿರಾ? ನಿಮ್ಮ ಜೀವನದ ಯಾವ ಕ್ಷೇತ್ರದಲ್ಲಿ? ದೇವರ ಸಹಾಯ, ಬಲ ಮತ್ತು ಮಾರ್ಗದರ್ಶನವನ್ನು ಕೇಳಿಕೊಳ್ಳುವಲ್ಲಿ ಅಲಕ್ಷ್ಯ ಮಾಡಿರುವಿರಾ?
2. ನಿಮಗಾಗಿ ಮುಟ್ಠಾಳುತನದ ಮತ್ತು ಅವಿವೇಕದ ಸಂಗತಿಗಳನ್ನು ಮಾಡುವುದಕ್ಕಾಗಿ, ಮಾಡುವದಕ್ಕೆ ಬೇಡಿಕೆ ಇಡುವುದರ ಮೂಲಕ ನಿಮ್ಮ ದೇವರಾದ ಕರ್ತನನ್ನು ನೀವು ಪರೀಕ್ಷಿಸಿರುವಿರಾ? ಅಥವಾ ಹೊಸ ಒಡಂಬಡಿಕೆಯ ಬೋಧನೆಗಳಲ್ಲಿ ಕಂಡುಬರುವಂತೆ ನಿಮ್ಮ

ಕ್ರೈಸ್ತೀಯ ಜೀವಿತಕ್ಕಾಗಿನ ಆತನ ಸ್ಪಷ್ಟವಾದ ಮಾರ್ಗದರ್ಶನವನ್ನು ಪಾಲಿಸಲು ನಿರಾಕರಿಸುವುದರ ಮೂಲಕ ಆತನನ್ನು ಪರೀಕ್ಷಿಸುತ್ತಿರುವಿರಾ?

***ಪ್ರಾರ್ಥಿಸಿ***

ಸ್ವಲ್ಪ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ನಿಮ್ಮ ಪ್ರಾರ್ಥನೆಯ ಗಮನವು ಈ ಪಾಠದಲ್ಲಿ ಉದ್ಭವಿಸಿದ ವಿಷಯ/ಸಮಸ್ಯೆಗಳಲ್ಲಿರಲಿ. ಏನೇ ಕಳಕಳಿಯಿದ್ದರೂ ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿರಿ.

## ... ಮತ್ತು ಎರಡು ಮೀನುಗಳು



***ಈ ಚಿತ್ರವನ್ನು ಅಭ್ಯಾಸಿಸಿರಿ***

1. ಚಿತ್ರವನ್ನು ವಿವರಿಸಿರಿ.
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ.
3. ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತೆಯ ಕಥೆಗಳಿಗೆ ಹೇಗೆ ಸಂಬಂಧಿಸಬಲ್ಲದೆಂಬುದನ್ನು ವಿವರಿಸಿರಿ.

***ಈ ವಾಕ್ಯಭಾಗಗಳನ್ನು ಓದಿರಿ***

*ಹೊತ್ತು ಇಳಿಯುತ್ತಾ ಬಂತು. ಆ ಹನ್ನೆರಡು ಮಂದಿ ಶಿಷ್ಯರು ಆತನ ಬಳಿಗೆ ಬಂದು - ಈ ಗುಂಪಿಗೆ ಅಪ್ಪಣೆ ಕೊಡು; ಇವರು ಸುತ್ತಲಿರುವ ಹಳ್ಳಿಪಳ್ಳಿಗೆ ಹೋಗಿ ಇಳುಕೊಂಡು ಊಟಕ್ಕೆ ಬೇಕಾದ ಪದಾರ್ಥಗಳನ್ನು ದೊರಕಿಸಿಕೊಳ್ಳಲಿ; ನಾವು ಇಲ್ಲಿ ಅಡವಿಯ ಸ್ಥಳದಲ್ಲಿ ಇದ್ದೇವಲ್ಲಾ ಎಂದು ಆತನಿಗೆ ಹೇಳಲಾಗಿ ಆತನು – ನೀವೇ ಅವರಿಗೆ ಊಟಕ್ಕೆ ಕೊಡಿರಿ ಅಂದನು. ಅದಕ್ಕವರು – ನಮ್ಮಲ್ಲಿ ಐದು ರೊಟ್ಟಿ ಎರಡು ಮೀನು ಹೊರತು ಹೆಚ್ಚೇನೂ ಇಲ್ಲ; ನಾವು ಹೋಗಿ ಈ ಜನರಿಗೆ ಆಹಾರವನ್ನು ಕೊಂಡುಕೊಳ್ಳಬೇಕೋ? ಅಂದರು. ಗಂಡಸರೇ ಹೆಚ್ಚು ಕಡಿಮೆ ಐದು ಸಾವಿರ ಮಂದಿಯಿದ್ದರು. ಆಗ ಆತನು ತನ್ನ ಶಿಷ್ಯರಿಗೆ - "ಇವರನ್ನು ಒಂದೊಂದು ಪಂಕ್ತಿಗೆ ಹೆಚ್ಚು ಕಡಿಮೆ ಐವತ್ತೈವತ್ತರಂತೆ ಕೂಡ್ರಿಸಿರಿ" ಎಂದು ಹೇಳಲು ಅವರು ಹಾಗೆಯೇ ಎಲ್ಲರನ್ನೂ ಕೂಡ್ರಿಸಿದರು. ಆ ಮೇಲೆ ಆತನು ಆ ಐದು ರೊಟ್ಟಿ ಎರಡು ಮೀನುಗಳನ್ನು ತೆಗೆದುಕೊಂಡು ಆಕಾಶದ ಕಡೆಗೆ ನೋಡಿ ಅವುಗಳನ್ನು ಆಶೀರ್ವದಿಸಿ ಮುರಿದು ಶಿಷ್ಯರ ಕೈಗೆ ಕೊಟ್ಟು – "ಈ ಜನರ ಗುಂಪಿಗೆ ಹಂಚಿರಿ" ಅಂದನು. ಅವರೆಲ್ಲರೂ ಊಟ ಮಾಡಿ ತೃಪ್ತರಾದರು; ಉಳಿದ ತುಂಡುಗಳನ್ನು ಕೂಡಿಸಲಾಗಿ ಅವು ಹನ್ನೆರಡು ಪುಟ್ಟಿ ಆದವು (ಲೂಕ 9:12-17).*

*ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು (ಫಿಲಿಪ್ಪ 4:19).*

*ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನ ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ (ಎಫೆಸ. 1:3)*

*ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ*

1. ಶಿಷ್ಯರು ಜನರನ್ನು ದೂರ ಕಳಿಸಬೇಕೆಂದಿದ್ದರು. ಆದರೆ ಅದರ ಬದಲಾಗಿ ಯೇಸು ನೀವೇ ಅವರಿಗೆ ಆಹಾರ ಕೊಡಿರಿ ಅಂದನು. ಶಿಷ್ಯರು ಯೇಸುವಿಗೆ ವಿಧೇಯರಾದರು. ಅವರು ಆತನನ್ನು ನಂಬಿದರು. ಅವರ ವಿಧೇಯತೆ ಮತ್ತು ನಂಬಿಕೆಯ ಫಲವಾಗಿ ಅವರು ಮತ್ತು ಹಸಿದ ಜನರೆಲ್ಲರೂ ಅದ್ಭುತದೊಂದಿಗೆ ಆಶೀರ್ವಾದ ಹೊಂದಿದರು.
2. ಯೇಸು ಆಹಾರವನ್ನು ಆಶಿರ್ವದಿಸಿದನು. ಯೇಸುವಿನ ಆಶೀರ್ವಾದದಿಂದ ಯಾವಾಗಲೂ ಏನಾದರೂ ಆಗುತ್ತದೆ. ಈ ಒಂದು ಸಂದರ್ಭದಲ್ಲಿ ಆಹಾರವು ಅದ್ಭುತವಾಗಿ ದ್ವಿಗುಣಗೊಳ್ಳುತ್ತದೆ. ಯೇಸು ನಮ್ಮ ಜೀವಿತಗಳನ್ನು ಆಶಿರ್ವದಿಸುವಾಗ ಆಗ ಅವು ಅದ್ಭುತವಾಗಿ ಫಲಭರಿತವಾಗುತ್ತವೆ. ಯೇಸುವಿನ ಆಶೀರ್ವಾದದಿಂದ ನಮ್ಮ ಜೀವಿತಗಳು ನಮ್ಮ ಸುತ್ತಲಿರುವ ಜನರಿಗೆ ಯೇಸುವಿನ ಆಶೀರ್ವಾದದ ಒಂದು ಕಾಲುವೆಯಾಗುತ್ತದೆ.
3. ದೇವರು ಅಗತ್ಯತೆಗಳನ್ನು ಪೂರೈಸುವವನು. ಆ ಸಮಯದಲ್ಲಿ ಜನರ ಅಗತ್ಯತೆಯು ಆಹಾರವಾಗಿತ್ತು. ದೇವರು ಕ್ರಿಸ್ತ ಯೇಸುವಿನಲ್ಲಿ ಅವರ ಅಗತ್ಯತೆಗಳನ್ನು ನೋಡಿ ಸಮೃದ್ಧವಾಗಿ ಅವರಿಗೆ ಆಹಾರವನ್ನು ಒದಗಿಸುತ್ತಾನೆ. ಸುವಾರ್ತೆಯ ಇನ್ನೊಂದು ಸಂದರ್ಭದಲ್ಲಿ ಸ್ವಸ್ಥತೆಯ ಅಗತ್ಯವಿರುವವರು ಸ್ವಸ್ಥರಾದರು ಮತ್ತು ಕ್ಷಮಾಪಣೆಯ ಅಗತ್ಯವಿರುವವರು ಕ್ಷಮಿಸಲ್ಪಟ್ಟರು. ಯೇಸು ಅವರ ಕೊರತೆಗಳನ್ನು ನೀಗಿಸಿದನು.
4. ಆಶೀರ್ವಾದವು ಹಲವು ರೀತಿಯದಾಗಿರುತ್ತದೆ. ಈ ಒಂದು ಸಂದರ್ಭದಲ್ಲಿ ಹಸಿದ ಜನರಿಗೆ ಭೌತಿಕ ಆಶೀರ್ವಾದದ ಅಗತ್ಯತೆಯಿತ್ತು. ಇಂದು ದೇವಜನರಾದ ನಾವು ಭೌತಿಕ ಆಶೀರ್ವಾದದ ಅಗತ್ಯತೆಯಲ್ಲಿದ್ದೇವೆ. ನಮ್ಮ ಹೊಟ್ಟೆಗೆ ಆಹಾರ ಬೇಕಾಗಿದೆ. ಬಿಸಿಲು ಮತ್ತು ಮಳೆಯಿಂದ ನಮಗೆ ಆಶ್ರಯ ಬೇಕಾಗಿದೆ. ವಿಧ್ಯಾಭ್ಯಾಸ ಮತ್ತು ಕೆಲಸ ಮಾಡಲು ನಮಗೆ ಆರೋಗ್ಯ ಮತ್ತು ಶಕ್ತಿ/ಬಲ ಬೇಕು. ನಮಗೆ ಕುಟುಂಬ ಮತ್ತು ಸ್ನೇಹಿತರ ಒಡನಾಟದ ಅಗತ್ಯತೆಯಿದೆ. ನಮ್ಮ ಜೀವನದ ಈ ಎಲ್ಲಾ ಕ್ಷೇತ್ರಗಳಲ್ಲಿ ದೇವರು ನಮಗೆ ಒದಗಿಸುವವನೆಂಬುದನ್ನು ನಾವೆಂದೂ ಮರೆಯಬಾರದು.
5. ಅಲ್ಲದೆ ದೇವರೆ ನಮಗೆ ಒದಗಿಸಿದ ಆತ್ಮೀಕ ಆಶೀರ್ವಾದಗಳನ್ನು ಸಹ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. "ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯೂ ದೇವರ ಪ್ರೀತಿಯೂ ಪವಿತ್ರಾತ್ಮನ ಅನ್ಯೋನ್ಯತೆಯೂ ನಿಮ್ಮೆಲ್ಲರ ಸಂಗಡವಿರಲಿ" (2 ಕೊರಿಂಥ. 13:14). "ತಂದೆಯಾದ ದೇವರಿಂದಲೂ ಆ ತಂದೆಯ ಮಗನಾದ ಯೇಸು ಕ್ರಿಸ್ತನಿಂದಲೂ ಕೃಪೆಯೂ ಕರುಣೆಯೂ ಶಾಂತಿಯೂ ಸತ್ಯಪೂರ್ವಕವಾಗಿಯೂ ಪ್ರೀತಿಪೂರ್ವಕವಾಗಿಯೂ ನಿಮ್ಮೊಂದಿಗಿರುವವು" (2 ಯೋಹಾನ 3).


*ನಿಮ್ಮೊಳಗೇ ಈ ಪ್ರಶ್ನೆಗಳನ್ನು ಉತ್ತರಿಸಿಕೊಳ್ಳಿರಿ*

1. ಈ ಕ್ಷಣಕ್ಕಾಗಿನ ಅತೀ ತುರ್ತಾಗಿರುವ ಅಗತ್ಯತೆಯೇನು? ದೇವರ ಭೌತಿಕ ಒದಗಿಸುವಿಕೆಯ ಅಗತ್ಯದಲ್ಲಿರುವಿರಾ? ಅಥವಾ ಹೆಚ್ಚಾಗಿ ಯೇಸು ಕ್ರಿಸ್ತನ ಮೂಲಕ ದೇವರ ಕೃಪೆಯ ಅಗತ್ಯ ನಿಮಗಿದೆಯಾ?
2. ನಿಮ್ಮ ದೈನಂದಿನ ಅಗತ್ಯತೆಗಳಿಗಾಗಿ ದೇವರನ್ನು ನಂಬುವಿರಾ? ನೀವು ಶ್ರಮಪಟ್ಟು ದುಡಿದು ನಿಮಗಾಗಿ ಮತ್ತು ನಿಮ್ಮ ಕುಟುಂಬದ ಪೂರೈಕೆಗಾಗಿ ನಿಮ್ಮ ಅತ್ಯುತ್ತಮವಾದ ಪ್ರಯತ್ನವನ್ನು ಮಾಡಬೇಕೆಂದು ದೇವರು ಬಯಸುತ್ತಾನೆ. ಅಲ್ಲದೆ ಆತನು ನಿಮ್ಮ ದೈನಂದಿನ ಅಗತ್ಯತೆಗಳಿಗಾಗಿ ಆತನನ್ನು ಇನ್ನೂ ಹೆಚ್ಚಾಗಿ ನಂಬಬೇಕೆಂದು ಬಯಸುತ್ತಾನೆ. ನೀವು ಆತನನ್ನು ಒಬ್ಬ ಒದಗಿಸುವವನೆಂಬುದಾಗಿ ನಂಬಬೇಕೆಂದು ಆತನು ಆಶಿಸುತ್ತಾನೆ.
3. ನೀವು ಇತರರಿಗೆ ಆಶೀರ್ವಾದವಾಗಿರುವಿರಾ? ನೀವು ಕುಟುಂಬಕ್ಕೆ, ಸ್ನೇಹಿತರಿಗೆ, ನೆರೆಯವರಿಗೆ ಮತ್ತು ಸಾಮಾನ್ಯ ಜನರಿಗೆ ಒಂದು ಆಶೀರ್ವಾದವಾಗಿರಬೇಕೆಂದು ದೇವರು ಬಯಸುತ್ತಾನೆ. ಇತರರ ಅಗತ್ಯತೆಗಳನ್ನು ಪೂರೈಸುವುದಕ್ಕಾಗಿ ನಿಮ್ಮನ್ನು ಉಪಯೋಗಿಸಬೇಕೆಂದು ದೇವರು ಆಶಿಸುತ್ತಾನೆ. ನಿಮ್ಮ ಸುತ್ತಲಿನವರನ್ನು ಆಶೀರ್ವದಿಸುವುದಕ್ಕಾಗಿ ನಿಮ್ಮನ್ನು ದೇವರು ಉಪಯೋಗಿಸುವಂತೆ ನೀವು ಅನುಮತಿಸುವಿರಾ?

***ಪ್ರಾರ್ಥಿಸಿ***

ಕೆಲಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ಈ ಪಾಠದಲ್ಲಿ ಉದ್ಭವಿಸಿದ ವಿಷಯ/ಸಮಸ್ಯೆಗಳ ಮೇಲೆ ನಿಮ್ಮ ಪ್ರಾರ್ಥನೆಗೆ ಒತ್ತುಕೊಡಿರಿ. ಏನೇ ಕಳಕಳಿಯಿದ್ದರೂ ಪ್ರಾರ್ಥನೆಯಲ್ಲಿ ದೇವರ ಮುಂದಿಡಿರಿ.

**ಅವರು ಯೇಸುವನ್ನು ನೋಡಿ ...**



***ಈ ಚಿತ್ರವನ್ನು ಅಭ್ಯಾಸಿಸಿರಿ.***

1. ಈ ಚಿತ್ರವನ್ನು ವಿವರಿಸಿರಿ.
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ.
3. ಹೇಗೆ ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತಾ ಕಥೆಗಳಿಗೆ ಸಂಬಂಧಿಸಲ್ಪಡಬಹುದೆಂಬುದನ್ನು ವಿವರಿಸಿರಿ.

***ಈ ವಾಕ್ಯಭಾಗಗಳನ್ನು ಓದಿರಿ***

*"ಹೊತ್ತು ಮುಳುಗಿದ ಮೇಲೆ ದೋಣಿಯು ಸಮುದ್ರದ ನಡುವೆ ಇತ್ತು; ಯೇಸು ಒಬ್ಬನೇ ದಡದಲ್ಲಿದ್ದನು. ಎದರು ಗಾಳಿ ಬೀಸುತ್ತಿದ್ದರಿಂದ ಶಿಷ್ಯರು ಹುಟ್ಟು ಹಾಕಿ ಹಾಕಿ ಒದ್ದಾಡುವುದನ್ನು ಆತನು ಕಂಡು ಹೆಚ್ಚು ಕಡಿಮೆ ರಾತ್ರಿಯ ನಾಲ್ಕನೆಯ ಜಾವದಲ್ಲಿ ಸಮುದ್ರದ ಮೇಲೆ ನಡೆದು ಅವರ ಕಡೆಗೆ ಬಂದು ಅವರನ್ನು ದಾಟಿ ಮುಂದಕ್ಕೆ ಹೋಗಬೇಕೆಂದಿದ್ದನು" (ಮಾರ್ಕ 6:47-48).*

*ಸಂಜೆಯಾದಾಗ ಆತನ ಶಿಷ್ಯರು ಸಮುದ್ರಕ್ಕೆ ಇಳಿದು ದೋಣಿಯನ್ನು ಹತ್ತಿ ಸಮುದ್ರ ಮಾರ್ಗವಾಗಿ ಕಪೆರ್ನೌಮಿನ ಕಡೆಗೆ ಹೊರಟರು. ಆಗಲೇ ಕತ್ತಲಾಗಿತ್ತು ಮತ್ತು ಯೇಸು ಅವರ ಬಳಿಗೆ ಇನ್ನೂ ಬಂದಿರಲಿಲ್ಲ. ಇದಲ್ಲದೆ ಬಿರುಗಾಳಿ ಬೀಸುವುದರಿಂದ ಸಮುದ್ರವು ಅಲ್ಲಕಲ್ಲೋಲವಾಗಿತ್ತು. ಹೀಗಿರಲಾಗಿ ಅವರು ಹುಟ್ಟುಹಾಕುತ್ತಾ ಹೆಚ್ಚು ಕಡಿಮೆ ಒಂದು ಹರದಾರಿ ದೂರ ಹೋದ ಬಳಿಕ ಯೇಸು ಸಮುದ್ರದ ಮೇಲೆ ನಡೆಯುತ್ತಾ ದೋಣಿಯ ಸಮೀಪಕ್ಕೆ ಬರುವುದನ್ನು ನೋಡಿ ಅಂಜಿದರು. ಆದರೆ ಆತನು – "ಅಂಜಬೇಡಿರಿ, ನಾನು" ಅಂದನು. ಆಗ ಆತನನ್ನು ದೋಣಿಯೊಳಗೆ ಕರಕೊಳ್ಳುವುದಕ್ಕೆ ಮನಸ್ಸಾಗಿದ್ದರು; ಮತ್ತು ಆ ಕ್ಷಣವೇ ಆ ದೋಣಿಯು ಅವರು ಹೋಗಬೇಕೆಂದಿದ್ದ ಭೂಮಿಗೆ ಮುಟ್ಟಿತು (ಯೋಹಾನ 6:16-21).*

*ಭಯದಿಂದ ಕೂಗಿದರು, ಕೂಡಲೇ ಯೇಸು ಮಾತಾಡಿ ಅವರಿಗೆ – "ಧೈರ್ಯವಾಗಿರಿ, ನಾನು, ಅಂಜಬೇಡಿರಿ" ಎಂದು ಹೇಳಿದನು. ಆಗ ದೋಣಿಯಲ್ಲಿದ್ದವರು "ನಿಜವಾಗಿ ನೀನು ದೇವಕುಮಾರನು" ಎಂದು ಹೇಳಿ ಆತನಿಗೆ ನಮಸ್ಕರಿಸಿದರು.*

***ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ***

1. ಯೇಸುವಿನ ಸುಮಾರು ನಾಲ್ಕು ಮಂದಿ ಶಿಷ್ಯರುಗಳು ಅನುಭವಿ ನಾವಿಕರು ಮತ್ತು ಬೆಸ್ತರಾಗಿದ್ದರು. ಆದರೂ ರಾತ್ರಿಯ ಜಾವಗಳಲ್ಲಿ ಗಲಿಲಾಯ ಸಮುದ್ರದ ಮೇಲಿನ ಬಲವಾದ ಬಿರುಗಾಳಿಯ ನಿಮಿತ್ತ ಅವರು ಚಡಪಡಿಸಿದರು. ಪರಿಸ್ಥಿತಿಯು ಅವರ ನಿಯಂತ್ರಣದಲ್ಲಿರಲಿಲ್ಲ. ನಾವು ನಮ್ಮ ಜೀವನದ ನಿಯಂತ್ರಣದಲ್ಲಿದ್ದೇವೆಂದು ನಾವೆಣಿಸುತ್ತೇವೆ. ನಮಗೆ ನಮ್ಮದೇ ಆದ ಉದ್ಯೋಗವಿದೆ ಮತ್ತು ನಮ್ಮ ನಮ್ಮ ಕುಟುಂಬಗಳನ್ನು ಪೋಷಿಸುವುದಕ್ಕೆ ಸಾಕಷ್ಟು ಹಣವನ್ನು ಗಳಿಸುತ್ತೇವೆ. ನಮ್ಮ ಮಕ್ಕಳು ಆರೋಗ್ಯವಂತರಾಗಿದ್ದು, ಉತ್ತಮವಾಗಿ ವಿಧ್ಯಾಭ್ಯಾಸ ಮಾಡುತ್ತಿದ್ದಾರೆ. ನಮಗೆ ಬೇಕಾದ ಆಹಾರ, ಮನೆ, ಕುಟುಂಬ ಮತ್ತು ಸ್ನೇಹಿತರೆಲ್ಲಾ ನಮಗಿವೆ. ಆದರೆ ಫಕ್ಕನೆ ಏನೋ ಆಗಿಬಿಡುತ್ತದೆ, ಎಲ್ಲಾ ನಮ್ಮ ನಿಯಂತ್ರಣ ತಪ್ಪಿಹೋಗುತ್ತದೆ. ಆಗ ನಾವು ಗಾಬರಿಗೊಳ್ಳುತ್ತೇವೆ. ಆದರೆ ನಮ್ಮ ಜೀವನದ ಅಂತಹ ಕರಾಳ ರಾತ್ರಿಗಳಲ್ಲಿ ಮತ್ತು ನಮ್ಮ ಪರಿಸ್ಥಿತಿಗಳ ಭಯಾನಕವಾದ ಬಿರುಗಾಳಿಗಳ ನಡುವೆ ಯೇಸು ನಮ್ಮೆಡೆಗೆ ನಡೆದುಕೊಂಡು ಬರುತ್ತಾನೆ. ಆತನು ನಮ್ಮ ದೋಣಿಯನ್ನು ಹತ್ತುವಾಗ ಬಿರುಗಾಳಿಯು ಮರೆಯಾಗಿ ಹೊಸ ದಿನವೊಂದರ ಉಗಮ ಪ್ರಾರಂಭವಾಗುತ್ತದೆ. ಎಲ್ಲವೂ ಯೇಸುವಿನ ನಿಯಂತ್ರಣದಲ್ಲಿರುತ್ತದೆ.
2. ಶಿಷ್ಯರು ಕಷ್ಟಪಡುತ್ತಿರುವಾಗ ಯೇಸು ಹಾದು ಹೋಗುವುದಕ್ಕಿದ್ದನು. ಅವರಿಗೆ ಆತನನ್ನು ಗುರುತಿಸಲು ಕಷ್ಟವಾಯಿತು. ಕೆಲವೊಮ್ಮೆ ನಮ್ಮ ಜೀವಿತದಲ್ಲಿ ನಮ್ಮ ಪರಿಸ್ಥಿತಿಗಳನ್ನು ನಿಲ್ಲಿಸದೆ ಯೇಸು ನಮ್ಮಿಂದ ದೂರ ಹೋಗುತ್ತಿದ್ದಾನೆಂಬುದಾಗಿ ನಾವು ಭಾವಿಸುತ್ತೇವೆ. ಇನ್ನು ಕೆಲಸಮಯ ಆತನು ನಮ್ಮ ಸಮೀಪವಿರುವಾಗ ನಾವಾತನ ಪ್ರಸನ್ನತೆಯನ್ನು ಗುರುತಿಸಲು ವಿಫಲರಾಗುತ್ತೇವೆ. ಆದರೆ ಅಂತಹ ಕರಾಳ ಜಾವಗಳಲ್ಲಿ ಸಹ ಯೇಸುವು ತನ್ನನ್ನು ನಮಗೆ ತಿಳಿಯ ಮಾಡಿ "ಧೈರ್ಯವಾಗಿರಿ; ನಾನು, ಅಂಜಬೇಡಿರಿ!" ಎಂದು ಹೇಳುವನು.
3. ಯೇಸು ಬೋಟಿನೊಳಗೆ ಬಂದಾಗ, ಎಲ್ಲವೂ ಶಾಂತವಾಗಿ ಬಿರುಗಾಳಿಯೆಲ್ಲಾ ನಿಂತಾಗ ಶಿಷ್ಯರು ಒಂದು ಹೊಸ ರೀತಿಯಲ್ಲಿ ಯೇಸುವು ದೇವಕುಮಾರನೆಂಬುದಾಗಿ ಆತನ ನಿಜವಾದ ಗುರುತನ್ನು ತಿಳಿದರು.


***ನಿಮ್ಮೊಳಗೇ ಈ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳಿರಿ.***

1. ನಿಮ್ಮ ಜೀವನವು ಯೇಸುವಿನ ನಿಯಂತ್ರಣದಲ್ಲಿದೆಯಾ? ಒಳ್ಳೆಯ ಮತ್ತು ಕೆಟ್ಟ ಸಮಯಗಳಲ್ಲಿ ಸಹ ನಿಮ್ಮೆಲ್ಲ ಪರಿಸ್ಥಿತಿಗಳನ್ನು ಯೇಸುವಿನ ನಿಯಂತ್ರಣಕ್ಕೆ ಕೊಡುವಿರಾ?
2. ನಿಮ್ಮ ಜೀವನದಲ್ಲಿ ಯೇಸುವಿನ ಪ್ರಸನ್ನತೆ(ಇರುವಿಕೆ)ಯನ್ನು ಗಮನಿಸುವಿರಾ? ಅಥವಾ ನಿಮ್ಮ ಸುತ್ತಲಿನ ಕತ್ತಲೆ ಮತ್ತು ನೀವು ಹಾದುಹೋಗುತ್ತಿರುವ ಹೋರಾಟಗಳನ್ನು ಮಾತ್ರ ಕಾಣುವಿರಾ?
3. ನಿಮ್ಮ ಜೀವನದಲ್ಲಿನ ಯೇಸುವಿನ ಪ್ರಸನ್ನತೆಯು ನೀವು ಆತನ ನಿಜವಾದ ಗುರುತನ್ನು ತಿಳಿದುಕೊಳ್ಳುವಂತೆ ಮಾಡಿದೆಯಾ? ಆತನು ನಿಮಗೆ ದೇವಕುಮಾರನಾಗಿದ್ದಾನಾ? ಆತನು ನಿಮ್ಮ ರಕ್ಷಕನಾ?

***ಪ್ರಾರ್ಥಿಸಿ***

ಕೆಲಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ಈ ಪಾಠದಲ್ಲಿ ಉದ್ಭವಿಸಿದ ವಿಷಯ/ಸಮಸ್ಯೆಗಳ ಮೇಲೆ ನಿಮ್ಮ ಪ್ರಾರ್ಥನೆಯ ಗಮನವಿರಲಿ. ಏನೇ ಕಳಕಳಿಯಿದ್ದರೂ ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿರಿ.

**"ನನ್ನ ಆಲಯವನ್ನು ನೀವು ಕಳ್ಳರ ಗವಿ ಮಾಡುತ್ತೀರಿ"**



***ಈ ಚಿತ್ರವನ್ನು ಅಭ್ಯಾಸಿಸಿರಿ.***

1. ಈ ಚಿತ್ರವನ್ನು ವಿವರಿಸಿರಿ
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ.
3. ಹೇಗೆ ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತಾ ಕಥೆಗಳಿಗೆ ಸಂಬಂಧಿಸಬಲ್ಲದೆಂದು ವಿವರಿಸಿರಿ.

***ಈ ವಾಕ್ಯಭಾಗಗಳನ್ನು ಓದಿರಿ***

*ಬಳಿಕ ಯೇಸು ದೇವಾಲಯಕ್ಕೆ ಹೋಗಿ ಅದರಲ್ಲಿ ಮಾರುವ ಕೊಳ್ಳುವ ಎಲ್ಲರನ್ನೂ ಹೊರಡಿಸಿಬಿಟ್ಟು ಚಿನಿವಾರರ ಮೇಜುಗಳನ್ನೂ ಪಾರಿವಾಳಮಾರುವವರ ಕಾಲ್ಮಣೆಗಳನ್ನೂ ಕೆಡವಿ ಅವರಿಗೆ – "ನನ್ನ ಆಲಯವು ಪ್ರಾರ್ಥನಾಲಯವೆನಿಸಿಕೊಳ್ಳುವುದು" ಎಂದು ಬರೆದದೆ; ಆದರೆ "ನೀವು ಅದನ್ನು ಕಳ್ಳರಗವಿ ಮಾಡುತ್ತೀರಿ" ಎಂದು ಹೇಳಿದನು (ಮತ್ತಾ. 21:12-13).*

*ಹೀಗಿರಲಾಗಿ ನೀವು ಇನ್ನು ಮೇಲೆ ಪರದೇಶದವರೂ ಅನ್ಯರೂ ಆಗಿರದೆ ದೇವಜನರೊಂದಿಗೆ ಒಂದೇ ಸಂಸ್ಥಾನದವರೂ ದೇವರ ಮನೆಯವರೂ ಆಗಿದ್ದೀರಿ. ಅಪೊಸ್ತಲರೂ ಪ್ರವಾದಿಗಳೂ ಎಂಬ ಅಸ್ತಿವಾರದ ಮೇಲೆ ನೀವು ಮಂದಿರದೋಪಾದಿಯಲ್ಲಿ ಕಟ್ಟಲ್ಪಟ್ಟಿದ್ದೀರಿ. ಯೇಸು ಕ್ರಿಸ್ತನೇ ಮುಖ್ಯವಾದ ಮೂಲೆಗಲ್ಲು; ಆತನಲ್ಲಿ ಕಟ್ಟಡದ ಎಲ್ಲಾ ಭಾಗಗಳು ಒಂದಕ್ಕೊಂದು ಹೊಂದಿಕೆಯಾಗಿ ಕಟ್ಟಡವು ವೃದ್ಧಿಯಾಗುತ್ತಾ ಕರ್ತನಲ್ಲಿ ಪರಿಶುದ್ಧ ದೇವಾಲಯವಾಗುತ್ತದೆ (ಎಫೆಸ. 2:19-21).*

*ನೀವು ಜೀವವುಳ್ಳ ಕಲ್ಲಾಗಿರುವ ಆತನನ್ನು ಸೇರಿಕೊಂಡಿದ್ದೀರಿ. ಆ ಕಲ್ಲನ್ನು ಮನುಷ್ಯರು ನಿರಾಕರಿಸಿದರೂ ದೇವರು ಅದನ್ನು ಆಯಲ್ಪಟ್ಟದ್ದೂ ಮಾನ್ಯವಾದದ್ದೂ ಎಂದು ಎಣಿಸಿದನು. ನೀವು ಸಹ ಜೀವವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ, ಮತ್ತು ಯೇಸು ಕ್ರಿಸ್ತನ ಮೂಲಕ ದೇವರಿಗೆ ಸಮರ್ಪಕವಾದ ಆತ್ಮೀಯಯಜ್ಞಗಳನ್ನು ಸಮರ್ಪಿಸುವುದಕ್ಕೆ ಪವಿತ್ರ ಯಾಜಕವರ್ಗದವರಾಗಿದ್ದೀರಿ ( 1 ಪೇತ್ರ. 2:4-5).*

*ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬುದು ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ, ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು, ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ (1 ಕೊರಿಂಥ 6:19-20).*

***ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ***

1. ಯೇಸು ಯೆರೂಸಲೇಮಿನ ದೇವಾಲಯದ ಹೊರಾಂಗಣವನ್ನು ತೆರವುಗೊಳಿಸಿದನು (ಅನ್ಯಜನರ ಅಂಗಳ), ಯಾಕೆಂದರೆ ಇದು ಎಲ್ಲಾ ಜನಾಂಗಗಳಿಗೆ ಪ್ರಾರ್ಥನಾಲಯವಾಗುವುದರ ಬದಲು ಕಳ್ಳರ ಗವಿಯಾಗಿತ್ತು (ಮಾರ್ಕ 11:17). ದೇವಾಲಯದ ಈ ಭಾಗದಲ್ಲಿ ಮಾತ್ರ ದೇವರಿಗೆ ಭಯಪಡುವ ಅನ್ಯಜನರಿಗೆ ಪ್ರವೇಶಿಸಲು ಅನುಮತಿಯಿತ್ತು. ಹೀಗೆ ದೇವರ ಅನ್ಯಮತದ ವಿಶ್ವಾಸಿಯು ದೇವಾಲಯದ ಆರಾಧನೆಯಲ್ಲಿ ಭಾಗಿಯಾಗಲು ದೇವಾಲಯದಲ್ಲಿ ಇನ್ನು ಮುಂದೆ ಹೋಗುವಂತಿರಲಿಲ್ಲ. ಹಣವನ್ನು ಬದಲಾಯಿಸುವುದು ಮತ್ತು ಯಜ್ಞ ಮಾಡಬೇಕಾದ ಪಶುಗಳನ್ನು ಮಾರುವುದು ಅವರಲ್ಲಿ ತಪ್ಪಾಗಿರಲಿಲ್ಲ. ಯಾಕೆಂದರೆ ಅವೆಲ್ಲವೂ ದೇವಾಲಯದ ಚಟುವಟಿಕೆಗಳಿಗಾಗಿ, ಯಜ್ಞಗಳಿಗಾಗಿ, ಮತ್ತು ದೇವಾಲಯದ ವಾರ್ಷಿಕ ತೆರಿಗೆಗಳನ್ನು ಕಟ್ಟುವುದಕ್ಕಾಗಿ ಬೇಕಾಗಿದ್ದವು. ಆದರೆ ದೇವಾಲಯದ ಆಡಳಿತ ವರ್ಗವು ಈ ಚಟುವಟಿಕೆಗಳು ದೇವಾಲಯದ ಎಲ್ಲಾ ಭಾಷಾ ಹಿನ್ನೆಲೆಯ ಜನರಿಂದ ನಡೆಯುವ ದೇವಾರಾಧನೆಯಂತಹ ಚಟುವಟಿಕೆಗಳನ್ನು ಗಲಿಬಿಲಿ ಪಡಿಸಲು ಅನುವುಮಾಡಿಕೊಟ್ಟಿತ್ತು.
2. ಯೆರೂಸಲೇಮಿನ ದೇವಾಲಯವು ಕ್ರಿ.ಶ. 70 ರಲ್ಲಿ ರೋಮನ್ನರಿಂದ ಕೆಡವಲ್ಪಟ್ಟಿತ್ತು. ಆದರೆ ಹೊಸ ಒಡಂಬಡಿಕೆಯಲ್ಲಿ ಇನ್ನೊಂದು "ದೇವಾಲಯ" ಇದೆ ಈ ದೇವಾಲಯವು ಸಭೆಯಾಗಿದ್ದು ಜೀವವುಳ್ಳ ಕಲ್ಲಾದ ವಿಶ್ವಾಸಿಗಳೊಂದಿಗೆ ಯೇಸು ಕ್ರಿಸ್ತನಿಂದ ("ಮುಖ್ಯವಾದ ಮೂಲೆಗಲ್ಲು" ಮತ್ತು "ಜೀವವುಳ್ಳ ಕಲ್ಲು" ಎಂದು ಕರೆಯಲ್ಪಟ್ಟ) ಕಟ್ಟಲ್ಪಟ್ಟಿದೆ. ಪವಿತ್ರಾತ್ಮನು ಈ ಆತ್ಮೀಕವಾದ ದೇವಾಲಯದಲ್ಲಿ ವಾಸಿಸುತ್ತಾನೆ. ಹಾಗಾಗಿ ಇದು ಪರಿಶುದ್ಧವಾದದ್ದಾಗಿದೆ.
3. ಹೊಸ ಒಡಂಬಡಿಕೆಯು ಪ್ರತಿಯೊಬ್ಬ ಕ್ರೈಸ್ತ ವಿಶ್ವಾಸಿಯ ಶಾರೀರಿಕ ದೇಹದ ಬಗ್ಗೆ "ಪವಿತ್ರಾತ್ಮನಿಗೆ ಗರ್ಭಗುಡಿ" ಎಂಬ ಹೇಳಿಕೆಯನ್ನು ಉಪಯೋಗಿಸುತ್ತದೆ. ಈ ಸತ್ಯವು ಪ್ರತಿಯೊಬ್ಬ ಪ್ರಾಮಾಣಿಕ ವಿಶ್ವಾಸಿಗೆ ಸವಾಲಿನಂತಾಗಿದೆ.


***ನಿಮ್ಮೊಳಗೆ ಈ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳಿರಿ***

1. ನಿಮ್ಮ ಸಭೆಯ ಕುರಿತು ಏನಾಗಿದೆ? ಅದು ಪ್ರಾರ್ಥನಾಲಯವೆನಿಸಿಕೊಳ್ಳುವುದರ ಬದಲು ಕಳ್ಳರಗವಿಯಾಗಿದೆಯಾ? ಮತ್ತು ನಿಮ್ಮ ಸಭೆಯ ಚಟುವಟಿಕೆಗಳ ಕುರಿತೇನು? ಅವು ದೇವರಿಗೆ ಮಹಿಮೆಯನ್ನು ತರುತ್ತವಾ? ಅವು ದೇವರ ರಾಜ್ಯದ ವಿಸ್ತರಣೆಯನ್ನು ಪ್ರಚುರಪಡಿಸುತ್ತಿವೆಯಾ? ನೀವು ಸಭೆಯ ಚಟುವಟಿಕೆಗಳಲ್ಲಿ ಸ್ವತಃ ನಿಮ್ಮ ಪಾಲ್ಗೊಳ್ಳುವಿಕೆಯ ಕುರಿತೇನು? ಅದು ದೇವರನ್ನು ಮಹಿಮೆಪಡಿಸಿ ದೇವರ ರಾಜ್ಯದ ವಿಸ್ತರಣೆಯನ್ನು ಪ್ರಚುರಪಡಿಸುತ್ತಿವೆಯಾ?
2. ನಿಮ್ಮ ಸಭಾ ಅನ್ಯೋನ್ಯತೆಯಲ್ಲಿ ದೇವರಾತ್ಮನು ಕಾರ್ಯಮಾಡುತ್ತಿರುವನಾ? ಅಲ್ಲಿ ಜನರು ಯೇಸುವಿನ ಕುರಿತ ಸುವಾರ್ತೆಯನ್ನು ಕೇಳಿ ಅಂಗೀಕರಿಸುತ್ತಿರುವರಾ? ಅಲ್ಲಿನ ವಿಶ್ವಾಸಿಗಳ ಜೀವನವು ಪವಿತ್ರಾತ್ಮನಿಂದ ಪರಿವರ್ತನೆಗೊಂಡು "ಅವರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟಿ" ರುವರಾ? (ಎಫೆಸ 4:13)?
3. ನಿಮ್ಮ ಶಾರೀರಿಕ ದೇಹವು ಪವಿತ್ರಾತ್ಮನಿಗೆ ದೇವಾಲಯವಾಗಿದೆಯೆಂದು ನೀವು ನಿಜವಾಗಿ ಹೇಳಬಲ್ಲಿರಾ? ಯಾಕೆ – ಯಾಕೆ ಇಲ್ಲ?

***ಪ್ರಾರ್ಥಿಸಿ***

ಕೆಲಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ನಿಮ್ಮ ಪ್ರಾರ್ಥನೆಯ ಗಮನವು ಈ ಪಾಠದಲ್ಲಿ ಉದ್ಭವಿಸಿದ ಸಮಸ್ಯೆಗಳ ಮೇಲಿರಲಿ. ಯಾವುದೇ ಮನವಿಗಳಿದ್ದರೆ ಪ್ರಾರ್ಥನೆಯಲ್ಲಿ ದೇವರ ಮುಂದಿಡಿರಿ.

**"ತೀರಿತು"**



***ಈ ಚಿತ್ರವನ್ನು ಅಭ್ಯಾಸಿಸಿರಿ.***

1. ಈ ಚಿತ್ರವನ್ನು ವಿವರಿಸಿರಿ
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ
3. ಈ ಚಿತ್ರವು ಹೇಗೆ ಯೇಸುವಿನ ಕುರಿತಾದ ಸುವಾರ್ತಾ ಕಥೆಗಳಿಗೆ ಸಂಬಂಧಿಸಬಲ್ಲದೆಂಬುದನ್ನು ವಿವರಿಸಿರಿ

***ಈ ವಾಕ್ಯಭಾಗಗಳನ್ನು ಓದಿರಿ***

*ಇದಾದ ಮೇಲೆ ಯೇಸು ಈಗ ಎಲ್ಲಾ ತೀರಿತೆಂದು ತಿಳಿದು ಶಾಸ್ತ್ರದ ಮಾತು ನೆರವೇರುವಂತೆ – "ನನಗೆ ನೀರಡಿಕೆ ಆಗಿದೆ" ಅಂದನು. ಅಲ್ಲಿ ಹುಳಿರಸ ತುಂಬಿದ ಗಡಿಗೆ ಇಟ್ಟಿರಲಾಗಿ ಅವರು ಸ್ಪಂಜನ್ನು ಹುಳಿರಸದಿಂದ ತುಂಬಿಸಿ ಹಿಸ್ಸೋಪ್ ಗಿಡದ ಕೋಲಿಗೆ ಸಿಕ್ಕಿಸಿ ಆತನ ಬಾಯಿಗೆ ಮುಟ್ಟಿಸಿದರು. ಯೇಸು ಆ ಹುಳಿರಸವನ್ನು ತಕ್ಕೊಂಡ ಮೇಲೆ – "ತೀರಿತು" ಎಂದು ಹೇಳಿ ತಲೇ ಬಾಗಿಸಿ ಆತ್ಮವನ್ನು ಒಪ್ಪಿಸಿಕೊಟ್ಟನು (ಯೋಹಾನ 19:28-30).*

*ಪಸ್ಕದ ಯಜ್ಞದ ಕುರಿಯು ಕೊಯಿದದೆ; ಅದಾವದೆಂದರೆ ಕ್ರಿಸ್ತನೇ (1ಕೊರಿಂಥ 5:7).*

*ಕ್ರಿಸ್ತನು ನಿಮ್ಮನ್ನು ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಸುಗಂಧವಾಸನೆಯಾದ ಕಾಣಿಕೆಯಾಗಿಯೂ ಯಜ್ಞವಾಗಿಯೂ ಸಮರ್ಪಿಸಿಕೊಂಡ ಪ್ರಕಾರ (ಎಫೆಸ 5:2).*

*ಆತನು ನಮ್ಮ ಪಾಪಗಳನ್ನು ನಿವಾರಣಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣಮಾಡುತ್ತಾನೆ (1 ಯೋಹಾನ 2:2).*

*ಆದರೆ ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ ಆತನು ಪಾಪನಿವಾರಣೆಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು (ಇಬ್ರಿಯ 9:26).*

*ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ, ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ. ಆತನು ಎಲ್ಲಾ ದೊರೆತನಗಳಿಗೂ ಶಿರಸ್ಸು. ನೀವು ಆತನಲ್ಲಿ ಸುನ್ನತಿಯನ್ನೂ ಹೊಂದಿದಿರಿ. ಈ ಸುನ್ನತಿಯು ಕೈಯಿಂದ ಮಾಡಿದ್ದಲ್ಲ, ಇದು ಪಾಪಾಧೀನಸ್ವಭಾವವನ್ನು ವಿಸರ್ಜಿಸುವದೇ; ಇದೇ ಕ್ರಿಸ್ತೀಯ ಸುನ್ನತಿ; ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ. ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮಾರ್ಥ್ಯದಲ್ಲಿ ನಂಬಿಕೆಯಿಡುವುದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ. ಅಪರಾಧಗಳನ್ನು ಮಾಡುವವರಿಂದಲೂ ಸುನ್ನತಿಯಿಲ್ಲದ ಶರೀರ ಭಾವದಿಂದಲೂ ಸತ್ತವರಾಗಿದ್ದ ನಿಮ್ಮನ್ನು ಸಹ ದೇವರು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ. ಆತನು ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿ ನಮ್ಮ ಮೇಲೆ ದೋಷಾರೋಪಣೆ ಮಾಡಿದಂಥ ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗಮಾಡಿದನು. ಆತನು ದೊರೆತನಗಳನ್ನೂ ಅಧಿಕಾರಗಳನ್ನೂ ನಿರಾಯುಧರನ್ನಾಗಿ ಮಾಡಿ ಜಯೋತ್ಸವ ಮಾಡುತ್ತಾನೋ ಎಂಬಂತೆ ಶಿಲುಬೆಯ ಮೇಲೆ ಅವುಗಳನ್ನು ಜಯಿಸಲ್ಪಟ್ಟವುಗಳನ್ನಾಗಿ ಮೆರೆಸುತ್ತಾ ತೋರಿಸಿದನು (ಕೊಲೊಸ್ಸೆ 2:9-15).*

*ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು (1 ತಿಮೊ. 2:16).*

***ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ***

ಯೇಸು ತನ್ನ ಆತ್ಮವನ್ನು ಒಪ್ಪಿಸಿಕೊಟ್ಟು ಶಿಲುಬೆಯಲ್ಲಿ ಮರಣ ಹೊಂದಿದಾಗ ಆತನ ವಿಮೋಚನಾಕಾರ್ಯವು ತೀರಿತು:

- ಆತನು ನಮ್ಮ ಪಸ್ಕದ ಕುರಿಯಾಗಿದ್ದಾನೆ (1 ಕೊರಿಂಥ 5:7). ಆತನಲ್ಲಿ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ (ಕೊಲೊಸ್ಸೆ 2:13).
- ಆತನು ಇಡೀ ಲೋಕದ ಪಾಪವನ್ನು ನಿವಾರಣ ಮಾಡುವ ಯಜ್ಞವಾಗಿದ್ದಾನೆ (1 ಯೋಹಾನ 2:2).
- ತನ್ನ ಸಾವಿನ ಮೂಲಕ ಆತನು ಪಾಪನಿವಾರಣ ಯಜ್ಞ ಮಾಡಿದ್ದಾನೆ (ಇಬ್ರಿಯ 9:26).
- ಅಪರಾಧಗಳಲ್ಲಿ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದ್ದಾನೆ (ಕೊಲೊಸ್ಸೆ 2:13).
- ಆಜ್ಞಾರೂಪವಾಗಿದ್ದಂತ ಪತ್ರವನ್ನು ಶಿಲುಬೆಗೆ ಜಡಿದಿದ್ದಾನೆ (ಕೊಲೊಸ್ಸೆ 2:14).
- ಧರ್ಮಶಾಸ್ತ್ರದ ಪ್ರಕಾರ ಮಾಡಬೇಕಾದುದ್ದನ್ನು ನಮಗಾಗಿ ತೀರಿಸಿದನು.
- ಆತನು ನಮಗಾಗಿ ಈಡುಕೊಟ್ಟನು (1 ತಿಮೊಥಿ 2:6) ಮತ್ತು ನಮ್ಮನ್ನು ಪಾಪ ಮತ್ತು ಮರಣದಿಂದ ಬಿಡಿಸಿದನು.


***ನಿಮ್ಮೊಳಗೇ ಈ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳಿರಿ***

1. ಯೇಸು ನಿಜವಾಗಲೂ ಪಸ್ಕದ ಕುರಿಯಾಗಿರುವನಾ? ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂಬ ತಿಳುವಳಿಕೆ ಮತ್ತು ಭಾವನೆಯಲ್ಲಿ ನೀವು ನಿಮ್ಮ ದೈನಂದಿನ ಜೀವನವನ್ನು ಜೀವಿಸುತ್ತಿರುವಿರಾ?
2. ಶಿಲುಬೆ ಮೇಲೆ ತನ್ನ ಮರಣದ ಮೂಲಕ ಯೇಸು ಪಾಪದ ಸಮಸ್ಯೆಯನ್ನು ತೆಗೆದುಹಾಕಿದನೆಂಬುದರ ಅರ್ಥವೇನು? ನಿಮ್ಮ ಜೀವನದಲ್ಲಿ ಇನ್ನೂ ಸಹ ನೀವು ಪಾಪದೊಂದಿಗೆ ಹೋರಾಡುತ್ತಿರುವಿರಾ?
3. ಶಿಲುಬೆ ಮೇಲಿನ ತನ್ನ ಮರಣದ ಮೂಲಕ ಯೇಸು ನಮ್ಮೆಲ್ಲರಿಗಾಗಿ ಶಾಸ್ತ್ರದ ಬೇಡಿಕೆಗಳನ್ನೆಲ್ಲ ಈಡೇರಿಸಿದನೆಂಬುದರ ಅರ್ಥವೇನು?
4. ನೀವು ಅನುಭವಿಸಿದ್ದರೂ ಬೇರೆಯವರೊಂದಿಗೆ ಹಂಚಿಕೊಳ್ಳುತ್ತಿರುವಿರಾ ಹೇಗೆ ನೀವು ಪಾಪ ಮತ್ತು ಮರಣದಿಂದ ಬಿಡುಗಡೆಯಾದಿರಿ, ಈಗ ಹೇಗೆ ನೀವು ದೇವರಲ್ಲಿನ ಒಂದು ಕ್ಷಮಾಪಣೆಯ ಜೀವಿತವನ್ನು ಜೀವಿಸುತ್ತಿರುವಿರಿ?

***ಪ್ರಾರ್ಥಸಿ***

ಸ್ವಲ್ಪ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ಈ ಪಾಠದಲ್ಲಿ ಉದ್ಭವಿಸಿದ ಸಮಸ್ಯೆಗಳ ಮೇಲೆ ಪ್ರಾರ್ಥನೆಯ ಗಮನವಿರಲಿ. ಏನೇ ಕಳಕಳಿಯಿದ್ದರೆ ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿರಿ.

## “ಆತನು ಇಲ್ಲಿ ಇಲ್ಲ; ಎದ್ದಿದ್ದಾನೆ!”



***ಈ ಚಿತ್ರವನ್ನು ಅಭ್ಯಾಸಿಸಿರಿ***

1. ಈ ಚಿತ್ರವನ್ನು ವಿವರಿಸಿರಿ
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಯನ್ನು ವಿವರಿಸಿರಿ
3. ಹೇಗೆ ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತೆ ಕಥೆಗಳಿಗೆ ಸಂಬಂಧಿಸಬಲ್ಲದೆಂಬುದನ್ನು ವಿವರಿಸಿರಿ

***ಈ ವಾಕ್ಯಭಾಗಗಳನ್ನು ಓದಿರಿ***

*ಆ ಸ್ತ್ರೀಯರು…ವಾರದ ಮೊದಲನೆಯ ದಿವಸದಲ್ಲಿ ಇನ್ನೂ ಮೊಬ್ಬಿರುವಾಗ ತಾವು ಸಿದ್ಧಮಾಡಿದ್ದ ಸುಗಂಧದ್ರವ್ಯಗಳನ್ನು ತೆಗೆದುಕೊಂಡು ಸಮಾಧಿಗೆ ಬಂದರು. ಸಮಾಧಿಗೆ ಮುಚ್ಚಿದ್ದ ಕಲ್ಲು ಅಲ್ಲಿಂದ ಉರುಳಿಸಲ್ಪಟ್ಟಿರುವುದನ್ನು ಕಂಡು ಒಳಕ್ಕೆ ಹೋಗಿ ನೋಡುವಲ್ಲಿ ಯೇಸು ಸ್ವಾಮಿಯ ದೇಹವು ಕಾಣಲಿಲ್ಲ. ಈ ವಿಷಯದಲ್ಲಿ ಅವರಿಗೆ ಗಲಿಬಿಲಿ ಉಂಟಾದಾಗ ಹೊಳೆಯುವ ಉಡುಪನ್ನು ಧರಿಸಿದ್ದ ಇಬ್ಬರು ಪುರುಷರು ಅಕಸ್ಮಾತ್ತಾಗಿ ಅವರ ಬಳಿಯಲ್ಲಿ ನಿಂತುಕೊಂಡರು. ಆ ಸ್ತ್ರೀಯರು ಭಯಹಿಡಿದವರಾಗಿ ತಮ್ಮ ಮುಖಗಳನ್ನು ನೆಲದ ಕಡೆಗೆ ಬೊಗ್ಗಿಸಿಕೊಂಡಿರುವಾಗ ಆ ಪುರುಷರು ಅವರಿಗೆ - ಸತ್ತವರೊಳಗೆ ಬದುಕಿರುವವನನ್ನು ಹುಡುಕುವದೇನು? “ಆತನು ಇಲ್ಲಿ ಇಲ್ಲ, ಎದ್ದಿದ್ದಾನೆ” (ಲೂಕ 24:1-6).*

*ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು (ರೋಮಾ. 4:25).*

*ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯೂ ದೇವರೂ ಆಗಿರುವಾತನಿಗೆ ಸ್ತೋತ್ರವಾಗಲಿ. ಆತನು ಯೇಸು ಕ್ರಿಸ್ತನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ತನ್ನ ಮಹಾ ಕರುಣಾನುಸಾರವಾಗಿ ನಮ್ಮನ್ನು ತಿರುಗಿ ಜೀವಿಸುವಂತೆ ಮಾಡಿ ಜೀವಕರವಾದ ನಿರೀಕ್ಷೆಯನ್ನು ನಮ್ಮಲ್ಲಿ ಹುಟ್ಟಿಸಿ… (1 ಪೇತ್ರ 1:3).*

*ದೇವರು ಕರ್ತನನ್ನು ಎಬ್ಬಿಸಿದ್ದಲ್ಲದೆ, ನಮ್ಮನ್ನು ತನ್ನ ಪರಾಕ್ರಮದಿಂದ ಎಬ್ಬಿಸುವನು (1 ಕೊರಿಂಥ 6:14).*

***ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ***

1. ಭಾನುವಾರ ಮುಂಜಾನೆ ಸ್ತ್ರೀಯರು ಆತನ ದೇಹಕ್ಕೆ ಗೌರವ ಸೂಚಿಸುವುದಕ್ಕಾಗಿ ಹೋದಾಗ ಅವರು ಹಿಂದೆಂದೂ ಕಾಣದಂತ ಮೂರು ರೀತಿಯ ಅನುಭವ ಅವರಿಗಾಯಿತು. ಮೊದಲನೆಯದಾಗಿ – ಸಮಾಧಿಯ ಬಾಗಿಲಿಗೆ ಮುಚ್ಚಿದ್ದ ದೊಡ್ಡ ಕಲ್ಲು ಉರುಳಿಸಲ್ಪಟ್ಟಿರುವುದನ್ನು ಕಂಡು ಅವರು ಆಶ್ಚರ್ಯಪಟ್ಟರು. ಹಾಗೆಯೇ, ಇಬ್ಬರು ದೇವದೂತರು ಕಾಣಿಸಿಕೊಂಡದ್ದನ್ನು ಕಂಡು ಅವರು ಗಲಿಬಿಲಿಗೊಂಡರು. ಕೊನೆಯದಾಗಿ, ಮಾನವನ ಇತಿಹಾಸದಲ್ಲೇ ಎಲ್ಲವನ್ನು ಬದಲಿಸಿದ ಒಂದು ಸಂದೇಶವನ್ನು ಕೇಳಿಸಿಕೊಂಡರು. ಯೇಸುವು ಸತ್ತವರೊಳಗಿಂದ ಎಬ್ಬಿಸಲ್ಪಟ್ಟಿದ್ದಾನೆಂದು ಅವರಿಗೆ ಹೇಳಲಾಯಿತು. ಯೇಸುವಿನ ಮರಣ ಮತ್ತು ಪುನರುತ್ಥಾನದ ಕುರಿತ ಸುವಾರ್ತಾ ವಿವರದ ಸುತ್ತಣ ಸನ್ನಿವೇಶಗಳು ಮತ್ತು ಆದಿಸಭೆಯ ಸಾಕ್ಷಿಯು ಯೇಸುವಿನ ಪುನರುತ್ಥಾನವು ಐತಿಹಾಸಿಕವಾಗಿ ನಡೆದದ್ದು ಎಂಬುದನ್ನು ಸಾಭೀತುಪಡಿಸುತ್ತವೆ.
2. ಯೇಸುವಿನ ಪುನರುತ್ಥಾನವು ಶಿಲುಬೆಯ ಮೇಲಣ ಆತನ ವಿಮೋಚನಾಕಾರ್ಯವನ್ನು ಪೂರ್ತಿಗೊಳಿಸಿತು. ಆತನು ಮರಣವನ್ನು ಹೊಂದಿದ್ದಲ್ಲದೆ, ಮರಣದಿಂದ ಎದ್ದು ಬಂದನು. ನಮ್ಮ ಪಾಪಗಳಿಗಾಗಿ ಆತನು ತನ್ನ ಮರಣದ ಮೂಲಕ ಪ್ರಾಯಶ್ಚಿತ ಬಲಿಯಾದನು ಮತ್ತು ತನ್ನ ಮರಣದ ಮೂಲಕ ನಮ್ಮನ್ನು ನೀತಿವಂತರನ್ನಾಗಿಸಿದನು. ಆತನ ಪುನರುತ್ಥಾನವು ಆತನ ರಕ್ಷಣಾಕಾರ್ಯಕ್ಕೆ ಮುದ್ರೆಯೊತ್ತಿತು.
3. ಆತನ ಪುನರುತ್ಥಾನವು ನಮ್ಮ ನಿತ್ಯಜೀವಕ್ಕೆ ಸಂಚಕಾರವಾಗಿದೆ. ಯೇಸು ಮರಣದಿಂದ ಎದ್ದದ್ದರಿಂದ ನಮ್ಮ ಶಾರೀರಿಕ (ಭೌತಿಕ) ದೇಹವು ಸತ್ತರೂ ನಾವು ನಿತ್ಯನಿತ್ಯವೂ ಜೀವಿಸುವವರಾಗಿದ್ದೇವೆ. ಯೇಸುವನ್ನು ಮರಣದಿಂದ ಎಬ್ಬಿಸಿದ ಅದೇ ದೈವಿಕ ಶಕ್ತಿಯು ಆತನ ಎರಡನೇ ಬರೋಣದ ಮಹಿಮೆಯ ದಿನದಲ್ಲಿ ನಮ್ಮ ದೇಹಗಳನ್ನೂ ಸಹ ಎಬ್ಬಿಸುತ್ತದೆ. ಆಗ ನಾವು ಸದಾಕಾಲವೂ ನಮ್ಮ ಕರ್ತನೊಂದಿಗಿರುವೆವು.


***ನಿಮ್ಮೊಳಗೇ ಈ ಪ್ರಶ್ನೆಗಳನ್ನು ಉತ್ತರಿಸಿಕೊಳ್ಳಿರಿ***

1. ಯೇಸುವಿನ ಪುನರುತ್ಥಾನವು ಐತಿಹಾಸಿಕವಾಗಿ ನಡೆದದ್ದು, ನಿಜವಾಗಲೂ ಈ ಭೌತಿಕ ಜಗತ್ತಿನಲ್ಲಿ ನಡೆದದ್ದು ಎಂಬುದನ್ನು ನೀವು ನಂಬುತ್ತೀರಾ? ಅಥವಾ ಈ ಮೂಲಭೂತ ಕ್ರೈಸ್ತೀಯ ಸಿದ್ಧಾಂತವನ್ನು ಒಪ್ಪಲು ಚಡಪಡಿಸುತ್ತಿರುವಿರಾ?
2. ಯೇಸು ಶಿಲುಬೆ ಮೇಲೆ ಮರಣಹೊಂದಿದ್ದಲ್ಲದೆ, ಮರಣದಿಂದ ಸಹ ಎಬ್ಬಿಸಲ್ಪಟ್ಟನು ಎಂಬುದು ನಿಮಗೆ ಮತ್ತು ಎಲ್ಲಾ ಕ್ರೈಸ್ತೀಯ ವಿಶ್ವಾಸಿಗಳಿಗೆ ಯಾಕೆ ಅಷ್ಟೊಂದು ಪ್ರಾಮುಖ್ಯವಾದುದ್ದಾಗಿದೆ?
3. ಎಲ್ಲಾ ಸತ್ಯವಾದ ವಿಶ್ವಾಸಿಗಳು ಮರಣದಿಂದ ಎಬ್ಬಿಸಲ್ಪಟ್ಟು ಕ್ರಿಸ್ತನೊಂದಿಗೆ ಸದಾಕಾಲವೂ ಇರುವಂತಹ ಆ ದಿನವನ್ನು ನೀವು ಸಂತೋಷದಿಂದ ನಿರೀಕ್ಷಿಸುತ್ತಿರುವಿರಾ? ಯಾಕೆ? ಯಾಕಿಲ್ಲ?
4. ಭಾರತೀಯ ಸಂಸ್ಕೃತಿಕ ಹಿನ್ನಲೆಯಲ್ಲಿ ಯೇಸುವಿನ ಮತ್ತು ನಮ್ಮ ಶಾರೀರಿಕ ಪುನರುತ್ಥಾನದ ಸಿದ್ಧಾಂತವನ್ನು ಸಾರುವುದು ಕಷ್ಟಕರವೆನಿಸುತ್ತಿದೆಯಾ? ಈ ಕ್ಲಿಷ್ಟಕರತೆಗೆ ಕಾರಣಗಳೇನಿರಬಹುದು?

***ಪ್ರಾರ್ಥಿಸಿ***

ಕೆಲಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ನಿಮ್ಮ ಪ್ರಾರ್ಥನೆಯ ಗಮನವನ್ನು ಈ ಪಾಠದಲ್ಲಿ ಉದ್ಭವಿಸದ ಸಮಸ್ಯೆಗಳ ಮೇಲಿಡಿರಿ. ಏನೇ ಕಳಕಳಿಯಿದ್ದರೂ ಪ್ರಾರ್ಥನೆಯಲ್ಲಿ ದೇವರ ಮುಂದಿಡಿರಿ.

**"ನನ್ನ ಸ್ವಾಮಿ, ನನ್ನ ದೇವರು!"**



***ಈ ಚಿತ್ರವನ್ನು ಅಭ್ಯಾಸಿಸಿರಿ***

1. ಈ ಚಿತ್ರವನ್ನು ವಿವರಿಸಿರಿ
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ
3. ಹೇಗೆ ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತಾ ಕಥೆಗಳಿಗೆ ಸಂಬಂಧಿಸಬಲ್ಲದೆಂಬುದನ್ನು ವಿವರಿಸಿರಿ

***ಈ ವಾಕ್ಯಭಾಗಗಳನ್ನು ಓದಿರಿ***

*ಯೇಸು ಬಂದಾಗ ಹನ್ನೆರಡು ಮಂದಿ ಶಿಷ್ಯರೊಳಗೆ ಒಬ್ಬನಾದ ದಿದುಮನೆನಿಸಿಕೊಳ್ಳುವ ತೋಮನು ಅವರ ಸಂಗಡ ಇರಲಿಲ್ಲ. ಆದುದರಿಂದ ಉಳಿದ ಶಿಷ್ಯರು - "ನಾವು ಸ್ವಾಮಿಯನ್ನು ನೋಡಿದ್ದೇವೆ" ಎಂದು ಅವನಿಗೆ ಹೇಳಿದರು. ಅದಕ್ಕೆ ಅವನು - "ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಘಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕದ ಹೊರತು ನಿಮ್ಮ ಮಾತನ್ನು ನಂಬುವದೇ ಇಲ್ಲ ಅಂದನು. ಎಂಟು ದಿವಸಗಳಾದ ಮೇಲೆ ಆತನ ಶಿಷ್ಯರು ತಿರುಗಿ ಒಳಗಿದ್ದಾಗ ತೋಮನೂ ಅವರ ಸಂಗಡ ಇದ್ದನು. ಬಾಗಿಲುಗಳು ಮುಚ್ಚಿದ್ದವು. ಆಗ ಯೇಸು ಬಂದು ನಡುವೆ ನಿಂತು – "ನಿಮಗೆ ಸಮಾಧಾನವಾಗಲಿ" ಎಂದನು. ಆಮೇಲೆ ತೋಮನಿಗೆ – "ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿನೋಡು; ನಿನ್ನ ಕೈ ಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು" ಎಂದು ಹೇಳಿದನು. ತೋಮನು ಆತನಿಗೆ – "ನನ್ನ ಸ್ವಾಮಿ, ನನ್ನ ದೇವರು!" ಎಂದು ಹೇಳಿದನು. ಯೇಸು ಅವನಿಗೆ – "ನೀನು ನನ್ನನ್ನು ನೋಡಿದ್ದರಿಂದ ನಂಬಿದ್ದೀ, ನೋಡದೆ ನಂಬಿದವರು ಧನ್ಯರು" ಎಂದು ಹೇಳಿದನು (ಯೋಹಾನ 20:24-29).*

*ಬಳಿಕ ಹನ್ನೊಂದು ಮಂದಿ ಶಿಷ್ಯರು ಗಲಿಲಾಯಕ್ಕೆ ಹೋಗಿ...ಅಲ್ಲಿ ಆತನನ್ನು ಕಂಡು ಆತನಿಗೆ ಅಡ್ಡಬಿದ್ದರು. ಆದರೆ ಕೆಲವರು ಸಂದೇಹಪಟ್ಟರು. ಆಗ ಯೇಸು ಹತ್ತರಕ್ಕೆ ಬಂದು – "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ....ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" (ಮತ್ತಾ. 28:18-20).*

*ನೀನು "ಯೇಸುವನ್ನೇ ಕರ್ತನೆಂದು" ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬದೇ. ಹೃದಯದಿಂದ ನಂಬುವುದರ ಮೂಲಕ ನೀತಿಯು ದೊರಕುತ್ತದೆ. ಬಾಯಿಂದ ಅರಿಕೆ ಮಾಡುವುದರ ಮೂಲಕ ರಕ್ಷಣೆಯಾಗುತ್ತದೆ" (ರೋಮಾ. 10:9-10).*

*ನೀವು ಆತನನ್ನು ಕಣ್ಣಾರೆ ನೋಡಲಿಲ್ಲವಾದರೂ ಆತನನ್ನು ಪ್ರೀತಿಸುತ್ತೀರಿ. ನೀವು ಈಗ ಆತನನ್ನು ಕಾಣದಿದ್ದರೂ ಆತನಲ್ಲಿ ನಂಬಿಕೆಯಿಟ್ಟು ನಿಮ್ಮ ನಂಬಿಕೆಯ ಅಂತ್ಯಫಲವಾಗಿರುವ ಆತ್ಮರಕ್ಷಣೆಯನ್ನು ಹೊಂದುವವರಾಗಿ ಹೇಳಲಶಕ್ಯವಾದಂಥ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುತ್ತೀರಿ (1 ಪೇತ್ರ 1:8-9).*

***ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ***

1. ಯೇಸುವು ಉಳಿದ ಶಿಷ್ಯರಿಗೆ ಸಾಮಾನ್ಯವಾದ ಮತ್ತು ಮಾನುಷಿಕ ರೀತಿಯಲ್ಲಿ ಕಾಣಿಸಿಕೊಂಡ ಸುದ್ದಿಗೆ ತೋಮನು ಪ್ರತಿಕ್ರಯಿಸುತ್ತಾನೆ: ತನಗೆ ಸಾಕ್ಷಿಸಿಗುವವರೆಗೂ ಆತನು ಸಂದೇಹಪಟ್ಟನು. ನಮ್ಮಲ್ಲಿ ಹೆಚ್ಚಿನವರು ತೋಮನಂತೆ ಇದ್ದೇವೆ. ಒಂದು ಅದ್ಭುತದಲ್ಲಿ ನಂಬಿಕೆಯಿಡಲು ನಮಗೆ ಪುರಾವೆ ಬೇಕಾಗಿದೆ. ತೋಮನು ಪುನರುತ್ಥಾನ ಹೊಂದಿದ ಯೇಸುವನ್ನು ಮುಟ್ಟಿ ಅನಂತರ ಮನವರಿಕೆಮಾಡಿಕೊಂಡನು. ನಮ್ಮ ಬಗ್ಗೆ ಏನು? ನಮಗೆ ಮನವರಿಕೆಯಾಗುವ ರೀತಿಯಲ್ಲಿ ನಮ್ಮನ್ನು ಮುಟ್ಟಿರುವನಾ? ಯೇಸು ತಮ್ಮ ಜೀವಿತವನ್ನು ಮುಟ್ಟಿ, ರೂಪಾಂತರಗೊಳಿಸಿದ ಅದ್ಭುತವನ್ನು ಕೋಟ್ಯಂತರ ಜನರು ಸಾಕ್ಷಿಸಬಲ್ಲರು.
2. ಮರಣದಿಂದ ಎದ್ದ ಯೇಸುವಿನೊಂದಿಗಿನ ತೋಮನ ಅನುಭವವು ಆತನಿಗೆ ಯೇಸುವಿನ ಕುರಿತಾಗಿ ಒಂದು ಆಳವಾದ ತಿಳುವಳಿಕೆಯನ್ನು ಕೊಟ್ಟಿತು: "ನನ್ನ ಸ್ವಾಮಿ, ನನ್ನ ದೇವರು!" ಯೇಸುವಿನ ಪುನರುತ್ಥಾನದ ಕುರಿತ ಸತ್ಯವನ್ನು ನಾವು ತಿಳಿದುಕೊಂಡು ಅರಿಕೆ ಮಾಡುವಾಗ ಯೇಸುವಿನ ದೈವತ್ವ ನಮಗೊಂದು ಹೊಸದಾದ ರೀತಿಯಲ್ಲಿ ಪ್ರಕಟಿಸಲ್ಪಡುತ್ತದೆ.
3. ಮಾನವನ ಸ್ವಭಾವದಲ್ಲಿ ಸಂದೇಶವು ಆಳವಾಗಿ ನೆಲೆಯೂರಿದಂತೆ ಕಾಣುತ್ತದೆ. ಪುನರುತ್ಥಾನ ಹೊಂದಿದ ಯೇಸುವಿನ ಜೊತೆಗಿದ್ದ ಆತನ ಶಿಷ್ಯರ ಮಧ್ಯದಲ್ಲಿ ಸಹ ಕೆಲವರು ಸಂದೇಹಪಟ್ಟರು. ಆದರೆ ಹೊರಟು ಹೋಗಿ ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡುವ ಮಹಾ ಆದೇಶದಿಂದ ಅವರನ್ನು ಆತನು ಹೊರಗಿಡಲಿಲ್ಲ. ಆತನಿಗೆ ಅವರು ವಿಧೇಯರಾಗಿ ಆತನನ್ನು ರಕ್ಷಕನೆಂದು ಅರಿಕೆ ಮಾಡಿದಾಗ, ಅವರೊಂದಿಗೆ ತಾನಿರುತ್ತೇನೆಂಬುದನ್ನು ಯೇಸು ದೃಢಪಡಿಸಿ ಅವರೆಲ್ಲರ ಸಂದೇಹವನ್ನು ತೆಗೆದುಹಾಕಿದನು.
4. ಯೇಸುವನ್ನು ನಮ್ಮ ಈ ಶಾರೀರಿಕ ಕಣ್ಣುಗಳಿಂದ ನಾವು ನೋಡದಿದ್ದರೂ, ಆತನನ್ನು ಆಳವಾಗಿ ಪ್ರೀತಿಸುವ ನಮ್ಮಂಥ ವಿಶ್ವಾಸಿಗಳಿಗೆ ಪೇತ್ರನು ಬರೆಯುತ್ತಾನೆ. ನಾವು ಆತನನ್ನು ಮುಖಾಮುಖಿಯಾಗಿ ನೋಡುವಾಗಿನ ಸಂತೋಷವನ್ನು ಊಹಿಸಿಕೊಳ್ಳಿರಿ!.

***ನಿಮ್ಮೊಳಗೇ ಈ ಪ್ರಶ್ನೆಗಳನ್ನು ಉತ್ತರಿಸಿಕೊಳ್ಳಿರಿ***


1. ತೋಮನಲ್ಲಿ ನಿಮ್ಮನ್ನು ಗುರುತಿಸಿಕೊಳ್ಳಬಲ್ಲಿರಾ? ಯೇಸುವಿನ ಪುನರುತ್ಥಾನದಲ್ಲಿ ನಂಬಿಕೆಯಿಡಲು ನಿಮಗೆ ಇನ್ನೂ ಬಲವಾದ ಆಧಾರ/ಪುರಾವೆ ಬೇಕಿದೆಯಾ? ಹಾಗಾದರೆ ಆ ಬಗ್ಗೆ ನೀವೇನು ಮಾಡಬಲ್ಲಿರಿ? ನಿಮ್ಮ ಎಲ್ಲಾ ಸಂದೇಹಗಳು ಹೊರಟು ಹೋಗುವ ರೀತಿಯಲ್ಲಿ ಯೇಸುವು ನಿಮ್ಮ ಜೀವಿತವನ್ನು ಮುಟ್ಟಿ ರೂಪಾಂತರಗೊಳಿಸಲು ಅನುವುಮಾಡಿಕೊಡುವಿರಾ?
2. ಯೇಸುವನ್ನು ನಿಮ್ಮ ಸ್ವಾಮಿ, ನಿಮ್ಮ ದೇವರು, ಅಂದರೆ ರಕ್ಷಕನೆಂಬುದಾಗಿ ಅರಿಕೆ ಮಾಡುವುದು ನಿಮ್ಮ ಸಂದೇಹಗಳನ್ನು ತೆಗೆದುಹಾಕಿ ಆತನಲ್ಲಿನ ನಿಮ್ಮ ನಂಬಿಕೆಯನ್ನು ಬಲಪಡಿಸುತ್ತದೆಂಬ ಅನುಭವ ನಿಮಗಿದೆಯಾ? ನಮಗೆ ತೀರಾ ನಿಕಟವಾಗಿರುವವರನ್ನೊಳಗೊಂಡು ಹೊರಟು ಹೋಗಿ ಎಲ್ಲಾ ಜನರನ್ನು ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡುವ ಸಮಯ ನಿಮಗೆ ಬಂದಿದೆಯಾ?

3. ನೀವು ನಿಜವಾಗಲೂ ಯೇಸುವನ್ನು ಪ್ರೀತಿಸಿ ಆತನನ್ನು ಮುಖಾಮುಖಿಯಾಗಿ ನೋಡಲು ಕಾತುರದಲ್ಲಿರುವಿರಾ? ನೀವು ದಾಹದಿಂದ ಆತನ ಎರಡನೇ ಬರೋಣಕ್ಕಾಗಿ ಕಾದಿರುವಿರಾ?

***ಪ್ರಾರ್ಥಿಸಿ***

ಕೆಲಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ಈ ಪಾಠದಲ್ಲಿ ಉದ್ಭವಿಸಿದ ಸಮಸ್ಯೆಗಳ ಮೇಲೆ ನಿಮ್ಮ ಪ್ರಾರ್ಥನೆಯ ಗಮನವಿರಲಿ. ಏನೇ ಕಳಕಳಿಯಿದ್ದರೂ ಪ್ರಾರ್ಥನೆಯಲ್ಲಿ ದೇವರ ಮುಂದಿಡಿರಿ.

**"ಬಂದು ಊಟ ಮಾಡಿರಿ!"**



***ಈ ಚಿತ್ರವನ್ನು ಅಭ್ಯಾಸಿಸಿರಿ***

1. ಈ ಚಿತ್ರವನ್ನು ವಿವರಿಸಿರಿ
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ
3. ಹೇಗೆ ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತಾ ಕಥೆಗಳಿಗೆ ಸಂಬಂಧಿಸಬಲ್ಲದೆಂದು ವಿವರಿಸಿರಿ

***ಈ ವಾಕ್ಯಭಾಗಗಳನ್ನು ಓದಿರಿ***

*ಅವರು ಭೂಮಿಗೆ ಇಳಿದಾಗ ಕೆಂಡಗಳನ್ನೂ ಅವುಗಳ ಮೇಲೆ ಇಟ್ಟಿದ್ದ ಮೀನುಗಳನ್ನೂ ರೊಟ್ಟಿಸಹಿತವಾಗಿ ಕಂಡರು. ಯೇಸು ಅವರಿಗೆ - "ಬಂದು ಊಟಮಾಡಿರಿ" ಎಂದು ಹೇಳಿದನು. ಶಿಷ್ಯರು ಆತನನ್ನು ಸ್ವಾಮಿಯವರೆಂದು ತಿಳಿದಿದ್ದರಿಂದ ನೀನಾರೆಂದು ವಿಚಾರಿಸುವುದಕ್ಕೆ ಅವರಲ್ಲಿ ಒಬ್ಬರೂ ಧೈರ್ಯಪಡಲಿಲ್ಲ. ಯೇಸು ಬಂದು ರೊಟ್ಟಿಯನ್ನು ತೆಗೆದುಕೊಂಡು ಅವರಿಗೆ ಕೊಟ್ಟನು; ಹಾಗೆಯೇ ಮೀನನ್ನೂ ಕೊಟ್ಟನು (ಯೋಹಾನ 21:9, 12-13)*

*ನಮ್ಮ ಕರ್ತನಾದ ಯೇಸು ಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತ ಯೇಸುವಿನಲ್ಲಿ ಅನುಗ್ರಹಿಸಿದ್ದಾನೆ (ಎಫೆಸ 1:3).*

*ದೇವಜನರಿಗೆ ಕೊರತೆ ಬಂದಾಗ ಸಹಾಯ ಮಾಡಿರಿ. ಅತಿಥಿಸತ್ಕಾರವನ್ನು ಅಭ್ಯಾಸಿಸಿರಿ (ರೋಮ 12:13).*

*ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣೆಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವುದುಂಟೇ? (1 ಯೋಹಾನ 3:17).*

*ಆದರೆ ಸ್ವಲ್ಪವಾಗಿ ಬಿತ್ತುವವನು ಪೈರನ್ನು ಸ್ವಲ್ಪವಾಗಿ ಕೊಯ್ಯುವನು; ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವನು....ಈ ಧರ್ಮಕಾರ್ಯವು ದೇವಜನರ ಕೊರತೆಗಳನ್ನು ನೀಗುವದು ಮಾತ್ರವಲ್ಲದೆ ಅನೇಕರಿಂದ ದೇವರಿಗೆ ಕೃತಾಜ್ಞತಾಸ್ತುತಿಯನ್ನು ಹುಟ್ಟಿಸುವದು. ಈ ಸಹಾಯದಿಂದ ತೋರಿಬಂದ ನಿಮ್ಮ ಯೋಗ್ಯಭಾವವನ್ನು ಅವರು ನೋಡುವಾಗ ನೀವು ಮಾಡಿದ್ದ ಪ್ರತಿಜ್ಞೆಗೆ ಸರಿಯಾಗಿ ಕ್ರಿಸ್ತನ ಸುವಾರ್ತೆಯನ್ನು ಅನುಸರಿಸಿದ್ದರಿಂದಲೂ ತಮಗೂ ಎಲ್ಲರಿಗೂ ನೀವು ಉದಾರವಾಗಿ ಸಹಾಯ*

*ಮಾಡಿದ್ದರಿಂದಲೂ ದೇವರನ್ನು ಕೊಂಡಾಡುವರು. ಇದಲ್ಲದೆ ನಿಮಗೋಸ್ಕರ ವಿಜ್ಞಾಪನೆ ಮಾಡಿ ದೇವರ ಅತಿಶಯವಾದ ಕೃಪೆಯು ನಿಮ್ಮಲ್ಲಿ ಇರುವುದರಿಂದ ನಿಮ್ಮ ಪರಿಚಿತ ಮಾಡಬೇಕೆಂದು ಕೋರುವರು. ವರ್ಣಿಸಲಶಕ್ಯವಾದ ದೇವರವರಕ್ಕಾಗಿ ಆತನಿಗೆ ಸ್ತೋತ್ರ (2 ಕೊರಿಂಥ 9:6, 12-14).*

*"ತೆಗೆದುಕೊಳ್ಳುವುದಕ್ಕಿಂತ ಕೊಡುವದೇ ಹೆಚ್ಚಿನ ಭಾಗ್ಯವೆಂಬುದಾಗಿ" ಕರ್ತನಾದ ಯೇಸು ತಾನೇ ಹೇಳಿದನು.... (ಅ.ಕೃ. 20:35).*

***ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ***

1. ಯೆರೂಸಲೇಮಿನಲ್ಲಿ ನಾಟಕೀಯ ಘಟನೆಯ ನಂತರ ತಮ್ಮ ತಮ್ಮ ಹಳೆಯ ಮೀನು ಹಿಡಿಯುವ ವೃತ್ತಿಗೆ ಹಿಂತಿರುಗಿದ, ಬಳಲಿದ, ಗೊಂದಲಗೊಂಡ ಮತ್ತು ಎದೆಗುಂದಿದ ತನ್ನ ಶಿಷ್ಯರಿಗೆ ಯೇಸು ಒಂದು ಒಳ್ಳೆಯ ಉಪಹಾರವನ್ನು ಒದಗಿಸುತ್ತಾನೆ. ಯೇಸು ಅವರನ್ನು ಬೈಯಲಿಲ್ಲ. ಏನಾಯಿತೆಂಬುದನ್ನೂ ಸಹ ಯೇಸು ವಿವರಿಸಲಿಲ್ಲ. ಅವರ ಭವಿಷ್ಯದ ಸವಾಲಿನ ಬಗ್ಗೆ ಯೇಸು ಅವರಿಗೆ ಉಪದೇಶಿಸಲಿಲ್ಲ. ಗಲಿಲಾಯ ಸಮುದ್ರದ ತೀರದ ಮೇಲೆ ಚಳಿಮಿಶ್ರಿತ ಮುಂಜಾನೆ ವೇಳೆ ಅವರಿಗೆ ಒಂದು ಒಳ್ಳೆಯ ಉಪಹಾರವನ್ನು ಕೊಟ್ಟನು. ಯೇಸು ತನ್ನ ಶಿಷ್ಯರಿಗೆ ಪ್ರೀತಿ ಮತ್ತು ಕಾಳಜಿಯನ್ನು ತೋರಿಸಿದನು.
2. ಯೇಸು ನಾವೂ ಸಹ ಆತನಂತೆ ಆಗಬೇಕೆಂದು ಬಯಸುತ್ತಾನೆ. ಇತರ ವಿಶ್ವಾಸಿಗಳಿಗೆ ನಾವು ಪ್ರೀತಿ ಮತ್ತು ಕಾಳಜಿಯನ್ನು ತೋರಿಸಬೇಕೆಂದು ಆತನು ಅಪೇಕ್ಷಿಸುತ್ತಾನೆ. ನಾವು ಬಡವರಿಗೆ ಮತ್ತು ಕೊರತೆಯಲ್ಲಿರುವವರಿಗೆ ಸಹಾಯ ಮಾಡಬೇಕೆಂದು ಆಶಿಸುತ್ತಾನೆ. ನಾವು ನಮ್ಮ ಸಂಪನ್ಮೂಲಗಳನ್ನೆಲ್ಲ (ಹಣ, ಆಹಾರ, ಸೌಲಭ್ಯ) ಇತರರ ಪ್ರಯೋಜನಕ್ಕಾಗಿ ಉಪಯೋಗಿಸಬೇಕೆಂದು ಆತನು ಬಯಸುತ್ತಾನೆ.
3. ಬೇರೆಯವರಿಗಾಗಿನ ನಮ್ಮ ಕಾಳಜಿಯು ಕ್ರಿಸ್ತ ಯೇಸುವಿನಲ್ಲಿ ದೇವರು ನಮಗೆ ಕೊಟ್ಟಂಥವುಗಳಿಗಿನ ಸರಿಯಾದ ಒಂದು ಪ್ರತಿಕ್ರಿಯೆಯಾಗಿದೆ: ಕ್ಷಮೆ, ಶಾಂತಿ/ಸಮಾಧಾನ, ಜೀವನದಲ್ಲಿನ ಉದ್ದೇಶ ನಿತ್ಯತ್ವಕ್ಕಾಗಿನ ನಿರೀಕ್ಷೆ (ಎಫೆಸ 1:3).
4. ಬೇರೆಯವರಿಗೆ ನಮ್ಮ ಪ್ರೀತಿ ಮತ್ತು ಕಾಳಜಿಯು ಒಂದು ಸಾಕ್ಷಿಯಾಗಿದೆ. ದೇವರೊಂದಿಗೆ ನಮಗೊಂದು ಅನ್ಯೋನ್ಯತೆಯಿದೆಯೆಂಬುದನ್ನು ಅವು ತೋರಿಸುತ್ತವೆ. ನಾವು ಯೇಸುವಿಗೆ ಸಂಬಂಧಪಟ್ಟವರಾಗಿದ್ದೇವೆ ಮತ್ತು ಆತನು ನಮ್ಮ ಜೀವಿತಗಳನ್ನು ರೂಪಾಂತರಿಸಿದ್ದಾನೆಂಬುದನ್ನು ಅವು ತೋರಿಸುತ್ತವೆ. ಅವು ಜನರನ್ನು ಯೇಸುವಿನೆಡೆಗೆ ಸಹ ನಡೆಸುತ್ತವೆ.
5. ನಮ್ಮ ಸಭಾ ಸೇವೆಗೆ, ನಮ್ಮ ಉದ್ಧಾರತೆ ಸಹ ಅವಶ್ಯಕವಾಗಿದೆ. ನಮ್ಮ ಸಭೆಗೆ ನಮ್ಮ ಸಮರ್ಪಣೆ, ನಮ್ಮ ಸಮಯ, ನಮ್ಮ ವರಗಳು ಮತ್ತು ಕೌಶಲ್ಯಗಳು, ನಮ್ಮ ಹಣ ಮತ್ತು ನಮ್ಮ ಸಂಪನ್ಮೂಲಗಳ ಅಗತ್ಯವಿದೆ.


***ಈ ಪ್ರಶ್ನೆಗಳನ್ನು ನಿಮ್ಮೊಳಗೆ ಉತ್ತರಿಸಿಕೊಳ್ಳಿರಿ***

1. ಬೇರೆಯವರಿಗೆ ಪ್ರೀತಿ ಮತ್ತು ಕಾಳಜಿಯನ್ನು ತೋರಿಸುವುದರಲ್ಲಿ ನೀವು ಯೇಸುವಿನಂತೆ ಇರುವಿರಾ? ಹೇಗೆ ಎಂದು ವಿವರಿಸಿರಿ.
2. ಬೇರೆಯವರಿಗಾಗಿನ ನಿಮ್ಮ ಸಮರ್ಪಣೆಯು ಯಾವ ಕ್ಷೇತ್ರದಲ್ಲಿ ನೀವು ಇನ್ನು ಸುಧಾರಿಸಬೇಕಿದೆ. ಬಡವರಿಗೆ ಮತ್ತು ಕೊರತೆಯಲ್ಲಿರುವವರಿಗೆ ನೀವು ಹೆಚ್ಚಿನ ಸಮಯವನ್ನು ಕಳೆಯಬೇಕಿದೆಯಾ? ನೀವು ಇನ್ನು ಹೆಚ್ಚು ಅತಿಥಿಸತ್ಕಾರ ಮಾಡಬೇಕಾ? ಕೊರತೆಯಲ್ಲಿ ಇರುವವರಿಗಾಗಿ ನೀವು ಇನ್ನು ಹೆಚ್ಚು ಹಣವನ್ನು ವ್ಯಯಿಸಬೇಕಾ? ಬೇರೆಯವರು ನಿಮ್ಮ ಭೌತಿಕ ಸಂಪನ್ಮೂಲಗಳನ್ನು ಉಪಯೋಗಿಸುವಲ್ಲಿ ನೀವು ಇನ್ನು ಹೆಚ್ಚು ಉದಾರತೆ ತೋರಿಸಬೇಕಿದೆಯಾ?

***ಪ್ರಾರ್ಥಿಸಿ***

ಕೆಲ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ಈ ಪಾಠದಲ್ಲಿ ಉದ್ಭವಿಸಿದ ಸಮಸ್ಯೆಗಳ ಮೇಲೆ ನಿಮ್ಮ ಪ್ರಾರ್ಥನೆಯ ಗಮನವಿರಲಿ. ಏನೇ ಕಳಕಳಿ ಇದ್ದರೆ, ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿರಿ.

## “ನನ್ನನ್ನು ಹಿಂಬಾಲಿಸು!”



***ಈ ಚಿತ್ರವನ್ನು ಅಭ್ಯಾಸಿಸಿರಿ***

1. ಈ ಚಿತ್ರವನ್ನು ವಿವರಿಸಿರಿ
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ
3. ಹೇಗೆ ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತಾ ಕಥೆಗಳಿಗೆ ಸಂಬಂಧಿಸಬಲ್ಲದೆಂದು ವಿವರಿಸಿರಿ

***ಈ ವಾಕ್ಯಭಾಗಗಳನ್ನು ಓದಿರಿ***

*ಆತನು ಮತ್ತೊಬ್ಬನಿಗೆ “ನನ್ನನ್ನು ಹಿಂಬಾಲಿಸು” ಎಂದು ಹೇಳಲು (ಲೂಕ 9:59)*

*ಆತನು ಮೂರನೆಯ ಸಾರಿ – “ಯೋಹಾನನ ಮಗನಾದ ಸೀಮೋನನೇ, ನನ್ನ ಮೇಲೆ ಮಮತೆ ಇಟ್ಟಿದ್ದೀಯೋ” ಎಂದು ಕೇಳಿದನು. ಮೂರನೆಯ ಸಾರಿ ಆತನು ನನ್ನ ಮೇಲೆ ಮಮತೆ ಇಟ್ಟಿದ್ದೀಯೋ ಎಂದು ತನ್ನನ್ನು ಕೇಳಿದ್ದಕ್ಕೆ ಪೇತ್ರನು ದುಃಖಪಟ್ಟು – “ಸ್ವಾಮಿ, ನೀನು ಎಲ್ಲಾ ಬಲ್ಲೆ, ನಿನ್ನ ಮೇಲೆ ನಾನು ಮಮತೆ ಇಟ್ಟಿದ್ದೇನೆಂಬುದು ನಿನಗೆ ತಿಳಿದದೆ ಅಂದನು. ಅವನಿಗೆ ಯೇಸು – “ನನ್ನ ಕುರಿಗಳನ್ನು ಮೇಯಿಸು, ನಿನಗೆ ನಿಜನಿಜವಾಗಿ ಹೇಳುತ್ತೇನೆ, ನೀನು ಯೌವನಸ್ಥನಾಗಿದ್ದಾಗ ನೀನೇ ನಡುವನ್ನು ಕಟ್ಟಿಕೊಂಡು ಇಷ್ಟಬಂದ ಕಡೆಗೆ ತಿರುಗಾಡುತ್ತಿ, ಆದರೆ ನೀನು ಮುದುಕನಾದಾಗ ನಿನ್ನ ಕೈಗಳನ್ನು ಚಾಚುವಿ, ಮತ್ತೊಬ್ಬನು ನಿನ್ನ ನಡುವನ್ನು ಕಟ್ಟಿಕೊಂಡು ನಿನಗೆ ಇಷ್ಟವಿಲ್ಲದ ಕಡೆಗೆ ನಿನ್ನನ್ನು ತೆಗೆದುಕೊಂಡು ಹೋಗುವನು” ಎಂದು ಹೇಳಿದನು. ಅವನು ಎಂಥಾ ಸಾವಿನಿಂದ ದೇವರನ್ನು ಮಹಿಮೆಪಡಿಸುವನು ಎಂಬುದನ್ನು ಆತನು ಈ ಮಾತಿನಿಂದ ಸೂಚಿಸಿದನು (ಯೋಹಾನ 21:17-19).*

*ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು (1 ಪೇತ್ರ 2:21).*

*ಆತನನ್ನು ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನು ತಿಳುಕೊಂಡು ಆತನ ಮರಣದ ವಿಷಯದಲ್ಲಿ ಆತನಿಗೆ ಸರೂಪನಾಗಬೇಕೆಂಬುದೇ ನನ್ನ ಕುತೂಹಲವಾಗಿದೆ. ಹೀಗಾದರೆ ಸತ್ತವರಲ್ಲಿ ಕೆಲವರಿಗೆ ಆಗುವ ಪುನರುತ್ಥಾನವು ನನಗೆ ಒದಗಿ ಬಂದೀತು” (ಫಿಲಿಪ್ಪ 3:10-11).*

*"ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ" (1 ಕೊರಿಂಥ 11:1).*

***ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ***

1. ಸುವಾರ್ತೆಯ ಅನೇಕ ಸಂದರ್ಭಗಳಲ್ಲಿ ಯೇಸು ಜನರಿಗೆ ತನ್ನನ್ನು ಹಿಂಬಾಲಿಸಿರಿ ಎಂದು ಹೇಳಿದ್ದಾನೆ. ಆತನ ಹನ್ನೆರಡು ಮಂದಿ ಶಿಷ್ಯರು ತಮ್ಮ ಕೆಲಸವನ್ನು ಬಿಟ್ಟು (ಕೆಲವರು ತಮ್ಮ ಮೀನಿನ ಬಲೆ, ಮತ್ತಾಯನು ಸುಂಕದ ಕಟ್ಟೆಯನ್ನು) ಯೇಸುವನ್ನು ಹಿಂಬಾಲಿಸಿ ಆತನ ಶಿಷ್ಯರಾಗುತ್ತಾರೆ. ಯೇಸುವಿನ ನಿಜವಾದ ಶಿಷ್ಯರಾಗಲು ನಾವು ಆತನನ್ನು ಹಿಂಬಾಲಿಸಿ ಆತನ ಹೆಜ್ಜೆಯ ಜಾಡಿನಲ್ಲೇ ನಡೆಯಬೇಕಾಗಿದೆ.
2. ಅನೇಕರು ಯೇಸುವನ್ನು ಹಿಂಬಾಲಿಸಿದರು. ಆದರೆ ಅನೇಕರು ಹಿಂಬಾಲಿಸಲಿಲ್ಲ. ಕೆಲವರು ತಮ್ಮ ಆಸ್ತಿ ಮತ್ತು ದೈನಂದಿನ ಜೀವಿತಗಳ ಬಗ್ಗೆಯೇ ಹೆಚ್ಚಾಗಿ ಚಿಂತಿಸಿದರು. ಇನ್ನು ಕೆಲವರು ಒಬ್ಬ ಸರಳವಾದ ಅಲೆದಾಡುವ ಬೋಧಕನಿಗೆ ತಮ್ಮನ್ನು ಒಪ್ಪಿಸಿಕೊಡಲು ನಿರಾಕರಿಸಿದರು. ಇನ್ನು ಕೆಲವರು ಆತನು ಮಾಡಿದ ಅದ್ಭುತಗಳನ್ನು ನೋಡಿ ಉತ್ಸುಕರಾದರು ಅಥವಾ ಆತನ ಬೋಧನೆಗಳಿಂದ ಅಚ್ಚರಿಗೊಂಡರೂ ಆತನನ್ನು ಹಿಂಬಾಲಿಸಲು ತಮ್ಮನ್ನು ಒಪ್ಪಿಸಿಕೊಡಲಿಲ್ಲ.
3. ಕತ್ತಲೆ ಮತ್ತು ಅಪಾಯದ ಸಮಯದಲ್ಲಿ, ಸೀಮೋನ ಪೇತ್ರನು ಯೇಸುವನ್ನು ತ್ಯಜಿಸಿ ವಿಫಲನಾದನು. ಆದರೆ ಆತನ ಹಿಂದಿನ ವಿಫಲತೆಗಿಂತ ಯೇಸುವಿಗಾಗಿನ ಪೇತ್ರನ ಪ್ರೀತಿಯು ಪ್ರಾಮುಖ್ಯವಾಗಿತ್ತು. "ನನ್ನನ್ನು ಹಿಂಬಾಲಿಸು" ಎಂದು ಯೇಸು ಆತನ ಕಥೆಯನ್ನು ನವೀಕರಿಸಿದನು.
4. ಶಿಷ್ಯತ್ವವು ಬಾಧೆಗೆ ನಡೆಸಬಹುದು. ಯೇಸುವಿನ ಹೆಜ್ಜೆಜಾಡಿನಲ್ಲಿ ನಡೆಯುವ ಪ್ರತಿಯೊಬ್ಬನೂ ಸಹ ಇದನ್ನು ಅಪೇಕ್ಷಿಸಲೇಬೇಕು. ಆತನಿಗಾಗಿನ ನಮ್ಮ ನೀತಿಯುತ ಬಾಧೆಯು ನಾವು ಆತನಿಗೆ ಸೇರಿದವರಾಗಿದ್ದೇವೆಂಬುದನ್ನು ಲೋಕಕ್ಕೆ ಸಾಕ್ಷಿಸುತ್ತದೆ. ಆದರೆ ಒಂದು ವೇಳೆ ನಾವು ರಕ್ತಸಾಕ್ಷಿಗಳಾಗಬೇಕಾಗಿ ಬಂದರೂ ಸಹ ಆತನ ಪುನರುತ್ಥಾನದಲ್ಲಿ ನಾವು ಯೇಸುವಿನೊಂದಿಗೆ ಸೇರುವುವೆಂಬುದನ್ನು ನಾವು ಬಲ್ಲವರಾಗಿದ್ದೇವೆ. ನಮ್ಮ ನಿತ್ಯತ್ವವು ಆತನೊಂದಿಗಿದೆ.
5. ನಮ್ಮ ಶಿಷ್ಯತ್ವವು ಬೇರೆಯವರಿಗೆ ಒಂದು ಮಾದರಿಯಾಗಿರಬೇಕು. ನಾವು ಪೌಲನೊಂದಿಗೆ "ನಾನು ಕ್ರಿಸ್ತನನ್ನು ಅನುಸರಿಸುವಂತೆಯೇ ನೀವು ನನ್ನನ್ನು ಅನುಸರಿಸುವವರಾಗಿರಿ" (1 ಕೊರಿಂಥ 11:1) ಎಂದು ಹೇಳುವಷ್ಟರ ಮಟ್ಟಿಗೆ ನಮ್ಮ ಸಮರ್ಪಣೆಯ ಮಟ್ಟವು ಮುಟ್ಟಬೇಕೆಂದು ಯೇಸು ಬಯಸುತ್ತಾನೆ.


***ನಿಮ್ಮೊಳಗೆ ಈ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳಿರಿ***

1. ಶಿಷ್ಯತ್ವಕ್ಕೆ ನಿಮ್ಮನ್ನು ಸಮರ್ಪಿಸಿಕೊಂಡಿರುವಿರಾ? ನೀವೊಬ್ಬ ಯೇಸುವಿನ ಹಿಂಬಾಲಕರಾಗಿರುವಿರಾ? ನೀವು ಆತನ ಹೆಜ್ಜೆ ಜಾಡಿನಲ್ಲಿ ನಡೆಯುತ್ತಿರುವಿರಾ?
2. ನಿಮ್ಮ ದೈನಂದಿನ ಜೀವನದಲ್ಲಿ ನಿಮ್ಮ ಶಿಷ್ಯತ್ವವು ಯಾವ ರೀತಿಯಲ್ಲಿ ವ್ಯಕ್ತವಾಗುತ್ತದೆ! ಉದಾಹರಣೆಗಳನ್ನು ಕೊಡಿರಿ. ಅದೇ ರೀತಿ ಯಾವ ರೀತಿಯಲ್ಲಿ ನಿಮ್ಮ ಶಿಷ್ಯತ್ವವು ಬೆಳೆಯಬಲ್ಲದು ಮತ್ತು ಅಭಿವೃದ್ಧಿಯಾಗಬಲ್ಲದೆಂಬುದಕ್ಕೆ ಸಲಹೆಗಳನ್ನು ಕೊಡಿರಿ.
3. ನಿಮ್ಮ ಶಿಷ್ಯತ್ವವು ಯೇಸುವಿಗಾಗಿನ ನಿಮ್ಮ ಪ್ರೀತಿಯಲ್ಲಿ ಸ್ಪಷ್ಟವಾಗಿ ತೋರುತ್ತಿದೆಯಾ? ಹೇಗೆ ಎಂದು ವಿವರಿಸಿರಿ.
4. ನಿಮ್ಮ ಶಿಷ್ಯತ್ವದ ಪರಿಣಾಮವಾಗಿ ನೀತಿಯುತ ಬಾಧೆಯನ್ನು ನೀವು ಅನುಭವಿಸಿರುವಿರಾ? ಅಂತ ಸಮಯಗಳಲ್ಲಿ ನಿಮ್ಮ ನಂಬಿಕೆಗೆ ಏನಾಗುತ್ತದೆ? ನಿಮ್ಮ ಅನುಭವ, ಭಾವನೆ ಮತ್ತು ಆಲೋಚನೆಗಳನ್ನು ಒಬ್ಬ ನಂಬಿಗಸ್ತ ಕ್ರೈಸ್ತ ಸ್ನೇಹಿತನೊಂದಿಗೆ ಹಂಚಿಕೊಳ್ಳಿರಿ.
5. ನಿಮ್ಮ ಶಿಷ್ಯತ್ವವು ನಿಮ್ಮ ಸಭೆಯಲ್ಲಿನ ಇತರ ವಿಶ್ವಾಸಿಗಳಿಗೆ ಒಂದು ಒಳ್ಳೆಯ ಮಾದರಿಯಾಗಿದೆಯಾ? ಹೇಗೆ ಎಂದು ವಿವರಿಸಿರಿ.

***ಪ್ರಾರ್ಥಿಸಿ***

ಕೆಲಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ನಿಮ್ಮ ಪ್ರಾರ್ಥನಾ ಗಮನವು ಈ ಪಾಠದಲ್ಲಿ ಉದ್ಭವಿಸಿದ ಸಮಸ್ಯೆಗಳ ಮೇಲಿರಲಿ. ಏನೇ ಕಳಕಳಿಯಿದ್ದರೂ ಪ್ರಾರ್ಥನೆಯಲ್ಲಿ ದೇವರ ಮುಂದೆ ತನ್ನಿರಿ.

## "... ನಾನು ಬರುವ ತನಕ"



***ಈ ಚಿತ್ರವನ್ನು ಅಭ್ಯಾಸಿಸಿರಿ***

1. ಈ ಚಿತ್ರವನ್ನು ವಿವರಿಸಿರಿ
2. ಈ ಚಿತ್ರವು ನಿಮಗೆ ಕೊಡುವ ಆಲೋಚನೆ ಮತ್ತು ಭಾವನೆಗಳನ್ನು ವಿವರಿಸಿರಿ
3. ಹೇಗೆ ಈ ಚಿತ್ರವು ಯೇಸುವಿನ ಕುರಿತಾದ ಸುವಾರ್ತಾ ಕಥೆಗಳಿಗೆ ಸಂಬಂಧಿಸಬಲ್ಲದೆಂದು ವಿವರಿಸಿರಿ

***ಈ ವಾಕ್ಯಭಾಗಗಳನ್ನು ಓದಿರಿ***

*ಇವನನ್ನು ಪೇತ್ರನು ಕಂಡು ಯೇಸುವನ್ನು – ಸ್ವಾಮಿ ಇವನ ವಿಷಯವೇನು ಎಂದು ಕೇಳಲು ಯೇಸು ಅವನಿಗೆ "ನಾನು ಬರುವ ತನಕ ಇವನು ಇರಬೇಕೆಂದು ಮನಸ್ಸಿದ್ದರೆ ನಿನಗೇನು? ನೀನು ನನ್ನನ್ನು ಹಿಂಬಾಲಿಸು" ಎಂದು ಹೇಳಿದನು (ಯೋಹಾನ 21:21-22)*

*ಈ ಮಾತುಗಳನ್ನು ಹೇಳಿದ ಬಳಿಕ ಅವರು ನೋಡುತ್ತಾ ಇದ್ದ ಹಾಗೆ ಆತನು ಎರಿಸಲ್ಪಟ್ಟನು, ಮೋಡವು ಆತನನ್ನು ಕವಿದುಕೊಂಡದ್ದರಿಂದ ಅವರ ಕಣ್ಣಿಗೆ ಮರೆಯಾದನು. ಆತನು ಹೋಗುತ್ತಿರುವಾಗ ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡುತ್ತಾ ಇರಲಾಗಿ ಶುಭ್ರವಸ್ತ್ರಧಾರಿಗಳಾದ ಇಬ್ಬರು ಫಕ್ಕನೆ ಅವರ ಹತ್ತಿರ ನಿಂತುಕೊಂಡು – "ಗಲಿಲಾಯದವರೆ ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿ ಆಕಾಶದೊಳಕ್ಕೆ ಹೋಗಿರುವುದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" ಎಂದು ಹೇಳಿದರು (ಅ.ಕೃ. 1:9-11).*

*ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡಿಸಬೇಕು. ರಾತ್ರಿ ಬರುತ್ತದೆ ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು (ಯೋಹಾನ 9:4).*

*ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನುಂಟು ಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು, ನಾವು ಭಕ್ತಿಹೀನತೆಯನ್ನು ಲೋಕದ ಆಶೆಗಳನ್ನು ವಿಸರ್ಜಿಸಿ ಭಾಗ್ಯಕರವಾದ ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ರಕ್ಷಕನಾದ ಯೇಸು ಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ ಬದುಕಬೇಕೆಂದು ಅದು ನಮಗೆ ಬೋಧಿಸುತ್ತದೆ. ಆತನು ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವುದಕ್ಕೂ ಸತ್ಕ್ರಿಯೆಗಳಲ್ಲಿ*

*ಆಸಕ್ತರಾದ ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧಮಾಡುವುದಕ್ಕೂ ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು (ತೀತ 2:11-14)*

*ಪ್ರಿಯರೇ ಈಗ ದೇವರ ಮಕ್ಕಳಾಗಿದ್ದೇವೆ, ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು (1 ಯೋಹಾನ 3:2).*

*ಹಿರೀ ಕುರುಬನು ಪ್ರತ್ಯಕ್ಷನಾಗುವಾಗ ನೀವು ದೇವಪ್ರಭಾವವೆಂಬ ಎಂದೂ ಬಾಡದ ಜಯಮಾಲೆಯನ್ನು ಹೊಂದುವಿರಿ (1 ಪೇತ್ರ 5:4).*

***ಈ ಸತ್ಯಂಶಗಳ ಮೇಲೆ ಚಿಂತನೆ ಮಾಡಿರಿ***

1. ಯೇಸು ಪೇತ್ರನಿಗೆ ತನ್ನ ಬರೋಣದವರೆಗೂ ತನ್ನನ್ನು ಹಿಂಬಾಲಿಸಬೇಕೆಂದು ಹೇಳುತ್ತಾನೆ. ಯೇಸುವಿನ ಎರಡನೇ ಬರೋಣದವರೆಗೂ ನಾವೆಲ್ಲರೂ ಆತನ ಶಿಷ್ಯರಾಗಿದ್ದೇವೆ. ಅಲ್ಲಿಯವರೆಗೂ ನಾವೆಲ್ಲರೂ ದೇವರ ರಾಜ್ಯದ ಶುಭಸಮಾಚಾರವನ್ನು ಮತ್ತು ಕ್ರಿಸ್ತನಲ್ಲಿನ ನಂಬಿಕೆ ಮೂಲಕ ರಕ್ಷಣೆಯ ಸುವಾರ್ತೆಯನ್ನು ಸಾರುವುದರಲ್ಲಿ ನಿರತರಾಗಿರಬೇಕೆಂದು ಆತನು ಅಪೇಕ್ಷಿಸುತ್ತಾನೆ.
2. ಯೇಸುವಿನ ಎರಡನೇ ಬರೋಣಕ್ಕಾಗಿ ಕಾದಿರುವಂತೆ ಆತನ ಹಿಂಬಾಲಕರು ಪರಲೋಕರಾಜ್ಯದ ಮೌಲ್ಯಗಳನ್ನು ಪ್ರತಿಬಿಂಬಿಸುವಂತಹ ಜೀವಿತವನ್ನು ಸಹ ನಡೆಸಬೇಕಾಗಿದೆ. ಶಿಷ್ಯತ್ವವೆಂದರೆ ಈ ದುಷ್ಟ ಜಗತ್ತಿನಲ್ಲಿ ಬದುಕಿರುವವರೆಗೂ ನಾವು ಭಯಭಕ್ತಿಯ ಜೀವಿತವನ್ನು ಜೀವಿಸಿ ಒಳ್ಳೆಯದನ್ನೇ ಮಾಡುವುದಾಗಿದೆ.
3. ಯೇಸು ಹಿಂತಿರುಗಿ ಬರುವಾಗ ಆತನಿರುವಂತೆಯೇ ನಾವು ಆತನನ್ನು ನೋಡುವೆವು. ನಾವೂ ಸಹ ಆತನ ಸಾರೂಪ್ಯಕ್ಕೆ ಬದಲಾಗುವೆವು.
4. ಯೇಸು ನಮ್ಮ ಹಿರೀ ಕುರುಬನಾಗಿದ್ದಾನೆ, ಮತ್ತು ನಾವು "ಆತನು ಪಾಲಿಸುವ ಹಿಂಡೂ ಆಗಿದ್ದೇವೆ" (ಕೀರ್ತನೆ 100:3). ನಾವು ನಂಬಿಕೆಯಿಂದ ಆತನಲ್ಲಿ ಭರವಸವಿಡುವುದಾದರೆ ಮತ್ತು ಈ ಭೂಮಿ ಮೇಲೆ ಬದುಕಿರುವವರೆಗೂ ನಂಬಿಗಸ್ತಿಕೆಯಿಂದ (ಯೋಹಾನ 9:4) ಅಥವಾ ಆಕಾಶದೊಳಗಿನ ಮೇಘದೊಳಗಿಂದ ಆತನು ಬರುವವರೆಗೂ (ಮಾರ್ಕ 14:62, 1 ಥೆಸಲೋನಿಕ 4:17, ಪ್ರಕ. 1:7) ಆತನನ್ನು ಸೇವಿಸಿದರೆ, ಆಗ ನಾವು ದೇವಪ್ರಭಾವವೆಂಬ ಎಂದೂ ಬಾಡಿಹೋಗದ ಜಯಮಾಲೆಯನ್ನು ಹೊಂದುವೆವು (1 ಪೇತ್ರ 5:4). ಬೆಳಕಿನ ರಾಜ್ಯದೊಳಗಿನ ಬಾಧ್ಯತೆಯಲ್ಲಿ ಸೇರುವೆವು (ಕೊಲೆಸ್ಸೆ 1:12).

***ನಿಮ್ಮೊಳಗೆ ಈ ಪ್ರಶ್ನೆಗಳಿಗೆ ಉತ್ತರಿಸಿಕೊಳ್ಳಿರಿ***

1. ಮಹಾ ಆಜ್ಞೆ/ಆದೇಶವನ್ನು ನೆರವೇರಿಸಲು ಏನನ್ನು ಮಾಡದೆ ನೀವು "ಆಕಾಶದ ಕಡೆಗೆ ನೋಡುತ್ತಾ ನಿಂತಿರುವಿರಾ? ಅಥವಾ ನಂಬಿಗಸ್ತರಾಗಿ ಯೇಸುವನ್ನು ಹಿಂಬಾಲಿಸುತ್ತಾ ಆತನ ರಕ್ಷಣೆಯ ಕುರಿತ ಸಂದೇಶವನ್ನು (ಸುವಾರ್ತೆ) ಸಾರುತ್ತಿರುವಿರಾ?
2. ಯೇಸುವಿನ ಬರೋಣಕ್ಕಾಗಿ ಕಾದಿರುವಾಗ ನಿಮ್ಮ ಜೀವಿತವು "ಸ್ವಸ್ಥಚಿತ್ತವಾಗಿ, ನೀತಿವಂತಿಕೆಯಿಂದ ಮತ್ತು ಭಯಭಕ್ತಿಯುಳ್ಳ"ದ್ದಾಗಿದೆಯಾ?
3. ನೀವು ಯೇಸುವಿನ ಎರಡನೇ ಬರೋಣಕ್ಕಾಗಿ ಕಾತುರದಿಂದ ಕಾದಿರುವಿರಾ? ಯಾಕೆ? ಯಾಕೆ ಇಲ್ಲ?
4. ಇಂದು ನೀವು ಯೇಸು ಮತ್ತು ದೇವರ ರಾಜ್ಯದಲ್ಲಿನ ಆತನ ಪರಿಶುದ್ಧ ಜನರೊಂದಿಗಿನ ನಿಮ್ಮ ನಿತ್ಯವಾದ ಭವಿಷ್ಯದ ದೃಷ್ಟಿಕೋನದಲ್ಲಿ ಜೀವಿಸುತ್ತಿರುವಿರಾ (ಅ.ಕೃ. 20:33, ಎಫೆಸ 5:5)?

***ಪ್ರಾರ್ಥಿಸಿ***

ಕೆಲ ಸಮಯ ಪ್ರಾರ್ಥನೆಯಲ್ಲಿ ಕಳೆಯಿರಿ. ನಿಮ್ಮ ಪ್ರಾರ್ಥನೆಯ ಗಮನವು ಈ ಪಾಠದಲ್ಲಿ ಉದ್ಭವಿಸಿದ ಸಮಸ್ಯೆಗಳ ಮೇಲಿರಲಿ. ಏನೇ ಕಳಕಳಿಯಿದ್ದರೂ ಪ್ರಾರ್ಥನೆಯಲ್ಲಿ ದೇವರ ಮುಂದಿಡಿರಿ.

## ಶಿಕ್ಷಕರಿಗಾಗಿ ಸಲಹೆಗಳು

***ಕೆಳಕಂಡ ಐದು ವಿಧಗಳಲ್ಲಿ "ಯೇಸುವಿನ ಕುರಿತಾದ ಪಾಠಗಳನ್ನು" ಉಪಯೋಗಿಸಬಹುದಾಗಿದೆ.***

1. ತರಗತಿಯ ಧ್ಯಾನಕ್ಕಾಗಿ, ಉದಾ: "ಸುವಾರ್ತೆಯನ್ನು ಓದೋಣ" ತರಗತಿಯ ವೇಳೆ
2. ಒಂದು ತರಗತಿಯ (ಕಾಲೇಜಿನ) ರಿಟ್ರೀಟ್ ಗಾಗಿ
3. ಸಭೆಯ ರಿಟ್ರೀಟ್ ಗಾಗಿ
4. ಸಭೆಯಲ್ಲಿನ ಸತ್ಯವೇದ ಅಧ್ಯಯನ ಸರಣಿಗಾಗಿ
5. ಸಭೆಯಲ್ಲಿನ ಸಣ್ಣ ಗುಂಪುಗಳಿಗಾಗಿ

***ಚಿತ್ರಗಳು***

1. ಯಾವಾಗಲೂ ಚಿತ್ರಗಳ ಬಗ್ಗೆ ಮಾತನಾಡುವುದರೊಂದಿಗೆ ಪ್ರಾರಂಭಿಸಿರಿ. ಇದು ಭಾಗವಹಿಸುವವರ ಮನಸ್ಸುಗಳನ್ನು ತೆರೆಯುತ್ತದೆ. ಅವರ ಕೆಲವು ಹೇಳಿಕೆಗಳು ಪಾಠದ ವಿಷಯದಿಂದ ದೂರವಾಗಿದ್ದರೂ ಚಿಂತೆಯಿಲ್ಲ.
2. ದೊಡ್ಡ ಗಾತ್ರದ ಚಿತ್ರಗಳನ್ನು (ಪೋಸ್ಟರ್ ಸೈಜ್) ಬಳಸಿದರೆ ಒಳ್ಳೇದು. ಅವನ್ನು ಪ್ರತ್ಯೇಕವಾಗಿ ಉಪಯೋಗಿಸಿರಿ. ಇದು ಭಾಗವಹಿಸುವವರಿಗೆ ಚಿತ್ರಗಳ ಮೇಲೆ ಗಮನ ಹರಿಸುವಂತೆ ಸಹಾಯಿಸುತ್ತದೆ.

***ಸತ್ಯವೇದ ವಾಕ್ಯಗಳು***

ನೆನಪಿಡಿ, ಸತ್ಯವೇದದ ವಾಕ್ಯಗಳು ಓದುವುದಕ್ಕಾಗಿ ಮತ್ತು ವಿಮರ್ಶಿಸುವುದಕ್ಕಾಗಿವೆ ಅವನ್ನು ಬರೀ ಪ್ರಶ್ನೆಗಳಿಗೆ ಉತ್ತರಿಸುವ ಮೂಲವೆಂಬುದಾಗಿ ಕಾಣಬಾರದು.

***ವಿಮರ್ಶೆಗಳು***

ವಿಮರ್ಶೆಗಳೆಲ್ಲವೂ ನನ್ನ ಸ್ವಂತವಾದವುಗಳಾಗಿವೆ. ನೀವದನ್ನು ವಿಸ್ತರಿಸಬಹುದು ಅಥವಾ ಅದಕ್ಕೆ ಇನ್ನೂ ಸೇರಿಸಬಹುದು. ಸಮಯಕ್ಕನುಸಾರವಾಗಿ ಅವನ್ನು ಸೀಮಿತಗೊಳಿಸಬಹುದು.

***ಪ್ರಶ್ನೆಗಳು***

ಭಾಗವಹಿಸುವವರಿಗೆ ಅಗತ್ಯವೆನಿಸುವ ಪ್ರಶ್ನೆಗಳನ್ನು ನೀವು ಸೇರಿಸಬಹುದು.

***ಪ್ರಾರ್ಥನೆ***

ಪ್ರಾರ್ಥನೆಗೆ ಸಾಕಷ್ಟು ಸಮಯ ಕೊಡುವುದು ಪ್ರಾಮುಖ್ಯವಾದುದ್ದಾಗಿದೆ. ಪ್ರಾರ್ಥನಾ ಅವಧಿಯನ್ನು ಈ ರೀತಿಯಾಗಿ ವಿಭಾಗಿಸಬಹುದು:

- ಮೊದಲನೆಯದಾಗಿ ವೈಯಕ್ತಿಯ ಪ್ರಾರ್ಥನೆಗಾಗಿ ಸ್ವಲ್ಪ ಸಮಯ
- ಇಬ್ಬರು ಅಥವಾ ಸಣ್ಣ ಗುಂಪುಗಳಲ್ಲಿ ಹಂಚಿಕೊಳ್ಳಲು ಮತ್ತು ಪ್ರಾರ್ಥಿಸುವುದಕ್ಕಾಗಿ ಸ್ವಲ್ಪ ಸಮಯ.

# ಉತ್ತರಗಳು- ಯೇಸುಕ್ರಿಸ್ತನ ಆಗಮನದ ಕುರಿತಾದ ಹನ್ನೆರಡು ಅಧ್ಯಯನಗಳು

**1. ಉತ್ತರಗಳು: ಸ್ನಾನಿಕನಾದ ಯೋಹಾನನ ಜನನವನ್ನು ಮುಂತಿಳಿಸಿದ್ದು, ಲೂಕ 1:5-25**

**ಪ್ರಶ್ನೆಗೆ ಉತ್ತರಗಳು**

1. ಜಕರೀಯ ಮತ್ತು ಎಲಿಸಬೇತರ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 5-7):

   ಅ. ಅವರಿಬ್ಬರು ಯಾಜಕ ಮೂಲದವರಾಗಿದ್ದರು (ಆರೋನನ ಸಂತತಿ).

   ಆ. ಅವರಿಬ್ಬರು ಯೆಹೂದಿ ನಂಬಿಕೆಯ ಕಟ್ಟಾ ಹಿಂಬಾಲಕರಾಗಿದ್ದರು.

   ಇ. ಅವರಿಗೆ ಮಕ್ಕಳಿರಲಿಲ್ಲ.

   ಈ. ಅವರಿಬ್ಬರೂ ದಿನಹೋದವರಾಗಿದ್ದರು (ವೃದ್ಧರಾಗಿದ್ದರು).

2. ದೇವಾಲಯದಲ್ಲಿ ಜಕರೀಯನ ವೃತ್ತಿಯು ವಾರದಲ್ಲಿ ದೇವಾಲಯದೊಳಗೆ ಹೋಗಿ ದೂಪವನ್ನು ಅರ್ಪಿಸುವುದಾಗಿತ್ತು. ಚೀಟಿನ ಮೂಲಕ ಆತನು ಈ ವೃತ್ತಿಗೆ ಆರಿಸಲ್ಪಟ್ಟಿದ್ದನು (ವ. 8-10).

3. ಗಬ್ರಿಯೇಲ ದೂತನು ಯೋಹಾನನ ಬಗ್ಗೆ ಜಕರೀಯನಿಗೆ ಈ ಸಂಗತಿಗಳನ್ನು ಹೇಳಿದನು (ವ. 11-17):

   ಅ. ಅವರ ಮಗನ ಜನನವು ದೇವರು ಅವರ ವಿಜ್ಞಾಪನೆಗೆ ಕೊಟ್ಟ ಉತ್ತರವಾಗಿರುವುದು.

   ಆ. ಎಲಿಸಬೇತಳು ಗರ್ಭಿಣಿಯಾಗಿ ಮಗುವನ್ನು ಹೆತ್ತು ಅದಕ್ಕೆ ಯೋಹಾನನೆಂದು ಹೆಸರಿಡುವರು.

   ಇ. ಯೋಹಾನನು ತನ್ನ ತಂದೆತಾಯಿಗಳಿಗೆ ಸಂತೋಷವೂ, ಉಲ್ಲಾಸವೂ ಮತ್ತು ಅನೇಕ ಜನರಿಗೆ ಆಶೀರ್ವಾದವಾಗಿರುವನು.

   ಈ. ಯೋಹಾನನು ಕರ್ತನ ದೃಷ್ಟಿಯಲ್ಲಿ ಮಹಾಪುರುಷನಾಗಿರುವನು. ಹುಟ್ಟಿದ ದಿನದಿಂದಲೇ ಆತನು ದೇವರಿಗಾಗಿ ಪ್ರತ್ಯೇಕಿಸಲ್ಪಟ್ಟವನಾಗಿ ಪವಿತ್ರಾತ್ಮಭರಿನಾಗಿರುವನು.

   ಉ. ಇಸ್ರಾಯೇಲ್ಯರಲ್ಲಿ ಅನೇಕರನ್ನು ಕರ್ತನ ಕಡೆಗೆ ತಿರುಗಿಸುವುದಕ್ಕೆ ಆತನು ದೇವರಿಂದ ಉಪಯೋಗಿಸಲ್ಪಡುವನು.

   ಊ. ಆತನು ವಾಗ್ದಾನ ಮಾಡಲ್ಪಟ್ಟ ಎಲೀಯನಾಗಿದ್ದು, ದೇವರಿಗೆ ಮುಂದೂತನಾಗಿದ್ದು ಇಸ್ರಾಯೇಲ್ಯರ ಹೃದಯಗಳನ್ನು ತಿರುಗಿಸಿ ಅವರನ್ನು ಕರ್ತನ ಬರೋಣಕ್ಕಾಗಿ ಸಿದ್ಧಪಡಿಸುವನು.

4. ದೇವಾಲಯದಲ್ಲಿನ ಅನುಭವದ ನಂತರ ಜಕರೀಯನಿಗೆ ಮಾತನಾಡಲಾಗಲಿಲ್ಲ (18-22):

   ಅ.ಗಬ್ರಿಯೇಲನು ನಿಜವಾಗಲೂ ದೇವರಿಂದ ಸಂದೇಶವನ್ನು ತಂದನೆಂಬುದಕ್ಕೆ ಅದು ಸಂಕೇತವಾಗಿತ್ತು.

   ಆ. ನಂಬಿಕೆಯ ಕೊರತೆಯಿಂದ ಜಕರೀಯನಿಗೆ ಇದೊಂದು ಶಿಕ್ಷೆಯಾಗಿತ್ತು.

5. ತಾನು ಗರ್ಭಿಣಿಯಾಗಿದ್ದೇನೆಂಬುದನ್ನು ಎಲಿಸಬೇತಳು ತಿಳಿದಾಗ, ನಿಜವಾಗಲೂ ದೇವರು ತನ್ನ ಪ್ರಾರ್ಥನೆಯನ್ನು ಕೇಳಿ ನನ್ನ ಅವಮಾನವನ್ನು ಪರಿಹರಿಸಿದ್ದಾನೆಂದು ಗ್ರಹಿಸಿಕೊಂಡಳು (ವ. 23-25). ದೇವರ ಅದ್ಭುತವಾದ ಕೃಪೆಯನ್ನು ಆಕೆ ತಿಳಿದುಕೊಂಡಳು.

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಟಿಪ್ಪಣಿಗಳ ಮೇಲಿನ ಉತ್ತರಗಳು**

1. –
2. –

3. ಜಕರೀಯ ಮತ್ತು ಎಲಿಸಬೇತರಿಬ್ಬರೂ "ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು (ವ. 6) ಎಂಬುದಾಗಿ ವರ್ಣಿಸಲಾಗಿದೆ. ಈ ಹೇಳಿಕೆಯು ಹಿಂದಿನ ಪದಗಳ ಮೂಲಕ ಆತನಿದನ್ನು ವಿವರಿಸುತ್ತಾನೆ. ಅವರಿಬ್ಬರೂ ಕರ್ತನ ಎಲ್ಲಾ ಆಜ್ಞೆಗಳನ್ನು ನೇಮನಿಷ್ಠೆಗಳನ್ನು ಕೈಗೊಂಡು ತಪ್ಪಿಲ್ಲದೆ ನಡಕೊಂಡರು.

4. ತಮಗೊಂದು ಮಗು ಹುಟ್ಟಲಿದೆ ಎಂಬುದನ್ನು ತಿಳಿದಾಗ ಜಕರೀಯ ಮತ್ತು ಎಲಿಸಬೇತರ ಪ್ರತಿಕ್ರಿಯೆ ಇಂತಿತ್ತು:

   ಅ. ಜಕರೀಯನು ಸಂದೇಹದೊಂದಿಗೆ ಪ್ರತಿಕ್ರಯಿಸಿದನು. ಗಬ್ರಿಯೇಲನ ಮೂಲಕ ದೇವರು ತಂದ ಸಂದೇಶವನ್ನು ಆತನು ಪ್ರಶ್ನಿಸಿದನು (ವ. 18).

   ಆ. ಎಲಿಸಬೇತಳು ಕೃತಜ್ಞತೆಯೊಂದಿಗೆ ಪ್ರತಿಕ್ರಯಿಸಿದಳು. ದೇವರು ತನ್ನ ಮೊರೆಗೆ ಕಿವಿಗೊಟ್ಟು ಕೃಪಾಪೂರ್ಣನಾಗಿ ತಮ್ಮ ಅವಮಾನಕರ ಪರಿಸ್ಥಿತಿಯ ಮಧ್ಯೆ ಪ್ರವೇಶಿಸಿದನೆಂಬುದಾಗಿ ಅರಿತುಕೊಳ್ಳುತ್ತಾಳೆ.

5. ಈ ವಾಕ್ಯಭಾಗದಲ್ಲಿ ನಾವು ಬಂಜೆತನ ಯಾವಾಗಲೂ ಪಾಪದ ಕಾರಣದಿಂದ ಬರುವುದಿಲ್ಲವೆಂದು ಕಾಣಬಹುದು. ಜಕರೀಯ ಮತ್ತು ಎಲಿಸಬೇತರಿಬ್ಬರೂ ದೇವರ ಆಜ್ಞೆಗಳನ್ನು ನಂಬಿಗಸ್ತರಾಗಿ ಪಾಲಿಸುತ್ತಿದ್ದರು. ಆದರೂ ಅವರಿಗೆ ಮಕ್ಕಳಿರಲಿಲ್ಲ. ಆದರೂ ದೇವರು ಮಾನವನ ಜೀವನವನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿದ್ದಾನೆ. ಹಾಗಾಗಿ ನಾವು ಮಕ್ಕಳಿಲ್ಲದೆ ಬಳಲುವಾಗಲೂ ಸಹ ಆತನೆಡೆಗೆ ತಿರುಗಿಕೊಂಡು ನಮ್ಮ ಪರವಾಗಿ ಮಧ್ಯಸ್ಥಿಕೆ ವಹಿಸಬೇಕೆಂದು ಬೇಡಬಹುದು. ಆಕೆಯು ಮಕ್ಕಳನ್ನು ಹೆರುವ ದಿನಗಳು ಮುಗಿದುಹೋದರೂ ಸಹ ಆತನು ಜಕರೀಯ ಮತ್ತು ಎಲಿಸಬೇತರ ಪ್ರಾರ್ಥನೆಯನ್ನು ಕೇಳುತ್ತಾನೆ.

**ವಿಮರ್ಶೆ ಮತ್ತು ಸಿದ್ಧಪಡಿಸುವಿಕೆ ಟಿಪ್ಪಣಿಗಳು**

1. ***ದೇವರ ನಂಬಿಗಸ್ತಿಕೆ*** ಎಂಬ ಅಧ್ಯಯನಕ್ಕೆ ಇದೊಂದು ರೂಪುರೇಖೆಯಾಗಬಲ್ಲದು:
   - ದೇವರು ತನ್ನ ವಾಗ್ದಾನಕ್ಕೆ ನಂಬಿಗಸ್ತನಾಗಿದ್ದಾನೆ
   - ದೇವರು ಪ್ರಾರ್ಥನೆಗೆ ಉತ್ತರಕೊಡುವ ದೇವರಾಗಿದ್ದಾನೆ
   - ದೇವರು ತನ್ನದೇ ಆದ ಸಮಯದಲ್ಲಿ ತನ್ನ ವಾಗ್ದಾನಗಳನ್ನು ನೆರವೇರಿಸಿ, ನಮ್ಮ ಪ್ರಾರ್ಥನೆಗೆ ಉತ್ತರಕೊಡುವನು
2. ***ಶುಭವಾರ್ತೆ*** ಎಂಬ ಸರಳ ಅಧ್ಯಯನಕ್ಕೆ ಇದೊಂದು ರೂಪುರೇಖೆಯಾಗಬಲ್ಲದು:
   - ಜಕರೀಯನು ಮಗನ ಕುರುತಾಗಿ ಶುಭವಾರ್ತೆಯನ್ನು ಕೇಳಿದನು
   - ಇಸ್ರಾಯೇಲು ಮೆಸ್ಸೀಯನ ಕುರಿತ ಶುಭವಾರ್ತೆಯನ್ನು ಕೇಳಿತು
   - ಮನುಷ್ಯರು ಲೋಕದ ರಕ್ಷಕನ ಬರೋಣದ ಕುರಿತ ಶುಭವಾರ್ತೆಯನ್ನು ಕೇಳಿದರು
3. **ಪವಿತ್ರಾತ್ಮನ ಪಾತ್ರ** ಎಂಬ ಸರಳ ಅಧ್ಯಯನಕ್ಕೆ ಇದೊಂದು ರೂಪುರೇಖೆಯಾಗಬಲ್ಲದು:
   - ಪವಿತ್ರಾತ್ಮನು ದೇವರ ಪ್ರವಾದಿಗಳ ಮೂಲಕ ಮಾತನಾಡುತ್ತಾನೆ (ಮಲಾಕಿ)
   - ಪವಿತ್ರಾತ್ಮನು ದೇವರ ಸೇವಕರ ಮೂಲಕ ಕಾರ್ಯಮಾಡುತ್ತಾನೆ (ಸ್ನಾನಿಕನಾದ ಯೋಹಾನ)
     - ಆತ್ಮಭರಿತ ಜೀವನವು ದೇವಜನರಿಗೆ ಒಂದು ಮಾದರಿಯಾಗಿರಬೇಕು
     - ದೇವಜನರಿಗೆ ಸಂತೋಷ ಮತ್ತು ಉಲ್ಲಾಸವನ್ನು ತರುವ ಆತ್ಮಭರಿತ ಜೀವನ
     - ದೇವಜನರು ತಿರುಗಿ ದೇವರೆಡೆಗೆ ಬರಲು ಸಹಾಯ ಮಾಡುವ ಆತ್ಮಭರಿತ ಜೀವನ
     - ಯೇಸುವು ಲೋಕದ ರಕ್ಷಕನಾಗಿದ್ದಾನೆಂಬುದನ್ನು ಸೂಚಿಸುವ ಆತ್ಮಭರಿತ ಜೀವನ

## 2. ಉತ್ತರಗಳು: ಯೇಸುವಿನ ಜನನವನ್ನು ಮುಂತಿಳಿಸಿದ್ದು, ಲೂಕ 1:26-28

**ಪ್ರಶ್ನೆಗಳಿಗೆ ಉತ್ತರಗಳು**

1. ಯೋಸೇಫನ ಬಗ್ಗೆ ನಾವು ಎರಡು ಸಂಗತಿಗಳನ್ನು ಕಲಿಯುತ್ತೇವೆ (ವ. 26-28):

   ಅ. ಆತನು ಮರಿಯಳಿಗೆ ನಿಶ್ಚಿತಾರ್ಥವಾಗಿದ್ದ ವರನಾಗಿದ್ದನು

   ಆ. ಆತನು ದಾವೀದನ ಮನೆತನದವನಾಗಿದ್ದನು

2. ಗಬ್ರಿಯೇಲನು ಮರಿಯಳಿಗೆ ಯೇಸುವಿನ ಬಗ್ಗೆ ಈ ಸಂಗತಿಗಳನ್ನು ಹೇಳಿದನು:

   ಅ. ಆತನ ಹೆಸರು "ಯೇಸು" ಎಂಬುದಾಗಿರಬೇಕು ("ಕರ್ತನು ರಕ್ಷಿಸುತ್ತಾನೆ" ಎಂದರ್ಥ)

   ಆ. ಆತನು ಮಹಾಪುರುಷನಾಗುವನು, ಆತನು ಇಸ್ರಾಯೇಲನ್ನು ಆಳುವನು ಮತ್ತು ಆತನ ರಾಜ್ಯವು ಸದಾಕಾಲವೂ ಇರುವುದು.

   ಇ. ಆತನು ಪರಾತ್ಪರನ ಕುಮಾರನೂ ಮತ್ತು ದೇವಕುಮಾರನೂ ಎನಿಸಿಕೊಳ್ಳುವನು ("ಪರಾತ್ಪರನು" ಎಂಬುದು ಹಳೇ ಒಡಂಬಡಿಕೆಯಲ್ಲಿ ದೇವರಿಗಾಗಿನ ಒಂದು ಹೆಸರಾಗಿದೆ)

   ಈ. ಆತನು ಪುರಷನಿಂದ ಹುಟ್ಟುವುದಿಲ್ಲ (ಮರಿಯಳು ಕನ್ಯೆಯಾಗಿದ್ದಳು) ಆದರೆ ಪವಿತ್ರಾತ್ಮ ದೇವರಿಂದ ಹುಟ್ಟುವನು ("ಪವಿತ್ರಾತ್ಮ ನಿನ್ನ ಮೇಲೆ ಬರುವದು" ಮತ್ತು "ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವುದು")

3. ಗಬ್ರಿಯೇಲನ ಭೇಟಿ ಮತ್ತು ಸಂದೇಶಕ್ಕೆ ಮರಿಯಳು ಈ ಮೂರು ರೀತಿಯಲ್ಲಿ ಪ್ರತಿಕ್ರಯಿಸಿದಳು (ವ. 26-38):

   ಅ. ಮೊದಲನೆಯದಾಗಿ ಆಕೆ ದೇವದೂತನ ಭೇಟಿಗೆ ಗಲಿಬಿಲಿಗೊಂಡು ಚಿಂತಿತಳಾಗುತ್ತಾಳೆ. ಆಕೆ ಭಯಬೀತಳಾಗಿದ್ದಿರಬಹುದು, ಯಾಕೆಂದರೆ ದೇವದೂತನು ಆಕೆಗೆ "ಹೆದರಬೇಡ" ಎಂದು ಹೇಳುತ್ತಾನೆ.

   ಆ. ಅನಂತರ ಆಕೆ ತಾನು ಇನ್ನೂ ಕನ್ಯೆಯಾಗಿರುವಾಗ ತನಗೊಂದು ಮಗನು ಹೇಗೆ ಹುಟ್ಟುವನೆಂದು ಅಚ್ಚರಿಗೊಂಡಳು.

   ಇ. ಕೊನೆಯದಾಗಿ ಆಕೆ ದೇವದೂತನ ವಿವರಣೆಯನ್ನು ಒಪ್ಪಿಕೊಂಡು "ನಾನು ಕರ್ತನ ದಾಸಿ" ಎಂದು ತನ್ನ ಜೀವಿತಕ್ಕಾಗಿನ ದೇವರ ಯೋಜನೆಗೆ ತನ್ನನ್ನು ಒಪ್ಪಿಸಿಕೊಡುತ್ತಾಳೆ.

**ಆಲೋಚಿಸಿರಿ ಮತ್ತು ಚರ್ಚಿಸಿರಿ , ಟಿಪ್ಪಣಿಗಳ ಮೇಲಿನ ಉತ್ತರಗಳು**

1. –
2. ಗಬ್ರಿಯೇಲನಿಗೆ ಮರಿಯಳ ಪ್ರಶ್ನೆಯನ್ನು (ವ. 34) ಜಕರೀಯನೊಂದಿಗೆ ಹೋಲಿಸಿದಾಗ (ವ. 18):

   ಅ. ಮೇಲ್ನೋಟಕ್ಕೆ ಅವರಿಬ್ಬರ ಪ್ರಶ್ನೆಯು ಒಂದೇತರಹವಾಗಿದೆ. ದೇವದೂತನ ಸಂದೇಶ ಹೇಗೆ ನಿಜವಾಗುತ್ತದೆಂಬುದಾಗಿ ಅವರಿಬ್ಬರು ಅಚ್ಚರಿಗೊಂಡರು. ಮರಿಯಳೊಬ್ಬ ಕನ್ಯೆಯಾಗಿದ್ದುದ್ದರಿಂದ ಆಕೆ ಹೇಗೆ ಮಗು ಹೆರಲು ಸಾಧ್ಯ? ಜಕರೀಯನು ಮುದಕನಾಗಿದ್ದನು ಮತ್ತು ಆತನ ಪತ್ನಿಯಾದ ಎಲಿಸಬೇತಳು ಮಗು ಹೆರುವುದಕ್ಕೆ ಪ್ರಾಯ ಮೀರಿದವಳಾಗಿದ್ದರಿಂದ ಅವರಿಗೆ ಹೇಗೆ ಮಗು ಹುಟ್ಟಲು ಸಾಧ್ಯ?

   ಆ. ಆದರೆ ಅವರಿಬ್ಬರೂ ಸಹ ವಿಭಿನ್ನ ಮನೋಭಾವದಿಂದ ಪ್ರಶ್ನೆಯನ್ನು ಕೇಳಿದರೆಂಬುದನ್ನು ಈ ಪ್ರಶ್ನೆಗಳ ಒಂದು ವಿಶಾಲವಾದ ಹಿನ್ನಲೆಯು ತಿಳಿಸುತ್ತದೆ. ಜಕರೀಯನು ಸಂದೇಹದ ಮನೋಭಾವದಿಂದ ಪ್ರಶ್ನೆ ಕೇಳುತ್ತಾನೆ (ವ. 20). ಹಾಗಾಗಿ ಆತನಿಗೆ ಶಿಕ್ಷೆ ಸಹ ಆಗಿರುವಂತ ಒಂದು ಸೂಚನೆಯನ್ನು ಕೊಡಲಾಯಿತು: ಆತನು ಮಾತನಾಡುವ ಸಾಮಾರ್ಥ್ಯವನ್ನು ಕಳಕೊಳ್ಳುತ್ತಾನೆ. ಮರಿಯಳು

ವಿಸ್ಮಯ ಮತ್ತು ಕುತೂಹಲದಿಂದ ಪ್ರಶ್ನಿಸುತ್ತಾಳೆ, ಆದರೆ ದೂತನ ಸಂದೇಶವನ್ನು ಆಕೆ ನಂಬುತ್ತಾಳೆ (ವ. 45). ಹಾಗಾಗಿ ಆಕೆ ಧನ್ಯಳಾದಳು.

3. ಈ ಕಥೆಯಲ್ಲಿ ಅನೇಕ ವಿಸ್ಮಯಕಾರಿ ಸಂಗತಿಗಳಿವೆ, ಉದಾಹರಣೆಗೆ:

ಅ. ಯೇಸುವಿನ ಗುರುತಿನ ರಹಸ್ಯ: ಆತನು ಮರಿಯಳ ಮಗನು, ಹಾಗಾಗಿ ಆತನು ನಿಜವಾಗಿ ಮನುಷ್ಯನಾಗಿದ್ದಾನೆ. ಆದರೆ ಆತನು ದೇವರ ಮಗ ಸಹ ಆಗಿದ್ದಾನೆ (ಪವಿತ್ರಾನಿಂದ ಗರ್ಭಧರಿಸಿದವನು), ಹಾಗಾಗಿ ಆತನು ನಿಜವಾಗಿ ದೇವರಾಗಿದ್ದಾನೆ. ಈ ಮರ್ಮವನ್ನು ನಾವು ನಮ್ಮ ಈ ಮನಸ್ಸಿನಿಂದ ಪೂರ್ತಿಯಾಗಿ ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ, ಆದರೆ ಈ ಸತ್ಯವನ್ನು ನಾವು ನಂಬಿಕೆಯಿಂದ ಒಪ್ಪಬಹುದಾಗಿದೆ.

ಆ. ಯೇಸುವಿನ ರಾಜ್ಯದ ವ್ಯಾಪ್ತಿ: "ಸದಾಕಾಲ" ಮತ್ತು "ಅಂತ್ಯವೇ ಇಲ್ಲ" ಎಂಬ ಹೇಳಿಕೆ ಮುಖ್ಯವಾಗಿ ಸಮಯವನ್ನು ಸೂಚಿಸುತ್ತದೆ, ತನ್ನ ಮಗನ ಆಳ್ವಿಕೆಯ ಮೂಲಕವಾಗಿರುವ ದೇವರ ರಾಜ್ಯವು ನಿತ್ಯವಾದುದ್ದಾಗಿದೆ. ಆದರೆ ಕೀರ್ತನೆ 2:7-8 ರಲ್ಲಿ ದೇವರು ತನ್ನ ಮಗನಿಗೆ ಮಾಡಿರುವ ವಾಗ್ದಾನವನ್ನು ಸಹ ನಾವು ನೆನಪುಮಾಡಿಕೊಳ್ಳಬೇಕು: "ನನಗೆ *ನೀನು ಮಗನು;*

*ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ.*
*ನೀನು ಕೇಳಿಕೊಂಡರೆ, ನಾನು ಅನ್ಯಜನಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು.*
*ಭೂಮಿಯ ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ತ್ಯವಾಗಿ ಕೊಡುವೆನು".*

ಇ. ದೇವರು ತನ್ನ ನರಾವತಾರಕ್ಕಾಗಿ ಮರಿಯಳನ್ನು ಒಂದು ಪಾತ್ರೆಯನ್ನಾಗಿ ಉಪಯೋಗಿಸುತ್ತಾನೆ: ದೇವರ ಮಾರ್ಗಗಳು ರಹಸ್ಯಮಯವಾಗಿವೆ. ಮರಿಯಳು ರಾಜನ ಆಸ್ಥಾನದಲ್ಲಿ ಒಬ್ಬ ಬಲಿಷ್ಠ ರಾಣಿಯಾಗಿರಲಿಲ್ಲ, ಆದರೆ ಆಕೆಯು ಸಣ್ಣ ಹಳ್ಳಿಯೊಂದರಲ್ಲಿನ ಒಂದು ಸರಳವಾದ ಮನೆಯಲ್ಲಿನ ಒಬ್ಬ ಸಾಮಾನ್ಯ ಹುಡುಗಿಯಾಗಿದ್ದಳು. ಹೀಗೆ ದೇವರು ತನ್ನ ರಾಜ್ಯದ ವಿಸ್ತರಣೆಗಾಗಿ ಇಂದು ನಮ್ಮನ್ನು ಸಹ ಉಪಯೋಗಿಸಬಲ್ಲನು.

ಈ. ಮರಿಯಳ ದೀನತೆ ಮತ್ತು ದೇವರ ಕರೆಯ ಸ್ವೀಕಾರ: ಆಕೆಯ ದಾಸಿಯ ಸ್ವಭಾವವು ನಮಗೊಂದು ದೊಡ್ಡ ಮಾದರಿಯಾಗಿದೆ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ***ಮರಿಯಳು – ಕರ್ತನ ದಾಸಿ*** ಎಂಬ ಒಂದು ಸರಳವಾದ ಅಧ್ಯಯನಕ್ಕೆ ಇದೊಂದು ರೂಪುರೂಖೆಯಾಗಬಲ್ಲದು:
   - ಮರಿಯಳ ಹಿನ್ನಲೆ
   - ದೇವದೂತನ ಭೇಟಿ: ಮರಿಯಳ ಅಚ್ಚರಿ, ಗಲಿಬಿಲಿ, ಭಯ, ಪ್ರಶ್ನೆಗಳು, ಸ್ವೀಕಾರ
   - ಮರಿಯಳು ತನಗಾಗಿನ ದೇವರ ಚಿತ್ತವನ್ನು ಒಪ್ಪಿಕೊಂಡಿದ್ದು ಆಕೆಯನ್ನು ನಿಜವಾದ ದಾಸಿಯಾಗಿಸಿತು
   - ನಮ್ಮ ಬಗ್ಗೆ ಏನು? ದೇವರ ಸೇವಕರಾಗಲು ನಾವು ಸಿದ್ಧರಿದ್ದೇವಾ?
2. ***ಯೇಸು – ಮರಿಯಳು ಮತ್ತು ದೇವರ ಮಗನು*** ಎಂಬ ಸರಳವಾದ ಅಧ್ಯಯನಕ್ಕೆ ಇದೊಂದು ರೂಪುರೇಖೆಯಾಗಬಲ್ಲದು:
   - ಯೇಸು - ಮರಿಯಳ ಮಗನು
   - ಯೇಸು - ದೇವರ ಮಗನು
   - ಯೇಸು - ರಕ್ಷಕನು
   - ಯೇಸು – ಆತನ ರಾಜ್ಯ
   - ಯೇಸು ನಮಗೇನಾಗಿದ್ದಾನೆ (ಮನುಷ್ಯಕುಮಾರನು, ರಕ್ಷಕ, ಮತ್ತು ರಾಜ)?

## 3. ಉತ್ತರಗಳು: ಮರಿಯಳು ಎಲಿಸಬೇತಳನ್ನು ಸಂಧಿಸಿದ್ದು, ಲೂಕ 1:39-56

### ಪ್ರಶ್ನೆಗಳಿಗೆ ಉತ್ತರಗಳು

1. ಈವಾಕ್ಯಭಾಗವು ಎರಡು ಭಾಗಗಳನ್ನು ಒಳಗೊಂಡಿದ್ದು ಅವು ಇಂತಿವೆ:

   ಅ. ವಚನ 39-45: ಮರಿಯಳು ಎಲಿಸಬೇತಳನ್ನು ಸಂಧಿಸಿ, ಆಕೆಯೊಂದಿಗೆ ಮೂರು ತಿಂಗಳುಗಳ ಕಾಲ ಉಳಿಯುತ್ತಾಳೆ (ವ. 56)

   ಆ. ವಚನ 46-55: ದೇವರನ್ನು ಕೊಂಡಾಡುವ ಮರಿಯಳ ಹಾಡು
2. –
3. ಮರಿಯಳು ಎಲಿಸಬೇತಳ ಮನೆಗೆ ಹೋಗಿ ಆಕೆಯನ್ನು ವಂದಿಸಿದಾಗ ಎಲಿಸಬೇತಳ ಗರ್ಭದಲ್ಲಿದ್ದ ಕೂಸು ಉಲ್ಲಾಸದಿಂದ ಹಾರಾಡುತ್ತದೆ (ವ. 39-48). ಎಲಿಸಬೇತಳು ಪವಿತ್ರಾತ್ಮಭರಿತಳಾಗಿ ಮರಿಯಳನ್ನು ಹರಸುತ್ತಾಳೆ.
4. ಮರಿಯಳು ಹೊತ್ತಿದ್ದ ಮಗುವನ್ನು ಎಲಿಸಬೇತಳು ಈ ರೀತಿಯಾಗಿ ವರ್ಣಿಸುತ್ತಾಳೆ (ವ. 39-45):

   ಅ. ಆಶೀರ್ವಾದ ಹೊಂದಿದ ಕೂಸು

   ಆ. ನನ್ನ ಸ್ವಾಮಿ , ಇದು ಯೆಹೂದ್ಯರು ದೇವರಿಗಾಗಿ ಬಳಸಿದ ಪದ

   ಇ. ಮರಿಯಳಲ್ಲಿ ದೇವರ ಕಾರ್ಯ (ಮಾತಿನಂತೆ)
5. ಮರಿಯಳು ಅಲ್ಲಿ ಮೂರು ತಿಂಗಳು ಇರುತ್ತಾಳೆ (ವ. 56). ತಾನು ಗಲಿಲಾಯದಲ್ಲಿನ ನಜರೇತಿಗೆ ಹಿಂತಿರುಗುವುದಕ್ಕಿಂತ ಮೊದಲು, ಸ್ನಾನಿಕನಾದ ಯೋಹಾನನು ಹುಟ್ಟುವವರೆಗೆ ಆಕೆ ಎಲಿಸಬೇತಳೊಂದಿಗೆ ಇದ್ದಿರಬಹುದು.

### ಯೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ದೇವರು ತನ್ನ ದಾಸಿಯ ದೀನಸ್ಥಿತಿಯ ಮೇಲೆ ದಯೆತೋರಿಸಿದ್ದಕ್ಕಾಗಿ ಮರಿಯಳು ದೇವರನ್ನು ಕೊಂಡಾಡುತ್ತಾಳೆ (ವ. 46-47).
2. ಶಕ್ತನಾಗಿರುವ ದೇವರು ಆಕೆಯ ಜೀವನದಲ್ಲಿ ಮಾಡಿದ ದೊಡ್ಡ ಅದ್ಭುತಕ್ಕಾಗಿ ಭವಿಷ್ಯದ ಎಲ್ಲಾ ಜನಾಂಗಗಳು ಆಕೆಯನ್ನು ಧನ್ಯಳೆಂಬುದಾಗಿ ಕರೆಯುವರು (ವ. 48-49).
3. ತನ್ನ ಹಾಡಿನಲ್ಲಿ ಮರಿಯಳು ದೇವರನ್ನು ಈ ರೀತಿ ವರ್ಣಿಸುತ್ತಾಳೆ (ವ. 46-55):

   ಅ. ಮರಿಯಳಂತ ದೀನ ವ್ಯಕ್ತಿಯ ಮೇಲೆ ಸಹ ದೇವರು ಲಕ್ಷ್ಯವಿಡುತ್ತಾನೆ

   ಆ. ಮರಿಯಳೊಂದಿಗೆ ಸಹ ದೇವರು ದೊಡ್ಡ ಕಾರ್ಯವನ್ನು ಮಾಡಲು ಶಕ್ತನಾಗಿದ್ದಾನೆ

   ಇ. ದೇವರು ಕರುಣಾಮಯನು, ಆತನ ದಯೆಯು ತಲಾತಲಾಂತರದವರೆಗೂ ಇರುವುದು

   ಈ. ದೇವರು ಅಹಾಂಕಾರಿಗಳನ್ನು ಚದುರಿಸಿಬಿಡುತ್ತಾನೆ

   ಉ. ದೇವರು ಪ್ರಭುಗಳನ್ನು ಸಿಂಹಾಸನದಿಂದ ದೊಬ್ಬಿ ದೀನರನ್ನು ಉನ್ನತಸ್ಥಿತಿಗೆ ತರುತ್ತಾನೆ

   ಊ. ದೇವರು ಹಸಿದವರನ್ನು ತೃಪ್ತಿಪಡಿಸುತ್ತಾನೆ (ವಿಶೇಷವಾಗಿ ಆತನ ರಾಜ್ಯಕ್ಕಾಗಿ ಮತ್ತು ನೀತಿಗಾಗಿ ಹಸಿದವರು) ಮತ್ತು ಸ್ಥಿತಿವಂತರನ್ನು ಬರಿಗೈಯಲ್ಲಿ ಕಳುಹಿಸುತ್ತಾನೆ (ವಿಶೇಷವಾಗಿ ದೇವರನ್ನು ಮತ್ತು ಆತನ ರಕ್ಷಣೆಯನ್ನು ಬಯಸದವರನ್ನು)

   ಋ. ದೇವರು ತನ್ನ ಜನರಿಗೆ ಮಾಡಿದ ವಾಗ್ದಾನಗಳಿಗೆ ನಂಬಿಗಸ್ತನಾಗಿದ್ದಾನೆ

### ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ಯೋಹಾನ ಮತ್ತು ಯೇಸುವಿನ ಕುರಿತಾದ ಒಂದು ಅಧ್ಯಯನಕ್ಕೆ ಇದೊಂದು ರೂಪುರೇಖೆಯಾಗಬಲ್ಲದು:
   - ಯೋಹಾನನ ಬಗ್ಗೆ ಗಬ್ರಿಯೇಲನು ಜಕರೀಯನಿಗೆ ಹೇಳಿದ ಸಂಗತಿಗಳ ಸಾರಾಂಶ (ಲೂಕ 1:11-17)
   - ಯೇಸುವಿನ ಬಗ್ಗೆ ಗಬ್ರಿಯೇಲನು ಮರಿಯಳಿಗೆ ಹೇಳಿದ ಸಂಗತಿಗಳ ಸಾರಾಂಶ (ಲೂಕ 1:29-38)

- ಮರಿಯಳು ಮತ್ತು ಎಲಿಸಬೇತರ ಭೇಟಿಯ ಸಮಯದಲ್ಲಿಆದ ಘಟನೆಗಳ ಸಾರಾಂಶ (ಲೂಕ 1:39-45)
- ಕೆಲವು ಮುಖ್ಯಾಯದ ವಿಮರ್ಶೆಗಳು:
  - ತನ್ನ ಒಡೆಯನು (ಸ್ವಾಮಿ) ಈಗಾಗಲೇ ತನ್ನ ತಾಯಿಯ ಗರ್ಭದಲ್ಲಿದ್ದಾನೆಂಬುದನ್ನು ಯೋಹಾನನು ತಿಳಿದುಕೊಳ್ಳುತ್ತಾನೆ
  - ಪವಿತ್ರಾತ್ಮನು ಯೋಹಾನನ ಮೂಲಕ ಕಾರ್ಯಮಾಡುತ್ತಾ, ಅವನ ಜನನಕ್ಕಿಂತ ಮೊದಲೇ ಆತನ ಮುಂದಿನ ಸೇವೆಗಾಗಿ ಆತನನ್ನು ಸಿದ್ಧಪಡಿಸುತ್ತಿದ್ದನು
  - ದೇವರು ಯೋಹಾನ ಮತ್ತು ಯೇಸುವಿನಗಾಗಿ ಉನ್ನತವಾದ ಯೋಜನೆಗಳನ್ನು ಇಟ್ಟುಕೊಂಡಿದ್ದನು. ಅವರು ಹುಟ್ಟುವುದಕ್ಕಿಂತ ಮೊದಲೇ ಆ ಯೋಜನೆಗಳನ್ನು ಸಿದ್ಧಪಡಿಸಲಾಗಿತ್ತು.
  - ನಮ್ಮ ಕುರಿತಾಗಿ ಏನು? ನಾವು ಮರಿಯಳು ಮತ್ತು ಎಲಿಸಬೇತರಂತಿದ್ದೇವಾ? ಅವರು ದೇವರಿಂದ ಉಪಯೋಗಿಸಲ್ಪಡುವುದಕ್ಕೆ ಸಿದ್ಧರಿದ್ದರು. ತಮ್ಮ ಜೀವಿತಗಳ ಮೂಲಕ ದೇವರು ಕಾರ್ಯಮಾಡುತ್ತಿದ್ದಾನೆಂಬುದನ್ನು ಅವರು ತಿಳಿದುಕೊಂಡರು. ಗರ್ಭತಾಳಿದ ದಿನದಿಂದಲೇ ತಮ್ಮ ಮಕ್ಕಳಿಗಾಗಿ ದೇವರು ಯೋಜನೆಯನ್ನು ಇಟ್ಟುಕೊಂಡಿದ್ದಾನೆಂಬುದನ್ನು ಸಹ ಅವರು ಅರಿತುಕೊಂಡಿದ್ದರು. ದೇವರು ತನ್ನನ್ನು ತನ್ನ ಅದ್ಭುತಕಾರ್ಯಗಳನ್ನು ಮಹಿಮೆಪಡಿಸುವುದಕ್ಕಾಗಿ ಮಕ್ಕಳನ್ನು ಸಹ ಉಪಯೋಗಿಸಲು ನಾವು ಅನುಮತಿಸುವೆವಾ?

2. ***ಮರಿಯಳು ಮತ್ತು ಆವಳ ದೇವರು*** ಎಂಬ ಸರಳವಾದ ಅಧ್ಯಯನಕ್ಕೆ ಇದೊಂದು ರೂಪುರೇಖೆಯಾಗಬಲ್ಲದು:
   - ತನ್ನ ಮತ್ತು ತನ್ನ ಸೇವಾ ಮನೋಭಾವದ ಕುರಿತ ಮರಿಯಳ ತಿಳುವಳಿಕೆ
   - ದೇವರು ಮತ್ತು ಜನರೊಂದಿಗಿನ ಆತನ ಮಾರ್ಗಗಳ ಕುರಿತ ಮರಿಯಳ ತಿಳುವಳಿಕೆ
   - ದೇವರೆಡೆಗಿನ ಮರಿಯಳ ಮನೋಭಾವನೆ: ಆಕೆ ಆತನನ್ನು ಘನಪಡಿಸುತ್ತಾಳೆ, ಆಕೆ ಆತನನ್ನು ಕೊಂಡಾಡುತ್ತಾಳೆ, ಆಕೆ ಆತನಿಗೆ ಕೃತಜ್ಞತೆ ಸಲ್ಲಿಸುತ್ತಾಳೆ. ಆಕೆ ಆತನ ಸಾರ್ವಭೌಮತ್ವವನ್ನು ಅರಿತುಕೊಳ್ಳುತ್ತಾಳೆ.



## 4. ಉತ್ತರಗಳು: ಸ್ನಾನಿಕನಾದ ಯೋಹಾನನ ಜನನ, ಲೂಕ 1:57-80

**ಪ್ರಶ್ನೆಗಳಿಗೆ ಉತ್ತರಗಳು**

1. ಈ ವಾಕ್ಯಭಾಗವು ಎರಡು ಭಾಗಗಳನ್ನು ಒಳಗೊಂಡಿದೆ:

   ಅ. ವಚನ 57-60: ಸ್ನಾನಿಕನಾದ ಯೋಹಾನನ ಜನನ, ಸುನ್ನತಿ ಮತ್ತು ನಾಮಕರಣ

   ಆ. ವಚನ 67-79: ಸ್ನಾನಿಕನಾದ ಯೋಹಾನನ ತಂದೆಯಾದ ಜಕರೀಯನ ಒಂದು ಪದ್ಯರೂಪಿ ಹೇಳಿಕೆ.

   ಈ ಹೇಳಿಕೆಯು ಒಂದು ಆಶೀರ್ವಾದ (ವ. 68-75) ಮತ್ತು ಯೋಹಾನ ಮತ್ತು ಯೇಸುವಿನ ಕುರಿತಾದ ಒಂದು ಪ್ರವಾದನೆಯನ್ನು ಒಳಗೊಂಡಿದೆ (ವ. 76-79). ವಚನ 80 ಇಡೀ ವಾಕ್ಯಭಾಗದ ಉಪಸಂಹಾರವಾಗಿದೆ.

2. ಸ್ನಾನಿಕನಾದ ಯೋಹಾನನ ಜನನಕ್ಕೆ ಎಲಿಸಬೇತಳ ನೆರೆಯುವರು ಮತ್ತು ಬಂಧುಗಳು ಎರಡು ರೀತಿಯಲ್ಲಿ ಪ್ರತಿಕ್ರಯಿಸಿದರು (ವ. 57-58):

   ಅ. ಅವರು ತುಂಬಾ ಸಂತೋಷಗೊಂಡರು. ಹಾಗಾಗಿ ಅವರು ನಿಜವಾಗಿ ಎಲಿಸಬೇತಳ ಸಂತೋಷವನ್ನು ಹಂಚಿಕೊಂಡಾಯಿತು.

   ಆ. ಅಲ್ಲದೆ ಈ ಅದ್ಭುತವಾದ ಜನನದ ಹಿಂದೆ ಇರುವವರು ದೇವರೆಂಬುದನ್ನು ಅವರು ತಿಳಿದುಕೊಂಡರು ಮತ್ತು ಈ ಅದ್ಭುತವನ್ನು ಅವರು ಎಲಿಸಬೇತಳ ಮೇಲಿನ ದೇವರ ದಯೆ ಎಂಬುದಾಗಿ ವ್ಯಾಖ್ಯಾನಿಸಿದರು.

3. ದೇವರು ಇಸ್ರಾಯೇಲರಿಗಾಗಿನ ರಕ್ಷಣಾ ಯೋಜನೆಯನ್ನು ಸಿದ್ಧಪಡಿಸಿದ್ದಕ್ಕಾಗಿ ಜಕರೀಯನು ದೇವರನ್ನು ಸ್ತುತಿಸುತ್ತಾನೆ (ವ. 68): ದೇವರು ಈಗ ಬಂದು ತನ್ನ ಜನರನ್ನು ವಿಮೋಚಿಸಿದ್ದಾನೆ.

4. ತನ್ನ ಮಗನಾದ ಸ್ನಾನಿಕನಾದ ಯೋಹಾನನ ಬಗ್ಗೆ ಜಕರೀಯನು ಮೂರು ಸಂಗತಿಗಳನ್ನು ಪ್ರವಾದಿಸುತ್ತಾನೆ (ವ. 76-77):

   ಅ. ಯೋಹಾನನು ದೇವರ ಪ್ರವಾದಿಯಾಗುವನು

   ಆ. ಯೋಹಾನನು ಮುಂದೆ ಹೋಗಿ ಕರ್ತನಿಗಾಗಿ ಹಾದಿಗಳನ್ನು ಸಿದ್ಧಮಾಡುವನು (ಹಳೇ ಒಡಂಬಡಿಕೆ ಪ್ರವಾದನಾ ನೆರವೇರಿಕೆಯಾಗಿ ಯೆಶಾಯ 40:3). ಆತನು ಮಲಾಕಿ 4:5 ರ "ಎಲೀಯ" ನಾಗಿರುವನು.

   ಇ. ಆತನು ತನ್ನ ದೇವಜನರಿಗೆ ಪಾಪಪರಿಹಾರವೆಂಬ ರಕ್ಷಣೆಯ ತಿಳುವಳಿಕೆಯನ್ನು ಕೊಡುವವನಾಗಿರುವನು.

5. ಯೇಸುವಿನ ಬಗ್ಗೆ ಜಕರೀಯನು ಐದು ಸಂಗತಿಗಳನ್ನು ಪ್ರವಾದಿಸುತ್ತಾನೆ (ವ. 76-79):

   ಅ. ಸ್ನಾನಿಕನಾದ ಯೋಹಾನನು ಆತನ ಮಾರ್ಗಗಳನ್ನು ಸಿದ್ಧಪಡಿಸುವನು

   ಆ. ಆತನ ಮೂಲಕ ಜನರು ಪಾಪ ಪರಿಹಾರವೆಂಬ ರಕ್ಷಣೆಯನ್ನು ಹೊಂದುವರೆಂಬ ತಿಳುವಳಿಕೆಯನ್ನು ಯೋಹಾನನು ಕೊಡುವನು.

   ಇ. ಯೇಸುವು ದೇವರ ಕರುಣೆಯಾಗಿರುವನು

   ಈ. ಯೇಸುವು ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ನೆರವೇರಿಸುವ ಮೆಸ್ಸೀಯನಾಗಿರುವನು (ಅರುಣೋದಯ)

   ಉ. ಯೇಸುವು ದೇವರಜನರನ್ನು ಸಮಾಧಾನದ ಮಾರ್ಗದಲ್ಲಿ ನಡೆಸುವನು. ಹೀಗೆ ಯೇಸು ಜನರನ್ನು "ಮರಣಾಂಧಕಾರದಿಂದ" (ದೇವರ ಉಳಿದಿರುವ ನ್ಯಾಯತೀರ್ಪು ) ದೇವರ ರಕ್ಷಣೆಯ ಬೆಳಕಿನೆಡೆಗೆ, ದೇವರ ಸಮಾಧಾನದೆಡೆಗೆ ನಡೆಸುವುದರಿಂದ ಆತನು ರಕ್ಷಕನಾಗಿರುವನು.

6. ವಚನ 80 ರಲ್ಲಿ ಸ್ನಾನಿಕನಾದ ಯೋಹಾನನ ಬಾಲ್ಯ ಮತ್ತು ಯೌವನದ ಬಗ್ಗೆ ನಾವು ಎರಡು ಸಂಗತಿಗಳನ್ನು ಕಲಿಯುತ್ತೇವೆ:

   ಅ. ಆತನು ದೈಹಿಕವಾಗಿ ಮತ್ತು ಆತ್ಮೀಕವಾಗಿ ಬೆಳೆದನು.

   ಆ. ತನಗೆ ಸುಮಾರು ಮೂವತ್ತು ವರ್ಷವಾಗುವವರೆಗೆ ಮತ್ತು ತನ್ನ ಬಹಿರಂಗ ಸೇವೆಯನ್ನು ಪ್ರಾರಂಭಿಸುವವರೆಗೆ ಆತನು ಅರಣ್ಯ ಪ್ರದೇಶಗಳಲ್ಲಿ ವಾಸಿಸಿದನು (ಹೋಲಿಸಿ ಲೂಕ. 3:23 – ಯೋಹಾನನು ಯೇಸುವಿಗಿಂತ 6 ತಿಂಗಳು ದೊಡ್ಡವನು). ಆತನು

ಹುಟ್ಟಿದಾಗ ಆತನ ತಂದೆತಾಯಿಗಳು ಮುಪ್ಪಿನವರಾಗಿದ್ದರು. ಹಾಗಾಗಿ ಆತನು ಗಿರಿ ಬೆಟ್ಟ ಮತ್ತು ಅರಣ್ಯಪ್ರದೇಶವಾಗಿರುವ ಯೆಹೂದದ ಸೀಮೆಯಲ್ಲಿ ಆತನು ವಾಸಿಸಿರಬಹುದು.

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –
2. ತನ್ನ ಪ್ರಜೆಗೆ ಬಿಡುಗಡೆಯನ್ನು ಉಂಟುಮಾಡುವುದಕ್ಕಾಗಿ ಆತನು ಬಂದುದ್ದರಿಂದ (ವ. 68) ಜಕರೀಯನು ದೇವರನ್ನು ಸ್ತುತಿಸುತ್ತಾನೆ. ಈ ವಚನದ ಮೂಲಕ ನಾವು ಈ ಬಿಡುಗಡೆಯ ಬಗ್ಗೆ ತಿಳಿದುಕೊಳ್ಳಬಹುದು:

   ಅ. ಒಂದು ಹಂತದ ಬಿಡುಗಡೆಯು ಭೌತಿಕ ವೈರಿಗಳು ಮತ್ತು ದೇವಜನರನ್ನು ವಿರೋಧಿಸುವ ಜನರಿಂದ ಸಿಗುವ ಬಿಡುಗಡೆಯಾಗಿದೆ (ವ. 71). ಈ ಬಿಡುಗಡೆಯು ದೇವರ ಕರುಣೆಯ ಕಾರ್ಯವಾಗಿದ್ದು, ಇಸ್ರಾಯೇಲಿನ ಪಿತೃಗಳೊಂದಿಗಿನ ತನ್ನ ಒಡಂಬಡಿಕೆಯನ್ನು ದೇವರು ಗೌರವಿಸುತ್ತಾನೆಂಬುದನ್ನು ಇದು ತೋರಿಸುತ್ತದೆ (ವ. 74-75).

   ಆ. ಆದರೆ ಈ ಬಿಡುಗಡೆಗೆ ಧಾರ್ಮಿಕ ಪರಿಣಾಮವೂ ಇದೆ. ಭೌತಿಕ (ಶಾರೀರಿಕ) ವೈರಿಗಳಿಂದ ಸಿಗುವ ಬಿಡುಗಡೆಯು ದೇವರ ಜನರು ಸಮಾಧಾನದಲ್ಲಿ ಬದುಕುವಂತೆ ಮಾಡುತ್ತದೆ, ಆ ಮೂಲಕ ಅವರು ತನ್ನ ಜನರಿಗಾಗಿನ ದೇವರ ಚಿತ್ತಕ್ಕನುಸಾರವಾಗಿ ಪರಿಶುದ್ಧರಾಗಿ ಜೀವಿಸಿ ಆತನನ್ನು ಸೇವಿಸಬಹುದಾಗಿದೆ. ಇದು ಅವರಿಗೆ ಒಡಂಬಡಿಕೆಯ ಆಜ್ಞೆಗಳನ್ನು ಪಾಲಿಸಲು ಸಾಧ್ಯವಾಗಿಸುತ್ತದೆ (ವ. 74-75).

   ಇ. ಕೊನೆಯದಾಗಿ, ದೇವರ ಬಿಡುಗಡೆಗೆ ಆತ್ಮೀಕವಾದ ಸ್ಪರ್ಶ ಸಹ ಇದೆ. ದೇವರು ತನ್ನ ಕರುಣೆಯಿಂದ ಜನರನ್ನು ಬಿಡುಗಡೆ ಮಾಡುವಾಗ, ಆತನವರನ್ನು ರಕ್ಷಿಸುತ್ತಾನೆ: ಆತನವರ ಪಾಪಗಳನ್ನು ಕ್ಷಮಿಸಿ ಅವರಿಗೆ ನಿತ್ಯಜೀವವನ್ನು ಕೊಡುತ್ತಾನೆ. ಇದು ದೇವರ ಮೆಸ್ಸೀಯನ ಕಾರ್ಯವಾಗಿದೆ (ವ. 77-79)
3. ಜಕರೀಯನ ಪ್ರವಾದನೆಯನ್ನು ಈ ರೀತಿಯಾಗಿ (ವ. 76-79) ಎರಡು ಅಥವಾ ಮೂರು ಭಾಗಗಳಾಗಿ ವಿಭಾಗಿಸಬಹದು:

   ಅ. ಸ್ನಾನಿಕನಾದ ಯೋಹಾನನ ಮೇಲೆ ಗಮನ (ವ. 76)

   ಆ. ವಚನ 77 ಯೋಹಾನನ್ನು ಯೇಸುವಿನೊಂದಿಗೆ ಸಂಬಂಧ ಕಲ್ಪಿಸುವುದು

   ಇ. ಯೇಸುವಿನ ಮೇಲೆ ಗಮನ (ವ. 78-79)

## 5. ಉತ್ತರಗಳು: ಎರಡು ವಂಶಾವಳಿಗಳು, ಮತ್ತಾಯ 1:1-17 ಮತ್ತು ಲೂಕ 3:23-38

**ಪ್ರಶ್ನೆಗಳಿಗೆ ಉತ್ತರಗಳು**

1. ಮತ್ತಾಯ ಮತ್ತು ಲೂಕದಲ್ಲಿನ ಎರಡು ವಂಶಾವಳಿಗಳ ಕಾಲಾನುಕ್ರಮಣಿಕೆಯ ಒಂದು ಹೋಲಿಕೆ:

   ಅ. ಮತ್ತಾಯನು ಆರಂಭಿಕ ವ್ಯಕ್ತಿಯಿಂದ (ಅಬ್ರಹಾಮ) ಪ್ರಾರಂಭಿಸಿ ಇತ್ತೀಚಿನ ವ್ಯಕ್ತಿ(ಯೋಸೇಫ)ಯೊಂದಿಗೆ ಮುಕ್ತಾಯಗೊಳಿಸುತ್ತಾನೆ.

   ಆ.ಲೂಕನು ಇತ್ತೀಚಿನ ವ್ಯಕ್ತಿ(ಯೋಸೇಫ)ಯೊಂದಿಗೆ ಪ್ರಾರಂಭಿಸಿ ಆರಂಭಿಕ ವ್ಯಕ್ತಿಯೊಂದಿಗೆ (ಆದಾಮ) ಮುಕ್ತಾಯ ಮಾಡುತ್ತಾನೆ.

2. ಮತ್ತಾಯನು ಸುವಾರ್ತೆಯಲ್ಲಿನ ಯೇಸುವಿನ ವಂಶಾವಳಿಯು ಇಸ್ರಾಯೇಲ ಜನಾಂಗದ ಜನಕನಾಗಿರುವ ಅಬ್ರಹಾಮನೆಡೆಗೆ ಹೋಗುತ್ತದೆ.

3. ಲೂಕನು ಸುವಾರ್ತೆಯಲ್ಲಿನ ಯೇಸುವಿನ ವಂಶಾವಳಿಯು ಮೊದಲ ಮನುಷ್ಯನಾಗಿರುವ ಆದಾಮನಷ್ಟು ಹಿಂದೆ ಹೋಗುತ್ತದೆ.

4. ಯೇಸುವಿನ ವಂಶಾವಳಿಯ ಪಟ್ಟಿಯಲ್ಲಿ ಮತ್ತಾಯನು ಐದು ಸ್ತ್ರೀಯರನ್ನು ಹೆಸರಿಸುತ್ತಾನೆ; ಅವರೆಂದರೆ:

   ಅ. ತಾಮಾರಳು (ವ. 3): ಆಕೆಯೊಬ್ಬ ಕಾನಾನ್ಯ ಸ್ತ್ರೀಯೆಂಬಂತೆ ಕಾಣುತ್ತಾಳೆ. ಆಕೆಯು ಯೆಹೂದನ ಇಬ್ಬರು ಗಂಡು ಮಕ್ಕಳನ್ನು (ಒಬ್ಬರಾದ ನಂತರ ಒಬ್ಬರನ್ನು) ಮದುವೆಯಾಗುತ್ತಾಳೆ. ಆದರೆ ಅವರಿಬ್ಬರೂ ಅವಳಿಗೆ ಮಕ್ಕಳಾಗುವ ಮೊದಲೇ ಸತ್ತು ಹೋಗುತ್ತಾರೆ. ಹಾಗಾಗಿ ಆಕೆ ತನಗೊಬ್ಬ ಮಗನನ್ನು ಪಡೆಯುವುದಕ್ಕಾಗಿ ಸ್ವತಃ ತನ್ನ ಮಾವನನ್ನೇ ಮೋಹಿಸುತ್ತಾಳೆ (ಆದಿ. 38).

   ಆ. ರಾಹಾಬಳು (ವ. 4): ಈಕೆಯು ಯೆರಿಕೋದಲ್ಲಿನ ಒಬ್ಬ ಕಾನಾನ್ಯ ಸೂಳೆಯಾಗಿರುತ್ತಾಳೆ; ಯೆಹೋಶುವನ ನೇತೃತ್ವದಲ್ಲಿ ಕಾನಾನನ್ನು ವಶಪಡಿಸಿಕೊಳ್ಳುವ ವೇಳೆ ಈಕೆ ಇಬ್ಬರು ಇಸ್ರಾಯೇಲಿ ಗೂಢಾಚಾರರನ್ನು ಅಡಗಿಸಿಡುತ್ತಾಳೆ (ಯೆಹೋಶುವ 2).

   ಇ. ರೂತಳು (ವ. 5): ತನ್ನ ಅತ್ತೆಯೊಂದಿಗೆ ಬೇತ್ಲೆಹೇಮಿನಲ್ಲಿ ವಾಸವಾಗಿದ್ದ ಈಕೆಯೊಬ್ಬ ಮೋವಾಬ್ಯ ಸ್ತ್ರೀಯಾಗಿದ್ದು, ನಂತರ ದಾವೀದನ ಅಜ್ಜಿಯಾಗುತ್ತಾಳೆ.

   ಈ. ಊರೀಯನ ಹೆಂಡತಿ (ವ. 6): ಊರೀಯನು ಒಬ್ಬ ಹಿತ್ತೀಯ ಸೈನಿಕನಾಗಿದ್ದು ಆತನಿಗೆ ಬತ್ಸೆಬೆ ಎಂಬ ಸುಂದರವಾದ ಒಬ್ಬ ಹೆಂಡತಿಯಿರುತ್ತಾಳೆ. ಅರಸನಾದ ದಾವೀದನು ಆಕೆಯೊಂದಿಗೆ ವ್ಯಭಿಚಾರ ಮಾಡಿ, ಆಕೆಯ ಗಂಡನನ್ನು ಕೊಲ್ಲಿಸುತ್ತಾನೆ (2 ಸಮು. 11). ಅನಂತರ ದಾವೀದನು ಆಕೆಯನ್ನು ಮದುವೆಯಾಗುತ್ತಾನೆ, ಅನಂತರ ಆಕೆಯು ಸೊಲೊಮೋನನಿಗೆ ತಾಯಿಯಾಗುತ್ತಾಳೆ.

   ಉ. ಮರಿಯಳು (ವ. 16): ಯೇಸುವಿನ ತಾಯಿ.

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

ಈ ಎರಡು ಪ್ರಶ್ನೆಗಳ ಉತ್ತರಗಳನ್ನು ಸುಲಭವಾಗಿ ಈ ಪಾಠದ ***ಪೀಠಿಕೆ ಮತ್ತು ಟಿಪ್ಪಣಿಗಳು*** ಭಾಗದಲ್ಲಿ ಕಾಣಬುದಾಗಿದೆ.

## 6. ಉತ್ತರಗಳು: ಯೇಸುವಿನ ಜನನ, ಮತ್ತಾಯ 1:18-25 ಮತ್ತು ಲೂಕ 2:1-7

### ಪ್ರಶ್ನೆಗಳಿಗೆ ಉತ್ತರಗಳು

1. ಯೇಸೇಫನು ಒಬ್ಬ ಸಜ್ಜನನೂ, ಕರುಣೆಯುಳ್ಳ ಮನುಷ್ಯನೂ ಆಗಿರುವುದರಿಂದ ಮರಿಯಳನ್ನು ಸುಮ್ಮನೆ ಬಿಟ್ಟುಬಿಡಬೇಕೆಂದಿದ್ದನು (ಮತ್ತಾ. 1:18-19). ಮರಿಯಳನ್ನು ಸಾರ್ವಜನಿಕವಾಗಿ ಅವಮಾನಕ್ಕೊಳಗಾಗುವಂತೆ ಮಾಡಿ ಅಥವಾ ಯೆಹೂದಿ ನ್ಯಾಯಾಲಯದಲ್ಲಿ ಆಕೆ ದಂಡನೆಗೊಳಗಾಗುವುದನ್ನು ನೋಡಲು (ಬಹುಶಃ ಕಲ್ಲು ಎಸೆಯಲ್ಪಟ್ಟು) ಆತನು ಬಯಸಲಿಲ್ಲ.
2. ಮರಿಯಳ ಮಗನನ್ನು "ಯೇಸು" ಎಂಬುದಾಗಿ ಕರೆಯಬೇಕೆಂದು ದೂತನು ಹೇಳಿದನು (ಮತ್ತಾ. 1:21), (ಇಬ್ರಿಯದಲ್ಲಿ ಇದರರ್ಥ "ಕರ್ತನು ರಕ್ಷಿಸುತ್ತಾನೆ" ಎಂದಾಗಿದೆ), ಯಾಕೆಂದರೆ ಈ ಹೆಸರೇ ಆತನನ್ನು ಮತ್ತು ಆತನ ಸೇವಾಕಾರ್ಯವನ್ನು ವರ್ಣಿಸುವುದಾಗಿತ್ತು: ಯೇಸುವು ಸ್ವತಃ ದೇವರಾದ ಕರ್ತನಾಗಿದ್ದು ತನ್ನ ಜನರನ್ನು ಪಾಪಗಳಿಂದ ಬಿಡಿಸುವುದಕ್ಕೆ ಬರುವವನಾಗಿದ್ದನು.
3. ಯೇಸುವಿಗೆ ಮತ್ತಾಯನು ಹೇಳುವ ಇನ್ನೊಂದು ಹೆಸರು, "ಇಮ್ಮಾನುವೇಲ್" (ಮತ್ತಾಯ 1:23). ಈ ಹೆಸರಿನ ಅರ್ಥ "ದೇವರು ನಮ್ಮ ಕೂಡ ಇದ್ದಾನೆ" ಎಂದಾಗಿದ್ದು, ಇದು ಯೆಶಾಯನ ಪುಸ್ತಕದಿಂದ ಒಂದು ಪ್ರವಾದನೆಯಾಗಿ ಬರುತ್ತದೆ (ಯೆಶಾಯ 7:14), ಇದನ್ನೆ ಮತ್ತಾಯನು ಯೋಸುವಿನ ಕುರಿತಾದ ಒಂದು ಮೆಸ್ಸೀಯನ ಪ್ರವಾದನೆಯಾಗಿ ಅನುವಾದಿಸುತ್ತಾನೆ.
4. ಯೋಸೇಫನು ಮರಿಯಳೊಂದಿಗೆ ಗಲಿಲಾಯ ಸೀಮೆಯ ನಜರೇತನ್ನು ಬಿಟ್ಟು ಯೂದಾಯದಲ್ಲಿನ ಬೇತ್ಲೆಹೇಮಿಗೆ ಪ್ರಯಾಣ ಬೆಳೆಸುತ್ತಾನೆ (ಲೂಕ 2:4-5), ಯಾಕೆಂದರೆ ಅವರಿಬ್ಬರೂ ರೋಮನ್ನಿನ ತೆರಿಗೆಯ ಖಾನೇಷುಮಾರಿ(ಜನಗಣತಿ)ಯಲ್ಲಿ ಹೆಸರನ್ನು ಬರೆಯಿಸಬೇಕಾಗಿತ್ತು. ಅವರ ಪಿತೃಗಳ ಊರಿನಲ್ಲಿಯೇ ಹೆಸರನ್ನು ಬರೆಯಿಸಬೇಕಾಗಿತ್ತು. ಯೋಸೇಫ ಮತ್ತು ಮರಿಯರಿಬ್ಬರೂ ಸಹ ಬೇತ್ಲಹೇಮಿನಲ್ಲಿ ಹುಟ್ಟಿದ ದಾವೀದನ ಗೋತ್ರದವರಾಗಿದ್ದರು. ಹಾಗಾಗಿ ಅವರ ಪಿತೃಗಳ ಊರು ಬೇತ್ಲೆಹೇಮ್ ಆಗಿತ್ತು.

### ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ಆ ದಿನಗಳಲ್ಲಿ ಯೆಹೂದ್ಯರ ನಡುವಿನ ನಿಶ್ಚಿತಾರ್ಥವು ಒಬ್ಬ ಗಂಡು ಮತ್ತು ಹೆಣ್ಣಿನ ನಡುವಿನ ಒಂದು ಬರವಣಿಗೆ ರೂಪದ ಒಪ್ಪಂದವಾಗಿತ್ತು. ಈ ಒಪ್ಪಂದಕ್ಕೆ ಒಂದು ಕಾನೂನಾತ್ಮಕ ಸ್ಥಾನವಿದ್ದು, ನಿಶ್ಚಿತಗೊಂಡಿರುವ ದಂಪತಿಗಳ ಬಗ್ಗೆ "ಗಂಡ" ಮತ್ತು "ಹೆಂಡತಿ" ಎಂಬ ಪದವನ್ನು ಬಳಸುವುದು ಸಾಮಾನ್ಯವಾಗಿತ್ತು. ಆದರೆ ಅಧಿಕೃತವಾಗಿ ವಿವಾಹವಾಗುವವರೆಗೂ ಅವರಿಬ್ಬರ ನಡುವೆ ಲೈಂಗಿಕ ಸಂಬಂಧವಿರುವಂತಿರಲಿಲ್ಲ. ಹಾಗಾಗಿ ನಿಶ್ಚಿತಗೊಂಡ ಸಮಯದಲ್ಲಿ ಮರಿಯಳು ಗರ್ಭಿಣಿಯಾಗಿರುವುದು ಅನೈತಿಕವಾದುದ್ದಾಗಿತ್ತು. ಇನ್ನೊಬ್ಬ ಪುರುಷನಿಂದ ಗರ್ಭಿಣಿಯಾಗಿದ್ದಾಳೆಂಬುದಾಗಿ ಊಹಿಸಿದನು. ಹಾಗೆಯೇ ಈ ನಿಶ್ಚಿತಾರ್ಥದೊಂದಿಗೆ ಮುಂದುವರೆಯುವುದು ಅನೈತಿಕವಾದುದ್ದೆಂಬುದಾಗಿ ಆತನು ಭಾವಿಸಿದನು. ಅಲ್ಲದೆ ಆಕೆಯನ್ನು ಕಲ್ಲೆಸೆದು ಕೊಲ್ಲುವಂತ ಶಿಕ್ಷೆಗೆ ಗುರಿಪಡಿಸುವ ಯೆಹೂದಿ ನ್ಯಾಯಾಲಯದಲ್ಲಿ ಆಕೆ ಮೇಲೆ ಆರೋಪ ಹೊರಿಸಲು ಆತನಿಗೆ ಕಾನೂನಾತ್ಮಕ ಹಕ್ಕಿತ್ತು. ಆದರೆ ಮರಿಯಳಿಗೆ ನಿಜವಾಗಿ ಆದದ್ದೇನೆಂಬುದನ್ನು ದೇವರು ಆತನಿಗೆ ತಿಳಿಸಿದಾಗ ಆತನು ತನ್ನ ಮನಸ್ಸನ್ನು ಬದಲಿಸಿಕೊಂಡನು. ಆತನು ನಿಶ್ಚಿತಾರ್ಥವನ್ನು ಮುರಿಯಲಿಲ್ಲ ಬದಲಾಗಿ ಆತನು ಮರಿಯಳು ತನ್ನ ಮನೆಯಲ್ಲಿ ಬಂದು ವಾಸಿಸುವಂತೆ ಆಹ್ವಾನಿಸಿದನು, ಆದರೆ ಯೇಸುವು ಹುಟ್ಟುವವರೆಗೂ ಆತನು ಆಕೆಯೊಂದಿಗೆ ಲೈಂಗಿಕ ಸಂಪರ್ಕ ಮಾಡಲಿಲ್ಲ.
2. ಮತ್ತಾ. 1:18-25 ಮತ್ತು ಲೂಕ 2:1-7 ರಲ್ಲಿನ ಯೇಸುವಿನ ಜನನದ ಕುರಿತ ವಿವರ(ಲೆಕ್ಕ)ದ ಹೋಲಿಕೆ:

   ಅ. ಈ ವಿವರದ ಮೇಲಿನ ಗಮನವು ವಿಭಿನ್ನವಾದುದ್ದಾಗಿದೆ. ಮತ್ತಾಯನು ಮರಿಯಳ ಬಸಿರು ಮತ್ತು ಆಕೆಯು ಹೊತ್ತಿರುವ ಮಗುವಿನ ಕುರಿತ ಯೋಸೇಫನ ಗುಣ ಮತ್ತು ತಿಳುವಳಿಕೆಯ ಮೇಲೆ ಗಮನಹರಿಸುತ್ತಾನೆ. ಅದರಲ್ಲಿನ ಒಂದು ಅಂಶವೆಂದರೆ ಯೇಸುವಿನ ಹೆಸರು ಮತ್ತು ಆತನ "ಪ್ರವಾದನಾತ್ಮಕ ಹೆಸರು" (ಇಮ್ಮಾನುವೇಲ್) ಗಳೆರಡನ್ನೂ ಸಹ ವಿವರಿಸಲಾಗಿದೆ. ಲೂಕನು

ಯೇಸುವಿನ ಜನನದ ಐತಿಹಾಸಿಕ ಮತ್ತು ಭೌಗೋಳಿಕ ಹಿನ್ನಲೆಯ ಮೇಲೆ ಒತ್ತುಕೊಡುತ್ತಾನೆ. ಅದರಲ್ಲಿನ ಒಂದು ಅಂಶವೆಂದರೆ ಯಾಕೆ ಯೇಸು ಬೇತ್ಲೆಹೇಮಿನಲ್ಲಿಯೇ (ನಜರೇತಿನಲ್ಲಲ್ಲ) ಹುಟ್ಟಿದನೆಂಬುದನ್ನು ಆತನು ವಿವರಿಸುತ್ತಾನೆ.

ಆ. ಪ್ರಾಮುಖ್ಯವಾಗಿ ನಾವು ಗಮನಿಸಬೇಕಾದುದ್ದೇನೆಂದರೆ – ಯೇಸುವು ಗರ್ಭತಾಳಿರುವುದರ ಕುರಿತು ಈ ಹಿಂದಿನ ವಾಕ್ಯಭಾಗದಲ್ಲಿ (ಲೂಕ 1:35) ಲೂಕನಿಂದ ತಿಳಿಸಲ್ಪಟ್ಟ ಮಾಹಿತಿಯನ್ನು ಮತ್ತಾಯನು ದೃಢಪಡಿಸುತ್ತಾನೆ. ಮರಿಯಳು ಒಬ್ಬ ಕನ್ಯೆಯಾಗಿದ್ದು ಇದು ಪವಿತ್ರಾತ್ಮನ ಮೂಲಕವಾಗಿರುವ ದೇವರ ಕಾರ್ಯವಾಗಿದೆ. ಯೇಸುವು ನಿಜವಾಗಲೂ ಪರಾತ್ಪರನಾದ ದೇವರ ಮಗನಾಗಿದ್ದಾನೆ. ಆದರೆ ಮತ್ತಾಯನಿಗಿಂತ ಲೂಕನ ಭಾಷೆಯು ಹೆಚ್ಚು ಪದ್ಯರೂಪಿಯಾಗಿದೆ.

ಇ. ಖಂಡಿತವಾಗಿ ಈ ಎರಡು ವಿವರಗಳ ನಡುವೆ ಇನ್ನೂ ಅನೇಕ ವ್ಯತ್ಯಾಸಗಳಿವೆ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಮತ್ತಾಯ 1:18-25 ನ್ನು ಆಧರಿಸಿ ಮತ್ತು ***ಯೋಸೇಫ – ನಮಗೊಂದು ಮಾದರಿ*** ಎಂಬ ಸರಳವಾದ ಅಧ್ಯಯನಕ್ಕೆ ಇದೊಂದು ರೂಪುರೇಖೆಯಾಗಬಲ್ಲದು.

   ಅ. ಆತನ ಸ್ವಭಾವದ ಮೂಲಕ ಯೋಸೇಫನ ಗುಣವು ತೋರಿಬಂದಿದೆ:

   - ಆತನೊಬ್ಬ ನೀತಿವಂತನಾಗಿದ್ದು ಧರ್ಮಶಾಸ್ತ್ರದ ನಿಯಮಗಳನ್ನು ನೆರವೇರಿಸಬೇಕೆಂದು ಬಯಸಿದನು ಹಾಗಾಗಿ ಆತನು ಮರಿಯಳು ಗರ್ಭಿಣಿಯಾಗಿದ್ದಾಳೆಂಬುದನ್ನು ತಿಳಿದಾಗ ಆಕೆಯೊಂದಿಗಿನ ತನ್ನ ನಿಶ್ಚಿತಾರ್ಥವನ್ನು ರದ್ದುಗೊಳಿಸಬೇಕೆಂದು ಯೋಚಿಸಿದನು.
   - ಆತನು ವಿವೇಚನೆಯುಳ್ಳವನು, ಕರುಣೆಯುಳ್ಳವನೂ ಆಗಿದ್ದನು. ಹಾಗಾಗಿ ಮರಿಯಳನ್ನು ಬೈಲಿಗೆ ತರಲು ಬಯಸಲಿಲ್ಲ. ಅಲ್ಲದೆ ಆತನು ಆಕೆಯ ಬಗ್ಗೆ ಕಾಳಜಿವಹಿಸಿ ಸುರಕ್ಷಿತವಾಗಿರುವುದಕ್ಕಾಗಿ ಆಕೆಯನ್ನು ತನ್ನ ಮನೆಯಲ್ಲೇ ಇರಿಸಿಕೊಂಡನು. ಆಕೆಯ ಮನವನ್ನು ನೋಯಿಸಲಿಲ್ಲ.
   - ಆತನು ದೇವರಿಗೆ ವಿಧೇಯನಾಗಿದ್ದನು. ತನ್ನ ಪ್ರಾಚೀನ ಪರಿಸ್ಥಿತಿಯಲ್ಲೂ ಆತನು ದೇವರ ಸಲಹೆಗಳನ್ನು ಪಾಲಿಸಿದನು. ಮರಿಯಳನ್ನು ತನ್ನ ಮನೆಯಲ್ಲಿ ಉಳಿಸಿಕೊಂಡನು. ಆತನು ಆಕೆಯೊಂದಿಗೆ ಗೌರವದಿಂದ ನೋಡಿಕೊಂಡನು. ಮತ್ತು ಆಕೆಯ ಮಗುವಿಗೆ ಯೇಸುವೆಂದು ಹೆಸರಿಟ್ಟನು. ಇವೆಲ್ಲವುಗಳಿಗೆ ಆತ್ಮೀಕವಾದ ಸ್ಥೈರ್ಯ ಬೇಕಾಗಿತ್ತು.

   ಆ. ನೀತಿವಂತಿಕೆ, ವಿವೇಚನೆ, ವಿಧೇಯತೆ ಮತ್ತು ಆತ್ಮೀಕ ಸ್ಥೈರ್ಯದಲ್ಲಿ ಯೋಸೇಫನು ನಮಗೊಂದು ಮಾದರಿಯಾಗಿದ್ದಾನೆ. ಯೋಸೇಫನಂತೆ ನಾವೂ ಸಹ ನಿಜವಾದ ಸೇವಕರಾಗಿರಬೇಕು.

2. ಲೂಕ 2:1-7 ರ ಆಧರಿಸಿ ಒಬ್ಬ ***ಚಕ್ರವರ್ತಿ ಮತ್ತು ಒಂದು ಶಿಶು/ಮಗು*** ಎಂಬ ಸರಳವಾದ ಒಂದು ಅಧ್ಯಯನಕ್ಕೆ ಇದು ರೂಪುರೇಖೆಯಾಗಬಲ್ಲದು.

   ಅ. ಈ ವಿವರವು ಒಬ್ಬ ಬಲಿಷ್ಠನಾದ ಚಕ್ರವರ್ತಿಯೊಂದಿಗೆ ಪ್ರಾರಂಭವಾಗುತ್ತದೆ. ಅರಮನೆಯಲ್ಲಿ ವಾಸಿಸುತ್ತಿದ್ದ ಈ ಚಕ್ರವರ್ತಿಗೆ ಕೋಟ್ಯಂತರ ಜನರು ಭಯಪಡುತ್ತಿದ್ದರು ಮತ್ತು ಗೌರವಿಸುತ್ತಿದ್ದರು

   ಆ. ವಿವರವು ಗೋದಲಿಯಲ್ಲಿನ ಒಂದು ಸಣ್ಣ ಅಸಾಯಕ ಮಗುವಿನೊಂದಿಗೆ ಮುಕ್ತಾಯವಾಗುತ್ತದೆ. ಆತನಿಗೆ ಮತ್ತು ಆತನ ತಂದೆತಾಯಿಗಳಿಗಾಗಿ ಯೂದಾಯದಲ್ಲಿನ ಚಿಕ್ಕ ಪಟ್ಟಣದಲ್ಲಿನ ಛತ್ರ ಅಥವಾ ವಸತಿಗೃಹದಲ್ಲಿ ಸಹ ಸ್ಥಳವಿರಲಿಲ್ಲ. ಆದರೆ ಈ ಮಗುವು ಈ ಲೋಕದಲ್ಲಿ ನರಾವತಾರವೆತ್ತಿ ಬಂದ ದೇವರೇ ಆಗಿತ್ತು. ಆತನು ರಾಜಾಧಿರಾಜನೂ, ಕರ್ತರ ಕರ್ತನೂ, ಲೋಕದ ರಕ್ಷಕನೂ ಆಗಿದ್ದನು.

   ಇ. ಹೀಗೆ ತೋರಿಕೆಯು ವಂಚಿಸಬಹುದು. ನಾವೇನನ್ನು ನೋಡುತ್ತೇವೆ? ಲೌಕಿಕ ಬಲ ಮತ್ತು ಶ್ರೀಮಂತಿಕೆಯನ್ನಾ? ಅಥವಾ ಆತ್ಮೀಕ ಸತ್ಯವನ್ನಾ? ನಮ್ಮ ಜೀವಿತಗಳಲ್ಲಿ ಯೇಸುವಿಗೆ ಸ್ಥಾನವಿದೆಯಾ?

## 7. ಉತ್ತರಗಳು: ಕುರುಬರು ಮತ್ತು ದೇವದೂತರು, ಲೂಕ 2:8-20

### ಪ್ರಶ್ನೆಗಳಿಗೆ ಉತ್ತರಗಳು

1. ಬಟ್ಟೆಯಲ್ಲಿ ಸುತ್ತಿರುವ ಒಂದು ಮಗುವು ಗೋದಲಿಯಲ್ಲಿ ಮಲಗಿರುವುದೇ ರಕ್ಷಕನು ಹುಟ್ಟಿದ್ದಾನೆಂಬುದಕ್ಕೆ ಕುರುಬರಿಗೆ ದೂತರು ಕೊಟ್ಟ ಗುರುತಾಗಿತ್ತು (ವ. 12).
2. ತಾವು ಗೋದಲಿಯಲ್ಲಿದ್ದ ಮಗುವನ್ನು ನೋಡಿದ ನಂತರ ಕುರುಬರು ಮೂರು ಸಂಗತಿಗಳನ್ನು ಮಾಡಿದರು:

   ಅ. ಮಗುವಿನ ಬಗ್ಗೆ ದೂತನು ತಮಗೆ ತಿಳಿಸಿದ್ದನ್ನು ಅವರು ಬೇರೆಯವರಿಗೂ ಹೇಳಿದರು (ವ. 17).

   ಆ. ಮಗುವಿನ ಬಗ್ಗೆ ತಮಗೆ ತಿಳಿಸಲ್ಪಟ್ಟ ಸಂಗತಿಗಳಿಗಾಗಿ ಮತ್ತು ತಮ್ಮ ಕಣ್ಣಿನಿಂದ ನೋಡಿದ ಸಂಗತಿಗಳಿಗಾಗಿ ಅವರು ದೇವರನ್ನು ಸ್ತುತಿಸಿ ಕೊಂಡಾಡಿದರು (ವ. 20).

   ಇ. ಅವರು ಹಿಂತಿರುಗಿ ಕುರಿಕಾಯುವ ತಮ್ಮ ಕೆಲಸಕ್ಕೆ ಹೋದರು (ವ. 20).
3. ಈ ವಾಕ್ಯಭಾಗದಲ್ಲಿ ಮರಿಯಳ ಬಗ್ಗೆ ನಾವು ಎರಡು ಸಂಗತಿಗಳನ್ನು ಕಲಿಯುತ್ತೇವೆ (ವ. 19):

   ಅ. ಆ ರಾತ್ರಿ ಏನಾಯಿತೆಂಬುದನ್ನು ಅವಳು ನೆನಪುಮಾಡಿಕೊಂಡಳು

   ಆ. ಆ ರಾತ್ರಿ ಏನಾಯಿತೆಂಬುದನ್ನು ಅವಳು ಯೋಚಿಸಿದಳು

### ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ಎರಡು ಕಾರಣಗಳಿಗಾಗಿ ಕುರುಬರು ಬೇತ್ಲೆಹೇಮಿಗೆ ಹೋಗಲು ನಿರ್ಧರಿಸಿದರು (ವ. 15):

   ಅ. ಗೋದಲಿಯಲ್ಲಿದ್ದ ನವಜಾತ ಶಿಶುವನ್ನು ಅವರು ನೋಡಬೇಕೆಂದಿದ್ದರು.

   ಆ. ಬೇತ್ಲೆಹೇಮಿಗೆ ಹೋಗಲು ಅವರು ಆತುರಗೊಳ್ಳಲು ಕಾರಣ, ದೇವದೂತನು ಅವರಿಗೆ ಆ ಮಗುವಿನ ಬಗ್ಗೆ ಅದ್ಭುತವಾದ ಸಂಗತಿಗಳನ್ನು ತಿಳಿಸಿದ್ದನು: ತಲಾಂತರಗಳಿಂದ ಯೆಹೂದ್ಯರು ಮುನ್ನೋಡುತ್ತಿದ್ದ ಮೆಸ್ಸೀಯನು ಅವನಾಗಿದ್ದಾನೆ ಮತ್ತು ಈ ಮೆಸ್ಸೀಯನು ಸ್ವತಃ ದೇವರಾಗಿದ್ದು ಸಮಾಧಾನವನ್ನೂ ರಕ್ಷಣೆಯನ್ನೂ ತರುವವನಾಗಿದ್ದಾನೆ.
2. "ಸಂತೋಷ" ಎಂಬುದು ಲೂಕನ ಸುವಾರ್ತೆಯಲ್ಲಿನ ಮುಖ್ಯಪದವಾಗಿದೆ. ಅಲ್ಲದೆ ಈ ವಾಕ್ಯಭಾಗದಲ್ಲಿನ ಮುಖ್ಯ ಹೇಳಿಕೆ ಸಹ ಇದಾಗಿದೆ:

   ಅ. ತಾನು ತರುವ ಸಂದೇಶವು ಜನರಿಗೆಲ್ಲಾ ಮಹಾಸಂತೋಷವನ್ನುಂಟು ಮಾಡುವ ಶುಭಸಮಾಚಾರವೆಂಬುದಾಗಿ ದೂತನು ಹೇಳುತ್ತಾನೆ (ವ. 11)

   ಆ. ದೂತರು ಹಾಡಿದ ಹಾಡು ಗೋದಲಿಯಲ್ಲಿ ಮಲಗಿರುವ ಮಗುವಿನ ಮೂಲಕ ದೇವರು ಇಡೀ ಲೋಕವನ್ನು ರಕ್ಷಿಸುತ್ತಾನೆಂಬ ತಮ್ಮ ಸಂತೋಷನ್ನು ವ್ಯಕ್ತಪಡಿಸಿ ದೇವರನ್ನು ಮಹಿಮೆಪಡಿಸುವ ಹಾಡಾಗಿತ್ತು (ವ. 14)

   ಇ. ತಮ್ಮ ಕುರಿಗಳನ್ನು ಕಾಯುವ ಕೆಲಸಕ್ಕೆ ಹಿಂತಿರುಗಿ ಹೋಗುವ ದಾರಿಯಲ್ಲಿ ದೇವರನ್ನು ಸ್ತುತಿಸಿ ಕೊಂಡಾಡುತ್ತಾ ಕುರುಬರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು (ವ. 20)

### ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ***ಕುರುಬರಿಗೆ ದೂತರ ಸಂದೇಶ*** ಎಂಬ ಅಧ್ಯಯನಕ್ಕೆ ಇದೊಂದು ರೂಪುರೇಖೆಯಾಗಬಲ್ಲದು:

   ಅ. ಆ ರಾತ್ರಿಯ ಘಟನೆಗಳ ಒಂದು ಸಂಕ್ಷಿಪ್ತ ಸಾರಾಂಶ: ಕುರುಬರು, ದೇವದೂತರು ಮತ್ತು ಆಗಷ್ಟೇ ಹುಟ್ಟಿದ ಶಿಶುವಾದ ಯೇಸುವಿನ ಕುರಿತಾದ ಸಮಾಚಾರ

   ಆ. ಯೇಸುವಿನ ಕುರಿತಾದ ಸುವಾರ್ತೆಯು – ಸಾಧಾನದ, ನಿರೀಕ್ಷೆಯ, ರಕ್ಷಣೆಯ ಶುಭಸಮಾಚಾರವಾಗಿದೆ

ಇ. ಯೇಸು ಬರೀ ಯೆಹೂದ್ಯರ ಮೆಸ್ಸೀಯನಲ್ಲ, ಆತನು ಯೆಹೂದ್ಯರನ್ನಲ್ಲ ಇಡೀ ಮನುಕುಲವನ್ನು ರಕ್ಷಿಸಲು ಬರುವ ದೇವರಾದ ಕರ್ತನಾಗಿದ್ದಾನೆ

ಈ. ಈ ರಕ್ಷಣೆಗಾಗಿನ ಷರತ್ತೇನು?

ಉ. ಇದಕ್ಕೆ ಒಂದೇ ಒಂದು "ಷರತ್ತಿದೆ" ಅದೇನೆಂದರೆ ಶುಭವಾರ್ತೆಯಲ್ಲಿ ನಂಬಿಕೆಯಿಡುವುದು. ಯೇಸುವನ್ನು ನಂಬಿ ಆತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸುವುದು

ಊ. ಆಗ ನಮ್ಮ ಜೀವನವು ಬದಲಾಗುತ್ತದೆ: ನಾವು ದೇವರನ್ನು ಸ್ತುತಿಸಿಕೊಂಡಾಡುತ್ತೇವೆ. ಮತ್ತು ಕುರುಬರು ಮಾಡಿದಂತೆ ನಾವೂ ಸಹ ಶುಭವಾರ್ತೆಯನ್ನು ಬೇರೆಯವರಿಗೆ ಹಂಚಿಕೊಳ್ಳುವೆವು.

2. ಮರಿಯಳು ಎಲ್ಲವನ್ನೂ ತನ್ನ ಮನಸ್ಸಿನಲ್ಲಿಟ್ಟುಕೊಂಡು ಆ ರಾತ್ರಿಯಲ್ಲಿ ತಾನು ಕೇಳಿದ ಮತ್ತು ನೋಡಿದ ಸಂಗತಿಗಳನ್ನೆಲ್ಲ ಯೋಚಿಸುತ್ತಿದ್ದಳು:

ಅ. ತನ್ನ ಜೀವಮಾನವೆಲ್ಲ ಆಕೆ ನೆನಪು ಮಾಡಿಕೊಂಡ ಸಂಗತಿಗಳು:

- ಆ ರಾತ್ರಿ ಆಕೆ ತನ್ನ ಚೊಚ್ಚಲಮಗುವಿಗೆ ತೀರಾ ಪ್ರಾಚೀನವಾದ ಪರಿಸ್ಥಿತಿಯಲ್ಲಿ ಜನ್ಮಕೊಟ್ಟಳು
- ದೇವದೂತರು ಕುರುಬರಿಗೆ ಹೇಳಿದ ಸಂಗತಿಗಳ ಕುರಿತ ಅದ್ಭುತವಾದ ಸಾಕ್ಷಿ
- ಆ ರಾತ್ರಿಯಲ್ಲಿನ ಪರಲೋಕ ಪ್ರಸನ್ನತೆಯ ಸಂತೋಷ ಮತ್ತು ಭಾವನೆಗಳು

ಆ. ಆಕೆ ಯೋಚಿಸಿದ ಸಂಗತಿಗಳೆಂದರೆ:

- ಕುರುಬರ ಸಾಕ್ಷಿಯು, ಆಕೆ ಒಂಬತ್ತು ತಿಂಗಳ ಹಿಂದೆ ಗಬ್ರಿಯೇಲ ದೂತನಿಂದ ತನ್ನ ಮಗುವಿನ ಬಗ್ಗೆ ಹೊಂದಿದ ಸಂದೇಶವನ್ನು ದೃಢಪಡಿಸಿತು
- ಹೇಗೆ ಈ ಮಗುವಿನ (ಆತನ ಗುರುತು ಮತ್ತು ಸೇವೆ) ಕುರಿತ ಅದ್ಭುತವಾದ ಮಾಹಿತಿಯು ನೆರವೇರುವುದು
- ತನ್ನ ಬಹುದೊಡ್ಡ ರಕ್ಷಣಾ ಯೋಜನೆಯನ್ನು ನೆರವೇರಿಸಲು ದೇವರು ಯಾಕೆ ತನ್ನಂತ ಒಬ್ಬ ದೀನ ಯೌವನಸ್ಥ ಸ್ತ್ರೀಯನ್ನು ಆರಿಸಿಕೊಂಡನು



## 8. ಉತ್ತರಗಳು: ಯೇಸುವನ್ನು ಯೆರೂಸಲೇಮಿನ ದೇವಾಲಯದಲ್ಲಿ ಸಮರ್ಪಿಸಿದ್ದು, ಲೂಕ 2:21-40

### ಪ್ರಶ್ನೆಗಳಿಗೆ ಉತ್ತರಗಳು

1. ಯೇಸುವಿಗೆ ಎಂಟು ದಿನಗಳಾದಾಗ ಆತನಿಗೆ ಸುನ್ನತಿ ಮಾಡಿಸಿ “ಯೇಸು” ವೆಂದು ಹೆಸರಿಡಲಾಯಿತು (ವ. 21).
2. ಯೋಸೇಫ ಮತ್ತು ಮರಿಯರು ಯೇಸುವನ್ನು ಯೆರೂಸಲೇಮಿನ ದೇವಾಲಯದಕ್ಕೆ ಕೊಂಡೊಯ್ಯಲು ಎರಡು ಕಾರಣಗಳಿವೆ (ವ. 22-24):

   ಅ. ಮರಿಯಳ ಶುದ್ಧೀಕರಣ: ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರಕಾರ ತಾನು ಮಗುವಿಗೆ ಜನ್ಮಕೊಟ್ಟ 40 ದಿನಗಳವರೆಗೆ ಮೈಲಿಗೆಯಾಗಿರುತ್ತಿದ್ದಳು. ಆ ಸಮಯದ ಕೊನೆಯಲ್ಲಿ ಅವಳು ದೇವಾಲಯಕ್ಕೆ ಹೋಗಿ ತನ್ನ ಶುದ್ಧೀಕರಣಕ್ಕಾಗಿ ಯಜ್ಞವನ್ನು ಸಮರ್ಪಿಸಿದಳು. ಆಕೆ ಮತ್ತು ಆಕೆಯ ಗಂಡ ಬಡವಾಗಿರುವುದರಿಂದ ಅವರು ಎರಡು ಬೆಳವಕ್ಕಿಗಳನ್ನು ಅರ್ಪಿಸಿದರು.

   ಆ. ಯೇಸುವಿನ ಸಮರ್ಪಣೆ: ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಪ್ರಕಾರ ಚೊಚ್ಚಲ ಗಂಡು ಮಗುವು ಬಿಡಿಸಲ್ಪಡಬೇಕಾಗಿತ್ತು (ಕ್ರಯವನ್ನು ಕಟ್ಟುವುದರಿಂದ) ಮತ್ತು ದೇವರಿಗೆ ಸಮರ್ಪಿಸಲ್ಪಡಬೇಕಾಗಿತ್ತು.
3. ಸಿಮೆಯೋನನ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 25-35):

   ಅ. ಆತನೊಬ್ಬ ನೀತಿವಂತನೂ ಮತ್ತು ದೇವಭಕ್ತನೂ ಆಗಿದ್ದನು

   ಆ. ಬರಬೇಕಾದ ಮೆಸ್ಸೀಯ(ಕ್ರಿಸ್ತ)ನಿಗಾಗಿ ಆತನು ಕಾಯುತ್ತಿದ್ದನು

   ಇ. ಆತನೊಬ್ಬ ಪ್ರವಾಧನಾ ಆತ್ಮದಿಂದ ತುಂಬಲ್ಪಟ್ಟ ವ್ಯಕ್ತಿಯಾಗಿದ್ದನು:

   - ಕ್ರಿಸ್ತನನ್ನು ಕಾಣುವವರೆಗೂ ತಾನು ಸಾಯುವುದಿಲ್ಲವೆಂಬುದನ್ನು ಆತನು ತಿಳಿದಿದ್ದನು
   - ಯೇಸುವೇ ಕ್ರಿಸ್ತ(ಮೆಸ್ಸೀಯ)ನೆಂಬುದನ್ನು ಆತನು ಗುರುತಿಸಿದನು
   - ಕೊನೆಯದಾಗಿ ಯೇಸು, ಆತನ ಸೇವೆ ಮತ್ತು ಮರಿಯಳ ಬಗ್ಗೆ ಪ್ರವಾದನಾಥ್ಮಕವಾಗಿ ನುಡಿದನು
   - ಆತನು ಸರಿಯಾದ ಸಮಯದಲ್ಲಿ ಯೆರೂಸಲೇಮಿನ ದೇವಾಲಯಕ್ಕೆ ಬರುವಂತೆ ಪವಿತ್ರಾತ್ಮನಿಂದ ನಡೆಸಲ್ಪಟ್ಟಿದ್ದನು.
4. ಅನ್ನಳ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 36-38):

   ಅ. ಸಿಮೆಯೋನನಂತೆ ಆಕೆಯೊಬ್ಬ ಪ್ರವಾದಿನಿಯಾಗಿದ್ದಳು

   ಆ. ಆಕೆಯು ಬಹಳ ಮುಪ್ಪಿನವಳಾಗಿದ್ದು, ಅನೇಕ ವರ್ಷಗಳಿಂದ ವಿಧವೆಯಾಗಿದ್ದಳು

   ಇ. ಹೆಚ್ಚಿನ ಸಮಯ ಆಕೆ ದೇವಾಲಯದಲ್ಲಿ ಆರಾಧನೆ, ಉಪವಾಸ ಮತ್ತು ಪ್ರಾರ್ಥಿಸುವುದರಲ್ಲಿ ಕಳೆಯುತ್ತಿದ್ದಳು

   ಈ. ಸಿಮೆಯೋನನಂತೆ ಈಕೆ ಸಹ ಇಸ್ರಾಯೇಲರನ್ನು ಸಂತೈಸುವ ಮತ್ತು ಬಿಡಿಸುವ ಮೆಸ್ಸೀಯನಿಗಾಗಿ ಮುನ್ನೋಡುತ್ತಿದ್ದಳು
5. ಈ ವಾಕ್ಯಭಾಗದ ಪ್ರಕಾರ ದೇವಾಲಯವನ್ನು ಸಂಧಿಸಿದ ನಂತರ ಯೋಸೇಫ ಮತ್ತು ಆತನ ಕುಟುಂಬ ಗಲಿಲಾಯದಲ್ಲಿನ ನಜರೇತಿನಲ್ಲಿನ ಮನೆಗೆ ಹೋಗುತ್ತದೆ (ವ. 39). ಆದರೆ ಸ್ವಲ್ಪ ಸಮಯ ಮೊದಲೇ ಕೆಲಸಂಗತಿ ಆಗಿರುವದನ್ನು ಮತ್ತಾಯನ ಸುವಾರ್ತೆಯಿಂದ ತಿಳಿಯುತ್ತೇವೆ. ಮೊದಲನೆಯದಾಗಿ ಅವರನ್ನು ಸಂಧಿಸಲು ಮೂಡಣದೇಶದ ಜೋಯಿಸರು ಬೇತ್ಲೆಹೇಮಿಗೆ ಬರುತ್ತಾರೆ. ಅನಂತರ ಅವರು ಯೇಸುವನ್ನು ಕೊಲ್ಲಲು ಪ್ರಯತ್ನಿಸಿದ ಹೆರೋದನಿಂದ ತಪ್ಪಿಸಿಕೊಳ್ಳಲು ಅವರು ಐಗುಪ್ತಕ್ಕೆ ಓಡಿಹೋಗುತ್ತಾರೆ. ಹಾಗಾಗಿ ಅವರು ತಮ್ಮ ತವರೂರಾದ ನಜರೇತಿನಲ್ಲಿ ಐಗುಪ್ತದಿಂದ ಹಿಂತಿರುಗಿದ ಮೇಲೆಯೇ ನೆಲೆಯೂರುತ್ತಾರೆ.
6. ಈ ವಾಕ್ಯಭಾಗದಲ್ಲಿ ಕೊನೆಯಲ್ಲಿ ಯೇಸುವಿನ ಬೆಳವಣಿಗೆಯ ನಾಲ್ಕು ಹೇಳಿಕೆಗಳಿಂದ ವರ್ಣಿಸಲ್ಪಟ್ಟಿದೆ (ವ. 40):

   ಅ. ಅತನು ಬೆಳೆದನು (ಬೇರೆ ಹುಡುಗರಂತೆ)

   ಆ. ಆತನು ಬಲಗೊಂಡನು (ಬೇರೆ ಹುಡುಗರು ಬೆಳೆಯುವಂತೆ)

ಇ. ಆತನು ಜ್ಞಾನದಿಂದ ತುಂಬಿದ್ದನು

ಈ. ಆತನು ದೇವರ ಮಗನಾಗಿರುವುದರಿಂದ ವಿಶೇಷವಾದ ರೀತಿ ದೇವರ ದಯೆಯು ಆತನ ಮೇಲಿತ್ತು

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಇಂದು ದಕ್ಷಿಣ ಭಾರತದವರಾದ ನಮಗೆ ಯೇಸುವಿನ ಕುರಿತಾದ ಸಿಮೆಯೋನನ ಪ್ರವಾದನೆಯು ಪ್ರಾಮುಖ್ಯವಾದುದ್ದಾಗಿದೆ, ಯಾಕೆಂದರೆ ಇದು ಯೇಸು ಬರೀ ಇಸ್ರಾಯೇಲ್ಯರಿಗಷ್ಟೇ ಅಲ್ಲ, ಎಲ್ಲಾ ಜನರಿಗೆ ರಕ್ಷಕನಾಗಿದ್ದನೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ (ವ. 31-32). ಯೇಸು ಕೇವಲ ಯೆಹೂದಿ ಜನರ ಮೆಸ್ಸೀಯನಲ್ಲ, ಆತನು ಇಡೀ ಜಗತ್ತಿನ ರಕ್ಷಕನಾಗಿದ್ದಾನೆ.
2. ಈ ವಾಕ್ಯಭಾಗದಲ್ಲಿ ನಾಲ್ಕು ವಯಸ್ಕರ ಬಗ್ಗೆ ಲೂಕನು ಕೊಡುವ ಅನಿಸಿಕೆ(ಯೋಸೇಫ, ಮರಿಯಳು, ಸಿಮೆಯೋನ ಮತ್ತು ಅನ್ನ)ಗಳನ್ನುಈ ರೀತಿಯಾಗಿ ಸಾರಾಂಶಗೊಳಿಸಬಹದು:

   ಅ. ನೀತಿವಂತರು, ಭಕ್ತಿವಂತರು, ದೇವರಿಗೆ ಭಯಪಡುವವರು, ದೇವರ ಆಜ್ಞೆಗಳಿಗೆ ವಿಧೇಯರಾಗಿದ್ದು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವನ್ನು ಕಾಪಾಡಿಕೊಳ್ಳಲು ಹಾತೊರೆಯುವವರು

   ಆ. ಬರುವಂತಹ ಮೆಸ್ಸೀಯನಿಗಾಗಿ ನಿರೀಕ್ಷಿಸುವವರಾಗಿದ್ದರು

   ಇ. ಪವಿತ್ರಾತ್ಮನಿಂದ ನಡೆಸಲ್ಪಟ್ಟು, ಉಪಯೋಗಿಸ್ಪಟ್ಟವರು

   ಈ. ನಂಬಿಗಸ್ತರಾಗಿದ್ದರು, ಆತನಲ್ಲಿ ಮತ್ತು ಆತನ ಯೋಜನೆಗಳಲ್ಲಿ ನಂಬಿಕೆಯಿಟ್ಟಿದ್ದರು

   ಉ. ಕೃತಜ್ಞತಾ ಮತ್ತು ಆರಾಧನಾ ಮನೋಭಾವವುಳ್ಳವರು
3. ಈ ವಾಕ್ಯಭಾಗವು ಲೂಕನ ಸುವಾರ್ತೆಯ ಓದುಗರಿಗೆ ಯೇಸುವಿನ ಮತ್ತು ಆತನ ಸೇವೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಡುತ್ತದೆ:

   ಅ. ಯೇಸುವು ಅನ್ಯರ ಮತ್ತು ಯೆಹೂದ್ಯರ ರಕ್ಷಕನಾಗಿದ್ದಾನೆಂಬುದನ್ನು ಇದು ಸ್ಪಷ್ಟಪಡಿಸುತ್ತದೆ. ಈ ಒಂದು ಕಾರಣಕ್ಕಾಗಿ ಯೋಸೇಫ ಮತ್ತು ಮರಿಯರು ಸಿಮೆಯೋನನ ಮಾತುಗಳಿಗೆ ಆಶ್ಚರ್ಯಗೊಂಡಿರಬಹದು (ವ. 33)

   ಆ. ಯೇಸು ಮತ್ತು ಆತನ ಸೇವೆಯನ್ನು ಎಲ್ಲಾ ಯೆಹೂದ್ಯರು ಸ್ವೀಕರಿಸದಿರಬಹುದು. ಬದಲಾಗಿ ಅದು ಆತನನ್ನು ನಂಬಿದವರ ಮತ್ತು ಆತನನ್ನು ವಿರೋಧಿಸಿದವರ (ತಿರಸ್ಕರಿಸಿದವರ) ನಡುವೆ ಆಳವಾದ ಸಂಘರ್ಷವನ್ನು ಉಂಟುಮಾಡಬಹುದು (ವ. 34)

   ಇ. ಯೇಸು ಮತ್ತು ಆತನ ಸೇವೆಯು ಜನರ ಆತ್ಮೀಕತೆಯ ನಿಜವಾದ ಸ್ವರೂಪವನ್ನು ಪ್ರಕಟಿಸಬಲ್ಲದು. ಅವರು ದೇವರಿಂದ ಏನನ್ನು ಮುಚ್ಚಿಡಲಾಗಲ್ಲ (ವ. 35)

   ಈ. ಯೇಸುವಿನ ಜೀವನವು ಬಾಧೆಯದ್ದಾಗಿರುವದು. ಒಂದು ಕತ್ತಿಯು ಮರಿಯಳ ಮತ್ತು ಯೇಸುವಿನ ಪ್ರಾಣವನ್ನು ತಿವಿಯುವುದು (ವ. 36)

## 9. ಉತ್ತರಗಳು: ಮೂಡಣ ದೇಶದ ಜೋಯಿಸರು, ಮತ್ತಾಯ 2:1-12

### ಪ್ರಶ್ನೆಗಳಿಗೆ ಉತ್ತರಗಳು

1. ಯೆಹೂದ್ಯರ ಅರಸನನ್ನು ಕಂಡು ಆರಾಧಿಸುವುದಕ್ಕಾಗಿ ಮೂಡಣ ದೇಶದ ಜೋಯಿಸರು ಯೆರೂಸಲೇಮಿಗೆ ಬಂದರು. ಅವರಿಗೊಂದು ನಕ್ಷತ್ರ ಕಾಣಿಸಿತು. ಆತನನ್ನು ಸೂಚಿಸುವ ನಕ್ಷತ್ರವು ಅವರನ್ನು ಪ್ಯಾಲೆಸ್ತೀನಿನೆಡೆಗೆ ನಡೆಸಿತು (ವ. 1-2). ಆತನನ್ನು ಯೆರೂಸಲೇಮಿನ ರಾಜಧಾನಿಯಲ್ಲಿ ತಾವು ಕಾಣಬಹದೆಂಬುದಾಗಿ ಅವರು ಊಯಿಸಿರಬೇಕು.
2. ಯೆಹೂದ್ಯರ ಅರಸನಾಗಿ ಹುಟ್ಟಬೇಕಾದವನು ಎಲ್ಲಿ ಎಂಬುದನ್ನು ಹೆರೋದನು ಯೆಹೂದಿ ಮಹಾಯಾಜಕರೂ ಮತ್ತು ಶಾಸ್ತ್ರಿಗಳನ್ನು ಕೇಳಿ ತಿಳಿದುಕೊಂಡನು. ಅವರು ಮಿಕನ ಪುಸ್ತಕದಿಂದ ಒಂದು ಪ್ರವಾದನೆಯನ್ನು ಯೇಸುವಿಗೆ ಸೂಚಿಸಿ ಹೇಳುತ್ತಾರೆ. ಅದರಲ್ಲಿ ಯೆಹೂದ ಸೀಮೆಯ ಬೆತ್ಲೆಹೇಮಿನಿಂದ ಒಬ್ಬ ಅಧಿಪತಿಯು ಹೊರಡುವನು ಎಂದಿದೆ (ವ. 4-6).
3. ಜೋಯಿಸರನ್ನು ಬೇತ್ಲೆಹೇಮಿಗೆ ಕಳುಹಿಸುವಾಗ ಅರಸನಾದ ಹೆರೋದನು ಅವರಿಗೆ ಆ ಮಗುವಿನ ಬಗೆಗಿನ ವಿವರದೊಂದಗೆ ತಿರುಗಿ ತನ್ನ ಬಳಿ ಬರಬೇಕೆಂದು ಸಲಹೆಕೊಟ್ಟನು. ತಾನೂ ಸಹ ಆ ಮಗುವಿಗೆ ಅಡ್ಡಬೀಳುತ್ತೇನೆಂಬ ಕಾರಣವನ್ನು ಅವರಿಗೆ ಕೊಟ್ಟನು (ವ. 8)
4. ಯೇಸು ಇರುವ ಮನೆಯ ಮೇಲೆಯೇ ಆ ನಕ್ಷತ್ರವು ನಿಂತಿತು (ವ. 9). ಹೀಗೆ ಜೋಯಿಸರು ಆ ಮನೆಯನ್ನು ಗುರುತಿಸಿದರು.
5. ಯೆಹೂದ್ಯರ ಅರಸನಾಗಿ ಹುಟ್ಟಿದವನ ಬಗ್ಗೆ ತಾವು ಕಂಡದ್ದನು ಹೆರೋದನಿಗೆ ತಿಳಿಸಲು ತಿರುಗಿ ಯೆರೂಸಲೇಮಿಗೆ ಹೋಗಬಾರದೆಂದು ದೇವರು ಕನಸಿನ ಮೂಲಕ ಜೋಯಿಸರಿಗೆ ತಿಳಿಸಿದ್ದನು (ವ. 12).

### ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ಜೋಯಿಸರ ಭೇಟಿಯು ತನ್ನ ಮತ್ತು ತನ್ನ ಕುಟುಂಬದ ಭವಿಷ್ಯದ ಬಗ್ಗೆ ಹೆರೋದನನ್ನು ಚಿಂತೆಗೀಡು ಮಾಡಿರಬೇಕು. ಆತನಿಗೆ ಚೊಚ್ಚಲು ಮಗನಿರಲಿಲ್ಲ. ಹಾಗಾಗಿ ಯೆಹೂದ್ಯರ ಚೊಚ್ಚಲು ಅರಸನು ಸ್ವತಃ ಆತನಿಗೆ ಮತ್ತು ಆತನ ಸಾಮ್ರಾಜ್ಯಕ್ಕೆ ಒಂದು ಗಂಭೀರವಾದ ಬೆದರಿಕೆಯಾಗಿತ್ತು.
2. ಈ ಕಥೆಯಲ್ಲಿನ ನಾಲ್ಕು ಪ್ರಾಮುಖ್ಯ ವಿಷಯವಸ್ತುಗಳು:

   ಅ. ಅನ್ಯರ ವಿಷಯವಸ್ತು: ಯೇಸುವನ್ನು ಕಂಡು ಆತನಿಗೆ ಅಡ್ಡಬೀಳುವುದಕ್ಕೆ ಬಂದ ಜೋಯಿಸರು ಅನ್ಯಮತಸ್ಥರಾಗಿದ್ದರು. ಯೇಸುವಿನ ರಾಜ್ಯವು ಯೆಹೂದ್ಯರಿಗಷ್ಟೇ ಸೀಮಿತವಾಗಿರದೆ ಅದು ಎಲ್ಲಾ ಜನಾಂಗಗಳನ್ನು ಒಳಗೊಂಡಿದೆ ಎಂಬುದನ್ನು ಇದು ಸೂಚಿಸುತ್ತದೆ. ಮತ್ತಾಯನು ತನ್ನ ಸುವಾರ್ತೆಯನ್ನು ಬರೆಯುವಾಗ ಈ ಸತ್ಯವು ಸ್ಥಳೀಯ ಸಭೆಗಳಲ್ಲಿ ಸ್ಪಷ್ಟವಾಗಿತ್ತು. ಅಲ್ಲಿ ಯೆಹೂದ್ಯರಿಗಿಂತ ಅನ್ಯಮತಸ್ಥ ವಿಶ್ವಾಸಿಗಳು ಅನೇಕರಿದ್ದರು.

   ಆ. ನೆರವೇರಿಕೆಯ ವಿಷಯವಸ್ತು: ಯೆಹೂದ್ಯರ ಅರಸನ ಬಗ್ಗೆ ಮತ್ತಾಯನು ಹಳೇ ಒಡಂಬಡಿಕೆಯ ಎರಡು ಪ್ರವಾದನಾ ವಾಣಿಯನ್ನು ಉಲ್ಲೇಖಿಸುತ್ತಾನೆ:

   - ಆ ನಕ್ಷತ್ರ/ರಾಜದಂಡವು ಇಸ್ರಾಯೇಲಿನೊಳಗಿಂದ ಉದಯಿಸುವುದಾಗಿತ್ತು. ಇದನ್ನು 1400 ವರ್ಷಗಳ ಹಿಂದೆ ಮೆಸೊಪೊಟಮಿಯಾದ ದೇವದರ್ಶಿಯಾದ ಬಿಳಾಮನು ಮುಂತಿಳಿಸಿದ್ದನು
   - ಯೆಹೂದದಲ್ಲಿನ ಬೇತ್ಲೆಹೇಮು ಆತನ ಜನ್ಮಸ್ಥಳವಾಗಿರುವುದು. ಇದು 700 ವರ್ಷಗಳ ಹಿಂದೆ ಮಿಕನೆಂಬ ಪ್ರವಾದಿಯಿಂದ ಮುಂತಿಳಿಸಲ್ಪಟ್ಟಿತ್ತು

   ಇ. ವಿರೋಧಾತ್ಮಕ (ವ್ಯತ್ಯಾಸಮಯ) ವಿಷಯವಸ್ತು: ಈ ಕಥೆಯಲ್ಲಿ ಹೆಚ್ಚುಕಡಿಮೆ ನಾಲ್ಕು ತದ್ವಿರುದ್ಧತೆ(ವ್ಯತ್ಯಾಸ)ಯನ್ನು ನಾವು ಕಾಣಬಹದು:

- ಅನ್ಯದೇಶದ ಸಂದರ್ಶಕರು ಮತ್ತು ಸ್ಥಳೀಯ ಯೆಹೂದ್ಯರ ನಡುವಿನ ತದ್ವಿರುದ್ಧತೆ: ಮೆಸ್ಸೀಯನನ್ನು ಕಂಡುಕೊಳ್ಳುವುದಕ್ಕಾಗಿ ಜೋಯಿಸರು ಬಹುದೂರದಿಂದ ಬಂದಿದ್ದರು. ಹತ್ತಿರವಿದ್ದು, ಪ್ರವಾದನೆಗಳನ್ನೆಲ್ಲ ಅರಿತಿದ್ದ ಯೆಹೂದನಾಯಕರು ಆತನನ್ನು ನೋಡುವುದರ ಬಗ್ಗೆ ಮನಸ್ಸು ಮಾಡಲಿಲ್ಲ.
- ಶ್ರೀಮಂತ/ಬಲಿಷ್ಠನು ಮತ್ತು ಬಡ ಪುಟ್ಟ ಮಗುವಿನ ನಡುವಿನ ತದ್ವಿರುದ್ಧತೆ: ಅರಸನಾದ ಹೆರೋದನು ಶ್ರೀಮಂತನೂ ಬಲಿಷ್ಠನೂ ಆಗಿದ್ದನು. ಬಾಲಯೇಸುವಿಗೆ ಲೋಕದ ಸಂಪತ್ತಾಗಲೀ, ಲೌಕಿಕ ಅಧಿಕಾರ/ಬಲವಾಗಲೀ ಇರಲಿಲ್ಲ, ಮೂಡಣ ದೇಶದ ಜೋಯಿಸರು ಬಹು ಶ್ರೀಮಂತರಾಗಿದ್ದು ಆ ಚಿಕ್ಕ ಬಡ ಮಗುವಿಗಾಗಿ ಬೆಲೆಬಾಳುವ ಕಾಣಿಕೆಯೊಂದಿಗೆ ಬಂದರು.
- ಅರಸತ್ವದ ನಡುವಿನ ತದ್ವಿರುದ್ಧತೆ: ಹೆರೋದನು ರೋಮನ್ ನಾಯಕರಿಂದ ಮತ್ತು ರೋಮನ್ ಸಾಮ್ರಾಜ್ಯದಿಂದ ನೇಮಿಸಲ್ಪಟ್ಟ ಒಬ್ಬ ದುಷ್ಟ ಮತ್ತು ನಿಷ್ಕರುಣೆಯಾದ ಅರಸನಾಗಿದ್ದನು. ಯೇಸುವು ದೇವರಿಂದ ಮತ್ತು ದೇವರ ರಾಜ್ಯದ ಅಧಿಪತಿಯಿಂದ ಆರಿಸಲ್ಪಟ್ಟ ಒಬ್ಬ ಕಾಯುವ ಅರಸನಾಗಿದ್ದಾನೆ.
- ಒಳ್ಳೆಯದು ಮತ್ತು ಕೆಟ್ಟದ್ದರ ನಡುವಿನ ತದ್ವಿರುದ್ಧತೆ: ಜೋಯಿಸರು ಒಳ್ಳೆಯ ಉದ್ದೇಶದಿಂದ ಚೊಚ್ಚಲ ಅರಸನಿಗೆ ಗೌರವಿಸಿ ಆರಾಧಿಸಲು ಬಂದರು. ಆದರೆ ಅರಸನಾದ ಹೆರೋದನು ದುರುದ್ದೇಶದಿಂದ ಮಗುವನ್ನು ಕಂಡುಕೊಳ್ಳಲು ಬಯಸಿದನು.

ಈ. ಜ್ಯೋತಿಶ್ಯಾಸ್ತ್ರದ ವಿಷಯವಸ್ತು: ಆ ದಿನಗಳಲ್ಲಿ ಅನೇಕರು ಜೋತಿಶಾಸ್ತ್ರದಲ್ಲಿ ನಂಬಿಕೆಯನ್ನಿಟ್ಟಿದ್ದರು. ಆಕಾಶದಲ್ಲಿ ರಾತ್ರಿ ಏನಾದರೂ ಹೊಸದನ್ನು ಕಂಡರೆ ದೇವರು ಏನೋ ಪ್ರಾಮುಖ್ಯವಾದ ಸುದ್ದಿಯನ್ನು ತಿಳಿಯಪಡಿಸುತ್ತಿದ್ದಾನೆಂಬುದಾಗಿ ತಿಳಿದುಕೊಳ್ಳುತ್ತಿದ್ದರು. ಯೇಸುವಿನ ಸಮಯದಲ್ಲಿ ರೋಮನ್ ಸಾಮ್ರಾಜ್ಯದಲ್ಲಿನ ಜನರ ನಡುವೆ ಯೂದಾಯವು ಒಂದು ಹೊಸ ಜಾಗತಿಕ ಸಾಮ್ರಾಜ್ಯದ ಮೂಲವಾಗುವುದು ಎಂಬ ಒಂದು ಸುದ್ದಿಯು ಹಬ್ಬಿಕೊಂಡಿತ್ತು. ಹಾಗಾಗಿ ಬಹೂದೂರದಿಂದ ಯೂದಾಯಕ್ಕೆ ಪ್ರಯಾಣಿಸಿ ಬಂದ ಅನ್ಯದೇಶೀಯ ಜೋಯಿಸರ ಕುರಿತ ಮತ್ತಾಯನ ವಿವರವು ಆ ದಿನಗಳಲ್ಲಿ ಜಾಗತಿಕ ನೋಟ ಮತ್ತು ಅಪೇಕ್ಷೆಗೆ ಸರಿ ಹೊಂದುತ್ತದೆ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ  ಮೇಲಿನ ಟಿಪ್ಪಣಿಗಳ ಉತ್ತರಗಳು**

***ಜೋಯಿಸರ ಭೇಟಿ*** ಎಂಬ ನಿಮ್ಮ ಅಧ್ಯಯನವು ಈ ಮೂರು ಭಾಗಗಳನ್ನು ಒಳಗೊಳ್ಳಬಹದು

- ಕಥೆಯ ಸಾರಾಂಶ
- ನಾಲ್ಕು ಪ್ರಮುಖ ವಿಷಯವಸ್ತುಗಳು, ಆದರೆ "ತದ್ವಿರುದ್ಧತೆಯ ವಿಷಯವಸ್ತುವಿನ ಮೇಲೆ ಗಮನ
- ಈ ಕಥೆಯಲ್ಲಿ ನಿಮ್ಮನ್ನೇ ನೋಡಿಕೊಳ್ಳಿ. ನೀವು ಹೆರೋದನಂತಿರುವಿರಾ (ನಿಷ್ಕರುಣೆ, ಸ್ವಾರ್ಥ, ದುಷ್ಟ, ದೇವರ ರಾಜ್ಯವನ್ನು ವಿರೋಧಿಸುವವರಾ)? ಅಥವಾ ಮಹಾಯಾಜಕರು ಮತ್ತು ಶಾಸ್ತ್ರಿಗಳಂತಿರುವಿರಾ (ಸತ್ಯವನ್ನು ತಿಳಿದು ಅಕ್ಕಾಗಿ ಪ್ರಯತ್ನಿಸದಿರುವುದು, ಯೇಸುವನ್ನು ಕಂಡುಕೊಳ್ಳಲು ಆಸಕ್ತಿ ತಳೆಯದಿರುವುದು)? ಅಥವಾ ಜೋಯಿಸರಂತಿರುವಿರಾ (ಯೋಸುವನ್ನು ಹುಡುಕುವುದು, ಯೇಸುವನ್ನು ಕಂಡುಕೊಳ್ಳುವುದು, ಯೇಸುವನ್ನ ಆರಾಧಿಸುವುದು, ನಮ್ಮಲ್ಲಿರುವುದನ್ನು ಯೇಸುವಿಗೆ ಕಾಣಿಕೆಯಾಗಿ ಕೊಡುವುದು)?

**10. ಉತ್ತರಗಳು: ಐಗುಪ್ತಕ್ಕೆ ಪಲಾಯನ ಮತ್ತು ನಜರೇತಿಗೆ ಹಿಂತಿರುಗಿದ್ದು,**

**ಪ್ರಶ್ನೆಗಳಿಗೆ ಉತ್ತರಗಳು**

1. ದೇವದೂತನು ಯೋಸೇಫನಿಗೆ ಕುಟುಂಬ ಸಮೇತ ಐಗುಪ್ತಕ್ಕೆ ಓಡಿಹೋಗಬೇಕೆಂದು ಹೇಳಿದನು, ಯಾಕೆಂದರೆ ಅರಸನಾದ ಹೆರೋದನು ಯೇಸುವನ್ನು ಕೊಲ್ಲಬೇಕೆಂದು ಹುಡುಕುತ್ತಿದ್ದನು (ವ. 13).
2. ಹೆರೋದನು ಸಾಯುವವರೆಗೂ ಯೋಸೇಫನ ಕುಟುಂಬವು ಐಗುಪ್ತದಲ್ಲಿತ್ತು (ವ. 19).
3. ಪ್ಯಾಲೆಸ್ತೇನಿಗೆ ಹೋಗಬೇಕಾದ ಸಮಯ ಬಂದಿದೆ ಎಂಬುದನ್ನು ತನಗೆ ಕನಸಿನಲ್ಲಿ ಕಾಣಿಸಿಕೊಂಡ ದೂತನ ಮೂಲಕ ತಿಳಿದುಕೊಂಡನು (ವ. 19-20).
4. ಪ್ಯಾಲೆಸ್ತೇನಿಗೆ ಹಿಂತಿರುಗಿದ ಮೇಲೆ ಯೋಸೇಫನು ತನ್ನ ಕುಟುಂಬದೊಂದಿಗೆ ಉತ್ತರ ಪ್ಯಾಲೆಸ್ತೇನಿನಲ್ಲಿನ ಗಲಿಲಾಯದ ನಜರೇತ್ ಎಂಬ ಒಂದು ಸಣ್ಣ ಊರಲ್ಲಿ ವಾಸವಾಗಿದ್ದನು (ವ. 22-23).
5. –

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಹೆರೋದನು ಎರಡು ವರ್ಷಕ್ಕಿಂತ ಮೇಲ್ಪಟ್ಟ ಗಂಡು ಮಕ್ಕಳನ್ನು ಕೊಲ್ಲಿಸಲಿಲ್ಲ, ಯಾಕೆಂದರೆ ಯೇಸುವು ಎರಡು ವರ್ಷಕ್ಕಿಂತ ಕೆಳಗಿನವನೆಂಬುದನ್ನು ಜೋಯಿಸರು ಕೊಟ್ಟ ಮಾಹಿತಿಯ ಮೂಲಕ ಲೆಕ್ಕಿಸಿಕೊಂಡಿದ್ದನು (ಹೋಲಿಸಿ ವ. 16).
2. ಹಳೇ ಒಡಂಡಿಕೆಯ ಪ್ರವಾದನೆಗಳು ಮೆಸ್ಸೀಯನಾದ ಯೇಸುವಿನಲ್ಲಿ ನೆರವೇರಿದವೆಂಬುದನ್ನು ಮತ್ತಾಯನು ಈ ರೀತಿಯಾಗಿ ತೋರಿಸುತ್ತಾನೆ:

   ಅ. ಆತನು ಹೋಶೇಯ 11:1 ನ್ನು ಹೇಳುತ್ತಾನೆ: ಹೋಶೇಯದಲ್ಲಿನ ಈ ವಾಕ್ಯಭಾಗವು ಮೋಶೆಯ ಕಾಲದಲ್ಲಿ ದೇವರು ತನ್ನ ಜನರನ್ನು ಐಗುಪ್ತದಿಂದ ಕರೆಯುವುದನ್ನು ಸೂಚಿಸುತ್ತದೆ. ಯೋಶೇಯದಲ್ಲಿನ ವಚನವು ದೇವರು ಯೇಸುವನ್ನು ಐಗುಪ್ತದೊಳಗಿಂದ ಕರೆಯುವುದನ್ನು ಸಹ ಸೂಚಿಸುತ್ತದೆಂಬುದಾಗಿ ಪವಿತ್ರಾತ್ಮನು ಮತ್ತಾಯನಿಗೆ ಪ್ರಕಟಿಪಡಿಸಿದನು. ಹೀಗೆ ಹೋಶೇಯಯದಲ್ಲಿನ ದೇವರ "ಚೊಚ್ಚಲ ಜನಾಂಗವಾದ ಇಸ್ರಾಯೇಸು (ಅಲ್ಲದೆ "ಮಗು" ಮತ್ತು "ನನ್ನ ಮಗನು") ಮತ್ತಾಯನ ಸುವಾರ್ತೆಯಲ್ಲಿನ ದೇವರ ಮಗನಾದ ಯೇಸುವಿಗೆ ನೆರಳಿನಂತಿದೆ.

   ಆ. ಯೆರೆಮೀಯ 31:15 ರಲ್ಲಿ ತಾನು ಕಳಕೊಂಡಿರುವ ಮಕ್ಕಳಿಗಾಗಿ ರಾಮದಲ್ಲಿನ ರಾಹೇಲಳ ಅಳುವಿಕೆ ಮತ್ತು ಗೋಳಾಟವು (ಬಾಬೆಲಿನವರು ಯೆಹೂದವನ್ನ ಆಕ್ರಮಿಸಿದಾಗಿ ಆದ ರಾಷ್ಟ್ರೀಯ ವಿಪತ್ತನ್ನು ಸೂಚಿಸುತ್ತದೆ, ಆ ಸಮಯದಲ್ಲಿ ಅನೇಕರು ಕೊಲ್ಲಲ್ಪಡುತ್ತಾರೆ ಮತ್ತು ಉಳಿದವರು ಬಾಬೆಲಿಗೆ ಸೆರೆಯಾಗಿ ಒಯ್ಯಲ್ಪಡುತ್ತಾರೆ) ಅರಸನಾದ ಹೆರೋದನಿಂದ ಕೊಲ್ಲಲ್ಪಟ್ಟ ತಮ್ಮ ಮಕ್ಕಳಿಗಾಗಿ ಬೇತ್ಲೆಹೇಮಿನ ತಾಯಂದಿರು ಅಳುತ್ತಾ ಗೋಳಾಡುವುದರೊಂದಿಗೆ ನೆರವೇರಿದೆ ಎಂಬುದನ್ನು ಆತನು ತಿಳಿಸುತ್ತಾನೆ. ಆದರೆ ದೇವರು ಇಸ್ರಾಯೇಲ್ ಜನಾಂಗನ್ನು ರಕ್ಷಿಸಿ, ಇಸ್ರಾಯೇಲ್ಯರನ್ನು ಬಾಬೆಲಿನ ಸೆರೆಯಿಂದ ಹಿಂತಿರುಗಿ ಕರತರುತ್ತಾನೆ. ಅಲ್ಲದೆ ಅವರೊಂದಿಗೆ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತೇನೆಂಬುದಾಗಿ ಸಹ ಆತನು ವಾಗ್ದಾನ ಮಾಡುತ್ತಾನೆ. ದೇವರು ಯೇಸುವನ್ನು ಹೆರೋದನಿಂದ ರಕ್ಷಿಸಿ ಐಗುಪ್ತದಿಂದ ಆತನನ್ನು ಹಿಂತಿರುಗಿ ಕರತರುತ್ತಾನೆ. ಯೇಸು ಮತ್ತು ಶಿಲುಬೆಯ ಮೇಲಿನ ಆತನ ಮರಣದ ಮೂಲಕ ದೇವರು ತನ್ನ ಆ ಹೊಸ ಒಡಂಬಡಿಕೆಯ ವಾಗ್ದಾನವನ್ನು ನೆರವೇರಿಸಿದ್ದಾನೆ.

   ಇ. ಹಳೇ ಒಡಂಬಡಿಕೆಯಲ್ಲಿ ಅಂತಹ ಪ್ರವಾದನೆಯೇನೂ ಇಲ್ಲದಿದ್ದರೂ ಸಹ, ಪ್ರವಾದಿಗಳು ಆತನನ್ನು "ನಜರಾಯ" ನೆಂದು ಕರೆಯುವರೆಂಬುದನ್ನು ಮುಂತಿಳಿಸಿದ್ದರೆಂಬ ಆಶ್ಚರ್ಯಕರ ಹೇಳಿಕೆಯನ್ನು ಆತನು ಹೇಳುತ್ತಾನೆ. ಈ ರಹಸ್ಯಕ್ಕಿರುವ ಪರಿಹಾರ ಹೊಸ ಒಡಂಬಡಿಕೆಯಲ್ಲಿ ನಜರಾಯ ಎಂಬ ಪದಕ್ಕೆ ಎರಡು ಅರ್ಥವಿತ್ತೆಂಬ ವಾಸ್ತವಾಂಶದಲ್ಲಿ ಕಾಣಬಹುದು. ಇದರರ್ಥ "ನಜರೇತಿನವನು" ಅಥವಾ "ಈತನು ಇತರರಿಂದ ತಿರಸ್ಕರಿಸಲ್ಪಟ್ಟವನು" ಎಂಬುದಾಗಿ ಸಹ ಆಗಿತ್ತು. ಕೀರ್ತನೆ 22:6 ಮತ್ತು

ಯೆಶಾಯ 53:3 ರಿಂದ ನಾವು ಮೆಸ್ಸೀಯನು ಜನರಿಂದ ನಿಂದಿಸಲ್ಪಡುವನು, ತಿರಸ್ಕರಿಸಲ್ಪಡುವನು, ಧಿಕ್ಕರಿಸಲ್ಪಡುವನೆಂಬುದಾಗಿ ತಿಳಿಯಬಹುದು. ಹೀಗೆ ಈ ರೀತಿಯಲ್ಲಿ ಆತನು "ನಜರಾಯ" ನಾಗಿರುವನು ಎಂಬುದಾಗಿದೆ. ಮತ್ತಾಯ ಪದವನ್ನು ಇನ್ನೂ ಅಕ್ಷರಶಃ ರೂಪದಲ್ಲಿ ಬಳಸುತ್ತಾನೆ. ಯೇಸುವು ನಜರಾಯನು, ಕಾರಣ ಆತನು ನಜರೇತಿನಲ್ಲಿ ಬೆಳೆದವನಾಗಿದ್ದನು.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

***ಯೇಸುವು ವಾಗ್ದಾನದ ಮೆಸ್ಸೀಯನು*** ಎಂಬ ಅಧ್ಯಯನವನ್ನು ಈ ರೀತಿಯಾಗಿ ರಚನೆ ಮಾಡಬಹದು:

1. ಪೀಠಿಕೆ: ಮತ್ತಾಯನು ತನ್ನ ಸುವಾರ್ತೆಯಲ್ಲಿ ಹಳೇ ಒಡಂಬಡಿಕೆಯ ಪ್ರವಾದನೆಗಳು ಯೇಸುವಿನಲ್ಲಿ ನೆರವೇರಿವೆ ಎಂಬ ಒಂದು ಅಂಶವನ್ನು ತಿಳಿಸುತ್ತಾನೆ. ಮತ್ತಾಯ 2:13-23 ರಲ್ಲಿ ಇದಕ್ಕೆ ನಾವು ಮೂರು ಉದಾಹರಣೆಗಳನ್ನು ಕಾಣಬಹುದು. ವಾಕ್ಯಭಾಗ ಓದಿ.
    - ಹೋಶೇಯ 11:1: ಯೇಸು ದೇವರ ನಿಜವಾದ ಮಗನು
    - ಯೆರೆಮೀಯ 31:15: ಯೇಸು ಇರುವಾಗ ಗೋಳಾಟವಾಗಲಿ, ಕಣ್ಣೀರಾಗಲಿ ಇರುವುದಿಲ್ಲ. ಆತನು ರಕ್ಷಕನಾಗಿದ್ದಾನೆ. "ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ, ಇದು ಪಾಪಗಳ ಕ್ಷಮೆಗಾಗಿ ಬಹುಜನರಿಗೋಸ್ಕರ ಸುರಿಸಲ್ಪಡುವ ರಕ್ತ" (ಮತ್ತಾ. 26:28)
    - ಕೀರ್ತನೆ 22:6, ಯೆಶಾಯ 53:3: ನಜರೇತಿನ ಯೇಸುವು ತಿರಸ್ಕರಿಸಲ್ಪಟ್ಟ ಮೆಸ್ಸೀಯನಾಗಿದ್ದು ಜನರಿಂದ ಧಿಕ್ಕರಿಸಲ್ಪಡುವನು
2. ಯೇಸು ಯಾರೆಂಬುದನ್ನು ನೀವು ತಿಳಿದಿರುವಿರಾ? ಆತನನ್ನು ನಿಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸುವಿರಾ?



## 11. ಉತ್ತರಗಳು: ವಾಕ್ಯವು ನರಾವತಾರವೆತ್ತಿ ಬಂದದ್ದು, ಯೋಹಾನ 1:1-18

### ಪ್ರಶ್ನೆಗಳಿಗೆ ಉತ್ತರಗಳು

1. ವಚನ 1-4 ರಲ್ಲಿ ವಾಕ್ಯದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ಆತನು ಆದಿಯಲ್ಲೇ ಇದ್ದನು

   ಆ. ಆತನು ದೇವರೊಂದಿಗಿದ್ದನು

   ಇ. ಆತನ ಮೂಲಕವಾಗಿಯೇ ಸಮಸ್ತವೂ ಉಂಟಾಯಿತು

   ಈ. ಆತನಲ್ಲಿ ಜೀವವಿತ್ತು, ಆತನ ಮೂಲಕ ಜನರು ಜೀವ ಮತ್ತು ಬೆಳಕನ್ನು (ರಕ್ಷಣೆ) ಕಾಣಬಹುದಾಗಿತ್ತು

2. ವಚಬ 6-8 ರಲ್ಲಿ ಸ್ನಾನಿಕನಾದ ಯೋಹಾನನ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

   ಅ. ಆತನು ದೇವರಿಂದ ಕಳುಹಿಸಲ್ಪಟ್ಟವನು

   ಈ. ಆತನ ಸೇವೆಯು, ರಕ್ಷಣೆಯ ಬೆಳಕಿನ ಬಗ್ಗೆ ಸಾಕ್ಷಿ ಹೇಳುವವನಾಗಿದ್ದನು. ಹೀಗೆ ಈತನ ಮೂಲಕ ಜನರು ಯೇಸುವಿನಲ್ಲಿ ನಂಬಿಕೆಯಿಡಬಹುದಾಗಿದೆ.

3. ವಚನ 17 ರಲ್ಲಿ ಹಳೆಯ ಮತ್ತು ಹೊಸ ಒಡಂಬಡಿಕೆಗಳೆರಡೂ ತದ್ವಿರುದ್ಧವಾಗಿವೆ. ಹಳೆಯ ಒಡಂಬಡಿಕೆಯ ಮೂಲಕ (ಮೋಶೆ), ದೇವರು ತನ್ನ ಜನರಿಗೆ ಧರ್ಮಶಾಸ್ತ್ರವನ್ನು ಕೊಟ್ಟನು, ಆದರೆ ಹೊಸ ಒಡಂಬಡಿಕೆಯ ಮೂಲಕ (ಯೇಸು), ದೇವರು ಕೃಪೆಯನ್ನೂ ಸತ್ಯವನ್ನೂ ಕೊಟ್ಟನು.

4. ಏಕಪುತ್ರನೂ ಸ್ವತಃ ದೇವರೂ ಆಗಿರುವವನೇ (ದೈವಿಕ ಯೇಸು) ದೇವರನ್ನು ಜನರಿಗೆ ತಿಳಿಯಪಡಿಸಿದನು (ವ. 18)

### ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು

1. ವಚನ 9:13: ದೈವಿಕ ಯೇಸುವು ದೇವರ ರಕ್ಷಣೆಯೊಂದಿಗೆ ಲೋಕಕ್ಕೆ ಬರುವವನಾಗಿದ್ದನು. ಆದರೆ ಆತನು ದೇವರಾಗಿದ್ದರೂ ಮತ್ತು ಆತನ ಮೂಲಕವೇ ಸಮಸ್ತವೂ ಸೃಷ್ಟಿಸಲ್ಪಟ್ಟಿದ್ದರೂ ಸಹ ಲೋಕವು (ಜನರು) ಆತನನ್ನು ಅರಿಯಲಿಲ್ಲ. ಸ್ವತಃ ತನ್ನ ಜನರಿಂದಲೇ ಆತನು ತಿರಸ್ಕರಿಸ್ಪಟ್ಟನು. ಆದರೆ ಆತನನ್ನು ಅಂಗೀಕರಿಸಿ ಆತನಲ್ಲಿ ನಂಬಿಕೆಯಿಟ್ಟವರೆಲ್ಲರು ಆತ್ಮೀಕವಾಧ ಹುಟ್ಟಿನ ಮೂಲಕ ದೇವರ ಮಕ್ಕಳಾದರು. ಅವರು ದೇವರಿಂದಲೇ ಹುಟ್ಟಿದವರಾಗಿದ್ದಾರೆ.

2. ವಚನ 14 ರಿಂದ ಯೋಹಾನನ ಸುವಾರ್ತೆಯ ಗ್ರಂಥಕರ್ತನ ಬಗ್ಗೆ ನಾವು ಎರಡು ಸಂಗತಿಗಳನ್ನು ತಿಳಿದುಕೊಳ್ಳಬಹುದು:

   ಅ. ಆತನು ಯೇಸುವನ್ನು ವೈಯಕ್ತಿಕವಾಗಿ ಸಂಧಿಸಿದವನು

   ಆ. ಯೇಸು ಯಾರೆಂಬುದನ್ನು ಆತನು ಅರಿತುಕೊಂಡವನಾಗಿದ್ದಾನೆ: ಯೇಸುವು ದೇವರ ನರಾವತಾರ.

3. ಯೇಸುವಿನ ಕುರಿತಾಗಿ ಯೋಹಾನನ ಸಾಕ್ಷಿ (ವ. 15): ಯೇಸುವಿನ ಸೇವೆಯು ಯೋಹಾನನ ಸೇವೆಯ ನಂತರ ಪ್ರಾರಂಭವಾಗುತ್ತದೆ, ಯೇಸುವು ಯೋಹಾನನಿಗಿಂತ ಹೆಚ್ಚಿನವನು ಮತ್ತು ಆತನು ಯೋಹಾನನಿಗಿಂತ ಮೊದಲೇ ಇದ್ದವನು.

## 12. ಉತ್ತರಗಳು: ಹನ್ನೆರಡು ವರ್ಷ ಪ್ರಾಯದಲ್ಲಿ ಯೇಸು, ಲೂಕ 2:41-52

### ಪ್ರಶ್ನೆಗಳಿಗೆ ಉತ್ತರಗಳು

1. ಪ್ರತಿವರ್ಷದಂತೆ ಯೇಸುವಿನ ಕುಟುಂಬವು ಯೆರೂಸಲೇಮಿನಲ್ಲಿ ಪಸ್ಕಹಬ್ಬವನ್ನು ಆಚರಿಸುತ್ತಾರೆ (ವ. 41). ಪಸ್ಕಹಬ್ಬವು ಮೂರು ಕಡ್ಡಾಯವಾದ ವಾರ್ಷಿಕ ಹಬ್ಬಗಳಲ್ಲಿ ಒಂದಾಗಿತ್ತು.
2. ತಾವು ಯೇಸುವನ್ನು ಬಿಟ್ಟು ಬಂದಿದ್ದೇವೆಂಬುದನ್ನು ತಿಳಿದುಕೊಳ್ಳುವುದಕ್ಕಿಂತ ಮುನ್ನ ಯೋಸೇಫ ಮತ್ತು ಮರಿಯರು ಸುಮಾರು ಒಂದು ದಿನದಷ್ಟು ದೂರ ಪ್ರಯಾಣಿಸಿದ್ದರು (ವ. 44).
3. ಶಾಸ್ತ್ರದ ಕುರಿತ ಆತನ ತಿಳುವಳಿಕೆ ಮತ್ತು ಅವರಿಗೆ ಕೊಟ್ಟ ಉತ್ತರಗಳ ನಿಮಿತ್ತ ಯೆಹೂದಿ ನಾಯಕರು ಯೇಸುವಿನ ಬಗ್ಗೆ ಆಶ್ಚರ್ಯಪಟ್ಟರು (ವ. 47).
4. ಈ ವಾಕ್ಯಭಾಗದ ಕೊನೆಯಲ್ಲಿ ನಾವು ಮರಿಯಳು ನಡೆದ ಸಂಗತಿಗಳನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಯೋಚಿಸುತ್ತಿದ್ದಳು (ಬೇತ್ಲೆಹೇಮಿನಲ್ಲಿ ಕುರುಬರು ಯೇಸು ಮಗುವಾಗಿದ್ದಾಗ ಸಂಧಿಸಿದ ವೇಳೆ ತಾನು ಮಾಡಿದಂತೆಯೇ, ಲೂಕ 2:51).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳ ಉತ್ತರಗಳು

1. ಯೋಸೇಫ ಮತ್ತು ಮರಿಯರು ಯೇಸುವನ್ನು ದೇವಾಲಯದಲ್ಲಿ ಕಂಡಾಗ ಬೆರಗಾದರು, ಯಾಕೆಂದರೆ ಹನ್ನೆರಡು ವರುಷದ ಹುಡಗನು ಮೂರು ದಿನಗಳ ಕಾಲ ಸತ್ಯವೇದ ಪಂಡಿತರೊಂದಿಗೆ ಮಾತಾಡುವುದರಲ್ಲಿ ತೊಡಗಿರುತ್ತಾನೆಂಬುದನ್ನು ಅವರು ನಿರೀಕ್ಷಿಸಿರಲಿಲ್ಲ (ವ. 48).
2. ಮರಿಯಳ ಪ್ರಶ್ನೆ ಮತ್ತು ಯೇಸುವಿನ ಉತ್ತರದ ನಡುವಿನ ತದ್ವಿರುದ್ಧತೆ (ವ. 48-49):

   ಅ. ತನ್ನ ತಂದೆಯಾದ ಯೋಸೇಫನಿಗೆ ತಳಮಳವನ್ನು, ಚಿಂತೆಯನ್ನು ಉಂಟುಮಾಡಿದಕ್ಕಾಗಿ ಮರಿಯಳು ಯೇಸುವನ್ನು ಬೈಯುತ್ತಾಳೆ.

   ಆ. ತಾನು ತನ್ನ ತಂದೆಯ ಮನೆಯಲ್ಲಿ ಇರಬೇಕಾಗಿದೆ ಎಂಬುದನ್ನು ಅರ್ಥೈಸಿಕೊಳ್ಳದೇ ಇರುವುದಕ್ಕಾಗಿ ತನ್ನ ತಾಯಿಯನ್ನು ಟೀಕಿಸುತ್ತಾನೆ. ಹೀಗೆ ಹನ್ನೆರಡನೆಯ ಹರೆಯದಲ್ಲಿ ಸಹ ಯೇಸು ದೇವರೊಂದಿಗಿನ ವಿಶೇಷವಾದ ಸಂಬಂಧದ ಬಗ್ಗೆ ಅರಿವನ್ನು ಹೊಂದಿದ್ದನು (ವ. 47 ನ್ನು ಹೋಲಿಸಿ).
3. ವಚನ 49 ರಲ್ಲಿನ ಯೇಸುವಿನ ಮಾತು ಮತ್ತು ವಚನ 51 ರಲ್ಲಿ ವರ್ಣಿಸಲ್ಪಟ್ಟಂತೆ ಆತನ ಸ್ವಭಾವದ ನಡುವಿನ ಒತ್ತಡ (ಸಮಸ್ಯೆ) ಇಂತಿದೆ:

   ಅ. ಮರಿಯಳ ತಿಳುವಳಿಕೆಯ ಕೊರತೆಯ ನಿಮಿತ್ತ ತನ್ನ ತಾಯಿಯಾದ ಆಕೆಯನ್ನು ಟೀಕಿಸಲು ಯೇಸು ಹೆದರುವುದಿಲ್ಲ.

   ಆ. ಅದೇ ಸಮಯದಲ್ಲಿ ತನ್ನ ಬಾಲ್ಯದಲ್ಲಿ ಆತನು ತನ್ನ ತಂದೆ ತಾಯಿಗಳಿಗೆ ವಿಧೇಯನಾಗಿದ್ದನು.

# ಉತ್ತರಗಳು – ಮಾರ್ಕನ ಸುವಾರ್ತೆಯ ಒಂದು ಅಧ್ಯಯನ

**ಉತ್ತರಗಳು: ಮಾರ್ಕ ಅಧ್ಯಾಯ 1**

**ಪ್ರಶ್ನೆಗಳಿಗೆ ಉತ್ತರಗಳು**

1. ಮಾರ್ಕನು ತನ್ನ ಪುಸ್ತಕವನ್ನು ನಾಲ್ಕು ಹೇಳಿಕೆಯೊಂದಿಗೆ ಪರಿಚಯಿಸುತ್ತಾನೆ (ವ. 1):

   ಅ. ಇದೊಂದು ವಿಷಯದ ಪ್ರಾರಂಭವಾಗಿದೆ

   ಆ. ಇದು ಶುಭವಾರ್ತೆ(ಸುವಾರ್ತೆ)ಯ ಕುರಿತಾಗಿದೆ

   ಇ. ಶುಭವಾರ್ತೆಯು ಯೇಸುವಿನ ಕುರಿತಾದುದ್ದಾಗಿದೆ ("ಕ್ರಿಸ್ತನು" ಮತ್ತು "ಮೆಸ್ಸೀಯನು" ಎರಡೂ ಒಂದೇ ಅರ್ಥ ಕೊಡುತ್ತದೆ)

   ಈ. ಈ ಯೇಸು ಕ್ರಿಸ್ತನು ದೇವಕುಮಾರನಾಗಿದ್ದಾನೆ

2. ಸ್ನಾನಿಕನಾದ ಯೋಹಾನನ ಬಳಿಗೆ ಯೂದಾಯ ಸೀಮೆಯಿಂದ ಮತ್ತು ಯೆರೂಸಲೇಮಿನಿಂದ ಅನೇಕ ಜನರು ಬಂದರು (ವ. 5).

3. ಸ್ನಾನಿಕನಾದ ಯೋಹಾನನ ಬಳಿಗೆ ಬಂದವರು ತಮ್ಮ ಪಾಪಗಳನ್ನು ಅರಿಕೆಮಾಡಿ ಯೊರ್ದನ್ ಹೊಳೆಯಲ್ಲಿ ಆತನಿಂದ ದೀಕ್ಷಾಸ್ನಾನ ಮಾಡಿಸಿಕೊಂಡರು (ವ. 5).

4. ಸ್ನಾನಿಕನಾದ ಯೋಹಾನನು ಯೇಸುವನ್ನು ಈ ರೀತಿಯಾಗಿ ವರ್ಣಿಸುತ್ತಾನೆ:

   ಅ. ಆತನು ಸ್ವತಃ ಯೋಹಾನನನಿಗಿಂತ ಶಕ್ತನಾಗಿದ್ದಾನೆ

   ಆ. ಆತನ ಸೇವೆ (ದೀಕ್ಷಾಸ್ನಾನ) ಯೋಹಾನನಿಗಿಂತ ವಿಭಿನ್ನವಾಗಿರುತ್ತದೆ

5. ಯೇಸುವು ಯೋಹಾನನಿಂದ ಯೊರ್ದನ್ ಹೊಳೆಯಲ್ಲಿ ದೀಕ್ಷಾಸ್ನಾನ ಹೊಂದಿದನು (ವ. 9). ಅಲ್ಲಿಗೆ ಬರಲು ಆತನು ಗಲಿಲಾಯದಿಂದ ಯೂದಾಯದ ದಕ್ಷಿಣಕ್ಕೆ ಸುಮಾರು 100 ಕಿ.ಮೀ. ದೂರ ಪ್ರಯಾಣಿಸಬೇಕಾಗಿತ್ತು.

6. ಯೇಸುವಿನ ದೀಕ್ಷಾಸ್ನಾನದ ವೇಳೆ ತ್ರಯೇಕತ್ವದ ಎಲ್ಲಾ ಮೂರು ವ್ಯಕ್ತಿಗಳೂ ಸಹ ಹಾಜರಿರುತ್ತಾರೆ (ವ. 9-11):

   ಅ. ತಂದೆಯಾದ ದೇವರು ಆಕಾಶದೊಳಗಿಂದ ಮಾತಾನಾಡುತ್ತಾನೆ

   ಆ. ಮಗನಾದ ದೇವರು ದೀಕ್ಷಾಸ್ನಾನ ಹೊಂದಿದನು

   ಇ. ಪವಿತ್ರಾತ್ಮನಾದ ದೇವರು ಯೇಸುವಿನ ಮೇಲೆ ಇಳಿದು ಬಂದನು

7. ಮಾರ್ಕನ ವಾಕ್ಯಭಾಗಗಳ ಪ್ರಕಾರ 40 ದಿನಗಳ ಕಾಲ ಅಡವಿಯಲ್ಲಿ ಯೇಸು ಮೂರು ಸಂಗತಿಗಳನ್ನು ಅನುಭವಿಸಿದನು (ವ. 13):

   ಅ. ಸೈತಾನನಿಂದ ಶೋಧನೆ

   ಆ. ಕಾಡುಪ್ರಾಣಿಗಳಿಂದ ಅಪಾಯ

   ಇ. ದೇವದೂತರ ಮೂಲಕ ದೇವರ ಸಂರಕ್ಷಣೆ (ಉಪಚಾರ)

8. ಯೇಸು ಸುವಾರ್ತೆಯನ್ನು ತಾನು ಬಂದಿದ್ದ ಗಲಿಲಾಯವೆಂಬ ಪ್ಯಾಲೆಸ್ತೀನಿನ ಭಾಗದಲ್ಲಿ ಸಾರಿದನು (ವ. 14).

9. ತನ್ನ ಹಿಂಬಾಲಕರಾಗಬೇಕೆಂದು ಯೇಸುವು ಕರೆದ ನಾಲ್ಕು ಜನರು ಬೆಸ್ತರಾಗಿದ್ದು ಗಲಿಲಾಯ ಸಮುದ್ರದ ಬಳಿ ತಮ್ಮ ಕೌಟಂಬಿಕ ಉದ್ಯೋಗವಾಗಿದ್ದಲ್ಲಿ ನಿರತರಾಗಿದ್ದರು (ವ. 6-20).

10. –

11. ಕಪೆರ್ನೌಮಿನ ಜನರು ಯೇಸುವಿನ ಬೋಧನೆಗೆ ಅತ್ಯಾಶ್ಚರ್ಯಪಟ್ಟರು (ವ. 21-22, 27), ಯಾಕೆಂದರೆ ಆತನ ಬೋಧನೆಯು ಅವರು ಶಾಸ್ತ್ರಗಳಿಂದ ಮತ್ತು ಧರ್ಮೋಪದೇಶಕರಿಂದ ಕೇಳಿದ ಬೋಧನೆಗಿಂತ ಅದು ವಿಭಿನ್ನವಾಗಿತ್ತು. ಯೇಸು ಅಧಿಕಾರದಿಂದ ಬೋಧಿಸಿದನು.

12. ಯೇಸುವಿನ ಕುರಿತಾಗಿನ ದೆವ್ವದ ತಿಳುವಳಿಕೆ ಇಂತಿದೆ (ವ. 23-26):

   ಅ. ಯೇಸುವು ದೇವರು ("ದೇವರು ಪ್ರತಿಷ್ಠಿಸಿದವನೇ")

ಆ. ಯೇಸುವು ದೆವ್ವಗಳ ಮೇಲೆ ಅಧಿಕಾರ ಹೊಂದಿದ್ದಾನೆ

ಇ. ಯೇಸುವು ದೆವ್ವಗಳನ್ನು ನಾಶಮಾಡುವುದಕ್ಕೆ ಬಂದಿದ್ದಾನೆ

13. ಸೀಮೋನನ ಅತ್ತೆಯು ಜ್ವರದಿಂದ ಬಳಲುತ್ತಿದ್ದಳು (ವ. 30).

14. ಸಬ್ಬತ್ತಿನ ಸಂಜೆಯ ವೇಳೆ ಯೇಸು ರೋಗಗಳಿಂದ ಬಳಲುತ್ತಿದ್ದ ಅನೇಕರನ್ನು ಗುಣಪಡಿಸಿದನು. ಅಲ್ಲದೆ ಆತನು ದೆವ್ವಹಿಡಿದವರನ್ನು ಬಿಡಿಸಿದನು (ವ. 32-34).

15. ಮರುದಿನ ಮುಂಜಾನೆ ಯೇಸು ಪ್ರಾರ್ಥನೆ ಮಾಡುವುದಕ್ಕಾಗಿ ಅಡವಿಗೆ ಹೋದನು (ವ. 35).

16. ಯೇಸು ಗಲಿಲಾಯದಲ್ಲೆಲ್ಲಾ ಹೋಗಿ ಸಭಾಮಂದಿರದೊಳಗೆ ಬೋಧಿಸಿದನು, ದೆವ್ವಹಿಡಿದವರನ್ನು ಬಿಡಿಸಿದನು (ವ. 38-39). ಹೀಗೆ ಯೇಸುವಿನ ಸೇವೆಯು ಎರಡು ಅಂಶಗಳಿಂದ ಕೂಡಿತ್ತು:

ಅ. ದೇವರ ರಾಜ್ಯದ ಕುರಿತು ಬೋಧಿಸುವುದು

ಆ. ಸ್ವಸ್ಥತೆ ಮತ್ತು ಬಿಡುಗಡೆಯ ಮೂಲಕ ಜನರ ಜೀವಿತಗಳಲ್ಲಿ ದೇವರ ರಾಜ್ಯದ ಬಲವನ್ನು ಪ್ರತಿಪಾದಿಸುವುದು.

17. ಕುಷ್ಠರೋಗಿಯು ಯೇಸುವಿನ ಬಳಿಗೆ ಬಂದಾಗ ಯೇಸುವಿಗೆ ಆತನ ಮೇಲೆ ಕನಿಕರವುಂಟಾಯಿತು (ವ. 41).

18. ಕುಷ್ಠರೋಗಿಯನ್ನು ಗುಣಪಡಿಸಿದ ನಂತರ ಬಹಿರಂಗವಾಗಿ ಯೇಸುವಿಗೆ ಊರೊಳಕ್ಕೆ ಹೋಗಲಾಗಲಿಲ್ಲ. ಯಾಕೆಂದರೆ ಯೇಸು ತನಗೆ ಮಾಡಿದ ಅದ್ಭುತದ ಬಗ್ಗೆ ಯಾರಿಗೂ ಹೇಳಬೇಡ ಎಂದು ಹೇಳಿದ್ದನ್ನು ಆತನು ಕೇಳಲಿಲ್ಲ. ಹಾಗಾಗಿ ಸುದ್ದಿಯು ಎಲ್ಲಾ ಕಡೆಗೆ ಹಬ್ಬಿ ಜನರು ಯೇಸುವನ್ನು ನೋಡಲು ಬಂದಿದ್ದರು (ವ. 43-45).

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಸ್ನಾನಿಕನಾದ ಯೋಹಾನ ಮತ್ತು ಆತನ ಸೇವೆಯನ್ನು ಈ ರೀತಿ ವರ್ಣಿಸಬಹುದು (ವ. 2-8):

ಅ. ಸ್ನಾನಿಕನಾದ ಯೋಹಾನನು:

- ಆತನ ಬರೋಣವು ಹಳೇ ಒಡಂಬಡಿಕೆಯ ಪ್ರವಾದನೆಗಳ ನೆರವೇರಿಕೆಯಾಗಿತ್ತು. ಮಲಾಕಿ ಮತ್ತು ಯೆಶಾಯನ ವಾಕ್ಯಭಾಗಗಳನ್ನು ಬಳಸುವುದರ ಮೂಲಕ ಮಾರ್ಕನಿದನ್ನು ತೋರಿಸುತ್ತಾನೆ.
- ಈತನು ಹಳೇ ಒಡಂಬಡಿಕೆಯ ಪ್ರವಾದಿಯಾದ ಎಲೀಯನಂತೆ ಉಡುಪನ್ನು ಧರಿಸಿದ್ದನು.
- ಈತನು ಯೂದಾಯದ ಅಡವಿಗಳಲ್ಲಿ ಒಂದು ಸರಳವಾದ ಜೀವನ ನಡೆಸಿದನು. ಹಾಗಾಗಿ ಆತನು ಸ್ಥಳೀಯ ಆಹಾರವನ್ನಷ್ಟೇ ಸೇವಿಸಿದನು.
- ತನ್ನ ಪಾತ್ರವೇನೆಂಬುದನ್ನು ಆತನು ತಿಳಿದಿದ್ದನು. ಈತನಿಗಿಂತ ಶಕ್ತನಾಗಿರುವಾತನ ಮುಂದೂತನಾಗಿದ್ದನಷ್ಟೇ.

ಆ. ಆತನ ಸೇವೆ:

- ಈತನು ಕರ್ತನಿಗಾಗಿ ದಾರಿಯನ್ನು ಸರಿಮಾಡಿದನು
- ಈ ಪಶ್ಚಾತ್ತಾಪದ ದೀಕ್ಷಾಸ್ನಾನದ ಕುರಿತು ಸಾರಿದನು
- ಪಶ್ಚಾತ್ತಾಪಪಟ್ಟವರಿಗೆ ಯೊರ್ದನ್ ಹೊಳೆಯ ದೀಕ್ಷಾಸ್ನಾನ ಮಾಡಿಸಿದನು
- ತನ್ನ ಸ್ವಂತ ಸೇವೆ ಮತ್ತು ಯೇಸುವಿನ ಸೇವೆಯ ನಡುವಿನ ವ್ಯತ್ಯಾಸದ ಬಗ್ಗೆ ಒಂದು ಸಂದೇಶವನ್ನು ಈತನು ಹೊಂದಿದ್ದನು

2. ತನ್ನ ಮತ್ತು ಯೇಸುವಿನ ದೀಕ್ಷಾಸ್ನಾನದ ನಡುವಿನ ಸ್ನಾನಿಕನಾದ ಯೋಹಾನನ ಹೋಲಿಕೆಯನ್ನು ಈ ರೀತಿ ಅರ್ಥೈಸಿಕೊಳ್ಳಬಹುದು (ವ. 7-8):

ಅ. ಯೋಹಾನ ಮತ್ತು ಯೇಸುವು ವಿಭಿನ್ನವಾಗಿರುವಂತೆ ಅವೂ ಸಹ ವಿಭಿನ್ನವಾಗಿರುವವು. ಯೇಸುವು ಯೋಹಾನನಿಗಿಂತ ಹೆಚ್ಚಿನವನೂ ಶಕ್ತನೂ ಆಗಿದ್ದನು. ಹಾಗಾಗಿ ಯೇಸು ಮಾಡಿಸುವ ದೀಕ್ಷಾಸ್ನಾನವು ಯೋಹಾನನು ಮಾಡಿಸುವ ದೀಕ್ಷಾಸ್ನಾನಕ್ಕಿಂತ ಹೆಚ್ಚಿನದಾಗಿರುವುದು.

ಆ. ಅವು ವಿಭಿನ್ನ ಬಗ್ಗೆ ದೀಕ್ಷಾಸ್ನಾನವಾಗಿರುವವು. ಯೋಹಾನನದು "ನೀರಿನ ದೀಕ್ಷಾಸ್ನಾನವಾಗಿದ್ದರೆ, ಯೇಸುವಿನದು "ಪವಿತ್ರಾತ್ಮನ ದೀಕ್ಷಾಸ್ನಾನ" ವಾಗಿರುವುದು. ಹಾಗಾದರೆ ಈ ವಿಭಿನ್ನತೆಯನ್ನು ಅರ್ಥೈಸಿಕೊಳ್ಳುವುದು ಹೇಗೆ? ಮಾರ್ಕನು ದೇವರ ರಾಜ್ಯವೆಂಬ ತನ್ನ ಸುವಾರ್ತೆಯ ಒಂದು ಬಹುಮುಖ್ಯ ವಿಷಯವನ್ನು ಪರಿಚಯಿಸುವಾಗ ಆತನು ಯಾವ ರೀತಿಯಲ್ಲಿ ಸ್ನಾನಿಕನಾದ ಯೋಹಾನ ಮತ್ತು ಯೇಸುವನ್ನು ತದ್ವಿರುದ್ಧ(ವ್ಯತ್ಯಾಸ)ವಾಗಿ ತೋರಿಸುತ್ತಾನೆಂಬುದರಿಂದ ಇದನ್ನು ತಿಳುದುಕೊಳ್ಳಬಹುದು (ಹೋಲಿಸಿ ವ. 15). ಯೋಹಾನನ ಪಾತ್ರವು ದೇವರ ರಾಜ್ಯವನ್ನು ಸಾರುವುದಾಗಿತ್ತು. ಆತನು ಕೊಡುವ "ಪಾಶ್ಚಾತ್ತಾಪಕ್ಕಾಗಿನ ನೀರಿನ ದೀಕ್ಷಾಸ್ನಾನವು" ದೇವರ ರಾಜ್ಯದ ಅರಸನಾಗಿರುವ ಯೇಸುವನ್ನು ಮುನ್ಸೂಚಿಸುತ್ತಿತ್ತು. ಹೀಗೆ ಯೋಹಾನನ ಸಾರುವಿಕೆಗೆ ಹಳೇ ಒಡಂಬಡಿಕೆಯ ಹಿನ್ನಲೆಯು ಯೆಹೆಜ್ಕೇಲನ ಮೂಲಕ ದೇವರು ಮಾಡಿದ ವಾಗ್ದಾನವಾಗಿರಬಹುದು: "ನಾನು ನಿಮ್ಮ ಮೇಲೆ ನಿರ್ಮಲೋದಕವನ್ನು ಪ್ರೋಕ್ಷಿಸಲು ನೀವು ನಿರ್ಮಲರಾಗುವಿರಿ, ನಿಮ್ಮ ಸಮಸ್ತ ವಿಗ್ರಹಗಳಿಂದಲೂ ಸಕಲವಿಧವಾದ ಹೊಲಸಿನಿಂದಲೂ ನಿಮ್ಮನ್ನು ಶುದ್ಧಿಮಾಡುವೆನು. ನಾನು ನಿಮಗೆ ಹೊಸಮನಸ್ಸನ್ನು ಕೊಟ್ಟು ನಿಮಲ್ಲಿ ನೂತನ ಸ್ವಭಾವವನ್ನು ಹುಟ್ಟಿಸುವೆನು. ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃಧುವಾದ ಹೃದಯವನ್ನು ನಿಮಗೆ ದಯಪಾಲಿಸುವೆನು. ನನ್ನ ಆತ್ಮವನ್ನು ನಿಮ್ಮಲ್ಲಿ ನೆಲೆಸಿರುವಂತೆ ಅನುಗ್ರಹಿಸಿ ನೀವು ನನ್ನ ನಿಯಮಗಳನ್ನು ಅನುಸರಿಸುವ ಹಾಗೆ ಮಾಡುವೆನು. ನೀವು ನನ್ನ ವಿಧಿಗಳನ್ನು ಕೈಕೊಂಡು ಆಚರಿಸುವಿರಿ. ನಾನು ನಿಮ್ಮ ಪಿತೃಗಳಿಗೆ ಅನುಗ್ರಹಿಸಿದ ದೇಶದಲ್ಲಿ ನೀವು ವಾಸಿಸುವಿರಿ. ನೀವು ನನಗೆ ಪ್ರಜೆಯಾಗಿರುವಿರಿ, ನಾನು ನಿಮಗೆ ದೇವರಾಗಿರುವೆನು" (ಯೆಹೆ. 36:25-28). ಯೇಸುವು ದೇವರ ವಾಗ್ದಾನದ ನೆರವೇರಿಕೆಯಾಗಿದ್ದಾನೆ. ಆತನನ್ನು ರಕ್ಷಕನಾಗಿ ಅಂಗೀಕರಿಸುವವರಲ್ಲಿ ಆತನು ತನ್ನ ಆತ್ಮವನ್ನು ಇಟ್ಟು ಅವರನ್ನು ದೇವರ ರಾಜ್ಯದ ಪ್ರಜೆಗಳನ್ನಾಗಿ ಮಾಡುತ್ತಾನೆ. ಯೋಹಾನನ ದೀಕ್ಷಾಸ್ನಾನವು ಪಶ್ಚಾತ್ತಾಪದ ದೀಕ್ಷಾಸ್ನಾನವಾಗಿದೆ. ಯೇಸುವಿನ ದೀಕ್ಷಾಸ್ನಾನವು ಆತ್ಮೀಕವಾಗಿ ಹೊಸಹುಟ್ಟಿನ ದೀಕ್ಷಾಸ್ನಾನವಾಗಿದೆ (ಹೋಲಿಸಿ ಯೋಹಾನ 3:3-8).

3. ಮೆಸ್ಸೀಯನು ದೇವಕುಮಾರನಾದ ಯೇಸು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದಕ್ಕಾಗಿ ಯೂದಾಯಕ್ಕೆ ಹೋಗುತ್ತಾನೆ (ವ. 2-11). ಆತನಿಗೆ ಯಾವುದೇ ಪಶ್ಚಾತ್ತಾಪ ಅಥವಾ ಪಾಪಗಳ ಪರಿಹಾರದ ಅಗತ್ಯತೆಯಿಲ್ಲದಿದ್ದರೂ ಆತನು ಯಾಕೆ ಹಾಗೆ ಮಾಡಿದನು? ಯೇಸುವಿನ ದೀಕ್ಷಾಸ್ನಾನವು ಆತನ ಮೆಸ್ಸೀಯನ ಸೇವೆಯ ಪ್ರಾರಂಭಕ್ಕೆ ಗುರುತಾಗಿದೆ. ಹೊಸ ಒಡಂಬಡಿಕೆಯಲ್ಲಿ ಆತನ ದೀಕ್ಷಾಸ್ನಾನಕ್ಕೆ ನಾವು ಅನೇಕ ಕಾರಣಗಳನ್ನು ಕಾಣುತ್ತೇವೆ:

ಅ. "ಎಲ್ಲಾ ಧರ್ಮವನ್ನು ನೆರವೇರಿಸುವುದಕ್ಕಾಗಿ" ತಾನು ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತೇನೆಂಬುದಾಗಿ ಸ್ವತಃ ಯೇಸುವೇ ಹೇಳುತ್ತಾನೆ (ಮತ್ತಾ. 3:15). ಮೆಸ್ಸೀಯನಿಗೆ ಬೇಕಾದ ದೇವರ ಎಲ್ಲಾ ಧರ್ಮ/ನೀತಿಯ ಅಗತ್ಯತೆಗಳೆಲ್ಲ ಯೇಸುವಿನಲ್ಲಿಯೇ ಪೂರೈಸಲ್ಪಟ್ಟಿವೆ. ಪವಿತ್ರಾತ್ಮನು ಪಾರಿವಾಳದಂತೆ ಆತನ ಮೇಲೆ ಇಳಿದುಬರುವುದು ಮತ್ತು ತಂದೆಯಾದ ದೇವರ ಮಾತುಗಳು ಆತನು ದೇವರಿಗಾಗಿ ಪ್ರತಿಷ್ಠಿಸಲ್ಪಟ್ಟವನು ಮತ್ತು ಅಧಿಕೃತವಾಗಿ ದೇವರಿಂದ ಅಂಗೀಕಾರ ಹೊಂದಿದವನೆಂಬುದನ್ನು ತೋರಿಸುತ್ತದೆ.

ಆ. ಯೇಸುವು ದೀಕ್ಷಾಸ್ನಾನ ಮಾಡಿಸಿಕೊಂಡ ಸಂದರ್ಭವು ಸ್ನಾನಿಕನಾದ ಯೋಹಾನನು ಮೆಸ್ಸೀಯನ ಆಗಮನ ಮತ್ತು ಆತನ ಸೇವೆಯ ಪ್ರಾರಂಭದ ಕುರಿತಾಗಿ ಬಹಿರಂಗವಾಗಿ ಸಾರಿಹೇಳಿದ ಸಮಯವಾಗಿತ್ತು (ಯೋಹಾನ 1:31-34).

ಇ. ದೀಕ್ಷಾಸ್ನಾನ ಮಾಡಿಸಿಕೊಳ್ಳುವುದರ ಮೂಲಕ ಯೇಸು ಸಂಪೂರ್ಣವಾಗಿ ತನ್ನನ್ನು ಪಾಪ ಮತ್ತು ಮನುಷ್ಯರ ವೈಫಲ್ಯದೊಂದಿಗೆ ತನ್ನನ್ನು ಗುರುತಿಸಿಕೊಂಡನು. ಆತನು ನಮಗೆ ಬದಲಾಗಿ ಪಾಪಸ್ವರೂಪಿಯಾದನು (ಹೋಲಿಸಿ 2 ಕೊರಿಂಥ 5:21).

ಈ. ಆತನ ದೀಕ್ಷಾಸ್ನಾನವು ಆತನ ಹಿಂಬಾಲಕರಿಗೆ ಒಂದು ಮಾದರಿಯಾಗಿದೆ.

4. ಯೇಸುವಿನ ದೀಕ್ಷಾಸ್ನಾನದ ವೇಳೆ ದೇವರಾತ್ಮವು ಆತನ ಮೇಲೆ ಇಳಿದು ಬಂದುದ್ದರ ಮಹತ್ವವೇನೆಂದರೆ (ವ. 10-11), ಆತ್ಮವು ಸೇವೆಗಾಗಿ ಆತನನ್ನು ಅಭಿಷೇಕಿಸಿತು: "ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವುದಕ್ಕೆ ಅಭೀಷೇಕಿಸಿದನು. ಮನಮುರಿದವರನ್ನು ಕಟ್ಟಿವಾಸಿಮಾಡುವುದಕ್ಕೂ, ಸೆರೆಯವರಿಗೆ ಬಿಡುಗಡೆಯಾಗುವುದನ್ನು, ಬಂಧಿಗಳಿಗೆ (ಕದ) ತೆರೆಯುವುದನ್ನು ಪ್ರಸಿದ್ಧಿಪಡಿಸುವುದಕ್ಕೂ … " (ಯೇಸು ಯೆಶಾಯ 61:1-2 ನ್ನು ಉಪಯೋಗಿಸಿ ನಜರೇತಿನ ಸಭಾಮಂದಿರದಲ್ಲಿ ಮಾತನಾಡುತ್ತಿದ್ದಾನೆ, ನೋಡಿ ಲೂಕ 4:16-22).

5. ಯೇಸುವು "ದೇವರ ಸುವಾರ್ತೆಯನ್ನು ಸಾರಿದನು" ಎಂಬುದಾಗಿ ಮಾರ್ಕನು ಹೇಳುತ್ತಾನೆ (ವ. 14). "ದೇವರು" ಎಂಬ ಮಾತಿನ ಅರ್ಥ ಸುವಾರ್ತೆಯು ದೇವರಿಂದ ಮತ್ತು ದೇವರ ಕುರಿತಾದದ್ದು ಎಂದಾಗಿದೆ. ವಚನ 15 ರ ಕುರಿತ ನನ್ನ ಟಿಪ್ಪಣಿಯಲ್ಲಿ (ಪೀಠಿಕೆ ನೋಡಿ) ಯೇಸು ಸುವಾರ್ತೆ ಸಾರುವುದರ ಕುರಿತ ಕೆಲ ಅಂಶಗಳನ್ನು ನಾನು ತಿಳಿಸಿದ್ದೇನೆ:

ಅ. ಕಾಲ ಸಮೀಪಿಸಿತು

ಆ. ದೇವರ ರಾಜ್ಯದ ಲಕ್ಷಣ (ಸ್ವಭಾವ)

ಇ. ಯೇಸುವಿನೊಂದಿಗೆ ದೇವರ ರಾಜ್ಯದ ಬರೋಣ

ಈ. ದೇವರ ರಾಜ್ಯದ ಸಾರೋಣಕ್ಕೆ ನಮ್ಮ ಪ್ರತಿಕ್ರಿಯೆ (ಜವಾಬ್ದಾರಿ)

6. ಯೇಸು ಮತ್ತು ನಾಲ್ಕು ಮಂದಿ ಬೆಸ್ತರ ಬಗ್ಗೆ ವಿಷಯವಾಗಿ ತನ್ನ ವಿವರದಲ್ಲಿ ಮಾರ್ಕನು ತಿಳಿಸುವುದೇನಂದರೆ (ವ. 16-20), ಯೇಸು ಅವರನ್ನು ಕರೆದನು. ಮತ್ತು ಆತನು ಕರೆದ ಕೂಡಲೇ ಅವರು ಆತನನ್ನು ಹಿಂಬಾಲಿಸಿದರು.

7. ಕಪೆರ್ನೌಮಿನ ಸಭಾಮಂದಿರದ ಸೇವೆಯ ಅವಧಿಯಲ್ಲಿ ಮತ್ತು ನಂತರ ಏನಾಯಿತೆಂಬ ಯೇಸು ಮತ್ತು ಆತನ ಸೇವೆಯ ಕುರಿತ ಮಾರ್ಕನ ವಿವರಗಳ ಕೆಲ ಅಭಿಪ್ರಾಯ ಇಂತಿವೆ (ವ. 21-28):

ಅ. ಯೇಸು ಉಪದೇಶ ಮಾಡಲು ಬರುತ್ತಾನೆ. ಆತನ ಉಪದೇಶವು ವಿಭಿನ್ನವಾಗಿತ್ತು. ಯಾಕೆಂದರೆ ಅದು ದೈವಿಕ ಅಧಿಕಾರವನ್ನೊಳಗೊಂಡಿತ್ತು. ಆತನ ಉಪದೇಶವು ದೇವರು ಕೊಡುವ ರಕ್ಷಣೆಯ ಶುಭವಾರ್ತೆಯಾಗಿತ್ತು.

ಆ. ಯೇಸು ದೇವರಾಗಿದ್ದಾನೆ. ಜನರಿಗೆ ಅರ್ಥವಾಗದಿದ್ದರೂ ದೆವ್ವಗಳು ಆತನ ದೈವಿಕ ಅಧಿಕಾರವನ್ನು ಅರಿತುಕೊಂಡವು.

ಇ. ಯೇಸುವಿಗೆ ದೈವಿಕ ಅಧಿಕಾರವಿತ್ತು. ಆತನಿದನ್ನು ಸಭಾಮಂದಿರದಲ್ಲಿದ್ದ ಮನುಷ್ಯನೊಬ್ಬನನ್ನು ಬಿಡಿಸಿ ಗುಣಪಡಿಸುವುದರ ಮೂಲಕ ತೋರ್ಪಡಿಸಿದನು.

ಈ. ಯೇಸುವು ಜನರನ್ನು ರಕ್ಷಿಸುವುದಕ್ಕಾಗಿ ಮತ್ತು ಅವರನ್ನು ಸೈತಾನನ ಬಂಧನದಿಂದ ಬಿಡಿಸುವುದಕ್ಕಾಗಿ ಬಂದನು.

ಉ. ಸುವಾರ್ತೆಯು ಸಾರಲ್ಪಟ್ಟಾಗ ಮತ್ತು ಜನರು ರಕ್ಷಿಸಲ್ಪಟ್ಟು, ದುರಾತ್ಮಗಳಿಂದ ಬಿಡುಗಡೆ ಹೊಂದಿದಾಗ ಅದರ ಪರಿಣಾಮವು ಆಶ್ಚರ್ಯಕರವಾಗಿಯೂ ಕುತೂಹಲಕರವಾಗಿಯೂ ಇರುತ್ತದೆ. ಕಪೆರ್ನೌಮಿನ ಸಭಾಮಂದಿರದಲ್ಲಾದ ಅದ್ಭುತದಿಂದ ಅಚ್ಚರಿಯುಂಟಾಗಿ ಯೇಸುವಿನ ಕುರಿತ ಸುವಾರ್ತೆಯು ಗಲಿಲಾಯದಾದ್ಯಂತ ಹಬ್ಬಿಕೊಂಡಿತು.

8. ಯೇಸುವು ದೆವ್ವಗಳು ತನ್ನ ನಿಜವಾದ ಗುರುತನ್ನು ತಿಳಿಪಡಿಸಲು ಬಿಡಲಿಲ್ಲ (ವ. 32-34). ಇದು ಮಾರ್ಕನ ಸುವಾರ್ತೆಯಲ್ಲಿ ಕಂಡುಬರುವ "ಮೆಸ್ಸೀಯನ ರಹಸ್ಯಕ್ಕೆ" ಒಂದು ಉದಾಹರಣೆಯಾಗಿದೆ. ವಚನ 34 ರ ಮೆಲಿನ ನನ್ನ ಟಿಪ್ಪಣಿಯಲ್ಲಿ ಈ "ರಹಸ್ಯ" ದ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಕಾಣಬಹುದು.

9. ಯೇಸುವು ಮುಂಜಾನೆ ವೇಳೆ ಪ್ರಾರ್ಥಿಸಲು ಹೋಗುವುದರ ಕುರಿತ ಮಾರ್ಕನ ವಿವರದಲ್ಲಿನ ಅಂತರ್ಗತ ಗೊಂದಲ (ವ. 35-39):

ಅ. ಒಂದು ರೀತಿಯಲ್ಲಿ ಯೇಸುವಿಗೆ ಏಕಾಂತತೆ ಅವಶ್ಯಕತೆಯಿತ್ತೆಂಬುದನ್ನು ನಾವು ಕಾಣಬಹದು. ಯೇಸುವು ಪ್ರಾರ್ಥನೆಯಲ್ಲಿ ತನ್ನ ಪರಲೋಕದ ತಂದೆಯೊಂದಿಗೆ ಸಮಯವನ್ನು ಕಳೆಯಬೇಕಾಗಿತ್ತು. ಅದಕ್ಕಾಗಿ ಆತನು ಜನರಿನ್ನೂ ಮಲಗಿರುವಾಗ ಮುಂಜಾನೆ ಮೊಬ್ಬಿರುವಾಗಲೇ ಎದ್ದು ಅಡವಿಗಳಲ್ಲಿ ಹೋಗಿ ಪ್ರಾರ್ಥಿಸಬೇಕಾಗಿತ್ತು.

ಆ. ಇನ್ನೊಂದು ವಿಧದಲ್ಲಿ ನೋಡಿದರೆ ಜನರು ಸುವಾರ್ತೆಯನ್ನು ಕೇಳಿ, ಸ್ವಸ್ಥತೆ ಮತ್ತು ಬಿಡುಗಡೆಯ ಮೂಲಕ ತಮ್ಮ ಜೀವನದಲ್ಲಿ ದೇವರ ರಾಜ್ಯದ ಬಲವನ್ನು ಅನುಭವಿಸಬೇಕಾದ ಅವಶ್ಯಕತೆಯಿತ್ತು. ಹಾಗಾಗಿ ಆತನ ಕೆಲ ಶಿಷ್ಯರು ಆತನ ಬಳಿಗೆ ಬಂದು ಜನರು ಕಾದಿದ್ದಾರೆಂಬುದಾಗಿ ಹೇಳಿದರು. ಕ್ರೈಸ್ತ ವಿಶ್ವಾಸಿಗಳಾದ ನಾವು (ಹೆಚ್ಚಾಗಿ ಪೂರ್ಣವಧಿಯ ಸುವಾರ್ತಾ ಸೇವಕರು) ನಮ್ಮ ನಮ್ಮ ಜೀವನದಲ್ಲಿ ಸಹ ಇದೇ ರೀತಿಯ ಗೊಂದಲವನ್ನು ಎದುರಿಸುತ್ತೇವೆ. ಹಾಗಾಗಿ ನಾವು ದೇವರೊಂದಿಗಿನ ಏಕಾಂತ ಸಮಯ ಮತ್ತು ಅಗತ್ಯದಲ್ಲಿರುವವರ ಸೇವೆಗಾಗಿನ ಸಮಯದ ನಡುವೆ ಒಂದು ಸ್ವಸ್ಥವಾದ ಸಮತೋಲನೆಯನ್ನು ಕಂಡುಕೊಳ್ಳಬೇಕಿದೆ.

10. ಯೇಸುವು ಕುಷ್ಠರೋಗಿಯನ್ನು ಮುಟ್ಟಿ ಗುಣಪಡಿಸಿದಾಗ ಶಿಷ್ಯರು ಗಾಬರಿಗೊಂಡಿರಬೇಕು (ವ. 40-42). ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಕುಷ್ಠ ಬಂದ ವ್ಯಕ್ತಿಯು ಅಪವಿತ್ರನಾಗಿದ್ದು ಆತನನ್ನು ಯಾರಾದರೂ ಮುಟ್ಟಿದರೆ ಅವರೂ ಸಹ ಅಪವಿತ್ರರಾಗುತ್ತಿದ್ದರು. ಆದರೆ ಯೇಸುವಿಗೆ ಹಳೇ ಒಡಂಬಡಿಕೆಯ ಶುದ್ಧಾಚಾರದ ಶಾಸ್ತ್ರಗಳನ್ನು ಅನುಸರಿಸುವುದಕ್ಕಿಂತ ಆ ಮನುಷ್ಯನಿಗೆ ಕರುಣೆಯನ್ನು ತೋರಿಸುವುದು ಅತೀ ಪ್ರಾಮುಖ್ಯವಾಗಿತ್ತು.

11. –

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

ಈ ಅಧ್ಯಯನದಲ್ಲಿ ತಿಳಿಯಪಡಿಸಿದ ಮಾಹಿತಿ/ಸಂಗತಿಗಳನ್ನು ಬಳಸಿ ಪ್ರತಿಯೊಂದು ವಿಷಯದ ಪ್ರಶ್ನೆಗೆ ಎಚ್ಚರಿಕೆಯಿಂದ ನೀವು ಉತ್ತರಿಸಿದರೆ ನೀವು ಸರಳವಾದ ಮತ್ತು ಪ್ರಯೋಜನಕಾರಿಯಾದ/ಉಪಯುಕ್ತವಾದ ರೂಪುರೇಖೆಗಳನ್ನು ಸಿದ್ಧಪಡಿಸಲು ಶಕ್ತರಾಗುವಿರಿ. ಕೆಲ ವಿಷಯವಸ್ತುಗಳು ಸುಲಭವಾಗಿದ್ದರೆ, ಇನ್ನೂ ಕೆಲವು ಕ್ಲಿಷ್ಟಕರವಾಗಿವೆ. ನಿಮ್ಮ ಕೆಲ ಅಧ್ಯಯನಗಳು ದೀರ್ಘವಾಗಿದ್ದರೆ ಇನ್ನೂ ಕೆಲವು ಚಿಕ್ಕದ್ದಾಗಿವೆ.

**ಉತ್ತರಗಳು: ಮಾರ್ಕ ಅಧ್ಯಯನ 2**

**ಪ್ರಶ್ನೆಗಳಿಗೆ ಉತ್ತರಗಳು**

1. ಕಪೆರ್ನೌಮಿನ ತನ್ನ ಮನೆಯಲ್ಲಿ ಯೇಸು ಎರಡು ಸಂಗತಿಗಳನ್ನು ಮಾಡಿದನು (ವ. 1-5):

   ಅ. ಮನೆಯೊಳಗೆ ಮತ್ತು ಮನೆಯ ಮುಂದೆ ನಿಂತಿದ್ದ ಜನರಿಗೆ ದೇವರ ವಾಕ್ಯವನ್ನು ಸಾರಿದನು

   ಆ. ತನ್ನ ಸ್ನೇಹಿತರ ಮೂಲಕ ಯೇಸುವಿನ ಬಳಿಗೆ ಕರತಂದ ಪಾರ್ಶ್ವವಾಯುರೋಗಿಯ ಪಾಪಗಳನ್ನು ಆತನು ಕ್ಷಮಿಸುತ್ತಾನೆ. ಅನಂತರ ಆತನನ್ನು ಗುಣಪಡಿಸುತ್ತಾನೆ.

2. ಜನರು ಪಾರ್ಶ್ವವಾಯುರೋಗಿಯನ್ನು ಮನೆಯ ಮೇಲ್ಚಾವಣಿಯ ಮೇಲೆ ಕೊಂಡೊಯ್ಯುತ್ತಾರೆ, ಯಾಕೆಂದರೆ ಜನರು ಬಹುದೊಡ್ಡ ಸಂಖ್ಯೆಯಲ್ಲಿ ಕೂಡಿದ್ದರಿಂದ ಆತನನ್ನು ಯೇಸುವಿನ ಬಳಿಗೆ ಕರತರಲಾಗಲಿಲ್ಲ. ಹಾಗಾಗಿ ಮನೆಯ ಮೇಲ್ಚಾವಣಿಯಲ್ಲಿ ಒಂದು ದ್ವಾರವನ್ನು ಮಾಡಿ ಅದರ ಮೂಲಕ ಆತನನ್ನು ಕೆಳಕ್ಕೆ ಇಳಿಸುತ್ತಾರೆ.

3. ಪಾರ್ಶ್ವವಾಯುರೋಗಿಗೆ ಯೇಸು ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳುತ್ತಾನೆ (ವ. 1-5).

4. ಪಾರ್ಶ್ವವಾಯುರೋಗಿಯನ್ನು ಗುಣಪಡಿಸಿದ್ದು ತನಗೆ ಭೂಲೋಕದಲ್ಲಿ ಜನರ ಪಾಪಗಳನ್ನು ಕ್ಷಮಿಸುವ ಅಧಿಕಾರವಿದೆಯೆಂಬುದನ್ನು ತೋರಿಸುವುದಕ್ಕಾಗಿದೆ ಎಂಬುದಾಗಿ ಯೇಸು ಶಾಸ್ತ್ರಿಗಳಿಗೆ ಹೇಳುತ್ತಾನೆ (ವ. 6-12). ಅಲ್ಲಿ ಯೇಸು ತನ್ನ ಬಗ್ಗೆ "ಮನುಷ್ಯಕುಮಾರನು" ಎಂಬ ಹೆಸರನ್ನು ಬಳಸುತ್ತಾನೆ.

5. ಪಾರ್ಶ್ವವಾಯುರೋಗಿಯನ್ನು ಗುಣಪಡಿಸಿದ್ದಕ್ಕೆ ಜನರು ಈ ರೀತಿಯಾಗಿ ಪ್ರತಿಕ್ರಯಿಸುತ್ತಾರೆ (ವ. 8-12):

   ಅ. ಜನರು ಬೆರಗಾದರು

   ಆ. ಅವರು ದೇವರನ್ನು ಕೊಂಡಾಡಿದರು

   ಇ. ಈ ಅದ್ಭುತವನ್ನು ಅವರು ಸಾಕ್ಷಿಸುತ್ತಾರೆ

6. ಯೇಸು ಲೇವಿಯನ್ನು ಸಂಧಿಸಿದಾಗಿನ ಸನ್ನಿವೇಶ ಇಂಥದ್ದಾಗಿತ್ತು (ವ. 13-14):

   ಅ. ಆತನು ಗಲಿಲಾಯದ ಸುತ್ತಮುತ್ತಲಿನ ಬಹುದೊಡ್ಡ ಜನರ ಗುಂಪಿಗೆ ಉಪದೇಶಿಸುತ್ತಿದ್ದನು

   ಆ. ಆತನು ಸಮುದ್ರದ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಸುಂಕದ ಕಟ್ಟೆಯ ಬಳಿಯಲ್ಲಿ ಕಾರ್ಯನಿರತನಾದ ಲೇವಿಯನ್ನು ಕಾಣುತ್ತಾನೆ.

7. ಯೇಸುವಿನ ಸಾಮಾಜಿಕ ಜೀವನದ ಬಗ್ಗೆ ಪ್ರಶ್ನೆಯನ್ನು ಹೊಂದಿರುವವರು (ವ. 15-16) ಶಾಸ್ತ್ರಿಗಳು ಮತ್ತು ಫರಿಸಾಯರಾಗಿರುತ್ತಾರೆ. ಯೇಸುವು ಸುಂಕದವರೊಂದಿಗೆ ಮತ್ತು ಪಾಪಿಗಳೊಂದಿಗೆ ಒಡನಾಟವಿಟ್ಟುಕೊಂಡಿದ್ದಕ್ಕಾಗಿ ಅವರು ಆತನನ್ನು ದೂಷಿಸುತ್ತಾರೆ. ಭಕ್ತಿಯುಳ್ಳ ವ್ಯಕ್ತಿಯು ಭಯಭಕ್ತಿಯಿಲ್ಲದವರೊಂದಿಗೆ ಗೆಳೆತನ ಮಾಡುವುದು ಸರಿಯಲ್ಲವೆಂಬುದಾಗಿ ಅವರು ಯೋಚಿಸಿರಬೇಕು.

8. ವಚನ 18 ಉಪವಾಸದ ಸಂಬಂಧದಲ್ಲಿ ಮೂರು ಗುಂಪಿನ ಶಿಷ್ಯರ ಬಗ್ಗೆ ತಿಳಿಸುತ್ತದೆ:

   ಅ. ಸ್ನಾನಿಕನಾದ ಯೋಹಾನನ ಶಿಷ್ಯರು: ಅವರು ಉಪವಾಸ ಮಾಡಿದರು. ಸ್ನಾನಿಕನಾದ ಯೋಹಾನನು ಸೆರೆಯಲ್ಲಿ ಬಿದ್ದ ನಿಮಿತ್ತ ಅವರು ಉಪವಾಸವಿದ್ದಿರಬಹುದು, ಹೋಲಿಸಿ ಮಾರ್ಕ 1:14

   ಆ. ಫರಿಸಾಯರ ಶಿಷ್ಯರು: ಅವರು ಉಪವಾಸವಿದ್ದರು. ಅವರ ಉಪವಾಸಕ್ಕೆ ಕಾರಣ ಬಹುಶಃ ಅವರ ವಾರದ ಧಾರ್ಮಿಕವಾಡಿಕೆಯಾಗಿತ್ತು.

ಇ. ಯೇಸುವಿನ ಶಿಷ್ಯರು: ಅವರು ಉಪವಾಸವಿರಲಿಲ್ಲ. ಅವರು ಉಪವಾಸವಿಲ್ಲದೆ ಇರುವುದಕ್ಕೆ ಕಾರಣವನ್ನು ಯೇಸು ತನ್ನ ಪ್ರತ್ಯುತ್ತರದಲ್ಲಿ ತಿಳಿಸುತ್ತಾನೆ. ಅದೇನಂದರೆ ಯೇಸು ಅವರೊಂದಿಗಿರುವುದರಿಂದ ಅದು ಒಂದು ಸಂಭ್ರಮ/ಆಚರಣೆಯ ಸಮಯವಾಗಿತ್ತು

9. ಮದಲಿಂಗನು ಯಾವಾಗಲೂ ಜನರೊಂದಿಗೆ ಇರುವುದಿಲ್ಲ, ಆದರೆ ಆತನು ಅವರಿಂದ ತೆಗೆದುಕೊಂಡು ಹೋಗಲ್ಪಡುತ್ತಾನೆ ಎಂಬುದಾಗಿ ಯೇಸು ಹೇಳುತ್ತಾನೆ (ವ. 19-20).
10. ಹೊಸ ಬಟ್ಟೆಯ ತುಂಡನ್ನು ಹಳೇ ಬಟ್ಟೆಗೆ ತ್ಯಾಪೆ ಹಚ್ಚುವುದು ಮೂರ್ಖತನವಾಗಿದೆ, ಯಾಕೆಂದರೆ ಆ ಬಟ್ಟೆಯನ್ನು ತೊಳೆಯುವಾಗ ಆ ಹೊಸ ಬಟ್ಟೆಯ ತುಂಡು ಮುದುಡಿ ಬಟ್ಟೆಯು ಹರಿದು ಹೋಗುತ್ತದೆ (ವ. 21). ಇವೆರಡೂ ಸಹ ಒಂದಕ್ಕೊಂದು ಹೊಂದಿಕೊಳ್ಳುವುದಿಲ್ಲ.
11. ಕೇವಲ ಬುದ್ಧಿವಂತ ವ್ಯಕ್ತಿಯು ಹೊಸ ದ್ರಾಕ್ಷಾರಸವನ್ನು ಹಾಕಿಡಲು ಹೊಸ ಬುದ್ದಲಿಯಲ್ಲಿ ಹಾಕಿಡುವನು. ಯಾಕೆಂದರೆ ಕಾಲಕಳೆದಂತೆ ದ್ರಾಕ್ಷಾರಸವು ಹುಳಿಬರುತ್ತದೆ. ಆ ರೀತಿ ಆಗುವಾಗ ಅದಕ್ಕೆ ಹೆಚ್ಚು ಜಾಗ ಬೇಕಾಗುತ್ತದೆ. ಹೊಸ ಬುದ್ದಲಿಯು ಹಿಗ್ಗಿ ದ್ರಾಕ್ಷಾರಸಕ್ಕೆ ಬೇಕಾದ ಜಾಗವನ್ನು ಕಲ್ಪಿಸಿಕೊಡುತ್ತದೆ. ಆದರೆ ಹಳೆಯ ಬುದ್ದಲಿಯು ಹಿಗ್ಗುವುದಿಲ್ಲ. ಅದು ಒಡೆದು ಹೋಗಿ ದ್ರಾಕ್ಷಾರಸವೆಲ್ಲ ಹರಿದು ಹೋಗುತ್ತದೆ (ವ. 21). ಇವೆರಡೂ ಸಹ ಒಂದಕ್ಕೊಂದು ಹೊಂದಿಕೊಳ್ಳುವುದಿಲ್ಲ.
12. ಸಬ್ಬತ್ ದಿನದಲ್ಲಿ ಕೆಲಸಮಾಡುವುದರ ಮೂಲಕ ಯೇಸುವಿನ ಶಿಷ್ಯರು ಧರ್ಮಶಾಸ್ತ್ರವನ್ನು ಉಲ್ಲಂಘಿಸುತ್ತಾರೆಂಬುದಾಗಿ ಫರಿಸಾಯರು ಯೇಸುವಿಗೆ ದೂರುತ್ತಾರೆ. ಪೈರಿನ ಹೊಗಳಲ್ಲಿನ ತೆನೆಗಳನ್ನು ಮುರಿದುಕೊಳ್ಳುವುದು ಸಬ್ಬತ್ ದಿನದಲ್ಲಿ ಮಾಡಬಾರದ ಕೆಲಸವೆಂಬುದಾಗಿ ಪರಿಗಣಿಸುತ್ತಾರೆ (ವ. 23-29).
13. ಯೇಸು ಸಬ್ಬತ್ತಿನ ಬಗ್ಗೆ ಫರಿಸಾಯರಿಗೆ – ಸಬ್ಬತ್ತು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬ್ಬತ್ತಿಗೋಸ್ಕರ ಉಂಟಾಗಲಿಲ್ಲವೆಂಬುದಾಗಿ ಹೇಳುತ್ತಾನೆ.

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಪಾರ್ಶ್ವವಾಯುರೋಗಿಗೆ ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದಾಗ ಶಾಸ್ತ್ರಿಗಳಲ್ಲಿ ಅನೇಕರು ಆತನು ದೇವದೂಷಣೆ ಮಾಡುತ್ತಾನೆಂಬುದಾಗಿ ಯೋಚಿಸಿದರು.ಅವರ ದೈವಶಾಸ್ತ್ರದ ಪ್ರಕಾರ ದೇವರು ಮಾತ್ರ ಪಾಪಗಳನ್ನು ಕ್ಷಮಿಸಬಲ್ಲವನಾಗಿದ್ದಾನೆ. ಒಂದು ವೇಳೆ ಯೇಸು ತಾನು ನಿರೀಕ್ಷಿಸಲ್ಪಟ್ಟ ಮೆಸ್ಸೀಯನೆಂಬುದಾಗಿ ಹೇಳಿದ್ದರೆ ಆತನು ಪಾಪಗಳನ್ನು ಕ್ಷಮಿಸಲಾಗುತ್ತಿರಲಿಲ್ಲ. ಈಗ ಆ ವ್ಯಕ್ತಿಯ ಪಾಪಗಳನ್ನು ಕ್ಷಮಿಸುವುದರ ಮೂಲಕ ಯೇಸು ತಾನು ದೇವರೋ ಎಂಬಂತೆ ತೋರ್ಪಡಿಸಿಕೊಳ್ಳುತ್ತಿದ್ದಾನೆ. ಇದು ದೇವದೂಷಣೆಯಾಗಿತ್ತು (ವ. 1-12).
2. ಪಾರ್ಶ್ವವಾಯುರೋಗಿಯನ್ನು ಗುಣಪಡಿಸುವುದರ ಮೂಲಕ ಯೇಸು ಶಾಸ್ತ್ರಿಗಳ ದೂಷಣೆಗೆ ಪ್ರತಿಕ್ರಿಯಿಸುತ್ತಾನೆ. ಇದರಿಂದ ಯೇಸು ತಾನು ದೇವಕುಮಾರನು, ನಿರೀಕ್ಷಿಸಲ್ಪಟ್ಟ ಮೆಸ್ಸೀಯನು, ನರಾವತಾರವೆತ್ತಿದ ದೇವರು, ರೋಗಿಯ ಪಾಪಗಳನ್ನು ಕ್ಷಮಿಸಲು ಮತ್ತು ಆತನನ್ನು ಗುಣಪಡಿಸುವ ಅಧಿಕಾರ ಹೊಂದಿರುವೆನೆಂಬುದನ್ನು ಸ್ಪಷ್ಟಪಡಿಸಿದನು (ವ. 1-12).
3. ವೈದ್ಯ ಮತ್ತು ಕ್ಷೇಮವಿಲ್ಲದವನ ಕುರಿತ ಯೇಸುವಿನ ಹೇಳಿಕೆಯನ್ನು (ವ. 13-17) ಈ ರೀತಿಯಾಗಿ ವಿವರಿಸಬಹುದು:

   ಅ. ವೈದ್ಯನ ಮುಖ್ಯ ಕೆಲಸವು ರೋಗಿಗೆ ಸಹಾಯ ಮಾಡುವುದಾಗಿದೆ. ಆದರೆ ತಮಗೆ ವೈದ್ಯನು ಬೇಕು ಎಂಬದನ್ನು ತಿಳಿದವರು ಮಾತ್ರ ಆತನ ಬಳಿಗೆ ಬಂದು ವೈದ್ಯನು ಕೊಡುವ ಸೌಖ್ಯತೆಯನ್ನು ಸ್ವೀಕರಿಸುವರು.

   ಆ. ಒಬ್ಬ ರಕ್ಷಕನ ಮುಖ್ಯ ಕೆಲಸವು ಪಾಪಿಗಳನ್ನು ಕ್ಷಮಿಸುವುದಾಗಿದೆ. ಆದರೆ ತಾವು ಪಾಪಿಗಳೆಂಬುದಾಗಿ ಅರಿತುಕೊಂಡವರು ಮಾತ್ರ ರಕ್ಷಕನ ಬಳಿಗೆ ಬಂದು ಆತನ ರಕ್ಷಣೆಯನ್ನು ಹೊಂದಿಕೊಳ್ಳುತ್ತಾರೆ. ಹಾಗೆಯೇ ತನ್ನನ್ನು "ನೀತಿವಂತ" ನೆಂಬುದಾಗಿ

ಯೋಚಿಸುವವನು (ಇದರರ್ಥ ದೇವರ ಮುಂದೆ ತನ್ನನ್ನ ಪಾಪಿಯೆಂಬುದಾಗಿ ತಿಳಿಯದವನು) ತನಗೆ ರಕ್ಷಕನ ಅಗತ್ಯವಿದೆಯೆಂಬುದನ್ನು ಅರಿಯುವ ಪಾಪಿಗಿಂತಲೂ ಕನಿಷ್ಠನಾಗಿದ್ದಾನೆ.

ಇ. ಯೇಸು ಪಾಪಿಗಳನ್ನು ರಕ್ಷಿಸುವುದಕ್ಕಾಗಿ ಬಂದನು. ಆದರೆ ಆತನ ರಕ್ಷಣೆಯನ್ನು ಸ್ವೀಕರಿಸಬೇಕಿದೆ. "ನೀತಿವಂತರು" ಅದನ್ನು ಅಂಗೀಕರಿಸುವುದಿಲ್ಲ. ಪಾಪಿಗಳು ಅದನ್ನು ಅಂಗೀಕರಿಸುವರು. ಈ ಸತ್ಯವನ್ನು ಈ ರೀತಿಯಲ್ಲಿ ವ್ಯಕ್ತಪಡಿಸುತ್ತಾನೆ: "ನಾನು ನೀತಿವಂತರನ್ನು ಕರೆಯುವುದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವುದಕ್ಕೆ ಬಂದವನು" (ವ. 17).

4. ಮದಲಿಂಗನು ಮತ್ತು ಮದುವೆಯ ಜನರ (ಅತಿಥಿಗಳ) ಕುರಿತ ಯೇಸುವಿನ ಹೇಳಿಕೆಯನ್ನು (ವ. 18-22) ಈ ರೀತಿಯಾಗಿ ವಿವರಿಸಬಹುದು:

ಅ. ಫರಿಸಾಯರೂ, ಸ್ನಾನಿಕನಾದ ಯೋಹಾನನ ಶಿಷ್ಯರೂ ಉಪವಾಸವಿರುವಾಗ ಯೇಸುವಿನ ಶಿಷ್ಯರು ಯಾಕೆ ಉಪವಾಸ ಮಾಡುವುದಿಲ್ಲ ಎಂಬ ಪ್ರಶ್ನೆಯೇ ಈ ಹೇಳಿಕೆಯ ಹಿನ್ನಲೆಯಾಗಿದೆ.

ಆ. ಈ ಪ್ರಶ್ನೆಯು ಯೇಸುವಿನ ಶಿಷ್ಯರ ಭಕ್ತಿಯ ಬಗ್ಗೆ ಸಂದೇಹವನ್ನುಂಟುಮಾಡಿತು: ಉಪವಾಸವು ಭಕ್ತಿಯ ಒಂದು ಭಾಗವಾಗಿದೆ. ಹಾಗಾಗಿ ಯೇಸುವಿನ ಹಿಂಬಾಲಕರು ನಿಜವಾಗಲೂ ಭಕ್ತಿವಂತ ಯೆಹೂದ್ಯರಾ?

ಇ. ಮದಲಿಂಗ ಮತ್ತು ಮದುವೆ ಜನರ ಬಗ್ಗೆ ಯೇಸು ಸಾಮ್ಯದ ರೀತಿಯಲ್ಲಿ ಪ್ರತ್ಯುತ್ತರಿಸುತ್ತಾನೆ. ಮದುವೆಯಂತಹ ಸಂತೋಷಮಯ ಸನ್ನಿವೇಶದಲ್ಲಿ, ಅದೂ ಮದಲಿಂಗನಿರುವಾಗ ಜನರು ಉಪವಾಸವಿರುವುದು ಅಷ್ಟು ಸರಿಯಲ್ಲ. ಯೇಸುವಿನ ಮಾತಿಗೆ ಕಿವಿಗೊಟ್ಟವರಿಗೆ ಆತನು ತನ್ನ ಬಗ್ಗೆ ಅಂದರೆ ಮದುವೆ ಜನರೊಂದಿಗೆ (ಶಿಷ್ಯರು) ಇರುವವನಾದ ತಾನೇ "ಮದಲಿಂಗ" ನೆಂಬುದಾಗಿ ಹೇಳುತ್ತಿರುವನೆಂಬುದಾಗಿ ತಿಳಿದುಕೊಂಡರು. ಹೀಗೆ ಆತನು ತನ್ನ ಶಿಷ್ಯರೊಂದಿಗೆ ಇರುವಾಗ ಅವರು ಉಪವಾಸವಿರಬೇಕಾಗಿರಲಿಲ್ಲ.

ಈ. ಆದರೆ ಯೇಸು ಈ ಮದಲಿಂಗನ ಬಗ್ಗೆ ಒಂದು ಆಶ್ಚರ್ಯಕರವಾದ ಹೇಳಿಕೆಯನ್ನು ಸೇರಿಸುತ್ತಾನೆ: "ಮದಲಿಂಗನನ್ನು ಅವರ ಬಳಿಯಿಂದ ತೆಗೆದುಕೊಂಡು ಹೋಗುವ ದಿನ ಬರುತ್ತದೆ" (ವ. 20). ಇದು ಯೇಸುವಿನ ಶಿಲುಬೆ ಮೇಲಿನ ಹಿಂಸಾತ್ಮಕವಾದ ಮರಣದ ಬಗೆಗಿನ ಒಂದು ಪ್ರವಾದನಾತ್ಮಕ ಸಂದೇಶವಾಗಿರುವಂತೆ ತೋರುತ್ತದೆ (ಯೆಶಾಯ 53:8, "ಇವನು ಜೀವಲೋಕದಿಂದ ಕೀಳಲ್ಪಟ್ಟಿದ್ದಾನೆ" ಹೋಲಿಸಿ).

ಉ. ತನ್ನ ಕುರಿತಾಗಿನ "ಮದಲಿಂಗನು" ಎಂಬ ಯೇಸುವಿನ ರೂಪಾಲಂಕಾರದ ಬಳಕೆಯು ಆತನ ಕೆಲ ಕೇಳುಗರಿಗೆ ಬಹುಶಃ ಯೆಶಾಯ 62:5 (ಇಲ್ಲಿ ದೇವರು ತನ್ನನ್ನು ಮದಲಿಂಗನೊಂದಿಗೆ ಹೋಲಿಸಿಕೊಳ್ಳುತ್ತಾನೆ), ಮತ್ತು ಹೋಶೇಯ 2:19-20(ಇಲ್ಲಿ ದೇವರು ತನ್ನ ಜನರನ್ನು ತಾನೇ ಶಾಶ್ವತವಾಗಿ ವರಿಸುತ್ತಾನೆ)ನ್ನು ಜ್ಞಾಪಕಕ್ಕೆ ತಂದಿರಬಹುದು. ಒಂದು ವೇಳೆ ಶಾಸ್ತ್ರಿಗಳು ಮತ್ತು ಫರಿಸಾಯರು ಇದನ್ನು ಗಮನಿಸಿದ್ದರೆ ಪುನಃ ಯೇಸುವನ್ನು ದೇವದೂಷಣೆಮಾಡಿದನೆಂಬುದಾಗಿ ದೂಷಿಸುತ್ತಿದ್ದಿರಬಹುದು.

5. ಉಪವಾಸವಿರುವುದು (ವ. 18-20) ಮತ್ತು "ಹಳೆಯ ಬಟ್ಟೆಗೆ ಹೊಸ ಬಟ್ಟೆಯ ತ್ಯಾಪೆ ಹಚ್ಚುವುದು" ಮತ್ತು "ಹಳೆಯ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸವನ್ನು ಹಾಕಿಡುವುದು" ಎಂಬ ಈ ಎರಡು ಸಾಮ್ಯಗಳ ನಡುವಿನ ಸಂಬಂಧವನ್ನು (ವ. 21-22) ಈ ರೀತಿಯಾಗಿ ವಿವರಿಸಬಹದು:

ಅ. ಮದುವೆಯಲ್ಲಿ ಉಪವಾಸವಾಗಿರುವುದು, ಹಳೆಯ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸವನ್ನು ಹಾಕಿಡುವುದು ಮತ್ತು ಹಳೆಯ ಬಟ್ಟೆಗೆ ಹೊಸ ಬಟ್ಟೆಯ ತುಂಡನ್ನು ತ್ಯಾಪೆ ಹಚ್ಚುವುದೆಲ್ಲವೂ ಸಹ ಎರಡು ಅಂಶಗಳು ಪರಸ್ಪರ ಹೊಂದಿಕೆಯಾಗದೆ ಇರುವ ಅಸಾಮರಸ್ಯವನ್ನು ಸೂಚಿಸುತ್ತದೆ.

ಆ. ಹೊಸ ಬಟ್ಟೆ ಮತ್ತು ಹೊಸ ದ್ರಾಕ್ಷಾರಸವು ಯೇಸು ಕ್ರಿಸ್ತನ ಬರೋಣದ ಹೊಸತನವನ್ನು ಸೂಚಿಸುತ್ತದೆ. ಆ ಹೊಸತನವು, ಯೆಹೂದಿ ಮತದ ಹಳೆಯ ರೂಪಕ್ಕೆ ಸೀಮಿತವಾಗಿರಲಾರದು. ಅವೆರಡೂ ಪರಸ್ಪರ ಹೊಂದಿಕೆಯಾಗುವುದಿಲ್ಲ.

ಇ. ಉಪವಾಸದ ಕುರಿತ ಪ್ರಶ್ನೆಯನ್ನು ಉತ್ತರಿಸಲು ಯೇಸು ಮದುವೆಯ ಊಟವನ್ನು ಮಧ್ಯತರುತ್ತಾನೆ. ತನ್ನ ಸೇವೆಯ ಮೂಲಕವಾಗಿನ ದೇವರ ರಾಜ್ಯದ ಬರೋಣವು ಸಂತೋಷ ಮತ್ತು ಸಂಭ್ರಮದ ಸಮಯವಾಗಿದೆ ಎಂಬುದು ಯೇಸು ಹೇಳುವ ಅಂಶವಾಗಿದೆ.

ಈ. ಯೇಸುವಿನ ಸಂದೇಶವನ್ನು ಈ ರೀತಿಯಾಗಿ ಹೇಳಬಹುದು: ನಾನು ನಿಮಗೆ ಸಾರುತ್ತಿರುವ ದೇವರ ರಾಜ್ಯವು ಸಂಭ್ರಮ ಮತ್ತು ಸಂತೋಷದಿಂದ ತುಂಬಿದೆ. ಇದು ದೇವರು ತನ್ನ ಜನರೊಂದಿಗೆ ಒಂದು ಹೊಸ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತಾನೆಂದು ಹಳೇ ಒಡಂಬಡಿಕೆಯ ಪ್ರವಾದಿಗಳ ಮೂಲಕ ಹೇಳಿರುವ ವಾಗ್ದಾನಗಳ ನೆರವೇರಿಕೆಯಾಗಿದೆ. ಇದರ ಹೊಸತವು ಹಳೆಯ ಧಾರ್ಮಿಕ ರೂಪಗಳನ್ನು ಮೀರಿಸಿ ಹೊಸದಾದ ಸಂತೋಷ ಮತ್ತು ಸ್ವಾತಂತ್ರ್ಯವನ್ನು ತರುತ್ತದೆ.

6. ತನ್ನ ಶಿಷ್ಯರು ಮತ್ತು ದಾವೀದನ ನಡುವೆ ಯೇಸು ಕಲ್ಪಿಸುವ ಸಮಾನತೆ (ವ. 23-28):

ಅ. ದಾವೀದನು ಮತ್ತು ಆತನ ಸಂಗಡ ಇದ್ದವರು ಹಸಿದಾಗ ನೈವೇದ್ಯದ ರೊಟ್ಟಿಯನ್ನು ತಿನ್ನುತ್ತಾರೆ, ಅದು ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿತ್ತು. ಅದಕ್ಕಾಗಿ ಅವರು ಖಂಡನೆಗೊಳಗಾಗುವುದಿಲ್ಲ, ಯಾಕೆಂದರೆ ಪರಿಸ್ಥಿತಿಯು ಅಂಥದ್ದಾಗಿತ್ತು. ಧರ್ಮಶಾಸ್ತ್ರದ ಕಟ್ಟು ಪಾಲನೆಗಿಂತ ಮನುಷ್ಯನ ಅಗತ್ಯತೆಯು ಅತೀ ಪ್ರಾಮುಖ್ಯವಾದುದ್ದಾಗಿದೆ.

ಆ. ಯೇಸುವಿನ ಶಿಷ್ಯರು ಧಾನ್ಯದ ತೆನೆಯನ್ನು ಮುರಿದುಕೊಳ್ಳುವುದರ ಮೂಲಕ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದರೆಂಬ ಆಪಾದನೆಗೆ ಒಳಗಾದರು. ಫರಿಸಾರಯರು ತಂದಂತ ದೂರಿಗೆ ಯೇಸುವು ಪ್ರತಿಕ್ರಯಿಸುವುದಿಲ್ಲ: ಶಿಷ್ಯರುಗಳು ಸುಗ್ಗಿಯನ್ನುಕೊಯ್ಯುತ್ತಿದ್ದಾರೆ, ಅಂದರೆ ಕೆಲಸ ಮಾಡುತ್ತಿದ್ದಾರೆ, ಸಬ್ಬತ್ ದಿನದಲ್ಲಿ ಕೆಲಸ ಮಾಡುವುದು ನಿಷಿದ್ಧ ಎಂಬುದಾಗಿ ಅವರು ಹೇಳಿದರು.

ಇ. ಇಲ್ಲಿ ಯೇಸು ತೆನೆಯನ್ನು ಕಿತ್ತು ತಿನ್ನುವುದು "ಸುಗ್ಗಿಯ ಕೆಲಸ" ವೆಂಬುದಾಗಿ ಕರೆಯಲಾಗದು ಎಂಬ ಸಾಮಾನ್ಯ ಯೆಹೂದಿ ತಿಳುವಳಿಕೆಯನ್ನು ಪಾಲಿಸಿದನು. ಆದರೆ ಈ ಅಂಶವನ್ನು ಆತನು ಫರಿಸಾಯರೊಂದಿಗೆ ಚರ್ಚಿಸುವುದಿಲ್ಲ

ಈ. ಬದಲಾಗಿ ಆತನು ಪುನಃ ತನ್ನ ಅಧಿಕಾರವನ್ನು ತೋರಿಸುತ್ತಾನೆ. ಅದು ಎರಡು ರೀತಿಯಲ್ಲಿದೆ:

- ಯೇಸು ಸಬ್ಬತ್ತಿನ ನಿಜವಾದ ಉದ್ದೇಶವನ್ನು ವಿವರಿಸುತ್ತಾನೆ: ಇದು ಮನುಷ್ಯರಿಗಾಗಿನ ದೇವರ ಕೊಡುಗೆಯಾಗಿದೆ. ಇದು ಮನುಷ್ಯನಿಗಾಗಿಯೇ ಮಾಡಲ್ಪಟ್ಟದ್ದು. ಪ್ರಾಚೀನ ಕಾಲದಲ್ಲಿ ಸಬ್ಬತ್ತು ವಿಶ್ರಾಂತಿ ಮತ್ತು ಆರಾಧನೆಯೊಂದಿಗೆ ಸಂಬಂಧ ಹೊಂದಿತ್ತೇ ವಿನಃ ಹಲವಾರು ನಿಷೇಧಗಳೊಂದಿಗಲ್ಲ. ಇದು ಮನುಷ್ಯರಿಗಾಗಿನ ದೇವರ ದಯೆ ಎಂಬುದಾಗಿ ಯೋಚಿಸಲಾಗಿತ್ತು. ಬಾಬೆಲಿನ ಸೆರೆಯ ವೇಳೆ ಮತ್ತು ಅನಂತರ ಸಬ್ಬತ್ತು ಒಂದು ಆರಾಧನೆಯ, ಧರ್ಮಶಾಸ್ತ್ರ ಅಧ್ಯಯನ, ಹಾಗೆಯೇ ವಿಶ್ರಾಂತಿಯ ಒಂದು ದಿನವಾಯಿತು. ಧರ್ಮಶಾಸ್ತ್ರಕ್ಕೆ ವಿಧೇಯರಾಗಿ ಯೆಹೂದ್ಯರು ಹೇಗೆ ಜೀವಿಸಬೇಕೆಂಬುದಕ್ಕಾಗಿ ಶಾಸ್ತ್ರಿಗಳು ಕ್ರಮೇಣ ಅಸಂಖ್ಯವಾದ ಕಾನೂನಾತ್ಮಕ ನಿರ್ಬಂಧ/ನಿಯಮಗಳನ್ನು ರೂಪಿಸಿದರು. ಈ ನಿಯಮಗಳು ಸಬ್ಬತ್ ಆಚರಣೆಯನ್ನು ಸಹ ಒಳಗೊಂಡಿದ್ದವು. ರಬ್ಬಿಗಳು ಸಬ್ಬತ್ತೇ ಇದರ ಕೊನೆ ಎಂಬುದಾಗಿ ಪರಿಗಣಿಸಿದ್ದರು. ಆದರೆ ಯೇಸು ಅವರನ್ನು ವಿರೋಧಿಸಿ ಸಬ್ಬತ್ತು ಮನುಷ್ಯನ ಪ್ರಯೋಜನಕ್ಕಾಗಿಯೇ ಮಾಡಲ್ಪಟ್ಟಿದೆ ಮತ್ತು ಸಬ್ಬತ್ತಿನ ಶಾಸ್ತ್ರಕ್ಕಿಂತ ಮನುಷ್ಯನ ಅಗತ್ಯತೆಗೆ ಪ್ರಾಧಾನ್ಯತೆ ಕೊಡಬೇಕೆಂದು ಬೋಧಿಸಿದನು.
- ಮನುಷ್ಯಕುಮಾರನಾದ ತಾನು (ಮೆಸ್ಸೀಯ) ಸಬ್ಬತ್ತಿಗೆ ಒಡೆಯನಾಗಿದ್ದೇನೆಂಬುದಾಗಿ ಯೇಸು ಹೇಳುತ್ತಾನೆ.


**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –
2. ಯೇಸು ನೀತಿವಂತರನ್ನಲ್ಲ, ಪಾಪಿಗಳನ್ನು ಕರೆಯುವುದಕ್ಕೆ ಬಂದನು: "ನೀತಿವಂತರು": ದೇವರೊಬ್ಬನೇ ನಿಜವಾಗಿ ನೀತಿವಂತನೂ, ನ್ಯಾಯವಂತನೂ ಆಗಿದ್ದಾನೆ. ದೇವರ ಮುಂದೆ ಯಾವ ಮನುಷ್ಯನೂ ನೀತಿವಂತನಲ್ಲ (ರೋಮ 3:10). ಹೀಗಾಗಿ ನಾವೆಲ್ಲರೂ

ರಕ್ಷಣೆಯ ಅಗತ್ಯದಲ್ಲಿರುವ ಪಾಪಿಗಳಾಗಿದ್ದೇವೆ. ತನ್ನ ಜನರು ನೀತಿವಂತರಾಗಿ ಜೀವಿಸಬೇಕೆಂದು ದೇವರು ಬಯಸುತ್ತಾನೆ. ಹಳೇ ಒಡಂಬಡಿಕೆಯಲ್ಲಿ ಇದರರ್ಥ "ದೇವರಿಗೆ ಭಯಪಡುವುದು", ಆತನನ್ನು ಪ್ರೀತಿಸಿ ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವುದಾಗಿದೆ. ನಮ್ಮ ನೀತಿವಂತಿಕೆಯು ನಮ್ಮನ್ನ ರಕ್ಷಿಸುವುದಿಲ್ಲವೆಂದು ಹೊಸ ಒಡಂಬಡಿಕೆಯು ಬೋಧಿಸುತ್ತದೆ. "ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ, ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟು ಮಾಡುವುದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು" (ತೀತ 3:5). ನಮ್ಮ ಜೀವಿತವನ್ನು ಪವಿತ್ರಾತ್ಮನ ನಿಯಂತ್ರಣಕ್ಕೆ ಕೊಡುವಾಗ ನಾವು "ಕರ್ತನಿಗೆ ಯೋಗ್ಯರಾಗಿ ನಡೆದು" ಎಲ್ಲಾ ವಿಧದಲ್ಲಿ ಆತನನ್ನು ಸಂತೋಷಪಡಿಸುವವರಾಗಿ ಸಕಲ ಸತ್ಕಾರ್ಯವೆಂಬ ಫಲವನ್ನು ಕೊಡುತ್ತಾ, ದೇವಜ್ಞಾನದಿಂದ ಅಭಿವೃದ್ಧಿಯಾಗುತ್ತೇವೆ (ಕೊಲೆಸ್ಸೆ 1:10).

3. ಹೊಸದು ಮತ್ತು ಹಳೆಯದು: ಉಪವಾಸ ಕುರಿತ ಒಂದು ಟಿಪ್ಪಣಿ: ಸುವಾರ್ತೆಯನ್ನು ಹೊರತುಪಡಿಸಿ ಹೊಸ ಒಡಂಬಡಿಕೆಯಲ್ಲಿ ಉಪವಾಸದ ಬಗ್ಗೆ ಕೆಲವೇ ಬಾರಿ ಕಾಣುತ್ತೇವೆ. ಸಿರಿಯಾದ ಅಂತಿಯೋಕ್ಯದಲ್ಲಿನ ವಿಶ್ವಾಸಿಗಳು ಉಪವಾಸವಿದ್ದು, ಪ್ರಾರ್ಥಿಸುತ್ತಾ ಇರುವಾಗ ಬಾರ್ನಬ ಮತ್ತು ಸೌಲನನ್ನು ಸೇವೆಗಾಗಿ ಪ್ರತ್ಯೇಕಿಸಿರಿ ಎಂದು ಪವಿತ್ರಾತ್ಮನು ಹೇಳಿದನು (ಅ.ಕೃ. 13:2-3). ಮೊದಲ ಮಿಶನರಿ ಪ್ರಯಾಣದ ಅಂತ್ಯದಲ್ಲಿ, ಅವರು ಮನೆಗೆ ಹಿಂತಿರುಗುತ್ತಿರುವಾಗ ಪೌಲ ಮತ್ತು ಬಾರ್ನಬರು ಸಭೆಯಲ್ಲಿ "ಹಿರಿಯರನ್ನು ಗೊತ್ತುಮಾಡಿ ನೇಮಿಸಿ ಉಪವಾಸವಿದ್ದು ಪ್ರಾರ್ಥನೆ ಮಾಡಿ ಅವರು ನಂಬಿದ್ದ ಕರ್ತನ ಕೈಗೆ ಅವರನ್ನು ಒಪ್ಪಿಸಿದರು" (ಅ.ಕೃ. 14:23). ಪತ್ರಿಕೆಗಳಲ್ಲಿ ಉಪವಾಸದ ಬಗ್ಗೆ ಯಾವುದೇ ಬೋಧನೆಗಳಿಲ್ಲ, ಆದರೆ ಯೇಸು ತನ್ನ ಹಿಂಬಾಲಕರಿಗೆ ಫರಿಸಾಯರಂತೆ ಕಪಟಿಗಳಾಗಿರಬೇಡಿರಿ ಎಂದು ಹೇಳಿದನು: "ಇದಲ್ಲದೆ ನೀವು ಉಪವಾಸ ಮಾಡುವಾಗ ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ. ಅವರು ತಾವು ಉಪವಾಸಿಗಳೆಂದು ಜನಗರಿಗೆ ತೋರುವುದಕ್ಕಾಗಿ ತಮ್ಮ ಮುಖವನ್ನು ವಿಕಾರ ಮಾಡಿಕೊಳ್ಳುತ್ತಾರೆ" (ಮತ್ತಾ. 6:16).

4. ಸಬ್ಬತ್ತನ್ನು ತಿಳಿದುಕೊಳ್ಳುವಂತೆ ನಮಗೆ ಯೇಸು ಸಹಕರಿಸುವುದು: ನಿಯಮದ ಕುರಿತ ಒಂದು ಟಿಪ್ಪಣಿ: ಅನೇಕ ದೇಶಗಳಲ್ಲಿನ ಸತ್ಯವನ್ನು ನಂಬುವ ಸಭೆಗಳು ನಮಗೆ ದೇವಜನರು "ನೀತಿಯುತ" ಜೀವಿತವನ್ನು ನಡೆಸಿದರೆಂಬುದನ್ನು ಖಚಿತಪಡಿಸಲು ಬಯಸುವ ಫರಿಸಾಯರನ್ನು ನೆನಪಿಸುತ್ತವೆ. ಹೀಗೆ ಒಳ್ಳೇ ಉದ್ದೇಶದಿಂದ ಅವರು ತಮಗೆ ಸಹಾಯಕವಾಗುತ್ತವೆಂಬುದಾಗಿ ಯೋಚಿಸಿ ಧರ್ಮಶಾಸ್ತ್ರಕ್ಕೆ ಅನೇಕ ನಿಯಮ ಮತ್ತು ಕಾಯಿದೆಗಳನ್ನು ಸೇರಿಸಿದರು. ನಿಯಮಗಳ ಪರಿಣಾಮವು ತನ್ನ ಜನರಿಗಾಗಿನ ದೇವರ ಚಿತ್ರವನ್ನು ಅಸ್ಪಷ್ಟವಾಗಿಸಿತು. ಈ ರೀತಿಯ ನಿಯಮವನ್ನು ಯೇಸು ಬಲವಾಗಿ ವಿರೋಧಿಸಿದನು. ಹಾಗಾಗಿ ಫರಿಸಾಯರು ಮಾಡಿದಂತ ತಪ್ಪನ್ನು ಮಾಡದಂತೆ ನಾವು ಎಚ್ಚರವಾಗಿರಬೇಕು



**ಉತ್ತರಗಳು: ಮಾರ್ಕ ಅಧ್ಯಾಯ 3**

**ಪ್ರಶ್ನೆಗಳಿಗೆ ಉತ್ತರಗಳು**

1. ಫರಿಸಾಯರು ಯೇಸುವಿನ ಮೇಲೆ ತಪ್ಪು ಹೊರಿಸಬೇಕೆಂದು ಹೊಂಚಿ ನೋಡುತ್ತಿದ್ದರು (ವ. 2). ಹಿನ್ನಲೆಯಿಂದ ಇದು ಸ್ಪಷ್ಟವಾಗಿ ತೋರುತ್ತದೆ (ಹೋಲಿಸಿ 2:24 ಮತ್ತು 3:6).
2. ಕೈ ಬತ್ತಿದವನಿಗೆ ಯೇಸು ಎರಡು ಸಂಗತಿಗಳನ್ನು ಹೇಳಿದನು (ವ. 3, 5):

   ಅ. ಮೊದಲನೆಯದಾಗಿ, ಸಭಾಮಂದಿರದಲ್ಲಿನ ಜನರೆದುರು ನಿಲ್ಲುವುದು. ಅಲ್ಲಿ ಏನಾಗುತ್ತದೆಂಬುದನ್ನು ಎಲ್ಲಾ ನೋಡಬೇಕೆಂಬುದಾಗಿ ಯೇಸು ಬಯಸಿರಬಹುದು.

   ಆ. ಆನಂತರ ಬತ್ತಿಹೋಗಿದ್ದ ಕೈಯನ್ನು ಚಾಚುವುದು. ತಕ್ಷಣ ಯೇಸು ಆತನನ್ನು ಗುಣಪಡಿಸುತ್ತಾನೆ.
3. ಸಬ್ಬತ್ ದಿನದಲ್ಲಿ ಕೈ ಬತ್ತಿಹೋದವನನ್ನು ಗುಣಪಡಿಸಿದ್ದಕ್ಕೆ ಫರಿಸಾಯರು ನಕಾರಾತ್ಮಕವಾಗಿ ಪ್ರತಿಕ್ರಯಿಸಿದರು (ವ. 6). ಯೇಸು ಮಾಡಿದ ಒಳ್ಳೆಯ ಕಾರ್ಯಕ್ಕಾಗಿ ಆತನನ್ನು ಕೊಂಡಾಡುವ ಬದಲು ಆತನನ್ನು ಕೊಲ್ಲುವುದಕ್ಕಾಗಿ ಒಳ್ಳೆಯ ಮಾರ್ಗವೇನೆಂಬುದನ್ನು ಆಲೋಚಿಸಿದರು.
4. –
5. ***ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನ್ ನಕ್ಷೆಯಲ್ಲಿ*** ಯೊರ್ದನ್ ಹೊಳೆಯ ಪೂರ್ವಭಾಗದಲ್ಲಿನ ಸ್ಥಳಗಳೆಂದರೆ – ದೆಕಪೊಲಿ ಮತ್ತು ಪೆರಿಯ.
6. ಜನರ ದೊಡ್ಡ ಗುಂಪಿನಿಂದ ತನ್ನನ್ನು ರಕ್ಷಿಸಿಕೊಳ್ಳಲು ಯೇಸು ಸಣ್ಣ ದೋಣಿಯನ್ನು ಬಯಸಿದನು (ವ. 9-10). ಜನರು ಆತನನ್ನು ಮಟ್ಟಬೇಕೆಂದು ಆತನನ್ನು ನೂಕಿಕೊಂಡು ಬರುತ್ತಿದ್ದರು.
7. ಯೇಸುವನ್ನು ಕಂಡಾಗ ದೆವ್ವಗಳು ಆತನ ಪಾದಕ್ಕೆ ಬಿದ್ದು, ಆತನನ್ನು ದೇವಕುಮಾರನೆಂಬುದಾಗಿ ಕೂಗುತ್ತಿದ್ದವು (ವ. 11-12). ಆತನು ಯಾರೆಂಬುದಾಗಿ ತಿಳಿದು ಅವು ಆತನಿಗೆ ಶರಣಾದವು.
8. ಯೇಸು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಹೀಗೆ ಆರಿಸಿಕೊಂಡನು (ವ. 13):

   ಅ. ತನಗೆ ಬೇಕಾದವರನ್ನು ಆತನು ಹತ್ತಿರಕ್ಕೆ ಕರೆದನು. ಹೀಗೆ ಎಲ್ಲಾ ಜನರ ಮಧ್ಯೆ ಆತನನ್ನು ಹಿಂಬಾಲಿಸುವ ಶಿಷ್ಯರ ಮಧ್ಯೆ ಒಂದು ಆಯ್ಕೆ ಮಾಡಿದನು.

   ಆ. ಅವರು ಆತನ ಬಳಿಗೆ ಬಂದರು. ಹೀಗೆ ಆತನ ಕರೆಗೆ ಅವರು ನಕಾರಾತ್ಮಕವಾಗಿ ಸ್ಪಂದಿಸಿದರು. ಒಬ್ಬ ದೇವರ ಸೇವಕನ ಕರೆಯು ಯಾವಾಗಲೂ ಎರಡು ಮಗ್ಗಲನ್ನು ಹೊಂದಿದೆ: ಸ್ವತಃ ಕರೆ ಮತ್ತು ಆ ಕರೆಗೆ "ಹೌದು/ಆಯಿತು" ಎಂದು ಹೇಳುವುದು.
9. ಶಿಷ್ಯರ "ಕೆಲಸವನ್ನು" ಮಾರ್ಕನು ಈ ರೀತಿಯಾಗಿ ವರ್ಣಿಸುತ್ತಾನೆ (ವ. 14-15):

   ಅ. ಆತನೊಂದಿಗೆ ಇರುವುದು: ಅವರು ಯೇಸುವಿನಿಂದ ತರಬೇತಿಯನ್ನು ಹೊಂದಿದವರು, ಅವರು ಆತನೊಂದಿಗೆ ನಿಕಟವಾದ ಅನ್ಯೋನ್ಯತೆಯನ್ನು ಹೊಂದಿದ್ದರು.

   ಆ. ಆತನಿಂದ ಕಳುಹಿಸಲ್ಪಡುವುದು: ಅವರು ಆತನ "ಅಪೊಸ್ತಲರು" (ಆತನ ಸಂದೇಶಕರು, ಆತನ ಮಿಶನರಿಗಳು). ಈ ಅಪೊಸ್ತಲತ್ವಕ್ಕೆ ಎರಡು ಮಗ್ಗುಲುಗಳಿವೆ:

   - ಸಾರುವುದು: ಅಪೊಸ್ತಲರು ದೇವರ ರಾಜ್ಯದ ಸುವಾರ್ತೆ ಮತ್ತು ಮನುಷ್ಯರೆಲ್ಲರ ರಕ್ಷಕನಾಗಿರುವ ಯೇಸುವಿನ ಕುರಿತ ಶುಭವಾರ್ತೆಯನ್ನು ಸಾರಿದರು
   - ಆತ್ಮೀಕ ಅಧಿಕಾರ: ಈ ಸುವಾರ್ತಾ ಸಾರೋಣವು ದುರಾತ್ಮಗಳ ಬಲಗಳ ಮೇಲೆ ಅಧಿಕಾರದಿಂದ ಬಂದಿತು. ದೇವರ ರಾಜ್ಯವು ಹಬ್ಬುವಾಗ ಸೈತಾನನ ಬಲವು ಹೊರಟು ಹೋಗುತ್ತದೆ.

10. ಮಾರ್ಕನು ಇಸ್ಕರಿಯೋತ ಯೂದನ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹೇಳುತ್ತಾನೆ (ವ. 19): ಇವನು ಯೇಸುವನ್ನು ಹಿಡುಕೊಡುವವನು.
11. ಯೇಸುವಿನ ಬಂಧುಗಳು ಆತನಿಗೆ ಹುಚ್ಚು ಹಿಡಿದಿದೆ ಎಂಬುದಾಗಿ ಯೋಚಿಸಿದರು (ವ. 20-21). ಹಾಗಾಗಿ ಆತನನ್ನು ನೋಡಿಕೊಳ್ಳುವುದಕ್ಕಾಗಿ ಅವರು ನಜರೇತಿನಿಂದ ಕಪೆರ್ನೌಮಿಗೆ ಬಂದಿದ್ದರು.
12. ಯೇಸುವಿಗೆ ಹುಚ್ಚು ಹಿಡಿದಿದೆ ಮತ್ತು ಆತನು ಸೈತಾನನ ಸೇವೆಯನ್ನು ಮಾಡುತ್ತಿದ್ದಾನೆಂಬುದಾಗಿ ಶಾಸ್ತ್ರಿಗಳು ಹೇಳಿದರು (ವ. 23, 30).
13. ಸೈತಾನನು ತನಗೇ ವಿರುದ್ಧವಾಗಿ ಎದ್ದರೆ ಅದು ಆತನ ನಾಶನಕ್ಕೆ ನಡೆಸುತ್ತದೆಂಬುದಾಗಿ ಯೇಸು ಹೇಳಿದನು. ಆಗ ಸೈತಾನನ ಬಲವು ಕೊನೆಗೊಳ್ಳುತ್ತದೆ (ವ. 26).
14. ನೆರೆದ ಗುಂಪಿಗೆ ಯೇಸು "ತಮ್ಮ, ತಂಗಿ ಮತ್ತು ತಾಯಿ" ಯ ಬಗ್ಗೆ ವಿಶಾಲವಾದ ಅರ್ಥವನ್ನು ತಿಳಿಸಿಕೊಡುತ್ತಾನೆ (ವ. 31-35): ದೇವರ ಚಿತ್ತವನ್ನು ಮಾಡುವವರೆಲ್ಲರೂ ಯೇಸುವಿನ ಕುಟುಂಬಕ್ಕೆ ಸೇರಿದವರಾಗಿದ್ದಾರೆ. ಅವರೇ ಆತನ ತಮ್ಮಂದಿರೂ ತಂಗಿಯಂದಿರು ಮತ್ತು ತಾಯಂದಿರಾಗಿದ್ದಾರೆ.

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಯೇಸುವು ಸಬ್ಬತ್ತಿಗೆ ಒಡೆಯನಾಗಿದ್ದಾನೆಂಬುದೇ ಮಾರ್ಕನು ಕೈ ಬತ್ತಿಹೋದವನ ಸೌಖ್ಯತೆಯ ವಿವರದಿಂದ ತಿಳಿಸಬಯಸುವ ಅಂಶವಾಗಿದೆ.
2. ಯೆಹೂದಿ ನಾಯಕರು ಯೇಸುವನ್ನು ಕೊಲ್ಲಬೇಕೆಂಬ ತೀರ್ಮಾನಕ್ಕೆ ಬರುತ್ತಾರೆ (ವ. 1-6). ಇದಕ್ಕೆ ಕಾರಣ ಯೇಸು ರೋಗಿಗಳನ್ನು ಗುಣಪಡಿಸಿದನೆಂಬುದಲ್ಲ! ಯೇಸು ಗುಣಪಡಿಸಬಲ್ಲನೆಂಬುದನ್ನು ಅವರು ನಂಬಿದ್ದರು. ಕೈ ಬತ್ತಿಹೋಗಿದ್ದವನನ್ನು ಯೇಸು ಗುಣಪಡಿಸುವುದನ್ನು ಸಹ ನೋಡಲು ಅವರು ಅಪೇಕ್ಷಿಸಿದ್ದರು. ಅದಕ್ಕೆ ಕಾರಣ ಆತನು ಗುಣಪಡಿಸಿದ ಸಂದರ್ಭ ಸಬ್ಬತ್ ದಿನವಾಗಿತ್ತು. ಒಬ್ಬ ವ್ಯಕ್ತಿಯ ಜೀವವು ಚಿಂತಾಜನಕವಾಗಿರುವಾಗ ಮಾತ್ರ ಸಬ್ಬತ್ ದಿನದಲ್ಲಿ ಅಂತವನಿಗೆ ಸಹಾಯ ಮಾಡಬಹುದೆಂಬುದಾಗಿ ಅವರು ಪಾಲಿಸುವ ಸಂಪ್ರದಾಯವು ಸೂಚಿಸಿತ್ತು. ಕೈ ಬತ್ತಿಹೋದವನ ವಿಷಯ ಇಂತದ್ದಾಗಿರಲಿಲ್ಲ. ಆದರೆ ಯೇಸುವನ್ನು ಕೊಲ್ಲಬೇಕೆಂಬ ನಿರ್ಣಯವು ಬರೀ ಈ ಘಟನೆಯ ಫಲಿತಾಂಶವಲ್ಲ, ಆದರೆ ಇದು ಅನೇಕ ಘಟನೆಗಳಿಂದ ಯೋಜನೆ ಮಾಡಲಾಗಿತ್ತು (***ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ*** ಮೊದಲ ಅಂಶ ನೋಡಿ).
3. ಸಬ್ಬತ್ ದಿನದಲ್ಲಿ ಮೇಲನ್ನು ಅಥವಾ ಕೇಡನ್ನು ಮಾಡುವುದರ ಬಗ್ಗೆ ಯೆಹೂದಿ ಮುಖಂಡರಿಗೆ ಯೇಸು ಕೇಳಿದ ಪ್ರಶ್ನೆಯ ವ್ಯಂಗ್ಯ (ವ. 4): ಫರಿಸಾಯರು ಯೇಸುವನ್ನು ಕೊಲ್ಲಲು ಸಿದ್ಧರಾಗಿರುವಾಗಲೂ ಯೇಸುವು ಕೈ ಬತ್ತಿಹೋಗಿದ್ದವನನ್ನು ಗುಣಪಡಿಸಲು ಸಿದ್ಧನಿದ್ದನು. ಹಾಗಾಗಿ ಗಮನವಿಟ್ಟು ಓದುವವರಿಗೆ ಸಬ್ಬತ್ತನ್ನು ಮೀರುವವರು ಯೆಹೂದಿ ನಾಯಕರೇ ಹೊರತು ಯೇಸು ಅಲ್ಲ ಎಂಬುದು ಸಹಜವಾಗಿ ಗೊತ್ತಾಗುತ್ತದೆ.
4. ಯೇಸುವು ಕೋಪಗೊಂಡನು, ಯಾಕೆಂದರೆ, ಸಬ್ಬತ್ ದಿನದಲ್ಲಿ ಯಾವುದನ್ನು ಮಾಡುವುದು ನ್ಯಾಯ? ಮೇಲನ್ನು ಮಾಡುವದೋ, ಕೇಡನ್ನು ಮಾಡುವದೋ? ಪ್ರಾಣವನ್ನು ಉಳಿಸುವದೋ, ತೆಗೆಯುವದೋ? ಎಂಬ ಆತನ ಪ್ರಶ್ನೆಗೆ ಫರಿಸಾಯರು ಉತ್ತರಿಸಲಿಲ್ಲ (ವ. 4-5). ಸಬ್ಬತ್ ದಿನದಲ್ಲಿ ಯಾವುದನ್ನು ಮಾಡುವುದು ನ್ಯಾಯ ಎಂಬುದರ ಕುರಿತಾಗಿ ಯೇಸು ಅವರ ಶಾಸ್ತ್ರವನ್ನು ಮೀರುವುದಕ್ಕಿಂತ ಆತನನ್ನು ಕೊಲ್ಲುವುದೇ ಅವರಿಗೆ ಯುಕ್ತವೆನಿಸಿತು.
5. ಮಾರ್ಕನ ಸುವಾರ್ತೆಯ 3:11-12 ರಲ್ಲಿ "ಮೆಸ್ಸೀಯನ ರಹಸ್ಯಕ್ಕೆ" ನಾವು ಇನ್ನೊಂದು ಉದಾಹರಣೆಯನ್ನು ಕಾಣುತ್ತೇವೆ. ಇಲ್ಲಿ ಯೇಸು ತಾನು ಇಂಥವನೆಂಬುದಾಗಿ ಯಾರಿಗೂ ಪ್ರಕಟಿಸಬಾರದೆಂಬುದಾಗಿ ದೆವ್ವಗಳಿಗೆ ಖಂಡಿತವಾಗಿ ಅಪ್ಪಣೆ ಮಾಡುತ್ತಾನೆ (ಹೋಲಿಸಿ 1:23). ಯೇಸುವಿನ ಬಲಿದಾನದ ಮರಣದ ಮೂಲಕ ಮಾತ್ರ ನಾವು ಆತನು ಯಾರೆಂಬುದನ್ನು ಪೂರ್ಣವಾಗಿ

ತಿಳಿದುಕೊಳ್ಳಬಹುದೆಂಬುದನ್ನು ತನ್ನ ಓದುಗರಿಗೆ ತೋರಿಸಬೇಕೆಂದು ಮಾರ್ಕನು ಬಯಸುತ್ತಾನೆ. ರೋಮನ್ ಅಧಿಕಾರಿಯು ಯೇಸು ಶಿಲುಬೆಯ ಮೇಲೆ ಮರಣ ಹೊಂದಿದ್ದನ್ನು ನೋಡಿ "ನಿಜವಾಗಿ ಈತನು ದೇವಕುಮಾರನಾಗಿದ್ದನು!" ಎಂದು ಉದ್ಗರಿಸುತ್ತಾನೆ (15:39).

6. ತನ್ನ ಸೇವೆಯು ದೇವರಿಂದ ಬಂದದ್ದೇ ವಿನಃ ಯೆಹೂದಿ ನಾಯಕರು ಹೇಳುವಂತೆ ಸೈತಾನನಿಂದ ಬಂದದಲ್ಲವೆಂಬುದಾಗಿ (ವ. 23-29) ಯೇಸು ಹೇಳುತ್ತಾನೆ. ಈ ರೀತಿ ಆತನು ವಾದಿಸುತ್ತಾನೆ:

   ಅ. ಜನರು ದೆವ್ವಗಳಿಂದ ಬಿಡುಗಡೆ ಹೊಂದಿದ್ದು (ಒಳ್ಳೆಯ ಸಂಗತಿ) ಸೈತಾನನ ಕಾರ್ಯವಾಗಿರಲು ಸಾಧ್ಯವಿಲ್ಲ (ಆತನೇ ಕೆಟ್ಟವನು). ಹಾಗಾದರೆ ಸೈತಾನನು ತನಗೇ ವಿರುದ್ಧವಾಗಿ ಕಾರ್ಯಮಾಡಿದಂತಾಗುವದು.

   ಆ. ಜನರನ್ನು ದೆವ್ವಗಳಿಂದ ಬಿಡಿಸುವುದು ಸೈತಾನನ ಕಾರ್ಯವಾದರೆ ಸೈತಾನನು ತನ್ನನ್ನೇ ವಿರೋಧಿಸಿದಂತಾಗುವುದು. ಆತನು ಬೇಧ ಹುಟ್ಟಿಸಿಕೊಂಡರೆ ಆತನಿಗೆ ಅಂತ್ಯವು ಬೇಗನೆ ಬರುವುದು.

   ಇ. ತನ್ನ ಸೇವೆಯ ಮೂಲಕ ಯೇಸು ನಿಜವಾಗಿ ಮಾಡುತ್ತಿದ್ದುದ್ದೇನೆಂದರೆ ಆತನು ಸೈತಾನನ್ನು ಬಂಧಿಸಿ ಆತನ ಸೊತ್ತನ್ನೆಲ್ಲ ಸುಲುಕೊಳ್ಳುತ್ತಿದ್ದನು. ಯೇಸು ದೆವ್ವಗಳಿಂದ ಬಿಡಿಸಿದ ಪ್ರತಿ ವ್ಯಕ್ತಿ ಸಹ ಸೈತಾನನಿಂದ ಕಿತ್ತುಕೊಳ್ಳಲ್ಪಡುವವನಾಗಿದ್ದನು.

   ಈ. ಪವಿತ್ರಾತ್ಮನ ಬಲದ ಮೂಲಕ ಯೇಸು ಈ ರೀತಿಯ ಕೆಲಸದಲ್ಲಿ ಭಾಗಿಯಾಗಿದ್ದನು.

   ಉ. ಯೇಸುವಿನಲ್ಲಿ ದುರಾತ್ಮವಿದೆ ಮತ್ತು ಆತನ ಮೂಲಕ ಸೈತಾನನು ಕಾರ್ಯಮಾಡುತ್ತಾನೆನ್ನುವುದೇ ಭಯಂಕರವಾದ ಪಾಪವಾಗಿದೆ. ಯೇಸು ಇದನ್ನೇ "ಪವಿತ್ರಾತ್ಮನಿಗೆ ವಿರುದ್ಧವಾದ ದೂಷಣೆ" ಎಂಬುದಾಗಿ ಹೇಳುತ್ತಾನೆ. ಇದು ಕ್ಷಮಿಸಲಾಗದಂತಹ ಪಾಪವಾಗಿದ್ದು ಅದು ನಿತ್ಯವಾದ ನರಕಕ್ಕೆ ಕೊಂಡೊಯ್ಯುತ್ತದೆ.

7. "ಪವಿತ್ರಾತ್ಮನನ್ನು ದೂಷಿಸುವುದು" ಶಾಶ್ವತವಾದ ಪಾಪವಾಗಿದ್ದು, ಅದು ಕ್ಷಮಿಸಲಾರದ್ದಾಗಿದೆ (ವ. 28-29). ಯೇಸು ಸೈತಾನನ ಬಲದಿಂದ ಸೇವೆ ಮಾಡುತ್ತಾನೆಯೇ ಹೊರತು ದೇವರ ಪವಿತ್ರಾತ್ಮನಿಂದ ಅಲ್ಲ ಎಂದು ಹೇಳಿದರೆ ನಾವು ಈ ಪಾಪವನ್ನು ಮಾಡುವವರಾಗಿದ್ದೇವೆ. ಈ ಪಾಪವನ್ನು ಕ್ಷಮಿಸಲಾಗದು, ಯಾಕೆಂದರೆ, ಎಲ್ಲಿ ತನಕ ನಾವು ಯೇಸುವು ಸೈತಾನನಿಂದ ಬಂದವನಾಗಿದ್ದಾನೆಂದು ನಂಬುತ್ತೇವೋ ಅಲ್ಲಿವರೆಗೂ ಆತನನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಲು ಸಾಧ್ಯವಿಲ್ಲ. ಆದರೆ ಯೇಸುವನ್ನು ನಮ್ಮ ರಕ್ಷಕನನ್ನಾಗಿ ಅಂಗೀಕರಿಸಿದರೆ ಆತನು ದೇವರಿಂದ ಹೊರತು ಸೈತಾನನಿಂದ ಬಂದವನಲ್ಲವೆಂದು ತಿಳಿಯುತ್ತೇವೆ. ಆಗ ನಾವು ಪವಿತ್ರಾತ್ಮನಿಗೆ ವಿರುದ್ಧವಾಗಿ ದೂಷಿಸುವಂತ ಪಾಪವನ್ನು ಮಾಡಲಾರೆವು. ನಾವು ರಕ್ಷಿಸಲ್ಪಟ್ಟಿದ್ದೇವೆ ಮತ್ತು ನಮ್ಮ ಹಿಂದಿನ ಪಾಪಗಳೆಲ್ಲ ಕ್ಷಮಿಸಲ್ಪಟ್ಟಿವೆ. ಈ ಪಾಪವು ನಿತ್ಯವಾದುದ್ದಾಗಿದೆ, ಯಾಕೆಂದರೆ ಇದರ ಪರಿಣಾಮವೂ ನಿತ್ಯವಾದುದ್ದಾಗಿದೆ. ಈ ಪ್ರಸ್ತುತ ಜೀವನದಲ್ಲಿ ಮಾತ್ರ ನಮಗೆ ಯೇಸುವನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸುವ ಅವಕಾಶವಿದೆ. ಒಮ್ಮೆ ನಾವು ಸತ್ತ ನಂತರ ಅದು ಕಾಲ ಮೀರಿ ಹೋಗಿರುತ್ತದೆ. ಆಗ ನಾವು ನಮ್ಮ ಅವಕಾಶವನ್ನು ಕಳಕೊಂಡಿರುತ್ತೇವೆ.

8. ಯೇಸುವಿನ ಕುಟುಂಬದ ಕುರಿತಾದ ವಾಕ್ಯಭಾಗದಲ್ಲಿ (ವ. 31-35) "ತಮ್ಮಂದಿರು" (ಸಹೋದರರು) ಎಂಬ ಪದವು ಎರಡು ವಿಧಗಳಲ್ಲಿ ಬಳಸಲ್ಪಟ್ಟಿದೆ:

   ಅ. ವಚನ 31 ರಲ್ಲಿ "ತಮ್ಮಂದಿರು" ಎಂಬ ಪದವನ್ನು ಅಕ್ಷರಶಃ ರೀತಿಯಲ್ಲಿ ಬಳಸಲಾಗಿದೆ. ಆತನನ್ನು ನೋಡುವುದಕ್ಕಾಗಿ ಆತನ ಶಾರೀರಿಕ ತಮ್ಮಂದಿರು ಬಂದಿದ್ದರು.

   ಆ. ವಚನ 34 ರಲ್ಲಿ "ತಮ್ಮಂದಿರು" ಎಂಬ ಪದವನ್ನು ಅಲಂಕಾರಿಕ ರೂಪದಲ್ಲಿ ಬಳಸಲಾಗಿದೆ. ಇಲ್ಲಿ ಯೇಸು ತನ್ನ ಆತ್ಮೀಕ ತಮ್ಮಂದಿರ ಬಗ್ಗೆ ಹೇಳುತ್ತಿದ್ದಾನೆ. ಇಲ್ಲಿ ಯೇಸು ಹೇಳುವ ಅಂಶವೇನೆಂದರೆ ದೇವರ ಆತ್ಮೀಕ ಕುಟುಂಬದಲ್ಲಿನ ಸದಸ್ಯತ್ವವು (ದೇವರ ರಾಜ್ಯ) ನಮ್ಮ ಮಾನುಷಿಕ ಕುಟುಂಬದಲ್ಲಿನ ಸದಸ್ಯತ್ವಕ್ಕಿಂತ ಹೆಚ್ಚು ಪ್ರಾಮುಖ್ಯವಾದುದ್ದಾಗಿದೆ. ಯೇಸುವಿಗೆ ವಿಧೇಯರಾಗಿ ದೇವರ ಚಿತ್ತವನ್ನು ನಾವು ಮಾಡುವಾಗ ನಾವು ಯೇಸುವಿನ ಕುಟುಂಬಕ್ಕೆ ಸೇರಿದ್ದು, ನಾವು ದೇವರ ರಾಜ್ಯದ ಪ್ರಜೆಗಳಾಗಿದ್ದೇವೆಂಬುದನ್ನು ತಿಳಿಸುವವರಾಗಿದ್ದೇವೆ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಮಾರ್ಕ 2 ಮತ್ತು 3 ನೇ ಅಧ್ಯಾಯಗಳಲ್ಲಿ ಯೇಸು ಮತ್ತು ಯೆಹೂದಿ ನಾಯಕರ ನಡುವೆ ಕಂಡುಬರುವ 6 ವಾದಗಳು ಇಂತಿವೆ:

| ವಾಕ್ಯ | ಘರ್ಷಣೆಯ ಅಂಶ |
|---|---|
| 2:1-12<br>2:15:17 | ಪಾಪ ಕ್ಷಮಾಪಣೆ: ಪಾಪಕ್ಷಮಿಸುವವನಾಗಿ ಯೇಸು ದೇವರೆನ್ನುವುದು, ಪಾಪಿಗಳೊಂದಿಗೆ ಊಟ ಮಾಡುವುದು: ಯೇಸು ನೀತಿವಂತರನ್ನು ಕರೆಯಲು (ಸ್ವನೀತಿವಂತರು, ತಮಗೆ ರಕ್ಷಣೆ ಬೇಕೆಂದು ಅರಿಯದವರು) ಬರಲಿಲ್ಲ, ಆದರೆ ಪಾಪಿಗಳನ್ನು (ತಮಗೆ ರಕ್ಷಕನ ಅವಶ್ಯಕತೆಯುಂಟೆಂದು ಅರಿತವರು) ಕರೆಯಲು ಬಂದನು. |
| 2:18-22 | ಉಪವಾಸವಿರುವುದು: ಯೇಸುವಿನ ಇರುವಿಕೆಯು ಮದಲಿಂಗನು ಸ್ವತಃ ತನ್ನ ಮದುವೆಯಲ್ಲಿ ಇದ್ದಂತಾಗುವುದು. ಇದು ಆತನ ಸ್ನೇಹಿತರಿಗೆ ಸಂಭ್ರಮಿಸುವ ಸಂದರ್ಭವಾಗಿದೆಯೇ ವಿನಃ ಉಪವಾಸವಿರುವುದಲ್ಲ. ಯೇಸುವಿನ ಬರೋಣದ ಹೊಸತನವು ("ಹೊಸ ಬಟ್ಟೆ" ಮತ್ತು "ಹೊಸ ದ್ರಾಕ್ಷಾರಸ") ಯೆಹೂದಿ ಮತದ ಹಳೆಯ ರೂಪಕ್ಕೆ ಸೀಮಿತವಾಗಿರುವುದಿಲ್ಲ. ದೇವರ ರಾಜ್ಯವು ಒಂದು ಹೊಸ ಒಡಂಬಡಿಕೆಯ ದೇವರ ವಾಗ್ದಾನಗಳ ನೆರವೇರಿಕೆಯಾಗಿದೆ. |
| 2:23-28<br>3:1-6 | ಸಬ್ಬತ್ತು: ಯೇಸು ಸಬ್ಬತ್ತಿಗೆ ಒಡೆಯನಾಗಿದ್ದಾನೆನ್ನುವುದು. ಸಬ್ಬತ್ತು: ಸಬ್ಬತ್ತಿನಲ್ಲೂ ಯೇಸು ಒಳ್ಳೆದನ್ನೇ (ಜೀವ ರಕ್ಷಿಸುವುದು) ಮಾಡುತ್ತಾನೆ. ಆದರೆ ಯೆಹೂದಿ ನಾಯಕರು ಆತನ ಮೇಲೆ (ಕೊಲ್ಲಲು) ಪಿತೂರಿ ಮಾಡುತ್ತಾರೆ |
| 3:22-30 | ಪವಿತ್ರಾತ್ಮನು: ಯೇಸುವಿನಲ್ಲಿ ಪವಿತ್ರಾತ್ಮನು ಕಾರ್ಯಮಾಡುವುದನ್ನು ನಾವು ಕಾಣುತ್ತೇವೆ. ಆದರೆ ಯೆಹೂದಿ ನಾಯಕರು ಆತನು ಸೈತಾನನ ಬಲದಿಂದ ಕಾರ್ಯಮಾಡುತ್ತಾನೆನ್ನುತ್ತಾರೆ. ಹೀಗೆ ಅವರು ಪವಿತ್ರಾತ್ಮನನ್ನು ದೂಷಿಸುವ ಪಾಪ ಮಾಡುತ್ತಾರೆ. |

ಈ ಆರು ಅಂಶಗಳನ್ನು ನೀವು "ಯೇಸು ಮತ್ತು ಯೆಹೂದಿ ನಾಯಕರುಗಳು" ಎಂಬ ಅಧ್ಯಯನಕ್ಕೆ ಒಂದು ರೂಪುರೇಖೆಯಾಗಿ ಉಪಯೋಗಿಸಬಹುದು.

2.-

**ಉತ್ತರಗಳು: ಮಾರ್ಕ ಅಧ್ಯಾಯ 4**

**ಪ್ರಶ್ನೆಗಳಿಗೆ ಉತ್ತರಗಳು**

1. ಈ ಸಂದರ್ಭದಲ್ಲಿ ಯೇಸು ಬಳಸಿದ "ತರಗತಿ" (ವ. 1-2): ತನ್ನ ಕೇಳುಗರು (ಜನರ ಬಹು ದೊಡ್ಡ ಸಮೂಹ) ಸಮುದ್ರದ ಬಳಿಯಲ್ಲಿನ ನೆಲದ ಮೇಲೆ ನಿಂತಿರುವಾಗ ಯೇಸು ಗಲಿಲಾಯ ಸಮುದ್ರದ ಮೇಲೆ ಮೀನು ಹಿಡಿಯುವ ಒಂದು ದೋಣಿಯಲ್ಲಿ ಕುಳಿತಿದ್ದನು.
2. ಬಂಡೆ ಮೇಲೆ ಬಿದ್ದ ಬೀಜಗಳು ಮಣ್ಣು ತೆಳ್ಳಗಿದ್ದರಿಂದ ಬಹುಬೇಗನೆ ಮೊಳೆತು ಬಿಸಿಲೇರಿದಾಗ ಬಾಡಿ ಒಣಗಿ ಹೋದವು (ವ. 5-6).
3. ಒಳ್ಳೆಯ ನೆಲದಲ್ಲಿ ಬಿದ್ದ ಬೀಜಗಳು ಉತ್ತಮವಾಗಿ ಬೆಳೆದು ಒಳ್ಳೆಯ ಫಲವನ್ನು ಕೊಟ್ಟವು (ವ. 8).
4. ಬಿತ್ತುವವನು ಬಿತ್ತುವ "ಬೀಜವು" ದೇವರ ವಾಕ್ಯವಾಗಿದೆ (ವ. 14). ಇದು ದೇವರ ರಾಜ್ಯದ ಕುರಿತ ಶುಭವಾರ್ತೆಯಾಗಿದೆ.
5. ದಾರಿಯ ಮಗ್ಗಲಲ್ಲಿ ಬಿದ್ದಿರುವ ಬೀಜದಂತಿರುವ ಜನರ ಬಗ್ಗೆ ಯೇಸುವಿನ ಹೇಳಿಕೆ (ವ. 15): ಅವರು ಸುವಾರ್ತೆಯನ್ನು ಕೇಳುತ್ತಾರೆ ಆದರೆ ಕೂಡಲೇ ಸೈತಾನನು ಬಂದು ಅವರನ್ನು ಗಲಿಬಿಲಿಗೊಳಿಸುತ್ತಾನೆ.
6. ಬೀಜ ಬಿದ್ದ ಬಂಡೆಯ ನೆಲದಂತಿರುವವರ ಬಗ್ಗೆ ಯೇಸುವಿನ ಹೇಳಿಕೆ (ವ. 16-17): ಅವರು ಸಂತೋಷದಿಂದ ಸುವಾರ್ತೆಯನ್ನು ಸ್ವೀಕರಿಸುತ್ತಾರೆ, ಆದರೆ ತಮಗೆ ಬೇರಿಲ್ಲದ ಕಾರಣ ಸಂಕಟ ಮತ್ತು ಹಿಂಸೆಗಳು ಬಂದಾಗ ದೃಢವಾಗಿ ನಿಲ್ಲದೆ ಎಡವಿಬೀಳುತ್ತಾರೆ.
7. ಮುಳ್ಳುಗಿಡಗಳ ನಡುವೆ ಬೀಜ ಬಿದ್ದಂತಿರುವವರ ಬಗ್ಗೆ ಯೇಸುವಿನ ಹೇಳಿಕೆ (ವ. 18-19): ಅವರು ಸುವಾರ್ತೆಯನ್ನು ಒಪ್ಪಿಕೊಳ್ಳುತ್ತಾರೆ, ಆದರೆ ಅವರು ಹಣ ಮತ್ತು ಪ್ರಪಂಚದ ಚಿಂತೆಗಳಲ್ಲಿ ಸಿಕ್ಕಿಹಾಕಿಕೊಂಡಿರುವುದರಿಂದ ಫಲವನ್ನು ಕೊಡಲಾರರು.
8. ಬೀಜ ಬಿದ್ದ ಒಳ್ಳೆಯ ನೆಲದಂತಿರುವವರ ಬಗ್ಗೆ ಯೇಸುವಿನ ಹೇಳಿಕೆ (ವ. 21): ಅವರು ಸುವಾರ್ತೆಯನ್ನು ಕೇಳಿ, ಕೈಗೊಂಡು ದೇವರ ರಾಜ್ಯಕ್ಕಾಗಿ ಸಾಕಷ್ಟು ಫಲವನ್ನು ಕೊಡುತ್ತಾರೆ.
9. ಫಲವು ಮಾಗಿದ ಕೂಡಲೇ ಸುಗ್ಗಿ ಬಂತೆಂದು ಅದನ್ನು ಕೊಯ್ಯಲಾಗುತ್ತದೆ (ವ. 29).
10. ಸಾಸಿವೆ ಕಾಳಿನ ಸಾಮ್ಯವು ದೇವರ ರಾಜ್ಯದ ಬೆಳವಣಿಗೆ ಮತ್ತು ವಿಸ್ತರಣೆಯ ಕುರಿತಾಗಿದೆ (ವ. 30-32).
11. ಶಿಷ್ಯರೊಂದಿಗೆ ಏಕಾಂತದಲ್ಲಿರುವಾಗ ಯೇಸು ಸಾಮ್ಯದ ಅರ್ಥವನ್ನು ಅವರಿಗೆ ವಿವರಿಸಿ ಹೇಳಿದನು (ವ. 34).
12. ಬಿರುಗಾಳಿ ಎದ್ದಾಗ ಯೇಸು ದೋಣಿಯ ಹಿಂಭಾಗದಲ್ಲಿ ನಿದ್ರೆ ಮಾಡುತ್ತಿದ್ದನು (ವ. 38).
13. ತಮ್ಮ ಅಪಾಯಕಾರಿ ಸನ್ನಿವೇಶದ ಬಗ್ಗೆ ಕಾಳಜಿ ತೋರುತ್ತಿಲ್ಲವೆಂಬುದಾಗಿ ಶಿಷ್ಯರು ಯೇಸುವನ್ನು ದೂರುತ್ತಾರೆ (ವ. 40).
14. ಅವರ ಅಧೈರ್ಯ ಮತ್ತು ಅಪನಂಬಿಕೆಗಾಗಿ ಯೇಸು ಶಿಷ್ಯರನ್ನು ಗದರಿಸುತ್ತಾನೆ (ವ. 40).
15. ಗಲಿಲಾಯ ಸಮುದ್ರದ ಮೇಲೆ ನಡೆದ ಅದ್ಭುತವನ್ನು ನೋಡಿ ಶಿಷ್ಯರು ಭಯಪಟ್ಟು ವಿಸ್ಮಯದಿಂದ ಪ್ರತಿಕ್ರಯಿಸುತ್ತಾರೆ (ವ. 41). ಇದು ಅವರಿಗೆ ಯೇಸುವಿನ ಗುರುತು (ದೇವಕುಮಾರನಾದ ಮೆಸ್ಸೀಯನು ಎಂದು) ಮತ್ತು ದೈವಿಕ ಶಕ್ತಿ(ಬರೀ ರೋಗ ಮತ್ತು ದೆವ್ವಗಳ ಮೇಲೆ ಮಾತ್ರವಲ್ಲ, ಪ್ರಕೃತಿಯ ಮೇಲೆ ಸಹ)ಯನ್ನು ಮರುಪರಿಶೀಲಿಸಲು ಸಹಾಯಕವಾಯಿತು.

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ವಚನ 9 ರಲ್ಲಿನ ಯೇಸುವಿನ ಹೇಳಿಕೆ: ಓದುಗರಿಗೆ ಇದನ್ನು ಅರ್ಥೈಸಿಕೊಳ್ಳಲು ಮತ್ತು ತಮ್ಮ ಜೀವಿತಕ್ಕೆ ಅಳವಡಿಸಿಕೊಳ್ಳಲು ಒಂದು ಸವಾಲಾಗಿದೆ. ಗಮನಿಸಿ ಬಿತ್ತುವವನ ಸಾಮ್ಯವು ಇದರ ಅರ್ಥವು ಅಷ್ಟು ಸ್ಪಷ್ಟವಾಗಿರದೇ ಇರಬಹುದೆಂದು ಸೂಚಿಸುತ್ತಾ ಗಮನ ಹರಿಸಬೇಕೆಂಬ ಕರೆಯೊಂದಿಗೆ ಪ್ರಾರಂಭವಾಗಿ (ವ. 3) ಮುಕ್ತಾಯವಾಗುತ್ತದೆ (ವ. 9). ಜಾಗೃತಿ ಮನಸ್ಸುಗಳು ಈ

ಸತ್ಯವನ್ನು ತಿಳಿದುಕೊಳ್ಳಬೇಕು. ಕಿವಿಯುಳ್ಳವನು ಕೇಳುವುದಕ್ಕೆ ಗರ್ವವನ್ನು ಬಿಟ್ಟು ದೇವರಿಗೆ ಒಪ್ಪಿಸಿಕೊಡಬೇಕು (ಹೋಲಿಸಿ ಯೆಶಾಯ 6:10).

2. ಯೇಸುವಿನ ಸಾಮ್ಯದ ಬಗ್ಗೆ ಶಿಷ್ಯರು ಆತನ ಬಳಿ ಕೇಳಲು ಅನೇಕ ಕಾರಣಗಳಿರಬಹುದು (ವ. 10):

ಅ. ಅವೆಲ್ಲವೂ ಅವರಿಗೆ ಅರ್ಥವಾಗದೇ ಇರಬಹುದು. ಹಾಗಾಗಿ ಅವರು ಸಾಮ್ಯಗಳನ್ನು ತಮಗೆ ವಿವರಿಸಿ ಹೇಳು ಎಂದು ಯೇಸುವಿನ ಬಳಿ ಕೇಳಿದರು. ನಮ್ಮಂಥ ಅನೇಕ ಆಧುನಿಕ ಓದುಗರು ಸಹ ಯೇಸುವಿನ ಸಾಮ್ಯಗಳನ್ನು ಅರ್ಥೈಸಿಕೊಳ್ಳುವಲ್ಲಿ ಸಮಸ್ಯೆಯನ್ನು ಎದುರಿಸುತ್ತೇವೆ. ಇದಕ್ಕೆ ಅಧ್ಯಯನ, ಸತ್ಯವೇದ ಮತ್ತು ಸತ್ಯವೇದ ವಿಶ್ಲೇಷಣೆಗಳು ತುಂಬಾ ಉಪಯುಕ್ತವಾಗಿವೆ.

ಆ. ತಮಗಿದು ಅರ್ಥವಾಗಿದೆ ಎಂದು ಅವರು ಯೋಚಿಸಿದರು, ಆದರೆ ತಮ್ಮ ಅರ್ಥವಿವರಣೆಯು ಸರಿಯಿದೆಯೆಂಬುದಾಗಿ ಅವರಿಗೆ ಸ್ಪಷ್ಟತೆಯಿರಲಿಲ್ಲ. ಹಾಗಾಗಿ ಅವರು ಸ್ಪಷ್ಟತೆಗಾಗಿ ಯೇಸುವಿನ ಬಳಿ ಕೇಳಿದರು. ನಮಗೂ ಸಹ ಇಂತಹ ಅನುಭವವಾಗುತ್ತದೆ. ಇಂತಹ ತಪ್ಪು ವ್ಯಾಖ್ಯಾನಗಳನ್ನು ದೂರವಿರಿಸಲು ನಮಗೆ ಪುನಃ ಅಧ್ಯಯನ, ಸತ್ಯವೇದ ಮತ್ತು ಸತ್ಯವೇದ ವಿಶ್ಲೇಷಣೆಗಳು ಸಹಾಯ ಮಾಡಬಲ್ಲವು.

ಇ. ಬಹುಶಃ ಅವರಿಗೆ ಅವು ಅರ್ಥವಾಗಿರಬಹುದು, ಆದರೆ ತಮ್ಮ ತಿಳುವಳಿಕೆಯಿಂದ ಅವರಿಗೆ ತೃಪ್ತಿಯಾಗಲಿಲ್ಲ. ಯೇಸು ಆ ಸಾಮ್ಯಗಳ "ಆಳವಾದ" ಮತ್ತು "ರಹಸ್ಯವಾದ" ಅರ್ಥಗಳನ್ನು ತಮಗೆ ವಿವರಿಸಬೇಕೆಂದು ಅವರು ಬಯಸಿದರು. ಯೇಸುವಿನ ಶಿಷ್ಯರಿಗೆ ಇದೊಂದು ದೊಡ್ಡ ವಿಷಯವಾಗಿತ್ತೆಂಬುದಾಗಿ ನನಗನಿಸುವುದಿಲ್ಲ. ಅವರು ಊಹಿಸುವಂತ ಜನರಾಗಿದ್ದರೆಂಬುದಾಗಿ ತೋರುವುದಿಲ್ಲ. ಆದರೆ ದಕ್ಷಿಣ ಭಾರತದಲ್ಲಿನ ನಮ್ಮಲ್ಲಿ ಅನೇಕರು ಊಹೆಯನ್ನು ಇಷ್ಟಪಡುತ್ತೇವೆ. ಸಭಾಪಾಲಕರುಗಳು ಸತ್ಯವೇದದ ವಾಕ್ಯಭಾಗಗಳಲ್ಲಿನ "ರಹಸ್ಯವಾದ" ಮತ್ತು "ಆಳವಾದ" ಅರ್ಥಗಳನ್ನೆಲ್ಲ ಕಂಡುಹಿಡಿಯಲು ಪ್ರಯತ್ನಿಸುತ್ತಾರೆ ಮತ್ತು ಈ ರೀತಿಯ ವ್ಯಾಖ್ಯಾನಗಳಿಂದ ಅನೇಕ ವಿಶ್ವಾಸಿಗಳು ಮರುಳಾಗಿದ್ದಾರೆ. ಅವು ಅಪಾಯಕಾರಿಯಾಗಿದ್ದು ಅವನ್ನು ದೂರವಿರಿಸಬೇಕಿದೆ. ನಾವು ಊಹೆ/ಕಲ್ಪನೆಗಳ ಸುಳಿವಿಗೆ ಸಿಲುಕಲೇಬಾರದು. ಯೇಸು ಒಂದು ಸಾಮ್ಯದ ಮೂಲಕ ತಿಳಿಸಬಯಸುವ ಅಂಶಗಳನ್ನೆಲ್ಲ ಮೀರಿ ನಾವು ಹೋಗಬಾರದು.

3. "ದೇವರ ರಾಜ್ಯದ ಗುಟ್ಟುಗಳು" ಶಿಷ್ಯರಿಗೆ ಕೊಡಲ್ಪಟ್ಟಿವೆಯೇ ಹೊರತು "ಹೊರಗಿನವರಿಗಲ್ಲ" ಎಂಬುದಾಗಿ ಯೇಸು ಹೇಳಿದ್ದಾನೆ (ವ. 11): ರಹಸ್ಯವೇನೆಂದರೆ ಪರಲೋಕ ರಾಜ್ಯವು ಯೇಸುವಿನಲ್ಲಿಯೇ ಹತ್ತಿರಕ್ಕೆ ಬಂದದ್ದು ಪ್ರಕಟಗೊಂಡಿರುವುದಾಗಿದೆ. ಶಿಷ್ಯರು ಈ ಸತ್ಯವನ್ನು ಒಪ್ಪಿದ್ದರು. ಅವರು ಯೇಸುವಿನಲ್ಲಿ ನಂಬಿಕೆಯನ್ನಿಟ್ಟಿದ್ದರು (ಬರೀ ಅದ್ಭುತಗಳಿಗಾಗಿ ಅಲ್ಲ). ಅವರು ಆತನನ್ನು ಹಿಂಬಾಲಿಸಿದರು ಮತ್ತು ಆತನೊಂದಿಗಿದ್ದರು (3:14). ಅವರು ಅಂತಃಪಾರ್ಶ್ವದಲ್ಲಿದ್ದರು, ಯಾಕೆಂದರೆ ಅವರು ಯೇಸುವಿನಲ್ಲಿ ನಂಬಿಕೆಯಿಟ್ಟು, ಶಿಷ್ಯತ್ವಕ್ಕೆ ತಮ್ಮನ್ನು ಒಪ್ಪಿಸಿಕೊಟ್ಟಿದ್ದರು. ಹಾಗಾಗಿ ದೇವರ ರಾಜ್ಯದ ಗುಟ್ಟುಗಳನ್ನೆಲ್ಲ ಅವರಿಗೇ ಕೊಡಲ್ಪಟ್ಟಿದ್ದವು. ಆದರೆ ನಂಬಲಾರದೆ ಮನಸ್ಸನ್ನು ಕಠಿಣ ಮಾಡಿಕೊಂಡವರಿಗೆ (ಯೆಹೂದಿ ನಾಯಕರಂತೆ) ಅಥವಾ ಯೇಸುವಿನ ಬಳಿಗೆ ಬರೀ ಅದ್ಭುತಗಳಿಗಾಗಿ ಬಂದವರಿಗೆ (ಜನರ ಗುಂಪಿನಂತೆ) ಯೇಸುವಿನ ವ್ಯಕ್ತಿತ್ವ ಮತ್ತು ಆತನ ಸೇವೆಯ ಮಹತ್ವವು ಮರೆಯಾಗಿದೆ. ಅವರು ಹೊರಗಿನವರಾಗಿದ್ದಾರೆ.

4. ವಚನ 13 ರಲ್ಲಿ ಯೇಸು ತನ್ನ ಶಿಷ್ಯರಿಗೆ ಕೇಳುವ ಪ್ರಶ್ನೆಯನ್ನು ನಾವು ಈ ರೀತಿಯಾಗಿ ಅರ್ಥೈಸಿಕೊಳ್ಳಬಹುದು: ಯೇಸುವಿನ ಪ್ರಶ್ನೆಯಲ್ಲಿ ಕೆಲ ಗದರಿಸುವಿಕೆಯಿತ್ತು. ಬಿತ್ತುವವನ ಸಾಮ್ಯವು ಸ್ಪಷ್ಟವಾಗಿದೆ ಮತ್ತು ಅರ್ಥಮಾಡಿಕೊಳ್ಳುವಂಥಾಗಿದೆ ಎಂಬುದಾಗಿ ಆತನು ಸೂಚಿಸುತ್ತಾನೆ. ಶಿಷ್ಯರು ಈ ಸ್ಪಷ್ಟವಾದ ಸಾಮ್ಯವನ್ನೇ ಅರ್ಥಮಾಡಿಕೊಳ್ಳದಿದ್ದರೆ ಇನ್ನೂ ಕ್ಲಿಷ್ಟಕರವಾದುದ್ದನ್ನು ಅವರು ಹೇಗೆ ಅರ್ಥ ಮಾಡಿಕೊಳ್ಳಲು ಸಾಧ್ಯ?

5. ವಚನ 21-25 ರಲ್ಲಿ ಯೇಸು ಮೂರು ಸಂಗತಿಗಳ ಬಗ್ಗೆ ಮಾತನಾಡುತ್ತಾನೆ, ಅವೇನೆಂದರೆ, ದೀಪ, ರಹಸ್ಯವಾಗಿರುವುದು ಮತ್ತು ಅಳತೆ. ಈ ಮೂರು ಸಂಗತಿಗಳು ಯೇಸುವಿನ ಮಾತಿನ ಹಿನ್ನಲೆಯಾಗಿರುವ ದೇವರ ರಾಜ್ಯಕ್ಕೆ ಸಂಬಂಧಿಸಿದವುಗಳಾಗಿವೆ:

ಅ. ಒಂದು ದೀಪ: ದೇವರ ರಾಜ್ಯವನ್ನು ಕುರಿತ ಸಾರೋಣವು ಒಂದು ಕತ್ತಲೆಯ ಕೋಣೆಯೊಳಗೆ ದೀಪವನ್ನು ತಂದು ಇಡುವಂಥದ್ದಾಗಿದೆ.

ಆ. ರಹಸ್ಯವಾಗಿರುವಂಥದ್ದು:

- ಒಂದು ವ್ಯಾಖ್ಯಾನ: ದೇವರ ರಾಜ್ಯದ ಬೆಳಕು ಮತ್ತು ಮೆಸ್ಸೀಯನಾದ ಯೇಸುವಿನ ಬರೋಣವು ಈವರೆಗೂ ರಹಸ್ಯವಾಗಿರುವುದನ್ನು ಪ್ರಕಟಪಡಿಸುತ್ತದೆ.
- ಇನ್ನೊಂದು ವ್ಯಾಖ್ಯಾನ: ಪ್ರಸ್ತುತ ಯೇಸುವಿನ ಕುರಿತು ರಹಸ್ಯವಾಗಿರುವದೆಲ್ಲ ಪ್ರಕಟವಾಗುತ್ತದೆ (ಶಿಲುಬೆ ಮೇಲಿನ ಆತನ ಮರಣವಾಗಿರಬಹುದು ಅಥವಾ ಎರಡನೇ ಬರೋಣದ ವೇಳೆ ಆಗಿರಬಹದು).

ಇ. ಒಂದು ಅಳತೆ: ಈ ಅಳತೆಯು ದೇವರ ರಾಜ್ಯ ಮತ್ತು ಆ ರಾಜ್ಯದ ಅರಸನಾಗಿರುವ ಯೇಸುವನ್ನು ಅಂಗೀಕರಿಸುವುದಾಗಿದೆ. ನಂಬಿಕೆಯಿಂದ ಹೆಚ್ಚಾಗಿ ಯೇಸುವಿನ ಮಾತನ್ನು ಕೇಳಿದಂತೆಲ್ಲ, ಇನ್ನೂ ಹೆಚ್ಚಾಗಿ ನೀವು ಆತನನ್ನು ಅರ್ಥೈಸಿಕೊಳ್ಳುವಿರಿ. ಹೆಚ್ಚಾಗಿ ದೇವರ ರಾಜ್ಯಕ್ಕೆ ನಿಮ್ಮನ್ನು ಒಪ್ಪಿಸಿಕೊಟ್ಟಂತೆಲ್ಲ, ಈ ದೇವರ ರಾಜ್ಯವು ಹೆಚ್ಚಾಗಿ ನಿಮ್ಮಲ್ಲಿ ಬೆಳೆಯುತ್ತದೆ ಮತ್ತು ನಿಮ್ಮ ಮೂಲಕ ಹಬ್ಬುತ್ತದೆ. ಈಗ ನೀವು ಎಷ್ಟು ಹೆಚ್ಚಾಗಿ ದೇವರ ಸತ್ಯಗಳನ್ನು ಒಪ್ಪುವಿರೋ, ಭವಿಷ್ಯದಲ್ಲಿ ನೀವು ಇನ್ನೂ ಹೆಚ್ಚಾಗಿ ಹೊಂದುವಿರಿ. ಇನ್ನೊಂದು ರೀತಿಯಲ್ಲಿ, ಈಗ ನಿಮಗಿರುವ ಸ್ವಲ್ಪ ಸತ್ಯಕ್ಕೆ ನೀವು ಸ್ಪಂದಿಸದೇ ಹೋದರೆ ಅದರಿಂದ ನಿಮಗೇನು ಪ್ರಯೋಜವಾಗಲಾರದು.

6. ಬೀಜ ಬೆಳೆಯುವ ಸಾಮ್ಯದಲ್ಲಿನ ಯೇಸುವಿನ ಸಂದೇಶ (ವ. 26-29): ಯೇಸುವು ಬೀಜ ಬೆಳೆಯುವದರ ರಹಸ್ಯಮಯ ಶಕ್ತಿಯನ್ನು ಒತ್ತಿ ಹೇಳುತ್ತಾನೆ (ದೇವರ ರಾಜ್ಯ ಮತ್ತು ಯೇಸುವಿನೊಂದಿಗೆ ಬಂದ ಶುಭವಾರ್ತೆ). ಈ ಶಕ್ತಿಯು ಪವಿತ್ರಾತ್ಮನು ದೇವರ ವಾಕ್ಯವನ್ನು ಸಾರುವುದರ ಮೂಲಕ ಮತ್ತು ಯೇಸುವನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸುವುದರಿಂದ ದೇವರ ರಾಜ್ಯವನ್ನು ಸೇರಿದವರೆಲ್ಲರ ಮೂಲಕ ಕಾರ್ಯಮಾಡುವುದಾಗಿದೆ. ಈ ಆತ್ಮೀಕವಾದ ಬೆಳವಣಿಗೆಯು ಯೇಸುವಿನ ಬರೋಣದವರೆಗೂ, ಕೊನೆಯ ತೀರ್ಪಿನ ದಿನದವರೆಗೂ ಮತ್ತು ನೂತನ ಭೂಮ್ಯಾಕಾಶಗಳ ಆಗಮನದವರೆಗೂ ಮುಂದುವರೆಯುತ್ತದೆ.

7. ಸಾಸಿವೆ ಕಾಳಿನ ಸಾಮ್ಯದಲ್ಲಿ ಯೇಸು ಹೇಳುವ ಮುಖ್ಯ ಅಂಶವೇನೆಂದರೆ (ವ. 30-32): ದೇವರ ರಾಜ್ಯಕ್ಕೆ ಸ್ಪಷ್ಟವಾಗಿ ಒಂದು ಅಲ್ಪವಾದ ಆರಂಭವಿದೆ. ಆದರೆ ಒಂದು ದಿನ ಬಂದಾಗ ಇದರ ನಿಜವಾದ ಮಹತ್ವ ಮತ್ತು ಶಕ್ತಿಯು ಲೋಕಕ್ಕೆ ಕಂಡುಬರುತ್ತದೆ.

8. ಯೇಸು ಬಿರುಗಾಳಿಯನ್ನು ಶಾಂತಗೊಳಿಸಿದ ಕುರಿತಾದ ಕಥೆಯಲ್ಲಿ ಶಿಷ್ಯರು ಮತ್ತು ಯೇಸುವಿನ ನಡುವಿನ ಒತ್ತಡವನ್ನು ಹೀಗೆ ಅರ್ಥೈಸಿಕೋಳ್ಳಬಹದು (ವ. 35-41):

ಅ. ಯೇಸು ತಮಗಾಗಿ ಏನಾದರೂ ಮಾಡಬೇಕೆಂಬುದಾಗಿ ಶಿಷ್ಯರು ಬಯಸಿದರು. ಅವರು ಮುಳುಗಿ ಹೋಗದಂತೆ ಕಾಳಜಿ ವಹಿಸುವುದು. ಹಾಗಾಗಿ ಅವರು "ಗುರುವೇ ನಾವು ಮುಳುಗಿ ಹೋಗುವುದರಲ್ಲಿ ನಿನಗೆ ಚಿಂತೆಯಿಲ್ಲವೇ?" ಎಂದು ಪ್ರಶ್ನಿಸುತ್ತಾರೆ.

ಆ. ಶಿಷ್ಯರು ತನ್ನ ಮೇಲೆ ಭರವಸೆಯಿಡಬೇಕೆಂದು ಯೇಸು ಬಯಸಿದನು. ಹಾಗಾಗಿ ಆತನು "ಯಾಕೆ ಧೈರ್ಯಗೆಡುತ್ತೀರಿ? ಇನ್ನೂ ನಿಮಗೆ ನಂಬಿಕೆಯಿಲ್ಲವೇ?" ಎಂಬ ಪ್ರಶ್ನೆಯ ಮೂಲಕ ಅವರನ್ನು ಗದರಿಸುತ್ತಾನೆ. ಹೀಗೆ ನಾವಿಲ್ಲಿ ಕ್ರೈಸ್ತೀಯ ಶಿಷ್ಯತ್ವದ ಸಾರವು ಪ್ರಕಟಿಸಲ್ಪಟ್ಟಿರುವುದನ್ನು ಕಾಣಬಹದು. ಯೇಸುವಿನೊಂದಿಗಿನ ನಿಮ್ಮ ಸಂಬಂಧವು ನಂಬಿಕೆ ಮತ್ತು ಭರವಸೆಯಿಂದ ಕೂಡಿರುವುದಾಗಿದೆಯಾ ಅಥವಾ ಬೇಡಿಕೆ ಮತ್ತು ಅಪೇಕ್ಷೆಗಳಿಂದ ಕೂಡಿರುವುದಾಗಿದೆಯಾ?

9. –



**ಉತ್ತರಗಳು: ಮಾರ್ಕ ಅಧ್ಯಾಯ 5**

**ಪ್ರಶ್ನೆಗಳಿಗೆ ಉತ್ತರಗಳು**

1. –
2. ದೆವ್ವ ಹಿಡಿದವನ ಕರುಣಾಜನಕ ಸ್ಥಿತಿಯನ್ನು ಮಾರ್ಕನು ಈ ರೀತಿಯಾಗಿ ವರ್ಣಿಸುತ್ತಾನೆ (ವ. 2-5):
   ಅ. ಆತನಲ್ಲೊಂದು ದೆವ್ವ(ಅಶುದ್ಧಾತ್ಮ)ವಿತ್ತು (ನಂತರ ಆತನು ತನ್ನನ್ನು "ದಂಡು" ಎಂದು ಕರೆದುಕೊಳ್ಳುತ್ತಾನೆ, ಯಾಕೆಂದರೆ ಆತನಲ್ಲಿ ಅನೇಕ ದೆವ್ವಗಳಿದ್ದವು, ವ. 8-9).
   ಆ. ಎಲ್ಲಾ ಸಮಯ ಆತನು ಗವಿಯಲ್ಲೇ ಕಳೆಯುತ್ತಿದ್ದನು. ಆತನ ಸ್ಥಿತಿ ಎಷ್ಟು ಕರುಣಾಜನಕವಾಗಿತ್ತೆಂಬುದನ್ನು ಇದು ತೋರಿಸುತ್ತದೆ. ಸಮಾಧಿಯ ಗವಿಗಳು ಭಯಹುಟ್ಟಿಸುವ ಮತ್ತು ಹೊಲಸಾದ ಸ್ಥಳಗಳಾಗಿವೆ. ಕಡುಬಡವರು ಮತ್ತು ಕೀಳಾಗಿ ಪರಿಗಣಿಸಲ್ಪಟ್ಟವರು ಮಾತ್ರ ಅವುಗಳ ನಡುವೆ ವಾಸಿಸುತ್ತಿದ್ದರೆನ್ನಲಾಗುತ್ತದೆ.
   ಇ. ಆತನು ತೀರಾ ಕ್ರೂರಿಯಾಗಿದ್ದು ಜನರು ಆತನನ್ನು ಸರಪಣಿಗಳಲ್ಲಿ ಕಟ್ಟಿಹಾಕಿಡಲು ಪ್ರಯತ್ನಿಸುತ್ತಿದ್ದರು. ಆತನು ಅವುಗಳನ್ನು ಮುರಿದುಹಾಕುತ್ತಿದ್ದನು.
   ಈ. ಆತನು ಅರ್ಭಟಿಸುತ್ತಾ ಕಲ್ಲುಗಳಿಂದ ತನ್ನನ್ನು ಕಡಿದುಕೊಳ್ಳುತ್ತಾ ಇದ್ದನು. ಹೀಗೆ ಆತನು ನಿಜವಾಗಲೂ ಹುಚ್ಚನಂತೆ ವರ್ತಿಸುತ್ತಿದ್ದನು.
3. ದೆವ್ವ ಹಿಡಿದವನು ಯೇಸುವನ್ನು ಕಂಡಾಕ್ಷಣ ಎರಡು ಸಂಗತಿಗಳನ್ನು ಮಾಡಿದನು (ವ. 6-7):
   ಅ. ಆತನು ಯೇಸುವಿನ ಬಳಿಗೆ ಓಡಿಬಂದು ಆತನಿಗೆ ಅಡ್ಡಬಿದ್ದನು.
   ಆ. ಯೇಸುವಿನ ಬಳಿ ತನ್ನನ್ನು ಬಿಟ್ಟುಹೋಗಬೇಕೆಂದು ಕೂಗಿಕೊಂಡನು. ದೆವ್ವಗಳು ಯೇಸುವು "ಪರಾತ್ಪರನಾದ ದೇವರ ಮಗ" ನೆಂಬುದನ್ನು ಮತ್ತು ಆತನಿಗೆ ಅವುಗಳ ಮೇಲೆ ಅಧಿಕಾರವುಂಟೆಂಬುದನ್ನು ತಿಳಿದಿದ್ದವು.
4. ದೆವ್ವಗಳು ಯೇಸುವಿನ ಬಳಿ ನಮ್ಮನ್ನು ಈ ಸೀಮೆಯಿಂದ ಹೊರಡಿಸಬೇಡ, ಆದರೆ ಹಂದಿಗಳ ಹಿಂಡುಗಳೊಳಗೆ ಸೇರಿಕೊಳ್ಳಲು ನಮ್ಮನ್ನು ಕಳುಹಿಸು ಎಂದು ಬೇಡಿಕೊಂಡವು (ವ. 10-12).
5. ಯೇಸು ದೆವ್ವಗಳಿಗೆ ಹಂದಿಗಳ ಹಿಂಡಿನೊಳಕ್ಕೆ ಸೇರಿಕೊಳ್ಳಲು ಅನುಮತಿಸಿದನು. ಆಗ ಎರಡು ಸಾವಿರ ಹಂದಿಗಳು ಕಡಿದಾದ ಸ್ಥಳದಿಂದ ಸಮುದ್ರದೊಳಗೆ ಬಿದ್ದು ಸತ್ತುಹೋದವು (ವ. 11-13).
6. ಯೇಸು ದೆವ್ವಗಳಿಂದ ಬಿಡಿಸಿದ ನಂತರದ ಆ ವ್ಯಕ್ತಿಯ ಪರಿಸ್ಥಿತಿಯನ್ನು ಮಾರ್ಕನು ಈ ರೀತಿಯಾಗಿ ವರ್ಣಿಸುತ್ತಾನೆ (ವ. 15):
   ಅ. ಆತನು ಒಬ್ಬ ಹುಚ್ಚನಂತೆ ಇರುವುದಿಲ್ಲ. ಒಳ್ಳೆಯ ಬಟ್ಟೆ ಹಾಕಿಕೊಂಡು ಸಮಾಧಾನದಿಂದ ವರ್ತಿಸುತ್ತಿದ್ದನು.
   ಆ. ಈಗ ಆತನು ಸಮಾಧಿಯ ಗವಿಯ ಬಳಿಯಲ್ಲಿ ಇರದೆ, ಜನರ ಮಧ್ಯದಲ್ಲಿ ಕೂತುಕೊಂಡಿದ್ದನು.
7. ದೆವ್ವ ಹಿಡಿದವನು ಬಿಡುಗಡೆ ಹೊಂದಿದ್ದಕ್ಕೆ ಗೆರಸೇನರ ಸೀಮೆಯ ಜನರು ಮೂರು ರೀತಿಯಲ್ಲಿ ಪ್ರತಿಕ್ರಿಯಿಸಿದರು (ವ. 14-20):
   ಅ. ಆ ಮನುಷ್ಯನಲ್ಲಾದ ಬದಲಾವಣೆಯನ್ನು ನೋಡಿ ಅವರು ಹೆದರಿದರು (ವ. 15).
   ಆ. ತಾವು ಎರಡು ಸಾವಿರ ಹಂದಿಗಳನ್ನು ಕಳಕೊಂಡೆವೆಂಬುದನ್ನು ತಿಳಿದಾಗ ಅವರು ಯೇಸುವಿಗೆ ತಮ್ಮ ಸೀಮೆಯನ್ನು ಬಿಟ್ಟುಹೋಗಬೇಕೆಂದು ಕೇಳಿಕೊಂಡರು (ವ. 17).
   ಇ. ಆ ಮನುಷ್ಯನ ಸಾಕ್ಷಿಯನ್ನು ಕೇಳಿ ಅವರು ಆಶ್ಚರ್ಯಪಟ್ಟರು (ವ. 20).
8. ಯೇಸು ದೆವ್ವದಿಂದ ಬಿಡುಗಡೆಯಾದವನಿಗೆ ತನ್ನೊಂದಿಗೆ ಗಲಿಲಾಯಕ್ಕೆ ಬರಲು ಬಿಡಲಿಲ್ಲ. ಬದಲಾಗಿ ದೇವರು ಯೇಸುವಿನ ಮೂಲಕ ತನಗೆ ಏನೆಲ್ಲಾ ಮಾಡಿದ್ದಾನೆಂಬುದನ್ನು ಸ್ವಜನರ ಬಳಿಗೆ ಹೋಗಿ ಸಾಕ್ಷಿಸಬೇಕೆಂದು ಹೇಳಿದನು (ವ. 18-20).

9. ಯಾಯೀರನು ಸಭಾಮಂದಿರದ ಅಧಿಕಾರಗಳಲ್ಲಿ ಒಬ್ಬನಾಗಿದ್ದನು. ಆತನ ಚಿಕ್ಕಮಗಳು ಅಸ್ವಸ್ಥಳಾಗಿದ್ದಳು. ಹಾಗಾಗಿ ಯೇಸು ಬಂದು ಅವಳನ್ನು ಗುಣಪಡಿಸಬಹುದೆಂಬ ನಿರೀಕ್ಷೆಯಿಂದ ಆತನು ಯೇಸುವಿನ ಬಳಿಗೆ ಬಂದನು (ವ. 22-23).

10. ಜನರ ಗುಂಪಿನ ಮಧ್ಯೆ ಬಂದು ಯೇಸುವನ್ನು ಮುಟ್ಟಿದ ಸ್ತ್ರೀಯ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 25-33):

ಅ. ಆಕೆ ಹನ್ನೆರಡು ವರ್ಷದಿಂದ ರೋಗದಿಂದ ಬಳಲುತ್ತಿದ್ದಳು.

ಆ. ಆಕೆಯ ರೋಗವು (ರಕ್ತ ಹರಿಯುವುದು) ಆಕೆಯನ್ನು ಅಶುದ್ಧಳನ್ನಾಗಿ ಮಾಡಿತ್ತು. ಹಾಗಾಗಿ ಆಕೆ ಸಾಮಾನ್ಯ ಸಾಮಾಜಿಕ ಜೀವಿತದಿಂದ ವಂಚಿತಳಾಗಿದ್ದಳು.

ಇ. ಗುಣಹೊಂದುವುದಕ್ಕಾಗಿ ಆಕೆ ಕೈಲಾದ ಪ್ರಯತ್ನವನ್ನೆಲ್ಲ ಮಾಡಿದ್ದಳು. ಅದಕ್ಕಾಗಿ ತನ್ನ ಹಣವನ್ನೆಲ್ಲ ವ್ಯಯಿಸಿದ್ದಳು. ಅಲ್ಲದೆ ವೈದ್ಯರಿಂದ ಕಷ್ಟಕರವಾದ ಚಿಕಿತ್ಸೆಯನ್ನೆಲ್ಲ ಅನುಭವಿಸಿದ್ದಳು. ಆದರೆ ಅದರಿಂದೇನು ಪ್ರಯೋಜನವಾಗಲಿಲ್ಲ. ಅವಳ ರೋಗವು ಇನ್ನೂ ಉಲ್ಬಣಿಸಿತು.

ಈ. ಯೇಸುವಿಗೆ ಗುಣಪಡಿಸುವ ಶಕ್ತಿಯಿದೆವೆಂಬುದನ್ನು ಅವಳು ತಿಳಿದವಳಾಗಿದ್ದು ತನ್ನನ್ನೂ ಆತನು ಗುಣಪಡಿಸಬಲ್ಲನೆಂಬುದನ್ನು ಆಕೆ ಅರಿತಿದ್ದಳು. ಹಾಗಾಗಿ ಆಕೆ ಜನರ ಮಧ್ಯದಲ್ಲಿಯೂ ಬಂದು ಆತನನ್ನು ಹಿಂಬಾಲಿಸಿದಳು.

ಉ. ಆದರೆ ತಾನು ಅಶುದ್ಧಳೆಂಬ ಸಾಮಾಜಿಕ ಕಳಂಕದ ನಿಮಿತ್ತ ಜನರಿಗೆ ತಿಳಿಯದಂತೆ ಯೇಸು ತನ್ನನ್ನು ರಹಸ್ಯವಾಗಿ ಗುಣಪಡಿಸಬಹುದೆಂಬುದಾಗಿ ನಿರೀಕ್ಷಿಸಿದ್ದಿರಬಹದು. ಹಾಗಾಗಿ ಆಕೆ ಆತನ ಬಳಿ ಮಾತನಾಡದೆ ಬರೀ ಆತನ ಉಡುಪನ್ನು ಮುಟ್ಟಿದಳು.

ಊ. ಆದರೆ ಏನಾಯಿತೆಂಬುದನ್ನು ಯೇಸು ತಿಳಿದಾಗ ಆಕೆ ಅಂಜಿದಳು. ಹಾಗಾಗಿ ಆಕೆ ಯೇಸುವಿನಲ್ಲಿನ ತನ್ನ ನಂಬಿಕೆ, ಹೇಗೆ ಆತನ ಉಡುಪನ್ನು ಮುಟ್ಟಿದ್ದು ಮತ್ತು ತಾನು ಹೇಗೆ ಸಂಪೂರ್ಣವಾಗಿ ಗುಣ ಹೊಂದಿದೆನೆಂಬುದನ್ನೆಲ್ಲ ಆಕೆ ಹೇಳಿಕೊಂಡಳು.

11. ತನ್ನ ಉಡುಪನ್ನು ಮುಟ್ಟಿದವರಾರೆಂದು ಯೇಸು ಜನರನ್ನು ಕೇಳಿದನು, ಯಾಕೆಂದರೆ ಏನೋ ವಿಶೇಷ ನಡೆದದ್ದನ್ನು ಆತನು ಗ್ರಹಿಸಿಕೊಂಡನು, ತನ್ನಿಂದ ಶಕ್ತಿಯು ಹೊರಟು ಹೋಗಿದ್ದರ ಭಾವನೆ ಆತನಿಗೆ ಬಂದಿತು (ವ. 30).

12. ಯೇಸುವಿನ ಪ್ರಶ್ನೆಯು ಮೂರ್ಖತನದ್ದೆಂಬುದಾಗಿ ಶಿಷ್ಯರು ಯೋಚಿಸಿದರು. ಯೇಸುವಿನ ಸುತ್ತ ಅನೇಕ ಜನರು ನೆರದಿದ್ದರು, ಖಂಡಿತವಾಗಿ ಹಲವಾರು ಜನರು ಆತನನ್ನು ಮುಟ್ಟಿದ್ದಿರಬೇಕು (ವ. 31).

13. ಯಾಯೀರನ ಕಡೆಯವರು ಆತನಿಗೆ ಗುರವಿಗೆ ಇನ್ನು ತೊಂದರೆ ಕೊಡಬೇಡ ಎಂದು ಹೇಳಿದರು, ಯಾಕೆಂದರೆ ಆತನ ಮಗಳು ಸತ್ತುಹೋಗಿದ್ದಳು. ಹಾಗಾಗಿ ಯೇಸು ಬಂದು ಆಕೆಯನ್ನು ಗುಣಪಡಿಸಲು ಸಮಯ ಮೀರಿಹೋಗಿತ್ತು (ವ. 35).

14. ಯೇಸುವಿನ ಶಿಷ್ಯರಲ್ಲಿ ಕೇವಲ ಮೂವರು ಮಾತ್ರ ಆತನೊಂದಿಗೆ ಯಾಯೀರನ ಮನೆಗೆ ಹೋಗುತ್ತಾರೆ, ಅವರೆಂದರೆ: ಪೇತ್ರ, ಯಾಕೋಬ ಮತ್ತು ಯೋಹಾನ. ಅವರು ಆತನಿಗೆ ತೀರಾ ಹತ್ತಿರದ ಸ್ನೇಹಿತರ ಪಟ್ಟಿಯಲ್ಲಿದ್ದರು. ಉಳಿದ ಶಿಷ್ಯರು ಅಲ್ಲಿಯೇ ಇರುವುದಕ್ಕೆ ಕಾರಣ ಯೇಸು ಅವರಿಗೆ ಬರಬೇಡಿರೆಂದು ಹೇಳಿದ್ದನು (ವ. 37-38).

15. ಜನರು ಯೇಸುವನ್ನು ನೋಡಿ ಹಾಸ್ಯಮಾಡಿದರು, ಯಾಕೆಂದರೆ, ಹುಡುಗಿಯು ಸತ್ತು ಹೋಗಿದ್ದು ನಿಖರವಾಗಿದ್ದರೂ, ಅವಳು ನಿದ್ರೆ ಮಾಡುತ್ತಿದ್ದಾಳೆಂದು ಆತನು ಹೇಳುವುದು ಮೂರ್ಖತನವೇ ಸರಿ ಎಂಬುದಾಗಿ ಅವರು ಯೋಚಿಸಿದ್ದರು (ವ. 39-40)

16. "ತಲಿಥಾ ಕೂಮ್" ಎಂಬ ಅರಾಮಿಕ್ ಹೇಳಿಕೆಯ ಅರ್ಥ "ಅಮ್ಮಣ್ಣೀ (ಚಿಕ್ಕ ಮಗಳೇ) ಎದ್ದೇಳು" ಎಂಬುದಾಗಿದೆ (ವ. 41).

17. ಹುಡುಗಿಗೆ ಹನ್ನೆರಡು ವರುಷವಾಗಿತ್ತು (ವ. 42).

18. ಅದ್ಭುತವನ್ನು ನೋಡಿ ಹುಡುಗಿಯ ತಂದೆತಾಯಿ ಆಶ್ಚರ್ಯಗೊಂಡು ಬೆರಗಾದರು (ವ. 42).

19. ಹುಡುಗಿಯ ಮನೆಯವರಿಗೆ ಯೇಸು ಎರಡು ಸಂಗತಿಗಳನ್ನು ಮಾಡಲು ಹೇಳಿದನು (ವ. 43):

ಅ. ಇದನ್ನು ಯಾರಿಗೂ ತಿಳಿಸಬಾರದೆಂದು ಹೇಳಿದನು. ಈ ರೀತಿಯ ಆಜ್ಞೆಯನ್ನು ಮಾರ್ಕನ ಸುವಾರ್ತೆಯಲ್ಲಿನ "ಮೆಸ್ಸೀಯ ರಹಸ್ಯ" ಗಳ ಬೆಳಕಿನಲ್ಲೇ ಅರ್ಥೈಸಿಕೊಳ್ಳಬೇಕಿದೆ. ಆ ಹುಡುಗಿಯನ್ನು ಮರಳಿ ಬದುಕಿಸುವ ಮೂಲಕ ಯೇಸು ತನ್ನ

ದೈವಿಕತ್ವವನ್ನು ಪ್ರಕಟಪಡಿಸಿದನು. ಆದರೆ ಜನರು ಆತನ ನಿಜವಾದ ಗುರುತನ್ನು ಅರಿಯದೆ ಬರೀ ಅದ್ಭುತವನ್ನು ಮಾತ್ರ ಕಾಣಬಹುದಾಗಿತ್ತು. ಯೇಸು ಶಿಲುಬೆಯ ಮೇಲೆ ತನ್ನ ಪ್ರಾಣವನ್ನು ನಮಗಾಗಿ ಕೊಡುವಾಗ ಮಾತ್ರ ಆತನು ರಕ್ಷಿಸುವ ದೇವರಾಗಿದ್ದಾನೆಂಬುದನ್ನು ನಾವು ನಿಜವಾಗಿ ತಿಳಿದುಕೊಳ್ಳಬಹದು.

ಆ. ಹುಡುಗಿಗೆ ಊಟಮಾಡಿಸಲು ಹೇಳಿದನು. ಆ ಚಿಕ್ಕಹುಡುಗಿಯ ಒಳತಿಗಾಗಿ ಯೇಸುವಿನ ಕಾಳಜಿಯನ್ನು ಇದು ತೋರಿಸುತ್ತದೆ. ಆಕೆಯನ್ನು ತಿರುಗಿ ಬದುಕಿಸುವ ಮೂಲಕ ಆತನು ಬರೀ ಒಂದು ಅದ್ಭುತವನ್ನಷ್ಟೇ ಮಾಡಲಿಲ್ಲ. ಅಲ್ಲದೆ ಅವಳ ದೈನಂದಿನ ಅಗತ್ಯತೆಗಳ ಬಗ್ಗೆ ಸಹ ಆತನು ಅರಿವನ್ನು ಹೊಂದಿದ್ದನು.



**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳು**

1. –
2. ಗೆರಸೇನರ ಪ್ರಾಂತ್ಯದ ಜನರು ಯೇಸುವಿಗೆ ತಮ್ಮ ಸೀಮೆಯನ್ನು ಬಿಟ್ಟುಹೋಗಬೇಕೆಂದು ಕೇಳಿಕೊಂಡರು (ವ. 17). ಇದಕ್ಕೆ ಒಂದಕ್ಕಿಂತ ಹೆಚ್ಚು ಕಾರಣಗಳಿರಬಹುದು:

   ಅ. ಆ ಮನುಷ್ಯನನ್ನು ಯೇಸು ದೆವ್ವಗಳಿಂದ ಬಿಡಿಸಿದ್ದನ್ನು ನೋಡಿ ಅವರು ಹೆದರಿದರು (ವ. 15). ಹಾಗಾಗಿ ಯೇಸುವು ತಮ್ಮ ಸೀಮೆಯಲ್ಲಿರುವುದು ಅಪಾಯಕಾರಿಯೆಂಬುದಾಗಿ ಅವರು ಯೋಚಿಸಿದ್ದಿರಬಹುದು.

   ಆ. ಅವರು ಎರಡು ಸಾವಿರ ಹಂದಿಗಳನ್ನು ಕಳಕೊಂಡಿದ್ದರು, ಹಾಗಾಗಿ ಅದು ಅವರಿಗೊಂದು ದೊಡ್ಡ ಆರ್ಥಿಕ ನಷ್ಟವಾಗಿ ಪರಿಣಮಿಸಿರಬಹದು. ಇದರಿಂದ ಅವರು ಸಿಟ್ಟುಗೊಂಡಿರಬಹುದು. ಹಾಗಾಗಿ ಯೇಸುವನ್ನು ಅಲ್ಲಿಂದ ಹೊರಡಿಸಲು ಇದೇ ಕಾರಣವಿರಬಹುದೆಂಬುದಾಗಿ ನಾನು ಊಹಿಸುತ್ತೇನೆ. ಅವರು ಆತನಿಗೆ ಅಲ್ಲೇ ಇದ್ದು ಇನ್ನೂ ಅನೇಕ ಅದ್ಭುತಗಳನ್ನು ಮಾಡಲು ಹೇಳಲಿಲ್ಲ. ಅಲ್ಲಿ ಅನೇಕ ರೋಗಪೀಡಿತರೂ, ದೆವ್ವ ಹಿಡಿದ ಜನರೂ ಅವರ ಮಧ್ಯೆ ಇದ್ದಿದ್ದಿರಬಹುದು. ಹಾಗಾದರೆ ಅವರು ಯೇಸುವನ್ನು ಅಲ್ಲೇ ಇರಲು ಹೇಳಿದರೆಂಬುದಾಗಿ ನೀವು ಬಯಸುತ್ತೀರಾ? ಆದರೆ ಅವರ ಪ್ರಾಮುಖ್ಯತೆ ತಪ್ಪಾಗಿತ್ತು. ಅವರಿಗೆ ಜನರ ಅಗತ್ಯತೆಗಿಂತಲೂ ಹಣ ಮತ್ತು ಆಸ್ತಿಯ ಬಗ್ಗೆ ಹೆಚ್ಚು ಕಾಳಜಿಯುಳ್ಳವರಾಗಿದ್ದರು.
3. ಯೇಸು ದೆವ್ವ ಹಿಡಿದ ಮನುಷ್ಯನನ್ನು ಬಿಡಿಸುವ ಕುರಿತಾದ ಮೂರು ಸಮನಾಂತರವಾದ ವಾಕ್ಯಭಾಗ/ವಿಷಯಗಳ ಒಂದು ಹೋಲಿಕೆಯು ಕೆಲವೊಂದು ವ್ಯತ್ಯಾಸಗಳನ್ನು ತಿಳಿಯಪಡಿಸುತ್ತದೆ, ಉದಾಹರಣೆಗೆ,

| ಕ್ರ.ಸಂ. | ಮತ್ತಾಯ 8:28-34 | ಮಾರ್ಕ 5:1-20 | ಲೂಕ 8:26-37 |
|---|---|---|---|
| 1 | ಗದರೇನರ ಸೀಮೆ | ಗೆರೆಸೆನರ ಸೀಮೆ | ಗೆರೆಸೆನರ ಸೀಮೆ |
| 2 | ದೆವ್ವಹಿಡಿದ ಇಬ್ಬರು | ದೆವ್ವಹಿಡಿದ ಒಬ್ಬ ಮನುಷ್ಯ | ದೆವ್ವಹಿಡಿದ ಒಬ್ಬ ಮನುಷ್ಯ |
| 3 | ಕಾಲಕ್ಕಿಂತ ಮುಂಚೆ ನಮ್ಮನ್ನು ಕಾಡಬೇಡ | ನನ್ನನ್ನು ಕಾಡಬೇಡ | ನನ್ನನ್ನು ಕಾಡಬೇಡ |
| 4 | - | ಈ ಸೀಮೆಯಿಂದ ಹೊರಡಿಸಬೇಡ | ಪಾತಾಳದೊಳಕ್ಕೆ ಹೋಗಿಬಿಡುವಂತೆ ನಮಗೆ ಆಜ್ಞೆಮಾಡಬೇಡ |

ಈ ವ್ಯತ್ಯಾಸಗಳನ್ನು ಈ ರೀತಿಯಾಗಿ ವಿವರಿಸಬಹುದು:

1) ಸೀಮೆಯ ವಿಭಿನ್ನವಾದ ಹೆಸರುಗಳು: ಗದರ ಮತ್ತು ಗೆರಸ ಎಂಬ ಎರಡು ಪಟ್ಟಣಗಳು ಗಲಿಲಾಯ ಸಮದ್ರುದ ವಾಯುವ್ಯಕ್ಕಿರುವ ದೆಕಪೊಲಿಯಯಲ್ಲಿವೆ. ಗದರವು ರಾಜಧಾನಿಯಾಗಿತ್ತು, ಗೆರಸವು ಸರೋವರಕ್ಕಿಂತ ಸ್ವಲ್ಪ ದೂರವಿರುವ ಒಂದು ಸಣ್ಣ ಪಟ್ಟಣವಾಗಿತ್ತು. ಆದರೆ ಇದು ಸಮುದ್ರದ ಬಳಿಯ ಭೂಭಾಗ ಮತ್ತು ಒಂದು ಸಣ್ಣ ಹಳ್ಳಿಯನ್ನು ಸಹ ಒಳಗೊಂಡಿತ್ತು (ಇದನ್ನು ಗೆರಸ ಎನ್ನಲಾಗುತ್ತದೆ). ಹಾಗಾಗಿ ಸುವಾರ್ತೆಯನ್ನು ಬರೆಯುವವರು ಇದೇ ಭೂಭಾಗವನ್ನು ಸೂಚಿಸುತ್ತಿದ್ದಾರೆ ಹಾಗಾಗಿ ಸ್ಥಳದ ಹೆಸರಿನಲ್ಲಿರುವ ವ್ಯತ್ಯಾಸವು ಒಬ್ಬ ಸತ್ಯವೇದ ಓದುಗನಿಗೆ ಸಮಸ್ಯೆಯಾಗಲಾರದು.
2) ವ್ಯಕ್ತಿಗಳ ಸಂಖ್ಯೆಯ ವ್ಯತ್ಯಾಸ: ಮಾರ್ಕ ಮತ್ತು ಲೂಕರು ಒಬ್ಬನಿದ್ದನು ಎಂದರೆ ಮತ್ತಾಯನು ಇಬ್ಬರು ಎಂದು ಹೇಳುತ್ತಾನೆ. ಹೀಗಾಗಿ ಮಾರ್ಕ ಮತ್ತು ಲೂಕರು (ಇವರು ಆ ಸಮಯದಲ್ಲಿ ಇದ್ದಿರಲಿಲ್ಲ) ಒಬ್ಬ ಮನುಷ್ಯನು ಎಂದು ಹೇಳಿದರೂ ಅಲ್ಲಿ ಇಬ್ಬರು ವ್ಯಕ್ತಿಗಳಿದ್ದಿರಬಹುದೆಂಬುದಾಗಿ (ಪ್ರತ್ಯಕ್ಷ ಸಾಕ್ಷಿಯಾದ ಮತ್ತಾಯನಂತೆ) ಒಬ್ಬ ವಿವೇಚನೆಯುಳ್ಳ ಸತ್ಯವೇದ ಓದುಗನು ತೀರ್ಮಾನಿಸಬಹುದು. ಬಹುಶಃ ಅವರ ಬಳಿಯಲ್ಲಿ ಒಬ್ಬನ ಬಗ್ಗೆ ಮಾತ್ರ ಮಾಹಿತಿಯಿದೆ, ಹಾಗಾಗಿ ಅವರಿಗೆ ಇನ್ನೊಬ್ಬನ ಬಗ್ಗೆ ತಿಳಿದಿರಲಿಲ್ಲ.
3) ಕಾಡಿಸುವ ಸಮಯ: ಮತ್ತಾಯನ ಬಳಿ ಪೂರ್ಣವಿವರವಿದೆ. "ಕಾಲ ಬರುವುದಕ್ಕಿಂತ ಮುಂಚೆ" ಎಂಬ ಮಾತು ದೇವರು ಎಲ್ಲಾ ಸೈತಾನನ ಬಲಗಳನ್ನು ನ್ಯಾಯತೀರ್ಪಿಗೊಳಪಡಿಸಿ, ನಾಶಮಾಡುವ ಸಮಯವನ್ನು ಸೂಚಿಸುತ್ತದೆ. ಮಾರ್ಕ ಮತ್ತು ಲೂಕರು ಈ ಮಾಹಿತಿಯನ್ನು ಸೇರಿಸದಿರಲು ನಿರ್ಧರಿಸುತ್ತಾರೆ (ಅದರ ಮೂಲ ದಾಖಲೆಯಲ್ಲಿ ಇದು ಇಲ್ಲದಿರಬಹುದು).
4) ಕಳುಹಿಸಿಕೊಡಬೇಕಾದ ಸ್ಥಳದ ಕೋರಿಕೆ: ಮಾರ್ಕ ಮತ್ತು ಲೂಕರು ಇದರ ವಿಭಿನ್ನವಾದ ಆವೃತ್ತಿಯನ್ನು ಹೊಂದಿರುವಲ್ಲಿ, ಮತ್ತಾಯನು ಮಾತ್ರ ಈ ರೀತಿಯ ದೆವ್ವಗಳ ಕೋರಿಕೆಯನ್ನು ಸೇರಿಸದಿರಲು ನಿರ್ಧರಿಸುತ್ತಾನೆ. ಹಾಗಾಗಿ ಒಬ್ಬ ವಿವೇಚನಾತ್ಮಕ ಸತ್ಯವೇದ ಓದುಗನು "ನಮ್ಮನ್ನು ಸೀಮೆಯೊಳಗಿಂದ ಪಾತಾಳದೊಳಕ್ಕೆ ಕಳುಹಿಸಬೇಡ" ಎಂದು ದೆವ್ವಗಳು ಹೇಳಿರಬಹುದೆಂಬುದಾಗಿ ನಿರ್ಣಯಿಸಿಕೊಳ್ಳುತ್ತಾನೆ.

**ಮುಕ್ತಾಯಗಳು:**

- ಈ ವ್ಯತ್ಯಾಸಗಳ ಹೊರತಾಗಿಯೂ ಮತ್ತಾಯ, ಮಾರ್ಕ ಮತ್ತು ಲೂಕರು ಒಂದೇ ರೀತಿಯ ಘಟನೆಯ ಬಗ್ಗೆ ಬರೆದಿದ್ದರಬೇಕು. ಯಾಕೆಂದರೆ ಈ ಕಥೆಯು ಎಲ್ಲಾ ಮೂರು ಸುವಾರ್ತೆಗಳಲ್ಲಿ ಯೇಸು ಬಿರುಗಾಳಿಯನ್ನು ನಿಲ್ಲಿಸಿದ ಘಟನೆಯ ವಿವರದ ನಂತರವೇ ಬರುತ್ತದೆ.

- ಸುವಾರ್ತೆಗಳ ನಡುವಿನ ವ್ಯತ್ಯಾಸವನ್ನು ವಿವರಿಸಬಹುದು, ಮತ್ತು ಒಬ್ಬ ಸತ್ಯವೇದ ಓದುಗನು ಇವುಗಳ ಕುರಿತು ಚಿಂತಿಸಬೇಕಿಲ್ಲ.
- ಸುವಾರ್ತಾ ಬರಹಗಾರರು (ಗ್ರಂಥಕರ್ತರು) ವಿಭಿನ್ನವಾದ ಮೂಲಗಳನ್ನು ಹೊಂದಿದ್ದರು (ಈ ವಿಷಯದಲ್ಲಿ ಮತ್ತಾಯನು ಪ್ರತ್ಯಕ್ಷ ಸಾಕ್ಷಿಯಾಗಿದ್ದರೆ, ಮಾರ್ಕ ಮತ್ತು ಲೂಕರು ಬೇರೆ ಜನರಿಂದ ಬರವಣಿಗೆಯ ಅಥವಾ ಮೌಖಿಕ ಮಾಹಿತಿಗಳನ್ನು ಪಡೆದಿದ್ದರು).
- ದೇವರು (ಪವಿತ್ರಾತ್ಮನ ಮೂಲಕ) ಸುವಾರ್ತಾ ಬರಹಗಾರರಿಗೆ ತಮ್ಮ ಪುಸ್ತಕಗಳನ್ನು ಬರೆಯಲು ಸ್ವಾತಂತ್ರ್ಯವನ್ನು ಕೊಟ್ಟಿದ್ದನು. ಅವರು ಮನಸ್ಸಿನಲ್ಲಿಯೇ ತಮ್ಮ ಓದುಗರೊಂದಿಗೆ ತಮ್ಮ ಮಾಹಿತಿಗಳನ್ನು ಆರಿಸಿಕೊಂಡು ಜೋಡಿಸಬಹುದಾಗಿತ್ತು. ಈ ಒಂದು ಕಾರಣದಿಂದ ಒಂದರ ಬದಲು ಸತ್ಯವೇದವು ನಾಲ್ಕು ಸುವಾರ್ತೆಗಳನ್ನು ಒಳಗೊಂಡಿದೆ.

4. ಯೇಸು ಆ ಸ್ತ್ರೀಗೆ "ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು" (ವ. 34) ಮತ್ತು ಯಾಯೀರನಿಗೆ "ಅಂಜಬೇಡ ನಂಬಿಕೆ ಮಾತ್ರ ಇರಲಿ" (ವ. 36) ಎಂದು ಹೇಳುತ್ತಾನೆ. ಇಲ್ಲಿ ಉಪಯೋಗಿಸಲಾದ ಗ್ರೀಕ್ ಪದಗಳೆಂದರೆ ನಾಮಪದವಾದ "ಪೆಸ್ಟಿಸ್" (ನಂಬಿಕೆ, ಭರವಸೆ, ವಿಶ್ವಾಸ) ಮತ್ತು ಕ್ರಿಯಪದವಾದ "ಪೆಸ್ಟಿಯೋ" (ನಂಬುವುದು, ನಂಬಿಕೆಯಿಡುವುದು, ಭರವಸವಿಡುವುದು, ವಿಶ್ವಾಸವಿಡುವುದು). ಬಿರುಗಾಳಿಯಿಂದ ತಾವು ಮುಳುಗುವುದರಲ್ಲಿ ನಿನಗೆ ಚಿಂತೆಯಿಲ್ಲವೋ ಎಂದು ಶಿಷ್ಯರು ಯೇಸುವನ್ನು ದೂರಿದಾಗ ಆತನು ಅವರಿಗೆ "ಯಾಕೆ ಧೈರ್ಯಗೆಟ್ಟೀರಿ?" "ಇನ್ನೂ ನಿಮಗೆ ನಂಬಿಕೆಯಿಲ್ಲವೇ?" ಎಂದು ಬೈಯುತ್ತಾನೆ. ಅಪಾಯಕಾರಿ ಸನ್ನಿವೇಶದಲ್ಲಿ ತನ್ನ ಮೇಲೆ ಭರವಸ ಇಡದೆ ಇರುವುದಕ್ಕಾಗಿ ಆತನು ಅವರನ್ನು ದೂರುತ್ತಾನೆ. ತನ್ನನ್ನು ಮತ್ತು ಅವರಿಗಾಗಿ ಇಟ್ಟುಕೊಂಡಿರುವುಗಳನ್ನು ತಿಳಿಯದೆ ಇರುವುದಕ್ಕಾಗಿ ಆತನು ಅವರನ್ನು ಬೈಯುತ್ತಾನೆ.

   ರಕ್ತಕುಸುಮ ರೋಗಿಯಾದ ಹೆಂಗಸು ಯೇಸುವಿನ ಮೇಲೆ ಭರವಸೆ ಇಟ್ಟಳು (ಆಕೆಗೆ ಆತನಲ್ಲಿ ನಂಬಿಕೆಯಿತ್ತು, ತನ್ನ ಸಮಸ್ಯೆಯನ್ನು ಆತನು ಬಗೆಹರಿಸುತ್ತಾನೆಂಬ ವಿಶ್ವಾಸ ಆಕೆಯಲ್ಲಿತ್ತು) ಮತ್ತು ಗುಣಹೊಂದಿದಳು. ತನ್ನ ನಂಬಿಕೆಯ ಹಿರಿಮೆಯ ನಿಮಿತ್ತ ಆಕೆ ಗುಣಹೊಂದಲಿಲ್ಲ, ಆದರೆ ಯೇಸುವಿನ ಹಿರಿಮೆಯಿಂದ ಗುಣಹೊಂದಿದಳು. ನಂಬಿಕೆಯಿಂದ ಆಕೆ ಕೈ ಚಾಚಿದಾಗ ಯೇಸುವಿನಿಂದ ಶಕ್ತಿಯು ಹೊರಟು ಆಕೆಯ ಜೀವನವನ್ನೇ ಸಂಪೂರ್ಣವಾಗಿ ಬದಲಾಯಿಸಿತು.

   ಯಾಯೀರನ ಮನೆಯಲ್ಲಿನ ಪರಿಸ್ಥಿತಿಯು ಹತಾಶೆಯಿಂದ ಕೂಡಿತ್ತು. ಹುಡುಗಿಯು ಸತ್ತುಹೋಗಿದ್ದಳು ಮತ್ತು ಆಕೆಯ ತಂದೆತಾಯಿಗಳು ಮತ್ತು ಇತರೆ ಗೋಳಾಡುವವರಾರೂ ಸಹ ಯೇಸುವಿನಿಂದ ಒಂದು ಅದ್ಭುತವಾದ ಸ್ವಸ್ಥತೆಯನ್ನು ನಿರೀಕ್ಷಿಸಲಾಗಲಿಲ್ಲ. ಅಂತಹ ಹತಾಶೆಯ ಸನ್ನಿವೇಶದಲ್ಲಿ ಯೇಸು ಅವರಿಗೆ "ಅಂಜಬೇಡ, ನಂಬಿಕೆ ಮಾತ್ರ ಇರಲಿ" ಎಂದು ಹೇಳಿದನು. ಸತ್ತವರಿಗೂ, ಬದುಕಿರುವವರಿಗೆ ಕರ್ತನಾಗಿರುವ ಯೇಸು ಅವರ ಮೇಲೆ ಕರುಣೆಯಿಟ್ಟು ಅವರ ಹತಾಶೆಯಲ್ಲಿ ನಿರೀಕ್ಷೆಯನ್ನು ತಂದನು. ಅದ್ಭುತ ನಡೆಯಿತು, ಸತ್ತುಹೋಗಿದ್ದ ಹುಡುಗಿಯು ಬದುಕಿದಳು, ಅದು ಅವಳ ಪೋಷಕರ ನಂಬಿಕೆಯ ಹಿರಿಮೆಯಿಂದಲ್ಲ ಆದರೆ ಯೇಸುವಿನ ಹಿರಿಮೆಯಿಂದ ಬದುಕಿದಳು.

5. ವಚನ 21-43 ರಲ್ಲಿ ಹೆಣೆದುಕೊಂಡಿರುವ ಕಥೆಗಳಲ್ಲಿರುವ ಸಾಮಾನ್ಯ ಅಂಶಗಳು ಅನೇಕ ಇವೆ, ಉದಾಹರಣಗೆ:

   ಅ. ಈ ಎರಡೂ ಅದ್ಭುತಗಳನ್ನು ಯೇಸು ಕಪೆರ್ನೌಮಿನಲ್ಲಿ ಮಾಡಿದನು.

   ಆ. ಎರಡೂ ಕಥೆಗಳು ಸಹ ಯೆಹೂದ್ಯರ ಕುರಿತಾಗಿದೆ: ರಕ್ತಕುಸುಮ ರೋಗವಿದ್ದ ಸ್ತ್ರೀಯು ಯೆಹೂದ್ಯಳಾಗಿದ್ದಿರಬಹುದು, ಮತ್ತು ಸಭಾಮಂದಿರದ ಅಧಿಕಾರಿಯು ಒಬ್ಬ ಯೆಹೂದಿ ನಾಯಕನಾಗಿದ್ದನು, ಅಲ್ಲದೆ ಬಹುಶಃ ಆತನೊಬ್ಬ ಫರಿಸಾಯನಾಗಿದ್ದಿರಬಹುದು.

   ಇ. ಎರಡೂ ಕಥೆಗಳು ಸಹ ಸಂಪೂರ್ಣವಾಗಿ ಹತಾಶೆಯ ಸನ್ನಿವೇಶದಲ್ಲಿನ ಜನರ ಕುರಿತಾಗಿದೆ: ಆ ಸ್ತ್ರೀಯು ಗುಣಹೊಂದಲು ತನ್ನಿಂದ ಎಷ್ಟು ಸಾಧ್ಯವೋ ಅಷ್ಟೆಲ್ಲಾ ಪ್ರಯತ್ನವನ್ನು ಮಾಡಿದ್ದಳು, ಆದರೆ ಗುಣವಾಗಲಿಲ್ಲ. ಮತ್ತು ಯಾಯೀರ ಹಾಗೂ ಆತನ ಹೆಂಡತಿ ಸತ್ತುಹೋಗಿದ್ದ ತಮ್ಮ ಮಗಳ ಮುಂದೆ ನಿಂತಿದ್ದಿರು.

ಈ. ಎರಡೂ ಕಥೆಗಳಲ್ಲಿ ಸಹ ಯೇಸು ನಂಬಿಕೆಯಿಡಬೇಕೆಂಬುದರ ಬಗ್ಗೆ ಮಾತನಾಡುತ್ತಾನೆ: ಯೇಸು ಆ ಸ್ತ್ರೀಗೆ ಅವಳ ನಂಬಿಕೆಯೇ ಅವಳನ್ನು ಸ್ವಸ್ಥಪಡಿಸಿದೆ ಎಂದು ಹೇಳುತ್ತಾನೆ. ಹಾಗೆಯೇ ಆತನು ಆ ಹುಡುಗಿಯ ತಂದೆತಾಯಿಗಳಿಗೆ ಅಂಜಬೇಡಿರಿ ನಂಬಿಕೆ ಮಾತ್ರ ಇರಲಿ ಎಂದು ಹೇಳಿದನು.

ಉ. ಎರಡೂ ಕಥೆಗಳು ಸಹ ಯೇಸು ಯೆಹೂದಿ ಶುದ್ಧಾಚಾರದ ಶಾಸ್ತ್ರವನ್ನು ಲಕ್ಷಿಸದೆ ಇರುವುದನ್ನು ತಿಳಿಸುತ್ತವೆ: ಸ್ತ್ರೀಯ ರಕ್ತಹೋಗುವ ಸಮಸ್ಯೆಯು ಆಕೆಯನ್ನು ಮೈಲಿಗೆಯಾಗಿಸಿತ್ತು ಮತ್ತು ಆಕೆ ಯೇಸುವನ್ನು ಮುಟ್ಟಿದ್ದರಿಂದ ಅವನೂ ಸಹ ಮೈಲಿಗೆಯಾಗಿದ್ದನು. ಆದರೆ ಶಾಸ್ತ್ರಕ್ಕೆ ವಿರುದ್ಧವಾದುದ್ದನ್ನು ಮಾಡಿದ್ದ ಆಕೆಯನ್ನು ಬೈಯುವುದರ ಬದಲು ಯೇಸು, ಆಕೆಯ ನಂಬಿಕೆಯ ನಿಮಿತ್ತ ಆಕೆಯನ್ನು ಹೊಗಳುತ್ತಾನೆ. ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಸತ್ತವರು ಅಶುದ್ಧರಾಗಿರುತ್ತಾರೆ, ಹಾಗಾಗಿ ಯೇಸು ಆ ಹುಡುಗಿಯ ಕೈಯನ್ನು ಹಿಡಿದಾಗ ಆತನೂ ಸಹ ಅಶುದ್ಧನಾದನು. ಆದರೆ ಆ ಹುಡುಗಿ ಮತ್ತು ಆಕೆಯ ತಂದೆತಾಯಿಗಳಿಗೆ ತನ್ನ ಪ್ರೀತಿ ಮತ್ತು ಕಾಳಜಿಯನ್ನು ತೋರಿಸುವುದಕ್ಕಾಗಿ ಆತನು ಧರ್ಮಶಾಸ್ತ್ರವನ್ನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.

ಆದರೆ ಈ 2 ಕಥೆಗಳ ನಡುವೆ ಕೆಲವು ಭಿನ್ನತೆಗಳಿವೆ, ಉದಾ:

- ಆ ರಕ್ತಕುಸುಮ ರೋಗವಿದ್ದ ಸ್ತ್ರೀಯು ಮೈಲಿಗೆಯಾದುದ್ದರಿಂದ ಸಾಮಾಜಿಕ ಜೀವನದಿಂದ ಆಕೆಯು ಬಹಿಷ್ಕರಿಸಲ್ಪಟ್ಟಿದ್ದಳು. ಆದರೆ ಸಭಾಮಂದಿರದ ಅಧಿಕಾರಿಯು ಯೆಹೂದಿ ಸಮಾಜದಲ್ಲಿ ಬಹು ಗೌರವಾನ್ವಿತ ವ್ಯಕ್ತಿಯಾಗಿದ್ದನು.
- ಆ ಸ್ತ್ರೀಯ ಸ್ವಸ್ಥತೆಯು ಜನರ ಗುಂಪಿನ ನಡುವೆ ಸಂಭವಿಸುತ್ತದೆ, ಆದರೆ ಸತ್ತುಹೋಗಿದ್ದ ಹುಡುಗಿಯು ಮರಳಿ ಬದುಕಿ ಬಂದ ಅದ್ಭುತವು ಯೇಸುವಿಗೆ ನಿಕಟವಾದ ಜನರ ನಡುವೆ ನಡೆಯುತ್ತದೆ.
- ನಂಬಿಕೆಯ ಸಮಯದ ದೃಷ್ಟಿಕೋನವು ವಿಭಿನ್ನವಾಗಿದೆ: ಸ್ತ್ರೀಯು ಯೇಸುವಿನ ಬಟ್ಟೆಯನ್ನು ಮುಟ್ಟಲು ನಂಬಿಕೆಯಿಂದ ತಾನೇ ಮೊದಲ ಹೆಜ್ಜೆಯನ್ನು ತೆಗೆದುಕೊಳ್ಳುತ್ತಾಳೆ, ಹೀಗೆ ಈಗಾಗಲೇ ಆಕೆಗೆ ನಂಬಿಕೆಯಿತ್ತು. ಆದರೆ ಸತ್ತುಹೋಗಿದ್ದ ಹುಡುಗಿಯ ತಂದೆತಾಯಿಗೆ ಯೇಸುವೇ ನಂಬಿಕೆಯಿರಲಿ ಎಂದು ಹೇಳುತ್ತಾನೆ. ಹೀಗೆ ಹತಾಶೆಯ ಸನ್ನಿವೇಶದಲ್ಲಿ ಅವರಿಗೆ ಯೇಸುವಿನ ಮೇಲೆ ನಂಬಿಕೆಯಿರಲಿಲ್ಲ.
- ಅಸ್ವಸ್ಥರಾದವರನ್ನು ಗುಣಪಡಿಸುವುದು ಯೇಸುವಿನ ಸೇವೆಯಲ್ಲಿ ಸಾಮಾನ್ಯವಾಗಿತ್ತು. ಮತ್ತು ಸುವಾರ್ತೆಗಳಲ್ಲಿ ಅಂತಹ ಹಲವಾರು ಕಥೆಗಳು ದಾಖಲಾಗಿವೆ. ಆದರೆ ಯೇಸು ಕೇವಲ ಗುಣಪಡಿಸುವವನಷ್ಟೇ ಅಲ್ಲ ಆತನು "ಪುನರುತ್ಥಾನ ಮತ್ತು ಜೀವವೂ ಸಹ ಆಗಿದ್ದಾನೆ" (ಯೋಹಾನ 11:25) ಎಂಬ ಸತ್ಯದ ಹೊರತಾಗಿಯೂ ಕೆಲವೇ ಬಾರಿ ಮಾತ್ರ ಸತ್ತುಹೋಗಿದ್ದವರನ್ನು ಬದುಕಿಸಿದ್ದನ್ನು ನಾವು ಕಾಣಹುದಾಗಿದೆ.

**ಉತ್ತರಗಳು: ಮಾರ್ಕ ಅಧ್ಯಾಯ 6**

**ಪ್ರಶ್ನೆಗಳಿಗೆ ಉತ್ತರಗಳು**

1. ತನ್ನ ಊರಾದ ನಜರೇತಿನಲ್ಲಿ ಯೇಸು ಎರಡು ಸಂಗತಿಗಳನ್ನು ಮಾಡಿದನು (ವ. 1-6):

   ಅ. ಆತನು ಸಭಾಮಂದಿರದಲ್ಲಿ ಉಪದೇಶ ಮಾಡಿದನು (ವ. 2)

   ಆ. ಕೆಲವು ಮಂದಿ ರೋಗಿಗಳನ್ನು ಆತನು ಗುಣಪಡಿಸಿದನು (ವ. 5)

2. ಸಭಾಮಂದಿರದಲ್ಲಿ ಯೇಸುವಿನ ಬೋಧನೆಯ ಜ್ಞಾನವನ್ನು ಕಂಡು ಜನರು ಅತ್ಯಾಶ್ಚರ್ಯಪಟ್ಟರು (ವ. 2).
3. ಜನರು ಯೇಸುವಿನ ಕುಟುಂಬದ ಹಿನ್ನಲೆಯನ್ನು ತಿಳಿದಿದ್ದರಿಂದ ಆತನ ವಿಷಯವಾಗಿ ಬೇಸರಗೊಂಡರು (ವ. 3).
4. ನಜರೇತಿನ ಜನರ ಅಪನಂಬಿಕೆ ಮತ್ತು ವಿಶ್ವಾಸದ ಕೊರತೆಯನ್ನು ನೋಡಿ ಯೇಸು ಆಶ್ಚರ್ಯಪಟ್ಟನು (ವ. 6).
5. ನಜರೇತನ್ನು ಸಂಧಿಸಿದ ನಂತರ ಯೇಸು ಸುತ್ತಮುತ್ತಲ ಹಳ್ಳಿಗಳಿಗೆ ಅಲ್ಲಿನ ಜನರಿಗೆ ಸುವಾರ್ತೆಯನ್ನು ಸಾರಲು ಹೋದನು (ವ. 6-7).
6. ಅಪೊಸ್ತಲರ ಸೇವೆಯನ್ನು ಮಾರ್ಕನು ಈ ರೀತಿಯಾಗಿ ವರ್ಣಿಸುತ್ತಾನೆ (ವ. 12-13):

   ಅ. ಜನರು ದೇವರ ಕಡೆಗೆ ತಿರುಗಿಕೊಳ್ಳುವಂತೆ ಅವರು ಸಾರಿದರು

   ಆ. ಅವರು ಅನೇಕ ದೆವ್ವಗಳನ್ನು ಬಿಡಿಸಿದರು

   ಇ. ಅನೇಕ ರೋಗಿಗಳಿಗೆ ಎಣ್ಣೆಯನ್ನು ಹಚ್ಚಿ ಗುಣಪಡಿಸಿದರು. ನಮಗೆ 3:14-15 (ಯೇಸು 12 ಮಂದಿ ಅಪೊಸ್ತಲರನ್ನು ನೇಮಿಸಿದ್ದರ ಉದ್ದೇಶ) 1:15 (ಸ್ವತಃ ಯೇಸುವಿನ ಸೇವೆಯ ಪ್ರಾರಂಭ) ಮತ್ತು 1:4 (ಸ್ನಾನಿಕನಾದ ಯೋಹಾನನ ಸೇವೆ) ಜ್ಞಾಪಕಕ್ಕೆ ಬರುತ್ತದೆ.

7. ಅರಸನಾದ ಹೆರೋದನು ಯೇಸುವಿನ ಬಗ್ಗೆ ಸ್ನಾನಿಕನಾದ ಯೋಹಾನನೇ ತಿರುಗಿ ಬದುಕಿ ಬಂದಿದ್ದಾನೆಂಬುದಾಗಿ ಯೋಚಿಸಿದ್ದನು, ಯಾಕೆಂದರೆ ತನ್ನನ್ನು ಕೊಂದುದ್ದಕ್ಕಾಗಿ ಶಿಕ್ಷಿಸಲು ಬಂದಿದ್ದಾನೆಂದು ಯೋಚಿಸಿದನು (ವ. 14-16)
8. ಸ್ನಾನಿಕನಾದ ಯೋಹಾನನು ಹೆರೋದನಿಗೆ ಪಾಪದಲ್ಲಿ ಜೀವಿಸುವುದು ತಪ್ಪೆಂದು ಹೇಳಿದ್ದರಿಂದ ಆತನ ಮೇಲಿನ ಕೋಪದ ನಿಮಿತ್ತ ಆತನನ್ನು ಸೆರೆಮನೆಯಲ್ಲಿ ಹಾಕಿಸಿದ್ದನು. ಹೆರೋದನು ಆಕೆಯ ಗಂಡನು ಇನ್ನೂ ಬದುಕಿರುವಾಗಲೇ ತನ್ನ ಅತ್ತಿಗೆಯಾದ ಹೆರೋದ್ಯಳನ್ನು ಮದುವೆಯಾಗಿದ್ದನು. ಈ ಸಂಬಂಧವು ಮೋಶೆಯ ಧರ್ಮಶಾಸ್ತ್ರಕ್ಕೆ ವಿರುದ್ಧವಾಗಿತ್ತು (ವ. 17-18).
9. ಸ್ನಾನಿಕನಾದ ಯೋಹಾನನೊಂದಿಗೆ ಹೆರೋದನ ಸಂಬಂಧವನ್ನು ಯೋಹಾನನು ವಿರೋಧಮಯವಾಗಿರುವಂತೆ ವರ್ಣಿಸುತ್ತಾನೆ (ವ. 17-20):

   ಅ. ಒಂದು ರೀತಿಯಲ್ಲಿ, ಹೆರೋದನು ಯೋಹಾನನ ಮಾತುಗಳನ್ನು ಮೆಚ್ಚುತ್ತಿದ್ದನು. ಹಾಗಾಗಿ ಹೆರೋದನು ಹೆರೋದ್ಯಳ ಕುತಂತ್ರದಿಂದ ಆತನಿಗೆ ಅಪಾಯಬಾರದಂತೆ ಆತನಿಗೆ ಸಂರಕ್ಷಣೆ ಕೊಟ್ಟಿದ್ದನು.

   ಆ. ಇನ್ನೊಂದು ರೀತಿಯಲ್ಲಿ ನೋಡಿದರೆ, ಹೆರೋದ್ಯಳೊಂದಿಗಿನ ತನ್ನ ಅನೈತಿಕ ಸಂಬಂಧವನ್ನು ಖಂಡಿಸಿದ್ದ ಯೋಹಾನನು ನೀತಿವಂತನೂ, ದೇವಭಕ್ತನೂ ಆಗಿರುವುದರಿಂದ ಹೆರೋದನು ಆತನಿಗೆ ಅಂಜಿದನು.

10. ತನ್ನ ಹುಟ್ಟಿದ ದಿನದಂದು (ವ. 21-28) ಅರಸನಾದ ಹೆರೋದನು ಪ್ರಭುಗಳು, ಸಹಸ್ರಾಧಿಪತಿಗಳು ಮತ್ತು ಎಲ್ಲಾ ಮುಖ್ಯಸ್ಥರನ್ನೂ ಒಂದು ದೊಡ್ಡ ಔತಣಕೂಟಕ್ಕೆ ಆಹ್ವಾನಿಸಿದನು. ಆಗ ಹೆರೋದ್ಯಳ ಮಗಳು ಬಂದಂತಹ ಅತಿಥಿಗಳ ಮುಂದೆ ನಾಟ್ಯವಾಡಿದಳು. ಆಗ ಹೆರೋದನು ಅದಕ್ಕೆ ಮೆಚ್ಚಿ ಆಕೆ ಏನು ಕೇಳಿದರೂ ಕೊಡುತ್ತೇನೆಂಬುದಾಗಿ ಮಾತುಕೊಟ್ಟನು. ಆಕೆಯ ತಾಯಿಯು ಅವಳಿಗೆ ಸ್ನಾನಿಕನಾದ ಯೋಹಾನನ ತಲೆಯನ್ನು ಕೇಳಿಕೋ ಎಂದಳು. ಹಾಗಾಗಿ ಹೆರೋದನು ಸ್ನಾನಿಕನಾದ ಯೋಹಾನನನ್ನು ಕೊಂದು ಆತನ ತಲೆಯನ್ನು ಪರಾತಿನಲ್ಲಿ ತಂದು ಕೊಡಬೇಕೆಂದು ಆಜ್ಞಾಪಿಸಿದನು.

11. ಸ್ನಾನಿಕನಾದ ಯೋಹಾನನ ಶಿಷ್ಯರು ಬಂದು ಆತನ ದೇಹವನ್ನು ತೆಗೆದುಕೊಂಡು ಹೋಗಿ ಸಮಾಧಿಯಲ್ಲಿ ಇಟ್ಟರು (ವ. 29).
12. ವಚನ 30 ರ ಹಿನ್ನಲೆಯೇನೆಂದರೆ ಯೇಸುವು ತನ್ನ ಅಪೊಸ್ತಲರನ್ನು ಸೇವಾ ಪ್ರಯಾಣಕ್ಕೆ ಕಳುಹಿಸುವ ಕಥೆಯಾಗಿದೆ (ವ. 7-12). ಹಾಗೆಯೇ ವಚನ 30, ಏಳನೇ ವಚನದಿಂದಲೇ ಮುಂದುವರೆಯುತ್ತದೆ. ಮಾರ್ಕನು ಸ್ನಾನಿಕನಾದ ಯೋಹಾನನ ಸಾವಿನ ಕುರಿತ ತನ್ನ ವಿವರವನ್ನು ಈ ಎರಡು ವಚಗಳ ನಡುವೆ ಇಡುತ್ತಾನೆ.
13. ಯೇಸು ಮತ್ತು ಆತನ ಶಿಷ್ಯರು ಜನರ ಗುಂಪಿನಿಂದ ದೂರವಾಗುವುದಕ್ಕಾಗಿ ದೋಣಿಯಲ್ಲಿ ಹೋಗುತ್ತಾರೆ. ತಮಗೆ ವಿಶ್ರಾಂತಿಯನ್ನು ಪಡೆಯಲು ಒಂದು ಶಾಂತವಾದ ಸ್ಥಳವನ್ನು ಅವರು ಬಯಸಿದರು (ವ. 31-32).
14. ಬಹುಜನರ ಗುಂಪನ್ನು ಕಂಡಾಗ ಯೇಸು ಬೇಸರಗೊಳ್ಳಲಿಲ್ಲ ಅಥವಾ ನಮಗೆ ಆಯಾಸವಾದಾಗ ದೊಡ್ಡ ಜನರ ಗುಂಪು ನಮ್ಮ ಬಳಿ ಬಂದು ಸಹಾಯ ಕೇಳುವಾಗ ನಾವು ಮಾಡುವಂತೆ, ಆತನು ನಿರಾಶನಾಗಲಿಲ್ಲ. ಬದಲಾಗಿ ಯೇಸು ಅವರ ಮೇಲೆ ಕನಿಕರಪಟ್ಟನು, ಯಾಕೆಂದರೆ ಅವರೆಲ್ಲರೂ ಕುರುಬನಿಲ್ಲದ ಕುರಿಗಳಂತೆ ಗೊಂದಲಗೊಂಡು ಕಳೆದುಹೋದವರಾಗಿದ್ದರು. ಹಾಗಾಗಿ ಆತನು ಅವರಿಗೆ ಅನೇಕ ವಿಷಯಗಳನ್ನು ಉಪದೇಶಿಸಲು ಆರಂಭಿಸಿದನು (ವ. 34).
15. ಜನರಿಗೆ ಬೇಕಾದ ಆಹಾರವನ್ನು ನೀವೇ ಕೊಡಿರಿ ಎಂದು ಯೇಸು ಶಿಷ್ಯರಿಗೆ ಹೇಳಿದಾಗ ಅವರಿಗೆ ಆಘಾತವಾಯಿತು (ವ. 37). ಏನೂ ಇಲ್ಲದೆ ಅಷ್ಟೊಂದು ಜನರಿಗೆ ಅವರು ಹೇಗೆ ಊಟ ಬಡಿಸಬಲ್ಲರು? ಜನರು ಸುತ್ತಲಿನ ಹಳ್ಳಿಪಳ್ಳಿಗಳಿಗೆ ಹೋಗಿ ಆಹಾರವನ್ನು ಕೊಂಡುಕೊಳ್ಳಲಿ ಎಂಬ ಅವರ ಸಲಹೆಯ ಕುರಿತೇನು (ವ. 35-36)?
16. ಯೇಸು ಐದು ರೊಟ್ಟಿ ಎರಡು ಮೀನನ್ನು ತೆಗೆದುಕೊಂಡು ಯಾವುದೇ ಭಕ್ತಿವಂತ ಯೆಹೂದ್ಯನು ಮಾಡುವಂತೆ ತಿನ್ನುವುದಕ್ಕಿಂತ ಮುಂಚೆ ಪ್ರಾರ್ಥಿಸಿದನು (ವ. 41). ಸಾಮಾನ್ಯವಾಗಿ ಅದೊಂದು ಕೃತಜ್ಞತೆಯ ಪ್ರಾರ್ಥನೆಯಾಗಿತ್ತು: "ನಮ್ಮ ದೇವರಾದ ಕರ್ತನೇ, ಭೂಪರಲೋಕದ ಅರಸನೇ ಭೂಮಿಯಿಂದ ರೊಟ್ಟಿಯನ್ನು ಕೊಡುವಾತನೇ ನಿನಗೆ ಸ್ತೋತ್ರವಾಗಲಿ".
17. ಮಿಕ್ಕ ಆಹಾರವನ್ನು ಪುಟ್ಟಿಗಳಲ್ಲಿ ತುಂಬಿದರು, ಬಹುಶಃ ಅವು ಶಿಷ್ಯರ ಹನ್ನೆರಡು ಊಟದ ಡಬ್ಬಿಗಳಾಗಿರಬಹುದು (ವ. 43).
18. –
19. ಐದು ಸಾವಿರ ಮಂದಿಗೆ ಊಟ ಬಡಿಸಿದ ನಂತರ ಯೇಸು ತನ್ನ ಶಿಷ್ಯರಿಗೆ ದೋಣಿಯೊಳಕ್ಕೆ ಹತ್ತಿ ಬೇತ್ಸಾಯಿದಕ್ಕೆ ಹೋಗಿರಿ ಎಂದು ಹೇಳಿದನು. ಮೊದಲು ಯೇಸು ಜನರಿಂದ ಹೊರಟು ಹೋದನು. ಅನಂತರ ಆತನು ಪ್ರಾರ್ಥನೆ ಮಾಡುವುದಕ್ಕಾಗಿ ಬೆಟ್ಟಕ್ಕೆ ಹೋದನು (ವ. 45-46).
20. ಯೇಸುವು ನೀರಿನ ಮೇಲೆ ನಡೆಯುವುದನ್ನು ಕಂಡಾಗ ಶಿಷ್ಯರು ತತ್ತರಿಸಿ ಹೋದರು, ಯಾಕೆಂದರೆ ಅವರು ಆತನನ್ನು ದೆವ್ವವೆಂಬುದಾಗಿ ತಿಳಿದಿದ್ದರು (ವ. 49-50).
21. ಯೇಸುವು ದೋಣಿಯೊಳಕ್ಕೆ ಬಂದ ಮೇಲೆ ಬಿರುಗಾಳಿ ನಿಂತಿತು. ಅದನ್ನು ಕಂಡು ಶಿಷ್ಯರು ಬೆರಗಾದರು (ವ. 51).
22. ಯೇಸು ಬಂದದ್ದನ್ನು ತಿಳಿದುಕೊಂಡಾಗ ಗೆನೆಜರೇತ್ ಸೀಮೆಯ ಜನರು ಉತ್ಸಾಹದಿಂದ ಪ್ರತಿಕ್ರಯಿಸಿದರು. ಬೇಗನೆ ಅವರು ಓಡಿಹೋಗಿ ಯೇಸುವಿನಿಂದ ಗುಣಹೊಂದುವುದಕ್ಕಾಗಿ ಮೈಯಲ್ಲಿ ನೆಟ್ಟಗಿಲ್ಲದವರನ್ನೆಲ್ಲಾ ಕರೆತಂದರು (ವ. 53-56)
23. ವಚನ 55-56 ರಲ್ಲಿ ಮಾರ್ಕನು ಯೇಸುವಿನ ಸ್ವಸ್ಥತಾ ಸೇವೆಯನ್ನು ಸಾರಾಂಶಗೊಳಿಸುತ್ತಾನೆ. ಈ ಸಮಯದಲ್ಲಿ ಯೇಸು ಬಹಳವಾಗಿ ಒಬ್ಬ ಯಶಸ್ವೀ ಗುಣಪಡಿಸುವವ ಮತ್ತು ಅದ್ಭುತಗಳನ್ನು ಮಾಡುವವನು ಎಂಬುದಾಗಿ ಪ್ರಖ್ಯಾತಿಗೊಂಡನು.

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಯೇಸು ಸ್ವತಃ ಒಬ್ಬ "ಬಡಗಿ" (ಮಾರ್ಕ 6:3) ಮತ್ತು "ಒಬ್ಬ ಬಡಗಿಯ ಮಗ" (ಮತ್ತಾ. 13:55) ಸಹ ಆಗಿದ್ದನು. ತಂದೆಯಂತೆ ಮಗನೂ ಸಹ ಅದೇ ಕೆಲಸವನ್ನು ಮಾಡುವುದು ಆ ದಿನಗಳಲ್ಲಿ ಸಾಮಾನ್ಯವಾಗಿತ್ತು. ಹಾಗಾಗಿ ಯೇಸು ತನ್ನ ಸೇವೆಯನ್ನು

ಪ್ರಾರಂಭಿಸುವುದಕ್ಕಿಂತ ಮುಂಚೆ ತನ್ನ ತಂದೆಗೆ ಸಹಾಯಕನಾಗಿ ನಂತರ ಕಾರ್ಯಗಾರವನ್ನು ನೋಡಿಕೊಳ್ಳುತ್ತಿದ್ದಿರಬಹುದೆಂಬ ನಿಶ್ಚಯ ನಮಗುಂಟಾಗುತ್ತದೆ.

2. ಯೇಸು ತನ್ನ ಊರಾದ ನಜರೇತಿಗೆ ಬಂದಾಗ ಈ ರೀತಿ ಆಯಿತು (ವ. 1-6): ಎಂದಿನಂತೆ ಆತನು ಸಭಾಮಂದಿರದಲ್ಲಿ ಉಪದೇಶಿಸಿದನು. ಮೊದಲು ಜನರು ಆತನ ಆಪದೇಶದಲ್ಲಿನ ಜ್ಞಾನಕ್ಕೆ ಆಶ್ಚರ್ಯಪಟ್ಟರು. ಆತನು ಅದ್ಭುತಗಳನ್ನು ಮಾಡುತ್ತಾನೆಂಬ ಸುದ್ಧಿಯನ್ನು ಸಹ ಅವರು ಕೇಳಿದ್ದರು. ಆದರೆ ಅವರು ಯೇಸುವಿನ ಕುಟುಂಬದ ಹಿನ್ನಲೆಯನ್ನು ನೆನಪಿಸಿಕೊಂಡರು. ಆತನಿಗೆ ಅವರ ಕುಟುಂಬದ ಬಗ್ಗೆ ಅಂದರೆ ಆತನ ತಾಯಿ ಮತ್ತು ಸಹೋದರ, ಸಹೋದರಿಯರ ಬಗ್ಗೆ ಚೆನ್ನಾಗಿ ಗೊತ್ತಿತ್ತು. ಆತನ ನ್ಯಾಯಸಮ್ಮತತೆಯ ಬಗ್ಗೆ ಸಂದೇಹವಿರುವದನ್ನು ಅವರು ತಿಳಿದಿದ್ದರು. ಆತನೊಬ್ಬ ಪಾಂಡಿತ್ಯವನ್ನು ಹೊಂದಿದ ರಬ್ಬಿ/ಗುರುವಲ್ಲ, ಆದರೆ ಬರೀ ಒಬ್ಬ ಸಾಮಾನ್ಯ ಬಡಗಿಯಾಗಿದ್ದಾನೆಂದು ನೆನಪಿಸಿಕೊಂಡರು. ಹಾಗಾಗಿ ಅವರು ಆತನ ಮೇಲಿನ ಎಲ್ಲಾ ನಂಬಿಕೆಯನ್ನು ಕಳಕೊಂಡರು. ಅವರಲ್ಲಿನ ನಂಬಿಕೆಯ ಕೊರತೆ ಮತ್ತು ದೇವರ ರಾಜ್ಯದ ಕುರಿತ ಆತನ ಸಂದೇಶ ಮತ್ತು ಅವರಿಗಾಗಿ ತಾನು ಇಟ್ಟುಕೊಂಡಿರುವ ಅದ್ಭುತಗಳನ್ನು ಹೊಂದಿಕೊಳ್ಳಲು ಅವರು ಮನಸ್ಸು ಮಾಡದೇ ಇರುವುದನ್ನು ಕಂಡು ಆತನು ಆಶ್ಚರ್ಯಪಟ್ಟನು. ಪರಿಣಾಮವಾಗಿ ಕೆಲವೇ ಜನರು ಮಾತ್ರ ಗುಣಹೊಂದಿದರು.

3. ಎರಡು ಕಾರಣಗಳಿಂದ ಯೇಸು ಅಪೊಸ್ತಲರನ್ನು "ಇಬ್ಬಿಬ್ಬರಾಗಿ" (ವ. 7-13) ಕಳುಹಿಸಿದನೆಂಬುದಗಿ ನಾನೆಣಿಸುತ್ತೇನೆ:

ಅ. ಯೆಹೂದಿ ಧರ್ಮಶಾಸ್ತ್ರ ಮತ್ತು ಸಂಪ್ರದಾಯಗಳ ಪ್ರಕಾರ ಒಂದು ಸಾಕ್ಷಿಯು ಮಾನ್ಯವಾಗಿರಬೇಕಾದರೆ ಕಡೇಪಕ್ಷ ಇಬ್ಬರು ಸಾಕ್ಷಿದಾರರು ಬೇಕಾಗಿತ್ತು.

ಆ. ಕಷ್ಟಕರವಾದ ಸುವಾರ್ತಾ ಪ್ರಯಾಣದಲ್ಲಿ, ಇಬ್ಬರು ಪರಸ್ಪರ ಒಬ್ಬರಿಗೊಬ್ಬರು ಆಧಾರವಾಗಿರಬಹುದಾಗಿತ್ತು.

4. ಯೇಸು ತನ್ನ ಅಪೊಸ್ತಲರಿಗೆ ತಮ್ಮ ಸೇವಾ ಪ್ರಯಾಣದಲ್ಲಿ ಬುತ್ತಿ, ಹಣ ಮತ್ತು ಹೆಚ್ಚು ಬಟ್ಟೆಗಳನ್ನು ಒಯ್ಯಬಾರದೆಂದು ಹೇಳಿದನು (ವ. 7-13), ಯಾಕೆಂದರೆ ಆತನು ಅವರು ಸಂಪೂರ್ಣವಾಗಿ ತಾವು ಸೇವೆ ಮಾಡುವಂತ ಜನರ ಮೇಲೆ ಆತುಕೊಂಡಿರಬೇಕೆಂಬುದಾಗಿ ಬಯಸಿದನು. ಅವರು ಜನರ ಮನೆಗಳಲ್ಲಿ ವಾಸಿಸುತ್ತಾ, ಅವರಿಂದಲೇ ಆಹಾರ ಮತ್ತು ಚಾಪೆ(ಹೊದಿಕೆ)ಯನ್ನೆಲ್ಲಾ ಪಡಕೊಳ್ಳುತ್ತಿದ್ದರು.

5. ಹುಡುಗಿಯ ಬೇಡಿಕೆಯನ್ನು ಈಡೇರಿಸಿ ಸ್ನಾನಿಕನಾದ ಯೋಹಾನನನ್ನು ಕೊಲ್ಲಿಸಲು ಆಜ್ಞಾಪಿಸಿದ ನಂತರ ಹೆರೋದನ ಮನಸ್ಸಿನಲ್ಲಿ ವಿರೋಧಾತ್ಮಕವಾದ ಭಾವನೆಗಳು ಬಂದಿರಬಹುದೆಂಬುದಾಗಿ ನಾನೆಣಿಸುತ್ತೇನೆ (ವ. 14-29):

ಅ. ಒಂದು ರೀತಿಯಲ್ಲಿ ನೋಡಿದರೆ ಆತನಿಗೆ ಒಂಥರಾ ನೆಮ್ಮದಿಯೆನಿಸಿತು. ಈಗ ಆತನಿಗೆ ಟೀಕೆಗಳಿಂದ ಮುಕ್ತನಾದನು.

ಆ. ಇನ್ನೊಂದು ರೀತಿಯಲ್ಲಿ ನೋಡಿದರೆ ಆತನಿಗೆ ತುಂಬಾ ಚಿಂತೆ ಮತ್ತು ಭಯವಾಗಿದ್ದಿರಬಹುದು: ಒಬ್ಬ ದೇವ ಮನುಷ್ಯನನ್ನು ಕೊಲ್ಲುವುದು ಎಲ್ಲಾ ರೀತಿಯ ತೊಂದರೆಗಳಿಗೆ ನಡೆಸಬಹುದಾಗಿತ್ತು.

6. ಸ್ನಾನಿಕನಾದ ಯೋಹಾನನ ಸಾವಿನ ಕುರಿತ ಮಾರ್ಕನ ವರ್ಣನೆಯ ಮೂಲಕ ಅರಸನಾದ ಹೆರೋದನ ಬಗ್ಗೆ ಆತನ ಓದುಗರಿಗೆ ಈ ರೀತಿಯ ಅನಿಸಿಕೆ ಬರುತ್ತದೆ (ವ. 14-29):

ಅ. ಆತನೊಬ್ಬ ಮೂಢನಂಬಿಕೆಯ ಮನುಷ್ಯನಾಗಿದ್ದು, ಸ್ನಾನಿಕನಾದ ಯೋಹಾನನು ತನ್ನನ್ನು ಹಿಂಸಿಸಲು ಯೇಸುವಿನ ರೂಪದಲ್ಲಿ ಎದ್ದುಬಂದಿದ್ದಾನೆಂಬುದಾಗಿ ಆತನು ಯೋಚಿಸಿದನು.

ಆ. ಒಬ್ಬ ಯೌವನಸ್ಥ ಹುಡುಗಿಯ ನಾಟ್ಯಕ್ಕೆ ಮೆಚ್ಚಿ ಅಂತಹ ಅತಿಯಾದ ಮಾತು ಕೊಡುವ ಆತನು ಮೂರ್ಖನಾಗಿದ್ದನು.

ಇ. ಆತನೊಬ್ಬ ಬಲಹೀನ ವ್ಯಕ್ತಿಯಾಗಿದ್ದನು. ಬದುಕಿರುವಾಗಲೇ ಸ್ನಾನಿಕನಾದ ಯೋಹಾನನಿಗೆ ಹೆದರುತ್ತಿದ್ದನು. ಕೊಟ್ಟ ಮಾತನ್ನು ಉಳಿಸಿಕೊಳ್ಳದೆ ತನ್ನ ಹೆಂಡತಿಯಾದ ಹೆರೋದ್ಯಳು ಮತ್ತು ಅತಿಥಿಗಳನ್ನು ಮೆಚ್ಚಿಸದಿದ್ದರೆ ಏನಾಗುತ್ತದೆಂದು ಹೆದರಿದನು.

ಈ. ಈತನು ಆತ್ಮೀಕವಾಗಿ ಪ್ರಾಮಾಣಿಕನಾಗಿರದೆ ಲೌಕಿಕ ಸಂತೋಷದ ಮನುಷ್ಯನಾಗಿದ್ದನು. ಈತನು ಧರ್ಮಶಾಸ್ತ್ರಕ್ಕೆ ವಿರೋಧವಾಗಿ ಹೆರೋದ್ಯಳನ್ನು ಮದುವೆಯಾದನು. ಕ್ರೂರವಾದ ಪಾರ್ಟಿಯೊಂದಿಗೆ ಆತನು ತನ್ನ ಹಟ್ಟುಹಬ್ಬವನ್ನು ಆಚರಿಸಿಕೊಂಡನು.

7. –

8. ಐದು ಸಾವಿರ ಜನರಿಗೆ ಊಟ ಮಾಡಿಸಿದ್ದುದ್ದರಿಂದ ಶಿಷ್ಯರಿಗೆ ಸಂಪೂರ್ಣವಾಗಿ ತಾಳಲಾಗದಂತ ಅನುಭವವಾಗಿರಬೇಕು (ವ. 30-44). ಈ ರೀತಿ ಹೇಗೆ ಆಗಲು ಸಾಧ್ಯ ಎಂಬುದಾಗಿ ಅವರು ಚಕಿತರಾಗಿರಬಹುದು. ಇದು ತಮ್ಮ ಕರ್ತನಾದ ಯೇಸುವಿನಿಂದಾದ ಇನ್ನೊಂದು ಅದ್ಭುತವೆಂಬುದಾಗಿ ಅವರು ಅರಿತುಕೊಂಡರು. ಇಂತಹ ಅದ್ಭುತದಲ್ಲಿ ಜನರನ್ನು ಸಾಲಾಗಿ ಕೂರಿಸುವುದು ಜನರಿಗೆ ಆಹಾರವನ್ನು ಬಡಿಸುವುದು ಮತ್ತು ಉಳಿದ ಆಹಾರವನ್ನು ಒಟ್ಟು ಮಾಡುವಂತ ಕಾರ್ಯದಲ್ಲಿ ತಾವೂ ಭಾಗಿಗಳಾದುದಕ್ಕೆ ಯೇಸುವಿಗೆ ಅವರು ಕೃತಜ್ಞರಾಗಿರಬೇಕು. ಆದರೆ ಆರಂಭದಲ್ಲಿನ ತಮ್ಮ ಅಪನಂಬಿಕೆಯ ನಿಮಿತ್ಯ ಬಹುಶಃ ಅವರಿಗೆ ನಾಚಿಕೆಯಾಗಿರಬೇಕು. ಒಂದು ಯಶಸ್ವಿ ಸುವಾರ್ತಾ ಪ್ರಯಾಣದ ನಂತರ (ವ. 30) ತಮ್ಮ ಗುರುವಿನ ಅಪೇಕ್ಷೆಗೆ ತಕ್ಕಂತೆ ಜೀವಿಸದೇ ಇದ್ದುದ್ದಕ್ಕಾಗಿ ಸಹ ನಾಚಿಕೊಂಡಿರಬಹುದು.

9. ಶಿಷ್ಯರ ಬೆರಗಾಗುವಿಕೆ (ಯೇಸು ಬಂದಾಗ ಸಮುದ್ರದ ಮೇಲಿನ ಬಿರುಗಾಳಿ ಶಾಂತವಾದಾಗ) ಮತ್ತು ಯೇಸು ಐದು ಸಾವಿರ ಜನರಿಗೆ ಊಟವನ್ನು ಬಡಿಸುವ ಅದ್ಭುತದ ನಡುವೆ ಮಾರ್ಕನು ಒಂದು ಸಂಪರ್ಕವನ್ನು ಕಲ್ಪಿಸುತ್ತಾನೆ (ವ. 51:22): ರೊಟ್ಟಿಗಳನ್ನು ದ್ವಿಗುಣಗೊಳಿಸಿದ್ದು ಅವರಿಗೆ ಯೇಸುವಿನ ನಿಜವಾದ ಗುರುತನ್ನು ತೋರಿಸಿತು (ಹೋಲಿಸಿ 8:8-21), ಆದರೆ ಆ ಅದ್ಭುತವಾಗಲಿ, ನೀರಿನ ಮೇಲಿನ ಯೇಸುವಿನ ಪ್ರತ್ಯಕ್ಷತೆಯಾಗಲೀ ಅವರ ಮನಸ್ಸುಗಳನ್ನು ತೆರೆಯಲಿಲ್ಲ. ಐದು ಸಾವಿರ ಜನರಿಗೆ ಊಟಮಾಡಿಸಿದ್ದನ್ನು ಅರಿತುಕೊಂಡಿದ್ದರೆ ಯೇಸು ನೀರಿನ ಮೇಲೆ ನಡೆಯುವುದನ್ನು ಮತ್ತು ಬಿರುಗಾಳಿಯನ್ನು ಶಾಂತಪಡಿಸುವುದನ್ನು ಕಂಡು ಅವರು ಬೆರಗಾಗುತ್ತಿರಲಿಲ್ಲ. ಆದರೆ ತಮ್ಮ ಹೃದಯಗಳನ್ನು ಕಠಿಣಪಡಿಸಿಕೊಂಡ ಯೇಸುವಿನ ವಿರೋಧಿಗಳಂತೆಯೇ ಅವರು ತಮ್ಮನ್ನು ತೋರ್ಪಡಿಸಿಕೊಂಡರು (ಹೋಲಿಸಿ 3:5).

10. ಐದು ಸಾವಿರ ಜನರಿಗೆ ಊಟ ಮಾಡಿಸಿದ ಅದ್ಭುತದ ನಂತರ ಯೇಸು ಗಡಿಬಿಡಿಯಲ್ಲಿ ತನ್ನ ಶಿಷ್ಯರನ್ನು ದೋಣಿಯೊಳಕ್ಕೆ ಕಳುಹಿಸಿದನು (ವ. 45). ಇದಕ್ಕೆ ಕಾರಣವೇನಿರಬಹುದೆಂಬ ಸುಳಿವನ್ನು ನಾವು ಇದಕ್ಕೆ ಸಮಾನವಾಗಿರುವ ಯೋಹಾನ ಸುವಾರ್ತೆಯಲ್ಲಿನ ವಿವರದಲ್ಲಿ ಕಾಣಬಹುದು (ಯೋಹಾನ 6:14-15): ಜನರು ಯೇಸುವನ್ನು ಅರಸನನ್ನಾಗಿ ಮಾಡಬೇಕೆಂದು ಒತ್ತಾಯಿಸುತ್ತಿದ್ದರು. ಬಹುಶಃ ಶಿಷ್ಯರೂ ಸಹ ಈ ಪ್ರಯತ್ನದಲ್ಲಿ ಸೇರಿರಬಹುದು. ಹಾಗಾಗಿ ಈ ರೀತಿ ಆಗುವುದಕ್ಕಿಂತ ಮೊದಲೇ ಯೇಸು ಶಿಷ್ಯರನ್ನು ದೂರ ಕಳುಹಿಸಬೇಕಾಗಿತ್ತು. ಅಲ್ಲದೆ ಯೇಸು ಸಹ ಜನಸಮೂಹದಿಂದ ಸ್ವಲ್ಪ ದೂರವಿದ್ದು ತನ್ನ ತಂದೆಯೊಂದಿಗೆ ಪ್ರಾರ್ಥನೆಯಲ್ಲಿ ಸಮಯ ಕಳೆಯಬೇಕಾಗಿತ್ತು.

11. ಯೇಸು ನೀರಿನ ಮೇಲೆ ನಡೆಯುವ ಕಥೆಯನ್ನು (ವ. 45-52) ಮತ್ತಾಯ (14:22-33) ಮತ್ತು ಯೋಹಾನದಲ್ಲಿ (6:16-21) ಸಹ ಕಾಣಬಹದು.

**ಕೆಲ ಹೋಲಿಕೆಗಳು/ಗಮನಾರ್ಹ ಸಂಗತಿಗಳು**

ಅ. ಮೂರು ಸಮಯಗಳಲ್ಲಿ ಈ ಕಥೆಯು ಐದು ಸಾವಿರ ಜನರಿಗೆ ಊಟಮಾಡಿಸಿದ ನಂತರವೇ ಬಂದರೂ ಸಹ ಈ ಕಥೆಯ ಹಿನ್ನಲೆಯು ಒಂದೇ ರೀತಿಯಾಗಿಲ್ಲ. ಆದರೆ ಯೋಹಾನನ ಸುವಾರ್ತೆಯಲ್ಲಿ ಇದರ ನಂತರ ಈ ಅದ್ಭುತವನ್ನಾಧರಿಸಿ "ದೇವರು ಕೊಡುವ ರೊಟ್ಟಿ" ಎಂಬ ಚರ್ಚೆಯಾಗುತ್ತದೆ, ಆದರೆ ಮತ್ತಾಯ ಮತ್ತು ಮಾರ್ಕದಲ್ಲಿ ಯೇಸು ಮತ್ತು ಫರಿಸಾಯರ ಮಧ್ಯೆ ಶುದ್ಧತೆಯ ಬಗ್ಗೆ ವಾದವುಂಟಾಗುತ್ತದೆ.

ಆ. ಈ ವಿವರಗಳು ಉದ್ದ ಮತ್ತು ವಿವರದಲ್ಲಿ ವಿಭಿನ್ನವಾಗಿವೆ. ಯೋಹಾನನ ವಿವರವು ಚಿಕ್ಕದ್ದಾಗಿದ್ದರೆ, ಮತ್ತಾಯನದು ದೀರ್ಘವಾಗಿದೆ.

ಇ. ಮಾರ್ಕ ಮತ್ತು ಯೋಹಾನರು ಕಥೆಯನ್ನು ಒಂದೇ ರೀತಿಯಲ್ಲಿ ಹೇಳಿದ್ದಾರೆ. ಆದರೆ ಅವುಗಳಲ್ಲಿ ಕೆಲ ಕುತೂಹಲಕಾರಿ ವ್ಯತ್ಯಾಸಗಳಿವೆ:

- ಮಾರ್ಕನ ಸುವಾರ್ತೆಯಲ್ಲಿ ಯೇಸುವೇ ಮೊದಲ ಹೆಜ್ಜೆ ತೆಗೆದುಕೊಳ್ಳುತ್ತಾನೆ: ಬೇಗನೇ ಶಿಷ್ಯರು ಹೋಗುವಂತೆ ಮಾಡುತ್ತಾನೆ. ಆದರೆ ಓದುಗರಿಗೆ ಈ ಗಡಿಬಿಡಿಯ ಕಾರಣವನ್ನು ತಿಳಿಸಿಲ್ಲ. ಯೋಹಾನನ ಸುವಾರ್ತೆಯಲ್ಲಿ ಶಿಷ್ಯರೇ ಮೊದಲ ಹೆಜ್ಜೆಯನ್ನು ತೆಗೆದುಕೊಳ್ಳುತ್ತಾರೆ. ಜನರು ತನ್ನನ್ನು ಬಲವಂತವಾಗಿ ಅರಸನನ್ನಾಗಿ ಮಾಡಾರೆಂದು ತಿಳಿದು ಯೇಸು ಅದನ್ನು ತಪ್ಪಿಸಲು ನಾಲ್ಕು ಬೆಟ್ಟಗಳನ್ನು ಬದಲಿಸುತ್ತಾನೆ.
- ಶಿಷ್ಯರು ದೆವ್ವವನ್ನು ಕಂಡರೆಂಬುದಾಗಿ ಶಿಷ್ಯರು ತಿಳಿದರೆಂದು ಯೋಹಾನನು ತಿಳಿಸುವುದಿಲ್ಲ, ಆದರೆ ಅವರು ಬರೀ ಅಂಜಿದರು ಎಂಬುದಾಗಿ ಆತನು ತಿಳಿಸುತ್ತಾನೆ. ಅಲ್ಲದೆ ಕೇವಲ ಮಾರ್ಕನು ಮಾತ್ರ ಯೇಸು "ಅವರನ್ನು ದಾಟಿ ಮುಂದಕ್ಕೆ ಹೋಗಬೇಕೆಂದಿದ್ದನು" ಎಂಬ ಮರ್ಮವಾದ ಹೇಳಿಕೆಯನ್ನು ಕೊಡುತ್ತಾನೆ.
- ಮಾರ್ಕನ ಸುವಾರ್ತೆಯಲ್ಲಿ ಅವರು ದಡವನ್ನು ಸೇರುವುದಕ್ಕಿಂತ ಮೊದಲೇ ಗಾಳಿಯು ನಿಂತುಹೋಗುತ್ತದೆ. ಯೋಹಾನನ ಸುವಾರ್ತೆಯಲ್ಲಿ ತಕ್ಷಣವೇ ದೋಣಿಯು ದಡಕ್ಕೆ ಸೇರುತ್ತದೆ.

ಈ. ಮತ್ತಾಯನ ಸುವಾರ್ತೆಯಲ್ಲಿನ ಕಥೆಯು ಸ್ವಲ್ಪ ವಿಭಿನ್ನವಾಗಿದ್ದು ನೀರಿನ ಮೇಲೆ ನಡೆಯುತ್ತಿರುವುದು ಯೇಸುವಾ ಅಥವಾ ಭೂತವಾ ಎಂಬುದನ್ನು ತಿಳಿಯಲು ಬಯಸಿದ ಪೇತ್ರನ ಬಗ್ಗೆ ಒಂದು ಹೆಚ್ಚುವರಿ ಅಂಶವನ್ನು ಒಳಗೊಂಡಿದೆ. ಯೇಸು ಪೇತ್ರನಿಗೆ ನೀರಿನಲ್ಲಿ ಇಳಿದು ತನ್ನ ಬಳಿಗೆ ಬರಬೇಕೆಂದು ಹೇಳುತ್ತಾನೆ. ಆದರೆ ಪೇತ್ರನು ಬಿರುಗಾಳಿಯನ್ನು ಕಂಡು ಹೆದರಿದಾಗ ಆತನು ಮುಳುಗಲು ಪ್ರಾರಂಭಿಸುತ್ತಾನೆ. ತನ್ನನ್ನು ರಕ್ಷಿಸಬೇಕೆಂದು ಆತನು ಯೇಸುವಿನ ಬಳಿ ಕೂಗಿಕೊಳ್ಳುತ್ತಾನೆ. ಯೇಸು ಕೈಚಾಚಿ ಆತನನ್ನು ಹಿಡಿದು ಅಲ್ಪವಿಶ್ವಾಸಿಯೇ, ಯಾಕೆ ಸಂದೇಹಪಟ್ಟೆ ಎಂದು ಹೇಳುತ್ತಾನೆ. ಅವರಿಬ್ಬರೂ ದೋಣಿಯೊಳಕ್ಕೆ ಹೋದ ನಂತರ ಬಿರುಗಾಳಿ ನಿಂತುಹೋಗುತ್ತದೆ. ಅನಂತರ ಶಿಷ್ಯರು "ನೀನು ನಿಜವಾಗಿಯೂ ದೇವಕುಮಾರನೆಂದು" ಯೇಸುವಿಗೆ ನಮಸ್ಕರಿಸುತ್ತಾರೆ.

12. ಯೇಸುವಿನ ಶಿಷ್ಯರ ದೃಷ್ಟಿಕೋನದಿಂದ ಅಧ್ಯಾಯ 6 ರಲ್ಲಿ ಕಂಡುಬರುವ 6 ಕಥೆಗಳು:

ಅ. ಯೇಸು ನಜರೇತಿನಲ್ಲಿ ತಿರಸ್ಕರಿಸಲ್ಪಟ್ಟದ್ದು (ವ. 1-69): ಈ ಕಥೆಯಲ್ಲಿ ಶಿಷ್ಯರ ಪಾತ್ರವಿರುವುದಿಲ್ಲ.

ಆ. ಯೇಸು ಹನ್ನೆರಡು ಮಂದಿಯನ್ನು ಕಳುಹಿಸುವುದು (ವ. 7-13): ಶಿಷ್ಯರೇ ಈ ಕಥೆಯ ಮುಖ್ಯ ವ್ಯಕ್ತಿಗಳಾಗಿದ್ದಾರೆ. ಅವರು ಸೇವೆಗೆ ಹೋಗಲು ಸರಿಹೊಂದುತ್ತಾರೆ ಎಂಬುದನ್ನು ಯೇಸು ಕಂಡಾಗ ಅವರಿಗೆ ಹೆಮ್ಮೆ ಮತ್ತು ಸಂತೋಷವೆನಿಸಿರಬಹುದು. ತಮ್ಮ ಸೇವೆಯ ಸಫಲತೆಯಿಂದ ಅವರಿಗೆ ಸಂತೋಷವಾಗಿದ್ದಿರಬೇಕು.

ಇ. ಸ್ನಾನಿಕನಾದ ಯೋಹಾನನ ತಲೆಯನ್ನು ಹೊಯಿಸಿದ್ದು (ವ. 14-29): ಈ ಕಥೆಯಲ್ಲಿ ಶಿಷ್ಯರ ಪಾತ್ರವಿರುವುದಿಲ್ಲ.

ಈ. ಯೇಸು ಐದು ಸಾವಿರ ಮಂದಿಗೆ ಊಟ ಬಡಿಸಿದ್ದು (ವ. 30-44): ಈ ಕಥೆಯಲ್ಲಿ ಶಿಷ್ಯರು ಅತಿಮುಖ್ಯ ಪಾತ್ರವನ್ನು ವಹಿಸುತ್ತಾರೆ. ಏನಾಗುತ್ತಿದೆ ಎಂಬುದರ ಬಗ್ಗೆ ಅವರು ಗಲಿಬಿಲಿಗೊಂಡವರಾಗಿ ತೋರಿಬರುತ್ತಾರೆ. ಆಹಾರವನ್ನು ಕಂಡುಕೊಳ್ಳಲು ಜನರನ್ನು ದೂರಕಳಿಸಬೇಕೆಂಬ ಶಿಷ್ಯರ ಮನವಿಯನ್ನು ಯೇಸು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಬದಲಾಗಿ ಆತನು ಜನರಿಗೆ ಊಟಕೊಡುವುದಕ್ಕೆ ಅಸಾಧ್ಯವಾದ ಒಂದು ಕೆಲಸವನ್ನು ಕೊಡುತ್ತಾನೆ. ಯೇಸು ಜನರಿಗೆ ನೆಲದ ಮೇಲೆ ಕುಳಿತುಕೊಳ್ಳಲು ಹೇಳಿ, ಒಬ್ಬ ವ್ಯಕ್ತಿಗೆ ಒಂದು ಬಾರಿಯ ಊಟಕ್ಕೆ ಸಾಕಾಗುವ ಒಂದು ಸಣ್ಣ ಪ್ರಮಾಣದ ಆಹಾರವನ್ನು ತೆಗೆದುಕೊಂಡು ದೇವರಿಗೆ ಸ್ತೋತ್ರ ಸಲ್ಲಿಸುವಾಗ ಅವರು ಆಶ್ಚರ್ಯಗೊಂಡಿದ್ದಿರಬಹುದು. ಆ ಆಹಾರವು ಎಲ್ಲಾ ಜನರನ್ನು ತೃಪ್ತಿಪಡಿಸುವಷ್ಟು ಹೆಚ್ಚಿ

ಮತ್ತು ಸ್ವತಃ ತಮ್ಮ ಊಟದ ಡಬ್ಬಿಗಳನ್ನು ಸಹ ತುಂಬಿದನ್ನು ಕಂಡಾಗ ಅವರಿಗೆ ಅಚ್ಚರಿಯಾಗಿರಬೇಕು. ಶಿಷ್ಯರ ಕುರಿತ ನನ್ನ ಮೌಲ್ಯಮಾಪನವು ನಕಾರಾತ್ಮಕವಾಗಿದೆ: ಇಂತಹ ಅಭೂತಪೂರ್ವ ಅದ್ಭುತವು ಸಹ ಯೇಸು ಕ್ರಿಸ್ತನ ದೈವತ್ವವನ್ನು ಅರಿತುಕೊಳ್ಳಲು ಅವರ ಹೃದಯವನ್ನು ತೆರೆಯುವಲ್ಲಿ ವಿಫಲವಾಯಿತು. ನಂತರದಲ್ಲಿ ಮಾರ್ಕನು ಅವರ ಮನಸ್ಸು ಕಲ್ಲಾಗಿತ್ತು ಎಂದು ಹೇಳುತ್ತಾನೆ (ವ. 52).

ಉ. ಯೇಸು ನೀರಿನ ಮೇಲೆ ನಡೆದದ್ದು (ವ. 45-52): ಶಿಷ್ಯರು ಈ ಕಥೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತಾರೆ. ಯಾಕೆ ಯೇಸು ಅವರು ಆ ಸ್ಥಳವನ್ನು ಬೇಗನೇ ಬಿಡಬೇಕೆಂದು ಒತ್ತಾಯಿಸಿದನೆಂಬುದಕ್ಕೆ ಬಹುಶಃ ಅವರು ಅಚ್ಚರಿಗೊಂಡಿರಬಹುದು ಅಲ್ಲದೆ ಯಾಕೆ ಯೇಸು ತಮ್ಮೊಂದಿಗೆ ದೋಣಿಯಲ್ಲಿ ಬರಲಿಲ್ಲ ಎಂಬುದಕ್ಕೆ ಸಹ ಅವರು ಅಚ್ಚರಿಗೊಂಡಿರಬಹುದು. ಗಾಳಿಯು ಬೀಸತೊಡಗಿದಾಗ ರಾತ್ರಿ ಪ್ರಯಾಣವು ಬಹು ಅಪಾಯಕಾರಿವೆಂಬುದನ್ನು ಅವರು ತಿಳಿದಿರಬಹುದು. ನೀರಿನ ಮೇಲೆ ನಡೆದು ಬಂದ ಯೇಸುವನ್ನು ಪೂರ್ಣವಾಗಿ ಅವರಿಗೆ ಗುರುತಿಸಲು ಆಗಲಿಲ್ಲ. ಬದಲಾಗಿ ಅವರು ಆತನನ್ನು ಭೂತವೆಂದು ತಿಳಿದು ಭಯಗೊಂಡರು. ಆದರೆ ಯೇಸು ಅವರೊಂದಿಗೆ ಮಾತಾಡಿದಾಗ ಆತನು ಯೇಸುವೆ ಎಂಬುದಾಗಿ ಅವರಿಗೆ ತಿಳಿದಿರಬಹುದು. ಮತ್ತು ಆತನು ದೋಣಿಯೊಳಕ್ಕೆ ಬಂದಾಗ ಬಿರುಗಾಳಿಯು ನಿಂತದ್ದನ್ನು ನೋಡಿ ಅವರು ಅಚ್ಚರಿಗೊಂಡರು. ಶಿಷ್ಯರ ಕುರಿತ ನನ್ನ ಮೌಲ್ಯಮಾಪನವು ನಕಾರಾತ್ಮಕವಾಗಿದೆ.

ಊ. ಯೇಸು ಗೆನೆಜರೇತನಲ್ಲಿ ರೋಗಿಯನ್ನು ಗುಣಪಡಿಸಿದ್ದು (ವ. 53-56): ಈ ಕಥೆಯಲ್ಲಿ ಶಿಷ್ಯರ ಯಾವುದೇ ಪಾತ್ರವಿರುವುದಿಲ್ಲ.



**ಉತ್ತರಗಳು: ಮಾರ್ಕ ಅಧ್ಯಾಯ 7**

**ಪ್ರಶ್ನೆಗಳಿಗೆ ಉತ್ತರಗಳು**

1. ಮೊದಲ ವಾಕ್ಯಭಾಗದಲ್ಲಿ (ವ. 1-23) ಯೇಸು ಮೂರು ರೀತಿಯ ಜನರನ್ನು ಈ ರೀತಿಯಾಗಿ ಸಂಭೋದಿಸುತ್ತಾನೆ:
   ಅ. ಯೇಸುವಿನ ಬೋಧನೆ ಮತ್ತು ಸೇವೆಯನ್ನು ಕಂಡುಹಿಡಿಯಲು ಯೆರೂಸಲೇಮಿನಿಂದ ಗಲಿಲಾಯಕ್ಕೆ ಬಂದಂತ ಫರಿಸಾಯರ ಮತ್ತು ಶಾಸ್ತ್ರಿಗಳ ಒಂದು ಗುಂಪು, ವ. 5-13
   ಆ. ಯೆಹೂದಿ ಜನರ ಒಂದು ಗುಂಪು, ವ. 14-15
   ಇ. ಆತನ ಸ್ವಂತ ಜನರು, ವ. 17-23
2. ಎಲ್ಲಾ ಯೆಹೂದ್ಯರು ಪಾಲಿಸಬೇಕೆಂಬುದಾಗಿ ಫರಿಸಾಯರು ಅಪೇಕ್ಷಿಸಿದ ಕೆಲವು ಶುದ್ಧಾಚಾರಗಳನ್ನು ಮಾರ್ಕನು ತಿಳಿಸುತ್ತಾನೆ (ವ. 1-5). ಅವೆಂದರೆ:
   ಅ. ಪೇಟೆಗೆ ಹೋಗಿ ಬಂದು ಕೈ ತೊಳಕೊಳ್ಳದೆ ಆಹಾರ ತಿನ್ನುವುದು (ವ. 4)
   ಆ. ಮನೆಯ ಪಾತ್ರೆಗಳನ್ನು ತೊಳೆಯುವುದು (ವ. 4)
3. ಪ್ರವಾದಿಯಾದ ಯೆಶಾಯನ ದಿನಗಳಲ್ಲಿ ಕಪಟಿಗಳು ದೇವರಿಗೆ ತೋರಿಸುವ ಭಕ್ತಿಯು ವ್ಯರ್ಥವಾಗಿತ್ತು, ಯಾಕೆಂದರೆ ಅವರ ಭಕ್ತಿಯು ಪ್ರಾಮಾಣಿಕವಾಗಿರಲಿಲ್ಲ. ಅವರ ಹೃದಯವು ದೇವರಿಂದ ದೂರವಾಗಿತ್ತು (ವ. 6-8).
4. ಯೇಸು ಫರಿಸಾಯರಿಗೆ ನೀವು ಸಂಪ್ರದಾಯದ ನಿಮಿತ್ತ ಧರ್ಮಶಾಸ್ತ್ರವನ್ನು ನಿರರ್ಥಕಮಾಡುತ್ತೀರೆಂದು ದೂಷಿಸುತ್ತಾನೆ (ವ. 8-9, 13).
5. ಯೇಸುವಿನ ಪ್ರಕಾರ (ಉದಾಹರಣೆಗೆ ಆಹಾರ) ಹೊರಗಿನಿಂದ ಮನುಷ್ಯನೊಳಕ್ಕೆ ಹೋಗುವಂಥದ್ದು ಆತನನ್ನು ಹೊಲೆ ಮಾಡುವುದಿಲ್ಲ. ಯಾಕೆಂದರೆ ಅದು ಆ ವ್ಯಕ್ತಿಯ ಹೃದಯದೊಳಕ್ಕೆ ಹೋಗುವುದಿಲ್ಲ (ವ. 14-23).
6. ಯೇಸುವಿನ ಪ್ರಕಾರ ಒಬ್ಬ ಮನುಷ್ಯನ ಹೃದಯದೊಳಗಿಂದ ಹೊರಡುವಂಥದ್ದೇ ಆ ವ್ಯಕ್ತಿಯನ್ನು ಹೊಲೆಮಾಡುತ್ತದೆ. ಅವೆಂದರೆ ಸೂಳೆಗಾರಿಕೆ, ಕಳ್ಳತನ, ಕೊಲೆ, ಹಾದರ, ದ್ರವ್ಯಾಶೆ, ಕೆಡುಕುತನ, ಮೋಸ, ಬಂಡುತನ, ಹೊಟ್ಟೇಕಿಚ್ಚು, ಬೈಗಳು, ಸೊಕ್ಕು, ಮತ್ತು ಬುದ್ಧಿಗೇಡಿತನ ಇವೇ" (ವ. 14-23).
7. –
8. ತೂರಿನಲ್ಲಿ ಯೇಸು ಸಂಧಿಸಿದ ಸ್ತ್ರೀಯ ಹಿನ್ನಲೆಯ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 24-26):
   ಅ. ಆಕೆಯು ಯೆಹೂದಿಯಾಗಿರಲಿಲ್ಲ, ಆದರೆ ರೋಮನ್ ಪ್ರಾಂತ್ಯವಾಗಿರುವ ಸಿರಿಯಾದ ಪೊಯಿನಿಕ್ಯ ಕ್ಷೇತ್ರದವಳಾದ ಅವಳು ಅನ್ಯಮತಸ್ಥಳೂ, ಗ್ರೀಕ್ ಮಾತನಾಡುವವಳೂ ಆಗಿದ್ದಳು.
   ಆ. ಆಕೆಯ ಮಗಳು ದೆವ್ವ ಹಿಡಿದವಳಾಗಿದ್ದಳು.
9. ತನ್ನ ಪ್ರಾಧಾನ್ಯತೆಯು ಇಸ್ರಾಯೇಲ್ಯರಾದ ದೇವಜನರ ಮಧ್ಯೆ ಸೇವೆ ಮಾಡುವುದೇ ಯೇಸು ಆ ಸ್ತ್ರೀಗೆ ಸಹಾಯ ಮಾಡದಿರಲು ಇರುವ ನೆಪವಾಗಿದೆ (ವ. 27).
10. ಆಕೆಯು ಆತನ ನೆಪಕ್ಕೆ ಪ್ರತಿಕ್ರಯಿಸಿದ ರೀತಿಯ ಆಕೆಯ ಅಚಲವಾದ ನಂಬಿಕೆಯನ್ನು ನೋಡಿದಾಗ ಯೇಸು ತನ್ನ ಮನಸ್ಸನ್ನು ಬದಲಿಸಿಕೊಂಡು ಆ ಹೆಂಗಸಿನ ಮಗಳನ್ನು ಗುಣಪಡಿಸುತ್ತಾನೆ (ವ. 29).
11. ದೆಕಪೊಲಿ ಸೀಮೆಯಿಂದ ಯೇಸುವಿನ ಬಳಿಗೆ ಕರತಂದ ಆ ಮನುಷ್ಯನು ಕಿವುಡನಾಗಿದ್ದನು, ಅಲ್ಲದೆ ಆತನಿಗೆ ನೆಟ್ಟಗೆ ಮಾತನಾಡಲು ಆಗುತ್ತಿರಲಿಲ್ಲ (ವ. 32).

12. ಕಿವುಡನನ್ನು ಯೇಸು ಗುಪ್ತವಾಗಿ ಗುಣಪಡಿಸುತ್ತಾನೆ. ಯೇಸು ಆತನನ್ನು ಜನರ ಗುಂಪಿನಿಂದ ದೂರ ಕರಕೊಂಡು ಹೋಗಿ ಗುಣಪಡಿಸಿದನೆಂಬುದಾಗಿ ಮಾರ್ಕನು ಹೇಳುತ್ತಾನೆ (ವ. 32). ಈ ಖಾಸಗಿತನದ ರಹಸ್ಯವು ಅನಂತರ ತಿಳಿದುಬರುತ್ತದೆ (ವ. 36). ಆತನಿಗೇನಾಯಿತೆಂಬುದನ್ನು ಅಲ್ಲಿನ ಜನರ ಗುಂಪಿಗೆ ಗೊತ್ತಾಗಬಾರದೆಂಬುದಾಗಿ ಯೇಸು ಬಯಸಿದನು. ಈ ಕಥೆಯು ಗಲಿಲಾಯದ ವಾಯುವ್ಯಕ್ಕಿರುವ ದೆಕಪೊಲಿಯ ಅನ್ಯಮತಸ್ಥರ ಊರಲ್ಲಿ ಸಂಭವಿಸುತ್ತದೆ (ವ. 31).

13. ಕಿವುಡನನ್ನು ಗುಣಪಡಿಸಿದ್ದಕ್ಕೆ ಜನರು ಎರಡು ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ (ವ. 36-37):

ಅ. ಅವರು ಆ ಸುದ್ಧಿಯನ್ನು ಬೇರೆಯವರಿಗೆ ಹಬ್ಬಿಸಿದರು

ಆ. ಅವರು ಅತ್ಯಾಶ್ಚರ್ಯಪಟ್ಟರು

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಮೊದಲ ವಾಕ್ಯಭಾಗದ ಪಠ್ಯದಿಂದ ಮಾರ್ಕನು ತನ್ನ ಸುವಾರ್ತೆಯನ್ನು ಅನ್ಯಮತಸ್ಥ ಓದುಗರಿಗೆ ಹೇಳುತ್ತಿದ್ದಾನೆಂಬುದಾಗಿ ನಾವು ತಿಳಿದುಕೊಳ್ಳಬಹುದು (ವ. 1-23):

ಅ. ವಚನ 3-4 ರಲ್ಲಿ ಆತನು ಕೆಲವು ಯೆಹೂದಿ ಶುದ್ಧಾಚಾರದ ಕ್ರಮದ ಬಗ್ಗೆ ವಿವರಿಸುತ್ತಾನೆ. ಒಂದು ವೇಳೆ ಆತನ ಓದುಗರೆಲ್ಲ ಯೆಹೂದ್ಯರೇ ಆಗಿದ್ದರೆ ಈ ರೀತಿಯ ವಿವರಣೆಯ ಅಗತ್ಯವಿರಲಿಲ್ಲ.

ಆ. ಆತನು ವಚನ 11 ರಲ್ಲಿ “ಕೊರ್ಬಾನ್” (ಅಂದರೆ ದೇವರಿಗಾಗಿ ಇಟ್ಟಿದ್ದೇನೆ) ಎಂಬ ಅರಾಮಿಕ್/ಇಬ್ರಿಯ ಪದವನ್ನು ಭಾಷಾಂತರಿಸುತ್ತಾನೆ. ಒಬ್ಬ ಯೆಹೂದಿ ಓದುಗನಿಗೆ ಈ ಮಾಹಿತಿ ಬೇಕಾಗಿರಲಿಲ್ಲ.

2. “ಶುದ್ಧ ಮತ್ತು ಅಶುದ್ಧ(ಮೈಲಿಗೆ,ಹೊಲೆ)ದ” (ವ. 1-23) ಕುರಿತಾದ ವಾದವನ್ನು ಈ ರೀತಿಯಾಗಿ ಸಾರಾಂಶಗೊಳಿಸಬಹುದು:

ಅ. ಫರಿಸಾಯರು ಮತ್ತು ಶಾಸ್ತ್ರಿಗಳು ಯೇಸುವಿನ ಶಿಷ್ಯರು ಯೆಹೂದಿ ಶುದ್ಧಚಾರದ ಸಂಪ್ರದಾಯವನ್ನು ಪಾಲಿಸುವುದಿಲ್ಲವೆಂದು ಆರೋಪಿಸುತ್ತಾರೆ. ಯಾಕೆಂದರೆ ಅವರು ಊಟ ಮಾಡುವುದಕ್ಕಿಂತ ಮೊದಲು ಕೈತೊಳಕೊಂಡಿರಲಿಲ್ಲ.

ಆ. ಯೇಸು ಅವರನ್ನು ಕಪಟಿಗಳಾಗಿದ್ದೀರೆಂಬುದಾಗಿ ದೂರುತ್ತಾನೆ. ಯಾಕೆಂದರೆ ದೇವರ ಧರ್ಮಶಾಸ್ತ್ರಕ್ಕಿಂತ ತಮ್ಮ ಸಂಪ್ರದಾಯವೇ ಅವರಿಗೆ ಮುಖ್ಯವಾದುದ್ದರಿಂದ ಅವರ ಹೃದಯವು ದೇವರಿಂದ ದೂರವಾಗಿತ್ತು. ಆಗ ಯೇಸು ಅವರಿಗೊಂದು ಉದಾಹರಣೆಯನ್ನು ಕೊಡುತ್ತಾನೆ: ಮಗನು ತನ್ನ ತಂದೆತಾಯಿಯನ್ನು ಸನ್ಮಾನಿಸಬೇಕೆಂದು ಮೋಶೆಯ ಧರ್ಮಶಾಸ್ತ್ರವು ಹೇಳುತ್ತದೆ, ಅದು ಅವರಿಗಾಗಿನ ಆರ್ಥಿಕ ಜವಾಬ್ದಾರಿಯನ್ನು ಸಹ ಒಳಗೊಂಡಿತ್ತು. ಆದರೆ ಫರಿಸಾಯರ ಸಂಪ್ರದಾಯವು “ಕೊರ್ಬಾನ್” ಎಂಬ ಲೋಪದೋಷವನ್ನು ಮಾಡಿಬಿಟ್ಟಿತು. ಹೀಗೆ ಕೊರ್ಬಾನ್ ಆಣೆಯ ಮೂಲಕ ಒಬ್ಬ ಮಗನು ತನ್ನ ತಂದೆತಾಯಿಗಳ ಆರ್ಥಿಕ ಜವಾಬ್ದಾರಿಯಲ್ಲಿ ಅವರನ್ನು ಮೋಸಗೊಳಿಸಬಹುದಾಗಿತ್ತು.

ಇ. ಆ ನಂತರ ಯೇಸು ಯೆಹೂದಿ ಜನಸಮೂಹಕ್ಕೆ ನಿಜವಾದ ಶುದ್ಧತೆಯು ಒಬ್ಬ ಮನುಷ್ಯನ ಹೃದಯದ ವಿಚಾರವಾಗಿದೆ. ಕೆಟ್ಟ ಹೃದಯದಿಂದ ಸೂಳೆಗಾರಿಕೆ, ಕಳ್ಳತನ, ಕೊಲೆ, ಹಾದರ, ದ್ರವ್ಯಾಶೆ, ಕೆಡುಕುತನ, ಮೋಸ, ಬಂಡುತನ, ಹೊಟ್ಟೇಕಿಚ್ಚು, ಸೊಕ್ಕು, ಬೈಗುಳ, ಬುದ್ಧಿಗೇಡಿತನ ಇವುಗಳು ಬರುತ್ತವೆ. ಆದರೆ ಹೊರಗಿನ ವಸ್ತುಗಳಾವುವು ಒಬ್ಬ ಮನುಷ್ಯನ ಹೃದಯವನ್ನು ಹೊಲೆಮಾಡುವುದಿಲ್ಲ.

ಈ. ಮುಕ್ತಾಯದಲ್ಲಿ: ದೇವರೊಂದಿಗಿನ ಒಬ್ಬ ಮನುಷ್ಯನ ಅನ್ಯೋನ್ಯತೆಯು ಹೊಲಸಾದ ಕೈಯಿಂದ ಅಥವಾ ಅಶುದ್ಧವಾದ ಆಹಾರದಿಂದಾಗಲಿ ಮುರಿದು ಬೀಳದೆ ಪಾಪದಿಂದ ಮುರಿದು ಹೋಗುತ್ತದೆ.

3. ತೂರ್ ಊರಿನ ಅನ್ಯಮತಸ್ಥ ಸ್ತ್ರೀಯು (ವ. 24-30), ನಮಗೆ ಅನೇಕ ರೀತಿಯಲ್ಲಿ ಮಾದರಿ ಆಗಿದ್ದಾಳೆ:

ಅ. ಆಕೆ ಯೇಸುವನ್ನು ಹಿಡಿದುಕೊಳ್ಳುತ್ತಾಳೆ. ಯೇಸು ಆ ಊರಿಗೆ ಬಂದಾನೆಂಬ ಸುದ್ಧಿಯನ್ನು ಕೇಳಿದೊಡನೆಯೇ ಆಕೆ ಸಹಾಯಕ್ಕಾಗಿ ಆತನ ಬಳಿಗೆ ಹೋಗುತ್ತಾಳೆ. ಅದೇ ರೀತಿ ಸಹಾಯಕ್ಕಾಗಿ ಯೇಸುವಿನ ಬಳಿಗೆ ಹೋಗುವಾಗ ನಮ್ಮ ಅಗತ್ಯತೆಗಳ ವಿಷಯದಲ್ಲಿ ಮುಕ್ತವಾಗಿರಬೇಕು ಮತ್ತು ನಮ್ಮ ಬೇಡಿಕೆಯಲ್ಲಿ ಪಟ್ಟು ಹಿಡಿಯುವವರಾಗಬೇಕು.

ಆ. ಆಕೆಯು ಯೇಸುವಿಗಾಗಿನ ತನ್ನ ಅಗತ್ಯತೆಯನ್ನು ಮುಕ್ತವಾಗಿ ವ್ಯಕ್ತಪಡಿಸುತ್ತಾಳೆ. ತನ್ನ ಮಗಳಿಂದ ದೆವ್ವವನ್ನು ಬಿಡಿಸಬೇಕೆಂದು ಆಕೆ ಬೇಡಿಕೊಳ್ಳುತ್ತಾಳೆ ಮತ್ತು ಯೇಸು ತನಗೆ ಸಹಾಯ ಮಾಡಬೇಕೆಂಬ ತನ್ನ ಬೇಡಿಕೆಯಲ್ಲಿ ಹಠ ಹಿಡಿಯುತ್ತಾಳೆ. ಅದೇ ರೀತಿ ಸಹಾಯಕ್ಕಾಗಿ ಯೇಸುವಿನ ಬಳಿಗೆ ಹೋಗುವಾಗ ನಮ್ಮ ಅಗತ್ಯತೆಗಳ ವಿಷಯದಲ್ಲಿ ಮುಕ್ತವಾಗಿರಬೇಕು ಮತ್ತು ನಮ್ಮ ಬೇಡಿಕೆಯಲ್ಲಿ ಪಟ್ಟು ಹಿಡಿಯುವವರಾಗಬೇಕು.

ಇ. ದೇವರ ರಾಜ್ಯದ ಆಶೀರ್ವಾದಗಳೆಲ್ಲವೂ ತಾನು ಹೇಳುವುದರಲ್ಲಿವೆ ಎಂಬುದಾಗಿ ಆಕೆ ನಂಬಿದ್ದಳು. ದೇವರ ಆಶೀರ್ವಾದಗಳು ಬರೀ ಯೆಹೂದ್ಯರಿಗಷ್ಟೇ ಸೀಮಿತವಾಗಿಲ್ಲವೆಂಬುದಾಗಿ ಆಕೆ ಯೇಸುವಿಗೆ ನೆನಪಿಸುತ್ತಾಳೆ. ಇಸ್ರಾಯೇಲ್ ಜನಾಂಗದ ಪಿತಾಮಹನಾದ ಅಬ್ರಹಾಮ ಮತ್ತು ಆತನ ಸಂತತಿಯ ಮೂಲಕ ಭೂಲೋಕದ ಎಲ್ಲಾ ಜನಾಂಗಗಳಿಗೆ ಆಶೀರ್ವಾದವುಂಟಾಗುವುದೆಂಬ ದೇವರ ವಾಗ್ದಾನದ (ಆದಿ. 12:3, 18:18, 22:18) ಬಗ್ಗೆ ಆಕೆ ಕೇಳಿರಬಹುದು. ಬಹುಶಃ ಆಕೆ ಹಳೇ ಒಡಂಬಡಿಕೆಯ ಪ್ರವಾದಿಗಳ ಮೂಲಕ ಎಲ್ಲಾ ಜನಾಂಗಗಳಿಗೆ ಆಶೀರ್ವಾದದ ದಿನವು ಬರುವುದು ಎಂದು ಹೇಳಿರುವ ದೇವರ ವಾಗ್ದಾನದ ಬಗ್ಗೆ ಸಹ ಆಕೆ ತಿಳಿದಿರಬಹುದು. ಅದೇ ರೀತಿ ದೇವರ ಆಶೀರ್ವಾದಗಳು ಒಂದು ಪ್ರತ್ಯೇಕವಾದ ಗುಂಪಿನ ಜನರಿಗೆ ಮಾತ್ರ ಸೀಮಿತವಾಗಿವೆ ಮತ್ತು ದೇವರ ರಾಜ್ಯದಲ್ಲಿನ ಪೌರತ್ವವು ಒಂದು ಪ್ರತ್ಯೇಕ ಹಿನ್ನಲೆಯ ವ್ಯಕ್ತಿಗೆ ನಿರ್ಬಂಧಿಸಲ್ಪಟ್ಟಿಲ್ಲವೆಂಬುದನ್ನು ನಾವು ತಿಳಿದುಕೊಳ್ಳಬೇಕು.

ಈ. ಆಕೆಗೆ ಯೇಸುವಿನಲ್ಲಿ ನಂಬಿಕೆಯಿತ್ತು, ತನ್ನ ಮಗಳನ್ನು ಕಾಡಿಸುತ್ತಿರುವ ದುರಾತ್ಮದಿಂದ ಆಕೆಯನ್ನು ಬಿಡಿಸಲು ಯೇಸು ಶಕ್ತನಾಗಿದ್ದಾನೆಂಬುದನ್ನು ಆಕೆ ಮನವರಿಕೆ ಮಾಡಿಕೊಂಡಿದ್ದಳು ಮತ್ತು ಆಕೆಯ ನಂಬಿಕೆಗೆ ಪ್ರತಿಫಲ ದೊರಕಿತು. ಈ ರೀತಿಯ ನಂಬಿಕೆಯನ್ನು ಎಲ್ಲಾ ವಿಶ್ವಾಸಿಗಳೂ ಹೊಂದಿರಬೇಕು.

4. ತೂರ್ ಊರಿನ ಅನ್ಯಮತಸ್ಥ ಸ್ತ್ರೀಯ ಕುರಿತಾಗಿ ಮಾರ್ಕ ಮತ್ತು ಮತ್ತಾಯನ ಸುವಾರ್ತೆಯಲ್ಲಿ ಕಂಡುಬರುವ ಸಮಾಂತರವಾದ ಕಥೆಗಳ ಒಂದು ಹೋಲಿಕೆ (ವ. 24-30 ಮತ್ತು ಮತ್ತಾ. 15:21-28):

ಅ. ಮತ್ತಾಯನ ವಿಷಯವು ವಿವರವಾಗಿದೆ, ಉದಾಹರಣೆಗೆ:


- ಸ್ತ್ರೀಯ ಪದಗಳನ್ನು (ಮಾತುಗಳನ್ನು) ಬಳಸಲಾಗಿದೆ ಮತ್ತು ಆಕೆ ಯೇಸುವಿಗೆ "ಸ್ವಾಮಿ, ದಾವೀದನ ಕುಮಾರನೇ" ಎಂದು ಕರೆಯುತ್ತಾಳೆ.
- ಯೇಸುವಿನ ಶಿಷ್ಯರ ಬಗ್ಗೆಯೂ ತಿಳಿಸಲಾಗಿದೆ. ಆಕೆಯ ಬೇಡಿಕೆಯಿಂದ ಅವರು ಬೇಸರಗೊಂಡು ಆಕೆಯನ್ನು ಕಳುಹಿಸಿಬಿಡು ಎಂದು ಅವರು ಯೇಸುವನ್ನು ಕೇಳಿಕೊಳ್ಳುತ್ತಾರೆ.
- ಯೇಸು ತನ್ನ ಸೇವೆಯ ಪ್ರಾಧಾನ್ಯತೆಯನ್ನು ವಿವರಿಸುತ್ತಾನೆ, "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲಿನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ಕಳುಹಿಸಲ್ಪಟ್ಟವನಲ್ಲ"
- ಯೇಸು ನೇರವಾಗಿ ಆಕೆಯ ನಂಬಿಕೆಯನ್ನು ಹೊಗಳುತ್ತಾನೆ, "ಅಮ್ಮ ನಿನ್ನ ನಂಬಿಕೆ ಬಹಳ".

ಆ. ಅಲ್ಲದೆ ಇದರಲ್ಲಿ ಕೆಲವು ವ್ಯತ್ಯಾಸ(ಭಿನ್ನತೆ)ಗಳಿವೆ, ಉದಾಹರಣೆಗೆ:

- ಮತ್ತಾಯನು ತನ್ನ ವಿವರವನ್ನು "ಯೇಸು ಅಲ್ಲಿಂದ ಹೊರಟು ತೂರ್ ಸೀದೋನ್ ಪಟ್ಟಣಗಳ ಪ್ರಾಂತ್ಯಗಳಿಗೆ ಹೋದನು" ಎಂಬ ಹೇಳಿಕೆಯಿಂದ ಪ್ರಾರಂಭಿಸುತ್ತಾನೆ. ಮಾರ್ಕನು ಆ ಸ್ತ್ರೀಯು "ತೂರ್ ಪ್ರಾಂತ್ಯದವಳೆಂದು, ಸೀದೋನನ್ನು ಯೇಸುವಿನ ಮುಂದಿನ ಪ್ರಯಾಣದೊಂದಿಗಿನ ಸಂಬಂಧದಲ್ಲಿ ಪ್ರಸ್ತಾಪಿಸುತ್ತಾನೆ (ವ. 31).

- ಮತ್ತಾಯನು ಆ ಸ್ತ್ರೀಯನ್ನು ಕಾನಾನ್ಯಳೆಂಬುದಾಗಿ ಹೇಳಿದರೆ ಮಾರ್ಕನು ಅವಳು ಸರೋಪೊಯಿನಿಕ್ಯದವಳು ಎಂಬುದಾಗಿ ಹೇಳುತ್ತಾನೆ. ಆಕೆಯನ್ನು ಎರಡು ರೀತಿಯಲ್ಲಿ ವಿವರಿಸುವುದರಲ್ಲೇನು ವಿರೋಧತೆಯಿಲ್ಲ.
- ಮತ್ತಾಯನು ಬರೀ ಆ ಹುಡುಗಿಯು ಕೂಡಲೇ ಸ್ವಸ್ಥಳಾದಳು ಎಂದಷ್ಟೇ ಹೇಳಿದರೆ, ಮಾರ್ಕನು ತನ್ನ ಕಥೆಯನ್ನು ವಿವರವಾದ ರೀತಿಯಲ್ಲಿ ಮುಗಿಸುತ್ತಾನೆ.

5. –



**ಉತ್ತರಗಳು: ಮಾರ್ಕ ಅಧ್ಯಾಯ 8**

**ಪ್ರಶ್ನೆಗಳಿಗೆ ಉತ್ತರಗಳು**

1. –
2. ಜನರೆಲ್ಲರೂ ಹಸಿದಿದ್ದರು, ಆ ನಿಮಿತ್ತ ಯೇಸು ಅವರ ಮೇಲೆ ಕನಿಕರಪಟ್ಟನು. ಮೂರು ದಿನಗಳಿಂದ ಅವರು ಅಡವಿಯಲ್ಲಿ ಆಹಾರವಿಲ್ಲದೆ ಆತನೊಂದಿಗಿದ್ದರು (ವ. 2).
3. ಊಟ ಮಾಡಿಸುವ ಅದ್ಭುತ ನಡೆಯುವುದಕ್ಕಿಂತ ಮುಂಚೆ ಶಿಷ್ಯರ ಬಳಿಯಲ್ಲಿ ಏಳು ರೊಟ್ಟಿಗಳೂ ಮತ್ತು ಕೆಲವು ಸಣ್ಣ ಮೀನುಗಳೂ ಇದ್ದವು (ವ. 5,7). ಆದರೆ ಊಟವಾದನಂತರ ಅಂದರೆ ನಾಲ್ಕು ಸಾವಿರ ಗಂಡಸರು ಊಟಮಾಡಿ ಮುಗಿಸಿದ ನಂತರ ಉಳಿದ ಆಹಾರವೇ ಏಳು ದೊಡ್ಡ ಪುಟ್ಟಿಗಳು ತುಂಬಿದವು (ವ. 8).
4. ಫರಿಸಾಯರು ಯೇಸುವಿನ ಬಳಿ ಆಕಾಶದಲ್ಲಿ ಒಂದು ಸೂಚಕಕಾರ್ಯವನ್ನು ತೋರಿಸು ಎಂದು ಕೇಳಿಕೊಂಡರು (ವ. 11).
5. ಫರಿಸಾಯರ ಮನವಿಗೆ ಯೇಸು ನೊಂದು ಏನನ್ನೂ ಮಾಡಲು ನಿರಾಕರಿಸಿದನು (ವ. 12-13).
6. ಯೇಸು ಮತ್ತು ಆತನ ಶಿಷ್ಯರು ದಲ್ಮನೂಥದಿಂದ ಬೇತ್ಸಾಯಿದಕ್ಕೆ ದೋಣಿಯಲ್ಲಿ ಪ್ರಯಾಣಿಸಿದರು (ವ. 13). ಅಲ್ಲಿ ಅವರು ಎದುರಿಸಿದ ಸಮಸ್ಯೆಯೇನೆಂದರೆ ತಮ್ಮ ಪ್ರಯಾಣಕ್ಕಾಗಿ ಆಹಾರ (ರೊಟ್ಟಿ ಬುತ್ತಿ) ತರುವುದನ್ನು ಅವರು ಮರೆತರು. ಹಾಗಾಗಿ ಅವರ ಬಳಿ ಬರೀ ಒಂದು ರೊಟ್ಟಿ ಮಾತ್ರ ಇತ್ತು (ವ. 14).
7. ಹೆರೋದನ ಮತ್ತು ಫರಿಸಾಯರ ಹುಳಿಹಿಟ್ಟಿನ ವಿಷಯದಲ್ಲಿ ಎಚ್ಚರವಾಗಿರಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳುತ್ತಾನೆ (ವ. 15).
8. ಅವರಿಗೆ ತಿಳುವಳಿಕೆಯಿಲ್ಲದ್ದಕ್ಕಾಗಿ ಯೇಸು ಶಿಷ್ಯರನ್ನು ಬೈಯುತ್ತಾನೆ (ವ. 17, 21).
9. ಬೇತ್ಸಾಯಿದದಲ್ಲಿ ಊರಹೊರಗೆ ಕುರುಡನಿಗೆ ಸ್ವಸ್ಥತೆಯುಂಟಾಗುತ್ತದೆ (ವ. 23). ಇದು ಪಟ್ಟಣದವರು ಈ ಅದ್ಭುತದ ಬಗ್ಗೆ ತಿಳಿಯಬಾರದೆಂದು ಯೇಸು ಬಯಸಿರಬಹುದೆಂದು ತೋರುತ್ತದೆ. ಯಾಕೆಂದರೆ ಆಮೇಲೆ ಆತನು ಆ ಮನುಷ್ಯನಿಗೆ ಊರೊಳಕ್ಕೆ ಹೋಗಬೇಡವೆಂದು ಮನೆಗೆ ಕಳುಹಿಸಿದನು (ವ. 26).
10. ಬೇತ್ಸಾಯಿದದಲ್ಲಿ ಕುರುಡನಿಗಾದ ಎರಡು ಹಂತದ ಸ್ವಸ್ಥತೆಯೆಂದರೆ (ವ. 22-26):
    ಅ. ಮೊದಲನೆಯದಾಗಿ, ಯೇಸು ಅವನ ಕಣ್ಣುಗಳಲ್ಲಿ ಉಗುಳಿ, ನಿನಗೇನಾದರೂ ಕಾಣುತ್ತದೋ ಎಂದು ಕೇಳಿದನು. ಆ ಮನುಷ್ಯನು ನನಗೆ ಕಾಣುತ್ತದೆ ಆದರೆ ಎಲ್ಲವು ಸಹ ಮಂದವಾಗಿದೆ ಎಂದು ಹೇಳಿದನು.
    ಆ. ಎರಡನೆಯದಾಗಿ ಪುನಃ ಯೇಸು ಅವನ ಕಣ್ಣುಗಳ ಮೇಲೆ ಕೈಯನ್ನಿಟ್ಟು ಆತನನ್ನು ಪೂರ್ಣವಾಗಿ ಗುಣಪಡಿಸಿದನು.
11. ಪ್ಯಾಲೆಸ್ತೀನಿನ ಉತ್ತರಭಾಗದ ಜನರು ಯೇಸುವನ್ನು ಸತ್ತವರಲ್ಲಿ ಎದ್ದುಬಂದವರಲ್ಲೊಬ್ಬನು ಎಂಬುದಾಗಿ ಯೋಚಿಸಿದರು (ವ. 27-30). ಕೆಲವರು (ಅರಸನಾದ ಹೆರೋದನಂತೆ, 6:16) ಆತನು ಸ್ನಾನಿಕನಾದ ಯೋಹಾನನೆಂದು ಯೋಚಿಸಿದರು. ಇನ್ನು ಕೆಲವರು ಆತನು ಎಲೀಯನಾಗಿರಬಹುದೆಂದು ಯೋಚಿಸಿದರು (ಮಲಾಕಿ 4:5 ಮತ್ತು ಮಾರ್ಕ 6:15 ರಲ್ಲಿನ ಪ್ರವಾದನೆಯೊಂದಿಗೆ ಹೋಲಿಸಿ). ಅಲ್ಲದೇ ಇನ್ನು ಕೆಲವರು ಹಳೇ ಒಡಂಬಡಿಕೆಯ ಪ್ರವಾದಿಗಳಲ್ಲಿ ಒಬ್ಬನು ಎಂಬುದಾಗಿ ಯೋಚಿಸಿದರು (ಹೋಲಿಸಿ 6:15).
12. ಈಗ ಪೇತ್ರನು ಯೇಸುವು ಬರಬೇಕಾದ ಕ್ರಿಸ್ತನು, ಯೆಹೂದ್ಯರು ಬಹುಕಾಲದಿಂದ ಪ್ರಾರ್ಥಿಸಿ ಕಾಯುತ್ತಾ ಇದ್ದ ಮೆಸ್ಸೀಯನೆಂಬುದಾಗಿ ಯೋಚಿಸಿದನು (ವ. 29).
13. ತನ್ನ ಬಾಧೆ ಮತ್ತು ಮರಣದ ಬಗ್ಗೆ ಮುಂತಿಳಿಸುವಲ್ಲಿ ಯೇಸು ತನ್ನ ಬಗ್ಗೆ ಮನುಷ್ಯಕುಮಾರನು ಎಂಬ ಹೆಸರನ್ನು ಉಪಯೋಗಿಸಿದನು (ವ. 31)

14. ಮನುಷ್ಯಕುಮಾರನು ಹಿರಿಯರಿಂದ ತಿರಸ್ಕರಿಸಲ್ಪಪಟ್ಟು, ಕೊಲ್ಲಲ್ಪಟ್ಟು ಮೂರನೇ ದಿನದಲ್ಲಿ ಎದ್ದು ಬರುವನೆಂಬ ಉಪದೇಶಕ್ಕಾಗಿ ಪೇತ್ರನು ಯೇಸುವನ್ನು ಪಕ್ಕಕ್ಕೆ ಕರೆದು ಕೈಹಿಡಿದುಕೊಂಡು ಗದರಿಸಿದನು (ವ. 31-32).
15. ಪೇತ್ರನ ಗದರಿಕೆಯನ್ನು ಯೇಸು ಕಠಿಣವಾಗಿ ಮೌಲ್ಯಮಾಪನ ಮಾಡುತ್ತಾನೆ. ಆತನು ಪೇತ್ರನನ್ನು ಸೈತಾನನೇ ಎಂದು ಹೇಳುತ್ತಾನೆ ಯಾಕೆಂದರೆ ಆತನ ಯೋಚನೆಯು ಮಾನುಷಿಕವಾಗಿತ್ತೇ ವಿನಃ ದೇವರದ್ದಾಗಿರಲಿಲ್ಲ (ವ. 33).
16. 8:34-9:1 ರಲ್ಲಿ ಯೇಸು ತನ್ನ ಶಿಷ್ಯರನ್ನು ಮತ್ತು ಬಹುದೊಡ್ಡ ಸಂಖ್ಯೆಯ ಜನರ ಗುಂಪನ್ನು ಸಹ ಸಂಬೋಧಿಸುತ್ತಾನೆ.
17. ವ. 34 ರ ಪ್ರಕಾರ ತನ್ನ ಶಿಷ್ಯರಾಗಬೇಕೆಂದಿರುವವರು ತಮ್ಮನ್ನೇ ನಿರಾಕರಿಸಿ ತಮ್ಮ ಶಿಲುಬೆಯನ್ನು ಹೊತ್ತುಕೊಂಡು ಆತನನ್ನು ಹಿಂಬಾಲಿಸಬೇಕೆಂದು ಯೇಸು ಹೇಳುತ್ತಾನೆ. ಯೇಸುವಿನ ಮಾತಿನ ಅರ್ಥವೇನೆಂದರೆ ತನ್ನನ್ನು ಹಿಂಬಾಲಿಸಬೇಕೆಂದಿರುವವರು ತಮ್ಮ ಜೀವಿತವನ್ನು ಸಂಪೂರ್ಣವಾಗಿ ಆತನಿಗೆ ಒಪ್ಪಿಸಿಕೊಡಬೇಕು. ಅವರ ಜೀವಿತವು ಇನ್ನು ಮುಂದೆ ಅವರಿಗೆ ಸ್ವಂತವಾಗಿರುವುದಿಲ್ಲ. ಅವರು ತಮ್ಮ ಪಾಲಿಗೆ ಸತ್ತುಹೋದವರಾಗಿ ಆತನಿಗಾಗಿ ಜೀವಿಸುವರು ಎಂದಾಗಿದೆ.
18. ವ. 35 ರಲ್ಲಿನ ಯೇಸುವಿನ ಹೇಳಿಕೆಯ ಪ್ರಕಾರ ಆತನಿಗಾಗಿ ಮತ್ತು ಸುವಾರ್ತೆಯ ನಿಮಿತ್ತ ತಮ್ಮ ಪ್ರಾಣವನ್ನು (ಶಾರೀರಿಕ) ಕಳಕೊಳ್ಳುವವರು ಅದನ್ನು ಉಳಿಸಿಕೊಳ್ಳುತ್ತಾರೆ. ಇದರರ್ಥ ಅವರು ಸಾಯುವಾಗ ನಿತ್ಯಜೀವವನ್ನು ಹೊಂದಿಕೊಳ್ಳುವರು ಎಂದಾಗಿದೆ.
19. ಯೇಸುವಿಗೂ ಮತ್ತು ಆತನ ಮಾತುಗಳಿಗೂ ನಾಚಿಕೊಳ್ಳುವವರಿಗೆ ಮನುಷ್ಯಕುಮಾರನು ತನ್ನ ಪ್ರಭಾವದೊಡನೆ ಬರುವಾಗ (ಇದು ಯೇಸುವಿನ ಎರಡನೇ ಬರೋಣದಲ್ಲಿ ಆಗುತ್ತದೆ) ಆತನು ಸಹ ನಾಚಿಕೊಳ್ಳುವನು (ವ. 38).
20. ಶಿಷ್ಯತ್ವದ ಬಗ್ಗೆ ತನ್ನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ ಕೆಲವು ಜನರ ಬಗ್ಗೆ ಯೇಸು, ದೇವರ ರಾಜ್ಯವು ಪ್ರಬಲವಾಗಿ ಬಂದಿರುವುದನ್ನು ನೋಡುವ ತನಕ ಅವರು ಮರಣ ಹೊಂದುವುದಿಲ್ಲವೆಂದು ಹೇಳಿದನು (ವ. 9:1).

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –
2. ಫರಿಸಾಯರು ಯೇಸುವಿನ ಬಳಿ ಆಕಾಶದಲ್ಲಿ ಒಂದು ಸೂಚಕಕಾರ್ಯವನ್ನು ಮಾಡು ಎಂದು ಕೇಳಿಕೊಂಡರು, ಯಾಕೆಂದರೆ ಅವರು ಆತನನ್ನು ಪರೀಕ್ಷಿಸಬೇಕೆಂದಿದ್ದರು. ಯೇಸು ಅವರಿಗೆ ಆ ರೀತಿ ಉತ್ತರಿಸಲು ಮತ್ತು ಅವರ ಬೇಡಿಕೆಯನ್ನು ಈಡೇರಿಸಲು ನಿರಾಕರಿಸಿಸಲು ಎರಡು ಕಾರಣಗಳಿವೆ ಎಂಬುದಾಗಿ ನಾನು ಎಣಿಸುತ್ತೇನೆ (ವ. 11-13):

   ಅ. ತಮ್ಮ ಬೇಡಿಕೆಯ ಬಗ್ಗೆ ಫರಿಸಾಯರಿಗೆ ಗಂಭೀರತೆಯಿಲ್ಲವೆಂಬುದು ಯೇಸುವಿಗೆ ತಿಳಿದಿತ್ತು. ಅವರು ಬರೀ ಆತನಿಗೆ ತೊಂದರೆಪಡಿಸಲು ಬಯಸಿದರು. ಅವರು ಆತನನ್ನು ಉತ್ತಮವಾಗಿ ತಿಳಿದಿರಲಿಲ್ಲ ಮತ್ತು ಆತನಾರಾಗಿದ್ದಾನೆಂಬುದನ್ನು ಅರಿತುಕೊಂಡಿರಲಿಲ್ಲ. ಆದರೆ ಅವರು ದುರಾಲೋಚನೆಯಿಂದ ಬಂದಿದ್ದರು.

   ಆ. ತನ್ನ ಗುರುತು ಮತ್ತು ಸೇವೆಯೇನೆಂಬುದನ್ನು ತಿಳಿದುಕೊಳ್ಳಲು ಯೇಸು ಈಗಾಗಲೇ ಜನರಿಗೆ ಸಾಕಷ್ಟು ಸೂಚಕಕಾರ್ಯಗಳನ್ನು ತೋರಿಸಿದ್ದನು. ಆತನು ಸಭಾಮಂದಿರದಲ್ಲಿ ದೇವರ ಅಧಿಕಾರದಿಂದ ಬೋಧಿಸಿದನು. ಆತನು ರೋಗಿಗಳನ್ನು ಗುಣಪಡಿಸಿದನು. ದೆವ್ವಪೀಡಿತರನ್ನು ಬಿಡಿಸಿದನು. ಬಿರುಗಾಳಿಯನ್ನು ಅಲೆಗಳನ್ನು ಗದರಿಸಿದನು. ನೀರಿನ ಮೇಲೆ ನಡೆದನು ಮತ್ತು ಮೀನನ್ನು ಹೆಚ್ಚಿಸಿದನು. ಈಗಿನ ಅವಶ್ಯಕತೆಯು ಇನ್ನೂ ಹೆಚ್ಚಿನ ಸೂಚಕಕಾರ್ಯಗಳಲ್ಲ ಬದಲಾಗಿ ಸೂಚಕಕಾರ್ಯಗಳನ್ನು ತಿಳಿದುಕೊಳ್ಳುವುದಾಗಿತ್ತು (ಹೋಲಿಸಿ ವ. 17,21). ಅದಕ್ಕಾಗಿ ಅವರಿಗೆ ನೋಡಲು ಕಣ್ಣುಗಳು ಮತ್ತು ಕೇಳುವ ಕಿವಿ (ವ. 18) ಮತ್ತು ಕಲ್ಲಾಗಿರದ ಹೃದಯ ಬೇಕಾಗಿತ್ತು (ವ. 17, ಹೋಲಿಸಿ 6:52).
3. ಯೇಸು “ಹುಳಿಹಿಟ್ಟು” ಎಂಬ ರೂಪಾಲಂಕಾರವನ್ನು ಸುವಾರ್ತೆಗಳಲ್ಲಿ ಐದು ಬಾರಿ ಬಳಸುತ್ತಾನೆ:

ಅ. ಮತ್ತಾಯ 13:33 ಮತ್ತು ಲೂಕ 13:21 ರಲ್ಲಿ ಕಂಡುಬರುವಂತೆ ದೇವರ ರಾಜ್ಯದ ಪ್ರಭಾವವನ್ನು ಹರಡುವುದರ ಬಗ್ಗೆ ಎರಡುಬಾರಿ ಸಕರಾತ್ಮಕವಾಗಿ ಹೇಳುತ್ತಾನೆ: ಹುಳಿಹಿಟ್ಟನ್ನು ಹಿಟ್ಟಿನಲ್ಲಿ ಕಲಸಿಟ್ಟಾಗ ಆ ಹಿಟ್ಟೆಲ್ಲಾ ಹುಳಿಯಾದಂತೆ ದೇವರ ರಾಜ್ಯವು ಸಹ ಲೋಕದಲ್ಲಿನ ಜನರ ಮೇಲೆ ಪ್ರಭಾವ ಬೀರುತ್ತದೆ.

ಆ. ಫರಿಸಾಯರ ವಿಷಯದಲ್ಲಿ ಮೂರುಬಾರಿ ನಕಾರಾತ್ಮಕವಾಗಿ ಬಳಸುತ್ತಾನೆ:

- ಮತ್ತಾಯ 16:6-12 (ಇಲ್ಲಿ ಯೇಸು ಫರಿಸಾಯರ ಮತ್ತು ಸದ್ದುಕಾಯರ ಬೋಧನೆಯನ್ನು ಹುಳಿಹಿಟ್ಟೆಂದು ಸೂಚಿಸುತ್ತಾನೆ, ವ. 12) ಮತ್ತು ಮಾರ್ಕ 8:15 (ಇಲ್ಲಿ ಯೇಸು ತಾನು ಯಾರೆಂಬುದನ್ನು ತಿಳಿಯಲು ಮನಸ್ಸಿಲ್ಲದಿರುವದನ್ನು ಸೂಚಿಸುತ್ತಾನೆ)ರಲ್ಲಿನ ಸಮಾಂತರ ವಾಕ್ಯಭಾಗಗಳಲ್ಲಿ ಎರಡುಬಾರಿ ಕಾಣಬಹದು. ಈ ಕಥೆಗಳು ಸಮಾಂತರವಾಗಿದ್ದರೂ ಯೇಸು ಎರಡು ವಿಭಿನ್ನವಾದ ರೀತಿಯಲ್ಲಿ "ಹುಳಿಹಿಟ್ಟೆಂಬ" ರೂಪಾಲಂಕಾರವನ್ನು ಉಪಯೋಗಿಸುತ್ತಾನೆ.
- ಮೂರನೇಬಾರಿ ಲೂಕ 12:1 ರಲ್ಲಿ ಸ್ವತಃ ಯೇಸು ಈ ರೂಪಾಲಂಕಾರವನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂದು ವಿವರಿಸುತ್ತಾನೆ: "ಫರಿಸಾಯರ ಕಪಟವೆಂಬ ಹುಳಿಹಿಟ್ಟಿನ ವಿಷಯದಲ್ಲಿ ಜಾಗರೂಕವಾಗಿರಲಿ".

4. "ಫರಿಸಾಯರ ಮತ್ತು ಹೆರೋದನ ಹುಳಿಹಿಟ್ಟು" ಎಂಬ ವಾಕ್ಯಭಾಗದಲ್ಲಿ ಯೇಸು ತನ್ನ ಶಿಷ್ಯರಿಗಾಗಿ ಇಟ್ಟುಕೊಂಡಿರುವ ಸಂದೇಶವು (ವ. 14-21) ಎರಡು ಭಾಗಗಳನ್ನು ಒಳಗೊಂಡಿದೆ:

   ಅ. ಮೊದಲನೆಯದಾಗಿ ಯೇಸು ಫರಿಸಾಯರ ಮತ್ತು ಹೆರೋದನ ಹುಳಿಹಿಟ್ಟಿನ ವಿಷಯವಾಗಿ ತನ್ನ ಶಿಷ್ಯರಿಗೆ ಎಚ್ಚರಿಸುತ್ತಾನೆ. ಯೇಸುವನ್ನು ಮತ್ತು ದೇವರ ರಾಜ್ಯದ ಕುರಿತ ಆತನ ಶುಭವಾರ್ತೆಯನ್ನು ಸ್ವೀಕರಿಸಲು ಒಪ್ಪದಿರುವ ಅವರಂತೆ ತನ್ನ ಶಿಷ್ಯರು ಇರಬಾರದೆಂದು ಯೇಸು ಬಯಸಿದನು. ಯೇಸು ಏನನ್ನು ಹೇಳುತ್ತಿದ್ದಾನೆಂಬುದನ್ನು ಆತನ ಶಿಷ್ಯರು ತಿಳಿದುಕೊಳ್ಳದೇ ಹೋದಾಗ (ಬೇತ್ಸಾಯಿದಕ್ಕೆ ಬರುವಾಗ ರೊಟ್ಟಿಯನ್ನು ತರಲಿಲ್ಲವೆಂದು ಆತನು ತಮ್ಮನ್ನು ದೂರುತ್ತಿದ್ದಾನೆಂಬುದಾಗಿ ಅವರು ಯೋಚಿಸಿದರು). ಯೇಸು ತನ್ನ ಸಂದೇಶದ ಮುಂದಿನ ಭಾಗಕ್ಕೆ ಹೋಗುತ್ತಾನೆ:

   ಆ. ಅನಂತರ ಯೇಸು ಮನಸ್ಸು ಕಲ್ಲಾಗಿರುವುದಕ್ಕಾಗಿ, ಕಣ್ಣು ಕಾಣದಿರುವುದಕ್ಕಾಗಿ, ಕಿವಿ ಕೇಳದಿರುವುದಕ್ಕಾಗಿ, ಮರೆತುಹೋಗಿರುವುದಕ್ಕಾಗಿ ತನ್ನ ಶಿಷ್ಯರನ್ನು ಬೈಯುತ್ತಾನೆ. ಈ ರೂಪಾಲಂಕಾರಗಳ ಮೂಲಕ ಯೇಸು ಹೇಳಿದ್ದೇನೆಂದರೆ ಫರಿಸಾಯರು ಮತ್ತು ಅರಸನಾದ ಹೆರೋದನಂತೆ ತನ್ನ ಶಿಷ್ಯರೂ ಸಹ ಯೇಸುವಿನ ನಿಜವಾದ ಗುರುತನ್ನು ಮತ್ತು ಎರಡು ಬಾರಿ ಊಟ ಮಾಡಿಸಿದ ಅದ್ಭುತಗಳ ಪ್ರಾಮುಖ್ಯತೆಯನ್ನು ಅರಿಯದವರಾಗಿದ್ದಾರೆ ಎಂಬುದಾಗಿದೆ.

5. ತಾನು ಮೆಸ್ಸೀಯನೆಂಬುದಾಗಿ ಯಾರಿಗೂ ಹೇಳಬಾರದೆಂದು ಯೇಸು ಶಿಷ್ಯರಿಗೆ ಖಂಡಿತವಾಗಿ ಹೇಳಿದನು (ವ. 27-30). ಯಾಕೆಂದರೆ ಇದುವರೆಗೂ ಸಹ ಅವರು ಆತನು ಯಾವ ರೀತಿಯ ಮೆಸ್ಸೀಯನೆಂಬುದನ್ನು ಅರಿತಿರಲಿಲ್ಲ. ಯೇಸು ಯೆಹೂದ್ಯರನ್ನು ರೋಮನ್ ಚಕ್ರವರ್ತಿಗಳ ಹಿಡಿತದಿಂದ ಬಿಡಿಸುವ ರಾಜಕೀಯ ನಾಯಕನಾಗುವುದಕ್ಕಾಗಿ ಮತ್ತು ಯೆರೂಸಲೇಮಿನಲ್ಲಿ ತಾನೊಬ್ಬ ಸ್ವತಂತ್ರ ಯೆಹೂದಿ ನಾಯಕನಾಗುವುದಕ್ಕಾಗಿ ಜನಿಸಿರಲಿಲ್ಲ. ಅಲ್ಲಿ , ಆತನು ಯೆಶಾಯನ ಪ್ರವಾದನೆಯ ನೆರವೇರಿಕೆಗಾಗಿ ಬಂದಿದ್ದನು. ಆತನು ತನ್ನ ಜನರ ಪಾಪಗಳಿಗಾಗಿ ಬಾಧೆಪಟ್ಟು, ಸಾಯಲಿರುವ ಒಬ್ಬ ಸೇವಕನಾಗಿದ್ದನು (ನೋಡಿ ಯೆಶಾಯ 52:13 – 53:12).

6. ಯೇಸು ಪೇತ್ರನನ್ನು "ಸೈತಾನ" ನೆಂಬುದಾಗಿ ಕಠೋರವಾಗಿ ಗದರಿಸಿದನು (ವ. 33). ಯಾಕೆಂದರೆ ಪೇತ್ರನು ಆತನ ಯೋಜನೆಯನ್ನು ನೆರವೇರುವುದನ್ನು ತಡೆಯಲು ಬಯಸಿದನು: ಅದೆಂದರೆ ಯೆಹೂದಿ ನಾಯಕರಿಂದ ತಿರಸ್ಕರಿಸಲ್ಪಟ್ಟು ಅವಮಾನಕರವಾದ ರೀತಿಯಲ್ಲಿ ಶಿಲುಬೆ ಮೇಲೆ ಮರಣಹೊಂದಿ, ಮೂರು ದಿನಗಳಾದ ಮೇಲೆ ಎದ್ದುಬರುವುದು (ವ. 31-32).

7. ವಚನ 35 ರಲ್ಲಿನ "ಪ್ರಾಣ" ಎಂಬ ಹೇಳಿಕೆ ಕುರಿತಾಗಿ ತನ್ನ ಕೇಳುಗರು ಈ ರೀತಿಯ ಸಾರಾಂಶಕ್ಕೆ ಬರಬೇಕೆಂದು ಯೇಸು ಬಯಸಿದನು: ನಮ್ಮ ಆತ್ಮೀಕ ಜೀವಿತವು ಈ ಲೋಕದಲ್ಲಿನ ನಮ್ಮ ಶಾರೀರಿಕ ಜೀವಿತಕ್ಕಿಂತ ಅತಿ ಪ್ರಾಮುಖ್ಯವಾದುದ್ದಾಗಿದೆ.

ಕ್ರೈಸ್ತ ವಿಶ್ವಾಸಿಗಳು ಮತ್ತು ಯೇಸುವಿನ ಹಿಂಬಾಲಕರೆಂದು ಕರೆದುಕೊಳ್ಳುವ ನಾವುಗಳು ಈ ಲೋಕದಲ್ಲಿನ ನಮ್ಮ ಜೀವ(ಪ್ರಾಣ)ದ ಮೇಲೆ ಹೆಚ್ಚು ಗಮನ ಹರಿಸುವಾಗ ನಾವು ಯೇಸು ಮತ್ತು ದೇವರ ರಾಜ್ಯದ ಬಗ್ಗೆ ಮರೆತುಬಿಡುತ್ತೇವೆ, ಮತ್ತು ನಾವು ನಮ್ಮ ಆತ್ಮೀಕ/ನಿತ್ಯಜೀವವನ್ನು ಕಳೆದುಕೊಳ್ಳುತ್ತೇವೆ. ಇನ್ನೊಂದು ವಿಧದಲ್ಲಿ ಒಂದು ವೇಳೆ ಯೇಸು ಅಥವಾ ಸುವಾರ್ತೆಯ ನಿಮಿತ್ತ ನಾವು ಕೊಲ್ಲಲ್ಪಟ್ಟರೆ ನಮ್ಮ ಜೀವವು ಕಳೆದುಹೋಗುವುದಿಲ್ಲ ಯಾಕೆಂದರೆ ನಾವು ನಿತ್ಯಜೀವವನ್ನು ಸಂಪಾದಿಸುತ್ತೇವೆ.

8. ವಚನ 36-37 ರಲ್ಲಿನ ಯೇಸುವಿನ ಎರಡು ಪ್ರಶ್ನೆಗಳು ಅಲಂಕಾರಿಕವಾಗಿವೆ. ಅಲಂಕಾರಿಕ ಪ್ರಶ್ನೆಗೆ ಯಾವುದೇ ನೈಜ ಉತ್ತರವಿಲ್ಲ. ಹಾಗಾಗಿ ಇದೊಂದು ರೀತಿಯ ಹೇಳಿಕೆ ಅಥವಾ ಪ್ರಶ್ನೆಯ ವ್ಯಾಕರಣ ರೂಪದಲ್ಲಿನ ಒಂದು ಹೇಳಿಕೆಯಂತಿದೆ. ಮೊದಲ ಪ್ರಶ್ನೆಯ ಬದಲಾಗಿ ಯೇಸು "ನಿತ್ಯಜೀವವು ಈ ಲೋಕದ ಐಶ್ವರ್ಯಕ್ಕಿಂತಲೂ ಅಮೂಲ್ಯವಾಗಿದೆ ಎಂದು ಹೇಳಬಹುದಿತ್ತು ಮತ್ತು ಎರಡನೇ ಪ್ರಶ್ನೆಯ ಬದಲಾಗಿ "ಲೋಕದ ಸಂಪತ್ತಿನಿಂದ ನೀವು ನಿತ್ಯಜೀವವನ್ನು ಕೊಂಡುಕೊಳ್ಳು ಸಾಧ್ಯವಿಲ್ಲ" ಎಂದು ಯೇಸು ಹೇಳಬಹುದಿತ್ತು.

9. ವಚನ 38 ರಲ್ಲಿನ ಯೇಸುವಿನ ಹೇಳಿಕೆಯನ್ನು ಈ ರೀತಿಯಾಗಿ ವಿವರಿಸಬಹುದು: ಈ ಪಾಪಮಯವಾದ ಲೋಕದಲ್ಲಿ ಯೇಸುವಿನ ಒಬ್ಬ ಹಿಂಬಾಲಕ ಅಥವಾ ಒಬ್ಬ ಶಿಷ್ಯನು ಯೇಸುವಿನ ಬಗ್ಗೆ ಅಥವಾ ದೇವರ ರಾಜ್ಯದ ಕುರಿತ ಸುವಾರ್ತೆಯ ಬಗ್ಗೆ ನಾಚಿಕೊಳ್ಳಬಾರದು. ಒಬ್ಬ ಕ್ರೈಸ್ತ ವಿಶ್ವಾಸಿಯು ತನ್ನ ರಕ್ಷಕ ಮತ್ತು ಆತನ ಸೇವೆಯ ಬಗ್ಗೆ ಈಗ ನಾಚಿಕೊಂಡರೆ, ತನ್ನ ಎರಡನೇ ಬರೋಣದಲ್ಲಿ ಯೇಸು ಸಹ ಅವರ ಬಗ್ಗೆ ನಾಚಿಕೊಳ್ಳುವನು.

10. ವಚನ 34-38 ರಲ್ಲಿನ ಯೇಸುವಿನ ಮಾತುಗಳಿಂದ ಶಿಷ್ಯತ್ವದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ:

ಅ. ಯೇಸುವಿನ ಶಿಷ್ಯರಾಗಬೇಕೆಂದಿರುವವರು, ಆತನನ್ನು ಹಿಂಬಾಲಿಸುವವರು (ವ. 34), ಆತನ ಹೆಜ್ಜೆಜಾಡಿನಲ್ಲಿಯೇ ನಡೆಯಬೇಕು. ಹಾಗಾಗಿ ಕ್ರೈಸ್ತ ವಿಶ್ವಾಸಿಗಳಾದ ನಾವು ಹೆಚ್ಚಾಚ್ಚಾಗಿ ಆತನಂತೆ ಆಗಬೇಕೆಂದು ಯೇಸು ಬಯಸುತ್ತಾನೆ. ಆ ರೀತಿ ಆಗಲು ಇರುವ ಒಂದು ಮಾರ್ಗವೆಂದರೆ ಹೊಸ ಒಡಂಬಡಿಕೆಯ ಪಠ್ಯಗಳಲ್ಲಿ ಆತನ ಬಗ್ಗೆ ಓದುವುದಾಗಿದೆ. ಯೇಸು ಕ್ರಿಸ್ತನು ನಾಲ್ಕು ಸುವಾರ್ತೆಗಳಲ್ಲಿ ಹೇಗೆ ವರ್ಣಿಸಲ್ಪಟ್ಟಿದ್ದಾನೆ ಮತ್ತು ಪತ್ರಿಕೆಗಳ ಬರಹಗಾರರಿಂದ ಆತನನ್ನು ಹೇಗೆ ಬಿಂಬಿಸಲಾಗಿದೆ ಎಂದು ಯೇಸುವಿನ ಬಗ್ಗೆ ಅಭ್ಯಾಸಿಸಿ, ಧ್ಯಾನಿಸುವಾಗ ನಾವು ಆತನನ್ನು ಇನ್ನೂ ಉತ್ತಮವಾಗಿ ತಿಳಿಯುತ್ತೇವೆ. ಇನ್ನೊಂದು ವಿಧವೆಂದರೆ ಪ್ರಾರ್ಥನೆಯಲ್ಲಿ ಆತನೊಂದಿಗೆ ಸಮಯ ಕಳೆಯುವದು ಮತ್ತು ಪವಿತ್ರಾತ್ಮನು ನಿಮ್ಮ ಹೃದಯಗಳಲ್ಲಿ ಆತನ ಚಿತ್ರಣವನ್ನು ಸ್ಪಷ್ಟವಾಗಿ ಚಿತ್ರಿಸುವಂತೆ ಅನುಮತಿಸುವುದಾಗಿದೆ. ನಾವು ಆತನಂತೆ ಆಗಬೇಕಾದರೆ ಆತನನ್ನು ಹೆಚ್ಚಾಗಿ ತಿಳಿದುಕೊಳ್ಳಲೇಬೇಕು.

ಆ. ಯೇಸುವಿನ ಶಿಷ್ಯರಾಗಬೇಕೆಂದಿರುವವರು ತಮ್ಮನ್ನು ತಾವೇ ನಿರಾಕರಿಸಬೇಕು (ವ. 34). ಹೇಗೆಂದರೆ ಎಲ್ಲಾ ಕ್ರೈಸ್ತ ವಿಶ್ವಾಸಿಗಳು ಸಾಧುಗಳು ಅಥವಾ ವಿರಕ್ತ(ಸನ್ಯಾಸಿ)ಗಳಾಗಬೇಕೆಂದು ಯೇಸು ಬಯಸುತ್ತಾನೆಂದರ್ಥವಲ್ಲ. ಆದರೆ ಲೋಕವನ್ನೇ ನಾವು ಕೇಂದ್ರೀಕರಿಸಬಾರದೆಂಬುದು ಇದರ್ಥವಾಗಿದೆ. ನಮ್ಮ ಗಮನವು ನಮ್ಮಿಂದ ಆತನು ಮತ್ತು ಆತನ ರಾಜ್ಯದೆಡೆಗೆ ಬದಲಾಗುತ್ತದೆ.

ಇ. ಯೇಸುವಿನ ಶಿಷ್ಯರಾಗಬೇಕೆಂದಿರುವವರು ಯೇಸುವಿನ ಮತ್ತು ದೇವರ ರಾಜ್ಯದ ನಿಮಿತ್ತ ತಮ್ಮ ಶಿಲುಬೆಯನ್ನು ಹೊತ್ತುಕೊಂಡು ಹೋಗಬೇಕು (ವ. 34-35). ಇದರರ್ಥ ಕ್ರೈಸ್ತ ವಿಶ್ವಾಸಿಗಳಾದ ನಾವು ಯೇಸುವಿನೊಂದಿಗೆ ಜೀವಿಸುವ ನಮ್ಮ ಜೀವಿತವು ಆತನ ರಾಜ್ಯಕ್ಕಾಗಿ ನಾವು ಪಡುವ ಬಾಧೆ ಮತ್ತು ಮರಣವನ್ನೊಳಗೊಂಡಿರುತ್ತದೆಂದು ತಿಳಿದುಕೊಳ್ಳಬೇಕು. ನಮ್ಮ ಕರ್ತನೂ ರಕ್ಷಕನೂ ಆದ ಯೇಸು ತಿರಸ್ಕಾರ, ಮಹಾಬಾಧೆ ಮತ್ತು ಮರಣವನ್ನೆಲ್ಲಾ ಹಾದು ಹೋದನು (ವ. 31) ಮತ್ತು ಆತನ ಹೆಜ್ಜೆಜಾಡಿನಲ್ಲಿರುವ ನಮ್ಮ ಜೀವನವು ಆತನಂತೆ ನಾವು ಬಾಧೆಗಳನ್ನು ಹಾದುಹೋಗಬೇಕಾದರೆ ನಾವು ಆಶ್ಚರ್ಯಪಡಬೇಕಿಲ್ಲ.

ನಮ್ಮ ಜೀವನವು ನಮಗೆ ಸ್ವಂತದಲ್ಲ. ಅವರು ಸಂಪೂರ್ಣವಾಗಿ ಯೇಸುವಿಗೆ ಮತ್ತು ಆತನ ರಾಜ್ಯಕ್ಕೆ ಸಮರ್ಪಿಸಲ್ಪಟ್ಟವರಾಗಿದ್ದಾರೆ.

ಈ. ಯೇಸುವಿನ ಶಿಷ್ಯರಾಗಬೇಕೆಂದಿರುವವರು ಸರಿಯಾದ ಪ್ರಧಾನ್ಯತೆಯನ್ನು ಹೊಂದಿರಬೇಕು (ವ. 35-36). ಮೇಲ್ಕಂಡ ಪ್ರಶ್ನೆ 7ಮತ್ತು 8 ರ ಉತ್ತರವನ್ನು ನೋಡಿರಿ.

ಉ. ಯೇಸುವಿನ ಶಿಷ್ಯರು ಯೇಸು ಮತ್ತು ದೇವರ ರಾಜ್ಯದ ಕುರಿತ ಆತನ ಸುವಾರ್ತೆಯ ಬಗ್ಗೆ ನಾಚಿಕೆ ಪಡಬಾರದು (ವ. 38). ಮೇಲ್ಕಂಡ ಪ್ರಶ್ನೆ 9 ರ ಉತ್ತರವನ್ನು ನೋಡಿರಿ.

11. "ಇಲ್ಲಿ ನಿಂತಿರುವವರಲ್ಲಿ ಕೆಲವರು ದೇವರ ರಾಜ್ಯವು ಪ್ರಭಲವಾಗಿ ಬಂದಿರುವುದನ್ನು ನೋಡುವ ತನಕ ಮರಣಹೊಂದುವುದಿಲ್ಲ" ಎಂಬ ಯೇಸುವಿನ ಹೇಳಿಕೆಯ ಮೌಲ್ಯಮಾಪನ:

- ಹೆಚ್ಚಿನ ಸತ್ಯವೇದ ಪಂಡಿತರು ಪರ್ಯಾಯ ಮೊದಲ ಅರ್ಥವಿವರಣೆಗೆ ಪ್ರಾಮುಖ್ಯತೆ ಕೊಡುವರು. ಇದು ಮೂರೂ ಸುವಾರ್ತೆಗಳಲ್ಲಿನ ಯೇಸುವಿನ ರೂಪಾಂತರದ ಹಿನ್ನಲೆಯಿಂದ ಬೆಂಬಲಿಸಲ್ಪಟ್ಟಿದೆ. ಅಲ್ಲದೆ ಇದು 2 ಪೇತ್ರ 1:16-18 ರಿಂದ ಸಹ ಬೆಂಬಲಿಸಲ್ಪಟ್ಟಿದೆ. ಇಲ್ಲಿ ಪೇತ್ರನು ಯೇಸುವಿನ ರೂಪಾಂತರಕ್ಕೆ ಬಳಸುವ ಪ್ರಭಾವ ಎಂಬ ಪದವನ್ನು ಬಳಸುತ್ತಾನೆ.
- ಪರ್ಯಾಯ 2, 3 ಮತ್ತು 4 ಸಹ ಉತ್ತಮವಾಗಿವೆ. ಇವೆಲ್ಲದರಲ್ಲಿ ಯೇಸು ತನ್ನ ರಾಜ್ಯದ ಪ್ರಭಾವದೊಡನೆ ಬರುವುದು ಇನ್ನೂ ಪೂರ್ಣವಾಗಿ ತಿಳಿದುಕೊಂಡಿರುವುದರಲ್ಲಿ ಬಹುಶಃ ಯೇಸು ತನ್ನ ಮನಸ್ಸಿನಲ್ಲಿ ಈ ಮೂರು ಪರ್ಯಾಯಗಳನ್ನು ಒಟ್ಟಾಗಿ ಇಟ್ಟುಕೊಂಡಿರಬೇಕು: ತನ್ನ ಮರಣ/ಪುನರುತ್ಥಾನ, ಪವಿತ್ರಾತ್ಮನ ಸುರಿಸುವಿಕೆಯ ಮೂಲಕ ದೇವರ ರಾಜ್ಯವನ್ನು ತರುವದು ಮತ್ತು ತನ್ನ ಕೆಲವು ಶಿಷ್ಯರು ಪ್ರಾಮುಖ್ಯ ಪಾತ್ರ ವಹಿಸಿದ ಆದಿಸಭೆಯ ಬಲವಾದ ಸೇವೆಯಿರಬಹುದು.
- ಆದರೆ ಕೊನೆಯ ಪರ್ಯಾಯ ಅರ್ಥವಿವರಣೆ (ಕ್ರಿ.ಶ. 70 ರಲ್ಲಿ ಯೆರೂಸಲೇಮಿನ ದೇವಾಲಯದ ನಾಶನ) ಅಷ್ಟು ಒಪ್ಪುವಂಥದಲ್ಲ, ಯಾಕೆಂದರೆ ಯೆರೂಸಲೇಮಿನ ಮೇಲಿನ ನ್ಯಾಯತೀರ್ಪು ದೇವರ ರಾಜ್ಯದ ಸಕಾರಾತ್ಮಕ ಬೆಳವಣಿಗೆಯನ್ನು ತೋರಿಸುವುದಿಲ್ಲ.



**ಉತ್ತರಗಳು: ಮಾರ್ಕ ಅಧ್ಯಾಯ 9**

**ಪ್ರಶ್ನೆಗಳಿಗೆ ಉತ್ತರಗಳು**

1. ರೂಪಾಂತರ ಕಥೆಯ ಹಿನ್ನಲೆ: ಇದು (8:31 – 9:1) ಈ ಒಂದು ವಾಕ್ಯಭಾಗದಿಂದ ಮುಂದುವರೆಯುತ್ತದೆ. ಇದರಲ್ಲಿ ಯೇಸು ಮರಣ ಮತ್ತು ಬಾಧೆಯನ್ನು ಮುಂತಿಳಿಸುತ್ತಾನೆ ಮತ್ತು ದೇವರ ರಾಜ್ಯವು ಪ್ರಭಲವಾಗಿ ಬರುವವರೆಗೆ ತನ್ನ ಶಿಷ್ಯರಲ್ಲಿ ಕೆಲವರು ಸಾಯುವುದಿಲ್ಲವೆಂಬ ಮುಕ್ತಾಯದೊಂದಿಗೆ ಶಿಷ್ಯತ್ವದ ಕ್ರಯದ ಬಗ್ಗೆ ಉಪದೇಶಿಸುತ್ತಾನೆ. ಈ ಕಥೆಯ ನಂತರ ಯೇಸು ಒಬ್ಬ ದೆವ್ವ ಹಿಡಿದ ಹುಡುಗನ್ನನ್ನು ಗುಣಪಡಿಸುತ್ತಾನೆ (ವ. 9:14-27). ರೂಪಾಂತರವು ಒಂದು ಎತ್ತರವಾದ ಬೆಟ್ಟದಲ್ಲಿ ಸಂಭವಿಸುತ್ತದೆ ಮತ್ತು ಆ ಸಮಯದಲ್ಲಿ ಮೂವರು ಶಿಷ್ಯರಾದ ಪೇತ್ರ, ಯಾಕೋಬ ಮತ್ತು ಯೋಹಾನ ಮಾತ್ರ ಇದ್ದರು (ವ. 2).
2. ಯೇಸು ಬೆಟ್ಟದಲ್ಲಿ ಬದಲಾದನು: ಆತನ ಬಟ್ಟೆಗಳು ಅಸಾಮಾನ್ಯ ರೀತಿಯಲ್ಲಿ ಬೆಳ್ಳಗಾಗಿ ಹೊಳೆದವು.
3. ಬೆಟ್ಟದ ಮೇಲೆ ಯೇಸುವಿನೊಂದಿಗೆ ಮಾತಾನಾಡಿದ ಇಬ್ಬರು ಪುರುಷರು ಹಳೆಯ ಒಡಂಬಡಿಕೆಯನ್ನು ಸೂಚಿಸುವ ಮೋಶೆ ಮತ್ತು ಹಳೇ ಒಡಂಬಡಿಕೆಯ ಪ್ರವಾದಿಗಳನ್ನು ಪ್ರತಿನಿಧಿಸುವ ಎಲೀಯ.
4. ಯೇಸುವಿನ ರೂಪಾಂತರಕ್ಕೆ ಶಿಷ್ಯರು ಗಲಿಬಿಲಿಗೊಂಡು ಹೆದರಿದರು (ವ. 5-6).
5. ಮೋಡದೊಳಗಿಂದ ಬಂದ ಆಕಾಶವಾಣಿಯ ಸಂದೇಶ (ವ. 7):

   ಅ. ಇದು ಯೇಸುವು ದೇವರ ಮಗನು ಮತ್ತು ದೇವರಿಗೆ ಪ್ರಿಯನೆಂದು ಸಾರಿತು.

   ಆ. ಅದು ಯೇಸುವಿನ ಮಾತನ್ನು ಕೇಳಬೇಕೆಂದು ಆತನ ಶಿಷ್ಯರಿಗೆ ಹೇಳಿತು.



6. ಬೆಟ್ಟವಿಳಿದು ಬರುವಾಗ ಯೇಸು ತನ್ನ ಶಿಷ್ಯರಿಗೆ ತಾನು ಸತ್ತು ಜೀವಂತನಾಗಿ ಎದ್ದು ಬರುವತನಕ ಬೆಟ್ಟದ ಮೇಲೆ ಆದ ಅನುಭವವನ್ನು ಯಾರಿಗೂ ತಿಳಿಸಬೇಡಿರಿ ಎಂದು ಹೇಳಿದನು (ವ. 9).
7. ಬೆಟ್ಟವಿಳಿದು ಬರುವಾಗ ಎರಡು ಸಂಗತಿಗಳ ಬಗ್ಗೆ ಶಿಷ್ಯರು ಗೊಂದಲಕ್ಕೀಡಾಗಿದ್ದರು (ವ. 10-13):

   ಅ. "ಮನುಷ್ಯಕುಮಾರನು ಸತ್ತು ಜೀವಿತನಾಗಿ ಎದ್ದಬರುವುದು" ಎಂದರೆ ಏನರ್ಥ?

   ಆ. ಯೇಸುವು ಮೆಸ್ಸೀಯನಾಗಿದ್ದರೆ ಎಲೀಯನು ಮೊದಲು ಬರುವನೆಂಬುದಾಗಿ ಹಳೆಯ ಒಡಂಬಡಿಕೆಯ ಪ್ರವಾದಿಗಳು ಯಾಕೆ ಹೇಳಿದರು?
8. ಮೂರ್ಛಾರೋಗಿಯ ಸುತ್ತ ಈ ಜನರೆಲ್ಲ ಸೇರಿದ್ದರು (ವ. 14-17):

   ಅ. ರೂಪಾಂತರದ ವೇಳೆ ಯೇಸುವಿನೊಂದಿಗೆ ಇರದ ಒಂಭತ್ತು ಶಿಷ್ಯರು

ಆ. ಕೆಲಮಂದಿ ಶಾಸ್ತ್ರಿಗಳು

ಇ. ಜನರ ದೊಡ್ಡ ಗುಂಪು

ಈ. ಮೂರ್ಛಾರೋಗದಿಂದ ಬಳಲುತ್ತಿದ್ದ ಹುಡುಗನ ತಂದೆ

9. ಮೂಗದೆವ್ವವು ಆ ಹುಡುಗನನ್ನು ಬಾಲ್ಯದಿಂದಲೂ ಈ ರೀತಿಯಾಗಿ ಪೀಡಿಸಿತು (ವ. 17-21):
    - ಅದು ಆತನನ್ನು ಮೂಕನನ್ನಾಗಿ ಮಾಡಿತು.
    - ಅದು ಆತನನ್ನು ರೋಗ ಪೀಡಿತನನ್ನಾಗಿ ಮಾಡಿತು (ನೊರೆ ಸುರಿಸುವುದು, ಹಲ್ಲು ಕಡಿಯುವುದು, ನೆಲದ ಮೇಲೆ ಬೀಳಿಸುವುದು).
    - ಯೇಸು ಆ ಮೂಗದೆವ್ವವನ್ನು "ಎಲೈ ಕಿವುಡಾದ ಮೂಗದೆವ್ವವೇ" ಎಂದು ಕರೆಯುತ್ತಾನೆ (ವ. 25). ಇದರರ್ಥ ಆ ಹುಡುಗನು ಮೂಕನಾಗಿದ್ದನೆಂಬುದನ್ನು ಸೂಚಿಸುತ್ತದೆ.
10. ಯೇಸು ಗದರಿಸಿದಾಗ ಮೂಗದೆವ್ವವು ಅಬ್ಬರಿಸಿ ಹುಡುಗನನ್ನು ಒದ್ದಾಡಿಸಿ ಬಿಟ್ಟುಹೋಯಿತು (ವ. 25-27).
11. ಆ ಹುಡುಗನನ್ನು ಗುಣಪಡಿಸಿದ ನಂತರ ಶಿಷ್ಯರು ಯೇಸುವಿನ ಬಳಿ ಬಂದು ಅದನ್ನು ನಮ್ಮಿಂದ ಯಾಕೆ ಬಿಡಿಸಲು ಆಗಲಿಲ್ಲವೆಂದು ಕೇಳಿದರು. ಆಗ ಯೇಸು ಅದಕ್ಕೆ ಈ ರೀತಿಯ ದೆವ್ವವು ಪ್ರಾರ್ಥನೆ ಮತ್ತು ಉಪವಾಸದಿಂದ ಮಾತ್ರ ಬಿಟ್ಟುಹೋಗುತ್ತದೆ ಎಂದು ಹೇಳಿದನು (ವ. 28-29).
12. ಯೇಸು ಗಲಿಲಾಯವನ್ನು ಹಾದುಹೋಗುವಾಗ ಆತನ ಸೇವೆ (ವ. 30-32):

    ಅ. ಆತನ ಬಹಿರಂಗ ಸೇವೆಯು ಮುಗಿದಂತೆ ತೋರುತ್ತದೆ: ಆತನು ಜನರ ಗುಂಪಿನೊಂದಿಗೆ ಮಾತಾಡುತ್ತಿರಲಿಲ್ಲ ಮತ್ತು ಯಾವುದೇ ಅದ್ಭುತಗಳನ್ನು ಮಾಡಲಿಲ್ಲ. ಆತನು ಅಲ್ಲಿರುವುದನ್ನು ಜನರಿಗೆ ಗೊತ್ತಾಗಬಾರದೆಂದು ಆತನು ಬಯಸಿದನು.

    ಆ. ಬದಲಾಗಿ ಆತನು ತನ್ನ ಶಿಷ್ಯರಿಗೆ ಬೋಧಿಸುವುದರಲ್ಲಿ ತೊಡಗಿಕೊಂಡಿದ್ದನು ಮತ್ತು ಆತನ ಬೋಧನೆಯು ಆತನ ಬಾಧೆ, ಮರಣ ಮತ್ತು ಪುನರುತ್ಥಾನದ ಮೇಲೆ ಕೇಂದ್ರೀಕೃತವಾಗಿತ್ತು.
13. ಶಿಷ್ಯರು ಯೇಸುವಿನ ಬೋಧನೆಯ ಅರ್ಥವೇನೆಂದು ಕೇಳಲಿಲ್ಲ, ಯಾಕೆಂದರೆ ಆತನು ಏನನ್ನು ಹೇಳುತ್ತಿದ್ದಾನೆಂಬುದು ಅವರಿಗೆ ಅರ್ಥವಾಗದೇ ಹೋದದ್ದರಿಂದ ಆತನನ್ನು ಕೇಳುವುದಕ್ಕೆ ಅವರು ಅಂಜಿದರು (ವ. 32).
14. ಕಪೆರ್ನೌಮಿನ ರಸ್ತೆಯಲ್ಲಿ ಶಿಷ್ಯರು ತಮ್ಮಲ್ಲಿ ಹೆಚ್ಚಿನವನು ಯಾರೆಂಬುದಾಗಿ ವಾದಿಸುತ್ತಿದ್ದರು (ವ. 33-34).
15. ಎಲ್ಲರ ಆಳು ಆಗಿರುವವನೇ ಪರಲೋಕದಲ್ಲಿ ಹೆಚ್ಚಿನವನಾಗುವನು ಎಂದು ಯೇಸು ವಿವರಿಸುತ್ತಾನೆ (ವ. 35).
16. ಯೇಸುವಿನ ಹನ್ನೆರಡು ಶಿಷ್ಯರಿಗೆ ಸೇರದೇ ಇರುವವನೊಬ್ಬನು ಯೇಸುವಿನ ಹೆಸರಿನಲ್ಲಿ ದೆವ್ವವನ್ನು ಬಿಡಿಸುತ್ತಿದ್ದಾನೆಂಬ ದೂರನ್ನು ಯೋಹಾನನು ಯೇಸುವಿನ ಬಳಿಗೆ ತಂದನು (ವ. 38-41).
17. ಯೇಸು ಯೋಹಾನನ ಮಾತನನ್ನು ಒಪ್ಪಲಿಲ್ಲ. ಬದಲಾಗಿ ಆತನು ಯೇಸುವನ್ನು ಅಂಗೀಕರಿಸಿ ಆತನ ಹೆಸರಿನಲ್ಲಿ ಸೇವೆ ಮಾಡುವ ಯಾವನೇ ಆಗಲಿ, ಒಂದು ವೇಳೆ ಆ ಸೇವೆಯು ಬಾಯಾರಿದವರಿಗೆ ಒಂದು ತಂಬಿಗೆ ನೀರು ಕೊಡುವುದಷ್ಟೇ ಆದರೂ ಸಹ ಅದು ಯೇಸುವಿಗೆ ವಿರೋಧವಾದುದ್ದಲ್ಲ (ವ. 38-41) ಎಂದು ಹೇಳುತ್ತಾನೆ.
18. ವಚನ 43-48 ರಲ್ಲಿ ಯೇಸು ಒಬ್ಬ ವಿಶ್ವಾಸಿಯನ್ನು ಪಾಪದಲ್ಲಿ ಬೀಳುಸುವ ದೇಹದ ಮೂರು ಅಂಗಗಳ ಬಗ್ಗೆ ತಿಳಿಸುತ್ತಾನೆ:

    ಅ. ನಿನ್ನ ಕೈ: ನೀನು ಮಾಡುವ ಕೆಲಸ

    ಆ. ನಿನ್ನ ಕಾಲು: ನೀನು ಹೋಗು ಸ್ಥಳ

    ಇ. ನಿನ್ನ ಕಣ್ಣು: ನೀನು ನೋಡುವ ವಸ್ತು

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಎಲೀಯ ಮತ್ತು ಮೋಶೆ ಯೇಸುವಿನೊಂದಿಗೆ ಮಾತಾಡುತ್ತಿದ್ದರೆಂಬುದಾಗಿ ಮಾರ್ಕನು ಹೇಳುತ್ತಾನೆ (ವ. 4). ಈ ಘಟನೆ ಕುರಿತ ಲೂಕನ ವಿವರವು (ಲೂಕ 9:29-36) ಅವರ ಮಾತಿನ ವಿಷಯವು ಯೆರೂಸಲೇಮಿನಲ್ಲಾಗುವ ಯೇಸುವಿನ ನಿರ್ಗಮನ(ಮರಣ)ದ ಕುರಿತಾಗಿತ್ತೆಂಬುದಾಗಿ ಹೇಳುತ್ತದೆ (ಲೂಕ 9:31).
2. ಯಾಕೆ ಪೇತ್ರನು ಯೇಸು, ಮೋಶೆ ಮತ್ತು ಎಲೀಯರಿಗಾಗಿ ಪರ್ಣಶಾಲೆಗಳನ್ನು ಕಟ್ಟಲು ಬಯಸಿದನೆಂಬುದು ಸ್ಪಷ್ಟವಾಗಿ ತಿಳಿಯಲಾಗಲ್ಲ (ವ. 5): ಬಹುಶಃ ಆತನು ದೇವರು ಪುನಃ ಮನುಷ್ಯರೊಂದಿಗೆ ಸಂಪರ್ಕಿಸುವಂತೆ ಹೊಸದಾದ ಗುಡಾರವನ್ನು ಹಾಕಲು ಬಯಸಿರಬಹುದು (ಹೋಲಿಸಿ ವಿಮೋಚನಕಾಂಡ 29:42) ಅಥವಾ ಆತನು ಪರ್ಣಶಾಲೆಗಳ ಹಬ್ಬಗಳಲ್ಲಿ ಬಳಸಲಾಗುವ ಗುಡಾರಗಳ ಬಗ್ಗೆ ಯೋಚಿಸಿರಬಹುದು (ನೋಡಿ ಯಾಜಕ. 23:42). ಅಥವಾ ಆತನು ಆ ಬೆಟ್ಟದಲ್ಲಿನ ಆ ಅದ್ಭುತವಾದ ಅನುಭವವು ಹಾಗೆಯೇ ಮುಂದುವರೆಯಲು ಬಯಸಿರಬಹುದು. ಇದನ್ನು ಲೂಕನ ಸುವಾರ್ತೆಯಲ್ಲಿ ಕಾಣಬಹುದು: "ಇವರು ಆತನನ್ನು ಬಿಟ್ಟುಹೋಗುತ್ತಿರುವಾಗ ಪೇತ್ರನು ಯೇಸುವಿಗೆ ಗುರುವೇ ನಾವು ಇಲ್ಲೇ ಇರುವುದು ಒಳ್ಳೇದು ಎಂದು ಹೇಳಿದನು" (ಲೂಕ. 9:33).
3. ರೂಪಾಂತರ ಘಟನೆಯ ಒಂದು ಹೋಲಿಕೆ (ಮಾರ್ಕ 9:2-14, ಮತ್ತಾಯ 17:1-13, ಲೂಕ 9:29-36):

   ಅ. ಈ ಮೂರು ವಿವರಗಳ ಹಿನ್ನಲೆಯು ಒಂದೇ ಆಗಿದೆ.

   ಆ. ಒಂದು ಅನಿರೀಕ್ಷಿತ ವ್ಯತ್ಯಾಸವೆಂದರೆ ಘಟನೆಯ ಸಮಯವಾಗಿದೆ: ಮತ್ತಾಯ ಮತ್ತು ಮಾರ್ಕದಲ್ಲಿ "ಆರು ದಿವಸಗಳಾದ ಮೇಲೆ ಎಂದಿದ್ದರೆ ಲೂಕದಲ್ಲಿ ಸುಮಾರು ಎಂಟು ದಿವಸಗಳಾದ ಮೇಲೆ ಎಂದಿದೆ. ಈ ವ್ಯತ್ಯಾಸವನ್ನು ಆ ದಿನಗಳಲ್ಲಿನ ಸಮಯವನ್ನು ಎರಡು ರೀತಿಯಲ್ಲಿ ಲೆಕ್ಕ ಮಾಡುವ ಮೂಲಕ ಸುಲಭವಾಗಿ ವಿವರಿಸಬಹುದು. ಒಂದು ವಿಧವೆಂದರೆ ಇಡೀ ದಿನಗಳನ್ನು ಲೆಕ್ಕಮಾಡುವುದು (ಆರು ಪೂರ್ಣದಿನಗಳಾದ ಮೇಲೆ). ಇನ್ನೊಂದು ವಿಧವೆಂದರೆ ದಿನದ ಒಂದು ಭಾಗವನ್ನು ಸಹ ಸೇರಿಸುವುದು. ಹಾಗೆಯೇ ನಾವು "ಏಳು ದಿನಗಳಾದ ಮೇಲೆ….ಅಥವಾ ಒಂದು ವಾರದ ನಂತರ ಎಂದು ಸಹ ಬರೆಯಬಹುದು.

   ಇ. ಮಾರ್ಕನ ವಿವರವು ಸಂಕ್ಷಿಪ್ತವಾಗಿದೆ. ಇತರ ವಿವರಗಳಲ್ಲಿ ಕಂಡುಬರುವ ಕೆಲವು ಮಾಹಿತಿಗಳು ಇದರಲ್ಲಿ ಇಲ್ಲ:

   - ಯೇಸು ಪ್ರಾರ್ಥನೆ ಮಾಡುವುದಕ್ಕಾಗಿ ಬೆಟ್ಟಕ್ಕೆ ಹೋಗುತ್ತಾನೆ ಮತ್ತು ಆತನು ಪ್ರಾರ್ಥಿಸುತ್ತಿರುವಾಗ ಈ ರೂಪಾಂತರವು ಸಂಭವಿಸುತ್ತದೆ (ಲೂಕದಲ್ಲಿ ಮಾತ್ರ).
   - ಆತನ ಮುಖವು ಸೂರ್ಯನಂತೆ ಪ್ರಕಾಶಿಸಿತು (ಮತ್ತಾಯದಲ್ಲಿ). ಆತನ ಮುಖಭಾವವು ಬದಲಾಯಿತು (ಲೂಕದಲ್ಲಿ).
   - ಮೋಶೆ ಮತ್ತು ಎಲೀಯನನ್ನು ವರ್ಣಿಸಲಾಗಿದೆ: ಅವರು ವೈಭವದೊಡನೆ ಕಾಣಿಸಿಕೊಂಡರು (ಲೂಕದಲ್ಲಿ ಮಾತ್ರ).
   - ಆ ಸಂಭಾಷಣೆಯ ವಿಷಯವು ಬಹುಬೇಗನೆ ಯೆರೂಸಲೇಮಿನಲ್ಲಿ ಸಂಭವಿಸಲಿರುವ ಯೇಸುವಿನ ಮರಣದ ಕುರಿತಾಗಿತ್ತು (ಲೂಕದಲ್ಲಿ ಮಾತ್ರ).
   - ಶಿಷ್ಯರ ನಿದ್ರಾಭಾವ (ಲೂಕದಲ್ಲಿ ಮಾತ್ರ).
   - ಆಕಾಶವಾಣಿಗೆ ಹೆದರಿ ಶಿಷ್ಯರು ಬೋರಲು ಬಿದ್ದದ್ದು ಮತ್ತು ಯೇಸು ಅವರನ್ನು ಬಲಪಡಿಸುವುದು (ಮತ್ತಾಯದಲ್ಲಿ ಮಾತ್ರ)

   ಈ. ಬೆಟ್ಟದ ಮೇಲಿನ ಘಟನೆಗಳ ಕ್ರಮದಲ್ಲಿ ಒಂದು ಸಣ್ಣ ವ್ಯತ್ಯಾಸ: ಮಾರ್ಕನ ಸುವಾರ್ತೆಯಲ್ಲಿ ಶಿಷ್ಯರು ಆಕಾಶವಾಣಿ ಆಗುವದಕ್ಕಿಂತ ಮೊದಲೇ ಹೆದರಿಕೊಂಡಿದ್ದರೆ ಮತ್ತಾಯ ಮತ್ತು ಲೂಕದಲ್ಲಿ ಆಕಾಶವಾಣಿ ಆದ ನಂತರ ಹೆದರಿಕೊಳ್ಳುತ್ತಾರೆ.

   ಉ. ಲೂಕ ಮತ್ತು ಮತ್ತಾಯದಲ್ಲಿ ಮಾಹಿತಿಯಿಲ್ಲ:

   - ಶಿಷ್ಯರು ಹೆದರಿಕೊಂಡಿದ್ದು (ಲೂಕದಲ್ಲಿ ಇಲ್ಲ).

- ತಮಗಾದ ಅನುಭವದ ಬಗ್ಗೆ ಯಾರಿಗೂ ಹೇಳಬಾರದೆಂಬ ಯೇಸುವಿನ ಅಪ್ಪಣೆ (ಲೂಕದಲ್ಲಿ ಇಲ್ಲ).
- ಮನುಷ್ಯಕುಮಾರನ ಪುನರುತ್ಥಾನ ಮತ್ತು ಎಲೀಯನ ಬರೋಣದ ಕುರಿತ ಶಿಷ್ಯರ ಪ್ರಶ್ನೆ (ಲೂಕದಲ್ಲಿ ಇಲ್ಲ).

ಅಲ್ಲಿ ಇನ್ನೂ ಕೆಲ ಸಣ್ಣಪುಟ್ಟ ಬದಲಾವಣೆಗಳಿವೆ.

4. ಸುವಾರ್ತಾ ನಿರೂಪಣೆಯ ಹಿನ್ನಲೆಯಲ್ಲಿ ರೂಪಾಂತರ ವಿಷಯದ ಪ್ರಾಮುಖ್ಯತೆಯನ್ನು ಈ ರೀತಿಯಾಗಿ ಅರ್ಥೈಸಿಕೊಳ್ಳಬಹುದು:

ಅ. ಯೇಸುವಿಗೆ ಪ್ರಾಮುಖ್ಯತೆ: ತನ್ನ ಬಾಧೆ ಮತ್ತು ಶಿಲುಬೆ ಮೇಲಣ ಮರಣಕ್ಕಿಂತ ಮೊದಲು ಈ ಅನುಭವವು ಯೇಸುವಿಗೆ ಉತ್ತೇಜನವನ್ನು ಕೊಟ್ಟಿತು.

ಆ. ಶಿಷ್ಯರಿಗೆ ಪ್ರಾಮುಖ್ಯತೆ: ಇದು ಅವರಿಗೆ ಶಿಲುಬೆಯ ಪ್ರಾಮುಖ್ಯತೆ(ಅವಶ್ಯಕತೆ)ಯನ್ನು ತಿಳಿದುಕೊಳ್ಳಲು ಸಹಾಯಿಸಿತು (ಯೇಸು, ಮೋಶೆ ಮತ್ತು ಎಲೀಯರ ನಡುವಿನ ಸಂಭಾಷಣೆಯು ಯೇಸುವಿನ ಮರಣದ ಕುರಿತಾಗಿತ್ತೆಂಬುದಾಗಿ ಲೂಕನು ಹೇಳುತ್ತಾನೆ). ಅಲ್ಲದೆ ಇದು ಯೇಸುವಿನ ಬಾಧೆ ಮತ್ತು ಆತನ ಮಹಿಮೆಯ ನಡುವಿನ ಸಂಬಂಧವನ್ನು ಕಾಣಲು ಅವರಿಗೆ ಸಹಕರಿಸಿತು.

ಇ. ಕೊನೆಯದಾಗಿ ಇದನ್ನು ಯೇಸು ಮುಂದೆ ಆಳಲಿರುವ ಆತನ ಮಹಿಮೆಗೆ ಒಂದು ಪ್ರವೇಶವೆಂಬುದಾಗಿ ಕಾಣಬಹುದು (ಮತ್ತಾ. 16:28 ಮತ್ತು ಹಿಂದಿನ ಅಧ್ಯಯನದಲ್ಲಿ ***ಆಲೋಚಿಸಿರಿ ಮತ್ತು ಚರ್ಚಿಸಿರಿಯ*** 11 ರ ಟಿಪ್ಪಣಿ)

5. ಎಲೀಯನ ಕುರಿತ ಯೇಸುವಿನ ಮಾತುಗಳನ್ನು ವಚನ 11-13 ರ ಟಿಪ್ಪಣಿಯಲ್ಲಿ ವಿವರಿಸಲಾಗಿದೆ.

6. "ನಂಬುವವನಿಗೆ ಎಲ್ಲಾ ಆಗುವುದು" (ವ. 23) ಎಂಬ ಯೇಸುವಿನ ಹೇಳಿಕೆಯನ್ನು ವ್ಯಾಕರಣಾತ್ಮಕವಾಗಿ ಮೂರು ವಿಭಿನ್ನ ರೀತಿಯಲ್ಲಿ ಅರ್ಥೈಸಿಕೊಳ್ಳಬಹುದಾಗಿದೆ:

ಅ. "ನನ್ನ ನಂಬಿಕೆ ದೊಡ್ಡದಾಗಿರುವುದರಿಂದ ಯೇಸುವಾದ ನಾನು ಏನು ಬೇಕಾದರೂ ಮಾಡಬಲ್ಲೆನು". ಒಂದು ವೇಳೆ ಯೇಸುವಿನ ಮಾತಿನ ಅರ್ಥ ಇದಾಗಿದ್ದರೆ ಆ ಮನುಷ್ಯನಿಗೆ ಅದು ಅರ್ಥವಾಗುತ್ತಿರಲಿಲ್ಲ ಮತ್ತು ಯೇಸು ಆತನನ್ನು ತಿದ್ದಲು ಹೋಗುತ್ತಿರಲಿಲ್ಲ.

ಆ. "ನಿನ್ನಲ್ಲಿ ಸಾಕಷ್ಟು ನಂಬಿಕೆಯಿದ್ದರೆ ನಿನಗೆಲ್ಲವೂ ಸಾಧ್ಯ". ಯೇಸುವಿನ ಮಾತಿನ ಅರ್ಥ ಇದಾಗಿದ್ದರೆ ಕಥೆಯುದ್ದಕ್ಕೂ ಆ ಮನುಷ್ಯನ ಪ್ರತಿಕ್ರಿಯೆಗೆ ಅರ್ಥವೇ ಇರುವುದಿಲ್ಲ.

ಇ. "ಯೇಸುವಾದ ನಾನು ನಿನಗೇನು ಮಾಡಬಲ್ಲೆನು ಎಂಬುದರಲ್ಲಿ ನಿನಗೆ ನಂಬಿಕೆಯಿದ್ದರೆ ಎಲ್ಲವೂ ಸಾಧ್ಯ". ಇದೇ ಯೇಸು ಹೇಳಿದ ಮಾತಿನ ಅರ್ಥವಾಗಿರಬೇಕು. ಇದು ಆ ಮನುಷ್ಯ ಮತ್ತು ಯೇಸುವಿನ ನಡುವಿನ ನಂಬಿಕೆ(ಭರವಸೆ)ಯ ಸಂಬಂಧಕ್ಕೆ ಒತ್ತುಕೊಡುತ್ತದೆ. ಅಲ್ಲದೆ ಇದು ಕಥೆಯುದ್ದಕ್ಕೂ ಆ ಮನುಷ್ಯನು ನಂಬಿಕೆಯ ವಿಷಯದಲ್ಲಿ ಪರದಾಡಿದ್ದನ್ನು ವಿವರಿಸುತ್ತದೆ: ಈ ಮನುಷ್ಯನು ತನ್ನ ಮಗನನ್ನು ಗುಣಪಡಿಸುತ್ತಾರೆಂದು ಶಿಷ್ಯರ ಬಳಿಗೆ ಕರೆತರುತ್ತಾನೆ. ಆದರೆ ಅವರಿಂದಾಗಲಿಲ್ಲ. ಹಾಗಾಗಿ ಯೇಸು ಬಂದಾಗ ಆತನ ನಂಬಿಕೆಗೆ ಪೆಟ್ಟು ಬಿದ್ದಿತು ಮತ್ತು ಯೇಸು ತನ್ನ ಮಗನನ್ನು ಗುಣಪಡಿಸಲು ಶಕ್ತನಾ ಎಂಬುದಾಗಿ ಯೋಚಿಸಿದನು ("ನಿನ್ನ ಕೈಲಿ ಏನಾದರೂ ಆಗುವ ಹಾಗಿದ್ದರೆ). ಕೊನೆಯದಾಗಿ ಆ ಮನುಷ್ಯನು ಯೇಸುವಿನ ಮೇಲೆ ನಂಬಿಕೆಯಿಡಲು ತನಗೆ ಸಹಾಯಮಾಡಬೇಕೆಂದು ಆತನ ಬಳಿ ಬೇಡಿಕೊಳ್ಳುತ್ತಾನೆ. ಯೇಸು ಆತನ ಮೊರೆಯನ್ನು ಕೇಳಿ ಆತನ ಮಗನನ್ನು ಬಿಡಿಸುತ್ತಾನೆ . ಯೇಸುವಿನ ಮೇಲಿನ ಆ ಮನುಷ್ಯನ ನಂಬಿಕೆಗೆ ಪ್ರತಿಫಲ ಸಿಕ್ಕಿತು.

7. –

8. ವಚನ 29 ರ ಯೇಸುವಿನ ವಿವರಣೆಯನ್ನು ಈ ರೀತಿಯಾಗಿ ಅರ್ಥೈಸಿಕೊಳ್ಳಬಹುದು: ದುರಾತ್ಮಗಳ ಮೇಲೆ ತಮಗೆ ಯೇಸು ಕೊಟ್ಟಿದ್ದ ಅಧಿಕಾರವನ್ನು ಶಿಷ್ಯರು ಹಗುರವಾಗಿ ತೆಗೆದುಕೊಂಡಿದ್ದರು (6:27) ಮತ್ತು ತಮ್ಮದೇ ಮತ್ತು ತಮಗೇ

ಸೇರಿದ್ದೆಂಬುದಾಗಿ ಪರಿಗಣಿಸಿದ್ದರು. ಹಾಗಾಗಿ ಅದಕ್ಕಾಗಿ ದೇವರನ್ನು ಆತುಕೊಂಡಿರಲಿಲ್ಲ. ಹುಡುಗನನ್ನು ಗುಣಪಡಿಸಲು ಅವರು ವಿಫಲರಾದದ್ದು ಅವರಲ್ಲಿ ದೇವರ ಮೇಲಣ ಅವಲಂಬನೆಯ ಕೊರತೆಯನ್ನು (ನಂಬಿಕೆಯ ಕೊರತೆ, ದೇವರಲ್ಲಿನ ಭರವಸೆಯ ಕೊರತೆ) ತೋರಿಸುತ್ತದೆ. ಅದು ಅವರ ಪ್ರಾರ್ಥನೆಯ ಕೊರತೆಯನ್ನು ತೋರಿಸುತ್ತದೆ: ಈ ರೀತಿಯ ದೆವ್ವಗಳನ್ನು ಬಿಡಿಸುವುದಕ್ಕೆ ಪ್ರಾರ್ಥನೆ ಮತ್ತು ದೇವರ ಮೇಲಣ ಅವಲಂಬನೆ ಅತೀ ಅಗತ್ಯ. ಅದೇ ನಿಜವಾದ ನಂಬಿಕೆಯಾಗಿದ್ದು ಅದು ಸಾಸಿವೆ ಕಾಳಷ್ಟು ಇದ್ದರೆ ಸಾಕು (ಹೋಲಿಸಿ ಮತ್ತಾ. 17:19-21).

9. ವಚನ 33-37 ರಿಂದ ಪರಲೋಕದಲ್ಲಿನ ನಿಜವಾದ ಹಿರಿತನದ ಬಗ್ಗೆ ನಾವು ಈ ಸಂಗತಿಗಳನ್ನು ತಿಳಿದುಕೊಳ್ಳುತ್ತೇವೆ:

   ಅ. ಪರಲೋದಲ್ಲಿ ಹಿರಿತನವು ಈ ಲೋಕದಲ್ಲಿನ ಹಿರಿತನಕ್ಕಿಂತ ವಿಭಿನ್ನವಾದುದ್ದಾಗಿದೆ.

   ಆ. ಇದು ಲೌಕಿಕ ಹಿರಿತನಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ. ಈ ಲೋಕದಲ್ಲಿ ಬೇರೊಬ್ಬರಿಗೆ ಸೇವೆ ಮಾಡುವವನನ್ನು ಕನಿಷ್ಠನು ಎಂದು ಪರಿಗಣಿಸುವರು. ಆದರೆ ದೇವರ ರಾಜ್ಯದಲ್ಲಿ ಕನಿಷ್ಠನೇ ಮೊದಲನೆಯವನಾಗಿರುತ್ತಾನೆ. ಪರಲೋಕ ರಾಜ್ಯದಲ್ಲಿ ಬೇರೆಯವರಿಗೆ ಸೇವೆ ಮಾಡುವುದು ನಿಜವಾದ ಹಿರಿತನದ ಒಂದು ಗುರುತಾಗಿದೆ.

   ಇ. ಈ ಸತ್ಯವನ್ನು ತಿಳಿಸಲು ಯೇಸು ಒಂದು ಚಿಕ್ಕ ಮಗುವನ್ನು ತೆಗೆದುಕೊಳ್ಳುತ್ತಾನೆ – ಪ್ರಾಚೀನ ಸಮಾಜದಲ್ಲಿ ಮಕ್ಕಳಿಗೆ ತೀರಾ ಕೀಳಾದ ಸ್ಥಾನವನ್ನು ಕೊಡುತ್ತಿದ್ದರು ಮತ್ತು ಅಂತಹ ಕೀಳಾದ ವ್ಯಕ್ತಿಯನ್ನು ಯೇಸುವಿನ ಹೆಸರಿನಲ್ಲಿ ನಾವು ಸೇರಿಸಿಕೊಂಡರೆ ಸ್ವತಃ ಯೇಸುವನ್ನೇ ಸೇರಿಸಿಕೊಂಡಂತಾಯಿತೆಂದು ಹೇಳುತ್ತಾನೆ. ಆದರೆ ಬರೀ ಯೇಸುವನ್ನಷ್ಟೇ ನಾವು ಬರಮಾಡಿಕೊಳ್ಳುತ್ತಿಲ್ಲ. ಯೇಸುವನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟ ತಂದೆಯನ್ನು ಸಹ ಬರಮಾಡಿಕೊಳ್ಳುವವರಾಗಿದ್ದೇವೆ.

10. ವಚನ 40 ("ನಮ್ಮನ್ನು ಎದುರಿಸದವನು ನಮ್ಮ ಪಕ್ಷದವನೇ") ಮತ್ತು ಮತ್ತಾಯ 12:30 ರಲ್ಲಿನ ("ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ) ಯೇಸುವಿನ ಮಾತಿನ ನಡುವೆ ಯಾವುದೇ ವಿರೋಧತೆಯಿಲ್ಲ. ಮತ್ತಾಯದಲ್ಲಿ ಯೇಸು ಭಾವೋದ್ವೇಗದಿಂದ ತನ್ನನ್ನು ವಿರೋಧಿಸಿದವರನ್ನು ಸೂಚಿಸುತ್ತಾನೆ. ಇಲ್ಲಿ ಮಾರ್ಕನ ಸುವಾರ್ತೆಯಲ್ಲಿ ಯೇಸುವು ಆತನೊಂದಿಗೆ ಮತ್ತು ಆತನ ಸೇವೆಯೊಂದಿಗೆ ಸಹಾನುಭೂತಿ ತೋರಿದವರನ್ನು ಸೂಚಿಸುತ್ತಿದ್ದಾನೆ.

11. ಕನ್ನಡದ ಪವಿತ್ರಗ್ರಂಥ ಮತ್ತು ಸತ್ಯವೇದ ಭಾಷಾಂತರಗಳಲ್ಲಿ ವಚನ 43-48 ರ ಒಂದು ಹೋಲಿಕೆ:

   ಅ. ಕನ್ನಡದ ಪವಿತ್ರಗ್ರಂಥ ಭಾಷಾಂತರದಲ್ಲಿ ವಚನ 44 ಮತ್ತು 46 ಇದೆ.

   ಆ. ಕನ್ನಡದ ಸತ್ಯವೇದ ಭಾಷಾಂತರದಲ್ಲಿ ವಚನ 44 ಮತ್ತು 46 ಇಲ್ಲ.

      ನನ್ನ ಅನಿಸಿಕೆ: ಭಾಷಾಂತರಗಳು ವಿಭಿನ್ನ ಇಬ್ರಿಯ ಪ್ರತಿಗಳನ್ನು ಪಾಲಿಸಿವೆ. ವಚನ 44 ಮತ್ತು 46 ಮಾರ್ಕನ ಮೂಲ ಪ್ರತಿಯ ಭಾಗಗಳಲ್ಲ ಮತ್ತು ಅವನ್ನು ಬೆರಳಚ್ಚು ಪ್ರತಿ ಮಾಡುವವರಿಂದ ಸೇರಿಸಲಾಗಿದೆ ಎಂದು ಆಧುನಿಕ ಸತ್ಯವೇದ ಪಂಡಿತರು ಒಪ್ಪುತ್ತಾರೆ.

12. ವಚನ 47 ರಲ್ಲಿ ಯೇಸು ಅತಿಶಯೋಕ್ತಿ ಎಂಬ ಶಬ್ಧಾಲಂಕಾರವನ್ನು ಬಳಸುತ್ತಾನೆ. ತನ್ನ ಹಿಂಬಾಲಕರು ಅಕ್ಷರಶಃ ತಮ್ಮ ಕೈ, ಕಾಲು ಅಥವಾ ಕಣ್ಣನ್ನು ಕಿತ್ತುಹಾಕಬೇಕೆಂದು ಯೇಸು ಬಯಸುತ್ತಿಲ್ಲ. ಆದರೆ ಈ ಅಂಗಗಳು ಭಾಗಿಯಾಗಿರುವ ಪಾಪದ ಕಾರ್ಯಗಳನ್ನು ತ್ಯಜಿಸಬೇಕೆಂದು ಆತನು ಬಯಸುತ್ತಾನೆ. ತಾನು ಹೇಳುವುದನ್ನು ತನ್ನ ಕೇಳುಗರು ಅರ್ಥೈಸಿಕೊಳ್ಳಲೆಂದು ಯೇಸು ಅತಿಶಯೋಕ್ತಿಯನ್ನು ಬಳಸುತ್ತಾನೆ ("ನಿನ್ನ ಕೈ ಮತ್ತು ಕಾಲನ್ನು ಕಡಿದುಬಿಡು, ನಿನ್ನ ಕಣ್ಣನ್ನು ಕಿತ್ತು ಬಿಸಾಕು") ಪರಲೋಕರಾಜ್ಯಕ್ಕೆ ಪ್ರವೇಶಿಸಲು ಅದಕ್ಕೆ ತಡೆಯಾಗಿರುವುದನ್ನೆಲ್ಲ ತೆಗೆದು ಹಾಕುವ ಅವಶ್ಯಕತೆಯಿದೆ ಎಂಬುದನ್ನು ತೋರಿಸಲು ಉದ್ದೇಶಪೂರ್ವಕವಾಗಿ ಯೇಸು ಇದನ್ನು ವಿವರಿಸುತ್ತಾನೆ.

13. ವಚನ 49 ಮತ್ತು 50 ರಲ್ಲಿ "ಉಪ್ಪು" ವಿಭಿನ್ನ ಸಂಗತಿಗಳನ್ನು ತಿಳಿಸುತ್ತದೆ:

   ಅ. ವಚನ 49 ರಲ್ಲಿ ಉಪ್ಪು ದೇವರ ರಾಜ್ಯವು ಪೂರ್ಣವಾಗಿ ಬರುವುದನ್ನು ಮುನ್ನೋಡುವಂತೆ ವಿಶ್ವಾಸಿಗಳು ಈ ಲೋಕದಿಂದ ನಿರೀಕ್ಷಿಸುವ ಬಾಧೆಯನ್ನು ಸೂಚಿಸುತ್ತದೆ.

ಆ. ವಚನ 50 ರಲ್ಲಿ ಉಪ್ಪು, ಯೇಸು ತನ್ನ ಹಿಂಬಾಲಕರಿಂದ ಅಪೇಕ್ಷಿಸುವ ದೇವರ ರಾಜ್ಯದ ಗುರುತನ್ನು ಸೂಚಿಸುತ್ತದೆ. ಉಪ್ಪು ರುಚಿಹೀನವಾಗುವಂತೆ ಕ್ರೈಸ್ತವಿಶ್ವಾಸಿಗಳೂ ಸಹ ಯೇಸುಕ್ರಿಸ್ತನ ನಿಜವಾದ ಹಿಂಬಾಲಕರೆಂಬ ಗುರುತನ್ನು ಕಳಕೊಳ್ಳಬಹುದಾದ ಅಪಾಯದಲ್ಲಿರುತ್ತಾರೆ.

**ಉತ್ತರಗಳು: ಮಾರ್ಕ ಅಧ್ಯಾಯ 10**

**ಪ್ರಶ್ನೆಗಳಿಗೆ ಉತ್ತರಗಳು**

1. –
2. ಈ ಅಧ್ಯಾಯದ ಘಟನೆಗಳೆಲ್ಲ ಯೊರ್ದನ್ ಹೊಳೆಯ ಪೂರ್ವದಲ್ಲಿ ಸಂಭವಿಸುತ್ತವೆ (ವ. 1)). ಅದು ಪೆರಿಯ ಆಗಿದ್ದು ಹೆರೋದ ಅಂತಿಪನ ಸಾಮ್ರಾಜ್ಯಕ್ಕೆ ಸೇರಿದ ಪ್ರಾಂತ್ಯವಾಗಿತ್ತು.
3. ಕೆಲ ಫರಿಸಾಯರು ಯೇಸುವನ್ನು ಪರೀಕ್ಷಿಸಬೇಕೆಂದು ಆತನ ಬಳಿಗೆ ಬಂದರು (ವ. 2). ಬಹುಶಃ ಅವರು ಅರಸನಾದ ಹೆರೋದ ಅಂತಿಪನ ಮುಂದೆ ದೂರು ಹೇಳಲು ಯೇಸುವಿನಲ್ಲಿ ಸರಿಯಾದ ಕಾರಣವನ್ನು ಹುಡುಕಲು ಬಯಸಿದರು.
4. ವಚನ 5-12 ರಲ್ಲಿ ಮದುವೆ ಕುರಿತ ತನ್ನ ಬೋಧನೆಯನ್ನು ಯೇಸು "ಆದುದರಿಂದ ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು" ಎಂಬ ಹೇಳಿಕೆಯ ಮೂಲಕ ಸಾರಾಂಶಗೊಳಿಸುತ್ತಾನೆ (ವ. 9).
5. ಯೇಸುವು ಅವರನ್ನು ಆಶೀರ್ವದಿಸಲೆಂದು ಜನರು ಚಿಕ್ಕಮಕ್ಕಳನ್ನು ಆತನ ಬಳಿಗೆ ಕರೆತರುತ್ತಾರೆ (ವ. 13).
6. ಚಿಕ್ಕಮಕ್ಕಳನ್ನು ಕಂಡಾಗ ಶಿಷ್ಯರು ಬೇಸರಗೊಳ್ಳುತ್ತಾರೆ, ಹಾಗಾಗಿ ಅವರು ಮಕ್ಕಳ ತಂದೆತಾಯಿಗಳನ್ನು ಗದರಿಸುತ್ತಾರೆ (ವ. 13).
7. ಶಿಷ್ಯರು ಚಿಕ್ಕಮಕ್ಕಳ ಪೋಷಕರೊಂದಿಗೆ ನಡಕೊಂಡ ರೀತಿಯನ್ನು ಕಂಡು ಯೇಸು ಕೋಪಗೊಳ್ಳುತ್ತಾನೆ (ವ. 14).
8. ಯೇಸು ಚಿಕ್ಕಮಕ್ಕಳನ್ನು ಅಪ್ಪಿಕೊಂಡು ಅವರನ್ನು ಆಶೀರ್ವದಿಸಿದನು (ವ. 16).
9. ಒಬ್ಬ ಮನುಷ್ಯನು, ತಾನು ನಿತ್ಯಜೀವಕ್ಕೆ ಬಾಧ್ಯನಾಗಲು ಏನು ಮಾಡಬೇಕೆಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಲು ಯೇಸು ಸಹಕರಿಸಬೇಕೆಂದು ಬಯಸಿದನು (ವ. 17). ಹೀಗೆ ರಕ್ಷಣೆ ಹೊಂದಲು ತಾನೇನು ಮಾಡಬೇಕೆಂಬುದನ್ನು ತಿಳಿಯಲು ಆತನು ಬಯಸಿದನು.
10. ಆ ಮನುಷ್ಯನ ಪ್ರತ್ಯುತ್ತರದಿಂದ ಆತನು ಬಾಲ್ಯದಿಂದಲೇ ದಶಾಜ್ಞೆಗಳನ್ನು ಜಾಗರೂಕತೆಯಿಂದ ಪಾಲಿಸುತ್ತಾ ಬಂದಿದ್ದನೆಂಬುದನ್ನು ತಿಳಿಯಬಹುದು (ವ. 19-20). ಯೆಹೂದಿ ಧರ್ಮಶಾಸ್ತ್ರದ ದೃಷ್ಟಿಕೋನದಿಂದ ಆತನೊಬ್ಬ ಒಳ್ಳೆಯ ಮನುಷ್ಯನಾಗಿದ್ದನು.
11. ಆ ಮನುಷ್ಯನಿಗೆ ಯೇಸು ನಿನ್ನ ಎಲ್ಲಾ ಆಸ್ತಿಯನ್ನು ಮಾರಿ ಬಡವರಿಗೆ ಕೊಟ್ಟು ತನ್ನನ್ನು ಹಿಂಬಾಲಿಸು ಎಂದು ಹೇಳಿದನು (ವ. 21).
12. ಆತನ ಆಸ್ತಿಯು ಯೇಸುವಿನ ಆಜ್ಞೆಗೆ ವಿಧೇಯನಾಗಲು ಒಪ್ಪದಂತೆ ಮಾಡಿದ್ದಕ್ಕಾಗಿ ಆತನು ಯೇಸುವನ್ನು ಬಿಟ್ಟುಹೋಗುತ್ತಾನೆ (ವ. 22).
13. ಆ ಮನುಷ್ಯನು ಯೇಸುವನ್ನು ಬಿಟ್ಟುಹೋದಾಗ ಯೇಸುವಿಗೆ ನಿರಾಸೆಯಾಗಿದ್ದಿರಬಹುದು. ಯೇಸು ತನ್ನ ಶಿಷ್ಯರಿಗೆ ಶ್ರೀಮಂತರು ರಕ್ಷಣೆಹೊಂದುವುದು ಕಷ್ಟ ಎಂದು ಹೇಳುವ ಮಾತಿನಿಂದಲೇ ಇದನ್ನು ನಾವು ತಿಳಿದುಕೊಳ್ಳಬಹುದು (ವ. 23-25).
14. ತನ್ನ ಸ್ವಂತ ಪ್ರಯತ್ನದಿಂದ ಒಬ್ಬನು ರಕ್ಷಣೆಯನ್ನು ಹೊಂದುವುದು ಅಸಾಧ್ಯವೆಂಬುದಕ್ಕೆ ಉದಾಹರಣೆಯಾಗಿ ಯೇಸು ಸೂಜಿಯ ಕಣ್ಣಿನಲ್ಲಿ ಒಂಟೆಯು ಹೋಗುವುದರ ಕುರಿತ ಹೇಳಿಕೆಯನ್ನು ಹೇಳುತ್ತಾನೆ (ವ. 25 ರ ಟಿಪ್ಪಣಿ ನೋಡಿರಿ).
15. ಕೇವಲ ದೇವರು ಮಾತ್ರ ಒಬ್ಬ ಮನುಷ್ಯನನ್ನು (ವ್ಯಕ್ತಿ) ರಕ್ಷಿಸಲು ಸಾಧ್ಯವೆಂಬ ಹೇಳಿಕೆಯ ಮೂಲಕ ಯೇಸು ರಕ್ಷಣೆಯ ಕುರಿತು ಶಿಷ್ಯರಲ್ಲಿ ಉದ್ಭವಿಸಿದ್ದ ಪ್ರಶ್ನೆಗೆ ಉತ್ತರಿಸುತ್ತಾನೆ (ವ. 27).
16. ಯೇಸುವಿನ ಮೊದಲ ಶಿಷ್ಯರ ಸಮರ್ಪಣೆಯನ್ನು ಪೇತ್ರನು "ಇಗೋ ನಾವು ಎಲ್ಲಾ ಬಿಟ್ಟುಬಿಟ್ಟು ನಿನ್ನನ್ನು ಹಿಂಬಾಲಿಸಿದ್ದೇವೆ" (ವ. 28) ಎಂದು ವರ್ಣಿಸುತ್ತಾನೆ.
17. ವಚನ 29-31 ರಲ್ಲಿ ತನ್ನ ಶಿಷ್ಯರಿಗೆ (ಹಿಂಬಾಲಕರಿಗೆ) ಯೇಸು ಮಾಡಿದ ವಾಗ್ದಾನಗಳು:

ಅ. ಈ ಲೋಕದಲ್ಲಿ ಅವರಿಗೆ ಹೆಚ್ಚಾದ ಪ್ರತಿಫಲ ಸಿಕ್ಕುವುದು

ಆ. ಈ ಲೋಕದಲ್ಲಿ ಅವರಿಗೆ ಹಿಂಸೆ ಉಂಟಾಗುವುದು

ಇ. ಮುಂದಣ ಲೋಕದಲ್ಲಿ ಅವರಿಗೆ ನಿತ್ಯಜೀವವು ಸಿಕ್ಕುವುದು.

18. "ಬಹುಮಂದಿ ಮೊದಲಿನವರು ಕಡೆಯವರಾಗುವರು, ಕಡೆಯವರು ಮೊದಲಿನವರಾಗುವರು" (ವ. 31) ಎಂಬ ಯೇಸುವಿನ ಹೇಳಿಕೆಯ ಅರ್ಥವೇನೆಂದರೆ ಈ ಲೋಕದಲ್ಲಿ ಪ್ರಸ್ತುತ ಅತೀ ಪ್ರಮುಖ ಜನರೆಂಬುದಾಗಿ ಪರಿಗಣಿಸಲ್ಪಟ್ಟವರು ದೇವರ ರಾಜ್ಯದ ದೃಷ್ಟಿಕೋನದಿಂದ ಪ್ರಮುಖರಾಗಿರದೇ ಇರಬಹುದು ಮತ್ತು ಈ ಪ್ರಸಕ್ತ ಲೋಕದಲ್ಲಿ ಕೀಳಾಗಿ/ಕನಿಷ್ಠರೆಂಬುದಾಗಿ ಪರಿಗಣಿಸಲ್ಪಟ್ಟವರು ದೇವರ ರಾಜ್ಯದ ದೃಷ್ಟಿಕೋನದಿಂದ ಅತೀ ಪ್ರಮುಖರೆಂಬುದಾಗಿ ಪರಿಗಣಿಸಲ್ಪಡಬಹುದು. ಮುಂದಣ ಲೋಕದ ಪ್ರಾರಂಭದಿಂದ ಪ್ರತಿಯೊಬ್ಬ ವ್ಯಕ್ತಿಯ ಕುರಿತಾದ ಸತ್ಯವು ಸ್ಪಷ್ಟವಾಗುವುದು (ವ. 31 ರ ಟಿಪ್ಪಣಿಯನ್ನು ಸಹ ನೋಡಿ).

19. ಯೆರೂಸಲೇಮಿನ ದಾರಿಯಲ್ಲಿ ತನ್ನ ಶಿಷ್ಯರಿಗೆ ಈ ಸಂಗತಿಗಳನ್ನು ಪ್ರಕಟಿಸಿದನು (ವ. 33-34):

ಅ. ಆತನು ಯೆಹೂದಿ ನಾಯಕರ ಕೈಗೆ ಹಿಡಿದು ಕೊಡಲ್ಪಡುವನು.

ಆ. ಯೆಹೂದಿ ನಾಯಕರು ಅವನಿಗೆ ಮರಣ ದಂಡನೆಯನ್ನು ವಿಧಿಸಿ ಅವನನ್ನು ಕೊಲ್ಲುವದಕ್ಕಾಗಿ ಅನ್ಯರ ಕೈಗೆ ಒಪ್ಪಿಸುವರು.

ಇ. ಅನ್ಯರು ಅವನನ್ನು ಅಪಹಾಸ್ಯಮಾಡಿ ಹೊಡೆದು ಕೊಂದು ಹಾಕುವರು.

ಈ. ಆತನು ಮೂರು ದಿನದ ಮೇಲೆ ಜೀವಿತನಾಗಿ ಎದ್ದು ಬರುವನು.

20. ಯಾಕೋಬ ಮತ್ತು ಯೋಹಾನರು ದೇವರ ರಾಜ್ಯದಲ್ಲಿ ತಮಗೆ ಅತಿಗೌರವಾನ್ವಿತ ಸ್ಥಾನವನ್ನು ಹೊಂದುವಂತೆ ಮಾಡಬೇಕೆಂಬ ಬೇಡಿಕೆಯನ್ನು ತಂದರು (ವ. 35-37).

21. ಯಾಕೋಬ ಮತ್ತು ಯೋಹಾನರ ಬೇಡಿಕೆಗೆ ಸವಾಲೆಸೆಯುತ್ತಾನೆ. ತಮ್ಮನ್ನು ಬಾಧೆ ಮತ್ತು ಮರಣದ ಮೂಲಕ ಕೊಂಡೊಯ್ಯುವ ಒಂದು ದಾರಿಯನ್ನು ಆತನ ಮಹಿಮೆಗೆ ಕೊಂಡೊಯ್ಯುವ ದಾರಿಯುದ್ದಕ್ಕೂ ಆತನನ್ನು ಹಿಂಬಾಲಿಸಲು ಸಿದ್ಧರಾಗುವವರೆಗೂ ಯೇಸುವಿನ ಮಹಿಮೆಯಲ್ಲಿ "ಮಹಾಪದವಿಯಲ್ಲಿ" ಈ ಗೌರವಾನ್ವಿತ ಸ್ಥಾನಗಳನ್ನು ಅವರು ಹೇಗೆ ತಾನೇ ಕೇಳಲು ಸಾಧ್ಯ (ವ. 35-38)?

22. ವ. 39 ರಲ್ಲಿ ಯೇಸು ಬಳಸುವ ಅಲಂಕಾರಿಕ ಭಾಷೆ:

ಅ. ಇನ್ನೊಬ್ಬ ವ್ಯಕ್ತಿಯ ಪಾತ್ರೆಯಲ್ಲಿ ಕುಡಿಯುವುದೆಂದರೆ ಆ ವ್ಯಕ್ತಿಯು ಏನೆಲ್ಲ ಹಾದುಹೋಗುತ್ತಾನೋ ಅವನ್ನೆಲ್ಲಾ ಹಾದುಹೋಗುವುದು ಮತ್ತು ಅವನು ಪಡುವ ಬಾಧೆಯನ್ನೆಲ್ಲಾ ಅನುಭವಿಸುವುದು. ಯೇಸುವಿನ ವಿಷಯದಲ್ಲಿ ಆತನ ಬಾಧೆಯು ಮನುಷ್ಯರ ಬಿಡುಗಡೆಗಾಗಿ ಯೇಸು ಪಡಬೇಕಾದ ಬಾಧೆಯಾದ ದೇವರ ನ್ಯಾಯತೀರ್ಪನ್ನು ಸಹ ಒಳಗೊಂಡಿತ್ತು.

ಆ. ಇನ್ನೊಬ್ಬ ವ್ಯಕ್ತಿಯು ಹೊಂದುವ ದೀಕ್ಷಾಸ್ನಾನ ಹೊಂದುವುದೆಂದರೆ ಆತನು ಏನನ್ನು ಹಾದುಹೋಗುತ್ತಾನೋ ಅದನ್ನೆಲ್ಲಾ ಹಾದು ಹೋಗುವುದಾಗಿದೆ ಮತ್ತು ಆತನು ಪಡುವ ಬಾಧೆಯನ್ನೆಲ್ಲಾ ಪಡುವುದಾಗಿದೆ. ಯೇಸುವಿನ ವಿಷಯದಲ್ಲಿ ಆತನ ಬಾಧೆಯು ಮರಣವನ್ನು ಸಹ (ಪುನರುತ್ಥಾನ) ಒಳಗೊಂಡಿತ್ತು.

23. ಯೇಸುವಿಗೆ ಯಾಕೋಬ ಮತ್ತು ಯೋಹಾನರ ಮನವಿಯನ್ನು ಈಡೇರಿಸಲಿಲ್ಲ, ಯಾಕೆಂದರೆ ದೇವರ ರಾಜ್ಯದಲ್ಲಿ ಈ ಗೌರವಾನ್ವಿತ ಸ್ಥಾನಗಳು ತಂದೆಯಾದ ದೇವರು ಯಾರಿಗಾಗಿ ಸಿದ್ಧಪಡಿಸಿದ್ದಾನೋ ಅವರಿಗಾಗಿ ಮೀಸಲಾಗಿತ್ತು (ವ. 40).

24. ಈಗಿನ ಲೋಕದ ಆಳುವವರನ್ನು ಯೇಸು ಬಲತ್ಕಾರದಿಂದ ಅಧಿಕಾರ ನಡೆಸುತ್ತಾರೆ ಎಂಬುದಾಗಿ ಹೇಳುತ್ತಾನೆ (ವ. 42).

25. ಪರಲೋಕದಲ್ಲಿನ ಹಿರಿತನವನ್ನು ಯೇಸು ಸೇವಕತ್ವ ಮತ್ತು ಎಲ್ಲರ ಆಳಾಗುವುದರಿಂದ ಬರುತ್ತದೆಂದು ವಿವರಿಸುತ್ತಾನೆ (ವ. 44-45).

26. ಸ್ವತಃ ತನ್ನ ಸೇವೆಯು/ಕಾರ್ಯವು ಸೇವೆ ಮಾಡುವುದು ಮತ್ತು ಬಹುಜನರಿಗಾಗಿ ಪ್ರಾಣವನ್ನು ಈಡುಕೊಡುವುದಾಗಿದೆ ಎಂಬುದಾಗಿ ಯೇಸು ವಿವರಿಸುತ್ತಾನೆ (ವ. 45).
27. ಬಾರ್ತಿಮಾಯನು ಯೇಸುವು ಗಲಿಲಾಯದಿಂದ ಯೆರೂಸಲೇಮಿಗೆ ಹಾದುಹೋಗುತ್ತಿರುವಾಗ ಯೆರಿಕೋ ಪಟ್ಟಣದ ಹೊರಗೆ ದಾರಿಯ ಮಗ್ಗುಲಲ್ಲಿ ಕೂತಿದ್ದ ಒಬ್ಬ ಕುರುಡ ಭಿಕ್ಷುಕನಾಗಿದ್ದನು (ವ. 46).
28. ಜನರು ಸುಮ್ಮನಿರು ಎಂದಾಗ ಬಾರ್ತಿಮಾಯನು ಇನ್ನೂ ಗಟ್ಟಿಯಾಗಿ ಕೂಗಿಕೊಂಡನು (ವ. 48).
29. ಯೇಸು ಬಾರ್ತಿಮಾಯನನ್ನು ಆತನ ನಂಬಿಕೆಗನುಸಾರವಾಗಿ ಗುಣಪಡಿಸಿ ಕಣ್ಣುಕೊಟ್ಟನು. ಅನಂತರ ಬಾರ್ತಿಮಾಯನು ಆ ದಾರಿಯಲ್ಲಿ ಯೇಸುವಿನ ಹಿಂದೆ ಹೋದನು (ವ. 52).

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ವಿಚ್ಛೇಧನದ ಕುರಿತ ವಾಕ್ಯಭಾಗವನ್ನು (ವ. 2-12) ಈ ರೀತಿಯಾಗಿ ಸಾರಾಂಶಗೊಳಿಸಬಹುದು. ಫರಿಸಾಯರು ಯೇಸುವಿನ ಬಳಿಗೆ "ಹೆಂಡತಿಯನ್ನು ಬಿಟ್ಟುಬಿಡುವುದು (ವಿಚ್ಛೇಧನವು) ಧರ್ಮವೋ?" ಎಂಬ ಉಪಯಕಾರಿ ಪ್ರಶ್ನೆಯೊಂದಿಗೆ ಬರುತ್ತಾರೆ: "ವಿಚ್ಛೇಧನವು ಧರ್ಮವೋ?" ಯೇಸು ಆ ಪ್ರಶ್ನೆಗೆ ನೇರವಾಗಿ ಉತ್ತರಿಸಲು ಬಯಸಲಿಲ್ಲ. ಬದಲಾಗಿ ಆತನು ವಿವಾಹವು ಗಂಡಹೆಂಡತಿಯರ ನಡುವಿನ ಜೀವನಪರ್ಯಂತರದ ಒಂದು ಐಕ್ಯವಾಗಿರಬೇಕೆಂದು ದೇವರು ಬಯಸಿದನೆಂಬುದನ್ನು ನೆನಪಿಸುತ್ತಾನೆ. ಆದರೆ ಮನುಷ್ಯನ ಪಾಪದ ಪರಿಣಾಮ ಸಮಾಜದಲ್ಲಿ ಜನರು ದೇವರಿಂದ ಮತ್ತು ಮನುಷ್ಯರಿಗಾಗಿನ ಆತನ ಚಿತ್ತದಿಂದ ದೂರವಾದರು. ಆ ನಿಮಿತ್ತ ಮೋಶೆಯ ಧರ್ಮಶಾಸ್ತ್ರವು ಕೆಲವು ಷರತ್ತುಗಳಡಿಯಲ್ಲಿ ವಿಚ್ಛೇಧನವನ್ನು ಅನುಮತಿಸಬೇಕಾಯಿತು (ಈ ವಿಚ್ಛೇಧನ ಶಾಸ್ತ್ರದ ಉದ್ದೇಶವು ಧರ್ಮೋಪದೇಶಕಾಂಡ 24:1-4 ವಿಚ್ಛೇಧನದ ಪರಿಣಾಮದ ತೊಂದರೆಯನ್ನು ಕಡಿಮೆ ಮಾಡುವುದು. ಯೇಸು ಫರಿಸಾಯರಿಗೆ ಸ್ಪಷ್ಟವಾದ ಹೇಳಿಕೆಯೊಂದಿಗೆ ಈ ಪ್ರತ್ಯುತ್ತರವನ್ನು ಮುಗಿಸುತ್ತಾನೆ, "ದೇವರು ಕೂಡಿಸಿದ್ದನ್ನು ಮನುಷ್ಯರು ಅಗಲಿಸಬಾರದು". ಅನಂತರ ಖಾಸಗಿಯಾಗಿ ತನ್ನ ಶಿಷ್ಯರಿಗೆ ಆತನು ವಿಚ್ಛೇಧನ ಕೊಡುವುದು ವ್ಯಭಿಚಾರವಾಗಿದೆ ಮತ್ತು ಇನ್ನೊಬ್ಬ ವ್ಯಕ್ತಿಯ ಗಂಡ ಅಥವಾ ಹೆಂಡತಿಯನ್ನು ಮದುವೆಯಾಗುವುದಾಗಿದೆ ಎಂದು ವಿವರಿಸುತ್ತಾನೆ.
2. ಚಿಕ್ಕಮಕ್ಕಳ ಕುರಿತ ವಾಕ್ಯಭಾಗದಲ್ಲಿ ಯೇಸು ತನ್ನ ಶಿಷ್ಯರಿಗೆ ಹೇಳಿದ ಎರಡು ಪಾಠಗಳು (ವ. 13-16):

   ಅ. "ಚಿಕ್ಕಮಕ್ಕಳಿಗೆ ಅಡ್ಡಿ ಮಾಡಬೇಡಿರಿ". ಮಕ್ಕಳು ತನ್ನ ಬಳಿಗೆ ಬರಬೇಕೆಂದು ಯೇಸು ಬಯಸಿದನು ಮತ್ತು ಶಿಷ್ಯರು ಅವುಗಳಿಗೆ ಅಡ್ಡಿ ಮಾಡುವಾಗ ಆತನು ಬೇಸರಗೊಂಡನು.

   ಆ. "ನೀವು ಶಿಶುಭಾವವುಳ್ಳವರಾಗಬೇಕು". ದೇವರ ರಾಜ್ಯವು ಮಕ್ಕಳಂತೆ ಇರುವವರಿಗಾಗಿ ಮೀಸಲಾಗಿದೆ. ಒಂದು ಮಗುವು ಪ್ರತಿಯೊಂದಕ್ಕಾಗಿಯೂ ತನ್ನ ಪೋಷಕರನ್ನೇ ಆತುಕೊಂಡಿರುತ್ತದೆ. ಅದೇ ರೀತಿಯಲ್ಲಿ ನಾವು ಸಹ ಸಂಪೂರ್ಣವಾಗಿ ನಮ್ಮೆಲ್ಲ ಅಗತ್ಯತೆಗಳಿಗಾಗಿ ನಮ್ಮ ಪರಲೋಕದ ತಂದೆಯನ್ನೇ ಆತುಕೊಂಡಿರಬೇಕು. ದೇವರ ರಾಜ್ಯದಲ್ಲಿನ ಪೌರತ್ವವನ್ನು ಸಂಪಾದಿಸಲು ಸಾಧ್ಯವಿಲ್ಲ. ಶಿಶುಭಾವದಿಂದ ಮಾತ್ರ ನಾವು ದೇವರ ರಾಜ್ಯವನ್ನು ದೇವರಿಂದ ಸಿಗುವ ಒಂದು ಸುಂದರವಾದ ಕಾಣಿಕೆಯೆಂದು (ಬಹುಮಾನ) ಕೃತಜ್ಞತೆಯಿಂದ ಸ್ವೀಕರಿಸಬೇಕು.



3. ನಿತ್ಯಜೀವ/ರಕ್ಷಣೆಯ ಕುರಿತ ಐಶ್ವರ್ಯವಂತನ ಪ್ರಶ್ನೆಗೆ ಯೇಸುವಿನ ಉತ್ತರವನ್ನು (ವ. 17-27) ಈ ರೀತಿಯಾಗಿ ವಿವರಿಸಬಹುದು:

ಅ. ದೇವರೊಬ್ಬನೇ ಒಳ್ಳೆಯವನಾಗಿದ್ದಾನೆ. ಹಾಗಾಗಿ ಧರ್ಮಶಾಸ್ತ್ರವನ್ನು ತಪ್ಪದೇ ಪಾಲಿಸುವುದರಿಂದ ಸಂಪಾದಿಸುವ ಒಳ್ಳೇತನವು ದೇವರ ದೃಷ್ಟಿಯಲ್ಲಿ ನಮ್ಮನ್ನು ಒಳ್ಳೆಯವನನ್ನಾಗಿ ಮಾಡುವುದಿಲ್ಲ. ಧರ್ಮಶಾಸ್ತ್ರಕ್ಕೆ ವಿಧೇಯರಾಗುವುದು ನಮ್ಮನ್ನೆಂದೂ ರಕ್ಷಿಸಲಾರದು. ನಮ್ಮ ಸ್ವಂತ ಪ್ರಯತ್ನದಿಂದ ನಾವು ನಿತ್ಯಜೀವವನ್ನು ಪಡೆಯಲು ಸಾಧ್ಯವಿಲ್ಲ (ಅಥವಾ ದೇವರ ರಾಜ್ಯದೊಳಗೆ ಸೇರಲಾಗುವುದಿಲ್ಲ).

ಆ. ಕೇವಲ ದೇವರು ಮಾತ್ರ ನಮ್ಮನ್ನು ರಕ್ಷಿಸಬಲ್ಲನು. ಹಾಗಾಗಿ ದೇವರ ರಕ್ಷಣೆಯನ್ನು ನಾವು ಸ್ವೀಕರಿಸಬೇಕು (ಒಪ್ಪಿಕೊಳ್ಳಬೇಕು).

ಇ. ಈ ಪ್ರಸ್ತುತ ಲೋಕದಲ್ಲಿ ನಮ್ಮನ್ನು ಬಂಧಿಸಿಟ್ಟ ಸಂಗತಿಗಳನ್ನು ಬಿಟ್ಟು (ಈ ವಾಕ್ಯಭಾಗದಲ್ಲಿ ಆ ಮನುಷ್ಯನ ವಿಷಯ ಸಂಪತ್ತಿನ ಪ್ರೀತಿಯಾಗಿತ್ತು, ನಮಗೆ ಬೇರೆ ಏನಾದರೂ ಆಗಬಹುದು). ಯೇಸುವಿನ ಪ್ರಾಮಾಣಿಕ ಶಿಷ್ಯರಾಗುವಾಗ ನಾವು ರಕ್ಷಣೆಯನ್ನು ಸ್ವೀಕರಿಸಿದ್ದೇವೆಂಬುದನ್ನು ತೋರಿಸುತ್ತೇವೆ.

4. ತನ್ನನ್ನು ಹಿಂಬಾಲಿಸುವವರಿಗೆ "ಈಗಿನ ಕಾಲದಲ್ಲಿ ಮನೆ, ಅಣ್ಣ–ತಮ್ಮ, ಅಕ್ಕ-ತಂಗಿ, ತಾಯಿ-ಮಕ್ಕಳು, ಭೂಮಿ ಇವೆಲ್ಲವೂ ಹಿಂಸೆಗಳು ಸಹಿತವಾಗಿ ನೂರರಷ್ಟು ಸಿಕ್ಕೇ ಸಿಕ್ಕುತ್ತವೆ" (ವ. 30) ಎಂಬ ಯೇಸುವಿನ ಹೇಳಿಕೆಯನ್ನು ಈ ರೀತಿಯಾಗಿ ಅರ್ಥೈಸಿಕೊಳ್ಳಬಹುದು:

ಅ. ಈ ಮಾತು ಮೊದಲ ಶಿಷ್ಯರು ಯೇಸುವನ್ನು ಹಿಂಬಾಲಿಸುವುದಕ್ಕಾಗಿ ಎಲ್ಲವನ್ನು ಬಿಟ್ಟು ಬಂದರೆಂಬ ಪೇತ್ರನ ಹೇಳಿಕೆಗೆ ಒಂದು ಪ್ರತಿಕ್ರಿಯೆಯಾಗಿ ಬಂದಿದೆ. ಹೀಗೆ ಪೇತ್ರನು ದೇವರ ರಾಜ್ಯದ ನಿಮಿತ್ತ ತಾವು ಎಲ್ಲವನ್ನೂ ತ್ಯಜಿಸಿದ್ದೇವೆಂಬುದಾಗಿ ಹೇಳುತ್ತಾನೆ (ವ. 28).

ಆ. ಈ ಲೋಕದಲ್ಲಿ ತ್ಯಾಗವೆಂಬುದಾಗಿ ತೋರಿಬರುವುದಾವುದೂ (ಎಲ್ಲವನ್ನು ಬಿಟ್ಟಿರುವುದು-ಕುಟುಂಬ- ಮತ್ತು ಆಸ್ತಿ) ನಿಜವಾದ ತ್ಯಾಗವಲ್ಲ. ಯೇಸುವಿನ ಹಿಂಬಾಲಕರು ಕೇವಲ ಆತ್ಮೀಕವಾಗಿ ಮಾತ್ರ ಅತ್ಯಧಿಕವಾಗಿ ಆಶೀರ್ವಾದ ಹೊಂದದೆ ಈ ಲೋಕದಲ್ಲಿ ಸಹ, ಹಿಂಸೆ ಮತ್ತು ಬಾಧೆಗಳ ನಡುವೆ ಸಹ ಕುಟುಂಬ ಮತ್ತು ಆಸ್ತಿಯಿಂದ ಸಹ ಆಶೀರ್ವದಿಸಲ್ಪಡುವರು. ಬಹುಶಃ ಯೇಸು ತನ್ನನ್ನು ಹಿಂಬಾಲಿಸಿದವರಿಗೆ ಕುಟುಂಬವೂ, ಭದ್ರತೆಯೂ ಆಗುವ ವಿಶ್ವಾಸಿಗಳ ಅನ್ಯೋನ್ಯತೆಯನ್ನು (ಸಭೆ) ಸೂಚಿಸಿ ಹೇಳಿರಬಹುದು.

5. ಮಾರ್ಕನ ಸುವಾರ್ತೆಯಲ್ಲಿನ ಯೇಸುವಿನ ಬಾಧೆಯ ಮೂರು ಮುಖ್ಯ ಮುನ್ಸೂಚನೆಗಳು (8:31-38, 10:33-45).

| ಯೇಸುವಿನ ಮರಣದ ಘೋಷಣೆ | ಶಿಷ್ಯರ ವಿಫಲತೆ | ಶಿಷ್ಯತ್ವದ ಕುರಿತಾಗಿ ಯೇಸುವಿನ ಬೋಧನೆ |
|---|---|---|
| ಯೇಸುವು ಕಷ್ಟಗಳನ್ನನುಭವಿಸಿ ಯೆಹೂದಿ ನಾಯಕರಿಂದ ನಿರಾಕೃತನಾಗಿ, ಕೊಲ್ಲಲ್ಪಟ್ಟು ಮೂರು ದಿನಗಳಾದ ಮೇಲೆ ಎದ್ದು ಬರುವನು (ವ. 8:31) | ಪೇತ್ರನು ಯೇಸುವನ್ನು ಗದರಿಸುತ್ತಾನೆ (ವ. 8:32-33) | ಯೇಸು ಅವರಿಗೆ ನಿಮ್ಮನ್ನು ನಿರಾಕರಿಸಿ ತಮ್ಮ ಶಿಲುಬೆಯನ್ನು ತೆಗೆದುಕೊಂಡು ತನ್ನನ್ನು ಹಿಂಬಾಲಿಸಬೇಕೆಂದು ಆಜ್ಞಾಪಿಸುತ್ತಾನೆ (8:33-38) |
| ಯೇಸು ಜನರ ಕೈಗೆ ಒಪ್ಪಿಸಲ್ಪಟ್ಟು, ಕೊಲ್ಲಲ್ಪಟ್ಟು ಮೂರು ದಿನಗಳಾದ ಮೇಲೆ ಎದ್ದು ಬರುವನು (9:31) | ಶಿಷ್ಯರಿಗೆ ಯೇಸು ಹೇಳುವುದು ಅರ್ಥವಾಗದೆ ಅದನ್ನು ಆತನ ಬಳಿ ಕೇಳಲು ಅಂಜಿದರು (9:32) | ಎಲ್ಲರ ಸೇವಕನಾಗುವವನು ಹೆಚ್ಚಿನವನು ಮತ್ತು ತನ್ನ ಹೆಸರಿನಲ್ಲಿ ಚಿಕ್ಕ ಮಗುವನ್ನು ಸ್ವೀಕರಿಸುವವನು ತನ್ನನ್ನೇ ಸೇರಿಸಿಕೊಳ್ಳುವನು ಎಂದು ಯೇಸು ಬೋಧಿಸುತ್ತಾನೆ (ವ. 9:33-37) |
| ಯೇಸುವು ಯೆಹೂದಿ ನಾಯಕರ ಕೈಗೆ ಹಿಡಿದುಕೊಡಲ್ಪಟ್ಟು, ಮರಣ ದಂಡನೆ ವಿಧಿಸಲ್ಪಟ್ಟು ಮತ್ತು ಅಪಹಾಸ್ಯವನ್ನು ಹೊಂದಿ, ಹೊಡೆಯಲ್ಪಟ್ಟು ಅನ್ಯರ ಕೈಯಿಂದ ಕೊಲ್ಲಲ್ಪಟ್ಟು ಮೂರು ದಿನದ ಮೇಲೆ ಜೀವಿತನಾಗಿ ಎದ್ದು ಬರುವನು (10:33-34) | ಯಾಕೋಬ ಮತ್ತು ಯೋಹಾನರು ಯೇಸುವಿನ ಬಳಿಯಲ್ಲಿ ಮಹಾಪದವಿ ಬಂದಾಗ ಅವರಿಬ್ಬರೂ ಯೇಸುವಿನ ಪಕ್ಕದಲ್ಲಿ ಕೂತುಕೊಳ್ಳುವಂತೆ ತಮಗೆ ಅನುಗ್ರಹ ಮಾಡಬೇಕೆಂದು ಕೇಳಿಕೊಂಡರು (10:35-37) | ಶಿಷ್ಯನಾದವನು ಬಾಧೆಯನ್ನು ಸಹ ನಿರೀಕ್ಷಿಸಬಹುದು ಮತ್ತು ಹಿರಿತನವು ಯೇಸುವು ಸೇವೆ ಮಾಡುವುದಕ್ಕಾಗಿ ಮತ್ತು ಅನೇಕರಿಗಾಗಿ ತನ್ನ ಪ್ರಾಣವನ್ನು ಈಡುಕೊಟ್ಟಂತೆ ಸೇವಕ ಮನೋಭಾವದ ಮೂಲಕ ತೋರಬೇಕಾಗಿದೆ (10:38-45) |

6. ವ. 41-45 ರಲ್ಲಿ ಕಂಡು ಬರುವಂತೆ ಪರಲೋಕದಲ್ಲಿ ಯಾರು ದೊಡ್ಡವರು ಎಂಬುದರ ಯೇಸುವಿನ ಬೋಧನೆ:
   ಅ. ಪರಲೋಕದಲ್ಲಿನ ಹಿರಿತನವು ಈ ಲೋಕದಲ್ಲಿನ ಹಿರಿತನಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿದೆ.
   ಆ. ಈ ಲೋದಲ್ಲಿ ದೊಡ್ಡವರೆನಿಸಿಕೊಳ್ಳಬೇಕೆಂದರೆ ಇತರರನ್ನು ಆಳುವುದು ಮತ್ತು ಅವರ ಮೇಲೆ ದೊರೆತನ ನಡೆಸುವುದಾಗಿದೆ.
   ಇ. ಪರಲೋಕದಲ್ಲಿ ದೊಡ್ಡವರಾಗಬೇಕೆಂದರೆ ಬೇರೆಯವರಿಗೆ ಸೇವೆ ಮಾಡುವದಾಗಿದೆ ಮತ್ತು ಇತರರಿಗೆ ಆಳಾಗುವುದಾಗಿದೆ.
   ಈ. ಬೇರೆಯವರ ರಕ್ಷಣೆಗಾಗಿ ಶಿಲುಬೆ ಮೇಲೆ ತಾನು ಬಾಧಿಸಿ ಮರಣ ಹೊಂದುವುದಿಂದ ಈ ದೇವರ ರಾಜ್ಯವನ್ನು ಯೇಸು ವ್ಯಕ್ತಿಕರಿಸುತ್ತಾನೆ.
7. ಯೇಸು ಬಾರ್ತಿಮಾಯನನ್ನು ಗುಣಪಡಿಸುತ್ತಾನೆ (ವ. 46-52), ಯಾಕೆಂದರೆ ಈ ಬಡ ಕುರುಡನ ಮೇಲೆ ಕರುಣೆ ಉಂಟಾಗುತ್ತದೆ (ವ. 47-48). ಯಾಕೆಂದರೆ ಬಾರ್ತಿಮಾಯನು ಯೇಸುವಿನ ಮೇಲಯೇ ಪೂರ್ಣವಾಗಿ ನಂಬಿಕೆ ಇಟ್ಟಿರುತ್ತಾನೆ, ಯೇಸು ಈ ನಂಬಿಕೆಯನ್ನು "ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿ ಅದೆ" (ವ. 52) ಎಂಬ ಪದಗಳಿಂದ ವರ್ಣಿಸುತ್ತಾನೆ.

**ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ವ. 2-12 ರಲ್ಲಿ ವಿಚ್ಛೇಧನದ ಕುರಿತ ಯೇಸುವಿನ ಬೋಧನೆ ಮತ್ತು ಇಂದು ದಕ್ಷಿಣ ಭಾರತದ ಸಭೆಗಳಿಗೆ ಈ ವಾಕ್ಯಭಾಗದ ಪ್ರಾಯೋಗಿಕ ಅನ್ವಯ (ಅಲ್ಲದೇ 1ಕೊರಿಂಥ 3:12-15 ರಲ್ಲಿನ ಪೌಲನ ಬೋಧನೆಯನ್ನು ಸಹ ಪರಿಗಣಿಸಿ) ಇದು ದಕ್ಷಿಣ ಭಾರತದ ಸಭಾ ನಾಯಕರ ಗುಂಪಿಗೆ ವಿಮರ್ಶಿಸುವುದಕ್ಕಾಗಿ ಇರುವ ನಿಮ್ಮ ಅಂಶಗಳಾಗಿರಬಹುದು:

   ಅ. ಗಂಡ ಹೆಂಡತಿಗಾಗಿನ ದೇವರ ಮೂಲ ಯೋಜನೆಯಲ್ಲಿ ವಿಚ್ಛೇಧನಕ್ಕಾಗಿ ಯಾವುದೇ ಅವಕಾಶವಿಲ್ಲ.

   ಆ. ಪಾಪದ ನಂತರ ಇಸ್ರಾಯೇಲ್ಯರಿಗೆ ವಿಚ್ಛೇದನಕ್ಕಾಗಿ ಕೆಲ ಅವಶ್ಯಕತೆ ಇದೆ ಎಂಬುದನ್ನು ದೇವರು ಕಂಡನು.

   ಇ. ಯಾಕೆ ವಿಚ್ಛೇದನವು ಯೆಹೂದಿ ಸಮಾಜದಲ್ಲಿ ಒಪ್ಪಿತವಾಗಿದೆ? ಯಾವ ಪರಿಸ್ಥಿತಿಯಡಿಯಲ್ಲಿ ಇದನ್ನು ಒಪ್ಪಲಾಯಿತು.

   ಈ. 1 ಕೊರಿಂಥ 7:12-15 ರಲ್ಲಿ ಪೌಲನು ವಿಚ್ಛೇದನದ ಬಗ್ಗೆ ಏನೆಂದು ಹೇಳುತ್ತಾನೆ? ಆತನ ಬೋಧನೆಯು ನಮ್ಮ ಪ್ರಸ್ತುತ ಸನ್ನಿವೇಶಕ್ಕೆ ಅನ್ವಯವಾಗುತ್ತದಾ? ಹೌದಾದರೆ ಹೇಗೆ ಮತ್ತು ಎಷ್ಟರ ಮಟ್ಟಿಗೆ ಅದು ಅನ್ವಯವಾಗುತ್ತದೆ.

   ಉ. ಕೊನೆಯದಾಗಿ ಈ ಹಿಂದಿನ ನಾಲ್ಕು ಅಂಶಗಳ ಅಡಿಯಲ್ಲಿ ಒಂದು ದಂಪತಿಗೆ ನಾವು ವಿಚ್ಛೇದನಕ್ಕೆ ಅನುಮತಿಸುವಂತಹ ಯಾವುದಾದರು ಸನ್ನಿವೇಶವಿದೆಯಾ? ಹಾಗಿದ್ದಲ್ಲಿ ಅದೆಂತಾ ಸನ್ನಿವೇಶವಾಗಿರಬಹುದು? ಈ ರೀತಿಯ ವಿಷಯಗಳನ್ನು ತೀರ್ಮಾನಿಸುವಾಗ ನಮ್ಮ ಪ್ರಾಥಮಿಕ ಕಾಳಜಿ ಏನಾಗಿರಬೇಕು?

2. –
3. –

**ಉತ್ತರಗಳು: ಮಾರ್ಕ ಅಧ್ಯಾಯ 11**

**ಪ್ರಶ್ನೆಗಳಿಗೆ ಉತ್ತರಗಳು**

1. ಯೇಸು ತನ್ನ ಇಬ್ಬರು ಶಿಷ್ಯರಿಗೆ ಒಂದು ಕತ್ತೇಮರಿಯನ್ನು ತರುವುದಕ್ಕಾಗಿ ಮುಂದಾಗಿ ಕಳುಹಿಸಿದನು. ತಾನು ಯೆರೂಸಲೇಮನ್ನು ಪ್ರವೇಶಿಸುವಾಗ ಆ ಕತ್ತೇಮರಿ ಮೇಲೆ ಸವಾರಿ ಮಾಡಬೇಕೆಂದು ಬಯಸಿದನು. ಇದು ಜೆಕರ್ಯ 9:9 ರ ಮೆಸ್ಸೀಯನ ಪ್ರವಾದನೆಯನ್ನು ನೆರವೇರಿಸುವುದಾಗಿತ್ತು (ವ. 1-7)
2. ಯೇಸು ಕತ್ತೇಮರಿ ಮೇಲೆ ಕೂತುಕೊಂಡು ಯೆರೂಸಲೇಮಿಗೆ ಸವಾರಿ ಮಾಡಿದನು (ವ. 1-7).
3. ಯೇಸು ಯೆರೂಸಲೇಮಿನೊಳಕ್ಕೆ ಬರುವುದನ್ನು ಕಂಡಾಗ ಜನರು ತಮ್ಮ ಬಟ್ಟೆಗಳನ್ನು ಮತ್ತು ಚಿಗುರುಗಳನ್ನು ಆತನ ಮುಂದೆ ದಾರಿಯಲ್ಲಿ ಹಾಸಿದರು. ಆ ನಂತರ ಅವರು ಅರ್ಭಟಿಸುತ್ತಾ ಮೆಸ್ಸೀಯ ರಾಜನನ್ನು ಹರಸುವ ವಚವೊಂದನ್ನು ಕೀರ್ತನೆ 118 ರಿಂದ ಹಾಡಿದರು (ವ. 8-10).
4. ತಾನು ಯೆರೂಸಲೇಮಿಗೆ ಬಂದ ಮೇಲೆ ಯೇಸು ದೇವಾಲಯದೊಳಕ್ಕೆ ಹೋಗಿ ಅದರ ಸುತ್ತ ನೋಡಿದನು. ಸಾಯಂಕಾಲದ ವೇಳೆ ಬೇಥಾನ್ಯಕ್ಕೆ ಹೋಗಿ ತನ್ನ ಶಿಷ್ಯರೊಂದಿಗೆ ಬಹುಶಃ ತನ್ನ ಸ್ನೇಹಿತರಾದ ಲಾಜರ, ಮಾರ್ಥ ಮತ್ತು ಮರಿಯರ ಮನೆಯಲ್ಲಿ ರಾತ್ರಿಯನ್ನು ಕಳೆದಿರಬಹುದು (ವ. 11) (ಯೋಹಾನ 12:1).
5. ಯೇಸು ಅಂಜೂರದ ಮರವು ಎಂದಿಗೂ ಹಣ್ಣನ್ನು ಕೊಡದಿರಲಿ ಎಂದು ಹೇಳಿದ್ದನ್ನು ಶಿಷ್ಯರು ಕೇಳಿಸಿಕೊಂಡರು (ವ. 14).
6. ಯೇಸು ದೇವಾಲಯದೊಳಕ್ಕೆ ಪ್ರವೇಶಿಸಿದಾಗ ಅದರಲ್ಲಿದ್ದ ಮಾರುವವರನ್ನು ಕೊಳ್ಳುವವರನ್ನು ಹೊರಡಿಸಿಬಿಟ್ಟು ಚಿನಿವಾರರ ಮೇಜುಗಳನ್ನು ಕೆಡವಿಹಾಕಿದನು. ಅಲ್ಲದೇ ಆತನು ಯಾರಿಗೂ ದೇವಾಲಯದ ಅಂಗಳಗಳಲ್ಲಿ ಹಾದು ಹೋಗಗೊಡಿಸಲಿಲ್ಲ. ತನ್ನ ಕಾರ್ಯಗಳಿಗೆ ಪೂರಕವಾಗಿ ದೇವಾಲಯದೊಂದಿಗಿನ ದೇವರ ಉದ್ದೇಶದ ಕುರಿತಾಗಿ ಹಳೇ ಒಡಂಬಡಿಕೆಯ ಪ್ರವಾದಿಗಳ ಮಾತನ್ನು ಬಳಸುತ್ತಾನೆ: "ನನ್ನ ಆಲಯವು ಎಲ್ಲಾ ಜನಾಂಗಗಳಿಗೂ ಪ್ರಾರ್ಥನಾಲಯ ಎನಿಸಿಕೊಳ್ಳುವುದು….ಆದರೆ ನೀವದನ್ನು ಕಳ್ಳರಗವಿ ಮಾಡಿದ್ದೀರಿ" (ವ. 15-17)
7. ಯೇಸು ದೇವಾಲಯದಲ್ಲಿ ಮಾಡಿದ್ದೆಲ್ಲವನ್ನು ಕೇಳಿಸಿಕೊಂಡಾಗ ಯೆಹೂದಿ ನಾಯಕರು ಆತನನ್ನು ಕೊಲ್ಲುವುದಕ್ಕಾಗಿ ಸಂದರ್ಭ ನೋಡುತ್ತಿದ್ದರು ಮತ್ತು ಆತನನನ್ನು ತಡೆಯುವ ಪ್ರಯತ್ನವನ್ನು ತೀವ್ರಗೊಳಿಸಿದರು (ವ. 18).
8. ಜನರೆಲ್ಲಾ ಯೇಸುವಿನ ಉಪದೇಶವನ್ನು ಕೇಳಿ ಅತ್ಯಾಶ್ಚರ್ಯಪಟ್ಟದ್ದರಿಂದ ಯೆಹೂದಿ ನಾಯಕರು ಯೇಸುವಿಗೆ ಹೆದರಿದರು (ವ. 18).
9. ಮರುದಿನ ಬೆಳಿಗ್ಗೆ ಅಂಜೂರದ ಮರವು ಬುಡದಿಂದ ಒಣಗಿ ಹೋಯಿತು (ವ. 20).
10. ಅಂಜೂರದ ಮರವು ಒಣಗಿ ಹೋಗಿದೆ ಎಂದು ಪೇತ್ರನು ಹೇಳಿದ್ದಕ್ಕೆ ಯೇಸು ಅಂಜೂರದ ಮರದ ಬಗ್ಗೆ ಏನನ್ನೂ ಹೇಳಲಿಲ್ಲ, ಬದಲಾಗಿ ದೇವರಲ್ಲಿನ ನಂಬಿಕೆಯ ಬಗ್ಗೆ ಮಾತನಾಡಿದನು (ವ. 22).
11. ಅಂಜೂರದ ಮರವು ಒಣಗಿಹೋದ ನಂತರ ತನ್ನ ಶಿಷ್ಯರಿಗೆ ಯೇಸು ಹೇಳಿದ ಮಾತಿನ ಕೊನೇಭಾಗದಲ್ಲಿನ ಮುಖ್ಯ ಪದಗಳೆಂದರೆ "ಪ್ರಾರ್ಥನೆ" ಮತ್ತು "ಕ್ಷಮಾಪಣೆ" (ವ. 24-25).
12. ಯೆಹೂದಿ ನಾಯಕರು ಯೇಸುವಿನ ಅಧಿಕಾರವೇನೆಂದು ಪ್ರಶ್ನಿಸಿದರು (ವ. 28). ಯಾಕೆಂದರೆ ಹಿಂದಿನ ದಿನ ಆತನು ದೇವಾಲಯವನ್ನು ಶುದ್ಧೀಗೊಳಿಸಿದ್ದನ್ನು ಅವರು ಕೇಳಿದ್ದರು (ವ. 15-18).
13. ಸ್ನಾನಿಕನಾದ ಯೋಹಾನನ ಸೇವೆಯ ಕುರಿತ ಯೇಸುವಿನ ಪ್ರಶ್ನೆಗೆ ಯೆಹೂದಿ ನಾಯಕರು ಉತ್ತರಿಸಲಿಲ್ಲ. ಆತನ ಸೇವೆಯು ದೇವರಿಂದ ಬಂದದ್ದೋ ಅಥವಾ ಸ್ವತಃ ಆತನದ್ದೋ ಎಂಬುದು ಪ್ರಶ್ನೆಯಾಗಿತ್ತು. ಬದಲಾಗಿ ಅವರು ಅದು ತಮಗೆ ಗೊತ್ತಿಲ್ಲ ಎಂದಷ್ಟೇ ಹೇಳಿದರು (ವ. 29-33).

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಯೇಸು ಅರಸನಂತೆ ಯೆರೂಸಲೇಮಿನೊಳಕ್ಕೆ ಪ್ರವೇಶಿಸಿದ ಕಥೆಯನ್ನು ಎಲ್ಲಾ ನಾಲ್ಕು ಸುವಾರ್ತೆಗಳು ಒಳಗೊಂಡಿವೆ (ನೋಡಿ ಮತ್ತಾ. 21:1-11, ಮಾರ್ಕ 11:1-11, ಲೂಕ 19:28-40 ಮತ್ತು ಯೋಹಾನ 12:12-16). ನಾಲ್ಕು ವಿವರಗಳ ಒಂದು ಹೋಲಿಕೆ ಇಂತಿದೆ:

   ಅ. ಎಲ್ಲಾ ನಾಲ್ಕು ಸುವಾರ್ತೆಗಳೂ ಸಹ ಆ ಸಂದರ್ಭದ ಸಂಭ್ರಮೋಲ್ಲಾಸದ ಭಾವನೆಯನ್ನು ವರ್ಣಿಸುತ್ತವೆ. ಎಲ್ಲಾ ನಾಲ್ಕು ಸುವಾರ್ತೆಗಳೂ ಸಹ ಕೀರ್ತನೆ 118:16 ನ್ನು ಉಪಯೋಗಿಸಿವೆ ("ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ"). ಆದರೆ ಈ ಹೇಳಿಕೆಯ ಸುತ್ತಣ ಅಂಶಗಳಲ್ಲಿ ಅವು ವಿಭಿನ್ನವಾಗಿವೆ. ಮತ್ತಾಯನು "ದಾವೀದನ ಕುಮಾರನಿಗೆ ಜಯ (ಹೋಸನ್ನ)" ಎಂದು ಪ್ರಾರಂಭಿಸಿ "ಮೇಲಣ ಲೋಕಗಳಲ್ಲಿ ಜಯ (ಹೋಸನ್ನ) ಎಂಬುದರೊಂದಿಗೆ ಮುಕ್ತಾಯಗೊಳಿಸುತ್ತಾನೆ. ಲೂಕನು ಮೊದಲು ಏನನ್ನು ಹೇಳದೆ "ಪರಲೋಕದಲ್ಲಿ ಮಂಗಳ, ಮೇಲಣ ಲೋಕಗಳಲ್ಲಿ ಮಹಿಮೆ" ಎಂದು ಮುಕ್ತಾಯಗೊಳಿಸುತ್ತಾನೆ. ಯೋಹಾನ ಇದನ್ನು ಜಯ(ಹೋಸನ್ನ)ದೊಂದಿಗೆ ಪ್ರಾರಂಭಿಸಿ ಇಸ್ರಾಯೇಲಿನ ಅರಸನಿಗೆ ಆಶೀರ್ವಾದ" ಎಂಬುದರೊಂದಿಗೆ ಮುಗಿಸುತ್ತಾನೆ. ಅಲ್ಲಿ ಸೇರಿದ್ದ ಜನಸಮೂಹ ಮತ್ತು ಶಿಷ್ಯರು ಅನೇಕ ಸಂಗತಿಗಳಿಂದ ಆರ್ಭಟಿಸಿರಬಹುದು. ಕೆಲವು ಬಗೆಯನ್ನು ಸುವಾರ್ತಾ ಬರಹಗಾರರು ತಮ್ಮ ವಿವರಗಳಲ್ಲಿ ಸೇರಿಸಿದ್ದಾರೆ.

   ಆ. ಮತ್ತಾಯ: ಈತನ ವಿವರವು ಇಬ್ಬರು ಕುರುಡರನ್ನು ಗುಣಪಡಿಸುವ ಕಥೆಯೊಂದಿಗೆ ಪ್ರಾರಂಭವಾಗುತ್ತದೆ. ಮತ್ತಾಯನು ಮಾತ್ರ ಎರಡು ಪ್ರಾಣಿಗಳೆಂದು ಹೇಳುತ್ತಾನೆ (ಕತ್ತೆ ಮತ್ತು ಅದರ ಮರಿ). ಇಬ್ಬರು ಶಿಷ್ಯರು ಎರಡು ಪ್ರಾಣಿಗಳನ್ನು ತರುವುದರ ಸಂಬಂಧದಲ್ಲಿ ನೆರವೇರಿಕೆಯೆಂಬಂತೆ ಜೆಕರ್ಯ 9:9 ನ್ನು ಉಪಯೋಗಿಸುತ್ತಾನೆ *("ನೋಡು ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ, ಶಾಂತಗುಣವುಳ್ಳವನಾಗಿಯೂ ಕತ್ತೆಯನ್ನು, ಹೌದು ಪ್ರಾಯದ ಕತ್ತೇಮರಿಯನ್ನು ಹತ್ತಿದವನಾಗಿಯೂ ಬರುತ್ತಾನೆ")*. ಆತನು ಜನರ ಗುಂಪಿನ ಬಗ್ಗೆ "ಬಹಳ ಮಂದಿ" "ಜನರ ಗುಂಪಿನವರು" ಎಂಬ ಪದವನ್ನು ಬಳಸುತ್ತಾನೆ. ಈತನ ವಿವರವು ಯೇಸುವಿನ ಯೆರೂಸಲೇಮಿನ ಪ್ರವೇಶ ಮತ್ತು ಇಡೀ ಪಟ್ಟಣವೆಲ್ಲ ಗದ್ದಲವಾಗುವುದರೊಂದಿಗೆ ಮುಕ್ತಾಯವಾಗುತ್ತದೆ. "ಈತನು ಯಾರು?" ಎಂದು ಅವರು ಕೇಳುತ್ತಾರೆ, ಆಗ ಜನರ ಗುಂಪಿನವರು ಅವರಿಗೆ "ಈತನು ಆ ಪ್ರವಾದಿ, ಗಲಿಲಾಯದ ನಜರೇತಿನ ಯೇಸು" ಅಂದರು.

   ಇ. ಮಾರ್ಕ: ಈತನ ವಿವರವು ಕುರುಡ ಬಾರ್ತಿಮಾಯನನ್ನು ಗುಣಪಡಿಸುವುದರ ಕುರಿತಾದ ಕಥೆಯೊಂದಿಗೆ ಪ್ರಾರಂಭವಾಗುತ್ತದೆ. ಇಬ್ಬರು ಶಿಷ್ಯರು ಹೇಗೆ ಕತ್ತೇಮರಿಯನ್ನು ತಂದರೆಂಬುದರ ಬಗ್ಗೆ ಈತನ ಬಳಿ ಹೆಚ್ಚಿನ ವಿವರವಿದೆ. ಜನ ಸಮೂಹದ ಬಗ್ಗೆ ಈತನು "ಅನೇಕರು" ಎಂಬ ಪದವನ್ನು ಬಳಸುತ್ತಾನೆ. ಯೇಸುವು ಯೆರೂಸಲೇಮನ್ನು ಪ್ರವೇಶಿಸಿ ದೇವಾಲಯದೊಳಕ್ಕೆ ಹೋಗುವದರೊಂದಿಗೆ ಈತನ ವಿವರವು ಮುಕ್ತಾಯವಾಗುತ್ತದೆ.

   ಈ. ಲೂಕ: ಈತನ ವಿವರವು ಹತ್ತು ಮೋಹರಿಗಳ ವಿಷಯವಾದ ಸಾಮ್ಯದ ಮುಕ್ತಾಯದೊಂದಿಗೆ ಪ್ರಾರಂಭವಾಗುತ್ತದೆ. ಈತನ ವಿವರವು ಹೇಗೆ ಶಿಷ್ಯರು ಕತ್ತೇಮರಿಯನ್ನು ತಂದರೆಂಬುದರ ಬಗ್ಗೆ ಮಾರ್ಕನಂತೆಯೇ ಇದೆ. ಈತನು ಜನಸಮೂಹದ ಬಗ್ಗೆ "ಜನರ ಗುಂಪು" ಮತ್ತು "ಶಿಷ್ಯಮಂಡಲಿ" ಎಂಬ ಪದವನ್ನು ಬಳಸುತ್ತಾನೆ. ಜನರು ತಾವು ಕಂಡ ಮಹತ್ಕಾರ್ಯಗಳಿಗಾಗಿ ದೇವರನ್ನು ಕೊಂಡಾಡಿದರೆಂಬುದನ್ನು ಆತನು ಸೇರಿಸುತ್ತಾನೆ. ಈತನು ಚಿಗುರುಗಳ ಬಗ್ಗೆ ತಿಳಿಸುವುದಿಲ್ಲ. ಈತನು ಜೆಕರ್ಯನ ಪ್ರವಾದನೆಯನ್ನು ಸಹ ಸೇರಿಸುವುದಿಲ್ಲ. ಕೆಲ ಫರಿಸಾಯರು ಯೇಸುವಿಗೆ ನಿನ್ನ ಶಿಷ್ಯರನ್ನು ಗದರಿಸೆಂದು ಹೇಳುತ್ತಾರೆ, ಆದರೆ ಯೇಸು ಅವರಿಗೆ "ಇವರು ಸುಮ್ಮನಾದರೆ, ಈ ಕಲ್ಲುಗಳೇ ಕೂಗುವವು" ಎಂದು ಉತ್ತರಿಸುತ್ತಾನೆ. ಅನಂತರ ಯೆರೂಸಲೇಮಿನ ನಾಶನದ ಕುರಿತ ಪ್ರವಾದನೆ ಬರುತ್ತದೆ.

   ಉ. ಯೋಹಾನ: ಈತನ ವಿವರವು ಬೇಥಾನ್ಯದಲ್ಲಿ ಮರಿಯಳು ಯೇಸುವಿಗೆ ಪರಿಮಳ ತೈಲವನ್ನು ಹಚ್ಚುವುದರ ಕುರಿತಾದ ಕಥೆಯ ನಂತರ ಕಂಡುಬರುತ್ತದೆ. ಈತನು ಬೇತ್ಫಗೆ, ಇಬ್ಬರು ಶಿಷ್ಯರು ಮತ್ತು ಕತ್ತೆಯ ಮರಿಯ ಬಗ್ಗೆ ತಿಳಿಸುವುದಿಲ್ಲ. ಬದಲಾಗಿ

ಕಥೆಯ ಮಧ್ಯದಲ್ಲಿ ಯೇಸು ಕತ್ತೆಯ ಮರಿಯನ್ನು ತರಿಸಿಕೊಳ್ಳುತ್ತಾನೆ. ಮತ್ತು ಜೆಕರ್ಯ 9:9 ನ್ನು ಇಲ್ಲಿ ಬಳಸಲಾಗಿದೆ ("ಇಗೋ ನಿನ್ನ ಅರಸನು ಕತ್ತೆಮರಿಯ ಮೇಲೆ ಕೂತುಕೊಂಡು ಬರುತ್ತಾನೆ"). ಜನರ ಗುಂಪಿನ ಬಗ್ಗೆ ಆತನು "ಜನಸಮೂಹ" ಎಂಬ ಮಾತನ್ನು ಬಳಸುತ್ತಾನೆ. ಈತನು ಖರ್ಜೂರದ ಗರಿಗಳೆಂದು ಹೇಳುತ್ತಾನೆ. ಏನಾಗುತ್ತಿದೆ ಎಂಬುದು ಶಿಷ್ಯರಿಗೆ ಅರ್ಥವಾಗಲಿಲ್ಲ ಎಂಬ ಮಾಹಿತಿಯೊಂದಿಗೆ ಈತನ ವಿವರವು ಮುಕ್ತಾಯವಾಗುತ್ತದೆ.

ಊ. ಸುವಾರ್ತಾ ಬರಹಗಾರರು ತಮ್ಮ ಸಂಗ್ರಹಿತ ವಿಷಯಗಳನ್ನು ಸ್ವತಂತ್ರವಾಗಿ ಬಳಸಿದರೆಂಬುದರೊಂದಿಗೆ ನಾವು ಮುಕ್ತಾಯ ಮಾಡಬಹುದು. ತಮ್ಮ ಪೂರ್ಣ ವಿಷಯವಸ್ತು ಮತ್ತು ಸಂದೇಶಗಳಿಗೆ ಸರಿಹೊಂದುವಂತಹ ವಿವರಗಳನ್ನು ಅವರು ಸೇರಿಸಿದರು. ಉದಾಹರಣೆಗೆ ಮತ್ತಾಯನು ತನ್ನ ಸುವಾರ್ತೆಯುದ್ದಕ್ಕೂ ಹಳೇ ಒಡಂಬಡಿಕೆಯ ಪ್ರವಾದನೆಯ ನೆರವೇರಿಕೆಯ ವಿಷಯವಸ್ತುವನ್ನು ಹೊಂದಿದ್ದಾನೆ. ಇದನ್ನು ಯೇಸು ಅರಸನಂತೆ ಆಗಮಿಸುವ ವಿವರದಲ್ಲಿ ಸಹ ಕಾಣಬಹುದು.



2. ಲೂಕನು ಅಂಜೂರದ ಮರದ ಕಥೆಯನ್ನು ತನ್ನ ಸುವಾರ್ತೆಯಲ್ಲಿ ಸೇರಿಸಿಲ್ಲ. ಅದರ ಸ್ಥಳದಲ್ಲಿ ಆತನು ಯೇಸು ಯೆರೂಸಲೇಮ್ ಪಟ್ಟಣವನ್ನು ನೋಡಿ ಅಳುವ ವಿವರವನ್ನು ಸೇರಿಸಿದ್ದಾನೆ (ಲೂಕ 19:41-44). ಈ ವಾಸ್ತವಾಂಶವು ಮಾರ್ಕನ ಸುವಾರ್ತೆಯಲ್ಲಿನ ಅಂಜೂರದ ಮರದ ಕಥೆಯು (11:12-14 ಮತ್ತು 20-21) ಒಂದು ಪ್ರವಾದನೆಯಾಗಿದೆ ವಿನಃ (ಯೆರೂಸಲೇಮಿಗೆ ಮತ್ತು ಅದರ ದೇವಾಲಯಕ್ಕೆ ಏನಾಗುತ್ತದೆಂಬುದನ್ನು ಯೇಸು ಮುಂತಿಳಿಸುತ್ತಾನೆ) ಶಾಪವಲ್ಲ (ಅಂಜೂರದ ಮರವಾಗಲೀ, ಪಾಪಮಯ ಯೆರೂಸಲೇಮ್ ಪಟ್ಟಣ ಅಥವಾ ಅದರ ಜನರಾಗಲೀ) ಎಂಬ ವ್ಯಾಖ್ಯಾನವನ್ನು ಬಲಪಡಿಸಬಹುದು.
3. ಫರಿಸಾಯರು ಸ್ನಾನಿಕನಾದ ಯೋಹಾನನ ಸೇವೆಯ ಕುರಿತ ಯೇಸುವಿನ ಪ್ರಶ್ನೆಗೆ ಉತ್ತರಿಸಲು ಹಿಂಜರಿಯುತ್ತಾರೆ (ವ. 29-33). ಯೇಸುವಿನ ಪ್ರಶ್ನೆಯು ಅವರನ್ನು ಪೇಚಾಡುವಂತೆ ಮಾಡಿತು. ಒಂದು ವೇಳೆ ಅವರು "ದೇವರಿಂದ ಬಂದದ್ದು" ಎಂದು ಹೇಳಿದರೆ ಯಾಕೆ ಅವರು ಆತನನ್ನು ವಿರೋಧಿಸಿದರು? ಒಂದು ವೇಳೆ ಅವರು "ಮನುಷ್ಯರಿಂದ ಬಂತು" ಎಂದರೆ ಯೋಹಾನನ್ನು ನಂಬಿದ ಜನರೆಲ್ಲರಿಂದ ಅವರು ಯಾಕೆ ವಿರೋಧತೆಯನ್ನು ಎದುರಿಸಬೇಕಾಯಿತು. ಅಲ್ಲದೆ ಅವರು ಆತ್ಮೀಕ ವಿಷಯಗಳ ನ್ಯಾಯವಾಧಿಗಳೆಂಬುದರಿಂದ ತಮ್ಮನ್ನೇ ಅನರ್ಹರೆಂಬುದಾಗಿ ಪರಿಗಣಿಸಬೇಕಾಯಿತು. ಯೋಹಾನನ ಸೇವೆಯು ದೇವರಿಂದ ಬಂದದ್ದಾಗಿತ್ತು, ಮತ್ತು ಯೋಹಾನ ಮತ್ತು ಆತನ ಸೇವೆಯು ಯೇಸುವಿಗೆ ಸೂಚನೆಯಾಗಿತ್ತು. ಹಾಗಾಗಿ ಯೇಸುವಿನ ಅಧಿಕಾರದ ಕುರಿತ ಪ್ರಾರಂಭಿಕ ಪ್ರಶ್ನೆಯೇ ಅವರ ಆತ್ಮೀಕ ಕುರುಡತನವನ್ನು ಪ್ರಕಟಿಸಿತು.
4. ಒಣಗಿ ಹೋದ ಅಂಜೂರದ ಮರದ ಕುರಿತ ಕಥೆಯ ಸಂಬಂಧದಲ್ಲಿ ಯೇಸು ತನ್ನ ಶಿಷ್ಯರಿಗೆ ನಂಬಿಕೆ, ಪ್ರಾರ್ಥನೆ ಮತ್ತು ಕ್ಷಮೆಯ ಬಗ್ಗೆ ಬೋಧಿಸಿದನು. ಈ ಮೂರು ಆತ್ಮೀಕ ಅಂಶಗಳ ನಡುವಿನ ಸಂಬಂಧ ಇಂತಿದೆ:

ಅ. ಎಲೆಗಳಿಂದ ತುಂಬಿದ್ದ ಒಂದು ಅಂಜೂರದ ಮರವು ಒಂದು ದಿನದೊಳಗೆ ಬುಡದಿಂದ ಒಣಗಿಹೋಗಿರುವುದನ್ನು ನಂಬಲು ಯೇಸು ಮತ್ತು ಆತನ ಮಾತಿನಲ್ಲಿ (ವಾಕ್ಯದಲ್ಲಿ) ನಂಬಿಕೆ ಬೇಕಾಗಿದೆ. ಯೆರೂಸಲೇಮು ಮತ್ತು ಅದರ ದೇವಾಲಯದ ನಾಶನವನ್ನು ಪ್ರವಾದನಾತ್ಮಕವಾಗಿ ಮುಂತಿಳಿಸುವ ಈ ಘಟನೆಗೂ ದೇವರಲ್ಲಿ ಮತ್ತು ಯೇಸುವಿನ ಮೂಲಕ ಆತನ ಮಾತಿನ ನೆರವೇರಿಕೆಯಲ್ಲಿ ನಂಬಿಕೆಯ ಅಗತ್ಯವಿದೆ. ಹಾಗಾಗಿ ಅಂಜೂರ ಮರ ಮತ್ತು ನಂಬಿಕೆಯ ನಡುವಿನ ಒಂದು ಸಂಬಂಧ ಇದಾಗಿದೆ.

ಆ. ತಾನು "ನಿಮಗೆ ಸತ್ಯವಾಗಿ ಹೇಳುತ್ತೇನೆ" ಎಂದು ಹೇಳುವಾಗ ಯೇಸು ನಂಬಿಕೆ ಕುರಿತಾದ ಈ ಹೇಳಿಕೆಯನ್ನು ಪ್ರಾರ್ಥನೆಯೊಂದಿಗೆ ಸೇರಿಸುತ್ತಾನೆ. ನಮ್ಮ ಕ್ರೈಸ್ತೀಯ ಜೀವಿತಗಳಲ್ಲಿ ಪ್ರಾರ್ಥನೆಯಿಲ್ಲದೇ ಏನನ್ನು ಮಾಡಲಾಗುವುದಿಲ್ಲ ಎಂಬುದೇ ಇದಕ್ಕೆ ಕಾರಣವಾಗಿದೆ. ಸ್ವತಃ ಯೇಸುವೇ ಈ ಸತ್ಯವನ್ನು ಈ ಹಿಂದೆ ಸುವಾರ್ತೆಯಲ್ಲಿ ತೋರ್ಪಡಿಸಿದ್ದಾನೆ (ನೋಡಿರಿ 1:35, 6:46) ಮತ್ತು ಆತನು ಇದನ್ನು ಕೆಲದಿನಗಳ ತರುವಾಯ ಪುನಃ ಗೆತ್ಸೆಮನೆತೋಟದಲ್ಲಿ ತೋರ್ಪಡಿಸುವವನಾಗಿದ್ದನು (14:32-40). ನಿಮಗೆ ದೇವರಲ್ಲಿ ನಂಬಿಕೆ ಇದೆ ಮತ್ತು ನಿಮ್ಮ ಜೀವಿತವೆಲ್ಲಾ ಆತನ ಮೇಲೆ ಭರವಸೆ ಇಟ್ಟಿದ್ದೇವೆಂಬುದನ್ನು ತೋರಿಸಲಿರುವ ಉತ್ತಮವಾದ ಮಾರ್ಗವೆಂದರೆ ಪ್ರಾರ್ಥಿಸುವುದಾಗಿದೆ. ಹೀಗೆ ಪ್ರಾರ್ಥನೆಯು ಶಿಷ್ಯತ್ವದ ಬಹುಪ್ರಾಮುಖ್ಯವಾದ ಒಂದು ಭಾಗವಾಗಿದೆ.

ಇ. ಆದರೆ ಪ್ರಾರ್ಥನೆಯು ಒಂದು ಪ್ರತ್ಯೇಕವಾದ ವಾತಾವರಣದಲ್ಲಿ ಇರುವುದಾಗಿದೆ. ಈ ವಾತಾವರಣವು ಕ್ಷಮಾಪಣೆಯಾಗಿದೆ. ಕ್ಷಮಾಪಣೆಯು ಪ್ರಾರ್ಥನೆಯ ಸಂಸ್ಕೃತಿಯಾಗಿದೆ ಎಂದು ನಾವು ಹೇಳಬಹುದು. ಪ್ರಾರ್ಥನೆಯಲ್ಲಿ ದೇವರನ್ನು ನಾವು ಸಂಧಿಸುವಾಗ ನಮ್ಮ ಹೃದಯಗಳಲ್ಲಿ ಕ್ಷಮಾಪಣೆಯ ಕೊರತೆಯುಳ್ಳವರಾಗಿದ್ದರೆ ಆಗ ನಾವು ಪ್ರಾರ್ಥನೆಯ ಸಮರ್ಪಿಸಲ್ಪಡುವ ಮತ್ತು ಉತ್ತರಿಸಲ್ಪಪಡಬೇಕಾದ ವಾತಾವರಣವನ್ನು ಹಾಳುಮಾಡಿದಂತಾಗುತ್ತದೆ.

ಈ. ಈ ಕೆಲ ವಚನಗಳಲ್ಲಿ (ಮಾರ್ಕ 11:22-25) ಯೇಸು ಕ್ರೈಸ್ತೀಯ ಶಿಷ್ಯತ್ವದ ಮೂರು ಬಹುಮುಖ್ಯವಾದ ಅಂಶಗಳನ್ನು ತಿಳಿಸುತ್ತಾನೆ. ಅವುಗಳೆಂದರೆ: ನಂಬಿಕೆ, ಪ್ರಾರ್ಥನೆ ಮತ್ತು ಕ್ಷಮಾಪಣೆ

**ಉತ್ತರಗಳು: ಮಾರ್ಕ ಅಧ್ಯಾಯ 12**

**ಪ್ರಶ್ನೆಗಳಿಗೆ ಉತ್ತರಗಳು**

1. ದ್ರಾಕ್ಷೆಯ ತೋಟದ ಧಣಿಯು ದ್ರಾಕ್ಷೆಯ ತೋಟದ ಹಣ್ಣಿನ ಪಾಲನ್ನು ತೆಗೆದುಕೊಳ್ಳುವುದಕ್ಕಾಗಿ ಒಕ್ಕಲಿಗರ ಬಳಿಗೆ ತನ್ನ ಆಳನ್ನು ಕಳುಹಿಸುತ್ತಾನೆ (ವ. 2).
2. ಒಕ್ಕಲಿಗರು ಆ ಆಳುಗಳೊಂದಿಗೆ ಕೆಟ್ಟದ್ದಾಗಿ ನಡಕೊಂಡು ಅವರನ್ನು ಹೊಡೆದು ಬರಿಗೈಲಿ ಕಳುಹಿಸಿದರು, ಅಲ್ಲದೆ ಅದರಲ್ಲಿ ಕೆಲವರನ್ನು ಕೊಂದು ಹಾಕಿದರು. ವರ್ಷ ವರ್ಷ ಇದೇ ರೀತಿ ಆಯಿತು (ವ. 3-5).
3. ತನ್ನ ಮಗನಿಗಾದರು ಮರ್ಯಾದೆ ತೋರಿಸಾರೆಂದು ನೆನೆಸಿ ಧಣಿಯು ಆತನನ್ನು ಕಳುಹಿಸಲು ತೀರ್ಮಾನಿಸಿದನು ( ವ. 6).
4. ಒಕ್ಕಲಿಗರು ಧಣಿಯ ಮಗನನ್ನು ಕೊಂದುಹಾಕಿ ಆತನ ಶವವನ್ನು ದ್ರಾಕ್ಷೆಯ ತೊಟದಿಂದ ಹೊರಕ್ಕೆ ಬಿಸಾಡಿಬಿಟ್ಟರು, ಯಾಕೆಂದರೆ ಆತನು ಸತ್ತುಹೋಗಿರುವುದರಿಂದ ಆ ಆಸ್ತಿಯನ್ನು ತಮ್ಮದೆಂದು ಹೇಳಬಹುದೆಂದುಕೊಂಡರು (ವ. 7-8).
5. ಧಣಿಯು ಬಂದು ಒಕ್ಕಲಿಗರನ್ನು ಸಂಹರಿಸಿ ತನ್ನ ತೋಟವನ್ನು ಬೇರೆ ಜನರಿಗೆ ಮಾಡುವುದಕ್ಕೆ ಕೊಟ್ಟನು (ವ. 9).
6. ಯೇಸು ಈ ಸಾಮ್ಯವನ್ನು ಹೇಗೆ ಮನೆ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲು ಮೂಲೆಗಲ್ಲಾಯಿತು ಎಂಬುದರ ಕುರುತಾದ ಕೀರ್ತನೆ 118; 22-23 ರಿಂದ ಒಂದು ಹೇಳಿಕೆಯೊಂದಿಗೆ ಮುಕ್ತಾಯಗೊಳಿಸುತ್ತಾನೆ (ವ. 10-11).
7. ಕೇಳುಗರು ಈ ಸಾಮ್ಯಕ್ಕೆ ಮೂರು ರೀತಿಯಲ್ಲಿ ಪ್ರತಿಕ್ರಯಿಸಿದರು (ವ. 12):

   ಅ. ಇದು ತಮ್ಮ ಕುರಿತಾಗಿದೆ ಮತ್ತು ಇದು ತಮ್ಮ ಮೇಲಿನ ಒಂದು ನ್ಯಾಯತೀರ್ಪಾಗಿದೆ ಎಂಬುದಾಗಿ ಅವರು ತಿಳಿದುಕೊಂಡರು.

   ಆ. ಅವರು ಯೇಸುವನ್ನು ಕೊಲ್ಲಲು ನಿರ್ಧರಿಸಿಕೊಂಡರು.

   ಇ. ಆದರೆ ಅವರು ಆಗ ಏನನ್ನು ಮಾಡಲಾಗದೆ ದೇವಾಲಯವನ್ನು ಬಿಟ್ಟು ಹೋದರು. ಯಾಕೆಂದರೆ ಜನರು ಹೇಗೆ ಪ್ರತಿಕ್ರಯಿಸಬಹುದೆಂದು ಅವರು ಭಯಪಟ್ಟರು.
8. ಫರಿಸಾಯರು ಮತ್ತು ಹೆರೋದ್ಯರು ಯೇಸುವನ್ನು ಈ ರೀತಿಯಾಗಿ ಶ್ಲಾಘಿಸಿದರು(ವ. 13-14):

   ಅ. ಯೇಸುವು ಅಂತಹ ಅರ್ಹ ಧರ್ಮೋಪದೇಶಕ ಅಥವಾ ಶಾಸ್ತ್ರಿ ಆಗದಿದ್ದರೂ ಅವರು ಆತನನ್ನು "ಬೋಧಕನೇ" ಎಂದು ಕರೆದರು.

   ಆ. ಆತನ ಪ್ರಾಮಾಣಿಕತೆ, ಯಥಾರ್ಥತೆ ಮತ್ತು ಸತ್ಯತೆಗಾಗಿ, ತಾವು ಆತನನ್ನು ದ್ವೇಷಿಸಿದರು ಮತ್ತು ಸ್ವತಃ ತಾವೇ ಕಪಟಿಗಳಾಗಿದ್ದಾಗಿಯೂ ಮತ್ತು ತಮ್ಮ ಪ್ರಶ್ನೆಗಳ ಮೂಲಕ ಆತನಲ್ಲಿ ತಪ್ಪು ಕಂಡು ಹಿಡಿಯಬೇಕೆಂದು ಪ್ರಯತ್ನಿಸಿದರು ಆತನನ್ನು ಕೊಂಡಾಡಿದರು.
9. ಯೇಸು ಫರಿಸಾಯರು ಮತ್ತು ಹೆರೋದ್ಯರಿಗೆ ತನ್ನದೇ ಆದ ರೀತಿಯಲ್ಲಿ ಉತ್ತರಿಸಿದನು ಯಾಕೆಂದರೆ ಅವರು ಯಥಾರ್ಥವಾಗಿ ( ಪ್ರಾಮಾಣಿಕವಾಗಿ) ಆತನ ಉತ್ತರವನ್ನು ಬಯಸದೇ ಬರೀ ಆತನನ್ನು ಪರೀಕ್ಷಿಸುವುದಕ್ಕಾಗಿ ಬಯಸಿದ ಕಪಟಿಗಳಾಗಿದ್ದಾರೆ ಎಂಬುದನ್ನು ಆತನು ತಿಳಿದಿದ್ದನು (ವ. 13-17).
10. ಯೆಸು ಫರಿಸಾಯರು ಮತ್ತು ಹೆರೋದ್ಯರಿಗೆ ಕೈಸರನದನ್ನು ಕೈಸರನಿಗೆ ಕೊಡಿರಿ ಮತ್ತು ದೇವರದನ್ನು ದೇವರಿಗೆ ಕೊಡಿರಿ ಎಂದು ಉತ್ತರಕೊಟ್ಟನು. ಅವರು ಆತನು ಕೊಟ್ಟ ಉತ್ತರದ ರೀತಿಗೆ ಆಶ್ಚರ್ಯಪಟ್ಟರು (ವ. 17).
11. ಪುನರುತ್ಥಾನದ ಕುರಿತ ಪ್ರಶ್ನೆಯೊಂದಿಗೆ ಕೆಲ ಸದ್ದುಕಾಯರು ಯೇಸುವಿನ ಬಳಿಗೆ ಬಂದರು ಅವರು ಶಾರೀರಿಕ ಪುನರುತ್ಥಾನದಲ್ಲಿ ನಂಬಿಕೆ ಇಡುವುದಿಲ್ಲ, ಅವರ ಉದ್ದೇಶವು ಉತ್ತರ ಪಡುಕೊಳ್ಳುವುದಲ್ಲ, ಬದಲಾಗಿ ಯೇಸುವನ್ನು ಮುಜುಗರಕ್ಕೊಳಪಡಿಸುವುದು ಮತ್ತು ಪುನರುತ್ಥಾನದಲ್ಲಿ ನಂಬಿಕೆಯಿಡುವವರನ್ನು ಅಪಹಾಸ್ಯ ಮಾಡುವುದಾಗಿತ್ತು (ವ. 18-19).

12. ಸದ್ದುಕಾಯರು ಯೇಸುವಿನ ಮುಂದೆ ಒಂದು ಸಾಂದರ್ಭಿಕ ಕಥೆಯನ್ನು ಇಡುತ್ತಾರೆ (ವ. 19-22): ಒಬ್ಬ ಸ್ತ್ರೀಯು ಏಳುಮಂದಿ ಅಣ್ಣತಮ್ಮಂದಿರನ್ನು ಮದುವೆಯಾದರು ಸಂತಾನವಿಲ್ಲದವಳಾಗುತ್ತಾಳೆ. ಈಗ ಅವರೆಲ್ಲರೂ ಸತ್ತುಹೋಗುತ್ತಾರೆ ಹೀಗಾಗಿ ಅವರ ಪ್ರಶ್ನೆ ಏನೆಂದರೆ ಈ ಸ್ತ್ರೀಯು ಪುನರುತ್ಥಾನದಲ್ಲಿ ಯಾರ ಹೆಂಡತಿಯಾಗಿರುವಳು ( ವ. 23)?

13. ಯೇಸು ಸದ್ದುಕಾಯರಿಗೆ ಎರಡು ಆಪಾದನೆಗಳೊಂದಿಗೆ ಪ್ರತಿಕ್ರಯಿಸುತ್ತಾನೆ (ವ. 24):

ಅ. ಅವರು ಶಾಸ್ತ್ರವನ್ನು ಸರಿಯಾಗಿ ಅರಿತವರಾಗಿರಲಿಲ್ಲ (ಸದ್ದುಕಾಯರಿಂದ ಒಪ್ಪಿತವಾಗಿರುವ ಹಳೇ ಒಡಂಬಡಿಕೆಯ ಏಕೈಕ ಭಾಗವಾಗಿರುವ ಪಂಚಕಾಂಡವನ್ನು ಸಹ).

ಆ. ಅವರು ದೇವರ ಬಲವನ್ನು ತಿಳಿದವರಾಗಿರಲಿಲ್ಲ.

14. ದೇವರು ಜೀವಿತರಿಗೆ ದೇವನಾಗಿದ್ದಾನಯೇ ಹೊರತು ಜೀವವಿಲ್ಲದವರಿಗೆ ಅಲ್ಲ ಎಂಬ ತನ್ನ ಹೇಳಿಕೆಯನ್ನು ಬೆಂಬಲಿಸಲು ಯೇಸು (ವ. 26-27) ಹಳೇ ಒಡಂಬಡಿಕೆಯಲ್ಲಿ ದೇವರು ಮೋಶೆಗೆ ಉರಿಯುವ ಪೊದೆಯೊಳಗಿಂದ ತನ್ನನ್ನು ಪ್ರಕಟಿಸಿಕೊಂಡ ಕುರಿತ ಕಥೆಯನ್ನು ( ವಿಮೋಚನಕಾಂಡ 3:1-6) ಉಲ್ಲೇಖಿಸುತ್ತಾನೆ.

15. ಅತೀ ಪ್ರಾಮುಖ್ಯವಾದ ಆಜ್ಞೆ ಯಾವುದೆಂಬ ಪ್ರಶ್ನೆಯೊಂದಿಗೆ ಒಬ್ಬ ಶಾಸ್ತ್ರಿಯು ಯೇಸುವಿನ ಬಳಿಗೆ ಬರುತ್ತಾನೆ (ವ. 28) (ಬಹುಶಃ ಈತನು ಒಬ್ಬ ಫರಿಸಾಯನಾಗಿರಬಹುದು ಯಾಕೆಂದರೆ ಹೆಚ್ಚಿನ ಶಾಸ್ತ್ರಿಗಳೆಲ್ಲರೂ ಆ ಒಂದು ಧಾರ್ಮಿಕ ಗುಂಪಿಗೆ ಸೇರಿದವರಾಗಿದ್ದಾರೆ).

16. ಅತಿ ಪ್ರಾಮುಖ್ಯವಾದ ಆಜ್ಞೆ ಯಾವುದೆಂಬ ಪ್ರಶ್ನೆಗೆ ಯೇಸು ಹಳೇ ಒಡಂಬಡಿಕೆಯಿಂದ ಪ್ರೀತಿಯ ಕುರಿತಾದ ಎರಡು ವಾಕ್ಯ ಭಾಗಗಳನ್ನು ಉಪಯೋಗಿಸುವುದರ ಮೂಲಕ ಉತ್ತರಿಸುತ್ತಾನೆ (ವ. 29-31), ಮೊದಲನೇಯದು (ಧರ್ಮೊ. 6:4-5) ಇದು ಒಡಂಬಡಿಕೆಯ ಕರ್ತನನ್ನು ಪ್ರೀತಿಸುವುದಾಗಿದೆ. ಎರಡನೇಯದು (ಯಾಜಕ 19:18)- ಇದು ಇನ್ನೊಬ್ಬ ಮನುಷ್ಯನನ್ನು ಪ್ರೀತಿಸುವುದರ ಕುರಿತಾಗಿದೆ. ಈ ರೀತಿ ಮಾಡುವುದರ ಮೂಲಕ ಪ್ರೀತಿಯ ಈ ಎರಡು ಅಂಶಗಳು ಸಹ ಪರಸ್ಪರ ಸಂಬಂಧಿಸಿದವುಗಳಾಗಿದ್ದು ಅವುಗಳನ್ನು ಬೇರ್ಪಡಿಸಲಾಗದೆಂದು ಯೇಸು ತೋರಿಸಿದನು.

17. ಯೇಸುವಿನ ಉತ್ತರಕ್ಕೆ ಶಾಸ್ತ್ರಿಯು ಬಹುಸಂತೋಷಗೊಳ್ಳುತ್ತಾನೆ. ಆತನು ಯೇಸುವಿನೊಂದಿಗೆ ಪೂರ್ಣವಾಗಿ ಒಪ್ಪುತ್ತಾನೆ ಮತ್ತು ಪ್ರೀತಿಯ ಕುರಿತ ಈ ಆಜ್ಞೆಗಳು ದೇವಾಲಯದಲ್ಲಿನ ಎಲ್ಲಾ ಸರ್ವಾಂಗಹೋಮಗಳಿಗಿಂತಲೂ ಮತ್ತು ಯಜ್ಞಗಳಿಗಿಂತಲೂ ಹೆಚ್ಚಿನವುಗಳಾಗಿವೆ ಎಂಬ ಮಾತನ್ನು ಸಹ ಆತನು ಸೇರಿಸುತ್ತಾನೆ (ವ. 32-33).

18. ಶಾಸ್ತ್ರಿ ಮತ್ತು ಆತನ ಹೇಳಿಕೆ ಬಗ್ಗೆ ಯೇಸು ಒಂದು ಸಕರಾತ್ಮಕವಾದ ಮೌಲ್ಯಮಾಪನವನ್ನು ಮಾಡುತ್ತಾನೆ (ವ. 34): ಆತನು ಇನ್ನು ದೇವರ ರಾಜ್ಯದೊಳಗೆ ಸೇರಿರಲಿಲ್ಲ ಯಾಕಂದರೆ ಆತನಿನ್ನೂ ಯೇಸುವನ್ನು ಮತ್ತು ಆತನ ನುಡಿಗಳನ್ನು ಅಂಗೀಕರಿಸಲಿಲ್ಲ.

19. ಕ್ರಿಸ್ತನ ಗುರುತಿನ ಕುರಿತಾಗಿ ದೇವಾಲಯದಲ್ಲಿನ ಯೇಸುವಿನ ಬೋಧನೆಗೆ ಜನ ಸಮೂಹವು ಹರ್ಷದಿಂದ ಪ್ರತಿಕ್ರಯಿಸಿತು (ವ. 35-37), ಯೇಸುವು ಪ್ರಶ್ನೆಯಲ್ಲಿ ಅವರ ಬೋಧಕರುಗಳನ್ನು ಸಹ ಮೀರಿಸಿದ್ದಕ್ಕೆ ಅವರು ಖುಷಿಪಟ್ಟಿರಬಹುದು.

20. ವ. 38-40 ರಲ್ಲಿ ಶಾಸ್ತ್ರಿಗಳ ಬಗ್ಗೆ ಯೇಸು ಮಾಡಿದ ಟೀಕೆಗಳ ಪಟ್ಟಿ:

ಅ. ಅವರು ನಿಲುವಂಗಿಗಳನ್ನು ತೊಟ್ಟುಕೊಂಡು ಸಾರ್ವಜನಿಕ ಸ್ಥಳಗಳಲ್ಲಿ ತೋರಿಸಿಕೊಳ್ಳಬೇಕೆಂದು ಬಯಸುತ್ತಾರೆ.

ಆ. ಅವರು ಮಾರುಕಟ್ಟೆಗಳಿಗೆ ಹೋಗುವಾಗ ಜನರ ಗಮನಹರಿಸುವಿಕೆಯಲ್ಲಿ ಸಂತೋಷಿಸುವವರಾಗಿದ್ದಾರೆ.

ಇ. ಸಭಾಮಂದಿರದಲ್ಲಿ ಅವರು ಮುಖ್ಯ ಪೀಠಗಳನ್ನು ಬಯಸುತ್ತಾರೆ.

ಈ. ಅವರು ಬಡವರ ಮತ್ತು ವಿಧವೆಯರ ಒಳತಿಗಿಂತ ತಮ್ಮ ಆದಾಯದ ಬಗ್ಗೆಯೇ ಹೆಚ್ಚು ಕಾಳಜಿಯುಳ್ಳವರಾಗಿದ್ದಾರೆ. ಬಡವಿಧವೆಯು ಅವರಿಗೆ ದಶಮಾಂಶ ಮತ್ತು ಕಾಣಿಕೆಗಳನ್ನು ತನ್ನ ಆಸ್ತಿಯನ್ನು ಕಳಕೊಳ್ಳುವವರೆಗೂ ಅರ್ಪಿಸಿದರೂ ಅದನ್ನು ಅವರು ಮನಸ್ಸಿಗೆ ತಂದುಕೊಳ್ಳುತ್ತಿರಲಿಲ್ಲ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಅವರು ಬಡಾಯಿಗಾರರು, ಸ್ವಾರ್ಥಿಗಳು ಮತ್ತು ಕಠಿಣ ಹೃದಯದ ಕಪಟಿಗಳು ಆಗಿದ್ದರು.

21. ವಿಧವೆಯ ಕಾಣಿಕೆಯ ಕುರಿತಾದ ಕಥೆಯು ದೇವಾಲಯದಲ್ಲಿ ಸ್ತ್ರೀಯರಿಗಾಗಿನ ಅಂಗಳದಲ್ಲಿ ನಡೆಯುತ್ತಿದೆ, ಇದು ಸ್ತ್ರೀ ಪುರುಷರನ್ನೊಳಗೊಂಡು ಎಲ್ಲಾ ಯೆಹೂದ್ಯರಿಗೂ ಸುಲಭ ಸಾಧ್ಯವಾದ ಸ್ಥಳವಾಗಿತ್ತು. ಆರಾಧನೆಗೆ ಬರುವವರಿಂದ ತರಲ್ಪಡುವ ಕಾಣಿಕೆಗಳಿಗಾಗಿನ ಪೆಟ್ಟಿಗೆಗಳನ್ನೊಳಗೊಂಡ ದೇವಾಲಯದ ಖಜಾನೆಯು ಅಲ್ಲಿಯೇ ಇತ್ತು (ವ. 41).

22. ಯೇಸು ವಿಧವೆಯನ್ನು ಹೊಗಳುತ್ತಾನೆ ಯಾಕಂದರೆ ಆಕೆಯು ತನ್ನ ಬಡತನದ ಹೊರತಾಗಿಯು ತನಗಿರುವುದೆಲ್ಲವನ್ನು ಕೊಟ್ಟುಬಿಟ್ಟಳು (ವ. 43-44).

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಒಕ್ಕಲಿಗರ ಸಾಮ್ಯದಲ್ಲಿ ಯೇಸು ಯೆಹೂದಿ ನಾಯಕರ ಕುರಿತು ಹೇಳುತ್ತಾನೆ (ವ. 1-12). ವಚನ 1 ರಲ್ಲಿನ "ಅವರಕೂಡ" ಎಂಬ ಪದ 11:27 ದಲ್ಲಿನ ಮಹಾಯಾಜಕರು, ಶಾಸ್ತ್ರಿಗಳು ಮತ್ತು ಹಿರಿಯರನ್ನು ಸೂಚಿಸುತ್ತದೆ. ಅವರು ಬಹುಶಃ ಮುಖ್ಯಯಾಜಕರನ್ನು ಪ್ರತಿನಿಧಿಸುವ (ಸದ್ದುಕಾಯರ ಪಕ್ಷಕ್ಕೆ ಸೇರಿದ), ಶಾಸ್ತ್ರಿಗಳು (ಹೆಚ್ಚಿನವರು ಫರಿಸಾಯರ ಪಕ್ಷಕ್ಕೆ ಸೇರಿದವರು) ಮತ್ತು ಕೆಲ ನಾಯಕರು ಸೇರಿದಂತೆ 70 ಜನರನ್ನೊಳಗೊಂಡ ಯೆಹೂದಿ ಮಹಾಮಂಡಲಿಯಾಗಿರಬಹುದು. ಅವರೆಲ್ಲರೂ ಯೇಸುವನ್ನು ಬಂಧಿಸಿ ಮರಣದಂಡನೆಗೆ ಒಪ್ಪಿಸುವಷ್ಟು (ದೇಶವು ರೋಮನ್ ಸಾಮ್ರಾಜ್ಯದ ಮತ್ತು ರೋಮನ್ನರ ಅಡಿಯಲ್ಲಿ ಆಳುವ ಅರಸರ ಅಧೀನದಲ್ಲಿದ್ದರ ಹೊರತಾಗಿಯೂ) ಪ್ರಭಾವಶಾಲಿಗಳಾಗಿದ್ದರು (ವ. 12 ರೊಂದಿಗೆ ಹೋಲಿಸಿ).
   ಈ ಯೆಹೂದಿ ನಾಯಕರಿಗೆ ಯೆಶಾಯ 5:1-7 ರಲ್ಲಿ ಇಸ್ರಾಯೇಲು ದೇವರ ದ್ರಾಕ್ಷೆಯ ತೋಟವೆಂದು ಹೇಳುವುದರ ಕುರಿತಾದ ದ್ರಾಕ್ಷೆಯ ತೋಟದ ಹಾಡಿನ ಪರಿಚಯವಿತ್ತು. ಕೂಡಲೇ ಅವರು ಸಾಮ್ಯದಲ್ಲಿನ ಒಕ್ಕಲಿಗರು ಮತ್ತು ಯೆಹೂದಿ ಜನರ ನಾಯಕತ್ವದ ನಡುವೆ ಸಂಬಂಧವನ್ನು ಕಲ್ಪಿಸಿರಬಹುದು. ಅವರು ಪ್ರಸಕ್ತ ಯೆಹೂದ್ಯರ ನಾಯಕರಾಗಿದ್ದರು. ಅವರೆಲ್ಲರು ದಾವೀದನ ಕುಮಾರನೂ ಮತ್ತು ದೇವರ ಮಗನೂ ಆಗಿರುವ ಯೇಸುವಿನ ಕೀರ್ತನೆಯನ್ನು ಬಲ್ಲವರಾಗಿದ್ದು ಧಣಿಯ ಮಗನೆಂದು ಯೇಸು ಯಾರನ್ನು ಸೂಚಿಸುತ್ತಾನೆಂಬುದರಲ್ಲಿ ಅವರು ತಿಳಿದುಕೊಂಡಿರಬಹುದು. ಅವರು ಆತನನ್ನು ತಿರಸ್ಕರಿಸಿದರು (ಮನೆಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾದಂತೆ) ಮತ್ತು ಆತನನ್ನು ಕೊಲ್ಲುವುದಕ್ಕಾಗಿ ಅವರು ಉಪಾಯ ಕಲ್ಪಿಸುತ್ತಿದ್ದರು.

2. ಕೈಸರನಿಗೆ ತೆರಿಗೆಯನ್ನು ಕೊಡುವುದರ ಕುರಿತ ಪ್ರಶ್ನೆಯಿಂದ ಯೆಹೂದಿ ನಾಯಕರು ತನ್ನನ್ನು ಸಿಕ್ಕಿಹಾಕಿಸಲು ಹೆಣೆದ ಬಲೆಯಿಂದ ಯೇಸು ತಪ್ಪಿಸಿಕೊಂಡನು (ವ. 13-17). ಅವರೆಲ್ಲರೂ ಅಪ್ರಾಮಾಣಿಕ ಕಪಟಿಗಳಾಗಿದ್ದು, ತಾವು ಒಪ್ಪದೇ ಇರುವಂತಹ ಸೂಕ್ಷ್ಮ ಮತ್ತು ರಾಜಕೀಯ ವಿಷಯದಲ್ಲಿ ತನ್ನನ್ನು ಸಿಕ್ಕಿಹಾಕಿಸಲು ಬಯಸುತ್ತಿದ್ದಾರೆಂಬುದನ್ನು ಆತನು ತಿಳಿದಿದ್ದನು. ಹಾಗಾಗಿ ಯೇಸು ಒಂದು ರೋಮನ್ ನಾಣ್ಯವನ್ನು ತಂದುಕೊಡಿರಿ ಎಂದು ಕೇಳಿದನು. ತಾವು ಆ ರೀತಿಯ ನಾಣ್ಯವನ್ನು ಉಪಯೋಗಿಸುವುದರದಿಂದ ತಾವು ಚಕ್ರವರ್ತಿಯ ಅಧಿಕಾರವನ್ನು ಒಪ್ಪಿಕೊಂಡಿದ್ದಾರೆಂದಾಯಿತು. ಹೀಗೆ ಅವರು ಸ್ವತಃ ತಮ್ಮ ಪ್ರಶ್ನೆಗೆ ತಾವೇ ಉತ್ತರಿಸಿದರು. ನೇರವಾಗಿ ಹೇಳದೆ ತಾವು ಒಪ್ಪಿಕೊಂಡ ಚಕ್ರವರ್ತಿಗೆ ಸಲ್ಲಿಸಬೇಕಾದ ತೆರಿಗೆಯನ್ನು ತಾವು ಸಲ್ಲಿಸಬೇಕೆಂಬುದನ್ನು ಅವರು ಒಪ್ಪಕೊಂಡರು. ದೇವರೆಡೆಗಿನ ನಮ್ಮ ವಿಧೇಯತೆಯು, ಸರ್ಕಾರದೆಡೆಗಿನ ನಮ್ಮ ವಿಧೇಯತೆಯಿಂದ ದೂರಮಾಡುವಂತಾದ್ದಾಗಿರುವುದಲ್ಲವೆಂಬುದನ್ನು ಯೇಸು ಹೇಳುವ ಕೊನೆಯ ಅಂಶವಾಗಿದೆ. ಆದರೆ ದೇವರ ಹೇಳಿಕೆಗಳು ಮತ್ತು ಚಕ್ರವರ್ತಿಯ ಹೇಳಿಕೆಗಳೆರಡೂ ಸಹ ನಮಗೆ ಸಮಾನವಾಗಿ ಪ್ರಾಮುಖ್ಯವಾಗಿವೆಯೆಂದು ಯೇಸು ಹೇಳಲಿಲ್ಲ. ಯಾವಾಗಲೂ ದೇವರೇ ನಮ್ಮ ಜೀವಿತದಲ್ಲಿ ಮೊದಲು ಬರಬೇಕು.

3. ದಕ್ಷಿಣ ಭಾರತದ ವಿಶ್ವಾಸಿಗಳು ಇಂದು ಸರ್ಕಾರಕ್ಕೆ ತೆರಿಗೆಯನ್ನು ಕಟ್ಟಬೇಕಾ? ಹೌದು ಕಟ್ಟಬೇಕೆಂದು ನಾನು ಎಣಿಸುತ್ತಾನೆ. ನಮಗೆ ಸರ್ಕಾರದ ಅವಶ್ಯಕತೆಯಿದೆ ಎಂಬುದನ್ನು ನಾವು ಒಪ್ಪಿಕೊಂಡರೆ ಅದಕ್ಕೆ ಅಗತ್ಯವಾದ ತೆರಿಗೆಯನ್ನು ನಾವು ಸರ್ಕಾರಕ್ಕೆ ಕಟ್ಟಲೇಬೇಕು. ಸರ್ಕಾರದಿಂದ ಯಾವುದೇ ರೀತಿಯ ಸೌಲಭ್ಯ ಅಥವಾ ಸೇವೆಗಳನ್ನು ಹೊಂದುವವರೆಗೂ ನಾವು (ಉದಾ. ಶಿಕ್ಷಣ,

ಮೂಲಸೌಕರ್ಯ, ಪೋಲಿಸ್ ಮತ್ತು ಜನರ ಜೀವಿತಗಳನ್ನು ಕ್ರಮಪಡಿಸುವ ನ್ಯಾಯಾಲಯ ಮತ್ತು ಕಾನೂನು) ನಂಬಿಗಸ್ತರಾಗಿ ಮತ್ತು ಪ್ರಾಮಾಣಿಕರಾಗಿ ಆ ಸರ್ಕಾರಕ್ಕೆ ನಮ್ಮ ತೆರಿಗೆಗಳನ್ನು ಕಟ್ಟಬೇಕು. "ಚಕ್ರವರ್ತಿಗೆ ಸೇರಿದ್ದನ್ನು ಆತನಿಗೆ ನಾವು ಕೊಡಲೇಬೇಕು".

4. ಸದ್ದುಕಾಯರು ಮತ್ತು ಯೇಸುವಿನ ಕುರಿತ ವಾಕ್ಯಭಾಗ (ವ. 18-27) ಪುನರುತ್ಥಾನದ ಕುರಿತಾದ ಸದ್ದುಕಾಯನ ತಿಳುವಳಿಕೆ ತಪ್ಪೆಂದು ಯೇಸು ಸಾಬೀತುಪಡಿಸಿದನು:

ಅ. ದೇವರ ಶಕ್ತಿಯ ಕುರಿತಾದ ತಿಳುವಳಿಕೆಯಲ್ಲಿ ಅವರು ತಪ್ಪಿದ್ದರು. ಪುನರುತ್ಥಾನದಲ್ಲಿ ದೇವರ ಶಕ್ತಿಯ ಮೂಲಕ ಒಂದು ಹೊಸ ರೀತಿಯ ಅಸ್ತಿತ್ವವಿರುತ್ತದೆ. ಈಗಿರುವಂತೆ ಅಲ್ಲಿ ಮದುವೆಯಿರುವುದಿಲ್ಲ, ಆದರೆ ಜೀವನವು ದೇವದೂತರಂತಿರುವುದು (ಯೇಸು ಬೇಕೆಂತಲೇ ದೇವದೂತರೆಂದು ಹೇಳುತ್ತಾನೆ, ಯಾಕೆಂದರೆ ಸದ್ದುಕಾಯರು ದೇವದೂತರ ಇರುವಿಕೆಯನ್ನು ಅಲ್ಲಗಳೆಯುತ್ತಿದ್ದರು).

ಆ. ಸತ್ಯವೇದವನ್ನು ಉಪಯೋಗಿಸುವುದರಲ್ಲಿ ಸಹ ಅವರು ತಪ್ಪಿದ್ದರು (ಕೇವಲ ಪಂಚಕಾಂಡಕ್ಕೆ ಮಾತ್ರ ಮೀಸಲಾಗಿತ್ತು). ಪುನರುತ್ಥಾನವಿಲ್ಲ ಎಂಬ ತಮ್ಮ ಸಿದ್ಧಾಂತವನ್ನು ಬೆಂಬಲಿಸಲು ಅವರು ಒಂದು ವಾಕ್ಯಭಾಗವನ್ನು (ಧರ್ಮೋ. 25:5-6 ತನ್ನ ಅಣ್ಣನ ಸಂತಾನವನ್ನು ಉಳಿಸಲು ವಿಧವೆಯಾದ ಆತನ ಹೆಂಡತಿಯನ್ನು ಮದುವೆಯಾಗುವುದು) ಹಿನ್ನಲೆಯನ್ನು ಮೀರಿ ಉಪಯೋಗಿಸುತ್ತಿದ್ದರು. ವಿಮೋಚನಕಾಂಡ 3:6 ರಲ್ಲಿ (ಆತನು ಅಬ್ರಹಾಮ, ಇಸಾಕ ಮತ್ತು ಯಾಕೋಬನ ದೇವರು) ತನ್ನ ಕುರಿತಾಗಿನ ದೇವರ ಹೇಳಿಕೆಯಿಂದ ಸರಿಯಾದ ಒಂದು ನಿರ್ಣಯಕ್ಕೆ ಬರುವಲ್ಲಿ ಅವರು ವಿಫಲರಾದರು. ದೇವರು ಸತ್ತವರ ದೇವರಲ್ಲ, ಬದುಕಿರುವವರಿಗೆ ದೇವರಾಗಿದ್ದಾನೆ. ಹೀಗೆ ಅಬ್ರಹಾಮ, ಇಸಾಕ ಮತ್ತು ಯಾಕೋಬನ, ದೇವರ ಶಕ್ತಿಯು, ಆತನು ಪುನರುತ್ಥಾನದಲ್ಲಿ ಅವರ ದೇಹಗಳನ್ನು ಎಬ್ಬಿಸುವಾಗ ಸ್ಪಷ್ಟವಾಗಿ ತೋರಿಬರುತ್ತದೆ.

5. ಕೀರ್ತನೆ 110:1 ರ ಆಧಾರದ ಮೇಲೆ ಮೆಸ್ಸೀಯನ ಗುರುತಿನ ಕುರಿತಾಗಿ (ವಚನ 35-37 ರಲ್ಲಿ) ಯೇಸು ಈ ರೀತಿಯಾಗಿ ವಾದಿಸುತ್ತಾನೆ: ಈ ಕೀರ್ತನೆಯ ಗ್ರಂಥಕರ್ತನಾದ ದಾವೀದನು ಮೆಸ್ಸೀಯನನ್ನು "ನನ್ನ ಒಡೆಯ" ಎಂದು ಕರೆಯುತ್ತಾನೆ. ಒಂದೇ ಬಾರಿಗೆ ಆತನು ದಾವೀದನ ಮಗನೂ ಮತ್ತು ಒಡೆಯನೂ ಆಗಿರಲು ಹೇಗೆ ಸಾಧ್ಯ? ಮೆಸ್ಸೀಯನು ದಾವೀದನ ಸಂತಾನದ ಮಗನಾದರೂ (ಆತನು ದಾವೀದನ ಮಗನು), ಆತನು ದೇವರ ಮಗ ಸಹ ಆಗಿದ್ದಾನೆ, ಆದುದರಿಂದ ಆತನು ದಾವೀದನಿಗಿಂತ ಹಿರಿಯಸ್ಥಾನದಲ್ಲಿದ್ದಾನೆ. ಆ ನಿಮಿತ್ತ ದಾವೀದನು ಆತನನ್ನು "ನನ್ನ ಒಡೆಯನು" ಎಂದು ಕರೆಯುತ್ತಾನೆ.

6. ಶಾಸ್ತ್ರಿಗಳ ಕುರಿತ ಯೇಸುವಿನ ಟೀಕೆ (ವ. 38-40)- ಮೇಲ್ಕಂಡ ನನ್ನ ಪ್ರಶ್ನೆ 20 ರ ಉತ್ತರವನ್ನು ನೋಡಿರಿ. ಯೇಸು ಶಾಸ್ತ್ರಿಗಳ ಬಗ್ಗೆ ಹೇಳುವ ನಕಾರಾತ್ಮಕ ಅಂಶಗಳಿಗೆ ಸಮಾನವಾಗಿರುವ ದಕ್ಷಿಣ ಭಾರತದ ಕೆಲ ಸಭಾಜೀವನದ ಲಕ್ಷಣಗಳು (ಮುಖ್ಯವಾಗಿ ಸಭಾಪಾಲಕರು ಮತ್ತು ಇತರ ಸಭಾನಾಯಕರು) ಇಂತಿವೆ:

ಅ. ಗರ್ವ ಮತ್ತು "ಗೌರವ": ಸಭಾಪಾಲಕರುಗಳು ತಮ್ಮನ್ನು ಸಭಾಪಾಲಕರೆಂದು ಕರೆಯಬೇಕೆಂದು ಅಗ್ರಹಿಸುತ್ತಾರೆ. ಸಭೆಯ ಮುಂದಿನ ಸ್ಥಾನದಲ್ಲೇ ಕೂರಬೇಕೆಂದು ಅಪೇಕ್ಷಿಸುತ್ತಾರೆ. ಯಾವಾಗಲೂ ಮಾತನಾಡಲು ಮತ್ತು ಪ್ರಾರ್ಥಿಸಲು ಹೇಳಬೇಕೆಂದು ಬಯಸುತ್ತಾರೆ. ಯಾವಾಗಲೂ ಗೌರವ ಮತ್ತು ವಿಶೇಷವಾದ ಸತ್ಕಾರವನ್ನು ಅಪೇಕ್ಷಿಸುವರು.

ಆ. ಸ್ವಾರ್ಥಮಯ ಲೌಕಿಕತೆ: ಒಳ್ಳೆಯ ಮಾಂಸಾಹಾರಿ ಆಹಾರಬೇಕೆಂದು ಹೇಳುವುದು. ಸಂಧಿಸುವ ಮನೆಗಳಿಂದ ಹೆಚ್ಚಾಗಿ ಒಳ್ಳೆಯ ಕಾಣಿಕೆಯನ್ನು ಅಪೇಕ್ಷಿಸುವುದು. ಸಭೆಯ ಶ್ರೀಮಂತ ಮತ್ತು ವಿದ್ಯಾವಂತರೊಂದಿಗೆ ಹೆಚ್ಚಾಗಿ ಗೆಳೆತನದಿಂದಿರುವುದು. ಬಡ ಮತ್ತು ಅನಕ್ಷರಸ್ಥ ವಿಶ್ವಾಸಿಗಳಿಗೆ ಅಗೌರವ ಮತ್ತು ನಿಷ್ಕಾಳಜಿಯನ್ನು ತೋರಿಸುವುದು. ಸೇವೆಗಿಂತ ಹೆಚ್ಚಾಗಿ ವೈಯಕ್ತಿಕ ಸೌಕರ್ಯಗಳಿಗೆ ಹೆಚ್ಚು ಹಣವನ್ನು ವ್ಯಯಿಸುವುದು. ಇತರರ ಅಗತ್ಯತೆಗಳನ್ನು ಮರೆತು ಬರೀ ತಮ್ಮ ಸ್ವಂತ ಅಗತ್ಯತೆಗಳನಷ್ಟೇ ನೋಡುವುದು.

ಇ. ಕಪಟತನದ ಧಾರ್ಮಿಕತೆ: ಮಾತನಾಡುವಾಗ ದೊಡ್ಡದೊಡ್ಡ ಪದಗಳನ್ನು ಬಳಸುವುದು. ಅನಾವಶ್ಯಕವಾಗಿ ದೊಡ್ಡದಾದ ಧ್ವನಿಯಲ್ಲಿ ಉದ್ದುದ್ದವಾದ ಅನಾವಶಕ್ಯ ಪ್ರಾರ್ಥನೆ ಮಾಡುವುದು. ಜನರ ನಡುವೆ ಆತ್ಮೀಕರೆಂಬುದಾಗಿ ತೋರಿಸಿಕೊಳ್ಳುವುದು.

ಈ. ಎರಡು ರೀತಿಯ ಗುಣಮಟ್ಟಗಳು: ಆಶೆ ಮತ್ತು ಆಲೋಚನೆಗಳೆಲ್ಲ ಲೌಕಿಕವಾಗಿದ್ದರೂ ಜನರ ಮಧ್ಯೆ ಆತ್ಮೀಕರು ಮತ್ತು ಭಕ್ತಿವಂತರಂತೆ ತೋರಿಸಿಕೊಳ್ಳುವುದು. ಇತರರ ತಪ್ಪು ಮತ್ತು ಪಾಪಗಳನ್ನು ಒತ್ತಿಹೇಳುವದು. ಆದರೆ ರಹಸ್ಯವಾಗಿ ಅದೇ ಸಂಗತಿಗಳನ್ನು ತಾವು ಮಾಡುವುದು.

7. ವಿಧವೆಯ ಕಾಣಿಕೆಯ ಕುರಿತ ಕಥೆಯಲ್ಲಿ ಕಂಡುಬರುವ ತದ್ವಿರುದ್ಧತೆಗಳು (ವ. 41-44):

ಅ. ಐಶ್ವರ್ಯವಂತರು ಹಾಕುವ ಬಹಳ ಹಣ ಮತ್ತು ಒಬ್ಬ ಬಡವಿಧವೆ ಹಾಕುವ ಎರಡು ಕಾಸು(ನಾಣ್ಯ)ಗಳ ನಡುವಿನ ತದ್ವಿರುದ್ಧತೆ.

ಆ. ಐಶ್ವರ್ಯವಂತರು ತಮಗೆ ಸಾಕಾಗಿ ಮಿಕ್ಕಿದ್ದನ್ನು ಹಾಕುವುದು ಮತ್ತು ಬಡ ವಿಧವೆಯು ಬಡತನದಲ್ಲಿಯೂ ಹಾಕುವುದರ ನಡುವಿನ ತದ್ವಿರುದ್ಧತೆ.

ಇ. ಕೊಡುವವರ ಬಗೆಗಿನ ಯೇಸುವಿನ ಮೌಲ್ಯಮಾಪನದಲ್ಲಿನ ತದ್ವಿರುದ್ಧತೆ: ಕೇವಲ ಬಡ ವಿಧವೆ ಮಾತ್ರ ತನ್ನ ಕಾಣಿಕೆಗಾಗಿ ಹೊಗಳಲ್ಪಟ್ಟಿದ್ದಾಳೆ ವಿನಃ ಹೆಚ್ಚು ಕೊಟ್ಟವರಲ್ಲ.




ಚಕ್ರವರ್ತಿಯದ ಔಗುಸ್ತ ಕೈಸರನನ್ನು ಚಿತ್ರಿಸಿರುವ ರೋಮನ್ ಬೆಳ್ಳಿಯ ನಾಣ್ಯಗಳು

**ಉತ್ತರಗಳು: ಮಾರ್ಕ ಅಧ್ಯಾಯ 13**

**ಪ್ರಶ್ನೆಗಳಿಗೆ ಉತ್ತರಗಳು**

1. ಈ ಅಧ್ಯಾಯದ ಪ್ರಾರಂಭದಲ್ಲಿನ ಸಂದರ್ಭ (ವ. 1-2): ಯೇಸು ತನ್ನ ಶಿಷ್ಯರೊಂದಿಗೆ ಯೆರೂಸಲೇಮಿನ ದೇವಾಲಯವನ್ನು ಬಿಟ್ಟುಹೋಗುವುದು.
2. ಯೇಸುವಿನ ಪ್ರಕಾರ ಯೆರೂಸಲೇಮಿನ ದೇವಾಲಯದ ವಿಧಿ ಲಿಖಿತ ಏನೆಂದರೆ ಸಂಪೂರ್ಣ ನಾಶವಾಗುವುದು (ವ. 1-2).
3. ಈ ಅಧ್ಯಾಯದ ಮುಖ್ಯಭಾಗದ ಸಂದರ್ಭ (ವ. 3-37): ಯೇಸು ಮತ್ತು ಆತನ ಶಿಷ್ಯರು ಎಣ್ಣೇಮರಗಳ ಗುಡ್ಡದ ಮೇಲೆ ಕೂತುಕೊಂಡು ಯೆರೂಸಲೇಮ್ ಪಟ್ಟಣ ಮತ್ತು ಅದರ ದೇವಾಲಯವನ್ನು ನೋಡುತ್ತಿರುವುದು (ವ. 3).
4. "ಸೂಚನೆ" ಮತ್ತು "ಸಮಯ" ದ ಕುರಿತ ತನ್ನ ಶಿಷ್ಯರ ಪ್ರಶ್ನೆಗೆ ಯೇಸು ತಕ್ಷಣವೇ ಉತ್ತರಿಸುವುದಿಲ್ಲ. ಬದಲಾಗಿ ಆತನು ತಮ್ಮನ್ನು ಕ್ರಿಸ್ತನು ಎಂದು ಹೇಳಿಕೊಳ್ಳುವ ಜನರಿಂದ ಮೋಸಹೋಗದಂತೆ ಎಚ್ಚರವಾಗಿರೆಂದು ಅವರಿಗೆ ಹೇಳುತ್ತಾನೆ (ವ. 5-6).
5. ಯದ್ಧವಾಗುವ ಹಾಗಿದೆ ಎಂಬ ಸುದ್ದಿಯನ್ನು ಕೇಳುವಾಗ ಕಳವಳಪಡಬೇಡಿರಿ ಎಂದು ಯೇಸು ತನ್ನ ಶಿಷ್ಯರಿಗೆ ಹೇಳುತ್ತಾನೆ (ವ. 7).
6. ಪ್ರಸವವೇದನೆಯ ಪ್ರಾರಂಭವನ್ನು ಯೇಸು ಈ ರೀತಿ ವರ್ಣಿಸಿದ್ದಾನೆ (ವ. 8):

   ಅ. ರಾಜ್ಯಕ್ಕೆ ವಿರುದ್ಧವಾಗಿ ರಾಜ್ಯಗಳು ಏಳುವವು

   ಆ. ಅಲ್ಲಲ್ಲಿ ಭೂಕಂಪಗಳಾಗುವುವು

   ಇ. ಬರಗಳು ಬರುವವರು
7. ತನ್ನ ಶಿಷ್ಯರಿಗೆ ಈ ಆರು ಸಂಗತಿಗಳು ಆಗುವವೆಂದು ಯೇಸು ಹೇಳುತ್ತಾನೆ (ವ. 9-13):

   ಅ. ಅವರನ್ನು ನ್ಯಾಯಾಲಗಳಿಗೆ ಕರೆದೊಯ್ದು, ಆರೋಪಹೊರಿಸುವರು, ದೋಷಿಗಳೆಂದು ತಿಳಿದು ಹೊಡೆದು ಮರಣದಂಡನೆಗೆ ಒಪ್ಪಿಸುವರು.

   ಆ. ಅವರು ತಮ್ಮ ನಂಬಿಕೆಯ ನಿಮಿತ್ತ ಅಧಿಪತಿಗಳು ಮತ್ತು ಅರಸರ ಮುಂದೆ ಒಯ್ಯಲ್ಪಡುವರು.

   ಇ. ನ್ಯಾಯಾವಿಚಾರಣೆಯಲ್ಲಿ ಅವರು ಪವಿತ್ರಾತ್ಮನಿಂದ ಮಾರ್ಗದರ್ಶಿಸಲ್ಪಡುವರು.

   ಈ. ಅವರು ತಮ್ಮ ಸ್ವಂತ ಕುಟುಂಬದ ಸದಸ್ಯರಿಂದ ದೂಷಿಸಲ್ಪಟ್ಟು ಮರಣದಂಡನೆಗೆ ಒಪ್ಪಿಸಲ್ಪಡುವರು.

   ಉ. ಯೇಸುವಿನಲ್ಲಿನ ತಮ್ಮ ನಂಬಿಕೆಯ ನಿಮಿತ್ತ ಅವರನ್ನು ಎಲ್ಲರೂ ಹಗೆ ಮಾಡುವರು.

   ಊ. ಆದರೆ ಯೇಸುವನ್ನು ಅಲ್ಲಗಳೆಯದೆ, ಕಡೇವರೆಗೆ ತಾಳಿಕೊಂಡಿರುವವರು ರಕ್ಷಿಸಲ್ಪಡುವರು.
8. ಈ ಎಲ್ಲಾ ಹಿಂಸೆ ಹೋರಾಟಗಳ ಹೊರತಾಗಿಯೂ ಎಲ್ಲಾ ಜನಾಂಗಗಳಿಗೆ ಸುವಾರ್ತೆಯು ಸಾರಲ್ಪಡಬೇಕು (ವ 9-13).
9. "ಹಾಳು ಮಾಡುವ ಅಸಹ್ಯ ವಸ್ತು" ಎಂಬ ಹೇಳಿಕೆಯನ್ನು (ವ. 14) ಈ ರೀತಿಯಾಗಿ ವಿವರಿಸಬಹುದು:

   ಅ. ಅಸಹ್ಯ ವಸ್ತುವು ಹೇಸಿಗೆಯನ್ನುಂಟು ಮಾಡುತ್ತದೆ ಮತ್ತು ಪವಿತ್ರವಾಗಿರುವಂಥದನನ್ನು ಹಾಳುಮಾಡುತ್ತದೆ. ಇಲ್ಲಿ ಯೆರೂಸಲೇಮಿನ ದೇವಾಲಯವನ್ನು ಅಪವಿತ್ರಗೊಳಿಸುವ ಸಂಗತಿಯ ಬಗ್ಗೆ ಹೇಳಲಾಗಿದೆ.

   ಆ. ಈ ಅಪವಿತ್ರತೆಯು ದೇವಾಲಯಕ್ಕೆ ನಾಶನವನ್ನು ತರುವುದಾಗಿದೆ.
10. ತನ್ನ ಜನರ ನಿಮಿತ್ತ ದೇವರು ಆ ದಿನವನ್ನು ಕಡಿಮೆ ಮಾಡಬೇಕು. ಹಾಗಾದರೆ ಅವರ ರಕ್ಷಣೆಗೆ ಕಂಟಕವಾಗುವುದಿಲ್ಲ (ವ. 20).
11. ಯೇಸು ತನ್ನ ಶಿಷ್ಯರಿಗೆ ಯಾರಾದರೂ ತಮ್ಮನ್ನು ಕ್ರಿಸ್ತನೆಂದು ಹೇಳಿ, ಅವರು ಅದ್ಭುತಕಾರ್ಯಗಳನ್ನು ಮಾಡಿತೋರಿಸಿದರೆ ಅವರನ್ನು ನಂಬಬೇಡಿರಿ ಎಂದು ಹೇಳಿದನು (ವ. 21-22).
12. ತನ್ನ ತಿರುಗಿಬರುವಿಕೆಯನ್ನು ಯೇಸು ಈ ರೀತಿಯಾಗಿ ವರ್ಣಿಸಿದ್ದಾನೆ (ವ. 24-27):

ಅ. ಈ ಸಂಕಟ ತೀರಿದ ಮೇಲೆ ಬರುವದು

ಆ. ಆಕಾಶ ಕಾಯಗಳು ಕದಲುವವು (ಸೂರ್ಯ, ಚಂದ್ರ ಮತ್ತು ನಕ್ಷತ್ರ)\

ಇ. ಅದಾದ ಮೇಲೆ ಮನುಷ್ಯಕುಮಾರನು ಬಹು ಬಲದಿಂದಲೂ ಮತ್ತು ಮಹಿಮೆಯಿಂದಲೂ ಬರುವನು.

ಈ. ಆತನು ತನ್ನ ದೂತರಿಗೆ ದೇವ ಜನರನ್ನು ಭೂಮಿಯ ಕಟ್ಟಕಡೆಯಿಂದ ಒಟ್ಟುಗೂಡಿಸಿರಿ ಎಂದು ತಿಳಿಸುವನು.

13. ಅಂಜೂರದ ಮರವು ಚಿಗುರಿದಾಗ ಬೇಸಿಗೆ ಹತ್ತಿರವಾಯಿತೆಂದು ಜನರು ತಿಳಿದುಕೊಳ್ಳುತ್ತಾರೆ (ವ. 28).
14. ವಚನ 31 ಯೇಸುವಿನ ಮಾತುಗಳೆಲ್ಲವೂ ನಂಬಲು ಯೋಗ್ಯವಾಗಿವೆ ಎಂಬುದನ್ನು ತಿಳಿಸುತ್ತದೆ.
15. ತನ್ನ ಎರಡನೇ ಬರೋಣದ ಬಗ್ಗೆ ಯೇಸು ತನ್ನ ಶಿಷ್ಯರಿಗೆ ಮೂರು ಸಂಗತಿಗಳನ್ನು ಹೇಳುತ್ತಾನೆ (ವ. 32-36):

ಅ. ಆ ದಿನವು ಯಾವಾಗ ಬರುತ್ತದೆಂಬುದು ತಂದೆಯ ಹೊರತು ಮತ್ತಾರಿಗೂ ತಿಳಿದಿಲ್ಲ. ದೇವದೂತರು ಅಥವಾ ಭೂಲೋಕದಲ್ಲಿರುವಾಗ ಸ್ವತಃ ಯೇಸುವಿಗೂ ಸಹ ಅದು ತಿಳಿಯದು.

ಆ. ಅವರು ಯಾವಾಗಲೂ ನಿರೀಕ್ಷಿಸುವವರಾಗಿ ಮತ್ತು ಆತನ ಎರಡನೇ ಬರೋಣಕ್ಕಾಗಿ ಸಿದ್ಧರಾಗಿರಬೇಕು, ಯಾಕೆಂದರೆ ಆತನು ಯಾವ ಗಳಿಗೆಯಲ್ಲಾದರೂ ಬರಬಹುದು.\

ಇ. ಆತನ ಬರೋಣಕ್ಕಾಗಿ ಕಾದಿರುವಾಗ ಅವರು ನಂಬಿಗಸ್ತರಾಗಿದ್ದು ತಮ್ಮ ಕರ್ತವ್ಯವನ್ನು ಮಾಡಬೇಕು.


16. ತನ್ನ ಎರಡನೇ ಬರೋಣದ ಸಂಬಂಧದಲ್ಲಿ ಯೇಸು ತನ್ನ ಶಿಷ್ಯರಿಗೆ ಕೊಟ್ಟ ಮುಖ್ಯ ಎಚ್ಚರಿಕೆಯೇನೆಂದರೆ, "ಎಚ್ಚರವಾಗಿರಿ, ನಿದ್ದೆ ಮಾಡಬೇಡಿರಿ" (ವ. 37).

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಮಾರ್ಕನ 13 ನೇ ಅಧ್ಯಾಯವನ್ನು ಈ ರೀತಿಯಾಗಿ ಸಾರಾಂಶಗೊಳಿಸಬಹುದು: ಯೇಸುವಿನ ಶಿಷ್ಯರು ಯೆರೂಸಲೇಮಿನ ದೇವಾಲಯದ ನಾಶನ ಮತ್ತು ಅಂತ್ಯಕಾಲದ ಬಗ್ಗೆ ಆತನನ್ನು ಪ್ರಶ್ನಿಸಿದಾಗ ಆತನು ಅವರಿಗೆ ಕೊಟ್ಟ ಮುಖ್ಯ ಸಂದೇಶವು ಹೋರಾಟ ಮತ್ತು ನಿಂದೆಗಳ ಹೊರತಾಗಿಯೂ ತನಗೆ ಮತ್ತು ತನ್ನ ಸುವಾರ್ತೆಗೆ ನಂಬಿಗಸ್ತರಾಗಿರಬೇಕು ಎಂಬುದಾಗಿತ್ತು. ಮನುಷ್ಯಕುಮಾರನು ಯಾವಾಗ ಬರುವನೆಂಬುದು ಯಾರಿಗೂ ತಿಳಿದಿಲ್ಲ. ಆದರೆ ಅದು ಸಂಭವಿಸುತ್ತಿದೆ ಎಂದು ಎಚ್ಚರವಾಗಿದ್ದು ಅಪೇಕ್ಷಿಸಬೇಕು ಮತ್ತು ಸುಳ್ಳು ಕ್ರಿಸ್ತರು ಅಥವಾ ಸುಳ್ಳು ಪ್ರವಾದಿಗಳು ಒಂದುವೇಳೆ ಅದ್ಭುತಗಳನ್ನು ಮಾಡಿದರೂ ಸಹ ಅವರಿಗೆ ಕಿವಿಗೊಡಬಾರದು.
2. ವ. 14-19 ರ ಒಂದು ಸಾರಂಶ: ಯೆಹೂದಲ್ಲಿರುವವರು ಯೆರೂಸಲೇಮಿನ ದೇವಾಲಯವು ಅಪವಿತ್ರಗೊಂಡಿರುವುದನ್ನು ಕಂಡಕೂಡಲೇ ಅವರು ಮುಂದಾಗಲಿರುವ ಭಯಾನಕ ಬಾಧೆಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಆ ಸ್ಥಳವನ್ನು ಬಿಟ್ಟು ಬೆಟ್ಟಗಳಿಗೆ ಓಡಿಹೋಗಬೇಕು.
3. "ಅಂಜೂರದ ಮರದ ಪಾಠ" (ವ. 28-31): ಅಂಜೂರದ ಮರಗಳು ಪ್ಯಾಲೆಸ್ತೀನಿನಲ್ಲಿ ಸರ್ವೇಸಾಮಾನ್ಯವಾಗಿವೆ. ಹಾಗಾಗಿ ಅದರ ಎಲೆಗಳು ಚಿಗುರುವಾಗ ಬೇಸಿಗೆಯು ಹತ್ತಿರವಾಯಿತೆಂದು ಎಲ್ಲರೂ ತಿಳಿದಿರುತ್ತಾರೆ. ಅದೇ ರೀತಿಯಲ್ಲಿ ಯೇಸು ಈ ಹಿಂದೆ ತನ್ನ ಬೋಧನೆಯಲ್ಲಿ ವಿವರಿಸಿದ ಘಟನೆಗಳೆಲ್ಲವೂ ಸಂಭವಿಸುವುದನ್ನು ಕಾಣುವಾಗ ಯೇಸುವಿನ ಬರೋಣವು ಹತ್ತರವಾಗಿದೆ ಎಂದು ಅವರು ತಿಳಿದುಕೊಳ್ಳುವರು.
4. ವ. 30 ರಲ್ಲಿ ಯೇಸು ಹೇಳಿರುವ "ಈ ಸಂತತಿ" ಎಂಬ ಮಾತು ಅನೇಕ ಸಂಗತಿಗಳನ್ನು ಸೂಚಿಸುತ್ತದೆ. ಒಬ್ಬ ಪಂಡಿತರು ಒಂದು ಸಲಹೆ ನೀಡುತ್ತಾರೆ: ಮಾರ್ಕನ ಸುವಾರ್ತೆ 13 ನೇ ಅಧ್ಯಾಯದಲ್ಲಿ ಆ ಸಮಯದಲ್ಲಿ ಭವಿಷತ್ತಿನಲ್ಲಿ ಆಗುವ ಎರಡು ಘಟನೆಗಳ ಬಗ್ಗೆ ಯೇಸು ಹೇಳುತ್ತಾನೆ (ಕ್ರಿ.ಶ 70 ರಲ್ಲಿ ದೇವಾಲಯವನ್ನೊಳಗೊಂಡ ಯೆರೂಸಲೇಮಿನ ನಾಶನ ಮತ್ತು ಯುಗಾಂತ್ಯ). ಹಾಗಾಗಿ ಬಹುಶಃ "ಈ ಸಂತತಿ" ಎಂಬುದು ಈ ರೀತಿ ಈ ಎರಡು ಘಟನೆಗಳನ್ನು ಸೂಚಿಸುತ್ತದೆ ಎಂಬುದಾಗಿ ಸಹ

ಅರ್ಥೈಸಿಕೊಳ್ಳಬೇಕಾಗಿದೆ: ಮೊದಲ ಭವಿಷ್ಯತ್ತಿನ ಮೊದಲ ಘಟನೆಯನ್ನು ಹಾದು ಹೋದ ಯೇಸುವಿನ ಶಿಷ್ಯರ ಸಂತತಿ (ಇದು ಕ್ರಿ.ಶ 70 ರಲ್ಲಿ ಆಗಿರುತ್ತದೆ). ಆ ಸಂತತಿಯು ಅಲಂಕಾರಿಕವಾಗಿ ಭವಿಷ್ಯತ್ತಿನ ಎರಡನೇ ಘಟನೆಯನ್ನು ಹಾದು ಹೋಗಲಿರುವ ಸಂತತಿಯನ್ನು ಪ್ರತಿನಿಧಿಸುತ್ತದೆ (ಯುಗದ ಅಂತ್ಯ).

ಯಾವುದೇ ರೀತಿಯಲ್ಲೂ ಸಹ ಯೇಸು ತನ್ನ ಶಿಷ್ಯರ ಸಂತತಿಯು ತನ್ನ ಎರಡನೇ ಬರೋಣ ಮತ್ತು ಅಂತ್ಯಕಾಲವನ್ನು ಕಾಣುವರೆಂಬ ಅರ್ಥದಲ್ಲಿ ಹೇಳಿಲ್ಲ. ಒಂದು ವೇಳೆ ಆತನು ಆ ರೀತಿ ಹೇಳಿದ್ದರೆ ಅತಿದೊಡ್ಡ ತಪ್ಪಾಗುತಿತ್ತು. ಆದರೆ ಯೇಸುವಿನ ಮಾತುಗಳು ನಿಜವಾಗಿದ್ದು ಅವು ಎಂದು ಅಳಿದುಹೋಗುವದಿಲ್ಲವೆಂದು ನಾವು ನಂಬುತ್ತೇವೆ.



**ಉತ್ತರಗಳು: ಮಾರ್ಕ ಅಧ್ಯಾಯ 14**

**ಪ್ರಶ್ನೆಗಳಿಗೆ ಉತ್ತರಗಳು**

1. ಮಾರ್ಕ 14 ನೇ ಅಧ್ಯಾಯದಲ್ಲಿನ ಘಟನೆಗಳೆಲ್ಲ ಯೆರೂಸಲೇಮಿನಲ್ಲಿ ಮಾರ್ಚ್/ಏಪ್ರಿಲ್ ತಿಂಗಳಿನಲ್ಲಿ ವಾರ್ಷಿಕ ಯಾತ್ರೆಯ ಹಬ್ಬಗಳಾದ ಪಸ್ಕ ಮತ್ತು ಹುಳಿ ಇಲ್ಲದ ಹಿಟ್ಟಿನ ಆರಂಭದ ವೇಳೆ ಸಂಭವಿಸಿದವು (ವ. 1 ಮತ್ತು ಟಿಪ್ಪಣಿ)
2. ಹಬ್ಬದ ವೇಳೆ ಯೇಸುವನ್ನು ಹಿಡಿಯಲು ಯೆಹೂದಿ ನಾಯಕರು ಹೆದರಿದರು, ಯಾಕೆಂದರೆ ಪಸ್ಕ ಹಬ್ಬವನ್ನಾಚರಿಸುವುದಕ್ಕಾಗಿ ಯೆರೂಸಲೇಮಿಗೆ ಅನೇಕ ಜನರು ಬಂದಿದ್ದರು. ಜನರಲ್ಲಿ ಗದ್ದಲವಾಗಬಹುದೆಂದು ಅವರು ಹೆದರಿದರು (ವ. 1-2).
3. ಬೇಥಾನ್ಯದಲ್ಲಿ ಯೇಸುವು ಕುಷ್ಠರೋಗಿಯಾದ ಸೀಮೋನನ ಮನೆಯಲ್ಲಿ ಊಟಕ್ಕಾಗಿ ಆಹ್ವಾನಿಸಲ್ಪಟ್ಟಿದ್ದನು (ವ. 3).
4. ಆ ಸ್ತ್ರೀಯು ಜಟಾಮಾಂಸಿತೈಲದ ಭರಣಿಯನ್ನು ತೆಗೆದುಕೊಂಡು ಅದನ್ನು ಒಡೆದು ತೈಲವನ್ನು ಯೇಸುವಿನ ತಲೆಯ ಮೇಲೆ ಹೊಯಿದಳು (ವ. 3).
5. ಅಷ್ಟು ಬೆಲೆಬಾಳುವ ತೈಲವನ್ನು ಯೇಸುವಿನ ಮೇಲೆ ಹೊಯಿದು ಅದನ್ನು ಸುಮ್ಮನೆ ನಷ್ಟಮಾಡಿದಳೆಂದು ಅನೇಕರು ಆ ಸ್ತ್ರೀಯ ಬಗ್ಗೆ ಬೇಸರಗೊಂಡರು. ಆ ತೈಲವನ್ನು ಮಾರಿ ಆ ಹಣವನ್ನು ಬಡವರಿಗೆ ಕೊಟ್ಟಿದ್ದರೆ ಉತ್ತಮವಾಗಿತ್ತೆಂಬುದಾಗಿ ಅವರು ಯೋಚಿಸಿದರು (ವ. 4-5).
6. ಆ ಸ್ತ್ರೀಯ ಸ್ವಭಾವವನ್ನು ಯೇಸು ಸಕಾರಾತ್ಮಕವಾಗಿ ಮೌಲ್ಯಮಾಪನ ಮಾಡುತ್ತಾನೆ. ಆಕೆಯು ತನಗೆ ಮಾಡಿದ್ದನ್ನು ಆತನು ಹೊಗಳಿ, ಆಕೆಯ ಕಾರ್ಯವನ್ನು ನೆನಪಿಗಾಗಿ ಹೇಳಲಾಗುತ್ತದೆಂಬುದಾಗಿ ಆತನು ಹೇಳುತ್ತಾನೆ (ವ. 6,8,9).
7. ಯೇಸುವಿನ ಪ್ರಕಾರ ಸುವಾರ್ತೆಯು ಎಲ್ಲೆಲ್ಲಿ ಸಾರಲಾಗುತ್ತದೋ ಅಲ್ಲೆಲ್ಲ ಆಕೆಯನ್ನು ನೆನಸಲಾಗುತ್ತದೆ (ವ. 9).



8. ಯೇಸುವನ್ನು ಹಿಡಿದುಕೊಡಬೇಕೆಂದು ಇಸ್ಕರಿಯೋತ ಯೂದನು ಮಹಾಯಾಜಕರ ಬಳಿಗೆ ಹೋದನು ಮತ್ತು ಹಿಡುಕೊಡಲು ಆತನು ಅವರೊಂದಿಗೆ ಹಣದ ಒಪ್ಪಂದವನ್ನು ಮಾಡಿಕೊಂಡನು (ವ. 10-11).
9. ಯೇಸು ಮತ್ತು ಆತನ ಶಿಷ್ಯರು ಯೇಸುವಿಗೆ ಪರಿಚಯವಿದ್ದವನೊಬ್ಬನಿಗೆ ಸೇರಿದ್ದ ಮನೆಯ ಮೇಲಂತಸ್ತಿನ ದೊಡ್ಡ ಕೋಣೆಯಲ್ಲಿ ಪಸ್ಕಹಬ್ಬದ ಭೋಜನವನ್ನು ಆಚರಿಸಿದರು (ವ. 12-16).
10. ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುತ್ತಾನೆಂದು ಯೇಸು ಹೇಳಿದ್ದರಿಂದ ಶಿಷ್ಯರು ದುಃಖಿತರಾದರು (ವ. 17-19).
11. ತನ್ನನ್ನು ಹಿಡಿದುಕೊಡುವವನ ಗುರುತಿಗಾಗಿ ಯೇಸು ಕೊಟ್ಟ ಮೂರು ಸುಳಿವುಗಳು (ವ. 17-21):

    ಅ. ಅವನು ಹನ್ನೆರಡು ಮಂದಿಯಲ್ಲಿ ಒಬ್ಬನಾಗಿರುವನು

    ಆ. ಅವನು ಯೇಸುವಿನ ಸಂಗಡ ಊಟ ಮಾಡುತ್ತಿರುವವರಲ್ಲಿ ಒಬ್ಬನು

ಇ. ಅವನು ಯೇಸುವಿನ ಸಂಗಡ ಬಟ್ಟಲಲ್ಲಿ ಕೈ ಅದ್ದುವವನು

12. ರೊಟ್ಟಿಯು ತನ್ನ ದೇಹವಾಗಿದೆ ಎಂದು ಯೇಸು ಹೇಳುತ್ತಾನೆ (ವ. 22). ಇದರ ಪ್ರಾಮುಖ್ಯತೆಯೇನೆಂದರೆ ಇದು ತನ್ನ ಹಿಂಬಾಲಕರೊಂದಿಗೆ ಯೇಸುವಿನ ಪ್ರಸನ್ನತೆಯನ್ನು ಸೂಚಿಸುತ್ತದೆ (ವ. 22).

13. ಪಾತ್ರೆಯು ತನ್ನ ರಕ್ತ ಬಹುಜನರಿಗಾಗಿ ಸುರಿಸಲ್ಪಡುವ ಒಡಂಬಡಿಕೆಯ ರಕ್ತ ಎಂದು ಯೇಸು ಹೇಳುತ್ತಾನೆ (ವ. 24). ಇದು ದೇವರು ಮತ್ತು ಆತನ ಜನರ ನಡುವೆ ಒಂದು ಹೊಸ ಒಡಂಬಡಿಕೆಯನ್ನು ಸ್ಥಾಪಿಸಿದ ಬಲಿಯಾದ ಯೇಸುವಿನ ಮರಣವನ್ನು ಸೂಚಿಸುತ್ತದೆ.

14. ವಚನ 24 ನ್ನು ಕನ್ನಡದ ಪವಿತ್ರಗ್ರಂಥ ಮತ್ತು ಸತ್ಯವೇದ ಭಾಷಾಂತರಗಳಲ್ಲಿ ಹೋಲಿಸುವಾಗ, ಮೊದಲನೆಯದರಲ್ಲಿ "ಹೊಸ ಒಡಂಬಡಿಕೆ" ಎಂದಿದ್ದರೆ, ಇನ್ನೊಂದರಲ್ಲಿ "ಒಡಂಬಡಿಕೆ" ಎಂದಿದೆ. ಇದಕ್ಕೆ ಕಾರಣವೇನೆಂದರೆ ಭಾಷಾಂತರಗಳು ವಿಭಿನ್ನವಾದ ಗ್ರೀಕ್ ಹಸ್ತಪ್ರತಿಗಳನ್ನು ಆಧರಿಸಿವೆ. "ಹೊಸ" ಎಂಬ ಪದವು ಉತ್ತಮ ಹಸ್ತಪ್ರತಿಗಳಲ್ಲಿ ಕಂಡುಬರುವುದಿಲ್ಲ, ಹಾಗಾಗಿ ಸತ್ಯವೇದವು ಕನ್ನಡದ ಅತ್ಯುತ್ತಮ ಭಾಷಾಂತರವಾಗಿದೆ. ಕರ್ತನ ಭೋಜನದ ಕುರಿತ ಎರಡು ವಾಕ್ಯಭಾಗಗಳಲ್ಲಿ "ಹೊಸ ಒಡಂಬಡಿಕೆ" ಎಂದಿದ್ದರೆ (ಲೂಕ 22:20 ಮತ್ತು 1 ಕೊರಿಂಥ 11:25) ಇನ್ನುಳಿದ ಎರಡು ಗ್ರೀಕ್ ನ ಉತ್ತಮ ಹಸ್ತಪ್ರತಿಗಳಲ್ಲಿ "ಒಡಂಬಡಿಕೆ" ಎಂದಿದೆ (ಮತ್ತಾ. 26:28 ಮತ್ತು ಮಾರ್ಕ 14:24).

15. ಭವಿಷ್ಯದ ಬಗ್ಗೆ ಯೇಸು ಇನ್ನು ಮುಂದೆ ತಾನು ದೇವರ ರಾಜ್ಯವು ಪೂರ್ಣವಾಗಿ ಬರುವವರೆಗೂ ಈ ರೀತಿ ತನ್ನ ಶಿಷ್ಯರೊಂದಿಗೆ ಹಬ್ಬದೂಟವನ್ನು ಮಾಡುವುದಿಲ್ಲವೆಂದು ಹೇಳುತ್ತಾನೆ (ವ. 25).

16. ಊಟವಾದ ನಂತರ ಯೇಸು ಮತ್ತು ಆತನ ಶಿಷ್ಯರು ಎಣ್ಣೇಮರಗಳ ಗುಡ್ಡಕ್ಕೆ ಹೋಗುತ್ತಾರೆ (ವ. 26).

17. ತನ್ನನ್ನು ಹಿಡಿಯುವಾಗ ತನ್ನ ಶಿಷ್ಯರೆಲ್ಲರೂ ದಿಗಿಲುಪಟ್ಟು ಓಡಿಹೋಗುವರು ಎಂದು ಯೇಸು ಹೇಳುತ್ತಾನೆ. ಇದಕ್ಕಾಗಿ ಆತನು ಹಳೇ ಒಡಂಬಡಿಕೆಯ ಪ್ರವಾದಿಯಾದ ಜೆಕರ್ಯನಿಂದ ಒಂದು ಹೇಳಿಕೆಯನ್ನು ಉಪಯೋಗಿಸುತ್ತಾನೆ (ವ. 27).

18. ತನ್ನ ಪುನರುತ್ಥಾನದ ನಂತರ ಶಿಷ್ಯರನ್ನು ತಾನು ಗಲಿಲಾಯದಲ್ಲಿ ಭೇಟಿಯಾಗುತ್ತೇನೆಂದು ಯೇಸು ಹೇಳುತ್ತಾನೆ (ವ. 28).

19. ಆ ರಾತ್ರಿ ಪೇತ್ರನು ಮೂರು ಬಾರಿ ತನ್ನನ್ನು ಅಲ್ಲಗಳೆಯುವನೆಂಬುದಾಗಿ ಯೇಸು ಹೇಳುತ್ತಾನೆ (ವ. 30).

20. ಎಲ್ಲಾ ಶಿಷ್ಯರು ಯೇಸುವಿಗೆ ತಾವು ಸಾಯಬೇಕಾಗಿ ಬಂದರೂ ನಿನ್ನನ್ನು ಮಾತ್ರ ಅರಿಯೆವೆಂಬುದಾಗಿ ಹೇಳುವುದಿಲ್ಲವೆಂದು ಭರವಸೆಕೊಟ್ಟರು (ವ. 31).

21. ಯೇಸು ಪ್ರಾರ್ಥಿಸುವುದಕ್ಕಾಗಿ ಗೆತ್ಸೇಮನೆ ತೋಟಕ್ಕೆ ಹೋದನು (ವ. 32).

22. ಪೇತ್ರ, ಯಾಕೋಬ ಮತ್ತು ಯೋಹಾನರೊಂದಿಗೆ ಹೋಗುತ್ತಿರುವಾಗ ಯೇಸು ಬೆಚ್ಚಿಬೆರಗಾಗಿ ಮನಗುಂದಿದವನಾದನು. ಆತನು ಸಾಯುವಷ್ಟು ದುಃಖಕ್ಕೆ ಒಳಗಾದನು (ವ. 33-34).

23. ತಾನು ಪ್ರಾರ್ಥಿಸುವಾಗ ತನ್ನ ಮೂರು ಶಿಷ್ಯರಿಗೆ ಎಚ್ಚರವಾಗಿರಬೇಕೆಂದು ಯೇಸು ಹೇಳಿದನು (ವ. 34).

24. ಯೇಸು ಎರಡು ವಿಷಯಗಳ ಬಗ್ಗೆ ಪ್ರಾರ್ಥಿಸಿದನು (ವ. 35-36):

ಅ. ತಾನು ಆ ಬಾಧೆ ಮತ್ತು ಮರಣವನ್ನು ಹಾದುಹೋಗಬಾರದೆಂದು

ಆ. ತನ್ನ ಚಿತ್ತದಂತಾಗದೆ, ದೇವರ ಚಿತ್ತದಂತೆ ಆಗಲೆಂದು

25. ಯೇಸು ಪ್ರಾರ್ಥಿಸುವಾಗ ಅತನ ಮೂವರು ಶಿಷ್ಯರು ನಿದ್ರೆ ಮಾಡಿದರು (ವ. 37).

26. ಒಂದೇ ಸಂಗತಿ ಮೂರು ಭಾರಿ ಸಂಭವಿಸುತ್ತದೆ (ವ. 41).

27. ತನ್ನನ್ನು ದುರ್ಜನರ ಕೈಗೆ ಹಿಡಿದುಕೊಡುವ ಸಮಯ ಬಂದಿದೆ ಎಂಬುದಾಗಿ ಯೇಸು ಹೇಳುತ್ತಾನೆ (ವ. 41-42).

28. ಯೇಸುವನ್ನು ಹಿಡಿಯಲು ಬಂದವರಿಗೆ ಇಸ್ಕರಿಯೋತ ಯೂದನು ಆತನಿಗೆ ಗುರುವೇ ಎಂದು ಮುದ್ದಿಡುವುದರ ಮೂಲಕ ಗುರತಿಸಿಕೊಟ್ಟನು. ಈ ವಂದನೆಯು ಜನರು ಸರಿಯಾದ ವ್ಯಕ್ತಿಯನ್ನು ಬಂಧಿಸಲು ಇರುವ ಮುಂಚಿತವಾಗಿಯೇ ಯೋಜಿಸಿದ್ದ ಒಂದು ಗುರುತಾಗಿತ್ತು (ವ. 43-46).

29. ತನ್ನನ್ನು ಬಂಧಿಸಿದ್ದರ ರೀತಿಯ ಬಗ್ಗೆ ಯೇಸು ದೂರುತ್ತಾನೆ (ವ. 48-49). ಆತನು ಢಕಾಯಿತನಾಗಿರಲಿಲ್ಲ, ಹಾಗಾಗಿ ಅವರು ಮಧ್ಯರಾತ್ರಿಯಲ್ಲಿ ಕಳ್ಳನನ್ನು ಹಿಡಿಯುವಂತೆ ಕತ್ತಿಯನ್ನೂ ದೊಣ್ಣೆಗಳನ್ನೂ ಹಿಡಿದುಕೊಂಡು ಬರುವ ಅವಶ್ಯಕತೆಯಿರಲಿಲ್ಲ. ಆತನು ದೇವಾಲಯದಲ್ಲಿ ಉಪದೇಶಿಸುತ್ತಿರುವಾಗ ಹಗಲಿನಲ್ಲಿ ಅವರು ಆತನನ್ನು ಹಿಡಿಯಬಹುದಿತ್ತು.

30. ಯೇಸುವನ್ನು ಬಂಧಿಸುವಾಗ ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿಹೋದರು (ವ. 50).

31. ಬಂಧನದ ವೇಳೆ ಯೌವನಸ್ಥನು ಆತನ ಹಿಂದೆ ಜನರ ಕೂಡ ಬರುತ್ತಿದ್ದನು. ಆದರೆ ಅವರು ಅವನನ್ನು ಹಿಡಿಯುವಾಗ ನಾರುಮಡಿಯನ್ನು ಅಲ್ಲೇ ಬಿಟ್ಟು ಬರೀಮೈಯಲ್ಲಿ ಓಡಿಹೋಗುತ್ತಾನೆ (ವ. 51-52).

32. ಬಂಧಿಸಿದ ನಂತರ ಯೇಸುವನ್ನು ಮೊದಲು ಮಹಾಯಾಜಕನ ಬಳಿಗೆ ತೆಗೆದುಕೊಂಡು ಹೋಗುತ್ತಾರೆ. ಆತನ ಹೆಸರು ಕಾಯಫ ಎಂದು ಇನ್ನೊಂದು ಸಮಾನ ಪತ್ಯವು ಹೇಳುತ್ತದೆ.

33. ಯೇಸುವು ಯೆಹೂದಿ ಹಿರೀಸಭೆಯಿಂದ ವಿಚಾರಣೆಗೊಳಗಾಗುವಾಗ ಪೇತ್ರನು ಮಹಾಯಾಜಕನ ಮಠದ ಅಂಗಳದಲ್ಲಿದ್ದನು (ವ. 54).

34. ಯೇಸುವನ್ನು ಮರಣದಂಡನೆಗೆ ಒಪ್ಪಿಸಲು ಪ್ರಯತ್ನಿಸಿದಾಗ ಯೆಹೂದಿ ಹಿರೀಸಭೆ (ಮಂಡಲಿ) ಎರಡು ಸಮಸ್ಯೆಗಳನ್ನು ಎದುರಿಸಬೇಕಾಯಿತು (ವ. 55-59):

ಅ. ಯೇಸುವಿಗೆ ವಿರುದ್ಧವಾಗಿ ಸಾಕ್ಷಿ ಹೇಳಲು ಅವರಿಗೆ ಯಾರೂ ಸಿಗಲಿಲ್ಲ.

ಆ. ಅವರಿಗೆ ಸುಳ್ಳುಸಾಕ್ಷಿ ಹೇಳುವವರು ಸಿಕ್ಕರೂ ಅವರ ಸಾಕ್ಷಿ ಒಂದಕ್ಕೊಂದು ಸರಿಬೀಳಲಿಲ್ಲ. ಆದರೆ ಯೆಹೂದಿ ಧರ್ಮಶಾಸ್ತ್ರದ ಪ್ರಕಾರ ಮರಣದಂಡನೆ ವಿಧಿಸಲು ಕನಿಷ್ಠಪಕ್ಷ ಎರಡು ಸಾಕ್ಷಿಯಾದರೂ ಬೇಕಾಗಿತ್ತು.

35. ತನ್ನ ವಿರುದ್ಧವಾದ ದೂಷಣೆಗಳಿಗೆ ಯೇಸು ಏನೂ ಉತ್ತರಕೊಡದೆ ಆತನು ಸುಮ್ಮನಿದ್ದನು (ವ. 60-61).

36. ತಾನು ಯಾರೆಂಬುದರ ಕುರಿತಾದ ಮಹಾಯಾಜಕನ ಪ್ರಶ್ನೆಗೆ ಯೇಸು ಎರಡು ಮಾತುಗಳಿಂದ ಉತ್ತರಿಸುತ್ತಾನೆ (ವ. 61-62):

ಅ. ಮೊದಲನೆಯದಾಗಿ, ತಾನು ಮೆಸ್ಸೀಯನಾಗಿದ್ದೇನೆಂಬುದನ್ನು ದೃಢಪಡಿಸಲು ಆತನು "ನಾನೇ" ಎಂಬ ಪದ ಬಳಸುತ್ತಾನೆ (ಹೌದು ಎನ್ನುವುದರ ಬದಲು). "ನಾನೇ" ಎಂಬ ಪದವು ಯೆಹೂದ್ಯರಿಗೆ ದೇವರ ಹೆಸರನ್ನು ಜ್ಞಾಪಕಕ್ಕೆ ತಂದಿತು ("ಇರುವಾತನೇ ಆಗಿದ್ದೇನೆ" ವಿಮೋ.3:14). ಅದನ್ನು ದೇವದೂಷಣೆಯೆಂಬುದಾಗಿ ಪರಿಗಣಿಸಲಾಯಿತು.

ಆ. ಎರಡನೆಯದಾಗಿ ಆತನು, ತನ್ನ ಗುರುತನ್ನು ಬೆಂಬಲಿಸಲು ಹಳೇ ಒಡಂಬಡಿಕೆಯ ಎರಡು ಮೆಸ್ಸೀಯನ ಕುರಿತ ಹೇಳಿಕೆಗಳನ್ನು (ಕೀರ್ತನೆ. 110:1 ಮತ್ತು ದಾನಿಯೇಲ 7:13) ಉಪಯೋಗಿಸುತ್ತಾನೆ. ಅದನ್ನು ಯೆಹೂದಿ ಮಂಡಲಿಯವರು ದೇವದೂಷಣೆಯೆಂಬುದಾಗಿ ಪರಿಗಣಿಸಿದರು.

37. ಆತನು ದೇವದೂಷಣೆ ಮಾಡಿದ್ದನ್ನು ಕೇಳಿಸಿಕೊಂಡದ್ದರಿಂದ ಯೆಹೂದಿ ಮಹಾಮಂಡಲಿಯವರು ಯೇಸುವು ಮರಣದಂಡನೆ ಹೊಂದತಕ್ಕವನೆಂದು ತೀರ್ಪುಕೊಡುತ್ತಾರೆ (ವ. 63-64). ಹಾಗಾಗಿ ಅವರಿಗೆ ಹೊರಗಿನ ಸಾಕ್ಷಿಯೇನೂ ಬೇಕಾಗಿರಲಿಲ್ಲ.

38. ಕೆಲವು ದೂಷಕರು ಯೇಸುವಿಗೆ ಉಗುಳಿ, ಆತನ ಮುಖದ ಮೇಲೆ ಗುದ್ದಿ, ಪ್ರವಾದನೆ ಹೇಳು ಎಂಬುದಾಗಿ ಪರಿಹಾಸ್ಯಮಾಡುತ್ತಾರೆ (ವ. 65).

39. ದಾಸಿಯರಲ್ಲೊಬ್ಬಳು ಮೊದಲು ಪೇತ್ರನಿಗೆ ನೀನೂ ಸಹ ನಜರೇತಿನವನಾದ ಯೇಸುವಿನ ಜೊತೆ ಇದ್ದವನೆಂದು ದೂರುತ್ತಾಳೆ. ಆಗ ಪೇತ್ರನು ಆಕೆಯು ಏನು ಹೇಳುತ್ತಾಳೋ ಅದು ತನಗೆ ತಿಳಿಯದೆಂದು ಪ್ರತಿಕ್ರಯಿಸುತ್ತಾನೆ. ಹೀಗೆ ಪೇತ್ರನು ಮೊದಲಬಾರಿ ಯೇಸುವನ್ನು ಅಲ್ಲಗಳೆದನು (ವ. 67-68).

40. ಸ್ವಲ್ಪ ಸಮಯದ ನಂತರ ಆ ದಾಸಿಯು ಪುನಃ ಪೇತ್ರನನ್ನು ಕಂಡು ಅಲ್ಲಿ ನಿಂತಿದ್ದವರಿಗೆ ಇವನೂ ಸಹ ಅವರ (ಯೇಸುವಿನ) ಗುಂಪಿಗೆ ಸೇರಿದವನೆಂದು ಹೇಳುತ್ತಾಳೆ. ಅದನ್ನು ಕೇಳಿದ ಪೇತ್ರನು ಎರಡನೆಯ ಬಾರಿಗೆ ಯೇಸುವನ್ನು ಅರಿಯೆನೆಂದು ಅಲ್ಲಗಳೆಯುತ್ತಾನೆ (ವ. 69-70).

41. ಪೇತ್ರನು ಗಲಿಲಾಯದವನಾಗಿರುವುದರಿಂದ ಅಲ್ಲಿ ನಿಂತಿದ್ದವರು ಈತನೂ ಯೇಸುವಿನ ಹಿಂಬಾಲಕನೆಂದು ಹೇಳಿದಾಗ ಪೇತ್ರನು ಗಂಭೀರವಾಗಿ ಪ್ರತಿಕ್ರಯಿಸುತ್ತಾನೆ. ಆತನು ಶಪಿಸಿಕೊಳ್ಳುವುದಕ್ಕೆ ಪ್ರಾರಂಭಿಸಿ, ಯೇಸುವನ್ನು ತಾನು ಅರಿಯೆನೆಂಬುದಾಗಿ ಹೇಳುತ್ತಾನೆ. ಹೀಗೆ ಪೇತ್ರನು ಮೂರನೇ ಬಾರಿಗೆ ಯೇಸುವನ್ನು ಅಲ್ಲಗಳೆದನು (ವ. 70-71).

42. ಎರಡನೇ ಬಾರಿಗೆ ಕೋಳಿಕೂಗಿದ್ದನ್ನು ಕೇಳಿಸಿಕೊಂಡ ಪೇತ್ರನು, ಈ ರಾತ್ರಿ ಆತನು ಮೂರುಬಾರಿ ಯೇಸುವನ್ನು ಅಲ್ಲಗಳೆಯುವನೆಂಬುದಾಗಿ ಹಿಂದಿನ ದಿನ ಸಂಜೆ ತನಗೆ ಯೇಸು ಹೇಳಿದ ಮಾತನ್ನು ನೆನಪಿಸಿಕೊಂಡನು. ಹಾಗಾಗಿ ಆತನು ಮನಗುಂದಿದವನಾಗಿ ಅತ್ತನು (ವ. 72).

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. –
2. ಜಟಾಮಾಂಸಿ ತೈಲ ತಂದ ಸ್ತ್ರೀಯೊಂದಿಗೆ ಯೇಸುವಿನ ಮೌಲ್ಯಮಾಪನು (ವ. 3-9):

ಅ. ನೀವು ಯೇಸುವಿನ ಮೌಲ್ಯಮಾಪನವನ್ನು ಒಪ್ಪದಿದ್ದರೆ ನಿಮಗೆ ಇಂತಹ ಅಂಶಗಳು ಉದ್ಭವಿಸಬಹುದು:

- ಅಂತಹ ಸಾಂಕೇತಿಕ ಆಚರಣೆಗಾಗಿ ಅಷ್ಟೊಂದು ಹಣವನ್ನು ಯಾಕೆ ಹಾಳುಮಾಡಿರುವೆ?
- ಒಬ್ಬ ಧಾರ್ಮಿಕ ನಾಯಕನನ್ನು ಗೌರವಿಸುವುದಕ್ಕಿಂತ ಬಡವರಿಗೆ ಸಹಾಯ ಮಾಡುವುದು ಪ್ರಾಮುಖ್ಯವಾದುದ್ದಾಗಿದೆ.
- ಆ ಸ್ತ್ರೀಯು ಸ್ವಲ್ಪ ತೈಲವನ್ನಷ್ಟೇ ಉಪಯೋಗಿಸಬಹುದಿತ್ತಲ್ಲ? ಆಗ ಬಡವರಿಗೆ ಪ್ರಯೋಜನವಾಗುತ್ತಿತ್ತು.
- ಆ ಸ್ತ್ರೀಯು ತೈಲವನ್ನು ಬಳಸದೆ ಯೇಸುವನ್ನು ಸನ್ಮಾನಿಸಲು ಆಗುತ್ತಿರಲಿಲ್ಲವಾ? ಹೊರಗಣ ತೋರಿಕೆಗಿಂತ ಹೃದಯದ ಮನೋಭಾವನೆಯೇ ಪ್ರಾಮುಖ್ಯವಲ್ಲವಾ?

ಆ. ಯೇಸುವಿನ ಮೌಲ್ಯಮಾಪನವನ್ನು ಒಪ್ಪುವುದಾದರೆ ಈ ರೀತಿಯ ಅಂಶಗಳು ನಿಮಗೆ ಉದ್ಭವಿಸಬಹುದು:

- ನಾವು ಯಾವಾಗಲೂ ಯೇಸುವನ್ನು ನಮ್ಮ ಜೀವನದ ಕೇಂದ್ರವಾಗಿಟ್ಟುಕೊಳ್ಳಬೇಕು. ಉಳಿದದ್ದೆಲ್ಲವೂ ಅನಂತರ ಬರಬೇಕು. ಯೇಸುವಿಗಾಗಿ ಹಣವನ್ನಾಗಲೀ ಸಂಪನ್ಮೂಲಗಳನ್ನಾಗಲೀ ವ್ಯಯಿಸಿದರೆ ಅದೆಂದೂ ಸಹ ವ್ಯರ್ಥವಾಗುವುದಿಲ್ಲ.
- ಇದು ಒಂದು ಅವಧಿಯ ಸಂದರ್ಭವಾಗಿತ್ತು. ಇದು ಯಾರು ಬೇಕಾದರೂ ಯೇಸುವನ್ನು ಸನ್ಮಾನಿಸಲು ಅಥವಾ ಗೌರವಿಸಲು ಇರುವ ಕೊನೆಯ ಅವಕಾಶವಾಗಿತ್ತು.
- ಸ್ತ್ರೀಯು ಏನು ಮಾಡಿದಳೋ ಅದು ಪ್ರವಾದನಾತ್ಮಕವಾಗಿತ್ತು. ಆಕೆಯ ಕಾರ್ಯವು ಯೇಸುವಿನ ಮರಣ ಮತ್ತು ಹೂಣಿಸುವಿಕೆಯನ್ನು ಸೂಚಿಸಿತು.
- ಜಗತ್ತಿನಾದ್ಯಂತ ಅನೇಕ ಜನ ಬಡವರಿದ್ದಾರೆ, ಹಾಗಾಗಿ ಅವರೆಲ್ಲರಿಗೂ ಸಹಾಯ ಮಾಡುವುದು ಕಷ್ಟಸಾಧ್ಯ. ವ್ಯರ್ಥವಾದವುಗಳಿಗಾಗಿ ಯಾಕೆ ಹಣವನ್ನು ವ್ಯರ್ಥಮಾಡುವುದು?

3. ಯೇಸುವನ್ನು ಹಿಡುಕೊಡುವುದರ ಎರಡು ಅಂಶಗಳು (ವ. 17-21):

ಅ. ಇಸ್ಕರಿಯೋತ ಯೂದನು ಯೇಸುವನ್ನು ಹಿಡುಕೊಡುವುದರ ಮೂಲಕ ಬಾಧೆಪಡುವ ಮೆಸ್ಸೀಯನ ಕುರಿತ ಪ್ರವಾದನೆಯಂತೆ ದೇವರ ಉದ್ದೇಶವು ನೆರವೇರಿತು.

ಆ. ಇದರ ಹೊರತಾಗಿಯೂ ಈ ಕಾರ್ಯಕ್ಕಾಗಿ ಇಸ್ಕರಿಯೋತ ಯೂದನೇ ಜವಾಬ್ದಾರನಾಗಿದ್ದನು. ಆತನು ದೇವರ ಕೈಯಲ್ಲಿ ಒಂದು ಗೊಂಬೆಯಾಗಿರಲಿಲ್ಲ. ತನ್ನ ಒಡೆಯನನ್ನು ಹಿಡುಕೊಡದಿರಲು ಆತನಿಗೆ ಆಯ್ಕೆಯಿತ್ತು. ಆದರೆ ಆತನು ಹಿಡುಕೊಡುವುದನ್ನು ಆರಿಸಿಕೊಂಡನು. ಇಸ್ಕರಿಯೋತ ಯೂದನು ಭಾಗಿಯಾಗದೆ ದೇವರ ಯೋಜನೆ ನೆರವೇರಬಹುದಾಗಿತ್ತು.

4. ಕರ್ತನ ಭೋಜನ ಕುರಿತ ಹೊಸ ಒಡಂಬಡಿಕೆಯ ನಾಲ್ಕು ವಾಕ್ಯಭಾಗಗಳು (ಮತ್ತಾ. 26:26-29, ಮಾರ್ಕ 14:22-25, ಲೂಕ 22:14-20, 1 ಕೊರಿಂಥ 11:23-26):

ಅ. ಸಾಮಾನ್ಯ ಹೋಲಿಕೆ: ಮತ್ತಾಯ ಮತ್ತು ಮಾರ್ಕನ ಸುವಾರ್ತೆಯಲ್ಲಿನ ವಿವರವೆರಡೂ ಸಹ ಒಂದೇ ರೀತಿ ಇವೆ. ಲೂಕ ಮತ್ತು 1 ಕೊರಿಂಥ ಪತ್ರಿಕೆಯಲ್ಲಿನ ವಿವರಗಳಲ್ಲಿ ಸಮಾನತೆಯಿದೆ.

ಆ. ಹಿನ್ನಲೆ:

- ಮತ್ತಾಯ ಮತ್ತು ಮಾರ್ಕರಿಬ್ಬರೂ ಒಂದೆ ಹಿನ್ನಲೆ ಹೊಂದಿದ್ದಾರೆ. ಅವರಿಬ್ಬರ ವಿವರವು ಯೇಸುವನ್ನು ಹಿಡುಕೊಡುವ ಇಸ್ಕರಿಯೋತ ಯೂದನ ಉಪಾಯದಿಂದ ಪ್ರಾರಂಭವಾಗಿ ತನ್ನನ್ನು ಪೇತ್ರನು ಅಲ್ಲಗಳೆಯುವವನೆಂದು ಯೇಸು ಮುಂತಿಳಿಸುವಿಕೆಯೊಂದಿಗೆ ಮುಕ್ತಾಯವಾಗುತ್ತದೆ.
- ಲೂಕನ ಸುವಾರ್ತೆಯಲ್ಲಿನ ವಿವರವು ಯೂದನು ಯೇಸುವನ್ನು ಹಿಡಿಯುವ ಉಪಾಯದಿಂದ ಪ್ರಾರಂಭವಾಗಿ ಶಿಷ್ಯರ ನಡುವೆ ಯಾರು ಹೆಚ್ಚಿನವರು ಎಂಬ ವಾಗ್ವಾದದೊಂದಿಗೆ ಮುಕ್ತಾಯವಾಗುತ್ತದೆ.
- 1 ಕೊರಿಂಥದಲ್ಲಿನ ವಿವರವು ಒಂದು ಸಭೆಯ ಒಂದು ಕ್ರಮವಾದ ಆರಾಧನಾ ಹಿನ್ನಲೆಯಲ್ಲಿ ತಿಳಿಸಲಾಗಿದೆ.

ಇ. ಘಟನೆಗಳ ಕ್ರಮ:

- ಮತ್ತಾಯ ಮತ್ತು ಮಾರ್ಕದಲ್ಲಿ ಈ ರೀತಿ ಕ್ರಮವಿದೆ: ರೊಟ್ಟಿ, ಪಾತ್ರೆ, ದೇವರ ರಾಜ್ಯದಲ್ಲಿ ನೆರವೇರುವುದು.
- 1 ಕೊರಿಂಥದಲ್ಲಿ ಈ ರೀತಿಯ ಕ್ರಮವಿದೆ: ರೊಟ್ಟಿ ಮತ್ತು ಪಾತ್ರೆ ದೇವರ ರಾಜ್ಯದಲ್ಲಿ ನೆರವೇರುವುದರ ಬಗ್ಗೆ ಏನೂ ಇಲ್ಲ, ಪೌಲನು ಇಡೀ ಭೋಜನವನ್ನು ಯೇಸುವಿನ ಮರಣದ ಕುರಿತ ಸಾಗುವುದಾಗಿದೆ ಎಂದು ವ್ಯಾಖ್ಯಾನಿಸುತ್ತಾನೆ.
- ಲೂಕನ ಸುವಾರ್ತೆಯಲ್ಲಿನ ಕ್ರಮ ಈ ರೀತಿಯಿದೆ: ದೇವರ ರಾಜ್ಯದಲ್ಲಿನ ಪಸ್ಕಹಬ್ಬದ ಭೋಜನದ ನೆರವೇರಿಕೆ, ಮೊದಲ ಪಾತ್ರೆ, ರೊಟ್ಟಿ, ಊಟವಾದ ನಂತರ ಇನ್ನೊಂದು ಪಾತ್ರೆ

ಈ. ಇತರ ವ್ಯತ್ಯಾಸಗಳು:

- ಲೂಕ ಮತ್ತು 1 ಕೊರಿಂಥದಲ್ಲಿ ಮಾತ್ರ "ಹೊಸ" ಒಡಂಬಡಿಕೆ ಎಂದಿದೆ.
- ಯೇಸುವನ್ನು ನೆನಸಿಕೊಳ್ಳುವುದಕ್ಕೋಸ್ಕರ: ಲೂಕ ಮತ್ತು 1 ಕೊರಿಂಥದಲ್ಲಿ ಮಾತ್ರ ಈ ರೀತಿ ಇದೆ.
- ಮತ್ತಾಯ ಮತ್ತು ಮಾರ್ಕದಲ್ಲಿ ಯೇಸು ತನ್ನ ಶಿಷ್ಯರಿಗೆ ಈ ರೊಟ್ಟಿಯನ್ನು ತೆಗೆದುಕೊಳ್ಳಿರಿ ಎಂದು ಹೇಳುತ್ತಾನೆ ಮತ್ತು ಅನಂತರ ಅದು ತನ್ನ ದೇಹವೆಂಬುದಾಗಿ ವಿವರಿಸುತ್ತಾನೆ. ಈ ವಿಷಯವು ಉಳಿದೆರಡು ವಾಕ್ಯಭಾಗಗಳಲ್ಲಿ ಕಂಡುಬರುವುದಿಲ್ಲ.
- ಯೇಸು ಪಾತ್ರೆಯನ್ನು ಕೊಟ್ಟ ವಿಷಯದಲ್ಲಿ ಮಾರ್ಕ ಮತ್ತು ಲೂಕದಲ್ಲಿ "ಕುಡಿಯಿರಿ" ಎಂದ ಪದವನ್ನು ಸೇರಿಸಿಲ್ಲ.
- ತನ್ನ ಬಾಧೆಗಿಂತ ಮೊದಲು ತನ್ನ ಶಿಷ್ಯರೊಂದಿಗೆ ಪಸ್ಕಹಬ್ಬದ ಊಟವನ್ನು ಮಾಡಬೇಕೆಂದು ತವಕದಿಂದ ಬಯಸಿದನೆಂಬುದರೊಂದಿಗೆ ಲೂಕನು ತನ್ನ ವಿವರದಲ್ಲಿ ಪ್ರಾರಂಭಿಸುತ್ತಾನೆ.

5. ಕರ್ತನ ಭೋಜನದ ಎರಡು ವಸ್ತುಗಳ (ವ. 22-25) ಪ್ರಾಮುಖ್ಯತೆ (ರೊಟ್ಟಿ ಮತ್ತು ದ್ರಾಕ್ಷಾರಸ): ವಚನ 23-25 ರ ಟಿಪ್ಪಣಿ ನೋಡಿರಿ.

6. ವಚನ 41 ರಲ್ಲಿನ ಯೇಸುವಿನ "ಸಾಕು" ಎಂಬ ಮಾತು:

ಅ. ಮೂವರು ಶಿಷ್ಯರುಗಳು ಸಾಕಷ್ಟು ನಿದ್ರೆ ಮಾಡಿದ್ದು, ಆಗ ಅದು ಅವರು ಏಳಬೇಕಾದ ಸಮಯವಾಗಿದೆ ಎಂಬುದು ಯೇಸುವಿನ ಮಾತಿನ ಅರ್ಥವಾಗಿರಬಹುದು. ಆದರೆ ಯೇಸುವಿನ ಮನಸ್ಸಿನ ಆಲೋಚನೆ ಇಂಥದಾಗಿತ್ತೆಂದು ನಾನು ಯೋಚಿಸುವುದಿಲ್ಲ.

ಆ. ಯೇಸು ಹೇಳಿದ್ದು ಕೊನೆಯು ಬಂದಿದೆ ಅಥವಾ ಎಲ್ಲಾ ಯೋಜಿಸಲ್ಪಟ್ಟಿದೆ (ಶಿಲುಬೆಯ ಮೇಲೆ ಮರಣಹೊಂದುವುದು ತನ್ನ ಕುರಿತಾಗಿನ ದೇವರ ಚಿತ್ತವಾಗಿದೆ ಎಂಬುದರ ಬಗ್ಗೆ ಯೇಸುವಿಗೆ ಸ್ಪಷ್ಟವಾಗಿತ್ತು ಎಂದರ್ಥ). ಈ ಎರಡು ವ್ಯಾಖ್ಯಾನುಗಳು ಸಹ ತನ್ನ ಹಿಡಿದುಕೊಡುವಿಕೆ ಮತ್ತು ಮರಣದ ಸಮಯ ಬಂದಿದೆ ಎಂಬ ಯೇಸುವಿನ ಮುಂದಿನ ಹೇಳಿಕೆಯಿಂದ ಬೆಂಬಲಿಸಲ್ಪಟ್ಟಿವೆ.

7. –

8. –

9. ಯೆಹೂದಿ ಮಹಾಸಭೆಯು ಯೇಸುವನ್ನು ವಿಚಾರಣೆ ಮಾಡುವ ವೇಳೆ ಈ ಎಲ್ಲಾ ಸಂಗತಿಗಳು ಸಂಭವಿಸಿದವು (ವ. 53-65):

ಅ. ಆ ಸಭೆಯು ಆ ರಾತ್ರಿಯಲ್ಲಿ ಮಹಾಯಾಜಕನ ಮನೆಯಲ್ಲಿ ಕೂಡಿಬಂದಿತ್ತು. ಹಾಗಾಗಿ ಯೇಸುವಿಗೆ ದಂಡನೆ ವಿಧಿಸಲು ಮಹಾಯಾಜಕನು ತರಾತುರಿಯಲ್ಲಿದ್ದಿರಬೇಕು. ಅಲ್ಲದೇ ಆತನು ದಂಗೆಯಿಂದ ತಪ್ಪಿಸುವುದಕ್ಕಾಗಿ ಅದನ್ನು ರಹಸ್ಯವಾಗಿ ಮಾಡಬೇಕೆಂದು ಬಯಸಿರಬಹುದು (ಹೋಲಿಸಿ ವ. 1-2).

ಆ. ಮಹಾಸಭೆಯು ಮೊದಲು ಸುಳ್ಳುಸಾಕ್ಷಿಗಳು ಬಂದು ತಮ್ಮ ಸಾಕ್ಷಿಗಳನ್ನು ಹೇಳುವುದರಿಂದ ಯೇಸುವಿನ ಮೇಲೆ ತಪ್ಪುಹೊರಿಸಲು ಪ್ರಯತ್ನಿಸಿದರು. ಆದರೆ ಅವರ ಸಾಕ್ಷಿ ಒಂದಕ್ಕೊಂದು ಸರಿಬೀಳಲಿಲ್ಲ ಮತ್ತು ಒಪ್ಪಬೇಕಾದರೆ ಧರ್ಮಶಾಸ್ತ್ರದ ಪ್ರಕಾರ ಕನಿಷ್ಠಪಕ್ಷ ಎರಡು ಸಾಕ್ಷಿಗಳು ಬೇಕಾಗಿತ್ತು. ಹೀಗೆ ಮೊದಲನೆಯ ಸಂಚು ವಿಫಲವಾಯಿತು.

ಇ. ಅನಂತರ ಸುಳ್ಳುಸಾಕ್ಷಿಗಳು ತನಗೆ ವಿರುದ್ಧವಾಗಿ ಹೇಳಿದ ಆರೋಪದ ಬಗ್ಗೆ ಏನನ್ನು ಹೇಳುವುದಿಲ್ಲವೋ ಎಂದು ಪ್ರಶ್ನಿಸುವುದರ ಮೂಲಕ ಮಹಾಯಾಜಕನು ಯೇಸುವನ್ನು ರೇಗಿಸಲು ಪ್ರಯತ್ನಿಸಿದನು. ಆದರೆ ಯೇಸು ಮಾತ್ರ ಸುಮ್ಮನಿದ್ದನು. ಹೀಗೆ ಎರಡನೆಯ ಸಂಚು ವಿಫಲವಾಯಿತು.

ಈ. ಈಗ ಮಹಾಯಾಜಕನು ಯೇಸುವು ಮೆಸ್ಸೀಯನೆಂಬುದಾಗಿ ಪ್ರಶ್ನಿಸಿದನು. ಮೊದಲನೇ ಬಾರಿಗೆ ಯೇಸು ತಾನು ಯಾರು ಎಂಬುದರ ಬಗ್ಗೆ ಮಾತನಾಡುತ್ತಾನೆ. ಆತನ ಗಳಿಗೆಯು ಬಂದಿತ್ತು (ವ. 41 ನ್ನು ಹೋಲಿಸಿ). ಆತನು ಕೇವಲ ರಾಜಕೀಯ ಮೆಸ್ಸೀಯನಲ್ಲದೇ ಒಬ್ಬ ದೈವಿಕ ಮೆಸ್ಸೀಯ (ರೇಗಿಸುವಂತೆ "ನಾನೇ" ಎಂಬ ಪದ ಬಳಸಿದ್ದು) ಅಥವಾ ದೇವರೊಂದಿಗೆ ಸಿಂಹಾಸನಾಸೀನರಾಗಿರುವ ಮೆಸ್ಸೀಯ (ಕೀರ್ತನೆ 110:1), ದೇವರ ವಾಗ್ದಾನಗಳನ್ನು ನೆರವೇರಿಸಲು ಬಂದವನೆಂಬುದಾಗಿ ಹೇಳುತ್ತಾನೆ.

ಉ. ಈಗ ಮಹಾಯಾಜಕ ಮತ್ತು ಯೆಹೂದಿ ಹಿರೀಸಭೆಗೆ ಸಾಕಷ್ಟು ಪುರಾವೆ ಸಿಕ್ಕಿತ್ತು. ಈಗ ಅವರು ಯೇಸುವಿನ ದೇವ ದೂಷಣೆಯನ್ನು ಕೇಳಿಸಿಕೊಂಡು ಆತನು ಮರಣದಂಡನೆ ಹೊಂದತಕ್ಕವನೆಂದು ತೀರ್ಪುಮಾಡಿದರು.

ಊ. ಈಗ ಅನೇಕರು ಯೇಸುವನ್ನು ಪರಿಹಾಸ್ಯಮಾಡತೊಡಗಿದ್ದರು. ಅಲ್ಲದೇ ಓಲೆಕಾರರು ಆತನಿಗೆ ಹೊಡೆಯುವಂತೆ ಒಪ್ಪಿಸಿಕೊಟ್ಟರು.

10. –



**ಉತ್ತರಗಳು: ಮಾರ್ಕ ಅಧ್ಯಾಯ 15**

**ಪ್ರಶ್ನೆಗಳಿಗೆ ಉತ್ತರಗಳು**

1. ಯೆಹೂದಿ ನಾಯಕರು ಯೇಸುವನ್ನು ಶ್ರಮಾ ಅವಧಿಯ ಶುಕ್ರವಾರ ಮುಂಜಾನೆ ವೇಳೆ ರೋಮನ್ ಅಧಿಪತಿಯ ಮುಂದೆ ಕರೆತರುತ್ತಾರೆ (ವ. 1).
2. ಪಿಲಾತನು ಯೇಸುವಿಗೆ ಮೊದಲು ಕೇಳಿದ ಪ್ರಶ್ನೆಯು ಆತನು ನಿಜವಾಗಲೂ ಯೆಹೂದ್ಯರ ಅರಸನು ಹೌದೋ ಎಂಬುದಾಗಿ ಪ್ರಶ್ನಿಸುತ್ತಾನೆ. ಯೆಹೂದಿ ನಾಯಕರ ದೂಷಣೆಗಳ ರೀತಿಯ ನಿಮಿತ್ತ ಆತನು ಈ ಪ್ರಶ್ನೆಯನ್ನು ಕೇಳಿದ್ದಿರಬಹುದು. ಯೇಸುವು ಒಬ್ಬ ದೇವದೂಷಕನಾಗಿದ್ದರೆ ರೋಮನ್ ಸರ್ಕಾರವು ಅದಕ್ಕೇನು ಅಷ್ಟು ಲಕ್ಷ್ಯಕೊಡುತ್ತಿರಲಿಲ್ಲ. ಆದರೆ ರೋಮನ್ ಅಧಿಕಾರಿಗಳು ಯೆಹೂದಿ ಬಂಡಾಯಗಾರರ ಬಗ್ಗೆ ಹೆಚ್ಚು ಲಕ್ಷವಿಡುವವರಾಗಿದ್ದರು (ವ. 2 ಮತ್ತು ಟಿಪ್ಪಣಿ).
3. ಯೇಸುವಿನ ಮೇಲಿನ ಅನೇಕ ದೂರುಗಳು (ವ. 3 ಮತ್ತು ವ. 1 ರ ಟಿಪ್ಪಣಿ):
   ಅ. ಯೇಸು ಒಬ್ಬ ಭಯೋತ್ಪಾದಕನಾಗಿದ್ದಾನೆ
   ಆ. ಯೇಸುವು ಪ್ಯಾಲೆಸ್ತೇನಿನ ನಿಜವಾದ ಅರಸನೆಂಬುದಾಗಿ ಹೇಳಿರುವನು
   ಇ. ಯೇಸುವು ರೋಮನ್ ಸರ್ಕಾರಕ್ಕೆ ತೆರಿಗೆ ಕಟ್ಟುವುದನ್ನು ವಿರೋಧಿಸಿದ್ದಾನೆ.
4. ಬರಬ್ಬನು ಒಬ್ಬ ಯೆಹೂದಿ ಮತ್ತು ಕೊಲೆಗಾರನಾಗಿದ್ದನು (ವ. 7 ಮತ್ತು ಟಿಪ್ಪಣಿ)
5. ಪಿಲಾತನು ಯೇಸುವನ್ನು ಬಿಟ್ಟುಕೊಡಬೇಕೆಂದಿದ್ದನು, ಯಾಕೆಂದರೆ ಯೆಹೂದಿ ನಾಯಕರು ಆತನ ಮೇಲೆ ಮಾಡಿದ ಆರೋಪಗಳನ್ನು ಆತನು ನಂಬಲಿಲ್ಲ. ಜನರೊಂದಿಗಿನ ಆತನ ಜನಪ್ರಿಯತೆಯ ನಿಮಿತ್ತ ಅವರು ಯೇಸುವಿನ ಮೇಲೆ ಹೊಟ್ಟೇಕಿಚ್ಚುಪಡುತ್ತಾರೆಂಬುದಾಗಿ ಪಿಲಾತನು ಯೋಚಿಸಿದನು (ವ. 9-10).
6. ಮಹಾಯಾಜಕರ ಪ್ರೇರೇಪಣೆಯಿಂದ ಜನರು ಯೇಸುವಿನ ಬದಲು ಬರಬ್ಬನನ್ನೇ ಬಿಟ್ಟುಕೊಡಬೇಕೆಂದು ಪಿಲಾತನನ್ನು ಒತ್ತಾಯಿಸಿದರು (ವ. 11).
7. ತಾನು ಯೆಹೂದಿ ಜನರ ಗುಂಪನ್ನು ಮೆಚ್ಚಿಸಲು ಬಯಸಿದ ನಿಮಿತ್ತ ಪಿಲಾತನು ಕೊನೆಯಲ್ಲಿ ಯೇಸುವಿನ ಬದಲು ಬರಬ್ಬನನ್ನೇ ಬಿಟ್ಟುಕೊಟ್ಟನು (ವ. 15).
8. ಸಿಪಾಯಿಗಳು ಯೇಸುವಿನೊಂದಿಗೆ ವರ್ತಿಸಿ ಮಾಡಿದ ರೀತಿ (ವ. 17-19):
   ಅ. ಅವರು ಆತನಿಗೆ ಕೆಂಪು ಒಲ್ಲಿಯನ್ನು ಹೊದಿಸಿದರು.
   ಆ. ಅವರು ಆತನ ತಲೆಯ ಮೇಲೆ ಮುಳ್ಳಿನ ಕಿರೀಟವನ್ನು ಇಟ್ಟರು.
   ಇ. ಅವರು "ಯೆಹೂದ್ಯರ ಅರಸನೇ ನಿನಗೆ ನಮಸ್ಕಾರ" ಎಂದು ವಂದನೆ ಮಾಡಿ ಆತನ ಮುಂದೆ ಅಡ್ಡಬಿದ್ದರು.
   ಈ. ಅವರು ಆತನ ತಲೆಯ ಮೇಲೆ ಹೊಡೆದು ಆತನ ಮೇಲೆ ಉಗುಳಿದರು.
9. ಸಿಪಾಯಿಗಳು ಯೇಸುವಿಗೆ ಪರಿಹಾಸ್ಯಮಾಡಿದ ನಂತರ ಅವರು ಆತನಿಗೆ ತನ್ನ ಬಟ್ಟೆಗಳನ್ನು ಹೊದಿಸಿ ಶಿಲುಬೆಗೆ ಹಾಕುವುದಕ್ಕೆ ತೆಗೆದುಕೊಂಡು ಹೋದರ (ವ. 20).
10. ಕುರೇನೆ ಪಟ್ಟಣದ ಸೀಮೋನನಿಗೆ ಯೇಸುವಿನ ಶಿಲುಬೆಯನ್ನು ಹೊರಲು ಬಿಟ್ಟೀಹಿಡಿದರು.
11. ಯೇಸುವನ್ನು ಕಪಾಲಸ್ಥಳವಾಗಿರುವ ಗೊಲ್ಗೊಥಾಕ್ಕೆ ಕೊಂಡೊಯ್ದರು (ವ. 22).
12. ಯೇಸುವಿಗೆ ರಕ್ತಬೋಳ ಮಿಶ್ರಿತ ದ್ರಾಕ್ಷಾರಸವನ್ನು ನೋವುನಿವಾರಕವಾಗಿ ಕೊಟ್ಟರು. ಆತನಿಗೆ ನೋವು ಮತ್ತು ಬೇನೆ ಕಡಿಮೆಯಾಗಲೆಂದು ಅದನ್ನು ಕೊಟ್ಟರು (ವ. 23 ಮತ್ತು ಟಿಪ್ಪಣಿ).

13. ಯೇಸುವಿಗೆ ಸೇರಿದ ಬಟ್ಟೆಗಳೆಲ್ಲವೂ ಕಡಿಮೆ ಮೌಲ್ಯವುಳ್ಳವುಗಳಾಗಿದ್ದುದ್ದರಿಂದ ಸಿಪಾಯಿಗಳು ಅವುಗಳನ್ನು ತಮ್ಮೊಳಗೆ ಹಂಚಿಕೊಂಡರು. ಅವುಗಳನ್ನು ಅವರು ಚೀಟು ಹಾಕಿ ಪಾಲುಮಾಡಿಕೊಂಡರು (ವ. 24 ಮತ್ತು ಟಿಪ್ಪಣಿ).

14. ಯೇಸುವನ್ನು ಮಾರ್ಕನು ತಿಳಿಸುವ ಪ್ರಕಾರ ಮುಂಜಾನೆ 9 ಗಂಟೆಗೆ ಶಿಲುಬೆಗೇರಿಸಲಾಯಿತು (ವ. 25 ಮತ್ತು ಟಿಪ್ಪಣಿ).

15. ಈತನು ಯೆಹೂದ್ಯರ ಅರಸನೆಂಬುದು ಯೇಸುವಿನ ಮೇಲೆ ಹೊರಿಸಿದ ಅಪರಾಧವಾಗಿತ್ತು (ವ. 26).

16. ಯೇಸುವು ಶಿಲುಬೆಯ ಮೇಲೆ ತೂಗಾಡುತ್ತಿರುವಾಗ ಮೂರು ಗುಂಪಿನ ಜನರಿಂದ ಹೇಗೆ ಪರಿಹಾಸ್ಯಕ್ಕೊಳಗಾದನೆಂಬುದನ್ನು ಮಾರ್ಕನು ವಿವರಿಸುತ್ತಾನೆ (ವ. 29-32):

ಅ. ಅಲ್ಲಿ ಹಾದುಹೋಗುವವರು ತಲೆ ಆಡಿಸಿ ದೇವಾಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ ಶಿಲುಬೆಯಿಂದ ಇಳಿದು ನಿನ್ನನ್ನು ನೀನು ರಕ್ಷಿಸಿಕೋ ಎಂದು ಹಂಗಿಸಿದರು.

ಆ. ಮಹಾಯಾಜಕರು ಮತ್ತು ಶಾಸ್ತ್ರಿಗಳು ಮತ್ತೊಬ್ಬರನ್ನು ರಕ್ಷಿಸಿದವನು ತನ್ನನ್ನು ಹೇಗೆ ರಕ್ಷಿಸಕೊಳ್ಳಲಾರನು, ಇಸ್ರಾಯೇಲರ ಅರಸನಾದ ಈ ಕ್ರಿಸ್ತನು ಶಿಲುಬೆಯಿಂದ ಇಳಿದು ಬಂದರೆ ಮಾತ್ರ ತಾವು ಆತನನ್ನು ನಂಬುವೆವು ಎಂದು ಹೇಳಿದರು.

ಇ. ಯೇಸುವಿನೊಂದಿಗೆ ಶಿಲುಬೆಗೆ ಹಾಕಲ್ಪಟ್ಟ ಇಬ್ಬರು ವ್ಯಕ್ತಿಗಳು ಸಹ ಯೇಸುವನ್ನು ನಿಂದಿಸಿದರು. ಆದರೆ ಲೂಕನು ಹೇಳುವ ಪ್ರಕಾರ ಅವರಲೊಬ್ಬನು ಅನಂತರ ಪಾಶ್ಚಾತ್ತಾಪ ಪಟ್ಟನೆಂಬುದನ್ನು ನಾವು ತಿಳಿದಿದ್ದೇವೆ (ಲೂಕ 23:39-41).

17. ಮಾರ್ಕನ ಪ್ರಕಾರ ಯೇಸುವು ಶಿಲುಬೆಯ ಮೇಲೆ ಆರು ಗಂಟೆಗಳ ಕಾಲ ಬಾಧೆಪಟ್ಟನು. ಆತನು ಮುಂಜಾನೆ 9 ಗಂಟೆಗೆ ಶಿಲುಬೆಗೆ ಹಾಕಲ್ಪಟ್ಟು ಮಧ್ಯಾಹ್ನ 3 ಗಂಟೆ ವೇಳೆಗೆ ಕೊನೆಯದಾಗಿ ಉಸಿರಾಡಿದನು (ವ. 33-37).

18. ತಾನು ಶಿಲುಬೆಯ ಮೇಲೆ ಸಾಯುತ್ತಿರುವಾಗ ಯೇಸು ಕೀರ್ತನೆ 22 ರ ಪ್ರಾರಂಭದ ವಚನವನ್ನು ("ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ") ಉಪಯೋಗಿಸುತ್ತಾನೆ. ಆದರೆ ಆತನು ಇಬ್ರಿಯ ಪಠ್ಯವನ್ನು ಉಪಯೋಗಿಸುವುದಿಲ್ಲ ಬದಲಾಗಿ ಆತನದನ್ನು ತನ್ನ ಮಾತೃಭಾಷೆಯಾದ ಅರಾಮಿಕ್ ಗೆ ಅನುವಾದಿಸುತ್ತಾನೆ (ವ. 34 ಮತ್ತು ಟಿಪ್ಪಣಿ ಹೋಲಿಸಿ).

19. ಹತ್ತಿರ ನಿಂತಿದ್ದವರು ಯೇಸು ಕೂಗುತ್ತಿರುವುದನ್ನು ನೋಡಿ ಅವರು ಆತನು ಸಹಾಯಕ್ಕಾಗಿ ಎಲೀಯನನ್ನು ಕರೆಯುತ್ತಿದ್ದಾನೆಂಬುದಾಗಿ ತಿಳಿದುಕೊಂಡರು. ಬಹುಶಃ ಅವರು ಆತನು ಹೇಳಿದ್ದನ್ನು ಸರಿಯಾಗಿ ಕೇಳಿಸಿಕೊಂಡಿರದೇ ಇರಬಹುದು ಅಥವಾ ಆತನು ಬಳಸಿದ ಭಾಷೆ ಅವರಿಗೆ ಸ್ಪಷ್ಟವಾಗಿ ಅರ್ಥವಾಗದೇ ಇದ್ದಿರಬಹುದು (ವ. 34-36).

20. ಯೇಸು ಸತ್ತಾಗ ಯೆರೂಸಲೇಮಿನ ದೇವಾಲಯದಲ್ಲಿ ಮಹಾಪರಿಶುದ್ಧ ಸ್ಥಳ ಮತ್ತು ಪರಿಶುದ್ಧ ಸ್ಥಳವನ್ನು ಪ್ರತ್ಯೇಕಿಸಿದ ಪರದೆಯು ಮೇಲಣಿಂದ ಕೆಳಗಣವರೆಗೂ ಹರಿದುಹೋಯಿತು (ವ. 37-38).

21. ಯೇಸು ಸತ್ತಾಗ ರೋಮನ್ ಶತಾಧಿಪತಿಯು (ಅಧಿಕಾರಿ) ಈತನು ನಿಜವಾಗಲೂ ದೇವಕುಮಾರನಾಗಿದ್ದನು ಅಂದನು, ಇದನ್ನು ಯೆಹೂದಿ ಆತ್ಮೀಕ ನಾಯಕರು ಸಹ ಗ್ರಹಿಸಿಕೊಂಡಿರಲಿಲ್ಲ (ವ. 39).

22. ಯೇಸುವನ್ನು ಶಿಲುಬೆಗೇರಿಸುವಾಗ ಅಲ್ಲಿ ನೆರೆದಿದ್ದ ಸ್ತ್ರೀಯರ ಬಗ್ಗೆ ಮಾರ್ಕನು ತನ್ನ ಓದುಗರಿಗೆ ನಾಲ್ಕು ಸಂಗತಿಗಳನ್ನು ತಿಳಿಸುತ್ತಾನೆ (ವ. 40-41):

ಅ. ಅಲ್ಲಿ ಅನೇಕ ಸ್ತ್ರೀಯರಿದ್ದರು, ಅವರೆಲ್ಲರೂ ಯೇಸು ಶಿಲುಬೆಯ ಮೇಲೆ ಪ್ರಾಣಬಿಡುವುದನ್ನು ದೂರದಿಂದಲೇ ನೋಡುತ್ತಿದ್ದರು.

ಆ. ಮಾರ್ಕನು ಅವರಲ್ಲಿ ಮೂವರ ಹೆಸರನ್ನು ತಿಳಿಸುತ್ತಾನೆ (ಮಗ್ದಲದ ಮರಿಯಳು, ಇನ್ನೊಬ್ಬ ಮರಿಯಳು ಮತ್ತು ಸಲೋಮೆ).

ಇ. ಈ ಸ್ತ್ರೀಯರು ಗಲಿಲಾಯದಿಂದ ಯೆರೂಸಲೇಮಿನವರೆಗೂ ಯೇಸುವನ್ನು ಹಿಂಬಾಲಿಸುತ್ತಾ ಬಂದಿದ್ದರು. ಇವರೆಲ್ಲರೂ ಯೇಸುವಿನ ಖಾಯಂ ಹಿಂಬಾಲಕರಾಗಿದ್ದರು.

ಈ. ಅಲ್ಲದೆ ಇವರೆಲ್ಲರೂ ಗಲಿಲಾಯದಲ್ಲಿನ ಸುವಾರ್ತಾ ಪ್ರಯಾಣದ ವೇಳೆ ಯೇಸುವಿಗೆ ಸಹಕರಿಸುವವರಾಗಿದ್ದರು.

23. ವಚನ 41 ರಿಂದ ಯೇಸುವಿನ ಹೆಚ್ಚಿನ ಹಿಂಬಾಲಕರೆಲ್ಲಾ ಸ್ತ್ರೀಯರಾಗಿದ್ದರೆಂಬುದನ್ನು ಕಂಡುಕೊಳ್ಳುತ್ತೇವೆ (ಸುವಾರ್ತೆಯಲ್ಲಿ ಅವರ ಬಗ್ಗೆ ಹೆಚ್ಚು ಬರೆಯದಿದ್ದರೂ).

24. ಅರಿಮಥಾಯದ ಯೋಸೇಫನ ಬಗ್ಗೆ ನಾವು ಅನೇಕ ಸಂಗತಿಗಳನ್ನು ತಿಳಿದುಕೊಳ್ಳುತ್ತೇವೆ (ವ. 43-46 ಮತ್ತು ವ. 43 ರ ಟಿಪ್ಪಣಿ):

ಅ. ಆತನು ಧನಿಕನಾಗಿದ್ದನು (ಶ್ರೀಮಂತನಾಗಿದ್ದನು)

ಆ. ಈತನು ಯೆಹೂದಿ ಹಿರೀಸಭೆಯ ಸದಸ್ಯನಾಗಿದ್ದನು. ಬಹುಶಃ ಈತನು ಒಬ್ಬ ಫರಿಸಾಯನಾಗಿದ್ದನು.

ಇ. ಈತನು ಅರಿಮಥಾಯದವನಾಗಿದ್ದನು (ಯೆರೂಸಲೇಮಿನಿಂದ ವಾಯುವ್ಯಕ್ಕೆ 30 ಕಿ.ಮೀ. ದೂರದಲ್ಲಿರುವ ಎಫ್ರಾಯಿಮಿನ ಬೆಟ್ಟದ ಒಂದು ಹಳ್ಳಿ).

ಈ. ಈತನು ಕೇವಲ ಭಯಭಕ್ತಿಯುಳ್ಳವನಾಗಿರದೆ, ಯೇಸುವಿನ ಮೇಲೆ ನಂಬಿಕೆಯಿಟ್ಟಿದ್ದು, ಆತನ ಶಿಷ್ಯನಾಗಿದ್ದನು.

ಉ. ಆತನೊಬ್ಬ ಧೈರ್ಯವಂತನಾಗಿದ್ದಿರಬಹುದು, ಯಾಕೆಂದರೆ ತಾನೊಬ್ಬ ಸಂಬಂಧಿಕನಾಗಿರದಿದ್ದರೂ ಯೇಸುವಿನ ದೇಹಕ್ಕಾಗಿ ಪಿಲಾತನ ಬಳಿಗೆ ಹೋದನು.

ಊ. ಈತನೊಬ್ಬ ವಿವೇಚನಾಶಾಲಿ ಮನುಷ್ಯನಾಗಿದ್ದು ಸಾಧ್ಯವಾದಷ್ಟು ಬೇಗ ಯೇಸುವಿಗೊಂದು ಉತ್ತಮವಾದ ಸಮಾಧಿಯನ್ನು ಮಾಡಬೇಕೆಂದು ಬಯಸಿದನು (ಅವಮಾನಕರ ರೀತಿಯಲ್ಲಿ ಯೇಸುವು ಶಿಲುಬೆ ಮೇಲೆ ತೂಗಾಡುತ್ತಿರುವುದನ್ನು ಬಿಡಲಿಲ್ಲ) ಮತ್ತು ಆತನು ಯೇಸುವನ್ನು ಒಂದು ಅತ್ಯುತ್ತಮವಾದ ಹೊಸ ಸಮಾಧಿಯಲ್ಲಿಟ್ಟನು.

25. ಯೇಸುವನ್ನು ಶಿಲುಬೆಗೇರಿಸಿದ ಸ್ಥಳದ ಸಮೀಪವಿರುವ ಒಂದು ಕಲ್ಲಿನ ಸಮಾಧಿಯಲ್ಲಿ ಹೂಣಿಡಲಾಯಿತು (ವ. 46).

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಯೇಸು ಸುಮ್ಮನಾಗಿರುವುದನ್ನು ನೋಡಿ ಪಿಲಾತನು ಆಶ್ಚರ್ಯಗೊಂಡಿರಬೇಕು (ವ. 5). ರೋಮನನ್ನಿನ ನ್ಯಾಯಾಲಯದಲ್ಲಿ ಆರೋಪಕ್ಕೊಳಗಾದ ವ್ಯಕ್ತಿಯು ಸುಮ್ಮನಾಗಿದ್ದರೆ ಆತನು ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆಂದು ಅರ್ಥವಾಗಿತ್ತು.
2. ಪಸ್ಕಹಬ್ಬದ ವೇಳೆ ಕೈದಿಯೊಬ್ಬನನ್ನು ಬಿಡುಗಡೆ ಮಾಡುವುದು ಮತ್ತು ಆ ಕೈದಿಯಯನ್ನು ಜನರ ಗುಂಪೇ ಆರಿಸಿಕೊಳ್ಳಲು ಬಿಡುವುದು ಪಿಲಾತನ ಪದ್ಧತಿಯಾಗಿತ್ತು. ಯೇಸುವು ಪ್ಯಾಲೆಸ್ತೀನಿನಲ್ಲಿನ ರೋಮನ್ ಅಧಿಕಾರಕ್ಕೆ ವಿರೋಧವಾಗಿದ್ದಾನೆಂಬುದನ್ನು ಪಿಲಾತನು ನಂಬಲಿಲ್ಲ. ಹಾಗಾಗಿ ಆತನು ಖೈದಿಗಳಲ್ಲೇ ಅಪಾಯಕಾರಿಯಾಗಿರುವವರನ್ನು ಗುರುತಿಸಿ ಅಂಥವನಾದ ಬರಬ್ಬ ಮತ್ತು ಯೇಸುವಿನ ನಡುವೆ ಆಯ್ಕೆಯ ಸ್ವಾತಂತ್ರ್ಯವನ್ನು ಜನರಿಗೆ ಬಿಟ್ಟನು, ಆದರೆ ಆತನನ್ನು ಚಿಂತೆಗೀಡು ಮಾಡಿದ್ದೇನೆಂದರೆ ಜನರು ಬರಬ್ಬನನ್ನು ಆರಿಸಿಕೊಳ್ಳಲು ಬಯಸಿದಿರುವುದು. ಪಿಲಾತನು ಯೆಹೂದಿ ಜನರ ಗುಂಪನ್ನು ಮೆಚ್ಚಿಸುವುದಕ್ಕಾಗಿ ಅವರ ಮಾತಿಗೆ ಒಪ್ಪಿದನು. ಹೀಗೆ ಆತನ ಉಪಾಯ/ಯೋಜನೆ ವಿಫಲಾಯಿತು. ಪಿಲಾತನ ವಿಫಲತೆಯಲ್ಲಿನ ವ್ಯಂಗ್ಯವೆಂದರೆ ರೋಮನ್ ಸರ್ಕಾರಕ್ಕೆ ನಿಜವಾದ ದಂಗೆಕೋರನಾಗಿದ್ದ ಬರಬ್ಬನನ್ನು ಬಿಟ್ಟು ಆ ಸಮಯದಲ್ಲಿ ರೋಮನ್ ಸರ್ಕಾರಕ್ಕೆ ಯಾವ ಹಾನಿಕಾರವೂ ಆಗಿರದೇ ಇರುವ ಯೇಸುವನ್ನು ಆತನು ದಂಡನೆಗೆ ವಹಿಸಿಕೊಟ್ಟನು (ವ. 6-15).
3. –
4. ಕುರೇನಿ ಪಟ್ಟಣದ ಸೀಮೋನನನ್ನು ಶಿಲುಬೆಯನ್ನು ಹೊರಲು ಬಿಟ್ಟೀಹಿಡಿದ ಸಂಗತಿಯು ಆ ಸಮಯದಲ್ಲಿ ಯೇಸುವಿನ ಶಾರೀರಿಕ ಸ್ಥಿತಿಯು ತೀರಾ ಬಲಹೀನವಾಗಿತ್ತೆಂಬುದನ್ನು ತಿಳಿಸುತ್ತದೆ. ಚಾಟಿಯ ಹೊಡೆತವು ಬಹುತೇಕವಾಗಿ ಆತನನ್ನು ಕೊಂದಿತ್ತು ಮತ್ತು ತನ್ನನ್ನು ವಧಿಸುವ ಸ್ಥಾನಕ್ಕೆ ಸುಮಾರು 15 ಕೆ.ಜಿ ಭಾರವಿರುವ ಮರದ ಶಿಲುಬೆಯನ್ನು ಹೊರಲು ಆತನಿಂದಾಗುತ್ತಿರಲಿಲ್ಲ (ವ. 21).

5. ಯೇಸು ತನಗೆ ಕೊಟ್ಟ ರಕ್ತಬೋಳಮಿಶ್ರಿತ ದ್ರಾಕ್ಷಾರಸವನ್ನು ಕುಡಿಯಲು ನಿರಾಕರಿಸಿದನು. ಅದು ಆತನ ಬಾಧೆಯನ್ನು ಕಡಿಮೆಮಾಡಿ ಆತನನ್ನು ತನ್ನ ಪರಿಸ್ಥಿತಿಯ ಬಗ್ಗೆ ಅರಿವಿಲ್ಲದಂತೆ ಮಾಡುವುದಾಗಿತ್ತು. ಆದರೆ ಪಾಪಿಗಳಾದ ನಮಗಾಗಿನ ತನ್ನ ಬಾಧೆಯು ಕಡಿಮೆಯಾಗಲು ಆತನು ಬಯಸಲಿಲ್ಲ ಮತ್ತು ಶಿಲುಬೆ ಮೇಲಿನ ತನ್ನ ಸಾಯುತ್ತಿರುವ ಶರೀರದಲ್ಲಿ ಮನುಕುಲದ ಪಾಪವನ್ನು ಹೊರುತ್ತಿರುವಾಗ ಶಾಂತನಾಗಿರುವುದನ್ನು ಇಷ್ಟಪಡಲಿಲ್ಲ (ವ. 23).

6. "ದುರಂತಮಯ ವ್ಯಂಗ" ವೆಂದರೆ ಕಥೆಯಲ್ಲಿ ಅಥವಾ ನಾಟಕದಲ್ಲಿ ಭಾಗಿಯಾಗುವ ವ್ಯಕ್ತಿಗಿಂತ ಹೆಚ್ಚಿಗೆ ಏನಾಗುತ್ತಿದೆ ಎಂಬುದರ ಬಗ್ಗೆ ಓದುಗನು ತಿಳಿದುಕೊಂಡಿರುವುದಾಗಿದೆ. ಯೇಸು ಶಿಲುಬೆಯ ಮೇಲೆ ತೂಗಾಡುತ್ತಿರುವಾಗ ಆ ಸ್ಥಿತಿಯ ದುರಂತಮಯ ವ್ಯಂಗ್ಯವನ್ನು ನಾವು ಕಾಣುತ್ತೇವೆ (ವ. 25-32):

ಅ. ಆ ಶಿಲುಬೆಯ ಮೇಲಿನ ಬರಹವು ಆತನು ಯೆಹೂದ್ಯರ ಅರಸನೆಂದನೆಂಬುದಾಗಿ ದೂಷಿಸಿತು. ಅದನ್ನು ಬರೆದವರು ಅದು ಸತ್ಯವೆಂಬುದಾಗಿ ನಂಬಲಿಲ್ಲ. ಆದರೆ ಅದು ನಿಜವಾಗಿತ್ತು. ಇದನ್ನು "ದುರಂತಮಯ ವ್ಯಂಗ್ಯ" ಎನ್ನಬಹುದು.

ಆ. ಅಲ್ಲಿ ಹಾದುಹೋಗುವವರು, ಪರಿಹಾಸ್ಯಮಾಡುವವರು ಆತನು ಹೇಳದೆ ಇದ್ದದ್ದನ್ನು ಹೇಳಿದರು (ಆತನು ದೇವಾಲಯವನ್ನು ಕೆಡವಿ ಮೂರನೇ ದಿನದಲ್ಲಿ ಕಟ್ಟುವನೆಂದು) ಮತ್ತು ಶಿಲುಬೆಯ ಮೇಲಿಂದ ಇಳಿದು ಬಂದು ತನ್ನ ಶಕ್ತಿಯನ್ನು ತೋರಿಸಬೇಕೆಂದು ಆತನಿಗೆ ಹೇಳಿದರು. ಯೇಸುವು ಶಿಲುಬೆಯ ಮೇಲಿಂದ ಇಳಿದು ಬಂದು ತನ್ನ ಶಕ್ತಿಯನ್ನು ತೋರಿಸಬಹುದಾಗಿತ್ತು, ಆದರೆ ಆತನು ಹೇಳಿದ ಮಾತು (ಸತ್ತು ಮೂರನೇ ದಿನದಲ್ಲಿ ಏಳುವುದು) ನೆರವೇರುತ್ತಿರಲಿಲ್ಲ. ಹಾದುಹೋಗುವವರಿಗೆ ಆ ಪರಿಸ್ಥಿತಿಯ ಅರಿವಿರಲಿಲ್ಲ. ಇದನ್ನು ಸಹ ದುರಂತಮಯ ವ್ಯಂಗ್ಯವೆನ್ನಬಹುದು.

ಇ. ಮಹಾಯಾಜಕರು ಮತ್ತು ಶಾಸ್ತ್ರಿಗಳು ತಮ್ಮೊಳಗೇ ಯೇಸುವಿನ ಬಗ್ಗೆ ಈತನು ಮೆಸ್ಸೀಯನು ಇಸ್ರಾಯೇಲರ ಅರಸನೆಂಬುದಾಗಿ ಹೇಳಿಕೊಂಡಿದ್ದರೂ ತನ್ನನ್ನೂ ಮತ್ತು ಇತರರನ್ನೂ ರಕ್ಷಿಸಿಕೊಳ್ಳಲಾಗುತ್ತಿಲ್ಲವೆಂದು ಹಾಸ್ಯಮಾಡಿದರು. ದುರಂತಮಯ ವ್ಯಂಗ್ಯವೆಂದರೆ ಶಿಲುಬೆಯ ಮೇಲೆ ತೂಗಾಡುತ್ತಿರುವವನು ಮೆಸ್ಸೀಯನೂ, ಇಸ್ರಾಯೇಲ್ಯರ ಅರಸನೂ ಮತ್ತು ಲೋಕದ ರಕ್ಷಕನೂ ಆಗಿದ್ದನು. ಮತ್ತು ಇಳಿದು ಬರುವುದರ ಬದಲಾಗಿ ಶಿಲುಬೆ ಮೇಲೆ ಮರಣಹೊಂದುವುದರ ಮೂಲಕ ಆತನು ಅದನ್ನು ಸಾಬೀತುಪಡಿಸುವವನಾಗಿದ್ದನು.

ಈ. ಯೇಸುವಿನ ಜೊತೆಯಲ್ಲಿ ಮತ್ತಿಬ್ಬರನ್ನು ಶಿಲುಬೆಗೇರಿಸಲಾಯಿತು. ಅಲ್ಲಿ ಹಾದು ಹೋಗುವವರೆಲ್ಲರೂ ಅವರೆಲ್ಲರನ್ನು ಒಂದೇ ರೀತಿಯಲ್ಲಿ ನೋಡಿರಬಹುದು, ಆದರೆ ಆ ಇಬ್ಬರು ದಂಗೆಕೋರರು, ದರೋಡೆಕೋರರು ಆಗಿದ್ದು ನ್ಯಾಯಯುತವಾಗಿ ತಮ್ಮ ಪಾಪಗಳಿಗಾಗಿ ಶಿಕ್ಷಿಸಲ್ಪಟ್ಟರೆ ಯೇಸುವು ಮಾತ್ರ ನಿರ್ದೋಷಿಯಾಗಿದ್ದು ಆತನ ಪಕ್ಕದಲ್ಲಿ ತೂಗಾಡುತ್ತಿರುವ ಆ ಇಬ್ಬರು ಪುರಷರನ್ನೊಳಗೊಂಡು ಇತರರ ಪಾಪಗಳಿಗಾಗಿ ಸಾಯುತ್ತಿದ್ದನು ಮತ್ತು ತಮ್ಮ ಆತ್ಮಗಳನ್ನು ರಕ್ಷಿಸಿ ಅವರಿಗೆ ನಿತ್ಯಜೀವವನ್ನು ಕೊಡಬಹುದಾದ ಏಕೈಕ ವ್ಯಕ್ತಿಯನ್ನು ಅವರು ಪರಿಹಾಸ್ಯ ಮಾಡಿದರು. ಇದು ಸಹ ಒಂದು ದುರಂತಮಯ ವ್ಯಂಗ್ಯವಾಗಿದೆ.

7. ಯೇಸುವು ಶಿಲುಬೆಯ ಮೇಲೆ ಆಡಿದ ಏಳು ಮಾತುಗಳು (ನೋಡಿ ಮತ್ತಾ. 27:45-50, ಮಾರ್ಕ 15:33-37, ಲೂಕ 23:42-46 ಮತ್ತು ಯೋಹಾನ 19:18-30):

ಅ. ಮಧ್ಯಾಹ್ನದ ವೇಳೆ ಕತ್ತಲಾಗುವುದಕ್ಕಿಂತ ಮುಂಚೆ ಆಡಿದ 3 ಮಾತುಗಳು:

1) ಯೇಸು ತನ್ನನ್ನು ಶಿಲುಬೆಗೇರಿಸಿದವರಿಗೆ ಹೇಳಿದನು: "ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು ಅರಿಯರು" (ಲೂಕ 23:34).
2) ಯೇಸು ಕಳ್ಳನಿಗೆ ಹೇಳುತ್ತಾನೆ: "ಈ ಹೊತ್ತು ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ" (ಲೂಕ 23:43)
3) ಯೇಸು ತನ್ನ ತಾಯಿಯಾದ ಮರಿಯಳಿಗೆ ಮತ್ತು ತನ್ನ ಶಿಷ್ಯನಾದ ಯೋಹಾನನಿಗೆ ಹೇಳುತ್ತಾನೆ: "ಅಮ್ಮಾ, ಇಗೋ ನಿನ್ನ ಮಗನು" ಮತ್ತು "ಇಗೋ ನಿನ್ನ ತಾಯಿ" (ಯೋಹಾನ 19:26-27).

ಆ. ಕತ್ತಲೆಯ ವೇಳೆಯಲ್ಲಿ ಆಡಿದ ಒಂದು ಮಾತು:


4) ಯೇಸು ಕೀರ್ತನೆಯಿಂದ ಒಂದು ಮಾತನ್ನು ಬಳಸಿ ಪರಲೋಕದಲ್ಲಿರುವ ತನ್ನ ತಂದೆಗೆ ಕೂಗಿ ಹೇಳುತ್ತಾನೆ: “ಎಲೋಹಿ, ಎಲೋಹಿ, ಲಮಾ ಸಬಕ್ತಾನಿ” (ಕೀರ್ತನೆ 22:1, ಮಾರ್ಕ 15:34 ಮತ್ತಾ. 27:46).

ಇ. ಕತ್ತಲಾದ ನಂತರ ಆಡಿದ ಮೂರು ಮಾತುಗಳು:

5) ಹಳೇ ಒಡಂಬಡಿಕೆಯ ಪ್ರವಾದನೆಯ ನೆರವೇರಿಕೆಯಾಗಿ ಯೇಸು ತನ್ನ ಬಾಯಾರಿಕೆ ಬಗ್ಗೆ ಮಾತನಾಡುತ್ತಾನೆ: “ನನಗೆ ನೀರಡಿಕೆ ಆಗಿದೆ” (ಯೋಹಾನ 19:28, ಹೋಲಿಸಿ ಕೀರ್ತನೆ 69:21 ಮತ್ತು ಕೀರ್ತನೆ 22:15)

6) ಯೇಸುವು ಪರಲೋಕದಿಂದ ತನಗೆ ಕೊಡಲ್ಪಟ್ಟ ತನ್ನ ಕಾರ್ಯದ ಮುಕ್ತಾಯದ ಕುರಿತು ಹೇಳುವುದು: “ತೀರಿತು” (ಯೋಹಾನ 19:30).

7) ಯೇಸುವು ಪರಲೋಕದ ತನ್ನ ತಂದೆಗೆ ಕೂಗಿಕೊಳ್ಳುವುದು: “ತಂದೆಯೆ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ” (ಲೂಕ 23:46).



**ಉತ್ತರಗಳು: ಮಾರ್ಕ ಅಧ್ಯಾಯ 16**

**ಪ್ರಶ್ನೆಗಳಿಗೆ ಉತ್ತರಗಳು**

1. ಸ್ತ್ರೀಯರು ವಾರದ ಮೊದಲನೆಯ ದಿನದಲ್ಲಿ (ಭಾನುವಾರ) ಯೇಸುವಿನ ಸಮಾಧಿಯ ಬಳಿಗೆ ಹೋದರು, ಅಲ್ಲಿಗೆ ಅವರು ಯೇಸುವಿನ ದೇಹಕ್ಕೆ ಸುಗಂಧದ್ರವ್ಯಗಳನ್ನು ಹಚ್ಚಿ ಆತನಿಗೆ ಗೌರವ ಸಲ್ಲಿಸುವುದಕ್ಕಾಗಿ ಹೋದರು (ವ. 1-2 ಟಿಪ್ಪಣಿಯೊಂದಿಗೆ)
2. ಸ್ತ್ರೀಯರು ಯೇಸುವಿನ ಸಮಾಧಿಯೆಡೆಗೆ ನಡೆದುಕೊಂಡು ಹೋಗುತ್ತಿರುವಾಗ ಸಮಾಧಿಯೊಳಗೆ ಹೋಗುವುದು ಹೇಗೆ ಎಂದು ಚಿಂತಿಸುತ್ತಿದ್ದರು. ಯಾಕೆಂದರೆ ಅದರ ಬಾಗಿಲಿಗೆ ದೊಡ್ಡದಾದ ಕಲ್ಲನ್ನು ಮುಚ್ಚಿದ್ದರಿಂದ ಅದನ್ನು ಉರುಳಿಸಬೇಕಾಗಿತ್ತು (ವ. 3).
3. ಸಮಾಧಿಯ ಬಳಿಗೆ ಬಂದಾಗ ಸ್ತ್ರೀಯರು ಕಲ್ಲು ಆಗಲೇ ಉರುಳಿಹೋಗಿರುವುದನ್ನು ಕಂಡರು. ಅಲ್ಲಿ ಅವರು ಸಮಾಧಿಯೊಳಗೆ ಬಿಳಿ ಅಂಗಿಯನ್ನು ತೊಟ್ಟು ಕೂತುಕೊಂಡಿದ್ದ ಯೌವನಸ್ಥನೊಬ್ಬನನ್ನು ಕಂಡರು. ಅದನ್ನು ನೋಡಿ ಅವರು ಬೆಚ್ಚಿಬೆರಗಾದರು (ವ. 4-5).
4. ಆ ಯೌವನಸ್ಥನು ಸ್ತ್ರೀಯರಿಗೆ ಬೆರಗಾಗಬೇಡಿರಿ ಎಂದು ಹೇಳಿದನು. ಅನಂತರ ಅವರಿಗಾಗಿ ಎರಡು ಭಾಗವುಳ್ಳ ಸಂದೇಶವನ್ನು ನೀಡಿದನು (ವ. 4-5):

   ಅ. ಯೇಸುವು ಸಮಾಧಿಯಲ್ಲಿ ಇಲ್ಲ, ಆತನು ಎದ್ದಿದ್ದಾನೆ.

   ಆ. ನೀವು ಹೋಗಿ ಶಿಷ್ಯರಿಗೆ ಆತನು ಎದ್ದಿದ್ದಾನೆ ಮತ್ತು ಆತನು ಹೇಳಿದಂತೆಯೇ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುತ್ತಾನೆ ಮತ್ತು ಅಲ್ಲಿ ಆತನನ್ನು ಸಂಧಿಸುವಿರಿ ಎಂದು ಹೇಳಬೇಕೆಂದು ಸ್ತ್ರೀಯರಿಗೆ ಹೇಳಿದನು.
5. ಸಮಾಧಿಯ ಬಳಿಯಿಂದ ಓಡಿಹೋಗುವಾಗ ಸ್ತ್ರೀಯರು ಭ್ರಮೆಹಿಡಿದವರಾಗಿ ನಡುಗುತ್ತಿದ್ದರು (ವ. 8).
6. ಮಗ್ದಲದ ಮರಿಯಳ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 9-10):

   ಅ. ಪುನರುತ್ಥಾನವಾದ ನಂತರ ಯೇಸುವನ್ನು ನೋಡಿದವರಲ್ಲಿ ಇವಳೇ ಮೊದಲಿಗಳು.

   ಆ. ಈಕೆಯ ಹಿನ್ನಲೆ: ಯೇಸುವು ಈಕೆಯನ್ನು ಏಳು ದೆವ್ವಗಳಿಂದ ಬಿಡಿಸಿದ್ದನು.

   ಇ. ಈಕೆಯೇ ಯೇಸುವಿನ ಪುನರುತ್ಥಾನದ ಬಗ್ಗೆ ಶಿಷ್ಯರಿಗೆ ತಿಳಿಸಿದವಳು.
7. ಯೇಸುವು ಬದುಕಿದ್ದಾನೆಂಬ ಸುದ್ದಿಯನ್ನು ಕೇಳಿದಾಗ ಶಿಷ್ಯರು ನಂಬಲಿಲ್ಲ (ವ. 11).
8. ತಾನು ಹನ್ನೊಂದು ಮಂದಿ ಶಿಷ್ಯರಿಗೆ ಕಾಣಿಸಿಕೊಂಡಾಗ ಯೇಸು ಅವರು ಆತನು ಎದ್ದು ಬಂದ ಸಂಗತಿಯನ್ನು ನಂಬದೇ ಇದ್ದುದ್ದಕ್ಕಾಗಿ ಅವರ ಅಪನಂಬಿಕೆ ಮತ್ತು ಮನಸ್ಸಿನ ಕಾಠಿಣ್ಯಕ್ಕಾಗಿ ಗದರಿಸಿದನು (ವ. 14).
9. ಯೇಸು ತನ್ನ ಶಿಷ್ಯರಿಗೆ ಕೊಟ್ಟ ಆಜ್ಞೆ (ವ. 15): ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ.
10. ಸುವಾರ್ತೆಯನ್ನು ನಂಬಿ ದೀಕ್ಷಾಸ್ನಾನ ತೆಗೆದುಕೊಳ್ಳುವವರು ರಕ್ಷಣೆ ಹೊಂದುವರು ಮತ್ತು ಸುವಾರ್ತೆಯನ್ನು ನಂಬದೆ ಇರುವವರು ದಂಡನೆಗೆ ಗುರಿಯಾಗುವರು ಎಂದು ಯೇಸು ಹೇಳಿದನು (ವ. 15-16).
11. ವಿಶ್ವಾಸಿಗಳ ಜೀವನ ಮತ್ತು ಸೇವೆಯನ್ನು ಯೇಸು ಈ ರೀತಿಯಾಗಿ ವರ್ಣಿಸುತ್ತಾನೆ (ವ. 17-18):

    ಅ. ಅವರು ಯೇಸುವಿನ ಹೆಸರಿನಲ್ಲಿ ದೆವ್ವಗಳನ್ನು ಬಿಡಿಸುವರು

    ಆ. ಅವರು ಹೊಸ ಭಾಷೆಗಳಿಂದ ಮಾತನಾಡುವರು

    ಇ. ವಿಷಪದಾರ್ಥವೇನಾದರೂ ಕಡಿದರೂ ಅವರಿಗೇನೂ ಆಗದು. ವಿಷಕರ ಹಾವುಗಳಿಂದ ಸಹ ಹಾನಿಯಾಗದು. ಅಮೇರಿಕ ಮತ್ತು ಆಫ್ರಿಕಾದಲ್ಲಿನ ಕೆಲ ಸೇವಕರು ಮಾಡುವಂತೆ ಪ್ರಾರ್ಥನೆಯ ವೇಳೆ ವಿಷಕರವಾದ ಹಾವುಗಳನ್ನು ನಿಭಾಳಿಸುವುದರ ಮೂಲಕ ದೇವರನ್ನು ಪರೀಕ್ಷಿಸಬೇಕೆಂದು ಯೇಸು ಶಿಷ್ಯರಿಗೆ ಅಪ್ಪಣೆ ಮಾಡಲಿಲ್ಲ. ಯೇಸುವಿನ ಮಾತಿನ ಅರ್ಥವು ಜಗತ್ತಿಗೆಲ್ಲಾ ಹೋಗಿ

ಯೇಸುವಿನ ಕುರಿತ ಸುವಾರ್ತೆಯನ್ನು ಸಾರುವಾಗ ಆತನು ತನ್ನ ಸೇವಕರನ್ನು ಎಲ್ಲಾ ರೀತಿಯ ಅಪಾಯಗಳಿಂದ ಕಾಪಾಡುವನೆಂಬುದಾಗಿದೆ.

ಈ. ಅವರು ರೋಗಿಗಳನ್ನು ಗುಣಪಡಿಸುವರು.

12. ಯೇಸುವಿನ ಸ್ವರ್ಗಾರೋಹಣದ ನಂತರ ಶಿಷ್ಯರು ಎಲ್ಲಾ ಕಡೆಗೆ ಸುವಾರ್ತೆಯನ್ನು ಸಾರಲು ಹೋಗುತ್ತಾರೆ (ವ. 19-20).
13. ಯೇಸು ಸುವಾರ್ತೆ ಸಾರುವುದನ್ನು ಸೂಚಕಕಾರ್ಯಗಳಿಂದ ದೃಢ(ಬಲ)ಪಡಿಸಿದನು (ವ. 20).

**ಆಲೋಚಿಸಿರಿ ಮತ್ತು ಚರ್ಚಿಸಿರಿಯ ಮೇಲಿನ ಟಿಪ್ಪಣಿಗಳ ಉತ್ತರಗಳು**

1. ಯೇಸುವಿನ ಸಮಾಧಿಯೊಳಗಿದ್ದ ಒಬ್ಬ ಯೌವನಸ್ಥನು ಒಬ್ಬ ದೇವದೂತನಾಗಿದ್ದನೆಂಬುದಾಗಿ ನಾವು ತೀರ್ಮಾನಿಸಬಹುದು (ವ. 5-8):

   ಅ. ಆತನು ಬಿಳಿಯ ಅಂಗಿಯನ್ನು ಹಾಕಿದ್ದನು: ಇಂತವರನ್ನು ಸತ್ಯವೇದವು ಸಾಮಾನ್ಯವಾಗಿ ದೂತರೆಂಬುದಾಗಿ ಕರೆಯುತ್ತದೆ.

   ಆ. ಆತನನ್ನು ಕಂಡಾಗ ಸ್ತ್ರೀಯರು ಬೆಚ್ಚಿಬೆರಗಾದರು: ಸತ್ಯವೇದದಲ್ಲಿನ ದೂತರ ನೋಟವೆಲ್ಲವೂ ಸಾಮಾನ್ಯವಾಗಿ ಬೆರಗುಗೊಳಿಸುತ್ತದೆ.

   ಇ. ಆತನು ಆ ಸ್ತ್ರೀಯರಿಗೆ ಒಂದು ದೈವಿಕ ಸಂದೇಶವನ್ನು ತಂದಿದ್ದನು: ಸತ್ಯವೇದದಲ್ಲಿ ದೂತರುಗಳು ಹೆಚ್ಚಾಗಿ ದೇವರಿಂದ ಸಂದೇಶವನ್ನು ಹೊಂದಿರುತ್ತಾರೆ.

2. ಹೆಚ್ಚಿನ ಸತ್ಯವೇದ ಪಂಡಿತರೆಲ್ಲರೂ ಈ ಅಧ್ಯಾಯದ ಕಡೇ ಭಾಗವು ಮಾರ್ಕನ ಸುವಾರ್ತೆಯ ಮೂಲ ಪಠ್ಯವಾಗಿರಲಿಲ್ಲವೆಂಬುದಾಗಿ ಯೋಚಿಸುತ್ತಾರೆ. ಅದಕ್ಕೆ ಅವರು ಕೊಡುವ ಕೆಲ ಕಾರಣಗಳು ಇಂತಿವೆ:

   ಅ. ಈ ವಚನಗಳು ಹಳೆಯ ಮತ್ತು ವಿಶ್ವಾಸಾರ್ಹ ಗ್ರೀಕ್ ಹಸ್ತಪ್ರತಿಗಳಲ್ಲಿ ಕಂಡುಬರುವುದಿಲ್ಲ. ಅಲ್ಲದೆ ಮಾರ್ಕನ ಸುವಾರ್ತೆಯ ಪ್ರಾರಂಭಿಕ ಭಾಷಾಂತರಗಳಲ್ಲಿ ಸಹ ಅವು ಸೇರ್ಪಡೆಗೊಂಡಿಲ್ಲ.

   ಆ. ಈ ವಚನಗಳ ಬರವಣಿಗೆಯ ಶೈಲಿಯು ಉಳಿದ ಸುವಾರ್ತೆಗಿಂತ ಸ್ವಲ್ಪ ವಿಭಿನ್ನವಾಗಿದೆ.

   ಇ. ಪಠ್ಯವು ಅದರ ಹಿಂದೆ ಬರುವಂಥವುಗಳೊಂದಿಗೆ ಸರಿಹೊಂದುವಂತೆ ಕಾಣುವುದಿಲ್ಲ:

   - ಕಥೆಯಲ್ಲಿ ಹಠಾತ್ ಅಂತರವಿದೆ.
   - 9-10 ರ ವಚನಗಳು ಕೇವಲ ಮಗ್ದಲದ ಮರಿಯಳ ಕುರಿತಾಗಿದ್ದು, ಹಿಂದಿನ ವಚನಗಳಲ್ಲಿ ಸಮಾಧಿ ಬಳಿ ಮೂವರು ಸ್ತ್ರೀಯರ ಕುರಿತು ಕಾಣುತ್ತೇವೆ. ಬದಲಾಗಿ ಈ ವಾಕ್ಯಭಾಗವು ಮಗ್ದಲದ ಮರಿಯಳು ಯೇಸುವನ್ನು ಸಂಧಿಸುವ ಕುರಿತ ಯೋಹಾನನ ಸುವಾರ್ತೆಯಲ್ಲಿನ ವಿವರದ ಒಂದು ಸಾರಾಂಶವಾಗಿರುವಂತೆ ತೋರುತ್ತದೆ (ನೋಡಿ ಯೋಹಾನ 20:10-18).
   - ವಚನ 11-12 ಎಮ್ಮಾಹುವಿನ ರಸ್ತೆಯಲ್ಲಿ ಇಬ್ಬರು ಶಿಷ್ಯರು ಯೇಸುವನ್ನು ಸಂಧಿಸುವ ಕುರಿತಾದ ಲೂಕನ ವಾಕ್ಯಭಾಗದ ಒಂದು ಸಾರಾಂಶವಾಗಿರಬೇಕೆಂದು ತೋರುತ್ತದೆ (ನೊಡಿ ಲೂಕ 24:13-35).
   - ಯೇಸು ತನ್ನ ಶಿಷ್ಯರಿಗೆ ಮಾಡುವ ಆದೇಶವು (ವ. 15-18) ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ದಾಖಲಾದ ಕೆಲ ಘಟನೆಗಳ ಸಾರಾಂಶವನ್ನು ನೆನಪಿಸುತ್ತವೆ.

ಮೇಲ್ಕಂಡ ಕಾರಣಗಳನ್ನು ನೀವು ಒಪ್ಪಬಹುದು ಅಥವಾ ಒಪ್ಪದಿರಬಹುದು ಆದರೆ ಮಾರ್ಕನಿಂದ ಬರೆಯಲ್ಪಟ್ಟ 9-20 ವಚನಗಳು ತನ್ನ ಸುವಾರ್ತೆಯ ಮೂಲ ಮುಕ್ತಾಯವಾಗಿರಬೇಕೋ ಅಥವಾ ಅವು ಕೆಲ ವರ್ಷಗಳ ನಂತರ ಬೇರೊಬ್ಬ ವ್ಯಕ್ತಿಯಿಂದ ಬರೆಯಲ್ಪಟ್ಟಿರಬಹುದೋ ಎಂಬುದು ಪ್ರಾಮುಖ್ಯವಲ್ಲ. ಪ್ರಾಮುಖ್ಯವಾದ ಸಂಗತಿಯೇನೆಂದರೆ ಹೊಸ ಒಡಂಬಡಿಕೆಯ

ಗ್ರಂಥಗಳನ್ನು ಅಂಗೀಕೃತಗೊಳಿಸುವ ಪ್ರಕ್ರಿಯೆಯಲ್ಲಿ ದೇವರು ಪವಿತ್ರಾತ್ಮನ ಮೂಲಕ ಈ ವಚನಗಳು ನಮ್ಮ ಸತ್ಯವೇದಗಳಲ್ಲಿ ಸೇರಿಸುವಂತೆ ಮಾಡಿದ್ದಾನೆ.

3. ವಚನ 9-18 ರ ಮುಖ್ಯ ವಿಷಯವು "ನಂಬುವುದು" ಆಗಿದೆ:

ಅ. ವಚನ 11: ಯೇಸುವು ಜೀವಂತವಾಗಿದ್ದಾನೆ ಮತ್ತು ಮಗ್ದಲದ ಮರಿಯಳು ಆತನನ್ನು ಸಂಧಿಸಿದ್ದಾಳೆಂಬುದನ್ನು ಶಿಷ್ಯರು ನಂಬಲಿಲ್ಲ.

ಆ. ವಚನ 13: ರಸ್ತೆ ಮೇಲೆ ಪುನರುತ್ಥಾನಗೊಂಡ ಯೇಸುವನ್ನು ಸಂಧಿಸಿದ ಇಬ್ಬರು ವ್ಯಕ್ತಿಗಳ ಸಾಕ್ಷಿಯನ್ನು ಶಿಷ್ಯರು ನಂಬಲಿಲ್ಲ.

ಇ. ವಚನ 14: ಊಟಕ್ಕೆ ಕೂತಿದ್ದ ಶಿಷ್ಯರಿಗೆ ಯೇಸು ಕಾಣಿಸಿಕೊಂಡಾಗ ಪುನರುತ್ಥಾನದ ಸಾಕ್ಷಿಯನ್ನು ನಂಬದೆ ಇರುವುದಕ್ಕಾಗಿ ಯೇಸು ಅವರನ್ನು ಗದರಿಸುತ್ತಾನೆ.

ಈ. ವಚನ 16: ರಕ್ಷಣೆಯು ಸುವಾರ್ತೆಯನ್ನು ನಂಬುವುದರ ಮೇಲೆ ಆತುಕೊಂಡಿದೆ. ದಂಡನೆಯು ಸುವಾರ್ತೆಯನ್ನು ನಂಬದೇ ಇರುವದನ್ನು ಆಧಿರಿಸಿದೆ.

ಉ. ವಚನ 17-18: ಸುವಾರ್ತೆಯನ್ನು ನಂಬುವ ಮತ್ತು ಸಾರುವವರಿಂದ ಆಗುವ ಸೂಚಕಕಾರ್ಯಗಳ ಪಟ್ಟಿಯನ್ನು ಒಳಗೊಂಡಿದೆ.

4. ಎಲ್ಲಾ ನಾಲ್ಕು ಸುವಾರ್ತೆಗಳು ಸಹ "ಮಹಾ ಆಜ್ಞೆ/ಆದೇಶ" ವನ್ನು ಒಳಗೊಂಡಿವೆ (ಮತ್ತಾ. 28:18-20, ಮಾರ್ಕ 16:15, ಲೂಕ 24:46-49/ಅ.ಕೃ. 1:8, ಯೋಹಾನ 20:21-23). ಹೋಲಿಕೆಯಲ್ಲಿನ ಕೆಲ ಅಂಶಗಳು:

ಅ. ಹೋಗುವುದು/ಕಳುಹಿಸುವುದು ನಾಲ್ಕು ಸುವಾರ್ತೆಗಳಲ್ಲಿನ ಪ್ರಧಾನ ಅಂಶವಾಗಿದೆ. ಯೇಸು ಕಳುಹಿಸುತ್ತಾನೆ ಮತ್ತು ಆತನ ಶಿಷ್ಯರು ಹೋಗುತ್ತಾರೆ.

ಆ. ಹೋಗುವುದು/ಕಳುಹಿಸುವುದಕ್ಕೆ ಯೇಸುವೇ ಕಾರಣನಾಗಿದ್ದಾನೆ. ಯೋಹಾನನ ಸುವಾರ್ತೆಯಲ್ಲಿ ಯೇಸು ತನ್ನ ತಂದೆಯು ತನ್ನನ್ನು ಕಳುಹಿಸಿಕೊಟ್ಟಂತೆ ಆತನು ತನ್ನ ಶಿಷ್ಯರನ್ನು ಕಳುಹಿಸುತ್ತಾನೆ. ಲೂಕನ ಸುವಾರ್ತೆಯಲ್ಲಿ ಸುವಾರ್ತೆ (ಯೇಸುವಿನ ಬಾಧೆ, ಮರಣ ಮತ್ತು ಪುನರುತ್ಥಾನ) ಮತ್ತು ಈ ಸುವಾರ್ತೆಯನ್ನು ಜನರು ಅಂಗೀಕರಿಸಬೇಕಾದ ಅವಶ್ಯಕತೆಯನ್ನು (ಪಶ್ಚಾತ್ತಾಪ ಪಡುವುದು ಮತ್ತು ಪಾಪಕ್ಷಮಾಪಣೆಯನ್ನು ಹೊಂದಿಕೊಳ್ಳುವುದು) ಶಿಷ್ಯರಿಗೆ ಮಾಡಲು ಹೇಳಿದ ಆದೇಶವಾಗಿದೆ. ಮಾರ್ಕನ ಸುವಾರ್ತೆಯಲ್ಲಿ ಅವರಿಗೆ ಯೇಸುವಿನ ಕುರಿತ ಶುಭವಾರ್ತೆಯನ್ನು ಸಾರಲು ಹೇಳಲಾಗಿದೆ. ಮತ್ತಾಯದಲ್ಲಿ ಅವರಿಗೆ ಕೊಟ್ಟ ಆದೇಶವನ್ನು ಲೋಕದ ಎಲ್ಲಾ ಜನರನ್ನು ಯೇಸುವಿನ ಶಿಷ್ಯತ್ವದೆಡೆಗೆ ನಡೆಸುವುದಾಗಿದೆ.

ಇ. ಲೂಕ ಮತ್ತು ಯೋಹಾನರು ಮಹಾ ಆಜ್ಞೆಯನ್ನು ನೆರವೇರಿಸಲು ಶಿಷ್ಯರನ್ನು ಬಲಪಡಿಸುವುದಕಕ್ಕಾಗಿನ ಪವಿತ್ರಾತ್ಮನ ಪ್ರಮುಖ ಪಾತ್ರವನ್ನು ತಿಳಿಸುತ್ತಾರೆ.

ಈ. ಮತ್ತಾಯನು ಶಿಷ್ಯತ್ವಕ್ಕೆ ಹೆಚ್ಚು ಪ್ರಾಧನ್ಯತೆ ಕೊಡುತ್ತಾನೆ: ದೀಕ್ಷಾಸ್ನಾನ ಮಾಡಿಸುವುದು ಮತ್ತು ಬೋಧಿಸುವುದು ಅಲ್ಲದೆ ಆತನು ಶಿಷ್ಯರೊಂದಿಗಿನ ಯೇಸುವಿನ ಅಧಿಕಾರ ಮತ್ತು ಪ್ರಸನ್ನತೆಯನ್ನು ಸಹ ತಿಳಿಸುತ್ತಾನೆ.

ಉ. ಮಾರ್ಕನು ಸುವಾರ್ತೆಯನ್ನು ನಂಬುವುದು ರಕ್ಷಣೆಗೆ ನಡೆಸುತ್ತದೆ ಮತ್ತು ಅಪನಂಬಿಕೆಯು ದಂಡನೆಗೆ ನಡೆಸುತ್ತದೆಂಬುದನ್ನು ತೋರಿಸುತ್ತಾನೆ.

# ಉತ್ತರಗಳು – ಯೇಸುವಿನ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಕುರಿತಾದ ಎಂಟು ಅಧ್ಯಯನಗಳು

## 1. ಉತ್ತರಗಳು: ಪುನರುತ್ಥಾನ ಮತ್ತು ಕಾವಲುಗಾರರು, ಮತ್ತಾಯ 28:1-15

### ಪ್ರಶ್ನೆಗಳಿಗೆ ಉತ್ತರಗಳು

1. ಕರ್ತನ ದೂತನೊಬ್ಬನು ಪರಲೋಕದಿಂದ ಇಳಿದು ಬಂದು ಯೇಸುವಿನ ಸಮಾಧಿಗೆ ಮುಚ್ಚಿದ್ದ ಕಲ್ಲನ್ನು ಉರುಳಿಸಿದ್ದರಿಂದ ಭೂಕಂಪವಾಯಿತು (ವ. 1-2).
2. ಭೂಕಂಪದ ಪರಿಣಾಮವಾಗಿ ಎರಡು ಸಂಗತಿಗಳಾಯಿತು (ವ. 2-4):

   ಅ. ಯೇಸುವಿನ ಸಮಾಧಿಯು ತೆರೆಯಿತು, ಇದರಿಂದ ಯೇಸುವನ್ನು ಸನ್ಮಾನಿಸಲು ಬಂದು ಸ್ತ್ರೀಯರು ಒಳಗೆ ಹೋಗಲು ಸಹಾಯಕವಾಯಿತು.

   ಆ. ಯೆಹೂದಿ ನಾಯಕರಿಂದ ಸಮಾಧಿಯನ್ನು ಕಾಯಲು ನೇಮಿಸಲ್ಪಟ್ಟ ಕಾವಲುಗಾರರು ಹೆದರಿ ನಡುಗಿ ಸತ್ತವರಹಾಗಾದರು.
3. ದೂತನು ಸ್ತ್ರೀಯರಿಗೆ ಹೇಳಿದ ಸಂದೇಶವು ಮೂರು ಭಾಗಗಳನ್ನು ಒಳಗೊಂಡಿತ್ತು (ವ. 5-7):

   ಅ. ಮೊದಲನೆಯದಾಗಿ ಆತನು ಅವರಿಗೆ ಹೆದರಬೇಡಿರಿ ಅಂದನು.

   ಆ. ಅನಂತರ ಯೇಸುವು ಮರಣದಿಂದ ಎದ್ದು ಬಂದಿದ್ದಾನೆ ಎಂದು ಹೇಳಿ, ನೋಡಿರಿ ಎಂದು ಖಾಲಿ ಸಮಾಧಿಯೊಳಗೆ ಕರೆದನು.

   ಇ. ಅಂತಿಮವಾಗಿ ಆತನವರಿಗೆ ಬೇಗನೆ ಹೋಗಿ ಯೇಸುವು ಸತ್ತವರೊಳಗಿಂದ ಎದ್ದಿದ್ದಾನೆ ಮತ್ತು ಆತನು ಗಲಿಲಾಯದಲ್ಲಿ ನಿಮಗೆ ಕಾಣಿಸಿಕೊಳ್ಳುವನೆಂದು ಶಿಷ್ಯರಿಗೆ ಹೇಳಿರಿ ಅಂದನು.
4. ದೂತನ ಸಂದೇಶಕ್ಕೆ ಸ್ತ್ರೀಯರು ಬಹು ಸಂತೋಷಗೊಂಡು ಈ ಸಂದೇಶವನ್ನು ಶಿಷ್ಯರಿಗೆ ಹೇಳುವುದಕ್ಕಾಗಿ ಓಡಿಹೋದರು (ವ. 8).
5. ಸ್ತ್ರೀಯರು ಖಾಲಿ ಸಮಾಧಿಯಿಂದ ಓಡಿಹೋಗುತ್ತಿರುವಾಗ ಯೇಸು ಅವರಿಗೆ ಪ್ರತ್ಯಕ್ಷನಾದನು. ಅವರು ಆತನ ಪಾದಗಳಿಗೆ ಅಡ್ಡಬಿದ್ದು ನಮಸ್ಕಾರ ಮಾಡಿದರು. ದೂತರು ಗಲಿಲಾಯದಲ್ಲಿ ಆತನು ಶಿಷ್ಯರನ್ನು ಸಂಧಿಸುವನೆಂಬ ಸಂದೇಶವನ್ನು ಆತನು ಇವರಿಗೆ ಪುನಃ ಹೇಳಿದನು.
6. ಸಮಾಧಿಯು ಬರಿದಾಗಿದೆ ಎಂಬುದನ್ನು ಯೆಹೂದಿ ನಾಯಕರು ಕೆಲ ಕಾವಲುಗಾರರ ವರದಿಯ ಮೂಲಕ ತಿಳಿದುಕೊಂಡರು (ವ. 11).
7. ಯೆಹೂದಿ ನಾಯಕರು ಕಾವಲುಗಾರರೊಂದಿಗೆ ಒಪ್ಪಂದವನ್ನು ಮಾಡಿಕೊಂಡರು (ವ. 12-15):

   ಅ. ಸಮಾಧಿಯು ಯಾಕೆ ಖಾಲಿಯಾಗಿದೆ ಎಂಬುದರ ಬಗ್ಗೆ ಸುಳ್ಳುಸುದ್ದಿಯನ್ನು ಹಬ್ಬಿಸಬೇಕೆಂದು ಅವರು ಕಾವಲುಗಾರರಿಗೆ ಸಾಕಷ್ಟು ಹಣ ಕೊಟ್ಟರು. ಕಾವಲುಗಾರರು ರಾತ್ರಿವೇಳೆಯಲ್ಲಿ ನಿದ್ರಿಸುತ್ತಿರುವಾಗ ಶಿಷ್ಯರು ಬಂದು ಆತನ ದೇಹವನ್ನು ಕದ್ದುಕೊಂಡು ಹೋದರೆಂದು ಹೇಳಿರಿ ಅಂದರು.

   ಆ. ಅಲ್ಲದೇ ಅವರು ಏನಾಯಿತೆಂಬುದಾಗಿ ದೇಶಾಧಿಪತಿ ವಿಚಾರಿಸಿದರೆ ಆತನನ್ನು ತಾವು ಸಮಾಧಾನಪಡಿಸುತ್ತೇವೆ ಎಂದು ಮಾತುಕೊಟ್ಟರು.
8. ಶಿಷ್ಯರು ಯೇಸುವಿನ ದೇಹವನ್ನು ಕದ್ದುಕೊಂಡು ಹೋದರೆಂಬ ಸುದ್ದಿಯು ಮತ್ತಾಯನ ಸುವಾರ್ತೆಯನ್ನು ಬರೆಯುವ ಕಾಲದವರೆಗೂ ಯೆಹೂದ್ಯರಲ್ಲಿ ಹಬ್ಬಿಕೊಂಡು ಬಂದ ಸುದ್ದಿಯಾಗಿದೆ (ವ. 15).

### ಆಲೋಚಿಸಿರಿ ಮತ್ತು ಚರ್ಚಿಸಿರಿಟಿಪ್ಪಣಿಗಳು

1. –
2. ಬರಿದಾದ ಸಮಾಧಿಯ ಕುರಿತ ಸಮಸ್ಯೆಯೊಂದಿಗೆ ಯೆಹೂದಿ ನಾಯಕರು ವಿವರಿಸಿದ ರೀತಿಯು ಆತ್ಮೀಕ ನಾಯಕರಿಗೆ ಅಯೋಗ್ಯವಾಗಿರುವಂತದ್ದಾಗಿದೆ:

ಅ. ಅವರು ಯೇಸುವಿನ ದೇಹಕ್ಕೆ ಏನಾಯಿತೆಂಬುದರ ಕುರಿತಾಗಿ ಸುಳ್ಳನ್ನು ಹೇಳಬೇಕೆಂದು ಕಾವಲುಗಾರರಿಗೆ ದೊಡ್ಡ ಪ್ರಮಾಣದ ಲಂಚವನ್ನು ಕೊಟ್ಟರು.

ಆ. ಅಲ್ಲಿ ಏನಾಯಿತೆಂಬುದರ ಕುರಿತಾಗಿ ರೋಮನ್ ದೇಶಾಧಿಪತಿ ಪ್ರಶ್ನಿಸಿದರೆ ಆತನನ್ನು ಸಮಾಧಾನಪಡಿಸುವೆವು ಎಂಬುದಾಗಿ ಕಾವಲುಗಾರರೊಂದಿಗೆ ಒಪ್ಪಂದ ಮಾಡಿಕೊಂಡರು.

ಇ. ಯೇಸುವಿನ ದೇಹದ ಬಗ್ಗೆ ಸ್ವತಃ ಅವರೆ ಯೇಸುವಿನ ಬಗ್ಗೆ ಸುಳ್ಳುಸುದ್ದಿ ಹಬ್ಬಿಸಿರಬೇಕು. ಯಾಕೆಂದರೆ ಇದು ಬಹಳವಾಗಿ ಹಬ್ಬಿಕೊಂಡು ಅನೇಕ ವರ್ಷಗಳ ನಂತರವು ಯೆಹೂದ್ಯರು ಅದನ್ನೇ ನಂಬಿದ್ದರು.



## 2. ಉತ್ತರಗಳು: ತೋಟದಲ್ಲಿ ಮಗ್ದಲದ ಮರಿಯಳು ಮತ್ತು ಯೇಸು, ಯೋಹಾನ 20:1-18

**ಪ್ರಶ್ನೆಗಳಿಗೆ ಉತ್ತರಗಳು**

1. ಮಗ್ದಲದ ಮರಿಯಳು ಮುಂಜಾನೆ ಇನ್ನೂ ಕತ್ತಲೆ ಇರುವಾಗಲೇ ಯೇಸುವಿನ ಸಮಾಧಿಯ ಬಳಿಗೆ ಹೋದಳು (ವ. 1). ಇದರ ಅರ್ಥ ಆಕೆಯು ಮನೆ ಬಿಟ್ಟಾಗ ಕತ್ತಲಾಗಿತ್ತು ಯಾಕೆಂದರೆ ಆಕೆ ಮತ್ತು ಇತರ ಸ್ತ್ರೀಯರು ತೋಟದಲ್ಲಿನ ಸಮಾಧಿಯ ಬಳಿಗೆ ಹೊತ್ತು ಮೂಡುವಾಗ ಬಂದರೆಂಬುದನ್ನು ನಾವು ಮಾರ್ಕ 16:2 ರಿಂದ ತಿಳಿದಿದ್ದೇವೆ.
2. ಸಮಾಧಿಯು ತೆರೆದಿರುವುದನ್ನು ಕಂಡಾಗ ಮರಿಯಳು ಪಟ್ಟಣಕ್ಕೆ ಹಿಂತಿರುಗಿ ಓಡಿ ಹೋಗುತ್ತಾಳೆ (ವ. 2).
3. ಇಬ್ಬರು ಶಿಷ್ಯರಿಗೆ ಮರಿಯಳು ಸ್ವಾಮಿಯನ್ನು ಯಾರೋ ಸಮಾಧಿಯಿಂದ ತೆಗೆದುಕೊಂಡು ಹೋಗಿ ಗೊತ್ತಿಲ್ಲದ ಸ್ಥಳದಲ್ಲಿ ಇಟ್ಟಿದ್ದಾರೆಂಬ ಸಂದೇಶವನ್ನು ನೀಡಿದಳು (ವ. 2).
4. ಪೇತ್ರನು, ಇನ್ನೊಬ್ಬ ಶಿಷ್ಯನು ಯೇಸುವಿನ ಸಮಾಧಿಯನ್ನು ಮುಟ್ಟಿದ ನಂತರ ಮುಟ್ಟುತ್ತಾನೆ. ಯಾಕೆಂದರೆ ಆತನು ನಿಧನವಾಗಿ ಓಡುವವನಾಗಿದ್ದನು (ವ. 2).
5. ನಿಧಾನವಾಗಿ ಓಡಿದರ ಹೊರತಾಗಿಯೂ ಸಮಾಧಿಯೊಳಕ್ಕೆ ಹೋಗಿರುವರಲ್ಲಿ ಪೇತ್ರನೇ ಮೊದಲಿಗನಾಗಿದ್ದನು (ವ. 6-8).
6. ಇಬ್ಬರು ಶಿಷ್ಯರು ಸಮಾಧಿಯೊಳಗೆ ನಾರುಬಟ್ಟೆಗಳು ಮತ್ತು ಯೇಸುವಿನ ತಲೆಯ ಮೇಲಿದ್ದ ಕೈಪಾವಡವು ಬಿದ್ದಿರುವುದನ್ನು ಕಂಡರು. ಕೈಪಾವಡವು ಆ ನಾರು ಬಟ್ಟೆಗಳ ಕೂಡ ಇರದೇ ಬೇರೆ ಕಡೆ ಸುತ್ತಿ ಇಡಲ್ಪಟ್ಟಿತ್ತು. ಇದರಿಂದ ಆತನ ಶಿಷ್ಯರು ಯೇಸುವಿನ ಸಮಾಧಿಯು ಒಡೆದು ಸಮಾಧಿ ದರೋಡೆಕೋರರಿಂದ ಲೂಟಿಗೊಳಗಾಗಿಲ್ಲ ಎಂದು ಗ್ರಹಿಸಿಕೊಂಡರು.
7. ಯೇಸುವು ಸತ್ತ ಮೇಲೆ ಜೀವದಿಂದೆದ್ದು ಬರಬೇಕೆಂದು ಶಾಸ್ತ್ರದಲ್ಲಿ ಬರೆದಿರುವ ಮಾತನ್ನು ಅರಿತುಕೊಳ್ಳುವಲ್ಲಿ ವಿಫಲರಾದರು (ವ. 9).
8. ಇಬ್ಬರು ಶಿಷ್ಯರು ಸಮಾಧಿಯಿಂದ ಹೊರಟುಹೋದ ಮೇಲೆ ಮಗ್ದಲದ ಮರಿಯಳು ಸಮಾಧಿಯ ಬಳಿಯಲ್ಲಿ ಅಳುತ್ತಾ ನಿಂತಿದ್ದಳು (ವ. 11).
9. ಸಮಾಧಿಯೊಳಗೆ ನೋಡಿದಾಗ ಮರಿಯಳು ಇಬ್ಬರು ದೇವದೂತರನ್ನು ಕಂಡಳು. ಅವರಿಬ್ಬರು ಯೇಸುವಿನ ದೇಹವನ್ನು ಇಟ್ಟ ಜಾಗದಲ್ಲಿ ಕುಳಿತುಕೊಂಡಿದ್ದರು (ವ. 12).
10. ಯಾರೋ ಯೇಸುವಿನ ದೇಹವನ್ನು ತೆಗೆದುಕೊಂಡು ಹೋಗಿ ಬೇರೆ ಎಲ್ಲಿಯೋ ಇಟ್ಟಿರುವುದರಿಂದ ತಾನು ಅಳುತ್ತಿದ್ದೇನೆ ಎಂಬುದಾಗಿ ಹೇಳುತ್ತಾಳೆ (ವ. 13).
11. ಯೇಸು ಸಮಾಧಿಯ ಬಳಿಯಲ್ಲಿ ನಿಂತಿರುವುದನ್ನು ನೋಡಿ ಮರಿಯಳು ಆತನನ್ನು ತೋಟಗಾರನೆಂದು ನೆನಸಿದಳು. ಹಾಗಾಗಿ ಆಕೆ ಯೇಸುವಿನ ದೇಹವನ್ನು ಎಲ್ಲಿಟ್ಟಿದ್ದಾರೆ ಎಂದು ಆತನನ್ನೇ ಕೇಳುತ್ತಾಳೆ (ವ. 14-15).
12. ಯೇಸುವು ಮರಿಯಳನ್ನು ಮರಿಯಳೇ ಎಂದು ಆಕೆಯ ಹೆಸರಿಡಿದು ಕರೆದಾಗ ಆತನನ್ನು ಗುರುತಿಸಿದಳು (ವ. 16).
13. ಯೇಸು ಮರಿಯಳಿಗೆ ತನ್ನನ್ನು ಹಿಡಿಯಲು ಬಿಡಲಿಲ್ಲ ಯಾಕೆಂದರೆ ಇನ್ನೂ ಆತನು ತಂದೆಯ ಬಳಿಗೆ ಏರಿಹೋಗಿರಲಿಲ್ಲ (ವ. 17). ಇದರ್ಥವೇನೆಂಬುದನ್ನು ತಿಳಿಯಲು ***ಆಲೋಚಿಸಿರಿ ಮತ್ತು ಚರ್ಚಿಸಿರಿ3*** ರ ಟಿಪ್ಪಣಿ ನೋಡಿರಿ.
14. ಶಿಷ್ಯರಿಗಾಗಿನ ಮರಿಯಳ ಸಂದೇಶ: ಆತನು ತನ್ನ ಮತ್ತು ಅವರ ತಂದೆಯೂ, ತನ್ನ ಮತ್ತು ಅವರ ದೇವರೂ ಆಗಿರುವಾತನ ಬಳಿಗೆ ಏರಿಹೋಗಿದ್ದಾನೆ (ವ. 17-18).

**ಆಲೋಚಿಸಿರಿ ಮತ್ತು ಚರ್ಚಿಸಿರಿಟಿಪ್ಪಣಿಗಳು**

1. ಶಿಷ್ಯನು ನೋಡಿ ನಂಬಿದನು ಎಂದು ಯೋಹಾನನು ಬರೆಯುತ್ತಾನೆ (ವ. 8). ಆ ಶಿಷ್ಯನು ನಾರು ಬಟ್ಟೆಗಳು ಬಿದ್ದಿರುವುದನ್ನು ಕಂಡನು. ಆಗ ತನ್ನ ಮರಣ ಮತ್ತು ಪುನರುತ್ಥಾನದ ಬಗ್ಗೆ ಯೇಸು ತನ್ನ ಶಿಷ್ಯರಿಗೆ ಹೇಳಿದ್ದನ್ನು ಆತನು

ನೆನಪುಮಾಡಿಕೊಂಡಿರಬೇಕು (ನೋಡಿ ಯೋಹಾನ 2:22, 11:25, 16:22). ಹೀಗೆ ಆತನು ಯೇಸುವು ಸತ್ತವರೊಳಗಿಂದ ಎದ್ದಿದ್ದಾನೆಂಬುದನ್ನು ನಂಬಿದನು.

2. ತಾನು ತೋಟದಲ್ಲಿ ಸಂಧಿಸಿದ ವ್ಯಕ್ತಿ ಯಾರೆಂದು ಗುರುತಿಸುವಲ್ಲಿ ಮಗ್ದಲದ ಮರಿಯಳು ಗೊಂದಲಗೊಂಡಳು (ವ. 11-16), ಯಾಕೆಂದರೆ ತಾನು ಯೇಸುವನ್ನು ಪುನಃ ಸಂಧಿಸುತ್ತೇನೆಂಬ ನಿರೀಕ್ಷೆ ಆಕೆಗಿರಲಿಲ್ಲ. ಆತನು ಸತ್ತಿದ್ದಾನೆ ಮತ್ತು ಆತನ ದೇಹವನ್ನು ಬೇರೆಡೆ ಎಲ್ಲಿಯೋ ಇಟ್ಟಿದ್ದಾರೆಂಬುದಾಗಿ ಆಕೆ ಯೋಚಿಸಿದಳು (ವ. 2, 12). ಆಕೆಯು ಬಹುದುಃಖಿತಳಾಗಿದ್ದಳು (ವ. 11) ಮತ್ತು ಆಕೆಯ ಮನಸ್ಸಿನಲ್ಲಿ ಯೇಸುವಿನ ಶವವನ್ನು ಹುಡುಕುವ ಪ್ರಯತ್ನದಲ್ಲೇ ಮುಳುಗಿಹೋಗಿತ್ತು (ವ. 13). ಆಕೆಯು ಅದನ್ನು ನೋಡಿ ಅದಕ್ಕೆ ತಾನು ತಂದ ಪರಿಮಳ ದ್ರವ್ಯದಿಂದ ಗೌರವಿಸಬೇಕೆಂಬುದಾಗಿ ಆಕೆ ಬಯಸಿದ್ದಳು. ಬಹಶಃ ಆಕೆ "ತೋಟಗಾರ" ನನ್ನು ಸರಿಯಾಗಿ ನೋಡದೆ ಇದ್ದಿರಬಹುದು.

3. ಯೇಸು ಮರಿಯಳಿಗೆ ತನ್ನನ್ನು ಹಿಡಿಯಬೇಡವೆಂದು ಹೇಳಿದನು, ಯಾಕೆಂದರೆ ಆತನಿನ್ನು ಪರಲೋಕಕ್ಕೆ ಏರಿಹೋಗಿರಲಿಲ್ಲ (ವ. 17). ಇದರರ್ಥ ಮರಿಯಳು ತನ್ನನ್ನು ಮುಟ್ಟಲು ಆತನು ನಿರಾಕರಿಸಿದನೆಂದಲ್ಲ (ಹೋಲಿಸಿ ಯೋಹಾನ 20:27 ರಲ್ಲಿ ತೋಮನಿಗೆ ತನ್ನ ಗಾಯಗಳನ್ನು ಮುಟ್ಟಿನೋಡು ಎಂದು ಹೇಳಿದನು). ಆತನು ಆಕೆಗೆ ತಾನಿನ್ನೂ ತಂದೆಯ ಬಳಿಗೆ ಏರಿಹೋಗಿರದೆ ಇರುವದರಿಂದ ತನ್ನನ್ನು ಬಂಧನದಲ್ಲಿರಸಬಾರದೆಂದು ಹೇಳಿದನು. ಅಲ್ಲಿಯವರೆಗೂ (ನಾಲವತ್ತು ದಿನ ಕಾಲ, ಆತನು ತನ್ನ ಶಿಷ್ಯರೊಂದಿಗೆ ಇರುವವನಾಗಿದ್ದನು. ಹೀಗಾಗಿ ಪುನಃ ಆತನನ್ನು ನೋಡುವ ಅವಕಾಶ ಮರಿಯಳಿಗಿತ್ತು ಮತ್ತು ಆತನಿಗೆ ಅಂಟಿಕೊಂಡೇ ಇರಬೇಕಾದ ಅಗತ್ಯವಿರಲಿಲ್ಲ.

4. –



### 3. ಉತ್ತರಗಳು: ಎಮ್ಮಾಹುವಿನ ರಸ್ತೆಯಲ್ಲಿ, ಲೂಕ 24:13-35

**ಪ್ರಶ್ನೆಗಳಿಗೆ ಉತ್ತರಗಳು**

1. ಯೆರೂಸಲೇಮಿನಿಂದ ಎಮ್ಮಾಹುವಿಗೆ ನಡೆದುಕೊಂಡು ಹೋಗುತ್ತಿರುವಾಗ ಆ ಇಬ್ಬರು ಪಸ್ಕಹಬ್ಬದ ಸಂದರ್ಭದಲ್ಲಿ ಯೆರೂಸಲೇಮಿನಲ್ಲಿ ಸಂಭವಿಸಿದ ಕಾರ್ಯಗಳ ಬಗ್ಗೆ ಮಾತಾಡುತ್ತಿದ್ದರು.
2. ಆ ಇಬ್ಬರಿಗೆ ಯೇಸು ನೀವೇನು ಮಾತಾಡುತ್ತಿದ್ದೀರಿ ಎಂದು ಕೇಳಿದನು (ವ. 17).
3. ಯೇಸುವಿನ ಪ್ರಶ್ನೆಗೆ ಅವರು ಆಶ್ಚರ್ಯಪಟ್ಟರು, ಯಾಕೆಂದರೆ ಪಸ್ಕಹಬ್ಬದ ವೇಳೆ ಯೇಸುವು ಬಂಧಿಸಲ್ಪಟ್ಟು ಶಿಲುಬೆಗೇರಿಸಿದ್ದನ್ನು ಎಲ್ಲರೂ ತಿಳಿದಿರುವೆಂಬುದಾಗಿ ನಿರೀಕ್ಷಿಸಿದ್ದರು (ವ. 18).
4. ಯೇಸುವು ಕೃತ್ಯದಲ್ಲಿಯೂ ಮಾತಿನಲ್ಲಿಯೂ ಸಮರ್ಥನಾದ ಪ್ರವಾದಿಯಾಗಿದ್ದನೆಂಬುದಾಗಿ ಅವರು ಆತನಿಗೆ ವಿವರಿಸುತ್ತಿದ್ದರು (ವ. 19).
5. ಯೇಸುವನ್ನು ಯೆಹೂದಿ ನಾಯಕರು ಮರಣದಂಡನೆಗೆ ಒಪ್ಪಿಸಿಕೊಟ್ಟು ಶಿಲುಬೆಗೆ ಹಾಕಿಸಿದರೆಂಬದುದಾಗಿ ಹೇಳುತ್ತಾರೆ (ವ. 20).
6. ಯೇಸುವು ಮೆಸ್ಸೀಯನಾಗಿದ್ದು ಇಸ್ರಾಯೇಲ್ (ಯೆಹೂದಿ) ಜನರನ್ನು ರೋಮನ್ನರ ಹಿಡಿತದಿಂದ ಬಿಡಿಸಿ ದೇವರ ರಾಜ್ಯದ ಅರಸನಾಗಿ ಆಳುವನೆಂಬುದಾಗಿ ನಿರೀಕ್ಷಿಸಿಕೊಂಡಿದ್ದರು (ವ. 21).
7. ಸಮಾಧಿಯು ಬರಿದಾದದ್ದು ಮತ್ತು ಯೇಸುವು ಬದುಕಿದ್ದಾನೆಂದು ದೂತರು ಹೇಳಿದ ಸಂಗತಿಗಳು ಆ ದಿನ ಮುಂಜಾನೆ ಅವರಿಗೆ ಅತ್ಯಾಶ್ಚರ್ಯವನ್ನುಂಟುಮಾಡಿದವು. ಅವರಿದನ್ನು ಪ್ರತ್ಯಕ್ಷ ಸಾಕ್ಷಿಗಳಿಂದ ಕೆಲ ಸ್ತ್ರೀಯರು ಮತ್ತು ಯೇಸುವಿನ ಶಿಷ್ಯರಿಂದ ಕೇಳಿದ್ದರು (ವ. 22-24).
8. ಯೇಸು ಅವರನ್ನು "ಬುದ್ಧಿಯಿಲ್ಲದವರೇ" ಮತ್ತು "ಮಂದಹೃದಯರೇ" ಎಂದು ಕರೆಯುತ್ತಾನೆ, ಯಾಕೆಂದರೆ ಅವರು ಕ್ರಿಸ್ತ(ಮೆಸ್ಸೀಯ)ನ ಕುರಿತ ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ಅವರು ಅರಿತುಕೊಳ್ಳಲಿಲ್ಲ ಮತ್ತು ನಂಬಲಿಲ್ಲ (ವ. 25-26).
9. ಯೇಸು ಅವರಿಗೆ ಮೆಸ್ಸೀಯ (ಕ್ರಿಸ್ತನು) ಶ್ರಮೆಗಳನ್ನು ಅನುಭವಿಸಿ ಮಹಾಪದವಿಗೆ ಸೇರುವನು ಎಂಬುದಾಗಿ ವಿವರಿಸುತ್ತಾನೆ (ವ. 26).
10. ಯೆಹೂದಿ ನಾಯಕರಿಂದ ಕೊಲ್ಲಲ್ಪಟ್ಟ ಪ್ರವಾದಿಯು ನಿಜವಾಗಿಯೂ ಕ್ರಿಸ್ತನಾಗಿದ್ದನೆಂಬುದನ್ನು ಸಾಬೀತುಪಡಿಸಲು ಯೇಸು ಹಳೇ ಒಡಂಬಡಿಕೆಯ ಪುಸ್ತಕಗಳನ್ನು ಉಪಯೋಗಿಸುತ್ತಾನೆ (ವ. 26-27). ದೇವರ ಮಾತನ್ನು ಅವರು ಸರಿಯಾಗಿ ಅರಿತುಕೊಂಡು, ವ್ಯಾಖ್ಯಾನಿಸಿದ್ದರೆ, ಹಳೇ ಒಡಂಬಡಿಕೆಯ ಪ್ರವಾದಿಗಳು ಮುಂತಿಳಿಸಿದಂತೆ ಯೇಸುವು ಮೆಸ್ಸೀಯನಾಗಿದ್ದಾನೆಂಬುದನ್ನು ಎಂದೂ ಸಂದೇಹ ಪಡುತ್ತಿರುಲಿಲ್ಲ.
11. ಆಗಲೇ ಕತ್ತಲಾಗಿದ್ದರಿಂದ ಅವರು ಆ ರಾತ್ರಿಯನ್ನು ತಮ್ಮ ಹಳ್ಳಿಯಲ್ಲೇ ಕಳೆಯಬೇಕೆಂದು ಯೇಸುವಿಗೆ ಬಲವಂತಮಾಡಿದರು (ವ. 28-29).
12. ಅವರ ಕಣ್ಣುಗಳು ತೆರೆದದ್ದರಿಂದ ತಾವು ತಮ್ಮ ಮನೆಗೆ ಆಮಂತ್ರಿಸಿದ ವ್ಯಕ್ತಿಯು ಯೇಸುವೇ ಎಂದು ಅವರು ಗ್ರಹಿಸಿಕೊಂಡರು. ಆತನು ರೊಟ್ಟಿಯನ್ನು ತೆಗೆದುಕೊಂಡು, ಆಶೀರ್ವಧಿಸಿ, ಮುರಿದು ಅವರಿಗೆ ತಿನ್ನಲು ಕೊಟ್ಟಾಗ ಈ ಸಂಗತಿ ಉಂಟಾಯಿತು (ವ. 30-31).
13. ಆ ರಸ್ತೆಯಲ್ಲಿ ತಮಗಾದ ಅನುಭವವನ್ನು ಅವರು ಈ ರೀತಿ ವರ್ಣಿಸುತ್ತಾರೆ (ವ. 32): ಯೇಸುವು ರಸ್ತೆಯುದ್ದಕ್ಕೂ ಅವರಿಗೆ ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ವಿವರಿಸುತ್ತಿರುವಾಗ ಅವರ "ಹೃದಯವು ಕುದಿಯಿತು".
14. ಯೇಸು ಅವರನ್ನು ಬಿಟ್ಟುಹೋದ ಕೂಡಲೇ ಅವರು ಯೆರೂಸಲೇಮಿಗೆ ಹಿಂತಿರುಗಿ ಹೋದರು (ವ. 33).

15. ಯೆರೂಸಲೇಮಿಗೆ ಬಂದಕೂಡಲೇ ಅವರು ಯೇಸುವು ಎದ್ದು ಬಂದಿರುವುದು ನಿಜವೆಂದು ತಮ್ಮ ಸ್ನೇಹಿತರಿಂದ ತಿಳಿದುಕೊಂಡರು. ಸೀಮೋನ ಪೇತ್ರನು ಆತನನ್ನು ನೋಡಿದ್ದನು (ವ. 33-34).

16. ಯೆರೂಸಲೇಮಿನಲ್ಲಿನ ತಮ್ಮ ಸ್ನೇಹಿತರಿಗೆ ಅವರು ತಾವೂ ಸಹ ಎದ್ದು ಬಂದ ಯೇಸುವನ್ನು ಕಂಡಿದ್ದೇವೆ ಮತ್ತು ರೊಟ್ಟಿ ಮುರಿಯುವದರಲ್ಲಿ ಸ್ವತಃ ಆತನೇ ತನ್ನನ್ನು ತಿಳಿಯಪಡಿಸಿದ್ದಾನೆಂದು ಸಾಕ್ಷಿಸಿದರು (ವ. 35).

**ಆಲೋಚಿಸಿರಿ ಮತ್ತು ಚರ್ಚಿಸಿರಿಟಿಪ್ಪಣಿಗಳು**

1. "ಅವರ ಕಣ್ಣು ಕಟ್ಟಿದ ಹಾಗಾಯಿತು" ಎಂಬ ಹೇಳಿಕೆಯನ್ನು (ವ. 16) ಮೂರು ರೀತಿಯಲ್ಲಿ ಅರ್ಥೈಸಿಕೊಳ್ಳಬಹುದು:

   ಅ. ದೇವರೇ ಅವರ ಕಣ್ಣುಗಳನ್ನು ಮಂದಮಾಡಿ ಅವರು ಯೇಸುವನ್ನು ಗುರುತಿಸಲಾರದಂತೆ ಮಾಡಿದ್ದನು. ಯಾಕೆ ದೇವರು ಆ ರೀತಿ ಮಾಡಿದ್ದಾನೆಂಬುದನ್ನು ತಿಳಿಯಲು ಕಷ್ಟಕರವಾಗುತ್ತದೆ.

   ಆ. ಯೇಸುವು ಹಳೇ ಒಡಂಬಡಿಕೆಯ ಪ್ರವಾದಿಗಳು ಹೇಳಿದ ಕ್ರಿಸ್ತನಾಗಿದ್ದಾನೆಂಬುದನ್ನು ತಿಳಿಯುವಲ್ಲಿ ಆದ ಅವರ ತಿಳುವಳಿಕೆಯ ಕೊರತೆಯೇ ಅವರ ಕಣ್ಣುಗಳನ್ನು ಮಂದಮಾಡಿತ್ತು.

   ಇ. ಅವರಿಗೆ ಯೇಸುವನ್ನು ಗುರುತಿಸಲಾಗಲಿಲ್ಲವೆಂದು ಲೂಕನು ಒತ್ತಾಗಿ ಹೇಳುವ ಒಂದು ಬಗೆ ಇದಾಗಿದೆ. ಕೆಲವೊಮ್ಮೆ ಜನರಿಗೆ ಆತನನ್ನು ಗುರುತಿಸಲು ಆಗಲಿಲ್ಲವೆಂಬುದನ್ನು (ಉದಾ. ಮಗ್ದಲದ ಮರಿಯಳು) ಕಾಣಬಹುದು. ಪುನರುತ್ಥಾನ ಹೊಂದಿದ ಯೇಸುವು ಕೆಲದಿನಗಳ ಹಿಂದೆ ಬಾಧೆಪಟ್ಟು ಮರಣಹೊಂದಿದ ಯೇಸುವಿಗಿಂತ ವಿಭಿನ್ನನಾಗಿದ್ದನು.

2. ಆ ಇಬ್ಬರು ಶಿಷ್ಯರು ಯೇಸುವಿನ ಬಗ್ಗೆ "ಪ್ರವಾದಿ" (ವ. 19) ಎಂಬ ಪದ ಬಳಸುತ್ತಾರೆ, ಆದರವರು "ಕ್ರಿಸ್ತನು" (ಮೆಸ್ಸೀಯ) ಎಂಬ ಪದ ಬಳಸಲ್ಲ. ಅವರು ಯೇಸುವನ್ನು ಒಬ್ಬ ಮಹಾನ್ ದೇವರ ಮನುಷ್ಯ, ಹಳೇ ಒಡಂಬಡಿಕೆಯ ಪ್ರವಾದಿಗಳಂತೆ ದೈವಿಕ ಅಧಿಕಾರದಿಂದ ಮಾತಾಡುವವನು, ದೈವಿಕ ಶಕ್ತಿಯಿಂದ ಅದ್ಭುತಗಳನ್ನು ಮಾಡಿದವನೆಂಬುದಾಗಿ ಆತನನ್ನು ಗೌರವಿಸಿರಬೇಕು. ಆದರೆ ಕೆಲ ದಿನಗಳ ಹಿಂದೆ ಯೇಸು ಯೆರೂಸಲೇಮಿನಲ್ಲಿ ಮರಣ ಹೊಂದಿದನು, ಹಾಗಾಗಿ ಈತನು ಯೆಹೂದಿ ಜನಾಂಗನ್ನು ರೋಮನ್ ಹಿಡಿತದಿಂದ ಬಿಡಿಸುವ ವಿಮೋಚಕ ಮತ್ತು ದಾವೀದನ ಕುಲದ ಒಬ್ಬ ಅರಸನಾಗಿರಲು ಸಾಧ್ಯವಿಲ್ಲವೆಂಬುದಾಗಿ ಯೋಚಿಸಿರಬಹುದು.

3. "ಅವರ ಕಣ್ಣುಗಳು ತೆರೆದವು" (ವ. 31) ಎಂಬ ಹೇಳಿಕೆಯು ಆ ಮಧ್ಯಾಹ್ನ ತಮ್ಮೊಂದಿಗೆ ನಡೆದುಕೊಂಡು ಹೋಗುತ್ತಿರುವ ಯೇಸುವನ್ನು ಆ ಇಬ್ಬರು ವ್ಯಕ್ತಿಗಳು ಫಕ್ಕನೆ ಗುರುತಿಸಿದರೆಂಬುದು ಇದರರ್ಥವಾಗಿದೆ. ಯೇಸುವು ರೊಟ್ಟಿಯನ್ನು ಮುರಿದು ಅವರಿಗೆ ತಿನ್ನಲು ಕೊಟ್ಟಾಗ ಅವರಿಗೆ ಆತನ ಗುರುತು ಗೊತ್ತಾಯಿತು. ಈ ಹೇಳಿಕೆಯು "ಅವರ ಕಣ್ಣು ಕಟ್ಟಿದ ಹಾಗಾಯಿತು" ಎಂಬ ಲೂಕನ ಈ ಹಿಂದಿನ ಹೇಳಿಕೆಗೆ ಸಂಬಂಧಿಸಿದ್ದಾಗಿದೆ. ಹಾಗೇ ಅವರ ಕಣ್ಣುಗಳು ಹೇಗೆ ತೆರೆದವೆಂಬುದನ್ನು ಅರ್ಥೈಸಿಕೊಳ್ಳುವ ಮೂರು ವಿಧಗಳನ್ನು ಕಾಣಬಹುದು:

   ಅ. ದೇವರು ಅವರ ಕಣ್ಣುಗಳನ್ನು ತೆರೆದನು.

   ಆ. ಕೊನೆಗೂ ಆ ಇಬ್ಬರು ವ್ಯಕ್ತಿಗಳು ಮೆಸ್ಸೀಯನು (ಕ್ರಿಸ್ತನು) ಮಹಿಮಾ ಪದವಿಗೆ ಸೇರುವುದಕ್ಕಿಂತ ಮುಂಚೆ ಬಾಧೆಪಟ್ಟು ಸಾಯುವನೆಂಬುದನ್ನು ತಿಳಿದುಕೊಂಡರು (ಹೋಲಿಸಿ ವಚನ 25-27). ಈಗ ಅವರು ತಮ್ಮೊಂದಿಗೆ, ಕುಳಿತಿರುವ ಯೇಸುವು ಮರಣದಿಂದ ಎದ್ದ ಯೇಸುವೇ ಎಂದು ಗ್ರಹಿಸಿಕೊಂಡರು. ಇದು ಖಂಡಿತವಾಗಿ ಪವಿತ್ರಾತ್ಮನ ಕಾರ್ಯವಾಗಿತ್ತು (ಹೋಲಿಸಿ ಯೋಹಾನ 14:26, 15:26).

   ಇ. ಈಗ ಯೇಸು ವಿಭಿನ್ನವಾಗಿ ಕಂಡರೂ ಸಹ ಆ ದಿನ ಸಂಜೆ ಯೇಸುವು ರೊಟ್ಟಿಯನ್ನು ಮುರಿದುಕೊಟ್ಟ ರೀತಿಯು ಆತನು ಪುನರುತ್ಥಾನ ಹೊಂದಿದ ಯೇಸು ಎಂಬುದನ್ನು ಅವರು ಗ್ರಹಿಸಿಕೊಳ್ಳುವಂತಾಯಿತು. ಖಂಡಿತವಾಗಿ ಇದೂ ಸಹ ಪವಿತ್ರಾತ್ಮನ ಕಾರ್ಯವಾಗಿದೆ.

4. –



## 4. ಉತ್ತರಗಳು: ಶಿಷ್ಯರ ಒಂದು ಗುಂಪು, ಲೂಕ 24:36-49 ಮತ್ತು ಯೋಹಾನ 20:19-25

### ಪ್ರಶ್ನೆಗಳಿಗೆ ಉತ್ತರಗಳು

1. ಲೂಕನ ವಾಕ್ಯಭಾಗದಲ್ಲಿನ ಸಂದರ್ಭವು ಯೆರೂಸಲೇಮಿನ ಮೇಲಂತಿಸ್ತಿನ ದೊಡ್ಡ ಕೋಣೆಯಲ್ಲಿ ಶಿಷ್ಯರ ಸಂಜೆಯ ಊಟದ ಸಮಯವಾಗಿದ್ದಿರಬಹುದು (ಹೋಲಿಸಿ ಲೂಕ 22:12). ಕ್ಲಿಯೋಫ ಮತ್ತು ಆತನ ಜೊತೆಗಾರನು ತಾವು ಯೇಸುವನ್ನು ಸಂಧಿಸಿದ್ದೇವೆಂಬುದಾಗಿ ಆಗಷ್ಟೇ ಹೇಳಿದ್ದರು (ಲೂಕ 24:36). ಇದು ಯೇಸುವು ಪುನರುತ್ಥಾನದ ಹೊಂದಿದ ದಿನದ ಸಾಯಂಕಾಲವಾಗಿತ್ತು.
2. ಯೇಸು ತನ್ನ ಶಿಷ್ಯರನ್ನು ಮನಶ್ಯಾಂತಿಯಾಗಲಿ ಎಂದು ವಂದಿಸುತ್ತಾನೆ (ಲೂಕ 24:36).
3. ಯೇಸುವು ಭೂತವಾಗಿರಬೇಕೆಂದು ತಿಳಿದು ಶಿಷ್ಯರು ಭಯಹಿಡಿದವರಾದರು (ಲೂಕ 24:37). ಯೋಹಾನನು ತನ್ನ ವಿವರದಲ್ಲಿ ಕೋಣೆಯ ಬಾಗಿಲುಗಳು ಮುಚ್ಚಿದ್ದವೆಂಬ ಮಾಹಿತಿಯನ್ನು ಸೇರಿಸುತ್ತಾನೆ (ಯೋಹಾನ 20:19).
4. ತನ್ನನ್ನು ಮುಟ್ಟಿನೋಡಿರಿ ಎಂದು ಹೇಳುವುದರ ಮೂಲಕ ಯೇಸುವು ಅವರು ಕಂಡದ್ದು ನಿಜವಾಗಲೂ ತಾನೇ ಎಂಬುದನ್ನು ತನ್ನ ಶಿಷ್ಯರಿಗೆ ಯೇಸುವು ಮನವರಿಕೆ ಮಾಡಲು ಪ್ರಯತ್ನಿಸುತ್ತಾನೆ (ಲೂಕ 24:38-39). ಭೂತಕ್ಕೆ ಮಾಂಸವೂ ಎಲುಬೂ ಇರುವುದಿಲ್ಲ.
5. ಯೇಸುವನ್ನು ಕಂಡಾಗ ಶಿಷ್ಯರಲ್ಲಿ ಮಿಶ್ರಭಾವನೆಯುಂಟಾಯಿತು. ಆತನನ್ನು ಪುನಃ ಕಂಡಾಗ ಅವರಿಗೆ ಸಂತೋಷವಾಯಿತು. ಆದರೂ ಸಹ ಆತನು ನಿಜವಾಲೂ ಯೇಸುವೇ ಆಗಿದ್ದಾನಾ ಎಂಬುದಾಗಿ ಸಂದೇಹಪಟ್ಟರು (ಲೂಕ 24:41). ಬಹುಶಃ ಆತನನ್ನು ಮುಟ್ಟಲು ಸಹ ಭಯಪಟ್ಟಿರಬೇಕು.
6. ಯೇಸು ಆಹಾರವನ್ನು ಕೇಳಿದನು. ಯಾಕೆಂದರೆ ಆತನು ಹಸಿದಿರುವ ನಿಮಿತ್ತದಿಂದಲ್ಲ. ಆದರೆ ತಾನು ಜೀವಂತನಾಗಿದ್ದೇನೆಂಬುದನ್ನು ತನ್ನ ಶಿಷ್ಯರಿಗೆ ಮನವರಿಕೆ ಮಾಡಲು ಬಯಸಿದ್ದನು (ಲೂಕ 24:41-42). ಭೂತವು ಆಹಾರವನ್ನು ತಿನ್ನುವುದಿಲ್ಲ!.
7. ತನ್ನ ಶಿಷ್ಯರು ಎಲ್ಲಾ ದೇಶದವರಿಗೂ ಸಾರಲ್ಪಡಬೇಕೆಂಬುದಾಗಿ ಬರೆಯಲ್ಪಟ್ಟ ಪ್ರವಾದನೆಗಳ ನೆರವೇರಿಕೆಯಾದ ಸುವಾರ್ತೆಗೆ ಅಡಿಪಾಯವಾಗಿರುವ ಆತನ ಮರಣ ಮತ್ತು ಪುನರುತ್ಥಾನಕ್ಕೆ ಸಾಕ್ಷಿಗಳಾಗುವರೆಂಬುದಾಗಿ ಹೇಳುತ್ತಾನೆ (ಲೂಕ 24:44-48 ಮತ್ತು ವಚನ 44 ರ ಟಿಪ್ಪಣಿ).
8. ಯೆರೂಸಲೇಮಿನಲ್ಲಿ ಸುವಾರ್ತೆ ಸಾರುವುದನ್ನು ಪ್ರಾರಂಭಿಸಬೇಕೆಂದು ಯೇಸು ಹೇಳುತ್ತಾನೆ (ಲೂಕ 24:46-47).
9. ಯೇಸು ತನ್ನ ಶಿಷ್ಯರಿಗೆ ಪವಿತ್ರಾತ್ಮನ ಶಕ್ತಿಯನ್ನು ಹೊಂದಿಕೊಳ್ಳುವುದಕ್ಕಾಗಿ ಯೆರೂಸಲೇಮಿನಲ್ಲಿ ಕಾದಿರ್ರಿ ಎಂದು ಹೇಳುತ್ತಾನೆ (ಲೂಕ 24:49).
10. ಯೋಹಾನನು ಹೇಳುವ ವಿಷಯದ ಸಂದರ್ಭವು ಯೇಸುವು ಪುನರುತ್ಥಾನ ಹೊಂದಿದ ದಿನದ ಸಂಜೆಯಲ್ಲಿ ಶಿಷ್ಯರೆಲ್ಲರೂ ಒಟ್ಟಾಗಿ ಸೇರಿರುವ ಸಮಯವಾಗಿದೆ (ಯೋಹಾನ 20:19).
11. ಯೇಸುವಿನ ಮರಣದಂಡನೆಗೆ ಕಾರಣರಾದ ಯೆಹೂದಿ ನಾಯಕರ ಭಯದಿಂದ ಮನೆಯ ಬಾಗಿಲುಗಳನ್ನು ಮುಚ್ಚಲಾಗಿತ್ತು (ಯೋಹಾನ 20:19).
12. ಯೇಸುವನ್ನು ಕಂಡಾಗ ಶಿಷ್ಯರು ಸಂತೋಷಪಟ್ಟರು (ಯೋಹಾನ 20;20). ಅಲ್ಲದೇ ಅವರು ದಿಗಿಲುಪಟ್ಟರು ಎಂಬುದನ್ನು ಯೋಹಾನನು ಸೇರಿಸುವುದಿಲ್ಲ (ಲೂಕನ ವಿವರದೊಂದಿಗೆ ಹೋಲಿಸಿ).
13. ತನ್ನ ಶಿಷ್ಯರಿಗೆ ಆಜ್ಞಾಪಿಸುವಾಗ ಯೇಸು ಶಿಷ್ಯರನ್ನು ಕಳುಹಿಸುವುದನ್ನು ದೇವರು ತನ್ನನ್ನು ಕಳುಹಿಸಿರುವುದರೊಂದಿಗೆ ಹೋಲಿಸುತ್ತಾನೆ (ಯೋಹಾನ 20:21).

14. ತಾವು ಯೇಸುವನ್ನು ನೋಡಿದ್ದೇವೆಂದು ಇತರ ಶಿಷ್ಯರು ಹೇಳುವಾಗ ತೋಮನು ಅಪನಂಬಿಕೆಯಿಂದ ಪ್ರತಿಕ್ರಯಿಸುತ್ತಾನೆ (ಯೋಹಾನ 20:24-25).

**ಆಲೋಚಿಸಿರಿ ಮತ್ತು ಚರ್ಚಿಸಿರಿಟಿಪ್ಪಣಿಗಳು**

1. ತನ್ನ ಪುನರುತ್ಥಾನದ ಸಂಜೆ ಶಿಷ್ಯರಿಗೆ ಯೇಸು ಕಾಣಿಸಿಕೊಂಡ ಎರಡು ವಿವರಗಳ ಒಂದು ಹೋಲಿಕೆ (ಲೂಕ 24:36-49 ಮತ್ತು ಯೋಹಾನ 20:19-25):

   ಅ. ವಿವರಗಳು ಸ್ವಲ್ಪ ವಿಭಿನ್ನವಾಗಿವೆ ಆದರೆ ಅವೆರಡೂ ಸಹ ಒಂದೇ ಸಂದರ್ಭವನ್ನು ವರ್ಣಿಸುತ್ತವೆಂಬುದಾಗಿ ನಾವು ತೀರ್ಮಾನಿಸಬಹುದು. ಯೇಸು ತನ್ನ ಶಿಷ್ಯರ ಒಂದು ದೊಡ್ಡ ಗುಂಪಿಗೆ ಮೊದಲಬಾರಿ ತಾನು ಪುನರುತ್ಥಾನ ಹೊಂದಿದ ದಿನದ ಸಾಯಂಕಾಲದ ವೇಳೆ ಕಾಣಿಸಿಕೊಳ್ಳುತ್ತಾನೆ.

   ಆ. ಎರಡೂ ವಿವರಗಳು ಸಹ ಶಿಷ್ಯರ ಭವಿಷ್ಯತ್ತಿನ ಸೇವೆ ಮತ್ತು ಪಾಪಪರಿಹಾರಕ್ಕಾಗಿನ ಅವರ ಸುವಾರ್ತೆ ಸಾರೋಣದ ವಿಶಾಲವಾದ ಹಿನ್ನಲೆಯಲ್ಲಿವೆ.

   ಇ. ಲೂಕ ಮತ್ತು ಯೋಹಾನರಿಬ್ಬರೂ ಪವಿತ್ರಾತ್ಮನ ಬಗ್ಗೆ ಹೇಳಿದರೂ, ಅದನ್ನು ವಿಭಿನ್ನವಾದ ರೀತಿಯಲ್ಲಿ ಹೇಳುತ್ತಾರೆ.

   ಈ. ಲೂಕನು ಮಾತ್ರ ಹೇಳುವ ಮಾಹಿತಿ:

   - ಯೇಸುವು ಕಾಣಿಸಿಕೊಂಡಾಗ ಶಿಷ್ಯರು ಹೆದರಿದರು. ಆತನು ಭೂತವೆಂಬುದಾಗಿ ಅವರು ಯೋಚಿಸಿದರು.
   - ಯೇಸು ಅವರಿಗೆ ತನ್ನನ್ನು ಮುಟ್ಟಿನೋಡಿ ತಾನು ಭೂತವಲ್ಲವೆಂಬುದನ್ನು ತಿಳಿದುಕೊಳ್ಳಿರಿ ಎಂದು ಹೇಳಿದನು.
   - ಯೇಸು ಆಹಾರವನ್ನು (ಊಟ) ಕೇಳುವುದು
   - ಯೇಸುವಿನ ಮರಣ ಮತ್ತು ಪುನರುತ್ಥಾನದ ಕುರಿತ ಪ್ರವಾದನಾತ್ಮಕ ನೆರವೇರಿಕೆಯ ಮೇಲೆ ಪ್ರಾಧಾನ್ಯತೆ
   - ಪವಿತ್ರಾತ್ಮನ ಶಕ್ತಿಯನ್ನು (ಬಲ) ಹೊಂದುವವರೆಗೆ ಯೆರೂಸಲೇಮಿನಲ್ಲಿ ಕಾಯಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳುವುದು.
   - ಸಾಕ್ಷಿಯಾಗಿರಬೇಕೆಂದು ಶಿಷ್ಯರಿಗೆ ಆದೇಶಿಸುವುದು.

   ಉ. ಯೋಹಾನನು ಮಾತ್ರ ಕೊಡುವ ಮಾಹಿತಿ:

   - ಶಿಷ್ಯರು ಯೆಹೂದಿ ನಾಯಕರಿಗೆ ಹೆದರಿಕೊಂಡಿದ್ದರಿಂದ ಮನೆಯ ಬಾಗಿಲುಗಳನ್ನು ಮುಚ್ಚಲಾಗಿತ್ತು.
   - ಕಳುಹಿಸುವದರೊಂದಿಗೆ ಶಿಷ್ಯರಿಗೆ ಆದೇಶಿಸುವುದು
   - ಶಿಷ್ಯರ ಮೇಲೆ ಊದಿ "ಪವಿತ್ರಾತ್ಮನನ್ನು ತೆಗೆದುಕೊಳ್ಳಿರಿ" ಎಂದು ಹೇಳುವುದು
   - ತೋಮನು ಇಲ್ಲದಿರುವುದು ಮತ್ತು ಯೇಸುವು ಮರಣದಿಂದ ಎದ್ದು ಬಂದಿದ್ದಾನೆಂಬುದನ್ನು ನಂಬುವುದಕ್ಕಿಂತ ಮೊದಲು ಬಲವಾದ ಪುರಾವೆ/ಸಾಕ್ಷಿ ಕಾಣಬೇಕೆಂದು ಬಯಸುವುದು

2. ಯೇಸು ಯೋಹಾನ 20:22 ರಲ್ಲಿ ಶಿಷ್ಯರ ಮೇಲೆ ಊದುವುದನ್ನು ಐವತ್ತು ದಿನಗಳ ತರುವಾಯ ಪಂಚಾಶತ್ತಮ ದಿನದಂದು ಆಗಲಿರುವ ಸಂಗತಿಯ ಒಂದು ಪೂರ್ವ ನಿರೀಕ್ಷಣೆಯೆಂಬುದಾಗಿ ಅರ್ಥೈಸಿಕೊಳ್ಳಬಹುದು (ನೋಡಿ ಅ.ಕೃ. ಅಧ್ಯಾಯ 2).
3. ತನ್ನ ಶಿಷ್ಯರು ಜನರ ಪಾಪಗಳನ್ನು ಕ್ಷಮಿಸುವುದರ ಕುರಿತಾದ ಯೇಸುವಿನ ಹೇಳಿಕೆ (ಯೋಹಾನ 20:21-23): ಯೋಹಾನ 20:23 ರ ಮೇಲಿನ ಟಿಪ್ಪಣಿ ನೋಡಿರಿ
4. –



### 5. ಉತ್ತರಗಳು: ಯೇಸು ತೋಮನಿಗೆ ಕಾಣಿಸಿಕೊಂಡದ್ದು, ಯೋಹಾನ 20:26-29

**ಪ್ರಶ್ನೆಗಳಿಗೆ ಉತ್ತರಗಳು**

1. ವಾಕ್ಯಭಾಗದ ಸಂದರ್ಭ (ವ. 26): ಯೇಸುವಿನ ಶಿಷ್ಯರು ಮತ್ತೊಮ್ಮೆ ಬಾಗಿಲು ಮುಚ್ಚಿದ್ದ ಕೋಣೆಯೊಳಗಿದ್ದರು. ಅದು ಒಂದು ವಾರದ ತರುವಾಯವಾಗಿತ್ತು, ಮತ್ತು ಈ ವೇಳೆ ತೋಮನು ಸಹ ಇದ್ದನು.
2. ಬಾಗಿಲುಗಳು ಮುಚ್ಚಿದ್ದರೂ ಸಹ ಯೇಸು ಅಸಾಮಾನ್ಯವಾದ ರೀತಿಯಲ್ಲಿ ಪ್ರತ್ಯಕ್ಷನಾಗುತ್ತನೆ (ವ. 26).
3. ಪುನಃ ಯೇಸು ತನ್ನ ಶಿಷ್ಯರಿಗೆ ನಿಮಗೆ ಸಮಾಧಾನವಾಗಲಿ ಎಂದು ವಂದಿಸುತ್ತಾನೆ (ವ. 26).
4. ಯೇಸು ತೋಮನ ಬಳಿ ಎರಡು ಸಂಗತಿಗಳನ್ನು ಕೇಳಿಕೊಳ್ಳುತ್ತಾನೆ (ವ. 27):
    a. ಆತನ ಬೆರಳನ್ನು ಚಾಚಿ ಕೈಯನ್ನು ಮತ್ತು ಗಾಯಗಳನ್ನು ಮುಟ್ಟಿನೋಡೆಂದು ಹೇಳುತ್ತಾನೆ.
    b. ನಂಬದವನಾಗಿರದೆ ನಂಬುವವನಾಗು ಎಂದು ಹೇಳುತ್ತಾನೆ.
5. ಯೇಸುವಿನ ಕೋರಿಕೆಗೆ ತೋಮನು ನನ್ನ ಸ್ವಾಮಿ, ನನ್ನ ದೇವರು ಎಂದು ಹೇಳಿ ಯೇಸುವನ್ನು ಆರಾಧಿಸುತ್ತಾನೆ (ವ. 28).
6. ಈ ವಾಕ್ಯಭಾಗದ ಕೊನೆಯಲ್ಲಿ ಯೇಸು ನೋಡದೆ ನಂಬುವವರು "ಧನ್ಯರು" ಎಂದು ಹೇಳುತ್ತಾನೆ (ವ. 29). ಹೀಗೆ ಇಂದು ನೋಡದೆ ಯೇಸುವನ್ನು ನಂಬುವವರಾದ ನಮ್ಮನೆಲ್ಲ "ಧನ್ಯ" ರೆಂದು ಕರೆಯುತ್ತಾನೆ.

**ಆಲೋಚಿಸಿರಿ ಮತ್ತು ಚರ್ಚಿಸಿರಿಟಿಪ್ಪಣಿಗಳು**

1. –
2. –



## 6. ಉತ್ತರಗಳು: ಗಲಿಲಾಯದ ಸಮುದ್ರದ ಬಳಿಯಲ್ಲಿ, ಯೋಹಾನ 21:1-24

**ಪ್ರಶ್ನೆಗಳಿಗೆ ಉತ್ತರಗಳು**

1. ಪುನರುತ್ಥಾನದ ನಂತರದ ಯೇಸುವಿನ ಪ್ರತ್ಯಕ್ಷತೆಯು ಗಲಿಲಾಯ ಸಮುದ್ರದ ಬಳಿಯಲ್ಲಿ ಸಂಭವಿಸುತ್ತದೆ. ರಾತ್ರಿ ವೇಳೆಯಲ್ಲಿ ಯೇಸುವಿನ ಏಳು ಮಂದಿ ಶಿಷ್ಯರು ಮೀನು ಹಿಡಿಯುವುದಕ್ಕಾಗಿ ಹೊರಟು ಹೋದರು ಮತ್ತು ಅವರು ಮರುದಿನ ಮುಂಜಾನೆ ತೀರಕ್ಕೆ ಹಿಂತಿರುಗುವಾಗ ಯೇಸು ಪ್ರತ್ಯಕ್ಷನಾಗುತ್ತಾನೆ (ವ. 1-4).
2. ಆ ರಾತ್ರಿ ಸೀಮೋನ ಪೇತ್ರನು ಮೀನು ಹಿಡಿಯುವುದಕ್ಕಾಗಿ ಮುಂದಾದನು (ವ. 3).
3. ಆ ರಾತ್ರಿ ವೇಳೆ ಏಳು ಶಿಷ್ಯರಿಗೆ ಒಂದೂ ಮೀನನ್ನು ಹಿಡಿಯಲಾಗಲಿಲ್ಲ (ವ. 3)
4. ಮರುದಿನ ಬೆಳಿಗ್ಗೆ ಬೆಸ್ತರು ಹಿಂತಿರುಗುವಾಗ ಯೇಸು ದಡದಲ್ಲಿ ನಿಂತುಕೊಂಡಿದ್ದನು (ವ. 4).
5. ಯೇಸು ಅವರಿಗೆ ಏನಾದರೂ ಸಿಕ್ಕೀತೇ ಎಂದು ಕೇಳಲು ಅವರು ಇಲ್ಲ ಎಂದಾಗ, ಆತನವರಿಗೆ ದೋಣಿಯ ಬಲಗಡೆಯಲ್ಲಿ ಬಲೆಯನ್ನು ಬೀಸಿರಿ ಎಂದು ಹೇಳುತ್ತಾನೆ (ವ. 5-6).
6. ಶಿಷ್ಯರು ಎದುರಿಸಿದ ಸಮಸ್ಯೆಯೇನೆಂದರೆ – ಮೀನುಗಳು ಬಹಳವಾಗಿ ಸಿಕ್ಕಿದ್ದರಿಂದ ಬಲೆಯನ್ನು ಎಳೆಯಲು ಆಗದೆ ಹೋಯಿತು (ವ. 6).
7. ದಡದಲ್ಲಿ ನಿಂತಿರುವಾತನು ಯೇಸುವಾಗಿದ್ದಾನೆಂದು ಯೋಹಾನನು ಪೇತ್ರನಿಗೆ ಹೇಳಿದ್ದರಿಂದ ಪೇತ್ರನು ದೋಣಿಯನ್ನು ಬಿಟ್ಟುಹೋಗುತ್ತಾನೆ (ವ. 7).
8. ಉಳಿದ ಬೆಸ್ತರು ಮೀನು ತುಂಬಿದ ಬಲೆಯನ್ನು ಎಳೆಯುತ್ತಾ ದೋಣಿಯಲ್ಲಿ ದಡಕ್ಕೆ ಬಂದರು (ವ. 8).
9. ಯೇಸು ದಡದ ಮೇಲೆ ಬೆಂಕಿಯಲ್ಲಿ ಮೀನನ್ನು ರೊಟ್ಟಿಯನ್ನು ಸುಟ್ಟುಕೊಂಡು ನಿಂತುಕೊಂಡಿದ್ದನು (ವ. 9).
10. ಆಗಷ್ಟೇ ಅವರು ಹಿಡಿದ ತಾಜಾ ಮೀನುಗಳನ್ನು ಯೇಸುವಿಗೆ ತಂದುಕೊಡುವುದಕ್ಕಾಗಿ ಪೇತ್ರನು ದೋಣಿಗೆ ಹಿಂತಿರುಗಿದನು (ವ. 10-11).
11. ಬಲೆಯು ಹರಿಯದೇ ಇರುವುದು ಆಶ್ಚರ್ಯವೆನಿಸಿತ್ತು. ಮೀನುಗಳು ಬಹಳವಾಗಿ ಸಿಕ್ಕಿದ್ದರಿಂದ ಬಲೆಯು ಹರಿದು ಹೋಗುತ್ತದೆಂಬುದಾಗಿ ಅವರೆಣಿಸಿದ್ದರು (ವ. 11).
12. ಯೇಸು ಶಿಷ್ಯರಿಗೆ ಬಂದು ಊಟಮಾಡಿರಿ ಎಂದು ಹೇಳುತ್ತಾನೆ (ವ. 12).
13. ಯೇಸು ರೊಟ್ಟಿ ಮತ್ತು ಮೀನನ್ನು ಶಿಷ್ಯರಿಗೆ ತಿನ್ನಲು ಕೊಟ್ಟನು (ವ. 13).
14. ಊಟ ಮಾಡಿದ ಮೇಲೆ ಯೇಸು ಪೇತ್ರನಿಗೆ ಮೂರು ಪ್ರಶ್ನೆಗಳನ್ನು ಕೇಳುತ್ತಾನೆ. ಪ್ರತಿ ಬಾರಿ ಸಹ ಆತನು ಪೇತ್ರನಿಗೆ ನೀನು ನನ್ನನ್ನು ಪ್ರೀತಿಸುತ್ತೀಯಾ ಎಂದು ಕೇಳುತ್ತಾನೆ (ವ. 15-17).
15. ಯೇಸುವಿನ ಪ್ರಶ್ನೆಗೆ ಪೇತ್ರನು ಪ್ರತಿಬಾರಿ ಸಹ ಯೇಸುವಿಗಾಗಿನ ತನ್ನ ಪ್ರೀತಿಯನ್ನು ದೃಢಪಡಿಸಿದನು (ವ. 15-17).
16. ಸಭೆಯನ್ನು ನೋಡಿಕೊಳ್ಳುವ ಕೆಲಸವನ್ನು ಯೇಸು ಪೇತ್ರನಿಗೆ ಕೊಟ್ಟನು. ಯೇಸು ಇದನ್ನು "ನನ್ನ ಕುರಿಮರಿಗಳನ್ನು ಮೇಯಿಸು" "ನನ್ನ ಕುರಿಗಳನ್ನು ಕಾಯಿ" ಮತ್ತು "ನನ್ನ ಕುರಿಗಳನ್ನು ಮೇಯಿಸು" ಎಂದು ರೂಪಾಲಂಕಾರಗಳಿಂದ ವ್ಯಕ್ತಪಡಿಸುತ್ತಾನೆ (ವ. 15-17).
17. ಪೇತ್ರನ ಭವಿಷ್ಯವು ಸಭೆಗಾಗಿ ಬಾಧೆಪಟ್ಟು ಸಾಯುವುದಾಗಿದೆ ಎಂದು ಯೇಸು ಹೇಳುತ್ತಾನೆ. ಯೇಸು ಇದನ್ನು ರೂಪಾಲಂಕಾರಗಳಿಂದ ತಿಳಿಸುತ್ತಾನೆ ("ಮತ್ತೊಬ್ಬನು ನಿನ್ನ ನಡುವನ್ನು ಕಟ್ಟಿಕೊಂಡು ನಿನಗೆ ಇಷ್ಟವಿಲ್ಲದ ಕಡೆಗೆ ನಿನ್ನನ್ನು ತೆಗೆದುಕೊಂಡು ಹೋಗುವನು). ಈತನು ರಕ್ತಸಾಕ್ಷಿಯಾಗುವುದರ ಮೂಲಕ ದೇವರನ್ನು ಘನಪಡಿಸುವನೆಂಬುದಾಗಿ ಯೋಹಾನನು ಸೇರಿಸುತ್ತಾನೆ (ವ. 18-19).

18. ವಚನ 20 ರಲ್ಲಿ ಯೋಹಾನನು ತನ್ನ ಬಗ್ಗೆ "ಯೇಸುವಿಗೆ ಪ್ರಿಯನಾಗಿದ್ದ ಶಿಷ್ಯನು" ಎಂಬುದಾಗಿ ಹೇಳುತ್ತಾನೆ. ಈತನು ಕಡೇ ಭೋಜನದ ವೇಳೆ ಯೇಸುವನ್ನು ಹಿಡಿದುಕೊಡುವವನು ಯಾರೆಂಬುದಾಗಿ ಕೇಳಿದವನಾಗಿದ್ದನು.

19. ಪೇತ್ರನನ್ನು ಮರುಸ್ಥಾಪಿಸಲು/ಬಲಪಡಿಸಲು ಯೇಸುವು ಎರಡು ಬಾರಿ "ನನ್ನನ್ನು ಹಿಂಬಾಲಿಸು" ಎಂಬ ಪದವನ್ನು ಉಪಯೋಗಿಸುತ್ತಾನೆ (ವ. 19, 22).

20. ಯೇಸು ಪೇತ್ರನಿಗೆ ಯೋಹಾನನ ಬಗ್ಗೆ ತಲೆಕೆಡಿಸಿಕೊಳ್ಳಬೇಡ. ಬದಲಾಗಿ ಯೇಸುವನ್ನು ಹಿಂಬಾಲಿಸುವ ನಿನ್ನ ಕಾರ್ಯದ ಮೇಲೆ ಮಗನಹರಿಸು ಎಂದು ಹೇಳುತ್ತಾನೆ (ವ. 21-22).

21. ಯೋಹಾನನ ಬಗ್ಗೆ ಆದಿಸಭೆಯಲ್ಲಿ ಈತನು ಸಾಯುವುದಿಲ್ಲ, ಯೇಸುವು ಬರುವವರೆಗೂ ಈತನು ಇರುವನು ಎಂಬ ಸುದ್ದಿ ಹಬ್ಬಿತು (ವ. 23).

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ದಡದ ಮೇಲಿದ್ದವನು ಯೇಸುವೇ ಎಂದು ಯೋಹಾನನು ತಿಳಿದುಕೊಳ್ಳಲು ಒಂದಕ್ಕಿಂತ ಹೆಚ್ಚು ಕಾರಣಗಳಿವೆ (ವ 4-7):

   ಅ. ಬಹುಶಃ ಈ ಅದ್ಭುತವು ಕೆಲ ವರ್ಷಗಳ ಹಿಂದೆ ಯೇಸುವು ಆತನನ್ನು ಮತ್ತು ಆತನ ಸಂಗಡಿಗರನ್ನು ತನ್ನನ್ನು ಹಿಂಬಾಲಿಸಿ, ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುತ್ತೇನೆಂದು ಹೇಳಿದಾಗ ಅದ್ಭುತವಾಗಿ ಮೀನುಗಳು ಸಿಕ್ಕ ನಿದರ್ಶವನ್ನು ನೆನಪಿಸಿರಬಹುದು (ನೋಡಿ ಲೂಕ 5:1-11)

   ಆ. ಬಹಳವಾಗಿ ಮೀನು ಸಿಕ್ಕ ಅದ್ಭುತವು ಯೋಹಾನನಿಗೆ ಯೇಸುವು ಬಹುದೊಡ್ಡ ಜನರ ಗುಂಪಿಗೆ ಊಟಮಾಡಿಸಿದ ಸಮಯವನ್ನು ನೆನಪಿಗೆ ತಂದಿರಬಹುದು (ನೋಡಿ ಮಾರ್ಕ 6:30-44 ಮತ್ತು 8:1-9).

   ಇ. ಯೇಸುವು ಅವರ ಬಗ್ಗೆ ಕಾಳಜಿ ತೋರಿದ ರೀತಿಯು ಯೋಹಾನನಿಗೆ ಯೇಸುವು ಜನರೊಂದಿಗೆ ನಡಕೊಂಡ ರೀತಿ ಮತ್ತು ಅವರಿಗಾಗಿ ಆತನು ತೋರಿಸಿದ ಕಾಳಜಿಯನ್ನು ಜ್ಞಾಪಕಕ್ಕೆ ತಂದಿರಬಹುದು.

   ಈ. ಯೇಸುವು ಅವರನ್ನು ಸಂಭೋಧಿಸಿದ/ಕರೆದ ರೀತಿ("ಮಕ್ಕಳಿರಾ")ಯು ಯೇಸು ಅವರೊಂದಿಗೆ ಹೇಗೆ ಮಾತಾಡುತ್ತಿದ್ದನೆಂಬುದನ್ನು ಯೋಹಾನನು ನೆನಪಿಸಿಕೊಂಡಿರಬಹುದು (ಹೋಲಿಸಿ ಯೋಹಾನ 13:33).

2. ಮೀನು ಹಿಡಿಯುವದರ ಕುರಿತಾದ ಕಥೆಯ ವಿಭಿನ್ನ ಹಂತಗಳಲ್ಲಿ ಪೇತ್ರನು ಈ ರಿತಿಯಾಗಿ ಭಾವಿಸಿರಬಹುದು (ವ. 1-14):

   ಅ. ನಿರ್ದೇಶನದ ಕೊರತೆ (ವ. 2-3): ತಿರುಗಿ ಅವರು ಗಲಿಲಾಯಕ್ಕೆ ಹೋದರು. ಯೇಸು ಹೊರಟು ಹೋದನು. ಸೇವೆಯು ಮುಕ್ತಾಯವಾಯಿತು. ಹಾಗಾಗಿ ಪೇತ್ರನು ತಿರುಗಿ ಮೀನು ಹಿಡಿಯಲು ಹೊರಟನು.

   ಆ. ಹತಾಶೆ (ವ. 3): ಇಡೀ ರಾತ್ರೆಯೆಲ್ಲಾ ಪ್ರಯಾಸಪಟ್ಟರೂ ಯಾವುದೇ ಮೀನು ಸಿಕ್ಕಲಿಲ್ಲ.

   ಇ. ಕುತೂಹಲ (ವ. 4-5): ದಡದ ಮೇಲೆ ನಿಂತುಕೊಂಡು ಮೀನು ಸಿಕ್ಕಿತಾ ಎಂದು ಕೇಳಿ, ದೋಣಿಯ ಬಲಗಡೆಯಲ್ಲಿ ಬಲೆಯನ್ನು ಹಾಕಿರಿ ಎಂದು ಹೇಳಿದ ಈ ವ್ಯಕ್ತಿ ಯಾರು?

   ಈ. ಅಘಾತ ಮತ್ತು ಅಚ್ಚರಿ (ವ. 6): ಅಧಿಕ ಪ್ರಮಾಣದಲ್ಲಿ ಮೀನು ಸಿಕ್ಕಿದ್ದು ನಿಜವಾಗಲೂ ಬೆರಗುಗೊಳಿಸುವಂತದ್ದಾಗಿತ್ತು.

   ಉ. ಉತ್ಸಾಹ (ವ. 7): ಯೋಹಾನನು ಇತರರಿಗೆ ದಡದ ಮೇಲೆ ನಿಂತಿರುವಾತನು ಯೇಸುವೇ ಎಂದು ಹೇಳಿದನು. ಆತನನ್ನು ಸಂಧಿಸಬೇಕೆಂಬ ಆತುರದಿಂದ ಪೇತ್ರನು ದಡಕ್ಕೆ ಈಜಿ ಹೋಗಲು ಸಮುದ್ರಕ್ಕೆ ಜಿಗಿದನು.

   ಊ. ಅಪೇಕ್ಷೆ (ವ. 9-11): ಯೇಸುವು ಊಟವನ್ನು ಸಿದ್ಧಪಡಿಸುತ್ತಾ ದಡದ ಮೇಲೆ ನಿಂತುಕೊಂಡು ಪೇತ್ರನಿಗೆ ಕೆಲ ತಾಜಾ ಮೀನುಗಳನ್ನು ತೆಗೆದುಕೊಂಡು ಬಾ ಎಂದು ಹೇಳಿದನು.

   ಋ. ನಾಚಿಕೆ (ವ. 12): ಸತ್ತವರೊಳಗಿಂದ ಎದ್ದು ಬಂದ ವ್ಯಕ್ತಿಯೊಂದಿಗೆ ಊಟ ಮಾಡುವುದು ಹೇಗೆ? ಆತನು ನಿಜವಾಗಲೂ ಯೇಸು ಆಗಿರುವನಾ ಅಥವಾ ನಾವು ಆತನ ಆತ್ಮದೊಂದಿಗೆ ವ್ಯವಹರಿಸುತ್ತಿದ್ದೇವಾ?

ಎ. ನಿರೀಕ್ಷೆ (ವ. 13): ಯೇಸು ಅವರನ್ನು ಊಟಕ್ಕೆ ಕರೆದನು. ಪೇತ್ರನು ಯೇಸುವನ್ನು ಶಿಲುಬೆಗೇರಿಸುವ ದಿನ ಆತನನ್ನು ಅಲ್ಲಗಳೆದರೂ ಬಹುಶಃ ಈಗ ಪುನಃ ಎಲ್ಲವೂ ಸರಿಯಾಯಿತು.

3. ನೀನು ನನ್ನನ್ನು ಪ್ರೀತಿಸುತ್ತೀಯಾ ಎಂದು ಯೇಸು ಪೇತ್ರನನ್ನು ಮೂರು ಬಾರಿ ಕೇಳುತ್ತಾನೆ. ಪೇತ್ರನಿಗೆ ಒಂದು ಬಾರಿ ಕೇಳಿದರೆ ಸಾಕಾಗುವದಿಲ್ಲವೆಂದು ಯೇಸು ತಿಳಿದಿದ್ದನು. ಯಾಕೆಂದರೆ ಈ ಹಿಂದೆ ಪೇತ್ರನು ಯೇಸುವನ್ನು ಮೂರು ಬಾರಿ ಅಲ್ಲಗಳೆದಿದ್ದನು. ಈಗ ಆತನು ಯೇಸುವಿಗಾಗಿನ ತನ್ನ ಪ್ರೀತಿಯನ್ನು ಮೂರು ಬಾರಿ ತಿಳಿಸಬೇಕಾಗಿತ್ತು.

4. ಆದಿಸಭೆಯಲ್ಲಿ ಯೋಹಾನನು ಸಾಯುವುದಿಲ್ಲವೆಂಬ ಸುದ್ದಿ ಹಬ್ಬಿತ್ತು. ಈ ಸುದ್ದಿಯು ಯಾರೋ ಪೇತ್ರ ಮತ್ತು ಯೋಹಾನರ ನಡುವಿನ ಸಂಭಾಷಣೆಯನ್ನು ಕದ್ದು ಕೇಳಿಸಿಕೊಂಡು ಅತಿಯಾಗಿ ಅರ್ಥವಿವರಣೆ ಮಾಡುವುದರಿಂದ ಹಬ್ಬಿತು. ಆಗಷ್ಟೇ ಯೇಸುವು ಪೇತ್ರನಿಗೆ ನಿನ್ನ ಭವಿಷ್ಯವು ಬಾಧೆಪಟ್ಟು ರಕ್ತಸಾಕ್ಷಿಯಾಗಿರುವುದಾಗಿರುತ್ತದೆಂಬುದಾಗಿ ಹೇಳಿದ್ದನು. ಅಲ್ಲಯೇ ಯೋಹಾನನು ನಿಂತುಕೊಂಡಿದ್ದನು, ಹಾಗಾಗಿ ಪೇತ್ರನು ಯೇಸುವಿನ ಬಳಿ ಯೋಹಾನನ ಭವಿಷ್ಯವೇನೆಂಬುದಾಗಿ ಕೇಳಿದನು. ಆಗ ಯೇಸು ನಿನ್ನ ಕೆಲಸ ನೀನು ನೋಡಿಕೋ ಎಂದು ಆತನಿಗೆ ಹೇಳಿದನು. ಒಂದು ವೇಳೆ ತಾನು ಬರುವವರೆಗೂ ಯೋಹಾನನು ಜೀವಂತವಾಗಿರಬೇಕೆಂದು ಯೇಸು ಬಯಸಿದ್ದರೆ ಅದು ಪೇತ್ರನ ಕಾಳಜಿಯಾಗಿರಲಿಲ್ಲ. ಹೀಗೆ ಯೇಸು ಎಂದೂ ಸಹ ತನ್ನ ಬರೋಣದವರೆಗೂ ಯೋಹಾನನು ಬದುಕಿರುವನೆಂಬುದಾಗಿ ಹೇಳಲಿಲ್ಲ. ಆದರೆ ಅದೊಂದು ಸುಳ್ಳುಸುದ್ದಿಯಾಗಿದೆ.



## 7. ಉತ್ತರಗಳು: ಮಹಾ ಆಜ್ಞೆ (ಆದೇಶ), ಮತ್ತಾಯ 28:16-20

**ಪ್ರಶ್ನೆಗಳಿಗೆ ಉತ್ತರಗಳು**

1. ಈ ಕಥೆಯು ಗಲಿಲಾಯದಲ್ಲಿನ ಒಂದು ಬೆಟ್ಟದ ಮೇಲೆ ಸಂಭವಿಸುತ್ತದೆ (ವ. 16).
2. ಯೇಸುವನ್ನು ಬೆಟ್ಟದ ಮೇಲೆ ಕಂಡಾಗ ಶಿಷ್ಯರು ಆತನಿಗೆ ಅಡ್ಡಬಿದ್ದರು. ಆದರೆ ಕೆಲವರು ಸಂದೇಹಪಟ್ಟರೆಂಬುದಾಗಿ ಮತ್ತಾಯನು ಹೇಳುತ್ತಾನೆ (ವ. 17).
3. ಪರಲೋಕದಲ್ಲಿಯೂ, ಭೂಲೋಕದಲ್ಲಿಯೂ ತನಗೆ ಎಲ್ಲಾ ಅಧಿಕಾರವು ಕೊಡಲ್ಪಟ್ಟಿದೆ ಎಂಬುದಾಗಿ ಯೇಸು ಹೇಳುತ್ತಾನೆ (ವ. 18).
4. ಯೇಸು ತನ್ನ ಶಿಷ್ಯರಿಗೆ ಹೊರಟು ಹೋಗಿ ಎಲ್ಲಾ ದೇಶದ ಜನರನ್ನು ತನ್ನ ಶಿಷ್ಯರನ್ನಾಗಿ ಮಾಡಬೇಕೆಂದು ಹೇಳುತ್ತಾನೆ (ವ. 19). ಹೀಗಾಗಿ ಸಭೆಯ ಸೇವೆಯು ಜಾಗತಿಕವಾದುದ್ದಾಗಿದೆ. ಪ್ರಕಟನೆ ಪುಸ್ತಕದಲ್ಲಿನ ಯೋಹಾನನ ದರ್ಶನದೊಂದಿಗೆ ಹೋರಿಸಿರಿ. ಅಲ್ಲಿ ಆತನು ಯಾರಿಂದಲೂ ಎಣಿಸಲಾಗದಂಥ ಸಕಲ ಜನಾಂಗ, ಕುಲ ಪ್ರಜೆಗಳೂ, ಸಕಲ ಭಾಷೆಗಳನ್ನಾಡುವ ಒಂದು ಮಹಾಸಮೂಹವನ್ನು ನೋಡುತ್ತಾನೆ (ಪ್ರಕಟಣೆ 7:9).
5. ಮಹಾ ಆಜ್ಞೆಯಲ್ಲಿ/ಆದೇಶದಲ್ಲಿ ಯೇಸುವು ತ್ರೈಯೇಕ ದೇವರನ್ನು ಸಂಭೋದಿಸುತ್ತಾನೆ: ಸಭೆಗೆ ಜನರನ್ನು ತಂದೆ, ಮಗ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಕೊಡಬೇಕೆಂದು ಆದೇಶಿಸಲಾಗಿದೆ (ವ. 19).
6. ಯೇಸು ತನ್ನ ಶಿಷ್ಯರಿಗೆ ತಾನು ಅವರೊಂದಿಗೆ ಎಲ್ಲಾ ದಿವಸ ಇರುತ್ತೇನೆಂಬುದಾಗಿ ವಾಗ್ದಾನ ಮಾಡುತ್ತಾನೆ (ವ. 20).

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ಯೇಸುವಿನ ಕೆಲ ಶಿಷ್ಯರು ಸಂದೇಹಪಟ್ಟರು (ವ. 17):

   ಅ. ಯೇಸುವಿನ ಪುನರುತ್ಥಾನದ ನಂತರ ಅವರೆಲ್ಲರು ಯೆರೂಸಲೇಮಿನಲ್ಲಿ ಆತನನ್ನು ಕಂಡಾಗ್ಯೂ ಆತನು ನಿಜವಾಗಲೂ ಸತ್ತವರೊಳಗಿಂದ ಎದ್ದು ಬಂದಿರುವನಾ ಎಂಬುದಾಗಿ ಅವರು ಸಂದೇಹಪಟ್ಟರು. ಆದರೆ ಅದು ಇನ್ನೂ ಸಹ ನಿಜವಲ್ಲವೆಂಬುದಾಗಿ ತೋರುತ್ತದೆ. ಯೇಸು ನಿಜವಾದ ವ್ಯಕ್ತಿಯಾಗಿದ್ದಾನಾ ಅಥವಾ ಆತನೊಬ್ಬ ಭೂತ ಅಥವಾ ಒಂದು ಆತ್ಮವಾಗಿದ್ದಾನಾ?

   ಆ. ಬಹುಶಃ ಅವರು ಆತನ ಗುರುತಿನ ಬಗ್ಗೆ ಸಂದೇಹಪಟ್ಟಿರಬಹುದು. ಆತನು ನಿಜವಾಗಲೂ ದೇವರಾಗಿದ್ದನಾ? ಆತನಿಗೆ ಆ ರೀತಿಯಲ್ಲಿ ಅಡ್ಡಬೀಳುವದು ಸಮರ್ಪಕವಾಗಿತ್ತ?

   ಇ. ಬಹುಶಃ ಅವರು ಆತನ ರಾಜ್ಯದ ಬಗ್ಗೆ ಸಂದೇಹಪಟ್ಟಿರಬಹುದು ಮತ್ತು ಈಗ ತಮ್ಮ ದೇಶಕ್ಕೆ ಏನಾಗಲಿದೆ ಎಂಬುದರ ಬಗ್ಗೆ ಅಚ್ಚರಿಗೊಂಡಿರಬಹುದು. ಯೇಸುವು ಪ್ಯಾಲೆಸ್ತೇನಿನಿಂದ ರೋಮನ್ ಅಧಿಕಾರವನ್ನು ಕಿತ್ತೊಗೆದು ಅರಸನಾದ ದಾವೀದನ ರಾಜ್ಯದಂತಹ ಒಂದು ಯೆಹೂದಿ ರಾಜ್ಯವನ್ನು ಸ್ಥಾಪಿಸುವನಾ? ಅಥವಾ ಯೇಸುವಿನ ರಾಜ್ಯವು ಒಂದು ಇಭಿನ್ನವಾದ ರಾಜ್ಯವಾಗಿದೆಯಾ? ಹಾಗಿದ್ದಲ್ಲಿ ಅವರು ಯಾವ ರೀತಿಯ ರಾಜ್ಯವನ್ನು ನಿರೀಕ್ಷಿಸಬೇಕಾಗಿದೆ?

2. ಮಹಾ ಆಜ್ಞೆ (ಆದೇಶ) ಪ್ರಕಾರ ಶಿಷ್ಯತ್ವವು ಎರಡು ಹಂತಗಳನ್ನು ಒಳಗೊಂಡಿದೆ (ವ. 18-20):

   ಅ. ದೇವರ ಕಡೆಗೆ ತಿರುಗಿಕೊಂಡು ಸುವಾರ್ತೆಯನ್ನು ಅಂಗೀಕರಿಸಿದವರಿಗೆ ದೀಕ್ಷಾಸ್ನಾನ ಮಾಡಿಸುವುದು

   ಆ. ದೀಕ್ಷಾಸ್ನಾನ ತೆಗೆದುಕೊಂಡವರಿಗೆ ಕ್ರೈಸ್ತೀಯ ನಂಬಿಕೆ ಮತ್ತು ಜೀವನದ ಬಗ್ಗೆ ಉಪದೇಶಿಸುವುದು. ದೇವರ ರಾಜ್ಯದ ಪ್ರಜೆಗಳಾದ ನಾವು ಈ ಲೋಕದಲ್ಲಿ ಹೇಗೆ ಜೀವಿಸುವುದು?

3. ತಾನು ಬಹುಬೇಗನೆ ಅವರನ್ನು ಬಿಟ್ಟು ಪರಲೋಕದಲ್ಲಿರುವ ತಂದೆಯ ಬಳಿಗೆ ಹೋಗುತ್ತಿದ್ದರೂ ಯೇಸು ಯಾವಾಗಲೂ ತನ್ನ ಶಿಷ್ಯರೊಂದಿಗೆ ಇರುವೆನೆಂಬುದಾಗಿ ವಾಗ್ದಾನ ಮಾಡುತ್ತಾನೆ (ನೋಡಿ ಲೂಕ 24:50-51). ಪವಿತ್ರಾತ್ಮನ ಮೂಲಕ ತನ್ನ ಪ್ರಸನ್ನತೆಯು ಅವರೊಂದಿಗೆ ಇರುವುದೆಂಬುದನ್ನು ಯೇಸು ಸೂಚಿಸುತ್ತಿದ್ದಾನೆ.

4. ನಿಮ್ಮ ಸಭೆಯು ಮಹಾ ಆಜ್ಞೆಯನ್ನು ನೆರವೇರಿಸುತ್ತದಾ? ಈ ರೀತಿಯ ಪ್ರಶ್ನೆಗಳನ್ನು ನೀವು ಹೇಗೆ ಉತ್ತರಿಸುವಿರಿ:

ಅ. ಯಾವ ಸಮಾಜದ ಗುಂಪನ್ನು ನೀವು ಸಂಧಿಸುವಿರಿ? ಜಾತಿ? ಕುಲ? ಬಡ-ಶ್ರೀಮಂತ? ವಿಧ್ಯವಂತರಾ-ಅವಿಧ್ಯವಂತರಾ? ಯೌವನಸ್ಥರಾ-ವಯಸ್ಸಾದವರಾ? ಹಳ್ಳಿ ಜನರಾ-ನಗರದವರಾ?

ಆ. ಯಾವ ಭಾಷೆಯ ಗುಂಪನ್ನು ನೀವು ಸಂಧಿಸುವಿರಿ?

ಇ. ನಿಮ್ಮ ಜನರನ್ನು ಸಂಧಿಸುವ ಸೇವೆಯು ಎಷ್ಟು ವಿಶಾಲವಾಗಿದೆ? ಸುವಾರ್ತಾ ಕೆಲಸಗಾರರನ್ನು ನೀವು ಎಷ್ಟು ದೂರ ಕಳಿಸಿರುವಿರಿ?

ಈ. ನಿಮ್ಮ ಸಭೆಯ ಸಾಮಾಜಿಕ ಮತ್ತು ಭಾಷಾ ಸಂಯೋಜನೆ ಹೇಗಿದೆ? ನಿಮ್ಮ ಸಭೆಯು ಎಲ್ಲಾ ರೀತಿಯ ಜನರನ್ನು ಸ್ವಾಗತಿಸುತ್ತದಾ?

ಉ. ನಿಮ್ಮ ಸಭೆಯು ಮಹಾ ಆಜ್ಞೆ/ಆದೇಶದ ಬಗ್ಗೆ ಬೋಧಿಸುತ್ತದಾ? ಮತ್ತು ಪ್ರಸಂಗಿಸುತ್ತದಾ?



## 8. ಉತ್ತರಗಳು: ಯೇಸುವು ಪರಲೋಕಕ್ಕೆ ಒಯ್ಯಲ್ಪಟ್ಟದ್ದು, ಲೂಕ 24:50-53

### ಪ್ರಶ್ನೆಗಳಿಗೆ ಉತ್ತರಗಳು

1. ಯೇಸು ತನ್ನ ಶಿಷ್ಯರನ್ನು ಆಶೀರ್ವದಿಸುವಾಗ ಆತನು ಅವರನ್ನು ಬಿಟ್ಟು ಪರಲೋಕಕ್ಕೆ ಒಯ್ಯಲ್ಪಟ್ಟನು (ವ. 50-51).
2. ತಾವು ಯೆರೂಸಲೇಮಿಗೆ ಹಿಂತಿರುಗುವುದಕ್ಕಿಂತ ಮೊದಲು ಶಿಷ್ಯರು ಆಗಷ್ಟೇ ತಮ್ಮಿಂದ ಒಯ್ಯಲ್ಪಟ್ಟ ಯೇಸುವನ್ನು ಆರಾಧಿಸಿದರು.
3. ಶಿಷ್ಯರು ಯೆರೂಸಲೇಮಿಗೆ ಬಂದು ಹೆಚ್ಚಿನ ಸಮಯವನ್ನು ದೇವಾಲಯದಲ್ಲಿ ದೇವರನ್ನು ಆರಾಧಿಸುವುದರಲ್ಲಿ ಕಳೆದರು (ವ. 52).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

ಯೇಸುವಿನ ಸ್ವರ್ಗಾರೋಹಣದ ಕುರಿತು ಲೂಕನ ವಿವರ (ಲೂಕ 24:50-52) ಮತ್ತು ಮಾರ್ಕನ ಸುವಾರ್ತೆಯ ನಡುವಿನ (ಮಾರ್ಕ 16:19) ಒಂದು ಹೋಲಿಕೆ:

- ಲೂಕನ ಮಾಹಿತಿಯೂ ಸಂಕ್ಷಿಪ್ತವಾಗಿದೆ. ಆದರೆ ಮಾರ್ಕನು ಕೊಡುವ ಮಾಹಿತಿಯು ಇನ್ನೂ ಸಂಕ್ಷಿಪ್ತವಾಗಿದೆ.
- ಕೇವಲ ಲೂಕನು ಮಾತ್ರ ಸ್ವರ್ಗಾರೋಹಣವು ಬೆಥಾನ್ಯದಲ್ಲಿ ನಡೆಯುತ್ತೆ ಎಂಬುದಾಗಿ ಹೇಳುತ್ತಾನೆ.
- ಕೇವಲ ಲೂಕನು ಮಾತ್ರ ಯೇಸು ಅವರನ್ನು ಬಿಟ್ಟುಹೋಗುತ್ತಾಗ ಶಿಷ್ಯರನ್ನು ಆಶೀರ್ವದಿಸುತ್ತಾನೆಂಬುದಾಗಿ ಹೇಳುತ್ತಾನೆ.
- ಇವರಿಬ್ಬರು ಸಹ ಯೇಸುವು ಪರಲೋಕಕ್ಕೆ ಒಯ್ಯಲ್ಪಟ್ಟನೆಂಬುದಾಗಿ ತಿಳಿಸುತ್ತಾರೆ.
- ಕೇವಲ ಮಾರ್ಕನು ಮಾತ್ರ ಯೇಸುವು ದೇವರ ಬಲಗಡೆಯಲ್ಲಿ ಕೂತುಕೊಂಡನೆಂಬುದಾಗಿ ತಿಳಿಸುತ್ತಾನೆ.
- ಕೇವಲ ಲೂಕನು ಮಾತ್ರ ಶಿಷ್ಯರು ಯೇಸುವನ್ನು ಆರಾಧಿಸಿದರು ಎಂಬುದಾಗಿ ತಿಳಿಸುತ್ತಾನೆ.
- ಮಾರ್ಕನ ಸುವಾರ್ತೆಯು ಶಿಷ್ಯರು ಹೊರಟು ಹೋಗಿ ಎಲ್ಲಾ ಕಡೆಗೂ ಸುವಾರ್ತೆ ಸಾರುವುದರೊಂದಿಗೆ ಮುಕ್ತಾಯವಾಗುತ್ತದೆ.

# ಉತ್ತರಗಳು – ಮತ್ತಾಯ ಮತ್ತು ಲೂಕನ ಸುವಾರ್ತೆಯಿಂದ ಮೂವತ್ತು ಅಧ್ಯಯನಗಳು

## 1. ಉತ್ತರಗಳು: ಒಬ್ಬ ಶತಾಧಿಪತಿಯ ನಂಬಿಕೆ, ಮತ್ತಾಯ 8:5-13

### ಪ್ರಶ್ನೆಗಳಿಗೆ ಉತ್ತರಗಳು

1. ಈ ಘಟನೆಯು ನಡೆದ ಸ್ಥಳ ಗಲಿಲಾಯದಲ್ಲಿನ ಕಪೆರ್ನೌಮ್ (ವ. 5). ***ಇದನ್ನು ಯೇಸುವಿನ ಕಾಲದಲ್ಲಿನ ಪ್ಯಾಲೆಸ್ತೀನ್*** ಮತ್ತು ***ಯೇಸುವಿನ ಕಾಲದಲ್ಲಿನ ಗಲಿಲಾಯದ ನಕ್ಷೆಯಲ್ಲಿ*** ಕಾಣಬಹುದು.
2. ಶತಾಧಿಪತಿಯು ಯೇಸುವಿನ ಬಳಿ ಪಾರ್ಶ್ವವಾಯುವಿನಿಂದ ಬಳಲುತ್ತಿರುವ ತನ್ನ ಆಳನ್ನು ಗುಣಪಡಿಸಬೇಕೆಂದು ಕೇಳಿಕೊಳ್ಳುತ್ತಾನೆ (ವ. 5-6).
3. ಯೇಸುವಿನಂಥ ಅತಿಥಿಯ ಗೌರವಕ್ಕೆ ತಾನು ಯೋಗ್ಯನಲ್ಲವೆಂಬುದಾಗಿ ಭಾವಿಸಿದ ನಿಮಿತ್ತ ಶತಾಧಿಪತಿಯು ಯೇಸುವು ತನ್ನ ಮನೆಗೆ ಬರಬೇಕೆಂದು ಬಯಸಲಿಲ್ಲ (ವ. 8).
4. ಯೇಸು ಶತಾಧಿಪತಿಯ ಮಾತಿಗೆ ಆಶ್ಚರ್ಯಪಟ್ಟನು, ಯಾಕೆಂದರೆ ಆತನ ಮಾತುಗಳು ಯೇಸುವಿನ ಅಧಿಕಾರದಲ್ಲಿ ಪೂರ್ಣವಾದ ಭರವಸೆ ಮತ್ತು ಯೇಸುವು ಆತನ ಆಳನ್ನು ಗುಣಪಡಿಸಬಲ್ಲನೆಂಬ ಬಲವಾದ ನಂಬಿಕೆಯನ್ನು ಹೊಂದಿದ್ದವು (ವ. 9-10).
5. ಲೋಕದ ಎಲ್ಲಾ ಕಡೆಯಿಂದ (ಮೂಡಣ ಮತ್ತು ಪಡುವಣ ದಿಕ್ಕುಗಳಿಂದ) ಜನರು ಬಂದು ಪರಲೋಕ ರಾಜ್ಯದಲ್ಲಿನ ಊಟಕ್ಕೆ ಕೂಡ್ರುವರು ಎಂದು ಯೇಸು ಹೇಳುತ್ತಾನೆ (ವ. 11).
6. ಭವಿಷ್ಯದ ದೇವರ ರಾಜ್ಯಕ್ಕೆ ಸೇರದವರ ಗತಿಯಾದ ನರಕವನ್ನು ಯೇಸು ಅದು ಗೋಳಾಡುವ ಮತ್ತು ಕಟಕಟನೆ ಹಲ್ಲುಕಡಿಯುವಂತಹ ಮಹಾಬಾಧೆಯ ಸ್ಥಳವಾಗಿರುತ್ತದೆಂಬುದಾಗಿ ವರ್ಣಿಸುತ್ತಾನೆ (ವ. 12).
7. ಆ ಗಳಿಗೆಯಲ್ಲಿಯೇ ಶತಾಧಿಪತಿಯ ಆಳಿಗೆ ಗುಣವಾಯಿತು (ವ. 13).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಇಂದು ಕ್ರೈಸ್ತ ವಿಶ್ವಾಸಿಗಳಾದ ನಾವು ಈ ಕಥೆಯಿಂದ ಮೂರು ಸಂಗತಿಗಳನ್ನು ಕಲಿಯಬಹುದು:

   ಅ. ದೇವರ ರಾಜ್ಯವು ಸಾಂಸ್ಕೃತಿಕ ಹಿನ್ನಲೆಯನ್ನು ಲೆಕ್ಕಿಸದೆ ನಂಬುವವರೆಲ್ಲರಿಗೆ ಬಾಧ್ಯವಾಗುತ್ತದೆ. ಸುವಾರ್ತೆಯ ಸಾರ್ವತ್ರಿಕತ್ವವು ಮತ್ತಾಯನ ಸುವಾರ್ತೆಯಲ್ಲಿನ ಒಂದು ಪ್ರಾಮುಖ್ಯವಾದ ವಿಷಯವಸ್ತುವಾಗಿದೆ. "ಎಲ್ಲಾ ದೇಶದ ಜನರನ್ನು ಶಿಷ್ಯರನ್ನಾಗಿ ಮಾಡಿರಿ" ಎಂಬ ಮಹಾ ಆದೇಶದ ಮಾತುಗಳೊಂದಿಗೆ ಹೋಲಿಸಿರಿ (ಮತ್ತಾ. 28:19).

   ಆ. ಈ ಲೋಕದಲ್ಲಿನ ನಮ್ಮ ನಂಬಿಕೆಯು ನಿತ್ಯವಾದ ಪರಿಣಾಮಗಳನ್ನು ಹೊಂದಿದೆ. ಕೇವಲ ಯೇಸುವಿನ ಮೇಲೆ ನಂಬಿಕೆಯಿಟ್ಟವರು (ಆತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದವರು) ಮಾತ್ರ ದೇವರ ರಾಜ್ಯದಲ್ಲಿನ ಊಟಕ್ಕೆ ಆಮಂತ್ರಿಸಲ್ಪಡುವರು. ಯೇಸುವಿನಲ್ಲಿ ನಂಬಿಕೆಯಿಡದವರು ಕತ್ತಲೆಯೊಳಗೆ ಹಾಕಲ್ಪಡುವರು, ಅಲ್ಲಿ ಅತೀವವಾದ ಬಾಧೆಯಿರುವುದು.

   ಇ. ನಂಬಿಕೆಯಿಂದ ತನ್ನ ಬಳಿಗೆ ಬರುವವರೆಲ್ಲರನ್ನು ಗುಣಪಡಿಸುವ ಮನಸ್ಸು ಮತ್ತು ಶಕ್ತಿ ಯೆಸುವಿಗೆ ಉಂಟು.

2. ಈ ಘಟನೆಯ ಸಮಾನವಾಗಿರುವ ವಾಕ್ಯಭಾಗಗಳಲ್ಲಿ (ಮತ್ತಾ 8:5-13 ಮತ್ತು ಲೂಕ 7:1-10) ಮೂರು ಮುಖ್ಯ ವ್ಯತ್ಯಾಸ ಭಿನ್ನತೆಗಳನ್ನು ಕಾಣಬಹದು:

   ಅ. ಆ ಶತಾಧಿಪತಿಯ ಬಗ್ಗೆ ಲೂಕನು ಹೆಚ್ಚಿನ ಮಾಹಿತಿಯನ್ನು ಹೊಂದಿದ್ದಾನೆ: ಪ್ರಾಥಮಿಕವಾಗಿ ಆತನೇ ಯೇಸುವನ್ನು ಸಂಧಿಸುವುದಿಲ್ಲ, ಬದಲಾಗಿ ಆತನು ಆ ವಿಷಯವನ್ನು ಯೇಸುವಿನ ಬಳಿ ಹೇಳಲು ಯೆಹೂದಿ ನಾಯಕರನ್ನು ಕಳುಹಿಸುತ್ತಾನೆ. ಮತ್ತು ಯೇಸುವು ಆತನ ಮನೆಗೆ ಬರುತ್ತಿರುವಾಗ ಆತನು ಯೇಸುವು ಬರುವ ಅಗತ್ಯವಿಲ್ಲವೆಂದು ಹೇಳಲು ತನ್ನ ಸ್ನೇಹಿತರನ್ನು ಕಳುಹಿಸುತ್ತಾನೆ.

ಆ. ದೇವರ ರಾಜ್ಯದಲ್ಲಿನ ಊಟದ ಬಗ್ಗೆ ಮತ್ತಾಯನು ಯೇಸುವಿನ ಮಾತುಗಳನ್ನು ಸೇರಿಸುತ್ತಾನೆ (ಅನೇಕರು ಮೂಡಣ ಮತ್ತು ಪಡುವಣ ದಿಕ್ಕುಗಳಿಂದ ಬಂದು). ಹೀಗೆ ಮತ್ತಾಯನು ದೇವರ ರಾಜ್ಯದ ಅಂತರರಾಷ್ಟ್ರೀಯ ಲಕ್ಷಣವನ್ನು ಒತ್ತಿ ಹೇಳುತ್ತಾನೆ.

ಇ. ಮತ್ತಾಯ ಮತ್ತು ಲೂಕನ ಸುವಾರ್ತೆಯಲ್ಲಿ ಯೇಸುವು ಒಬ್ಬ ಅಧಿಕಾರಿಯ ಸೇವಕನನ್ನು ಗುಣಪಡಿಸುವ ಎರಡು ವಾಕ್ಯಭಾಗಗಳು (ವಿವರ) ಯೋಹಾನ 4:46-54 ರಲ್ಲಿ ಯೇಸುವು ಒಬ್ಬ ಅಧಿಕಾರಿಯ ಮಗನನ್ನು ಗುಣಪಡಿಸುವ ವಾಕ್ಯಭಾಗಕ್ಕಿಂತ ಒಂದು ವಿಭಿನ್ನವಾದ ಘಟನೆಯನ್ನು ವರ್ಣಿಸುತ್ತವೆ. ಇದರಲ್ಲಿ ಕೆಲ ಸಮಾನತೆಗಳೂ ಇವೆ:

ಅ) ಸಮಾನತೆಗಳು:

- ಎರಡೂ ಅದ್ಭುತಗಳು ಗಲಿಲಾಯದಲ್ಲಿ ನಡೆಯುತ್ತವೆ. ಎರಡೂ ಕಥೆಗಳಲ್ಲಿ ಕಪೆರ್ನೌಮನ್ನು ತಿಳಿಸಲಾಗಿದೆ.
- ಎರಡೂ ಅದ್ಭುತಗಳಲ್ಲಿ ಒಬ್ಬ ಅಧಿಕಾರಿಯನ್ನು ಕಾಣಬಹುದು: ಒಬ್ಬ ರೋಮನ್ ಶತಾಧಿಪತಿ ಮತ್ತು ಅರಮನೆಯ ಒಬ್ಬ ಪ್ರಧಾನನು.

ಆ) ಪ್ರಮುಖ ವ್ಯತ್ಯಾಸ/ಭಿನ್ನತೆಗಳು:

- ಅಧಿಕಾರಿಗಳಿಬ್ಬರೂ ಒಬ್ಬರಲ್ಲ: ರೋಮನ್ ಶತಾಧಿಪತಿಯು ಹೆಚ್ಚಾಗಿ ಒಬ್ಬ ಅನ್ಯಮತಸ್ಥನಾಗಿರಬೇಕು. ಅರಮನೆಯ ಪ್ರಧಾನನು ಬಹುಶಃ ಅರಸನಾದ ಹೆರೋದನಿಗಾಗಿ ಕೆಲಸಮಾಡುವವನಾಗಿದ್ದು ಬಹುಶಃ ಒಬ್ಬ ಯೆಹೂದ್ಯನೋ ಅಥವಾ ಅನ್ಯಮತಸ್ಥನೋ ಆಗಿದ್ದಿರಬಹುದು.
- ಗುಣಹೊಂದಿದ ವ್ಯಕ್ತಿಗಳು ಸಹ ಬಹುಶಃ ವಿಭಿನ್ನರಾಗಿರಬಹುದು: ಒಬ್ಬನು ಸೇವಕ/ಆಳು ಮತ್ತು ಇನ್ನೊಬ್ಬ ಮಗನು. ಆದರೆ ಮತ್ತಾಯ 8:6 ರಲ್ಲಿನ ಗ್ರೀಕ್ ಪದವು “ಮಗು” ಮತ್ತು “ಸೇವಕ/ಆಳು” ಎಂದಾಗಿ ಸಹ ಅರ್ಥ ಕೊಡುತ್ತದೆ.
- ಎರಡೂ ಸ್ಥಳಗಳು ಸಹ ಒಂದೇ ಆಗಿಲ್ಲ: ಶತಾಧಿಪತಿಯು ಕಪೆರ್ನೌಮಿನವನು. ಆದರೆ ಅರಮನೆಯ ಪ್ರಧಾನನು ಕಪೆರ್ನೌಮಿನಿಂದ ಸ್ವಲ್ಪ ದೂರವಿರುವ ಕಾನಾ ಊರಿನವನು.
- ಅಧಿಕಾರದಲ್ಲಿರುವ ಆ ವ್ಯಕ್ತಿಗಳೆಡೆಗಿನ ಯೇಸುವಿನ ಭಾವನೆ ವಿಭಿನ್ನವಾಗಿದೆ: ಮತ್ತಾಯ/ಲೂಕದಲ್ಲಿ ಆತನ ನಂಬಿಕೆಯನ್ನು ಯೇಸು ಹೊಗಳುತ್ತಾನೆ, ಆದರೆ ಯೋಹಾನದಲ್ಲಿ ಆತನ ಮನವಿಯಿಂದ ಯೇಸು ಕರೆಕರೆಗೊಂಡನಾಗಿರುವಂತೆ ತೋರುತ್ತದೆ.
- ಎರಡೂ ಕಥೆಗಳು ವಿಭಿನ್ನವಾಗಿ ಬೆಳೆದುಬರುತ್ತವೆ: ಲೂಕನ ಸುವಾರ್ತೆಯಲ್ಲಿ ಯೇಸುವು ಶತಾಧಿಪತಿಯ ಮನೆಯ ಸಮೀಪಬರುತ್ತಾನೆ. ಆದರೆ ಯೋಹಾನನ ಸುವಾರ್ತೆಯಲ್ಲಿ ಅರಮನೆಯ ಪ್ರಧಾನನು ಯೇಸುವನ್ನು ಬಿಟ್ಟು ತನ್ನ ಮನೆಗೆ ಹಿಂತಿರುಗುತ್ತಾನೆ.

## 2. ಉತ್ತರಗಳು: ಯೇಸು ಒಬ್ಬ ವಿಧವೆಯ ಮಗನನ್ನು ಬದುಕಿಸಿದ್ದು, ಲೂಕ 7:11-17

### ಪ್ರಶ್ನೆಗಳಿಗೆ ಉತ್ತರಗಳು

1. ಈ ಕಥೆಯ ಹಿನ್ನಲೆಯು ಗಲಿಲಾಯದಲ್ಲಿನ ಯೇಸುವಿನ ಸೇವೆಯಾಗಿದೆ. ಲೂಕನು ಇದನ್ನು ರೋಮನ್ ಅಧಿಕಾರಿಯ ನಂಬಿಕೆ ಮತ್ತು ಆಗಿನ ಸ್ವಸ್ಥತೆಯ ಕುರಿತಾದ ಕಥೆಯ ನಂತರ ಇಡುತ್ತಾನೆ.
2. ಈ ಕಥೆಯು ದಕ್ಷಿಣ ಗಲಿಲಾಯದ ನಾಯಿನೂರಿನ ಹೊರಗೆ ನಡೆಯುತ್ತದೆ (ವ. 11).
3. ಮಗ ಸತ್ತು ಹೋಗಿದ್ದ ವಿಧವೆಯ ಸ್ಥಿತಿಯು ಶೋಚನೀಯವಾಗಿತೆಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. ಈಗಾಗಲೇ ಆಕೆಯೊಬ್ಬ ವಿಧವೆಯಾಗಿದ್ದು ಈಗ ಆಕೆಗಿರುವ ಒಬ್ಬನೇ ಮಗನು ಸಹ ಸತ್ತು ಹೋಗಿದ್ದಾನೆ (ವ. 12). ಆದರೆ ಆಕೆಯು ಸಮಾಜದಲ್ಲಿ ಒಬ್ಬ ಗೌರವಾನ್ವಿತ ವ್ಯಕ್ತಿಯಾಗಿದ್ದಿರಬಹುದು, ಯಾಕೆಂದರೆ ಶವಸಂಸ್ಕಾರಕ್ಕೆ ಹೊರಟ ವೇಳೆ ಬಹುಸಂಖ್ಯೆಯ ಜನರಿದ್ದರು (ವ. 11-12).
4. ಯೇಸು ಆಕೆಯ ಸ್ಥಿಯನ್ನು ನೋಡಿ ಕನಿಕರಪಡುತ್ತಾನೆ (ವ. 13). ಅಲ್ಲದೆ ಆತನು ತಾನು ಅಶುದ್ಧನಾಗುತ್ತೇನೆಂಬುದನ್ನು ಪರಿಗಣಿಸದೆ ಚಟ್ಟವನ್ನು ಸಹ ಮುಟ್ಟುತ್ತಾನೆ (ವ. 14).
5. ಯೇಸುವು ಆ ವಿಧವೆಯ ಪರಿಸ್ಥಿತಿಯ ಮಧ್ಯೆ ಪ್ರವೇಶಿಸುತ್ತಾನೆ. ಆತನು ಆಕೆಯ ಮಗನನ್ನು ಮರಣದಿಂದ ಎಬ್ಬಿಸಿ ಆತನನ್ನು ತಿರುಗಿ ಆಕೆಗೆ ಒಪ್ಪಿಸಿದಾಗ ಆಕೆಯ ಜೀವನವು ಪೂರ್ಣವಾಗಿ ಬದಲಾಗುತ್ತದೆ (ವ. 14-15).
6. ಈ ಅದ್ಭುತವನ್ನು ನೋಡಿ ಜನರು ಭಯಗೊಳ್ಳುತ್ತಾರೆ. ಆದರೆ ಅವರು ಯೇಸುವಿಗಾಗಿ ದೇವರನ್ನು ಕೊಂಡಾಡುತ್ತಾರೆ (ವ. 16).
7. ಈ ಅದ್ಭುತದ ಫಲವಾಗಿ ಜನರು ಯೇಸುವು ದೇವರ ದಯೆ ಹೊಂದಿದ ಒಬ್ಬ ಮಹಾನ್ ಪ್ರವಾದಿ ಎಂಬುದನ್ನು ಅರಿತುಕೊಳ್ಳುತ್ತಾರೆ (ವ. 16).
8. ಈ ಅದ್ಭುತದ ಪರಿಣಾಮವಾಗಿ ಯೇಸುವಿನ ಕೀರ್ತಿಯು ಕೇವಲ ಗಲಿಲಾಯದಲ್ಲಷ್ಟೇ ಅಲ್ಲ, ಯೂದಾಯದಲ್ಲಿಯೂ ಸುತ್ತಣ ಎಲ್ಲಾ ಪ್ರಾಂತ್ಯದಲ್ಲಿಯೂ ಹಬ್ಬಿತು (ವ. 17).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಕಥೆಯ ಬೇರೆ ಬೇರೆ ಭಾಗದಲ್ಲಿನ ಭಾವನೆಗಳನ್ನು ನಾವು ಹೀಗೆ ವರ್ಣಿಸಬಹುದು:
   ಅ. ತೀವ್ರ ಹತಾಶೆಯ ದುಃಖ: ವಿಧವೆಯು ತನಗಿದ್ದ ಒಬ್ಬನೇ ಮಗನನ್ನು ಕಳಕೊಂಡಿದ್ದಾಳೆ ಮತ್ತು ಆತನನ್ನು ಸಮಾಧಿಮಾಡುವ ಸ್ಥಳದಡೆಗೆ ನಡೆದುಕೊಂಡು ಹೋಗುತ್ತಿದ್ದಾಳೆ (ವ. 11-12).
   ಆ. ಆಳವಾದ ಕನಿಕರ: ಸಮಾಧಿಮಾಡಲು ಹೋಗುತ್ತಿರುವಾಗ ಯೇಸು ಅವರನ್ನು ಸಂಧಿಸುತ್ತಾನೆ ಮತ್ತು ವಿಧವೆಯ ಶೋಚನೀಯ ಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಾನೆ (ವ. 13).
   ಇ. ನಿರ್ಧಾರ: ಆ ಸ್ತ್ರೀಯ ಪರವಾಗಿ ಯೇಸು ಮಧ್ಯೆಪ್ರವೇಶಿಸಲು ನಿರ್ಧರಿಸುತ್ತಾನೆ (ವ. 13-14).
   ಈ. ಭಯಮಿಶ್ರಿಯ ಆಶ್ಚರ್ಯ: ಶವಸಂಸ್ಕಾರ ಮಾಡಲು ಸೇರಿದವರು ಸತ್ತುಹೋಗಿದ್ದವನು ತಿರುಗಿ ಬದುಕಿದ ನಿದರ್ಶನವನ್ನು ಸಾಕ್ಷಿಸಿದರು (ವ. 14-16).
   ಉ. ಹರ್ಷ ಮತ್ತು ಕೊಂಡಾಟ: ದೇವರು ತನ್ನ ಮಹಾ ಪ್ರವಾದಿಯಾದ ಯೇಸುವಿನ ಮೂಲಕ ಮಾಡಿದ ಕಾರ್ಯಕ್ಕಾಗಿ ಜನರು ದೇವರನ್ನು ಕೊಂಡಾಡಿದರು (ವ. 16)
2. –


## 3. ಉತ್ತರಗಳು: ಯೇಸು ಮತ್ತು ಸ್ನಾನಿಕನಾದ ಯೋಹಾನ, ಮತ್ತಾಯ 11:2-19

### ಪ್ರಶ್ನೆಗಳಿಗೆ ಉತ್ತರಗಳು

1. ಯೇಸು ನಿಜವಾಗಲೂ ಬರಬೇಕಾದ ಮೆಸ್ಸೀಯನು ಹೌದೋ ಎಂಬುದು ಸ್ನಾನಿಕನಾದ ಯೋಹಾನನ ಪ್ರಶ್ನೆಯಾಗಿತ್ತು (ವ. 2-3).
2. ಯೋಹಾನನ ಪ್ರಶ್ನೆಗೆ ಯೇಸುವು ನೇರವಾಗಿ ಉತ್ತರಿಸುವುದಿಲ್ಲ. ಬದಲಾಗಿ ಆತನು ಯೋಹಾನನಿಗೆ ತನ್ನ ಮೆಸ್ಸೀಯತ್ವದ ಫಲದ ಬಗ್ಗೆ ಜ್ಞಾಪಕಮಾಡುತ್ತಾನೆ: ಕುರುಡರಿಗೆ ಕಣ್ಣುಬರುತ್ತವೆ, ಕುಂಟರಿಗೆ ಕಾಲು ಬರುತ್ತವೆ, ಕುಷ್ಟರೋಗಿಗಳು ಶುದ್ಧರಾಗುತ್ತಾರೆ, ಕಿವುಡರಿಗೆ ಕಿವಿ ಬರುತ್ತದೆ, ಸತ್ತವರು ಜೀವದಿಂದ ಏಳುತ್ತಾರೆ ಮತ್ತು ಬಡವರಿಗೆ ಸುವಾರ್ತೆ ಸಾರಲ್ಪಡುತ್ತದೆ (ವ. 4-5). ಯೇಸುವಿನ ಸೇವೆಯ ಮೂಲಕ ಹಳೇ ಒಡಂಬಡಿಕೆಯ ಕ್ರಿಸ್ತನ ಕುರಿತ ವಾಗ್ದಾನಗಳು ನೆರವೇರಿವೆ ಎಂಬುದನ್ನು ಯೋಹಾನನು ತಿಳಿದುಕೊಳ್ಳಬೇಕೆಂದು ಆತನು ಬಯಸಿದನು (ನೋಡಿ ಯೆಶಾಯ 35:5-6, 61:1). ಯೇಸುವು ದೇವರ ಮೆಸ್ಸೀಯನ ಕಾರ್ಯವನ್ನು ಮಾಡುತ್ತಿದ್ದನು.
3. ವಚನ 7-9 ರಲ್ಲಿನ ಯೇಸುವಿನ ಮಾತುಗಳಿಂದ ಸ್ನಾನಿಕನಾದ ಯೋಹಾನನ ಈ ಚಿತ್ರಣವು ನಮಗೆ ಸಿಗುತ್ತದೆ:
   ಅ. ಈತನು ಒಬ್ಬ ಬಲಿಷ್ಠ ವ್ಯಕ್ತಿಯಾಗಿದ್ದು ಅಡವಿಯಲ್ಲಿ ವಾಸಿಸುತ್ತಿದ್ದನು.
   ಆ. ಈತನು ಸರಳವಾದ ಉಡುಪನ್ನು ಧರಿಸಿದವನಾಗಿದ್ದನು.
   ಇ. ಈತನೊಬ್ಬ ಪ್ರವಾದಿಯಾಗಿದ್ದು ಹಳೇ ಒಡಂಬಡಿಕೆಯ ಎಲ್ಲಾ ಪ್ರವಾದಿಗಳಿಗಿಂತ ಹೆಚ್ಚಿನವನಾಗಿದ್ದನು.
4. ಯೇಸು ಸ್ನಾನಿಕನಾದ ಯೋಹಾನನ ಬಗ್ಗೆ ಈ ಹೇಳಿಕೆ ಕೊಡುತ್ತಾನೆ: ಆತನೊಬ್ಬ ಸಂದೇಶಕನಾಗಿದ್ದು, ಮಲಾಕಿ 3:1 ರಲ್ಲಿನ ಪ್ರವಾದನೆಯ ನೆರವೇರಿಕೆಯಾಗಿ ಕರ್ತನ ದಾರಿಯನ್ನು ಸಿದ್ಧಮಾಡಿದವನಾಗಿದ್ದಾನೆ (ವ. 10 ಮತ್ತು ಟಿಪ್ಪಣಿ).
5. ಯೇಸು ಸ್ನಾನಿಕನಾದ ಯೋಹಾನನ ಬಗ್ಗೆ ಈ ಹೇಳಿಕೆ ಕೊಡುತ್ತಾನೆ: ಆತನು ಹಳೇ ಒಡಂಬಡಿಕೆಯ ಒಬ್ಬ ಮಹಾವ್ಯಕ್ತಿಯಾಗಿದ್ದಾನೆ (ವ. 1 ಮತ್ತು ಟಿಪ್ಪಣಿ).
6. ಜನರು ಸ್ನಾನಿಕನಾದ ಯೋಹಾನನಿಗೆ ದೆವ್ವ ಹಿಡಿದಿದೆ ಎಂದು ಹೇಳುತ್ತಾರೆ, ಯಾಕೆಂದರೆ, ಅವನು ಅನ್ನ ಪಾನಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ (ವ. 18).
7. ಮನುಷ್ಯಕುಮಾರನ ಬಗ್ಗೆ ಜನರು ಆತನು ಹೊಟ್ಟೆಬಾಕನು, ಕುಡುಕನು ಎಂದು ಹೇಳುತ್ತಾರೆ, ಯಾಕೆಂದರೆ ಭ್ರಷ್ಟರ ಮತ್ತು ಪಾಪಿಷ್ಟರೊಂದಿಗೆ ಒಡನಾಟ ಹೊಂದಿದ್ದ ಆತನ ಜೀವನಶೈಲಿಯ ನಿಮಿತ್ತ ಅವರು ಹಾಗೆ ಹೇಳುತ್ತಾರೆ (ವ. 19).
8. ತನ್ನ ಮತ್ತು ಸ್ನಾನಿಕನಾದ ಯೋಹಾನನ ಕುರಿತಾದ ಮಾತನ್ನು ಯೇಸು ಒಂದು ಜ್ಞಾನೋಕ್ತಿಯಿಂದ ಮುಕ್ತಾಯಗೊಳಿಸುತ್ತಾನೆ: "ಆದರೆ ಜ್ಞಾನವು ತನ್ನ ಕೆಲಸಗಳಿಂದ ಜ್ಞಾನವೇ ಎಂದು ಗೊತ್ತಾಗುವುದು" (ವ. 19).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ವಚನ 12 ರಲ್ಲಿನ ಟಿಪ್ಪಣಿ ನೋಡಿರಿ. ಆದರೆ ಈ ವಚನವನ್ನು ಬೇರೆ ರೀತಿಯಲ್ಲಿ ಸಹ ಅರ್ಥಮಾಡಿಕೊಳ್ಳಬಹುದು.
2. ಸ್ನಾನಿಕನಾದ ಯೋಹಾನನು ಸಾಂಕೇತಿಕನಾಗಿ ಪ್ರವಾದಿಯಾದ ಎಲೀಯನಾಗಿದ್ದಾನೆ. ಹಾಗಾಗಿ ಆತನಲ್ಲಿಯೇ ಮಲಾಕಿ 4:5 ಪ್ರವಾದನೆ ನೆರವೇರಿದೆ. ಇದನ್ನೇ ಯೇಸು ಸಮಾಂತರ ಸುವಾರ್ತೆಗಳಲ್ಲಿ ಅನೇಕ ಬಾರಿ ಹೇಳುತ್ತಾನೆ. ಆದರೆ ಸ್ನಾನಿಕನಾದ ಯೋಹಾನನು ಶಾರೀರಿಕ ರೀತಿಯಲ್ಲಿ ಪ್ರವಾದಿಯಾದ ಎಲೀಯನಲ್ಲ, ಆತನು ಎಲೀಯನ ಮರು ಅವತಾರವಲ್ಲ. ಅದನ್ನೇ ಆತನು ಯೋಹಾನನ ಸುವಾರ್ತೆಯಲ್ಲಿ ಹೇಳುತ್ತಾನೆ (ವ. 14 ಮತ್ತು ಟಿಪ್ಪಣಿ).
3. ಈ ವಾಕ್ಯಭಾಗದ ಅಂತ್ಯದಲ್ಲಿನ ಜ್ಞಾನದ ಕುರಿತಾದ ಯೇಸುವಿನ ಹೇಳಿಕೆಯನ್ನು ವಚನ 19 ರ ಟಿಪ್ಪಣಿಯಲ್ಲಿ ವಿವರಿಸಲಾಗಿದೆ.



## 4. ಉತ್ತರಗಳು: ಯೇಸು ಒಬ್ಬ ದುರಾಚಾರಿಯಾದ ಹೆಂಗಸಿನಿಂದ ಅಭಿಷೇಕಿಸಲ್ಪಟ್ಟಿದ್ದು (ತೈಲ ಹಚ್ಚಿಸಿಕೊಂಡಿದ್ದು), ಲೂಕ 7:36-50

**ಪ್ರಶ್ನೆಗಳಿಗೆ ಉತ್ತರಗಳು**

1. ಈ ಸಂದರ್ಭದಲ್ಲಿ ಫರಿಸಾಯನು ಆತನನ್ನು ತನ್ನ ಮನೆಗೆ ಊಟಕ್ಕೆ ಆಹ್ವಾನಿಸಿದ್ದರಿಂದ ಆತನ ಮನೆಗೆ ಹೋದನು (ವ. 36).
2. ಕಥೆಯ ಪ್ರಾರಂಭದಲ್ಲಿ ಈ ಹೆಂಗಸಿನ ಬಗ್ಗೆ ಸುಮಾರು 6 ಸಂಗತಿಗಳನ್ನು ನಾವು ಕಲಿಯುತ್ತೇವೆ (ವ. 37-38):

   ಅ. ತನ್ನ ಊರಿನಲ್ಲಿ ಆಕೆಯು ದುರಾಚಾರಿಯೆಂಬುದಾಗಿ ಪರಿಗಣಿಸಲ್ಪಟ್ಟಿದ್ದಳು. ಬಹುಶಃ ಆಕೆಯೊಬ್ಬ ವೇಶ್ಯೆಯಾಗಿದ್ದಿರಬಹುದು.

   ಆ. ಸೀಮೋನನ ಮನೆಗೆ ಯೇಸು ಬರುವುದನ್ನು ಆಕೆ ತಿಳಿದವಳಾಗಿದ್ದು ಆತನನ್ನು ಸಂಧಿಸಲು ಸದಾವಕಾಶ ಬಳಸಿಕೊಂಡಳು.

   ಇ. ಆಕೆಯು ತೀರಾ ನಿರಾಶಳಾಗಿದ್ದಿರಬಹುದು, ಯಾಕೆಂದರೆ ಆಕೆ ತುಂಬಾ ಅಳುತ್ತಿದ್ದಳು.

   ಈ. ಆಕೆಯು ಯೇಸುವಿಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಲು ಬಯಸಿದಳು. ಹಾಗಾಗಿ ಆಕೆ ಆತನ ಪಾದಕ್ಕೆ ಮುದ್ದಿಡುತ್ತಾ ಇದ್ದಳು.

   ಉ. ಯೇಸುವನ್ನು ಗೌರವಿಸುವುದಕ್ಕಾಗಿ ಆಕೆ ಸಿದ್ಧತೆಯೊಂದಿಗೆ ಬಂದಿದ್ದಳು, ಯಾಕೆಂದರೆ ಆಕೆ ಬೆಲೆಬಾಳುವ ಸುಗಂಧತೈಲದ ಭರಣಿಯನ್ನು ತಂದಿದ್ದಳು.

   ಊ. ಆಕೆಗೆ ಊಟವನ್ನು ತೊಂದರೆಪಡಿಸುವುದು ಇಷ್ಟವಿರಲಿಲ್ಲ. ಹಾಗಾಗಿ ಆಕೆ ಯೇಸುವಿನೊಂದಿಗೆ ಮಾತಾಡಲಿಲ್ಲ, ಆದರೆ ಆತನ ಹಿಂದೆ ನಿಂತುಕೊಂಡಿದ್ದಳು ಮತ್ತು ಆತನ ತಲೆಯ ಬದಲಿಗೆ ಆತನ ಪಾದಗಳಿಗೆ ತೈಲ ಹಚ್ಚಿದಳು.
3. ಯೇಸುವು ತನ್ನನೊಬ್ಬ ದುರಾಚಾರಿಯಾದ ಹೆಂಗಸು ಮುಟ್ಟುತ್ತಿರುವುದನ್ನು ಅರಿಯದೆ ಇರುವುದರಿಂದ ಆತನು ಪ್ರವಾದಿಯಾಗಿರಲಾರನೆಂಬುದಾಗಿ ಸೀಮೋನನು ಯೋಚಿಸಿದ್ದನು (ವ. 39).
4. ಸೀಮೋನನ ಯೋಚನೆಯೊಂದಿಗೆ ಯೇಸು (ವ. 40-42) ಪರೋಕ್ಷವಾದ ರೀತಿಯಲ್ಲಿ ವ್ಯವಹರಿಸುತ್ತಾನೆ:

   ಅ. ಮೊದಲನೆಯದಾಗಿ ಆತನು ಸೀಮೋನನಿಗೆ ಇಬ್ಬರು ಸಾಲಗಾರರ ಕುರಿತ ಒಂದು ಕಥೆಯನ್ನು ಹೇಳುತ್ತಾನೆ. ಆದರೆ ಸಾಹುಕಾರನು ಇಬ್ಬರೂ ಸಾಲಗಾರರ ಸಾಲವನ್ನು ಬಿಟ್ಟುಬಿಟ್ಟನು.

   ಆ. ಅನಂತರ ಯೇಸು ಸೀಮೋನನಿಗೆ, ಆ ಇಬ್ಬರು ಸಾಲಗಾರರಲ್ಲಿ ಯಾರು ತಮ್ಮ ಸಾಹುಕಾರನನ್ನು ಹೆಚ್ಚಾಗಿ ಪ್ರೀತಿಸಾರು ಎಂದು ಪ್ರಶ್ನಿಸಿದನು.
5. ನಿರೀಕ್ಷೆಯಂತೆಯೇ ಸೀಮೋನನು ಯೇಸುವಿನ ಪ್ರಶ್ನೆಗೆ ಉತ್ತರಿಸಿದನು: ಯಾವನಿಗೆ ಹೆಚ್ಚು ಬಿಟ್ಟನೋ ಆ ಸಾಲಗಾರನೇ ಸಾಹುಕಾರನನ್ನು ಹೆಚ್ಚಾಗಿ ಪ್ರೀತಿಸುವನು (ವ. 44).
6. ಸೀಮೋನನು ಯೇಸುವನ್ನು ಗೌರವದಿಂದ ತನ್ನ ಮನೆಗೆ ಸ್ವಾಗತಿಸಲಿಲ್ಲ (ವ. 44-46):

   ಅ. ಆತನು ಯೇಸುವಿಗೆ ಕಾಲು ತೊಳೆಯಲು ನೀರು ಕೊಡಲಿಲ್ಲ.

   ಆ. ಆತನು ಯೇಸುವಿಗೆ ಮುದ್ದಿಟ್ಟು ಸ್ವಾಗತಿಸಲಿಲ್ಲ.

   ಇ. ಆತನು ಯೇಸುವಿನ ತಲೆಗೆ ಎಣ್ಣೆ ಹಚ್ಚಲಿಲ್ಲ.
7. ಆ ಹೆಂಗಸು ಯೇಸುವಿಗೆ ತೋರಿಸಿದ ಪ್ರೀತಿಯ ಗುರುತುಗಳು ಇಂತಿವೆ (ವ. 44-46):

   ಅ. ಆಕೆ ಯೇಸುವಿನ ಪಾದಗಳನ್ನು ತನ್ನ ಕಣ್ಣೀರಿನಿಂದ ತ್ಯಾವಮಾಡಿ ಅದನ್ನು ತನ್ನ ತಲೆಕೂದಲಿನಿಂದ ಒರೆಸಿದಳು.

   ಆ. ಬಂದಾಗಿನಿಂದ ಯೇಸುವಿನ ಪಾದಗಳಿಗೆ ಮುದ್ದಿಡುವುದನ್ನು ಆಕೆ ಬಿಡಲೇ ಇಲ್ಲ.

   ಇ. ಆಕೆ ಯೇಸುವಿನ ಪಾದಗಳಿಗೆ ತೈಲವನ್ನು ಹಚ್ಚಿದಳು.

8. ವಚನ 47 ರಲ್ಲಿ ಯೇಸು ಪ್ರೀತಿ ಮತ್ತು ಕ್ಷಮೆಯ ಬಗ್ಗೆ ಹೇಳುವ ಅಂಶಗಳು: ಹೆಚ್ಚಾಗಿ ಕ್ಷಮಿಸಲ್ಪಡುವವನು ಸ್ವಲ್ಪ ಮಾತ್ರ ಕ್ಷಮಿಸಲ್ಪಟ್ಟವನಿಗಿಂತ ಹೆಚ್ಚಾಗಿ ಪ್ರೀತಿಸುವನು.
9. ಯೇಸು ಆ ಹೆಂಗಸಿಗೆ ಹೇಳಿದ ಮಾತುಗಳಿಗೆ ಅತಿಥಿಗಳು ಅಚ್ಚರಿಗೊಂಡರು, ಯಾಕೆಂದರೆ, ಆತನು ಆಕೆಗೆ ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂಬುದಾಗಿ ಹೇಳಿದ್ದನು (ವ. 48-49). ದೇವರ ಹೊರತು ಯಾರೂ ಪಾಪವನ್ನು ಕ್ಷಮಿಸಲಾರರು.
10. ಯೇಸುವಿನಲ್ಲಿನ ತನ್ನ ನಂಬಿಕೆಯ ಮೂಲಕ ಆ ಹೆಂಗಸು ರಕ್ಷಣೆಯನ್ನು ಹೊಂದಿಕೊಳ್ಳುತ್ತಾಳೆ (ವ. 50). ಆಕೆ ಆತನಿಗೆ ತನ್ನ ಪ್ರೀತಿಯನ್ನು ವ್ಯಕ್ತಪಡಿಸಿದಳು. ಆದರೆ ಆಕೆ ತನ್ನ ಪ್ರೀತಿಯ ಈ ಕಾರ್ಯಗಳಿಂದ ರಕ್ಷಿಸಲ್ಪಡಲಿಲ್ಲ, ಬದಲಾಗಿ ತನ್ನ ನಂಬಿಕೆಯಿಂದ ರಕ್ಷಣೆ ಹೊಂದಿದಳು.
11. ಕೊನೆಯದಾಗಿ ಯೇಸು ಆಕೆಗೆ ಸಮಾಧಾನದಿಂದ ಹೋಗು ಎಂಬ ಮಾತಿನಿಂದ ಆಶೀರ್ವದಿಸಿದನು (ವ. 50).

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ಒಬ್ಬ ದುರಾಚಾರಿಯಾದ ಹೆಂಗಸು ತನ್ನ ಮುಟ್ಟುತ್ತಿರುವುದನ್ನು ಯೇಸು ಗಮನಿಸದೇ ಇರುವುದರಿಂದ ಸೀಮೋನನು ಯೇಸುವು ಪ್ರವಾದಿಯಲ್ಲವೆಂಬುದಾಗಿ ಯೋಚಿಸಿದನು. ಆದರೆ ಯೇಸು ಆತನಿಗೆ ಹೇಳಿದ ಇಬ್ಬರು ಸಾಲಗಾರರ ಕಥೆಯು ಸೀಮೋನನಿಗೆ ತಾನು ಹೇಳಿದ್ದು ತಪ್ಪೆಂಬುದನ್ನು ತಿಳಿಯಪಡಿಸಿತು. ಯೇಸು ಆತನ ಮನದಾಳದ ಆಲೋಚನೆಗಳನ್ನು ಬಲ್ಲವನಾಗಿದ್ದನು. ಇದು ಪ್ರವಾದಿಗೆ ಮಾತ್ರ ಸಾಧ್ಯ.
2. ಯೇಸುವಿಗೆ ತೈಲ ಹಚ್ಚಿದ ಆ ಸ್ತ್ರೀಯ ಕುರಿತಾದ ಕಥೆಯಲ್ಲಿ ಕಾಣುವಂತೆ ಪ್ರೀತಿ ಮತ್ತು ಕ್ಷಮೆಯ ನಡುವಿನ ಸಂಬಂಧವನ್ನು ನಾವು ಹೀಗೆ ಅರ್ಥೈಸಿಕೊಳ್ಳಬಹುದು:

   ಅ. ಆ ಸ್ತ್ರೀಗೆ ಯೇಸುವಿನ ಮೇಲೆ ನಂಬಿಕೆಯಿತ್ತು. ಆ ನಿಮಿತ್ತ ಆಕೆ ಆ ಮನೆಗೆ ಮೊದಲೇ ಬಂದಳು.

   ಆ. ಆಕೆ ಯೇಸುವಿನ ಮೇಲಿನ ತನ್ನ ನಂಬಿಕೆಯನ್ನು ಪ್ರೀತಿಯ ಕ್ರಿಯೆಗಳಲ್ಲಿ ತೋರ್ಪಡಿಸಬೇಕೆಂದು ಬಯಸಿದಳು: ಆಕೆ ಸುಗಂಧ ದ್ರವ್ಯವನ್ನು ತಂದಳು. ಆಕೆಯು ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟಳೆಂಬುದನ್ನು ಆಕೆಯ ಕಣ್ಣೀರೇ ತೋರಿಸುತ್ತದೆ. ಆಕೆ ಯೇಸು ಪಾದವನ್ನು ತನ್ನ ತಲೆಕೂದಲಿನಿಂದ ಒರೆಸುತ್ತಾಳೆ. ಅನಂತರ ಆಕೆ ಯೇಸುವಿನ ಪಾದಗಳಿಗೆ ಪರಿಮಳ ದ್ರವ್ಯ ಹಚ್ಚುತ್ತಾಳೆ.

   ಇ. ಯೇಸು ತನ್ನ ಮೇಲಿನ ಆಕೆಯ ನಂಬಿಕೆ ಮತ್ತು ಪ್ರೀತಿಯನ್ನು ನೋಡುತ್ತಾನೆ. ಆಗ ಆತನು ಆಕೆಗೆ ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳುತ್ತಾನೆ. ಇದು ಇತರ ಅತಿಥಿಗಳನ್ನು ಅಚ್ಚರಿಗೊಳಿಸತು: ದೇವರು ಮಾತ್ರ ಪಾಪಗಳನ್ನು ಕ್ಷಮಿಸಲು ಸಾಧ್ಯ. ಹಾಗಾದರೆ ಯೇಸು ಯಾರು ಅಂದುಕೊಂಡರು?

   ಈ. ಅನಂತರ ಯೇಸು ಆಕೆಗೆ "ನಿನ್ನ ನಂಬಿಕೆಯೇ ನಿನ್ನನ್ನು ರಕ್ಷಿಸಿ ಅದೆ, ಸಮಾಧಾನದಿಂದ ಹೋಗು" ಎಂಬ ಆಶೀರ್ವಾದದೊಂದಿಗೆ ಕಳುಹಿಡುವುದರೊಂದಿಗೆ ಆಕೆಯ ರಕ್ಷಣೆಯನ್ನು ದೃಢೀಕರಿಸುತ್ತಾನೆ.

   ಈ. ಇಬ್ಬರು ಸಾಲಗಾರರ ಕುರಿತು ಯೇಸು ಹೇಳಿದ ಕಥೆಯು ಆ ಸ್ತ್ರೀ ಆತನನ್ನು ಯಾಕೆ ಅಷ್ಟಾಗಿ ಪ್ರೀತಿಸಿದಳೆಂಬುದನ್ನು ವಿವರಿಸುತ್ತದೆ: ಆಕೆಯ ಬಹಳ ಪಾಪಗಳು ಕ್ಷಮಿಸಲ್ಪಟ್ಟವು (ವ. 47).
3. –

## 5. ಉತ್ತರಗಳು: ಕಷ್ಟ ಮತ್ತು ವಿಶ್ರಾಂತಿ, ಮತ್ತಾಯ 11:20-30

### ಪ್ರಶ್ನೆಗಳಿಗೆ ಉತ್ತರಗಳು

1. –
2. –
3. ಯೇಸು ಗಲಿಲಾಯದ ಮೂರು ಪಟ್ಟಣಗಳಾದ ಕಪೆರ್ನೌಮ್, ಬೇತ್ಸಾಯಿದ ಮತ್ತು ಖೊರಾಜಿನ್ ಗಳನ್ನು ಶಪಿಸುತ್ತಾನೆ. ಯಾಕೆಂದರೆ ಅವು ಯೇಸುವಿನ ಸೇವೆಯನ್ನು ಒಪ್ಪಿ ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟಿರಲಿಲ್ಲ (ವ. 21-24).
4. ವಚನ 25-26 ರಲ್ಲಿ ಯೇಸು ಪರಲೋಕದ ತಂದೆಯು ತನ್ನನ್ನು ಮತ್ತು ತನ್ನ ಸೇವೆಯನ್ನು ಅಂಗೀಕರಿಸಿದವರು ಸಾಮಾನ್ಯ ಜನರಾದರೂ ಅವರಿಗೆ ದೇವರ ರಾಜ್ಯವನ್ನು ಪ್ರಕಟ ಮಾಡಿದ್ದಕ್ಕಾಗಿ ಆತನನ್ನು ಕೊಂಡಾಡುತ್ತಾನೆ.
5. "ಎಲ್ಲವನ್ನೂ" ಎಂಬ ಯೇಸುವಿನ ಮಾತು ದೇವರ ರಾಜ್ಯದ ಪೂರ್ಣ ಪ್ರಕಟಣೆಯನ್ನು ಸೂಚಿಸುತ್ತದೆ (ವ. 27).
6. ವಚನ 27 ರಲ್ಲಿ ಯೆಸು ತನ್ನ ಮೂಲಕ ಮಾತ್ರ ಪರಲೋಕದ ತಂದೆಯನ್ನು ತಿಳಿಯಬಹುದಾಗಿದೆ ಎಂಬುದನ್ನು ಬೋಧಿಸುತ್ತಾನೆ. ದೇವರು ಆತನಿಗೆ ಎಲ್ಲಾ ಸಂಗತಿಗಳನ್ನು ಪ್ರಕಟಿಸಿದ್ದಾನೆ ಮತ್ತು ಯೇಸು ಎಷ್ಟಾಗಿ ದೇವರನ್ನು ನಮಗೆ ಪ್ರಕಟಿಸುತ್ತಾನೋ ಅಷ್ಟಾಗಿ ಮಾತ್ರ ನಾವು ಅರಿಯಬಹುದಾಗಿದೆ.
7. "ನೊಗ" ಎಂಬ ರೂಪಾಲಂಕಾರವು ಅಧೀನದೊಳಗಿರುವುದನ್ನು ಸೂಚಿಸುತ್ತದೆ. ನಕಾರಾತ್ಮಕವಾಗಿ ಇದು ಶೋಷಣೆ ಅಥವಾ ಒಂದು ಧಾರ್ಮಿಕ ವ್ಯವಸ್ಥೆಯೊಳಗಿನ ದಾಸ್ಯವನ್ನು ಸೂಚಿಸುತ್ತದೆ, ಇದಕ್ಕೆ ಉದಾಹರಣೆ ಫರಿಸಾಯರ ಶಾಸನಾತ್ಮಕ ಬೋಧನೆಯಾಗಿದೆ. ಸಕಾರಾತ್ಮಕವಾಗಿ ಇದು "ಯೋಸುವಿನೊಳಗಿನ ನೊಗ" ವನ್ನು ಸೂಚಿಸುತ್ತದೆ, ಇದು ದೇವರ ರಾಜ್ಯದೊಳಗಿನ ಒಂದು ಉಲ್ಲಾಸಕರ ಮತ್ತು ವಿಶ್ರಾಂತಿಕರವಾದ ಜೀವಿತವಾಗಿದೆ (ವ. 20-30 ಮತ್ತು ಟಿಪ್ಪಣಿ).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ನ್ಯಾಯವಿಚಾರಣೆಯ ದಿನದಲ್ಲಿ ಸೊದೋಮ್ ಪಟ್ಟಣದ ಗತಿಯು ಕಪೆರ್ನೌಮಿನ ಗತಿಗಿಂತಲೂ ಮೇಲಾಗಿರುವುದು (ವ. 23-24) ಎಂಬ ಯೇಸುವಿನ ಹೇಳಿಕೆಯನ್ನು ಈ ರೀತಿಯಾಗಿ ವಿವರಿಸಬಹುದು:

   ಅ. ಸೊದೋಮ್ ಪಟ್ಟಣವು ಅದು ಮಾಡಿದ ಮಹಾಪಾಪದ ನಿಮಿತ್ತ ಅಬ್ರಹಾಮನ ಕಾಲದಲ್ಲಿ ದೇವರಿಂದ ನಾಶಮಾಡಲ್ಪಟ್ಟಿತ್ತು.

   ಆ. ಆದರೆ ದೇವರು ಕಪೆರ್ನೌಮಿನ ಪಾಪವು ಸೊದೋಮಿನ ಪಾಪಕ್ಕಿಂತಲೂ ಹೆಚ್ಚಿನದಾಗಿದೆ ಎಂಬುದಾಗಿ ಪರಿಗಣಿಸಿದನು ಯಾಕೆ? ಯಾಕೆಂದರೆ ಕಪೆರ್ನೌಮು ಯೇಸುವನ್ನು ಮತ್ತು ಆತನ ಸೇವೆಯನ್ನು ತಿರಸ್ಕರಿಸಿತ್ತು ಮತ್ತು ದೇವರ ರಾಜ್ಯ ಮತ್ತು ದೇವರ ವರವಾದ ಕೃಪೆ ಮತ್ತು ರಕ್ಷಣೆಗೆ ಬೆನ್ನು ತಿರುಗಿಸಿತ್ತು. ಆದರೆ ಸೊದೋಮ್ ಹೊಸ ಒಡಂಬಡಿಕೆಯ ಕಾಲದಲ್ಲಿ ಅಸ್ತಿತ್ವದಲ್ಲಿ ಇರದೇ ಇರುವುದರಿಂದ ಅದಕ್ಕೆ ಈ ಅವಕಾಶ ಸಿಗಲಿಲ್ಲ.

   ಇ. ಹಾಗಾಗಿ ನ್ಯಾಯವಿಚಾರಣೆಯದಿನದಲ್ಲಿ ದೇವರ ಕೊಡುಗೆಗಳಾದ ಕೃಪೆ ಮತ್ತು ರಕ್ಷಣೆಗೆ ನಾವು ಹೇಗೆ ಪ್ರತಿಕ್ರಯಿಸಿದ್ದೇವೆ ಎಂಬುದನ್ನು ಸಹ ಪರಿಗಣಿಸಲಾಗುವುದು.

2. ವ. 25-27 ರಲ್ಲಿನ ಯೇಸುವಿನ ಮಾತುಗಳ ಬೆಳಕಿನಲ್ಲಿ ನಿಮ್ಮನ್ನು ಮತ್ತು ನಿಮ್ಮ ಸಭೆಗಳ ವಿಶ್ವಾಸಿಗಳ ಮೌಲ್ಯಮಾಪನ ನಿಮಗೇ ಕೆಳಕಂಡ ಪ್ರಶ್ನೆಗಳನ್ನು ಕೇಳಿಕೊಳ್ಳಿರಿ:

   ಅ. ನಮ್ಮ ಸಭೆಗಳಲ್ಲಿ ಯಾವ ರೀತಿಯ ಜನರಿದ್ದಾರೆ?

   - ಯಾಕೆ ನಮ್ಮಲ್ಲಿನ ಹೆಚ್ಚಿನ ವಿಶ್ವಾಸಿಗಳೆಲ್ಲಾ ಸಾಮಾನ್ಯರು ಸರಳವಾಗಿರುವವರು, ಬಡ ಮತ್ತು ಅವಿಧ್ಯಾವಂತ ಜನರಾಗಿದ್ದಾರೆ.

- ಯಾಕೆ ಶ್ರೀಮಂತರು ವಿಧ್ಯಾವಂತರು ಮತ್ತು ಮೇಲ್ವರ್ಗದ ಜನರು ಸುವಾರ್ತೆಯನ್ನು ಸ್ವೀಕರಿ ಯೇಸುವಿನ ಕಡೆ ತಿರುಗಿಕೊಳ್ಳುವುದು ಕಷ್ಟಕರವಾಗಿ ಕಂಡುಬುರುತ್ತದೆ.


ಆ. ವ್ಯಕ್ತಿಗತ ವಿಶ್ವಾಸಿಗಳು ಮತ್ತು ಸಭೆ ಎಂಬ ವಿಶ್ವಾಸಿಗಳಾದ ನಾವು ಆತ್ಮಿಕವಾಗಿ ಬೆಳೆಯುತ್ತಿದ್ದೇವೆ?

- ಯೇಸುವು ದೇವರ ಬಗ್ಗೆ ಹೆಚ್ಚಾಚ್ಚಾಗಿ ಪ್ರಕಟಿಸುವಂತೆ ಅನುವುಮಾಡಿಕೊಡುವುದರ ಮೂಲಕ
- ಹೆಚ್ಚಾಚ್ಚಾಗಿ ನಮ್ಮನ್ನು ಪೂರ್ಣ ಹೃದಯದಿಂದ ಯೇಸುವಿಗೆ ಮತ್ತು ಆತನ ರಾಜ್ಯಕ್ಕೆ ಒಪ್ಪಿಸಿಕೊಡುವುದರ ಮೂಲಕ

3. ವಚನ 28-30 ರಲ್ಲಿನ ಯೇಸುವಿನ ಆಹ್ವಾನ ಅಥವಾ ಆಮಂತ್ರಣ:

ಅ. ಧರ್ಮದ ಶಾಸನಾತ್ಮಕವಾದ ನೊಗಗಳನ್ನು ನಾವು ದೂರವಿರಿಸಬೇಕು. ಇದು ಜನರ ಹೆಗಲ ಮೇಲೆ ಭಾರವಾದ ಹೊರೆಗಳನ್ನು ಹಾಕುತ್ತದೆ. ಅದು ಆತ್ಮೀಕವಾಗಿ ಕಾಣಬಹುದು ಮತ್ತು ಬಹುಶಃ ಅದು ಮಾನವನ ಆಶೆಗಳನ್ನು ಪೂರೈಸಬಹುದು. ಆದರೆ ಅದು ರಕ್ಷಣೆಗೆ ನಡೆಸುತ್ತದೆ.

ಆ. ಬದಲಾಗಿ ನಾವು ಯೇಸುವಿನ ಕಡೆಗೆ ಬರಬೇಕು, ಆತನಲ್ಲಿ ಮಾತ್ರ ನಮ್ಮ ಆತ್ಮಗಳಿಗೆ ವಿಶ್ರಾಂತಿದೊರಕುತ್ತದೆ. ಆತನ ಮೂಲಕ ಮಾತ್ರ ನಾವು ರಕ್ಷಣೆಯನ್ನು ಕಂಡುಕೊಳ್ಳಬಹುದು. ಆತನ ನೊಗವು ಮೃದುವಾದದ್ದು ಮತ್ತು ಹಗುರವಾದದ್ದಾಗಿದೆ. ಅದು ನಮ್ಮ ಆತ್ಮ ಮತ್ತು ಮನಸ್ಸುಗಳನ್ನು ಪುನಶ್ಚೇತನಗೊಳಿಸುತ್ತದೆ. ಅದು ನಮ್ಮ ಆತ್ಮಗಳಿಗೆ ವಿಶ್ರಾಂತಿಯನ್ನು ಕೊಡುತ್ತದೆ.



## 6. ಉತ್ತರಗಳು: ಯೋನನಲ್ಲಿನ ಸೂಚಕಕಾರ್ಯ, ಮತ್ತಾಯ 12:38-42

**ಪ್ರಶ್ನೆಗಳಿಗೆ ಉತ್ತರಗಳು**

1. ಯೆಹೂದಿ ನಾಯಕರು ಯೇಸುವಿನ ಬಳಿ ಒಂದು ಸೂಚಕಕಾರ್ಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತಾರೆ. ಅವರು ಸ್ವಸ್ಥತೆಯ ಅದ್ಭುತ ಮತ್ತು ದೆವ್ವ ಹಿಡಿದವರ ಬಿಡುಗಡೆಗಿಂತಲೂ ಹೆಚ್ಚು ಆಕರ್ಷಕವಾದ ಸಂಗತಿಗಳನ್ನು ಬಯಸಿದರೆಂಬುದಾಗಿ ತೋರುತ್ತದೆ (ವ. 38).
2. ಯೆಹೂದಿ ನಾಯಕರ ಕೋರಿಕೆಗೆ ಯೇಸು ಹತಾಶನಾಗುತ್ತಾನೆ. ಆತನವರನ್ನು "ವ್ಯಭಿಚಾರಿಣಿಯಂತಿರುವ ಕೆಟ್ಟಸಂತತಿ" ಎಂದು ಕರೆಯುತ್ತಾನೆ. ಅನಂತರ ಆತನವರಿಗೆ ಯೋನನಲ್ಲಿನ ಸೂಚಕಕಾರ್ಯ ಹೊರತು ಬೇರೆ ಸಿಕ್ಕುವುದಿಲ್ಲ ಎಂದು ಹೇಳುತ್ತಾನೆ (ವ. 39 ಟಿಪ್ಪಣಿಯೊಂದಿಗೆ).
3. ವಚನ 40 ರಲ್ಲಿ ಯೇಸು ಯೋನ ಮತ್ತು ಮನುಷ್ಯಕುಮಾರನ ನಡುವೆ ಮಾಡುವ ಹೋಲಿಕೆ: ಯೋನನು ಮೂರು ದಿವಸ ಮೀನಿನ ಹೊಟ್ಟೆಯೊಳಗೆ ಇದ್ದಂತೆಯೇ ಯೇಸುವು ಮೂರು ದಿನ ಸಮಾಧಿಯೊಳಗಿರುವನು.
4. ನ್ಯಾಯತೀರ್ಪಿನ ವೇಳೆ ಯೆಹೂದಿ ನಾಯಕರು ನಿನೆವೆ ಪಟ್ಟಣದ ಜನರಿಂದ ಖಂಡಿಸಲ್ಪಡುವರು ಎಂದು ಹೇಳುತ್ತಾನೆ. ಯಾಕೆಂದರೆ ದೇವರು ಪ್ರವಾದಿಯಾದ ಯೋನನ ಮೂಲಕ ಮಾತನಾಡಿದಾಗ ಅವರು ಮನತಿರುಗುತ್ತಾರೆ. ಆದರೆ ದೇವರು ಯೇಸುವಿನ ಮೂಲಕ ಮಾತನಾಡಿದಾಗ ಯೆಹೂದಿ ನಾಯಕರು ಮನತಿರುಗಲಿಲ್ಲ (ವ. 41).
5. ವಚನ 41 ರಲ್ಲಿ ಯೇಸು ಯೋನ ಮತ್ತು ಸ್ವತಃ ತನ್ನ ನಡುವೆ ಮಾಡುವ ಹೋಲಿಕೆ: ಯೋನನ ಸಮಯದಲ್ಲಿನ ನಿನೆವೆ ಜನರ ಪಶ್ಚಾತ್ತಾಪಕ್ಕಿಂತಲೂ ಹೆಚ್ಚಾದುದ್ದನ್ನು ಯೆಹೂದಿ ನಾಯಕರ ಪಶ್ಚಾತ್ತಾಪದಿಂದ ಅಪೇಕ್ಷಿಸುವವನಾಗಿದ್ದಾನೆ.
6. ಯೆಹೂದಿ ನಾಯಕರು ದಕ್ಷಿಣ ದೇಶದ ರಾಣಿಯಿಂದ ಖಂಡಿಸಲ್ಪಡುವರೆಂಬುದಾಗಿ ಯೇಸು ಹೇಳುತ್ತಾನೆ, ಯಾಕೆಂದರೆ ಆಕೆಯು ಸೊಲೊಮೋನನ ಜ್ಞಾನವನ್ನು ಕೇಳುವುದಕ್ಕಾಗಿ ಬಹುದೂರ ದೇಶದಿಂದ ಬರುತ್ತಾಳೆ. ಆದರೆ ಯೇಸುವು ದೇವರ ರಾಜ್ಯದ ಕುರಿತಾದ ಶುಭವಾರ್ತೆಯನ್ನು ಸಾರಿದಾಗ ಯೆಹೂದಿ ನಾಯಕರು ಕೇಳಲಿಲ್ಲ (ವ. 42).
7. ವಚನ 42 ರಲ್ಲಿ ಯೇಸು ಸೊಲೊಮೋನ ಮತ್ತು ಸ್ವತಃ ತನ್ನ ನಡುವೆ ಮಾಡುವ ಹೋಲಿಕೆ: ಯೇಸುವು ಸೊಲೊಮೋನನಿಗಿಂತಲೂ ಹೆಚ್ಚಿನವನಾಗಿದ್ದಾನೆ, ಹಾಗಾಗಿ ಶೆಬದ ರಾಣಿಯು ಸೊಲೊಮೋನನ ಜ್ಞಾನವನ್ನು ಕೇಳಿದ್ದಕ್ಕಿಂತ ಹೆಚ್ಚಾಗಿ ಯೆಹೂದಿ ನಾಯಕರು ಯೇಸುವಿನ ಬೋಧನೆಯನ್ನು ಗಮನವಿಟ್ಟು ಕೇಳಬೇಕೆಂದು ದೇವರು ಬಯಸಿದನು.

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ಈ ವಾಕ್ಯಭಾಗದಲ್ಲಿ ಯೋನನ ಎರಡು ಸೂಚಕಕಾರ್ಯಗಳಿರುವಂತೆ ತೋರುತ್ತದೆ:

   ಅ. ಮೊದಲನೆಯದು, ಮೂರು ದಿನಗಳು:

   - ಯೋನನು ಭೂಮಿಯ ಮೇಲೆ ಹಾಕಲ್ಪಡುವುದಕ್ಕಿಂತ ಮುಂಚೆ ಮೂರು ದಿನಗಳ ಕಾಲ ಮೀನಿನ ಹೊಟ್ಟೆಯಲ್ಲಿ ಸಮಯ ಕಳೆಯುತ್ತಾನೆ.
   - ಹಾಗೆಯೇ ಯೇಸುವು ಸಹ ಸತ್ತವರಿಂದ ಎಬ್ಬಿಸಲ್ಪಡುವುದಕ್ಕಿಂತ ಮುಂಚೆ ಮೂರು ದಿನಗಳ ಕಾಲ ಸಮಾಧಿಯಲ್ಲಿರುವನು.

   ಆ. ದೇವರ ವಾಕ್ಯವನ್ನು ಸಾರುವಾಗ ಪಾಶ್ಚಾತ್ತಾಪ:

   - ಯೋನನು ನಿನವೆ ಪಟ್ಟಣದ ಮೇಲೆ ದೇವರ ನ್ಯಾಯತೀರ್ಪನ್ನು ಸಾರಿದಾಗ ಅಲ್ಲಿನ ಜನರು ಪಶ್ಚಾತ್ತಾಪಟ್ಟರು.
   - ಹಾಗೆಯೇ ಯೇಸುವು ದೇವರ ರಾಜ್ಯದ ಕುರಿತ ಶುಭವಾರ್ತೆಯನ್ನು ಸಾರುವಾಗ ಯೆಹೂದಿ ನಾಯಕರು ಪಶ್ಚಾತ್ತಾಪಪಟ್ಟು ದೇವರ ರಕ್ಷಣೆಯನ್ನು ಅಂಗೀಕರಿಸಿರಬೇಕು.

ಇ. ಎರಡೂ ವಿವರಗಳಲ್ಲಿ "ದಕ್ಷಿಣ ದೇಶದ ರಾಣಿಯ ಗುರುತು" ಅಥವಾ ಸೊಲೊಮೋನನ ಗುರುತನ್ನು ನಾವು ಕಾಣುತ್ತೇವೆ: ಶೆಬದ ರಾಣಿಯು ಸೊಲೊಮೋನನ ಜ್ಞಾನವನ್ನು ಕೇಳಲು ಬರುತ್ತಾಳೆ. ಆದರೆ ಯೆಹೂದಿ ನಾಯಕರು ಯೇಸುವಿನ ಮೂಲಕ ದೇವರ ಜ್ಞಾನವನ್ನು ಕೇಳಿಸಿಕೊಳ್ಳಲು ತಲೆಕೆಡಿಸಿಕೊಳ್ಳಲಿಲ್ಲ.

2. "ಯೋನನಲ್ಲಿನ ಸೂಚಕಕಾರ್ಯಗಳ ಸಮನಾಂತರ ವಾಕ್ಯಭಾಗಗಳನ್ನು (ಮತ್ತಾ. 12:38-42 ಮತ್ತು ಲೂಕ 11:29-32) ನಾವು ಅವುಗಳ ನಡುವೆ ಒಂದು ಪ್ರಮುಖ ವ್ಯತ್ಯಾಸವನ್ನು ಕಾಣುತ್ತೇವೆ:

   ಅ. ಮತ್ತಾಯದಲ್ಲಿ "ಯೋನನಲ್ಲಿ ಎರಡು ಸೂಚಕಕಾರ್ಯಗಳಿವೆ"

   ಆ. ಹಿಂದಿನ ಪ್ರಶ್ನೆಯ ಉತ್ತರ ನೋಡಿರಿ

   ಇ. ಲೂಕದಲ್ಲಿ ಯೋನನಲ್ಲಿನ ಒಂದೇ ಸೂಚಕಕಾರ್ಯವನ್ನು ಕಾಣಬಹುದು: ದೇವರ ವಾಕ್ಯವನ್ನು ಸಾರಿದಾಗ ನಿನೆವೆ ಜನರು ಪಶ್ಚಾತ್ತಾಪಟ್ಟರು.

3. ಯೇಸುವು ತನ್ನ ಸ್ವಂತ ಸಂತತಿಯ ಯೆಹೂದಿ ನಾಯಕರನ್ನು (ಅವರನ್ನು "ವ್ಯಭಿಚಾರಿಣಿಯಂತಿರುವ ಕೆಟ್ಟ ಸಂತತಿ" ಎನ್ನುವುದರಿಂದ) "ನಿನೆವೆ" ಮತ್ತು "ದಕ್ಷಿಣ ದೇಶದ ರಾಣಿ" ಯೊಂದಿಗೆ ತದ್ವಿರುದ್ಧವಾಗಿ ತೋರಿಸುತ್ತಾನೆ: ನಿನೆವೆಯು ಒಂದು ಅನ್ಯಪಟ್ಟಣವಾಗಿತ್ತು ಮತ್ತು ದಕ್ಷಿಣದ ರಾಣಿಯು ಒಬ್ಬ ಅನ್ಯ ರಾಣಿಯಾಗಿದ್ದಳು. ಹೀಗೆ ಯೇಸು ದೇವರಾದುಕೊಂಡು ಜನರ ಗುಂಪಿಗೆ ಸೇರದ ಜನರನ್ನು ದೇವರಾದುಕೊಂಡ ಜನರಿಗಾಗಿ ದೇವರು ಆರಿಸಿಕೊಂಡ ನಾಯಕರೆಂಬುದಾಗಿ ತಮ್ಮನ್ನು ಪರಿಗಣಿಸಿಕೊಂಡ ಫರಿಸಾಯರು ಮತ್ತು ಸದ್ದುಕಾಯರಿಗಿಂತ ಉತ್ತಮವಾಗಿ ತೋರಿಸುತ್ತಾನೆ. ಹೀಗೆ ದೇವರ ರಾಜ್ಯವು ಸಾಮಾಜಿಕ ಮತ್ತು ಧಾರ್ಮಿಕ ಹಿನ್ನಲೆಗಳ ಹೊರತಾಗಿ ಯೇಸುವನ್ನು ಅಂಗೀಕರಿಸುವವರೆಲ್ಲರಿಗೆ ಸಂಬಂಧಿಸಿದೆ ಎಂಬುದನ್ನು ಮತ್ತೊಂದಾವರ್ತಿ ನಾವು ಕಾಣಬಹುದು.

4. "ಯೋನನಲ್ಲಿನ ಸೂಚಕಕಾರ್ಯವು" ಇಂದಿನ ಕ್ರೈಸ್ತ ವಿಶ್ವಾಸಿಗಳಿಗಾಗಿ ಹೊಂದಿರುವ ಪಾಠಗಳು:

   ಅ. ಸುವಾರ್ತೆಯ ಸಾರೋಣಕ್ಕೆ ಕಿವಿಗೊಟ್ಟು ಅದಕ್ಕೆ ಪ್ರತಿಕ್ರಯಿಸುವುದರ ಪ್ರಾಮುಖ್ಯತೆ: ನಾವೆಂದೂ ದೇವರ ಸಂದೇಶಕರಿಗೆ ಬೆನ್ನು ತಿರುಗಿಸಬಾರದು. ನಾವೆಂದೂ ಸಹ ದೇವರು ಕೊಡುವ ಕೃಪೆ ಮತ್ತು ರಕ್ಷಣೆಯ ಆಹ್ವಾನವನ್ನು ತಿರಸ್ಕರಿಸಬಾರದು.

   ಆ. ವ್ಯಕ್ತಿಗತ ವಿಶ್ವಾಸಿಗಳಾಗಿ ಮತ್ತು ಸಭೆಯಾಗಿ ನಾವು ಮಾಹಾ ಆದೇಶಕ್ಕೆ ವಿಧೇಯರಾಗಲೇಬೇಕು: ಎಲ್ಲಾ ಕಡೆ ಹೋಗಿ ಎಲ್ಲಿರಿಗೂ ಸುವಾರ್ತೆ ಸಾರಿರಿ.

   ಇ. ದೇವರ ವಾಕ್ಯದ ಸರಿಯಾದ ತಿಳುವಳಿಕೆಯ ಪ್ರಾಮುಖ್ಯತೆ: ಯೆಹೂದಿ ನಾಯಕರು ದೇವರ ವಾಕ್ಯವನ್ನು ತಪ್ಪಾಗಿ ಅರ್ಥೈಸಿ, ದೇವಜನರನ್ನು ದಾರಿತಪ್ಪಿಸಿದ್ದರಿಂದ ಯೇಸು ಅವರನ್ನು "ವ್ಯಭಿಚಾರಿಣಿಯಂತಿರುವ ಕೆಟ್ಟ ಸಂತತಿ" ಎಂದು ಕರೆಯುತ್ತಾನೆ. ಇದು ನಮಗೂ ಸಹ ಒಂದು ಎಚ್ಚರಿಕೆಯಾಗಿದೆ. ನಾವು ಒಳ್ಳೆಯ ನಾಯಕತ್ವಕ್ಕಾಗಿ ತವಕಿಸಬೆಕು ಮತ್ತು ನಮ್ಮ ಸೇವೆಯ ಕೊನೆಯಲ್ಲಿ ದೇವರು "ಭಲಾನಂಬಿಗಸ್ತನಾದ ಆಳು" ಎಂದು ಹೇಳಬೇಕು.

## 7. ಉತ್ತರಗಳು: ಪರಲೋಕರಾಜ್ಯ ಕುರಿತ ಸಾಮ್ಯಗಳು, ಮತ್ತಾಯ ಅಧ್ಯಾಯ 13

### ಪ್ರಶ್ನೆಗಳಿಗೆ ಉತ್ತರಗಳು

1. ಯೇಸುವು ಜನರ ಗುಂಪಿಗೆ ಬಿತ್ತುವವನ ಕುರಿತ ಸಾಮ್ಯವನ್ನು ಹೇಳಿದ ನಂತರ (ಮತ್ತಾ. 13:3-9) ಶಿಷ್ಯರು ಆತನ ಬಳಿ ನೀನು ಯಾಕೆ ಜನರ ಸಂಗಡ ಸಾಮ್ಯರೂಪವಾಗಿ ಮಾತನಾಡುತ್ತೀ ಎಂಬ ಪ್ರಶ್ನೆಯನ್ನು ಕೇಳುತ್ತಾರೆ (ವ. 10).
2. ಶಿಷ್ಯರಿಗೆ ತಾನು ಕೊಟ್ಟ ಉತ್ತರದಲ್ಲಿ ಯೇಸು ಎರಡು ಬಗೆಯ ಜನರನ್ನು ತಿಳಿಸುತ್ತಾನೆ (ವ. 11):
   ಅ. ಪರಲೋಕರಾಜ್ಯದ ಗುಟ್ಟುಗಳನ್ನು ತಿಳಿದಿರುವ ಜನರು: ಅವರು ದೇವರಾಜ್ಯದ ಕುರಿತ ಸುವಾರ್ತೆಯನ್ನು ಸ್ವೀಕರಿಸಿದವರು.
   ಆ. ಪರಲೋಕರಾಜ್ಯದ ಗುಟ್ಟುಗಳನ್ನು ತಿಳಿಯುವ ವರವಿಲ್ಲದವರು: ಇವರು ದೇವರ ರಾಜ್ಯದ ಕುರಿತ ಸುವಾರ್ತೆಯನ್ನು ಸ್ವೀಕರಿಸದೇ ಇರುವವರಾಗಿದ್ದಾರೆ.
3. ಜನರೊಂದಿಗೆ ಯಾಕೆ ಸಾಮ್ಯರೂಪದಲ್ಲಿ ಮಾತನಾಡುತ್ತೀಯ ಎಂಬ ಶಿಷ್ಯರ ಪ್ರಶ್ನೆಗೆ ಉತ್ತರಿಸುವಲ್ಲಿ ಯೇಸು (ವ. 13-14) ಹಳೇ ಒಡಂಬಡಿಕೆಯಿಂದ ಎರಡು ವಚನಗಳನ್ನು ಬಳಸುತ್ತಾನೆ: ಜನರು ದೇವರ ವಾಕ್ಯವನ್ನು ಕೇಳಿದರು. ಆದರೆ ಅದನ್ನವರು ಅರ್ಥೈಸಿಕೊಳ್ಳಲಿಲ್ಲ ಯಾಕೆಂದರೆ ಅವರು ತಮ್ಮ ಹೃದಯವನ್ನು ಕಠಿಣಪಡಿಸಿಕೊಂಡರು. ಆದರೆ ಅವರ ಹೃದಯವು ದೇವರ ಸಂದೇಶಕ್ಕೆ ತೆರೆದಿದ್ದರೆ ಅವರು ಆತನೆಡೆಗೆ ತಿರುಗಿಕೊಂಡು ದೇವರ ರಕ್ಷಣೆಯನ್ನು ಅನುಭವಿಸುತ್ತಿದ್ದರು. ದುಃಖಕರ ಸಂಗತಿಯೆಂದರೆ ಯೇಸುವಿನ ಸಂದೇಶವನ್ನು ಸ್ವೀಕರಿಸಲು ಮನಸ್ಸಿಲ್ಲದವರಿಗೆ ಅದರ ಹಿಂದಿನ ಸತ್ಯವೂ ಮರೆಯಾಗಿರುತ್ತದೆ. ಇದರ ಪರಿಣಾಮವಾಗಿ ಅವರು ದೇವರರಾಜ್ಯದೊಳಗೆ ಪ್ರವೇಶಿಸಲಾರರು.
4. ವಚನ 34 ರಿಂದ ಯೇಸುವಿನ ಸೇವೆಯ ವಿಷಯದಲ್ಲಿ ಯೇಸು ಜನರೊಂದಿಗೆ ಸಾಮ್ಯರೂಪವಾಗಿ ಮಾತ್ರ ಮಾತನಾಡುತ್ತಾನೆ ಎಂಬುದನ್ನು ನಾವು ಕಲಿಯುತ್ತೇವೆ (ಶಿಷ್ಯರೊಂದಿಗಲ್ಲ). ಹಿಂದೆ ಜನರೊಂದಿಗೆ ಆತನು ಇತರೆ ಬೋಧನಾ ವಿಧಾನಗಳನ್ನು ಉಪಯೋಗಿಸುತ್ತಿದ್ದನು.
5. ವಚನ 36 ರಲ್ಲಿ ನಾವು ಗಲಿಲಾಯ ಸಮುದ್ರದಲ್ಲಿನ ಒಂದು ಬಹಿರಂಗ ಸ್ಥಳದಿಂದ (ನೋಡಿ ವ. 1-2) ಯೇಸುವಿನೊಂದಿಗೆ ಶಿಷ್ಯರು ಮಾತ್ರ ಇರುವ ಒಂದು ಖಾಸಗಿ (ಪ್ರತ್ಯೇಕ) ಸ್ಥಳದೆಡೆಗೆ ದೃಶ್ಯಬದಲಾವಣೆಯಾಗುವುದನ್ನು ನಾವು ಕಾಣುತ್ತೇವೆ. ಈಗ ಯೇಸುವಿಗೆ ಶಿಷ್ಯರೊಂದಿಗೆ ಸಾಮ್ಯಗಳ ಅರ್ಥವನ್ನು ಹೇಳುವ ಸಮಯ ಬಂದಿದೆ.
6. ವಚನ 51 ರಲ್ಲಿ ಯೇಸು ತನ್ನ ಶಿಷ್ಯರಿಗೆ ತಾನು ಸಾಮ್ಯರೂಪದಲ್ಲಿ ಬೋಧಿಸುವುದನ್ನು ಅವರು ಅರ್ಥೈಸಿಕೊಂಡಿರುವರಾ ಎಂದು ಕೇಳುತ್ತಾನೆ.
7. ಹಣಜಿಯ ಕುರಿತ ಸಾಮ್ಯದಲ್ಲಿನ ಅಂಶಗಳ ಅರ್ಥದ ಪಟ್ಟಿ (ವ. 24-30 ಮತ್ತು 37-43):
   - ಬಿತ್ತುವವನು ಮತ್ತು ಯಜಮಾನ – ಮನುಷ್ಯಕುಮಾರನು (ಯೇಸು)
   - ಒಳ್ಳೆಯ ಬೀಜ/ಗೋಧಿ – ರಾಜ್ಯದ ಕುಮಾರರು (ದೇವರರಾಜ್ಯದ ಪ್ರಜೆಗಳು)
   - ಹೊಲ – ಲೋಕ
   - ವೈರಿ – ಸೈತಾನನು
   - ಹಣಜಿ – ಸೈತಾನನ ಮಕ್ಕಳು/ಸೈತಾನನು (ಪಾಪ ಮತ್ತು ಕೆಟ್ಟದ್ದಕ್ಕೆ ಕಾರಣರು)
   - ಆಳುಗಳು - ?
   - ಸುಗ್ಗೀಕಾಲ – ಯುಗದ ಅಂತ್ಯ (ದೇವರ ಕೊನೆಯ ನ್ಯಾಯತೀರ್ಪಿನ ದಿನ)
   - ಸುಗ್ಗಿಕೊಯ್ಯುವವರು – ಮನುಷ್ಯಕುಮಾನರ ದೂತರು
   - ಸುಡುವುದಕ್ಕೆ – ಬೆಂಕಿಯ ಆವಿಗೆ, ಗೋಳಾಟ ಮತ್ತು ಹಲ್ಲುಕಡಿಯುವ ಸ್ಥಳ

- ಯಜಮಾನನ ಕಣಜ – ತಂದೆಯ ರಾಜ್ಯ

8. ಹಣಜಿ ಕುರಿತು ಯೇಸು ಹೇಳುವ ಸಾಮ್ಯದಲ್ಲಿ ಮನುಷ್ಯಕುಮಾರನು ಬಹುಮುಖ್ಯ ಪಾತ್ರವನ್ನು ವಹಿಸುತ್ತಾನೆ (ವ. 37-43): ಆತನು ಒಳ್ಳೆಯ ಬೀಜವನ್ನು (ಗೋಧಿ) ಬಿತ್ತುವವನಾಗಿದ್ದಾನೆ. ಆತನು ಹೊಲದ ಯಜಮಾನನಾಗಿದ್ದಾನೆ (ಲೋಕ) ಮತ್ತು ಸುಗ್ಗಿಕೊಯ್ಯುವವರು ಆತನ ದೂತರಾಗಿದ್ದಾರೆ.
9. ಹಣಜಿಯ ಕುರಿತ ತನ್ನ ಸಾಮ್ಯದ ವಿವರಣೆಯಲ್ಲಿ ಯೇಸು "ದುಷ್ಟರ" ಮತ್ತು "ನೀತಿವಂತರ" ಅಂತ್ಯವನ್ನು ಈ ರೀತಿ ವರ್ಣಿಸುತ್ತಾನೆ (ವ. 37-43):
   a. ದುಷ್ಟರು/ಕಂಟಕರು ಬೆಂಕೀಕೊಂಡದೊಳಕ್ಕೆ ಹಾಕಲ್ಪಡುವರು, ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವುದು.
   b. ನೀತಿವಂತರು ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು.
10. "ಹುಳಿಹಿಟ್ಟಿನ ಸಾಮ್ಯ" ದಲ್ಲಿ ಹುಳಿಯು ದೇವರರಾಜ್ಯದ ಸಕಾರಾತ್ಮಕ ಪ್ರಭಾವವನ್ನು ಸೂಚಿಸುತ್ತದೆ (ವ. 33 ಟಿಪ್ಪಣಿಯೊಂದಿಗೆ). ಹುಳಿಯು ಹಿಟ್ಟನ್ನು ಮಾರ್ಪಡಿಸುವಂತೆ ದೇವರ ರಾಜ್ಯವು ಜನರ ಜೀವಿವನ್ನು ಸಂಪೂರ್ಣವಾಗಿ ಮಾರ್ಪಡಿಸುತ್ತದೆ.
11. ಹೂಳಿಟ್ಟ ದ್ರವ್ಯದ ಸಾಮ್ಯದಲ್ಲಿ ಒಬ್ಬನು ಆ ದ್ರವ್ಯವನ್ನು ಪಡಕೊಳ್ಳುವುದಕ್ಕಾಗಿ ತನ್ನ ಬದುಕನ್ನೆಲ್ಲಾ ಮಾರಿ ಅದನ್ನು ಕೊಂಡುಕೊಳ್ಳುತ್ತಾನೆ (ವ. 44).
12. ಮುತ್ತುಗಳ ಸಾಮ್ಯದಲ್ಲಿ ಆ ಮುತ್ತನ್ನು ಪಡಕೊಳ್ಳುವುದಕ್ಕಾಗಿ ಆ ಮನುಷ್ಯನು ತನ್ನ ಬದುಕನ್ನೆಲ್ಲಾ ಮಾರಿ ಅದನ್ನು ಕೊಂಡುಕೊಳ್ಳುತ್ತಾನೆ (ವ. 45-46).
13. ಬಲೆಯ ಸಾಮ್ಯದಲ್ಲಿ ಮೀನು "ಎಲ್ಲಾ ಜಾತಿಯದು" ಎಂದು ವರ್ಣಿಸಲ್ಪಟ್ಟಿದೆ (ವ. 47-48).


**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. "ಯೇಸು ಯಾಕೆ ಸಾಮ್ಯಗಳನ್ನು ಉಪಯೋಗಿಸಿದನು?" ಎಂಬ ಪ್ರಶ್ನೆಗೆ ಈ ಅಧ್ಯಯನದ ***ಪೀಠಿಕೆಯನ್ನು*** ನೋಡಿರಿ.
2. ವಚನ 51-52 ರಲ್ಲಿ ಯೇಸು ಹೇಳುವ ಅಂಶ: ಈ ವಚನಗಳನ್ನು ಹೇಗೆ ವ್ಯಾಖ್ಯಾನಿಸಬೇಕೆಂಬುದನ್ನು ಸತ್ಯವೇದ ಪಂಡಿತರು ಒಪ್ಪುವುದಿಲ್ಲ. ಯೇಸುವಿನ ಪ್ರಬೋಧನೆಯನ್ನು ಅತ್ಯುತ್ತಮವಾಗಿ ಅರ್ಥೈಸಿಕೊಳ್ಳುವ ವಿಧ ಇದಾಗಿದೆ: "ಹಳೇ ವಸ್ತುಗಳು" ಮೆಸ್ಸೀಯ ಮತ್ತು ಆತನ ರಾಜ್ಯದ ಕುರಿತ ಹಳೇ ಒಡಂಬಡಿಕೆ ವಾಗ್ದಾನಗಳಾಗಿವೆ. "ಹೊಸ ವಸ್ತುಗಳು" ಹೊಸ ಒಡಂಬಡಿಕೆಯಲ್ಲಿ ವಿವರಿಸಲ್ಪಟ್ಟಂತೆ ಯೇಸು ಮತ್ತು ಆತನ ಸೇವೆಯಲ್ಲಿನ ಅವುಗಳ ನೆರವೇರಿಕೆಗಳಾಗಿವೆ. ಹಾಗೇ ದೇವರರಾಜ್ಯದ ಶಿಷ್ಯನಾದ ಬೋಧಕನು ತಾನು ಸಭೆಯಲ್ಲಿ ಬೋಧಿಸುವಾಗ ಮತ್ತು ಪ್ರಸಂಗಿಸುವಾಗ ಈ ವಸ್ತುಗಳು ಎರಡೂ ಬೊಕ್ಕಸಗಳನ್ನು (ತನ್ನ ಹೊಸ ಮತ್ತು ಹಳೆಯ ಜ್ಞಾನವನ್ನು) ಉಪಯೋಗಿಸಬೇಕು.
3. ಹಣಜಿಯ ಸಾಮ್ಯದ ಸಂದೇಶ (ವ. 24:30, 37-43): ಈ ಪ್ರಸಕ್ತ ಲೋಕವು ಇರುವವರೆಗೂ ಗೋಧಿ (ದೇವರ ರಾಜ್ಯದಲ್ಲಿನ ನೀತಿವಂತರು) ಮತ್ತು ಹಣಜಿ (ಕೆಟ್ಟದ್ದನ್ನು ಮಾಡುವ ಸೈತಾನನ ಮಕ್ಕಳು) ಇವೆರಡೂ ಸಹ ಒಟ್ಟಾಗಿ ಬೆಳೆಯುವವು: ನ್ಯಾಯತೀರ್ಪಿನ ದಿನವೇ ಅದನ್ನು ಬೇರ್ಪಡಿಸಲಾಗುತ್ತದೆ.
4. ಹುಳಿಹಿಟ್ಟಿನ ಸಾಮ್ಯದಲ್ಲಿನ ಅಂಶ (ವ. 33): ದೇವರ ರಾಜ್ಯವು ಈ ಲೋಕದ ಮೂಲಕ ಅಗೋಚರವಾದ ರೀತಿಯಲ್ಲಿ ಬೆಳೆದು, ಹಬ್ಬಿ ರೂಪಾಂತರಿಸುತ್ತದೆ.
5. ಹೂಳಿಟ್ಟ ದ್ರವ್ಯದ ಸಾಮ್ಯದಲ್ಲಿ ಯೇಸುವು ಹೇಳುವ ಅಂಶ (ವ. 44): ದೇವರ ರಾಜ್ಯದ ಮೌಲ್ಯವು ಅತ್ಯುನ್ನತವಾಗಿದ್ದುಅದನ್ನು ಪಡಕೊಳ್ಳಲು ಎಲ್ಲವನ್ನು ತ್ಯಾಗಮಾಡಬೇಕಿದೆ.

6. ಬೆಲೆಯುಳ್ಳ ಮುತ್ತಿನ ಸಾಮ್ಯದಲ್ಲಿನ ಅಂಶ (ವ. 45-46): ದೇವರ ರಾಜ್ಯದ ಬೆಲೆಯು/ಯೋಗ್ಯತೆಯು ಅತ್ಯುನ್ನತವಾಗಿದ್ದು ಅದು ಎಲ್ಲವನ್ನು ಮೀರಿಸುತ್ತದೆ.

7. ಬಲೆಯ ಸಾಮ್ಯದಲ್ಲಿ ಉಲ್ಲೇಖಿಸಿದ ಅಂಶಗಳ ಅರ್ಥ (ವ. 47-48) ಮತ್ತು ಸಾಮ್ಯದ ಯೇಸುವಿನ ಅರ್ಥವಿವರಣೆ (ವ. 49-50):
   - ಸಮುದ್ರದಲ್ಲಿ ಹಾಕುವ ಬಲೆಯು ದೇವರ ಕೊನೆಯ ನ್ಯಾಯತೀರ್ಪಿನ ವೇಳೆಯಲ್ಲಿನ ದೇವರ ರಾಜ್ಯವನ್ನು ಪ್ರತಿನಿಧಿಸುತ್ತದೆ.
   - ಸಮುದ್ರವು ಲೋಕವನ್ನು ಪ್ರತಿನಿಧಿಸುತ್ತದೆ.
   - ಎಲ್ಲಾ ಜಾತಿಯ ಮೀನುಗಳು – ಒಳ್ಳೆಯ ಮತ್ತು ಕೆಟ್ಟ ಅಂದರೆ ಎಲ್ಲಾ ರೀತಿಯ ಜನರನ್ನು ಪ್ರತಿನಿಧಿಸುತ್ತವೆ. “ಕೆಟ್ಟವರು” ಮತ್ತು “ನೀತಿವಂತರ” ರಿಬ್ಬರೂ ಸಹ ದೇವರ ರಾಜ್ಯದ ಬಲೆಯೊಳಗೆ ಬೀಳುವರು.
   - ತುಂಬಿದ ಬಲೆಯು ಯುಗಾಂತ್ಯವಾಗಿದೆ, ನ್ಯಾಯತೀರ್ಪಿನ ವೇಳೆಯು ಎಲ್ಲಾ ಜನರನ್ನು ಪ್ರತಿನಿಧಿಸುತ್ತದೆ.
   - ಪುಟ್ಟಿಗಳು ನೀತಿವಂತರ ರಕ್ಷಣೆಯನ್ನು ಪ್ರತಿನಿಧಿಸುತ್ತವೆ.
   - ಬಿಸಾಡುವುದು ದೇವರು ಕೆಟ್ಟವರನ್ನು ತಿರಸ್ಕರಿಸುವುದನ್ನು ಸೂಚಿಸುತ್ತದೆ.

ಈ ಸಾಮ್ಯವು ದೇವರ ಕೊನೆಯ ನ್ಯಾಯತೀರ್ಪು ಸಂಭವಿಸುವಾಗಿನ ಸನ್ನಿವೇಶವನ್ನು ವರ್ಣಿಸುತ್ತದೆ: ದೇವರ ರಾಜ್ಯವು “ಒಳ್ಳೆಯ” ಮೀನು (ನೀತಿವಂತರ) ಮತ್ತು “ಕೆಟ್ಟ” ಮೀನು(ದುಷ್ಟರು)ಗಳ ಮೇಲೂ ಪ್ರಭಾವ ಬೀರುತ್ತದೆ ಮತ್ತು ಕೊನೆಯಲ್ಲಿ ಬಲೆ ಬೀಸಿ ಎಳೆದಾಗ ಅದು ಅವರನ್ನು ಬೇರ್ಪಡಿಸುತ್ತದೆ.



## 8. ಉತ್ತರಗಳು: ಐದು ಸ್ವಸ್ಥತಾ ಅದ್ಭುತಗಳು

### ಪ್ರಶ್ನೆಗಳಿಗೆ ಉತ್ತರಗಳು

1. ಯೇಸುವಿನ ಹಿಂದೆ ಹೋಗುತ್ತಿದ್ದ ಇಬ್ಬರು ಕುರುಡರು “ದಾವೀದನ ಕುಮಾರನೇ ನಮ್ಮನ್ನು ಕರುಣಿಸು” ಎಂದು ಕೂಗುತ್ತಾರೆ (ಮತ್ತಾ. 9:27). ಯೇಸುವು ಮೆಸ್ಸೀಯನಾಗಿದ್ದಾನೆಂಬುದನ್ನು ಗ್ರಹಿಸಿಕೊಂಡು ಅವರು ಆತನು ತಮಗೆ ಕಣ್ಣನ್ನು ಕೊಡಬೇಕೆಂದು ಬಯಸುತ್ತಾರೆ. ಕುರುಡರಿಗೆ ಕಣ್ಣು ಬರುವುದು ದೇವರ ಮೆಸ್ಸೀಯನ ಪ್ರವಾದನೆಗಳಲ್ಲಿ ಒಂದಾಗಿತ್ತೆಂಬುದನ್ನು ಅವರು ತಿಳಿದಿದ್ದಿರಬಹುದು (ನೋಡಿ ಯೆಶಾಯ 35:5).
2. ಯೇಸು ಆ ಕುರುಡರಿಗೆ “ನಾನು ನಿಮಗೆ ಕಣ್ಣು ಕೊಡಬಲ್ಲೆನೆಂಬುದನ್ನು ನೀವು ನಂಬುತ್ತೀರೋ?” ಎಂದು ಕೇಳಿದನು (ಮತ್ತಾ. 9:28). ಅವರದಕ್ಕೆ “ಹೌದು” ಎಂದುತ್ತರಿಸುತ್ತಾರೆ. ಅವರು ಆತನ ಮೇಲೆ ನಂಬಿಕೆಯಿಟ್ಟ ನಿಮಿತ್ತವೇ ಆತನ ಹಿಂದೆ ಹೋಗುತ್ತಾ ತಮ್ಮನ್ನು ಕರುಣಿಸಬೇಕೆಂದು ಕೂಗಿಕೊಳ್ಳುತ್ತಾರೆ.
3. ಇಬ್ಬರು ಕುರುಡರು ಯೇಸುವಿನ ಸಲಹೆಗೆ ವಿಧೇಯರಾಗುವುದಿಲ್ಲ (ಮತ್ತಾ. 9:30-31). ಆತನವರಿಗೆ ತಮಗೆ ಆದ ಅದ್ಭುತವನ್ನು ಯಾರಿಗೂ ತಿಳಿಸಬೇಡಿರಿ ಎಂದು ಹೇಳಿದನು. ಆದರೆ ಬದಲಾಗಿ ಅವರು ತಮಗಾದ ಸ್ವಸ್ಥತೆಯನ್ನು ದೇಶದೊಳಗೆಲ್ಲಾ ಹಬ್ಬಿಸುತ್ತಾರೆ.
4. ದೆವ್ವಹಿಡಿದಿದ್ದ ಮೂಕನನ್ನು ಯೇಸುವಿನ ಬಳಿಗೆ ಕರೆತರಲಾಗುತ್ತದೆ (ಮತ್ತಾ. 9:32). ಬಹುಶಃ ಸ್ವತಃ ಆತನಿಗೆ ಯೇಸುವಿನ ಬಳಿಗೆ ಬರಲು ಆಗದೆ ಇದ್ದಿರಬಹುದು.
5. ದೆವ್ವಹಿಡಿದಿದ್ದ ಮೂಗನು ಸ್ವಸ್ಥವಾದುದ್ದಕ್ಕೆ ಜನರು ಬೆರಗಾಗುತ್ತಾರೆ (9:33). ಇಂಥ ಕಾರ್ಯವನ್ನು ಅವರು ಹಿಂದೆಂದೂ ಕಂಡಿರಲಿಲ್ಲ ಮತ್ತು ಅವರು ಯೇಸುವು ಮೆಸ್ಸೀಯನಾಗಿದ್ದಾನೆಂಬುದನ್ನು ಗ್ರಹಿಸಿಕೊಂಡಿರಬಹುದು. ಯಾಕೆಂದರೆ ಮೂಗನು ಹರ್ಷಿಸುವುದು ಮೆಸ್ಸೀಯನ ವಾಗ್ದಾನಗಳಲ್ಲಿ ಒಂದಾಗಿತ್ತು (ನೋಡಿ ಯೆಶಾಯ 35:6)
6. ದೆವ್ವಹಿಡಿದಿದ್ದ ಮೂಗನ ಸ್ವಸ್ಥತೆಗೆ ಫರಿಸಾಯರು ಅನುಮಾನದಿಂದ ಪ್ರತಿಕ್ರಯಿಸುತ್ತಾರೆ. ಅಲ್ಲದೆ ಅವರು ಯೇಸುವು ಸೈತಾನನ ಸಹಾಯದಿಂದಿ (ಬಲದಿಂದ) ಅದ್ಭುತಗಳನ್ನು ಮಾಡುತ್ತಾನೆಂಬುದಾಗಿ ಹೇಳಿದರು (ಮತ್ತಾ. 9:33).
7. ಸಬ್ಬತ್ ದಿನದಂದು ಸಭಾಮಂದಿರದಲ್ಲಿ ಯೇಸು ಉಪದೇಶ ಮಾಡುತ್ತಿದ್ದನು (ಲೂಕ 13:10).
8. ಸಭಾಮಂದಿರದಲ್ಲಿನ ಸ್ತ್ರೀಯ ಬಗ್ಗೆ ಲೂಕನು ತನ್ನ ಓದುಗರಿಗೆ ಮೂರು ಬಗೆಯ ಮಾಹಿತಿಯನ್ನು ಕೊಡುತ್ತಾನೆ (ಲೂಕ 13:11):
   - ಆಕೆಯು ಹದಿನೆಂಟು ವರ್ಷಗಳಿಂದ ಬಾಧೆಪಡುತ್ತಿದ್ದಳು
   - ಆಕೆಯ ನಡುವು ಬೊಗ್ಗಿ ಹೋದುದ್ದರಿಂದ ಆಕೆಗೆ ನೆಟ್ಟಗೆ ನಿಲ್ಲಲಾಗುತ್ತಿರಲಿಲ್ಲ
   - ಆಕೆಯ ರೋಗಕ್ಕೆ ಆಕೆಗೆ ಹಿಡಿದ ದೆವ್ವವಾಗಿತ್ತು
9. ಯೇಸು ನಡುಬೊಗ್ಗಿ ಹೋಗಿದ್ದ ಸ್ತ್ರೀಯನ್ನು (ಲೂಕ 13:12-13) ಈ ರೀತಿಯಾಗಿ ಗುಣಪಡಿಸುತ್ತಾನೆ:
   - ಮೊದಲನೆಯದಾಗಿ ಆತನು ಆಕೆಯನ್ನು ಹತ್ತಿರಕ್ಕೆ ಬರಲು ಹೇಳುತ್ತಾನೆ.
   - ಅನಂತರ ಆತನು ಆಕೆಯ ರೋಗನ್ನು ಬಿಡುಗಡೆ ಮಾಡಿದ್ದೇನೆಂಬುದಾಗಿ ಹೇಳುತ್ತಾನೆ.
   - ಅಂತಿಮವಾಗಿ ಆತನು ಆಕೆಯ ಮೇಲೆ ಕೈಯನ್ನಿಡುತ್ತಾನೆ.
10. ಯೇಸು ಸಬ್ಬತ್ ದಿನದಲ್ಲಿ ಆ ಸ್ತ್ರೀಯನ್ನು ಗುಣಪಡಿಸಿದ್ದರಿಂದ ಸಭಾಮಂದಿರದ ಅಧಿಕಾರಿಯು ಯೇಸುವಿನ ಮೇಲೆ ರೋಷಗೊಳ್ಳುತ್ತಾನೆ (ಲೂಕ 13:14).

11. ಯೇಸು ಯೆಹೂದಿ ನಾಯಕರನ್ನು "ಕಪಟಿ" ಗಳೆಂದು ಕರೆಯುತ್ತಾನೆ (ಲೂಕ 13:15-16), ಯಾಕೆಂದರೆ ಅವರು ತಮ್ಮನ್ನು ಧರ್ಮಶಾಸ್ತ್ರ ರಕ್ಷಕರು ಮತ್ತು ಅದರ ನಿಯಮಗಳನ್ನು ಪಾಲಿಸುವುದರಲ್ಲಿ ಶ್ರದ್ಧೆಯುಳ್ಳವರೆಂಬುದಾಗಿ ಕರೆದುಕೊಳ್ಳುತ್ತಿದ್ದರು. ಆದರೆ ಒಬ್ಬ ಬಡ ಹೆಂಗಸಿನ ಬಾಧೆಯ ಬಗ್ಗೆ ಕಾಳಜಿಯಿಲ್ಲದವರಾಗಿದ್ದರು. ಅಲ್ಲದೆ ಅವರು ಯೇಸುವನ್ನು ದೂಷಿಸಲು ಕಾರಣವನ್ನು ಹುಡುಕುವ ದುರುದ್ದೇಶವನ್ನು ಹೊಂದಿದ್ದರು.

12. ನಡುಬೊಗ್ಗಿ ಹೋಗಿದ್ದ ಸ್ತ್ರೀಯ ಸ್ವಸ್ಥತೆಯ ಕುರಿತ ವಾದದ ಪರಿಣಾಮ (ಲೂಕ 13:12):

ಅ. ಯೆಹೂದಿ ನಾಯಕರು ನಾಚಿಕೊಂಡರು

ಆ. ಗುಂಪುಕೂಡಿದ್ದ ಜನರು ಯೇಸು ಮಾಡಿದ್ದ ಮಹತ್ವದ ಕಾರ್ಯಗಳಿಗೆ ಸಂತೋಷಪಟ್ಟರು

13. ಜಲೋಧರವುಳ್ಳ ವ್ಯಕ್ತಿಯ ಸ್ವಸ್ಥತೆಯು ಸಬ್ಬತ್ ದಿನದಲ್ಲಿ ಫರಿಸಾಯರು ಮುಖ್ಯಸ್ಥರಲ್ಲೊಬ್ಬನ ಮನೆಯಲ್ಲಿ ಸಂಭವಿಸುತ್ತದೆ (ಲೂಕ 14:1-2).

14. ಜಲೋಧರವುಳ್ಳ ವ್ಯಕ್ತಿಯ ಸ್ವಸ್ಥತೆಯ ಕಥೆಯಲ್ಲಿನ ಘಟನೆಗಳ ಕ್ರಮ (ಲೂಕ 14:1-6):

- ಅತಿಥೇಯನೂ ಮತ್ತು ಆತನ ಸ್ನೇಹಿತರು ಧರ್ಮೋಪದೇಶಕರು ಮತ್ತು ಫರಿಸಾಯರೂ ಆಗಿದ್ದು ಯೇಸುವು ಸಬ್ಬತ್ ದಿನದಲ್ಲಿ ಕಾನೂನುಬಾಹೀರವಾದುದ್ದೇನಾದರೂ ಮಾಡುತ್ತಾನಾ ಎಂದು ಎಚ್ಚರಿಕೆಯಿಂದ ನೋಡುತ್ತಿದ್ದರು.
- ಯೇಸುವು ತನ್ನೆದುರು ಜಲೋಧರವುಳ್ಳ ಮನುಷ್ಯನು ನಿಂತಿರುವುದನ್ನು ನೋಡುತ್ತಾನೆ.
- ಯೇಸುವು ಧರ್ಮೋಪದೇಶಕರು ಮತ್ತು ಫರಿಸಾಯರ ಬಳಿ ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವುದು ಸರಿಯೋ ಸರಿಯಲ್ಲವೋ ಎಂದು ಕೇಳಿದನು.
- ಯೆಹೂದಿ ನಾಯಕರು ಯೇಸುವಿನ ಪ್ರಶ್ನೆಗೆ ಉತ್ತರಿಸಲಾರದೆ ಹೋದರು (ಲೂಕ 14:3 ರ ಟಿಪ್ಪಣಿ ನೋಡಿರಿ).
- ಯೇಸು ಆ ವ್ಯಕ್ತಿಯ ಕೈ ಹಿಡಿದು ವಾಸಿಮಾಡುತ್ತಾನೆ
- ಯೇಸು ಆ ವ್ಯಕ್ತಿಯನ್ನು ಕಳುಹಿಸುತ್ತಾನೆ
- ಯೇಸು ಧರ್ಮೋಪದೇಶಕರು ಮತ್ತು ಫರಿಸಾಯರಿಗೆ ಎರಡನೇ ಪ್ರಶ್ನೆಯನ್ನು ಕೇಳುತ್ತಾನೆ: ಸಬ್ಬತ್ ದಿನದಲ್ಲಿ ಒಬ್ಬ ವ್ಯಕ್ತಿಯ ಅಥವಾ ಪ್ರಾಣಿಯ ಜೀವವನ್ನು ಉಳಿಸುವ ಕಾರ್ಯ ಮಾಡುವಿರಾ?
- ಪುನಃ ಯೆಹೂದಿ ನಾಯಕರು ಯೇಸುವಿನ ಪ್ರಶ್ನೆಗೆ ಉತ್ತರಿಸಲಾರದೆ ಹೋದರು. ಅವರಿಗೆ ಹೇಳಲು ಏನೂ ಇರಲಿಲ್ಲ.

15. ಯೇಸು ಹತ್ತು ಮಂದಿ ಕುಷ್ಠರೋಗಿಗಳನ್ನು ಗುಣಪಡಿಸಿದ್ದರ ಕುರಿತ ಕಥೆಯು ಸಮಾರ್ಯ ಮತ್ತು ಗಲಿಲಾಯ ಸೀಮೆಗಳ ನಡುವಿನ ಒಂದು ಹಳ್ಳಿಯಲ್ಲಿ ಸಂಭವಿಸುತ್ತದೆ (ಲೂಕ 17:11-12).

16. ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಒಬ್ಬ ವ್ಯಕ್ತಿಯು ಕುಷ್ಠದಿಂದ ಗುಣಹೊಂದಿರುವನಾ ಎಂಬುದನ್ನು ಯಾಜಕನೇ ನಿರ್ಧರಿಸುತ್ತಿದ್ದನು. ಆದ್ದರಿಂದ ಯೇಸು ಹತ್ತುಮಂದಿ ಕುಷ್ಠರೋಗಿಗಳಿಗೆ ಹೋಗಿ ಯಾಜಕನಿಗೆ ಮೈಯನ್ನು ತೋರಿಸಿಕೊಳ್ಳಿರಿ ಎಂದು ಹೇಳಿದನು (ಲೂಕ 17:14).

17. ಗುಣವಾದ ನಂತರ ಯೇಸುವಿನ ಬಳಿಗೆ ಬಂದ ವ್ಯಕ್ತಿಯ ಬಗ್ಗೆ ಲೂಕನು ತನ್ನ ಓದುಗರಿಗೆ ನಾಲ್ಕು ಸಂಗತಿಗಳನ್ನು ಹೇಳುತ್ತಾನೆ (ಲೂಕ 17:15-16):

ಅ. ತಾನು ಗುಣಹೊಂದಿದ್ದಕ್ಕೆ ಆತನು ಸಂತೋಷಗೊಂಡಿದ್ದನು

ಆ. ತನ್ನ ಸ್ವಸ್ಥತೆಗಾಗಿ ಆತನು ದೇವರನ್ನು ಕೊಂಡಾಡಿದನು

ಇ. ಆತನು ಯೇಸುವಿನ ಪಾದಗಳಿಗೆ ಅಡ್ಡಬಿದ್ದು ಸ್ವಸ್ಥತೆಗಾಗಿ ಆತನಿಗೆ ಉಪಕಾರಸ್ತುತಿ ಮಾಡುತ್ತಾನೆ

ಈ. ಆತನು ಒಬ್ಬ ಯೆಹೂದ್ಯನಲ್ಲ ಬದಲಾಗಿ ಒಬ್ಬ ಸಮಾರ್ಯನಾಗಿದ್ದನು.

18. ಆ ಮನುಷ್ಯನನ್ನು ಯೇಸು "ಅನ್ಯದೇಶದವನು" ಎಂದು ವರ್ಣಿಸುತ್ತಾನೆ (ಲೂಕ 17:18).

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. –
2. –
3. –
4. –
5. –
6. ಅಸ್ವಸ್ಥತೆಯ ಕುರಿತ ಈ ಐದು ಕಥೆಗಳಲ್ಲಿ ನಂಬಿಕೆಯು ವಹಿಸುವ ಪಾತ್ರ:

ಅ. "ನಂಬಿಕೆಯು" ಐದರಲ್ಲಿನ ಎರಡು ಕಥೆಗಳಲ್ಲಿ ಮಾತ್ರ ತಿಳಿಸಲ್ಪಟ್ಟಿದೆ:


- ಇಬ್ಬರು ಕುರುಡರ ಸ್ವಸ್ಥತೆ (ಮತ್ತಾ. 9:29): ಯೇಸು ಆ ಇಬ್ಬರಿಗೆ ತಾನು ಅವರನ್ನು ಸ್ವಸ್ಥಪಡಿಸುತ್ತೇನೆಂಬುದನ್ನು ನಂಬುವಿರಾ ಎಂದು ಕೇಳುತ್ತಾನೆ. ಅವರು "ಹೌದು" ಎಂದು ಹೇಳಿದಾಗ, ಯೇಸು ಅವರಿಗೆ ಅವರು ತನ್ನಲ್ಲಿ ನಂಬಿಕೆಯಿಟ್ಟ ನಿಮಿತ್ತ ಅವರನ್ನು ಗುಣಪಡಿಸುತ್ತೇನೆಂದು ಹೇಳಿದನು.
- ಹತ್ತು ಕುಷ್ಠರೋಗಿಗಳ ಸ್ವಸ್ಥತೆ (ಲೂಕ 17:19): ತನ್ನ ಬಳಿ ಬಂದು ಕೃತಜ್ಞತೆ ಹೇಳಲು ಬಂದ ಸಮಾರ್ಯದವನಿಗೆ ಯೇಸು ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿ ಅದೆ ಎಂದು ಹೇಳಿದನು.

ಆ. ನಂಬಿಕೆಯ ಒಂದು ಮುಕ್ತ ಘೋಷಣೆಯು ಈ ಕಥೆಗಳಲ್ಲಿ ಒಂದು ಸ್ವಸ್ಥತೆಯ ಅದ್ಭುತವು ನಡೆಯಬೇಕಾದ ಒಂದು ಸ್ಥಿತಿಯೆಂಬುದಾಗಿ ತೋರುವುದಿಲ್ಲ:

- ಒಬ್ಬ ದೆವ್ವಹಿಡಿದಿದ್ದ ಮೂಗನನ್ನು ಯೇಸುವಿನ ಬಳಿಗೆ ಕರೆತರಲಾಗುತ್ತದೆ (ಮತ್ತಾ. 9:22). ಖಂಡಿತವಾಗಿ ಇದು ಯೇಸು ಆ ವ್ಯಕ್ತಿಯನ್ನು ಗುಣಪಡಿಸಬಲ್ಲನೆಂಬ ಆ ವ್ಯಕ್ತಿಗಳ ನಂಬಿಕೆಯ ಭಾವನೆಯಾಗಿತ್ತು.
- ಸಭಾಮಂದಿರದ ಬಳಿ ತನ್ನ ಹತ್ತಿರಕ್ಕೆ ಬಾ ಎಂದು ಯೇಸು ಹೇಳಿದಾಗ ನಡುಬೊಗ್ಗಿಹೋಗಿದ್ದ ಸ್ತ್ರೀಯು ವಿಧೇಯಳಾದಳು (ಲೂಕ 13:12). ಈ ವಿಧೇಯತೆಯು ಯೇಸುವಿನ ಮೇಲಿನ ಆಕೆಯ ನಂಬಿಕೆಯ ಒಂದು ಕಾರ್ಯವಾಗಿತ್ತು.
- ಜಲೋಧರವುಳ್ಳ ವ್ಯಕ್ತಿಯು ಫರಿಸಾಯನ ಮನೆಯಲ್ಲಿ ಯೇಸುವಿಗ ಮುಂದೆ ನಿಂತಿದ್ದನು (ಲೂಕ 14:12). ಬಹುಶಃ ಇದು ನಂಬಿಕೆಯನ್ನು ವ್ಯಕ್ತಪಡಿಸುವಿಕೆಯಾಗಿತ್ತು. ಅಥವಾ ಈ ಶೋಚನೀಯ ಸ್ಥಿತಿಯ ಬಗ್ಗೆ ಕಡೇ ಪಕ್ಷ ಯೇಸುವಾದರೂ ಏನಾದರೂ ಮಾಡುವನೆಂಬ ಒಂದು ನಿರೀಕ್ಷೆಯಾಗಿತ್ತು.

ಇ. ಈ ಎಲ್ಲಾ ಕಥೆಗಳಲ್ಲಿ ಗಮನವು ಯೇಸು ಗುಣಪಡಿಸಿದ ಜನರ ನಂಬಿಕೆಯ ಹಿರಿಮೆ ಮೇಲಿರದೆ ಯೇಸುವಿನ ಹಿರಿಮೆಯ ಮೇಲಿಡಲಾಗಿದೆ. ಯೇಸು ಈ ಬಾಧೆಪಡುತ್ತಿರುವ ಈ ಜನರಿಗೆ ಕರುಣೆ ತೋರಿದನು (ಹೋಲಿಸಿ ಮತ್ತಾ. 9:27, ಲೂಕ 17:13). ಆತನವರನ್ನು ಕನಿಕರಿಸಿ ಪ್ರೀತಿಸಿದನು, ಆ ನಿಮಿತ್ತ ಆತನವರನ್ನು ಗುಣಪಡಿಸಿದನು. ಈ ಎಲ್ಲಾ ಸ್ವಸ್ಥತಾ ಅದ್ಭುತಗಳು ಗುಣಪಡಿಸಲು ಮತ್ತು ರಕ್ಷಿಸಲು ಬಂದ ವಾಗ್ದಾನದ ಮೆಸ್ಸೀಯನೆಂಬುದನ್ನು ಸಾಬೀತುಪಡಿಸಿದವು. ಈ ಸ್ವಸ್ಥತೆಗಳು ದೇವರ ರಾಜ್ಯದ ರೂಪಾಂತರಿಸುವ ಶಕ್ತಿ, ಗುಣಪಡಿಸುವ ಮತ್ತು ರಕ್ಷಿಸುವ ಶಕ್ತಿಯನ್ನು ಪ್ರಕಟಿಸಿದವು.

ಇಂದಿನ ಕ್ರೈಸ್ತ ವಿಶ್ವಾಸಿಗಳು ತಮ್ಮ ನಂಬಿಕೆಯ ಮೇಲೆ ಹೆಚ್ಚು ಗಮನ ಹರಿಸದೇ ಯೇಸುವಿನ ಮೇಲೆ ಗಮನ ಹರಿಸಬೇಕಿದೆ. ಯೇಸುವು ನಮ್ಮ ದೇವರೂ, ನಮ್ಮನ್ನು ಪ್ರೀತಿಸುವ ಮತ್ತು ಕರುಣೆಸುವ ರಕ್ಷಕನೂ ಮತ್ತು ಸ್ವಸ್ಥತೆಪಡಿಸುವವನೂ ಆಗಿದ್ದಾನೆಂದು ತಿಳಿದಿರುವುದರದಿರಂದ ಆತನು ನಮ್ಮನ್ನು ಎಂಥಹ ಸಮಸ್ಯೆಯಿಂದ ಸಹ ಗುಣಪಡಿಸಲು ಶಕ್ತನಾಗಿದ್ದಾನೆಂದು ನಾವು ಯೇಸು ಮತ್ತು ಆತನ ಶಕ್ತಿಯಲ್ಲಿ ನಂಬಿಕೆಯಿಟ್ಟಿದ್ದೇವೆ.



## 9. ಉತ್ತರಗಳು: ದೇವಾಲಯದ ತೆರಿಗೆಯನ್ನು ಕಟ್ಟುವುದು, ಮತ್ತಾ. 17:24-27

### ಪ್ರಶ್ನೆಗಳಿಗೆ ಉತ್ತರಗಳು

1. ದೇವಾಲಯದ ತೆರಿಗೆಯನ್ನು ಎತ್ತುವವರು ಪೇತ್ರನ ಬಳಿ ಯೇಸುವು ದೇವಾಲಯದ ತೆರಿಗೆಯನ್ನು ಸಲ್ಲಿಸುವುದಿಲ್ಲವೇ ಎಂದು ಕೇಳಿದರು. ಪೇತ್ರನದಕ್ಕೆ ಹೌದು, ಸಲ್ಲಿಸುವನು ಅಂದನು (ವ. 24-25).
2. "ಅರಸರ ಮಕ್ಕಳು" ಮತ್ತು "ಬೇರೆಯವರ" ನಡುವಿನ ವ್ಯತ್ಯಾಸ (ವ. 25-26): ಅರಸರು ಬೇರೆಯವರಿಂದ ಮಂಡೇತೆರಿಗೆ ಮತ್ತು ತೆರಿಗೆಗಳಿಗಾಗಿ ಬೇಡಿಕೆಯಿಡುತ್ತಾರೆ ಆದರೆ ತಮ್ಮ ಮಕ್ಕಳಿಂದಲ್ಲ.
3. ಯೇಸು ಪೇತ್ರನಿಗೆ ಸಮುದ್ರಕ್ಕೆ ಹೋಗಿ ಗಾಳಾ ಹಾಕಿ ಮೀನನ್ನು ಹಿಡಿ, ಅದರ ಬಾಯಲ್ಲಿ ನಾಣ್ಯವಿರುವುದು ಎಂದನು. ಯಾಕೆಂದರೆ ಪೇತ್ರನು ಯೆಹೂದಿ ಸಮುದಾಯದ ಬೇಡಿಕೆಯನ್ನು ಈಡೇರಿಸಬೇಕಾಗಿತ್ತು ಮತ್ತು ಆ ಮೀನಿನ ಬಾಯಲ್ಲಿನ ನಾಣ್ಯದಿಂದ ತನ್ನ ಯೇಸುವಿನ ತೆರಿಗೆಯನ್ನು ಕಟ್ಟಬೇಕಾಗಿತ್ತು (ವ. 27).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಸುಂಕ ಮತ್ತು ಮಂಡೇತೆರಿಗೆಯನ್ನು ಕಟ್ಟುವುದರ ಉಲ್ಲೇಕದಲ್ಲಿ "ಅರಸರ ಮಕ್ಕಳು" ಮತ್ತು "ಬೇರೆಯವರ" ನಡುವೆ ಇರುವ ವ್ಯತ್ಯಾಸ (ವ. 25-26): ಮಂಡೇತೆರಿಗೆ ಮತ್ತು ತೆರಿಗೆಗಳನ್ನು ರಾಜನ ಮನೆಯ ಉಪಯೋಗಕ್ಕಾಗಿ ಬಳಸಲಾಗುತ್ತಿತ್ತು. ಆದರೆ ಅರಸನ ಮಕ್ಕಳು ಆ ಮನೆಗೆ ಸೇರಿದವರಾದ್ದರಿಂದ ಅವರು ಮಂಡೇತೆರಿಗೆ ಮತ್ತು ತೆರಿಗೆಯನ್ನು ಕಟ್ಟುವಂತಿರಲಿಲ್ಲ.
2. ವಚನ 27 ರಲ್ಲಿ ಯೇಸು ಸೂಚಿಸುವ ಬೇಸರ (ವ. 27): ಆ ದಿನಗಳಲ್ಲಿ ಯೆಹೂದ್ಯರು ಯೆರೂಸಲೇಮಿನ ದೇವಾಲಯದ ಪರಿಚಾರಕ್ಕಾಗಿ ವಾರ್ಷಿಕ ತೆರಿಗೆಯನ್ನು ಕಟ್ಟುವುದರಿಂದ ತಮ್ಮ ಯೆಹೂದಿ ಸಮುದಾಯದೊಂದಿಗೆ ಸೌಹಾರ್ದತೆಯನ್ನು ತೋರಿಸುತ್ತಿದ್ದರು. ಯೇಸು ಮತ್ತು ಆತನ ಶಿಷ್ಯರೂ ಸಹ ಯೆಹೂದ್ಯರಾಗಿದ್ದರು. ಹಾಗಾಗಿ ಸಹ ಯೆಹೂದ್ಯರನ್ನು ಬೇಸರಗೊಳಿಸಬಾರದೆಂದು ಯೇಸು ತಮ್ಮಿಬ್ಬರ ಪಾಲಿನ ದೇವಾಲಯ ತೆರಿಗೆಯನ್ನು ಕಟ್ಟಲು ಹಣವನ್ನು ಹೇಗೆ ಪಡೆಯುವುದೆಂಬುದನ್ನು ಪೇತ್ರನಿಗೆ ಹೇಳುತ್ತಾನೆ.
3. ಈ ವಾಕ್ಯಭಾಗದ ಸಂದೇಶದ ಮೇಲೆ ಮೂರು ಟಿಪ್ಪಣಿಗಳು:
   - ದೇವಾಲಯವು ತಂದೆಯಾದ ದೇವರ ಸ್ವಂತ ಮನೆಯಾಗಿರುವುದರಿಂದ ಮಗನು ಮತ್ತು ಆತನು ತಂದೆಯ ಕುಟುಂಬಕ್ಕೆ ಸೇರಿಸಿದವರೆಲ್ಲರೂ ದೇವಾಲಯದ ತೆರಿಗೆಯಿಂದ ಹೊರತಾಗಿದ್ದರು. ಇದು ಬರುವ ದೇವರ ರಾಜ್ಯದಲ್ಲಿ ವಿಶ್ವಾಸಿಗಳು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರಕ್ಕೆ ಅದೀನರಾಗಿರದೆ ಕ್ರಿಸ್ತನ ಶಾಸ್ತ್ರಕ್ಕೆ ಅಧೀನರಾಗಿದ್ದಾರೆಂಬುದನ್ನು ಸೂಚಿಸುತ್ತದೆ (ಹೋಲಿಸಿ ಗಲಾತ್ಯ 6:2).
   - ಇದರಲ್ಲಿ ನಮ್ಮ ಸಹಜನರಿಗೆ ಬೇಸರಗೊಳಿಸಬಾರದೆಂಬ ಪಾಠವನ್ನು ಹೊಂದಿದೆ. ಇಂದೂ ಸಹ ಕ್ರೈಸ್ತ ವಿಶ್ವಾಸಿಗಳು ಸಮಾಜಕ್ಕೆ ತಮ್ಮ ಸೌಹಾರ್ದತೆಯನ್ನು ತೋರಿಸುವುದು ಪ್ರಾಮುಖ್ಯವಾದುದ್ದಾಗಿದೆ.
   - ಯೇಸುವು ದೀನತೆಯ ಬಗ್ಗೆ ಒಂದು ಪಾಠವನ್ನು ಕಲಿಸುತ್ತಾರೆ. ದೇವಕುಮಾರನಾಗಿರುವ ಯೇಸುವು ಧರ್ಮಶಾಸ್ತ್ರಕ್ಕೆ ಹೊರತಾದವನಾಗಿದ್ದರೂ ಶಿಲುಬೆಯ ಮೇಲೆ ಮರಣ ಹೊಂದುವವರೆಗೂ ಅದಕ್ಕೆ ತನ್ನನ್ನು ಒಪ್ಪಿಸಿಕೊಟ್ಟನು. ಪೇತ್ರನು ಸಹ ಈ ಅಧೀನತೆ ಮತ್ತು ದೀನತೆಯ ಪಾಠವನ್ನು ಕಲಿತನು: "ಮನುಷ್ಯರು ನೇಮಿಸಿರುವ ಯಾವ ಅಧಿಕಾರಕ್ಕಾದರೂ ಕರ್ತನ ನಿಮಿತ್ತ ಅಧೀನರಾಗಿರಿ" (1 ಪೇತ್ರ 2:13).

## 10. ಉತ್ತರಗಳು: ಕರಣೆಯಿಲ್ಲದ ಸೇವಕ, ಮತ್ತಾಯ 18:21-35

### ಪ್ರಶ್ನೆಗಳಿಗೆ ಉತ್ತರಗಳು

1. ಕರುಣೆಯಿಲ್ಲದ ಸೇವಕನ ಕುರಿತ ಸಾಮ್ಯದ ಸಂದರ್ಭ (ವ. 21-23): ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲೊಬ್ಬನಾದ ಪೇತ್ರನು ಕ್ಷಮಾಪಣೆಯ ಕುರಿತಾದ ಪ್ರಶ್ನೆಯೊಂದಿಗೆ ಯೇಸುವಿನ ಬಳಿಗೆ ಬರುತ್ತಾನೆ. ಒಬ್ಬ ಸಹ – ವಿಶ್ವಾಸಿಯನ್ನು ಏಳು ಬಾರಿ ಕ್ಷಮಿಸಿದರೆ ಸಾಕಾ ಎಂಬುದನ್ನು ತಿಳಿಯಬೇಕೆಂದು ಬಯಸಿದ್ದನು.
2. ಕರುಣೆಯಿಲ್ಲದ ಸೇವಕನ ಸಾಮ್ಯವು ದೇವರ ರಾಜ್ಯದ ಕುರಿತಾಗಿದೆ (ವ. 23).
3. ಮೊದಲ ಸೇವಕನನ್ನು ತನ್ನ ಯಜಮಾನನ ಮನೆಗೆ ಆತನ ಲೆಕ್ಕವನ್ನು ತೆಗೆದುಕೊಳ್ಳುವುದಕ್ಕಾಗಿ ಕರತರಲಾತಯಿತು (ವ. 24).
4. ಒಡೆಯನು ಮೊದಲ ಸೇವಕನು ಮಾಡಿದ ಸಾಲದ ಮೊತ್ತ ಬಹುದೊಡ್ಡದಾಗಿರುವುದರಿಂದ ಆತನನ್ನು ಆತನ ಪತ್ನಿ ಮಕ್ಕಳನ್ನು ಆತನ ಬದುಕೆಲ್ಲವನ್ನೂ ಮಾರಿ ಆ ಹಣದಿಂದ ಸಾಲತೀರಿಸಬೇಕೆಂದು ಅಪ್ಪಣೆ ಮಾಡಿದನು (ವ. 25).
5. ಮೊದಲ ಸೇವಕನ ಬಗ್ಗೆ ಯಜಮಾನನು ಕನಿಕರಪಟ್ಟದ್ದರಿಂದ ಅವನ ಸಾಲವನ್ನು ಆತನು ಬಿಟ್ಟುಬಿಟ್ಟನು (ವ. 27).
6. ಇಬ್ಬರು ಸೇವಕರ ಸಾಲದ ನಡುವಿನ ವ್ಯತ್ಯಾಸ (ವ. 24 ಮತ್ತು ಟಿಪ್ಪಣಿ): ಎರಡನೆಯ ಸೇವಕನು ಮೊದಲ ಸೇವಕನ ಬಳಿ ನೂರು ಹಣ ಸಾಲ ಮಾಡಿದ್ದನು. ಇದು ಒಬ್ಬ ಕೂಲಿಯವನ ಮೂರು ತಿಂಗಳ ಕೂಲಿಗೆ ಸಮನಾಗಿತ್ತು. ಆದರೆ ಮೊದಲನೆಯ ಸೇವಕನು ತನ್ನ ಒಡೆಯನ ಬಳಿ ಕೋಟ್ಯಂತರ ಸಾಲ ಮಾಡಿದ್ದನು. ಅದು 15 ಸಾವಿರ ವರ್ಷಗಳ ದುಡಿಮೆಗೆ ಸಮನಾಗಿತ್ತು. ಯೇಸು ಹೇಳುವುದೇನೆಂದರೆ ಈ ಸಾಲವನ್ನು ಹೋರಿಸಲಾಗಲ್ಲ, ಅದೇ ರೀತಿ ಒಡೆಯನ ಕ್ಷಮಾಪಣೆಯು ಒಬ್ಬ ಸೇವಕನು ತನ್ನ ಸಹ ಸೇವಕನನ್ನು ಕ್ಷಮಿಸುವುದರೊಂದಿಗೆ ಹೋಲಿಸಲಾಗುವುದಿಲ್ಲ.
7. ಮೊದಲ ಸೇವಕನ ಸ್ವಭಾವವನ್ನು ಒಡೆಯನು ತನ್ನ ಇತರ ಸೇವಕರ ಮೂಲಕ ತಿಳಿದುಕೊಳ್ಳುತ್ತಾನೆ (ವ. 31).
8. ಒಡೆಯನು ಮೊದಲ ಸೇವಕನನ್ನು "ಎಲಾ ನೀಚನೇ" ಎಂದು ಕರೆಯುತ್ತಾನೆ, ಯಾಕೆಂದರೆ ಈಗಷ್ಟೇ ಒಡೆಯನಿಂದ ಕರುಣೆಯನ್ನು ಹೊಂದಿದವನು ತನ್ನ ಸಹ – ಸೇವಕನಿಗೆ ಯಾವುದೇ ಕರುಣೆಯನ್ನು ತೋರಲಿಲ್ಲ (ವ. 32-33).
9. ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆ ಹೋದರೆ, ದೇವರಿಂದ ಸಹ ನೀವು ಕ್ಷಮೆಯನ್ನು ನಿರೀಕ್ಷಿಸಲಾಗದು ಎಂಬ ಎಚ್ಚರಿಕೆಯನ್ನು ಯೆಸು ಪೇತ್ರನಿಗೆ ಕೊಡುತ್ತಾನೆ (ವ. 35).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. –
2. ನಿಷ್ಕರುಣೆಯಾದ ಸೇವಕನ ಕುರಿತ ಸಾಮ್ಯದ ಸಂದೇಶವು ಕ್ಷಮಾಪಣೆಯ ಪ್ರಾಮುಖ್ಯತೆಯಾಗಿದೆ. ನಮ್ಮ ಯಜಮಾನನಾದ ದೇವರು ನಮ್ಮನ್ನು ಕುರಣಿಸಿ ಆತನ ಕ್ಷಮೆಯನ್ನು ಹೊಂದಲು ನಾವು ಯೋಗ್ಯಲಾಗಿರದಿದ್ದರೂ ಸಹ ಆತನು ನಮ್ಮೆಲ್ಲ ಪಾಪಗಳನ್ನು ಕ್ಷಮಿಸಿದನು. ಹೀಗಾಗಿ ದೇವರ ರಾಜ್ಯದ ಪ್ರಜೆಗಳಾದ ನಾವು ನಮ್ಮ ಜೀವಿತಗಳಲ್ಲಿ ಆತನನ್ನೇ ಪ್ರತಿಬಿಂಬಿಸಬೇಕು.

## 11. ಉತ್ತರಗಳು: ಶಿಷ್ಯತ್ವದ ಲಕ್ಷಣ (ಸ್ವಭಾವ), ಲೂಕ 9:57-62

### ಪ್ರಶ್ನೆಗಳಿಗೆ ಉತ್ತರಗಳು

1. ಈ ವಾಕ್ಯಭಾಗದಲ್ಲಿ ದಾಖಲಾದ ಘಟನೆಯು ಯೇಸು ಮತ್ತು ಆತನ ಶಿಷ್ಯರು ರಸ್ತೆಯಲ್ಲಿ ಪ್ರಯಾಣಿಸುವಾಗ ಸಂಭವಿಸಿತು (ವ. 57). ಇದರ ಹಿಂದಿನ ವಾಕ್ಯಭಾಗವು (ವ. 51-56) ನಮಗೆ ಹಿನ್ನಲೆಯನ್ನು ಕೊಡುತ್ತದೆ: ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ತನ್ನ ರಕ್ಷಣೆಯ ಕಾರ್ಯವನ್ನು ನೆರವೇರಿಸುವ ಸಮಯವು ಬಂದಿದೆ ಎಂಬುದನ್ನು ಯೇಸು ಅರಿತಿದ್ದನು. ಆತನು ಈ ಪ್ರಯಾಣದಲ್ಲಿ ದೃಢನಿಶ್ಚಯ ಮಾಡಿಕೊಂಡಿದ್ದನು. ಸಮಾರ್ಯದ ಮೂಲಕ ಹೋಗುವಾಗ ಅವರ ವಿರೋಧವನ್ನು ಎದುರಿಸಬೇಕಾಯಿತು.
2. ಒಬ್ಬನು ಯೇಸುವಿಗೆ ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆಂಬುದಾಗಿ ಹೇಳಿದನು (ವ. 57). ಹೀಗೆ ಆತನು ಯೇಸುವಿನ ಒಬ್ಬ ಶಿಷ್ಯನಾಗಬೇಕೆಂದಿದ್ದನು.
3. ಯೇಸು ತನ್ನ ಜೀವಿತವನ್ನು ಒಂದು ಮನೆಯಿಲ್ಲದ ಜೀವನ ಎಂಬುದಾಗಿ ವರ್ಣಿಸುತ್ತಾನೆ (ವ. 58).
4. ಯೇಸುವನ್ನು ಹಿಂಬಾಲಿಸಲು ಆಗದೇ ಇರುವುದಕ್ಕೆ ಎರಡನೆಯವನು ಮೊದಲು ತಾನು ತನ್ನ ತಂದೆಯ ಉತ್ತರಕ್ರಿಯೆಗಳನ್ನು ನೆರವೇರಿಸಬೇಕಿದೆ ಎಂಬ ನೆಪವನ್ನು ಕೊಡುತ್ತಾನೆ (ವ. 59).
5. ಎರಡನೆಯವನಿಗೆ ಯೇಸು ನೀನು ಹೋಗಿ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು ಎಂದು ಹೇಳುತ್ತಾನೆ (ವ. 60).
6. ಯೇಸುವನ್ನು ಹಿಂಬಾಲಿಸದೆ ಇರಲು ಮೂರನೆಯವನು ತಾನು ಹೋಗಿ ಮನೆಯವರಿಗೆ ಹೇಳಿ ಬರಬೇಕು ಎಂಬ ನೆಪವನ್ನು ಹೇಳುತ್ತಾನೆ (ವ. 61).
7. ಯೇಸು ಮೂರನೆಯವನಿಗೆ ದೇವರ ರಾಜ್ಯಕ್ಕೆ ತಕ್ಕವನಾಗಬೇಕಾದರೆ ಮುಂದೆ ನೋಡಬೇಕೆ ವಿನಃ ಹಿಂದೆ ನೋಡಬಾರದೆಂದು ಯೇಸು ಹೇಳುತ್ತಾನೆ (ವ. 62).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಈ ವಾಕ್ಯಭಾಗದಲ್ಲಿನ ಮುಖ್ಯ ಹೇಳಿಕೆಯು (ಲೂಕ 9:57-66) "ಹಿಂಬಾಲಿಸುವುದಾಗಿದೆ". ಸಂಕ್ಷಿಪ್ತವಾದ ರೀತಿಯಲ್ಲಿ ವಾಕ್ಯಭಾಗವು ಯೇಸು ಮತ್ತು ಮೂವರು ವ್ಯಕ್ತಿಗಳ ನಡುವಿನ ಸಂದರ್ಶನವನ್ನು ತಿಳಿಸುತ್ತದೆ. ಪ್ರತಿ ಭೇಟಿ ಸಹ ಯೇಸುವನ್ನು ಹಿಂಬಾಲಿಸುವುದರ ಕುರಿತಾಗಿದೆ:

   ಅ. ಮೊದಲನೆಯ ವ್ಯಕ್ತಿಯು ಎಲ್ಲಿಗೆ ಹೋದರೂ ಯೇಸುವಿನ ಹಿಂದೆ ಹೋಗುತ್ತೇನೆಂಬುದಾಗಿ ಹೇಳುತ್ತಾನೆ.

   ಆ. ಎರಡನೆಯವನು ತನ್ನನ್ನು ಹಿಂಬಾಲಿಸಬೇಕೆಂದು ಯೇಸುವಿನಿಂದ ಆಮಂತ್ರಿಸಲ್ಪಡುತ್ತಾನೆ.

   ಇ. ಮೂನರೆಯವನು ಒಂದು ನಿರ್ದಿಷ್ಟ ಸ್ಥಿತಿಗನುಗುಣವಾಗಿ ಯೇಸುವನ್ನು ಹಿಂಬಾಲಿಸುತ್ತೆನೆಂಬುದಾಗಿ ಹೇಳುತ್ತಾನೆ. ಆ ದಿನಗಳಲ್ಲಿ ಯಾರನ್ನಾದರೂ ಹಿಂಬಾಲಿಸುವುದೆಂದರೆ ಅವರ ಶಿಷ್ಯರಾಗಲು ಬಯಸುವುದು ಎಂದರ್ಥವಾಗಿತ್ತು. ಹೀಗೆ ಈ ವಾಕ್ಯಭಾಗವು ಕ್ರೈಸ್ತೀಯ ಶಿಷ್ಯತ್ವದ ಕುರಿತಾಗಿದೆ.
2. ಲೂಕ 9:52-62 ಮತ್ತು ಮತ್ತಾಯ 8:19-22 ರ ಹೋಲಿಕೆ:
   - ಮತ್ತಾಯನ ವಿವರವು ಲೂಕನ ವಿವರಕ್ಕಿಂತ ಚಿಕ್ಕಾದಾಗಿದೆ. ಇದು ಲೂಕದಲ್ಲಿನ ಮೂರು ಭೇಟಿಗಳಲ್ಲಿ ಮೊದಲೆರಡನ್ನು ಮಾತ್ರ ತಿಳಿಸುತ್ತದೆ.
   - ಮತ್ತಾಯನು ಮೊದಲ ವ್ಯಕ್ತಿಯನ್ನು ಒಬ್ಬ ಶಾಸ್ತ್ರಿಯೆಂಬುದಾಗಿ ವರ್ಣಿಸುತ್ತಾನೆ. ಹಾಗಾಗಿ ಮೊದಲ ವ್ಯಕ್ತಿಯು ಬಹುಶಃ ಒಬ್ಬ ಫರಿಸಾಯನಾಗಿಬಹುದು. ಲೂಕನು ಆತನನ್ನು "ಯಾವನೋ" ಒಬ್ಬನು ಎಂದು ಕರೆಯುತ್ತಾನೆ.

- ಮತ್ತಾಯನು ಎರಡನೆಯವನನ್ನು "ಶಿಷ್ಯರಲ್ಲಿ ಬೇರೊಬ್ಬನು" ಎಂದು ವರ್ಣಿಸುತ್ತಾನೆ. ಇದು ಆತನು ಈಗಾಗಲೇ ಯೇಸುವಿನ ಹಿಂಬಾಲಕನಾಗಿದ್ದನೆಂಬುದನ್ನು ತೋರಿಸುತ್ತದೆ. ಲೂಕನು ಆತನ ಸಂಧಿಸುವ ಕುರಿತಾದ ಮತ್ತಾಯನ ವಿವರವು ಈ ಪರಿಪೂರ್ಣವಾಗಿದೆ: ಆ ವ್ಯಕ್ತಿಯು ನೆಪವನ್ನು ಹೇಳುತ್ತಾನೆ ಆದರೆ ಆತನಿಗೆ ಯೇಸುವು ಕೊಡುವ ಆಮಂತ್ರಣವನ್ನು ತಿಳಿಸಿಲ್ಲ.
- ಲೂಕನ ಸುವಾರ್ತೆಯಲ್ಲಿ ಯೇಸುವು ದೇವರ ರಾಜ್ಯವನ್ನು ಎರಡು ಮತ್ತು ಮೂರನೆಯ ಭೇಟಿಯಲ್ಲಿ ತಿಳಿಸುತ್ತಾನೆ. ಮತ್ತಾಯನ ಸುವಾರ್ತೆಯಲ್ಲಿ ಯೇಸುವು ದೇವರ ರಾಜ್ಯ ಎಂಬ ಮಾತನ್ನು ಬಳಸುವುದೇ ಇಲ್ಲ.
- ಲೂಕನು ಕೊಡವ ವಿವರವು ಮೂರು ಕಾಣಗಳಿಂದ ಸತ್ಯವೇದ ಅಧ್ಯಯನ/ಸಂದೇಶಕ್ಕಾಗಿ ಒಂದು ಉತ್ತಮವಾದ ಪಠ್ಯವಾಗಿ ಕಾರ್ಯನಿರ್ವಹಿಸುತ್ತದೆ: ಮೊದಲನೆಯದಾಗಿ ಇದು ಹೆಚ್ಚಿನ ವಿವರಗಳನ್ನೊಳಗೊಂಡಿದೆ, ಎರಡನೆಯದಾಗಿ ಮೂರು ಜನರ ಮುಂದೆ ಯೇಸು ಇಡುವ ಆಯ್ಕೆಗಳನ್ನು ತದ್ವಿರುದ್ಧವಾಗಿಸುತ್ತದೆ. ಮೂರನೆಯವದು ಇದು ದೇವರ ರಾಜ್ಯದ ದೃಷ್ಟಿಕೋನವನ್ನು ತಿಳಿಸುತ್ತದೆ.

3. ಲೂಕ 9:57-62 ರಲ್ಲಿನ ಸಂದೇಶವನ್ನು ಇಂದಿನ ಕ್ರೈಸ್ತೀಯ ವಿಶ್ವಾಸಿಗಳಿಗಾಗಿ ಈ ರೀತಿಯಾಗಿ ಅರ್ಥೈಸಿಕೊಳ್ಳಬಹುದು:

ಅ. ಯೇಸುವಿನ ಶಿಷ್ಯನೊಬ್ಬನು ಕೆಲವೊಮ್ಮೆ ಕ್ಲಿಷ್ಟಕರವಾದ ಆಯ್ಕೆಗಳನ್ನು ಮಾಡಬೇಕಾಗುತ್ತದೆ. ಈ ಪಠ್ಯವು ಮೂರು ರೀತಿಯ ಆಯ್ಕೆಗಳ ಉದಾಹರಣೆಗಳನ್ನು ತೋರಿಸುತ್ತದೆ.

- ಒಂದು ಉತ್ತಮವಾದ ಜೀವಿತ (ಮನೆ, ಆಹಾರ, ಸ್ನೇಹಿತರು, ಸೌಲಭ್ಯ, ಭದ್ರತೆ ಇತ್ಯಾದಿಗಳೊಂದಿಗೆ) ಮತ್ತು ಒಂದು ಕಷ್ಟ ಮತ್ತು ಬಾಧೆಯನ್ನೊಳಗೊಂಡ ಜೀವಿತದ ನಡುವಿನ ಆಯ್ಕೆ. ಇಂತಹ ಆಯ್ಕೆ ನಮಗೆ ಬಂದರೆ ನಾವು ಯಾವುದನ್ನು ಆರಿಸಿಕೊಳ್ಳುತ್ತೇವೆ?
- ಒಂದು ಸಾಮಾನ್ಯವಾದ ಜೀವಿತ (ಸಾಮಾಜಿಕವಾಗಿ ಮತ್ತು ಸಂಸ್ಕೃತಿಕವಾಗಿ ನಿರೀಕ್ಷಿಸಿದ್ದನ್ನು ಮಾಡುವುದು) ಮತ್ತು ಒಂದು ಅಸಹಜವಾದ (ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಗಳನ್ನು ಮುರಿಯುವ) ಜೀವಿತದ ನಡುವಿನ ಆಯ್ಕೆ. ಇಂತಹ ಆಯ್ಕೆ ಬಂದಾಗ ನಾವು ಯಾವುದನ್ನು ಆರಿಸಿಕೊಳ್ಳುತ್ತೇವೆ?
- ಒಂದು ಪರಿಗಣಿಸುವ ಜೀವಿತ (ಕುಟುಂಬ ಮತ್ತು ಸ್ನೇಹಿತರ ಭಾವನೆಗಳನ್ನು ಪರಿಗಣಿಸುವುದು) ಮತ್ತು ವಿಚಾರ ಶೂನ್ಯ/ನೋಯಿಸುವ ಜೀವಿತದ (ನಮ್ಮ ಕುಟುಂಬ ಅಥವಾ ಸ್ನೇಹಿತರು ಅರಿಯದ ಅಥವಾ ಬಯಸದ ಅಥವಾ ನಿರೀಕ್ಷಿಸದನ್ನು ಮಾಡುವುದು ಮತ್ತು ಕೆಲವೊಮ್ಮೆ ಅವರ ಭಾವನೆಗಳನ್ನು ನೋಯಿಸುವುದು) ನಡುವಿನ ಆಯ್ಕೆ. ಇಂತಹ ಆಯ್ಕೆ ಬಂದಾಗ ನಾವು ಯಾವುದನ್ನು ಆರಿಸಕೊಳ್ಳುತ್ತೇವೆ?

ಆ. ಹೆಚ್ಚಿನ ಸಮಯ ಒಬ್ಬ ಕ್ರೈಸ್ತ ವಿಶ್ವಾಸಿಯ ಜೀವನದಲ್ಲಿ ಈ ಆಯ್ಕೆಗಳ ಅಗತ್ಯವಿಲ್ಲ. ಈ ಲೋಕದಲ್ಲಿ ತನ್ನ ಜನರು ಒಂದು ಉತ್ತಮವಾದ ಸಹಜ ಜೀವಿತವನ್ನು ಜೀವಿಸಬೇಕೆಂದು (ಮನೆ, ಕುಟುಂಬ, ಸ್ನೇಹಿತರು, ಉದ್ಯೋಗ ಇತ್ಯಾದಿ) ದೇವರು ಬಯಸುತ್ತಾನೆ. ಆತನು ನಾವು ನಮ್ಮ ಸಾಮಾಜಿಕ ಮತ್ತು ಕೌಟುಂಬಿಕ ಜವಾಬ್ದಾರಿಗಳನ್ನು (ಮಕ್ಕಳು ಮತ್ತು ಪೋಷಕರನ್ನು ನೋಡಿಕೊಳ್ಳುವುದು, ಸ್ನೇಹಿತರು ಮತ್ತು ನೆರೆಯವರೊಂದಿಗೆ ಒಳ್ಳೆಯ ಸಂಬಂಧವನ್ನು ಇಟ್ಟುಕೊಳ್ಳುವುದು) ನೆರವೇರಿಸಬೇಕೆಂದು ಆತನು ಬಯಸುತ್ತಾನೆ. ಅದು ಇಲ್ಲಿನ ಸಮಸ್ಯೆ/ವಿಷಯವಲ್ಲ. ವಿಷಯ ಅಥವಾ ಸಮಸ್ಯೆ ಏನೆಂದರೆ: ಕಷ್ಟಕರವಾದ ಆಯ್ಕೆಗಳನ್ನು ಮಾಡಬೇಕಾದಾಗ ನಾವು ಯಾವುದನ್ನು ಆರಿಸಿಕೊಳ್ಳುತ್ತೇವೆ? ಯೇಸುವಿನೊಂದಿಗೆ ಬಾಧೆಪಡುವ ಜೀವಿತವನ್ನು ಆರಿಸಿಕೊಳ್ಳುತ್ತೇವಾ? ಆತನಂತೆ ನಿರಾಕರಿಸಲ್ಪಟ್ಟು ಮತ್ತು ತಿರಸ್ಕರಿಸಲ್ಪಡುವುದನ್ನು ಆರಿಸಿಕೊಳ್ಳುತ್ತೇವಾ? ಆತನಂತೆ ಸ್ವತಃ ನಮ್ಮ ಕುಟುಂಬಕ್ಕಿಂತ ಮುಂಚೆ ದೇವರ ರಾಜ್ಯವನ್ನು ಇಡುತ್ತೇವಾ? ನಾವು ಮುನ್ನೋಡುತ್ತಾ ಆತನ ಮೇಲೆ ನಮ್ಮ ದೃಷ್ಟಿಯನ್ನಿಟ್ಟು ಆತನನ್ನು ಹಿಂಬಾಲಿಸುವೆವಾ? ಆಗ ಮಾತ್ರ ನಾವು ನಿಜವಾದ ಶಿಷ್ಯರಾಗುತ್ತೇವೆ. ಆಗ ಮಾತ್ರ ನಾವು ದೇವರ ರಾಜ್ಯದಲ್ಲಿನ ಸೇವೆಗೆ ಅಥವಾ ಕೆಲಸಕ್ಕೆ ತಕ್ಕವರಾಗುತ್ತೇವೆ.

## 12. ಉತ್ತರಗಳು: ಯೇಸು ಎಪ್ಪತ್ತು ಮಂದಿ ಶಿಷ್ಯರನ್ನು ಕಳಿಸಿಕೊಡುವುದು, ಲೂಕ 10:1-20

### ಪ್ರಶ್ನೆಗಳಿಗೆ ಉತ್ತರಗಳು

1. ಇನ್ನೂ ಎಪ್ಪತ್ತು ಮಂದಿ ಶಿಷ್ಯರನ್ನು ಯೆಸು ತಾನು ಹೋಗಬೇಕೆಂದಿದ್ದ ಊರಿಗೆ ಕಳುಹಿಸಿದನು (ವ. 1).
2. ಯೇಸು ತನ್ನ ಶಿಷ್ಯರಿಗೆ ಬೆಳೆಗೆ ಕೆಲಸದವರನ್ನು ಕಳುಹಿಸುವುದಕ್ಕಾಗಿ ದೇವರನ್ನು ಬೆಡಿಕೊಳ್ಳಿರಿ ಎಂದು ಹೇಳಿದನು (ವ. 2). ಜನರು ರಕ್ಷಣೆಯ ಅಗತ್ಯತೆಯಲ್ಲಿದ್ದಾರೆ, ಹಾಗಾಗಿ ಸುವಾರ್ತೆ ಸಾರಲು ಅನೇಕ ಜನರ ಅಗತ್ಯತೆ ಇದೆ.
3. ಅವರ ಪ್ರಯಾಣದ ಅಪಾಯವನ್ನು ವರ್ಣಿಸಲು ಯೇಸು "ತೋಳಗಳ ನಡುವೆ ಕುರಿಮರಿಗಳನ್ನು" ಎಂಬ ಉಪಮೆಯವನ್ನು ಬಳಸುತ್ತಾನೆ (ವ. 3). ಶಿಷ್ಯರುಗಳು ತಾವು ಹೋಗುವ ಸ್ಥಳಗಳಲ್ಲಿ ಅಪಾಯಕಾರಿ ತೋಳಗಳಂತಿರುವ ಜನರ ಮಧ್ಯೆ ನಿರುಪದ್ರವಿ ಕುರಿಗಳಂತಿರುವರು.
4. ಯೇಸು ತನ್ನ ಶಿಷ್ಯರಿಗೆ ಪ್ರಯಾಣದಲ್ಲಿ ಹಣದ ಚೀಲವನ್ನಾಗಲೀ, ಹಸಿಬೆ(ಚೀಲ)ಯನ್ನಾಗಲೀ, ಚಪ್ಪಲಿಗಳನ್ನಾಗಲೀ ಒಯ್ಯಬಾರದೆಂದು ಹೇಳುತ್ತಾನೆ ಮತ್ತು ದಾರಿಯಲ್ಲಿ ಯಾರಿಗೂ ವಂದಿಸಬೇಡಿ ಎಂದು ಹೇಳುತ್ತಾನೆ (ವ. 4). ಹೀಗೆ ಆತನು ಅವರು ಸಮಯ ವ್ಯರ್ಥಮಾಡಬಾರದೆಂದು ಬಯಸಿದನು.
5. ಅವರೊಂದು ಮನೆಗೆ ಹೋದಾಗ ಆ ಮನೆಗೆ ಶುಭವಾಗಲಿ ಎಂದು ವಂದಿಸಬೇಕೆಂದು ಯೇಸು ಹೇಳುತ್ತಾನೆ (ವ. 5).
6. ಜನರ ಮನೆಯಲ್ಲಿ ಇಳಿದುಕೊಂಡಿರುವಾಗ ಅವರು ಕೊಡುವಂಥದ್ದನ್ನು ಊಟಮಾಡಿ, ಕುಡಿಯಬೇಕೆಂದು ಯೆಸು ಹೇಳುತ್ತಾನೆ. ಅದಕ್ಕವರು ಹಣ ಕಟ್ಟಬೇಕಾಗಿಲ್ಲ ಮತ್ತು ಅವರು ಮನೆಯಿಂದ ಮನೆಗೆ ಹೋಗುವಂತಿಲ್ಲ (ವ. 7).
7. ಒಂದು ಊರಿನಲ್ಲಿ ಉಳಿದುಕೊಂಡಿರುವಾಗ ಹೀಗೆ ಮಾಡಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳುತ್ತಾನೆ (ವ. 8-9):
   ಅ. ಅವರು ಕೊಡುವಂಥದನ್ನು ಕುಡಿದು, ಊಟಮಾಡಬೇಕು
   ಆ. ಅವರು ರೋಗಿಗಳನ್ನು ವಾಸಿಮಾಡಬೇಕು
   ಇ. ದೇವರ ರಾಜ್ಯದ ಕುರಿತ ಸುವಾರ್ತೆಯನ್ನು ಸಾರಬೇಕು.
8. ಒಂದು ಊರಿನವರು ಶಿಷ್ಯರನ್ನು ಸೇರಿಸಿಕೊಳ್ಳದಿದ್ದರೆ ಅವರನ್ನು ಎಚ್ಚರಿಸಬೇಕೆಂದು ಯೇಸು ಹೇಳುತ್ತಾನೆ. ಸುವಾರ್ತೆಯು ಅವರಿಗೆ ಸಾರಲ್ಪಟ್ಟಿದೆ ಆದರೆ ಅವರದನ್ನು ತಿರಸ್ಕರಿಸಿದ್ದಾರೆ. ಈಗ ಅವರಿಗೆ ದೇವರ ನ್ಯಾಯತೀರ್ಪು ಕಾದಿದೆ (ವ. 10-11).
9. ವಚನ 16 ರಲ್ಲಿ ತನ್ನ ಶಿಷ್ಯರನ್ನು ತಿರಸ್ಕರಿಸುವ ಬಗ್ಗೆ ಯೇಸು ಅವರನ್ನು ಕಳುಹಿಸಿದ ಯೇಸುವನ್ನೇ ಅವರು ತಿರಸ್ಕರಿಸಿದವರಾಗಿದ್ದಾರೆಂದು ಹೇಳುತ್ತಾನೆ. ಅಲ್ಲದೆ ಅವರು ಯೆಸುವನ್ನು ಕಳುಹಿಸಿದ ದೇವರನ್ನೂ ಸಹ ತಿರಸ್ಕರಿಸಿದವರಾಗಿದ್ದಾರೆ.
10. ತಮ್ಮ ಸೇವಾ ಯಾತ್ರೆಯ ಬಗ್ಗೆ ಎಪ್ಪತ್ತು ಮಂದಿ ಶಿಷ್ಯರು ವಿಶೇಷವಾಗಿ ದೆವ್ವಗಳು ಸಹ ತಮಗೆ ಅಧೀನವಾಗುವುದಕ್ಕಾಗಿ ಸಂತೋಷಪಡುತ್ತಾರೆ (ವ. 17).
11. ಶಿಷ್ಯರ ಸೇವಾಯಾತ್ರೆಯ ಯಶಸ್ಸನ್ನು ಯೇಸು ಬಾಬೆಲಿನ ಅರಸನ ಸೋಲಿನ ಕುರಿತಾದ ಯೆಶಾಯನ ಗ್ರಂಥದಿಂದ ಆಯ್ದ ಹಳೇ ಒಡಂಬಡಿಕೆಯ ಪ್ರವಾದನೆಯೊಂದರ ಪ್ರತಿಧ್ವನಿಯಿಂದ ಸೈತಾನನು ಸೋತು ಹೋಗಿದ್ದಾನೆಂಬುದಾಗಿ ವರ್ಣಿಸುತ್ತಾನೆ ("ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವುದುನ್ನು ಕಂಡೆನು") (ವ. 18).
12. ತನ್ನ ಶಿಷ್ಯರಿಗೆ ತಾನು ಹಾವುಗಳನ್ನೂ, ಚೇಳುಗಳನ್ನೂ ಮತ್ತು ವೈರಿಯ ಸಮಸ್ತ ಬಲವನ್ನೂ ತುಳಿಯುವ ಅಧಿಕಾರವನ್ನೂ ಕೊಟ್ಟಿದ್ದೇನೆಂಬುದಾಗಿ ಯೇಸು ಹೇಳುತ್ತಾನೆ (ವ. 19).
13. ತಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುವುದಕ್ಕಾಗಿ ಸಂತೋಷಪಡಬೆಕೆಂದು ಯೇಸು ತನ್ನ ಶಿಷ್ಯರಿಗೆ ಹೇಳುತ್ತಾನೆ. ಈ ರಕ್ಷಣೆಯು ಅವರಿಗೆ ದುರಾತ್ಮಗಳ ಮೇಲೆ ಸಾಧಿಸುವ ಜಯಕ್ಕಿಂತ ಪ್ರಾಮುಖ್ಯವಾದುದ್ದಾಗಿತ್ತು.

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ಕೆಳಕಂಡ ಚಿತ್ರಣವನ್ನು ವಿವರಿಸಿ:

   ಅ. ಬೆಳೆಯು ಬಹಳ (ವ. 2): ಲೋಕದಲ್ಲಿ ದೇವರ ರಾಜ್ಯದ ಸುವಾರ್ತೆಯನ್ನು ಸ್ವೀಕರಿಸಲು ಸಿದ್ಧರಿರುವ ಜನರು ಅನೇಕರಿದ್ದಾರೆ. ತಮಗೆ ಸುವಾರ್ತೆಯು ಸಾರಲ್ಪಡುವುದಕ್ಕಾಗಿ ಅವರು ಕಾಯುತ್ತಿದ್ದಾರೆ.

   ಆ. ತೋಳಗಳ ನಡುವೆ ಕುರಿಮರಿಗಳನ್ನು ಹೋಗಿಸಿದಂತೆ (ವ. 2): ನೀವು ಬಹಳ ಕಷ್ಟಕರ ಮತ್ತು ಅಪಾಯಕಾರಿ ಸನ್ನಿವೇಶಗಳನ್ನು ಎದುರಿಸುವಿರಿ.

   ಇ. ಹಣದ ಚೀಲವನ್ನಾಗಲೀ, ಹಸಿಬೆಯನ್ನಾಗಲೀ, ಕೆರಗಳನ್ನಾಗಲೀ ತೆಗೆದುಕೊಂಡು ಹೋಗಬೇಡಿರಿ (ವ. 4): ನೀವು ಹಗುರವಾಗಿ ಪ್ರಯಾಣಿಸಬೇಕು. ಅನಾವಶ್ಯಕ ವಸ್ತುಗಳ ಭಾರದೊಂದಿಗೆ ಸುವಾರ್ತೆ ಸಾರಲು ಹೋಗಬೇಡಿರಿ.

   ಈ. ದಾರಿಯಲ್ಲಿ ಯಾರಿಗೂ ವಂದಿಸಬೇಡಿರಿ (ವ. 4). ನಿಮಗೆ ಕೊಟ್ಟ ಕೆಲಸವು ಶೀಘ್ರಗತಿಯದ್ದು, ಹಾಗಾಗಿ ನಿಮ್ಮ ಸಮಯವನ್ನು ವ್ಯರ್ಥಮಾಡಬೇಡಿರಿ.

   ಉ. ನಮ್ಮ ಕಾಲುಗಳಿಗೆ ಹತ್ತಿದ ದೂಳನ್ನು ಒರೆಸಿಬಿಡುತ್ತೇವೆ (ವ. 11): ಈಗ ನಿಮಗೆ ಬಿಟ್ಟಿದ್ದು, ನಿಮಗಾಗಿ ನಾವು ಇನ್ನೇನು ಜವಾಬ್ದಾರರಲ್ಲ. ಇನ್ನು ನೀವು ದೇವರ ನ್ಯಾಯತೀರ್ಪನ್ನು ಎದುರಿಸಬೇಕಷ್ಟೆ.

   ಊ. ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವುದನ್ನು ಕಂಡೆನು (ವ. 18): ಪ್ರತಿಬಾರಿ ದೆವ್ವಗಳನ್ನು ನೀವು ಬಿಡಿಸುವಾಗ ಸೈತಾನನು ತನ್ನಲ್ಲಿನ ಸ್ವಲ್ಪ ಬಲವನ್ನು ಕಳೆದುಕೊಳ್ಳುತ್ತಾನೆ.

   ಋ. ನಿಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ (ವ. 20): ನೀವು ರಕ್ಷಿಸಲ್ಪಟ್ಟಿರುವಿರಿ. ನೀವು ದೇವಜನರಾಗಿರುವಿರಿ. ನೀವು ದೇವರ ರಾಜ್ಯದ ಪ್ರಜೆಗಳಾಗಿರುವಿರಿ.

2. ಯೇಸು ಎಪ್ಪತ್ತು ಮಂದಿ ಶಿಷ್ಯರಿಗೆ ಕೊಡುವ ಆದೇಶದ ಕುರಿತಾದ ಕಥೆಯ ದೃಷ್ಟಿಕೋನದಿಂದ ಸಭೆಯ ಸೇವೆ (ಲೂಕ 10:1-20):

   ಅ. ಸುವಾರ್ತೆ ಸಾರುವ ಅತಿದೊಡ್ಡ ಅಗತ್ಯತೆಯಿದೆ. ತಮ್ಮ ಜೀವನ ಬದಲಾಯಿಸುವಂತದನ್ನು ನೋಡಲು, ತಮಗೆ ಶಾಂತಿ ಮತ್ತು ನಿರೀಕ್ಷೆಯನ್ನು ಕೊಡುವಂತದ್ದಕ್ಕಾಗಿ ಜನರು ಕಾತುರದಿಂದ ಕಾದಿದ್ದಾರೆ. ಅವರಿಗೆ ಯೇಸುವಿನ ಅಗತ್ಯತೆಯಿದೆ.

   ಆ. ಹಾಗಾಗಿ ಸಭೆ ಇದನ್ನು ಎದುರಿಸಬೇಕು. ನಾವು ಹೊರಗೆ ಹೋಗಿ ಸಾರಬೇಕಿದೆ. ನಾವು ಜರನ್ನು ಕಳಿಸಬೆಕು ಮತ್ತು ಹೋಗಬೇಕು. ನಾವು ಸುವಾರ್ತೆಯನ್ನು ಸಾರಲೇಬೇಕು. ನಾವು ಹೆಚ್ಚು ಸುವಾರ್ತಾ ಕೆಲಸಗಾರರಿಗಾಗಿ ಪ್ರಾರ್ಥಿಸಿ ಸಿದ್ಧಗೊಳಿಸಬೇಕು. ಇದಕ್ಕಾಗಿ ಸಭೆಗೆ ಒಂದು ಯೋಜನೆಯಿರಬೇಕು.

   ಇ. ಜನರನ್ನು ಸುವಾರ್ತೆಯೊಂದಿಗೆ ಸಂಧಿಸುವುದು ಅಷ್ಟು ಸುಲಭದ ಕಾರ್ಯವಲ್ಲ. ಆಗಾಗ್ಗೆ ನಾವು ಕಷ್ಟ ಮತ್ತು ಬಾಧೆಗಳನ್ನು ಎದುರಿಸಬೇಕಾಗುತ್ತದೆ. ಕೆಲವೊಮ್ಮೆ ನಾವು ದುರ್ಬಲ ಮತ್ತು ರಕ್ಷಣಾರಹಿತರಾಗಿ ಭಾವಿಸಬಹುದು.

   ಈ. ಜನರನ್ನು ಸುವಾರ್ತೆಯೊಂದಿಗೆ ಸಂಧಿಸುವ ಗುರಿಯು ಶೀಘ್ರಗತಿಯದ್ದಾಗಿದೆ. ಇದು ಗಮನವಿಟ್ಟು ಮಾಡುವಂತದ್ದಾಗಿದೆ. ನಮ್ಮ ಗಮನವನ್ನು ಬದಲಿಸಬಾರದು. ನಾವು ಅನಾವಶ್ಯಕ ಕಾರ್ಯಗಳನ್ನು ಮಾಡಬಾರದು. ನಾವು ನಮ್ಮ ಸಮಯವನ್ನು ವ್ಯರ್ಥಮಾಡಬಾರದು.

   ಉ. ನಾವು ಸಂಧಿಸುವ ಜನರೊಂದಿಗೆ ಅವರು ನಮಗೆ ಕೊಡುವ ಆಹಾರ, ಪಾನೀಯ, ಮಲಗುವ ಹಾಸಿಗೆ ಮತ್ತು ಆ ಮನೆಯ ಜನರೊಂದಿಗೆ ನಾವು ಹೊಂದಿಕೊಳ್ಳುವ ಮನಸ್ಸುಳ್ಳವರಾಗಿರಬೇಕು. ನಾವು ನಮ್ಮ ಸಂಸ್ಕೃತಿಗನುಗುಣವಾಗಿ ಮತ್ತು ನಮಗಿಷ್ಟವಾದ ಆಹಾರ ಮತ್ತು ಪಾನವನ್ನು ಅವರು ಕೊಡಬೇಕೆಂದು ಅಪೇಕ್ಷಿಸಬಾರದು.

ಊ. ನಾವು ಏನು ಮಾಡುತ್ತಿರುವೆವೋ ಅದರ ಬಗ್ಗೆ ನಮಗೆ ಹೆಮ್ಮೆಯಿರಬೇಕು. ನಾವು ಲಂಚ ಕೊಡಬಾರದು. ನಾವು ನಮ್ಮ ಸೇವೆಯ ಬೆಲೆಯನ್ನು ತಿಳಿದುಕೊಳ್ಳಬೇಕು. ಜನರು ಆರ್ಥಿಕವಾಗಿ ಸಹ ಸೇವೆಗೆ ಸಹಾಯಿಸುವಂತೆ ನಾವು ಅವರನ್ನು ಉತ್ತೇಜಿಸಬೇಕು.

ಋ. ನಾವು ನಮ್ಮ ಸೇವೆಯ ಎರಡು ಬಗೆಯ ಲಕ್ಷಣವನ್ನು ತಿಳಿದವರಾಗಿರಬೇಕು. ರೋಗಿಗಳನ್ನು ಗುಣಪಡಿಸುವ ಮತ್ತು ದೆವ್ವಗಳನ್ನು ಬಿಡಿಸುವ ಶಕ್ತಿಯ ಸೇವೆ ಮತ್ತು ಯೇಸು ಕ್ರಿಸ್ತನಲ್ಲಿನ ನಂಬಿಕೆ ಮೂಲಕ ಸಾರುವ ಸಮಾಧಾನದ ಸೇವೆ ಸ್ವಸ್ಥತೆ ಮತ್ತು ಬಿಡುಗಡೆಯಷ್ಟೇ ಸಾಕಾಗುವುದಿಲ್ಲ. ಮಾತನಾಡುವುದಷ್ಟೆ ಸಾಕಾಗುವುದಿಲ್ಲ, ಎರಡು ಸಹ ಬೇಕಾಗಿದೆ.

ಎ. ನಾವು ನಮ್ಮ ಸೇವೆಯ ಗಂಭೀರತೆಯನ್ನು ಅರಿತುಕೊಳ್ಳಬೇಕು. ನಾವು ಮಾಡುವ ಕಾರ್ಯಗಳು, ನಾವು ಮಾಡುವ ಕಾರ್ಯಗಳಿಗೆ ಜನರು ತೋರುವ ಪ್ರತಿಕ್ರಿಯೆಗಳು ನಿತ್ಯವಾದ ಪರಿಣಾಮಗಳನ್ನು ಒಳಗೊಂಡಿವೆ. ಸಕಾರಾತ್ಮಕ ಪರಿಣಾಮವು ರಕ್ಷಣೆಯಾಗಿದೆ. ನಕಾರಾತ್ಮಕ ಪರಿಣಾಮವು ಖಂಡನೆಯಾಗಿದೆ. ನಾವು ದೇವರಿಗಾಗಿ ದುಡಿಯುತ್ತಿದ್ದೇವೆ ಆದರೆ ಸೈತಾನನಿಗೆ ವಿರುದ್ಧವಾಗಿ ಸಹ ಕೆಲಸಮಾಡುತ್ತಿದ್ದೇವೆ. ರೋಗಿಗಳ ಸ್ವಸ್ಥತೆ, ಬಂಧನದಲ್ಲಿರುವವರ ಬಿಡುಗಡೆ ಮತ್ತು ಪಾಪಿಗಳ ರಕ್ಷಣೆಯ ಮೂಲಕ ಪ್ರತಿಬಾರಿ ದೇವರ ರಾಜ್ಯದ ಬಲವು ಪ್ರದರ್ಶಿತವಾಗುತ್ತದೆ. ಸೈತಾನನು ಜನರ ಮತ್ತು ಅವರ ಪರಿಸ್ಥಿತಿಗಳ ಮೇಲಿನ ತನ್ನ ನಿಯಂತ್ರಣವನ್ನು ಕಳೆದುಕೊಳ್ಳುತ್ತಿದ್ದ.

ಏ. ನಮಗೆ ಕೊಡಲ್ಪಟ್ಟ ಕೆಲಸದ ಘನತೆಯನ್ನು ನಾವು ಅರ್ಥೈಸಿಕೊಳ್ಳಬೇಕು. ನಾವು ನಮ್ಮ ಸ್ವಂತ ಉಧ್ಯಮದವರಲ್ಲ. ನಾವು ನಮ್ಮದೇ ಆದ ಉದ್ದೇಶಗಳನ್ನು ಹಿಂಬಾಲಿಸುವವರಲ್ಲ. ನಾವು ತಂದೆ ಮತ್ತು ಆತನ ಮಗನಿಂದ ಕಳುಹಿಸಲ್ಪಟ್ಟವರಾಗಿದ್ದೇವೆ. ನಾವು ಪರಲೋಕದ ರಾಯಭಾರಿಗಳಾಗಿದ್ದೇವೆ. ಜನರು ನಮ್ಮನ್ನು ತಿರಸ್ಕರಿಸುವಾಗ ಅವರು ಯೇಸುವನ್ನು ಮತ್ತು ಪರಲೋಕದಲ್ಲಿರುವ ನಮ್ಮ ತಂದೆಯನ್ನು ತಿರಸ್ಕರಿಸುವವರಾಗಿದ್ದಾರೆ.

ಐ. ಅತೀ ಪ್ರಾಮುಖ್ಯವಾದ ಸಂಗತಿಯು ನಮ್ಮ ಸೇವೆಯ ಯಶಸ್ಸಿನ ತೋರಿಕೆಯಲ್ಲ ಎಂಬುದನ್ನು ನಾವು ಯಾವಾಗಲೂ ನೆನಪಿಸನಲ್ಲಿಟ್ಟುಕೊಳ್ಳಬೇಕು. ನಮ್ಮ ಸಭೆಯ ಮೂಲಕ ನಡೆಯುವ ಅದ್ಭುತ ಕಾರ್ಯಗಳ ಬಗ್ಗೆ ನಾವು ಗರ್ವಪಡಬಾರದು. ನಮ್ಮ ಹೆಸರುಗಳು ಪರಲೋಕದಲ್ಲಿ ಬರೆಯಲ್ಪಟ್ಟಿರುವುದೇ ನಮ್ಮ ಅತಿದೊಡ್ಡ ಸಂತೋಷವಾಗಿರಬೇಕು. ನಾವು ರಕ್ಷಿಸಲ್ಪಟ್ಟಿದ್ದೇವೆ, ನಾವು ದೇವರ ರಾಜ್ಯದ ಪ್ರಜೆಗಳಾಗಿದ್ದೇವೆ.

ಒ. ಕೊನೆಯದಾಗಿ ಇನ್ನೂ ಅನೇಕ ಜನರು ದೇವರರಾಜ್ಯದ ಸುವಾರ್ತೆಯನ್ನು ಅಂಗೀಕರಿಸುತ್ತಾರೆ ಎಂದು ನಿರೀಕ್ಷಿಸಿ ನಾವು ಪ್ರಾರ್ಥಿಸಬೇಕು. ಅವರ ಹೆಸರುಗಳು ಸಹ ಪರಲೋಕದಲ್ಲಿ ಬರೆಯಲ್ಪಡಬೇಕೆಂದು ನಾವು ಬಯಸಬೇಕು. ಅವರು ಸಹ ಪರಲೋಕರಾಜ್ಯದ ಪ್ರಜೆಗಳಾಗಬೇಕೆಂದು ನಾವು ಬಯಸುವವರಾಗಿರಬೇಕು.

3. –

## 13. ಉತ್ತರಗಳು: ಶಿಷ್ಯತ್ವದ ಕ್ರಯ (ಬೆಲೆ), ಲೂಕ 14:25-33

### ಪ್ರಶ್ನೆಗಳಿಗೆ ಉತ್ತರಗಳು

1. ಈ ವಾಕ್ಯಭಾಗದಲ್ಲಿ ಯೇಸು ಯೆರೂಸಲೇಮಿನೆಡೆಗೆ ಹೋಗುವಾಗ ರಸ್ತೆಯುದ್ದಕ್ಕೂ ತನ್ನೊಂದಿಗೆ ಹೋಗುತ್ತಾ ಇರುವ ಜನರ ಗುಂಪನ್ನು ಸಂಬೋಧಿಸುತ್ತಾನೆ (ವ. 25).
2. ಯೇಸು ತಿಳಿಸಿದ ಶಿಷ್ಯತ್ವದ ಮೊದಲ ಕ್ರಯವೆಂದರೆ ನಿಮ್ಮನ್ನು ನಿಮ್ಮ ಕುಟುಂಬವನ್ನು ಹಗೆ ಮಾಡುವುದು (ವ. 26).
3. ಯೇಸು ತಿಳಿಸಿದ ಶಿಷ್ಯತ್ವದ ಎರಡನೆಯ ಕ್ರಮವೆಂದರೆ ನಿಮ್ಮ ಶಿಲುಬೆಯನ್ನು ಹೊತ್ತುಕೊಂಡು ಬರುವುದು (ವ. 27).
4. ಬುರುಜನ್ನು ಕಟ್ಟುವುದರ ಮುನ್ನ ಅದಕ್ಕೆ ಆಗುವ ಖರ್ಚನ್ನು ಲೆಕ್ಕಮಾಡಬೇಕಾದ ಅವಶ್ಯಕತೆ ಬಗ್ಗೆ ಯೇಸು ತಿಳಿಸುವ ಎರಡು ಉದಾಹರಣೆ (ವ. 28-32):

   ಅ. ಒಬ್ಬ ವ್ಯಕ್ತಿಯು ಬುರಜನ್ನು ಕಟ್ಟುವುದಕ್ಕೆ ಯೋಜನೆ ಮಾಡುವುದು

   ಆ. ಒಬ್ಬ ಅರಸನು ಯುದ್ಧಕ್ಕೆ ಹೋಗುವುದಕ್ಕಾಗಿ ಯೋಜನೆ ಮಾಡುವುದು
5. ಯೇಸು ತಿಳಿಸಿದ ಶಿಷ್ಯತ್ವದ ಮೂರನೇ ಕ್ರಯ: ನಿಮಗಿರುವುದೆಲ್ಲವನ್ನು ಬಿಟ್ಟು ಬಿಡುವುದು (ವ. 33).

### ಆಲೋಚಿಸಿ ಮತ್ತು ಚರ್ಚಿಸಿ ಮೇಲಿನ ಟಿಪ್ಪಣಿಗಳು

1. ಯೇಸು ಹೇಳುವ ಶಿಷ್ಯತ್ವದ ಮೂರು ಕ್ರಯಗಳನ್ನು (ಲೂಕ 14:25-33) ಸಂಕ್ಷಿಪ್ತವಾಗಿ ವಿವರಿಸಲಾಗಿದೆ:

   ಅ. ತಮ್ಮನ್ನು ತಮ್ಮ ಕುಟುಂಬವನ್ನು ಹಗೆ ಮಾಡುವುದು: ತಮಗಿಂತಲೂ ತಮ್ಮ ಕುಟುಂಬಕ್ಕಿಂತಲೂ ಹೆಚ್ಚಾಗಿ ಯೇಸುವನ್ನು ಪ್ರೀತಿಸಬೇಕು.

   ಆ. ತಮ್ಮ ಶಿಲುಬೆಯನ್ನು ಹೊತ್ತುಕೊಂಡು ಬರುವುದು: ನೀವು ಯೇಸುವಿಗಾಗಿ ಬಾಧೆಪಡಲು ಮತ್ತು ಸಾಯುವುದಕ್ಕಾಗಿ ಸಹ ಸಿದ್ಧರಿರಬೇಕು.

   ಇ. ತಮಗಿರುವುದೆಲ್ಲವನ್ನು ಬಿಟ್ಟುಬಿಡುವುದು: ಯೇಸುವಿಗಾಗಿ ನೀವು ಎಲ್ಲವನ್ನು ಬಿಡಲು ಸಿದ್ಧರಿರಬೇಕು. ದೇವರರಾಜ್ಯವೇ ನಿಮ್ಮ ಮೊದಲ ಆಧ್ಯತೆಯಾಗಿರಬೇಕು (ಹೋಲಿಸಿ ಮತ್ತಾಯ 6:33).
2. –

## 14. ಉತ್ತರಗಳು: ಕೆಲಸಗಾರರ ಕೊರತೆ, ಮತ್ತಾಯ 9:35-38

### ಪ್ರಶ್ನೆಗಳಿಗೆ ಉತ್ತರಗಳು

1. ವಚನ 35 ರಲ್ಲಿ ಮತ್ತಾಯನು ಯೇಸುವಿನ ಸೇವೆಯನ್ನು ಈ ರೀತಿ ವರ್ಣಿಸುತ್ತಾನೆ:

   ಅ. ಅದು ಎಲ್ಲಾ ಊರುಗಳನ್ನು ಹಬ್ಬಿತ್ತು. ಹೀಗೆ ಯೇಸು ಭೌಗೋಳಿಕವಾಗಿ ತನ್ನ ಸೇವೆಯನ್ನು ಸೀಮಿತಗೊಳಿಸಿರಲಿಲ್ಲ.

   ಆ. ಆತನು ಸಭಾಮಂದಿರಗಳಲ್ಲಿ ಉಪದೇಶಿಸಿದನು. ಇಲ್ಲಿಯೇ ಯೆಹೂದ್ಯರು ಪ್ರತೀವಾರ ದೇವರನ್ನು ಪ್ರಾರ್ಥಿಸಲು ಮತ್ತು ಹಳೇ ಒಡಂಬಡಿಕೆಯ ಪಠ್ಯಗಳಿಂದ ಬೋಧನೆಗಳನ್ನು ಕೇಳುವುದಕ್ಕಾಗಿ ಸೇರುತ್ತಿದ್ದರು.

   ಇ. ಎಲ್ಲಾ ಕಡೆಗೂ ಆತನು ದೇವರ ರಾಜ್ಯದ ಕುರಿತ ಸುವಾರ್ತೆಯನ್ನು ಸಾರಿದನು. ಹಾಗೆಯೇ ಆತನು ಪ್ರತಿಯೊಬ್ಬರಿಗೂ ಸುವಾರ್ತೆಯನ್ನು ಹಂಚಿದನು.

   ಈ. ಆತನು ಎಲ್ಲಾ ತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿ ಮಾಡಿದನು.

2. ಯೇಸು ಜನರ ಪರಿಸ್ಥಿತಿಯನ್ನು ನೋಡಿದಾಗ ಕನಿಕರಪಟ್ಟನು. ಅವರೆಲ್ಲರೂ ತೊಳಲಿ ಬಳಲಿ ಹೋಗಿ ಅಸಹಾಯಕರಾಗಿದ್ದರು. ತಮ್ಮ ಜೀವನದಲ್ಲಿ ದಿಕ್ಕಿಲ್ಲದವರಾಗಿದ್ದರು (ವ. 36).
3. ಜನರ ಪರಿಸ್ಥಿತಿಯನ್ನು ವರ್ಣಿಸಲು ಮತ್ತಾಯನು ಒಂದು ಉಪಮೇಯವನ್ನು ಬಳಸುತ್ತಾನೆ: ಅವರು ಕುರುಬನಿಲ್ಲದ ಕುರಿಗಳ ಹಾಗೆ ತೊಳಲಿ ಬಳಲಿ ಹೋಗಿದ್ದಿರಲ್ಲ. ಹೀಗೆ ಜನರಿಗೆ ಅವರನ್ನು ನಡೆಸಲು ಒಳ್ಳೆಯ ನಾಯಕರಿರಲಿಲ್ಲ (ವ. 36).
4. ಈ ವಾಕ್ಯಭಾಗದ ಕೊನೆಯ ವಚನದಲ್ಲಿ ಯೇಸು ತನ್ನ ಶಿಷ್ಯರನ್ನು ಸಂಬೋಧಿಸುತ್ತಾನೆ (ವ. 37). ಯೇಸುವಿಗೆ ಬರೀ 12 ಮಂದಿಯಲ್ಲದೆ ಬಹುಶಃ ದೊಡ್ಡ ಸಂಖ್ಯೆಯ ಶಿಷ್ಯರಿದ್ದರು. ಆನಿಮಿತ್ತ ಮತ್ತಾಯನು ಆಮೇಲೆ ಯೇಸು ತನ್ನ ಹನ್ನೆರಡು ಮಂದಿ ಶಿಷ್ಯರನ್ನ ಕರೆದು ಅವರಿಗೆ ಅಧಿಕಾರವನ್ನು ಕೊಟ್ಟನು ಎನ್ನುತ್ತಾನೆ.
5. ಪರಿಸ್ಥಿತಿ/ಸನ್ನಿವೇಶವನ್ನು ವರ್ಣಿಸಲು ಯೇಸು ಈ ನಾಲ್ಕು ಕೃಪೆಯ ರೂಪಾಲಂಕಾರಗಳನ್ನು ಉಪಯೋಗಿಸುತ್ತಾನೆ (ವ. 37-38):

   ಅ. ಬೆಳೆಯು ಬಹಳ: ಜನರು ಸುವಾರ್ತೆಯನ್ನು ಕೇಳಲು ಮತ್ತು ದೇವರ ರಾಜ್ಯದ ಪ್ರಜೆಗಳಾಗಲು ಸಿದ್ಧರಿದ್ದಾರೆ

   ಆ. ಕೆಲಸದವರು: ಯೇಸುವಿನ ಶಿಷ್ಯರಾದವರು ಹೊರಟು ಹೋಗಿ ದೇವರ ರಾಜ್ಯದ ಸುವಾರ್ತೆಯನ್ನು ಸಾರಬೇಕಿದೆ

   ಇ. ಬೆಳೆಯ ಯಜಮಾನ: ದೇವರು ಎಲ್ಲರ ವಿಶೇಷವಾಗಿ ದೇವರ ರಾಜ್ಯದ ಪ್ರಜೆಗಳ ಯಜಮಾನನಾಗಿದ್ದಾನೆ

   ಈ. ಆತನ ಬೆಳೆಗೆ: ಲೋಕವು ದೇವರದ್ದಾಗಿದ್ದು ಅಲ್ಲಿನ ಜನರು ಸುವಾರ್ತೆಯನ್ನು ಕೇಳಿ ದೇವರ ರಾಜ್ಯದ ಪ್ರಜೆಗಳಾಗಲು ಸಿದ್ಧರಾಗಿದ್ದಾರೆ.

6. ಯೇಸು ತನ್ನ ಶಿಷ್ಯರಿಗೆ – ಈ ಲೋಕದಲ್ಲಿ ದಿಕ್ಕುತಪ್ಪಿ ಮತ್ತು ಬಾಧೆಪಡುತ್ತಿರುವ ಜನರಿಗೆ ದೇವರ ರಾಜ್ಯದ ಸುವಾರ್ತೆಯನ್ನು ಸಾರಲು ಮನಸ್ಸುಳ್ಳ ಜನರನ್ನು ಕಳುಹಿಸಿಕೊಡಬೇಕೆಂದು ದೇವರನ್ನು ಪ್ರಾರ್ಥಿಸಿರಿ ಎಂದು ಹೇಳುತ್ತಾನೆ (ವ. 38).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

ನಿಮ್ಮ ***ಬೆಳೆಯು ಬಹಳ ಕೆಲಸದವರು ಸ್ವಲ್ಪ*** (ಮತ್ತಾ. 9:3-38) ಎಂಬ ಅಧ್ಯಯನವನ್ನು ಈ ರೀತಿ ರಚನೆ ಮಾಡಬಹುದು:

ಅ. ಯೇಸುವಿನ ಸಮಯದಲ್ಲಿನ ಜನರ ಪರಿಸ್ಥಿತಿ:

- ಅವರು ಬಾಧೆಪಡುತ್ತಿದ್ದರು
- ಅವರು ಆತ್ಮೀಕವಾಗಿ ದಿಕ್ಕಿಲ್ಲದವರಾಗಿದ್ದರು
- ಅವರಿಗೆ ನಾಯಕರಿರಲಿಲ್ಲ

ಆ. ಯೇಸುವಿನ ಪ್ರತಿಕ್ರಿಯೆ:

- ಆತನು ಜನರ ಸ್ಥಿತಿಯನ್ನು ನೋಡಿದನು
- ಅವರ ಸ್ಥಿತಿಗಾಗಿ ಆತನು ಕನಿಕರಪಟ್ಟನು
- ಅವರ ಪರಿಸ್ಥಿತಿಗೆ ಆತನು ಏನೋ ಮಾಡಿದನು

ಇ. ಯೇಸುವಿನ ಸೇವೆ:

- ಆತನು ಜನರಿಗೆ ಉಪದೇಶಿಸಿದನು
- ಆತನು ಜನರಿಗೆ ದೇವರ ರಾಜ್ಯದ ಕುರಿತ ಶುಭವಾರ್ತೆಯನ್ನು ಸಾರಿದನು
- ಆ ಜನರನ್ನು ರೋಗದಿಂದ ಗುಣಪಡಿದನು
- ಆತನ ಸೇವೆಯು ಎಲ್ಲಾ ಕಡೆಗೆ ಹಬ್ಬಿತ್ತು

ಈ. ಇಂದು ನಮ್ಮ ಸೇವೆಯ ಕುರಿತೇನು?:

- ನಾವು ಜನರನ್ನು ಅವರ ಅಗತ್ಯತೆಯನ್ನು ನೊಡುತ್ತೇವಾ?
- ಜನರ ಬಗ್ಗೆ ನಮ್ಮ ಹೃದಯವು ಕನಿಕರಪಡುತ್ತಿದೆಯಾ?
- ನಾವು ಜನರಿಗೆ ಬೋಧಿಸುತ್ತಿದ್ದೇವಾ?, ಸಾರುತ್ತಿದ್ದೇವಾ? ಗುಣಪಡಿಸುತ್ತಿದ್ದೇವಾ? ಮಾರ್ಗದರ್ಶಿಸುತ್ತೇವಾ? ಸಂತೈಸುತ್ತೇವಾ?

## 15. ಉತ್ತರಗಳು: ಒಳ್ಳೆಯ ಸಮಾರ್ಯದವನು, ಲೂಕ 10:25-37

### ಪ್ರಶ್ನೆಗಳಿಗೆ ಉತ್ತರಗಳು

1. ಧರ್ಮೋಪದೇಶಕನು ಯೇಸುವಿಗೆ ನಿತ್ಯಜೀವಕ್ಕೆ ಬಾಧ್ಯನಾಗಲು ಏನು ಮಾಡಬೇಕೆಂದು ಪ್ರಶ್ನಿಸುತ್ತಾನೆ (ವ. 25).
2. ಧರ್ಮೋಪದೇಶಕನ ಪ್ರಶ್ನೆಗೆ ಯೇಸು ಆತನಿಗೆ ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದಲ್ಲಿ ಈ ಪ್ರಶ್ನೆಗೆ ಉತ್ತರವನ್ನು ಕಂಡುಹಿಡಿ ಎನ್ನುವುದರ ಮೂಲಕ ಉತ್ತರಿಸುತ್ತಾನೆ (ವ. 26).
3. ಧರ್ಮೋಪದೇಶಕನ ಉತ್ತರವು ಹಳೇ ಒಡಂಬಡಿಕೆಯ ಎರಡು ವಚನಗಳನ್ನು ಒಳಗೊಂಡಿದೆ. ಆತನು ಧರ್ಮೋಪದೇಶಕಾಂಡ 6:5 ಮತ್ತು ಯಾಜಕಕಾಂಡ 19:18 ನ್ನು ಬಳಸುತ್ತಾನೆ (ವಚನ 27 ರ ಟಿಪ್ಪಣಿ).
4. ಯೇಸುವು ಧರ್ಮೋಪದೇಶಕನಿಗೆ ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಸರಿಯಾದ ಸಾರಾಂಶವನ್ನು ಹೇಳಿದಿ ಎಂದು ಹೇಳುತ್ತಾನೆ. ಅನಂತರ ಆತನು ಧರ್ಮೋಪದೇಶಕನಿಗೆ ಆತನು ಕೊಟ್ಟ ಉತ್ತರದ ಪ್ರಕಾರ ಜೀವಿಸು ಎಂದು ಹೇಳುತ್ತಾನೆ (ವ. 28).
5. ತನ್ನನ್ನು ನೀತಿವಂತನೆಂಬುದಾಗಿ ಜನರೆದುರು ತೋರಿಸಿಕೊಳ್ಳಲು ಆ ಧರ್ಮೋಪದೇಶಕನು "ನನ್ನ ನೆರೆಯವನು ಯಾರು" ಎಂಬ ಇನ್ನೊಂದು ಪ್ರಶ್ನೆಯನ್ನು ಕೇಳುತ್ತಾನೆ (ವ. 29 ಟಿಪ್ಪಣಿಯೊಂದಿಗೆ). ಈ ಪ್ರಶ್ನೆಗೆ ಆತನು ಸಾಂಪ್ರದಾಯಿಕ ಉತ್ತರವನ್ನು ಬಯಸಿದ್ದಿರಬಹುದು. ***ಆಲೋಚಿಸಿರಿ ಮತ್ತು ಚರ್ಚಿಸಿರಿ***2 ರ ಟಿಪ್ಪಣಿಯನ್ನು ನೋಡಿರಿ.
6. ಮೇಲ್ಕಂಡ 5 ರ ಉತ್ತರ ನೋಡಿರಿ.
7. ಯೆರೂಸಲೇಮಿನಿಂದ ಯೆರಿಕೋವಿಗೆ ಹೋಗುತ್ತಿದ್ದ ವ್ಯಕ್ತಿಯು ದಾರಿ ಮಧ್ಯೆ ಕಳ್ಳರ ಕೈಗೆ ಸಿಕ್ಕು ಅವರಿಂದ ಸುಲಿಗೆಗೊಳಗಾಗಿ ಗಾಯಗೊಳ್ಳುತ್ತಾನೆ (ವ. 30).
8. ಗಾಯಗೊಂಡ ವ್ಯಕ್ತಿಯನ್ನು ಒಬ್ಬ ಯಾಜಕ ಮತ್ತು ಒಬ್ಬ ಲೇವಿಯನು ಹಾದುಹೋಗುತ್ತಾರೆ (ವ. 31-32).
9. ಮೂರನೇ ವ್ಯಕ್ತಿಯು ಗಾಯಗೊಂಡ ವ್ಯಕ್ತಿಯನ್ನು ನೋಡಿ ಹಾಗೇ ಹಾದು ಹೋಗದೇ ಅಲ್ಲೇ ನಿಲ್ಲುತ್ತಾನೆ. ಆತನು ಯೆಹೂದ್ಯನಾಗಿರಲಿಲ್ಲ (ಇಬ್ಬರಂತೆ), ಬದಲಾಗಿ ಆತನೊಬ್ಬ ಸಮಾರ್ಯದವನಾಗಿದ್ದನು (ವ. 33).
10. ಮೂರನೇ ವ್ಯಕ್ತಿಯು ಗಾಯಗೊಂಡವನಿಗೆ ಈ ರೀತಿಯಾಗಿ ಸಹಾಯ ಮಾಡುತ್ತಾನೆ (ವ. 34-35):

    ಅ. ಆತನು ಗಾಯಗೊಂಡವನ ಗಾಯಗಳನ್ನು ಕಟ್ಟುತ್ತಾನೆ

    ಆ. ಆತನನ್ನು ಛತ್ರಕ್ಕೆ ಕರಕೊಂಡುಹೋಗುತ್ತಾನೆ

    ಇ. ಆತನ ಛತ್ರದಲ್ಲಾಗುವ ಖರ್ಚನ್ನೆಲ್ಲಾ ಕೊಡುತ್ತಾನೆ ಮತ್ತು ಛತ್ರದವನಿಗೆ ಗಾಯಗೊಂಡವನನ್ನು ಚೆನ್ನಾಗಿ ನೋಡಿಕೊಳ್ಳಬೇಕೆಂದು ಹೇಳುತ್ತಾನೆ.

    ಈ. ತಾನು ಹಿಂತಿರುಗಿ ಬರುವಾಗ ಗಾಯಗೊಂಡವನಿಗೆ ಖರ್ಚಾದ ಉಳಿದ ಹಣವನ್ನು ಕೊಡುವೆನೆಂದು ಮಾತುಕೊಡುತ್ತಾನೆ.
11. ಗಾಯಗೊಂಡವನ ನೆರೆಯವನು ಯಾರು ಎಂಬ ಯೇಸುವಿನ ಪ್ರಶ್ನೆಗೆ ಧರ್ಮೋಪದೇಶಕನು ಅವನಿಗೆ ದಯೆ ತೋರಿಸಿದ ಸಮಾರ್ಯದವನೇ ಎಂದು ಉತ್ತರಿಸುತ್ತಾನೆ (ವ. 36-37). ಧರ್ಮೋಪದೇಶಕನು ತನ್ನ ಬಾಯಿಂದ "ಸಮಾರ್ಯದವನು" ಎಂಬ ಹೆಸರನ್ನು ಹೇಳಲು ಸಹ ಮನಸ್ಸುಮಾಡಲಿಲ್ಲ.
12. ಯೇಸುವು ಧರ್ಮೋಪದೇಶಕನಿಗೆ "ಒಳ್ಳೆಯ ಸಮಾರ್ಯನಂತೆ" ನೀನೂ ಮಾಡು/ಇರು ಎಂದು ಹೇಳುತ್ತಾನೆ (ವ. 37).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಧರ್ಮೋಪದೇಶಕನಿಗೆ ಯೇಸುವು ಹೇಳುವ ಬುದ್ಧಿವಾದ (ವ. 37) ಮತ್ತು ತನ್ನನ್ನು ನೀತಿವಂತನೆಂಬುದಾಗಿ ತೋರ್ಪಡಿಸಿಕೊಳ್ಳಬೇಕೆಂಬ ಆ ಧರ್ಮೋಪದೇಶಕನ ಆಸೆಯ ನಡುವಿನ ಸಂಬಂಧ (ವ. 29):
    - ಯೇಸುವು ಆ ಧರ್ಮೋಪದೇಶಕನಿಗೆ ನೀನೂ ಆ ಒಳ್ಳೆಯ ಸಮಾರ್ಯದವನಂತೆ ಆಗು ಎಂದು ಹೇಳುತ್ತಾನೆ (ವ. 37).

- ಒಳ್ಳೆಯ ಸಮಾರ್ಯದವನ ಸಾಮ್ಯವು "ನನ್ನ ನೆರೆಯವನು ಯಾರು" ಎಂಬ ಧರ್ಮೋಪದೇಶಕನ ಪ್ರಶ್ನೆಗೆ ಉತ್ತರವಾಗಿ ಹೇಳಲಾಗಿದೆ (ವ. 29-30).
- ಧರ್ಮೋಪದೇಶಕನು ತನ್ನನ್ನು ನೀತಿವಂತನೆಂಬುದಾಗಿ ತೋರ್ಪಡಿಸಿಕೊಳ್ಳುವುದಕ್ಕಾಗಿ ತನ್ನ ನೆರೆಯವನು ಯಾರೆಂಬ ಪ್ರಶ್ನೆಯನ್ನು ಕೇಳುತ್ತಾನೆ (ವ. 29). ತಾನು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಬೇಡಿಕೆಗಳನ್ನೆಲ್ಲಾ ತಾನು ತೀರಿಸಿದ್ದೇನೆಂಬುದನ್ನು ಸಾಬೀತುಪಡಿಸಲು ಬಯಸಿದ್ದನು.

2. "ನೀನು ಅದರಂತೆ ಮಾಡು" ಎಂಬ ಯೇಸುವಿನ ಬುದ್ಧಿವಾದಕ್ಕೆ ಆ ಧರ್ಮೋಪದೇಶಕನು ನಾಚಿಕೊಂಡಿರಬೇಕೆನಿಸುತ್ತದೆ. ಒಬ್ಬ ಫರಿಸಾಯನೂ, ಗುರುವು ಮತ್ತು ಹಳೇ ಒಡಂಬಡಿಕೆಯ ಪಂಡಿತನೂ ಆದವನೊಬ್ಬನು ಒಬ್ಬ ಸಮಾರ್ಯದವನಂತೆ ಆಗಬೇಕೆಂದು ಅಪೇಕ್ಷಿಸುವಷ್ಟು ಕಠಿಣತೆಯನ್ನು ಯೇಸು ಹೇಗೆ ಅಪೇಕ್ಷಿಸಿರಬಹುದು. ಸಮಾರ್ಯದವರು ಸರಿಯಾದ ಯೆಹೂದ್ಯರು ಸಹ ಆಗಿರಲಿಲ್ಲ, ಅಲ್ಲದೇ ಹಳೇ ಒಡಂಬಡಿಕೆಯ ಶಾಸ್ತ್ರಿಗಳಿಗೆ ಪೂರ್ಣವಾಗಿ ವಿಧೇಯರಾಗುತ್ತಿರಲಿಲ್ಲ. ಯಾವ ರೀತಿಯಲ್ಲೂ ಅವರು ನೀತಿವಂತರೆನಿಸುತ್ತಿರಲಿಲ್ಲ. ಸಾಮ್ಯದೊಳಗೆ ಮೂರನೆಯ ವ್ಯಕ್ತಿಯ ಪ್ರವೇಶವಾದಾಗಲೇ ಧರ್ಮೋಪದೇಶಕನಿಗೆ ಆಗಲೇ ಆಘಾತವಾಗಿದ್ದಿರಬಹುದು. ಬಹುಶಃ ಆತನು ಈ ರೀತಿ ಪ್ರತಿಕ್ರಯಿಸಿರಬಹುದು:
   - ಮೊದಲನೆಯವನು: ಒಬ್ಬ ಯಾಜಕ – ಖಂಡಿತವಾಗಿ ಒಬ್ಬ ಯಾಜಕನಿಂದ ನಾವೇನನ್ನು ನಿರೀಕ್ಷಿಸಬಹುದು? ಅವರು ಹೆಚ್ಚಾಗಿ ನೀತಿವಂತಿಕೆಗಿಂತ ದೇವಾಲಯದ ವಿಧಿಗಳ ಬಗ್ಗೆ ಹೆಚ್ಚು ಕಾಳಜಿಯುಳ್ಳವರು.
   - ಎರಡನೆಯವನು: ಒಬ್ಬ ಲೇವಿಯನು – ಒಬ್ಬ ಅವಿಧ್ಯಾವಂತ ಲೇವಿಯಿಂದ ನಾವೇನನ್ನು ನಿರೀಕ್ಷಿಸಬಹುದು? ಅವರು ಕೇವಲ ಆಜ್ಞೆಗಳನ್ನು ಪಾಲಿಸುವವರು ಮತ್ತು ನೀತಿವಂತಿಕೆಯ ಬಗ್ಗೆ ಏನೂ ತಿಳಿಯದವರು.
   - ಮೂರನೆಯವನು: ಒಳ್ಳೇದು, ಕೊನೆಗೆ ಒಬ್ಬ ನೀತಿವಂತ ಫರಿಸಾಯನು ಬಂದು ಈ ಬಡ ಮನುಷ್ಯನಿಗೆ ಸಹಾಯ ಮಾಡುವನು, ಫರಿಸಾಯರಾದ ತಾವು ಎಷ್ಟು ಒಳ್ಳೆಯವರು ಮತ್ತು ನೀತಿವಂತರೆಂಬುದನ್ನು ಎಲ್ಲರಿಗೂ ತೋರಿಸುವನೆಂಬುದಾಗಿ ಆತನೆಣಿಸಿದನು. ಅಯ್ಯೋ ಹಾಗಾಗಲಿಲ್ಲ, ಇದು ತುಂಬ ಭಯಂಕರ! ಹೇಗೆ ಯೇಸು ಅನೀತಿವಂತನ ಮತ್ತು ಯೆಹೂದ್ಯನಲ್ಲದ ಒಬ್ಬ ಸಮಾರ್ಯದವನನ್ನು ಈ ಕಥೆಯ ನಾಯಕನ್ನಾಗಿ ಮಾಡಲು ಸಾಧ್ಯ? ಒಳ್ಳೆಯ ಸಮಾರ್ಯನ ಸಾಮ್ಯವು ಸುವಾರ್ತೆ ಸಾರುವುದಕ್ಕಿಂತ ಸಭೆಯಲ್ಲಿ ಸತ್ಯವೇದ ಅಧ್ಯಯನಕ್ಕಾಗಿ ಒಂದು ಸೂಕ್ತವಾದ ಪಠ್ಯವಾಗಿದೆ:
   - ಇದು ವಿಶ್ವಾಸಿಗಳಿಗೆ ಒಂದು ಸಂದೇಶವನ್ನು ಹೊಂದಿದೆ. ಇದು ದೇವಜನರು ನೆರೆಯವರು ಎನ್ನುವ ತಿಳುವಳಿಕೆಯು ಕೇವಲ ನಮ್ಮ ಸ್ವಂತ ಜನರಿಗಷ್ಟೇ ಸೀಮಿತವಾದುದಲ್ಲ ಎಂಬುದರ ಕಥೆಯಾಗಿದೆ. ಇಲ್ಲಿ ಅಗತ್ಯತೆ/ಕೊರತೆಯಲ್ಲಿರುವ – ಆತ್ಮೀಕ ಅಗತ್ಯತೆ, ಸಾಮಾಜಿಕ ಅಥವಾ ಶಾರೀರಿಕ (ಭೌತಿಕ) ಅಗತ್ಯತೆಯಲ್ಲಿರುವ ಯಾರೇ ಆಗಲಿ ಅವರು ನಮ್ಮ ನೆರೆಯವರಾಗಿದ್ದಾರೆ. ಅವರನ್ನು ನಾವು ಅಷ್ಟಾಗಿ ಪ್ರೀತಿಸಬೇಕಿದೆ.
   - ಇದು ಅವಿಶ್ವಾಸಿಗಳಿಗೆ ಯಾವುದೇ ಸಂದೇಶವನ್ನು ಹೊಂದಿಲ್ಲ. ಇದು ದೇವರ ರಾಜ್ಯವನ್ನು ಸೇರುವುದು ಹೇಗೆ ಅಥವಾ ನಿತ್ಯಜೀವಕ್ಕೆ ಬಾಧ್ಯರಾಗುವುದು ಹೇಗೆ ಎಂಬುದರ ಕುರಿತಾದ ಕಥೆಯಲ್ಲ. ನಮ್ಮ ಯಾವುದೇ ನೀತಿಯ ಕಾರ್ಯ ಅಥವಾ ಕರುಣೆಯಾಗಲೀ ನಮಗೆ ರಕ್ಷಣೆಯನ್ನು ತರುವುದಿಲ್ಲ. ನಿತ್ಯಜೀವಕ್ಕೆ ಇರುವ ದಾರಿಯು ಒಂದೇ: ಯೇಸುವನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸುವುದು. ಆತನೊಬ್ಬನೇ ಹಳೇ ಒಡಂಬಡಿಕೆಯ ಶಾಸ್ತ್ರವನ್ನೆಲ್ಲಾ ನೆರವೇರಿಸಿದವನಾಗಿದ್ದಾನೆ. ಆತನ ಮತ್ತು ಪವಿತ್ರಾತ್ಮನ ಬಲದ ಮೂಲಕ ಮಾತ್ರ ನಾವು ದೇವರನ್ನೂ ಮತ್ತು ನೆರೆಯವರನ್ನೂ ನಮ್ಮ ಪೂರ್ಣ ಹೃದಯದಿಂದ, ಪೂರ್ಣ ಪ್ರಾಣದಿಂದ ಪೂರ್ಣ ಬಲದಿಂದ ಮತ್ತು ಪೂರ್ಣ ಮನಸ್ಸಿನಿಂದ ಪ್ರೀತಿಸಲು ಸಾಧ್ಯ.

## 16. ಉತ್ತರಗಳು: ಮಾರ್ಥಳು ಮತ್ತು ಮರಿಯಳು, ಲೂಕ 16:38-42

**ಪ್ರಶ್ನೆಗಳಿಗೆ ಉತ್ತರಗಳು**

1. ಈ ಒಂದು ಸಂದರ್ಭದಲ್ಲಿ ಮಾರ್ಥಳು ಅತಿಥ್ಯಕಾರಿಣಿಯಾಗಿದ್ದಳು. ಆಕೆಯು ಯೇಸುವನ್ನು ತನ್ನ ಮನೆಗೆ ಆಹ್ವಾನಿಸಿದ್ದಳು ಮತ್ತು ಊಟವನ್ನು ತಯಾರಿಸುವ ಉಸ್ತುವಾರಿ ಆಕೆಯೇ ವಹಿಸಿದ್ದಳು.
2. ಮರಿಯಳು ಯೇಸುವಿನ ಪಾದಗಳ ಬಳಿಯಲ್ಲಿ ಕೂತುಕೊಂಡು ಆತನ ವಾಕ್ಯವನ್ನು ಕೇಳುತ್ತಿದ್ದಳು (ವ. 38). ಆಕೆಯು ಶಿಷ್ಯರಂತೆ ಗುರುವಿನ ಪಾದದ ಬಳಿಯ ಸ್ಥಾನದಲ್ಲಿದ್ದಳು. ಆ ದಿನಗಳಲ್ಲಿ ಗುರುವು ಒಬ್ಬ ಸ್ತ್ರೀಯನ್ನು ಶಿಷ್ಯಳನ್ನಾಗಿ ಸ್ವೀಕರಿಸುವುದು ಸಾಮಾನ್ಯವಾಗಿರಲಿಲ್ಲ.
3. ಮಾರ್ಥಳು ತುಂಬ ಕಾರ್ಯನಿರತಳಾಗಿದ್ದಳು, ಯಾಕೆಂದರೆ ಆಕೆ ಯೇಸುವಿಗಾಗಿ ಊಟವನ್ನು ತಯಾರಿಸುತ್ತಿದ್ದಳು (ವ. 40).
4. ಮಾರ್ಥಳು ಯೇಸುವಿಗೆ ತಾನು ಕಷ್ಟಪಟ್ಟು ಕೆಲಸ ಮಾಡುವಾಗ ಮರಿಯಳು ಏನೂ ಮಾಡದೇ ಸುಮ್ಮನೆ ಕುಳಿತ್ತಿದ್ದಾಳೆಂದು ದೂರಿದಳು (ವ. 40). ಯೇಸು ಆಕೆಗೆ ಮಾರ್ಥಳಿಗೆ ಸಹಾಯ ಮಾಡು ಎಂದು ಹೇಳಬೇಕೆಂದು ಆಕೆ ಬಯಸಿದಳು.
5. ಯೇಸು ಮಾರ್ಥಳನ್ನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡವಳೆಂಬುದಾಗಿ ವರ್ಣಿಸುತ್ತಾನೆ (ವ. 41).
6. ಯೇಸು ಮಾರ್ಥಳಿಗೆ ಒಂದು ಮಾತ್ರ ಬೇಕಾದದ್ದು, ಅದು ಮರಿಯಳಿಂದ ತೆಗೆಯಲ್ಪಡುವುದಿಲ್ಲ ಎಂದು ಹೇಳುತ್ತಾನೆ (ವ. 42).

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ಮಾರ್ಥಳಿಗೆ ಯೇಸುವಿನ ಮಾತುಗಳು (ವ. 42):

   ಅ. "ಕೆಲವು ಮಾತ್ರ ಬೇಕಾದದ್ದು, ಅಥವಾ ಒಂದೇ": ಯೇಸು ದೇವರ ರಾಜ್ಯವನ್ನು ಸೂಚಿಸುತ್ತಿದ್ದಾನೆಂಬುದಾಗಿ ನಾನು ಯೋಚಿಸುತ್ತೇನೆ. ಅತೀ ಪ್ರಾಮುಖ್ಯವಾದ ಒಂದು ಸಂಗತಿಯೆಂದರೆ ಯೇಸುವನ್ನು ನಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸುವುದು ಮತ್ತು ಆ ಮೂಲಕ ದೇವರ ರಾಜ್ಯದ ಪ್ರಜೆಗಳೂ ಮತ್ತು ಯೇಸುವಿನ ಶಿಷ್ಯರೂ ಆಗುವುದಾಗಿದೆ.

   ಆ. "ಮರಿಯಳು ಆ ಉತ್ತಮ ಭಾಗವನ್ನು ಆರಿಸಿಕೊಂಡಿದ್ದಾಳೆ": ಮರಿಯಳು ತಾನು ಈ ಅತ್ಯುತ್ತಮ ಆಯ್ಕೆಯನ್ನು ಮಾಡಿಕೊಂಡಿದ್ದೇನೆಂಬುದನ್ನು ತೋರಿಸಿದಳು. ಆಕೆಯು ಯೇಸುವಿನ ಪಾದಗಳ ಬಳಿಯಲ್ಲಿ ಕೂತುಕೊಂಡು ಆತನ ವಾಕ್ಯಗಳನ್ನು ಕೇಳುವ ಒಬ್ಬ ಶಿಷ್ಯಳಾಗಿದ್ದಳು. ಆಕೆಯು ಮಾರ್ಥಳು ಮಾಡುತ್ತಿರುವ ಕ್ರೈಸ್ತೀಯ ಸೇವೆಗಿಂತ ಇನ್ನೂ ಉತ್ತಮವಾದ ಸಂಗತಿಯನ್ನು ಆರಿಸಿಕೊಂಡಳು.

   ಇ. ನಾನೆಣಿಸುತ್ತೇನೆ ಈ ಕಥೆಯು ಮಾರ್ಥಳು ಮಾಡುವ ತಪ್ಪಾದ ಕಾರ್ಯಕ್ಕಿಂತ (ಮನೆಕೆಲಸ) ಮರಿಯಳು ಮಾಡಿದ ಸರಿಯಾದ ಆಯ್ಕೆಯ ಕುರಿತಾದುದ್ದಾಗಿದೆ (ಆಕೆಯಿಂದ ತೆಗೆಯಲ್ಪಡದ ದೇವರ ರಾಜ್ಯ). ತನ್ನೆಲ್ಲ ಗಡಿಬಿಡಿ ಮತ್ತು ಚಿಂತೆಯಲ್ಲಿ ಮಾರ್ಥಳು ಅತೀ ಪ್ರಾಮುಖ್ಯವಾದ ಸಂಗತಿ – ಮೊದಲು ದೇವರ ರಾಜ್ಯಕ್ಕಾಗಿ ನೀತಿಗಾಗಿ ತವಕಪಡುವುದನ್ನು ಮರೆತುಬಿಟ್ಟಿದ್ದಳು (ಮತ್ತಾ. 6:33). ಮೊದಲು ನಾವು ದೇವರನ್ನು ಪ್ರೀತಿಸಬೇಕು, ಆಗ ಮಾತ್ರ ನಾವು ನಮ್ಮಂತೆಯೇ ನಮ್ಮ ನೆರೆಯವರನ್ನು ಪ್ರೀತಿಸಲು ಸಾಧ್ಯ (ಲೂಕ 10:25-37 ರ ಪಾಠನೋಡಿ).
2. –

## 17. ಉತ್ತರಗಳು: ಯೆಹೂದಿ ನಾಯಕರ ಆರು ಸಂಕಟಗಳು, ಲೂಕ 11:37-54

### ಪ್ರಶ್ನೆಗಳಿಗೆ ಉತ್ತರಗಳು

1. ಈ ವಾಕ್ಯಭಾಗದ ಸಂದರ್ಭ: ಒಬ್ಬ ಫರಿಸಾಯನು ತನ್ನ ಮನೆಗೆ ಊಟಕ್ಕಾಗಿ ಯೇಸುವನ್ನು ಆಹ್ವಾನಿಸಿದ್ದನು (ವ. 37).
2. ಯೇಸುವು ಊಟಮಾಡುವುದಕ್ಕಿಂತ ಮೊದಲು ಕೈತೊಳೆದುಕೊಳ್ಳದೇ ಇರುವುದಕ್ಕಾಗಿ ಫರಿಸಾಯನು ಆಶ್ಚರ್ಯಪಟ್ಟನು (ವ. 38).
3. ಫರಿಸಾಯನು ತನ್ನ ಹೃದಯದ ಸ್ಥಿತಿಯ ಬಗ್ಗೆ ಕಾಳಜಿವಹಿಸದೆ ಹೊರಗಿನ ಶುಚಿತ್ವದ ಬಗ್ಗೆ ಹೆಚ್ಚು ಕಾಳಜಿ ಹೊಂದಿರುವುದಕ್ಕಾಗಿ ಯೇಸು ಆತನನ್ನು ದೂರುತ್ತಾನೆ (ವ. 39-41).
4. ಯೇಸು ಫರಿಸಾಯನಿಗೆ ಉಧಾರವಾಗಿದ್ದು ದಾನಾಕೊಡು, ಆಗ ಶುದ್ಧನಾಗುವಿ ಎಂದು ಹೇಳುತ್ತಾನೆ (ವ. 39-41).
5. ಮೊದಲ ಮೂರು ಸಮಸ್ಯೆಗಳಲ್ಲಿ ಯೇಸು ಫರಿಸಾಯರನ್ನು ಸಂಬೋಧಿಸುತ್ತಾನೆ (ವ. 38-44).
6. ಮೊದಲ ಸಮಸ್ಯೆಯು ನ್ಯಾಯ ಮತ್ತು ಪ್ರೀತಿಯನ್ನು ಲಕ್ಷಿಸದೆ ದಶಮಾಂಶವನ್ನು ಕೊಡುವುದರ ಕುರಿತಾಗಿದೆ (ವ. 42).
7. ಎರಡನೆಯ ಸಮಸ್ಯೆಯು ಗೌರವನ್ನು ಅಪೇಕ್ಷಿಸುವುದಾಗಿದೆ (ವ. 43).
8. ಮೂರನೆಯ ಸಮಸ್ಯೆಯು ಫರಿಸಾಯನು ನೆಲಸಮವಾದ ಸಮಾಧಿಗೆ ಸಮವಾಗಿರುವುದರ ಕುರಿತಾಗಿದೆ (ವ. 44). ಒಬ್ಬ ವ್ಯಕ್ತಿಯು ಸಮಾಧಿಯ ಬಳಿಗೆ ಬಂದರೆ ಶಾಸ್ತ್ರದ ಪ್ರಕಾರ ಅಶುದ್ಧನಾಗುವನು.
9. ತಮ್ಮನ್ನು ನೇರವಾಗಿ ನಿಂದಿಸಿದ್ದಕ್ಕಾಗಿ ಧರ್ಮೋಪದೇಶಕನು ಯೇಸುವನ್ನು ದೂರುತ್ತಾನೆ (ವ. 45). ಯೇಸು ಫರಿಸಾಯರನ್ನು ಬೈದದ್ದು ಧರ್ಮೋಪದೇಶಕ ಮತ್ತು ಶಾಸ್ತ್ರಿಗಳ ಮೇಲೂ ಪ್ರಭಾವಬೀರಿತು. ಅವರಲ್ಲಿ ಹೆಚ್ಚಿನವರೆಲ್ಲ ಫರಿಸಾಯರಾಗಿದ್ದಿರಬಹುದು.
10. ಕೊನೆಯ ಮೂರು ಸಮಸ್ಯೆಗಳಲ್ಲಿ ಯೇಸು ಧರ್ಮೋಪದೇಶಕ/ಶಾಸ್ತ್ರಿಗಳನ್ನು ನೇರವಾಗಿ ಸಂಬೋಧಿಸುತ್ತಾನೆ (ವ. 46-52).
11. ನಾಲ್ಕನೆಯ ಸಮಸ್ಯೆಯು ಧರ್ಮೋಪದೇಶಕರು ಜನರ ಮೇಲೆ ಹೊರಲಾರದ ಭಾರಗಳನ್ನು ಹೊರಿಸುವುದರ ಕುರಿತಾಗಿದೆ (ವ. 46).
12. ಐದನೆಯ ಸಮಸ್ಯೆಯು ಧರ್ಮೋಪದೇಶಕರು ಪ್ರವಾದಿಗಳನ್ನು ಕೊಂದ ತಮ್ಮ ಪಿತೃಗಳ ಕುಕೃತ್ಯಗಳನ್ನು ಸಾಕ್ಷಿಸುವದರ ಕುರಿತಾಗಿದೆ. ಅವರು ಕೊಲ್ಲಲ್ಪಟ್ಟ ಪ್ರವಾಧಿಗಳಿಗೆ ಗೋರಿಗಳನ್ನು ಕಟ್ಟಿದರು. ಇದರ ಪರಿಣಾಮವಾಗಿ ದೇವರು ಧರ್ಮೋಪದೇಶಕರನ್ನು ಅವರ ಪಿತೃಗಳು ಮಾಡಿದ ಪಾಪಗಳಿಗಾಗಿ ಹೊಣೆಗಾರರನ್ನಾಗಿ ಮಾಡುವುನು (ವ. 47-51).
13. ಆರನೆಯ ಸಮಸ್ಯೆಯು ಧರ್ಮೋಪದೇಶಕರು ಜನರನ್ನು ತಪ್ಪಾಗಿ ನಡೆಸಿದ್ದರ ಕುರಿತಾಗಿದೆ, ಇದರಿಂದ ಅವರು ದೇವರ ರಾಜ್ಯದೊಳಗೆ ಪ್ರವೇಶಿಸುವುದು ಹೇಗೆ ಎಂಬುದರ ಕುರಿತ ಜ್ಞಾನವನ್ನು ಕಂಡುಕೊಳ್ಳಲು ಅಸಾಧ್ಯವಾಗಿದೆ (ವ. 52).
14. ಯೇಸು ಮತ್ತು ಯೆಹೂದಿ ನಾಯಕನ ನಡುವಿನ ಮುಖಾಮುಖಿಯ ಪರಿಣಾಮವು ವಿರೋಧತೆಯನ್ನು ಹೆಚ್ಚಿಸಿತು. ಯೆಹೂದಿ ನಾಯಕರು ಯೇಸುವನ್ನು ಹಿಡಿಯಲು ಮತ್ತು ಆತನ ಸೇವೆಯನ್ನು ನಿಲ್ಲಿಸಲು ಇನ್ನೂ ಹಾತೊರೆದರು (ವ. 53-51).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಈ ವಾಕ್ಯಭಾಗದಲ್ಲಿ ಯೇಸು ಹೊರಗೆಡವಿದ ಧಾರ್ಮಿಕ ವ್ಯಕ್ತಿಗಳ ಕೆಲವು ಪಾಪಸ್ವಭಾವಗಳು (ವ. 37-54):

   ಅ. ಕಪಟತನ (ವ. 39-41): ಫರಿಸಾಯರು ಕಪಟಿಗಳಾಗಿದ್ದರು. ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ಆಧಾರದ ಮೇಲೆ ಶುದ್ಧತೆಯ ಬಗ್ಗೆ ಅವರು ಅನೇಕ ನಿಯಮಗಳನ್ನು ಮಾಡಿಕೊಂಡಿದ್ದರು. ಅವರು ತಪ್ಪದೇ ಈ ನಿಯಮಗಳನ್ನು ಪಾಲಿಸುತ್ತಿದ್ದರು. ಆದರೆ ಅದೇ ವೇಳೆ ಅವರು ಕೆಟ್ಟವರೂ ಸುಲುಕೊಳ್ಳುವವರೂ ಆಗಿದ್ದರು. ಯೇಸು ಅವರಿಗೆ ಬಡವರಿಗೆ ಮತ್ತು ಕೊರತೆಯಲ್ಲಿರುವವರಿಗೆ ಉದಾರವಾಗಿ ಕೊಡಿರಿ ಎಂದು ಹೇಳಿದನು. ಅದು ಅವರನ್ನು ಶುದ್ಧಿಮಾಡುವುದು.

ಆ. ಆತ್ಮೀಕ ವಿಚಾರಗಳಲ್ಲಿ ಅಸಮತೋಲನೆ (ವ. 42): ಫರಿಸಾಯರು ಹಳೇ ಒಡಂಬಡಿಕೆಯ ಧರ್ಮಶಾಸ್ತ್ರವು ಹೇಳುವುದಕ್ಕಿಂತ ಹೆಚ್ಚಾಗಿ ತಮ್ಮ ಆದಾಯ ಮತ್ತು ಉತ್ಪಾದನೆಯಲ್ಲಿ ದಶಮಾಂಶ ಕೊಡುತ್ತಿದ್ದರು. ಹಾಗೆ ಮಾಡಲು ಅವರಿಗೆ ಸ್ವಾತಂತ್ರ್ಯವಿತ್ತು. ಆದರೆ ಸಮಸ್ಯೆಯೇನಂದರೆ ಈ ನಿಯಮಗಳ ಬಗೆಗಿನ ಕಾಳಜಿಯು ಅವರು ಜನರಿಗೆ ನ್ಯಾಯ ಒದಗಿಸುವುದು ಮತ್ತು ದೇವರನ್ನು ಪೂರ್ಣವಾಗಿ ಪ್ರೀತಿಸುವಂತಹ ಆತ್ಮೀಕ ಸಂಗತಿಗಳನ್ನು ಮರೆಯುವಂತೆ ಮಾಡಿತ್ತು. ಅವರ ದೈವಶಾಸ್ತ್ರದಲ್ಲಿನ ಈ ಅಸಮತೋಲನೆಯು ಯೇಸು ಖಂಡಿಸಿದ ಪಾಪವಾಗಿತ್ತು.

ಇ. ಸಾರ್ವಜನಿಕವಾಗಿ ತೋರಿಸಿಕೊಳ್ಳುವುದು (ವ. 43): ಫರಿಸಾಯರು ತಮ್ಮ ಸಾರ್ವಜನಿಕ ಜೀವಿತಗಳಲ್ಲಿ ಸಭಾಮಂದಿರ ಮತ್ತು ಮಾರುಕಟ್ಟೆಗಳಲ್ಲಿ ಜನರು ತಮಗೆ ಗೌರವವನ್ನು ತೋರಿಸಬೇಕೆಂದು ಬಯಸಿದರು. ಅಲ್ಲದೆ ಅವರು ತಮ್ಮನ್ನು ಧಾರ್ಮಿಕರೆಂಬುದಾಗಿ ತೋರ್ಪಡಿಸಿಕೊಳ್ಳುವಂತೆ ಉಡುಪುಗಳನ್ನು ಧರಿಸಿಕೊಳ್ಳುತ್ತಿದ್ದರು. ಅವರು ಉದ್ದವಾದ ನಿಲುವಂಗಿಗಳನ್ನು ಧರಿಸಿಕೊಳ್ಳುತ್ತಿದ್ದರು. ಯೇಸು ಈ ರೀತಿಯ ಆತ್ಮೀಕ ಗರ್ವವನ್ನು ಖಂಡಿಸಿದನು.

ಈ. ಅಸಾಧ್ಯವಾದ ಬೇಡಿಗಳು (ವ. 46): ಧರ್ಮೋಪದೇಶಕರುಗಳು ಕ್ಲಿಷ್ಟಕರವಾದ ನಿಯಮಗಳನ್ನು ಬೆಳೆಸಿಕೊಂಡು ಜನರದನ್ನು ಪಾಲಿಸಬೇಕೆಂದು ಬಯಸಿದರು. ಇದು ಸಾಮಾನ್ಯ ಜನರಿಗೆ ಭಾರವಾಗಿ ಪರಿಣಮಿಸಿತು. ಈ ರೀತಿಯ ನಿಯಮಗಳು ಸಾಮಾನ್ಯ ಜನರು ಪಾಲಿಸಲು ಅಸಾಧ್ಯವೆಂಬುದರ ಬಗ್ಗೆ ಧರ್ಮೋಪದೇಶಕರುಗಳು ತಲೆಕೆಡಿಸಿಕೊಳ್ಳಲಿಲ್ಲ. ಯೇಸು ಈ ರಿತಿಯ ಅಸಾಧ್ಯ ಬೇಡಿಕೆಗಳನ್ನು ಖಂಡಿಸಿದನು.

ಉ. ತಪ್ಪಾದ ಗಮನ (ವ. 47-51): ಹಳೇ ಒಡಂಬಡಿಕೆಯ ಪ್ರವಾದಿಗಳ ಸಮಾಧಿಗಳ ಮೇಲೆ ಗೋರಿ ಕಟ್ಟುವುದುರ ಮೂಲಕ ಧರ್ಮೋಪದೇಶಕರುಗಳು ತಾವು ಅವರನ್ನು ಗೌರವಿಸುತ್ತೇವೆಂಬುದಾಗಿ ಯೋಚಿಸಿದರು. ಆದರೆ ಅವರು ಈ ಪ್ರವಾದಿಗಳ ಬೋಧನೆಗಳನ್ನು ಅಂಗೀಕರಿಸಲಿಲ್ಲವೆಂಬುದನ್ನು ಅವರ ಜೀವಿತಗಳೇ ತೋರಿಸುತ್ತಿದ್ದವು. ಹೀಗೆ ಧರ್ಮೋಪದೇಶಕರುಗಳು ತಮ್ಮ ಪಿತೃಗಳಂತೆಯೇ ಪಾಪದ ಮಾರ್ಗವನ್ನು ಮುಂದುವರೆಸುತ್ತಿದ್ದರು. ಅವರು ಈ ಪ್ರವಾದಿಗಳು ಮುಂತಿಸಿಳಿಸಿದ ಮೆಸ್ಸೀಯನನ್ನು ಸಹ ತಿರಸ್ಕರಿಸಿದರು. ಅವರು ಯೇಸುವಿಗೂ ಮತ್ತು ಆತನು ಕೊಡುವ ದೇವರ ರಾಜ್ಯದ ರಕ್ಷಣೆಗೂ ಬೆನ್ನು ತಿರುಗಿಸಿದರು.

ಊ. ಜನರನ್ನು ಮಾರ್ಗತಪ್ಪಿಸಿದ್ದು (ವ. 52): ವಚನ 52 ರ ಟಿಪ್ಪಣಿ ನೋಡಿರಿ.

2. –

## 18. ಉತ್ತರಗಳು: ಬುದ್ಧಿಯಿಲ್ಲದ ಐಶ್ವರ್ಯವಂತನು, ಲೂಕ 12:13-21

### ಪ್ರಶ್ನೆಗಳಿಗೆ ಉತ್ತರಗಳು

1. ಒಬ್ಬನು ಯೇಸುವಿನ ಬಳಿಗೆ ತಂದೆಯ ಆಸ್ತಿಯನ್ನು ತನಗೆ ಪಾಲುಮಾಡಿಕೊಡುವಂತೆ ತನ್ನ ಅಣ್ಣನಿಗೆ ಹೇಳುವಂತೆ ಯೇಸುವಿನ ಬಳಿ ಕೇಳಿಕೊಂಡನು (ವ. 13).
2. ಯೇಸು ಆ ಮನುಷ್ಯನ ಮನವಿಯನ್ನು ತಿರಸ್ಕರಿಸಿದನು. ಆತನು ಸಹೋದರರ ಮಧ್ಯೆ ತೀರ್ಪುಮಾಡಲು ಬಯಸಲಿಲ್ಲ (ವ. 14).
3. ಯೇಸು ಜನರಿಗೆ ಎಲ್ಲಾ ಲೋಭದ ಬಗ್ಗೆ ಎಚ್ಚರಿಕೆಯಾಗಿರಬೇಕೆಂದು ಹೇಳಿದನು (ವ. 15).
4. ಈ ವಾಕ್ಯಭಾಗದಲ್ಲಿ ನಾವು ಯೇಸುವಿನಿಂದ ಬಳಸಲ್ಪಟ್ಟ ಒಂದು ಬಗ್ಗೆ ಸಾಹಿತ್ಯದ ಪ್ರಕಾರವನ್ನು ಕಾಣಬಹುದು (ವ. 16).
5. ಐಶ್ವರ್ಯವಂತನು ಎದುರಿಸುವ ಸಮಸ್ಯೆಯೇನೆಂದರೆ ಆ ವರ್ಷ ಆತನಿಗೆ ಬಹಳಷ್ಟು ಬೆಳೆ ಬಂದ ನಿಮಿತ್ತ ಕಣಜಗಳಲ್ಲಿ ಸ್ಥಳವಿಲ್ಲದೆ ಹೋಯಿತು. ಈ ಸಮಸ್ಯೆ ಪರಿಹಾರಕ್ಕಾಗಿ ಆತನು ಹಳೆಯ ಕಣಜ ಕೀಳಿಸಿ ದೊಡ್ಡದಾದ ಹೊಸ ಕಣಜಗಳನ್ನು ಮಾಡಿಸಿದನು (ವ. 17-18).
6. ಐಶ್ವರ್ಯವಂತನು ತನ್ನ ಸ್ಥಿತಿಯ ಬಗ್ಗೆ ತುಂಬಾ ಸಂತೋಷಪಟ್ಟನು. ತನಗೆ ಸಾಕಷ್ಟು ಆಸ್ತಿಯಿದೆ ಎಂಬುದಾಗಿ ಭಾವಿಸಿದನು (ವ. 19).
7. ದೇವರು ಆ ಮನುಷ್ಯನಿಗಾಗಿ ಒಂದು ನ್ಯಾಯತೀರ್ಪಿನ ಸಂದೇಶವನ್ನು ಹೊಂದಿದ್ದನು. ಮರಣಕ್ಕಾಗಿ ತನ್ನನ್ನು ಸಿದ್ಧಪಡಿಸಿಕೊಳ್ಳದ ಮೂರ್ಖನು ಆತನಾಗಿದ್ದನು (ವ. 20).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಬುದ್ಧಿಯಿಲ್ಲದ ಐಶ್ವರ್ಯವಂತನ ಸಾಮ್ಯವು (ವ. 16-21) ಲೋಭ (ದುರಾಸೆ) ವಿಷಯವನ್ನು ತಿಳಿಸುತ್ತದೆ. ಒಬ್ಬ ಮನುಷ್ಯನ ಜೀವನವು ಆತನಿಗಿರುವ ಸಂಪತ್ತಿನಿಂದ ಸಮೃದ್ಧವಾಗಿರುವುದಿಲ್ಲ ಎಂಬ ಆತ್ಮೀಕ ಸತ್ಯವನ್ನು ತಿಳಿಸಲು ಯೇಸು ಬಯಸಿದನು (ವ. 15).
2. ಐಶ್ವರ್ಯವಂತನ ಮೌಲ್ಯಮಾಪನ:

   ಅ. ಸಕಾರಾತ್ಮಕ ಅಂಶಗಳು:

   - ಆತನೊಬ್ಬ ಒಳ್ಳೆಯ ಯಶಸ್ವಿ ರೈತನಾಗಿದ್ದಿರಬಹುದು
   - ತನ್ನ ಬೆಳೆಯನ್ನು ಆತನು ಸರಿಯಾಗಿ ನೋಡಿಕೊಳ್ಳುವವನಾಗಿದ್ದನು. ಆತನು ಯೋಜನೆ ಮಾಡಿ ಎಲ್ಲಾ ಬೆಳೆಯನ್ನು ತುಂಬಿಡುವುದಕ್ಕಾಗಿ ದೊಡ್ಡ ಖಣಜಗಳನ್ನು ಕಟ್ಟಿಸಿದನು.
   - ಆತನು ತನ್ನ ಭವಿಷ್ಯಕ್ಕಾಗಿ ವ್ಯವಸ್ಥೆ ಮಾಡಿದ ಒಬ್ಬ ಮನುಷ್ಯನಾಗಿದ್ದನು.
   - ಆತನು ಜೀವನದಲ್ಲಿ ಸುಖಪಟ್ಟ ಒಬ್ಬ ಮನುಷ್ಯನಾಗಿದ್ದನು
   - ಲೋಕದ ದೃಷ್ಟಿಯಲ್ಲಿ ಆತನೊಬ್ಬ ಬುದ್ಧಿಯುಳ್ಳ ಮನುಷ್ಯನಾಗಿದ್ದನು

   ಆ. ನಕಾರಾತ್ಮಕ ಅಂಶಗಳು:

   - ಆತನು ಆತ್ಮಿಕ ಸತ್ಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದರಲ್ಲಿ ನಿರ್ಲಕ್ಷವಹಿಸಿದನು. ಆತನು ದೇವರ ಮುಂದೆ ಐಶ್ವರ್ಯವಂತನಾಗಿರಲಿಲ್ಲ: ಆತನು ಮೊದಲು ದೇವರ ರಾಜ್ಯವನ್ನು ಆತನ ನೀತಿವಂತಿಕೆಯನ್ನು ಹುಡುಕಲಿಲ್ಲ.

   ಇ. ಸಾರಾಂಶ:

   - ಐಶ್ವರ್ಯವಂತನು ಎಂದು ನಿರ್ಲಕ್ಷಿಸಬಾರದ ದೇವರ ರಾಜ್ಯವನ್ನು ನಿರ್ಲಕ್ಷಿಸಿದನು.
   - ಹೀಗೆ ಆ ಐಶ್ವರ್ಯವಂತನು ಮರಿಯಳಂತೆ ಉತ್ತಮವಾದದ್ದನ್ನು ಆರಿಸಿಕೊಳ್ಳಲಿಲ್ಲ (ಲೂಕ 10:42).

3. –



*The rich fool*



## 19. ಉತ್ತರಗಳು: ಇಕ್ಕಟ್ಟಾದ ಬಾಗಿಲು, ಲೂಕ 13:22-30

### ಪ್ರಶ್ನೆಗಳಿಗೆ ಉತ್ತರಗಳು

1. ಈ ವಾಕ್ಯಭಾಗದ ಸಂದರ್ಭವು ಯೇಸುವು ಯೆರೂಸಲೇಮಿಗೆ ಪ್ರಯಾಣಿಸುವುದಾಗಿದೆ. ಆತನು ಹೋಗುವಾಗ ಜನರಿಗೆ ರಕ್ಷಣೆ ಮತ್ತು ದೇವರ ರಾಜ್ಯದ ಬಗ್ಗೆ ಉಪದೇಶ ಮಾಡಿದನು (ವ. 22).
2. ಈ ವಾಕ್ಯಭಾಗದಲ್ಲಿ ಯೇಸುವಿಗೆ ರಕ್ಷಣೆ ಕುರಿತ ಪ್ರಶ್ನೆಯನ್ನು ಕೇಳಲಾಯಿತು (ವ. 23).
3. ಯೇಸು ಬಾಗಿಲನ್ನು ಈ ರೀತಿಯಾಗಿ ವರ್ಣಿಸಿದ್ದಾನೆ (ವ. 24-25):

   ಅ. ಬಾಗಿಲು ಇಕ್ಕಟ್ಟಾಗಿದೆ. ಇದರ ಅರ್ಥ ಇದರೊಳಗೆ ಹೇಗೆ ಹೋಗಬೇಕೆಂಬುದಕ್ಕೆ ಮಿತಿಗಳಿವೆ.

   ಆ. ಇದರೊಳಗೆ ಪ್ರವೇಶಿಸಲು ಬಯಸುವವರೆಲ್ಲರಿಗೂ ಅದು ತೆರೆಯಲ್ಪಡುವುದಿಲ್ಲ.

   ಇ. ಆ ಬಾಗಿಲನ್ನು ಹಾಕಲಾಗುತ್ತದೆ. ಆಗ ಅದರೊಳಗೆ ಪ್ರವೇಶಿಸಲು ಸಮಯ ಮೀರಿ ಹೋಗಿರುತ್ತದೆ.
4. ಬಾಗಿಲನ್ನು ಮುಚ್ಚಲಾಗುತ್ತದೆ (ವ. 25).
5. ಮನೆಯ ಯಜಮಾನನು ಬಾಗಿಲನ್ನು ತೆರೆಯಲು ನಿರಾಕರಿಸುತ್ತಾನೆ (ವ. 25-27):

   ಅ. ಯಾಕೆಂದರೆ ಈಗಾಗಲೇ ಅದನ್ನು ಹಾಕಿ ಮುಚ್ಚಲಾಗಿರುತ್ತದೆ.

   ಆ. ಯಾಕೆಂದರೆ ಮುಚ್ಚಿದ್ದ ಬಾಗಿಲನ್ನು ತಟ್ಟುವವರು ಯಾರೆಂಬ ಗುರುತು ಯಜಮಾನನಿಗೆ ಇರುವುದಿಲ್ಲ.
6. ಮುಚ್ಚಿದ ಬಾಗಿಲ ಬಳಿ ನಿಂತಿದ್ದ ಜನರು ತಾವು ಒಳಗೆ ಹೋಗಬೇಕೆಂದು ಯೋಚಿಸುತ್ತಾರೆ (ವ. 26):

   ಅ. ಯಾಕೆಂದರೆ ಅವರು ಯಜಮಾನನೊಂದಿಗೆ ಊಟ ಮಾಡುತ್ತಿದ್ದರು ಮತ್ತು ಕುಡಿಯುತ್ತಿದ್ದರು. ಅವರು ಯೇಸುವು ಊರುಗಳಿಗೆ ಹಳ್ಳಿಗಳಿಗೆ ಹೋಗುವಾಗೆಲ್ಲಾ ಆತನೊಂದಿಗೆ ಇರುವವರಾಗಿದ್ದರು.

   ಆ. ಯಾಕೆಂದರೆ ಯಜಮಾನನು ಅವರ ಬೀದಿಗಳಲ್ಲಿ ಉಪದೇಶಿಸುತ್ತಿದ್ದನು. ಯೇಸುವು ಅವರ ಮಧ್ಯದಲ್ಲಿ ವಾಸಿಸಿದನು.
7. ಬಾಗಿಲನ್ನು ಹಾಕಿದ ನಂತರವೂ ಅದರೊಳಗೆ ಹೋಗಬೇಕೆಂದು ಪ್ರಯತ್ನಿಸುವ ಜನರನ್ನು ಯಜಮಾನನು ಈ ರೀತಿಯಾಗಿ ವರ್ಣಿಸುತ್ತಾನೆ (ವ. 27):

   ಅ. ಯಜಮಾನನಿಗೆ ಅವರ ಗುರುತಿರುವುದಿಲ್ಲ. ಅವರು ಯಾರು ಅಥವಾ ಎಲ್ಲಿಂದ ಬಂದವರೆಂಬ ಗುರುತು ಆತನಿಗಿರುವುದಿಲ್ಲ.

   ಆ. ಅವರು ಅಧರ್ಮಮಾಡುವವರಾಗಿದ್ದಾರೆ.
8. ವ. 28 ರಲ್ಲಿ ತದ್ವಿರುದ್ಧವಾಗಿರುವ ಎರಡು ಗುಂಪಿನ ಜನರು:

   ಅ. ದೇವರ ರಾಜ್ಯದಲ್ಲಿ ಊಟಕ್ಕೆ ಕೂಡುವವರು

   ಆ. ಹೊರಗೆ ಹಾಕಲ್ಪಡುವವರು
9. ಪರಲೋಕ ರಾಜ್ಯದಲ್ಲಿ ಊಟಕ್ಕೆ ಕೂರುವವರು ಲೋಕದ ಎಲ್ಲಾ ಕಡೆಯಿಂದ ಬಂದವರಾಗಿದ್ದಾರೆ ಎಂಬುದಾಗಿ ವರ್ಣಿಸಲಾಗಿದೆ (ವ. 29).
10. ಮೊದಲನೆಯವರಾಗಿರಬೇಕೆಂದಿದ್ದವರು ಕಡೆಯವರಾದರು (ವ. 30).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಎಷ್ಟು ಜನರು ರಕ್ಷಿಸಲ್ಪಡುವರು ಎಂಬ ಒಬ್ಬ ವ್ಯಕ್ತಿಯ ಪ್ರಶ್ನೆಗೆ ಯೇಸು ನೇರವಾಗಿ ಉತ್ತರಿಸುವುದಿಲ್ಲ. ಬದಲಾಗಿ ಆತನು ಪರಲೋಕರಾಜ್ಯದಲ್ಲಿ ಯಾರಿರುವರು ಎಂಬುದಾಗಿ ವಿವರಿಸುತ್ತಾನೆ:

   ಅ. ಯೇಸುವನ್ನು ಅರಿತವರು ಮತ್ತು ಆತನಿಂದ ತಿಳಿಯಲ್ಪಟ್ಟವರು ಮಾತ್ರ ರಕ್ಷಿಸಲ್ಪಡುವರು.

ಆ. ಈಗ ಯೇಸುವನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದವರು, ಬಾಗಿಲು ತೆರೆದಿರುವಾಗಲೇ ಅದರೊಳಗೆ ಪ್ರವೇಶಿಸುವವರು ಮಾತ್ರ ರಕ್ಷಿಸಲ್ಪಡುವರು.

2. ರಕ್ಷಣೆಯ ಬಾಗಿಲು (ದೇವರ ರಾಜ್ಯದೊಳಗೆ ಹೋಗುವ ಬಾಗಿಲು) ಇಕ್ಕಾಟ್ಟಾಗಿದೆ:

   ಅ. ಇದು ಇಕ್ಕಟ್ಟಾಗಿದೆ, ಯಾಕೆಂದರೆ ಈಗಿನ ಯುಗದಲ್ಲಿ ಮಾತ್ರ ಅದರೊಳಗೆ ಪ್ರವೇಶಿಸಬಹುದಾಗಿದೆ. ಯೇಸುವಿನ ಎರಡನೇ ಬರೋಣದೊಂದಿಗೆ ಈ ಯುಗವು ಅಂತ್ಯವಾದ ನಂತರ ಬಾಗಿಲು ಮುಚ್ಚಲ್ಪಡುತ್ತದೆ. ಆಗ ಅದರೊಳಗೆ ಪ್ರವೇಶಿಸಲಾಗುವುದಿಲ್ಲ.

   ಆ. ಇದು ಇಕ್ಕಟ್ಟಾಗಿದೆ, ಯಾಕೆಂದರೆ ಯೇಸು ತಿಳಿದಿರುವವರು ಮಾತ್ರ (ಯೇಸುವನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದವರು) ಅದರೊಳಗೆ ಹೋಗಿ ದೇವರ ರಾಜ್ಯದೊಳಗೆ ಪ್ರವೇಶಿಸುವರು.

   ಇ. ಇದು ಇಕ್ಕಟ್ಟಾಗಿಲ್ಲ, ಯಾಕೆಂದರೆ ಇದರೊಳಕ್ಕೆ ಹೋಗಿ ದೇವರ ರಾಜ್ಯದೊಳಗೆ ಪ್ರವೇಶಿಸಲು ಮನುಷ್ಯನ ಪ್ರಯತ್ನದ ಅಗತ್ಯತೆಯಿದೆ (ಉಪವಾಸದ ಪ್ರಾರ್ಥನೆ, ಪವಿತ್ರ ಜೀವನ, ಕೆಲ ಒಳ್ಳೆಯ ಕಾರ್ಯಗಳು).

   ಈ. ಇದು ಇಕ್ಕಟ್ಟಾಗಿಲ್ಲ, ಯಾಕೆಂದರೆ ಪ್ರತ್ಯೇಕ ದೇಶದ, ಸಂಸ್ಕೃತಿಯ ಅಥವಾ ಹಿನ್ನಲೆಯ ಜನರು ಮಾತ್ರ ಇದರೊಳಗೆ ಹೋಗಿ ದೇವರ ರಾಜ್ಯವನ್ನು ಸೇರಬಹುದಾಗಿದೆ.

3. ವಚನ 29 ರಲ್ಲಿ ಯೇಸು "ಇಗೋ ನೀವು" ಆ ಸಮಯದಲ್ಲಿ ಆತನು ಸಂಭೋಧಿಸುತ್ತಿದ್ದ ಯೆಹೂದಿ ಜನರನ್ನು ಸೂಚಿಸುತ್ತಾನೆ. ಪ್ರತಿ ಯೆಹೂದ್ಯನೂ ಸಹ ಹಳೇ ಒಡಂಬಡಿಕೆಯ ಪ್ರವಾದಿಗಳು ಹೇಳಿದಂತೆ ಅಬ್ರಹಾಮ, ಇಸಾಕ ಮತ್ತು ಯಾಕೋಬನೊಂದಿಗೆ ಮೆಸ್ಸೀಯನ ಔತಣಕುಟದಲ್ಲಿ ಪಾಲ್ಗೊಳ್ಳಲು ಬಯಸುತ್ತಿದ್ದನು. ಯೆಹೂದ್ಯರು ತಮ್ಮನ್ನು ಮೊದಲಿನವರೆಂಬುದಾಗಿ ಪರಿಗಣಿಸುತ್ತಿದ್ದರು. ತಮಗೆ ಪರಲೋಕರಾಜ್ಯವು ಖಂಡಿತವಾಗಿದೆ ಎಂಬುದಾಗಿ ಅವರು ಯೋಚಿಸಿದ್ದರು. ಆದರೆ ಯಜಮಾನನು ತಿಳಿಯದ ಜನರನ್ನು (ಯೇಸುವನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸದವರನ್ನು) ಪರಲೋಕದಲ್ಲಿ ದೇವ ಜನರೊಂದಿಗಿನ ಅನ್ಯೋನ್ಯತೆಯಿಂದ ಹೊರಹಾಕಲಾಗುತ್ತದೆ ಎಂದು ಯೇಸು ಹೇಳಿದನು. ಅವರ ಸ್ಥಾನವನ್ನು ಲೋಕದ ಎಲ್ಲಾ ಕಡೆಯಿಂದ ಬಂದವರು (ಕಡೆಯವರೆಂಬುದಾಗಿ ಪರಿಗಣಿಸಿದ ಅನ್ಯರು ಸಹ) ಅಂದರೆ ಯೇಸುವನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದವರು ಪರಲೋಕರಾಜ್ಯದಲ್ಲಿನ ಊಟದಲ್ಲಿ ಪಾಲ್ಗೊಳ್ಳುವರು. ಹೀಗೆ "ಕಡೆಯವರಾಗಿರುವ ಕೆಲವರು ಮೊದಲಿನವವರಾಗುವರು, ಮೊದಲಿನವರಾಗಿರುವ ಕೆಲವರು ಕಡೆಯವರಾಗುವರು" (ವ. 30).

## 20. ಉತ್ತರಗಳು: ಕಳೆದುಹೋದ ಮತ್ತು ತಿರುಗಿ ಪಡಕೊಂಡ ಮೂರು ಸಾಮ್ಯಗಳು, ಲೂಕ ಅಧ್ಯಾಯ 15

### ಪ್ರಶ್ನೆಗಳಿಗೆ ಉತ್ತರಗಳು

1. ಯೇಸುವಿನ ಉಪದೇಶ ಕೇಳಲು ಎಲ್ಲಾ ಸುಂಕದವರೂ, ಪಾಪಿಗಳೂ ಆತನ ಬಳಿಗೆ ಬಂದರು (ವ. 1).
2. ಯೇಸುವು ಕೆಟ್ಟವರೆಂಬುದಾಗಿ ಪರಿಗಣಿಸಲ್ಪಟ್ಟ ಸುಂಕದವರೂ ಮತ್ತು ಪಾಪಗಳನ್ನು ಸೇರಿಸಕೊಂಡದ್ದಕ್ಕೆ ಯೆಹೂದಿ ನಾಯಕರು ಯೇಸುವಿನ ಮೇಲೆ ಮುನಿಸಿಕೊಳ್ಳುತ್ತಾರೆ (ವ. 2).
3. ಕಳೆದು ಹೋದ ಕುರಿಯ ಸಾಮ್ಯವು ಯೇಸುವು ಪಾಪಿಗಳೊಂದಿಗೆ ಸೇರಿದ್ದಕ್ಕಾಗಿ ಫರಿಸಾಯರು ಮತ್ತು ಶಾಸ್ತ್ರಿಗಳು ಆತನ ಮೇಲೆ ಗುಣುಗುಟ್ಟುವ ಸಂದರ್ಭವಾಗಿದೆ (ವ. 2).
4. ತನಗಾದ ಆನಂದವನ್ನು ಹಂಚಿಕೊಳ್ಳುವುದಕ್ಕಾಗಿ ನೂರು ಕುರಿಗಳುಳ್ಳವನು ತನ್ನ ಸ್ನೇಹಿತರನ್ನು, ನೆರಯವರನ್ನೂ ಕೂಡಿಸುತ್ತಾನೆ (ವ. 6).
5. ಕಳೆದು ಹೋದ ಕುರಿಯ ಸಾಮ್ಯದಲ್ಲಿ ಯೇಸು ಒಂದು ಅಂಶವನ್ನು ಮಾತ್ರ ಹೋಲಿಕೆ ಮಾಡುತ್ತಾನೆ (ವ. 4-7). ಒಬ್ಬ ಪಾಪಿಯು ದೇವರ ಕಡೆಗೆ ತಿರುಗಿಕೊಂಡರೆ ಪರಲೋಕದಲ್ಲಾಗುವ ಆನಂದ – ಕಳೆದು ಹೋದ ತನ್ನ ಒಂದು ಕುರಿಯು ಸಿಕ್ಕಾಗ ಆ ಕುರಿಯ ಯಜಮಾನನಿಗಾದ ಆನಂದ.
6. ತನ್ನ ಪಾವಲಿಯನ್ನು ಕಳಕೊಂಡ ಹೆಂಗಸು ಅದನ್ನು ಕಂಡುಕೊಳ್ಳುವುದಕ್ಕಾಗಿ ದೀಪ ಹಚ್ಚಿ ಮನೆಯನ್ನೆಲ್ಲ ಗುಡಿಸಿ ಸಿಕ್ಕುವ ತನಕ ಹುಡುಕುತ್ತಾಳೆ (ವ. 8).
7. ಕಳೆದು ಹೋದ ನಾಣ್ಯದ ಸಾಮ್ಯದಲ್ಲಿ ಯೇಸು ಒಂದು ಅಂಶವನ್ನು ಹೋಲಿಕೆ ಮಾಡುತ್ತಾನೆ (ವ. 8-10): ದೇವರ ಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ಬಗ್ಗೆ ಪರಲೋಕದಲ್ಲಾಗುವ ಆನಂದ – ಕಳೆದು ಹೋದ ತನ್ನ ಒಂದು ನಾಣ್ಯವು ಸಿಕ್ಕಾಗ ಆ ಹೆಂಗಸಿಗಾಗುವ ಆನಂದ.
8. ಕಿರೀ ಮಗನು ತಂದೆಯ ಬಳಿ ಆಸ್ತಿಯಲ್ಲಿ ತನಗೆ ಬರಬೇಕಾದ ಪಾಲನ್ನು ಕೊಡು ಎಂದು ಹೇಳುತ್ತಾನೆ (ವ. 12).
9. ಕಿರೀ ಮಗನು ತನ್ನ ಆಸ್ತಿಯನ್ನೆಲ್ಲ ಕೂಡಿಸಿಕೊಂಡು (ಆಸ್ತಿ ಮಾರಿದ ಹಣ) ಮನೆಯನ್ನು ಬಿಟ್ಟು ದೂರದೇಶಕ್ಕೆ ಹೊರಟು ಹೋದನು. ಅಲ್ಲಿ ಆತನು ಪಟಿಂಗನಾಗಿ ತನ್ನ ಹಣವನ್ನೆಲ್ಲ ವ್ಯರ್ಥಮಾಡಿದನು (ವ. 13-14).
10. ಕಿರೀ ಮಗನಿಗೆ ಬದುಕಲು ಬೇರೆ ಮಾರ್ಗವೇ ಇಲ್ಲದ್ದರಿಂದ ಹಂದಿಗಳನ್ನು ಮೇಯಿಸಬೇಕಾಯಿತು. ತನ್ನಲ್ಲಿದ್ದ ಹಣವನ್ನೆಲ್ಲ ಖಾಲಿಮಾಡಿಕೊಂಡ ನಂತರ ಆ ದೇಶದಲ್ಲಿ ಘೋರವಾದ ಬರ ಬಂದದ್ದರಿಂದ ಬೇರೆ ಯಾವ ಉದ್ಯೋಗಗಳು ಇರಲಿಲ್ಲ (ವ. 14-15). ಇದೆಲ್ಲದರ ಹೊರತಾಗಿ ಆತನಿಗೆ ತಿನ್ನಲು ಸಾಕಷ್ಟು ಆಹಾರ ಸಹ ಇರಲಿಲ್ಲ (ವ. 16).
11. ತನ್ನ ಶೋಚನೀಯ ಪರಿಸ್ಥಿತಿಯನ್ನು ಅರಿತುಕೊಂಡದ್ದರಿಂದ ಕಿರೀ ಮಗನು ತನ್ನ ತಂದೆಯ ಮನೆಗೆ ಹಿಂತಿರುಗಬೇಕೆಂದು ನಿರ್ಧರಿಸಿದನು. ಆತನ ಸ್ಥಿತಿಯು ಆತನ ತಂದೆಯ ಮನೆಯಲ್ಲಿ ಆಳುಗಳ ಸ್ಥಿತಿಗಿಂತಲೂ ಕೀಳಾಗಿತ್ತು (ವ. 17-18).
12. ತಂದೆಯು ಕಳೆದು ಹೋದ ತನ್ನ ಮಗನು ಬರಬಹುದೆಂಬ ನಿರೀಕ್ಷೆಯಿಂದ ದಿನಾಲು ಮನೆಯ ಹೊರಗಡೆ ನಿಲ್ಲುತ್ತಿದ್ದಿರಬಹುದು. ತನ್ನ ಕಿರೀ ಮಗನು ಮನೆಯತ್ತ ಬರುವುದನ್ನು ಕಂಡಾಗ ಆತನು ಈ ರೀತಿ ಪ್ರತಿಕ್ರಯಿಸಿದನು (ವ. 20):
    ಅ. ಆತನು ಕನಿಕರಪಟ್ಟನು
    ಆ. ಆತನು ಮಗನೆಡೆಗೆ ಓಡಿದನು
    ಇ. ಆತನು ಮಗನನ್ನು ಅಪ್ಪಿ ಮುದ್ದಿಟ್ಟನು
13. ಕಿರೀ ಮಗನು ಈ ರೀತಿಯಾಗಿ ಪಶ್ಚಾತ್ತಾಪವನ್ನು ವ್ಯಕ್ತಪಡಿಸುತ್ತಾನೆ (ವ. 21):
    ಅ. ಆತನು ತನ್ನ ಪಾಪವನ್ನು ಅರಿಕೆಮಾಡಿದನು

ಆ. ತನ್ನ ಅಯೋಗ್ಯತೆಯನ್ನು ಮತ್ತು ತಂದೆಯ ಕೃಪೆಯನ್ನು ಆತನು ಗ್ರಹಿಸಿಕೊಂಡನು

14. ತಂದೆಯು ತನ್ನ ಕಿರೀ ಮಗನನ್ನು ಈ ರೀತಿ ಸನ್ಮಾನಿಸುತ್ತಾನೆ (ವ. 22-24):

ಅ. ಆತನವನಿಗೆ ಉಡಲು ಶ್ರೇಷ್ಠವಾದ ನಿಲುವಂಗಿಯನ್ನು ಕೊಟ್ಟನು

ಆ. ಆತನು ಅವನ ಬೆರಳಿಗೆ ಅಧಿಕಾರದ ಉಂಗುರವನ್ನು ಇಟ್ಟನು

ಇ. ಪ್ರತಿಯೊಬ್ಬರೂ ಸಹ ಆತನು ತನ್ನ ಮಗನು ಹೊರತು ಆಳಲ್ಲ ಎಂಬುದನ್ನು ತಿಳಿದುಕೊಳ್ಳುವಂತೆ ಆತನ ಕಾಲಿಗೆ ಜೋಡನ್ನು ಕೊಟ್ಟನು.

ಈ. ಅವನಿಗಾಗಿ ಕೊಬ್ಬಿಸಿದ ಕರುವನ್ನು ಕೊಯ್ದು ಸಂಭ್ರಮಿಸುವುದಕ್ಕಾಗಿ ಭೋಜನವನ್ನು ಸಿದ್ಧಪಡಿಸಿದನು.

15. ವಾಧ್ಯ ಮತ್ತು ನರ್ತನಗಳ ಶಬ್ಧವು ಆ ದಿನ ಸಂಜೆ ಹೊಲದಿಂದ ಮನೆಗೆ ಬರುತ್ತಿದ್ದ ಅಣ್ಣನನ್ನು ಅಚ್ಚರಿಗೊಳಿಸಿತು (ವ. 25-26).

16. ಅಣ್ಣನು ತನ್ನ ಕೋಪವನ್ನು ಈ ರೀತಿಯಾಗಿ ತೋರ್ಪಡಿಸಿಕೊಳ್ಳುತ್ತಾನೆ (ವ. 28-30):

ಅ. ಆತನು ಭೋಜನ ಮತ್ತು ಸಂಭ್ರಮದಲ್ಲಿ ಪಾಲ್ಗೊಳ್ಳಲು ನಿರಾಕರಿಸಿದನು

ಆ. ತನ್ನನ್ನು ನಿರ್ಲಕ್ಷಿಸಲಾಗಿದೆಯೆಂದು ತಂದೆಗೆ ದೂರಿದನು

ಇ. ಪಾಪಮಯ ಜೀವಿತದಿಂದ ತಂದೆಯ ಆಸ್ತಿಯನ್ನೆಲ್ಲಾ ಹಾಳು ಮಾಡಿದ್ದಕ್ಕಾಗಿ ತನ್ನ ತಮ್ಮನನ್ನು ದೂಷಿಸುತ್ತಾನೆ.

ಈ. ತನ್ನ ಕಿರೀ ಮಗನ ಹಿಂತಿರುಗುವಿಕೆಗಾಗಿ ಸಂಭ್ರಮಪಡುತ್ತಿರುವ ತಂದೆಯನ್ನು ಸಹ ಆತನು ಟೀಕಿಸುತ್ತಾನೆ.

17. ಆ ಸಂಭ್ರಮಕ್ಕೆ ತಂದೆಯು ಕೊಡುವ ಕಾರಣ (ವ. 32): ಕಿರೀ ಸಹೋದರ ಸತ್ತುಹೋಗಿದ್ದನು ಆದರೆ ಈಗ ಮರಳಿ ಬಂದಿದ್ದಾನೆ. ಕಳೆದುಹೋಗಿದ್ದವನು ಸಿಕ್ಕಿದನು.

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ಕಳೆದು ಹೋದ ಕುರಿಯ ಸಾಮ್ಯ (ವ. 3-7):

ಅ. ಕಳೆದು ಹೋದ ಕುರಿಯ ಸಾಮ್ಯವನ್ನು ಕೆಟ್ಟ ಜನರನ್ನ ಸೂಚನೆಯಾಗಿ ಅರ್ಥೈಸಿಕೊಳ್ಳಬೇಕಿದೆ (ಸುಂಕದವರು ಮತ್ತು ಪಾಪಿಗಳು).

ಆ. ತೊಂಬತ್ತೊಂಬತ್ತು ಕುರಿಗಳನ್ನ ಒಳ್ಳೆಯ ಜನರ ಸೂಚನೆಯಾಗಿ ಅರ್ಥೈಸಿಕೊಳ್ಳಬೇಕಿದೆ (ಫರಿಸಾಯರು ಮತ್ತು ಶಾಸ್ತ್ರಿಗಳು).

ಇ. ಯೇಸುವಿನ ಉಪದೇಶಕ್ಕೆ ಕಿವಿಗೊಡುವವರು ಕುರಿಗಳನ್ನು ಇಸ್ರಾಯೇಲ್ ಜನರೊಂದಿಗೆ ಸಂಬಂಧ ಕಲ್ಪಿಸಿರಬಹುದು (ದೇವರ ಸ್ವಕೀಯ ಜನರು). ಇದು ಹಳೇ ಒಡಂಬಡಿಕೆಯ ಒಂದು ಸಾಮಾನ್ಯ ರೂಪಾಲಂಕಾರವಾಗಿದೆ. ಹಳೇ ಒಡಂಬಡಿಕೆಯಲ್ಲಿ "ಕುರುಬ" ಎಂಬ ಪದವನ್ನು ರಾಜರು ಮತ್ತು ಇತರ ನಾಯಕರ ಬಗ್ಗೆ ಬಳಸಲಾಗಿದೆ. ಖಂಡಿತವಾಗಿ ದೇವರು ಇಸ್ರಾಯೇಲರ ಪ್ರಧಾನ ಕುರುಬನಾಗಿದ್ದನು (ಯೆರೆಮೀಯ 31:10). ಅಲ್ಲದೆ ಕೇಳುಗರು ದಾವೀದನು ಕರ್ತನನ್ನು "ತನ್ನ ಕುರುಬನು" ಎಂದು ಕರೆಯುವ ಕೀರ್ತನೆ 23 ನ್ನು ಸಹ ಜ್ಞಾಪಿಸಿಕೊಂಡಿರಬಹುದು.

ಈ. ಕಳೆದು ಹೋದ ಒಂದು ಕುರಿಯು ಒಬ್ಬ ಪಾಪಿಗೆ ಸಮರ್ಪಕವಾದ ರೂಪಾಲಂಕಾರವಾಗಿದೆ: ಒಂದು ವೇಳೆ ಕುರಿಯು ದೇವಜನರನ್ನು ಸೂಚಿಸಿದರೆ, ಕಳೆದು ಹೋದ ಕುರಿಯು ಒಡಂಬಡಿಕೆಯ ನಿಯಮಗಳಿಗೆ ಅವಿಧೇಯರಾದ ಇಸ್ರಾಯೇಲರನ್ನು ಸೂಚಿಸಬೇಕಾಗುತ್ತದೆ. ಅವರು ಯೆಹೂದಿ ಸಮುದಾಯದ ಪಾಪಿಗಳಾಗಿದ್ದರು.

ಉ. "ದೇವರ ಕಡೆಗೆ ತಿರುಗಿಕೊಳ್ಳುವುದಕ್ಕೆ ಅವಶ್ಯವಿಲ್ಲದ ನೀತಿವಂತರು" ಎಂಬ ಯೇಸುವಿನ ಹೇಳಿಕೆಗೆ ವ್ಯಂಗ್ಯವಾದುದೆಂಬುದಾಗಿ ನಾವು ತಿಳಿದುಕೊಳ್ಳಬಹುದು. ಫರಿಸಾಯರು ಮತ್ತು ಶಾಸ್ತ್ರಿಗಳು ತಾವು ನೀತಿವಂತರು ಮತ್ತು ತಮಗೆ ಪಶ್ಚಾತ್ತಾಪದ ಅವಶ್ಯಕತೆ ಇಲ್ಲ ಎಂಬುದಾಗಿ ಪರಿಗಣಿಸಿದ್ದರು. ಆದರೆ ಈ ಸಾಮ್ಯದಲ್ಲಿ ಯೇಸು ಸ್ವನೀತಿಯ ಯೆಹೂದಿ ನಾಯಕರಿಗಿಂತ ಪಶ್ಚಾತ್ತಾಪಪಟ್ಟ ಪಾಪಿಯು ಪರಲೋಕಕ್ಕೆ ಹೆಚ್ಚು ಸಂತೋಷವನ್ನು ತರುವವನಾಗಿದ್ದಾನೆಂದು ಹೇಳುತ್ತಾನೆ.

2. –

3. ಕಳೆದು ಹೋದ ಮಗನ ಸಾಮ್ಯ (ವ. 1-3, 11-32):

ಅ. ಎರಡು ರಿತಿಯಲ್ಲಿ ಈ ಸಾಮ್ಯದ ರಚನೆಯು ಈ ಹಿಂದಿನ ಎರಡು ಸಾಮ್ಯಗಳಿಗಿಂತ ವಿಭಿನ್ನವಾಗಿದೆ:

- ಇದರಲ್ಲಿ ಎರಡು ಭಾಗಗಳಿವೆ: ಕಿರೀ ಮಗನ ಕುರಿತಾದ ಭಾಗ (ವ. 12-34), ಇದು "ಕಳೆದು ಹೋಗಿ ಸಿಕ್ಕಿದ" ಒಂದು ಕಥೆ ಮತ್ತು ಹಿರೀ ಮಗನ ಪ್ರತಿಕ್ರಿಯೆಯ ಕುರಿತ ಭಾಗ (ವ. 13-31), ಇದು ಹೊಟ್ಟೇಕಿಚ್ಚು ಮತ್ತು ಸ್ವನೀತಿಯ ಕುರಿತ ಒಂದು ಕಥೆಯಾಗಿದೆ. ಇಡೀ ಸಾಮ್ಯವು ತಂದೆಯ ಪ್ರೀತಿ, ಉಧಾರತೆ, ಕರುಣೆ ಮತ್ತು ಕ್ಷಮಾಪಣೆಯಿಂದ ಹೆಣೆಯಲ್ಪಟ್ಟಿದೆ. ಮೊದಲ "ಕಳೆದು ಹೋಗಿ ಸಿಕ್ಕಿದ" ಸಾಮ್ಯವು ಒಂದು ಭಾಗವನ್ನು ಮಾತ್ರ ಒಳಗೊಂಡಿದೆ.
- ಇದು ಈ ಹಿಂದಿನ ಎರಡು ಸಾಮ್ಯಗಳಿಗಿಂತ ಹೆಚ್ಚು ತಿಂಗಳನ್ನು ಸೂಚಿಸುವಂತೆ ತೋರುತ್ತದೆ: ಖಂಡಿತವಾಗಿ ತಂದೆಯು ದೇವರನ್ನು ಸೂಚಿಸುತ್ತಾನೆ. ಕಿರೀ ಮಗನು ಪಾಪಿಗಳನ್ನು ಸೂಚಿಸುತ್ತಾನೆ. ಅಪ್ಪಣೆಗಳನ್ನು ಪಾಲಿಸುವ ಹಿರೀ ಮಗನು ಒಡಂಬಡಿಕೆಯನ್ನು ಪಾಲಿಸುವ ಒಳ್ಳೆಯ ಜನರಿಗೆ ಸೂಚನೆಯಾಗಿದ್ದಾನೆ. ಮನೆಗೆ ಬಂದಾಗ ಆಚರಿಸುವ ಭೋಜನವು ಕೇಳುಗರಿಗೆ ಪರಲೋಕದಲ್ಲಿ ಮುಂದೆ ಆಗಲಿರುವ ಮಹಾಭೋಜವನ್ನು ಸೂಚಿಸುತ್ತದೆ.

ಆ. ಈ ಹಿಂದಿನ ಎರಡು ಸಾಮ್ಯಗಳಿಗೆ ಹೋಲಿಸಿದರೆ ಈ ಸಾಮ್ಯದಲ್ಲಿ ಮೊದಲು ಹೆಜ್ಜೆ ತೆಗೆದುಕೊಳ್ಳುವಿಕೆಯು ವಿಭಿನ್ನವಾಗಿದೆ. ಕಳೆದು ಹೋದ ಕುರಿ ಮತ್ತು ಕಳೆದು ಹೋದ ನಾಣ್ಯವು ತಾವು ಸಿಕ್ಕುವುದಕ್ಕಾಗಿ ಯಾವುದೇ ಹೆಜ್ಜೆಯನ್ನು ತೆಗೆದುಕೊಳ್ಳುವುದಿಲ್ಲ. ಕುರಿ ಯಜಮಾನ ಮತ್ತು ಹೆಂಗಸು ಮೊದಲ ಹೆಜ್ಜೆಯನ್ನು ತೆಗೆದುಕೊಳಳುತ್ತಾರೆ. ಆದರೆ ಕಳೆದು ಹೋದ ಮಗನು ತನ್ನ ಸ್ಥಿತಿಯನ್ನು ಗ್ರಹಿಸಿಕೊಳ್ಳುತ್ತಾನೆ ಮತ್ತು ತನ್ನ ಘಟಿಂಗತನ ಮತ್ತು ಪಾಪಗನ್ನು ತಿಳಿದುಕೊಳ್ಳುತ್ತಾನೆ. ಅನಂತರ ಆತನು ತನ್ನ ತಂದೆಯ ಮನೆಗೆ ಹಿಂತಿರುಗಲು ನಿರ್ಧರಿಸುತ್ತಾನೆ. ತಂದೆಯು ಆತನಿಗಾಗಿ ತಾಳ್ಮೆಯಿಂದ ಮತ್ತು ಪ್ರೀತಿಯಿಂದ ಕಾಯುತ್ತಿರುತ್ತಾನೆ, ಆದರೆ ಆತನನ್ನು ಹುಡುಕುವುದಕ್ಕೆ ತಾನು ಯಾವುದೇ ಹೆಜ್ಜೆ ತೆಗೆದುಕೊಳ್ಳುವುದಿಲ್ಲ. ಒಬ್ಬ ಪಾಪಿಯು ವಿಭಿನ್ನವಾದ ರೀತಿಯಲ್ಲಿ ಕಳೆದುಹೋಗಿರಬಹುದು: ಬಹುಶಃ ಆತನು ತನ್ನ ಪಾಪಮಯ ಸ್ವಭಾವವನ್ನು ಹಿಂಬಾಲಿಸಿರಬಹುದು (ಒಂದು ಕುರಿಯು ತನ್ನ ಮಂದೆಯನ್ನು ಬಿಟ್ಟು ಹೋದಂತೆ). ಬಹುಶಃ ತನ್ನ ಜೀವನದ ಪರಿಸ್ಥಿತಿಗೆ ಬಲಿಪಶುವಾಗಿರಬಹುದು (ಹೇಗೋ ಒಂದು ಪಾವಲಿಯು ಕೈ ತಪ್ಪಿ ಹೋದಂತೆ). ಬಹುಶಃ ಆತನು ಪಾಪಮಯ ಜೀವನವನ್ನು ಹಿಂಬಾಲಿಸಿರಬಹುದು (ಕಿರೀ ಮಗನು ಮಾಡಿದಂತೆ). ನಮ್ಮ ರಕ್ಷಕನು ಸಹ ವಿಧವಿಧವಾದ ರೀತಿಯಲ್ಲಿ ಕಾರ್ಯಮಾಡುತ್ತಾನೆ: ಯೇಸುವು ಹುಡುಕುವುದಕ್ಕಾಗಿ, ಕಂಡುಕೊಳ್ಳುವುದಕ್ಕಾಗಿ ಮತ್ತು ಕಳೆದು ಹೋಗಿರುವುದನ್ನು ರಕ್ಷಿಸಲು ಬಂದನು (ಕುರಿಯ ಯಜಮಾನನಂತೆ). ಪಾಪಿಯು ತನ್ನ ಪ್ರಜ್ಞೆಗೆ ಮರಳಿ ದೇವರ ಪ್ರೀತಿ, ಕರೂಣೆ ಮತ್ತು ಕ್ಷಮಾಪಣೆಯನ್ನು ಅಂಗೀಕರಿಸುವಂತೆ ದೇವರು ತಾಳ್ಮೆಯಿಂದ ಕಾಯುತ್ತಾನೆ (ತಂದೆಯು ಕಳೆದು ಹೋದ ತನ್ನ ಮಗನಿಗಾಗಿ ಕಾದಂತೆ).

ಇ. ಕೆಟ್ಟಜನರು ಈ ಸಾಮ್ಯದಲ್ಲಿ (ಸುಂಕದವರು ಮತ್ತು ಪಾಪಿಗಳು) ಕಿರೀ ಮಗನಿಗೆ ಹೋಲಿಕೆಯಾಗುತ್ತಾರೆ. ಆತನು ತನ್ನ ತಂದೆಯಿಂದ ದೂರವಾಗಿ ಪಾಪಮಯ ಜೀವನವನ್ನು ನಡೆಸುವವನು ಹಳೇ ಒಡಂಬಡಿಕೆಯ ಕರಾರನ್ನು ತಿರಸ್ಕರಿಸಿದ ಜನರಿಗೆ ಒಂದು ಒಳ್ಳೆಯ ರೂಪಾಲಂಕಾರವಾಗಿದ್ದಾರೆ.

ಈ. ಒಳ್ಳೆಯ ಜನರು (ಫರಿಸಾಯರು ಮತ್ತು ಶಾಸ್ತ್ರಿಗಳು) ಈ ಸಾಮ್ಯದಲ್ಲಿ ಹಿರೀ ಮಗನಿಗೆ ಹೋಲುತ್ತಾರೆ. ತನ್ನ ತಂದೆಯೊಂದಿಗೆ ಮನೆಯಲ್ಲಿದ್ದವನು ಒಡಂಬಡಿಕೆಗೆ ನಂಬಿಗಸ್ತರಾಗಿರುವ ಜನರಿಗೆ ಒಂದು ಒಳ್ಳೆಯ ರೂಪಾಲಂಕಾರವಾಗಿದ್ದಾನೆ.

ಉ. ಯೇಸುವಿನ ಉಪದೇಶವನ್ನು ಕೇಳಿದವರಿಗಾಗಿ ತಂದೆಯು ಎಲ್ಲಾ ಸೃಷ್ಠಿಯ ತಂದೆ ಮತ್ತು ಇಸ್ರಾಯೇಲರ ತಂದೆಯಾಗಿರುವ ದೇವರೊಂದಿಗಿನ ಸಂಬಂಧ ಕಲ್ಪಿಸಬಹುದು (ಹೋಲಿಸಿ ಧರ್ಮೋ. 32:6, ಯೆಶಾಯ 63:16, 64:8, ಮಲಾಕಿ 2:10).

4. –

5. ವಚನ 1-2 ಲೂಕನ “ಕಳೆದು ಹೋದದ್ದು ಮತ್ತು ಪಡೆದದ್ದು”ರಸಂದೇಶವನ್ನು ಉದಾಹರಿಸುತ್ತದೆ: ಯೇಸುವಿನ ಬಳಿಗೆ ಬಂದ ಪಾಪಿಗಳು ಅಲ್ಲಿ ರಕ್ಷಣೆಯನ್ನು ಕಂಡುಕೊಳ್ಳುವರು ಮತ್ತು ಆತನಲ್ಲಿ ಸಿಕ್ಕವರಾಗುತ್ತಾರೆ. ಯೇಸುವನ್ನು ತಿರಸ್ಕರಿಸಿದ ಒಳ್ಳೆ ಜನರು ಅವರು ಕಳೆದುಹೋಗುತ್ತಾರೆ ಮತ್ತು ಸಿಗುವುದಿಲ್ಲ.



## 21. ಉತ್ತರಗಳು: ಕಳ್ಳನಾದ ಮನೆವಾರ್ತೆಯವನು, ಲೂಕ 16:1-9

### ಪ್ರಶ್ನೆಗಳಿಗೆ ಉತ್ತರಗಳು

1. ಈ ಸಾಮ್ಯದಿಂದ ಯೇಸು ತನ್ನ ಹಿಂಬಾಲಕರು, ಶಿಷ್ಯರನ್ನು ಸಂಭೋಧಿಸುತ್ತಾನೆ (ವ. 1).
2. ಮನೆವಾರ್ತೆಯವನು ತನ್ನ ಕೆಲಸದ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂಬ ದೂರಿಗೆ ಗುರಿಯಾದನು. ಅವನು ತನ್ನ ಶ್ರೀಮಂತ ಯಜಮಾನನ ಆಸ್ತಿಯನ್ನು ಹಾಳುಮಾಡುತ್ತಿದ್ದನು (ವ. 1).
3. ಐಶ್ವರ್ಯವಂತನು ಮನೆವಾರ್ತೆಯವನಿಗೆ ತನ್ನ ಮನೆಯವಾರ್ತೆಯ ಲೆಕ್ಕವನ್ನು ಒಪ್ಪಿಸಲು ಹೇಳುತ್ತಾನೆ (ವ. 2).
4. ಐಶ್ವರ್ಯವಂತನು ಮನೆವಾರ್ತೆಯವನನ್ನು ತೆಗೆದುಹಾಕಬೇಕೆಂದಿದ್ದನು (ವ. 3).
5. ಮನೆವಾರ್ತೆಯವನು ಸಾಲಗಾರರೊಂದಿಗೆ ಒಪ್ಪಂದವನ್ನು ಮಾಡಿಕೊಳ್ಳುತ್ತಾನೆ. ಆತನು ಅವರ ಸಾಲಪತ್ರದಲ್ಲಿ ಅವರ ಸಾಲವು ಕಡಿಮೆಯಾಗುವಂತೆ ಬದಲಾವಣೆ ಮಾಡಿಸಿದನು. ಆತನು ಅವರು ತನಗೆ ಕೃತಜ್ಞತರಾಗಿ ತನ್ನ ಭವಿಷ್ಯಕ್ಕಾಗಿ ತನ್ನನ್ನು ಬೆಂಬಲಿಸುವರೆಂಬುದಾಗಿ ಯೋಚಿಸಿದನು (ವ. 4-7).
6. ತನ್ನ ಮನೆವಾರ್ತೆಯವನ ಕಾರ್ಯವನ್ನು ಐಶ್ವರ್ಯವಂತನು ತುಂಬಾ ಸಕಾರಾತ್ಮಕವಾಗಿ ಮೌಲ್ಯಮಾಪನ ಮಾಡುತ್ತಾನೆ. ಆತನು ಅವನನ್ನು ಜಾಣತನ ಮಾಡಿದನೆಂದು ಹೊಗಳುತ್ತಾನೆ (ವ. 8).
7. ವಚನ 8 ರಲ್ಲಿ ಯೇಸು ಎರಡು ಗುಂಪಿನ ಜನರನ್ನು ತದ್ವಿರುದ್ಧವಾಗಿ ತೋರಿಸುತ್ತಾನೆ: ಲೌಕಿಕರು ಮತ್ತು ಬೆಳಕಿನ ರಾಜ್ಯದವರು .
8. ಯೇಸು ತನ್ನ ಶಿಷ್ಯರಿಗೆ ಅನ್ಯಾಯದ ಧನದ ಮೂಲಕವಾಗಿ ನಿಮಗೆ ಸ್ನೇಹಿತರನ್ನು ಮಾಡಿಕೊಳ್ಳಿರಿ ಎಂದು ಹೇಳುತ್ತಾನೆ (ವ. 9). ಯೇಸು ಹೇಳುವುದು ನಾವು ಅನ್ಯಾಯದಿಂದ ಧನವನ್ನು ಗಳಿಸಬೇಕೆಂದರ್ಥವಲ್ಲ. ಆದರೆ ನಮ್ಮೆಲ್ಲ ಧನ ಅಥವಾ ಸಂಪತ್ತು ಈ ಅನ್ಯಾಯದ ಲೋಕದ ಭಾಗವಾಗಿದೆ (ವ. 9 ರ ಟಿಪ್ಪಣಿ). ಹೀಗೆ ಯೇಸು ತನ್ನ ಹಿಂಬಾಲಕರು ತಮ್ಮೆಲ್ಲಾ ಭೌತಿಕ ಸಂಪನ್ಮೂಲಗಳನ್ನು ದೈವಿಕವಾದ ರೀತಿಯಲ್ಲಿ ಅಂದರೆ ಈಗ ಮತ್ತು ನಿತ್ಯತ್ವಕ್ಕಾಗಿ ಆಶೀರ್ವಾದವನ್ನು ತರುವಂತ ರೀತಿಯಲ್ಲಿ ಉಪಯೋಗಿಸಬೇಕೆಂದು ಬಯಸುತ್ತಾನೆ.

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಕಳ್ಳನಾದ ಮನೆವಾರ್ತೆಯವನ ಸಾಮ್ಯವು ಶಿಷ್ಯರಿಗೆ ಯೇಸು ಕೊಡುವ ಸಂದೇಶವನ್ನು ಅರ್ಥೈಸಿಕೊಳ್ಳಲು ನಮಗೆ ಸಹಾಯಿಸುವ ತದ್ವಿರುದ್ಧತೆಗಳನ್ನು ಒಳಗೊಂಡಿದೆ:

   ಅ. ಪ್ರಸ್ತುತ ಕಾಲ (ಈ ಯುಗ) ಮತ್ತು ಭವಿಷ್ಯ (ಬರಲಿರುವ ಯುಗ): ಈ ಪ್ರಸ್ತುತ ಯುಗವು ಅನೀತಿಯಿಂದ ತುಂಬಿದೆ ಆದರೆ ಒಂದು ದಿವಸ ಅದು ಇಲ್ಲವಾಗುತ್ತದೆ. ಮುಂದಿನ ಯುಗದಲ್ಲಿ ನೀತಿ ಮತ್ತು ನ್ಯಾಯವು ಮಧ್ಯಾಹ್ನದ ಸೂರ್ಯನಂತೆ ಪ್ರಕಾಶಿಸುತ್ತದೆ. ಇದು ದೇವಜನರ ಭವಿಷ್ಯವಾಗಿದೆ.

   ಆ. ಈ ಲೋಕದಲ್ಲಿನ ಜೀವನ ಮತ್ತು ನಿತ್ಯತ್ವದಲ್ಲಿನ ಜೀವನ: ಈ ಪ್ರಸ್ತುತ ಕೆಟ್ಟದಾದ ಯುಗದಲ್ಲಿ ನಾವೇನು ಮಾಡುತ್ತೇವೋ ಅದು ನಿತ್ಯತ್ವದ ಮೇಲೆ ಪರಿಣಾಮವನ್ನು ಬೀರುತ್ತದೆ. ಈ ಪ್ರಸಕ್ತ ಲೋಕದಲ್ಲಿನ ನಮ್ಮ ಬುದ್ಧಿವಂತಿಕೆಯ ಕಾರ್ಯಗಳು ಮುಂದಿನ ನಿತ್ಯತ್ವದ ಲೋಕದಲ್ಲಿ ಆಶೀರ್ವಾದವನ್ನು ತರುತ್ತವೆ.

   ಇ. ಲೌಕಿಕರು ಮತ್ತು ಬೆಳಕಿನ ರಾಜ್ಯದವರು ದೇವಜನರು ತಮಗಿರುವ ಸ್ವತ್ತನ್ನು ದುಷ್ಟಜನರು ತಮ್ಮ ಸ್ವತ್ತನ್ನು ಜಾಣತನದಿಂದ ನಿರ್ವಹಿಸುವಂತೆ ನಿರ್ವಹಿಸಬೇಕಿದೆ.

   ಈ. ಜಾಣತನ ಮತ್ತು ಜಾಣತನವಿಲ್ಲದೆ ಇರುವುದು: ಈ ಲೋಕದ ಜನರು ತಮ್ಮ ಸ್ವತ್ತನ್ನು ದೇವಜನರಿಗಿಂತ ಜಾಣತನದಿಂದ ನಿರ್ವಹಿಸುತ್ತಾರೆ.

2. ಈ ಸಾಮ್ಯದಲ್ಲಿ ಯೇಸು ಹೋಲಿಕೆ ಮಾಡುವ ಅಂಶಗಳು (ವ. 8-9 ನ್ನು ನೋಡಿರಿ): ಈ ಪ್ರಸ್ತುತ ಯುಗದಲ್ಲಿ ಲೌಕಿಕರು ಮತ್ತು ಅನ್ಯಾಯಗಾರರು ತಮ್ಮ ಸ್ವತ್ತನ್ನು ದೇವ ಜನರಿಗಿಂತ (ಬೆಳಕಿನ ರಾಜ್ಯದವರು) ಜಾಣತನದಿಂದ ಉಪಯೋಗಿಸುತ್ತಾರೆ.

3. ಕಳ್ಳನಾದ ಮನೆವಾರ್ತೆಯವನ ಸಾಮ್ಯದ ಸಂದೇಶ: ದೇವರಿಗೆ ಭಯಭಕ್ತಿಯುಳ್ಳವರು (ಬೆಳಕಿನ ರಾಜ್ಯದವರು) ತಮ್ಮ ಸ್ವತ್ತನ್ನು ಬುದ್ಧಿ ಮತ್ತು ಜಾಣತನದಿಂದ ನಿರ್ವಹಿಸಬೇಕಿದೆ. ಅಂದರೆ ನಮಗಿರುವುದನ್ನೆಲ್ಲಾ ಅದು ನಿತ್ಯತ್ವಕ್ಕಾಗಿ ಪರಿಣಾಮ/ಫಲಕೊಡುವ ರೀತಿಯಲ್ಲಿ ಉಪಯೋಗಿಸಬೇಕು ಎಂದರ್ಥವಾಗಿದೆ. ಇಂದಿನ ಅನೀತಿಯ ಯುಗದಲ್ಲಿನ ಸ್ವತ್ತಿನ ಬಗ್ಗೆ ಹೇಗೆ ಜಾಣ್ಮೆಯಿಂದಿರಬೇಕು ಎಂಬುದಕ್ಕೆ ಎರಡು ಉದಾಹರಣೆಗಳು ಇಲ್ಲಿವೆ:

ಅ. ನಾವು ನಮ್ಮ ಸ್ವತ್ತನ್ನು (ಹಣ, ಆಸ್ತಿ, ವಾಹನ) ದೇವರ ಕಾರ್ಯಕ್ಕಾಗಿ ಬಳಸಬಹುದಾಗಿದೆ: ಹೊಸ ಸ್ಥಳಗಳಲ್ಲಿ ಹೊಸಬರಿಗೆ ಸುವಾರ್ತೆಯನ್ನು ಸಾರುವುದಕ್ಕಾಗಿ, ನಮ್ಮ ಸ್ಥಳೀಯ ಸಭೆಯ ಸೇವೆಗೆ ಸಹಾಯ ಮಾಡುವುದಕ್ಕೆ, ಹೊಸ ಸಭೆಗಳನ್ನು ಕಟ್ಟುವುದಕ್ಕೆ, ಸುವಾರ್ತಿಕರಿಗೆ ಸಹಾಯ ಮಾಡುವುದಕ್ಕೆ ಮಿಷನರಿಗಳನ್ನು ಕಳುಹಿಸುವುದಕ್ಕೆ ಉಪಯೋಗಿಸಬೇಕಿದೆ.

ಆ. ನಾವು ನಮ್ಮ ಸ್ವತ್ತನ್ನು ಬಡವರಿಗೆ ಮತ್ತು ಕೊರತೆಯಲ್ಲಿರುವವರಿಗೆ ಸಹಾಯ ಮಾಡುವುದಕ್ಕೆ ಉಪಯೋಗಿಸಬಹುದಾಗಿದೆ: ವಿಧವೆಯರು, ಅನಾಥರು, ಶೋಷಿತರು, ಹಿಂಸೆಗೊಳಗಾದವರು, ಅಸ್ವಸ್ಥರು ಮತ್ತು ನಿರುದ್ಯೋಗಿಗಳಿಗೆ.



## 22. ಉತ್ತರಗಳು: ಐಶ್ವರ್ಯವಂತನು ಮತ್ತು ಲಾಜರನು, ಲೂಕ 16:19-31

### ಪ್ರಶ್ನೆಗಳಿಗಳಿಗೆ ಉತ್ತರಗಳು

1. ಐಶ್ವರ್ಯವಂತನನ್ನು ಈ ರೀತಿಯಾಗಿ ವರ್ಣಿಸಲಾಗಿದೆ (ವ. 19):
   - ಆತನು ಶ್ರೀಮಂತನಾಗಿದ್ದಾನೆ
   - ಆತನು ಬೆಲೆಬಾಳುವ ವಸ್ತ್ರಗಳನ್ನು ಧರಿಸಿದ್ದಾನೆ
   - ಪ್ರತಿದಿನ ಆತನು ಒಳ್ಳೆಯ ಆಹಾರವನ್ನು ತಿನ್ನುತ್ತಾನೆ
2. ಲಾಜರನನ್ನು ಈ ರೀತಿಯಾಗಿ ವರ್ಣಿಸಲಾಗಿದೆ (ವ. 20-21):
   - ಆತನೊಬ್ಬ ಬಿಕ್ಷುಕ
   - ಆತನು ಐಶ್ವರ್ಯವಂತನ ಮನೆಯ ಬಾಗಿಲ ಬಳಿ ಬಿಕ್ಷೆಬೇಡುತ್ತಿದ್ದನು
   - ಆತನು ಯಾವಾಗಲೂ ಹಸಿದಿರುತ್ತಿದ್ದನು
   - ಆತನ ಮೈಯೆಲ್ಲಾ ಹುಣ್ಣುಗಳು ತುಂಬಿದ್ದವು
   - ಆತನು ತನ್ನಲ್ಲಿದ್ದ ಬಲ ಮತ್ತು ಘನತೆಯನ್ನೆಲ್ಲಾ ಕಳಕೊಂಡಿದ್ದನು. ನಾಯಿಗಳು ಸಹ ಬಂದು ಆತನ ಹುಣ್ಣುಗಳನ್ನು ನೆಕ್ಕುತ್ತಿದ್ದವು
3. ಇಬ್ಬರು ಸಹ ಸಾಯುತ್ತಾರೆ ಆದರೆ ಅವರಿಬ್ಬರು ವಿಭಿನ್ನ ಸ್ಥಳಗಳಿಗೆ ಹೋಗುತ್ತಾರೆ (ವ. 22).
4. ಐಶ್ವರ್ಯವಂತನು ಅಬ್ರಹಾಮನಿಗೆ ತನ್ನ ಭಯಂಕರ ದಾಹವನ್ನು ತೀರಿಸಲು ಲಾಜರನನ್ನು ತನ್ನ ಬಳಿಗೆ ಕಳುಹಿಸಿ ತನ್ನ ಮೇಲೆ ದಯೆವಿಡಬೇಕೆಂದು ಕೇಳಿಕೊಳ್ಳುತ್ತಾನೆ (ವ. 24).
5. ಐಶ್ವರ್ಯವಂತನ ಮನವಿಯನ್ನು ಅನುಗ್ರಹಿಸಲು ತನಗೆ ಅಸಾಧ್ಯವೆಂಬುದಕ್ಕೆ ಅಬ್ರಹಾಮನು ಎರಡು ಕಾರಣಗಳನ್ನು ಕೊಡುತ್ತಾನೆ (ವ. 25-26):
   ಅ. ಈ ಲೋಕದಲ್ಲಿನ ಅವರ ಜೀವಿತವು ಅವರ ಪ್ರಸ್ತುತ ಸನ್ನಿವೇಶಕ್ಕೆ ಕಾರಣವಾಗಿದೆ. ಈಗ ಬದಲಿಸಲು ಕಾಲಮೀರಿಹೋಗಿದೆ.
   ಆ. ಈಗ ಲಾಜರ ಮತ್ತು ಐಶ್ವರ್ಯವಂತನು ಸೇರಿದ ಸ್ಥಳಗಳ ನಡುವಿನ ಡೊಂಗರವನ್ನು ದಾಟಲು ಸಾಧ್ಯವಿಲ್ಲ.
6. ತನ್ನ ಐದು ಮಂದಿ ಅಣ್ಣತಮ್ಮಂದಿರು ಈ ಯಾತನೆಯ ಸ್ಥಳಕ್ಕೆ ಬರಬಾರದೆಂಬುದೇ ಐಶ್ವರ್ಯವಂತನ ಕಳಕಳಿಯಾಗಿದೆ (ವ. 27-28).
7. ಐಶ್ವರ್ಯವಂತನ ಕಳಕಳಿಗೆ ಅಬ್ರಹಾಮನು ಅವರ ಬಳಿಯಲ್ಲಿ ಹಳೇ ಒಡಂಬಡಿಕೆಯ ಶಾಸ್ತ್ರಗಳಿವೆ ಎಂಬ ವಾಸ್ತವಾಂಶವನ್ನು ನೆನಪಿಸುವುದರಿಂದ ಪ್ರತಿಕ್ರಯಿಸುತ್ತಾನೆ. ಅವು ಅವರಿಗೆ ಸಾಕಷ್ಟು ಮಾರ್ಗದರ್ಶನ ಕೊಡಬಲ್ಲವೆಂಬುದು ಆತನ ಅನಿಸಿಕೆ (ವ. 29).
8. ಐಶ್ವರ್ಯವಂತನು ಅಬ್ರಹಾಮನಿಗೆ ಹಳೇ ಒಡಂಬಡಿಕೆಯ ಸಾಕ್ಷಿಗಳು ಸಾಕಾಗುವುದಿಲ್ಲ. ತನ್ನ ಸಹೋದರರಿಗೆ ಸತ್ತವರಲ್ಲೊಬ್ಬನು ಅವರ ಕಡೆಗೆ ಹೋದರೆ ಅವರು ದೇವರ ಕಡೆಗೆ ತಿರುಗಿಕೊಳ್ಳುವರೆಂದು ವಾದಿಸುತ್ತಾನೆ (ವ. 30).
9. ಅಬ್ರಹಾಮನು ಐಶ್ವರ್ಯವಂತನಿಗೆ ಒಂದು ಕೊನೆಯ ಮಾತನ್ನು ಹೇಳುತ್ತಾನೆ: ಹಳೇ ಒಡಂಬಡಿಕೆಯ ಸಾಕ್ಷಿಯನ್ನು ಕೇಳಲು ಒಪ್ಪದವರು ಸತ್ತುಹೋಗಿದ್ದವನೊಬ್ಬನು ಜೀವಿತನಾಗಿ ಎದ್ದರೂ ಆ ಸಾಕ್ಷಿಯನ್ನು ಅವರು ಒಪ್ಪುವುದಿಲ್ಲ (ವ. 31).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಐಶ್ವರ್ಯವಂತನು ಮತ್ತು ಬಡಲಾಜರನ ಸಾಮ್ಯದಲ್ಲಿನ ಮುಖ್ಯ ವ್ಯಕ್ತಿ ಐಶ್ವರ್ಯವಂತನಾಗಿದ್ದಾನೆ. ಫರಿಸಾಯರು ಈ ಲೋಕದಲ್ಲಿ ಜೀವಿಸಿದ ಬಗೆಯು ಅವರ ನಿತ್ಯತ್ವದ ಭವಿಷ್ಯದ ಮೇಲೆ ಗಂಭೀರವಾದ ಪರಿಣಾಮವನ್ನು ಬೀರುತ್ತದೆಂಬುದನ್ನು ಸೂಚಿಸಲು ಯೇಸು ಈ ಸಾಮ್ಯವನ್ನುಪಯೋಗಿಸಿದನು. ಈ ಸಾಮ್ಯದಲ್ಲಿ ಐಶ್ವರ್ಯವಂತನು ಫರಿಸಾಯರನ್ನು ಸೂಚಿಸುತ್ತಾನೆ.

ಲಾಜರನು ಈ ಸಾಮ್ಯದಲ್ಲಿ ನಿಜವಾದ ಪಾತ್ರವಹಿಸುವುದಿಲ್ಲ. ಐಶ್ವರ್ಯವಂತನಿಗೆ ತದ್ವಿರುದ್ಧವಾಗಿಸಲು, ಅಲ್ಲದೆ ಫರಿಸಾಯರ ನಂಬಿಕೆ ಮತ್ತು ಆಚಾರಗಳ ದುಃಖಕರ ಪರಿಣಾಮಗಳ ಉದಾಹರಣೆಗೆ ಆತನು ಬೇಕಾಗಿದ್ದಾನಷ್ಟೆ.

2. ಈ ಸಾಮ್ಯದ ಮೂಲಕ ಯೇಸು ಫರಿಸಾಯರಿಗೆ ಹೇಳುವ ಸಂದೇಶ: ಇಂದು ನೀವು ಬದುಕುವ ಬಗೆಯು ನಿಮ್ಮ ನಿತ್ಯತ್ವದ ಭವಿಷ್ಯವು ಹೇಗಿರುತ್ತದೆಂಬುದನ್ನು ನಿರ್ಧರಿಸುತ್ತದೆ. ಆದರೆ ಸಂದೇಶವು ಕೇವಲ ನಮ್ಮ ಸಂಪತ್ತನ್ನು ಜ್ಞಾನದಿಂದ ನಿರ್ವಹಿಸುವ ಕುರಿತಾದುದಷ್ಟೇ ಅಲ್ಲ, ಸಂದೇಶವು ಉಸ್ತುವಾರಿಯ ಕುರಿತಾಗಿದೆ. ಪ್ರತಿಯೊಂದನ್ನು ನಾವು ಜ್ಞಾನದಿಂದ ನೋಡಿಕೊಳ್ಳಬೇಕಿದೆ: ನಮ್ಮ ಸಮಯ, ನಮ್ಮ ತಲಾಂತುಗಳು, ನಮ್ಮ ಅವಕಾಶಗಳು ಮತ್ತು ದೇವರು ನಮ್ಮ ನಮ್ಮ ವಶಕ್ಕೆ ಕೊಟ್ಟಿರುವ ಪ್ರತಿಯೊಂದು ಸಹ.

3. ಐಶ್ವರ್ಯವಂತ ಮತ್ತು ಲಾಜರನ ಸಾಮ್ಯದಲ್ಲಿ ಅನನುಭವಿ ಸತ್ಯವೇದ ಓದುಗರಿಗಾಗಿರುವ ಎರಡು ಅಪಾಯಗಳು:

   ಅ. ಮೊದಲ ಅಪಾಯ: ಇಬ್ಬರು ಯೆಹೂದಿ ಜನರಿಗೆ ನಿಜವಾಗಲೂ ಆಗಿರುವ ಸಂಗತಿಯೆಂಬುದಾಗಿ ಓದುವುದು. ಈ ರೀತಿ ಓದುವುದ ದುರ್ಬೋಧನೆಗಳನ್ನು ಸೃಷ್ಟಿಸುಂತೆ ಮಾಡುತ್ತದೆ, ಉದಾಹರಣೆಗೆ ಸತ್ತವರು ವಾಸಿಸುವ ಸ್ಥಳದ ಬಗ್ಗೆ (ಪಾತಾಳ ಮತ್ತು ಅಬ್ರಹಾಮನ ಎದೆ), ಬೇರ್ಪಡಿಸುವಿಕೆಯ ಲಕ್ಷಣ, ಎರಡು ಕಡೆಯ ಸಂಪರ್ಕದ ಸಾಧ್ಯತೆಯ ಬಗ್ಗೆ, ಬದುಕಿರುವವರಿಗೆ ಸಾಕ್ಷಿಸಲು ಸತ್ತವರೊಳಗಿಂದ ಜನರನ್ನು ಕಳುಸುವುದರ ಬಗ್ಗೆ, ಮರಣದ ನಂತರದ ಅಬ್ರಹಾಮನ ಪಾತ್ರ.

   ಆ. ಎರಡನೆಯ ಅಪಾಯ: ಇದರ ಕೆಲ ವಿವರವು ಆತ್ಮೀಕ/ರಹಸ್ಯವಾದ ಅರ್ಥವನ್ನು ಒಳಗೊಂಡಿದೆಯೆಂದು ಸಾಂಕೇತಿಕವಾಗಿ ಇದನ್ನು ಓದುವುದು. ಈ ರೀತಿಯ ಓದು ಎಲ್ಲ ರೀತಿಯ ಅಸಂಬದ್ಧತೆಗಳಿಗೆ ನಡೆಸುವುದು.

4. –

## 23. ಉತ್ತರಗಳು: ದೇವರ ರಾಜ್ಯದ ಬರೋಣ, ಲೂಕ 17:20-27

### ಪ್ರಶ್ನೆಗಳಿಗೆ ಉತ್ತರಗಳು

1. ದೇವರ ರಾಜ್ಯದ ಬರೋಣದ ಕುರಿತಾದ ತನ್ನ ಉಪದೇಶದಲ್ಲಿ ಯೇಸು ಎರಡು ಗುಂಪಿನ ಜನರನ್ನು ಮೊದಲು ಫರಿಸಾಯರನ್ನು (ವ. 20-21), ಅನಂತರ ತನ್ನ ಶಿಷ್ಯರನ್ನು (ವ. 22-37) ಸಂಬೋಧಿಸುತ್ತಾನೆ.
2. ಫರಿಸಾಯರು ಯೇಸುವಿಗೆ ದೇವರ ರಾಜ್ಯವು ಯಾವಾಗ ಬರುವುದೆಂದು ಪ್ರಶ್ನಿಸುತ್ತಾರೆ (ವ. 20).
3. ದೇವರ ರಾಜ್ಯದ ಕುರಿತಾಗಿ ತನ್ನ ಕೇಳುಗರಿಗೆ ಯೇಸು – ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದಲ್ಲ, ಅದು ನಿಮ್ಮೊಳಗೇ ಇದೆ ಎನ್ನುತ್ತಾನೆ (ವ. 20-21). ಅದು ಒಂದು ಆತ್ಮೀಕವಾಧ ರಾಜ್ಯವಾಗಿದ್ದು ಜನರ ಜೀವಿತಗಳಲ್ಲಿನ ದೇವರ ಆಳ್ವಿಕೆಯಾಗಿದೆ. ಈ ವಚನದ ಪರ್ಯಾಯ ಅರ್ಥಕ್ಕೆ ವಚನ 21 ರ ಟಿಪ್ಪಣಿಯನ್ನು ನೋಡಿರಿ.
4. ಯೇಸುವಿನ ಶಿಷ್ಯರು ಆತನ ಎರಡನೇ ಬರೋಣಕ್ಕಾಗಿ ಆತುರದಿಂದ ನಿರೀಕ್ಷಿಸುತ್ತಿರುವ ಸಮಯದಲ್ಲಿ ಜನರು ದೇವರ ರಾಜ್ಯವು ಈ ರೀತಿ ಬಂದಿದೆ, ಅಲ್ಲಿದೆ ಎಂದು ಹೇಳುವರು (ವ. 23). ಆದರೆ ಯೇಸು ತನ್ನ ಶಿಷ್ಯರಿಗೆ ಆ ರೀತಿಯ ಪ್ರವಾದಿಗಳ ಬಗ್ಗೆ ಎಚ್ಚರವಾಗಿರಿ ಮತ್ತು ಅವರ ಮಾತಿಗೆ ಕಿವಿಕೊಡಬೇಡಿರಿ ಮತ್ತು ಅವರನ್ನು ಹಿಂಬಾಲಿಸಬೇಡಿರಿ ಎಂದು ಹೇಳುತ್ತಾನೆ.
5. ತನ್ನ ಎರಡನೇ ಬರೋಣವನ್ನು ವರ್ಣಿಸಲು ಯೇಸು ಉಪಮೆಯವನ್ನು ಉಪಯೋಗಿಸುತ್ತಾನೆ: ಅದು ಹೊಳೆಯುವ ಮಿಂಚಿನಂತಿರುವುದು (ವ. 24). ಹೋಲಿಕೆಯ ಅಂಶವು ಬಹುಶಃ ಫಕ್ಕನೆ ಮತ್ತು ಆಶ್ಚರ್ಯಕರ ಆಗಮನಕ್ಕಿಂತ ಎಲ್ಲರಿಗೂ ಕಾಣಿಸುವಂತಿರುವುದಾಗಿದೆ.
6. ತನ್ನ ಬರೋಣಕ್ಕಿಂತ ಮೊದಲು ತಾನು ಬಹುಕಷ್ಟಗಳನ್ನು ಅನುಭವಿಸಬೇಕಾಗುವುದು ಎಂದು ಯೇಸು ಹೇಳುತ್ತಾನೆ (ವ. 25).
7. ತನ್ನ ಎರಡನೇ ಬರೋಣದ ಸಮಯದಲ್ಲಿನ ಮನುಷ್ಯನ ಜೀವಿತವನ್ನು ವರ್ಣಿಸಲು ಯೆಸು ಎರಡು ಹಳೇ ಒಡಂಬಡಿಕೆಯ ಕಥೆಗಳನ್ನು ಬಳಸುತ್ತಾನೆ (ವ. 26-30):
   ಅ. ನೋಹ ಮತ್ತು ಜಲಪ್ರಳಯ
   ಆ. ಲೋಟನು ಮತ್ತು ಸೊದೋಮಿನ ನಾಶನ
8. ಹಳೇ ಒಡಂಬಡಿಕೆಯ ಕಥೆಗಳು ಮತ್ತು ತನ್ನ ಬರೋಣದ ನಡುವಿನ ಹೋಲಿಕೆಯಿಂದ ಯೇಸು (ವ. 26-30) ಹೇಳುವ ಅಂಶವೇನೆಂದರೆ ಎಂದಿನಂತೆ ಜನರ ಜೀವತವು (ತಿನ್ನುವುದು, ಕುಡಿಯುವುದು, ಮದುವೆ ಮಾಡಿಕೊಳ್ಳುವುದು) ಆತನು ಬರುವವರೆಗೂ ಸಾಗುತ್ತಿರುತ್ತದೆ.
9. ಯೇಸು ತನ್ನ ಓದುಗರಿಗೆ ಲೋಟನ ಹೆಂಡತಿಯ ಅಂತ್ಯವನ್ನು ನೆನಪಿಸುತ್ತಾನೆ (ವ. 32). ದೇವರು ಸೊದೋಮ್ ಪಟ್ಟಣವನ್ನು ನಾಶಮಾಡುವಾಗ ಲೋಟ ಮತ್ತು ಆತನ ಕುಟುಂಬವು ಓಡಿಹೋಗುತ್ತಿರುತ್ತದೆ. ಹಿಂದೆ ನೊಡಬಾರದೆಂದು ಅವರಿಗೆ ಹೇಳಲಾಗುತ್ತದೆ. ಆದರೂ ಶೋಧನೆ ತಾಳಲಾರದೆ ಲೊಟನ ಹೆಂಡಿತಯು ಹಿಂತಿರುಗಿ ನೋಡುತ್ತಾಳೆ ಮತ್ತು ಅದರ ಫಲವಾಗಿ ಆಕೆ ಉಪ್ಪಿನ ಕಂಬವಾಗುತ್ತಾಳೆ (ಆದಿಕಾಂಡ 19:26).
10. ವಚನ 34-35 ರಲ್ಲಿನ ಯೇಸುವಿನ ಎರಡು ಉದಾಹರಣೆಗಳ ನಡುವಿನ ಸಮಾನತೆಯೊಂದಿಗೆ ಒಂದೇ ಮಂಚದಲ್ಲಿ ಮಲಗಿದ್ದ ಇಬ್ಬರ ಅಂತ್ಯ/ಗತಿಯು ಬೇರೆಬೇರೆಯಾಗಿರುತ್ತದೆ. ಇಬ್ಬರು ಮಲಗಿರುತ್ತಾರೆ ಒಬ್ಬನು ಮಾತ್ರ ರಕ್ಷಿಸಲ್ಪಡುವನು. ಇಬ್ಬರು ಹೆಂಗಸರು ಬೀಸುತ್ತಿರುತ್ತಾರೆ, ಆದರೆ ಒಬ್ಬಳು ಮಾತ್ರ ರಕ್ಷಿಸಲ್ಪಡುವಳು.
11. ಶಿಷ್ಯರು ಯೇಸುವಿನ ಬಳಿ ಆತನ ಎರಡನೇ ಬರೋಣವು ಎಲ್ಲಿ ಆಗುವುದು ಎಂಬ ಪ್ರಶ್ನೆಯನ್ನು ಕೇಳುತ್ತಾರೆ (ವ. 37).
12. ಶಿಷ್ಯರ ಪ್ರಶ್ನೆಗೆ ಯೇಸು ಹೆಣ ಮತ್ತು ಹದ್ದಿನ ಕುರಿತ ಗಾದೆಯ ಮೂಲಕ ಉತ್ತರಿಸುತ್ತಾನೆ (ವ. 37). ಈ ಗಾದೆಯ ಅರ್ಥವೇನೆಂಬುದಾಗಿ ಆತನು ಹೇಳುವುದಿಲ್ಲ. ವಿವರಕ್ಕಾಗಿ ವಚನ 37 ರ ಟಿಪ್ಪಣಿಯನ್ನು ನೋಡಿರಿ.

13. ಈ ವಾಕ್ಯಭಾಗದಲ್ಲಿ ತನ್ನ ಬರೋಣದೊಂದಿಗಿನ ದೇವರ ರಾಜ್ಯದ ಪ್ರತ್ಯಕ್ಷತೆಯ ಬಗ್ಗೆ ಯೇಸು ಬಳಸುವ ಅನೇಕ ಹೇಳಿಕೆಗಳು (ವ. 22-35):

- ಮನುಷ್ಯಕುಮಾರನ ದಿವಸಗಳೊಳಗೆ ಒಂದು ದಿನವನ್ನು, ವ. 22
- ತನ್ನ ದಿನದಲ್ಲಿರುವವನು, ವ. 24
- ಮನುಷ್ಯಕುಮಾರನು ಪ್ರತ್ಯಕ್ಷನಾಗುವ ದಿವಸದಲ್ಲಿ, ವ. 30
- ಆ ದಿನದಲ್ಲಿ, ವ. 31

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ವಚನ 21 ರಲ್ಲಿನ ಗ್ರೀಕ್ ಹೇಳಿಕೆಯ ಅತ್ಯುತ್ತಮ ಅರ್ಥ:

   ಅ. "ನಿಮ್ಮಲ್ಲಿ" ಎಂಬ ಭಾಷಾಂತರದ ವಿವರಣೆ: ಇದು ದೇವರ ರಾಜ್ಯವು ಯಾವಾಗ ಬರುತ್ತದೆಂಬುದರ ಬಗ್ಗೆ ಫರಿಸಾಯರು ಕೇಳಿದ ಪ್ರಶ್ನೆಯಿಂದ ತಕ್ಷಣದ ಸಂದರ್ಭಕ್ಕೆ ಇದು ಸರಿಹೊಂದುತ್ತದೆ. ದೇವರ ರಾಜ್ಯವು ಈಗಾಗಲೇ ಯೇಸುವಿನೊಂದಿಗೆ ಬಂದಿದೆ. ಆದರೆ ಅದು ಕಾಣುತ್ತಿರಲಿಲ್ಲ. ಅದು ಜನರ ಆತ್ಮೀಕ ಮತ್ತು ಅಂತರ್ಯದ ಜೀವಿಗಳಲ್ಲಿತ್ತು. ಈ ಒಂದು ಅರ್ಥಕ್ಕೆ ನಾವು ಹೋದರೆ ದೇವರ ರಾಜ್ಯವು ಫರಿಸಾಯರಲ್ಲಿ ಇಲ್ಲದಿರುವ ನಿಮಿತ್ತ ನಾವು ನಿಮ್ಮಲ್ಲಿ ಎಂಬುದನ್ನು ಸಾಮಾನ್ಯ ಅರ್ಥದಲ್ಲಿ ಭಾಷಾಂತರಿಸಬೆಕಿದೆ.

   ಆ. ನಿಮ್ಮ ಮಧ್ಯೆ, ನಿಮ್ಮೊಳಗೆ ಎಂಬ ಭಾಷಾಂತರದ ವಿವರಣೆ: ದೇವರ ರಾಜ್ಯವು ಯೇಸುವಿನೊಂದಿಗೇ ಬಂದಿದೆ. ಹಾಗಾಗಿ ಅದು ಜನರ ಮಧ್ಯೆ (ಫರಿಸಾಯರನ್ನೊಳಗೊಂಡು, ಅವರು ಈ ಸತ್ಯ ಕಾಣದಿದ್ದರೂ) ಇರುವುದಾಗಿದೆ.

   ಈ ಎರಡು ವಿವರಣೆಗಳು ಸತ್ಯವೇದ ಪಂಡಿತರಿಂದ ಬೆಂಬಲಿಸಲ್ಪಟ್ಟಿವೆ. ಹೆಚ್ಚಿನ ಸತ್ಯವೇದ ಭಾಷಾಂತಕಾರರು ಮೊದಲನೆಯದನ್ನು ಆರಿಸಿಕೊಂಡಿದ್ದಾರೆ.

2. ವಚನ 31-33 ರಲ್ಲಿ ಯೇಸು ಪ್ರಾಣವನ್ನು ಉಳಿಸಿಕೊಳ್ಳುವ ಮತ್ತು ಕಳೆದುಕೊಳ್ಳುವುದರ ಕುರಿತಾಗಿ ಹೇಳುವ ಅಂಶಗಳು:

   - ಲೋಟನ ಹೆಂಡತಿ (ವ. 32): ಆಕೆಯು ಪಾಪಮಯ ಪಟ್ಟಣವಾದ ಸೊದೋಮಿನಲ್ಲಿನ ತನ್ನ ಹಳೆಯ ಜೀವಿತಕ್ಕೆ ತೀರಾ ಅಂಟಿಕೊಂಡಿದ್ದು, ದೇವರಿಗೆ ಅವಿಧೇಯಳಾಗಿ ಅದರ ನಾಶನವನ್ನು ತಿರುಗಿ ನೋಡುತ್ತಾಳೆ. ಅದರಿಂದ ಆಕೆ ಉಪ್ಪಿನ ಕಂಬವಾಗುತ್ತಾಳೆ. ಹೀಗೆ ಆಕೆ ತನ್ನ ಪ್ರಾಣವನ್ನು ಕಳಕೊಳ್ಳುತ್ತಾಳೆ. ಯೇಸು ತನ್ನ ಶಿಷ್ಯರಿಗೆ ಲೋಟನ ಪತ್ನಿಯಂತೆ ಇರಬೇಡಿರೆಂದು ಎಚ್ಚರಿಸುತ್ತಾನೆ.
   - ಯೇಸುವಿನ ಎರಡನೇ ಬರೋಣದ ವೇಳೆ ಸಹ ಲೊಟನ ಹೆಂಡತಿಯಂತ ಜನರಿರುವರು. ಅವರು ತಮ್ಮ ಲೌಕಿಕ ಆಸ್ತಿಯನ್ನು (ಮನೆಗಳಲ್ಲಿ ವಸ್ತುಗಳು ವ. 31) ಮತ್ತು ಶಾರೀರಿಕ (ಭೌತಿಕ) ಪ್ರಾಣವನ್ನು ಹೆಚ್ಚಾಗಿ ಪ್ರೀತಿಸುವರು (ಹೊಲದ ಕೆಲಸ ವ. 31), ಇದರಿಂದ ಅವರು ತಮ್ಮ ಆತ್ಮೀಕ ಪ್ರಾಣವನ್ನು ಕಳಕೊಳ್ಳುವರು.
   - ಈ ಲೋಕದಲ್ಲಿ ತಮ್ಮ ಪ್ರಾಣವನ್ನು ಪ್ರೀತಿಸುವವರು ಉಳಿಸಿಕೊಳ್ಳುವವರು ದೇವರ ರಾಜ್ಯದಲ್ಲಿನ ತಮ್ಮ ಪ್ರಾಣವನ್ನು ಕಳಕೊಳ್ಳುವರು.

3. ವಚನ 37 ರ ಟಿಪ್ಪಣಿ ನೋಡಿರಿ.
4. –



## 24. ಉತ್ತರಗಳು: ಪ್ರಾರ್ಥನೆಯ ಕುರಿತ ಎರಡು ಸಾಮ್ಯಗಳು, ಲೂಕ 18:1-14

### ಪ್ರಶ್ನೆಗಳಿಗೆ ಉತ್ತರಗಳು


1. ಪ್ರಾರ್ಥನೆಯ ಕುರಿತ ಈ ಸಾಮ್ಯದಲ್ಲಿ ಯೇಸು ತನ್ನ ಶಿಷ್ಯರನ್ನು ಸಂಬೋಧಿಸುತ್ತಾನೆ (ವ. 1), ಮತ್ತು ಪ್ರಾರ್ಥನೆಯ ಕುರಿತ ಎರಡನೇ ಸಾಮ್ಯದಲ್ಲಿ ಸ್ವನೀತಿವಂತರಾದ ಫರಿಸಾಯರನ್ನು ಸಂಬೋಧಿಸುತ್ತಿರಬಹುದ (ವ. 9).
2. ವಿಧವೆ ಮತ್ತು ನ್ಯಾಯಾಧಿಪತಿಯ ಉದ್ದೇಶವು ಶಿಷ್ಯರಿಗೆ ಅವರು ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥಿಸಬೇಕೆಂಬುದನ್ನು ತೋರಿಸುವುದಾಗಿದೆ.
3. ನ್ಯಾಯಧಿಪತಿಯ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (2, 4, 6):
   - ಆತನು ದೇವರಿಗೆ ಭಯಪಡದವನು
   - ಆತನು ಮನುಷ್ಯರನ್ನೂ ಲಕ್ಷಿಸುತ್ತಿರಲಿಲ್ಲ
   - ವಿಧವೆಗೆ ಸಹ ನ್ಯಾಯ ಕೊಡಲು ಆತನು ನಿರಾಕರಿಸುತ್ತಿದ್ದನು. ಪ್ರಾಚೀನ ಇಸ್ರಾಯೇಲ್ ನಲ್ಲಿ ವಿಧವೆಯರು ತೀರಾ ಕೊರತೆಯಲ್ಲಿರುವವರಾಗಿದ್ದರು
   - ಆಕೆಯ ಕಾಟ ತಪ್ಪಿಸಿಕೊಳ್ಳಲು ಆತನು, ಸ್ವಾರ್ಥಮಯ ಕಾರಣಕ್ಕಾಗಿ ಆಕೆಗೆ ನ್ಯಾಯ ಕೊಟ್ಟನು
   - ಆತನು ಅನ್ಯಾಯಗಾರನಾಗಿದ್ದನು
4. ವಿಧವೆ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 3, 5):
   - ಆಕೆ ಪದೇ ಪದೇ ಬರುತ್ತಿದ್ದಳು
   - ಆತನು ಅಷ್ಟು ಪ್ರಭಾವಶಾಲಿಯಾಗಿದ್ದಾನೆಂದು ಆಕೆ ಲಕ್ಷಕ್ಕೆ ತೆಗೆದುಕೊಳ್ಳಲಿಲ್ಲ
5. ನ್ಯಾಯಧಿಪತಿಯು ಕೊನೆಗೂ ವಿಧವೆಗೆ ನ್ಯಾಯವನ್ನು ಒದಗಿಸಿ ಕೊಡುತ್ತಾನೆ, ಯಾಕೆಂದರೆ ಆತನಿಗೆ ಆಕೆಯ ಕಾಟ ತಾಳಲಾಗಲಿಲ್ಲ ಮತ್ತು ಆಕೆಯು ತನ್ನನ್ನು ಧಣಿಸಾಳೆಂದು ತಿಳಿದು ನ್ಯಾಯ ಒದಗಿಸಿದನು (ವ. 5). ಹೀಗೆ ಆಕೆಗೆ ನ್ಯಾಯವಾದುದ್ದನ್ನು ಮಾಡುವುದಕ್ಕಾಗಿ ಆತನು ಆಕೆಗೆ ನ್ಯಾಯವನ್ನು ಒದಗಿಸಿಕೊಡಲಿಲ್ಲ.
6. ದೇವರ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 7-8):
   - ದೇವರು ತನ್ನ ಜನರಿಗೆ ನ್ಯಾಯವನ್ನು ಒದಗಿಸುತ್ತಾನೆ
   - ತನ್ನ ಬಳಿಗೆ ಬರುವ ತನ್ನ ಜನರನ್ನು ದೇವರು ಎಂದೂ ಆಶಭಂಗಪಡಿಸಲ್ಲ
   - ದೇವರು ತನ್ನ ಜನರಿಗೆ ಬೇಗನೆ ನ್ಯಾಯವನ್ನು ಕೊಡುತ್ತಾನೆ. ಆತನು ತನ್ನ ನ್ಯಾಯವನ್ನು ತಡಮಾಡುವುದಿಲ್ಲ.
7. –

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಅನ್ಯಾಯಗಾರನಾದ ನ್ಯಾಯಾಧಿಪತಿ ಮತ್ತು ದೇವರ ಬಗ್ಗೆ ಯೇಸು ಹೇಳುವ ಅಂಶವೇನೆಂದರೆ ದೇವರು ಅನ್ಯಾಯಗಾರನಾದ ನ್ಯಾಯಾಧಿಪತಿಯಂತೆ ಅಲ್ಲ (ವ. 6-8):
   - ನ್ಯಾಯಧಿಪತಿಯು ಮೊದಲು ವಿಧವೆಗೆ ನ್ಯಾಯವನ್ನು ಒದಗಿಸಿಕೊಡಲಿಲ್ಲ, ಆದರೆ ದೇವರು ತನ್ನ ಜನರಿಗೆ ಯಾವಾಗಲೂ ನ್ಯಾಯವನ್ನು ಒದಗಿಸಿಕೊಡುವವನಾಗಿದ್ದಾನೆ.
   - ನ್ಯಾಯಾಧಿಪತಿಯು ವಿಧವೆಯ ನ್ಯಾಯವನ್ನು ನಿಧಾನಿಸಿದನು. ಆದರೆ ದೇವರು ತನ್ನ ನ್ಯಾಯವನ್ನು ಎಂದು ತಡಮಾಡುವುದಿಲ್ಲ.

2. ವ. 8 ರಲ್ಲಿ ಯೇಸು ತನ್ನ ಶಿಷ್ಯರಿಗೆ ಕೇಳುವ ಪ್ರಶ್ನೆ: ಒಬ್ಬ ನಂಬಿಗಸ್ತ ಶಿಷ್ಯನು ತನ್ನ ಎಡಬಿಡದೆ ಮತ್ತು ಧೈರ್ಯವಾದ ಪ್ರಾರ್ಥನಾ ಜೀವಿತದಲ್ಲಿ ವಿಧವೆಯನ್ನು ಹೋಲುತ್ತಾನೆ. ದೇವರು ತನ್ನ ಜನರಿಗೆ ನ್ಯಾಯವನ್ನು ಒದಗಿಸುತ್ತಾನೆ, ಆತನನ್ನು ಯಾವಾಗಲೂ ಸಂಧಿಸಬಹುದು. ಆತನು ತಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ನ್ಯಾಯವನ್ನು ಒದಗಿಸುವುದರಲ್ಲಿ ಆತನು ತಡಮಾಡುವವನಲ್ಲ ಎಂಬುದನ್ನು ಆತನು ಬಲ್ಲವನಾಗಿದ್ದಾನೆ. ಯೇಸುವು ಮಹಿಮೆಯಲ್ಲಿ ಹಿಂತಿರುಗಿ ಬರುವಾಗ ಈ ರೀತಿಯ ನಂಬಿಕೆಯನ್ನು, ಈ ರೀತಿ ನಂಬಿಗಸ್ತಿಕೆ ಮತ್ತು ವಿಶ್ವಾಸದ ಪ್ರಾರ್ಥನಾ ಜೀವಿತವನ್ನು ತನ್ನ ಶಿಷ್ಯರೊಳಗೆ ಕಾಣುವನೆ?

3. –



## 25. ಉತ್ತರಗಳು: ಜಕ್ಕಾಯನು, ಲೂಕ 19:1-10

### ಪ್ರಶ್ನೆಗಳಿಗೆ ಉತ್ತರಗಳು

1. –
2. ಜಕ್ಕಾಯನನ್ನು ಈ ರೀತಿಯಾಗಿ ವರ್ಣಿಸಲಾಗಿದೆ (ವ. 2-3):
   - ಆತನೊಬ್ಬ ಸುಂಕದ ಗುತ್ತಿಗೆದಾರನಾಗಿದ್ದನು. ಬಹುಶಃ ಆತನು ಯೆರಿಕೋ ಪ್ರಾಂತ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಿರಬಹುದು
   - ಆತನು ಬಹು ಐಶ್ವರ್ಯವಂತನಾಗಿದ್ದನು
   - ಆತನು ಯೇಸುವನ್ನು ನೋಡಬೇಕೆಂದು ಅಪೇಕ್ಷಿಸಿದನು ಮತ್ತು ಆತನನ್ನು ನೋಡುವುದಕ್ಕಾಗಿ ಮರವನ್ನು ಏರಲು ಸಹ ಮನಸ್ಸು ಮಾಡಿದನು.
   - ಆತನು ಗಿಡ್ಡನಾಗಿದ್ದನು
3. ಯೇಸುವನ್ನು ನೋಡಲು ಜಕ್ಕಾಯನು ಆಲದ ಮರವನ್ನು ಹತ್ತಿದನು. ಆತನು ಗಿಡ್ಡನಾಗಿದ್ದರಿಂದ ಜನರ ಮಧ್ಯದಲ್ಲಿ ಯೇಸುವನ್ನು ನೋಡಲು ಆಗುತ್ತಿರಲಿಲ್ಲ (ವ. 5).
4. ಯೇಸುವು ಜಕ್ಕಾಯನಿಗೆ ಒಂದು ಆಶ್ಚರ್ಯಕರವಾದ ಸಂದೇಶವನ್ನು ಇಟ್ಟುಕೊಂಡಿದ್ದನು (ವ. 5). ಯೇಸುವು ಜಕ್ಕಾಯನ ಮನೆಯನ್ನು ಸಂಧಿಸಬೇಕೆಂದು ಬಯಸಿದ್ದನು.
5. ಜಕ್ಕಾಯನು ಯೇಸುವಿನ ಸಂದೇಶವನ್ನು ಸಂತೋಷದಿಂದ ಸ್ವೀಕರಿಸಿ ಯೇಸುವನ್ನು ತನ್ನ ಮನೆಗೆ ಸ್ವಾಗತಿಸುತ್ತಾನೆ (ವ. 6).
6. ಯೇಸುವಿನ ಸಂದೇಶಕ್ಕೆ ಸುತ್ತಣ ಜನರು ನಕಾರಾತ್ಮಕವಾಗಿ ಪ್ರತಿಕ್ರಯಿಸುತ್ತಾರೆ (ವ. 7). ಅವರು ಯೇಸುವು ಒಬ್ಬ ಪಾಪಿಯಾದ ಸುಂಕದವನ ಮನೆಯನ್ನು ಸಂಧಿಸುವುದು ಯೋಗ್ಯವಲ್ಲ ಎಂಬುದಾಗಿ ಯೋಚಿಸಿದನು.
7. ಜಕ್ಕಾಯನು ತನ್ನ ಆಸ್ತಿಯಲ್ಲಿ ಅರ್ಧಭಾಗವನ್ನು ಬಡವರಿಗೆ ಕೊಡುತ್ತೇನೆ ಎಂಬುದಾಗಿ ಹೇಳುತ್ತಾನೆ (ವ. 8). ಇದೊಂದು ಉದಾರವಾದ ಕೊಡುಗೆಯಾಗಿತ್ತು.
8. ಹಳೇ ಒಡಂಬಡಿಕೆಯ ಧರ್ಮಶಾಸ್ತ್ರದ ನಿಯಮಗಳಿಗೆ ಅನುಸಾರವಾಗಿ ತಾನು ಮೋಸಮಾಡಿದವರಿಗೆ ಅದರ ಹಾನಿಯನ್ನು ತುಂಬಿಕೊಡುವೆನೆಂದು ವಾಗ್ದಾನ ಮಾಡುತ್ತಾನೆ: ಆತನು ಅದರ ನಾಲ್ಕರಷ್ಟು ಕೊಡುವವನಾಗಿದ್ದಾನೆ (ವ. 8). ಇದು ಆತನೊಬ್ಬ ಪ್ರಾಮಾಣಿಕ ಮನುಷ್ಯನಾಗಿದ್ದನು ಎಂಬುದನ್ನು ತೋರಿಸುತ್ತದೆ. ಇಲ್ಲದಿದ್ದರೆ, ಆತನಿಗೆ ತನ್ನ ಮಾತನ್ನು ಉಳಿಸಿಕೊಳ್ಳಲು ಆಗುತ್ತಿರಲಿಲ್ಲ.
9. ಈ ಲೋಕದಲ್ಲಿ ತನ್ನ ಸೇವೆಯನ್ನು ಯೇಸು ಅದು ಕೆಟ್ಟುಹೋಗಿರುವುದನ್ನು ಹುಡುಕಿ ರಕ್ಷಿಸುವುದಾಗಿದೆ ಎಂದು ವರ್ಣಿಸುತ್ತಾನೆ (ವ. 10).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಯೇಸುವನ್ನು ಸಂಧಿಸುವುದಕ್ಕಿಂತ ಮೊದಲಿನ ಜಕ್ಕಾಯನ ಜೀವನ:
   - ಅರಾಮದಾಯಕ: ಆತನೊಬ್ಬ ಐಶ್ವರ್ಯವಂತನಾಗಿರುವುದರಿಂದ ಆತನಿಗೊಂದು ಸುಂದರವಾದ ಮನೆ ಇದ್ದಿರಬಹುದು ಮತ್ತು ಬೇಕಾದ ಎಲ್ಲಾ ವಸ್ತುಗಳಿದ್ದಿರಬಹುದು. ಆತನು ಯಾವಾಗಲೂ ರುಚಿಕರವಾದ ಆಹಾರವನ್ನು ಸೇವಿಸುತ್ತಾ ಉತ್ತಮವಾದ ದ್ರಾಕ್ಷಾರಸವನ್ನು ಪಾನಮಾಡುತ್ತಿದ್ದನು. ಬಹುಶಃ ಆತನಿಗೆ ಅನೇಕ ಆಳುಗಳಿದ್ದಿರಬಹುದು.

- ಏಕಾಂಗಿ: ಆತನು ಬಹಿಷ್ಕರಿಸ್ಪಟ್ಟಿದ್ದನು. ಅತನ ವೃತ್ತಿಯು ಆತನನ್ನು ತನ್ನ ಸಹ ಯೆಹೂದ್ಯರಿಂದ ಕಡೆಗಣಿಸುವಂತೆ ಮಾಡಿತ್ತು. ಅವರು ಆತನನ್ನು ಒಬ್ಬ ಪಾಪಿ, ಒಬ್ಬ ದೇಶದ್ರೋಹಿ ಎಂಬುದಾಗಿ ಪರಿಗಣಿಸಿದ್ದರು. ಯಾಕೆಂದರೆ ಆತನು ಪ್ಯಾಲೆಸ್ತೀನನ್ನು ಆಕ್ರಮಿಸಿದ ರೋಮನ್ನರ ಜೊತೆ ಸೇರಿ ಕೆಲಸಮಾಡುತ್ತಿದ್ದನು.
- ಯೋಗ್ಯ: ಆತನು ಒಬ್ಬ ಪ್ರಾಮಾಣಿಕ ಸುಂಕವಸೂಲಿಗಾರನಾಗಿದ್ದು ಜನರಿಗೆ ಹೆಚ್ಚು ಮೋಸಮಾಡದೆ ಸಂಪತ್ತನ್ನು ಗಳಿಸಿದ್ದಿರಬಹುದು. ಆತನು ಅರ್ಧವನ್ನು ಬಡವರಿಗೆ ಕೊಟ್ಟ ನಂತರವೂ ಸಹ ಯಾರಿಗಾದರೂ ತಾನು ಮೋಸಮಾಡಿದ್ದರೆ ನಾಲ್ಕರಷ್ಟು ಹಿಂತಿರುಗಿ ಕೊಡುತ್ತೇನೆ ಎಂದು ಆತನು ಹೇಳಿದ್ದ ವಾಸ್ತವಾಂಶದಿಂದ ತಿಳಿಯಬಹುದು.
- ದಿಟ್ಟ ಮತ್ತು ಸ್ವತಂತ್ರ: ಪ್ರತಿಯೊಬ್ಬ ಸುಂಕದ ವಸೂಲಿಗಾರರು ನಜರೇತಿನ ಯೇಸುವನ್ನು ನೋಡುವುದಕ್ಕಾಗಿ ಮರವನ್ನು ಹತ್ತುವ ಯೋಚನೆ ಮಾಡುವುದಿಲ್ಲ. ಇದು ಜನರು ತನ್ನನ್ನು ಮೂರ್ಖನೆಂಬುದಾಗಿ ಹಿಯ್ಯಾಳಿಸರೆಂಬ ಯೋಚನೆಯನ್ನು ಪರಿಗಣಿಸದೆ ಹೆಜ್ಜೆಯನ್ನು ತೆಗೆದುಕೊಂಡ ಮನುಷ್ಯನಾಗಿದ್ದನು ಎಂಬುದಾಗಿ ತೋರಿಸುತ್ತದೆ. ಈತನ ದಿಟ್ಟತನವೇ ಆತನನ್ನು ಯೇಸುವಿನ ಮತ್ತು ರಕ್ಷಣೆಯ ಬಳಿಗೆ ನಡಿಸುತ್ತದೆ.

2. ಯೇಸುವನ್ನು ಸಂಧಿಸಿದ ನಂತರ ಜಕ್ಕಾಯನ ಜೀವನ ಬಹುಶಃ ಈ ರೀತಿಯಾಗಿ ಇದ್ದಿರಬಹುದು:
    - ಸಂತೋಷಭರಿತ: ಆತನು ಯೇಸುವನ್ನು ಸಂತೋಷದಿಂದ ತನ್ನ ಮನೆಗೆ ಅಲ್ಲದೇ ತನ್ನ ಜೀವಿತದೊಳಗೆ ಮತ್ತು ಹೃದಯದೊಳಗೆ ಬರಮಾಡಿಕೊಳ್ಳುತ್ತಾನೆ. ಆ ದಿನ ಆತನಿಗಾದ ಸಂತೋಷ ಆತನ ಜೀವ ಮಾನದಲ್ಲೆಲ್ಲಾ ಹಾಗೆ ಇದ್ದಿರಬಹುದು.
    - ಶಾಂತಿಮಯ: ಯೇಸುವನ್ನು ತನ್ನ ಜೀವಿತದೊಳಗೆ ಆಹ್ವಾನಿಸಿದಾಗ ಆತನು ರಕ್ಷಣೆಯನ್ನು ಮತ್ತು ಎಲ್ಲಾ ಗ್ರಹಿಕೆಯನ್ನು ಮೀರುವ ಸಮಾಧಾನವನ್ನು ಹೊಂದಿಕೊಳ್ಳುತ್ತಾನೆ. ಈ ಸಮಾಧಾನವು ಆತನ ಜೀಮಾನದಲ್ಲೆಲ್ಲಾ ಹಾಗೇ ಇದ್ದಿರಬಹುದು.
    - ಒಂದು ಸಂಬಂಧದ ಭಾವ: ರಕ್ಷಣೆಯು ಆತನನ್ನು ದೇವರ ರಾಜ್ಯದ ಒಬ್ಬ ಪ್ರಜೆಯನ್ನಾಗಿ ಮಾಡಿತ್ತು ಮತ್ತು ಆತನನ್ನು ದೇವಜನರ ಅನ್ಯೋನ್ಯತೆಗೆ ನಡೆಸಿತ್ತು. ಈಗ ಆತನು ಒಬ್ಬ ಶಿಷ್ಯ, ಯೇಸುವಿನ ಒಬ್ಬ ಹಿಂಬಾಲಕ, ದೇವರ ಕುಟುಂಬದ ಮತ್ತು ಸಭೆಯ ಒಬ್ಬ ಸದಸ್ಯನು ಆಗಿರುವನು. ಜೀವನವು ಆತನನ್ನು ಎಲ್ಲಿಗೆ ನಡೆಸಿದರು ಅಲ್ಲಿ ಆತನು ಕುಟುಂಬ ಮತ್ತು ಸ್ನೇಹಿತರನ್ನು ಆತನಿಗೆ ಬೆಂಬಲಿಸುವ ಸಹಾಯಿಸು ಮತ್ತು ಉತ್ತೇಜಿಸುವ ಜನರನ್ನು ಕಾಣಬಹುದು.
    - ಉದ್ಧಾರತೆಯ ಮತ್ತು ನೀತಿಯ ಜೀವನ: ಯೇಸುವನ್ನು ಸಂಧಿಸುವಕ್ಕಿಂತ ಮೊದಲು ಜಕ್ಕಾಯನು ಬಹುಶಃ ಒಬ್ಬ ಸ್ವಾರ್ಥಪರ ವ್ಯಕ್ತಿಯಾಗಿದ್ದಿರಬಹುದು ಆದರೆ ಈಗ ಆತನ ಜೀವನ ಬದಲಾಗಿದೆ. ಆತನು ತನ್ನ ಸಂಪತ್ತನ್ನು ಬಡವರಿಗೆ ಮತ್ತು ಕೊರತೆಯಲ್ಲಿರುವವರೊಂದಿಗೆ ಹಂಚಿಕೊಂಡಿದ್ದಾನೆ. ಆತನು ಇದನ್ನು ಸಂತೋಷದಿಂದ ಮತ್ತು ಉದಾರ ಹೃದಯದಿಂದ ಮಾಡಿದ್ದಾನೆ.
    - ಭವಿಷ್ಯಕ್ಕಾಗಿನ ಒಂದು ನಿರೀಕ್ಷೆ: ಜೀವನದ ಕುರಿತ ಆತನ ದೃಷ್ಟಿಕೋನವು ಸಂಪೂರ್ಣವಾಗಿ ಬದಲಾಯಿತು. ಈ ಪ್ರಸ್ತುತ ಜೀವಿತಕ್ಕಾಗಿಯೇ ಆತನು ಬದುಕಲಿಲ್ಲ. ದೇವರ ರಾಜ್ಯದ ಒಬ್ಬ ಪ್ರಜೆಯಾಗಿ ಆತನು ಭವಿಷ್ಯಕ್ಕೆ ಸಂಬಂಧಿಸಿದವನಾಗಿದ್ದಾನೆ. ತನ್ನ ನಿತ್ಯತ್ವವನ್ನು ದೇವಜನರೊಂದಿಗೆ ನೂತನ ಭೂಮ್ಯಾಕಾಶಗಳಲ್ಲಿ ತಾನು ಕಳೆಯಬಲ್ಲೆನೆಂಬುದನ್ನು ಆತನು ತಿಳಿದವನಾಗಿದ್ದಾನೆ (ಯೆಶಾಯ 65:17).

3. –

## 26. ಉತ್ತರಗಳು: ದ್ರಾಕ್ಷೇತೋಟದಲ್ಲಿನ ಆಳುಗಳು, ಮತ್ತಾಯ 20:1-6

### ಪ್ರಶ್ನೆಗಳಿಗೆ ಉತ್ತರಗಳು


1. ಈ ಸಾಮ್ಯವು ದೇವರ ರಾಜ್ಯದ ಕುರಿತಾಗಿದೆ (ವ. 1).
2. ಮನೆಯ ಯಜಮಾನನು ಬೆಳಿಗ್ಗೆ ತನ್ನ ದ್ರಾಕ್ಷೇತೋಟಕ್ಕೆ ಕೂಲಿ ಆಳುಗಳನ್ನು ಕರೆಯುವುದಕ್ಕೆ ಹೋಗುತ್ತಾನೆ (ವ. 1).
3. ತನ್ನ ಆಳುಗಳಿಗೆ ದಿನಕ್ಕೆ ಒಂದು ಪಾವಲಿ ಕೂಲಿಯನ್ನು ಕೊಡುವುದಕ್ಕೆ ಆತನು ಒಪ್ಪುತ್ತಾನೆ (ವ. 2). ಆ ದಿನಗಳಲ್ಲಿ ಇದು ಸಾಮಾನ್ಯ ಕೂಲಿಯಾಗಿತ್ತು.
4. ಅದೇ ದಿನ ಆತನು ಸಂಧಿಸಿದ ಕೆಲಸವಿಲ್ಲದ ಜನರನ್ನು ಆತನು ಕೆಲಸಕ್ಕೆ ನೇಮಿಸುತ್ತಾನೆ (ವ. 3-7).
5. ಆ ದಿನದ ಕೆಲಸಕ್ಕಾಗಿ ಯಜಮಾನನು ದಿನದ ಕೆಲಸವು ಮುಗಿಯುವುದಕ್ಕಿಂತ ಒಂದು ಗಂಟೆ ಮೊದಲು ಕೊನೆಯ ಕೆಲಸಗಾರರನ್ನು ತನ್ನ ಕೆಲಸಕ್ಕೆ ಸೇರಿಸಿಕೊಳ್ಳುತ್ತಾನೆ (ವ. 6-7).
6. ಯಜಮಾನನು ತನ್ನ ಪಾರುಪತ್ಯಗಾರನಿಗೆ ಆಳುಗಳನ್ನು ಕರೆದು ಕಡೆಗೆ ಬಂದವರನ್ನು ಮೊದಲು ಮಾಡಿಕೊಂಡು ಮೊದಲು ಬಂದವರತನಕ ಅವರಿಗೆ ಕೂಲಿಕೊಡು ಎಂದು ಸೂಚಿಸುತ್ತಾನೆ (ವ. 8).
7. ಎಲ್ಲಾ ಆಳುಗಳಿಗೆ ಸಮನಾಗಿ ಒಂದು ಪಾವಲಿ ಕೂಲಿ ಕೊಡಲಾಯಿತು (ವ. 9-10).
8. ದಿನವೆಲ್ಲಾ ದುಡಿದವರು ಅನ್ಯಾಯವಾದ ಕೂಲಿಗಾಗಿ ದೂರುತ್ತಾರೆ. ಹೆಚ್ಚು ಸಮಯ ಕಷ್ಟಪಟ್ಟು ದುಡಿದವರಿಗೆ ಯಜಾನನು ಹೆಚ್ಚು ಕೂಲಿಯನ್ನು ಕೊಡಬಹುದೆಂಬುದಾಗಿ ಅವರು ಯೊಚಿಸಿದ್ದರು (ವ. 11-12).
9. ಆ ದೂರಿಗೆ ಯಜಮಾನನು ಆ ದೂರಿನಲ್ಲಿ ಯಾವುದೇ ಕಾರಣವಿಲ್ಲ, ಯಾಕೆಂದರೆ ಅವರವರ ಒಪ್ಪಂದ ಮೇರೆಗೆ ಅವರಿಗೆ ಕೂಲಿ ಕೊಡಲಾಗಿದೆ ಎಂದನು. ತನ್ನ ಸ್ವಂತ ಹಣದಿಂದ ತನ್ನಿಷ್ಟ ಬಂದಂತೆ ಮಾಡಬಾರದೇ? ಆತನ ಉದಾರತೆಗಾಗಿ ಅವರ್ಯಾಕೆ ಸಿಟ್ಟುಗೊಳ್ಳಬೇಕು (ವ. 13-15)?
10. ಯೇಸು ಆ ಸಾಮ್ಯವನ್ನು ಸುವಾರ್ತೆಗಳಲ್ಲಿ ಆತನು ಒಂದಕ್ಕಿಂತ ಹೆಚ್ಚುಬಾರಿ ಬಳಸಿದ ಒಂದು ಹೇಳಿಕೆಯೊಂದಿಗೆ ಮುಗಿಸುತ್ತಾನೆ (ವ. 16): “ಕಡೆಯವರು ಮೊದಲಿನವರಾಗುವರು, ಮೊದಲಿನವರು ಕಡೆಯವರಾಗುವರು” (ಮತ್ತಾ. 19:30, ಮಾರ್ಕ 10:31, ಲೂಕ 13:30 ನ್ನು ನೊಡಿ, ಹೋಲಿಸಿ ಮಾರ್ಕ 9:35).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ನಾನೆಣಿಸುತ್ತೇನೆ, ಹೆಚ್ಚಿನ ಪ್ರಾಮಾಣಿಕ ಓದುಗರು ಕೆಲಸಗಾರರಿಗೆ ಸಿಕ್ಕ ಕೂಲಿಯು ಅನ್ಯಾಯವಾಗಿದೆ. ಇದು ಈ ಲೋಕದ ಒಂದು ಸಾಮಾನ್ಯ ನಿಯಮಕ್ಕೆ ವಿರುದ್ಧವಾಗಿದೆ. ಹೆಚ್ಚು ಸಮಯ ದುಡಿಯುವವರಿಗೆ ಸ್ವಲ್ಪ ಸಮಯ ದುಡಿಯುವವರಿಗಿಂತ ಹೆಚ್ಚು ಸಂಬಳ ಸಿಗಬೇಕು, ಕಷ್ಟಪಟ್ಟು ದುಡಿಯುವವರಿಗೆ ಕಷ್ಟಪಡದೆ ದುಡಿಯುವವರಿಗಿಂತ ಹೆಚ್ಚು ಸಂಬಳ ಸಿಗಬೇಕು, ಹೆಚ್ಚು ಅರ್ಹತೆ ಹೊಂದಿರುವವರಿಗೆ ಸ್ವಲ್ಪ ಅರ್ಹತೆ ಹೊಂದಿರುವವರಿಗಿಂತ ಹೆಚ್ಚು ಸಂಬಳ ಸಿಗಬೇಕೆಂದು ನಾವು ಬಯಸುತ್ತೇವೆ.
2. ಈ ಸಾಮ್ಯದ ಸಂದೇಶವು ದೇವರ ರಾಜ್ಯದ ಕಾರಣವಿಲ್ಲದ ಉದಾರತೆ/ಔದರ್ಯವಾಗಿದೆ. ಈ ಉದಾರತೆಯು ಮನುಷ್ಯರು ಮಾಡಿದ ಸಾಮಾನ್ಯ ನಿಯಮಗಳಿಗೆ ವಿರುದ್ಧವಾಗಿದೆ. ಇದು ನಮ್ಮ ಸ್ವಂತ ಅರ್ಹತೆಯ (ನಾವೆಷ್ಟು ಒಳ್ಳೆಯವರು, ನಾವೆಷ್ಟು ಕಷ್ಟಪಟ್ಟು ದುಡಿಯುತ್ತೇವೆ) ಮೇಲೆ ಆಧರಿಗೊಂಡಿಲ್ಲ, ಆದರೆ ಇದು ದೇವರ ರಾಜ್ಯದ ಕರ್ತನ ಉದಾರ ಹೃದಯದ ಮೇಲೆ ಆಧಾರಗೊಂಡಿದೆ.
3. ವಚನ 16 ರಲ್ಲಿನ ಯೇಸುವಿನ ಮಾತನ್ನು ಈ ರೀತಿ ಅರ್ಥೈಸಿಕೊಳ್ಳಬಹುದು: ದೇವರ ರಾಜ್ಯದ ಮೌಲ್ಯಗಳು ಈ ಲೋಕದಲ್ಲಿನ ಮೌಲ್ಯಗಳಿಗಿಂತ ವಿಭಿನ್ನವಾಗಿವೆ. ದೇವರ ರಾಜ್ಯದ ಯಜಮಾನನ ಔದರ್ಯ ಮತ್ತು ಕೃಪೆಯು ಎಲ್ಲರಿಗೂ ಒಂದೇ ರೀತಿ ಇರುವುದಾಗಿದೆ. ಕೆಲವರು ಮೊದಲಿನವರಾಗಿರಬೇಕು (ಬಹಶಃ ಅವರ ಹಿನ್ನಲೆ ಅಥವಾ ಅವರ ಶ್ರಮ ಅಥವಾ ಅವರ ಅರ್ಹತೆಯ

ನಿಮಿತ್ತ) ಎಂಬುದಾಗಿ ನಾವು ಯೋಚಿಸುತ್ತೇವೆ. ಮತ್ತು ಕೆಲವರು ಕಡೆಯರಾಗಿರಬೇಕೆಂಬುದಾಗಿ (ಬಹಶಃ ಅವರು ಶ್ರಮಪಟ್ಟು ದುಡಿಯದೆ ಇರುವುದರಿಂದ, ಅವರು ಹೆಚ್ಚು ನಿಪುಣರಲ್ಲದಿರುವದರಿಂದ, ಅವರ ಸಾಮಾಜಿಕ ಹಿನ್ನಲೆ ಕೆಳಮಟ್ಟದ್ದಾಗಿರುವುದರಿಂದ) ಎಂಬುದಾಗಿ ನಾವು ಯೋಚಿಸುತ್ತೇವೆ. ಆದರೆ ದೇವರ ರಾಜ್ಯದಲ್ಲಿ ಆ ರೀತಿ ಇಲ್ಲ.

4. –



## 27. ಉತ್ತರಗಳು: ಮದುವೆಯ ಭೋಜನ, ಮತ್ತಾಯ 22:1-14

### ಪ್ರಶ್ನೆಗಳಿಗೆ ಉತ್ತರಗಳು

1. ಈ ಸಾಮ್ಯವು ದೇವರ ರಾಜ್ಯದ ಕುರಿತಾಗಿದೆ. ದೇವರ ರಾಜ್ಯವು ಮಗನಿಗೆ ಮದುವೆ ಮಾಡಿದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ ಎಂದು ಯೇಸು ಹೇಳಿದನು (ವ. 2). ಆದರೆ ಈ ಸಾಮ್ಯವು ದೇವರ ರಾಜ್ಯದಲ್ಲಿ ಭವಿಷ್ಯದಲ್ಲಿ ಆಗುವ ಭೋಜನದ ಸಾಂಕೇತಿಕ ರೂಪವೆಂಬುದಾಗಿ ನಾವು ಅರ್ಥೈಸಿಕೊಳ್ಳಬಾರದು. ಈ ಅಧ್ಯಯನದ ***ಪೀಠಿಕೆ*** ಮತ್ತು ***ಯೋಚಿಸಿ ಮತ್ತು ಚರ್ಚಿಸಿ*** 1 ರ ಟಿಪ್ಪಣಿ ನೋಡಿರಿ.
2. ಮದುವೆಗೆ ಹೇಳಿಸಿಕೊಂಡ ಅತಿಥಿಗಳನ್ನು ಕರೆಯಲು ಮೊದಲ ಬಾರಿಗೆ ಅರಸನ ಆಳುಗಳು ಹೋದಾಗ ಅವರು ಬರಲು ಮನಸ್ಸು ಮಾಡಲಿಲ್ಲ (ವ. 3).
3. ಮದುವೆಯ ಊಟದಲ್ಲಿ ಪಾಲ್ಗೊಳ್ಳಲು ಅತಿಥಿಗಳನ್ನು ಕರೆಯಲು ಅರಸನ ಆಳುಗಳು ಎರಡನೇ ಬಾರಿ ಹೋದಾಗ ಅವರು ಬರಲು ಅಲಕ್ಷ್ಯಮಾಡಿದರು. ಕೆಲವರು ತಮ್ಮ ನಿತ್ಯ ಕೆಲಸಕ್ಕೆ ಹೊರಟುಹೋದರು. ಇನ್ನೂ ಕೆಲವರು ಅರಸನ ಆಳುಗಳನ್ನು ಹಿಡಿದು ಬೈದು ಕೊಂದುಹಾಕಿದರು (ವ. 4-6).
4. ಅರಸನು ತನ್ನ ಕೋಪವನ್ನು ಆ ಕೊಲೆಗಾರರನ್ನು ನಾಶಮಾಡಿ ಅವರ ಪಟ್ಟಣವನ್ನು ಸುಟ್ಟುಹಾಕುವುದರ ಮುಖಾಂತರ ವ್ಯಕ್ತಪಡಿಸುತ್ತಾನೆ (ವ. 7).
5. ಮದುವೇ ಊಟಕ್ಕೆ ಮೂಲತಃ ಆಹ್ವಾನಿಸಲ್ಪಟ್ಟವರು ಯೋಗ್ಯರಾಗಿರಲಿಲ್ಲವೆಂಬುದಾಗಿ ಅರಸನು ಅಭಿಪ್ರಾಯಪಡುತ್ತಾನೆ (ವ. 8).
6. ಊಟಕ್ಕಾಗಿ ಹೊಸ ಅತಿಥಿಗಳನ್ನು ಹುಡುಕಲು ಅರಸನು ತನ್ನ ಆಳುಗಳನ್ನು ನಾಲ್ಕು ಹಾದಿಗಳು ಕೂಡುವ ಸ್ಥಳಗಳಿಗೆ ಅಂದರೆ ಪಟ್ಟಣದ ಮುಖ್ಯಬೀದಿಗಳಿಗೆ ಕಳುಹಿಸುತ್ತಾನೆ (ವ. 9-10).
7. ಈ ಹೊಸ ಅತಿಥಿಗಳು ಕೆಟ್ಟವರು ಒಳ್ಳೆಯವರೆನ್ನದೆ ಎಲ್ಲ ಬಗೆಯ ಜನರನ್ನೊಳಗೊಂಡಿದ್ದರು (ವ. 10).
8. ಮದುವೆ ಮನೆಯಲ್ಲಿದ್ದ ಒಬ್ಬ ಮನುಷ್ಯನು ಅಲ್ಲಿರುವ ಉಳಿದಿರುವರಿಗಿಂತ ತೀರಾ ಭಿನ್ನವಾಗಿದ್ದನು. ಆತನೊಬ್ಬನೇ ಮದುವೇ ಬಟ್ಟೆಯನ್ನು ಹಾಕಿಕೊಂಡಿರಲಿಲ್ಲ (ವ. 11-12).
9. ಮದುವೆ ಬಟ್ಟೆ ಹಾಕಿಕೊಳ್ಳದ ಆತನನ್ನು ಅರಸನ ಸೇವಕರು ಬಂಧಿಸುತ್ತಾರೆ. ಆತನ ಕೈಕಾಲುಗಳನ್ನು ಕಟ್ಟಿ ಹೊರಗೆ ಕತ್ತಲೆಗೆ ನೂಕುತ್ತಾರೆ (ವ. 13).
10. ಯೇಸು ಈ ಸಾಮ್ಯವನ್ನು ಒಂದು ಹೇಳಿಕೆಯೊಂದಿಗೆ ಮುಕ್ತಾಯಗೊಳಿಸುತ್ತಾನೆ: “ಕರೆಯಲ್ಪಟ್ಟವರು ಬಹುಜನ, ಆಯಲ್ಪಟ್ಟವರು ಸ್ವಲ್ಪಜನ” (ವ. 11). ಈ ಮಾತಿನ ಮಾಹಿತಿಗೆ ವಚನ 14 ರ ಟಿಪ್ಪಣಿ ನೋಡಿರಿ.

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಈ ಸಾಮ್ಯದಲ್ಲಿ ಮೂರು ಹೋಲಿಕೆಯ ಅಂಶಗಳನ್ನು ನಾವು ಕಾಣಬಹುದು:
   1) ಸಾಮ್ಯದ ಮೊದಲ ಭಾಗದಲ್ಲಿ ಹೋಲಿಕೆಯ ಮೊದಲ ಅಂಶವನ್ನು ಕಾಣಬಹುದು (ವ. 2-10).
      - ಅರಸನ ಮದುವೇ ಊಟಕ್ಕೆ ಮೂಲತಃ ಆಹ್ವಾನಿಸಲ್ಪಟ್ಟವರು ಅದನ್ನು ತಿರಸ್ಕರಿಸುತ್ತಾರೆ
      - ಫರಿಸಾಯರು ಮತ್ತು ಇತರ ಯೆಹೂದಿ ನಾಯಕರು (ಇವರನ್ನು ಯೆಸು ಕೆಲವೊಮ್ಮೆ ಮೊದಲನೆಯವರೆಂದು ಕರೆಯುತ್ತಾನೆ) ಯೇಸು ಮತ್ತು ಆತನ ಸೇವೆಯಲ್ಲಿ ಮೂರ್ತಿವೆತ್ತ ದೇವರ ರಾಜ್ಯವನ್ನು ತಿರಸ್ಕರಿಸಿದರು.
   2) ಈ ಸಾಮ್ಯದ ಮೊದಲ ಭಾಗದಲ್ಲೇ ಹೋಲಿಕೆಯ ಎರಡನೇ ಅಂಶವನ್ನು ಸಹ ಕಾಣಬಹುದು (ವ. 2-10):

- "ಕೆಟ್ಟವರು ಮತ್ತು ಒಳ್ಳೆಯವರನ್ನೊಳಗೊಂಡ ಒಂದು ಹೊಸ ಗುಂಪಿನ ಜನರು ಮದುವೆ ಊಟಕ್ಕೆ ಆಹ್ವಾನಿಸಲ್ಪಡುತ್ತಾರೆ ಮತ್ತು ಬರಲು ಅವರು ಸಂತೋಷಪಡುತ್ತಾರೆ.
- ಫರಿಸಾಯರು ದೇವರ ರಾಜ್ಯವನ್ನು ವಿರೋಧಿಸಿದರು ಆದರೆ ಸುಂಕದವರು ಮತ್ತು ಪಾಪಿಗಳು (ಸಮಾರ್ಯದವರು ಮತ್ತು ಅನ್ಯದೇಶೀಯರು "ಪೂರ್ವ, ಪಶ್ಚಿಮ, ದಕ್ಷಿಣೋತ್ತರದ ಜನರು" ಮತ್ತಾಯ 8:11, ಲೂಕ 13:29, ಕೆಲವೊಮ್ಮೆ ಯೇಸು ಕಡೆಯವರೆಂಬುದಾಗಿ ಕರೆದ ಜನರು) ಯೇಸು ಮತ್ತು ಆತನ ಸೇವೆಯಲ್ಲಿ ನಂಬಿಕೆಯಿಡುತ್ತಾರೆ.

3) ಸಾಮ್ಯದ ಎರಡನೇ ಭಾಗದಲ್ಲಿರುವ ಹೋಲಿಕೆಯ ಅಂಶ (ವ. 11-13):
   - ಮದುವೆ ಬಟ್ಟೆಯನ್ನು ಹಾಕಿರದವನು ಮದುವೆ ಮನೆಯಿಂದ ಹೊರಗೆ ಹಾಕಲ್ಪಡುತ್ತಾನೆ
   - ನಾವು ಯೇಸುವನ್ನು ಮತ್ತು ಆತನ ರಕ್ಷಣೆಯನ್ನು ಅಂಗೀಕರಿಸದಿದ್ದರೆ ನಮಗೆ ಪರಲೋಕ ರಾಜ್ಯ ಸೇರಲು ಅನುಮತಿಸಲ್ಪಡುವುದಿಲ್ಲ.

2. ಪರಲೋಕ ರಾಜ್ಯವು ಮಗನಿಗೆ ಮದುವೆ ಮಾಡಿದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ ಎಂದು ಯೇಸು ಹೇಳುತ್ತಾನೆ (ವ. 2). ಯೇಸು ಆಮಂತ್ರಣದ ಒಂದು ದೊಡ್ಡ ಚಿತ್ರಣವನ್ನು ಸೂಚಿಸಿ ಹೇಳಿರಬಹುದೆನಿಸುತ್ತದೆ. ಈ ಸಾಮ್ಯದ ಅರಸನು ತನ್ನ ಮಗನ ವಿವಾಹದ ಔತಣಕ್ಕೆ ಅತಿಥಿಗಳನ್ನು ಆಮಂತ್ರಿಸಿದಂತೆಯೇ ಪರಲೋಕ ರಾಜನಾದ ದೇವರು ದೇವರರಾಜ್ಯಕ್ಕೆ ಆಮಂತ್ರಿಸುತ್ತಾನೆ.
3. ಲೂಕನ ಸಾಮ್ಯವನ್ನು (ಲೂಕ 14:15-24) ಮತ್ತಾಯನ ಸಾಮ್ಯದೊಂದಿಗೆ ಹೋಲಿಸಲಾಗಿದೆ (ಮತ್ತಾ. 22:1-14):
   - ಲೂಕನ ಹಿನ್ನಲೆ/ಸಂದರ್ಭವು ನಿರ್ಧಿಷ್ಟವಾಗಿದೆ: ದೇವರ ರಾಜ್ಯದಲ್ಲಿ ಊಟಕ್ಕೆ ಕೂತವನ ಕುರಿತಾದ ಫರಿಸಾಯನೊಬ್ಬನ ಹೇಳಿಕೆಗೆ ಯೇಸು ಪ್ರತಿಕ್ರಯಿಸುತ್ತಿದ್ದಾನೆ.
   - ಲೂಕನ ವಿವರಣೆಯು ಸಂಕ್ಷಿಪ್ತವಾಗಿದೆ ಮತ್ತು ಸರಳವಾಗಿದೆ: ಅರಸನಿಲ್ಲ, ಮಗನಿಲ್ಲ, ಮದುವೆಯಿಲ್ಲ ಬರೀ ಆಮಂತ್ರಣ ಮಾತ್ರ ಇದೆ. ಇಲ್ಲಿ ಕೊಲೆಗಾರರಿಲ್ಲ. ಪ್ರತೀಕಾರವೂ ಇಲ್ಲ. ಮದುವೆಯ ವಸ್ತ್ರವನ್ನು ಧರಿಸದೆ ಇರುವವನ ಮಾಹಿತಿಯಿಲ್ಲ.
   - ಆದರೆ ಎರಡು ಸಂಗತಿಗಳು ಲೂಕನ ಸುವಾರ್ತೆಯಲ್ಲಿ: ಮೂಲ ಅತಿಥಿಗಳ ಕ್ಷಮೆ. ಹೊಸ ಅತಿಥಿಗಳ ವರ್ಣನೆ.
   - ಲೂಕನ ಸಾಮ್ಯವು ಸ್ಪಷ್ಟವಾಗಿ ರಚಿಸಲ್ಪಟ್ಟಿದೆ: ಮೂವರು ಅತಿಥಿಗಳ ನೆಪ. ಮದುವೆಯ ಮನೆ ತುಂಬುವವರೆಗಿನ ಹೊಸ ಅತಿಥಿಗಳಿಗೆ ಎರಡು ಆಮಂತ್ರಣಗಳು.
   - ಲೂಕನ ಸುವಾರ್ತೆಯಲ್ಲಿ ಹೋಲಿಕೆಯ ಒಂದು ಅಂಶವಿದೆ: ಮೂಲ ಅತಿಥಿಗಳು (ಯೇಸುವನ್ನು ಒಪ್ಪದ ಯೆಹೂದಿ ನಾಯಕರನ್ನು ಸೂಚಿಸುವ) ದೇವರ ರಾಜ್ಯದ ಭೋಜನದಲ್ಲಿ ಪಾಲ್ಗೊಳ್ಳುವದಿಲ್ಲ. ಪರಲೋಕದ ಭೋಜನದ ಮನೆಯು ಹೊಸ ಅತಿಥಿಗಳಿಂದ ತುಂಬಿರುವುದು (ದೇವರ ರಾಜ್ಯಕ್ಕಾಗಿನ ಯೇಸುವಿನ ಆಹ್ವಾನವನ್ನು ಸ್ವೀಕರಿಸದವರೆಲ್ಲರು)

## 28. ಉತ್ತರಗಳು: ಹತ್ತು ಮಂದಿ ಕನ್ಯೆಯರು, ಮತ್ತಾಯ 25:1-13

### ಪ್ರಶ್ನೆಗಳಿಗೆ ಉತ್ತರಗಳು

1. ಈ ಸಾಮ್ಯವು ದೇವರ ರಾಜ್ಯದ ಕುರಿತಾಗಿದೆ (ವ. 1).
2. ವಧುವಿನ ಗೆಳತಿಯರು ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 1-4):
   - ಅವರು ಹತ್ತು ಮಂದಿಯಾಗಿದ್ದರು
   - ಅವರಲ್ಲಿ ಐದು ಮಂದಿ ಬದ್ಧಿವಂತೆಯರು, ಐದು ಮಂದಿ ಬುದ್ಧಿಯಿಲ್ಲದವರು
   - ಬುದ್ಧಿವಂತೆಯರು ತಮ್ಮ ಆರತಿಗೆ ಬೇಕಾದಷ್ಟು ಎಣ್ಣೆಯನ್ನು ತಕ್ಕೊಂಡರು
   - ಬುದ್ಧಿಯಿಲ್ಲದವರು ತಮ್ಮ ಆರತಿಗಳಲ್ಲಿ ಸಾಕಷ್ಟು ಎಣ್ಣೆಯನ್ನು ತಕ್ಕೊಳ್ಳಲಿಲ್ಲ
3. ಮದಲಿಂಗನು ಬರುವುದಕ್ಕೆ ತಡಮಾಡಿದ್ದರಿಂದ ಕನ್ಯೆಯರೆಲ್ಲ ತೂಕಡಿಸಿ ಮಲಗಿದರು (ವ. 5).
4. ಕೊನೆಗೂ ಮಧ್ಯರಾತ್ರಿಯಲ್ಲಿ ಮದಲಿಂಗನು ಬಂದಾಗ ಬುದ್ಧಿಯಿಲ್ಲದ ಕನ್ಯೆಯರು ತಾವು ಸಾಕಷ್ಟು ಎಣ್ಣೆಯನ್ನು ತಕ್ಕೊಳ್ಳಲಿಲ್ಲವೆಂಬುದನ್ನು ಅರಿತುಕೊಮಂಡರು. ಹಾಗಾಗಿ ಅವರು ಬುದ್ಧಿವಂತ ಕನ್ಯೆಯರ ಬಳಿ ಸ್ವಲ್ಪ ಎಣ್ಣೆ ಕೊಡಿರೆಂದು ಕೇಳಿದರು. ಆದರೆ ಅವರ ಬಳಿ ಎಲ್ಲರಿಗೂ ಸಾಕಾಗುವಷ್ಟು ಎಣ್ಣೆಯಿರಲಿಲ್ಲ (ವ. 6-9).
5. ಐದು ಬುದ್ಧಿಯಿಲ್ಲದ ಕನ್ಯೆಯರು ಎಣ್ಣೆ ಕೊಳ್ಳುವುದಕ್ಕಾಗಿ ಮಾರುವವರ ಬಳಿ ಹೋದರು. ಅವರು ಹಿಂತಿರುಗಿದಾಗ ಮದುವೆ ಕೂಟವು ಮುಗಿದುಹೋಗಿತ್ತು. ಹಾಗಾಗಿ ಅವರು ಮದಲಿಂಗನ ಮನೆಗೆ ಹೋದರು. ಆದರೆ ಅವರು ಅಲ್ಲಿಗೆ ಆಗಮಿಸಿದಾಗ ಬಾಗಿಲನ್ನು ಆಗಲೆ ಮುಚ್ಚಲಾಗಿತ್ತು. ಮತ್ತು ಮದಲಿಂಗನು ಅವರಿಗೆ ಒಳಗೆ ಬರಲು ಬಿಡಲಿಲ್ಲ (ವ. 10-12).
6. ಯೇಸು ಈ ಸಾಮ್ಯವನ್ನು ತನ್ನ ಕೇಳುಗರಿಗೆ ಒಂದು ಎಚ್ಚರಿಕೆಯೊಂದಿಗೆ ಮುಗಿಸುತ್ತಾನೆ (ವ. 13): "ಆದಕಾರಣ ಆದಿನವಾದರೂ ಗಳಿಗೆಯಾದರೂ ನಿಮಗೆ ಗೊತ್ತಿಲ್ಲವಾದದರಿಂದ ಎಚ್ಚರವಾಗಿರ್ರಿ.

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಈ ಸಾಮ್ಯದಲ್ಲಿ ಹೋಲಿಕೆಯ ಅಂಶವು "ಸಿದ್ಧರಾಗಿರುವುದಾಗಿದೆ":
   - ಕೇವಲ ಐದು ಬುದ್ಧಿವಂತ ಕನ್ಯೆಯರು ಮಾತ್ರ ಸಿದ್ಧರಿದ್ದರು ಮತ್ತು ಈ ಐದು ಬುದ್ಧಿವಂತ ಕನ್ಯೆಯರಿಗೆ ಮಾತ್ರ ಮದಲಗಿತ್ತಿಯೊಂದಿಗೆ ಮದಲಿಂಗನ ಮನೆಯೊಳಕ್ಕೆ ಹೋಗಲು ಅನುಮತಿಸಲಾಯಿತು.
   - ಕೇವಲ ಯೇಸುವನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದವರು ಮಾತ್ರ ಸಿದ್ಧರಾಗಿದ್ದು ದೇವರ ರಾಜ್ಯದಲ್ಲಿ ದೇವರ ನಿತ್ಯವಾದ ಮಹಿಮೆಯೊಳಗೆ ಹೋಗುವಂತೆ ಅನುಮತಿಸಲ್ಪಡುತ್ತಾರೆ.
2. ಅನೇಕ ಸಭಾಪಾಲಕರುಗಳು ಹತ್ತು ಕನ್ಯೆಯರ ಕುರಿತ ಈ ಸಾಮ್ಯವನ್ನು ಸಾಂಕೇತಿಕ/ಕಾಲ್ಪನಿಕವಾಗಿ ಅರ್ಥವಿವರಿಸುವ ಶೋಧನೆಗೆ ಸಿಲುಕಿದ್ದಾರೆ ಅದಕ್ಕೆ ಈ ಕಾರಣಗಳಿರಬಹುದು:
   - ಈ ಸಾಮ್ಯವು ತೀರಾ ಸರಳವಾಗಿದೆ ಎಂಬುದಾಗಿ ಅವರು ಭಾವಿಸುತ್ತಾರೆ. ಹಾಗಾಗಿ ತಮ್ಮ ಸಂದೇಶವನ್ನು ಉದ್ದವಾಗಿ ಮತ್ತು ವಿಶ್ವಾಸಿಗಳಿಗೆ ಕೇಳಲು ಉತ್ಸುಕವಾಗಿರುವಂತೆ ಮಾಡಲು ಅವರು ಅದಕ್ಕೆ ಸಾಧ್ಯವಾದಷ್ಟು ಸಂಗತಿಗಳನ್ನು ಸೇರಿಸಿ ಓದಲು ಬಯಸುತ್ತಾರೆ. ಈ ರೀತಿಯ ಪ್ರಸಂಗಿಗಳ ಪ್ರಯತ್ನವನ್ನು ದೂರವಿರಸಬೇಕು.
   - ಯೇಸು ತನ್ನ ಸಾಮ್ಯದಲ್ಲಿ ಸೇರಿಸಿದ ಕೆಲ ಲಕ್ಷಣಗಳನ್ನು ದೆವರು ಯೋಚಿಸುವ ಸತ್ಯವೇದದ ಸಮಾಂತರತೆಗಳೆಂಬುದಾಗಿ ಕಾಣಬಹುದಾಗಿದೆ, ಎರಡು ಉದಾಹರಣೆಗಳು:

     ಮದಲಿಂಗನು ಯೇಸುವನ್ನು ಸೂಚಿಸುತ್ತಾನೆ: ದೇವರು ಮತ್ತು ಇಸ್ರಾಯೇಲರ ಕುರಿತ ಕೆಲ ಹಳೇ ಒಡಂಬಡಿಕೆಯ ವಾಕ್ಯಭಾಗಗಳು ಗಂಡ – ಹೆಂಡತಿಯ ರೂಪಾಲಂಕಾರವಾಗಿ (ಉದಾ: ಹೋಶೇಯ 2:2, ಯೆಹೆಜ್ಕೇಲ 16:8-13), ಹೊಸ

ಒಡಂಬಡಿಕೆಯಲ್ಲಿ ಪೌಲನು "ಕ್ರಿಸ್ತನ ಮದಲಗಿತ್ತಿ" ರೂಪಾಲಂಕಾರವನ್ನು ಬಳಸುತ್ತಾನೆ (2 ಕೊರಿಂಥ 11:2) ಮತ್ತು ಪ್ರಕಟಣೆಯು ಯಜ್ಞದ ಕುರಿಮರಿಯ ವಿವಾಹ ಮತ್ತು ಆತನಿಗಾಗಿ ಅಲಂಕೃತಗೊಂಡ ಮದಲಗಿತ್ತಿಯ ಬಗ್ಗೆ ವಿವರಿಸುತ್ತದೆ (ಪ್ರಕ. 19:7)

"ಆರತಿಯಲ್ಲಿನ ಎಣ್ಣೆಯು ಪವಿತ್ರಾತ್ಮನನ್ನು ಸೂಚಿಸುತ್ತದೆ": ಹಳೇ ಒಡಂಬಡಿಕೆಯಲ್ಲಿ ಸಮುವೇಲನು ದಾವೀದನನ್ನು ಅಭಿಷೇಕಿಸಿದಾಗ ದೇವರಾತ್ಮ ದಾವೀದನ ಮೇಲೆ ಇಳಿಯಿತು (1 ಸಮು. 16:13) ಮತ್ತು ಯೆಶಾಯ 61:1 ರಲ್ಲಿನ ಮೆಸ್ಸೀಯನ ಕುರಿತ ಪ್ರವಾದನೆಯನ್ನು ಸ್ವತಃ ಯೇಸು ತನ್ನ ಬಗ್ಗೆಯೇ ಹೇಳಿಕೊಳ್ಳುತ್ತಾನೆ, "ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು … ಅಭಿಷೇಕಿಸಿದನು" (ಲೂಕ 4:18).

ಒಂದು ವೇಳೆ ಈ ರೀತಿಯ ಅರ್ಥವಿವರಣೆಯನ್ನು ಇನ್ನೂ ಮುಂದೆ ಕೊಡೊಯ್ದರೆ ನಾವು ಬೇಗನೆ ಸಮಸ್ಯೆಗೆ ಸಿಲುಕಿಕೊಳ್ಳುತ್ತೇವೆ, ಉದಾ:

ಯೇಸುವು ಈ ಸಾಮ್ಯದಲ್ಲಿನ ಮದಲಿಂಗನಾಗಿದ್ದಾನೆ, ಆತನ ಪತ್ನಿ/ಸಭೆ ಯಾರು? ಮದಲಗಿತ್ತಿಯಾ (ಇಲ್ಲಿ ಆಕೆ ಬಗ್ಗೆ ಹೇಳಲಿಲ್ಲ)? ಅಥವಾ ಎಲ್ಲಾ ಕನ್ಯೆಯರಾ? ಅಥವಾ ಕೇವಲ ಬುದ್ಧಿಯುಳ್ಳ ಕನ್ಯೆಯರಾ?

ಒಂದು ವೇಳೆ ಎಣ್ಣೆಯು ಪವಿತ್ರಾತ್ಮನಾಗಿದ್ದರೆ ಎಲ್ಲಾ ಕನ್ಯೆಯರ ಬಳಿ ಸ್ವಲ್ಪ ಎಣ್ಣೆಯಿತ್ತು ಎಂಬುದನ್ನು ನಾವು ಹೇಗೆ ಅರ್ಥೈಸಿಕೊಳ್ಳುವುದು? ಅಥವಾ ಆ ಎಣ್ಣೆ ಎಲ್ಲರಿಗೂ ಸಾಕಾಗುವಷ್ಟಿರಲಿಲ್ಲವೆಂಬುದರ ಅರ್ಥವೇನು? ಬುದ್ಧಿಯಿಲ್ಲದ ಕನ್ಯೆಯರು ಮಾರುವವರ ಬಳಿ ಎಣ್ಣೆಯನ್ನು ಕೊಳ್ಳುವುದನ್ನು ಹೇಗೆ ಅರ್ಥೈಸಿಕೊಳ್ಳುವುದು?

- ಕೆಲ ಸಭಾಪಾಲಕರುಗಳು ಆಳವಾದ ರಹಸ್ಯಗಳನ್ನು ಮತ್ತು ಆಳವಾದ ಅರ್ಥಗಳನ್ನು ಕಂಡುಹಿಡಿಯುವುದು ಒಳ್ಳೆಯ ಪ್ರಸಂಗಿಗಳ ಕೆಲಸವೆಂಬುದಾಗಿ ಭಾವಿಸುತ್ತಾರೆ. ಖಂಡಿತವಾಗಿ ಇದು ಬುದ್ಧಿಹೀನವಾದದ್ದು ಮತ್ತು ಅಪಾಯಕಾರಿಯಾದದ್ದಾಗಿದೆ.



## 29. ಉತ್ತರಗಳು: ತಲಾಂತುಗಳು, ಮತ್ತಾಯ 25:14-30

### ಪ್ರಶ್ನೆಗಳಿಗೆ ಉತ್ತರಗಳು

1. ತಾನು ದೇಶಾಂತರಕ್ಕೆ ಹೋಗುವ ನಿಮಿತ್ತ ಒಬ್ಬ ಮನುಷ್ಯನು ತನ್ನ ಆಸ್ತಿಯನ್ನು ತನ್ನ ಆಳುಗಳಿಗೆ ಒಪ್ಪಿಸಿಕೊಡುತ್ತಾನೆ (ವ. 14).
2. ಇಬ್ಬರು ಆಳುಗಳು ತಮಗೆ ಒಪ್ಪಿಸಿಕೊಟ್ಟ ದೊಡ್ಡ ಮೊತ್ತದ ಹಣವನ್ನು ವ್ಯಾಪಾರಕ್ಕೆ ಹಾಕುತ್ತಾರೆ (ವ. 16-17).
3. ಸಣ್ಣ ಮೊತ್ತದ ಹಣವನ್ನು ಸ್ವೀಕರಿಸಿದ ಆಳು ಅದನ್ನು ಭೂಮಿಯೊಳಗೆ ಮುಚ್ಚಿಡುತ್ತಾನೆ (ವ. 18).
4. ತಮ್ಮ ಯಜಮಾನನು ತಿರುಗಿ ಬಂದಾಗ ಮೊದಲೆರಡು ಆಳುಗಳು ಆ ಹಣವನ್ನು ಅದರ ಆದಾಯದೊಂದಿಗೆ ಹಿಂತಿರುಗಿಸುತ್ತಾರೆ. ಅವರ ನಂಬಿಗಸ್ತಿಕೆಗಾಗಿ ಧಣಿಯು ಅವರನ್ನು ಹೊಗಳುತ್ತಾನೆ ಮತ್ತು ಅವರನ್ನು ಇನ್ನೂ ದೊಡ್ಡ ಕೆಲಸದಲ್ಲಿಡುತ್ತಾನೆ (ವ. 19-24).
5. ತನ್ನ ವಿಫಲತೆಗಾಗಿ ಮೂರನೇ ಆಳು ಯಜಮಾನನ ಕಠಿಣತೆ ಮತ್ತು ದುರಾಸೆಯನ್ನು ಕಾರಣವಾಗಿ ಕೊಡುತ್ತಾನೆ (ವ. 24-25).
6. ಮೂರನೇ ಆಳನ್ನು ಯಜಮಾನನು "ಮೈಗಳ್ಳನಾದ ಕೆಟ್ಟ ಆಳು ನೀನು" ಎಂದು ಕರೆಯುತ್ತಾನೆ. ಆತನು ಆ ಹಣವನ್ನು ಬಡ್ಡಿಗೆ ಹಾಕಬಹುದಾಗಿತ್ತು (ವ. 26).
7. ಮೂರನೆ ಆಳನ್ನು ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವಂಥ ಕತ್ತಲೆಗೆ ಹಾಕಲಾಗುತ್ತದೆ (ವ. 28-30).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಈ ಸಾಮ್ಯದಲ್ಲಿನ ಹೋಲಿಕೆಯ ಅಂಶವು "ನಂಬಿಗಸ್ತಿಕೆ" ಯಾಗಿದೆ:
   - ಪ್ರಯಾಣದಿಂದ ಹಿಂತಿರುಗಿ ಬಂದ ಯಜಮಾನನು ತಾನಿಲ್ಲದಿರುವಾಗ ತನ್ನ ಆಳುಗಳು ತಮಗೆ ಕೊಟ್ಟ ಜವಾಬ್ದಾರಿಯನ್ನು ನಂಬಿಗಸ್ತಿಕೆಯಿಂದ ಮಾಡಿದ್ದಾರೆಂಬುದಾಗಿ ನಿರೀಕ್ಷಿಸುತ್ತಾನೆ.
   - ಯುಗಾಂತ್ಯದಲ್ಲಿ ಯೇಸು ಪರಲೋಕದಿಂದ ತಿರುಗಿ ಬರುವಾಗ ತನ್ನ ಹಿಂಬಾಲಕರು ತನಗೆ ಮತ್ತು ದೇವರ ರಾಜ್ಯದ ವಿಸ್ತರಣೆಗಾಗಿನ ತಮ್ಮ ಕೆಲಸದಲ್ಲಿ ನಂಬಿಗಸ್ತರಾಗಿರಬೇಕೆಂದು ಅಪೇಕ್ಷಿಸುತ್ತಾನೆ.
2. ಸಭಾಪಾಲಕರ ಸಂದೇಶದ ಬಗ್ಗೆ ಕೆಲವು ಟಿಪ್ಪಣಿಗಳು:
   - ಸಭಾಪಾಲಕರು ಈ ಸಾಮ್ಯದ ಲಕ್ಷಣವನ್ನು ತಪ್ಪಾಗಿ ಅರ್ಥೈಸಿಕೊಂಡು ಇದನ್ನು ಸಾಂಕೇತಿಕ/ಕಾಲ್ಪನಿಕವೋ ಎಂಬಂತೆ ವ್ಯಾಖ್ಯಾನಿಸಿದ್ದಾರೆ. ಸಾಂಕೇತಿಕ ಅರ್ಥವಿವರಣೆಯು ಅನೇಕ ಹೋಲಿಕೆಯ ಅಂಶಗಳನ್ನು ಹೊಂದಿರುತ್ತದೆ. ಒಂದು ನಿಜವಾದ ಸಾಮ್ಯವು ಕೇವಲ ಒಂದೇ ಹೋಲಿಕೆಯ ಅಂಶವನ್ನು ಹೊಂದಿರುತ್ತದೆ. ತಲಾಂತುಗಳ ಸಾಮ್ಯದ ಹೋಲಿಕೆಯ ಅಂಶವು ನಂಬಿಗಸ್ತಿಕೆಯಾಗಿದೆ.
   - ಈ ಸಾಮ್ಯದ ಸಾಂಕೇತಿಕ/ಕಾಲ್ಪನಿಕ ಅರ್ಥವಿವರಣೆಯ ನಿಮಿತ್ತ ಸಭಾಪಾಲಕರ ದೈವಶಾಸ್ತ್ರವೂ ವಿಚಿತ್ರವಾಗಿಬಿಡುತ್ತದೆ (ಅಥವಾ ತಪ್ಪಾಗುತ್ತದೆ).

     ಎರಡು ಉದಾಹರಣೆಗಳು:

   ಯೇಸುವಿನ ಕುರಿತ ಅವರ ತಿಳುವಳಿಕೆ: ಸಾಮ್ಯದಲ್ಲಿನ ಯಜಮಾನನು ಅಷ್ಟು ಒಳ್ಳೆಯ ವ್ಯಕ್ತಿಯಾಗಿರುವುದಿಲ್ಲ. ಮೂರನೆಯ ಆಳು ಆತನನ್ನು "ಕಠಿಣ ಮನುಷ್ಯನು" ಎಂಬುದಾಗಿ ಕರೆಯುತ್ತಾನೆ. ಮತ್ತು ಯಜಮಾನ ಸಹ ತಾನು ಬಿತ್ತದಿರುವಲ್ಲ ಕೊಯ್ಯುವವನೆಂಬುದನ್ನು ಒಪ್ಪಿಕೊಳ್ಳುತ್ತಾನೆ. ಮತ್ತು ಆ ವ್ಯಕ್ತಿಯ ಅಪರಾಧವನ್ನು ಪರಿಗಣಿಸಿದರೆ ಯಜಮಾನನು ಮೂರನೇ ಆಳಿಗೆ ಕೊಡುವ ದಂಡನೆಯು ತೀರಾ ಕ್ರೂರವಾದುದ್ದಾಗಿದೆ. ನನ್ನ ಅಭಿಪ್ರಾಯವೇನಂದರೆ ಸಭಾಪಾಲಕರುಗಳು ಈ ಸಾಮ್ಯದಲ್ಲಿ ಯಜಮಾನನು ಯೇಸು ಆಗಿದ್ದಾನೆಂದು ಹೇಳುವುದು ತಪ್ಪಾದುದ್ದಾಗಿದೆ. ಆದರೆ ಆ ಯಜಮಾನನ ಕೆಲವು ಅಂಶಗಳನ್ನು

ಯೇಸುವಿಗೆ ಅಳವಡಿಸಬಹುದಷ್ಟೇ: ಆತನ ಹೋಗೋಣ ಮತ್ತು ಬರೋಣ ಮತ್ತು ತನ್ನ ಸೇವಕರು ನಂಬಿಗಸ್ತರಾಗಿರಬೇಕೆಂಬ ಆತನ ಅಪೇಕ್ಷೆ.

ರಕ್ಷಣೆಯ ಕುರಿತ ಅವರ ತಿಳುವಳಿಕೆ: ನಾವು ನಮ್ಮ ಪ್ರಯತ್ನದಿಂದ ಅಥವಾ ಸಾಧನೆಗಳಿಂದ ರಕ್ಷಿಸಲ್ಪಟ್ಟಿಲ್ಲವೆಂಬುದಾಗಿ ಹೊಸ ಒಡಂಬಡಿಕೆಯು ಸ್ಪಷ್ಟವಾಗಿ ನಮಗೆ ಬೋಧಿಸುತ್ತದೆ. ಹಾಗಾಗಿ ಮೂರನೇ ಆಳು ತನಗೆ ಕೊಟ್ಟ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸದೆ ಯೇಸುವಿಗೆ ಸಾಕಷ್ಟು ಆದಾಯ/ಲಾಭವನ್ನು ಕೊಡಲಿಲ್ಲವೆಂದು ಯೇಸುವು ಆತನನ್ನು ನರಕಕ್ಕೆ ಕಳುಹಿಸಿದನೆಂದು ಸಭಾಪಾಲಕರು ಹೇಳುವುದು ತಪ್ಪಾದುದ್ದಾಗಿದೆ.

3. ಲೂಕನು ಈ ಸಾಮ್ಯದ ಒಂದು ವಿಭಿನ್ನವಾದ ರೂಪವನ್ನು ಹೊಂದಿದ್ದಾನೆ (ನೋಡಿ ಲೂಕ 19:12-27). ಮುಖ್ಯ ವ್ಯತ್ಯಾಸಗಳ ಕುರಿತ ಕೆಲ ಸಂಗತಿಗಳು:
   - ನಿರೂಪಣೆ (ದೇಶಾಂತರಕ್ಕೆ ಹೋಗುವುದು – ಸೇವಕರ ವಶಕ್ಕೆ ಹಣ ಕೊಡುವುದು – ಹಿಂತಿರುಗಿ ಬರುವುದು – ಲೆಕ್ಕ ಕೇಳುವುದು – ನಂಬಿಗಸ್ತಿಕೆಯನ್ನು ಅಪೇಕ್ಷಿಸುವುದು) ಮತ್ತು ಹೋಲಿಕೆಯ ಅಂಶದಲ್ಲಿ (ನಂಬಿಗಸ್ತಿಕೆ) ಎರಡೂ ಸಾಮ್ಯಗಳು ಸಹ ಒಂದೇ ರೀತಿ ಇವೆ.
   - ಲೂಕನ ಮುಕ್ತಾಯವು ವಿಭಿನ್ನವಾಗಿದೆ. ಆತನು ತಮ್ಮ ಮೇಲೆ ದೊರೆತನ ಮಾಡುವುದನ್ನು ಇಷ್ಟಪಡದ ಜನರನ್ನೆಲ್ಲ ಆತನು ಸಂಹರಿಸುತ್ತಾನೆ. ಓದುಗರಿಗೆ ನ್ಯಾಯತೀರ್ಪಿನ ದಿನವನ್ನು ಜ್ಞಾಪಿಸಲಾಗಿದೆ. ಮತ್ತಾಯನ ಸೂವಾರ್ತೆಯಲ್ಲಿ ಕೇವಲ ಅಪನಂಬಿಗಸ್ತನಾದ ಆಳಿಗೆ ಮಾತ್ರ ಶಿಕ್ಷೆ ನೀಡಲಾಗಿದೆ.
   - ಲೂಕನ ಸುವಾರ್ತೆಯಲ್ಲಿನ ಸಾಮ್ಯವು ಜಕ್ಕಾಯನ ರಕ್ಷಣೆಯ ನಂತರ ಮತ್ತು ಯೇಸುವಿನೊಂದಿಗೆ ಪ್ರಯಾಣಿಸುತ್ತಿದ್ದವರು ಆತನ ಮೇಲೆ ಹೊಂದಿದ್ದ ತಪ್ಪಾದ ಅಪೇಕ್ಷೆಯ ಹಿನ್ನಲೆ/ಸಂದರ್ಭದಲ್ಲಿ ಇಡಲ್ಪಟ್ಟಿದೆ. ಆತನು ಆ ಸಮಯದಲ್ಲಿಯೇ ದೇವರ ರಾಜ್ಯವನ್ನು ಸ್ಥಾಪಿಸುವುದಕ್ಕಾಗಿ ಯೆರೂಸಲೇಮಿಗೆ ಹೋಗುತ್ತಿದ್ದಾನೆಂಬುದಾಗಿ ಅವರು ಯೋಚಿಸಿದರು. ಹಾಗಾಗಿ ಹೋಗುವ ಮತ್ತು ಬರುವ ಅಂಶವನ್ನು ಲೂಕನ ಸುವಾರ್ತೆಯಲ್ಲಿ ಒತ್ತಿ ಹೇಳಲಾಗಿದೆ.
   - ಲೂಕನ ಸುವಾರ್ತೆಯಲ್ಲಿ ಒಬ್ಬ ಮನುಷ್ಯನು ದೂರದೇಶಕ್ಕೆ ಹೋಗುವುದು ಹೆಚ್ಚು ವಿವರವಾಗಿದೆ: ಆತನೊಬ್ಬ ಶ್ರೀಮಂತನಾಗಿದ್ದನು, ಆತನು ತಾನು ಅರಸನಾಗಿ ನೇಮಿಸಲ್ಪಡುವುದಕ್ಕಾಗಿ ದೂರದೇಶಕ್ಕೆ ಹೊರಟುಹೋಗುತ್ತಾನೆ. ಮತ್ತು ಆತನು ಅರಸನಾಗಿ ಹಿಂತಿರುಗಬೇಕೆಂಬ ಯೋಜನೆ ಮಾಡುತ್ತಾನೆ. ರಾಯಭಾರಿಗಳ ಮೂಲಕ ಆತನ ಮೇಲೆ ದೂರನ್ನು ದಾಖಲಿಸಲಾಗುತ್ತದೆ. ಆದರೆ ಆತನು ಸಹ (ಮತ್ತಾಯದಲ್ಲಿರುವಂತೆ) ಬಿತ್ತದೆಯಿರುವುದರಲ್ಲಿ ಕೊಯ್ಯುವ ಕಠಿಣ ಮನುಷ್ಯನೆಂಬುದಾಗಿ ವರ್ಣಿಸಲ್ಪಟ್ಟಿದ್ದಾನೆ.
   - ಇತರೆ ಕೆಲವು ವ್ಯತ್ಯಾಸಗಳು: ಲೂಕನ ಸುವಾರ್ತೆಯಲ್ಲಿ ಹತ್ತುಮಂದಿ ಆಳುಗಳು ಸ್ವಲ್ಪ ಸಣ್ಣ ಪ್ರಮಾಣದ ಹಣವನ್ನು (ಒಂದು ಮೊಹರಿಯು ಒಬ್ಬ ಕೆಲಸಗಾರನ ಮೂರು ತಿಂಗಳ ಕೂಲಿಗೆ ಸಮನಾಗಿತ್ತು) ಮತ್ತು ಅವರೆಲ್ಲರೂ ಸಮಪ್ರಮಾಣದ ಹಣವನ್ನು ಪಡಕೊಳ್ಳುತ್ತಾರೆ. ನಂಬಿಗಸ್ತರಾಗಿರುವವರನ್ನು ಗ್ರಾಮಗಳ ಮೆಲೆ ಅಧಿಕಾರಿಗಳನ್ನಾಗಿ ಇಡಲಾಗುತ್ತದೆ. ಅಪನಂಬಿಗಸ್ತನಾದ ಆಳು ತನ್ನ ಹಣವನ್ನು ಬಟ್ಟೆಯಲ್ಲಿ ಕಟ್ಟಿ ಇಟ್ಟುಕೊಂಡಿರುತ್ತಾನೆ.

## 30. ಉತ್ತರಗಳು: ಕುರಿಗಳು ಮತ್ತು ಆಡುಗಳು, ಮತ್ತಾಯ 25:31-46

### ಪ್ರಶ್ನೆಗಳಿಗೆ ಉತ್ತರಗಳು

1. "ಜನರನ್ನು ಬೇರೆ ಬೇರೆ ಮಾಡುವ" ಹಿನ್ನಲೆಯು ಯೇಸುವಿನ ಎರಡನೇ ಬರೋಣವಾಗಿದೆ (ವ. 31 ಟಿಪ್ಪಣಿಯೊಂದಿಗೆ).
2. ಬೇರ್ಪಡಿಸುವಿಕೆಯನ್ನು ವರ್ಣಿಸಲು ಯೇಸು ದಿನದ ಕೊನೆಯಲ್ಲಿ ಕುರುಬನು ಆಡುಗಳನ್ನು ಮತ್ತು ಕುರಿಗಳನ್ನು ಬೇರೆ ಬೇರೆ ಮಾಡುವ ಉಪಮೆಯವನ್ನು ಉಪಯೋಗಿಸಿದ್ದಾನೆ (ವ. 32-33).
3. ಜನರನ್ನು ದೇವರ ರಾಜ್ಯಕ್ಕೆ ಆಹ್ವಾನಿಸುವವರು (ಯೇಸು ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತಿರುವಾಗ) ಅರಸನಾಗಿದ್ದಾನೆ (ವ. 34).
4. ರಾಜ್ಯವು ಈ ರೀತಿಯಾಗಿ ವರ್ಣಿಸಲ್ಪಟ್ಟಿದೆ (ವ. 34):
   ಅ. ಅದು ಆಶೀರ್ವಾದ ಹೊಂದಿರುವವರ ಸ್ವಾಸ್ಥ್ಯವಾಗಿದೆ (ವಿಶ್ವಾಸಿಗಳ).
   ಆ. ಅದು ಆಶೀರ್ವಾದ ಹೊಂದಿರುವವರಿಗಾಗಿ (ವಿಶ್ವಾಸಿಗಳು) ಲೋಕಾದಿಯಿಂದಲೇ ಸಿದ್ಧಪಡಿಸಲ್ಪಟ್ಟಿದೆ.
5. "ಆಶೀರ್ವಾದ ಹೊಂದಿದವರು" ಈ ರೀತಿ ವರ್ಣಿಸಲ್ಪಟ್ಟಿದ್ದಾರೆ (ವ. 35-37):
   ಅ. ಅವರು ನೀತಿವಂತರಾಗಿದ್ದಾರೆ (ವ. 37).
   ಆ. ಅವರೇನು ಮಾಡಿದ್ದಾರೆ? ಯೇಸುವು ಬಡವನೂ ಕೊರತೆಯಲ್ಲಿರುವವನೂ ಆಗಿರುವಾಗ ಆತನಿಗೆ ಎಲ್ಲಾ ಬಗೆಯ ಒಳ್ಳೆಯ ಕಾರ್ಯವನ್ನು ಮಾಡಿದ್ದಾರೆ (ವ. 35-36).
6. ತಾವು ಯೇಸುವಿಗೆ ಈ ಎಲ್ಲ ಒಳ್ಳೆಯ ಕಾರ್ಯಗಳನ್ನು ಮಾಡಿದೆವೆಂಬುದನ್ನು ಅರಿಯದೆ ಇರುವುದರಿಂದ ನೀತಿವಂತರು ಆಶ್ಚರ್ಯಪಡುತ್ತಾರೆ (ವ. 37-39).
7. ಅರಸನು ನೀತಿವಂತರಿಗೆ ಈ ಖಚಿತತೆಯನ್ನು ಕೊಡುತ್ತಾನೆ (ವ. 40): ತನ್ನ ಸಹೋದರರಲ್ಲಿ ಅಲ್ಪವಾದವನೊಬ್ಬನಿಗೆ ಅವರು ಏನೇನು ಮಾಡಿದರೋ ಅದು ತನಗೆ ಮಾಡಿದ ಹಾಗಾಯಿತು. ಇದರರ್ಥ ನೀತಿವಂತರು ಬಡ ಮತ್ತು ಕೊರತೆಯಲ್ಲಿರುವ ವಿಶ್ವಾಸಿಯೊಬ್ಬನಿಗೆ ಅವರು ತೋರುವ ಪ್ರೀತಿ ಮತ್ತು ಕಾಳಜಿಯ ಮೂಲಕ ತಮ್ಮ ಗುಣಸ್ವಭಾವ ತೋರ್ಪಡಿಸಿಕೊಂಡವರಾಗಿದ್ದಾರೆ (ವ. 40 ಟಿಪ್ಪಣಿ ಸಹ ನೋಡಿ)
8. ಶಾಪಗ್ರಸ್ಥರು ನಿತ್ಯಬೆಂಕಿಯೊಳಕ್ಕೆ ಹಾಕಲ್ಪಡುತ್ತಾರೆ (ವ. 41)
9. ಶಾಪಗ್ರಸ್ಥರು ಈ ರಿತಿ ವರ್ಣಿಸಲ್ಪಟ್ಟಿದ್ದಾರೆ (ವ. 42-43, 46):
   ಅ. ಅವರು ಯಾರು: ಅವರು ಅನೀತಿವಂತರಾಗಿದ್ದಾರೆ. ಕೊನೆಯ ವಚನದಲ್ಲಿ ಯೇಸು ಅವರನ್ನು ನೀತಿವಂತರೊಂದಿಗೆ ತದ್ವಿರುದ್ಧವಾಗಿಸುವದರಿಂದ ತಿಳಿಯಬಹುದು (ವ. 46).
   ಆ. ಅವರೇನು ಮಾಡಲಿಲ್ಲ: ಯೇಸು ಬಡವನೂ ಕೊರತೆಯುಳ್ಳವನು ಆಗಿರುವಾಗ ಆತನಗೆ ಉಪಕಾರ ಮಾಡಲಿಲ್ಲ (ವ. 42-43).
10. ಯೇಸುವು ಬಡವನೂ ಮತ್ತು ಕೊರತೆಯುಳ್ಳವನಾಗಿರುವುದನ್ನು ತಾವು ಎಂದೂ ಕಾಣದೇ ಇರುವುದಕ್ಕಾಗಿ ಶಾಪಗ್ರಸ್ತರು ಆಶ್ಚರ್ಯಪಡುತ್ತಾರೆ (ವ. 44).
11. ಶಾಪಗ್ರಸ್ತರಿಗೆ ಅರಸನು ಈ ಖಚಿತತೆ ಕೊಡುತ್ತಾನೆ (ವ. 45): ಯೇಸುವಿನ ಸಹೋದರರಲ್ಲಿ ಅಲ್ಪವಾದವನೊಬ್ಬನಿಗೆ ಅವರು ಏನನ್ನು ಮಾಡಲಿಲ್ಲವೋ ಅದು ಆತನಿಗೆ ಮಾಡದೇ ಇರುವಂತದ್ದಾಯಿತು.
12. ಜನರನ್ನು ಬೇರೆ ಬೇರೆ ಮಾಡುವ ವಾಕ್ಯಭಾಗವನ್ನು ಯೆಸು ಬೇರ್ಪಡಿಸುವಿಕೆಯ ಸಾರಾಂಶದೊಂದಿಗೆ ಮುಕ್ತಾಯಗೊಳಿಸುತ್ತಾನೆ (ವ. 46). ಶಾಪಗ್ರಸ್ತರು/ಅನೀತಿವಂತರು ನಿತ್ಯಶಿಕ್ಷೆಗೂ/ನೀತಿವಂತರು ನಿತ್ಯಜೀವಕ್ಕೂ ಹೋಗುವರು.

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ಮೂರು ಕಾರಣಗಳಿಂದ ವಿಶ್ವಾಸಿಗಳು ಈ ವಾಕ್ಯಭಾಗವನ್ನು ಹೇಗೆ ವ್ಯಾಖ್ಯಾನಿಸಬೇಕೆಂಬುದರ ಬಗ್ಗೆ ವಾದಿಸುತ್ತಾರೆ:

   ಅ. ಊಹಿಸುವ ಶೋಧನೆ: ಇದೊಂದು ಕ್ಲಿಷ್ಟಕರವಾದ ವಾಕ್ಯಭಾಗವಾಗಿದ್ದು ಪರ್ಯಾಯ ಅರ್ಥವಿವರಣೆಗೆ ಇದು ಮುಕ್ತವಾಗಿದೆ. ಹಾಗಾಗಿ ಜನರು ಊಹಿಸುವ ಶೋಧನೆಗೆ ಬೀಳುತ್ತಾರೆ.

   ಆ. ದೊಡ್ಡ ಚಿತ್ರಣವನ್ನು ಮರೆಯುವುದು, ಉದಾಹರಣೆಗೆ: ಬಡವರಿಗೆ ಮತ್ತು ಕೊರತೆಯಲ್ಲಿರುವವರಿಗೆ ನೀವು ಮಾಡಿದ ಒಳ್ಳೆಯ ಕಾರ್ಯಗಳ ನಿಮಿತ್ತ ನೀವು ರಕ್ಷಣೆ ಹೊಂದುತ್ತೀರೆಂದು ಯೇಸು ಭೋಧಿಸುತ್ತಾನೆಂದು ಹೇಳಿದರೆ ಹೊಸ ಒಡಂಬಡಿಕೆಯ "ಕೃಪೆಯಿಂದಲೇ ರಕ್ಷಣೆ" ಎಂಬ ಸಿದ್ಧಾಂತವನ್ನು ನೀವು ಮರೆತ್ತಿದ್ದೀರೆಂದಾಗುತ್ತದೆ.

   ಇ. ನಿಮ್ಮ ನೆಚ್ಚಿನ ಸಿದ್ಧಾಂತಗಳಿಗಾಗಿ ಬೆಂಬಲವನ್ನು ಹುಡುಕಲು ಬಯಸುವುದು (ಉದಾಹರಣೆಗೆ ಸಭೆಗೆ ಕ್ರೈಸ್ತೀಯ ಸಾಮಾಜಿಕ ಕಾರ್ಯದ ಪ್ರಾಮುಖ್ಯತೆಯನ್ನು ಬೆಂಬಲಿಸಲು, ಕಡೇ ದಿನಗಳ ಬಗೆಗಿನ ಕೆಲ ದೃಷ್ಟಿಕೋನಗಳನ್ನು ಬೆಂಬಲಿಸಲು).

2. ನೀತಿವಂತರು ಮತ್ತು ಒಳ್ಳೆಯ ಕಾರ್ಯಗಳ ಪಟ್ಟಿಯ ನಡುವಿನ ಸಂಬಂಧವನ್ನು "ಕ್ರಿಯೆಗಳಿಂದ ರಕ್ಷಣೆ" ಎಂಬ ದೈವಶಾಸ್ತ್ರವನ್ನು ಅಳವಡಿಸಿಕೊಳ್ಳದೆ ಈ ರೀತಿಯಾಗಿ ವಿವರಿಸಬಹುದು: ನೀತಿವಂತನ ಜೀವನದ ವರ್ಣನೆಯು (ವ. 35, 36, 40) ಅವರ ರಕ್ಷಣೆಗೆ ಕಾರಣವಲ್ಲ (ಅವರು ರಕ್ಷಣೆ ಹೊಂದಿರುವುದು – ಕೇವಲ ಯೇಸುವಿನ ಮೇಲೆ ಇಟ್ಟ ನಂಬಿಕೆಯ ನಿಮಿತ್ತದಿಂದಾಗಿದೆ), ಆದರೆ ಅದು ಅವರ ರಕ್ಷಣೆಯ ಫಲಿತಾಂಶವಾಗಿದೆ ("ಆತ್ಮನ ಫಲ, ಕ್ರಿಸ್ತನನ್ನು ಅನುಕರಿಸುವುದು, ಪವಿತ್ರರಾಗಿರುವುದಕ್ಕೆ ಯೇಸು ಕರೆದಿರುವುದು" 2 ತಿಮೋಥಿ 1:9).

   ಇದಕ್ಕೆ ವಿರುದ್ಧವಾಗಿರುವವದು ಶಾಪಗ್ರಸ್ಥರಿಗೆ/ಅನೀತಿವಂತರಿಗೆ ಅಳವಡಿಕೆಯಾಗುತ್ತದೆ: ಅವರು ಯೇಸುವನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸದೆ ಇರುವುದರಿಂದ ಅವರು ಶಾಪಗ್ರಸ್ಥರಾಗಿದ್ದಾರೆ. ಅವರ ಅನೀತಿಯ ಫಲವನ್ನು ಅವರ ಪ್ರೀತಿಸದ ಮತ್ತು ಕಾಳಜಿವಹಿಸದ ಜೀವಿತದಲ್ಲಿ ಕಾಣಬಹುದು (ವ. 42-45).

# ಉತ್ತರಗಳು – ಯೋಹಾನನ ಸುವಾರ್ತೆಯಿಂದ ಎಂಟು ಅಧ್ಯಯನಗಳು

**1. ಉತ್ತರಗಳು: ಯೇಸು ಫಿಲಿಪ್ಪ ಮತ್ತು ನತಾನಯೇಲನನ್ನು ಕರೆಯುವುದು, ಯೋಹಾನ 1:43-51**

**ಪ್ರಶ್ನೆಗಳಿಗೆ ಉತ್ತರಗಳು**

1. –
2. –
3. ಯೇಸು ಗಲಿಲಾಯಕ್ಕೆ ಹೋಗಬೇಕೆಂದು ನಿರ್ಧರಿಸಿದನು (ವ. 43). ಗಲಿಲಾಯವು ಆತನ ಸ್ವದೇಶವಾಗಿತ್ತು. ಆದರಾತನು ಸ್ನಾನಿಕನಾದ ಯೋಹಾನನ್ನು ನೋಡಿ ಆತನಿಂದ ಯೊರ್ದನ್ ಹೊಳೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದಕ್ಕಾಗಿ ಯೂದಾಯಕ್ಕೆ ಬಂದಿದ್ದನು.
4. ತನ್ನೊಂದಿಗೆ ಬರಬೇಕೆಂದು ಫಿಲಿಪ್ಪನನ್ನು ಕೇಳಿಕೊಂಡನು (ವ. 43). ಯೇಸುವಿನಂತೆ ಫಿಲಿಪ್ಪನು ಗಲಿಲಾಯದವನಾಗಿದ್ದನು.
5. ಫಿಲಿಪ್ಪನು ನತಾನಯೇಲನಿಗೆ ಯೇಸುವು ಹಳೆಯ ಒಡಂಬಡಿಕೆಯ ಪ್ರವಾದನೆಗಳು ತಿಳಿಸಲ್ಪಟ್ಟವನೆಂಬುದಾಗಿ ಹೇಳಿದನು (ವ. 45). ಹಾಗಾಗಿ ಫಿಲಿಪ್ಪನು ಯೇಸುವು ವಾಗ್ದಾನ ಮಾಡಿದ ಕ್ರಿಸ್ತ(ಮೆಸ್ಸೀಯ)ನೆಂಬುದಾಗಿ ತಿಳಿದಿರಬೇಕು.
6. ಯೇಸುವು ನಜರೇತಿನವರಾಗಿರುವುದರಿಂದ ನತಾನಯೇಲನು ಆತನ ಬಗ್ಗೆ ಸಂದೇಹಪಟ್ಟನು (ವ. 46). ನೆರೆಹೊರೆಯ ಪಟ್ಟಣಗಳ ದೃಷ್ಟಿಯಲ್ಲಿ ನಜರೇತು ಒಳ್ಳೆಯ ಹೆಸರನ್ನು ಹೊಂದಿರಲಿಲ್ಲ. ನತಾನಯೇಲನು ಗಲಿಲಾಯದಲ್ಲಿರುವ ಕಾನಾ ಊರಿನವನಾಗಿದ್ದನು (ವ. 21:2).
7. ಫಿಲಿಪ್ಪನು ವಿವರಿಸಿ ಹೇಳುವುದರ ಮೂಲಕ ನತಾನಯೇಲನಿಗೆ ಮನವರಿಕೆ ಮಾಡಲು ಪ್ರಯತ್ನಿಸುವುದಿಲ್ಲ. ಬದಲಾಗಿ ಆತನು ಬಂದು ಯೇಸುವನ್ನು ನೋಡು ಎಂದು ಹೇಳುತ್ತಾನೆ (ವ. 46).
8. ಯೇಸು ನತಾನಯೇಲನನ್ನು ಇವನು ನಿಜವಾದ ಇಸ್ರಾಯೇಲನು, ಇವನಲ್ಲಿ ಕಪಟವಿಲ್ಲ ಎಂದು ಹೇಳುತ್ತಾನೆ (ವ. 47).
9. ಯೇಸು ನತಾನಯೇಲವನನ್ನು ಈ ಹಿಂದೆ ಅಂಜೂರದ ಮರದ ಕೆಳಗೆ ಕೂತುಕೊಂಡಿರುವಾಗ ನೋಡಿದ್ದನು (ವ. 48). ಬಹುಶಃ ನತಾನಯೇಲನು ಹಳೇ ಒಡಂಬಡಿಕೆಯ ಸುರುಳಿಗಳಲ್ಲೊಂದಾದ ಆದಿಕಾಂಡವನ್ನು ಅಭ್ಯಾಸಿಸುತ್ತಿದ್ದಿರಬೇಕು (ಪ್ರಶ್ನೆ 12 ರ ಉತ್ತರ ನೋಡಿ).
10. ಯೇಸುವಿನ ಬಗ್ಗೆ ನತಾನಯೇಲನು ಈ ಹೆಸರುಗಳನ್ನು ಬಳಸುತ್ತಾನೆ (ವ. 49):
    - ಗುರುವೇ ಇದರರ್ಥ ಬೋಧಕನೇ: ನತಾನಯೇಲನು ಯೇಸುವನ್ನು ಕರೆದ ರೀತಿಯನ್ನು ನೋಡಿದರೆ ಯೇಸುವನ್ನು ಆತನು ಒಬ್ಬ ಧಾರ್ಮಿಕ ಬೋಧಕನೆಂಬುದಾಗಿ ಪರಿಗಣಿಸಿರಬೇಕು.
    - ದೇವಕುಮಾರನು: ಈ ಹೆಸರನ್ನು "ಮೆಸ್ಸೀಯ/ಕ್ರಿಸ್ತನಿಗೆ" ಒಂದು ಸಮಾನಾರ್ಥಕವಾಗಿ ಬಳಸಲಾಗಿದೆ. ಅಲ್ಲದೆ ಇದು ಯೇಸು ತನ್ನ ತಂದೆಯೊಂದಿಗೆ ಹೊಂದಿರುವ ವಿಶಿಷ್ಟವಾದ ಸಂಬಂಧವನ್ನು ದೈವತ್ವವನ್ನು ಸಹ ಒಳಗೊಂಡಿದೆ (ಕೀರ್ತನೆ 2:7).
    - ಇಸ್ರಾಯೇಲಿನ ಅರಸನು: ಈ ಹೆಸರು ಯೇಸುವು ವಾಗ್ದಾನ ಮಾಡಲ್ಪಟ್ಟ ಮೆಸ್ಸೀಯನು, ದಾವೀದನ ಕುಲದಲ್ಲಿನ ಅರಸನು (2 ಸಮುವೇಲ 7:16), ರೋಮನ್ ಹಿಡಿತದಿಂದ ಇಸ್ರಾಯೇಲರನ್ನು ಬಿಡಿಸುವ ವಿಮೋಚಕನೆಂಬುದನ್ನು ತಿಳಿಸುತ್ತದೆ.
11. ಯೇಸು ಸ್ವತಃ ತನ್ನನ್ನು ಮನುಷ್ಯಕುಮಾರನೆಂಬುದಾಗಿ (ವ. 51) ಕರೆದುಕೊಳ್ಳುತ್ತಾನೆ. ಈ ಹೆಸರು "ಪುರುಷನಿಗೆ" ಸಮಾನಾರ್ಥಕವಾಗಿದೆ, ಅಲ್ಲದೆ ಇದು ಒಂದು ಮೆಸ್ಸೀಯನ ಕುರಿತ ಹೆಸರು ಸಹ ಆಗಿದೆ (ಹೋಲಿಸಿ ದಾನಿಯೇಲ 7:13-14).
12. ಯೇಸು ನತಾನಯೇಲನಿಗೆ ನೀನು ಇದಕ್ಕಿಂತ ಹೆಚ್ಚಿನ ಕಾರ್ಯಗಳನ್ನು ನೋಡುವಿ ಎಂದು ವಾಗ್ದಾನ ಮಾಡುತ್ತಾನೆ (ವ. 50). ನತಾನಯೇಲನು ಅಂಜೂರದ ಮರದ ಕೆಳಗೆ ಕೂತುಕೊಂಡು ಬಹುಶಃ ಯಾಕೋಬನ ಸುಂದರವಾದ ಕನಸಿನ ಕುರಿತ ಹಳೇ ಒಡಂಬಡಿಕೆಯ ಸುರುಳಿಯನ್ನು ಓದುತ್ತಿರುವುದನ್ನು ಸೂಚಿಸಿ ಹೇಳಿರಬಹುದು. ಅದೇ ಮುಂದಿನ ವಚನಗಳಲ್ಲಿನ ಯೇಸುವಿನ ಮಾತನ್ನು ವಿವರಿಸುತ್ತದೆ. ವಚನ 51 ರ ಟಿಪ್ಪಣಿಯನ್ನು ಸಹ ನೋಡಿರಿ.

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. ಮೊದಲ ಶಿಷ್ಯರು ಯೇಸುವನ್ನು ಹೇಗೆ ಕೂಡಿಕೊಂಡರೆಂಬ ಯೋಹಾನನ ವಿವರವು (ಯೋಹಾನ 1:35-42) ನಾವು ಸಮನಾಂತರ ಸುವಾರ್ತೆಗಳಲ್ಲಿ ಕಾಣುವುದಕ್ಕಿಂತ ವಿಭಿನ್ನವಾಗಿದೆ (ನೋಡಿ ಮಾರ್ಕ 1:14-20):
   - ಯೇಸು ಸ್ನಾನಿಕನಾದ ಯೋಹಾನನಿಂದ ದೀಕ್ಷಾಸ್ನಾನಮಾಡಿಸಿಕೊಳ್ಳುವುದಕ್ಕಾಗಿ ಗಲಿಲಾಯವನ್ನು ಬಿಟ್ಟು ಯೂದಾಯಕ್ಕೆ ಹೋಗುತ್ತಾನೆ. ಸ್ನಾನಿಕನಾದ ಯೋಹಾನನಿಗೆ ಪ್ಯಾಲೆಸ್ತೀನಿನುದ್ದಕ್ಕೂ ಅನೇಕ ಹಿಂಬಾಲಕರಿದ್ದರು. ಅವರೊಳಗೆ ಕೆಲವರು ಗಲಿಲಾಯದಿಂದ (ಅಂದ್ರೆಯ ಮತ್ತು ಇನ್ನೊಬ್ಬನು ಯೋಹಾನ 1:37, 40 ಈ ವ್ಯಕ್ತಿ ಬಹುಶಃ ಸುವಾರ್ತೆ ಬರೆದ ಯೋಹಾನನಾಗಿರಬಹುದು) ಮತ್ತು ಫಿಲಿಪ್ಪ (ವ. 43) ಮತ್ತು ನತಾನಯೇಲ (ವ. 47) ಬಂದಿದ್ದರು.
   - ಸ್ವಲ್ಪಕಾಲವಾದ ನಂತರ ಯೇಸುವನ್ನೊಳಗೊಂಡು ಗಲಿಲಾಯದವರಾದ ಇವರು ಗಲಿಲಾಯದಲ್ಲಿ ತಮ್ಮ ನಿತ್ಯಕಾರ್ಯಗಳಿಗೆ ಹಿಂತಿರುಗಿದರು. ಯೇಸುವು ಗಲಿಲಾಯದಲ್ಲಿ ತನ್ನ ಸೇವೆಯನ್ನು ಪ್ರಾರಂಭಿಸಿದಾಗ ಆತನವರನ್ನು ತನ್ನನ್ನು ಹಿಂಬಾಲಿಸಬೇಕೆಂದು ಕರೆಯುತ್ತಾನೆ. ಮೀನು ಹಿಡಿಯುತ್ತಿದ್ದವರು (ಪೇತ್ರ ಮತ್ತು ಅವನ ತಮ್ಮ ಅಂದ್ರೆಯ, ಯಾಕೋಬ ಮತ್ತು ಆತನ ಸೋದರ ಯೋಹಾನ) ತಮ್ಮ ದೋಣಿಗಳನ್ನು ಮತ್ತು ಬಲೆಗಳನ್ನು ಬಿಟ್ಟು ಯೇಸುವಿನ ಶಿಷ್ಯರಾಗುತ್ತಾರೆ (ಮಾರ್ಕ 1:14-20).
2. ಯೇಸುವಿನ ಬಳಿಗೆ ಜನರನ್ನು ಕರೆತರುವುದರ ಬಗ್ಗೆ ಯೋಹಾನ 1:40-49 ರಿಂದ ನಾವು ಕನಿಷ್ಠ ಎರಡು ಪ್ರಮುಖ ಪಾಠಗಳನ್ನು ಕಲಿಯುತ್ತೇವೆ:

   ಅ. ವೈಯಕ್ತಿಕ ಬೇಡಿಯು/ಸಂಪರ್ಕವು ಜನರನ್ನು ಯೇಸುವಿನ ಬಳಿಗೆ ನಡೆಸುತ್ತದೆ:
   - ಅಂದ್ರೆಯನು ತನ್ನ ಸಹೋದರನಾದ ಸೀಮೋನ ಪೇತ್ರನನ್ನು ಸಂಪರ್ಕಿಸುತ್ತಾನೆ, ವ. 41
   - ಫಿಲಿಪ್ಪನು ನತಾನಯೇಲನನ್ನು ಸಂಪರ್ಕಿಸುತ್ತಾನೆ, ವ. 45

   ಆ. ಬಂದು ನೋಡಲು ಆಹ್ವಾನ:
   - ಫಿಲಿಪ್ಪನು ನತಾನಯೇಲನಿಗೆ ಬಂದು ನೋಡು ಎಂದು ಹೇಳುತ್ತಾನೆ (ವ. 46). ಯೇಸುವಿನ ಬಗ್ಗೆ ದೀರ್ಘವಾದ ವಿವರವನ್ನು ಕೊಡುವುದರ ಬದಲಾಗಿ ಫಿಲಿಪ್ಪನು ತನ್ನ ಸ್ನೇಹಿತನನ್ನು ಬಂದು ನೀನೇ ನೋಡೆಂದು ಆಹ್ವಾನಿಸುತ್ತಾನೆ.

## 2. ಉತ್ತರಗಳು: ಗಲಿಲಾಯದ ಕಾನಾ ಊರಿನಲ್ಲಿನ ಮದುವೆ, ಯೋಹಾನ 2:1-12

### ಪ್ರಶ್ನೆಗಳಿಗೆ ಉತ್ತರಗಳು

1. ಕಾನಾ ಊರಿನ ಮದುವೆಯ ವೇಳೆ ಒಂದು ದೊಡ್ಡ ಸಮಸ್ಯೆಯುಂಟಾಯಿತು. ಮದುಮಗನ ಕುಟುಂಬದವರಿಗೆ ಅಲ್ಲಿ ಬೇಕಾದ ದ್ರಾಕ್ಷಾರಸದ ಪ್ರಮಾಣದ ಲೆಕ್ಕ ಸರಿಯಾಗಿ ಸಿಗಲಿಲ್ಲ. ಹಾಗಾಗಿ ಅಲ್ಲಿದ್ದ ಎಲ್ಲಾ ದ್ರಾಕ್ಷಾರಸ ಮುಗಿದುಹೋಯಿತು ಮತ್ತು ಕುಟುಂಬಕ್ಕೆ ಅವಮಾನವಾಗುವಂತಿತ್ತು (ವ. 3).
2. ಈ ಸಮಸ್ಯೆಯ ಬಗ್ಗೆ ಮರಿಯಳು ಯೇಸುವಿನ ಬಳಿ ಹೇಳಿದಾಗ ಆತನು ನಕಾರಾತ್ಮಕವಾಗಿ ಪ್ರತಿಕ್ರಿಸಯಿಸಿದನು. ಆತನದರಲ್ಲಿ ಪಾಲ್ಗೊಳ್ಳಲು ಬಯಸಲಿಲ್ಲ ಯಾಕೆಂದರೆ ಆತನ ಸಮಯ ಇನ್ನೂ ಬಂದಿರಲಿಲ್ಲ (ವ. 3-4). ಇದೇ ರೀತಿಯ ಮಾತನ್ನು ನಾವು ಯೋಹಾನನ ಸುವಾರ್ತೆಯಲ್ಲಿ ಕೆಲವಡೆ ಕಾಣಬಹುದು (ನೋಡಿ 7:6, 8, 30, 8:20).
3. ಆದರೆ ಆತನ ತಾಯಿಯಾದ ಮರಿಯಳು ನಿರಾಶಳಾಗಲಿಲ್ಲ. ಆದರೂ ಆಕೆ ಇಂತಹ ಕ್ಲಿಷ್ಟಕರ ಸನ್ನಿವೇಶದಲ್ಲಿ ಯೇಸು ಮಧ್ಯಪ್ರವೇಶಿಸುವನೆಂಬುದಾಗಿ ನಿರೀಕ್ಷಿಸಿದಳು. ಹಾಗಾಗಿ ಆಕೆ ಸೇವಕರಿಗೆ ಆತನು ಏನು ಹೇಳುತ್ತಾನೋ ಹಾಗೆ ಮಾಡಿರಿ ಎಂದು ಸಲಹೆಕೊಟ್ಟಳು (ವ. 5). ಇದು ಯೇಸುವಿನಲ್ಲಿನ ಆಕೆಯ ಭರವಸವನ್ನು ತೋರಿಸುತ್ತದೆ.
4. ಯೇಸು ಸೇವಕರಿಗೆ ಈ ಸೂಚನೆ(ಸಲಹೆ)ಗಳನ್ನು ಕೊಡುತ್ತಾನೆ (ವ. 7-8):
   - ಆತನವರಿಗೆ ಮೊದಲು ಅಲ್ಲಿದ್ದ ಆರು ದೊಡ್ಡ ಕಲ್ಲಿನ ಬಾನೆಗಳಲ್ಲಿ ನೀರನ್ನು ತುಂಬಲು ಹೇಳುತ್ತಾನೆ, ಈ ಕಲ್ಲಿನ ಬಾನೆಗಳನ್ನು ಯೆಹೂದಿ ಶುದ್ಧಾಚಾರದ ವಿಧಿಗಳಿಗಾಗಿ ನೀರನ್ನು ಸಂಗ್ರಹಸಿಡುವುದಕ್ಕಾಗಿ ಬಳಸುತ್ತಿದ್ದರು. ಬಹುಶಃ ಆ ಸಮಯದಲ್ಲಿ ಆ ಬಾನೆಗಳು ಖಾಲಿಯಾಗಿದ್ದವು. ಅಥವಾ ಬಹುಶಃ ಸೇವಕರು ಅದನ್ನು ಖಾಲಿ ಮಾಡಿ ಅನಂತರ ಶುದ್ಧವಾದ ನೀರನ್ನು ತುಂಬಿರಬೇಕು.
   - ಅನಂತರ ಯೇಸು ಸೇವಕರ ಬಳಿ ನೀರನ್ನು ತರಲು ಹೇಳಿದಾಗ ಮತ್ತು ಅದನ್ನು ಪಾರುಪತ್ಯಾಗಾರನು ರುಚಿನೋಡಿದನು. ಆದರೆ ಆತನವರಿಗೆ ಅಲ್ಲಿ ಏನಾಯಿತೆಂಬುದನ್ನು ಮುಖ್ಯಪಾರುಪತ್ಯಗಾರನಿಗೆ ತಿಳಿಸಿರಿ ಎಂದು ಹೇಳಲಿಲ್ಲ.
5. ಪಾರುಪತ್ಯಗಾರನು ದ್ರಾಕ್ಷಾರಸವನ್ನು ರುಚಿನೋಡಿದಾಗ ಆಶ್ಚರ್ಯಗೊಳ್ಳುತ್ತಾನೆ, ಯಾಕೆಂದರೆ ಯೇಸು ದ್ರಾಕ್ಷಾರಸನ್ನಾಗಿ ಮಾಡಿದ ನೀರಿನ ನಿಮಿತ್ತದಿಂದಲ್ಲ, ಆದರೆ ದ್ರಾಕ್ಷಾರಸದ ಮಧುರವಾದ ರುಚಿಯ ನಿಮಿತ್ತ. ಮದಲಿಂಗನ ಕುಟುಂಬದವರು ಉತ್ತಮವಾದ (ಹಿಂದಿನದ) ದ್ರಾಕ್ಷಾರಸವನ್ನು ಮೊದಲು ಕೊಟ್ಟು ಅಮಲೇರಿದ ಮೇಲೆ ಸಾಧಾರಣವಾದ (ಕಿರಿದಿನದ) ದ್ರಾಕ್ಷಾರಸವನ್ನು ಕೊಡಬೇಕೆಂದು ನಿರೀಕ್ಷಿಸಿದ್ದನು. ಆದರೆ ಕುಟುಂಬವು ಹಿರಿದಿನದ ದ್ರಾಕ್ಷಾರಸವನ್ನು ಇನ್ನೂ ಇಟ್ಟುಕೊಂಡದ್ದು ಆತನಿಗೆ ಆಶ್ಚರ್ಯವನ್ನುಂಟುಮಾಡಿತು (ವ. 10).
6. ಗಲಿಲಾಯದ ಕಾನಾ ಊರಿನಲ್ಲಾದ ಘಟನೆಯನ್ನು ಯೋಹಾನನು ಈ ರೀತಿ ವರ್ಣಿಸುತ್ತಾನೆ (ವ. 11):
   - ಇದು ಯೇಸು ಮಾಡಿದ ಮೊದಲನೆಯ ಸೂಚಕಕಾರ್ಯವಾಗಿತ್ತು. ಯೋಹಾನನು ಯಾವಾಗಲೂ ಯೇಸುವಿನ ಅದ್ಭುತಗಳನ್ನು "ಸೂಚಕಕಾರ್ಯ" ಗಳೆಂಬುದಾಗಿ ಹೇಳುತ್ತಾನೆ. ಈ ಪದವು ಅದ್ಭುತಗಳ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ. ಅವು ಯೇಸುವಿನ ಮಹಿಮೆ(ಪ್ರಭಾವ)ಯನ್ನು ಪ್ರಕಟಿಸುತ್ತವೆ (ಹೋಲಿಸಿ 1:14) ಮತ್ತು ಶಿಲುಬೆ ಮೇಲಿನ ಆತನ ಬಿಡುಗಡೆಯ ಕಾರ್ಯವನ್ನು ಸೂಚಿಸುತ್ತವೆ.
   - ಈ ಮೊದಲ ಸೂಚಕಕಾರ್ಯವು ಭವಿಷ್ಯದಲ್ಲಿ ತನ್ನ ಜನರಿಗಾಗಿ ದೇವರು ವಾಗ್ದಾನ ಮಾಡಿದ ಸಮೃದ್ಧಿಕರವಾದ ಆಶೀರ್ವಾದಗಳ ಕುರಿತ ಹಳೇ ಒಡಂಬಡಿಕೆಯ ಪ್ರವಾದನೆಗಳನ್ನು ಪ್ರತಿಧ್ವನಿಸುತ್ತದೆ (ಉದಾ ನೋಡಿ. ಯೋವೇಲ 3:18 ಮತ್ತು ಆಮೋಸ 9:13). ಈ ಸೂಚಕಕಾರ್ಯವು ಯೇಸು ಯಾರೆಂದು ತಿಳಿದುಕೊಳ್ಳುವಂತೆ ಆತನ ಶಿಷ್ಯರಿಗೆ ಯೇಸುವಿನ ಮಹಿಮೆಯನ್ನು ಪ್ರಕಟಪಡಿಸಿತು. ಮತ್ತು ಅವರು ಆತನಲ್ಲಿ ನಂಬಿಕೆಯಿಟ್ಟರು.

7. ಮದುವೆಯ ನಂತರ ಯೇಸು ತನ್ನ ಕುಟುಂಬ ಮತ್ತು ಶಿಷ್ಯರೊಂದಿಗೆ ಕಪೆರ್ನೌಮಿಗೆ ಹೋಗುತ್ತಾನೆ (ವ. 12).

8. –

**ಆಲೋಚಿಸಿರಿ ಮತ್ತು ಚರ್ಚಿಸಿರಿಮೆಲಿನ ಟಿಪ್ಪಣಿಗಳು**

-



## 3. ಉತ್ತರಗಳು: ಯೇಸು ಮತ್ತು ನಿಕೊದೇಮನು, ಯೋಹಾನ 3:1-18

### ಪ್ರಶ್ನೆಗಳಿಗೆ ಉತ್ತರಗಳು

1. ನಿಕೊದೇಮನ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 1-2):
   - ಆತನೊಬ್ಬ ಫರಿಸಾಯನಾಗಿದ್ದು ಯೆಹೂದ್ಯರ ಹಿರೀ ಸಭೆಯ ಒಬ್ಬ ಸದಸ್ಯನಾಗಿದ್ದನು.
   - ಆತನು ಯೇಸುವನ್ನು ನೋಡಲು ರಾತ್ರಿವೇಳೆ ಬರುತ್ತಾನೆ.
   - ಯೇಸು ಮಾಡಿದ ಸೂಚಕಕಾರ್ಯಗಳ ನಿಮಿತ್ತ ದೇವರಿಂದ ಬಂದ ಒಬ್ಬ ಬೋಧಕನೆಂಬುದಾಗಿ ತಿಳಿದಿದ್ದನು.
2. ದೇವರ ರಾಜ್ಯವನ್ನು ಕಾಣುವುದರ ವಚನ 3 ರಲ್ಲಿ ಯೇಸು "ಹೊಸದಾಗಿ ಹುಟ್ಟಬೇಕು" ಎಂಬ ರೂಪಾಲಂಕಾರವನ್ನು ಬಳಸುತ್ತಾನೆ. ಹೀಗೆ ದೇವರ ರಾಜ್ಯವನ್ನು ಕಾಣಬೇಕಾದರೆ ಒಬ್ಬನು ಹೊಸದಾಗಿ ಹುಟ್ಟಬೇಕು ಅಥವಾ ಮೇಲಣಿಂದ ಹುಟ್ಟಬೇಕು ಅಥವಾ ದೇವರಿಂದ ಹುಟ್ಟಬೇಕು.
3. ಯೇಸುವಿನ ರೂಪಾಲಂಕಾರವು ನಿಕೊದೇಮನಿಗೆ ಅರ್ಥವಾಗುವುದಿಲ್ಲ, ಆದರೆ ಆತನು ಯೇಸು ಶಾರೀರಿಕ ಮರುಜನ್ಮದ ಬಗ್ಗೆ ಹೇಳುತ್ತಾನೆಂಬುದಾಗಿ ಯೋಚಿಸಿದನು (ವ. ).
4. ತನ್ನ ಈ ರೂಪಾಲಂಕಾರವನ್ನು ಯೇಸು ಈ ರೀತಿ ವಿವರಿಸುತ್ತಾನೆ (ವ. 5-6): ಹೊಸದಾಗಿ ಹುಟ್ಟುವುದೆಂದರೆ ಆತ್ಮೀಕವಾದ ಜನ್ಮವಾಗಿದೆ, ಇದು ಶಾರೀರಿಕ ಹುಟ್ಟಿನಂತೆ ಅಲ್ಲ. ಒಬ್ಬನು ದೇವರಾತ್ಮನಿಂದ, ಮೇಲಣಿಂದ ಹುಟ್ಟಬೇಕಾಗಿದೆ.
5. ನಿಕೊದೇಮನು ಯೇಸುವಿಗೆ "ಇದು ಆಗುವುದು ಹೇಗೆ?" (ವ. 9) ಎಂಬ ಪ್ರಶ್ನೆಯನ್ನು ಕೇಳುತ್ತಾನೆ. ತಾನು ಪುನಃ ಹುಟ್ಟುವುದು ಹೇಗೆಂಬುದನ್ನು ಯೇಸುವು ವಿವರಿಸಬೇಕೆಂಬುದಾಗಿ ಆತನು ಬಯಸಿರಬಹುದು.
6. ತಾಮ್ರದ ಸರ್ಪ ಮತ್ತು ಶಿಲುಬೆಯ ಮೇಲಿನ ತನ್ನ ಸ್ವಂತ ಸಾವಿನ ನಡುವೆ ಯೇಸು ಈ ಹೋಲಿಕೆ ಮಾಡುತ್ತಾನೆ (ವ. 14-15):
   - ಅಡವಿಯಲ್ಲಿ ದೇವರು ಮೋಶೆಗೆ ಒಂದು ತಾಮ್ರದ ಸರ್ಪವನ್ನು ಮಾಡಿ ಎತ್ತರದಲ್ಲಿಡಬೇಕೆಂಬುದಾಗಿ ಹೇಳುತ್ತಾನೆ. ಸರ್ಪ ಕಡಿತದಿಂದ ಸಾವಿನಂಚಿನಲ್ಲಿರುವವನು ಈ ತಾಮ್ರದ ಸರ್ಪವನ್ನು ನೋಡಿದರೆ ದೇವರು ಆತನನ್ನು ಬದುಕಿಸುತ್ತಿದ್ದನು.
   - ಅದೇ ರೀತಿ ದೇವರು ಯೇಸುವನ್ನು ಶಿಲುಬೆಯ ಮೇಲೆ ತೂಗುತ್ತಿರುವಂತೆ ಮಾಡಿದನು, ಆ ಮೂಲಕ ಆತನನ್ನು ನೋಡಿದವರೆಲ್ಲರೂ (ಆತನನ್ನು ನಂಬಿದವರು) ತಮ್ಮ ಪಾಪಗಳಲ್ಲಿ ಸಾಯದೆ ನಿತ್ಯಜೀವವನ್ನು ಹೊಂದುವಂತಾಯಿತು.
7. ತನ್ನನ್ನು ನಂಬುವವರೆಲ್ಲರಿಗೆ ನಿತ್ಯಜೀವವನ್ನು ಕೊಡುವುದಕ್ಕಾಗಿ ಯೇಸು ಲೋಕಕ್ಕೆ ಕಳುಹಿಸಲ್ಪಟ್ಟಿದ್ದಾನೆ (ವ. 16).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ದೇವರ ರಾಜ್ಯದ ಬಗ್ಗೆ ಹೆಚ್ಚಾಗಿ ತಿಳಿದುಕೊಳ್ಳಬೇಕೆಂದು ನಿಕೊದೇಮನು ಯೇಸುವಿನ ಬಳಿಗೆ ಬರುತ್ತಾನೆ (ಹೋಲಿಸಿ ವ. 3). ನನ್ನ ಪ್ರಕಾರ ರಾತ್ರಿವೇಳೆಯು ತನಗೂ ಮತ್ತು ಯೇಸುವಿಗೆ ಒಂದು ಸರಿಯಾದ ಸಮಯವಾಗಿರುವುದರಿಂದ ಆತನು ರಾತ್ರಿವೇಳೆ ಬರುತ್ತಾನೆ. ಹಗಲಿನ ವೇಳೆ ಅವರಿಬ್ಬರೂ ತೀರಾ ಕಾರ್ಯಪ್ರವೃತ್ತರಾಗಿದ್ದರು ಮತ್ತು ಯೇಸುವಿನೊಂದಿಗೆ ಸಂಭಾಷಿಸುವುದಕ್ಕಾಗಿ ಅಡೆತಡೆಯಿಲ್ಲದ ಸಮಯ ಬೇಕಾಗಿತ್ತು.
2. –

## 4. ಉತ್ತರಗಳು: ಯೇಸು ಮತ್ತು ಸಮಾರ್ಯದ ಸ್ತ್ರೀ, ಯೋಹಾನ 4:3-42

### ಪ್ರಶ್ನೆಗಳಿಗೆ ಉತ್ತರಗಳು

1. –
2. ಯೇಸು ಪ್ರಯಾಣದ ನಿಮಿತ್ತ ಧಣಿದಿದ್ದರಿಂದ ಸುಖರೆಂಬ ಊರಿನ ಬಾವಿಯ ಬಳಿ ಆತನು ಕೂತಿದ್ದನು (ವ. 6).
3. ಮಧ್ಯಾಹ್ನದ ವೇಳೆ ಸಮಾರ್ಯದ ಸ್ತ್ರೀ ಬಾವಿಯ ಬಳಿಗೆ ನೀರನ್ನು ಸೇದುವುದಕ್ಕಾಗಿ ಬಂದಳು (ವ. 6-7). ಅದು ಸ್ತ್ರೀಯರು ಸಾಮಾನ್ಯವಾಗಿ ಬಾವಿಯ ಬಳಿಗೆ ಹೋಗುವ ಸಮಯವಾಗಿರಲಿಲ್ಲ: ಹೆಚ್ಚಾಗಿ ಅವರು ಸೂರ್ಯನ ಬಿಸಿಲಿಗೆ ಬರದೆ ಸಂಜೆ ವೇಳೆ ತಂಪಾದಾಗ ಬರುತ್ತಿದ್ದರು. ಬಹುಶಃ ಈಕೆ ತನ್ನ ಕೌಟಂಬಿಕ ಜೀವಿತದ ಬಗ್ಗೆ ನಾಚಿಕೊಂಡಿರಬೇಕು.
4. ಶಿಷ್ಯರು ಆಹಾರ ಕೊಳ್ಳುವುದಕ್ಕಾಗಿ ಊರೊಕ್ಕೆ ಹೋಗಿದ್ದರಿಂದ ಆ ಸಮಾರ್ಯದಲ್ಲಿ ಅವರು ಅಲ್ಲಿ ಇರುಲಿಲ್ಲ (ವ. 8).
5. ಯೇಸು ಕುಡಿಯುವುದಕ್ಕೆ ನೀರನ್ನು ಕೇಳಿದಾಗ ಆ ಸ್ತ್ರೀ ಆಶ್ಚರ್ಯಗೊಂಡಳು, ಯಾಕೆಂದರೆ ಆತನೊಬ್ಬ ಯೆಹೂದ್ಯನಾಗಿದ್ದನು ಮತ್ತು ಈ ರೀತಿ ಸಮಾರ್ಯರೊಂದಿಗೆ ಮಾತನಾಡುವುದು ಅಶುದ್ಧವೆಂಬುದಾಗಿ ಯೆಹೂದ್ಯರು ಪರಿಗಣಿಸಿದ್ದರು (ವ. 7-9).
6. ದೇವರ ರಾಜ್ಯದಲ್ಲಿ ನಿತ್ಯಜೀವವನ್ನು ಕೊಡುವ ರಕ್ಷಣೆಯ ನೀರಾದ ಜೀವಕರವಾದ ನೀರಿನ ಕೊಡುಗೆಯನ್ನು ಆ ಸ್ತ್ರೀ ತಪ್ಪಾಗಿ ಅರ್ಥೈಸಿಕೊಳ್ಳುತ್ತಾಳೆ. ಬದಲಾಗಿ ಆಕೆ ಆತನ ಬಳಿಯಲ್ಲಿ ಹಗ್ಗವಿಲ್ಲದೆ ಕೊಡವಿಲ್ಲದೆ ನೀರನ್ನು ಬಾವಿಯಿಂದ ಹೇಗೆ ಸೇಯುತ್ತಾನೆಂದು ಯೋಚಿಸಿದಳು (ವ. 11-12).
7. "ಜೀವಕರವಾದ ನೀರನ್ನು" ಯೇಸು ಹೀಗೆ ವರ್ಣಿಸುತ್ತಾನೆ (ವ. 13-14): ಇದನ್ನು ಕುಡಿಯುವವರಿಗೆ ಎಂದಿಗೂ ನೀರಡಿಕೆಯಾಗುವುದಿಲ್ಲ. ಇದು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನು ಉಂಟುಮಾಡುವುದು.
8. ಯೇಸುವಿನ ಜೀವಕರವಾದ ನೀರಿನ ಕುರಿತ ವಿವರಣೆಯನ್ನು ಪುನಃ ಆ ಸ್ತ್ರೀಯು ತಪ್ಪಾಗಿ ಅರ್ಥೈಸಿಕೊಳ್ಳುತ್ತಾಳೆ. ಯಾಕೆಂದರೆ ಆಕೆಯು ತಾನು ಆ ಬಾವಿಯಿಂದ ನೀರನ್ನು ಸೇದುವುದು ತಪ್ಪುತ್ತದೋ ಎಂಬುದಾಗಿ ಯೋಚಿಸಿ ಆಕೆ ಆ ನೀರನ್ನು ಕೊಡು ಎಂದು ಹೇಳುತ್ತಾಳೆ (ವ. 15).
9. ಆ ಸ್ತ್ರೀಯ ಕುಟುಂಬದ ಬಗ್ಗೆ ನಾವು ಈ ಸಂಗತಿಗಳನ್ನು ತಿಳಿದುಕೊಳ್ಳುತ್ತೇವೆ (ವ. 16-18):
   - ಆಕೆಗೆ ಗಂಡನಿರಲಿಲ್ಲ
   - ಆಕೆಯು ಐದು ಬಾರಿ ಮದುವೆಯಾಗಿದ್ದಳು
   - ಈಗ ಆಕೆ ಮದುವೆಯಾಗದೆ ಒಬ್ಬನೊಂದಿಗೆ ಜೀವಿಸುತ್ತಿದ್ದಳು
10. ಯೆಸುವು ಆಕೆಯ ಹಿಂದಿನ ಮತ್ತು ಈಗಿನ ಕೌಟುಂಬಿಕ ಜೀವಿತದ ಬಗ್ಗೆ ಆಕೆಗೆ ಹೇಳಿದ್ದರಿಂದ ಆತನೊಬ್ಬ ಪ್ರವಾದಿಯಾಗಿದ್ದಾನೆ ಎಂದು ಆಕೆ ತಿಳಿದುಕೊಳ್ಳುತ್ತಾಳೆ. ಕೇವಲ ಪ್ರವಾದಿ ಒಬ್ಬನಿಗೆ ಮಾತ್ರ ಈ ರೀತಿಯ ಅಂತರ್ಯದ ಜ್ಞಾನವಿರುತ್ತದೆ (ವ. 17-19).
11. ಯೇಸುವು ಆಕೆಯ ಖಾಸಗಿ ಜೀವನದ ಬಗ್ಗೆ ಹೇಳಿದ್ದಕ್ಕೆ ಆಕೆಗೆ ಮುಜುಗರವೆನಿಸಿರಬೇಕು ಹಾಗಾಗಿ ಆಕೆ ಮಾತನ್ನು ಬದಲಿಸುತ್ತಾಳೆ ಮತ್ತು ಸಮಾರ್ಯರು ಮತ್ತು ಯೆಹೂದ್ಯರ ನಡುವಿನ ಧಾರ್ಮಿಕ ಭಿನ್ನತೆಯ ಬಗ್ಗೆ ತಿಳಿಸುತ್ತಾಳೆ: ಯೆರೂಸಲೇಮು ಯೆಹೂದ್ಯರಿಗೆ ಇರುವಂತೆಯೇ ಗೆರಿಜಿಮ್ ಬೆಟ್ಟವು ಸಮಾರ್ಯರಿಗೆ ವಿಶೇಷವಾದ ಒಂದು ಆರಾಧನಾ ಸ್ಥಳವಾಗಿತ್ತು (ವ. 20).
12. ಯೇಸು ಆ ಸ್ತ್ರೀಗೆ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದೆ ಎಂದು ಹೇಳಿದನು (ವ. 22). ಬಹುಶಃ ಆತನು ಲೋಕದ ರಕ್ಷಕನಾದ ತಾನೂ ಒಬ್ಬ ಯೆಹೂದ್ಯನಾಗಿದ್ದಾನೆಂಬ ವಾಸ್ತವಾಂಶವನ್ನು ಸೂಚಿಸಿ ಹೇಳಿರಬಹುದು.
13. ಆರಾಧನೆ ಬಗ್ಗೆ ಆ ಸ್ತ್ರೀಗೆ ಯೇಸು ಈ ಸಂಗತಿಗಳನ್ನು ಹೇಳಿದನು (ವ. 21-24):
    - ಭವಿಷ್ಯದಲ್ಲಿ ಆರಾಧನೆಯು ಒಂದು ನಿರ್ದಿಷ್ಟ ಸ್ಥಳಕ್ಕೆ ಅಂದರೆ ಗೆರಿಜಿಮ್ ಬೆಟ್ಟಕ್ಕಾಗಲಿ ಅಥವಾ ಯೆರೂಸಲೇಮಿಗಾಗಲಿ ಸೀಮಿತವಾಗಿರಲ್ಲ.

- ದೇವರು ಯೆಹೂದ್ಯರಿಂದಲೂ ಸಮಾರ್ಯರಿಂದಲೂ ಆರಾಧಿಸಲ್ಪಡುತ್ತಾನೆ. ಆದರೆ ಯೆಹೂದ್ಯರು ದೇವರ ಬಗ್ಗೆ ಮತ್ತು ಆತನನ್ನು ಹೇಗೆ ಆರಾಧಿಸಬೇಕೆಂಬುದರ ಬಗ್ಗೆ ತಿಳಿದಿದ್ದರು, ಯಾಕೆಂದರೆ ಅವರ ಬಳಿಯಲ್ಲಿ ಹಳೇ ಒಡಂಬಡಿಕೆಯ ಎಲ್ಲಾ ಪುಸ್ತಕಗಳಿದ್ದವು. ಆದರೆ ಸಮಾರ್ಯದವರು ಪಂಚಕಾಂಡವನ್ನು ಮಾತ್ರ ದೇವರ ಮಾತೆಂಬುದಾಗಿ ಪರಿಗಣಿಸಿದ್ದರು.
- ನಿಜವಾದ ಆರಾಧಕರು ಆತನನ್ನು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸುವ ಕಾಲವು ಆಗಲೇ ಬಂದಿತ್ತು.
- ದೇವರು ಆತ್ಮಸ್ವರೂಪನಾಗಿದ್ದಾನೆ. ಆದುದರಿಂದ ಆತನನ್ನು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಮಾತ್ರ ಆರಾಧಿಸಬಹುದಾಗಿದೆ.

14. ಮೆಸ್ಸೀಯನ ಬಗ್ಗೆ ಆ ಸ್ತ್ರೀ ಎರಡು ಸಂಗತಿಗಳನ್ನು ಹೇಳುತ್ತಾಳೆ (ವ. 25):
    - ಮೆಸ್ಸೀಯನು ನಿಜವಾಗಲೂ ಬರುತ್ತಾನೆ ಎಂಬುದಾಗಿ ಆಕೆ ತಿಳಿದಿದ್ದಳು ಮತ್ತು ನಂಬಿದ್ದಳು.
    - ಮೆಸ್ಸೀಯನು ಬಂದಾಗ ದೇವರ ಬಗ್ಗೆ ಮತ್ತು ಆತನನ್ನು ಹೇಗೆ ಆರಾಧಿಸಬೇಕೆಂಬುದರ ಬಗ್ಗೆ ಎಲ್ಲವನ್ನು ನವಿವರಿಸುವನು.
15. ಆ ಸ್ತ್ರೀಯ ಬೇಡಿಕೆಗೆ ಯೇಸು ಆಕೆಯೊಂದಿಗೆ ಮಾತಾಡುತ್ತಿರುವ ತಾನೇ ಆ ಮೆಸ್ಸೀಯನು (ವ. 26) ಎಂಬ ದೃಢೀಕರಣದೊಂದಿಗೆ ಪ್ರತಿಕ್ರಯಿಸುತ್ತಾನೆ.
16. ಶಿಷ್ಯರುಗಳು ಆಹಾರ(ಊಟ)ದೊಂದಿಗೆ ಹಿಂತಿರುಗಿದಾಗ ಯೇಸು ಒಬ್ಬ ಹೆಂಗಸಿನೊಂದಿಗೆ ಮಾತಾಡುತ್ತಿರುವುದರಿಂದ ಅವರು ಆಶ್ಚರ್ಯಪಟ್ಟರು. ತಾವು ಆತನನ್ನು ಒಬ್ಬ ಗುರು ಮತ್ತು ಧಾರ್ಮಿಕ ಬೋಧಕನೆಂಬುದಾಗಿ ಗೌರವಿಸಿದ್ದರಿಂದ ಆತನೊಬ್ಬ ಹೆಂಗಸಿನೊಂದಿಗೆ ಈ ರೀತಿ ಒಂದು ಸಾರ್ವಜನಿಕ ಸ್ಥಳದಲ್ಲಿ ಮಾತನಾಡುವುದನ್ನು ಅವರು ನಿರೀಕ್ಷಿಸಿರಲಿಲ್ಲ. ಅಲ್ಲದೆ ಅವರು ಆತನ ಬಳಿ ಇದರ ಬಗ್ಗೆ ಕೇಳಲು ಮುಜುಗರಪಟ್ಟರು (ವ. 27).
17. ಆ ಸಮಾರ್ಯದ ಹೆಂಗಸು ಹೇಳಿದ ಮಾಹಿತಿಯ ನಿಮಿತ್ತ ಊರಿನ ಜನರೆಲ್ಲ ಯೇಸುವನ್ನು ನೋಡಲು ಬರುತ್ತಾರೆ. ತಾನೊಬ್ಬ ಪ್ರವಾದಿಯನ್ನು ನೋಡಿದ್ದೇನೆ ಮತ್ತು ಹೆಚ್ಚಾಗಿ ಆತನು ಜನರು ಕಾಯುತ್ತಿರುವ ಮೆಸ್ಸೀಯನಾಗಿದ್ದಿರಬಹುದೆಂದು ಅವರಿಗೆ ಹೇಳುತ್ತಾಳೆ (ವ. 28-30).
18. ಯೇಸು ತನ್ನ ಶಿಷ್ಯರಿಗೆ ನನ್ನ ಆಹಾರ ಎಂಬ ಮಾತನ್ನು ಸಾಮಾನ್ಯ ಆಹಾರದ ಬಗ್ಗೆ ಸೂಚಿಸುವುದಿಲ್ಲ. ಆತನು ತನ್ನ ಜೀವತಕ್ಕಾಗಿನ ದೇವರ ಯೋಜನೆಯನ್ನು ಪೂರೈಸುವುದರ ಬಗ್ಗೆ ಅಲಂಕಾರಿಕವಾಗಿ ಆತನು ಮಾತನಾಡುತ್ತಿದ್ದಾನೆ (ವ. 34).
19. "ಹೊಲಗಳು ಕೊಯ್ಲಿಗೆ ಬಂದಿವೆ" ಎಂದು ಯೇಸು ಕೊಯ್ಲಿಗೆ (ಸುಗ್ಗಿ) ಸಿದ್ಧವಾಗಿರುವ ಆತ್ಮೀಕ ಬೆಳೆಯ ಬಗ್ಗೆ ಮಾತಾಡುತ್ತಿದ್ದನು: ಜನರು ಸುವಾರ್ತೆಯನ್ನು ಅಂಗೀಕರಿಸಿ ದೇವರ ರಾಜ್ಯದಲ್ಲಿನ ನಿತ್ಯಜೀವದೊಳಗೆ ಸೇರಲು ಸಿದ್ಧರಿದ್ದಾರೆ ಎಂಬುದು ಇದರ ಅರ್ಥವಾಗಿದೆ (ವ. 35 ಟಿಪ್ಪಣಿಯೊಂದಿಗೆ)
20. ಆ ಹೆಂಗಸು ಹೇಳಿದ ಸಾಕ್ಷಿಯ ನಿಮಿತ್ತ ಸುಖರೆಂಬ ಊರಿನ ಅನೇಕ ಜನರು ಯೇಸುವಿನ ಮೇಲೆ ನಂಬಿಕೆಯಿಟ್ಟರು (ವ 39).
21. ಮುಂದಿನ ಎರಡು ದಿನಗಳ ಕಾಲ ಯೇಸು ಸುಖರೆಂಬ ಊರಿನಲ್ಲಿ ಉಳುಕೊಂಡನು ಮತ್ತು ಅನೇಕ ಸಮಾರ್ಯರು ಯೇಸುವಿನ ಬೋಧನೆಯನ್ನು ಒಪ್ಪಿ ಆತನನ್ನು ನಂಬುವವರಾದರು (ವ. 40-41).
22. ಯೇಸು ಸುಖರೆಂಬ ಊರಲ್ಲಿ ಎರಡು ದಿನ ಉಳಿದ ನಂತರ ಆ ಊರಿನ ಜನರು ಎರಡು ಸಂಗತಿಗಳನ್ನು ಅರಿತುಕೊಂಡರು (ವ. 42):
    - ಆ ಹೆಂಗಸಿನ ಸಾಕ್ಷಿಯು ವಿಶ್ವಾಸರ್ಹವಾಗಿದೆ
    - ಯೇಸುವು ನಿಜವಾಗಲೂ ಲೋಕರಕ್ಷಕನಾಗಿದ್ದಾನೆ

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. –
2. –

3. ಮೂರು ರೀತಿಯಲ್ಲಿ ಸಮಾರ್ಯದ ಸ್ತ್ರೀಯು ದಕ್ಷಿಣ ಭಾರತದ ಸ್ತ್ರೀಯರಿಗೆ ಒಬ್ಬ ಮಾದರಿಯಾಗಿದ್ದಾಳೆ:
   - ತನ್ನ ಮುಜುಗರದ ವೈಯಕ್ತಿಕ ಸನ್ನಿವೇಶಗಳ ಹೊರತಾಗಿಯೂ ಕೂತುಕೊಂಡು ಯೇಸುವಿನೊಂದಿಗೆ ಮಾತಾಡುವ ಮತ್ತು ಆತನ ಉಪದೇಶವನ್ನು ಕೇಳುವುದಕ್ಕಾಗಿನ ಆಕೆಯ ಆಸಕ್ತಿ.
   - ಆಕೆಯನ್ನು ಜೀವನ ಬದಲಿಸುವಂತ ತಿಳುವಳಿಕೆ ಮತ್ತು ರಕ್ಷಣೆಗೆ ನಡೆಸಿದ ಯೇಸುವಿನ ಮಾತುಗಳಿಗೆ ಪ್ರಶ್ನಿಸುವ ಆಕೆಯಲ್ಲಿದ್ದಂತ ಧೈರ್ಯ.
   - ತನ್ನ ಊರಿನ ಜನರಿಗೆ ಯೇಸುವಿನ ಬಗ್ಗೆ ಸಾಕ್ಷಿಸಿ ಅನಂತರ ಅವರನ್ನು ಕ್ರಿಸ್ತನೆಡೆಗೆ ಮತ್ತು ರಕ್ಷಣೆಡೆಗೆ ನಡೆಸಲು ಆಕೆಯಲ್ಲಿದ್ದ ಆಸಕ್ತಿ
4. ಇಂದಿನ ದಕ್ಷಿಣ ಭಾರದಲ್ಲಿನ ಕ್ರೈಸ್ತ ಸಭೆಗಳಿಗಾಗಿ ಈ ವಾಕ್ಯಭಾಗದಲ್ಲಿನ (ಯೋಹಾನ 4:3-42) ಕೆಲವು ಪ್ರಾಮುಖ್ಯ ಪಾಠಗಳು:
   - ಸುವಾರ್ತೆಯು ಸಾಮಾಜಿಕ ಮತ್ತು ಸಾಂಸ್ಕೃತಿಕ ಅಡೆತಡೆಗಳನ್ನು ಮೀರಿಸಬೇಕಾಗಿದೆ: ಶಿಷ್ಯರಿಗೆ ಸರಿಯಾಗಿ ತೋರದಿದ್ದರೂ ಸಹ ಯೇಸು ಒಬ್ಬ ಹೆಂಗಸಿನೊಂದಿಗೆ ಸಾರ್ವಜನಿಕವಾಗಿ ಮಾತನಾಡುತ್ತಾನೆ.
   - ಸುವಾರ್ತೆಯು ಭೌಗೋಳಿಕ ಮತ್ತು ಧಾರ್ಮಿಕ ಅಡೆತಡೆಗಳನ್ನು ಮೀರಿಸಬೇಕಾಗಿದೆ: ಸಮಾರ್ಯದವರು ಅಶುದ್ಧವಾದ ಅನ್ಯದೇಶಿಯರು ಮತ್ತು ತನ್ನ ಸ್ವಂತ ಜನರ ವೈರಿಗಳಾಗಿದ್ದರೂ ಸಹ ಯೇಸು ಅವರಿಗೆ ಸುವಾರ್ತೆಯನ್ನು ಸಾರಿದನು.
   - ಜನರು ಅರ್ಥೈಸಿಕೊಳ್ಳುವವರೆಗೂ ಸುವಾರ್ತೆಯನ್ನು ಸಾರಿ ವಿವರಿಸಬೇಕಾಗಿದೆ: ಆ ಸ್ತ್ರೀ ಶುಭವಾರ್ತೆಯನ್ನು ತಿಳಿದುಕೊಂಡು ಅದನ್ನು ಅಂಗೀಕರಿಸುವರೆಗೂ ಯೇಸು ಅದನ್ನು ಆಕೆಗೆ ವಿವರಿಸುವುದನ್ನು ಬಿಡಲಿಲ್ಲ.
   - ಸುವಾರ್ತೆಯನ್ನು ಇತರರೊಂದಿಗೆ ಹಂಚಿಕೊಳ್ಳಬೇಕಿದೆ: ಆ ಸ್ತ್ರೀಯು ಯೇಸುವನ್ನು ಸಂಧಿಸಿದ್ದರ ಬಗ್ಗೆ ಸುಮ್ಮನಿರಲಿಲ್ಲ. ಆಕೆ ತನ್ನ ಅನುಭವವನ್ನು ತನ್ನ ಊರಿನ ಜನರೊಂದಿಗೆ ಹಂಚಿಕೊಂಡಳು.
   - ಜನರನ್ನು ಯೇಸುವಿನೊಂದಿಗಿನ ಒಂದು ವೈಯಕ್ತಿಕ ಸಂಬಂಧಕ್ಕೆ ನಡೆಸಬೇಕಾಗಿದೆ: ಸಮಾರ್ಯದವರು ಕೇಳಿಸಿಕೊಂಡಾಗ ತಿಳಿದುಕೊಂಡರು.
   - ಸುವಾರ್ತೆಯು ಪ್ರತಿಯೊಬ್ಬರಿಗೂ ಮತ್ತು ಎಲ್ಲಾ ಜನಾಂಗಗಳಿಗಾಗಿ ಇರುವುದಾಗಿದೆ: ಯೇಸುವು ತನ್ನನ್ನು ನಂಬುವವರೆಲ್ಲರ, ಇಡೀ ಲೋಕದ ರಕ್ಷಕನಾಗಿದ್ದಾನೆ.

## 5. ಉತ್ತರಗಳು: ಬೆಥೆಸ್ಥ ಕೊಳದ ಬಳಿಯ ಸ್ವಸ್ಥತೆ, ಯೋಹಾನ 5:1-15

### ಪ್ರಶ್ನೆಗಳಿಗೆ ಉತ್ತರಗಳು

1. ಯೇಸು ಯೆಹೂದ್ಯರ ಜಾತ್ರೆಯನ್ನು ಆಚರಿಸುವುದಕ್ಕಾಗಿ ಯೆರೂಸಲೇಮಿಗೆ ಹೋದನು (ವ. 1).
2. ಯೇಸು ಬೇಥೆಸ್ಥ ಬಳಿ ಎಲ್ಲಾರೀತಿಯ ರೋಗಿಗಳನ್ನು ಕಾಣುತ್ತಾನೆ (ವ. 3).
3. ಮೂವತ್ತೆಂಟು ವರ್ಷದಿಂದ ರೋಗಿಯಾಗಿ ಬಿದ್ದವನ ಬಳಿ ಯೇಸು ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ ಎಂದು ಕೇಳಿದನು (ವ. 6).
4. ಯೇಸುವಿನ ಪ್ರಶ್ನೆಗೆ ಆ ಮನುಷ್ಯನು ನೀರು ಉಕ್ಕುವಾಗ ತನ್ನನ್ನು ಯಾರೂ ಕೊಳದೊಳಗೆ ಇಳಿಸುವುದಿಲ್ಲವೆಂದು ಉತ್ತರಿಸುತ್ತಾನೆ (ವ. 7). ಆ ಕೊಳದ ನೀರನ್ನು ದೇವದೂತನು ಬಂದು ಆಗಾಗ್ಗೆ ಉಕ್ಕಿಸುತ್ತಿದ್ದನು ಮತ್ತು ಆ ಕೊಳದೊಳಗೆ ಇಳಿಯುವ ಮೊದಲ ವ್ಯಕ್ತಿಯು ಸ್ವಸ್ಥವಾಗುವನೆಂಬುದು ಜನರ ನಂಬಿಕೆಯಾಗಿತ್ತು.
5. ಯೇಸು ಆ ಮನುಷ್ಯನಿಗೆ ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ಹೇಳಿದನು (ವ. 8).
6. ಆ ಮನುಷ್ಯನು ಸಬ್ಬತ್ ದಿನದಲ್ಲಿ ಹಾಸಿಗೆಯನ್ನು ಹೊತ್ತುಕೊಂಡು ಹೋದದ್ದರಿಂದ ಯೆಹೂದಿ ನಾಯಕರು ಆತನನ್ನು ಬೈಯುತ್ತಾರೆ. ಧರ್ಮಶಾಸ್ತ್ರದ ಅವರ ಅರ್ಥವಿವರಣೆಯ ಪ್ರಕಾರ ಅದು ಕಾನೂನುಬಾಹಿರವಾಗಿತ್ತು (ವ. 9-10).
7. ಆ ಮನುಷ್ಯನು ಯೆಹೂದಿ ನಾಯಕರಿಗೆ ತನ್ನನ್ನು ಗುಣಪಡಿಸಿದವನೇ ಹಾಗೆ ಮಾಡಲು ಹೇಳಿದನೆಂಬುದಾಗಿ ನೆಪಹೇಳುತ್ತಾನೆ (ವ. 11).
8. ತನ್ನನ್ನು ಗುಣಪಡಿಸಿದವನು ಯೇಸುವೇ ಎಂಬುದು ಆ ಮನುಷ್ಯನಿಗೆ ತಿಳಿದಿರಲಿಲ್ಲ (ವ. 13).
9. ಯೇಸು ಆ ಮನುಷ್ಯನನ್ನು ಎರಡನೇ ಬಾರಿ ದೇವಾಲಯದಲ್ಲಿ ಸಂಧಿಸುತ್ತಾನೆ (ವ. 14). ಯೇಸು ಆತನನ್ನೇ ಹುಡುಕುತ್ತಿದ್ದನೆಂಬುದಾಗಿ ತೋರುತ್ತದೆ.
10. ಆ ಮನುಷ್ಯನು ಹೋಗಿ ಹೇಳಿದ್ದರಿಂದ, ಆತನನ್ನು ಗುಣಪಡಿಸಿದವನು ಯೇಸುವೇ ಎಂಬುದಾಗಿ ಯೆಹೂದಿ ನಾಯಕರು ತಿಳಿದುಕೊಂಡರು (ವ. 15).

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಯೇಸು ಆ ಮನುಷ್ಯನಿಗೆ ಇನ್ನು ಮೇಲೆ ಪಾಪಮಾಡಬೇಡ, ನಿನಗೆ ಹೆಚ್ಚಿನ ಕೇಡು ಬಂದೀತು ಎಂಬುದಾಗಿ ಎಚ್ಚರಿಸುತ್ತಾನೆ (ವ. 14):
   - ಆ ಮನುಷ್ಯನು ಮಾಡಿದ ಪಾಪದ ನಿಮಿತ್ತವೇ ಆತನಿಗೆ ಅನಾರೋಗ್ಯ ಬಂದಿತ್ತೆಂಬುದನ್ನು ಯೇಸುವಿನ ಎಚ್ಚರಿಕೆಯು ಸೂಚಿಸುತ್ತದೆ. ಪಾಪವು ಅನಾರೋಗ್ಯಕ್ಕೆ ಕಾರಣವಾಗುತ್ತದೆಂಬುದನ್ನು ನಾವು ಸತ್ಯವೇದದಲ್ಲಿ ಕಾಣಬಹುದು, ಆದರೆ ಎಲ್ಲಾ ರೋಗಗಳೂ ಪಾಪದಿಂದ ಬರುವುದಿಲ್ಲ (ಹೋಲಿಸಿ ಯೋಹಾನ 9:1-13).
   - ಯೇಸು ಆ ಮನುಷ್ಯನ ದೈಹಿಕ ಮತ್ತು ಆತ್ಮೀಕ ಸ್ಥಿತಿಗಳೆರಡರ ಬಗ್ಗೆ ಕಾಳಜಿಯುಳ್ಳವನಾಗಿದ್ದನು. ಆ ಮನುಷ್ಯನು ಇನ್ನೂ ಬಾಧೆಯನ್ನನುಭವಿಸುವುದು ಆತನಿಗೆ ಇಷ್ಟವಿರಲಿಲ್ಲ. ಆದರೆ ಆ ಮನುಷ್ಯನು ನೀತಿಯುತ ಜೀವಿವನ್ನು ಜೀವಿಸಬೇಕೆಂದು ಸಹ ಆತನು ಬಯಸಿದನು. ಹಾಗಾಗಿ ಯೆಸು ಆತನನ್ನು ಹುಡುಕಿರಬೇಕು.
2. –

## 6. ಉತ್ತರಗಳು: ವ್ಯಭಿಚಾರದಲ್ಲಿ ಸಿಕ್ಕ ಒಬ್ಬ ಸ್ತ್ರೀ, ಯೋಹಾನ 8:2-11

### ಪ್ರಶ್ನೆಗಳಿಗೆ ಉತ್ತರಗಳು

1. ಈ ಕಥೆಯು ನಡೆದ ಸ್ಥಳ ಯೆರೂಸಲೇಮ್ (ವ. 2).
2. ಯೇಸುವಿನ ಉಪದೇಶವನ್ನು ಕೇಳುವುದಕ್ಕಾಗಿ ಅನೇಕ ಜನರು ಆತನ ಸುತ್ತ ಸೇರಿದ್ದರು (ವ. 2).
3. ಆ ಸ್ತ್ರೀಯನ್ನು ಯೇಸುವಿನ ಬಳಿಗೆ ಯೆಹೂದಿ ನಾಯಕರು (ಶಾಸ್ತ್ರಿಗಳು ಮತ್ತು ಫರಿಸಾಯರು) ಕರೆತರುತ್ತಾರೆ (ವ. 3).
4. ಸ್ತ್ರೀಯ ಮೇಲಿನ ಆರೋಪ ವ್ಯಭಿಚಾರವಾಗಿತ್ತು (ವ. 4).
5. ಈ ಸ್ತ್ರೀಗೆ ಏನನ್ನು ಮಾಡಬೇಕೆಂಬುದನ್ನು ಯೇಸುವು ನಿರ್ಣಯಿಸಬೇಕೆಂದು ಯೆಹೂದಿ ನಾಯಕರು ಬಯಸಿದರು. ಯೇಸು ಆಕೆಯನ್ನು ಮರಣದಂಡನೆಗೆ ನಿರ್ಣಯಿಸುವನಾ ಅಥವಾ ಆಕೆಯನ್ನು ಕ್ಷಮಿಸಬೇಕೆಂದು ನಿರ್ಣಯಿಸುವನಾ (ವ. 5)?
6. ಯೆಹೂದಿ ನಾಯಕರು ಪದೇ ಪದೇ ಉತ್ತರಿಸಬೇಕೆಂದು ಯೇಸುವನ್ನು ಒತ್ತಾಯಿಸಿದ್ದರಿಂದ ಯೇಸು ಕೊನೆಗೂ ಉತ್ತರಿಸಿದನು (ವ. 7).
7. ಯೇಸು ಯೆಹೂದಿ ನಾಯಕರಿಗೆ ನಿಮ್ಮಲ್ಲಿ ಪಾಪವಿಲ್ಲದವನು ಮೊದಲು ಆಕೆಯ ಮೇಲೆ ಕಲ್ಲೆಸೆಯಲಿ ಎಂದು ಉತ್ತರಿಸಿದನು (ವ. 7).
8. ಯೆಹೂದಿ ನಾಯಕರು ಒಬ್ಬೊಬ್ಬರಾಗಿ ಅಲ್ಲಿಂದ ಹೊರಗೆ ಹೋದರು (ವ. 9).
9. ಯೇಸು ಆ ಸ್ತ್ರೀಗೆ ಎರಡು ಸಂಗತಿಗಳನ್ನು ಹೇಳಿದನು (ವ. 11):
   a. ತಾನು ಆಕೆಯನ್ನು ಶಿಕ್ಷೆಗೆ ಗುರಿಪಡಿಸುವುದಿಲ್ಲ
   b. ಇನ್ನು ಮುಂದೆ ಆಕೆ ಪಾಪ ಮಾಡಬಾರದು

### ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು

1. ಈ ಘಟನೆಗೆ ನಾನು ಒಂದು ವೇಳೆ ಸಾಕ್ಷಿಯಾಗಿದ್ದರೆ ನಾಲ್ಕು ಪರಿಸ್ಥಿತಿ(ಸನ್ನಿವೇಶ)ಗಳು ಯೆಹೂದಿ ನಾಯಕರು ಮತ್ತು ಅವರ ಉದ್ದೇಶಗಳ ಬಗ್ಗೆ ಸಂಶಯವನ್ನು ಹುಟ್ಟಿಸುತ್ತಿತ್ತು:
   - ಯಾಕೆ ಅವರು ಆ ಸ್ತ್ರೀಯನ್ನು ದೇವಾಲಯದ ಬಳಿ ಹಿಡಿದುಕೊಂಡು ಬಂದು, ಆಕೆಯನ್ನು ಅವಮಾನಕ್ಕೆ ಗುರಿಪಡಿಸಿ ಯೇಸುವಿನ ಉಪದೇಶ ಕೇಳಲು ಬಂದ ಬಹುದೊಡ್ಡ ಗುಂಪಿನ ಮುಂದೆ ಆಕೆಯ ಮೇಲೆ ಆರೋಪ ಮಾಡಿದರು? ಅವರ ಉದ್ದೇಶವು ಧರ್ಮಶಾಸ್ತ್ರವನ್ನು ಪಾಲಿಸುವುದಲ್ಲ ಬದಲಾಗಿ ಈ ಬಡ ಹೆಂಗಸನ್ನು ಒಂದು ಸಾಧನವಾಗಿ ಬಳಸಿ ಯೇಸುವಲ್ಲಿ ತಪ್ಪುಕಂಡುಹಿಡಿಯುವುದಾಗಿತ್ತು.
   - ಯಾಕೆ ಅವರು ಪುರುಷನನ್ನು ಹಿಡಿದು ತರಲಿಲ್ಲ? ವ್ಯಭಿಚಾರವು ಇಬ್ಬರಿಂದ ಆಗುವಂತದ್ದಾಗಿದೆ. ಹಾಗಾಗಿ ಈ ವ್ಯಭಿಚಾರವು ಒಂದು ವ್ಯವಸ್ಥಿತವಾಗಿದ್ದು ಆ ಪುರುಷನು ಬಹುಶಃ ಹಣವನ್ನು ಕೊಟ್ಟು ನಂತರ ಹೋಗಿರಬಹುದು.
   - ಯಾಕೆ ಅವರು ಧರ್ಮಶಾಶ್ತ್ರಕ್ಕನುಸಾರವಾಗಿ ವ್ಯಭಿಚಾರಕ್ಕೆ ಬೇಕಾದ ಸಮರ್ಪಕ ಸಾಕ್ಷಿಗಳನ್ನು ತರಲಿಲ್ಲ? ಆಗ ಮಾತ್ರ ಅದು ನ್ಯಾಯವೆನಿಸುತ್ತಿತ್ತು. ಒಂದು ವೇಳೆ ಅವರೆಲ್ಲರೂ ಸಾಕ್ಷಿಗಳಾಗಿದ್ದರೆ ಆ ಇಡೀ ಕಥೆಯನ್ನೇ ನಿರೂಪಿಸಿರಬೇಕು. ಯಾವಾಗಲೂ ರಹಸ್ಯವಾಗಿ ಮಾಡುವ ಪಾಪವಾದ ವ್ಯಭಿಚಾರದಂತ ಕ್ರಿಯೆಯನ್ನು ಶಾಸ್ತ್ರಿಗಳು ಮತ್ತು ಫರಿಸಾಯರಂಥ ಗುಂಪು ಹೇಗೆ ತಾನೇ ನೋಡಿರಲು ಸಾಧ್ಯ?
   - ಯಾಕೆ ಅವರು ಹಟಬಿದ್ದು ಯೇಸುವಿನ ಪ್ರತ್ಯುತ್ತರವನ್ನು ನಿರೀಕ್ಷಿಸಿದರು? ಖಂಡಿತವಾಗಿ ಅವರು ತಾನು ಆಯ್ಕೆ ಮಾಡುವ ಸಂಗತಿಯೊಂದಿಗೆ ಆತನು ಹೊಂದಾಣಿಕೆ ಮಾಡಿಕೊಳ್ಳಬೇಕೆಂಬುದಾಗಿ ಅವರು ಅಪೇಕ್ಷಿಸಿದರು. ಇದು ಒಂದು ತಂತ್ರವಾಗಿದೆಯೇ ವಿನಃ ನಿಜವಾದ ಸಂಗತಿಯಲ್ಲ.

2. ಯೇಸುವನ್ನು ಪರೀಕ್ಷಿಸಲು ಯೆಹೂದಿ ನಾಯಕರು ಮಾಡಿದ ಪ್ರಯತ್ನ ಇಂತಿದೆ:

- ವ್ಯಭಿಚಾರದಲ್ಲಿ ಸಿಕ್ಕಳೆಂಬ ಆರೋಪದೊಂದಿಗೆ ಒಬ್ಬ ಹೆಂಗಸನ್ನು ಅವರು ಯೇಸುವಿನ ಬಳಿಗೆ ಕರೆತರುತ್ತಾರೆ.
- ಆ ಸ್ತ್ರೀಗೆ ಏನನ್ನು ಮಾಡಬೇಕೆಂಬುದನ್ನು ಯೇಸುವು ಹೇಳಬೇಕೆಂದು ಅವರು ಒತ್ತಾಯಿಸಿದರು:
    - ಮೋಶೆಯ ಧರ್ಮಶಾಸ್ತ್ರದ ಪ್ರಕಾರ ಯೇಸು ಆಕೆಯ ಮೇಲೆ ಕಲ್ಲೆಸೆಯಬೇಕೆಂಬುದಾಗಿ ಬಯಸಿದನಾ?
    - ಅಥವಾ ಆಕೆಯನ್ನು ಬಿಟ್ಟುಬಿಡಬೇಕೆಂದು ಬಯಸಿದನಾ?
- ಯೇಸು ಏನನ್ನೇ ನಿರ್ಧರಿಸಿದರು ಆತನು ಸಿಕ್ಕಿಹಾಕಿಕೊಳ್ಳುತ್ತಾನೆಂಬುದಾಗಿ ಅವರು ತಿಳಿದಿದ್ದರು:
    - ಒಂದು ವೇಳೆ ಯೇಸು ಇಲ್ಲ ಆಕೆಯನ್ನು ಕ್ಷಮಿಸಿರಿ ಮತ್ತು ಧರ್ಮಶಾಸ್ತ್ರವನ್ನು ಕಷ್ಟ ಕಠಿಣವಾಗಿ ಆಕೆಯ ಮೇಲೆ ಹೊರಿಸಬೇಡಿರೆಂದು ಹೇಳಿದ್ದರೂ ಅವರು ಯೇಸುವನ್ನು ಧರ್ಮಶಾಸ್ತ್ರವನ್ನು ಅಲ್ಲಗಳೆಯುವ ಮತ್ತು ಜನರನ್ನು ತಪ್ಪುದಾರಿಗೆ ನಡೆಸುವ ಒಬ್ಬ ದುಬೋರ್ಧಕನೆಂಬುದಾಗಿ ಹೇಳುತ್ತಿದ್ದರು.
    - ಒಂದು ವೇಳೆ ಯೇಸು "ಹೋಗಿ ಆಕೆಯ ಮೇಲೆ ಕಲ್ಲೆಸೆಯಿರಿ" ಎಂದು ಹೇಳಿದ್ದರೆ ಯೇಸುವಿಗೆ ಕರುಣೆಯಿಲ್ಲವೆಂಬುದಾಗಿ ಜನರು ನಿರಾಶರಾಗುತ್ತಿದ್ದರು.

3. ಯಾಕೆ ಯೇಸು ಬೆರಳಿನಿಂದ ನೆಲದ ಮೇಲೆ ಬರೆದನೆಂಬುದು ನಮಗೆ ಗೊತ್ತಿಲ್ಲ (ವ. 6, 8). ನಾಲ್ಕು ಊಹೆಗಳು ಇಂತಿವೆ:

ಅ. ಯೇಸು ತಾನು ಸುಮ್ಮನಿರಬೇಕು ಮತ್ತು ಅವರಿಗೆ ಸಮಯ ಕೊಟ್ಟಿರಲಾಗಿ ಅವರ ಪ್ರತಿಕ್ರಿಯೆಯನ್ನು (ಯೆಹೂದಿ ನಾಯಕರ) ನೋಡಬಾರದೆಂದು ಬಯಸಿದನು.

ಆ. ಗಾಳಿಯಿಂದ ಬೇಗನೇ ಅಳಸಿಹೋಗುವಂತೆ ಮರಳಿನ ಮೇಲೆ ಆರೋಪದ ಕೆಲ ಮಾತುಗಳನ್ನು ಅಥವಾ ಪ್ರಕಟನೆಗಳನ್ನು ಬರೆಯುವುದರಿಂದ ಯೇಸು ಇಡೀ ಸನ್ನಿವೇಶಕ್ಕೆ ಕೆಲ ನಾಟಕವನ್ನು ಸೇರಿಸಬೇಕೆಂದು ಬಯಸಿದನು.

ಇ. ಯೇಸು ಯೆಹೂದಿ ನಾಯಕರಿಗೆ ಅವರ ಸ್ವಂತ ಕ್ರಿಯೆಯ ಗಂಭೀರತೆಯನ್ನು ನೆನಪಿಸಲು ಬಯಸಿದನು: ದೇವರು ದಶಾಜ್ಞೆಗಳ ಮೂಲ ರೂಪವನ್ನು ತನ್ನ ಕೈಯಿಂದ ಕಲ್ಲಿನ ಹಲಗೆಯ ಮೇಲೆ ಬರೆದನು (ವಿಮೋ. 31:18, 32:16). ದೇವರು ಅವರ ದುರುದ್ದೇಶಗಳಿಗೆ ನ್ಯಾಯತೀರ್ಪು ಕೊಡುವನು.

ಈ. ತನ್ನ ಸುತ್ತ ನಿಂತಿರುವ ಜನರಿಗೆ ತನ್ನ ದೈವಿಕ ಅಧಿಕಾರವನ್ನು ಜ್ಞಾಪಕಪಡಿಸಲು ಯೇಸು ಬಯಸಿದನು: ಯೆಹೂದಿ ನಾಯಕರಿಗೂ ಮತ್ತು ವ್ಯಭಿಚಾರದಲ್ಲಿ ಸಿಕ್ಕ ಸ್ತ್ರೀಗೂ ನ್ಯಾಯತೀರ್ಪು ಕೊಡುವ ಮತ್ತು ಕ್ಷಮಿಸುವ "ದೇವರ ಬೆರಳು" ಆತನಾಗಿದ್ದನು (ಲೂಕ 11:20 ರಲ್ಲಿ ಯೇಸು ದೇವರ ಬೆರಳಿನಿಂದ ದೆವ್ವಗಳನ್ನು ಬಿಡಿಸಿದನೆಂದು ಹೇಳಿದ್ದರೊಂದಿಗೆ ಹೋಲಿಸಿ).

4. –

## 7. ಉತ್ತರಗಳು: ಯೇಸು ಒಬ್ಬ ಹುಟ್ಟುಕುರುಡನನ್ನು ಗುಣಪಡಿಸಿದ್ದು, ಯೋಹಾನ 9:1-41

**ಪ್ರಶ್ನೆಗಳಿಗೆ ಉತ್ತರಗಳು**

1. ಆ ಮನುಷ್ಯನ ಕುರುಡುತನಕ್ಕೆ ದೇವರ ಕ್ರಿಯೆಗಳು (ಮಹಿಮೆ) ತೋರಿಬರುವುದೇ ಕಾರಣವಾಗಿದೆ ಎಂದು ಯೆಸು ಶಿಷ್ಯರಿಗೆ ಹೇಳುತ್ತಾನೆ (ವ. 1-3). ಆತನ ಸ್ವಸ್ಥತೆಯ ಮೂಲಕ ದೇವರು ಮಹಿಮೆ ಹೊಂದಿದನು ಮತ್ತು ದೇವರು ಯೇಸು ದೇವಕುಮಾರನು ಮತ್ತು ಮೆಸ್ಸೀಯನ ಮೂಲಕ ಮಹಿಮೆ ಹೊಂದಿದನು.
2. ಹುಟ್ಟು ಕುರುಡನನ್ನು ಗುಣಪಡಿಸಲು ಯೇಸು ಬಳಸಿದ ವಿಧಾನ: ಯೇಸು ನೆಲದ ಮೇಲೆ ಉಗುಳಿ, ಆ ಉಗುಳಿನಿಂದ ಕೆಸರನ್ನು ಮಾಡಿ ಆ ಕೆಸರನ್ನು ಆ ಕುರುಡನ ಕಣ್ಣುಗಳಿಗೆ ಹಚ್ಚಿದನು. ಅನಂತರ ಆತನು ಕುರುಡನಿಗೆ ಸಿಲೋವ ಕೊಳಕ್ಕೆ ಹೋಗಿ ತೊಳಕೋ ಎಂದು ಹೇಳಿದನು. ಆ ಮನುಷ್ಯನು ವಿಧೇಯನಾದನು ಮತ್ತು ಗುಣಹೊಂದಿದನು (ವ. 6-11). ಆ ಮನುಷ್ಯನಿಗೆ ನಿನಿಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ ಎಂದು ಯೇಸು ಕೇಳಿರಬಹುದಾದ ಪ್ರಶ್ನೆಯನ್ನು ಯೋಹಾನನು ದಾಖಲಿಸಿಲ್ಲ ಮತ್ತು ತನ್ನ ಸಲಹೆಗಳನ್ನು ಪಾಲಿಸಿದರೆ ನಿನಗೆ ಗುಣವಾಗುತ್ತದೆಂಬುದಾಗಿ ಯೇಸು ವಾಗ್ದಾನ ಮಾಡಿದ ಬಗ್ಗೆ ಏನನ್ನು ಇಲ್ಲಿ ತಿಳಿಸಿಲ್ಲ.
3. ಯೇಸುವಿನ ಪರ ಮತ್ತು ವಿರೋಧವಾಗಿದ್ದ ವಾದಗಳು (ವ. 13-16):

   ಅ. ಯೇಸುವಿನ ಪರವಾದ ವಾದ: ಯೇಸುವು ಹುಟ್ಟು ಕುರುಡನನ್ನು ಗುಣಪಡಿಸಿದ್ದಾನೆ. ಭಕ್ತಿಯೀನನು ಈ ರೀತಿಯ ಅದ್ಭುತವನ್ನು ಮಾಡಲು ಸಾಧ್ಯವಿಲ್ಲ. ಹಾಗಾಗಿ ಯೇಸು ಒಬ್ಬ ಒಳ್ಳೆಯ ಮನುಷ್ಯನಾಗಿರಬೇಕು.

   ಆ. ಯೇಸುವಿಗೆ ವಿರುದ್ಧವಾದ ವಾದ: ಯೇಸುವು ಸಬ್ಬತ್ತನ್ನು ಪಾಲಿಸಿಲ್ಲ ಯಾಕೆಂದರೆ ಸಬ್ಬತ್ ದಿನದಲ್ಲಿ ಆತನನ್ನು ಗುಣಪಡಿಸಿದನು. ಹಾಗಾಗಿ ಯೇಸುವು ಒಬ್ಬ ಭಕ್ತಿಹೀನ ಮನುಷ್ಯನಾಗಿದ್ದಾನೆ.
4. ಆ ಮನುಷ್ಯನು ನಿಜವಾಗಲೂ ಹುಟ್ಟುಕುರುಡನಾಗಿದ್ದನೆಂಬುದನ್ನು ತಿಳಿದುಕೊಳ್ಳಲು ಯೆಹೂದಿ ನಾಯಕರು ಆತನ ತಂದೆತಾಯಿಗಳನ್ನು ಕೇಳಿದರು (ವ. 18-20).
5. ಆತನ ತಂದೆತಾಯಿಗಳು ಯೇಸುವೇ ಆತನನ್ನು ಗುಣಪಡಿಸದನೆಂದು ಹೇಳಲು ಧೈರ್ಯಮಾಡಲಿಲ್ಲ. ತಾವು ಯೇಸುವನ್ನು ಬೆಂಬಲಿಸಿದರೆ ಯೆಹೂದಿ ನಾಯಕರು ತಮ್ಮನ್ನು ಬಹಿಷ್ಕಾರ ಹಾಕಬಹುದೆಂದು ಅವರು ಭಯಗೊಂಡಿದ್ದರು (ವ. 21-23).
6. ಹುಟ್ಟುಕುರುಡನು ಯೇಸುವಿನ ಬಗ್ಗೆ ಕೊಟ್ಟ ಚಿತ್ರಣ (ವ. 17,25-33):
   - ಯೇಸುವು ಪ್ರವಾದಿಯಾಗಿರಬೇಕು (ಆತನಲ್ಲಿನ ಗುಣಪಡಿಸುವ ಶಕ್ತಿಯಿಂದ)
   - ನಿಜವಾಗಲೂ ಯೇಸುವೇ ತನ್ನನ್ನು ಗುಣಪಡಿಸಿದವನಾಗಿದ್ದಾನೆ
   - ಯೇಸುವು ಒಳ್ಳೆಯವನು, ಭಕ್ತಿಹೀನನಲ್ಲ
   - ದೇವರು ಯೇಸುವಿನ ಪ್ರಾರ್ಥನೆಗೆ ಕಿವಿಗೊಟ್ಟಿದ್ದಾನೆ
   - ಯೇಸುವು ದೇವರ ಚಿತ್ತಕ್ಕೆ ವಿಧೇಯನಾಗಿದ್ದಾನೆ
   - ಯೇಸುವು ದೇವರಿಂದ ಬಂದವನಾಗಿದ್ದಾನೆ
   - ಯೇಸುವು ದೇವರಿಂದಲೇ ಗುಣಪಡಿಸುವ ಶಕ್ತಿ ಹೊಂದಿದ್ದಾನೆ
7. ಯೇಸುವಿನೊಂದಿಗೆ ಆ ಮನುಷ್ಯನ ಸಂಬಂಧ (ವ. 27-39):
   - ಮೊದಲು ಯೇಸುವು ಯಾರೆಂಬುದನ್ನು ತಿಳಿದುಕೊಳ್ಳದಿದ್ದರೂ ಆತನು ತಾನು ಯೇಸುವಿನ ಶಿಷ್ಯನೆಂಬುದಾಗಿ ಪರಿಗಣಿಸಿಕೊಳ್ಳುತ್ತಾನೆ. ಆದರೆ ಯೇಸುವು ದೇವರಿಂದ ಉಪಯೋಗಿಸಲ್ಪಟ್ಟವನೂ ಮತ್ತು ಒಳ್ಳೆಯವನೂ ಆಗಿದ್ದಾನೆಂಬುದನ್ನು ಆತನು ಗ್ರಹಿಸಿಕೊಂಡನು, ಯಾಕೆಂದರೆ ಯೇಸುವನ್ನು ಸಂಧಿಸಿ ಸ್ವಸ್ಥತೆಗಾಗಿ ಆತನು ಹೇಳಿದ್ದನ್ನು ಪಾಲಿಸಿದ ನಂತರ ಆತನ ಜೀವನವೇ ಸಂಪೂರ್ಣವಾಗಿ ಬದಲಾಗಿತ್ತು. ಹಾಗಾಗಿ ಯೇಸುವು ದೇವರಿಂದ ಬಂದವನಾಗಿರಬೇಕು.

- ಆ ಮನುಷ್ಯನನ್ನು ಸಭಾಮಂದಿರದಿಂದ ಹೊರಹಾಕಿದ್ದಾರೆಂಬುದನ್ನು ತಿಳಿದುಕೊಂಡಾಗ ಯೇಸು ಆತನನ್ನು ಹುಡುಕಲು ಹೋಗುತ್ತಾನೆ. ಆ ಮನುಷ್ಯನು ತನ್ನ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಹೊಂದಿರಬೇಕೆಂದು ಯೇಸು ಬಯಸಿದನು.
- ಅನಂತರ ಯೇಸು ಆತನನ್ನು ತನ್ನೊಂದಿಗೆ ಒಂದು ನಿಕಟವಾದ ಸಂಪರ್ಕಕ್ಕೆ ತಂದನು:
  - ಮೊದಲನೆಯದಾಗಿ ಯೇಸು ಆತನ ಬಳಿ ತನ್ನನ್ನು ಮನುಷ್ಯಕುಮಾರನೆಂಬುದಾಗಿ ನಂಬುತ್ತೀಯಾ ಎಂದು ಕೇಳಿದನು.
  - ಅನಂತರ ಆ ಮನುಷ್ಯನು ತನ್ನ ನಂಬಿಕೆಯನ್ನು ಅರಿಕೆಮಾಡಿ ಯೇಸುವಿಗೆ ಅಡ್ಡಬೀಳುತ್ತಾನೆ.
  - ಕೊನೆಯದಾಗಿ ಯೇಸು ಅಲ್ಲಿದ್ದ ಜನರಿಗೆ ಈ ಮೊದಲು ಶಾರೀರಿಕವಾಗಿ ಕುರುಡನಾಗಿದ್ದು (ಅಲ್ಲದೆ ಯೇಸುವನ್ನು ಅರಿಯದೇ ಇರುವುದರಿಂದ ಆತ್ಮೀಕವಾಗಿ ಸಹ ಕುರುಡನಾಗಿದ್ದನು) ಈಗ ನಿಜವಾಗಲು ಕಣ್ಣು ಕಾಣುವವನ ಬಗ್ಗೆ ವಿವರಿಸುತ್ತಾನೆ. ಈಗ ಆತನು ಪಾಪಿಯಲ್ಲ (ವಚನ 41 ರೊಂದಿಗೆ ಹೋಲಿಸಿ).

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

ಹುಟ್ಟುಕುರುಡನು ಗುಣಹೊಂದಿದ್ದನ್ನು ಖಚಿತಪಡಿಸಿಕೊಳ್ಳಲು ಯೆಹೂದಿ ನಾಯಕರು ಆತುರಗೊಂಡಿದ್ದರು (ನೋಡಿ ವಚನ 22, 29-33, ಯೆಶಾಯ 29:18, 35:5, 42:7 ರೊಂದಿಗೆ ಹೋಲಿಸಿರಿ):

- ಅವರ ಸ್ವಂತ ನಂಬಿಕೆಯ ಕುರಿತ ತಿಳುವಳಿಕೆಯು ಈಗ ಸವಾಲಿನೆಡೆಗೆ ನಡೆಸಿತು: ಯೇಸುವು ಸಬ್ಬತ್ ದಿನವನ್ನು ಪಾಲಿಸದೆ ಇದ್ದುದ್ದರಿಂದ ಆತನನ್ನವರು ಭಕ್ತಿಹೀನನು ಪಾಪಿಯೆಂಬುದಾಗಿ ನಂಬಿದ್ದರು. ಈಗ ಪುನಃ ಆತನು ಸಬ್ಬತ್ ದಿನದಲ್ಲಿ ಕುರುಡನನ್ನು ಗುಣಪಡಿಸಿದ್ದರಿಂದ ಅದು ಮತ್ತೆ ಪುನರಾವರ್ತನೆಯಾಯಿತು. ಇನ್ನೊಂದೆಡೆ ಕುರುಡನೊಬ್ಬನನ್ನು ಗುಣಪಡಿಸಿದ್ದು ಒಳ್ಳೆಯ ಸಂಗತಿಯೆಂಬುದಾಗಿ ಜನರು ಯೋಚಿಸಿದರು. ಆ ನಿಮಿತ್ತ ಅನೇಕರು ಯೇಸುವನ್ನು ಹಿಂಬಾಲಿಸುವವರಾದರು.
- ವಿಷಯವು ತೀರಾ ಸೂಕ್ಷ್ಮವಾದುದ್ದಾಗಿತ್ತು, ಯಾಕೆಂದರೆ ಯೆಶಾಯನ ಪ್ರವಾದನೆಗಳ ಪ್ರಕಾರ ಕುರುಡರಿಗೆ ಕಣ್ಣು ಬರುವುದು ಮೆಸ್ಸೀಯನ ಸ್ಪಷ್ಟವಾದ ಗುರುತಾಗಿತ್ತು.
- ಒಂದು ವೇಳೆ ಆ ಮನುಷ್ಯ ನಿಜವಾಗಲೂ ಕುರುಡನಾಗಿರಲಿಲ್ಲವೆಂದು ಯೆಹೂದಿ ನಾಯಕರು ಸಾಬೀತುಪಡಿಸಿದ್ದರೆ ಜನರನ್ನು ಅವರು ಸುಲಭವಾಗಿ ಮನವೊಲಿಸಬಹುದಾಗಿತ್ತು. ಯೇಸುವು ಒಬ್ಬ ಭಕ್ತಿಹೀನ/ಪಾಪಿಯಾಗಿದ್ದಾನೆ ಮತ್ತು ಜನರು ಆತನನ್ನು ಮೆಸ್ಸೀಯನೆಂದು ತಪ್ಪಾಗಿ ನಂಬಿದ್ದಾರೆಂಬುದಾಗಿ ಅವರು ಹೇಳಬಹುದಾಗಿತ್ತು.

## 8. ಉತ್ತರಗಳು: ಯೇಸು ಸತ್ತವರೊಳಗೆ ಲಾಜರನನ್ನು ಬದುಕಿಸಿದ್ದು, ಯೋಹಾನ 11:1-44

### ಪ್ರಶ್ನೆಗಳಿಗೆ ಉತ್ತರಗಳು

1. ಈ ಕಥೆಯ ಪ್ರಾರಂಭದಲ್ಲಿ ಲಾಜರ ಮತ್ತು ಆತನ ಕುಟುಂಬದ ಬಗ್ಗೆ ನಾವು ಈ ಸಂಗತಿಗಳನ್ನು ಕಲಿಯುತ್ತೇವೆ (ವ. 1-2, 5):
   - ಲಾಜರನು ಗಂಭೀರವಾಗಿ ಅಸ್ವಸ್ಥಗೊಂಡಿದ್ದನು
   - ಆ ಮನೆಯಲ್ಲಿ ಸುಮಾರು ಮೂರು ಮಂದಿಯಿದ್ದರು: ಲಾಜರ ಮತ್ತು ಆತನ ಸಹೋದರಿಯರಾದ ಮಾರ್ಥ ಮತ್ತು ಮರಿಯ
   - ಅವರೆಲ್ಲರು ಯೆರೂಸಲೇಮಿನಿಂದ ಸುಮಾರು 3 ಕಿ.ಮೀ ದೂರದಲ್ಲಿರುವ ಬೇಥಾನ್ಯದಲ್ಲಿ ವಾಸವಾಗಿದ್ದರು.
   - ಯೇಸು ಮತ್ತು ಲಾಜರಿಬ್ಬರೂ ಆಪ್ತಸ್ನೇಹಿತರಾಗಿದ್ದರು.
2. ಲಾಜರನ ಅಸ್ವಸ್ಥತೆಯ ಸುದ್ದಿ ತಿಳಿದೊಡನೆ ಯೇಸು ಚಿಂತಿಸುವುದೇ ಇಲ್ಲ. ಲಾಜರನ ರೋಗವು ಮರಣಕ್ಕಾಗಿ ಬಂದುದ್ದಲ್ಲ ಬದಲಾಗಿ ದೇವರ ಮಹಿಮೆಗೋಸ್ಕರ ಬಂದಿದೆ ಎಂಬುದಾಗಿ ಯೇಸು ಹೇಳುತ್ತಾನೆ (ವ. 4). ಹಾಗಾಗಿ ಆತನು ಕೂಡಲೇ ಬೇಥಾನ್ಯಕ್ಕೆ ಹೋಗದೆ ಇನ್ನೂ ಎರಡು ದಿನ ಅಲ್ಲೇ ಇರುತ್ತಾನೆ (ವ. 5).
3. ತಾನು ತಿರುಗಿ ಯೂದಾಯಕ್ಕೆ ಹೋಗುತ್ತೇನೆಂಬುದಾಗಿ ಯೇಸು ಹೇಳಿದಾಗ ಶಿಷ್ಯರು ಆಶ್ಚರ್ಯಪಡುತ್ತಾರೆ, ಯಾಕೆಂದರೆ ಈಗಾಗಲೇ ಅಲ್ಲಿ ಯೇಸುವಿಗೆ ಅಪಾಯವು ಬಂದೊದಗಿತ್ತು (ವ. 8).
4. ಯೇಸು ಲಾಜರನ ಬಗ್ಗೆ ತನ್ನ ಶಿಷ್ಯರಿಗೆ ಲಾಜರನು ನಿದ್ರೆ ಮಾಡುತ್ತಿದ್ದಾನೆ ತಾನು ಅವನನ್ನು ನಿದ್ರೆಯಿಂದ ಎಬ್ಬಿಸುವುದಕ್ಕೆ ಹೋಗುತ್ತಿದ್ದೇನೆ ಎಂದು ಹೇಳಿದನು. ಲಾಜರನು ಸತ್ತುಹೋಗಿದ್ದಾನೆಂಬುದು ಯೇಸುವಿನ ಮಾತಿನ ಅರ್ಥವಾಗಿತ್ತು. ಆದರೆ ಅವರು ಆತನ ಮಾತನ್ನು ತಪ್ಪಾಗಿ ತಿಳಿದುಕೊಂಡರು ಮತ್ತು ಲಾಜರನು ನಿದ್ರಿಸುತ್ತಿದ್ದಾನೆ ಆತನು ಗುಣಮುಖನಾಗುತ್ತಿದ್ದಾನೆಂಬುದಾಗಿ ಯೋಚಿಸಿದರು. ಹಾಗಾಗಿ ಯೇಸು ಅವರಿಗೆ ಲಾಜರನು ಸತ್ತುಹೋದನೆಂಬುದಾಗಿ ಸ್ಪಷ್ಟವಾಗಿ ಹೇಳಬೇಕಾಯಿತು (ವ. 11-14).
5. ಲಾಜರನು ಸತ್ತಾಗ ತಾನು ಅಲ್ಲಿ ಇಲ್ಲದೆ ಇರುವುದಕ್ಕಾಗಿ ಯೇಸು ಸಂತೋಷಪಡುತ್ತಾನೆ, ಯಾಕೆಂದರೆ ಶಿಷ್ಯರು ಅದನ್ನು ನಂಬಬೇಕೆಂಬುದಾಗಿ ಯೇಸು ಬಯಸಿದನು (ವ. 15).
6. ಯೂದಾಯಕ್ಕೆ ಹೋಗುವುದರ ಬಗ್ಗೆ ತೋಮನು, ಯೆಸುವಿನೊಂದಿಗೆ ಯೂದಾಯಕ್ಕೆ ಹೋದರೆ ಅವರೆಲ್ಲರೂ ಸಾಯುವರೆಂಬುದಾಗಿ ಭಾವಿಸುತ್ತಾನೆ (ವ. 15).
7. ಯೇಸು ಮತ್ತು ಆತನ ಶಿಷ್ಯರು ಅಲ್ಲಿಗೆ ಬಂದಾಗ ಲಾಜರನು ಸತ್ತು ನಾಲ್ಕು ದಿನಗಳಾಗಿತ್ತು (ವ. 17).
8. ಯೇಸು ಬರುತ್ತಿದ್ದಾನೆಂಬುದನ್ನು ತಿಳಿದಾಗ ಮಾರ್ಥಳು ಆತನನ್ನು ಎದುರುಗೊಳ್ಳುವುದಕ್ಕೆ ಹೋದಳು (ವ. 20). ಹಿರಿಯ ಅಕ್ಕನಾಗಿ ಬಹುಶಃ ಆಕೆ ಯೇಸುವನ್ನು ತನ್ನ ಮನೆಗೆ ಸ್ವಾಗತಿಸಿ ಪರಿಸ್ಥಿತಿಯ ಬಗ್ಗೆ ಆತನಿಗೆ ಎಲ್ಲವನ್ನು ವಿವರಿಸಬೆಕೆಂದು ಆಕೆ ಬಯಸಿರಬಹುದು.
9. ಲಾಜರನ ಬಗ್ಗೆ ಯೇಸು ಮಾರ್ಥಳಿಗೆ ಆತನು ಎದ್ದುಬರುವನು ಎಂದು ಹೇಳಿದನು. ಆದರೆ ಆಕೆ ಆತನ ಮಾತನ್ನು ತಪ್ಪಾಗಿ ಅರ್ಥೈಸಿಕೊಂಡಳು ಮತ್ತು ಆತನು ಯುಗಾಂತ್ಯದಲ್ಲಿ ಸತ್ತವರಿಗೆ ಆಗುವ ಪುನರುತ್ಥಾನದ ಬಗ್ಗೆ ಆತನು ಹೇಳುತ್ತಿದ್ದಾನೆಂಬುದಾಗಿ ಆಕೆ ತಿಳಿದುಕೊಂಡಳು (ವ. 21-24).
10. ಕ್ರಿಸ್ತನಲ್ಲಿನ ತನ್ನ ನಂಬಿಕೆಯನ್ನು ಮಾರ್ಥಳು ಯೇಸುವು ಪ್ರವಾದಿಗಳು ತಿಳಿಸಿದ ದೇವಕುಮಾರನಾದ ಕ್ರಿಸ್ತನು ಎಂದು ವ್ಯಕ್ತಪಡಿಸಿದಳು (ವ. 27).
11. ಮಾರ್ಥಳು ಮನೆಗೆ ಹೋಗಿ ಗುಪ್ತವಾಗಿ ಮರಿಯಳನ್ನು ಕರೆದು ಅವಳಿಗೆ ಗುರುವು ಬಂದಿದ್ದಾನೆ ಮತ್ತು ನಿನ್ನನ್ನು ನೋಡಲು ಕಾಯುತ್ತಿದ್ದಾನೆಂಬುದಾಗಿ ಹೇಳಿದಳು (ವ. 28).

12. ಪ್ರಸ್ತುತ ಸ್ಥಿತಿಯ ಬಗ್ಗೆ ಮರಿಯಳು ಈ ಹಿಂದೆ ಮಾರ್ಥಳು ಹೇಳಿದಂತೆಯೇ ಯೇಸುವನ್ನು "ಸ್ವಾಮಿ ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ" (ವ. 32) ಎಂದು ದೂರುತ್ತಾಳೆ.

13. ಮರಿಯಳ ಗೋಳಾಟವನ್ನು ನೋಡಿದಾಗ ಯೇಸು ಆತ್ಮದಲ್ಲಿ ನೊಂದುಕೊಳ್ಳುತ್ತಾನೆ. ಆತನು ಅವನನ್ನು ಎಲ್ಲಿ ಹೂಣಿಟ್ಟಿದ್ದೀರಿ ಎಂದು ಕೇಳುತ್ತಾನೆ ಮತ್ತು ಆತನು ಕಣ್ಣೀರುಸುರಿಸುತ್ತಾನೆ (ವ. 33-36).

14. ಪ್ರಸ್ತುತ ಪರಿಸ್ಥಿತಿಗಾಗಿ ಕೆಲ ಜನರು ಸಹ ಯೇಸುವನ್ನು ದೂರುತ್ತಾರೆ. ಈತನು ಕುರುಡನಿಗೆ ಕಣ್ಣುಕೊಟ್ಟಂತೆಯೇ ಲಾಜರನನ್ನು ಸಹ ಗುಣಪಡಿಸಬಹುದಿತ್ತಲ್ಲವೇ ಎಂದು ಹೇಳುತ್ತಾರೆ (ವ. 37). ಹೀಗೆ ಅವರು ಲಾಜರನ ವಿಷಯದಲ್ಲಿ ಮಧ್ಯಪ್ರವೇಶಿಸದೇ ಇದ್ದುದ್ದಕ್ಕಾಗಿ ಅವರು ಯೇಸುವನ್ನು ದೂರುತ್ತಾರೆ.

15. ಮರಿಯಳು ಸಮಾಧಿಗೆ ಮುಚ್ಚಿದ್ದ ಕಲ್ಲನ್ನು ತೆಗೆಯಲು ಹಿಂಜರಿದಳು, ಯಾಕೆಂದರೆ ಲಾಜರನು ಸತ್ತು ನಾಲ್ಕು ದಿವಸಗಳಾದುದ್ದರಿಂದ ಆತನ ದೇಹದಿಂದ ನಾತ ಬರುತ್ತಿತ್ತು (ವ. 38-40).

16. ಯೇಸು ಲಾಜರನನ್ನು ಬದುಕಿಸುವಲ್ಲಿ ಎರಡು ಸಂಗತಿಗಳನ್ನು ಮಾಡಿದನು (ವ. 41-44):
    a. ಮೊದಲನೆಯದಾಗಿ ತನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕಾಗಿ ಆತನು ಬಹಿರಂಗವಾಗಿ ದೇವರನ್ನು ಕೊಂಡಾಡುತ್ತಾನೆ. ಅಲ್ಲಿ ನೋಡುವವರ ನಂಬಿಕೆಯನ್ನು ಬಲಪಡಿಸುವುದಕ್ಕಾಗಿ ಯೇಸು ಬಹಿರಂಗವಾಗಿ ಹಾಗೆ ಮಾಡುತ್ತಾನೆ.
    b. ಅನಂತರ ಲಾಜರನೇ ಹೊರಗೆ ಬಾ ಎಂದು ದೊಡ್ಡ ಶಬ್ದದಿಂದ ಕೂಗುತ್ತಾನೆ. ಲಾಜರನು ಸಮಾಧಿಯೊಳಗಿಂದ ಹೊರಗೆ ಬಂದಾಗ ಜನರಿಗೆ ಯೇಸುವು ಆತನಿಗೆ ಕಟ್ಟಿದ್ದ ಬಟ್ಟೆಗಳನ್ನು ಬಿಚ್ಚಿರಿ, ಅವನು ಹೋಗಲಿ ಎಂದು ಹೇಳಿದನು.

**ಆಲೋಚಿಸಿರಿ ಮತ್ತು ಚರ್ಚಿಸಿರಿಮೇಲಿನ ಟಿಪ್ಪಣಿಗಳು**

1. "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ ... " (ವ. 25) ಎಂಬ ಪ್ರಸಿದ್ಧವಾದ ಹೇಳಿಕೆಯನ್ನು ಯೇಸುವು ಲಾಜರನನ್ನು ಮರಣದಿಂದ ಬದುಕಿಸಿದ ಅದ್ಭುತದ ಹಿನ್ನಲೆಯಲ್ಲಿ ಹೇಳುತ್ತಾನೆ. ಈ ಅದ್ಭುತವು ದೇವರಿಗೂ ಮತ್ತು ಆತನ ಮಗನಾದ ಯೇಸುವಿಗೂ ಮಹಿಮೆಯನ್ನು ತಂದಿತು (ವ. 4) ಮತ್ತು ಜನರು ಯೇಸುವನ್ನು ನಂಬುವಂತೆ ಮಾಡಿತು (ವ. 27,40,47).
2. –



# ಉಲ್ಲೇಖ

**ಹೊಸ ಒಡಂಬಡಿಕೆಯ ಕಾಲರೇಖೆ**

ದಪ್ಪ ಮುದ್ರಣದಲ್ಲಿರುವುದರ ಹೊರತಾಗಿ ಈ ಕಾಲರೇಖೆಯ ವಿವರಗಳೆಲ್ಲವನ್ನು ಸತ್ಯವೇದ ಪಂಡಿತರಗಳು ಒಪ್ಪುವುದಿಲ್ಲ. ಕೆಲ ಪಂಡಿತರುಗಳು ಯೇಸುವಿನ ಸೇವೆಯ ಕಾಲಾವಧಿ ಕ್ರಿ.ಶ. 30-33 ಎಂದು ಸೂಚಿಸುತ್ತಾರೆ.

| | |
|---|---|
| ಕ್ರಿ.ಪೂ. 37-4 | ಹೆರೋದ ಮಹಾಶಯನು ರೋಮನ್ ಚಕ್ರವರ್ತಿಯ ಸಾರ್ವಭೌಮತ್ವದಡಿಯಲ್ಲಿ ಪ್ಯಾಲೆಸ್ತೀನನ್ನು ಆಳುತ್ತಾನೆ (ಲೂಕ 1:5, ಮತ್ತಾಯ 2:1-19) |
| **ಕ್ರಿ.ಪೂ. 31- ಕ್ರಿ.ಶ. 14** | ಔಗುಸ್ತನು ರೋಮನ್ ಸಾಮ್ರಾಜ್ಯವನ್ನು ಆಳುತ್ತಾನೆ (ಮತ್ತಾ. 2:1). |
| ಕ್ರಿ.ಪೂ. 6 ಅಥವಾ 5 | ಹೆರೋದ ಮಹಾಶಯನ ಆಳ್ವಿಕೆಯ ಸಮಯದಲ್ಲಿ ಯೇಸು ಬೇತ್ಲೆಹೇಮಿನಲ್ಲಿ ಹುಟ್ಟುತ್ತಾನೆ (ಮತ್ತಾ. 2:1). |
| ಕ್ರಿ.ಪೂ. 5 | ಹೆರೋದನು ಯೇಸುವನ್ನು ಕೊಲ್ಲಬೇಕೆಂದು ಯೋಚಿಸಿದಾಗ ತಪ್ಪಿಸಿಕೊಳ್ಳಲು ಯೇಸುವಿನ ಕುಟುಂಬವು ಐಗುಪ್ತಕ್ಕೆ ಓಡಿ ಹೋಗುತ್ತದೆ (ಮತ್ತಾ. 2:13-15). |
| **ಕ್ರಿ.ಪೂ. 4** | **ಕ್ರಿ.ಪೂ. 4** ರಲ್ಲಿ ಹೆರೋದ ಮಹಾಶಯನ ಮರಣದ ನಂತರ ಯೇಸುವಿನ ಕುಟುಂಬವು ಪ್ಯಾಲೆಸ್ತೀನಿಗೆ ಹಿಂತಿರುಗಿ ಗಲಿಲಾಯದ ದಕ್ಷಿಣಕ್ಕಿರುವ ನಜರೇತಿನಲ್ಲಿ ವಾಸವಾಗುತ್ತದೆ (ಮತ್ತಾ. 2:19-23). ಹೆರೋದನ ಸಾಮ್ರಾಜ್ಯವು ಆತನ ಮೂವರು ಮಕ್ಕಳ ನಡುವೆ ವಿಭಜನೆಯಾಗುತ್ತದೆ: ಅರ್ಖೆಲಾಯ, ಎರಡನೇ ಫಿಲಿಪ್ಪ ಹೊರೋದ ಮತ್ತು ಹೆರೋದ ಅಂತಿಫನು. |
| **ಕ್ರಿ.ಪೂ. 4 – ಕ್ರಿ.ಶ. 6** | ತಾನು ರೋಮನ್ನರಿಂದ ಪದಚ್ಯುತನಾದಾಗ ಹೆರೋದ ಮಹಾಶಯನ ಮಗನಾದ ಅರ್ಖೆಲಾಯನು ಕ್ರಿ.ಶ. 6 ರ ವರಗೆ ಯೂದಾಯವನ್ನು ಆಳುತ್ತಾನೆ (ಮತ್ತಾ. 2:22). |
| **ಕ್ರಿ.ಪೂ. 4 – ಕ್ರಿ.ಶ. 34** | ಹೆರೋದ ಮಹಾಶಯನ ಮಗನಾದ ಎರಡನೇ ಹೆರೋದ ಫಿಲಿಪ್ಪನು (ಉಪರಾಜನಾದ ಫಿಲಿಪ್ಪ ಲೂಕ 3:1) ಗಲಿಲಾಯದ ಉತ್ತರ ಮತ್ತು ಪೂರ್ವಭಾಗಗಳನ್ನು ಆಳುತ್ತಾನೆ. |
| **ಕ್ರಿ.ಪೂ. 4 – ಕ್ರಿ.ಶ. 39** | ಹೆರೋದ ಮಹಾಶಯನ ಮಗನದ ಹೆರೋದ ಅಂತಿಪನು (ಲೂಕ 3:1, 19-20, 9:7-9 ಮತ್ತು ಮತ್ತಾ. 14:1-12 ರಲ್ಲಿ ಉಪರಾಜನಾದ ಹೆರೋದ, ಮಾರ್ಕ 6:14-28, ಲೂಕ 23:7-15 ರಲ್ಲಿ ರಾಜನಾದ ಹೆರೋದ) ಗಲಿಲಾಯ ಮತ್ತು ಯೊರ್ದನ್ ಹೊಳೆಯ ಪೂರ್ವಭಾಗಗಳನ್ನು ಆಳುತ್ತಾನೆ. |
| **ಕ್ರಿ.ಶ. 6** | ಹೆರೋದ ಮಹಾಶಯನ ಮಗನಾದ ಅರ್ಖೆಲಾಯನು ರೋಮನ್ನರಿಂದ ಪದಚ್ಯುತಗೊಳ್ಳುತ್ತಾನೆ. ಈತನು ರೋಮನ್ ಅಧಿಪತಿಯಿಂದ ಯೂದಾಯದಲ್ಲಿ ನೇಮಕಗೊಳ್ಳುತ್ತಾನೆ (ಮತ್ತಾ. 2:22). |
| **ಕ್ರಿ.ಶ. 14-36** | ತಿಬೇರಿಯನು ರೋಮನ್ ಸಾಮ್ರಾಜ್ಯವನ್ನು ಆಳುತ್ತಾನೆ (ಲೂಕ 3:1). |
| **ಕ್ರಿ.ಶ. 18-36** | ಕಾಯಫನೂ ಯೆರೂಸಲೇಮಿನಲ್ಲಿ ಮಹಾಯಾಜಕನಾಗುತ್ತಾನೆ (ಮತ್ತಾ. 26:3). |
| ಸುಮಾರು ಕ್ರಿ.ಶ. 26 | ಸ್ನಾನಿಕನಾದ ಯೋಹಾನನು ಯೂದಾಯದ ಅಡವಿಗಳಲ್ಲಿ ಮತ್ತು ಯೊರ್ದನ್ ಹೊಳೆಯ ಆಸುಪಾಸಿನಲ್ಲಿ ತನ್ನ ಸೇವೆಯನ್ನು ಪ್ರಾರಂಭಿಸುತ್ತಾನೆ (ಮತ್ತಾ. 3:1). |
| ಕ್ರಿ.ಶ. 28 ಅಥವಾ 29 | ಸ್ನಾನಿಕನಾದ ಯೋಹಾನನು ಅರಸನಾದ ಹೆರೋದನಿಂದ ಕೊಲ್ಲಲ್ಪಡುತ್ತಾನೆ (ಮತ್ತಾ. 14:1-12, ಮಾರ್ಕ 6:14-29, ಲೂಕ 9:7-9). |

| | |
|---|---|
| **ಕ್ರಿ.ಶ. 26 – 36** | ಪೊಂತ್ಯ ಪಿಲಾತನು ಯೂದಾಯಕ್ಕೆ ದೇಶಾಧಿಪತಿ ಆಗುತ್ತಾನೆ (ಮತ್ತಾ. 27:2). |
| ಕ್ರಿ.ಶ. 26 – 30 | ಯೇಸುವಿನ ಸೇವೆಯು ಆತನ ಶಿಲುಬೆಗೇರಿಸುವಿಕೆ, ಪುನರುತ್ಥಾನ ಮತ್ತು ಸ್ವರ್ಗಾರೋಹಣದೊಂದಿಗೆ ಮುಕ್ತಾಯವಾಗುವುದು. |
| ಕ್ರಿ.ಶ. 34 ಅಥವಾ 35 | ಪೌಲನ ಮನಸಾಂತರ. |
| **ಕ್ರಿ.ಶ. 37 – 41** | ಕ್ಯಾಲಿಗುಲಾದ ಗಾಯನು ರೋಮನ್ ಸಾಮ್ರಾಜ್ಯವನ್ನು ಆಳುವುದು. |
| **ಕ್ರಿ.ಶ. 41 – 54** | ಕ್ಲೌದ್ಯ ಚಕ್ರವರ್ತಿ ರೋಮನ್ ಸಾಮ್ರಾಜ್ಯವನ್ನು ಆಳುತ್ತಾನೆ (ಅ.ಕೃ. 11:28, 18:2). |
| **ಕ್ರಿ.ಶ. 54 – 68** | ನೀರೋ ಚಕ್ರವರ್ತಿಯು ರೋಮನ್ ಸಾಮ್ರಾಜ್ಯವನ್ನು ಆಳುತ್ತಾನೆ. |
| ಸುಮಾರು ಕ್ರಿ.ಶ. 55 | ಮಾರ್ಕನ ಸುವಾರ್ತೆ ಬರೆಯಲ್ಪಟ್ಟಿತ್ತು. |
| ಸುಮಾರು ಕ್ರಿ.ಶ. 60 | ಮತ್ತಾಯ ಮತ್ತು ಲೂಕನ ಸುವಾರ್ತೆಗಳು ಬರೆಯಲ್ಪಟ್ಟವು. |
| ಕ್ರಿ.ಶ. 66 | ನೀರೋ ಚಕ್ರವರ್ತಿಯ ಆಳ್ವಿಕೆಯ ಅವಧಿಯಲ್ಲಿ ಪೇತ್ರ ಮತ್ತು ಪೌಲರು ರೋಮ್ ನಲ್ಲಿ ರಕ್ತಸಾಕ್ಷಿಗಳಾದದ್ದು. |
| ಕ್ರಿ.ಶ. 70 ಕ್ಕಿಂತ ಮುಂಚೆ | ಯೋಹಾನನ ಸುವಾರ್ತೆಯ ಬರೆಯಲ್ಪಟ್ಟಿತ್ತು. |
| **ಕ್ರಿ.ಶ. 70** | ರೋಮನ್ನರಿಂದ ಯೆರೂಸಲೇಮ್ ದೇವಾಲಯವನ್ನು ಕೆಡವಲ್ಪಟ್ಟಿತು. |

**ಯೇಸುವಿನ ಜೀವನದ ನಾಲ್ಕು ಕಾಲರೇಖೆಗಳು**

ಈ ಕಾಲರೇಖೆಗಳು NIV ಅಧ್ಯಯನ ಸತ್ಯವೇದವನ್ನು ಆಧರಿಸಿವೆ. ಅವು ಯೇಸುವಿನ ಜೀವನವನ್ನು ಕಾಲರೇಖೆಗನುಗುಣವಾಗಿ ವಿವರಿಸುವ ಒಂದು ಬಗೆಯಾಗಿವೆ. ಬೇರೆ ಸತ್ಯವೇದ ಪಂಡಿತರುಗಳು ಇದನ್ನು ವ್ಯತ್ಯಾಸಮಯವಾಗಿ ಮಾಡಿದ್ದಾರೆ.

**1. ಯೇಸುವಿನ ಬಾಲ್ಯ**

ಕ್ರಿ.ಪೂ. 7 ಅಥವಾ 6 ಸ್ನಾನಿಕನಾದ ಯೋಹಾನನ ಜನನವನ್ನು ಮುಂತಿಳಿಸಿದ್ದು (ಲೂಕ 1:5-25).
ಸ್ನಾನಿಕನಾದ ಯೋಹಾನನ ಜನನ (ಲೂಕ 1:57-80).

ಕ್ರಿ.ಪೂ. 6 ಅಥವಾ 5 ಯೇಸುವಿನ ಜನನವನ್ನು ಮುಂತಿಳಿಸಿದ್ದು (ಮತ್ತಾ. 1:18-24, ಲೂಕ 1:26-38).

ಯೇಸುವು ಯೂದಾಯದಲ್ಲಿ ಜನಿಸಿದ್ದು (ಮತ್ತಾ. 1:25, ಲೂಕ 2:1-7).

ಬೇತ್ಲೆಹೇಮಿನ ಸಮೀಪದ ಹೊಲಗಳಿಂದ ಬಂದ ಕುರುಬರ ಭೇಟಿ (ಲೂಕ 2:8-20).

ಯೇಸುವನ್ನು ಯೆರೂಸಲೇಮಿನ ದೇವಾಲಯದಲ್ಲಿ ಸಮರ್ಪಿಸಿದ್ದು (ಲೂಕ 2:21-40).

ಕ್ರಿ.ಪೂ. 5 ಅಥವಾ 4 ಮೂಡಣ ದೇಶದ ಜೋಯಿಸರು ಬೇತ್ಲೆಹೇಮಿನಲ್ಲಿ ಯೇಸುವನ್ನು ಸಂಧಿಸಿದ್ದು (ಮತ್ತಾ. 2:1-12).

ಯೇಸುವಿನ ಕುಟುಂಬವು ಐಗುಪ್ತಕ್ಕೆ ಓಡಿ ಹೋದದ್ದು (ಮತ್ತಾ. 2:13-18).

ಕ್ರಿ.ಪೂ. 4 ಅಥವಾ 3 ಯೇಸುವಿನ ಕುಟುಂಬವು ಐಗುಪ್ತದಿಂದ ಪ್ಯಾಲೆಸ್ತೀನಿಗೆ ಹಿಂತಿರುಗಿ ದಕ್ಷಿಣ ಗಲಿಲಾಯದ ನಜರೇತಿನಲ್ಲಿ ನೆಲೆಸಿದ್ದು (ಮತ್ತಾ. 2:19-23).

ಕ್ರಿ.ಶ. 7 ಅಥವಾ 8 ಪಸ್ಕಹಬ್ಬದಲ್ಲಿ ತನ್ನ ಹನ್ನೆರಡನೆ ಪ್ರಾಯದಲ್ಲಿ ಯೇಸು ಯೆರೂಸಲೇಮಿನ ದೇವಾಲಯಕ್ಕೆ ಹೋದದ್ದು (ಲೂಕ 2:41-50).

ಕ್ರಿ.ಶ. 8 ಮತ್ತು ನಂತರ ಯೇಸುವು ವಯಸ್ಕನಾಗಿ ಬೆಳೆದದ್ದು (ಲೂಕ 2:51-52).

**2. ಯೇಸುವಿನ ಸೇವೆ**

ಕ್ರಿ.ಶ. 26 ಯೇಸು ಸ್ನಾನಿಕನಾದ ಯೋಹಾನನಿಂದ ಯೊರ್ದನ್ ಹೊಳೆಯಲ್ಲಿ ದೀಕ್ಷಾಸ್ನಾನ ಹೊಂದಿದ್ದು (ಮತ್ತಾ 3:13-17, ಮಾರ್ಕ 1:9-11, ಲೂಕ 3:21-23, ಯೋಹಾನ 1:28-39), ಯೇಸು ಅಡವಿಯಲ್ಲಿ ಸೈತಾನನಿಂದ ಶೋಧಿಸಲ್ಪಟ್ಟದ್ದು (ಮತ್ತಾ. 4:1-11, ಮಾರ್ಕ 1:12-19, ಲೂಕ 4:1-13).

ಯೊರ್ದನ್ ಹೊಳೆಯ ಬಳಿ ಮತ್ತು ಗಲಿಲಾಯದಲ್ಲಿ ಯೇಸುವಿನ ಮೊದಲ ಹಿಂಬಾಲಕರು (ಯೋಹಾನ 1:35-42, 1:43-51) ಕಾನಾ ಊರಿನಲ್ಲಿ ಯೇಸು ಮಾಡಿದ ಮೊದಲ ಅದ್ಭುತ (ನೀರನ್ನು ದ್ರಾಕ್ಷಾರಸವನ್ನಾಗಿ ಮಾಡಿದ್ದು) (ಯೋಹಾನ 2:1-11).

ಕ್ರಿ.ಶ. 27 ಪಸ್ಕಹಬ್ಬದಲ್ಲಿ ಮೊದಲು ಯೇಸು ಯೆರೂಸಲೇಮ್ ದೇವಾಲಯವನ್ನು ಶುದ್ಧಿಗೊಳಿಸಿದ್ದು (ಯೋಹಾನ 2:13-22).

| | |
|---|---|
| | ಸಮಾರ್ಯದ ಸುಖರೆಂಬ ಊರಿನ ಬಳಿ ಯೇಸು ಸಮಾರ್ಯ ಸ್ತ್ರೀಯನ್ನು ಸಂಧಿಸಿದ್ದು (ಯೋಹಾನ 4:5-22). |
| | ಗಲಿಲಾಯದ ಕಾನಾ ಬಳಿ ಯೇಸು ಅಧಿಕಾರಿಯೊಬ್ಬನ ಮಗನನ್ನು ಗುಣಪಡಿಸಿದ್ದು (ಯೋಹಾನ 4:46-54). |
| | ಯೇಸುವಿನ ತವರಲ್ಲಿ ನಜರೇತಿನ ಜನರು ಯೇಸುವನ್ನು ಕೊಲ್ಲಲು ಯತ್ನಿಸಿದ್ದು (ಲೂಕ 4:16-31). |
| | ಗಲಿಲಾಯದ ಸಮುದ್ರದ ಕಪೆರ್ನೌಮಿನ ಬಳಿ ನಾಲ್ಕು ಮಂದಿ ಬೆಸ್ತರು ಯೇಸುವಿನ ಶಿಷ್ಯರಾದದ್ದು (ಸೀಮೋನ ಪೇತ್ರ ಮತ್ತು ಅಂದ್ರೆಯ, ಯಾಕೋಬ ಮತ್ತು ಯೋಹಾನ) (ಮತ್ತಾ. 4:18-22, ಮಾರ್ಕ 1:16-20, ಲೂಕ 5:1-11). |
| | ಕಪೆರ್ನೌಮಿನಲ್ಲಿ ಯೇಸು ಪೇತ್ರನ ಅತ್ತೆಯನ್ನು ಗುಣಪಡಿಸಿದ್ದು (ಮತ್ತಾ. 8:14-17, ಮಾರ್ಕ 1:29-34, ಲೂಕ 4:38-39). |
| | ಗಲಿಲಾಯದಿಂದ ಯೇಸು ತನ್ನ ಮೊದಲ ಸುವಾರ್ತಾ ಪ್ರಯಾಣ ಪ್ರಾರಂಭಿಸಿದ್ದು (ಮತ್ತಾ. 4:23-25, ಮಾರ್ಕ 1:35-39, ಲೂಕ 4:42-44). |
| | ಸುಂಕ ವಸೂಲಿಗಾರನಾದ ಮತ್ತಾಯನು ಯೇಸುವಿನ ಶಿಷ್ಯನಾದದ್ದು (ಮತ್ತಾ. 9:9-13, ಮಾರ್ಕ 2:13-17, ಲೂಕ 5:27-32). |
| ಕ್ರಿ.ಶ. 28 | ಯೇಸು ಹನ್ನೆರಡು ಶಿಷ್ಯರನ್ನು ನೇಮಿಸಿದ್ದು (ಮತ್ತಾ. 10:1-4, ಮಾರ್ಕ 3:13-19, ಲೂಕ 12-15). |
| | ಯೇಸು ಪರ್ವತ ಪ್ರಸಂಗ ಮಾಡಿದ್ದು (ಮತ್ತಾ.5:1-7, ಲೂಕ 6:20-49). |
| | ಕಪೆರ್ನೌಮಿನಲ್ಲಿ ಒಬ್ಬ ಹೆಂಗಸು ಯೇಸುವಿಗೆ ತೈಲ ಹಚ್ಚಿದ್ದು (ಲೂಕ 7:35-50). |
| | ಪುನಃ ಯೇಸು ಗಲಿಲಾಯದ ಮೂಲಕ ಪ್ರಯಾಣಿಸಿದ್ದು (ಲೂಕ 8:1-3). |
| | ಯೇಸು ಸಾಮ್ಯದ ಮೂಲಕ ದೇವರ ರಾಜ್ಯದ ಬಗ್ಗೆ ಉಪದೇಶ ಮಾಡಿದ್ದು (ಮತ್ತಾ. 13:1-52, ಮಾರ್ಕ 4:35-41, ಲೂಕ 8:22-25). |
| | ಗಲಿಲಾಯದ ಸಮುದ್ರದ ಮೇಲೆ ಯೇಸು ಬಿರುಗಾಳಿಯನ್ನು ಶಾಂತಪಡಿಸಿದ್ದು (ಮತ್ತಾ. 8:23-27, ಮಾರ್ಕ 4:35-41, ಲೂಕ 8:22-25). |
| | ಕಪೆರ್ನೌಮಿನ ಸಭಾಮಂದಿರ ಅಧಿಕಾರಿಯಾದ ಯಾಯೀರನ ಮಗಳನ್ನು ಯೇಸು ಬದುಕಿಸಿದ್ದು (ಮತ್ತಾ. 9:18-26, ಮಾರ್ಕ 5:21-43, ಲೂಕ 8:40-56). |
| | ಯೇಸು ಸುವಾರ್ತೆ ಸಾರಲು ಮತ್ತು ರೋಗಿಗಳನ್ನು ಗುಣಪಡಿಸಲು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಅಧಿಕಾರದೊಂದಿಗೆ ಕಳಿಸಿದ್ದು (ಮತ್ತಾ. 9:35, 11:1, ಮಾರ್ಕ 6:6-13, ಲೂಕ 9:1-9). |
| ಕ್ರಿ.ಶ 28 ಅಥವಾ 29 | ಸ್ನಾನಿಕನಾದ ಯೋಹಾನನು ಅರಸನಾದ ಹೆರೋದನಿಂದ ಕೊಲ್ಲಲ್ಪಟ್ಟದ್ದು (ಮತ್ತಾ. 14:1-12, ಮಾರ್ಕ 6:14-29, ಲೂಕ 9:7-9). |

ಕ್ರಿ.ಶ. 29 ಗಲಿಲಾಯದ ಬೇತ್ಸಾಯಿದದ ಬಳಿ ಯೇಸು ಐದು ಸಾವಿರ ಮಂದಿಗೆ ಊಟಮಾಡಿಸಿದ್ದು (ಮತ್ತಾ. 14:13-21, ಮಾರ್ಕ 6:30-44, ಲೂಕ 9:10-17, ಯೋಹಾನ 6:1-14).

ಯೇಸು ನೀರಿನ ಮೇಲೆ ನಡೆದದ್ದು (ಮತ್ತಾ. 14:22-33, ಮಾರ್ಕ 6:45-52, ಯೋಹಾನ 6:16-21).

ಯೇಸು ತೂರ್ ಮತ್ತು ಸೀದೋನ್ ಪಟ್ಟಣಕ್ಕೆ ಹೋದದ್ದು (ಮತ್ತಾ. 15:21-28, ಮಾರ್ಕ 7:24-30).

ಯೇಸು ನಾಲ್ಕು ಸಾವಿರ ಜನರಿಗೆ ಊಟಮಾಡಿಸಿದ್ದು (ಮತ್ತಾ. 15:32-39, ಮಾರ್ಕ 8:1-9).

ಪೇತ್ರನು ಯೇಸು ದೇವಕುಮಾರನೆಂದು ಅರಿಕೆಮಾಡಿದ್ದು (ಮತ್ತಾ. 16:13-20, ಮಾರ್ಕ 8:27-30, ಲೂಕ 9:18-21).

ಯೇಸು ಕೈಸರೈನ ಫಿಲಿಪ್ಪದಲ್ಲಿ ಶಿಷ್ಯರಿಗೆ ತಾನು ಸಾಯಲು ಹೋಗುತ್ತಿದ್ದೇನೆಂಬುದಾಗಿ ಹೇಳಿದ್ದು (ಮತ್ತಾ. 16:21-22, ಮಾರ್ಕ 8:31-37, ಲೂಕ 9:22-25).

ಯೇಸು ರೂಪಾಂತರಗೊಂಡಿದ್ದು (ಮತ್ತಾ. 17:1-13, ಮಾರ್ಕ 9:2-13, ಲೂಕ 9:28-36).

ಕಪೆರ್ನೌಮಿನಲ್ಲಿ ಯೇಸು ದೇವಾಲಯದ ತೆರಿಗೆ ಕಟ್ಟಿದ್ದು (ಮತ್ತಾ. 17:24-27).

ಯೇಸು ಯೆರೂಸಲೇಮಿನಲ್ಲಿ (ಅಕ್ಟೋಬರ್ 26 ಕ್ರಿ.ಶ) ಪರ್ಣಶಾಲೆಗಳ ಗುಡಾರಗಳ ಹಬ್ಬದಲ್ಲಿ ಪಾಲ್ಗೊಂಡಿದ್ದು (ಯೋಹಾನ 7:11-52).

ಯೇಸು ಹುಟ್ಟುಕುರುಡನನ್ನು ಗುಣಪಡಿಸಿದ್ದು (ಯೋಹಾನ 9:1-41).

ಯೇಸು ಬೇಥಾನ್ಯದಲ್ಲಿ ಮರಿಯ ಮತ್ತು ಮಾರ್ಥಳನ್ನು ಸಂಧಿಸಿದ್ದು (ಲೂಕ 10:38-42).

ಬೇಥಾನ್ಯದಲ್ಲಿ ಯೇಸು ಸತ್ತ ಲಾಜರನನ್ನು ಎಬ್ಬಿಸಿದ್ದು (ಯೋಹಾನ 11:1-44).

ಕ್ರಿ.ಶ. 30 ಯೇಸು ಯೆರೂಸಲೇಮಿಗೆ ತನ್ನ ಕೊನೇ ಪ್ರಯಾಣ ಪ್ರಾರಂಭಿಸಿದ್ದು (ಲೂಕ 17:11).

ಯೇಸು ಯೊರ್ದನ್ ಹೊಳೆಯ ಆಚೇಕಡೆ ಸಣ್ಣ ಮಕ್ಕಳನ್ನು ಆಶೀರ್ವದಿಸಿದ್ದು (ಮತ್ತಾ. 19:13-15, ಮಾರ್ಕ 10:13-16, ಲೂಕ 18:15-17).

ಯೊರ್ದನ್ ಹೊಳೆಯ ಆಚೇಕಡೆ ಯೇಸು ಐಶ್ವರ್ಯವಂತನೊಂದಿಗೆ ಮಾತನಾಡುವುದು (ಮತ್ತಾ. 19:16-20, ಮಾರ್ಕ 10:17-31, ಲೂಕ 18:18-30).

ಯೊರ್ದನ್ ಹೊಳೆಯ ಸಮೀಪ ಯೇಸು ತನ್ನ ಶಿಷ್ಯರಿಗೆ ಪುನಃ ತನ್ನ ಮರಣ ಮತ್ತು ಪುನರುತ್ಥಾನದ ಬಗ್ಗೆ ಹೇಳಿದ್ದು (ಮತ್ತಾ. 20:17-19, ಮಾರ್ಕ 10:32-34, ಲೂಕ 18:31-34).

ಯೆರಿಕೋ ಬಳಿ ಯೇಸು ಕುರುಡ ಬಾರ್ತಿಮಾಯನನ್ನು ಗುಣಪಡಿಸಿದ್ದು (ಮಾರ್ಕ 10:46-52, ಲೂಕ 18:35-43).

ಯೆರಿಕೋದಲ್ಲಿ ಯೇಸು ಮತ್ತು ಸುಂಕದ ಗುತ್ತಿಗೆದಾರನಾದ ಜಕ್ಕಾಯ (ಲೂಕ 19:1-10).

ಮಾರ್ಥ ಮತ್ತು ಮರಿಯಳನ್ನು ಕಾಣಲು ಯೇಸು ಬೇಥಾನ್ಯಕ್ಕೆ ಹಿಂತಿರುಗಿದ್ದು (ಯೋಹಾನ 11:55, 12:1).

ಕ್ರಿ.ಶ. 30 ರಲ್ಲಿ ಪಸ್ಕಹಬ್ಬದ ಸಮಯದಲ್ಲಿ ಯೆರೂಸಲೇಮಿನಲ್ಲಿ ಯೇಸುವಿನ ಮರಣ ಮತ್ತು ಪುನರುತ್ಥಾನ.

ತನ್ನ ಪುನರುತ್ಥಾನದ ನಂತರ 40 ದಿನಗಳಲ್ಲಿ ಯೇಸು ಕಾಣಿಸಿಕೊಂಡದ್ದು.

ಗಲಿಲಾಯದ ಬೆಟ್ಟವೊಂದರಲ್ಲಿ ಯೇಸು ತನ್ನ ಶಿಷ್ಯರಿಗೆ ಮಹಾ ಆದೇಶವನ್ನು ಕೊಡುವುದು (ಮತ್ತಾ. 28:16-20).

ಯೆರೂಸಲೇಮಿನ ಬಳಿಯ ಬೇಥಾನ್ಯದ ಗುಡ್ಡದ ಮೇಲೆ ಯೇಸುವಿನ ಸ್ವರ್ಗಾರೋಹಣ (ಮಾರ್ಕ 16:19, ಲೂಕ 24:44-53).

**3. ಶ್ರಮೆಯ ವಾರ**

| | |
|---|---|
| ಭಾನುವಾರ | ಯೇಸು ಅರಸನಂತೆ ಯೆರೂಸಲೇಮನ್ನು ಪ್ರವೇಶಿಸಿದ್ದು (ಮತ್ತಾ. 21:1-11, ಮಾರ್ಕ 11:1-10, ಲೂಕ 19:29-44, ಯೋಹಾನ 12:12-19). |
| | ಕೆಲ ಗ್ರೀಕರು ಯೇಸುವನ್ನು ನೋಡಬೇಕೆಂದು ಬಯಸಿದ್ದು (ಯೋಹಾನ 12:20-36). |
| ಸೋಮವಾರ | ಯೇಸು ಅಂಜೂರ ಮರವನ್ನು ಶಪಿಸಿದ್ದು (ಮತ್ತಾ. 21:18-19, ಮಾರ್ಕ 11:12-19). |
| | ಯೇಸು ದೇವಾಲಯವನ್ನು ಶುಚಿಗೊಳಿಸಿದ್ದು (ಮತ್ತಾ. 21:12-13, ಮಾರ್ಕ 11:15-18). |
| ಮಂಗಳವಾರ | ಒಣಗಿಹೋದ ಅಂಜೂರದ ಮರ (ಮತ್ತಾ. 21:20-22, ಮಾರ್ಕ 11:20-21). |
| | ಯೇಸುವಿನ ಅಧಿಕಾರವನ್ನು ಪ್ರಶ್ನಿಸಿದ್ದು (ಮತ್ತಾ. 21:23-27, ಮಾರ್ಕ 11:27-33, ಲೂಕ 20:1-8). |
| | ಯೇಸು ದೇವಾಲಯದಲ್ಲಿ ಉಪದೇಶಿಸಿದ್ದು (ಮತ್ತಾ. 21:28 - 23:39, ಮಾರ್ಕ 12:1-44, ಲೂಕ 20:9, 21:4). |
| | ಯೇಸು ಎಣ್ಣೇಮರಗಳ ಗುಡ್ಡದ ಮೇಲೆ ಉಪದೇಶಿಸಿದ್ದು (ಮತ್ತಾ. 24:1 - 25:46, ಮಾರ್ಕ 13:1-37, ಲೂಕ 21:5-36). |
| | ಬೇಥಾನ್ಯದಲ್ಲಿ ಯೇಸುವಿಗೆ ತೈಲ ಹಚ್ಚಿದ್ದು (ಮತ್ತಾ. 26:1-13, ಮಾರ್ಕ 14:3-9, ಯೋಹಾನ 12:1-11). |
| ಬುಧವಾರ | ಯೇಸುವಿಗೆ ವಿರೋಧವಾಗಿ ಸಂಚು (ಮತ್ತಾ. 26:14-16, ಮಾರ್ಕ 14:10-11, ಲೂಕ 22:3-6). |
| ಗುರುವಾರ | ಪಸ್ಕಹಬ್ಬಕ್ಕೆ ಸಿದ್ಧತೆ (ಮತ್ತಾ. 26:17-19, ಮಾರ್ಕ 14:12-16, ಲೂಕ 22:7-13). |
| | ಕಡೇ ಭೋಜನ (ಮತ್ತಾ. 26:17-29, ಮಾರ್ಕ 14:12-25, ಲೂಕ 22:7-20, ಯೋಹಾನ 13:1-38). |

| | |
|---|---|
| | ಯೇಸು ತನ್ನ ಶಿಷ್ಯರನ್ನು ಸಂತೈಸಿದ್ದು (ಯೋಹಾನ 14:1 – 16-33) |
| ಗುರುವಾರ ರಾತ್ರಿ | ಗೆತ್ಸೇಮನೆ ಮತ್ತು ಯೇಸುವಿನ ಬಂಧನ (ಮತ್ತಾ. 26:36-56, ಮಾರ್ಕ 14:32-52, ಲೂಕ 22:40-65, ಯೋಹಾನ 18:1-12). |
| ಶುಕ್ರವಾರ | ಯೇಸುವಿನ ವಿಚಾರಣೆ (ಮತ್ತಾ. 26:57 – 27:26, ಮಾರ್ಕ 14:53 – 15:15, ಲೂಕ 22:66 – 23:25, ಯೋಹಾನ 18:13 – 19:16). |
| | ಯೇಸುವನ್ನು ಶಿಲುಬೆಗೇರಿಸಿದ್ದು ಮತ್ತು ಆತನ ಮರಣ (ಮತ್ತಾ. 27:27-56, ಮಾರ್ಕ 15:16-41, ಲೂಕ 23:26-49, ಯೋಹಾನ 19:17-30). |
| | ಯೇಸುವನ್ನು ಹೂಣಿಟ್ಟಿದ್ದು (ಮತ್ತಾ. 27:57-66, ಮಾರ್ಕ 15:42-47, ಲೂಕ 23:50-56, ಯೋಹಾನ 19:31-42). |

**4.ಪುನರುತ್ಥಾನದ ಪ್ರತ್ಯಕ್ಷತೆ**

| | |
|---|---|
| ಭಾನುವಾರ ಮುಂಜಾನೆ | ಬರಿದಾದ ಸಮಾಧಿ (ಮತ್ತಾ. 28:1-10, ಮಾರ್ಕ 16:1-8, ಲೂಕ 24:1-12, ಯೋಹಾನ 20:1-20). |
| | ಮಗ್ದಲದ ಮರಿಯಳು ಯೇಸುವನ್ನು ತೋಟದಲ್ಲಿ ನೋಡುವುದು (ಯೋಹಾನ 20:11-18, ಮಾರ್ಕ 16:9-11). |
| ಭಾನುವಾರ ಸಂಜೆ | ಎಮ್ಮಾಹುವಿನ ದಾರಿಯಲ್ಲಿ ಯೇಸು ಇಬ್ಬರಿಗೆ ಕಾಣಿಸಿಕೊಳ್ಳುವುದು (ಲೂಕ 24:13-35, ಮಾರ್ಕ 16:12-13). |
| | ಯೇಸು ಯೆರೂಸಲೇಮಿನಲ್ಲಿ ಶಿಷ್ಯರ ಒಂದು ಗುಂಪಿಗೆ ಕಾಣಿಸಿಕೊಳ್ಳುವುದು (ಮಾರ್ಕ 16:14, ಲೂಕ 24:36-43, ಯೋಹಾನ 20:19-25). |
| ಒಂದು ವಾರದ ನಂತರ | ಯೇಸು ಯೆರೂಸಲೇಮಿನಲ್ಲಿ ಹನ್ನೊಂದು ಮಂದಿ ಶಿಷ್ಯರಿಗೆ ಕಾಣಿಸಿಕೊಂಡದ್ದು (ಯೋಹಾನ 20:26-29). |
| ಅನಂತರ | ಯೇಸು ಗಲಿಲಾಯ ಸಮುದ್ರದ ಬಳಿ ಕೆಲ ಶಿಷ್ಯರಿಗೆ ಕಾಣಿಸಿಕೊಂಡದ್ದು (ಯೋಹಾನ 21:1-24). |
| ಅನಂತರ | ಗಲಿಲಾಯದಲ್ಲಿನ ಬೆಟ್ಟವೊಂದರಲ್ಲಿ ಯೆಸು ತನ್ನ ಶಿಷ್ಯರಿಗೆ ಮಹಾ ಆದೇಶ/ಆಜ್ಞೆಯನ್ನು ಕೊಡುತ್ತಾನೆ (ಮತ್ತಾ. 28:16-20). |
| ಅನಂತರ | ಪಂಚಾಶತ್ತಮ ಹಬ್ಬಕ್ಕಿಂತ ಮೊದಲು ಯೇಸು ಪರಲೋಕಕ್ಕೆ ಏರಿಹೋಗುತ್ತಾನೆ. ಇದು ಯೆರೂಸಲೇಮಿನ ಸಮೀಪದ ಬೇಥಾನ್ಯದ ಎಣ್ಣೇಮರಗಳ ಗುಡ್ಡದ ಮೇಲೆ ಸಂಭವಿಸುತ್ತದೆ (ಮಾರ್ಕ 16:19, ಲೂಕ 24:44-53). |

**ಯೇಸುವಿನ ಹನ್ನೆರಡು ಮಂದಿ ಅಪೊಸ್ತಲರು**

ಈ ಪಟ್ಟಿಯು NIV ಅಧ್ಯಯನ ಸತ್ಯವೇದವನ್ನಾಧರಿಸಿದೆ.

| **ಮತ್ತಾ. 10:2-4** | **ಮಾರ್ಕ 3:16-19** | **ಲೂಕ 6:14-16** | **ಯೋಹಾನ** | **ಅ.ಕೃ. 1:13** |
|---|---|---|---|---|
| 1. ಸೀಮೋನನು ಪೇತ್ರನೆಂದು ಕಳುಹಿಸಲ್ಪಟ್ಟದ್ದು | 1. ಸೀಮೋನ (ಪೇತ್ರ) | 1. ಸೀಮೋನ (ಪೇತ್ರ) | 1. ಸೀಮೋನ ಪೇತ್ರ (1:40-42) | 1. ಪೇತ್ರ |
| 2. ಅಂದ್ರೆಯ ಸೀಮೋನ ಪೇತ್ರನ ತಮ್ಮ | 4. ಅಂದ್ರೆಯ | 2. ಸೀಮೋನನ ತಮ್ಮನಾದ ಅಂದ್ರೆಯ | ಅಂದ್ರೆಯ, ಸೀಮೋನ ಪೇತ್ರನ ತಮ್ಮ | 4. ಅಂದ್ರೆಯ |
| 3.ಜೆಬೆದಾಯನ ಮಗನಾದ ಯಾಕೋಬ | 2. ಜೆಬೆದಾಯನ ಮಗನಾದ ಯಾಕೋಬ | 3. ಯಾಕೋಬ | ಜೆಬೆದಾಯನ ಕುಮಾರ (21:2) | 3. ಯಾಕೋಬ |
| 4. ಯಾಕೋಬನ ತಮ್ಮನಾದ ಯೋಹಾನ | 3. ಯೋಕೋಬನ ತಮ್ಮನಾದ ಯೋಹಾನ | 4. ಯೋಹಾನ | ಜೆಬೆದಾಯನ ಕುಮಾರ (21:2) | 2. ಯೋಹಾನ |
| 5. ಫಿಲಿಪ್ಪ | 5. ಫಿಲಿಪ್ಪ | 5. ಫಿಲಿಪ್ಪ | ಬೇತ್ಸಾಯಿದದ ಫಿಲಿಪ್ಪ (1:43-44) | 5. ಫಿಲಿಪ್ಪ |
| 6.ಬಾರ್ತೊಲೋಮಾಯ | 6.ಬಾರ್ತೊಲೋಮಾಯ | 6.ಬಾರ್ತೊಲೋಮಾಯ | ಕಾನಾದ ನತಾನಯೇಲ (1:45-49, 21:2) ಈತನು ಬಾರ್ತೊಲೋಮಾಯನಾಗಿರಬಹುದು | 7.ಬಾರ್ತೊಲೋಮಾಯ |
| 7. ತೋಮ | 8. ತೋಮ | 8. ತೋಮ | ದಿದುಮನೆಂಬ ತೋಮ (11:16) | 6. ತೋಮ |
| 8. ಸುಂಕದವನಾದ ಮತ್ತಾಯ | 7. ಮತ್ತಾಯ (ಲೇವಿ, ಅಲ್ಫಾಯನ ಮಗ, ಸುಂಕದವನು, 2:14) | 7. ಮತ್ತಾಯ (ಲೇವಿ, ಸುಂಕದವನು, 5:27) | | 8. ಮತ್ತಾಯ |
| 9. ಅಲ್ಫಾಯನ ಮಗನಾದ ಯಾಕೋಬ | 9. ಅಲ್ಫಾಯನ ಮಗನಾದ ಯೋಕೋಬ | 9. ಅಲ್ಫಾಯನ ಮಗನಾದ ಯಾಕೋಬ | | 9. ಅಲ್ಫಾಯನ ಮಗನಾದ ಯಾಕೋಬ |

| | | | | |
|---|---|---|---|---|
| 10. ತದ್ದಾಯ | 10. ತದ್ದಾಯ | 11. ಯಾಕೋಬನ ಮಗನಾದ ಯೂದ | ಯೂದ (ಇಸ್ಕರಿಯೋತನಲ್ಲ) (14:22) | 11. ಯಾಕೋಬನ ಮಗನಾದ ಯೂದ |
| 11. ಮತಾಭಿಮಾನಿಯಾದ ಸೀಮೋನ | 11. ಮತಾಭಿಮಾನಿಯಾದ ಸೀಮೋನ | 10. ಮತಾಭಿಮಾನಿಯಾದ ಸೀಮೋನ | | 10. ಮತಾಭಿಮಾನಿಯಾದ ಸೀಮೋನ |
| 12. ಇಸ್ಕರಿಯೋತ ಯೂದ | 12. ಇಸ್ಕರಿಯೋತ ಯೂದ | 12. ಇಸ್ಕರಿಯೋತ ಯೂದ | ಸಿಮೋನ ಇಸ್ಕರಿಯೋತನ ಮಗನಾದ ಯೂದ | 12.ಯೂದನು ಸತ್ತ ನಂತರ ಮತ್ತೀಯನು ಆಯ್ಕೆಯಾದದ್ದು (1:26) |

**ಯೇಸುವಿನ ಸಾಮ್ಯಗಳು**

ಈ ಪಟ್ಟಿಯು NIV ಅಧ್ಯಯನ ಸತ್ಯವೇದವನ್ನಾಧರಿಸಿದೆ. ಎಲ್ಲಾ ಸತ್ಯವೇದ ಪಂಡಿತರು ಇವೆಲ್ಲವನ್ನು ಸಾಮ್ಯವೆಂಬುದಾಗಿ ಪರಿಗಣಿಸಿಲ್ಲ (ಉದಾ: ಮೊದಲ ನಾಲ್ಕು)

| ಸಾಮ್ಯ | ಮತ್ತಾಯ | ಮಾರ್ಕ | ಲೂಕ |
|---|---|---|---|
| ಕೊಳಗದೊಳಗಿನ ದೀಪ | 5:4-15 | 4:21-22 | 8:16, 11:33 |
| ಬುದ್ಧಿವಂತ ಮತ್ತು ಬುದ್ಧಿಹೀನ ಕಟ್ಟಡ ಕಟ್ಟುವವರು | 7:24-27 | | 4:47-49 |
| ಹಳೆಯ ಬಟ್ಟೆಗೆ ತ್ಯಾಪೆ | 9:16 | 2:21 | 5:36 |
| ಹಳೆಯ ಬುದ್ದಲಿಯಲ್ಲಿ ಹೊಸ ದ್ರಾಕ್ಷಾರಸ | 9:17 | 2:22 | 5:37-38 |
| ಬಿತ್ತುವವನು ಮತ್ತು ನೆಲ | 13:3-8, 18-23 | 4:3-8, 14-20 | 8:5-8, 11-15 |
| ಹಣಜಿ | 13:24-30, 36-43 | | |
| ಸಾಸಿವೆ ಕಾಳು | 13:31-32 | 4:30-32 | 13:18-19 |
| ಹುಳಿ | 13:33 | | 13:20-21 |
| ಹೂಳಿಟ್ಟ ದ್ರವ್ಯ | 13:44 | | |
| ಬೆಲೆಬಾಳುವ ಮುತ್ತು | 13:45-46 | | |
| ಬಲೆ | 13:47-50 | | |
| ಮನೆಯ ಯಜಮಾನ | 13:52 | | |
| ಕಳೆದು ಹೋದ ಕುರಿ | 18:12-14 | | 15:4-7 |
| ಕರುಣೆಯಿಲ್ಲದ ಸೇವಕ | 18:23-34 | | |
| ದ್ರಾಕ್ಷೇತೋಟದ ಆಳುಗಳು | 20:1-16 | | |
| ಇಬ್ಬರು ಮಕ್ಕಳು | 21:28-32 | | |
| ಒಕ್ಕಲಿಗರು | 21:33-44 | 12:1-11 | 20:9-18 |
| ಮದುವೆ ಭೋಜನ | 22:2-14 | | |
| ಅಂಜೂರದ ಮರ | 24:32-35 | 13:28-29 | 21:29-31 |
| ನಂಬಿಗಸ್ತ ಒಳ್ಳೇ ಆಳು | 24:45-51 | | 12:42-48 |
| ಹತ್ತು ಮಂದಿ ಕನ್ಯೆಯರು | 25:1-13 | | |
| ತಲಾಂತುಗಳು | 25:14-30 | | 19:12-27 |
| ಕುರಿಗಳು ಮತ್ತು ಆಡುಗಳು | 25:31-46 | | |
| ಬೆಳೆಯುವ ಬೀಜ | | 4:26-29 | |
| ಎಚ್ಚರವಾಗಿರುವ ಸೇವಕರು | | 13:35-37 | 12:35-40 |
| ಸಾಲಗಾರರು | | | 7:41-43 |

| | | | |
|---|---|---|---|
| ಒಳ್ಳೆಯ ಸಮಾರ್ಯದವರು | | | 10:30-37 |
| ಅಗತ್ಯದಲ್ಲಿನ ಸ್ನೇಹಿತ | | | 11:5-8 |
| ಬುದ್ಧಿಹೀನ ಐಶ್ವರ್ಯವಂತ | | | 12:16-21 |
| ಫಲಕೊಡದ ಅಂಜೂರದ ಮರ | | | 13:6-9 |
| ಊಟದ ಪಂಕ್ತಿಯ ಕಡೇ ಸ್ಥಾನ | | | 14:7-14 |
| ದೊಡ್ಡ ಭೋಜನ | | | 14:16-24 |
| ಶಿಷ್ಯತ್ವದ ಕ್ರಯ | | | 14:28-33 |
| ಕಳೆದು ಹೋದ ಪಾವಲಿ | | | 15:8-10 |
| ಕಳೆದು ಹೋದ ಮಗ | | | 15:11-32 |
| ಮೈಗಳ್ಳನಾದ ಮನೆವಾರ್ತೆಯವ | | | 16:1-8 |
| ಐಶ್ವರ್ಯವಂತ ಮತ್ತು ಲಾಜರ | | | 16:19-31 |
| ಯಜಮಾನ ಮತ್ತು ಆತನ ಸೇವಕ | | | 17:7-10 |
| ವಿಧವೆ ಮತ್ತು ನ್ಯಾಯಾಧಿಪತಿ | | | 18:2-8 |
| ಫರಿಸಾಯ ಮತ್ತು ಸುಂಕದವನು | | | 18:10-14 |

**ಯೇಸು ಮಾಡಿದ ಅದ್ಭುತಗಳು**

ಈ ಮೂರು ಪಟ್ಟಿಗಳು NIV ಅಧ್ಯಯನ ಸತ್ಯವೇದವನ್ನಾಧರಿಸಿವೆ

**1. ಸ್ವಸ್ಥತಾ ಅದ್ಭುತಗಳು**

| | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|
| ಕುಷ್ಠರೋಗಿ | 8:2-4 | 1:40-42 | 5:12-13 | |
| ರೋಮನ್ ಶತಾಧಿಪತಿಯ ಆಳು | 8:5-13 | | 7:1-10 | |
| ಪೇತ್ರನ ಅತ್ತೆ | 8:14-15 | 1:30-31 | 4:38-38 | |
| ಗೆದರದ ಇಬ್ಬರು | 8:28-34 | 5:1-15 | 8:27-35 | |
| ಪಾರ್ಶ್ವವಾಯು ರೋಗಿ | 9:2-7 | 2:3-12 | 5:18-25 | |
| ರಕ್ತಕುಸುಮ ಸ್ತ್ರೀ | 9:20-22 | 5:25-29 | 8:43-48 | |
| ಇಬ್ಬರು ಕುರುಡರು | 9:27-31 | | | |
| ಮೂಕನಾದ ದೆವ್ವಹಿಡಿದ ಮನುಷ್ಯ | 9:32-33 | | | |
| ಕೈಒಣಗಿ ಹೋದ ಮನುಷ್ಯ | 12:10-13 | 3:1-5 | 6:6-10 | |
| ದೆವ್ವಹಿಡಿದ ಮೂಕ, ಕುರುಡ | 12:22 | | 11:14 | |
| ಕಾನಾನ್ಯ ಸ್ತ್ರೀಯ ಮಗಳು | 15:21-28 | 7:24-36 | | |
| ದೆವ್ವಹಿಡಿದ ಹಡುಗ | 17:14-18 | 9:17-29 | 9:38-43 | |
| ಇಬ್ಬರು ಕುರುಡರು (ಬಾರ್ತಿಮಾಯ ಸೇರಿ) | 20:29-34 | 10:46-52 | 18:35-43 | |
| ದೆಕಪೊಲಿಯಲ್ಲಿನ ಕಿವುಡ ಮೂಕನು | | 7:32-37 | | |
| ಸಭಾಮಂದಿರದಲ್ಲಿ ದೆವ್ವಹಿಡಿದವನು | | 1:23-26 | 4:33-35 | |
| ಬೇತ್ಸಾಯಿದದಲ್ಲಿನ ಕುರುಡನು | | 8:22-26 | | |
| ಕುಂಟಳಾದ ಹೆಂಗಸು | | | 13:11-13 | |
| ಜಲೋಧರವುಳ್ಳ ಮನುಷ್ಯ | | | 14:1-4 | |
| ಹತ್ತು ಮಂದಿ ಕುಷ್ಠರೋಗಿಗಳು | | | 17:11-19 | |
| ಮಹಾಯಾಜಕನ ಆಳು | | | 22:50-51 | |
| ಕಪೆರ್ನೌಮಿನಲ್ಲಿ ಅಧಿಕಾರಿಯ ಮಗ | | | | 4:46-54 |
| ಬೇಥೆಸ್ಥ ಕೊಳದ ಬಳಿಯ ರೋಗಿ | | | | 5:1-9 |
| ಹುಟ್ಟು ಕುರುಡನು | | | | 9:1-7 |

| | | | | |
|---|---|---|---|---|
| | | | | |

**2. ಪ್ರಕೃತಿಯ ಮೇಲೆ ತೋರುವ ಅದ್ಭುತಗಳು**

| | **ಮತ್ತಾಯ** | **ಮಾರ್ಕ** | **ಲೂಕ** | **ಯೋಹಾನ** |
|---|---|---|---|---|
| ಬಿರುಗಾಳಿಯನ್ನು ಶಾಂತಪಡಿಸಿದ್ದು | 8:23-27 | 4:37-41 | 8:22-25 | |
| ನೀರಿನ ಮೆಲೆ ನಡೆದದ್ದು | 14:25 | 6:48-51 | | 6:19-21 |
| ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು | 14:15-21 | 6:35-44 | 9:12-17 | 6:6-13 |
| ನಾಲ್ಕು ಸಾವಿರ ಜನರಿಗೆ ಊಟಮಾಡಿಸಿದ್ದು | 15:32-38 | 8:1-9 | | |
| ಮೀನಿನ ಬಾಯಲ್ಲಿ ನಾಣ್ಯ | 17:24-27 | | | |
| ಅಂಜೂರ ಮರ ಒಣಗಿ ಹೋದದ್ದು | 21:18-22 | 11:12-14, 20:25 | | |
| ಬಹಳಷ್ಟು ಮೀನು ಹಿಡಿದಿದ್ದು | | | 5:4-11 | |
| ನೀರು ದ್ರಾಕ್ಷಾರಸವಾದದ್ದು | | | | 2:1-11 |
| ಬಹಳಷ್ಟು ಮೀನನ್ನು ಹಿಡಿದಿದ್ದು | | | | 21:6-11 |

**3. ಸತ್ತವರನ್ನು ಎಬ್ಬಿಸಿದ ಅದ್ಭುತಗಳು**

| | **ಮತ್ತಾಯ** | **ಮಾರ್ಕ** | **ಲೂಕ** | **ಯೋಹಾನ** |
|---|---|---|---|---|
| ಯಾಯೀರನ ಮಗಳು | 9:18-25 | 5:22-42 | 8:41-56 | |
| ನಾಯಿನೂರಿನ ವಿಧವೆಯ ಮಗ | | | 7:11-15 | |
| ಲಾಜರನು | | | | 11:1-44 |

**ನಾಲ್ಕು ಸುವಾರ್ತೆಗಳು**

(ಈ ಮತ್ತು ಮುಂದಿನ ಮೂರು ಅಧ್ಯಾಯಗಳು ಭಾಗಶಃ ಎ.ಸ್ಪೋಬರ್ಗ್ರ್ ಸುವಾರ್ತೆಗಳಿಗೆ ಕೈಪಿಡಿಯನ್ನು ಆಧರಿಸಿವೆ)

**ಸುವಾರ್ತೆ**

ಸುವಾರ್ತೆಗಾಗಿನ ಗ್ರೀಕ್ ಪದದ ಅರ್ಥ "ವಿಜಯದ ಸಂಕೇತ" ಅಥವಾ "ಶುಭವಾರ್ತೆಯೊಂದಿಗಿನ ಸಂದೇಶ" ಎಂದಾಗಿದೆ. ಇದು ಹೊಸ ಒಡಂಬಡಿಕೆಯ ಕಾಲದಲ್ಲಿನ ಒಂದು ಸಾಮಾನ್ಯ ಪದವಾಗಿದ್ದು ಒಂದು ಪ್ರತ್ಯೇಕ ಬಗೆಯ ಪುಸ್ತಕ ಅಥವಾ ಸಾಹಿತ್ಯದೊಂದಿಗೆ ಸಂಬಂಧವನ್ನು ಹೊಂದಿಲ್ಲ.

ಹೊಸ ಒಡಂಬಡಿಕೆಯಲ್ಲಿ ಗ್ರೀಕ್ ರೂಪಗಳು (ನಾಮ ಪದ ಮತ್ತು ಅದರ ಕ್ರಿಯಾಪದದ ರೂಪ) ಸುಮಾರು 130 ಕ್ಕಿಂತ ಹೆಚ್ಚು ಬಾರಿ ಮುಖ್ಯವಾಗಿ ಪೌಲನಿಂದ ಬಳಸಲ್ಪಟ್ಟಿದೆ. ಇದನ್ನು ಒಂದು ಸಾಹಿತ್ಯದ ಬಗ್ಗೆಯ ಬಗ್ಗೆ ಉಪಯೋಗಿಸಿಲ್ಲ ಬದಲಾಗಿ ಯಾವಾಗಲೂ ಕ್ರಿಸ್ತನ ಸಂದೇಶ ಮತ್ತು ಅದರ ಸಾರೋಣದ ಬಗ್ಗೆ ಉಪಯೋಗಿಸಲಾಗಿದೆ. ಪೌಲನು ಇದನ್ನು "ದೇವರು ಸುವಾರ್ತೆ" (ರೋಮ 1:1) "ಆತನ ಮಗನ ಸುವಾರ್ತೆ" (ರೋಮ 1:9) ಮತ್ತು "ಕ್ರಿಸ್ತನ ಸುವಾರ್ತೆ" (ರೋಮ 15:19) ಎಂದು ವರ್ಣಿಸುತ್ತಾನೆ. ಆತನು ತನ್ನನ್ನು ಈ ಸುವಾರ್ತೆಯ ಒಬ್ಬ ಸೇವಕನೆಂಬುದಾಗಿ (ರೋಮ 15:16) ಮತ್ತು ಆತನು ಇದನ್ನು ನಾಲ್ಕು ಸಂಕ್ಷಿಪ್ತ ಅಂಶಗಳಲ್ಲಿ ಸಾರಾಂಶಗೊಳಿಸುತ್ತಾನೆ (1 ಕೊರಿಂಥ 15:3-5):

3. ಶಾಸ್ತ್ರದ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು
4. ಆತನು ಹೂಣಲ್ಪಟ್ಟನು
5. ಶಾಸ್ತ್ರದ ಪ್ರಕಾರ ಮೂರನೇ ದಿನದಲ್ಲಿ ಎದ್ದನು
6. ಆತನು ಕೇಫನಿಗೂ (ಪೇತ್ರ) ಮತ್ತು ಹನ್ನೆರಡು ಮಂದಿ ಅಪೊಸ್ತಲರಿಗೆ ಕಾಣಿಸುತ್ತಾನೆ

ಇದನ್ನೆ ಪೌಲನು ಒಂದೇ ಸುವಾರ್ತೆ ಆಗಿದೆ, ಇದು ಮನುಷ್ಯರಿಂದ ಬಂದದಲ್ಲ ಆದರೆ ದೇವರಿಂದ ಬಂದದ್ದಾಗಿದೆ ಎಂದು ಹೇಳುತ್ತಾನೆ.

ಗ್ರೀಕ್ ರೂಪವು ಮತ್ತಾಯನ ಸುವಾರ್ತೆಯಲ್ಲಿ ಕೆಲವು ಬಾರಿ (24:14 ರಲ್ಲಿ "ದೇವರ ರಾಜ್ಯದ ಸುವಾರ್ತೆ" ಎಂದು ಕರೆಯಲಾಗಿದೆ) ಉಪಯೋಗಿಸಲ್ಪಟ್ಟಿದ್ದು ಮಾರ್ಕನು ತನ್ನ ಸುವಾರ್ತೆಯನ್ನು "ದೇವಕುಮಾರನಾದ ಯೇಸು ಕ್ರಿಸ್ತನ ವಿಷಯವಾದ ಸುವಾರ್ತೆ" ಎಂಬ ಮಾತಿನೊಂದಿಗೆ ಪ್ರಾರಂಭಿಸುತ್ತಾನೆ. ಮಾರ್ಕನು ಇದನ್ನು "ಯೇಸುವಿನ ಕುರಿತಾದ ಸಂದೇಶ" ಮತ್ತು "ಯೇಸು ಸಾರಿದ ಸಂದೇಶ" ದ ಬಗ್ಗೆ ಉಪಯೋಗಿಸುತ್ತಾನೆ. ಲೂಕನು ಕೇವಲ ಕ್ರಿಯಾಪದ ರೂಪವನ್ನು ಮಾತ್ರ ಉಪಯೋಗಿಸುತ್ತಾನೆ. ಅದೆಂದರೆ "ಸುವಾರ್ತೆಯನ್ನು ಸಾರುವುದು". ಯೋಹಾನನ ಸುವಾರ್ತೆಯಲ್ಲಿ ಇದಾವುದು ಇಲ್ಲ ಬದಲಾಗಿ ಆತನು "ಸಾಕ್ಷಿ" ಮತ್ತು "ಸಾಕ್ಷಿಸು" ಎಂಬುದನ್ನು ಬಳಸಿದ್ದಾನೆ.

ತದನಂತರ ಮಾತ್ರ ಒಂದು ನಿರ್ದಿಷ್ಟಬಗೆಯ ಬರವಣಿಗೆ(ಲಿಖಿತ)ಯ ಪಠ್ಯದ ಬಗ್ಗೆ "ಸುವಾರ್ತೆ" ಎಂಬ ಪದವನ್ನು ಬಳಸಿರುವುದನ್ನು ನಾವು ಕಾಣುತ್ತೇವೆ: ಅಪೊಸ್ತಲರು ಬರೆದ ಯೇಸುವಿನ ಜೀವನದ ಕುರಿತ ಲಿಖಿತ ಆತ್ಮಚರಿತ್ರೆಯನ್ನು ಒಬ್ಬ ಸಭಾಪಾದ್ರಿಯು "ಸುವಾರ್ತೆ" ಎಂಬುದಾಗಿ ಕರೆದಿದ್ದಾರೆಂದು ಬರೆಯುತ್ತಾನೆ.

ಹೀಗೆ ಸುವಾರ್ತೆಗಾಗಿನ ಗ್ರೀಕ್ ಪದದ ಅರ್ಥವು ಸಭೆಯ ಪ್ರಾರಂಭದ ಇತಿಹಾಸದ ಅವಧಿಯಲ್ಲಿ ಹೇಗೆ ಬೆಳೆದು ಬಂತು ಎಂಬುದನ್ನು ನಾವು ಕಾಣಬಹುದು:

1. ಮೊದಲನೆಯದಾಗಿ ಇದು ದೇವರ ರಾಜ್ಯದ ಕುರಿತಾದ ಯೇಸುವಿನ ಬೋಧನೆಗಳನ್ನು ಸೂಚಿಸುತ್ತದೆ.

2. ಅನಂತರ ಇದು ಆದಿಸಭೆಯ ಸಂದೇಶದ ವಿಷಯಾಂಶಗಳ ಬಗ್ಗೆ ಉಪಯೋಗಿಸಲ್ಪಟ್ಟಿದೆ. ಈ ಸಂದೇಶವು ದೇವರ ರಾಜ್ಯದ ಕುರಿತ ಯೇಸುವಿನ ಉಪದೇಶಗಳ ಪುನರಾವರ್ತಿತ ಮಾತ್ರ ಅಲ್ಲ. ಅಲ್ಲದೇ ಇದು ಯೇಸು, ಆತನ ಮರಣ ಮತ್ತು ಪುನರುತ್ಥಾನದ ಕುರಿತಾದ ಶುಭ ಸಮಾಚಾರಗಳನ್ನು ಸಹ ಒಳಗೊಂಡಿದೆ (ಉದಾ: ರೋಮ 1:1-4 ನ್ನು ನೋಡಿ)

3. ನಂತರ ನಾವು ಈ ಹಿಂದಿನ ಎರಡು ಅಂಶಗಳ ಒಂದು ಸಂಯೋಜನೆಯನ್ನು ಕಾಣಬಹುದು: ದೇವರ ರಾಜ್ಯದ ಕುರಿತ ಯೇಸುವಿನ ಉಪದೇಶ ಮತ್ತು ಯೇಸುವಿನ ಮರಣ ಪುನರುತ್ಥಾನದ ಬೆಳಕಿನಲ್ಲಿ ಆತನ ಜೀವನ ಮತ್ತು ಸೇವೆ (ಹೋಲಿಸಿ ಅ.ಕೃ. 10:34-43 ರಲ್ಲಿನ ಪೇತ್ರನ ಪ್ರಸಂಗ).

4. ಕೊನೆಯದಾಗಿ ಇದು ಆದಿ ಸಭೆಯ ಪ್ರಾರಂಭಿಕ ಮೌಖಿಕ ಬೋಧನೆಗಳನ್ನೊಳಗೊಂಡ ಲಿಖಿತ ರೂಪದಲ್ಲಿರುವ ಪಠ್ಯಗಳ ಬಗ್ಗೆ ಸಹ ಉಪಯೋಗಿಸಲ್ಪಟ್ಟಿದೆ. ಸಭೆಯ ಆದಿಬೋಧನೆ ಮತ್ತು ಹೊಸ ಒಡಂಬಡಿಕೆಯಲ್ಲಿ ಕಂಡುಬರುವ ನಾಲ್ಕು ಸುವಾರ್ತಾ ಪುಸ್ತಕಗಳ ನಡುವೆ ನಿಕಟವಾದ ಸಂಬಂಧವಿರುವುದನ್ನು ಗಮನಿಸುವುದು ಅತೀ ಪ್ರಾಮುಖ್ಯವಾದುದ್ದಾಗಿದೆ. ಸುವಾರ್ತೆಗಳು ಭಾವೀ ಓದುಗರಿಗೆ ಜ್ಞಾನ (ತಿಳುವಳಿಕೆ) ಮತ್ತು ಮಾಹಿತಿಗಳನ್ನು ಕೊಡುವುದಕ್ಕಾಗಿ ಬರೆಯಲ್ಪಟ್ಟಿಲ್ಲ. ಇಲ್ಲಿ ಅವು ಓದುಗರ ಜೀವನಗಳನ್ನು ಬದಲಿಸುವುದಕ್ಕಾಗಿ ಬರೆಯಲ್ಪಟ್ಟಿವೆ. ಯೇಸು ಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಕೇಂದ್ರದೊಂದಿಗೆ ಆತನ ಜೀವನ ಮತ್ತು ಸೇವೆಯ ಮೂಲಕವಾಗಿರುವ ದೇವರ ಹಳೇ ಒಡಂಬಡಿಕೆಯ ವಾಗ್ದಾನಗಳ ನೆರವೇರಿಕೆಯ ಕುರಿತಾದ ಸಂದೇಶವು ಆತನಲ್ಲಿ ನಂಬಿಕೆಯಿಟ್ಟು, ಆತನನ್ನು ತಮ್ಮ ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದವರೆಲ್ಲರಿಗೆ "ಶುಭವಾರ್ತೆ" ಯಾಗಬೇಕೆಂದು ಗ್ರಂಥಕರ್ತರುಗಳು ಬಯಸಿದರು. ಇಂದೂ ಸಹ ನಾಲ್ಕು ಸುವಾರ್ತೆಗಳೊಂದಿಗಿನ ದೇವರ ಉದ್ದೇಶವು ಇದಾಗಿದೆ.

**ಸುವಾರ್ತೆಗಳ ರಚನೆ**

ಈಗ ನಾವು ಸಂಕ್ಷಿಪ್ತವಾಗಿ ನಮ್ಮ ನಾಲ್ಕು ಸುವಾರ್ತೆಗಳಿಗೆ ನಡೆಸಿದ ಪ್ರಕ್ರಿಯೆಯನ್ನು ನೋಡಲಿದ್ದೇವೆ. ಈ ಪ್ರಕ್ರಿಯೆಯು ನಾಲ್ಕು ಹಂತಗಳಲ್ಲಿ ನಡೆದಿದೆ:

1. **ಮೌಖಿಕ ಸಂಪ್ರದಾಯ:** ಪ್ರಾಚೀನ ಯೆಹೂದಿ ಸಂಸ್ಕೃತಿಯು ಮೂಲತಃ ಮೌಖಿಕವಾದುದ್ದಾಗಿತ್ತು. ಸುರುಳಿಗಳು ಸಾಮಾನ್ಯ ಜನರಿಗೆ ತೀರಾ ದುಬಾರಿಯಾಗಿದ್ದು, ಅವನ್ನು ಮುಖ್ಯವಾಗಿ ಸಭಾಮಂದಿರಗಳಲ್ಲಿ ಇಡಲಾಗುತ್ತಿತ್ತು. ಹಾಗಾಗಿ ಯೇಸುವಿನ ಸರಿಯಾದ ಮಾತುಗಳನ್ನು ಅಥವಾ ಆತನ ಪ್ರತಿ ಅದ್ಭುತಗಳ ವಿವರವನ್ನು ಆತನ ಶಿಷ್ಯರಿಗೆ ಬರೆದಿಡಲಾಗಲಿಲ್ಲ, ಬದಲಾಗಿ ಅವರು ತಮ್ಮ ನೆನಪುಗಳನ್ನು ಆತುಕೊಂಡರು. ಅವರು ಈ ರಿತಿಯ ಜ್ಞಾಪಕದಲ್ಲಿಟ್ಟುಕೊಳ್ಳುವ ಹವ್ಯಾಸವನ್ನು ತಾವು ಯೌವನಸ್ಥರಾಗಿರುವಾಗ ಸಭಾಮಂದಿರಗಳ ಶಾಲೆಯಲ್ಲಿ ಹಳೇ ಒಡಂಬಡಿಕೆಯ ಪಠ್ಯಗಳನ್ನು ಅಭ್ಯಾಸಿಸುವಾಗಲೇ ಕಲಿತುಕೊಂಡರು. ಯೇಸುವಿನ ಬೋಧನಾ ವಿಧಾನ ಉದಾಹರಣೆಗೆ ಸಾಮ್ಯಗಳನ್ನು ಉಪಯೋಗಿಸುವುದು ಮತ್ತು ಯೆಹೂದಿ ಬೋಧಕರುಗಳ ಸಂಪ್ರದಾಯಿಕ ಶೈಲಿಯಲ್ಲಿನ ಗಾದೆಗಳ ರೂಪದಲ್ಲಿನ ಹೇಳಿಕೆಗಳು ಸಹ ಕಂಠಪಾಠಮಾಡುವುದನ್ನು ಸುಲಭಗೊಳಿಸಿದವು. ಆಧುನಿಕ ಓದುಗನು ಸುವಾರ್ತೆಗಳು ಮೌಖಿಕವಾಗಿ ಸಂರಕ್ಷಿಸಲ್ಪಟ್ಟ ದೊಡ್ಡ ಪ್ರಮಾಣದ ಚಿಕ್ಕ ಚಿಕ್ಕ ಘಟಕಗಳನ್ನು ಒಳಗೊಂಡಿರುವುದನ್ನು (ಹೇಳಿಕೆಗಳು, ಸಾಮ್ಯಗಳು, ಅದ್ಭುತಗಳು, ಕಂತುಗಳು, ಸನ್ನಿವೇಶಗಳು) ಕಾಣಬಹುದು. ಅಲ್ಲದೆ ಸುವಾರ್ತಾ ಬರಹಗಾರರು ತಮ್ಮ ಪಠ್ಯಗಳ ಸಮಗ್ರ ರಚನೆಯಾಗಿ ರೂಪುಕೊಡುವುದಕ್ಕಾಗಿ ಈ ಸಣ್ಣ ಘಟಕಗಳನ್ನು ಉಪಯೋಗಿಸಿದರು ಎಂಬುದನ್ನು ನಾವು ಸುಲಭವಾಗಿ ಕಾಣಬಹುದು.

2. **ಲಿಖಿತ ಮೂಲಗಳು:** ಲೂಕನು ತನ್ನ ಸುವಾರ್ತೆಯನ್ನು ತನ್ನ ಪುಸ್ತಕವನ್ನು ತಾನು ಹೇಗೆ ಬರೆಯಲು ಹೊರಟೆನೆಂಬ ಒಂದು ವರ್ಣನೆಯೊಂದಿಗೆ ಪ್ರಾರಂಭಿಸುತ್ತಾನೆ (1:1-4). ಮೊದಲನೆಯದಾಗಿ ಯೇಸುವಿನ ಸೇವೆಯೊಂದಿಗೆ ಪ್ರಾಮುಖ್ಯವಾದ ಐತಿಹಾಸಿಕ ಘಟನೆಯು ಸಂಭವಿಸುತ್ತದೆ. ಎರಡನೆಯದಾಗಿ ಪ್ರತ್ಯಕ್ಷಸಾಕ್ಷಿಗಳು ಉಳಿದುಕೊಂಡರು ಮತ್ತು ಈ ಘಟನೆಗಳ ಬಗ್ಗೆ ತಾವೇನನ್ನು ನೋಡಿದರೋ, ಕೇಳಿದರೋ ಅದನ್ನು ಮುಂದೆ ತಿಳಿಸಿದರು, ಇದು ಮೌಖಿಕ ಸಂಪ್ರದಾಯವಾಗಿದೆ. ಮೂರನೆಯದಾಗಿ ಉಳಿದ (ಇತರ) ಜನರು ಮೌಖಿಕ ಸಂಪ್ರದಾಯದ ಈ ವಿವರಗಳನ್ನು ಬರೆದಿಟ್ಟರು. ಕೊನೆಯದಾಗಿ ಲೂಕನು ತನ್ನ ಪುಸ್ತಕಗಳನ್ನು ಬರೆಯುವುದಕ್ಕಾಗಿ ಈ ಮೌಖಿಕ ಮತ್ತು ಲಿಖಿತ ಸಂಗತಿಗಳನ್ನು ಉಪಯೋಗಿಸಿದನು (ಲೂಕನ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳು). ಹೀಗೆ ಲೂಕನು ತನ್ನ ಹಳೆಯ ಲಿಖಿತ ಮೂಲಗಳ ಬಳಕೆಯನ್ನು ಸಾಕ್ಷಿಸುತ್ತಾನೆ. ಆದರೆ ಇಂದು ಈ ಮೂಲ ಲಿಖಿತ ಮೂಲಗಳ ಬಗ್ಗೆ ನಮಗೇನೂ ಹೆಚ್ಚಾಗಿ ತಿಳಿದಿಲ್ಲ. ಕೇವಲ ನಾಲ್ಕು ಸುವಾರ್ತೆ ಪುಸ್ತಕಗಳು ಮಾತ್ರ ಉಳಿದುಕೊಂಡಿವೆ. ಹಾಗಾಗಿ ನಾವು ಅವರ ವಿವರಗಳಿರುವ ನಾವೊಂದು ಮುಕ್ತಾಯಕ್ಕೆ ಬರಬೇಕಾಗಿದೆ. ಇದರ ಬಗ್ಗೆ ಇನ್ನೂ ಹೆಚ್ಚಾಗಿ ***"ಮೂರು ಸಮಾಂತರ ಸುವಾರ್ತೆಗಳು ಮತ್ತು ಯೋಹಾನ"*** ಎಂಬ ವಿಭಾಗದಲ್ಲಿದೆ

3. **ತಿದ್ದುಪಡಿಗಾರರ (ಸಪಾದಕರ) ಕರ್ತವ್ಯ:** ಉದಾಹರಣೆಗೆ ಒಬ್ಬ ರಾಜಕಾರಣಿಯ ಚುನಾವಣಾ ಪ್ರಚಾರವನ್ನು ತೆಗೆದುಕೊಂಡರೆ, ಎರಡು ದಿನಪತ್ರಿಕೆಗಳು ಒಂದು ಘಟನೆಯನ್ನು ಹೇಗೆ ವಿವರಿಸುತ್ತವೆಂಬುದನ್ನು ಹೋಲಿಸುವಾಗ ಸಂಪಾದಕರ ಕರ್ತವ್ಯವು ನಮಗೆ ಪ್ರಾಮುಖ್ಯವಾಗಿ ತೋರಿಬರುತ್ತದೆ. ಐತಿಹಾಸಿಕ ವಾಸ್ತವಾಂಶವೂ ಇದೇ ರೀತಿಯಾಗಿದೆ. ಆದರೆ ಈ ವಾಸ್ತವಾಂಶದಲ್ಲಿ ಸುದ್ದಿಪತ್ರಿಕೆಯು ಹೊಂದಿರುವ ಆಸಕ್ತಿಯು ವಿಭಿನ್ನವಾದ ರೀತಿಯಲ್ಲಿ ತಿಳಿಸಲ್ಪಟ್ಟಿದೆ. ಒಂದು ಸ್ಥಳೀಯ ಉದ್ದವಾದ ವಿವರವನ್ನು ಹೊಂದಿದ್ದರೆ, ರಾಷ್ಟ್ರೀಯ ಪತ್ರಿಕೆಯು ಒಂದು ಸಂಕ್ಷಿಪ್ತವಾದ ವಿವರವನ್ನು ಹೊಂದಿರುತ್ತದೆ. ರಾಜಕಾರಣಿಗೆ ಕರುಣೆ ತೋರುವ ಪತ್ರಿಕೆಯು ತಟಸ್ಥವಾಗಿರುವ ನಾಲ್ಕು ಸುದ್ದಿ ಪತ್ರಿಕೆಗಳಿಗಿಂತ ಹೆಚ್ಚು ಸಕಾರಾತ್ಮಕವಾದ ಸುದ್ದಿಯನ್ನು ಕೊಡುತ್ತದೆ. ಅದೇ ರೀತಿ ಸುವಾರ್ತಾ ಬರಹಗಾರರು ತಮ್ಮ ಸುವಾರ್ತೆ ಮತ್ತು ಹೇಳಬಯಸುವ ಓದುಗರೊಂದಿಗಿನ ಸಮಗ್ರ ಉದ್ದೇಶವನ್ನಾಧರಿಸಿ ಉದ್ದೇಶಪೂರ್ವಕವಾಗಿ ವಿಷಯಗಳನ್ನು ಸೇರಿಸಿದ್ದಾರೆ. ಈ ಕಾರಣದಿಂದಲೇ ಯೇಸುವಿನ ಜೀವನ, ಮರಣ

ಮತ್ತು ಪುನರುತ್ಥಾನದ ಕುರಿತ ಒಂದೇ ಘಟನೆಯ ಬಗ್ಗೆ ಸುವಾರ್ತಾ ವಾಕ್ಯಭಾಗ(ವಿವರ)ಗಳ ನಡುವೆ ವ್ಯತ್ಯಾಸವನ್ನು ಕಾಣಬುದಾಗಿದೆ. ಈ ವ್ಯತ್ಯಾಸಗಳ ಒಂದು ಜಾಗ್ರುತ ಅಧ್ಯಯನವು ಒಬ್ಬ ಆಧುನಿಕ ಓದುಗನಿಗೆ ಪ್ರತಿ ಸುವಾರ್ತೆಯನ್ನು ಅಂದರೆ: ಅದರ ಸಮಗ್ರ ಗುರಿ, ಅದರ ಮುಖ್ಯ ವಿಷಯವಸ್ತುಗಳು, ಸುವಾರ್ತಾ ಬರಹಗಾರರು ತಮ್ಮ ಮನಸ್ಸಿನಲ್ಲಿಟ್ಟುಕೊಂಡ ಓದುಗರ ಬಗೆಯು ಪ್ರತಿ ಸುವಾರ್ತೆಯನ್ನು ಉತ್ತಮವಾಗಿ ಅರ್ಥೈಸಿಕೊಳ್ಳಲು ಸಹಾಯಕವಾಗುತ್ತದೆ. ಸಮಾನತೆಗಳ ಒಂದು ಹೋಲಿಕೆ ಮತ್ತು ಭಿನ್ನತೆಯು ಸಹ ಸತ್ಯವೇದ ಪಂಡಿತರುಗಳ ಸುವಾರ್ತೆಗಳ ನಡುವಿನ ಸಂಬಂಧವನ್ನು ಕಾಣಲು ಒಂದು ಮಾರ್ಗವಾಗಿದೆ. ಉದಾಹರಣೆಗೆ ಮಾರ್ಕನ ಸುವಾರ್ತೆಯು ಲೂಕನ ಒಂದು ಲಿಖಿತ ಮೂಲವಾಗಿದ್ದು ಮತ್ತು ಮಾರ್ಕನ ಸುವಾರ್ತೆಯು ಲೂಕನ ಸುವಾರ್ತೆಗಿಂತ ಹಳೆಯದಾಗಿದೆ ಎಂದು ಹೆಚ್ಚಿನ ಪಂಡಿತರುಗಳು ಯೋಚಿಸುತ್ತಾರೆ.

4. **ಮುಕ್ತಾಯಗೊಂಡ ಲಿಖಿತ ಪಠ್ಯಗಳು:** ಸುವಾರ್ತಾ ಬರಹಗಾರರು ಇತಿಹಾಸಕಾರರು, ಸತ್ಯವೇದ ಪಂಡಿತರು ಮತ್ತು ಪ್ರಸಂಗಿಗಳೂ ಆಗಿದ್ದರೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಆದರೆ ಅವರು ಪ್ರತಿಭಾವಂತ ಬರಹಗಾರರು ಸಹ ಆಗಿದ್ದರು. ಪರಿಣಾಮವಾಗಿ ಪ್ರತಿ ಸುವಾರ್ತೆ ಸಹ ಮುಕ್ತಾಯಗೊಂಡ ಸಾಹಿತ್ಯದ ಒಂದು ಸಂಯೋಜನೆ/ರಚನೆಯಾಗಿದೆ. ಅವರೆಲ್ಲರಲ್ಲಿ ಸಹ ಒಂದೇ ಕಥಾರೇಖೆಯಿದೆ: ಯೇಸುವಿನ ಬಾಧೆ ಮತ್ತು ಶಿಲುಬೆ ಮೇಲಿನ ಮರಣಕ್ಕೆ ನಡೆಸಿದ ಯೆಹೂದಿ ನಾಯಕರು ಮತ್ತು ಯೇಸುವಿನ ನಡುವಿನ ಸಂಘರ್ಷದ ಬೆಳವಣಿಗೆ. ಆದರೆ ನಾಲ್ಕು ಸುವಾರ್ತಾ ಗ್ರಂಥಕರ್ತರು ಈ ಮೂಖ್ಯ ಕಥಾರೇಖೆಯನ್ನು ತಮ್ಮ ವೈಯಕ್ತಿಕ ರೀತಿಯಲ್ಲಿ ಪ್ರಸ್ತುತಪಡಿಸಿದರು. ಉದಾಹರಣೆಗೆ ಇದನ್ನು ಅವರು ಮುಖ್ಯ ವ್ಯಕ್ತಿತ್ವಗಳನ್ನು ಹೇಗೆ ವಿವರಿಸಿದರೆಂಬುದರಲ್ಲಿ ಮತ್ತು ಅವರು ಪ್ರತ್ಯೇಕ ಘಟನೆಗಳನ್ನು ತಿಳಿಸಿದ ಕ್ರಮದಲ್ಲಿ ಕಾಣಬಹುದು. ಅಲ್ಲದೆ ಇದನ್ನು ಅವರು ಸೇರಿಸಿದ ಮತ್ತು ಸೇರಿಸದೆ ಇರುವ ಅಂಶಗಳಲ್ಲಿ (ಹೇಳಿಕೆಗಳು, ಸಾಮ್ಯಗಳು, ಘಟನೆಗಳು) ಸಹ ಕಾಣಬಹುದಾಗಿದೆ.

ಸುವಾರ್ತೆಗಳ ಈ ದೊಡ್ಡ ಸಾಹಿತ್ಯದ ಚಿತ್ರಣಗಳನ್ನು ಕಾಣುವಲ್ಲಿ ಅನೇಕ ಆಧುನಿಕ ಓದುಗರು ವಿಫಲರಾಗಿದ್ದಾರೆ. ಅದಕ್ಕೆ ಒಂದು ಕಾರಣವೆಂದರೆ ನಮ್ಮ ಬರಹಗಾರರು ಅದನ್ನು ಓದಬೇಕೆಂದು ಬಯಸಿದ ರೀತಿಯಲ್ಲಿ ಅಂದರೆ ಇಡೀ ಪುಸ್ತಕವನ್ನು ಒಂದೇ ಹಿನ್ನಲೆಯಲ್ಲಿ ನಾವು ಓದುವುದು ತೀರಾ ವಿರಳ. ಬದಲಾಗಿ ನಾವು ಇಲ್ಲೊಂದು ಕಥೆಯನ್ನು ಮತ್ತು ಅಲ್ಲೊಂದು ಸಾಮ್ಯವನ್ನು ಓದುತ್ತೇವೆ ಮತ್ತು ಆ ಕಾರಣದಿಂದ ನಾವು ನಮ್ಮ ವಾಕ್ಯಭಾಗದ ಹಿನ್ನಲೆಯನ್ನು/ಸಂದರ್ಭವನ್ನು ಮತ್ತು ಪುಸ್ತಕದ ದೊಡ್ಡ ಚಿತ್ರಣವನ್ನು ಕಳೆದುಕೊಳ್ಳುತ್ತೇವೆ.

ನಾಲ್ಕು ಸುವಾರ್ತೆಗಳನ್ನು ಒಂದು "ಸುವಾರ್ತೆಗಳ ಸಾಮರಸ್ಯ" ವಾಗಿ ತುಲನೆ ಮಾಡುವುದರ ಮೂಲಕ ಯೇಸುವಿನ ಜೀವನ ಮತ್ತು ಸೇವೆಯ ಇನ್ನೂ ದೊಡ್ಡ ಚಿತ್ರಣವನ್ನು ಸೃಷ್ಟಿಸಲು ಅನೇಕ ಸತ್ಯವೇದ ವಿಶ್ಲೇಷಕರು ತಪ್ಪಾಗಿ ಪ್ರಯತ್ನಿಸಿದ್ದಾರೆ. ಆದರೆ ಈ ರೀತಿ ಮಾಡುವುದರಿಂದ ಗಳಿಸಿದ್ದಕ್ಕಿಂತ ಕಳಕೊಂಡದ್ದೇ ಜಾಸ್ತಿ, ಪ್ರತ್ಯೇಕವಾಗಿ ನಾಲ್ಕು ಸುವಾರ್ತೆಗಳು ಯೇಸುವಿನ ಅತ್ಯುತ್ತಮವಾದ ಚಿತ್ರಣವನ್ನು ಕೊಡುತ್ತವೆ: ನಾಲ್ಕು ಸ್ಪುಟವಾದ ಚಿತ್ರಣಗಳು ಆತನನ್ನು ಉತ್ತಮವಾಗಿ ತಿಳಿದುಕೊಳ್ಳಲು ನಮಗೆ ಸಹಾಯಕವಾಗುತ್ತವೆ. ಈ ನಾಲ್ಕು ಚಿತ್ರಣಗಳನ್ನು ಒಂದಾಗಿ ಮಾಡಲು ಬಲವಂತ ಮಾಡಿದರೆ ಪರಿಮಾಣವು ಸ್ಪಷ್ಟತೆ ಹೆಚ್ಚುವುದಕ್ಕಿಂತ ಎಲ್ಲಾ ಅಸ್ಪಷ್ಟವಾಗುತ್ತದೆ.

**ಮೂರು ಸಮಾಂತರ ಸುವಾರ್ತೆಗಳು ಮತ್ತು ಯೋಹಾನ**

ತಮ್ಮ ಹೊಸ ಒಡಂಬಡಿಕೆಯಲ್ಲಿನ ನಾಲ್ಕು ಸುವಾರ್ತೆಗಳನ್ನು ಎರಡು ಗುಂಪುಗಳಾಗಿ ವಿಭಾಗಿಸಬಹುದೆಂಬುದನ್ನು ಒಬ್ಬ ಅನನುಭವಿ ಮತ್ತು ಸಾಮಾನ್ಯ ಓದುಗ ಸಹ ಕಾಣಬಹುದಾಗಿದೆ:

- ಅದರಲ್ಲಿನ ಮೂರು ಸುವಾರ್ತೆಗಳ ಒಂದೇ ರೀತಿ ಇವೆ: ಮತ್ತಾಯ, ಮಾರ್ಕ ಮತ್ತು ಲೂಕ
- ಅದರಲ್ಲಿನ ಒಂದು ವಿಭಿನ್ನವಾಗಿದೆ: ಯೋಹಾನ

ಮೊದಲ ಮೂರು ಸುವಾರ್ತೆಗಳು (ಮತ್ತಾಯ, ಮಾರ್ಕ, ಲೂಕ) ತಮ್ಮ ಮಾಹಿತಿಗಳನ್ನು (ರಚನೆ ಮತ್ತು ವಿಷಯಾಂಶ) ಒಂದೇ ರೀತಿಯಲ್ಲಿ ತಿಳಿಸುತ್ತವೆ. ಅವು ಯೇಸುವಿನ ಜೀವನ ಮತ್ತು ಸೇವೆಯನ್ನು ಸಮಾನವಾದ ದೃಷ್ಟಿಕೋನದಿಂದ ನೋಡುತ್ತವೆ. ಆ ನಿಮಿತ್ತ ಅವನ್ನು "ಒಟ್ಟಾಗಿ ನೋಡುವುದು" ಅಥವಾ "ಒಂದೇ ರೀತಿಯ ದೃಷ್ಟಿಕೋನವನ್ನು ಹೊಂದಿರುವುದು" ಎಂದು ಅರ್ಥ ಕೊಡ "ಸಮಾಂತರ" ಸುವಾರ್ತೆಗಳು ಎಂದು ಕರೆಯಲಾಗಿದೆ. ಅವೆಲ್ಲವೂ ತೀರಾ ಸಮಾನವಾಗಿದ್ದು ಅವುಗಳ ನಡುವೆ ಕೆಲ ಐತಿಹಾಸಿಕ ಸಂಬಂಧವಿರಬೇಕು; ಒಂದು ವೇಳೆ ಅವೆಲ್ಲವುಗಳಿಗೂ ಒಂದೇ ಮೂಲವಿದ್ದರಬೇಕು ಅಥವಾ ಯಾವುದೋ ರೀತಿಯಲ್ಲಿ ಅವೆಲ್ಲವೂ ಪರಸ್ಪರ ಆಧರಿತಗೊಂಡಿವೆ (ಒಂದು ಸುವಾರ್ತೆಯ ಗ್ರಂಥಕರ್ತನು ಇನ್ನೊಂದು ಸುವಾರ್ತೆಯನ್ನು ಉಪಯೋಗಿಸಿರುವುದು) ಹೀಗೆ ಸತ್ಯವೇದ ಪಂಡಿತರಗಳು

ಇನ್ನೊಂದು ರೀತಿಯಲ್ಲಿ ಯೋಹಾನನ ಸುವಾರ್ತೆಯು ಅದು ಮಾರ್ಕನ ಸುವಾರ್ತೆಯನ್ನು ಸ್ವಲ್ಪ ಅವಲಂಬಿಸಿದೆಯೆಂದು ತೋರಿದರೂ ಅದು ಸ್ವಲ್ಪ ವಿಭಿನ್ನವಾಗಿ ರಚನೆಗೊಂಡಿದೆ.

"ಸಮಾಂತರ ಸಮಸ್ಯೆ" ಯು ತೀರಾ ಕ್ಲಿಷ್ಟಕರವಾಗಿದ್ದು ಮತ್ತಾಯ, ಮಾರ್ಕ ಮತ್ತು ಲೂಕನ ಸುವಾರ್ತೆಗಳ ನಡುವಿನ ಐತಿಹಾಸಿಕ ಸಂಬಂಧವನ್ನು ಹೇಗೆ ಅರ್ಥೈಸಿಕೊಳ್ಳಬೇಕೆಂಬುದಕ್ಕೆ ಸತ್ಯವೇದ ಪಂಡಿತರು ಅನೇಕ ಸಿದ್ಧಾಂತಗಳನ್ನು ಮತ್ತು ಸಿದ್ಧಾಂತಗಳ ಬದಲಾವಣೆಯನ್ನು ಸೂಚಿಸಿದ್ದಾರೆ. ಏನೇ ಆಗಲಿ ಮಾರ್ಕನ ಸುವಾರ್ತೆಯು ಮೊದಲು ಬರೆಯಲ್ಪಟ್ಟಿದ್ದಾಗಿದೆ. ಮತ್ತಾಯ ಮತ್ತು ಲೂಕರಿಬ್ಬರೂ ತಮ್ಮ ಸುವಾರ್ತೆಯನ್ನು ಬರೆಯುವಾಗ ಮಾರ್ಕನ ಸುವಾರ್ತೆಯನ್ನು ಉಪಯೋಗಿಸಿದ್ದಾರೆ. ಈ ದೃಷ್ಟಿಕೋನ/ನೋಟದ ಹಿಂದಿರುವ ಒಂದು ಸಮರ್ಪಕವಾದ ಕಾರಣವೆಂದರೆ ಮತ್ತಾಯ ಮತ್ತು ಲೂಕನ ಸುವಾರ್ತೆಗಳೆರಡೂ ಮಾರ್ಕನ ಸುವಾರ್ತೆಗಿಂತ ಹೆಚ್ಚು ವಿಸ್ತಾರವಾಗಿವೆ ಮತ್ತು ಪರಿಷ್ಕೃತವಾಗಿವೆ (ಅವುಗಳ ಭಾಷೆ, ವಿಷಯಾಂಶ ಮತ್ತು ದೈವಶಾಸ್ತ್ರ). ಮತ್ತಾಯ ಮತ್ತು ಲೂಕದಲ್ಲಿ ಕೆಲ ವಿಷಯಗಳು ಸಾಮಾನ್ಯವಾಗಿವೆ ಮತ್ತು ಲೂಕನು ಸಹ ಮತ್ತಾಯನ ಸುವಾರ್ತೆಯನ್ನು ತನ್ನ ಲಿಖಿತ ಮೂಲಗಳಲ್ಲಿ ಒಂದಾಗಿ ಉಪಯೋಗಿಸಿರುವ ಸಾಧ್ಯತೆಯಿದೆ.

ಲೂಕನು ತನ್ನ ಸುವಾರ್ತೆಯನ್ನು ಕ್ರಿ.ಶ. 62 ರಲ್ಲಿ ಬರೆದಿರಬಹುದೆಂದು ಆಂತರಿಕ ಮತ್ತು ಬಾಹ್ಯ ಮೂಲ/ಆಧಾರಗಳು ತೋರಿಸುತ್ತವೆ. ಹಾಗೆಯೇ ಮಾರ್ಕನ ಸುವಾರ್ತೆಯು ಕ್ರಿ.ಶ. 50 ರಲ್ಲಿ ಮತ್ತು ಮತ್ತಾಯನ ಸುವಾರ್ತೆ ಸಹ ಇದೇ ವೇಳೆ ಬರೆಯಲ್ಪಟ್ಟಿರಬಹುದು. ಯೋಹಾನನ ಸುವಾರ್ತೆ ನಂತರ ಬರೆಯಲ್ಪಟ್ಟಿರಬಹುದು.

**ಸುವಾರ್ತೆಗಳು ಮತ್ತು ಸತ್ಯವೇದದ ಶಾಸನ**

ಕೇವಲ ನಾಲ್ಕು ಸುವಾರ್ತೆಗಳನ್ನು ಹೊರತುಪಡಿಸಿ ಯೇಸುವಿನ ಜೀವನದ ಕುರಿತಾದ ಉಳಿದ ಯಾವ ಪುಸ್ತಕವನ್ನು (ಉದಾ. ಪೇತ್ರನ ಸುವಾರ್ತೆ) ಯಾಕೆ ಸತ್ಯವೇದದಲ್ಲಿ ಸೇರಿಸಿಲ್ಲವೆಂಬುದರ ಬಗ್ಗೆ ನಮಗೆ ಕೇವಲ ಸೀಮಿತವಾದ ಮಾಹಿತಿಗಳು ಮಾತ್ರ ಇವೆ.

ಸುವಾರ್ತಾ ಪುಸ್ತಕಗಳು ಮೂಲತಃ ಸುವಾರ್ತೀಕರಣ ಮತ್ತು ಬೋಧನೆಗಾಗಿನ ಸ್ಥಳೀಯ ಅಗತ್ಯತೆಗಳನ್ನು ಸಂಧಿಸಲು/ಪೂರೈಸುವುದಕ್ಕಾಗಿ ಬರೆಯಲ್ಪಟ್ಟಿವೆ. ಆದರೆ ಅವು ಬಹುಬೇಗನೆ ಸಭೆಯ ವಿಶಾಲವಾದ ಸಂದರ್ಭದಲ್ಲಿ ಸಹ ಪ್ರಸಾರವಾಗಿವೆ (ಉದಾಹರಣೆ ಹೋಲಿಸಿ 1 ಕೊರಿಂಥ 7:10-11, 9:14, 11:23-26, 14:37). ಹಾಗಾಗಿ ಮೌಖಿಕ ಸಂಪ್ರದಾಯದ ಬೆಳಕಿನಲ್ಲಿ ಲಿಖಿತ ಪಠ್ಯಗಳನ್ನು ಮೌಲ್ಯಮಾಪನ ಮಾಡುವ ಅಗತ್ಯತೆ ಉದ್ಭವಿಸಿದೆ. ಸಭೆಗಳಲ್ಲಿ ಪ್ರಚಾರವಾಗುವ ಅನೇಕ ಲಿಖಿತ ವಿವರಗಳಲ್ಲಿ ಯಾವುವು ನೈಜ ಮತ್ತು ಅಧಿಕಾರಯುತವಾಗಿಲ್ಲ? ಈ ಒಂದು ಅಂಶವು ಜ್ಞಾನದ ದುರ್ಬೋಧನೆಯ ಪ್ರಭಾವದೊಂದಿಗೆ ಅನೇಕ ಸಭೆಗಳಲ್ಲಿ ಇನ್ನೂ ಪ್ರಾಮುಖ್ಯವಾಗಿದೆ (ಉದಾಹರಣೆಗೆ ತೋಮನ ಸುವಾರ್ತೆ ಮತ್ತು ಸತ್ಯದ ಸುವಾರ್ತೆಯಲ್ಲಿ).

ಎರಡನೇ ಶತಮಾನದ ಪ್ರಾರಂಭದಲ್ಲಿ ಕ್ರೈಸ್ತ ಬರಹಗಾರರು ಪ್ರತ್ಯೇಕವಾಗಿ ನಾಲ್ಕು ಶಾಸನಾತ್ಮಕ ಸುವಾರ್ತೆಗಳಿಂದ (ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನ) ಹೆಚ್ಚಾಗಿ ಉಲ್ಲೇಖನಗಳನ್ನು ಉಪಯೋಗಿಸಿದರು. ಸುಮಾರು ಕ್ರಿ.ಶ. 170 ರಲ್ಲಿ ಮೊದಲ

“ಸುವಾರ್ತೆಗಳ ಸಾಮರಸ್ಯವು” ಬರೆಯಲ್ಪಟ್ಟಿತು. ಇದು ಕೇವಲ ಈ ನಾಲ್ಕು ಸುವಾರ್ತೆಗಳನ್ನು, ಬೇರಾವ ಸುವಾರ್ತೆಯೂ ಅಧಿಕೃತವಲ್ಲ ಎಂಬ ವಾಸ್ತವಾಂಶವನ್ನು ಮಾತ್ರ ಒಳಗೊಂಡಿತ್ತು. ಅದೇ ವೇಳೆಯಲ್ಲಿ ಕ್ರೈಸ್ತ ಸಭಾ ಜೀವನದಲ್ಲಿ ಒಟ್ಟಾಗಿ ಉಪಯೋಗಿಸಲ್ಪಡಲು ಈ ನಾಲ್ಕು ಸುವಾರ್ತೆಗಳನ್ನು ಒಟ್ಟಾಗಿ ಸಂಗ್ರಹಿಸಿ ಒಂದು ಪುಸ್ತಕವನ್ನಾಗಿ ಮಾಡಲಾಯಿತು.

ಹೀಗೆ ಯೇಸುವಿನ ಜೀವನದ ಕುರಿತ ನಾಲ್ಕು ಸುವಾರ್ತೆಗಳು ಯೇಸುವಿನ ಜೀವನ, ಮರಣ ಮತ್ತು ಪುನರುತ್ಥಾನಕ್ಕೆ ಅಧಿಕೃತವಾದ ಸಾಕ್ಷಿಗಳಾಗಿವೆ ಎಂಬುದಾಗಿ ಆದಿ ಸಭೆಯಿಂದ ದೃಢಪಟ್ಟಿವೆ. ಅವುಗಳ ಭಿನ್ನತೆಗಳ ಹೊರತಾಗಿಯೂ ಅವುಗಳು ಅಂದರೆ ನಾಲ್ಕೂ ಸಹ ದೇವರು ಪ್ರೇರೇಪಿಸಿದ ವಾಕ್ಯಗಳೆಂಬುದಾಗಿ ಅಂಗೀಕರಿಸಿ ಉಪಯೋಗಿಸಲ್ಪಟ್ಟಿವೆ.

ಒಬ್ಬ ಅನ್ವೇಷಣಶೀಲ ಓದುಗನು ಯೇಸುವಿನ ಬಗ್ಗೆ ಬಯಸುವ ಎಲ್ಲಾ ಮಾಹಿತಿಗಳನ್ನು ಈ ನಾಲ್ಕು ಪುಸ್ತಕಗಳನು ಹೊಂದಿರದೆ ಇರುವುದು ಸತ್ಯಸಂಗತಿಯಾಗಿದೆ. ಆದರೆ ಅವುಗಳ ಚತುರ್ಗುಣ ಸಾಕ್ಷಿಯು ಆತನಲ್ಲಿ ನಂಬಿಕೆಯಿಟ್ಟು, ಆತನನ್ನು ಸ್ವಂತ ರಕ್ಷಕನನ್ನಾಗಿ ಅಂಗೀಕರಿಸಿದ ನಮ್ಮೆಲ್ಲರಿಗಾಗಿನ ಶಿಲುಬೆ ಮೇಲೆ ಯೇಸು ಮಾಡಿದ ಕಾರ್ಯ ಮತ್ತು ದೇವರ ರಾಜ್ಯದ ಕುರಿತಾಗಿನ ಯೇಸುವಿನ ಶುಭವಾರ್ತೆಯನ್ನು ಯಾವೊಬ್ಬರು ಸಹ ಅರ್ಥೈಸಿಕೊಳ್ಳುವುದನ್ನು/ತಿಳಿದುಕೊಳ್ಳುವಂಥದನ್ನು ಒಳಗೊಂಡಿದೆ.

## ಮತ್ತಾಯನ ಸುವಾರ್ತೆ

### ಗ್ರಂಥಕರ್ತ

ಮತ್ತಾಯನ ಸುವಾರ್ತೆಯು ಅನಾಮದೇಯವಾಗಿದ್ದು, ಆದರ ಗ್ರಂಥಕರ್ತರ ಬಗ್ಗೆ ಯಾವುದೇ ಹೆಸರಾಗಲೀ ಅಥವಾ ಗುರುತಾಗಲೀ ಹೇಳುವುದಿಲ್ಲ. ಆದರೆ ಸಭೆಯ ಆರಂಭಿಕ ಸಂಪ್ರದಾಯಗಳು ಇದರ ಗ್ರಂಥಕರ್ತನ ಶ್ರೇಯವನ್ನು ಹಿಂದೆ ಯೇಸುವನ್ನು ಹಿಂಬಾಲಿಸಿದ ಸುಂಕದ ವಸೂಲಿಗಾರನೂ ಮತ್ತು ತದನಂತರ ಯೇಸುವಿನ ಹನ್ನೆರಡು ಮಂದಿ ಶಿಷ್ಯರಲ್ಲೊಬ್ಬನಾದ ಮತ್ತಾಯನಿಗೆ ಸಲ್ಲಿಸುತ್ತದೆ (ಮತ್ತಾ. 9:9-10, 10:13).

### ದಿನಾಂಕ ಮತ್ತು ಬರೆದ ಸ್ಥಳ

ಮತ್ತಾಯನ ಸುವಾರ್ತೆಯು ಮಾರ್ಕನ ನಂತರ ಮತ್ತು ಲೂಕನಿಗಿಂತ ಮೊದಲು ಸುಮಾರು ಕ್ರಿ.ಶ. 50 ರಲ್ಲಿ ಬರೆದಿರಬಹುದು. ಕೆಲ ಪಂಡಿತರಗಳು ಇದು ಪ್ಯಾಲೆಸ್ಟೈನಿನಲ್ಲಿ ಬರೆಯಲ್ಪಟ್ಟಿದೆ ಎಂದರೆ ಇನ್ನೂ ಕೆಲವರು ಸಿರಿಯಾದ ಅಂತಿಯೋಕ್ಯದಲ್ಲಿ ಬರೆಯಲ್ಪಟ್ಟಿದೆ ಎಂದು ಯೋಚಿಸುತ್ತಾರೆ.

### ಸ್ವೀಕೃತರು/ಓದುಗರು

ಈ ಸುವಾರ್ತೆಯು (ಉಳಿದ ಸುವಾರ್ತೆಗಳಂತೆ) ಗ್ರೀಕಿನಲ್ಲಿ ಬರೆಯಲ್ಪಟ್ಟಿದೆ, ಹಾಗಾಗಿ ಮತ್ತಾಯನ ಓದುಗರು ಗ್ರೀಕ್ ಮಾತನಾಡುವವರಾಗಿರಬೇಕು. ಆದರೆ ಅವರು ಯೆಹೂದ್ಯರಾಗಿರಬೆಕೆಂದು ಈ ಅಂಶಗಳು ತೋರಿಸುತ್ತವೆ:

- ಮತ್ತಾಯನು ಹಳೇ ಒಡಂಬಡಿಕೆ ಪ್ರವಾದನೆಗಳ ನೆರವೇರಿಕೆಯೊಂದಿಗೆ ಕಾಳಜಿ ಹೊಂದಿದ್ದು ಹೊಸ ಒಡಂಬಡಿಕೆಯ ಉಳಿದ ಎಲ್ಲಾ ಪುಸ್ತಕಗಳಿಗಿಂತ ಹೆಚ್ಚಾಗಿ ಆತನು ತನ್ನ ಪತ್ಯಕ್ಕೆ ಹಳೇ ಹೊಡಂಬಡಿಕೆಯ ಉಲ್ಲೇಖಗಳನ್ನು ಸೇರಿಸುತ್ತಾನೆ.
- ಯೇಸುವು ಅಬ್ರಹಾಮನ ವಂಶದವನಾಗಿದ್ದಾನೆಂದು ಮತ್ತಾಯನು ತಿಳಿಸುತ್ತಾನೆ
- ಮತ್ತಾಯನು ಯೆಹೂದಿ ಆಚಾರಗಳನ್ನು ವಿವರಿಸುವುದಿಲ್ಲ ಮತ್ತು ಆತನು ಯೆಹೂದ್ಯರ ಮನಸ್ಸನ್ನು ನೋಯಿಸದಂತಹ ಹೇಳಿಕೆಗಳಿಗೆ ಆಧ್ಯತೆ ಕೊಡುತ್ತಾನೆ (ಉದಾ: “ದೇವರ ರಾಜ್ಯ” ದ ಬದಲು “ಪರಲೋಕರಾಜ್ಯ”).
- ಮತ್ತಾಯನು ಯೇಸುವಿನ ಪಾತ್ರವನ್ನು “ದಾವೀದನ ಮಗ” ನೆಂಬುದಾಗಿ ಒತ್ತಿ ಹೇಳುತ್ತಾನೆ. ಆದರೆ ಆತನ ಸುವಾರ್ತೆಯು ಒಂದು ಸಾರ್ತತ್ರಿಕ ಹೊರನೋಟವನ್ನು ಹೊಂದಿದೆ (ಉದಾ: ಆತನು ಮೂಡಣ ದೇಶದ ಜೋಯಿಸರ ವಿವರ ಸೇರಿಸಿದ್ದಾನೆ ಮತ್ತು ಮಹಾ ಆದೇಶ/ಆಜ್ಞೆಯು “ಎಲ್ಲಾ ದೇಶದವರಿಗಾಗಿನ” ಆತನ ಕಾಳಜಿಯನ್ನು ತೋರಿಸುತ್ತದೆ)

### ಉದ್ದೇಶ ಮತ್ತು ದೈವಶಾಸ್ತ್ರ

ಮತ್ತಾಯನ ಮುಖ್ಯ ಉದ್ದೇಶವು ತನ್ನ ಯೆಹೂದಿ ಓದುಗರಿಗೆ ಯೇಸುವು ಅವರ ಮೆಸ್ಸೀಯನು (ಕ್ರಿಸ್ತನು), ಹಳೇ ಒಡಂಬಡಿಕೆಯ ಪ್ರವಾದನೆಗಳ ನೆರವೇರಿಕೆ ಆಗಿದ್ದಾನೆಂಬುದನ್ನು ತೋರಿಸುವುದಾಗಿದೆ.

ದೇವರ ಪ್ರಸನ್ನತೆಯು ಬಹುಶಃ ಮತ್ತಾಯನ ಬಹುಪ್ರಾಮುಖ್ಯ ದೈವಶಾಸ್ತ್ರೀಯ ವಿಷಯ ವಸ್ತುವಾಗಿದೆ. ದೇವರು ಯೇಸು ಕ್ರಿಸ್ತನ ರೂಪದಲ್ಲಿ ತನ್ನ ಜನರೊಂದಿಗಿದ್ದಾನೆ (ಆತನು ಇಮ್ಮಾನುವೇಲನು, “ದೇವರು ನಮ್ಮ ಕೂಡ ಇದ್ದಾನೆ”). ದೇವರು ಯೆರೂಸಲೇಮಿನ ದೇವಾಲಯದಲ್ಲಿರುವುದಕ್ಕಿಂತ ಹೆಚ್ಚಾಗಿ ಯೇಸುವಿನಲ್ಲಿದ್ದಾನೆ: “ಇಲ್ಲಿ ದೇವಾಲಯಕ್ಕಿಂತ ಹೆಚ್ಚಿನವನು ಇದ್ದಾನೆ” (12:6). ಪರಿಣಾಮವಾಗಿ ಜನರು ಯೇಸುವನ್ನು ಆರಾಧಿಸುವುದು ಸಮರ್ಪಕವಾದುದ್ದಾಗಿತ್ತು. ಮೂಡಣ ದೇಶದ ಜೋಯಿಸರು ಇದನ್ನು ಗ್ರಹಿಸಿಕೊಂಡರು (2:2, 8, 11), ದೇವರನ್ನು ಬಿಟ್ಟು ಬೇರಾರನ್ನು ಆರಾಧಿಸದ ಭಕ್ತಿವಂತ ಯೆಹೂದ್ಯರಾಗಿದ್ದ ಯೇಸುವಿನ ಶಿಷ್ಯರು ಸಹ ಇದನ್ನು ಅರಿತುಕೊಂಡರು.

**ರಚನೆ**

**ಆವರಣ:** ಮೊದಲು ನಾವು ಮತ್ತಾಯನು ತನ್ನ ದೈವಶಾಸ್ತ್ರದ ಪ್ರಮುಖ ಅಂಶಗಳನ್ನು ವ್ಯಕ್ತಪಡಿಸುವ ಮೂರು ಪರಿಕಲ್ಪನೆಗಳೊಳಗೆ ತನ್ನ ಪುಸ್ತಕವನ್ನು ಹೇಗೆ ಒಟ್ಟಾಗಿ ಸೇರಿಸುತ್ತಾನೆನ್ನುವುದನ್ನು ನಾವು ಮೊದಲು ಗಮನಿಸಬೇಕು. ಈ ಪ್ರತಿ ಪರಿಕಲ್ಪನೆಯನ್ನು ಆತನ ಸುವಾರ್ತೆಯ ಆರಂಭ ಮತ್ತು ಅಂತ್ಯದಲ್ಲಿ ಕಾಣಬಹುದು. ಈ ಒಂದು ಸಾಮಾನ್ಯ ಸಾಹಿತ್ಯದ ಪ್ರಕ್ರಿಯೆಯನ್ನು "ಆವರಣ" ಎಂದು ಕರೆಯುವರು:

- ಇಮ್ಮಾನುವೇಲ (ದೇವರು ನಮ್ಮ ಕೂಡ ಇದ್ದಾನೆ (1:23) ಮತ್ತು "ನಾನು ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" (28:28).
- "ಯೆಹೂದ್ಯರ ಅರಸನಾಗಿ ಹುಟ್ಟಿದವನು ಎಲ್ಲಿದ್ದಾನೆ?" (2:2) ಮತ್ತು "ಇವನು ಯೇಸು, ಯೆಹೂದ್ಯರ ಅರಸನು" (27:37).
- ದೇವರ ಮಗನು (2:15) ಮತ್ತು 26:63-64

**ಕಥಾನಿರೂಪಣೆಯ ರಚನೆ (ವಿನ್ಯಾಸ):** ಯೇಸುವಿನ ಕುರಿತಾದ ಪೇತ್ರನ ಅರಿಕೆಯೊಂದಿಗೆ ಕೈಸರೈನ ಫಿಲಿಪ್ಪಿಯ ಸುತ್ತ ಘಟನೆಗಳನ್ನು ಹೊಂದಿಸುವಲ್ಲಿ ಮತ್ತಾಯನು ಮಾರ್ಕನನ್ನೇ ಹಿಂಬಾಲಿಸಿದ್ದಾನೆ (16:13-20). ಆತನ ಕಥೆಯಲ್ಲಿನ ಮುಖ್ಯವಾದ ತಿರುವಿನ ಒಂದು ಅಂಶ: "ಅಂದಿನಿಂದ" (16:21). ಇದೇ ಹೇಳಿಕೆ ಹಿಂದಿನ ಒಂದು ತಿರುವಿನ ಅಂಶವಾಗಿ ಕಂಡುಬರುತ್ತದೆ (4:17). ಈ ಹೇಳಿಕೆಯನ್ನು ಆಧರಿಸಿ ಮತ್ತಾಯನ ವಾಕ್ಯಭಾಗದಲ್ಲಿ ಸಾಗುವ ಕಥೆಯಲ್ಲಿ ನಾವು ಮೂರು ಭಾಗಗಳನ್ನು ಗುರುತಿಸಬಹುದು:

1. ಯೇಸುವನ್ನು ಪರಿಚಯಿಸುವ ಕಥಾನಿರೂಪಣೆಯು ಬೇತ್ಲೆಹೇಮ್, ಐಗುಪ್ತ ಮತ್ತು ನಜರೇತಿನಲ್ಲಿ ನಡೆಯುತ್ತದೆ (1:1-16).
2. ಯೇಸುವಿನ ಬಹಿರಂಗ ಸೇವೆಯನ್ನೊಳಗೊಂಡ ಕಥಾನಿರೂಪಣೆಯು ಕಪೆರ್ನೌಮ್ ಮತ್ತು ಗಲಿಲಾಯದಲ್ಲಿ ಸಂಭವಿಸುತ್ತದೆ (4:17 – 16-20).
3. ಯೇಸುವಿನ ಬಾಧೆ ಮತ್ತು ಮರಣವು ಓದುಗನನ್ನು ಗಲಿಲಾಯದಿಂದ ಯೂದಾಯಕ್ಕೆ ಮತ್ತು ಯೆರೂಸಲೇಮಿಗೆ ಕೊಂಡೊಯ್ಯುತ್ತದೆ (16:21 – 28:20).

**ದೈವಶಾಸ್ತ್ರೀಯ ರಚನೆ (ವಿನ್ಯಾಸ):** ಮತ್ತಾಯನು ತನ್ನ ಸುವಾರ್ತೆಯನ್ನು ಯೇಸುವಿನ ನಾಲ್ಕು ಉಪದೇಶಗಳ ಸುತ್ತ ವಿನ್ಯಾಸಗೊಳಿಸಿದ್ದಾನೆ. ಅವನು ಶಿಷ್ಯತ್ವದ ಕುರಿತ ಒಂದು ಕೈಪಿಡಿ ಅಥವಾ ಮಾರ್ಗದರ್ಶಿಯೆಂಬುದಾಗಿ ಸಹ ಅರ್ಥೈಸಿಕೊಳ್ಳಬಹುದು:

1. ಪರ್ವತ ಪ್ರಸಂಗ (ಅಧ್ಯಾಯ 5-7)
2. ಹನ್ನೆರಡು ಮಂದಿ ಶಿಷ್ಯರಿಗೆ ಆದೇಶಿಸುವುದು (ಅಧ್ಯಾಯ 10)
3. ದೇವರ ರಾಜ್ಯದ ಕುರಿತ ಸಾಮ್ಯಗಳು (ಅಧ್ಯಾಯ 13)
4. ದೇವರ ರಾಜ್ಯದಲ್ಲಿನ ಜೀವನ (ಅಧ್ಯಾಯ 18)
5. ಯುಗದ ಸಮಾಪ್ತಿ (ಅಧ್ಯಾಯ 24-25)

ಈ ಐದು ಉಪದೇಶಗಳು ಪುಸ್ತಕದ ದೈವಶಾಸ್ತ್ರೀಯ ವಿನ್ಯಾಸ/ರಚನೆಯನ್ನು ಸಹ ಕೊಡುತ್ತವೆ:

- ಪ್ರಸ್ತುತ:
  - ಸಭೆಯ ಆದೇಶ (ಅಧ್ಯಾಯ 5-7)

- ಈ ಭೂಮಿ ಮೇಲಿನ ದೇವರ ರಾಜ್ಯ (ಅಧ್ಯಾಯ 10)
- ಸಭೆಯ ಶಿಷ್ಯತ್ವದ ಜೀವನ (ಅಧ್ಯಾಯ 18)

- ಭವಿಷ್ಯ (ಅಧ್ಯಾಯ 24-25).

ತನ್ನ ಐದು ಉಪದೇಶಗಳ ಮೂಲಕ ಯೇಸು ಒಬ್ಬ ಹೊಸ ಮೋಶೆಯಾಗುತ್ತಾನೆ (ಮೋಶೆ ಮತ್ತು ಯೇಸು ಇಬ್ಬರೂ ಸಹ "ಐಗುಪ್ತದೊಳಗಿಂದ" ಕರೆಯಲ್ಪಟ್ಟರೆಂಬುದಾಗಿ ಗಮನಿಸಿ, ವಿಮೋಚನಕಾಂಡ 3:10-12 , ಮತ್ತಾ. 2:15). ಇಸ್ರಾಯೇಲ್ಯರಿಗೆ ಧರ್ಮಶಾಸ್ತ್ರದ ಐದು ಪುಸ್ತಕಳನ್ನು ಕೊಟ್ಟ ಮೋಶೆಯಂತೆ ಯೇಸು ಸಹ ಒಬ್ಬ ಗುರುವಾಗಿದ್ದಾನೆ.

## ಮಾರ್ಕನ ಸುವಾರ್ತೆ

### ಗ್ರಂಥಕರ್ತ

ಮಾರ್ಕನ ಸುವಾರ್ತೆಯು ಅನಾಮಧೇಯವಾಗಿದ್ದು, ಇದು ಇದರ ಗ್ರಂಥಕರ್ತನ ಹೆಸರನ್ನಾಗಲೀ, ಗುರುತನ್ನಾಗಲೀ ತಿಳಿಸಿಲ್ಲ, ಆದರೆ ಇದು ರೋಮ್ನಲ್ಲಿ ಪೇತ್ರನ ಸಹಕೆಲಸಗಾರನಾಗಿದ್ದ ಯೋಹಾನನೆಂಬ ಮಾರ್ಕನಿಂದ ಬರೆಯಲ್ಪಟ್ಟಿದೆ ಎಂಬುದಾಗಿ ಪ್ರಾರಂಭಿಕ ಸಭಾ ಸಂಪ್ರದಾಯಗಳು ಹೇಳುತ್ತಾವೆ (ಪೇತ್ರ ಸಹ ಆತನನ್ನು 1 ಪೇತ್ರ 5:13 ರಲ್ಲಿ "ನನ್ನ ಮಗನಾದ ಮಾರ್ಕ" ಎಂದು ಕರೆಯುತ್ತಾನೆ) ಮತ್ತು ಮಾರ್ಕನ ಸುವಾರ್ತೆಯು ಯೇಸುವಿನ ಕುರಿತ ಪೇತ್ರನ ಬೋಧನೆಗಳನ್ನು ವ್ಯಕ್ತಪಡಿಸುತ್ತದೆ. ಯೋಹಾನನೆಂಬ ಮಾರ್ಕನ ಹೆಸರು ಹೊಸ ಒಡಂಬಡಿಕೆಯಲ್ಲಿ ಅನೇಕ ಬಾರಿ ಕಂಡುಬರುತ್ತದೆ. ಆತನ ತಾಯಿಗೆ ಯೆರೂಸಲೇಮಿನಲ್ಲಿ ಒಂದು ಮನೆಯಿತ್ತು, ಅಲ್ಲಿ ಆದಿ ಸಭೆಯ ವಿಶ್ವಾಸಿಗಳೆಲ್ಲರೂ ಪ್ರಾರ್ಥನೆಗಾಗಿ ಕೂಡುತ್ತಿದ್ದರು (ಅ.ಕೃ. 12:12). ಈತನು ಮೊದಲ ಸೇವಾ ಪ್ರಯಾಣದಲ್ಲಿ ತನ್ನ ಸೋದರ ಸಂಬಂಧಿಯಾದ ಬಾರ್ನಬ ಮತ್ತು ಪೌಲನೊಂದಿಗೆ ಇದ್ದನು (ಅ.ಕೃ. 12:25). ಬಾರ್ನಬ ಮತ್ತು ಪೌಲರು ಮಾರ್ಗ ಬದಲಿಸಲು ಈತನೇ ಕಾರಣ, ಮಾರ್ಕನು ಬಾರ್ನಬನೊಂದಿಗೆ ಹೋಗುತ್ತಾನೆ (ಅ.ಕೃ. 15:37-39), ಪೌಲನು ಸೀಲನನ್ನು ಎರಡನೇ ಸೇವಾ ಪ್ರಯಾಣದಲ್ಲಿ ತನ್ನ ಸಂಗಡಿಗನನ್ನಾಗಿ ಆರಿಸಿಕೊಳ್ಳುತ್ತಾನೆ. ನಂತರ ಪುನಃ ಮಾರ್ಕನು ಪೌಲನಿಗೆ ತೀರಾ ಆತ್ಮೀಯನಾಗುತ್ತಾನೆ (ಕೊಲೊಸ್ಸೆ 4:10, ಫಿಲೆಮೊನ 24, 2 ತಿಮೊ. 4:11). ಈ ಮಾರ್ಕನೇ ಈ ಸುವಾರ್ತೆಯ ಗ್ರಂಥಕರ್ತನು ಮತ್ತು ಅಪೊಸ್ತಲ ಪೇತ್ರನು ಈತನ ಮಾಹಿತಿಗಳ ಮೂಲವಾಗಿದ್ದಾನೆಂಬುದನ್ನು ಆಧುನಿಕ ಪಂಡಿತರುಗಳು ಒಪ್ಪುತ್ತಾರೆ. ಹೆಚ್ಚುವರಿಯಾಗಿ ಹೇಳಬೇಕೆಂದರೆ ಮಾರ್ಕನ ಸುವಾರ್ತೆಯು ಪೌಲನ ದೈವಶಾಸ್ತ್ರವನ್ನು ಪ್ರತಿಬಿಂಬಿಸುತ್ತದೆ, ಅಲ್ಲದೆ ಮಾರ್ಕನ ಗ್ರಂಥಕರ್ತತ್ವದ ಅನುಕೂಲಕ್ಕನುಸಾರವಾಗಿ ಮಾತನಾಡುತ್ತದೆ. ಪೌಲನ ಸಹಕೆಲಸಗಾರನಾದ ಮಾರ್ಕನು ಪೌಲನ ಬೋಧನೆಯಿಂದ ತೀರಾ ಪರಿಚಿತನಾಗಿದ್ದಿರಬಹುದು.

### ದಿನಾಂಕ ಮತ್ತು ಬರೆದ ಸ್ಥಳ

ಮಾರ್ಕನ ಸುವಾರ್ತೆಯು ಸುವಾರ್ತೆಗಳಲ್ಲೇ ತೀರಾ ಮೊದಲಿನದಾಗಿರಬೇಕೆಂದು ತೋರುತ್ತದೆ ಮತ್ತು ಇದು ಸುಮಾರು ಕ್ರಿ.ಶ. 50 ರಲ್ಲಿ ಬರೆಯಲ್ಪಟ್ಟಿದೆ. ಇದು ರೋಮ್ನಲ್ಲಿ ಬರೆಯಲ್ಪಟ್ಟಿದೆ ಎಂಬುದಾಗಿ ಅನೇಕ ಪಂಡಿತರುಗಳು ಯೋಚಿಸುತ್ತಾರೆ.

### ಸ್ವೀಕೃತರು (ಓದುಗರು)

ಈ ಸುವಾರ್ತೆಯು ಗ್ರೀಕಿನಲ್ಲಿ ಬರೆಯಲ್ಪಟ್ಟಿರುವುದರಿಂದ, ಮಾರ್ಕನ ಓದುಗರು ಗ್ರೀಕನ್ನು ಅರ್ಥೈಸಿಕೊಳ್ಳುವಂತವರಾಗಿರಬೇಕೆನಿಸುತ್ತದೆ. ಮಾರ್ಕನ ಮನಸ್ಸಿನಲ್ಲಿ ಅನ್ಯ ಓದುಗರಿದ್ದರು, ಯಾಕೆಂದರೆ ಆತನು ಯೆಹೂದಿ ಆಚಾರಗಳನ್ನು ವಿವರಿಸಿದ್ದಾನೆ (ನೋಡಿ 7:2-4, 15:42) ಮತ್ತು ಅರಾಮಿಕ್ ಪದಗಳನ್ನು ಭಾಷಾಂತರಿಸಿದ್ದಾನೆ (ನೋಡಿ 3:17, 5:41, 7:11, 34, 15:22).

### ಉದ್ದೇಶ ಮತ್ತು ದೈವಶಾಸ್ತ್ರ

ಆವರಣ ಎಂಬ ಸಾಹಿತ್ಯದ ಲಕ್ಷಣದ ಮೂಲಕ ಮಾರ್ಕನು ತನ್ನ ಸಮಗ್ರ ಉದ್ದೇಶವನ್ನು ಪ್ರಕಟಿಸಿದ್ದಾನೆ. ಆತನಿದನ್ನು ಅದೇ ಗ್ರೀಕ್ ಕ್ರಿಯಾಪದ ("ಇಬ್ಭಾಗವಾಯಿತು") ಮತ್ತು ತನ್ನ ಸುವಾರ್ತೆಯ ಪ್ರಾರಂಭದಲ್ಲಿ ಯೇಸುವಿನ ದೀಕ್ಷಾಸ್ನಾನದ ಕುರಿತ ವಿವರದಲ್ಲಿ (ಆಕಾಶವೊಡೆದು, "ನೀನು ಪ್ರಿಯನಾಗಿರುವ ನನ್ನ ಮಗನು", 1:9-11) ಮತ್ತು ತನ್ನ ಸುವಾರ್ತೆಯ ಕೊನೆಯಲ್ಲಿ ಯೇಸುವಿನ ಮರಣದ ಕುರಿತ ವಿವರದಲ್ಲಿ (ಯೆಹೂದಿ ದೈವಶಾಸ್ತ್ರದ ಪ್ರಕಾರ ಭೂಮಿ ಮತ್ತು ಆಕಾಶವನ್ನು ಬೇರ್ಪಡಿಸಿದ್ದ ಪರದೆಯು ಹರಿದು ಎರಡು ಭಾಗವಾಯಿತು, ಮತ್ತು ಅಲ್ಲಿದ್ದ ರೋಮನ್ ಶತಾಧಿಪತಿಯು "ನಿಜವಾಗಿ ಈ ಮನುಷ್ಯನು ದೇವಕುಮಾರನಾಗಿದ್ದನು" ಅಂದನು,

(15:37-39). ಯೇಸುವಿಗೆ ಒಂದೇ ರೀತಿಯ ಹೆಸರನ್ನುಪಯೋಗಿಸುವುದರಿಂದ ("ದೇವರ ಮಗನು") ಆತನಿದನ್ನು ತೋರ್ಪಡಿಸಿದ್ದಾನೆ. ಹೀಗೆ ಯೆಸುವು ಶಿಲುಬೆ ಮೇಲೆ ಮರಣ ಹೊಂದುವುದರ ಮೂಲಕ ದೇವರೆಡೆಗೆ ಒಂದು ಮಾರ್ಗವನ್ನು ತೆರೆಯುವುದಕ್ಕಾಗಿ ಈ ಭೂಲೋಕಕ್ಕೆ ಬಂದನೆಂಬುದು ತನ್ನ ಓದುಗರಿಗಾಗಿನ ಮಾರ್ಕನ ಮುಖ್ಯ ಸಂದೇಶವಾಗಿದೆ, ಮತ್ತು ಈಗಾಗಲೇ ಆತನ ದೀಕ್ಷಾಸ್ನಾನದ ಸುತ್ತಲಾದ ಘಟನೆಗಳು ಈ ಸತ್ಯವನ್ನು ಸಾಕ್ಷಿಕರಿಸಿವೆ.

ಮಾರ್ಕನ ಸುವಾರ್ತೆಯನ್ನು ವರ್ಗೀಕರಿಸುವ ನಾಲ್ಕು ದೈವಶಾಸ್ತ್ರೀಯ ವಿಷಯವಸ್ತುಗಳು ಇಂತಿವೆ:

1. ಎಲ್ಲಿ ದೇವರ ಚಿತ್ತವು ನೆರವೇರುತ್ತದೋ ಅದುವೇ ದೇವರ ರಾಜ್ಯವಾಗಿದೆ.ಯೇಸು ಮತ್ತು ಆತನ ಸೇವೆಯ ಮೂಲಕ ದೇವರ ಚಿತ್ತವು ಒಂದು ಹೊಸದಾದ ರೀತಿಯಲ್ಲಿ ಗೋಚರಿಸಿದೆ (1:15). ದೇವರ ರಾಜ್ಯವು ಜನರಿಗೆ ಈಗಲೂ ಒಂದು ಮರ್ಮವಾಗಿದೆ ಆದರೆ ಯೇಸುವಿನ ಹಿಂಬಾಲಕರಿಗೆ ಅದು ಪ್ರಕಟಿಸಲ್ಪಟ್ಟಿದೆ (4:11). ದೇವರ ರಾಜ್ಯವು ಒಂದು ಸಣ್ಣದಾದ ರೀತಿಯಲ್ಲಿ ಬಂದಿದೆ (14:30-32), ಆದರೆ ಇದು ಬೆಳೆಯುತ್ತದೆ ಮತ್ತು ಅದು ಪ್ರಬಲವಾಗಿ ಬರುತ್ತದೆ (9:1).
2. ಮೆಸ್ಸೀಯನ ರಹಸ್ಯವು (ನೋಡಿ 1:24-25,34,44, 3:12, 5:43, 7:36, 8:30, 9:9). ಯೇಸುವಿನ ಮರಣದ ವೇಳೆ ಶಿಲುಬೆಯ ಮೇಲೆ ಏನಾಯಿತೆಂಬುದರ ಪ್ರಾಧಾನ್ಯತೆಯನ್ನು ಸೂಚಿಸುತ್ತದೆ. ಕೇವಲ ಆತನ ಮರಣದಿಂದ ಮಾತ್ರ ಆತನ ಗುರುತು ಮತ್ತು "ಮೆಸ್ಸೀಯ/ಕ್ರಿಸ್ತನು", "ದೇವರ ಮಗನು" ಮತ್ತು "ಮನುಷ್ಯಕುಮಾರನು" ಎಂಬ ಆತನ ಹೆಸರುಗಳ ಪೂರ್ಣ ಅರ್ಥವು ಪ್ರಕಟವಾಯಿತು. ಶಿಲುಬೆಯಲ್ಲಿ ದೇವರ ರಾಜ್ಯದ ಬಲವು ಬಹಿರಂಗಗೊಂಡಿದೆ. ಅಲ್ಲಿಯೇ ಯೇಸು ತನ್ನ ಪ್ರಾಣವನ್ನು ಅನೇಕರಿಗಾಗಿ ಈಡಿ ಕೊಟ್ಟನು (10:45).
3. ಶಿಷ್ಯತ್ವ: ಮಾರ್ಕನ ಸುವಾರ್ತೆಯ ಮೊದಲರ್ಧದಲ್ಲಿ ಮೂರು ವಾಕ್ಯಭಾಗಗಳು ಈ ಪುಸ್ತಕದಲ್ಲಿ ಯೇಸುವಿನ ಹನ್ನೆರಡು ಮಂದಿ ಶಿಷ್ಯರು ವಹಿಸಿದ ಮುಖ್ಯ ಪಾತ್ರವನ್ನು ತೋರಿಸುತ್ತವೆ: 1. ಮೊದಲ ಶಿಷ್ಯರ ಕರೆ (1:16-20), 2. ಹನ್ನೆರಡು ಮಂದಿ ಅಪೊಸ್ತಲರ ನೇಮಕ (3:31-35), 3. ಹನ್ನೆರಡು ಮಂದಿಯನ್ನು ಕಳುಹಿಸುವುದು (6:7-13). ಅಲ್ಲದೆ ನಾವು ಶಿಷ್ಯರ ಒಂದು ದೊಡ್ಡ ಗುಂಪನ್ನು ಸಹ ಕಾಣುತ್ತೇವೆ (ನೋಡಿ 2;15, 3:31-35, 5:18-20). ಸುವಾರ್ತೆಯ ಎರಡನೆಯ ಭಾಗದಲ್ಲಿ ಯೇಸುವನ್ನು ಬಂಧಿಸಿ, ಪೇತ್ರನು ಆತನನ್ನು ಅಲ್ಲಗಳೆಯುವವರೆಗೂ ಯೇಸುವಿನ ಹನ್ನೆರಡು ಮಂದಿ ಶಿಷ್ಯರೂ ಆತನೊಂದಿಗೇ ಇರುತ್ತಾರೆ. ಈ ಸುವಾರ್ತೆಯು ಮೂಲತಃ ಯೇಸುವು ತನ್ನ ಶಿಷ್ಯರೊಂದಿಗೆ ಗಲಿಲಾಯದಲ್ಲಿ ಅವರನ್ನು ಕಾಣುತ್ತೇನೆಂಬುದಾಗಿ ಹೇಳುವುದರೊಂದಿಗೆ ಮುಕ್ತಾಯವಾಗುವಂತೆ ತೋರುತ್ತದೆ (16:7). ಶಿಷ್ಯರ ಬಗ್ಗೆ ಮಾರ್ಕನು ತನ್ನ ಓದುಗರಿಗೆ ಕೊಡುವ ಚಿತ್ರಣವು ಮಿಶ್ರಿತವಾಗಿದೆ: ಒಂದು ವಿಧದಲ್ಲಿ ಇದು ನಕಾರಾತ್ಮಕವಾಗಿದೆ (ಆತನನ್ನು ಅವರು ತಿಳಿದುಕೊಳ್ಳುವುದಿಲ್ಲ, 4:13,33-34, 7:17-18, 8:32-33, 9:9-13,32, 10:10, ಆತನ ಕೆಲ ಅದ್ಭುತಗಳನ್ನು ಸಹ, 4:35-41, 6:45-52, 8:14-21). ಇನ್ನೊಂದು ವಿಧದಲ್ಲಿ ಅದು ಸಕಾರಾತ್ಮಕವಾಗಿದೆ (ಅವರು ಆತನನ್ನು ಹಿಂಬಾಲಿಸಲು ತವಕಿಸುತ್ತಾರೆ, 1:16-20, 2:14, ಸ್ಪಷ್ಟವಾಗಿ ಅವರು ಆತನಿಂದ ಆರಿಸಲ್ಪಡುತ್ತಾರೆ, 3:13-19, ಅವರು ಆತನ ಕುಟುಂಬದ ಭಾಗವಾಗಿದ್ದಾರೆ, 3:31-35, ಅವರು ಸುವಾರ್ತೆ ಸಾರುವುದಕ್ಕಾಗಿ ಆತನಿಂದ ಆದೇಶ ಹೊಂದುತ್ತಾರೆ, 6:17-13, ಅವರು ಆತನನ್ನು ತಿಳಿದುಕೊಳ್ಳುತ್ತಾರೆ, 8:39, ತಮ್ಮ ವಿಫಲತೆಗಳ ಹೊರತಾಗಿ ಅವರಿಗೊಂದು ನಿರೀಕ್ಷೆಯಿದೆ, 16:7). ಈ ಮಿಶ್ರ ಚಿತ್ರಣವು ಮಾರ್ಕನು ತನ್ನ ಸುವಾರ್ತೆಯೊಂದಿಗೆ ಒಂದು ಸಭಾಪಾಲಕನ ಉದ್ದೇಶವನ್ನು ಹೊಂದಿದ್ದನೆಂಬುದನ್ನು ತಿಳಿಸುತ್ತದೆ. ಆತನು ಯೇಸುವಿನ ಶಿಷ್ಯರಂತೆ ಎಲ್ಲಾ ಬಗೆಯ ಹೋರಾಟಗಳನ್ನೆದುರಿಸಿದ ತನ್ನ ಆರಂಭಿಕ ಓದುಗರನ್ನು ಬಲಪಡಿಸಲು ಮತ್ತು ಪ್ರೋತ್ಸಾಹಿಸಲು ಬಯಸಿದನು.
4. ಬಾಧೆ: ಈ ಹಿಂದೆ ನಾವು ನೋಡಿದಂತೆ ಯೇಸುವಿನ ಬಾಧೆ ಮತ್ತು ಶಿಲುಬೆ ಮೇಲಿನ ಆತನ ಮರಣವು ಮಾರ್ಕನ ಸುವಾರ್ತೆಯಲ್ಲಿನ ಒಂದು ಮುಖ್ಯ ವಿಷಯವಸ್ತುವಾಗಿದೆ. ಆದರೆ ಯೇಸು ಸಹ ತನ್ನ ಶಿಷ್ಯರಿಗೆ ಅವರು ತಮ್ಮ ಗುರುವಿನ

ಭಾಧೆಗಳಲ್ಲಿ ಭಾಗಿಯಾಗಿರುವರು ಎಂದು ಹೇಳಿದನು (ಉದಾಹರಣೆಗೆ 10:39, 13:9-23). ಅದೇ ರೀತಿ ಯೇಸುವನ್ನು ಹಿಂಬಾಲಿಸುವ ಪ್ರತಿಯೊಬ್ಬ ಸಹ ತನ್ನ ಪ್ರಾಣವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಅದನ್ನು ಕಳಕೊಳ್ಳುವುದಕ್ಕಾಗಿ ಸಹ ಸಿದ್ಧನಾಗಿರಬೇಕು (8:34-38). ಹಾಗೆಯೇ ಕ್ರೈಸ್ತರು ಯಾವುದೋ ಒಂದು ರೀತಿಯ ಹಿಂಸೆಯನ್ನು ಅನುಭವಿಸುತ್ತಿರುವ ಸಮಯದಲ್ಲಿ ಮಾರ್ಕನು ತನ್ನ ಸುವಾರ್ತೆಯನ್ನು ಬರೆದಿರಬೇಕು.

**ರಚನೆ (ವಿನ್ಯಾಸ)**

**ಆವರಣ:** ಹಿಂದಿನ ಭಾಗವನ್ನು ನೋಡಿರಿ.

**ಪ್ರಸಂಗದ ವಿನ್ಯಾಸ (ರಚನೆ):** ಮಾರ್ಕನ ಸುವಾರ್ತೆ ಅ.ಕೃ. 10:34-41 ರಲ್ಲಿ ಕೊರ್ನೇಲ್ಯನ ಮನೆಯಲ್ಲಿ ಸೇರಿದ್ದ ಅನ್ಯಜನರಿಗೆ ಪೇತ್ರನು ಮಾಡಿದ ಪ್ರಸಂಗದಂತೆಯೇ ಐದು ರೀತಿಯ ವಿನ್ಯಾಸವನ್ನು ಹೊಂದಿದೆ:

1. ದೇವರು ಯೇಸುವನ್ನು ಆರಿಸಕೊಂಡು ನೇಮಿಸುತ್ತಾನೆ: ಮಾರ್ಕ 1:1-13, ಅ.ಕೃ. 10:38a.
2. ಗಲಿಲಾಯದಲ್ಲಿ ಯೇಸುವಿನ ಬಲವಾದ ಸೇವೆ: ಮಾರ್ಕ 1:49-50 ಮತ್ತು ಅ.ಕೃ. 10:38b.
3. ಯೂದಾಯ ಮತ್ತು ಯೆರೂಸಲೇಮಿಲ್ಲಿ ಯೇಸುವಿನ ಸೇವೆ: ಮಾರ್ಕ 10:13-37 ಮತ್ತು ಅ.ಕೃ. 10:39a.
4. ಯೇಸುವಿನ ಬಾಧೆ ಮತ್ತು ಮರಣ: ಮಾರ್ಕ 14:1 – 15:47 ಮತ್ತು ಅ.ಕೃ. 10:39b.
5. ದೇವರು ಯೇಸುವನ್ನು ಎಬ್ಬಿಸಿದನು ಮತ್ತು ಆತನು ಕೆಲ ಸಾಕ್ಷಿಗಳಿಗೆ ಕಾಣಿಸಿಕೊಂಡನು: ಮಾರ್ಕ 16:1-8 (9-20) ಮತ್ತು ಅ.ಕೃ. 40-41.

ಈ ರೀತಿಯ ಸಮಗ್ರ ವಿನ್ಯಾಸದೊಳಗೆ ಮಾರ್ಕನು ಬಗೆಬಗೆಯ ಮಾಹಿತಿಗಳನ್ನು ಸೇರಿಸಿದ್ದಾನೆ. ತನ್ನ ಸುವಾರ್ತೆಯನ್ನು ಬಹುಶಃ ಸಭಾಸನ್ನಿವೇಶದಲ್ಲಿ ಗಟ್ಟಿಯಾಗಿ ಓದಬೇಕೆಂದು ಆತನು ಬಯಸಿರಬಹುದು.

ಕಥಾ ನಿರೂಪಣಾ ವಿನ್ಯಾಸ ಮಾರ್ಕನ ಸುವಾರ್ತೆಯು ಫಿಲಿಪ್ಪನ ಕೈಸರೈಯಲ್ಲಿ ಯೇಸುವನ್ನು ಕ್ರಿಸ್ತನೆಂಬುದಾಗಿ ಅರಿಕೆ ಮಾಡಿದ ಮೊದಲು ಮತ್ತು ನಂತರದ ಎರಡು ಮುಖ್ಯ ಭಾಗಗಳನ್ನು ಒಳಗೊಂಡಿದೆ (8:27-30). ಮೊದಲ ಭಾಗವು (ಅಧ್ಯಾಯ 1-8) ಯೇಸುವಿನ ಮಹತ್ಕಾರ್ಯಗಳ ಕುರಿತ ಕಥೆಗಳಿಂದ ತುಂಬಿಕೊಂಡಿದೆ. ಈ ಎಲ್ಲಾ ಕಥೆಗಳೂ ಗಲಿಲಾಯ ಮತ್ತು ಅದರ ಸುತ್ತಮುತ್ತ ನಡೆಯುತ್ತವೆ. ಜನರ ದೊಡ್ಡ ಗುಂಪು ಆತನನ್ನು ಹಿಂಬಾಲಿಸುತ್ತದೆ. ತನ್ನೊಂದಿಗಿರುವುದಕ್ಕಾಗಿ ಮತ್ತು ತನ್ನನ್ನು ಹಿಂಬಾಲಿಸುವುದಕ್ಕಾಗಿ ಯೇಸುವು ಹೇಗೆ ಜನರ ಗುಂಪನ್ನು ಕರೆಯುತ್ತಾನೆನ್ನುವುದನ್ನು ನಾವು ಕಾಣಬಹುದು. ಎರಡನೇ ಭಾಗದಲ್ಲಿ (ಅಧ್ಯಾಯ 9-16), ಓದುಗರ ಗಮನವು ಶಿಲುಬೆ ಮೇಲಿನ ಯೇಸುವಿನ ಬಾಧೆ ಮತ್ತು ಮರಣದಂಡನೆಗೆ ತಿರುಗತ್ತದೆ.

**ಲೂಕನ ಸುವಾರ್ತೆ**

**ಗ್ರಂಥಕರ್ತ**

ಲೂಕನ ಸುವಾರ್ತೆ ಮತ್ತು ಅಪೊಸ್ತಲರ ಕೃತ್ಯಗಳು ಪುಸ್ತಕಗಳು ಒಬ್ಬನೇ ವ್ಯಕ್ತಿಯಿಂದ ಬರೆಯಲ್ಪಟ್ಟಿವೆ. ಹೆಚ್ಚುವರಿಯಾಗಿ ಹೇಳಬೇಕೆಂದರೆ ಅಪೊಸ್ತಲರ ಕೃತ್ಯಗಳು ಪುಸ್ತಕವು "ಗ್ರಂಥಕರ್ತನ ಮೊದಲ ಪುಸ್ತಕದ" ಒಂದು ಉಲ್ಲೇಖದೊಂದಿಗೆ ಪ್ರಾರಂಭವಾಗುತ್ತದೆ (ಲೂಕ 1:3, ಅ.ಕೃ. 1:1). ಆತನು ತನ್ನ ಹೆಸರನ್ನು ತಿಳಿಸುವುದೇ ಇಲ್ಲ, ಆದರೆ ಆತನು ಪೌಲನ ಪ್ರಯಾಣದ ಸಂಗಡಿಗನೂ ಮತ್ತು ಆಪ್ತನೂ, ಮತ್ತು ಒಬ್ಬ ಅನ್ಯ ಹಿನ್ನಲೆಯ ವೈದ್ಯನೂ ಆಗಿರುವ ಲೂಕನಾಗಿರಬಹುದು (ಕೊಲೆಸ್ಸೆ 4:14, 2 ತಿಮೊ. 4:11). ಲೂಕನು ಯೇಸುವಿ ಘಟನೆಗಳಿಗೆ ಒಬ್ಬ ಪ್ರತ್ಯಕ್ಷಸಾಕ್ಷಿಯಾಗಿರುವುದಿಲ್ಲ ಆದರೆ ಆತನು ಕಲಾತ್ಮಕವಾಗಿ ತನ್ನ ಸುವಾರ್ತೆಯನ್ನು ಸಂಯೋಜಿಸುವಲ್ಲ ಬಗೆ ಬಗೆಯ ಮೌಖಿಕ ಮತ್ತು ಲಿಖಿತ ಮೂಲಗಳನ್ನು ಉಪಯೋಗಿಸಿದನು. ಆತನು ಹೇಳುವ ಗ್ರೀಕ್ ಭಾಷೆಯು ಅಮೋಘವಾಗಿದೆ ಮತ್ತು ಆತನ ಶಬ್ಧಕೋಶವು ಶ್ರೀಮಂತವಾಗಿದೆ.

ಕೆಲ ಸತ್ಯವೇದ ಪಂಡಿತರು ಲೂಕನು ಸಿರಿಯಾದಲ್ಲಿನ ಅಂತಿಯೋಕ್ಯದಿಂದ ಬಂದನೆಂದು ಹೇಳಿದರೆ, ಇತರರು ಆತನ ಊರು ಮ್ಯಾಸಿಡೋನಿಯಾದ ಫಿಲಿಪ್ಪಿಯಲ್ಲಿತ್ತು ಎಂದು ಹೇಳುತ್ತಾರೆ.

**ದಿನಾಂಕ ಮತ್ತು ಬರೆದ ಸ್ಥಳ**

ಅಪೊಸ್ತಲರ ಕೃತ್ಯಗಳು ಪುಸ್ತಕವು ರೋಮ್ನಲ್ಲಿ ಪೌಲನು ಮೊದಲ ಸಾರಿ ಸೆರೆಯಾದ ಕೂಡಲೇ ಮುಕ್ತಯವಾಗುತ್ತದೆ. ಹಾಗಾಗಿ ಸುವಾರ್ತೆ ಮತ್ತು ಅಪೊಸ್ತಲರ ಕತ್ಯಗಳೆರಡೂ ಸಹ ಕ್ರಿ.ಶ. 62 ಕ್ಕಿಂತ ನಂತರ ಬರೆಯಲ್ಪಟ್ಟಿಲ್ಲ.

**ಸ್ವೀಕೃತರು**

ತನ್ನ ಪುಸ್ತಕದಲ್ಲಿ ಲೂಕನು ತಿಳಿಸಿರುವ ಥಿಯೋಫಿಲನ ಬಗ್ಗೆ ಯಾವುದೇ ಮಾಹಿತಿಯಿಲ್ಲ. ರೋಮನ್ ಚಕ್ರವರ್ತಿಯ ಮುಂದಿನ ಪೌಲನ ವಿಚಾರಣೆಯ ಸಂದರ್ಭದಲ್ಲಿ ಈತನೊಬ್ಬ ಬಹುಮುಖ್ಯ ವ್ಯಕ್ತಿಯಾಗಿದ್ದಿರಬಹುದು ಅಥವಾ ಈತನು ಯೇಸು ಮತ್ತು ಕ್ರೈಸ್ತೀಯ ನಂಬಿಕೆಯ ಬಗ್ಗೆ ಹೆಚ್ಚಾಗಿ ತಿಳಿಯಬಯಸಿದ ಒಬ್ಬ ಅನ್ಯಹಿನ್ನಲೆಯ ದೇವಭಕ್ತನಾಗಿದ್ದಿರಬಹುದು.

ಆದರೆ ಲೂಕನು ತನ್ನ ಎರಡು ಪುಸ್ತಕಗಳನ್ನು ಬರೆಯುವಾಗ ತನ್ನ ಮನಸ್ಸಿನಲ್ಲಿ ಒಂದು ವಿಶಾಲವಾದ ಜನರ ಗುಂಪನ್ನು ಇಟ್ಟುಕೊಂಡಿದ್ದಿರಬಹುದು. ಬಹುಶಃ ರೋಮನ್ ಸಾಮ್ರಾಜ್ಯದುದ್ದಕ್ಕೂ ಕ್ರಮವಾಗಿ ಯೆಹೂದಿ ಸಭಾಮಂದಿರದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ದೇವರಿಗೆ ಭಯಪಡುವ ಜನರಾಗಿದ್ದಿರಬಹುದು.

**ಉದ್ದೇಶ ಮತ್ತು ವಿಷಯವಸ್ತುಗಳು**

ಸುವಾರ್ತೀಕರಣ ಮತ್ತು ಸುವಾರ್ತೆಯ ವಿಸ್ತರಣೆಯು ಲೂಕನ ಎರಡು ಪುಸ್ತಕಗಳಲ್ಲಿನ ಒಂದು ಮುಖ್ಯ ವಿಷಯವಸ್ತುವಾಗಿದೆ. ಈ ವಿಸ್ತರಣೆಯು ಯೆಹೂದ್ಯರು ಮತ್ತು ಅನ್ಯರ ನಡುವಿನ ಗೊಂದಲದ ಹಿನ್ನಲೆಯಲ್ಲಿ ಸಂಭವಿಸುತ್ತದೆ. ಯೇಸುವು ಕೇವಲ ಯೆಹೂದ್ಯರಿಗಷ್ಟೇ ಅಲ್ಲ ಬದಲಾಗಿ ಅನ್ಯರಿಗಾಗಿ ಸಹ ದೇವರೊಂದಿಗೆ ನೇರವಾದ ಅನ್ಯೋನ್ಯತೆಗಾಗಿ ಒಂದು ಬಾಗಿಲನ್ನು (ಮಾರ್ಗ) ತೆರೆದನು. ಹಾಗಾಗಿ ದೇವರ ಹಳೇ ಒಡಂಬಡಿಕೆ ಪ್ರವಾದನೆಗಳ ನೆರವೇರಿಕೆಯಲ್ಲಿ ಈಗ ದೇವಜನರಾಗುವುದಕ್ಕೆ ಯಾರೊಬ್ಬ ಅನ್ಯಮತಸ್ಥನೂ ಸಹ ಯೆಹೂದಿ ಮತಕ್ಕೆ ಮಾರ್ಪಡುವ ಅಗತ್ಯವಿಲ್ಲ.

ಲೂಕನ ಸುವಾರ್ತೆಯಲ್ಲಿ ಕಂಡುಬರುವ ಇತರೆ ವಿಷಯವಸ್ತುಗಳ ಪಟ್ಟಿ ಇಂತಿದೆ:

- ಪ್ರವಾದನೆಗಳ ನೆರವೇರಿಕೆಯಲ್ಲಿ ದೇವರ ಸಾರ್ವಭೌಮ ಆಳ್ವಿಕೆಯನ್ನು ಕಾಣಬಹುದು (ಉದಾ ನೋಡಿ 22:22).

- ಪ್ರಾರ್ಥನೆಗೆ ಒತ್ತು (1:10,13, 2:37, 5:16, 9:18, 28-29, 11:1-2, 18:1), ವಿಶೇಷವಾಗಿ ಯೇಸುವು ಪ್ರಮುಖ ಸಂದರ್ಭಗಳಿಗಿಂತ ಮೊದಲು ಪ್ರಾರ್ಥಿಸುವುದು (3:21, 6:12, 22:32, 40-46).
- ಸ್ತ್ರೀಯ ಪಾತ್ರದ ಬಗ್ಗೆ ವಿಶೇಷ ಕಾಳಜಿ (7:36-50, 8:2-3, 10:38-42, 13:10-13, 15:8-10).
- ಬಡವರಲ್ಲಿ ವಿಶೇಷ ಆಸಕ್ತಿ (4:18, 14:13,21, 18:8).
- ಪಾಪಿಗಳಿಗಾಗಿ ಕಾಳಜಿ (ಉದಾ: ಅಧ್ಯಾಯ 15, 18:9-14, 19:1-10).
- ಪವಿತ್ರಾತ್ಮನಿಗೆ ಒತ್ತು (ಉದಾ: 1:15,17,35,41,67, 2:25-27, 4:1,14,18, 10:21, 11:13, 12:12).

**ವಿನ್ಯಾಸ (ರಚನೆ)**

**ಕಥಾನಿರೂಪಣೆಯ ವಿನ್ಯಾಸ:** ಲೂಕನ ಸುವಾರ್ತೆಯು ಉಳಿದ ಸುವಾರ್ತೆಗಳಿಗಿಂತ ವಿಭಿನ್ನವಾಗಿದೆ, ಸಾಹಿತ್ಯದ ಎರಡು ಸಂಪುಟಗಳ ಮೊದಲ ಭಾಗವಾಗಿದೆ. ಹಾಗಾಗಿ ಲೂಕನ ಸುವಾರ್ತೆಯ ವಿನ್ಯಾಸವನ್ನು ಅಪೊಸ್ತಲರ ಕೃತ್ಯಗಳು ಪುಸ್ತಕದೊಂದಿಗೆ ನೋಡಬೇಕಾಗಿದೆ. ಲೂಕನ ಕಥಾನಿರೂಪಣೆಯಲ್ಲಿನ ಕೇಂದ್ರಬಿಂದು ಯೇಸುವಿನ ಪುನರುತ್ಥಾನ ಮತ್ತು ಸ್ವರ್ಗಾರೋಹಣವಾಗಿದೆ, ಇದನ್ನು ಸುವಾರ್ತೆಯ ಕೊನೆಯ ಅಧ್ಯಾಯದಲ್ಲಿ ಮತ್ತು ಅಪೊಸ್ತಲರ ಕೃತ್ಯಗಳು ಪುಸ್ತಕದ ಮೊದಲ ಅಧ್ಯಾಯದಲ್ಲಿ ಕಾಣಬಹುದು. ಹೀಗೆ ಲೂಕನು ತನ್ನೆರಡು ಪುಸ್ತಕಗಳನ್ನು ಒಟ್ಟಾಗಿ ಜತೆಗೋಡಿಸಿದ್ದಾನೆ. ಅವು ವಿರುದ್ಧವಾದ ದಿಕ್ಕಿನಲ್ಲಿ ಹೋದರೂ ಸಹ ಎರಡೂ ಪುಸ್ತಕಗಳ ಭೌಗಳಿಕ ಚಲನೆಯು ಒಂದೇ ಆಗಿದೆ. ಅಪೊಸ್ತಲರ ಕೃತ್ಯವು ಯೆರೂಸಲೇಮಿನಲ್ಲಿ ಪ್ರಾರಂಭವಾಗಿ ಪ್ರಾಚೀನ ಜಗತ್ತಿನ ಕೇಂದ್ರವಾಗಿರುವ ರೋಮನ್ ಚಕ್ರವರ್ತಿಯ ಆಸ್ಥಾನದಲ್ಲಿ ಮುಕ್ತಾಯವಾಗುತ್ತದೆ (ಹೋಲಿಸಿ ಅ.ಕೃ. 1:8). ಸುವಾರ್ತೆಯ ಪ್ರಾರಂಭದಲ್ಲಿ ಯೇಸುವಿನ ಜನನ (2:1) ಮತ್ತು ಆತನ ಸೇವೆಯ ಪ್ರಾರಂಭದ (3:1) ಸಂಬಂಧದಲ್ಲಿ ಇಬ್ಬರು ರೋಮನ್ ಚಕ್ರವರ್ತಿಗಳ ಬಗ್ಗೆ ತಿಳಿಸಲಾಗಿದೆ. ಹಾಗೇ ನಾವು ಲೂಕ ಅಪೊಸ್ತಲರ ಕೃತ್ಯಗಳ (X ರೀತಿಯ) ಕಥಾವಿನ್ಯಾಸವನ್ನು ಕಾಣಬಹುದು:

- ರೋಮನ್ ಚಕ್ರವರ್ತಿಗಳ ಅಡಿಯಲ್ಲಿ (ಔಗುಸ್ತ, ತಿಬೇರಿಯ), ಲೂಕ 1:5 – 4:13.
- ಅನ್ಯಜನರ ಊರು (ಗಲಿಲಾಯ), ಲೂಕ 4:14 – 9:40
- ಯೂದಾಯ ಮತ್ತು ಸಮಾರ್ಯ, ಲೂಕ 9:51 – 19:44
- ಯೆರೂಸಲೇಮಿನಲ್ಲಿ, ಲೂಕ 19:45 – 24:52
- ಯೆರೂಸಲೇಮಿನಲ್ಲಿ, ಅ.ಕೃ. 1:2 – 8:1
- ಯೂದಾಯ ಮತ್ತು ಸಮಾರ್ಯ, ಅ.ಕೃ. 8:1 – 12:1
- ಅನ್ಯಜನರ ಊರು ("ಲೋಕದ ಕಟ್ಟಕಡೆಯವರೆಗೆ"), ಅ.ಕೃ. 13:1 – 28:15
- ರೋಮನ್ ಚಕ್ರವರ್ತಿಗಳ ಅಡಿಯಲ್ಲಿ (ಪೌಲನು ಕೈಸರನಿಗೆ ಮನವಿ ಮಾಡುವುದು), ಅ.ಕೃ. 28:16-31

**ಆವರಣ:** ಮತ್ತಾಯ ಮತ್ತು ಮಾರ್ಕರಂತೆ, ಲೂಕನೂ "ಆವರಣ" ಎಂಬ ಸಾಹಿತ್ಯದ ಒಂದು ವಿಧಾನವನ್ನುಪಯೋಗಿಸುತ್ತಾನೆ. ಲೂಕನ ವಿಷಯದಲ್ಲಿ ಇದು "ದೇವರ ಆರಾಧನೆ" ಯ ಅಂಶವು ಆತನ ಸುವಾರ್ತೆಯನ್ನು ಒಟ್ಟಾಗಿ ಸೇರಿಸುತ್ತದೆ (ಹೋಲಿಸಿ 1:8 ಮತ್ತು 24:53).

**ಯೋಹಾನನ ಸುವಾರ್ತೆ**

ಯೋಹಾನನ ಸುವಾರ್ತೆಯನ್ನು ವಿವರವಾಗಿ ಕನ್ನಡ ಸಾತ್ಯವೇದ ಕಾಲೇಜಿನ ಪ್ರತ್ಯೇಕ ಕೋರ್ಸಿನಡಿಯಲ್ಲಿ ಅಭ್ಯಾಸಿಸಲಾಗುತ್ತದೆ.

**ಗ್ರಂಥಕರ್ತ**

ಉಳಿದ ಮೂರು ಸುವಾರ್ತೆಗಳಂತೆ ಯೋಹಾನನ ಸುವಾರ್ತೆ ಸಹ ಅನಾಮದೇಯವಾಗಿದೆ. ಇದು ಮುಕ್ತವಾಗಿ ಅದರ ಗ್ರಂಥಕರ್ತನ ಬಗ್ಗೆ ತಿಳಿಸುವುದಿಲ್ಲ. ಪ್ರಾರಂಭಿಕ ಸಭಾ ಇತಿಹಾಸಕಾರರು ಇದನ್ನು ಜೆಬೆದಾಯನ ಮಗನೂ, ಯಾಕೋಬನ ಸೋದರನೂ (ಮತ್ತಾ. 4:21) ಮತ್ತು ಯೇಸುವಿನ ಹನ್ನೆರಡು ಮಂದಿ ಅಪೊಸ್ತಲರಲ್ಲಿ ಒಬ್ಬನಾದ (ಮಾರ್ಕ 3:16-19) ಯೋಹಾನ ಬರೆದನೆಂಬುದಾಗಿ ಹೇಳುತ್ತಾರೆ. ಈ ಗ್ರಂಥಕರ್ತತ್ವವು ಆಂತರಿಕ ಪುರಾವೆ/ಆಧಾರಗಳಿಂದ ಬೆಂಬಲಿಸಲ್ಪಟ್ಟಿದೆ (ಉದಾಹರಣೆಗೆ "ಯೇಸುವಿಗೆ ಪ್ರಿಯನಾಗಿದ್ದ ಒಬ್ಬನು" ಎಂಬ ಮಾತು ಯೋಹಾನನ ಬಗ್ಗೆ ಆಗಿರಬಹುದು, 13:23,35, 19:26, 20:2, 21:7,20).

**ದಿನಾಂಕ ಮತ್ತು ಬರೆದ ಸ್ಥಳ**

ಪ್ರಾರಂಭಿಕ ಸಭಾ ಇತಿಹಾಸ ಮತ್ತು ಹೆಚ್ಚಿನ ಸತ್ಯವೇದ ಪಂಡಿತರ ಪ್ರಕಾರ ನಾಲ್ಕು ಸುವಾರ್ತೆಗಳಲ್ಲಿ ಕೊನೆಯದಾಗಿ ಯೋಹಾನನ ಸುವಾರ್ತೆಯು ಬಹುಶಃ ಎಫೆಸದಲ್ಲಿ ಬರೆಯಲ್ಪಟ್ಟಿದೆ ಎಂದು ಹೇಳುತ್ತಾರೆ.

**ಉದ್ದೇಶ**

ಯೋಹಾನನ ಸುವಾರ್ತೆಯು ಯಾಕೆ ಅದು ಬರೆಯಲ್ಪಟ್ಟಿತೆಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ: "ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ" (20:31). ಹೀಗೆ ಗ್ರಂಥಕರ್ತನ ಉದ್ದೇಶವು ಸುವಾರ್ತೀಕರಣವಾಗಿದೆ.

**ವಿನ್ಯಾಸ (ರಚನೆ)**

ಯೇಸುವು ಯೆರೂಸಲೇಮಿನಲ್ಲಿ ಮೂರು ಪಸ್ಕಹಬ್ಬಗಳಲ್ಲಿ ಭಾಗಿಯಾದನೆಂಬುದನ್ನು ಯೋಹಾನನು ತಿಳಿಸುತ್ತಾನೆ (2:13, 6:4, 11:55). ಯೇಸುವಿನ ಸೇವೆಯು ಕನಿಷ್ಠ ಮೂರು ವರ್ಷಗಳನ್ನೊಳಗೊಂಡಿತ್ತೆಂಬುದನ್ನು ಇದು ತೋರಿಸುತ್ತದೆ. ಉಳಿದ ಸುವಾರ್ತೆಗಳ ಕಥನಗಳಿಂದ ಈ ಒಂದು ನಿರ್ಣಯ/ಮುಕ್ತಾಯಕ್ಕೆ ಬರಲಾಗುವುದಿಲ್ಲ. ಅಲ್ಲದೆ ಯೇಸು ಬೇರೆ ಹಬ್ಬಗಳನ್ನು ಆಚರಿಸುವುದಕ್ಕೆ ಸಹ ಯೆರೂಸಲೇಮಿಗೆ ಹೋದನು (5:1, 7:2,10).

## ರೋಮನ್ ಸಾಮ್ರಾಜ್ಯ ಮತ್ತು ಪ್ಯಾಲೆಸ್ತೀನ್

### ಗ್ರೀಕ್ ಮತ್ತು ರೋಮನ್ ಸಂಸ್ಕೃತಿ

ರೋಮನ್ನರ ಪ್ರಭಲ ಸಂಸ್ಕೃತಿ(ಪದ್ಧತಿ)ಯು ಗ್ರೀಕ್ ಆಗಿತ್ತು. ಇದರ ಮೂಲವು ಸುಮಾರು ಕ್ರಿ.ಪೂ. 330 ರಲ್ಲಿ ಅಲೆಕ್ಸಾಂಡರ್ ಮಹಾಶಯನ ವಿಜಯ ಇದೆ. ಇಂದು ನಾವು ಮಧ್ಯಪೂರ್ವವೆಂಬುದಾಗಿ ಕರೆಯುವ ಗ್ರೀಸ್ ಮತ್ತು ಪಾಕಿಸ್ತಾನದ ನಡುವಿನ ವಿಶಾಲವಾದ ಪ್ರದೇಶವಾಗಿದೆ. ಅಲೆಕ್ಸಾಂಡರ್ ಮತ್ತು ಆತನ ಉತ್ತರಾಧಿಕಾರಿಗಳು ಗ್ರೀಕ್ ಭಾಷೆ ಮತ್ತು ಸಂಸ್ಕೃತಿಯ ಶ್ರೇಷ್ಠತೆಯಲ್ಲಿ ಬಲವಾದ ನಂಬಿಕೆಯಿಟ್ಟಿದ್ದರು. ಆದರೆ ಅವರು ತಾವು ಜಯಿಸಿದ ಪ್ರದೇಶಗಳ ಸಂಸ್ಕೃತಿಗಳಿಂದ ಸಹ ಕೆಲ ಅಂಶಗಳನ್ನು ಸಮೀಕರಿಸಿದರು. ಇದರ ಪರಿಣಾಮವಾಗಿ ಇತಿಹಾಸಕಾರರು ಕರೆಯುವ "ಗ್ರೀಕ್ ಸಂಸ್ಕೃತಿ" ಎಂಬ ಮಿಶ್ರಸಂಸ್ಕೃತಿಯಾಗಿದೆ.

ಅಲೆಕ್ಸಾಂಡರನು ಜಯಿಸಿದ ಮತ್ತು ಗ್ರೀಕ್ ನ ಬೇರೆ ಬೇರೆ ಸಾಮ್ರಾಜ್ಯಗಳಿಂದ ಆಯಲ್ಪಟ್ಟ ಜನಾಂಗಗಳು ಎರಡು ವಿಭಿನ್ನ ರೀತಿಯಲ್ಲಿ ಪ್ರತಿಕ್ರಯಿಸಿದವು. ಅವರಲ್ಲಿ ಹೆಚ್ಚಿನವರು ಗ್ರೀಕ್ ಭಾಷೆಯ ಶ್ರೇಷ್ಠತೆ ಮತ್ತು ತಮ್ಮ ಸ್ವಂತ ಭಾಷೆಯ ಕೀಳರಿಮೆಯನ್ನು ಒಪ್ಪಿಕೊಂಡರು. ಉಳಿದವರಿಗೆ ಗ್ರೀಕ್ ಸಂಸ್ಕೃತಿಯು ಅವರ ಸಂಪ್ರದಾಯಿಕ ಜೀವನ ಶೈಲಿ ಮತ್ತು ಮೌಲ್ಯಗಳಿಗೆ ಒಂದು ಬೆದರಿಕೆಯನ್ನು ತಂದೊಡ್ಡಿತು, ಅದನ್ನವರು ವಿವಿಧ ರೀತಿಯಲ್ಲಿ ಪ್ರತಿರೋಧಿಸಿದರು. ಅರ್ಧ ಮೆಡಿಟರೇನಿಯನ್ ಸಮುದ್ರದ ಪಶ್ಚಿಮದ ಸುತ್ತಣ ಪ್ರದೇಶಗಲ್ಲಿ ಕ್ರಿಸ್ತನಿಗಿಂತ ಮೊದಲು ಸುಮಾರು ನೂರಕ್ಕಿಂತ ಹೆಚ್ಚು ವರ್ಷಗಳಿಂದ ಪ್ರಾಬಲ್ಯ ಹೊಂದಿರುವ ರೋಮನ್ನರು ಗ್ರೀಕ್ ಸಂಸ್ಕೃತಿಯ ಪ್ರಭಾವದ ಒಂದು "ಮಧ್ಯದಾರಿಯನ್ನು" ಸ್ವೀಕರಿಸಿದರು. ಕಾನೂನು ಮತ್ತು ಆಡಳಿತಾತ್ಮಕ ಉದ್ದೇಶಗಳಿಗಾಗಿ ಅವರು ತಮ್ಮ ಸ್ವಂತ ಲ್ಯಾಟಿನ್ ಭಾಷೆಯನ್ನು ಉಪಯೋಗಿಸಿದರು. ಲ್ಯಾಟಿನ್ ಭಾಷೆಯು ಇಟಲಿಯವರಿಗೆ ಪರ್ಯಾಯವಾಗಿ ದೈನಂದಿನ ಭಾಷೆಯಾಗಿ ಮುಂದುವರೆಯಿತು ಮತ್ತು ಅದು ಸಾಮಾನ್ಯವಾಗಿ ಉಪಯೋಗಿಸಲ್ಪಟ್ಟು ವಾಗ್ಮಿಗಳು, ಕವಿಗಳು ಮತ್ತು ಇತಿಹಾಸಕಾರರಿಂದ ಕೌಶಲಾತ್ಮಕಾವಾಗಿ ಅಭಿವೃದ್ಧಿಯಾಯಿತು. ಆದರೆ ಗ್ರೀಕ್ ಸಂಸ್ಕೃತಿಯ ಪ್ರಭಾವವು ಬಲವಾಗಿತ್ತು. ಮೇಲ್ವರ್ಗದ ರೋಮನ್ನರು ಗ್ರೀಕ್ ಕವಿಗಳು, ಇತಿಹಾಸಕಾರರು ಮತ್ತು ತತ್ವಜ್ಞಾನಿಗಳ ಬಗ್ಗೆ ಅಧ್ಯಯನ ಮಾಡಿದ್ದ ಗ್ರೀಕ್ ದಾಸ/ಗುಲಾಮರನ್ನು ತಮ್ಮ ಮಕ್ಕಳಿಗೆ ಖಾಸಗಿ ಬೋಧಕ/ಶಿಕ್ಷಕರನ್ನಾಗಿ ಉಪಯೋಗಿಸಿದರು. ಮತ್ತು ತಮ್ಮ ಉನ್ನತ ವ್ಯಾಸಂಗಕ್ಕಾಗಿ ಅನೇಕ ರೋಮನ್ನರು ಗ್ರೀಸ್ ಗೆ ಹೋದರು. ಪ್ಯಾಲೆಸ್ತೀನಿನಲ್ಲಿ ಯೆಹೂದ ಜನಾಂಗ ಮತ್ತು ವಿಶೇಷವಾಗಿ ಅದರ ನಾಯಕರು ಮೇಲೆ ಹೇಳಿದಂತೆ ಎರಡು ರೀತಿಯಲ್ಲಿ ಪ್ರತಿಕ್ರಯಿಸಿದರು. ಕೆಲವರು ಗ್ರೀಕ್ ಸಂಸ್ಕೃತಿಯವರಾದರು, ಅವರು ಗ್ರೀಕ್ನ್ನುಮಾತಾಡಿದರು ಮತ್ತು ಗ್ರೀಕ್ ಜೀವನಶೈಲಿಯನ್ನು ಅನುಕರಿಸಿದರು ಮತ್ತು ವಿದೇಶಿ ಆಡಳಿತಗಾರ(ಅರಸ)ರೊಂದಿಗೆ ಸಹಕರಿಸಿ ಅವರನ್ನು ಬೆಂಬಲಿಸಿದರು. ಉಳಿದವರು ಅರಾಮಿಕ್ ಮಾತಾಡಿದರು ಮತ್ತು ತಮ್ಮ ಯೆಹೂದಿ ಸಂಸ್ಕೃತಿಯನ್ನೇ ಅನುಸರಿಸಿದರು (ಅಂಟಿಕೊಂಡರು). ಯೆಹೂದ್ಯರ ಏಕದೇವತಾ ಧರ್ಮವು ಅವರ ಗ್ರೀಕ್ ಮತ್ತು ರೋಮನ್ ಅರಸರ ಬಹುದೇವತಾ ಮತ್ತು ಮೂಢನಂಬಿಕೆಗಳ ಪ್ರಭಾವಕ್ಕೆ ಹೆಚ್ಚಾಗಿ ಒಳಗಾಗಲಿಲ್ಲ.

ಯೇಸುವಿನ ಸಮಯದಲ್ಲಿ ಪ್ಯಾಲೆಸ್ತೀನಿನಲ್ಲಿ ಗ್ರೀಕ್ ಭಾಷೆಯನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಯಿತು ಮತ್ತು ಅರ್ಥೈಸಿಕೊಳ್ಳಲಾಯಿತು. ಆದಿ ಸಭೆಯಲ್ಲಿ ಗ್ರೀಕ್ ಬಹುಬೇಗನೇ ಒಂದು ಸಾಮಾನ್ಯ ಭಾಷೆಯಾಗಿಬಿಟ್ಟಿತು. ಹೊಸ ಒಡಂಬಡಿಕೆಯ ಬರಹಗಾರರು ನಾಲ್ಕು ಸುವಾರ್ತೆಯನ್ನೊಳಗೊಂಡ ತಮ್ಮ ಪುಸ್ತಕಗಳನ್ನು ಯಾಕೆ ಗ್ರೀಕ್ನಲ್ಲಿ ಬರೆದರೆಂಬುದನ್ನು ಇದೇ ವಿವರಿಸುತ್ತದೆ. ಆದರೆ ಅರಾಮಿಕ್ ಯೇಸು ಮತ್ತು ಆತನ ಹನ್ನೆರಡು ಮಂದಿ ಅಪೊಸ್ತಲರ ಪ್ರಥಮ ಭಾಷೆಯಾಗಿತ್ತು ಮತ್ತು ಹಳೇ ಒಡಂಬಡಿಕೆ ಭಾಷೆಯಾಗಿ ಇಬ್ರಿಯವು ಯೆಹೂದಿ ನಂಬಿಕೆಯ ಸಾಂಪ್ರದಾಯಿಕ ಭಾಷೆಯಾಗಿತ್ತು.

### ರೋಮನ್ ಆಡಳಿತ ಮತ್ತು ಹೆರೋದ್ಯ ಅರಸರು

ರೋಮನ್ ಸರ್ಕಾರವು ಬಲಿಷ್ಠವೂ ಮತ್ತು ಕೇಂದ್ರೀಕೃತವೂ ಆಗಿತ್ತು. ತನ್ನ ಕಾನೂನು ಮತ್ತು ಆಜ್ಞೆಗಳೊಂದಿಗಿನ "ರೋಮನ್ ಶಾಂತಿ/ಸಮಾಧಾನವೇ" ಹೊಸ ಒಡಂಬಡಿಕೆಯ ಅವಧಿಯಲ್ಲಿನ ಮೆಡಿಟರೇನಿಯನ್ ಜಗತ್ತನ್ನು ನಿರೂಪಿಸುತ್ತದೆ.

ತಮ್ಮ ವಿಶಾಲಯವಾದ ಸಾಮ್ರಾಜ್ಯವನ್ನು ಒಟ್ಟಾಗಿ ಸೇರಿಸುವುದಕ್ಕಾಗಿ ರೋಮನ್ನರು ಅತ್ಯುತ್ತಮವಾದ ರಸ್ತೆಗಳ ಒಂದು ಜಾಲವನ್ನು (ಸಂಪರ್ಕ) ಕಟ್ಟಿದರು. ಅಲ್ಲದೆ ಅವರು ಮೆಡಿಟರೇನಿಯನ್ ಸಮುದ್ರದುದ್ದಕ್ಕೂ ವ್ಯಾಪರವನ್ನು ಬೆಳಸಿದರು, ಆ ಮೂಲಕ ಪ್ರಾಂತ್ಯಗಳಿಂದ ಸಾಮಾಗ್ರಿ ಮತ್ತು ಉತ್ಪನ್ನಗಳನ್ನು ಜನಸಂಖ್ಯೆ ಬೆಳೆಯುತ್ತಿರುವ ರೋಮ್ ಪಟ್ಟಣಕ್ಕೆ ಸಾಗಿಸಲು ಸುಲಭವಾಯಿತು. ರಸ್ತೆಗಳು ಮತ್ತು ಹಡಗುಗಳು ಜನರಿಗೆ ಪ್ರಯಾಣಿಸಲು ಮತ್ತು ಸೇನಾ ಘಟಕಗಳನ್ನು ರೋಮನ್ನಿನ ಒಂದು ತುದಿಯಿಂದ ಇನ್ನೊಂದು ತುದಿಯಲ್ಲಿ ಮರುಸ್ಥಾಪಿಸಲು ಅನುಕೂಲಿಸಿದವು. ರೋಮನ್ ಜನಸಂಖ್ಯೆಯಿಂದ ತುಂಬಿದ್ದ ರೋಮನ್ ಪ್ರಾಂತ್ಯ ಮತ್ತು ಪಟ್ಟಣಗಳಲ್ಲಿ ಹೆಚ್ಚಾಗಿ ನಿವೃತ್ತ ಸೈನಿಕರೇ ಇದ್ದರು.

ರೋಮನ್ ಪ್ರಾಂತ್ಯಗಳನ್ನು ಪ್ರತಿನಿಧಿಗಳೆಂದು ಕರೆಯಲ್ಪಡುವ ದೇಶಾಧಿಪತಿಗಳು ಆಳುತ್ತಿದ್ದರು. ಅವರು ರೋಮ್ ಗೆ ಲೆಕ್ಕ ಒಪ್ಪಿಸುವವರಾಗಿದ್ದರು. ಆಡಳಿತಾತ್ಮಕ ಪ್ರಾಂತ್ಯಗಳೆಲ್ಲ ರೋಮನ್ ಸಂಸತ್ತಿನ ಅಡಿಯಲ್ಲಿದ್ದರೆ ಚಕ್ರಾಧಿಪತ್ಯದ ಪ್ರಾಂತ್ಯಗಳೆಲ್ಲ ನೇರವಾಗಿ ರೋಮನ್ ಚಕ್ರವರ್ತಿಯ ಹಿಡಿತದಲ್ಲಿದ್ದವು.

ರೋಮನ್ನರು ಮೆಡಿಟರೇನಿಯನ್ ಸಮುದ್ರದ ಪೂರ್ವಾರ್ಧದ ಸುತ್ತಲಿದ್ದ ಗ್ರೀಕ್ ಸಾಮ್ರಾಜ್ಯಗಳ ರಾಜಕೀಯ ಬಲವನ್ನು ಪುಡಿಗೈದವು. ಕ್ರಿ.ಪೂ. 63 ರಲ್ಲಿ ರೋಮನ್ ಅಧಿಪತಿಯಾದ ಪಾಂಪೆಯಿಂದ ಪ್ಯಾಲೆಸ್ತೇನನ್ನು ವಶಪಡಿಸಕೊಳ್ಳಲಾಯಿತು. ಅಂಟಿಪೇಟರ್ ಎಂಬ ಇದುಮಿಯಾದ ಕುಲೀನನು ಕ್ರಮೇಣವಾಗಿ ರೋಮನ್ನರ ಅಡಿಯಲ್ಲಿ ರಾಜಕೀಯ ವೃತ್ತಿಯನ್ನಾರಂಭಿಸಿದನು ಮತ್ತು ಕ್ರಿ.ಪೂ. 47 ರಲ್ಲಿ ಆತನು ಯೂದಾಯದ ಒಬ್ಬ ಪ್ರತಿನಿಧಿಯಾದನು. ಸ್ವಲ್ಪ ವರ್ಷಗಳ ನಂತರ ಆತನು ಹತ್ಯೆಗೊಳಗಾದಾಗ ಈತನ ಮಗನಾದ ಹೆರೋದನು ರೋಮನ್ ಸೇನಾಪತಿಗಳ ಬೆಂಬಲವನ್ನು ಪಡೆದು ಕ್ರಿ.ಪೂ. 37 ರಲ್ಲಿ ಯೂದಾಯದ ಅರಸನಾದನು. ಈತನು ಕ್ರಿ.ಪೂ. 4 ರಲ್ಲಿ ತನ್ನ ಮರಣದವರೆಗೂ ಪ್ಯಾಲೆಸ್ತೇನನ್ನು ಆಳಿದನು. ಈತನು ಹೆರೋದ ಮಹಾಶಯನೆಂಬುದಾಗಿ ಕರೆಯಲ್ಪಟ್ಟನು ಮತ್ತು ಈತನು ತನ್ನ ಭವ್ಯ ಕಟ್ಟಡಗಳ ಯೋಜನೆಗೆ ಪ್ರಸಿದ್ಧನಾಗಿದ್ದಾನೆ ಮತ್ತು ಯೆರೂಸಲೇಮಿನಲ್ಲಿನ ದೇವಾಲಯವೂ ಅವುಗಳಲ್ಲೊಂದಾಗಿದೆ. ಈತನು ಮತ್ತಾಯನ 2 ನೇ ಅಧ್ಯಾಯದಲ್ಲಿ ತಿಳಿಸಿದ ಹೆರೋದನಾಗಿದ್ದಾನೆ. ಈತನ ಮರಣದ ನಂತರ ಈತನ ರಾಜ್ಯವು ನಾಲ್ಕು ಭಾಗಗಳಾಗಿ ವಿಭಾಗಿಸಲ್ಪಟ್ಟಿತು. ಪ್ರತಿ ಭಾಗವನ್ನು ಒಬ್ಬೊಬ್ಬ ಉಪರಾಜರು ಆಳಿದರು (ಮತ್ತಾ. 14:1, ಲೂಕ 3:1)

ಹೆರೋದ್ಯ ಅರಸರುಗಳು ಯೆಹೂದಿ ಮೂಲದವರಾಗಿರಲಿಲ್ಲ. ಇವರು ದಕ್ಷಿಣ ಯೂದಾಯದಲ್ಲಿರುವ ಇದುಮಿಯ ಎಂಬ ಪ್ರಾಂತ್ಯದವರಾಗಿದ್ದರು. ಹೆರೂದನ ಅಜ್ಜನು ಯೆಹೂದ ಧರ್ಮಕ್ಕೆ ಮತಾಂತರಗೊಂಡಿದ್ದನು. ಹೀಗೆ ಹೊಸ ಒಡಂಬಡಿಕೆಯ ಕಾಲದಲ್ಲಿ ಯೆಹೂದಿ ನಂಬಿಕೆಗೆ ಈ ಕುಟುಂಬವು ಸೇರಿದ್ದರೂ ಅವರ ಇಸ್ರಾಯೇಲೇತರ ಹಿನ್ನಲೆಯ ಕಾರಣದಿಂದ ಯೆಹೂದಿ ನಾಯಕರು ಇವರನ್ನು ಒಪ್ಪುತ್ತಿರಲಿಲ್ಲ. ಈ ಕುಟುಂಬವು ರೋಮನ್ ಅಧಿಪತಿಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದು ಆಳುವುದಕ್ಕಾಗಿ ಅವರಿಂದ ಅಧಿಕಾರ ಹೊಂದಿದ್ದರು.

ರೋಮನ್ ಚಕ್ರವರ್ತಿಗಳು ಯೂದಾಯ, ಸಮಾರ್ಯ ಮತ್ತು ಗಲಿಲಾಯ ಸೀಮೆಗಳೊಂದಿಗಿನ ಹೆರೋದ್ಯ ಅರಸರ ಆಳ್ವಿಕೆಯ ಮೇಲೆ ಭರವಸೆಯನ್ನು ಕಳಕೊಂಡಾಗ ಅವರು ರೋಮನ್ ಚಕ್ರವರ್ತಿಗಳ ಪರವಾಗಿ ಆಳುವುದಕ್ಕಾಗಿ “ದೇಶಾಧಿಪತಿ(ಅಧಿಪತಿ)ಗಳನ್ನು” ನೇಮಿಸಿದರು. ಪೋಂತ್ಯ ಪಿಲಾತನು ಕ್ರಿ.ಶ. 26-36 ರಲ್ಲಿ ಯೂದಾಯದ ಅಧಿಪತಿಯಾಗಿದ್ದನು. ದೇಶಾಧಿಪತಿಗಳು (ಅಧಿಪತಿ) ಕಾನೂನು ಮತ್ತು ಆಜ್ಞೆ(ಕ್ರಮ)ಗಳ ಪಾಲನಗೆ ಜವಾಬ್ಧಾರರಾಗಿದ್ದು ನೇರವಾಗಿ ರೋಮನ್ ಚಕ್ರವರ್ತಿಗಳಿಗೆ ಜವಾಬ್ಧಾರರಾಗಿದ್ದರು. ಅವರ ಅಧಿಕೃತ ನಿವಾಸವು ಮೆಡಿಟರೇನಿಯನ್ ಸಮುದ್ರದ ಬಳಿಯಿರುವ ಕೈಸರೈದಲ್ಲಿತ್ತು. ಕೆಲ ಯೆಹೂದಿ ಧಾರ್ಮಿಕ ಮುಖಂಡರ ನಿರಂತರವಾದ ವಿರೋಧ ಮತ್ತು ಆಗಾಗ್ಗೆ ರಾಜಕೀಯ ಸುಭದ್ರತೆಗೆ ಮಾರಕವಾಗುವ ದಂಗೆಯಿಂದ ಪ್ಯಾಲೆಸ್ತೇನನ್ನು ಒಂದು ಸೂಕ್ಷ್ಮ ಪ್ರದೇಶವೆಂಬುದಾಗಿ ಪರಿಗಣಿಸಲ್ಪಟ್ಟಿದ್ದರಿಂದ ರೋಮನ್ ಸೇನೆಯು ಯೆರೂಸಲೇಮ್ ಮತ್ತು ಕೈಸರೈನಲ್ಲಿ ಬೀಡುಬಿಟ್ಟಿತ್ತು.

ಔಗುಸ್ತನು ಮೊದಲ ರೋಮನ್ ಚಕ್ರವರ್ತಿಯಾಗಿದ್ದು (ಕ್ರಿ.ಪೂ. 31 – ಕ್ರಿ.ಶ. 14) ಯೇಸು ಜನಿಸಿದ ಅವಧಿಯಲ್ಲಿ ಆಳಿದನು (ಲೂಕ 2:1). ಔಗುಸ್ತನ ನಂತರ ಆತನ ಮಲಮಗ ಮತ್ತು ದತ್ತುಪುತ್ರನಾದ ತಿಬೇರಿಯನು (ಕ್ರಿ.ಶ. 14-37) ಆತನ ಉತ್ತರಾಧಿಕಾರಿಯಾದನು. ಹಾಗೇ ತಿಬೇರಿಯನು ಸ್ನಾನಿಕನಾದ ಯೋಹಾನ ಮತ್ತು ಯೇಸುವಿನ ಸೇವೆಗಳ ಅವಧಿಯಲ್ಲಿ ಚಕ್ರವರ್ತಿ/ಅಧಿಪತಿಯಾಗಿದ್ದನು (ಲೂಕ 3:1).

**ಯೆಹೂದಿ ಗುಂಪುಗಳು**

ಬೇರೆ ರಾಷ್ಟ್ರಗಳಂತೆ ಗ್ರೀಕ್-ರೋಮನ್ ಜಗತ್ತಿನಲ್ಲಿ ಸಹ ಗ್ರೀಕ್ ಸಂಸ್ಕೃತಿ ಮತ್ತು ರೋಮನ್ನರ ರಾಜಕೀಯ ಆಡಳಿತದ ಮೇಲೆ ಪ್ರಭಾವ (ಪರಿಣಾಮ) ಬೀರಲು ವಿಭಿನ್ನವಾದ ಪ್ರತಿಕ್ರಿಯೆ ಅಥವಾ ಪ್ರಚೋಧನೆಗಳಿದ್ದವು. ಹೊಸ ಒಡಂಬಡಿಕೆಯ ಸಮಯದಲ್ಲಿ ನಾಲ್ಕು ಧಾರ್ಮಿಕ ಯೆಹೂದಿ ಗುಂಪುಗಳು ಇದಕ್ಕೆ ಉದಾಹರಣೆಗಳಾಗಿವೆ.

**ಸದ್ದುಕಾಯರು** ಇವರು ವಿದೇಶಿ ಪ್ರಭಾವಗಳನ್ನು ಅಂಗೀಕರಿಸಿದವರು. ಇವರು ಅಲೆಕ್ಸಾಂಡರ್ ಮಹಾಶಯನಿಂದ ಆರಂಭವಾದ ಗ್ರೀಕೀಕರಣ ಚಳುವಳಿಯ ಒಲುಮೆಗೆ ಪಾತ್ರರಾಗಿದ್ದರು (ಒಲವು ಹೊಂದಿದ್ದರು). ಅಲ್ಲದೆ ಅವರು ಯೆಹೂದಿ ಶ್ರೀಮಂತ ಯಾಜಕತ್ವದ ರಾಜಕೀಯ ಬಣವಾಗಿದ್ದರು. ಮಹಾಯಾಜಕನು ಈ ಬಣಕ್ಕೆ ಸೇರಿದವನಾಗಿದ್ದನು ಮತ್ತು ಇವರೇ ಯೆಹೂದಿ ಮಹಾಸಭೆ(ಹಿರೀಸಭೆ)ಯನ್ನು ನಿಯಂತ್ರಿಸುತ್ತಿದ್ದರು. ಆದರೆ ಇವರು ಜನಸಾಮಾನ್ಯರಿಂದ ಹೆಚ್ಚು ಬೆಂಬಲ ಹೊಂದಿರಲಿಲ್ಲ, ಯಾಕೆಂದರೆ ಇವರು ವಿದೇಶಿ ಅರಸರೊಂದಿಗೆ ಕೈಜೋಡಿಸಿದ್ದರು. ಕ್ರಿ.ಶ. 70 ರಲ್ಲಿ ಯೆರೂಸಲೇಮಿನ ನಾಶನದೊಂದಿಗೆ ಮಹಾಸಭೆ (ಮಂಡಳಿಯು) ಮಾಯವಾಯಿತು.

**ಫರಿಸಾಯರು** ಇವರು ಗ್ರೀಕೀರಣ (ಗ್ರೀಕ್) ಪ್ರಭಾವ ಮತ್ತು ವಿದೇಶೀ ರಾಜಕೀಯ ಆಳ್ವಿಕೆಯನ್ನು ವಿರೋಧಿಸಿದರು. ಇವರು ಯೆಹೂದಿ ರಾಷ್ಟ್ರೀಯವಾದಿಗಳಾಗಿದ್ದರು ಮತ್ತು ಇವರು ಜನರ ಮಧ್ಯೆ ಒಂದು ಬಲವಾದ ರಾಷ್ಟ್ರೀಯ ಮತ್ತು ಧಾರ್ಮಿಕ ಜಾಗೃತಿಯನ್ನು ಉತ್ತೇಜಿಸಿದರು. ಹೊಸ ಒಡಂಬಡಿಕೆಯ ಸಮಯದಲ್ಲಿ ಇವರು ಕೆಲವೇ ಸಾವಿರ ಸಂಖ್ಯೆಯಲ್ಲಿದ್ದರೂ ಬಹು ಜನಪ್ರಿಯರೂ ಮತ್ತು ಯೆಹೂದ್ಯರ ಧಾರ್ಮಿಕ ಮುಖಂಡರಾಗಿ ಬಹು ಪ್ರಭಾವವುಳ್ಳವರಾಗಿದ್ದರು. ಇವರ ಮೂಲಕ ಮೋಶೆಯ ಧರ್ಮಶಾಸ್ತ್ರ ಮತ್ತು ಸಭಾಮಂದಿರದ ಜೀವಿತವು ಯೆಹೂದಿ ಧರ್ಮದ ಮೂಲೆಗಲ್ಲಾದವು. ಫರಿಸಾಯರು ವಿದೇಶೀ ಪ್ರಭಾವದಿಂದಾದ ಯೆಹೂದಿ ಧರ್ಮದ ಜಾತ್ಯಾತೀತತೆಯನ್ನು ಬಲವಾಗಿ ವಿರೋಧಿಸಿದರು. ಇವರು ಇತರ ಜನರಿಂದ ತಮ್ಮನ್ನು ಪ್ರತ್ಯೇಕಿಸಿಕೊಂಡು ಸಣ್ಣ ಸಣ್ಣ ಅಂಶಗಳಲ್ಲಿ ಸಹ ತಮ್ಮ ಸಂಪ್ರದಾಯ(ಸಂಸ್ಕೃತಿ)ಗಳನ್ನು ಪಾಲಿಸುತ್ತಿದ್ದರು. ಮಹಾಸಭೆ(ಹಿರೀಸಭೆ)ಯಲ್ಲಿ ಇವರು ಸದ್ದುಕಾಯರ ಬಣವನ್ನು ಬಲವಾಗಿ ವಿರೋಧಿಸಿದರು.

**ಮತಾಭಿಮಾನಿಗಳು** ಮತಾಭಿಮಾನಿಗಳು ಒಂದು ಯೆಹೂದಿ ಶ್ರೀಮಂತ ಬಣವಾಗಿದ್ದರು ಇದು ಒಂದು ವಿಶೇಷವಾದ ಉದ್ದೇಶದೊಂದಿಗೆ ಪ್ಯಾಲೆಸ್ತೀನಿನಲ್ಲಿ ರೋಮನ್ನರ ಉದ್ಯೋಗ(ಅತಿಕ್ರಮಣ)ವನ್ನು ತಡೆಯುವುದಕ್ಕಾಗಿ ಪ್ರಾರಂಭವಾಗಿತ್ತು. ಕೆಲ ಮತಾಂಧರು ಗೆರಿಲ್ಲಾ ವೀರರಂತಿದ್ದರು: ಅವರು ರೋಮನ್ನರನ್ನು ಬೆಂಬಲಿಸಿದ (ಸಹಾಯಿಸಿದ) ಯೆಹೂದ್ಯರ ಕೊಲೆಗೂ ಮುಂದಾದರು.

**ಎಸ್ಸೀನರು** ಇವರ ಬಗ್ಗೆ ಹೊಸ ಒಡಂಬಡಿಕೆಯಲ್ಲಿ ತಿಳಿಸಿಲ್ಲ. ಯೇಸುವಿನ ಸಮಯದಲ್ಲಿ ಇವರು ಕೆಲ ಸಾವಿರ ಹಿಂಬಾಲಕರನ್ನು ಹೊಂದಿದ್ದರು. ಗ್ರೀಕೀರಣ ಮತ್ತು ರೋಮನ್ ಅತಿಕ್ರಮಣದೆಡೆಗಿನ ಇವರ ಪ್ರತಿಕ್ರಿಯೆಯು ಎಲ್ಲಾ ಹೊರಗಿನ ಪ್ರಭಾವಗಳಿಂದ ದೂರವಿರುವುದಾಗಿತ್ತು. ಇವರು ಪ್ರತಿಯೊಬ್ಬರೊಂದಿಗೂ ಹಂಚಿಕೊಂಡು ಬಾಳುವ ಒಂದು ಸರಳವಾದ ಜೀವನ ಹೊಂದಿದ್ದರು. ಇವರು ಕಟ್ಟುನಿಟ್ಟಾದ ನೀತಿನಡತೆಯನ್ನು ಪಾಲಿಸುತ್ತಿದ್ದು ಹೆಚ್ಚಾಗಿ ಅವಿವಾಹಿತರಾಗಿದ್ದರು. ಅವರಲ್ಲಿ ಹೆಚ್ಚಿನವರು ವಸಾಹತುಗಳಲ್ಲಿ ವಾಸಿಸುತ್ತಿದ್ದರು. ಮೃತ ಸಮುದ್ರದ ಸುರುಳಿಗಳನ್ನು ಬರೆದ ಸ್ಥಳವಾದ ಖುಮ್ರಾನ್ ನಲ್ಲಿನ ಸನ್ಯಾಸಾಶ್ರಮ (ಮಠವು) ಎಸ್ಸೀನರಿಗೆ

ಅಥವಾ ಅಂತಹ ಒಂದು ಗುಂಪಿಗೆ ಸೇರಿದ್ದಾಗಿರಬಹುದು. ಸ್ಥಾನಿಕನಾದ ಯೋಹಾನನು ಎಸ್ಸೀನರಿಂದ ಪ್ರಭಾವಿತಗೊಂಡಿದ್ದನೆಂಬುದಾಗಿ ಕೆಲ ಸತ್ಯವೇದ ಪಂಡಿತರು ಯೋಚಿಸುತ್ತಾರೆ.

**ಬಹುಸಂಖ್ಯೆಯ ಜನರು** ಈ ಯಾವ ಗುಂಪುಗಳಿಗೂ ಸೇರಿರಲಿಲ್ಲ, ಅವರು ತಮ್ಮದೇ ಆದ ಕೆಲ ವಿಚಾರಗಳನ್ನು ಪಾಲಿಸುತ್ತಿದ್ದರು.

**ಎರಡು ನಕ್ಷೆಗಳ ಮೇಲಿನ ಪ್ರಶ್ನೆಗಳು**

ಈ ಪುಸ್ತಕದ ಪ್ರಾರಂಭದಲ್ಲಿ ಕಂಡುಬರುವ ನಕ್ಷೆಗಳೊಂದಿಗೆ ನೀವು ಇನ್ನೂ ಪರಿಚಿತರಾಗಲು ಸಹಾಯ ಮಾಡುವ ಕೆಲ ಪ್ರಶ್ನೆಗಳು ಇಲ್ಲಿವೆ: ನಾವು ಇದಕ್ಕೆ ಉತ್ತರಗಳನ್ನು ಕೊಟ್ಟಿಲ್ಲ.

**ಯೇಸುವಿನ ಕಾಲ(ಸಮಯ)ದಲ್ಲಿನ ಪ್ಯಾಲೆಸ್ತೇನಿನ ನಕ್ಷೆ**

1. ಕೆಳಕಂಡ ಸ್ಥಳಗಳ ಹೆಸರುಗಳನ್ನು ಕಂಡುಹಿಡಿಯಿರಿ:
2. ಯೂದಾಯ
3. ಸಮಾರ್ಯ
4. ಗಲಿಲಾಯ
5. ದೆಕಪೊಲಿ
6. ಪೆರೆಯ
7. ಇದುಮಿಯ
8. ಕೆಳಕಂಡ ಪಟ್ಟಣಗಳ ಹೆಸರುಗಳನ್ನು ಕಂಡುಹಿಡಿಯಿರಿ:
9. ಯೆರೂಸಲೇಮ್
10. ಕಪೆರ್ನೌಮ್
11. ಬೇತ್ಲೆಹೇಮ್
12. ನಜರೇತ್
13. ಯೆರಿಕೋ
14. ಫಿಲಿಪ್ಪನ ಕೈಯರೈ
15. ಕೈಸರೈ
16. ಸಮಾರ್ಯ
17. ಕೆಳಕಂಡ ಜಲಗಳ ಹೆಸರುಗಳನ್ನು ಕಂಡುಹಿಡಿಯಿರಿ:
18. ಗಲಿಲಾಯ ಸಮುದ್ರ
19. ಯೊರ್ದನ್ ಹೊಳೆ
20. ಮೃತ ಸಮುದ್ರ
21. ಮೆಡಿಟರೇನಿಯನ್ ಸಮುದ್ರ

**ಯೇಸುವಿನ ಕಾಲದಲ್ಲಿನ ಗಲಿಲಾಯದ ನಕ್ಷೆ**

4. ಕೆಳಕಂಡ ಸ್ಥಳಗಳ ಹೆಸರುಗಳನ್ನು ಕಂಡುಹಿಡಿಯಿರಿ:

   ಅ. ಸಮಾರ್ಯ

   ಆ. ಗಲಿಲಾಯ

   ಇ. ದೆಕಪೊಲಿ

   ಈ. ಸಿರಿಯ – ಪೊಯಿನಿಕ್ಯ

5. ಕೆಳಕಂಡ ಪಟ್ಟಣಗಳ ಹೆಸರುಗಳನ್ನು ಕಂಡುಹಿಡಿಯಿರಿ:

ಅ. ಫಿಲಿಪ್ಪನ ಕೈಸರೈ

ಆ. ನಜರೇತ್

ಇ. ಬೇತ್ಸಾಯಿದ

ಈ. ಕಾನಾ

ಈ. ಕಪೆರ್ನೌಮ್

6. ಕೆಳಕಂಡ ಜಲಗಳ ಹೆಸರುಗಳನ್ನು ಕಂಡುಹಿಡಿಯಿರಿ:

ಅ. ಮೆಡಿಟರೇನಿಯನ್ ಸಮುದ್ರ

ಆ. ಗಲಿಲಾಯ ಸಮುದ್ರ

ಇ. ಯೊರ್ದನ್ ಹೊಳೆ

**ಐದು ಪಟ್ಟಿಗಳ ಮೇಲಿನ ಪ್ರಶ್ನೆಗಳು**

ಈ ಪ್ರಶ್ನೆಗಳ ಉದ್ದೇಶವು ಈ ಪಠ್ಯಪುಸ್ತಕದ ಕೊನೆಯಲ್ಲಿ ಕಂಡುಬರುವ ಉಲ್ಲೇಖ (ಸೂಚಿ) ಘಟಕದಲ್ಲಿನ ಪಟ್ಟಿಯೊಂದಿಗೆ ನೀವು ಪರಿಚಿತರಾಗುವಂತೆ ಸಹಕರಿಸುವುದಾಗಿದೆ. ಇದಕ್ಕೆ ನಾನು ಯಾವುದೇ ಉತ್ತರವನ್ನು ಕೊಟ್ಟಿಲ್ಲ. ಉತ್ತರಗಳನ್ನು ಪಟ್ಟಿಯಲ್ಲಿ ಕಾಣಬಹುದು.

**ಹೊಸ ಒಡಂಬಡಿಕೆಯ ಕಾಲರೇಖೆ – ಪ್ರಶ್ನೆಗಳು**

1. ಯಾಕೆ ಕೆಲ ದಿನಾಂಕಗಳನ್ನು ದಪ್ಪ ಅಕ್ಷರದಲ್ಲಿ ಮುದ್ರಿಸಲಾಗಿದೆ?
2. ಈ ಕಾಲರೇಖೆಯು ಎಷ್ಟು ವರ್ಷಗಳನ್ನು ಒಳಗೊಂಡಿದೆ?
3. ಯೇಸು ಯಾವಾಗ ಹುಟ್ಟಿದನು?
4. ಯೇಸುವಿನ ಜನನದ ವೇಳೆ ರೋಮ್ ನಲ್ಲಿ ಯಾರು ಅಧಿಪತಿಯಾಗಿದ್ದರು?
5. ಯೇಸುವಿನ ಜನನದ ವೇಳೆ ಪ್ಯಾಲೆಸ್ತೀನನ್ನು ಯಾರು ಆಳಿದರು?
6. ಔಗುಸ್ತನ ಉತ್ತರಾಧಿಕಾರಿಯಾದ ರೋಮನ್ ಚಕ್ರವರ್ತಿಯ ಹೆಸರೇನಾಗಿತ್ತು?
7. ಹೆರೋದ ಮಹಾಶಯನ ಮರಣದ ವೇಳೆ ಪ್ಯಾಲೆಸ್ತೀನಿಗೆ ಏನಾಯಿತು?
8. ಹೆರೋದ ಮಹಾಶಯನ ಮೂರು ಮಂದಿ ಗಂಡುಮಕ್ಕಳನ್ನು ಕಾಲರೇಖೆಯಲ್ಲಿ ತಿಳಿಸಲಾಗಿದೆ. ಅವರ ಹೆಸರೇನು?
9. ಸ್ನಾನಿಕನಾದ ಯೋಹಾನನು ತನ್ನ ಸೇವೆಯನ್ನು ಯಾವಾಗ ಪ್ರಾರಂಭಿಸಿದನು?
10. ಯೇಸುವಿನ ಸೇವೆಯ ವರ್ಷಗಳೆಷ್ಟು?
11. ಸ್ನಾನಿಕನಾದ ಯೋಹಾನ ಯೇಸುವಿನ ಸೇವೆಗಳ ಸಮಯದಲ್ಲಿ ಯೂದಾಯವನ್ನಾಳಿದ ರೋಮನ್ ಸೇನಾಪತಿಯ ಹೆಸರೇನು?
12. ಯೋಹಾನ ಮತ್ತು ಯೇಸುವಿನ ಸೇವೆಗಳ ಸಮಯದಲ್ಲಿ ಗಲಿಲಾಯದಲ್ಲಿ ಯಾರು ಅರಸರಾಗಿದ್ದರು?
13. ಯೇಸುವಿನ ಮರಣದ ವೇಳೆ ಯೆರೂಸಲೇಮಿನಲ್ಲಿ ಮಹಾಯಾಜಕರಾಗಿದ್ದವರು ಯಾರು?
14. ಯೆರೂಸಲೇಮ್ ದೇವಾಲಯ ಯಾವಾಗ ಕೆಡವಲ್ಪಟ್ಟಿತು?
15. ಯೇಸುವಿನ ಮರಣ ಮತ್ತು ಪೌಲನ ಮಾನಸಾಂತರದ ನಡುವೆ ಎಷ್ಟು ವರ್ಷಗಳು ಕಳೆದವು?
16. ಕ್ಲೌದ್ಯನ ನಂತರ ರೋಮ್ ನಲ್ಲಿ ಯಾರು ಚಕ್ರವರ್ತಿ(ಅಧಿಪತಿ)ಯಾದರು?
17. ನಾಲ್ಕು ಸುವಾರ್ತೆಗಳು ಯಾವಾಗ ಬರೆಯಲ್ಪಟ್ಟಿರಬಹುದು?

**ಯೇಸುವಿನ ಜೀವನ (ನಾಲ್ಕು ಕಾಲರೇಖೆಗಳು) – ಪ್ರಶ್ನೆಗಳು**

1. ನಾಲ್ಕು ಕಾಲರೇಖೆಗಳನ್ನು ಪಟ್ಟಿಮಾಡಿರಿ
2. ಸ್ನಾನಿಕ ಯೋಹಾನ ಮತ್ತು ಯೇಸುವಿನ ನಡುವೆ ಹಿರಿಯರು ಯಾರು?
3. ಯಾವ ವರ್ಷದಲ್ಲಿ ಯೇಸುವಿನ ಸೇವೆ ಪ್ರಾರಂಭವಾಗುತ್ತದೆ?
4. ಯೇಸುವಿನ ಮೊದಲ ಅದ್ಭುತವು ಎಲ್ಲಿ ನಡೆಯುತ್ತದೆ?
5. ಯಾವ ಸುವಾರ್ತೆಯಲ್ಲಿ ನಾವು ಯೇಸು ಮೊದಲ ಬಾರಿ ಯೆರೂಸಲೇಮಿನ ದೇವಾಲಯವನ್ನು ಶುದ್ಧಿಮಾಡುವುದನ್ನು ಕಾಣಬಹುದು?
6. ಯೇಸು ನಿಕೊದೇಮನನ್ನು ಎಲ್ಲಿ ಸಂಧಿಸಿದನು?
7. ಯೇಸುವಿನ ಸೇವೆಯ ಆರಂಭದಲ್ಲಿ ನಜರೇತಿನಲ್ಲಿ ಏನಾಯಿತು?

8. ಯೇಸುವಿನ ನಾಲ್ಕು ಬೆಸ್ತ ಶಿಷ್ಯರ ಹೆಸರೇನು?
9. ಯಾವ ಮೂರು ಸುವಾರ್ತೆಗಳಲ್ಲಿ ನಾವು ಯೇಸು ಹನ್ನೆರಡು ಮಂದಿ ಅಪೊಸ್ತಲರನ್ನು ನೇಮಿಸುವ ವಿವರವನ್ನು ಕಾಣುತ್ತೇವೆ?
10. ಯಾವ ಸುವಾರ್ತೆಯು ಯೇಸು ನೀರಿನ ಮೇಲೆ ನಡೆಯುವ ಕಥೆಯನ್ನು ಸೇರಿಸಿಲ್ಲ?
11. ಫಿಲಿಪ್ಪನ ಕೈಸರೈನಲ್ಲಿ ಏನಾಯಿತು?
12. ಯಾವ ಸುವಾರ್ತೆಯಲ್ಲಿ ನಾವು ಯೇಸು ಮರಿಯ ಮತ್ತು ಮಾರ್ಥಳನ್ನು ಸಂಧಿಸುವ ಕಥೆಯನ್ನು ನಾವು ಕಾಣುತ್ತೇವೆ?
13. ಯಾವ ಸುವಾರ್ತೆಯಲ್ಲಿ ಯೇಸು ಸತ್ತ ಲಾಜರನನ್ನು ಬದುಕಿಸುವ ಕಥೆಯಿದೆ?
14. ಶ್ರಮಾವಾರದ ಮೊದಲ ಘಟನೆಯೇನು?
15. ಶ್ರಮಾವಾರದ ಮಂಗಳವಾರ ಏನಾಗುತ್ತದೆ?
16. ಶ್ರಮಾವಾರದ ಗುರುವಾರ ಏನಾಗುತ್ತದೆ?
17. ಶ್ರಮಾವಾರದ ಶುಕ್ರವಾರ ದಿನದ ಘಟನೆಗಳ ಪಟ್ಟಿಮಾಡಿರಿ
18. ಯಾವ ಎರಡು ಸಂದರ್ಭಗಳಲ್ಲಿ ಯೇಸು ತನ್ನ ಪುನರುತ್ಥಾನ ದಿನದ ಸಂಜೆವೇಳೆ ತನ್ನ ಶಿಷ್ಯರಿಗೆ ಕಾಣಿಸಿಕೊಳ್ಳುತ್ತಾನೆ?
19. ಪ್ಯಾಲೆಸ್ತೇನಿನ ಯಾವ ಸ್ಥಳದಲ್ಲಿ ಮಹಾ ಆದೇಶ (ಆಜ್ಞೆ) ಸಂಭವಿಸುತ್ತದೆ?
20. ಯಾವ ಸುವಾರ್ತೆಯಲ್ಲಿ ನಾವು ಯೇಸುವಿನ ಸ್ವರ್ಗಾರೋಹಣದ ಕುರಿತ ವಿವರವಾದ ವಾಕ್ಯಭಾಗವನ್ನು ಕಾಣುತ್ತೇವೆ?

**ಯೇಸುವಿನ ಹನ್ನೆರಡು ಮಂದಿ ಅಪೊಸ್ತಲರು – ಪ್ರಶ್ನೆಗಳು**

1. ಅಪೊಸ್ತಲರ ಎಲ್ಲಾ ಐದು ಪಟ್ಟಿಗಳು ಎರಡು ಜೊತೆ ಸಹೋದರರನ್ನು ಒಳಗೊಂಡಿವೆ ಅವರಾರು?
2. ಯೋಹಾನನ ಸುವಾರ್ತೆಯಲ್ಲಿ ಬಾರ್ತೊಲೋಮಾಯನ ಬಗ್ಗೆ ತಿಳಿಸಿಲ್ಲ. ಬದಲಾಗಿ ಅಪೊಸ್ತರ ಯಾವ ಹೆಸರನ್ನು ಆತನು ಹೊಂದಿದ್ದಾನೆ?
3. ಯೋಹಾನನ ಸುವಾರ್ತೆಯಲ್ಲಿ ಮೂರು ಬೇರೆ ಅಪೊಸ್ತಲರ ಬಗ್ಗೆ ಸಹ (ಬಾರ್ತೊಲೋಮಾಯನನ್ನು ಬಿಟ್ಟು) ತಿಳಿಸಿಲ್ಲ. ಅವರಾರು?
4. ತದ್ದಾಯನ ಹೆಸರನ್ನು ಕೇವಲ ಎರಡು ಸುವಾರ್ತೆಗಳಲ್ಲಿ ಮಾತ್ರ ಕಾಣಬಹುದು. ಲೂಕ, ಯೋಹಾನ ಮತ್ತು ಅಪೊಸ್ತಲರ ಕೃತ್ಯಗಳಲ್ಲಿ ಆತನ ಸ್ಥಾನದಲ್ಲಿ ಯಾವ ಹೆಸರನ್ನು ನಾವು ಕಾಣುತ್ತೇವೆ?
5. ಪಟ್ಟಿಗಳಲ್ಲಿ ಯಾಕೋಬ ಎಂಬ ಇಬ್ಬರನ್ನು ಕಾಣುತ್ತೇವೆ. ಅವರನ್ನು ಹೇಗೆ ವಿಂಗಡಿಸುವುದು?
6. ಪಟ್ಟಿಯಲ್ಲಿ ಸೀಮೋನ ಎಂಬ ಇಬ್ಬರಿದ್ದಾರೆ. ಅವರನ್ನು ಹೇಗೆ ವಿಂಗಡಿಸಬಹುದು?

**ಯೇಸುವಿನ ಸಾಮ್ಯಗಳು – ಪ್ರಶ್ನೆಗಳು**

1. ಮೂರು ಸಮಾಂತರ ಸುವಾರ್ತೆಗಳಲ್ಲಿ ಕಂಡುಬರುವ ಸಾಮ್ಯಗಳ ಪಟ್ಟಿಮಾಡಿರಿ.
2. ಮತ್ತಾಯ ಮತ್ತು ಲೂಕದಲ್ಲಿ ನಾವು ಕಾಣದೇ ಇರುವ ಒಂದು ಸಾಮ್ಯವನ್ನು ಮಾರ್ಕನು ಸೇರಿಸಿದ್ದಾನೆ. ಅದು ಯಾವ ಸಾಮ್ಯ?
3. ಕಳೆದು ಹೋದ ಕುರಿಯ ಸಾಮ್ಯವನ್ನು ನಾವು ಎರಡು ಸುವಾರ್ತೆಗಳಲ್ಲಿ ಕಾಣಬಹುದು. ಅವು ಯಾವುವು?
4. "ಕಳೆದು ಹೋಗಿರುವುದರ" ಕುರಿತಾಗಿ ಇನ್ನೆರಡು ಸಾಮ್ಯಗಳಿವೆ. ಯಾವ ಸುವಾರ್ತೆಯಲ್ಲಿ ನಾವದನ್ನು ಕಾಣಬಹುದು?
5. ಮತ್ತಾಯದಲ್ಲಿ ಮಾತ್ರ ಕಂಡುಬರುವ ಸಾಮ್ಯಗಳ ಪಟ್ಟಿಮಾಡಿರಿ.
6. ಲೂಕದಲ್ಲಿ ಮಾತ್ರ ಕಂಡುಬರುವ ಸಾಮ್ಯಗಳ ಪಟ್ಟಿಮಾಡಿರಿ.
7. ಲೂಕ ಬಿಟ್ಟು ಮತ್ತಾಯ ಮತ್ತು ಲೂಕದಲ್ಲಿ ಮಾತ್ರ ಕಂಡುಬರುವ ಸಾಮ್ಯಗಳ ಪಟ್ಟಿಮಾಡಿರಿ.

**ಯೇಸು ಮಾಡಿದ ಅದ್ಭುತಗಳು – ಪ್ರಶ್ನೆಗಳು**

1. ಯೇಸುವಿನ ಅದ್ಭುತಗಳನ್ನು ಮೂರು ವರ್ಗಗಳಲ್ಲಿ ಪಟ್ಟಿಮಾಡಲಾಗಿದೆ. ಆ ವರ್ಗಗಳನ್ನು ಏನೆಂದು ಕರೆಯಲಾಗಿದೆ?
2. ಈ ಮೂರು ವರ್ಗಗಳಲ್ಲಿ ಯಾವುವು ಹೆಚ್ಚು ಸಂಖ್ಯೆಯ ಅದ್ಭುತಗಳನ್ನು ಒಳಗೊಂಡಿವೆ?
3. ಮೂರು ಸಂದರ್ಭಗಳಲ್ಲಿ ಯೇಸು ಸತ್ತ ವ್ಯಕ್ತಿಯೊಬ್ಬನನ್ನು ಎಬ್ಬಿಸಿದ್ದಾನೆಂಬುದಾಗಿ ಸುವಾರ್ತೆಗಳು ಹೇಳುತ್ತವೆ. ಯಾವ ಸುವಾರ್ತೆಗಳಲ್ಲಿ ಈ ಅದ್ಭುತಗಳ ವಿವರವನ್ನು ನಾವು ಕಾಣುತ್ತೇವೆ?
4. "ಪ್ರಕೃತಿಯ ಮೇಲೆ ಶಕ್ತಿ ತೋರಿಸುವ ಅದ್ಭುತ" ಮಾತ್ರ ನಾಲ್ಕು ಸುವಾರ್ತೆಗಳಲ್ಲಿ ಕಾಣಬಹುದಾಗಿದೆ. ಆ ಅದ್ಭುತ ಯಾವುದು?
5. ಉಳಿದ ಸುವಾರ್ತೆಗಳಲ್ಲಿ ಕಾಣದ ಎರಡು ಪ್ರಕೃತಿಯ ಮೇಲೆ ಶಕ್ತಿ (ಅಧಿಕಾರ) ತೋರಿಸುವ ಎರಡು ಅದ್ಭುತಗಳು ಯೋಹಾನನ ಸುವಾರ್ತೆಯಲ್ಲಿವೆ. ಆ ಅದ್ಭುತಗಳು ಯಾವುವು?
6. ಲೂಕನ ಸುವಾರ್ತೆಯಲ್ಲಿ ಬೇರಾವ ಸುವಾರ್ತೆಯಲ್ಲಿ ಕಾಣದೆ ಇರುವ ಪ್ರಕೃತಿ ಮೇಲೆ ಅಧಿಕಾರ ತೋರಿಸುವ ಒಂದು ಅದ್ಭುತವಿದೆ. ಆ ಅದ್ಭುತ ಯಾವುದು?
7. ಮತ್ತಾಯನ ಸುವಾರ್ತೆಯಲ್ಲಿ ಬೇರಾವ ಸುವಾರ್ತೆಯಲ್ಲಿರದ ಪ್ರಕೃತಿಯ ಮೇಲೆ ಅಧಿಕಾರ ತೋರಿಸುವ ಒಂದು ಅದ್ಭುತವಿದೆ. ಆ ಅದ್ಭುತ ಯಾವುದು?
8. ಯೋಹಾನನು ತನ್ನ ಸುವಾರ್ತೆಯಲ್ಲಿ ಮೂರು ಸ್ವಸ್ಥತಾ ಅದ್ಭುತಗಳನ್ನು ಒಳಗೊಂಡಿದೆ, ಆ ಅದ್ಭುತಗಳು ಯಾವುವು?
9. ಎಲ್ಲಾ ಮೂರು ಸಮಾಂತರ ಸುವಾರ್ತೆಗಳಲ್ಲಿ ಸೇರಿಸಲಾದ ಎಂಟು ಸ್ವಸ್ಥತಾ ಅದ್ಭುತಗಳ ಪಟ್ಟಿಮಾಡಿರಿ.
10. ಮತ್ತಾಯ ಮತ್ತು ಲೂಕದಲ್ಲಿರದ ಎರಡು ಸ್ವಸ್ಥತಾ ಅದ್ಭುತಗಳು ಮಾರ್ಕನ ಸುವಾರ್ತೆಯಲ್ಲಿವೆ. ಅವು ಯಾವುವು?
11. ಮತ್ತಾಯ ಮತ್ತು ಮಾರ್ಕದಲ್ಲಿರದ ನಾಲ್ಕು ಸ್ವಸ್ಥತಾ ಅದ್ಭುತಗಳು ಲೂಕನ ಸುವಾರ್ತೆಯಲ್ಲಿವೆ. ಆ ಅದ್ಭುಗಳು ಯಾವುವು?

**ಆರು ಉಲ್ಲೇಖ ಲೇಖನಗಳ ಮೇಲಿನ ಪ್ರಶ್ನೆಗಳು**

ಈ ಪ್ರಶ್ನೆಗಳ ಉದ್ದೇಶವು ಈ ಪುಸ್ತಕದ ಕೊನೆಯಲ್ಲಿರುವ ಉಲ್ಲೇಖ ಸೂಚಿಯಲ್ಲಿ ಕಂಡುಬರುವ ಆರು ಉಲ್ಲೇಖ ಲೇಖನಗಳೊಂದಿಗೆ ಹೆಚ್ಚು ಪರಿಚಿತರಾಗಲು ನಿಮಗೆ ಸಹಾಯಕವಾಗಬಲ್ಲದು. ನಾವು ಯಾವುದೇ ಉತ್ತರಗಳನ್ನು ನೀಡಿಲ್ಲ.

**ನಾಲ್ಕು ಸುವಾರ್ತೆಗಳು**

1. "ಸುವಾರ್ತೆ" ಗಾಗಿನ ಗ್ರೀಕ್ ಪದದ ಮೂಲ ಅರ್ಥವೇನು?
2. ಪೌಲನು ತನ್ನ "ಕ್ರಿಸ್ತನ ಸುವಾರ್ತೆಯನ್ನು" ನಾಲ್ಕು ಅಂಶಗಳಲ್ಲಿ ಸಾರಾಂಶಗೊಳಿಸಿದ್ದಾನೆ. ನಿಮ್ಮ ಪಠ್ಯಪುಸ್ತಕ ನೋಡದೆ ಆ ನಾಲ್ಕು ಅಂಶಗಳ ಪಟ್ಟಿಮಾಡಿರಿ.
3. ನಿಮ್ಮ ಪಠ್ಯಪುಸ್ತಕ ನೋಡದೆ "ಸುವಾರ್ತೆ" ಗಾಗಿನ ಗ್ರೀಕ್ ಪದದ ಅರ್ಥವು ಹೇಗೆ ಸಭಾ ಇತಿಹಾಸದ ಪ್ರಾರಭದಲ್ಲಿ ಬೆಳೆದು ಬಂತೆಂಬುದನ್ನು ವಿವರಿಸಿರಿ (ನಾಲ್ಕು ಅಂಶಗಳು).
4. ಆದಿ ಸಭೆಯ ಬೋಧನೆ ಮತ್ತು ನಮ್ಮ ಹೊಸ ಒಡಂಬಡಿಕೆಯಲ್ಲಿರುವ ನಾಲ್ಕು ಸುವಾರ್ತಾ ಪುಸ್ತಕಗಳ ನಡುವಿನ ನಿಕಟ ಸಂಬಂಧವನ್ನು ವಿವರಿಸಿರಿ. ಪಠ್ಯ ಪುಸ್ತಕ ನೊಡದೆ ನಿಮ್ಮದೇ ಪದ ಬಳಸಿರಿ.
5. ನಮ್ಮ ಹೊಸ ಒಡಂಬಡಿಕೆಯಲ್ಲಿ ಕಂಡುಬುರವ ನಾಲ್ಕು ಸುವಾರ್ತಾ ಪುಸ್ತಕಗಳ ಮುಕ್ತಾಯದ ಉತ್ಪನ್ನಕ್ಕೆ ನಡೆಸಿದ ಪ್ರಕ್ರಿಯೆಯನ್ನು ನಾಲ್ಕು ಹಂತಗಳಲ್ಲಿ ಸಾರಾಂಶಗೊಳಿಸಬಹುದು. ಅವನ್ನು ಮಟ್ಟಿಮಾಡಿರಿ.
6. ನಿಮ್ಮ ಪಠ್ಯಪುಸ್ತಕ ನೋಡದೆ "ಮೌಖಿಕ ಸಂಪ್ರದಾಯ" ವೆಂದು ಕರೆಯಲ್ಪಡುವ ಸುವಾರ್ತೆಗಳ ಸಂಯೋಜನೆಯ ಮೊದಲ ಹಂತವನ್ನು ವಿವರಿಸಿರಿ.
7. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ "ಲಿಖಿತ ಮೂಲಗಳು" ಎಂದು ಕರೆಯಲ್ಪಡುವ ಸುವಾರ್ತೆಗಳ ಸಂಯೋಜನೆಯ ಎರಡನೇ ಹಂತವನ್ನು ವಿವರಿಸಿರಿ.
8. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ "ಸಂಪಾದಕರ ತಿದ್ದುಪಡಿಗಾರರ ಕೆಲಸ" ವೆಂದು ಕರೆಯಲ್ಪಡುವ ಸುವಾರ್ತೆಗಳ ಸಂಯೋಜನೆಯ ಮೂರನೇ ಹಂತವನ್ನು ವಿವರಿಸಿರಿ.
9. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ "ಮುಕ್ತಾಯಗೊಂಡ ಸಾಹಿತ್ಯದ ಪಠ್ಯ" ವೆಂದು ಕರೆಯಲ್ಪಡುವ ಸುವಾರ್ತೆಗಳ ಸಂಯೋಜನೆಯ ನಾಲ್ಕನೇ ಹಂತವನ್ನು ವಿವರಿಸಿರಿ.
10. ಯಾಕೆ ಮೊದಲು ಮೂರು ಸುವಾರ್ತೆಗಳನ್ನು (ಮತ್ತಾಯ, ಮಾರ್ಕ, ಲೂಕ) "ಸಮನಾಂತರ" ಸುವಾರ್ತೆಗಳೆಂದು ಕರೆಯಲಾಗಿದೆ?
11. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ "ಸಮನಾಂತರ ಸಮಸ್ಯೆ" ಮತ್ತು ಅದಕ್ಕೆ ಸರಿಯೆನಿಸಬಹುದಾದ ಪರಿಹಾರಗಳನ್ನು ವಿವರಿಸಿರಿ.
12. ನಾಲ್ಕು ಸುವಾರ್ತೆಗಳ ಹೆಚ್ಚು ಸರಿಯೆನಿಸಬಹುದಾದ ಕಾಲರೇಖೆ ಯಾವುದು?
13. ಯೇಸುವಿನ ಜೀವನ ಮತ್ತು ಸೇವೆಯ ಕುರಿತ ಯಾವ ವಿವರಗಳು ಅಧಿಕೃತವಾಗಿವೆ ಮತ್ತು ಯಾವುವು ಆಗಿಲ್ಲವೆಂಬುದನ್ನು ನಿರ್ಣಯಿಸುವವು. ಆದೆ ಸಭೆಯಲ್ಲಿ ಯಾಕೆ ಅಷ್ಟೊಂದು ಪ್ರಾಮುಖ್ಯವಾಗಿತ್ತು?
14. ನಮ್ಮ ಹೊಸ ಒಡಂಬಡಿಕೆಯ ನಾಲ್ಕು ಸುವಾರ್ತಾ ಪುಸ್ತಕಗಳು (ಮತ್ತಾಯ, ಮಾರ್ಕ, ಲೂಕ, ಯೋಹಾನ) ಅಧಿಕೃತವಾಗಿವೆ ಎಂದು ಬಹುಬೇಗನೆ ಪರಿಗಣಿಸಲು ನಮಗಿರುವ ಐತಿಹಾಸಿಕ ಪುರಾವೆಯೇನು?

**ಮತ್ತಾಯನ ಸುವಾರ್ತೆ**

1. ಮತ್ತಾಯನ ಸುವಾರ್ತೆ ಅನಾಮದೇಯವಾಗಿದೆ ಎಂಬುದರ ಅರ್ಥವೇನು?

2. ಮತ್ತಾಯನ ಸುವಾರ್ತೆ ಬರೆದವನೆಂಬುದಾಗಿ ಆದಿ ಸಭೆ ಹೇಳುವ ಮತ್ತಾಯನು ಯಾರು?
3. ನಿಮ್ಮ ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ಯಾಕೆ ಮತ್ತಾಯನ ಸುವಾರ್ತೆಯ ಮೂಲ ಓದುಗರು ಬಹುಶಃ ಗ್ರೀಕ್ ಭಾಷೆ ಮಾತಾಡುವ ಯೆಹೂದ್ಯರಾಗಿದ್ದರೆಂಬುದನ್ನು ವಿವರಿಸಿರಿ.
4. ಮತ್ತಾಯನ ಸುವಾರ್ತೆ ಸಹ ಒಂದು ಜಾಗತಿಕ ಹೊರನೋಟವನ್ನು (ದೃಷ್ಟಿ) ಒಳಗೊಂಡಿದೆ ಎಂದು ಹೇಳುವುದು ಯಾಕೆ ಸರಿಯೆನಿಸುತ್ತದೆ?
5. ಮತ್ತಾಯನ ಸುವಾರ್ತೆಯ ಮುಖ್ಯ ಉದ್ದೇಶವನೇನು?
6. ನಿಮ್ಮದೇ ಮಾತಿನಲ್ಲಿ ಪಠ್ಯಪುಸ್ತಕ ನೋಡದೆ 'ದೇವರ ಪ್ರಸನ್ನತೆ' ಯು ಮತ್ತಾಯನ ಸುವಾರ್ತೆಯ ಬಹು ಮುಖ್ಯ ದೈವಶಾಸ್ತ್ರೀಯ ವಿಷಯವಸ್ತುವಾಗಿದೆ ಎಂದು ಹೇಳುವುದು ಸಮರ್ಪಕವಾಗಿದೆ ಎಂಬುದನ್ನು ವಿವರಿಸಿರಿ.
7. ಮತ್ತಾಯನ ಸುವಾರ್ತೆಯನ್ನು ವರ್ಣಿಸಲು ಬಳಸಬಹುದಾದ ಮೂರು ಬಗೆಯ ವಿನ್ಯಾಸ(ರಚನೆ)ಗಳನ್ನು ಪಟ್ಟಿಮಾಡಿರಿ.
8. ಮತ್ತಾಯನ ಸುವಾರ್ತೆಯಲ್ಲಿ ಕಾಣಬಹುದಾದ "ಆವರಣ" ಗಳ ಉದಾಹರಣೆಯನ್ನು ವಿವರಿಸಿರಿ.
9. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ಮತ್ತಾಯನ ಸುವಾರ್ತೆಯ ಕಥಾನಿರೂಪಣೆಯ ವಿನ್ಯಾಸ(ರಚನೆ)ವನ್ನು ವಿವರಿಸಿರಿ.
10. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ಮತ್ತಾಯನ ಸುವಾರ್ತೆಯ ದೈವಶಾಸ್ತ್ರೀಯ ರಚನೆ(ವಿನ್ಯಾಸ)ವನ್ನು ವಿವರಿಸಿರಿ.
11. ಯೇಸು ಮತ್ತು ಮೋಶೆಯ ನಡುವೆ ಮತ್ತಾಯನು ಮಾಡುವ ಹೋಲಿಕೆಯೇನು?

**ಮಾರ್ಕನ ಸುವಾರ್ತೆ**

1. ನಿಮ್ಮ ಪುಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ಯಾಕೆ ಯೋಹಾನನೆನಿಸಿಕೊಳ್ಳುವ ಮಾರ್ಕನು, ಮಾರ್ಕನ ಸುವಾರ್ತೆಯ ಗ್ರಂಥಕರ್ತನಾಗಿದ್ದಾನೆ ಎಂದು ಹೇಳಬಹುದಾಗಿದೆ ಎಂದು ವಿವರಿಸಿರಿ.
2. ಮಾರ್ಕನ ಸುವಾರ್ತೆಯು ಬಹುಶಃ ಎಲ್ಲಿ ಬರೆಯಲ್ಪಟ್ಟಿರಬಹುದು?
3. ಯಾಕೆ ಮಾರ್ಕನ ಸುವಾರ್ತೆಯ ಮೂಲ ಓದುಗರು ಅನ್ಯ ಹಿನ್ನಲೆಯವರಾಗಿದ್ದರೆಂಬುದನ್ನು ವಿವರಿಸಿರಿ.
4. ಮಾರ್ಕನ ಸುವಾರ್ತೆಯ ಮುಖ್ಯ ಉದ್ದೇಶವೇನು?
5. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ತನ್ನ ಸುವಾರ್ತೆಯ ಸಮಗ್ರ ಉದ್ದೇಶವನ್ನು ಒತ್ತಿ ಹೇಳಲು ಮಾರ್ಕನು ಹೇಗೆ "ಆವರಣ" ವನ್ನು ಉಪಯೋಗಿಸಿದ್ದಾನೆಂಬುದನ್ನು ವಿವರಿಸಿರಿ.
6. ಮಾರ್ಕನ ಸುವಾರ್ತೆಯನ್ನು ವರ್ಗೀಕರಿಸುವ ನಾಲ್ಕು ದೈವಶಾಸ್ತ್ರೀಯ ವಿಷಯವಸ್ತುಗಳ ಪಟ್ಟಿಮಾಡಿರಿ.
7. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ಮಾರ್ಕನ ಸುವಾರ್ತೆಯಲ್ಲಿ ಕಂಡುಬರುವ "ಮೆಸ್ಸೀಯನ ರಹಸ್ಯ" ವನ್ನು ವಿವರಿಸಿರಿ.
8. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ಮಾರ್ಕನ ಸುವಾರ್ತೆಯಲ್ಲಿ ಕಂಡುಬರುವ "ಮಿಶ್ರ ಚಿತ್ರಣಗಳ"ನ್ನುವಿವರಿಸಿರಿ.
9. ಈ ಶಿಷ್ಯತ್ವದ ಕುರಿತ ಮಿಶ್ರ ಚಿತ್ರಣವನ್ನು ತೋರಿಸುವುದರ ಮೂಲಕ ಮಾರ್ಕನು ಹೊಂದಿರುವ ಉದ್ದೇಶವೇನು?
10. ಬಾಧೆಪಡುವ ವಿಶ್ವಾಸಿಗಳ ಬಗ್ಗೆ ಮಾರ್ಕನ ಬೋಧನೆಯನ್ನು ನಿಮ್ಮದೇ ಮಾತಿನಲ್ಲಿ ಪಠ್ಯಪುಸ್ತಕ ನೋಡದೆ ವಿವರಿಸಿರಿ.
11. ಮಾರ್ಕನ ಸುವಾರ್ತೆಯ ಪ್ರಸಂಗ ರಚನೆಯನ್ನು ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
12. ಮಾರ್ಕನ ಸುವಾರ್ತೆಯ ಕಥಾನಿರೂಪಣೆಯ ವಿನ್ಯಾಸ(ರಚನೆ)ವನ್ನು ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ವಿವರಿಸಿರಿ.

**ಲೂಕನ ಸುವಾರ್ತೆ**

1. ಲೂಕನ ಸುವಾರ್ತೆಯು ಎರಡು ಭಾಗಗಳ ಸಾಹಿತ್ಯ ಕಾರ್ಯದ ಮೊದಲನೆಯ ಸಂಚಿಕೆಯಾಗಿದೆ. ಎರಡನೇ ಸಂಚಿಕೆ ಯಾವುದು?

2. ಲೂಕನೇ ಲೂಕನ ಸುವಾರ್ತೆಯ ಗ್ರಂಥಕರ್ತನಾಗಿದ್ದಾನೆಂಬುದರ ಬಗ್ಗೆ ನಾವು ಯಾಕೆ ನಿಶ್ಚಯದಿಂದಿರಬಹುದೆಂಬುದನ್ನು ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
3. ಯಾಕೆ ಲೂಕನ ಸುವಾರ್ತೆಯು ಕ್ರಿ.ಶ. 62 ರಲ್ಲಿ ಬರೆಯಲ್ಪಟ್ಟಿರಬಹುದೆಂಬುದಾಗಿ ಹೇಳಬಹುದೆಂಬುದನ್ನು ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ವಿವರಿಸಿರಿ.
4. ಲೂಕನ ಸುವಾರ್ತೆಯ ಸ್ವೀಕೃತರ ಬಗ್ಗೆ ನಾವೇನೆಂಬುದಾಗಿ ನಿರ್ಣಯಿಸಬಹುದು?
5. ಲೂಕನ ಎರಡು ಪುಸ್ತಕಗಳ ಮುಖ್ಯ ವಿಷಯವಸ್ತುವೇನು?
6. ಈ ಮುಖ್ಯ ವಿಷಯವಸ್ತುವಿನ ಹಿನ್ನಲೆ (ಸಂದರ್ಭ) ಏನಾಗಿದೆ?
7. ಲೂಕನ ಸುವಾರ್ತೆಯಲ್ಲಿ ಕಂಡುಬರುವ ಇತರೆ ಮುಖ್ಯ ವಿಷಯವಸ್ತುಗಳ ಪಟ್ಟಿಮಾಡಿರಿ.
8. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ಲೂಕ – ಅಪೊಸ್ತಲರ ಕೃತ್ಯಗಳು ಪುಸ್ತಕದ ಕಥಾನಿರೂಪಣೆಯ ರಚನೆ/ವಿನ್ಯಾಸವನ್ನು ವಿವರಿಸಿ.
9. "ಆವರಣ" ಎಂದು ಕರೆಯುವ ಸಾಹಿತ್ಯದ ಪ್ರಕ್ರಿಯೆ(ವಿಧಾನ)ಯನ್ನು ಲೂಕನು ತನ್ನ ಸುವಾರ್ತೆಯಲ್ಲಿ ಹೇಗೆ ಉಪಯೋಗಿಸುತ್ತಾನೆ?

**ಯೋಹಾನನ ಸುವಾರ್ತೆ**

1. ಯೋಹಾನನ ಸುವಾರ್ತೆಯ ಗ್ರಂಥಕರ್ತರು ಯಾರಿರಬಹುದು?
2. ಯೋಹಾನನ ಸುವಾರ್ತೆಯಲ್ಲಿ ಯೋಹಾನನು ತನ್ನನ್ನು ಹೇಗೆ ಕರೆದುಕೊಳ್ಳುತ್ತಾನೆ?
3. ಯೋಹಾನನ ಸುವಾರ್ತೆಯು ಎಲ್ಲಿ ಬರೆಯಲ್ಪಟ್ಟಿರಬಹುದು?
4. ಯೋಹಾನನ ಸುವಾರ್ತೆಯ ಮುಖ್ಯ ಉದ್ದೇಶವೇನು?
5. ಯೆರೂಸಲೇಮಿಗೆ ಯೇಸುವಿನ ಭೇಟಿಯ ಸಂಬಂಧದಲ್ಲಿ ಯೋಹಾನನ ಸುವಾರ್ತೆಯು ಎಷ್ಟು ಪಸ್ಕಹಬ್ಬಗಳನ್ನು ತಿಳಿಸುತ್ತದೆ?
6. ಯೇಸುವಿನ ಸೇವೆಯ ಆಳದ ತಿಳುವಳಿಕೆಗಾಗಿ ಯೋಹಾನನ ಸುವಾರ್ತೆಯ ರಚನೆ(ವಿನ್ಯಾಸವು)ಯು ಯಾಕೆ ಅಷ್ಟು ಪ್ರಾಮುಖ್ಯವಾಗಿದೆ ಎಂಬುದನ್ನು ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ವಿವರಿಸಿರಿ.

**ರೋಮನ್ ಸಾಮ್ರಾಜ್ಯ ಮತ್ತು ಪ್ಯಾಲೆಸ್ತೀನ್**

***ಗ್ರೀಕ್ ಮತ್ತು ರೋಮನ್ ಸಂಸ್ಕೃತಿ:***

1. ರೋಮನ್ ಸಾಮ್ರಾಜ್ಯದ ಪ್ರಭಲವಾದ ಸಂಸ್ಕೃತಿ ಯಾವುದಾಗಿತ್ತು?
2. "ಗ್ರೀಕೀಕರಣ" ವನ್ನು ವಿವರಿಸಿರಿ.
3. ಗ್ರೀಕ್ ಸಾಮ್ರಾಜ್ಯಗಳಿಂದ ವಶಪಡಿಸಿಕೊಂಡ ರಾಷ್ಟ್ರಗಳು "ಗ್ರೀಕೀಕರಣಕ್ಕೆ" ತೋರಿದ ಎರಡು ಪ್ರತಿಕ್ರಿಯೆಗಳೇನು?
4. ಗ್ರೀಕೀಕರಣದ ಪ್ರಭಾವಕ್ಕೆ ರೋಮನ್ "ಮಧ್ಯ ಮಾರ್ಗ" ವನ್ನು ನಿಮ್ಮದೇ ಮಾತಿನಲ್ಲಿ ಪಠ್ಯಪುಸ್ತಕ ನೋಡದೆ ವಿವರಿಸಿರಿ.
5. ಯೆಹೂದಿ ಜನರು ಗ್ರೀಕೀಕರಣಕ್ಕೆ ಹೇಗೆ ಪ್ರತಿಕ್ರಯಿಸಿದರು?
6. ಯೇಸುವಿನ ಸಮಯದಲ್ಲಿ ಪ್ಯಾಲೆಸ್ತೀನಿನಲ್ಲಿನ ಭಾಷಾ ಸನ್ನಿವೇಶವನ್ನು ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ವಿವರಿಸಿರಿ.

***ರೋಮನ್ ಆಡಳಿತ ಮತ್ತು ಹೆರೋದ್ಯ ಅರಸರು:***

7. ರೋಮನ್ ಸರ್ಕಾರವು ಹೇಗೆ ವರ್ಗೀಕರಿಸಲ್ಪಟ್ಟಿದೆ (ಗುಣಲಕ್ಷಣ ಹೊಂದಿದೆ)?

8. ತಮ್ಮ ವಿಶಾಲವಾದ ಸಾಮ್ರಾಜ್ಯವನ್ನು ಒಟ್ಟಾಗಿ ಹಿಡಿದುಕೊಳ್ಳುವುದಕ್ಕಾಗಿ ರೋಮನ್ನರು ಏನನ್ನು ಮಾಡಿದರೆಂಬುದನ್ನು ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ವಿವರಿಸಿರಿ.

9. ರೋಮನ್ ಪ್ರಾಂತ್ಯಗಳು ಹೇಗೆ ಆಳಲ್ಪಟ್ಟವು?

10. ರೋಮನ್ನರು ಪ್ಯಾಲೆಸ್ತೇನನ್ನು ಯಾವಾಗ ಮತ್ತು ಹೇಗೆ ತಮ್ಮ ಹಿಡಿತಕ್ಕೆ ತೆಗೆದುಕೊಂಡರು?

11. ಹೆರೋದ್ಯ ಅರಸರ ಹಿನ್ನಲೆಯೇನಾಗಿತ್ತು?

12. ಪಠ್ಯಪುಸ್ತಕ ನೋಡದೆ ನಿಮ್ಮದೇ ಮಾತಿನಲ್ಲಿ ಸುವಾರ್ತೆಗಳ ಅವಧಿಯಲ್ಲಿ ಪ್ಯಾಲೆಸ್ತೇನಿನ ಇತಿಹಾಸದಲ್ಲಿನ ಮೂವರು ಹೆರೋದ್ಯ ರಾಜರಾದ ಅಂಟಿಪೇಟರ್, ಹೆರೋದ ಮಹಾಶಯ ಮತ್ತು ಹೆರೋದ ಅಂತಿಪರ ಪಾತ್ರವನ್ನು ವಿವರಿಸಿರಿ.

13. ಯಾಕೆ ರೋಮನ್ನರು ನಿಯತಕಾಲಿಕವಾಗಿ ಪ್ಯಾಲೆಸ್ತೇನಿನಲ್ಲಿ ದೇಶಾಧಿಪತಿಗಳನ್ನು ನೇಮಿಸಿದರು?

14. ಸುವಾರ್ತೆಗಳ ಸಮಯದಲ್ಲಿದ್ದ ಇಬ್ಬರು ರೋಮನ್ ಚಕ್ರವರ್ತಿಗಳು ಯಾರು?

**ಯೆಹೂದಿ ಗುಂಪುಗಳು**

15. ಹೊಸ ಒಡಂಬಡಿಕೆಯ ಸಮಯದಲ್ಲಿದ್ದ ನಾಲ್ಕು ಮುಖ್ಯ ಯೆಹೂದಿ ಗುಂಪುಗಳು ಯಾವುವು?

16. ಈ ನಾಲ್ಕು ಗುಂಪುಗಳು ಗ್ರೀಕ್ ಮತ್ತು ರೋಮನ್ ಪ್ರಭಾವಗಳಿಗೆ ಹೇಗೆ ಪ್ರತಿಕ್ರಯಿಸಿದವು?

17. ಇವರಲ್ಲಿ ಯಾವ ಗುಂಪು ಸಾಮಾನ್ಯ ಜನರಿಂದ ಬಲವಾದ ಬೆಂಬಲ ಹೊಂದಿತ್ತು?

18. ಸದ್ದುಕಾಯರು ಮತ್ತು ಫರಿಸಾಯರ ನಡುವಿನ ಮುಖ್ಯ ವ್ಯತ್ಯಾಸಗಳನ್ನು ಪಟ್ಟಿಮಾಡಿರಿ.

**ಬಹು ಪ್ರಾಮುಖ್ಯವಾದದ್ದು!**

**ವಿದ್ಯಾರ್ಥಿಗಳ 5 ಗುರಿಗಳು**

1. ವಿದ್ಯಾರ್ಥಿಗಳು ತಮ್ಮ ಓದುವ ಮತ್ತು ತಿಳುಕೊಳ್ಳುವ ಕಲೆಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು.
2. ತಾನು ಏನನ್ನು ಓದಿದ್ದೇವೆ ಮತ್ತು ತಾವು ಅರ್ಥೈಸಿಕೊಂಡಿರುವದರಿಂದ ಸಮರೋಪವನ್ನು ಹೊರತರುವುದರ ಬಗ್ಗೆ ಯೋಚಿಸಲು ವಿದ್ಯಾರ್ಥಿಗಳು ನಿರಂತರವಾಗಿ ಉತ್ತೇಜಿಸಲ್ಪಡಬೇಕು.
3. ವಿದ್ಯಾರ್ಥಿಗಳು ಸುವಾರ್ತೆಗಳನ್ನು (ವಿಶೇಷವಾಗಿ ಮಾರ್ಕನ ಸುವಾರ್ತೆ) ಸರಿಯಾಗಿ ತಿಳಿದುಕೊಳ್ಳಬೇಕು.
4. ವಿದ್ಯಾರ್ಥಿಗಳು ತಾವು ಕಲಿತ ಸಂಗತಿಯನ್ನು ತಮ್ಮ ಸ್ವಂತ ದಕ್ಷಿಣ ಭಾರತದ ಸನ್ನಿವೇಶಗಳಿಗೆ ಅಳವಡಿಸಿಕೊಳ್ಳುವ ಸವಾಲನ್ನು ತೆಗೆದುಕೊಳ್ಳಬೇಕು.
5. ವಿದ್ಯಾರ್ಥಿಗಳು ಧ್ಯಾನ, ಸತ್ಯವೇದ ಅಧ್ಯಯನ ಮತ್ತು ಸಂದೇಶಗಳಿಗಾಗಿ ಸುವಾರ್ತೆಗಳಿಂದ ವಾಕ್ಯಭಾಗಗಳನ್ನು ತೆಗೆದುಕೊಳ್ಳಲು ಉತ್ತೇಜಿಸಲ್ಪಡಬೇಕು.

**ಶಿಕ್ಷಕರಿಗಾಗಿ ಸಲಹೆಗಳು**

1. ಸಂಕ್ಷಿಪ್ತವಾಗಿ ಬೋಧಿಸಿರಿ ಮತ್ತು ಕಲಿಸಿರಿ.
2. ನಿಮ್ಮ ಬೋಧನೆಯು ಗುಂಪು ಚರ್ಚೆಯ ಮೇಲೆ ಆಧಾರವಾಗಿರಲಿ. ಅದಕ್ಕಾಗಿಯೇ ಈ ಪಠ್ಯಪುಸ್ತಕವು ವಿನ್ಯಾಸಗೊಂಡಿದೆ.
3. ಎಲ್ಲಾ ವಿದ್ಯಾರ್ಥಿಗಳು ತರಗತಿಯಲ್ಲಿ ಕ್ರಿಯಾತ್ಮಕವಾಗಿರುವಂತೆ ನೋಡಿಕೊಳ್ಳಿರಿ. ನಾಚಿಕೆ ಮತ್ತು ಬಲಹೀನರಾಗಿರುವವರನ್ನು ಉತ್ತೇಜಿಸಿರಿ.
4. ಯಾವುದೇ ವಿದ್ಯಾರ್ಥಿಯನ್ನು ಪರಿಹಾಸ್ಯ ಮಾಡಬೇಡಿರಿ. ಯಾವಾಗಲೂ ಉತ್ತೇಜಿಸಿರಿ.
5. ಪ್ರಶ್ನೆಗಳನ್ನು ಪ್ರೋತ್ಸಾಯಿಸಿರಿ ಮತ್ತು ನೀವು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲಾಗದುದ್ದಾಕ್ಕಾಗಿ ಪೇಚಾಡಬೇಡಿರಿ. ಯಾವ ಸತ್ಯವೇದ ಶಿಕ್ಷಕರೂ ಸಹ ಎಲ್ಲಾ ಉತ್ತರಗಳನ್ನು ಹೊಂದಿಲ್ಲ.
6. ವಿದ್ಯಾರ್ಥಿಗಳು ಅನಾವಶ್ಯಕ ಪ್ರಶ್ನೆಗಳಿಂದ ನಿಮ್ಮನ್ನು ಮತ್ತು ನಿಮ್ಮ ಸಂಗತಿಗಳನ್ನು ಮೂಲೆಗುಂಪಾಗಿ ಮಾಡದಂತೆ ನೋಡಿಕೊಳ್ಳಿ.

**ನೀವೊಬ್ಬ ಉತ್ತಮ ಶಿಕ್ಷಕರಾ?**

***ವೈಯಕ್ತಿಕ ಗುಣಗಳು***

1. "ಪಾಂಡಿತ್ಯ":
   - ನಿಮಗೆ ಹೆಚ್ಚಾಗಿ ತಿಳಿದುಕೊಳ್ಳಲು ಬಯಸುವ ಮತ್ತು ಇನ್ನೂ ಹೆಚ್ಚು ಕಲಿಯುವುದಕ್ಕೆ ಕುತೂಹಲದ ಅಭ್ಯಾಸವಿದೆಯಾ?
   - ಸಾಕ್ಷಿ ಮತ್ತು ವಿಚಾರ ಅಥವಾ ತರ್ಕಗಳನ್ನು ನೀವು ಗೌರವಿಸುವಿರಾ?
   - ಸಂಗತಿಗಳನ್ನು ಸಂದರ್ಭಕ್ಕನುಸಾರವಾಗಿ ನೋಡುವ, ವಿವರಗಳನ್ನು ಸಾಮಾನ್ಯ ತತ್ವಗಳಿಗೆ, ವಾಸ್ತವಾಂಶಗಳನ್ನು ಸಿದ್ಧಾಂತಗಳಿಗೆ ಮತ್ತು ಸಿದ್ಧಾಂತಗಳನ್ನು ವಾಸ್ತವಾಂಶಗಳಿಗೆ ಸಂಬಂಧಿಸುವ ಸಾಮಾರ್ಥ್ಯ ನಿಮಗಿದೆಯಾ?
2. ಪ್ರಾಮಾಣಿಕತೆ:
   - ನೀವು ಪ್ರಾಮಾಣಿಕರೂ, ನ್ಯಾಯೋಚಿತ ಮತ್ತು ಯಥಾರ್ಥರು, ವಾಸ್ತವಾಂಶಗಳನ್ನು ಬದಲಿಸದವರು ಆಗಿರುವಿರಾ?
   - ನೀವು ಅತಿಯಾಗಿ ಪ್ರತಿಕ್ರಯಿಸದವರು, ಬೇರೆಯವರನ್ನು ನಿಂದಿಸದವರು, ನಿಮ್ಮನ್ನು ನಿಯಂತ್ರಣದಲ್ಲಿ ಇಟ್ಟುಕೊಂಡವರಾಗಿದ್ದೀರಾ?
3. ನೀವು ಸಂಪರ್ಕಿಸಬಲ್ಲಿರಾ?
   - ನಾವು ವಿಧ್ಯಾರ್ಥಿಗಳಿಗೆ ಅರ್ಥವಾಗುವಂತೆ ವಿವರಿಸಲು ಮತ್ತು ಸಹಾಯ ಮಾಡಲು ಶಕ್ತರಾಗಿರುವಿರಾ?
   - ನೀವು ವಿಧ್ಯಾರ್ಥಿಗಳಿಂದ ಪ್ರಶ್ನೆಗಳನ್ನು ಎದುರಿಸಲು ಮತ್ತು ಕೇಳುವಂತೆ ಉತ್ತೇಜಿಸಲೂ ಸಿದ್ಧರಿರುವಿರಾ?
   - ನೀವು ವಿದ್ಯಾರ್ಥಿಗಳನ್ನು ಉತ್ತೇಜಿಸಲೂ, ಪ್ರೋತ್ಸಾಹಿಸಲೂ ಮತ್ತು ಅವರಿಂದ ಅತ್ಯುತ್ತಮವಾದದ್ದನ್ನು ಹೊರತರಲು ಶಕ್ತರಾಗಿರುವಿರಾ?
   - ನೀವು ವಿಧ್ಯಾರ್ಥಿಗಳನ್ನು ತಿಳಿದುಕೊಳ್ಳಲು ಅವರಿಗಾಗಿ ಕರುಣೆ ಹೊಂದಲು ಅವರನ್ನು ಯೋಗ್ಯರನ್ನಾಗಿ ನೋಡಿಕೊಳ್ಳುವ ಮನಸ್ಸನ್ನು ಹೊಂದಿರುವಿರಾ?

***ನೀವು ಸಿದ್ಧರಾಗಿರಲೇಬೇಕು!***

ಒಬ್ಬ ಉತ್ತಮ ಶಿಕ್ಷಕನು ಇಡೀ ಕೋರ್ಸ್ ಮತ್ತು ಪ್ರತಿಯೊಂದು ಪಾಠಗಳಿಗಾಗಿ ಸಿದ್ಧನಾಗಿರಬೇಕು. ಸುವಾರ್ತೆಗಳ ಬೋಧನೆಯ ತೊಂದರೆ ಮತ್ತು ಸವಾಲುಗಳನ್ನು ಕಡೆಗಣಿಸಬೇಡಿರಿ. ಉತ್ತಮವಾಗಿ ಕೆಲಸ ಮಾಡಲು ನೀವು ಸರಿಯಾಗಿ ಸಿದ್ಧಗೊಂಡಿರಬೇಕು.

***ಗ್ರಂಥಾಲಯ ಸಮಯ ಮತ್ತು ಮನೆಕೆಲಸವನ್ನು ಸರಿಯಾಗಿ ಉಪಯೋಗಿಸಿಕೊಳ್ಳಿರಿ!***

ಒಬ್ಬ ಒಳ್ಳೆಯ ಶಿಕ್ಷಕನು ವಿದಾರ್ಥಿಗಳ ಗ್ರಂಥಾಲಯ ಮತ್ತು ಮನೆಗೆಲಸಕ್ಕಾಗಿ ಪ್ರತ್ಯೇಕಿಸಲ್ಪಟ್ಟ ಸಮಯದ ಸದುಪಯೋಗವನ್ನು ಪಡೆದುಕೊಳ್ಳುತ್ತಾನೆ. ಸಾಧ್ಯವಾದರೆ ಗ್ರಂಥಾಲಯದ ಸಮಯವು ಮೇಲ್ವಿಚಾರಣೆಗೊಳ್ಳಲಿ. ಇದು ತಮ್ಮ ಸಮಯವನ್ನು ಹೆಚ್ಚು ಸಮರ್ಥವಾಗಿ ಉಪಯೋಗಿಸುವಂತೆ ವಿಧ್ಯಾರ್ಥಿಗಳ ಮೇಲೆ ಒತ್ತಡವನ್ನು ತರುವುದು. ವಿಧ್ಯಾರ್ಥಿಗಳು ಏನನ್ನು ಮಾಡಬೇಕೆಂಬುದರ ಕುರಿತ ನಿಮ್ಮ ಅಪೇಕ್ಷೆ ಸ್ಪಷ್ಟವಾಗಿರಲಿ. ಅವರು ಮಾಡಿದ್ದನ್ನು ಪರಿಶೀಲಿಸಿರಿ.

ಗ್ರಂಥಾಲಯದ ಸಮಯದಲ್ಲಿ ಬಿಟ್ಟ ಕಾರ್ಯಗಳನ್ನು ವಿಧ್ಯಾರ್ಥಿಗಳು ಸಂಜೆ ಮಾಡಿ ಮುಗಿಸಬೇಕು. ವಿಶೇಷವಾಗಿ ನಿಧಾನಗತಿ ವಿದ್ಯಾರ್ಥಿಗಳು ತಮ್ಮ ಮನೆಗೆಲಸದ ಸಮಯವನ್ನು ಸರಿಯಾಗಿ ಉಪಯೋಗಿಸುವಂತೆ ಅವರನ್ನು ಉತ್ತೇಜಿಸಬೇಕು.

**ನಿಮ್ಮ ಕೋರ್ಸನ್ನು ಯೋಜಿಸಿರಿ!**

ಈ ಪಠ್ಯಪುಸ್ತಕವು ಕನ್ನಡ ಸತ್ಯವೇದ ಕಾಲೇಜಿನ ಕಾರ್ಯಕ್ರಮದ ಮೊದಲ ವರ್ಷದ ಅವಧಿಯಲ್ಲಿ ಹೊಸ ಒಡಂಬಡಿಕೆಯ ಸುವಾರ್ತೆಗಳ ಮೇಲೆ ನಾಲ್ಕು ವಾರಗಳ ಕೋರ್ಸುಗಳಿಗಾಗಿ ಬರೆಯಲ್ಪಟ್ಟಿದೆ. ಅಲ್ಲದೆ ಇದು ಸಭಾಪಾಲಕರು ಮತ್ತು ಸುವಾರ್ತಿಕರುಗಳಿಗಾಗಿ ಒಂದು ಸಂಪನ್ಮೂಲವಾಗಿ ಸಹ ಬರೆಯಲ್ಪಟ್ಟಿದೆ. ಅನೇಕ ಅಧ್ಯಯನಗಳು ಒಡಗೊಂಡಿರುವ "ವಿಮರ್ಶಿಸಿ ಮತ್ತು ಸಿದ್ಧಗೊಳ್ಳಿರಿ" ಎಂಬ ವಿಭಾಗವು ಮೊದಲ ವರ್ಷದ ವಿಧ್ಯಾರ್ಥಿಗಳಲ್ಲಿ ಹೆಚ್ಚಿನವರಿಗೆ ಕಷ್ಟಕರವಾಗಿದೆ.

**ಆಧ್ಯತೆಗೊಳಿಸಿರಿ!**

ನಾಲ್ಕು ವಾರಗಳ ಅವಧಿಯಲ್ಲಿ ನಿಮಗೆ ಇಡೀ ಪುಸ್ತಕವನ್ನು ಮುಗಿಸಲು ಆಗದೇ ಇರಬಹುದು. ಹಾಗಾಗಿ ನೀವು ಈ ರೀತಿ ಆಧ್ಯತೆ ಕೊಡಿರಿ:

***ಮೊದಲ ಆಧ್ಯತೆ***

- ಯೇಸುವಿನ ಬರೋಣದ ಕುರಿತ 12 ಅಧ್ಯಯನಗಳು
- ಮಾರ್ಕನ ಸುವಾರ್ತೆಯ ಒಂದು ಅಧ್ಯಯನ. ನೀವು ಈ ಕೋರ್ಸನ್ನು ಪ್ರಾರಂಭಿಸುವುದಕ್ಕಿಂತ ಮೊದಲು ವಿಧಾರ್ಥಿಗಳು ಒಬ್ಬರಾಗಿ ಅಥವಾ ಇಬ್ಬಿಬ್ಬರಾಗಿ ಇಡೀ ಮಾರ್ಕನ ಸುವಾರ್ತೆಯನ್ನು ಓದುವಂತೆ ನೋಡಿಕೊಳ್ಳಿರಿ.
- ಯೇಸುವಿನ ಪುನರುತ್ಥಾನ ಮತ್ತು ಸ್ವರ್ಗಾರೋಹಣದ ಕುರಿತ 8 ಅಧ್ಯಯನಗಳು
- ಅಧ್ಯಯನ ಸಂಬಂಧದಲ್ಲಿನ ಉಲ್ಲೇಖ (ಸೂಚಿ) ಘಟಕದಲ್ಲಿರುವ ವಿಷಯಗಳ ಸದುಪಯೋಗ ಪಡಕೊಳ್ಳಿರಿ:
  - ಹೊಸ ಒಡಂಬಡಿಕೆಯ ಕಾಲರೇಖೆ
  - ಯೇಸುವಿನ ಜೀವನ – ನಾಲ್ಕು ಕಾಲರೇಖೆಗಳು
  - ಯೇಸುವಿನ ಸಾಮ್ಯಗಳು
  - ಯೇಸುವಿನ ಅದ್ಭುತಗಳು
  - ನಾಲ್ಕು ಸುವಾರ್ತೆಗಳು
  - ನಕ್ಷೆಯ ಮೇಲಿನ ಪ್ರಶ್ನೆಗಳು
  - ನಾಲ್ಕು ಪಟ್ಟಿಗಳ ಮೇಲಿನ ಪ್ರಶ್ನೆಗಳು
  - ಉಲ್ಲೇಖ ಪಟ್ಟಿಯ ಪ್ರಶ್ನೆಗಳು

***ಎರಡನೇ ಆಧ್ಯತೆ***

- ಮತ್ತಾಯ ಮಾರ್ಕನಿಂದ ಮೂವತ್ತು ಅಧ್ಯಯನಗಳು
- ಉಲ್ಲೇಖ ಸೂಚಿಯಲ್ಲಿರುವ ಕೆಳಕಂಡ ಅಂಶಗಳ ಸದುಪಯೋಗ ಪಡಿಸಿಕೊಳ್ಳಿರಿ
  - ಮತ್ತಾಯನ ಸುವಾರ್ತೆ
  - ಮಾರ್ಕನ ಸುವಾರ್ತೆ
  - ಲೂಕನ ಸುವಾರ್ತೆ
  - ರೋಮನ್ ಸಾಮ್ರಾಜ್ಯ ಮತ್ತು ಪ್ಯಾಲೆಸ್ತೇನ್

***ನಿಮಗೆ ಇನ್ನೂ ಸಮಯವಿದ್ದರೆ***

- ಯೋಹಾನನಿಂದ ಎಂಟು ಅಧ್ಯಯನಗಳು
- ಉಲ್ಲೇಖ ಘಟಕದಲ್ಲಿರುವ ಕೆಳಕಂಡ ಅಂಶಗಳ ಸದುಪಯೋಗ ಪಡೆದುಕೊಳ್ಳಿರಿ:
  - ಯೇಸುವಿನ ಹನ್ನೆರಡು ಮಂದಿ ಶಿಷ್ಯರು
  - ಯೋಹಾನನ ಸುವಾರ್ತೆ
  - ಉಲ್ಲೇಖ ಲೇಖನದ ಮೇಲಿನ ಪ್ರಶ್ನೆಗಳು

**ನಾಲ್ಕು ಹಂತಗಳಲ್ಲಿ ಒಂದು ಅಧ್ಯಯನವನ್ನು ಮುಗಿಸುವುದು ಹೇಗೆ?**

**ಈ ರೀತಿಯಲ್ಲಿ ನೀವು ನಾಲ್ಕು ಹಂತಗಳಲ್ಲಿ ಒಂದು ಅಧ್ಯಯನವನ್ನು ಮುಗಿಸಬಹುದು:**

1. ಅಧ್ಯಯನವನ್ನು ನೀವು ಪರಿಚಯಿಸಿರಿ
2. ಮೂರು ಅಥವಾ ನಾಲ್ಕು ಗುಂಪುಗಳಲ್ಲಿ ವಿದ್ಯಾರ್ಥಿಗಳ ಕೆಲಸ:
    - ಮೊದಲನೆಯದಾಗಿ ತಲೆಬರಹದಲ್ಲಿ ತಿಳಿಸಿದ ***ವಾಕ್ಯಭಾಗವನ್ನು*** ಓದಬೇಕು.
    - ಆನಂತರ ಅವರು ***ಪ್ರಶ್ನೆಗಳನ್ನು*** ನೋಡಬೇಕು (ಸತ್ಯವೇದ ವಾಕ್ಯಭಾಗಗಳಲ್ಲಿ ಈ ಪ್ರಶ್ನೆಗಳಿಗೆ ಉತ್ತರ ಕಂಡುಹಿಡಿಯುವುದು ಸುಲಭ). ***ಪೀಠಿಕೆಯ*** ಎರಡನೇ ಭಾಗದಲ್ಲಿನ ಟಿಪ್ಪಣಿಗಳ ಸದುಪಯೋಗಪಡಿಸಿಕೊಳ್ಳಿರಿ.
    - ಅಂತಿಮವಾಗಿ ಅವರು ***ಯೋಚಿಸಿ ಮತ್ತು ಚರ್ಚಿಸಿಯ*** ಕಾರ್ಯ ಮಾಡಬೇಕು. ಪೀಠಿಕೆ ಎರಡನೇ ಭಾಗದಲ್ಲಿನ ***ಟಿಪ್ಪಣಿಗಳ*** ಸದುಪಯೋಗಪಡಿಸಿಕೊಳ್ಳುವಂತೆ ನೋಡಿಕೊಳ್ಳಿರಿ.
3. ತರಗತಿಯಲ್ಲಿ ಅವರ ಉತ್ತರಗಳನ್ನು ನೋಡಿರಿ.
    - ಸಮಯ ವ್ಯರ್ಥಮಾಡಬೇಡಿರಿ
    - ಸರಳ ಪ್ರಶ್ನೆಗಳ ಸುದ್ದಿಗೆ ಹೋಗಬೇಡಿರಿ. ವಿಧಾರ್ಥಿಗಳಿಗೆ ಕ್ಲಿಷ್ಟಕರವೆನಿಸುವ ಪ್ರಶ್ನೆಗಳಿಗೆ ಒತ್ತುಕೊಡಿರಿ.
    - ತಪ್ಪು ತಿಳುವಳಿಕೆಗಳನ್ನು ಸರಿಪಡಿಸಿರಿ. ಪುಸ್ತಕದ ಕೊನೆಯಲ್ಲಿ ನಾನು ಪ್ರಶ್ನೆಗಳು ಮತ್ತು ***ಆಲೋಚಿಸಿರಿ ಮತ್ತು ಚರ್ಚಿಸಿರಿ ಗಳಿಗೂ*** ಉತ್ತರವನ್ನು ಒದಗಿಸಿದ್ದೇನೆ. ವಿಧ್ಯಾರ್ಥಿಗಳು ತಾವಾಗಿಯೇ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಹಿಡಿಯಲು ಪ್ರಯತ್ನಿಸುವವರೆಗೂ ಈ ಉತ್ತರಗಳನ್ನು ನೋಡದಂತೆ ಜಾಗ್ರತೆವಹಿಸಿ.
4. ***ಗ್ರಂಥಾಲಯ ಮತ್ತು ಮನೆಗೆಲಸದ*** ವೇಳೆ ಮುಗಿಯದ ಕಾರ್ಯವನ್ನು ಪೂರ್ಣಗೊಳಿಸುವಂತೆ ವಿಧ್ಯಾರ್ಥಿಗಳನ್ನು ಪ್ರೋತ್ಸಾಹಿಸಿರಿ. ಪ್ರತಿ ಅಧ್ಯಯನವನ್ನು ಮರುಪರಿಶೀಲಿಸಲು ಸಹ ಅವರು ಸಮಯ ತೆಗೆದುಕೊಳ್ಳಬೇಕು.

**ಹೆಚ್ಚುವರಿ ಕಾರ್ಯ**

ಆಸಕ್ತ ವಿಧಾರ್ಥಿಗಳಿಗೆ ***ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ*** ವಿಭಾಗದಿಂದ ಗ್ರಂಥಾಲಯ ಮತ್ತು ಮನೆಗೆಲಸಕ್ಕಾಗಿ ಹೆಚ್ಚುವರಿ ಕೆಲಸವನ್ನು ಕೊಡಬಹುದು. ಆದರೆ ಆಯ್ದ ಕೆಲವನ್ನು ಮಾತ್ರ:

- ಕೇವಲ ಒಂದು ಅಥವಾ ಎರಡು ಅಸೈನ್ಮೆಂಟ್ ಗಳನ್ನು ಮಾತ್ರ ಆರಿಸಿಕೊಳ್ಳಿರಿ – ಎಲ್ಲವೂ ಅಲ್ಲ.
- ವಿಧಾರ್ಥಿಗಳಿಗೆ ಕಷ್ಟಕರವಾದ ಅಸೈನ್ಮೆಂಟ್ ಗಳನ್ನು ಮಾಡಲು ಹೇಳಬೇಡಿರಿ. ಮುಂದಿನ ಅಧ್ಯಾಯದಲ್ಲಿ ಇದರ ಬಗ್ಗೆ ಹೆಚ್ಚಿನ ಮಾಹಿತಿಯಿದೆ.

### ಹೆಚ್ಚುವರಿ ಸಲಹೆಗಳು ಮತ್ತು ಟಿಪ್ಪಣಿಗಳು

### ಉಲ್ಲೇಖ ಘಟಕ

ಉಲ್ಲೇಖದ ವಿಭಾಗವನ್ನು ಜಾಣ್ಮೆಯಿಂದ ಉಪಯೋಗಿಸಿರಿ. ಇದು ಶಿಕ್ಷಕ ಮತ್ತು ವಿಧ್ಯಾರ್ಥಿಗಳಿಬ್ಬರಿಗೂ ಇರುವಂಥಾದ್ದಾಗಿದೆ. ಆದರೆ ಇದನ್ನು ನಿಮ್ಮ ಮೂಲಕ ಉಪದೇಶಿಸಬಾರದು ಮತ್ತು ಇವೆಲ್ಲವನ್ನು ವಿಧ್ಯಾರ್ಥಿಗಳಿಗೆ ಕಲಿಯಲು ಹೇಳಬೇಡಿ.

### ಉತ್ತರದ ಘಟಕಗಳು

ಶಿಕ್ಷಕನಾಗಿ ಉತ್ತರದ ಘಟಕವು ನಿಮಗೆ ಜೀವನವನ್ನು ಸುಲಭವಾಗಿಸುವುದು:

1. ಇದು ನಿಮಗೆ ನಮ್ರುತೆಯನ್ನು ಕೊಡುವುದು. ವಿಧಾರ್ಥಿಗಳು ತಾವಾಗಿಯೇ ಉತ್ತರವನ್ನು ನೋಡಿಕೊಳ್ಳಬಹುದು ಮತ್ತು ನೀವು ಪಾಠದ ಅಮೂಲ್ಯ ಸಮಯವನ್ನು ಕಾಪಾಡಿಕೊಳ್ಳಬಹುದು. ಬದಲಾಗಿ ನೀವು ಅಧ್ಯಯನದ ಕ್ಲಿಷ್ಟಕರ ಭಾಗದ ಮೇಲೆ ಹೆಚ್ಚು ಗಮನ ಹರಿಸಬಹುದು. ನಿಮ್ಮ ಅನುಪಸ್ಥಿತಿಯಲ್ಲಿ ವಿಧಾರ್ಥಿಗಳು ಅಭ್ಯಾಸಗಳನ್ನು ಮುಗಿಸಬಹುದು (ಉದಾ. ಗ್ರಂಥಾಲಯ ಸಮಯದಲ್ಲಿ). ಇದೂ ಸಹ ಪಾಠದ ಸಮಯವನ್ನು ಉಳಿಸುವುದು.
2. ಇದು ನಿಮಗೆ ಹೆಚ್ಚು ಭರವಸೆಯನ್ನು ಕೊಡುವುದು. ಸ್ವತಃ ನಿಮಗೆ ಉತ್ತರದ ಬಗ್ಗೆ ಅಷ್ಟು ನಿಖರತೆಯಿಲ್ಲದಿರುವುದರಿಂದ ವಿಧಾರ್ಥಿಗಳು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವಂತೆ ಮಾಡುವುದನ್ನು ದೂರವಿರಿಸಲು ನಿಮಗೆ ಹೆಚ್ಚು ಕಾರಣವಿರುವುದಿಲ್ಲ. ಸಮರ್ಪಕವಾದ ಮತ್ತು ಸರಿಯಾದ ಉತ್ತರದ ಬಗ್ಗೆ ನಿಮಗೆ ಸುಳಿವಿಲ್ಲದಿದ್ದರೂ ಸಹ ನಿಮಗೇನೋ ಹೇಳಬೇಕೆಂದಿರುವುದರಿಂದ ಮನಬಂದಂತೆ ಉತ್ತರಿಸುವುದಕ್ಕೆ ನಿಮಗೆ ಹೆಚ್ಚು ಶೋಧನೆಯಿರುವುದಿಲ್ಲ.
3. ಒಂದು ಎಚ್ಚರಿಕೆ: ನಾನು ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಿದ್ದರೂ ವರ್ಗೀಕರಿಸಬೇಡಿರಿ. ಒಂದು ವೇಳೆ ವಿಧಾರ್ಥಿಗಳು ಪರ್ಯಾಯ ಉತ್ತರಗಳನ್ನು ಸೂಚಿಸಿದರೆ ತರಗತಿಯಲ್ಲಿ ಅವನ್ನು ಚರ್ಚಿಸಿ ಮತ್ತು ಅವು ಎಷ್ಟು ಸಮರ್ಪಕವಾಗಿವೆ ಎಂಬುದನ್ನು ನೋಡಿರಿ. ಒಂದು ಉತ್ತರವು ಹೆಚ್ಚು ಅಥವಾ ಸ್ವಲ್ಪ ಸರಿಯಿರಬಹುದು ಮತ್ತು ಕೆಲ ಬಾರಿ ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳಿರಬಹುದು.

### ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ

ಅನೇಕ ಅಧ್ಯಯನಗಳಲ್ಲಿ ನಾನು "ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ " ಎಂಬ ಒಂದು ವಿಭಾಗವನ್ನು ಇಟ್ಟಿದ್ದೇನೆ. ಇಲ್ಲಿ ನೀವು ಸತ್ಯವೇದ ಅಧ್ಯಯನ, ಸಂದೇಶ ಮತ್ತು ಧ್ಯಾನಗಳಿಗಾಗಿ ಅಥವಾ ಇತರೆ ಕ್ರಿಯಾತ್ಮಕ ಅಸೈನ್ಮೆಂಟ್ ಗಳಿಗಾಗಿ ಒಂದು ಅಥವಾ ಹೆಚ್ಚು ವಿಷಯಗಳಿಗೆ ನೀವು ಸಲಹೆಗಳನ್ನು ಕಾಣುವಿರಿ.

ವಿಧ್ಯಾರ್ಥಿಗಳು ಸತ್ಯವೇದ ವಾಕ್ಯಭಾಗದ ಅಧ್ಯಯನಗಳನ್ನು ತಮ್ಮ ಸ್ವಂತ ಜೀವನ ಮತ್ತು ಸೇವೆಗಳಿಗೆ ಅಳವಡಿಸಿಕೊಳ್ಳುವುದನ್ನು ಕಲಿಯುವುದು ಬಹುಪ್ರಾಮುಖ್ಯವಾಗಿದೆ. ಅದಕ್ಕಾಗಿಯೇ ಈ ವಿಭಾಗವನ್ನು ಸೇರಿಸಲಾಗಿದೆ. ಒಬ್ಬ ಶಿಕ್ಷಕರಾಗಿ ನೀವು ಈ ವಿಭಾಗದ ಅಂಶಗಳನ್ನು ಸರಿಯಾಗಿ ಉಪಯೋಗವಾಗುವುದಕ್ಕೆ ಜವಬ್ದಾರರಾಗಿರುವಿರಿ. ನಿಮ್ಮ ಕೋರ್ಸಿನ ಸಮಯವು ನಿಯತವಾಗಿ/ಸೀಮಿತವಾಗಿದೆ. ನಿಮ್ಮ ವಿಧ್ಯಾರ್ಥಿಗಳ ಸಾಮಾರ್ಥ್ಯ ಸಹ ಸೀಮಿತವಾಗಿದೆ. ಕೆಲ ಬುದ್ಧಿವಂತ ಮತ್ತು ಚುರುಕಾದ ವಿಧಾರ್ಥಿಗಳು ಮಾತ್ರ ಇದರಲ್ಲಿನ ಕೆಲ ಅಸೈನ್ಮೆಂಟ್ ಗಳನ್ನು ನಿರ್ವಹಿಸಬಹುದು. ಆದರೆ ಈ ರೀತಿಯ ಕ್ರಿಯಾತ್ಮಕ ಕೆಲಸವನ್ನು ನಿರ್ಲಕ್ಷಿಸಬೇಡಿರಿ. ಅಲ್ಲದೆ ನೀವು ***ವಿಮರ್ಶಿಸಿರಿ ಮತ್ತು ಸಿದ್ಧಪಡಿಸಿರಿ ಯಲ್ಲಿ*** ಅನೇಕ ಅಸೈನ್ಮೆಂಟ್ಗಳನ್ನು ವಿಧಾರ್ಥಿಗಳು ತಮ್ಮ ಭವಿಷ್ಯದ ಸೇವೆಗಳಲ್ಲಿ ಉಪಯೋಗಿಸಬಹುದಾಗಿದೆ ಎಂಬುದನ್ನು ಅವರಿಗೆ ಯಾವಾಗಲೂ ಜ್ಞಾಪಕರಪಡಿಸಿರಿ. ಹೀಗೆ ಅವರು ಅನೇಕ ಸಂದರ್ಭಗಳಲ್ಲಿ ಮುಂದೆ ಪ್ರಕಟಿಸುವಾಗ ಅಥವಾ ಬೋಧಿಸುವಾಗ ಈ ಮಾಹಿತಿಗಳನ್ನು ನೋಡಬಹುದು.

**ಯೇಸುವಿನ ಕುರಿತ ಹನ್ನೆರಡು ಪಾಠಗಳು**

***ಯೇಸುವಿನ ಕುರಿತ ಹನ್ನೆರಡು ಪಾಠಗಳು*** ಎಂಬ ಘಟಕವನ್ನು ವಿವಿಧ ರೀತಿಯಲ್ಲಿ ಉಪಯೋಗಿಸಬಹುದಾಗಿದೆ. ಆ ವಿಭಾಗದ ಕಡೇ ಪುಟದಲ್ಲಿನ ಮಾರ್ಗಸೂಚಿಯನ್ನು ನೋಡಿ.

**ಸತ್ಯವೇದ ಓದುವುದು ಮತ್ತು ಸತ್ಯವೇದ ಭಾಷಾಂತರಗಳು**

ಈ ಪಠ್ಯಪುಸ್ತಕವನ್ನು ಸತ್ಯವೇದದೊಂದಿಗೆ ಉಪಯೋಗಿಸಬೇಕಿದೆ. ಸತ್ಯವೇದ ವಾಕ್ಯಭಾಗಗಳ ಕುರಿತಾಗಿರುವುದನ್ನು ಓದುವುದಕ್ಕಿಂತ ಮೂಲ ವಾಕ್ಯಭಾಗಗಳನ್ನು ಓದುವುದು ತುಂಬಾ ಪ್ರಾಮುಖ್ಯವಾದುದ್ದಾಗಿದೆ.

ಆಂಗ್ಲ ಆವೃತ್ತಿಯ ಪಠ್ಯಪುಸ್ತಕದೊಂದಿಗೆ ನಾನು ಅನೇಕ ಆಂಗ್ಲ ಸತ್ಯವೇದ ಭಾಷಾಂತರಗಳನ್ನು ಉಪಯೋಗಿಸಿದ್ದೇನೆ. ನಿಮಗೆ ಸಹಾಯಿಸಲು ನಾನು ಹೆಚ್ಚಾಗಿ ಬಳಸಲ್ಪಡುತ್ತಿರುವ ಪವಿತ್ರಗ್ರಂಥ ಮತ್ತು ಸತ್ಯವೇದ ಎಂಬ ಎರಡು ಕನ್ನಡದ ಸತ್ಯವೇದ ಭಾಷಾಂತರಗಳನ್ನು ಸೂಚಿಸಿದ್ದೇನೆ.

**ಪರೀಕ್ಷೆ**

ಈ ಕೋರ್ಸ್ ಪ್ರಶ್ನೆ ಪತ್ರಿಕೆಯನ್ನು ಒಳಗೊಂಡಿಲ್ಲ. ಆದರೆ ನಿಮ್ಮ ವಿಧ್ಯಾರ್ಥಿಗಳು ನಿಜವಾಗಲೂ ಪರೀಕ್ಷೆಯಲ್ಲಿ ಕೂರಬೇಕೆಂದು ನೀವು ಬಯಸಿದರೆ ಈ ಪುಸ್ತಕದಲ್ಲಿ ಅನೇಕ ಪ್ರಶ್ನೆಗಳು ಮತ್ತು ಅಸೈನ್ಮೆಂಟ್ ಗಳೀವೆ, ನೀವದನ್ನು ಪ್ರಶ್ನೆ ಪತ್ರಿಕೆ ರೂಪಿಸಲು ಬಳಸಬಹುದು. ಒಂದು ಸಲಹೆ: ಯಾವುದೇ ಕಾಲೇಜು ಮಟ್ಟದ ಪರೀಕ್ಷೆಯು ತಾವು ಕಲಿತದ್ದನ್ನು ತಮ್ಮ ಜೀವಿತದಲ್ಲಿ ಅಳವಡಿಸಿಕೊಳ್ಳುವಷ್ಟರ ಮಟ್ಟಿಗೆ ವಿಷಯಗಳನ್ನು ಅರ್ಥೈಸಿಕೊಂಡಿದ್ದಾರೋ ಎಂದು ಪರಿಶೀಲಿಸಲ್ಪಡಬೇಕಿದೆ. ಅವರು ಅನೇಕ ಅಂಶಗಳನ್ನು ಕಂಠಪಾಠ ಮಾಡಿರುವುದನ್ನಷ್ಟೇ ಪರೀಶೀಲಿಸಬಾರದು.

**ಒಂದು ಭವಿಷ್ಯದ ಸಂಪನ್ಮೂಲ**

ಈ ಪಠ್ಯಪುಸ್ತಕವು ವಿಧಾರ್ಥಿಗಳಿಗೆ ಭವಿಷ್ಯದ ಒಂದು ಸಂಪನ್ಮೂಲವಾಗಿ ಉಪಯೋಗವಾಗುವ ರೀತಿಯಲ್ಲಿ ಬರೆಯಲ್ಪಟ್ಟಿದೆ. ಸತ್ಯವೇದ ಕಾಲೇಜಿನ ನಾಲ್ಕು ವಾರಗಳ ಅವಧಿಯಲ್ಲಿ ಇದು ಒಳಗೊಂಡಿರುವುದೆಲ್ಲವನ್ನು ಅವರಿಗೆ ಮುಗಿಸಲು ಅಥವಾ ಜೀರ್ಣಿಸಿಕೊಳ್ಳಲು ಆಗದೆ ಇರಬಹುದು. ಆದರೆ ಭವಿಷ್ಯದಲ್ಲಿ ಅವರು ಸುವಾರ್ತಿಕರಾಗಿ ಮತ್ತು ಸಭಾಪಾಲಕರಾಗಿ ಕೆಲಸ ಮಾಡುವಾಗ ಅವರು ಈ ಪುಸ್ತಕದಲ್ಲಿನ ಪಾಠಗಳಿಗೆ ಹೋಗಿ ಅದರಲ್ಲಿನ ಅಂಶಗಳನ್ನು ತಮ್ಮ ವೈಯಕ್ತಿಕ ಅಲ್ಲದೇ ತಮ್ಮ ಸೇವೆಯ ವೃದ್ಧಿಗಾಗಿ ಉಪಯೋಗಿಸಬಹುದಾಗಿದೆ.

# ಸೂಚ್ಯಂಕಗಳು

**ಪದಸೂಚಿಗಳ ಪಟ್ಟಿ**

1. ಈ ಪಠ್ಯಪುಸ್ತಕದಲ್ಲಿ ಮತ್ತಾಯ, ಲೂಕ ಮತ್ತು ಯೋಹಾನ ಸುವಾರ್ತೆಗಳಿಂದ ಅಭ್ಯಾಸಿಸಲಾಗುವ ವಾಕ್ಯಭಾಗಗಳು, ಪುಟಗಳು -
2. ಈ ಅಧ್ಯಯನಗಳಲ್ಲಿ ಹೋಲಿಸಲಾದ ವಾಕ್ಯಭಾಗಗಳ ಪಟ್ಟಿ, ಪುಟಗಳು –
3. ಹಳೇ ಒಡಂಬಡಿಕೆಯ ಉಲ್ಲೇಖಗಳು, ಪುಟಗಳು –
4. ಹೊಸ ಒಡಂಬಡಿಕೆಯ ಉಲ್ಲೇಖಗಳು, ಪುಟಗಳು –
5. ಸಾಮಾನ್ಯ ಪದಸೂಚಿ, ಪುಟಗಳು

**ಈ ಪಠ್ಯಪುಸ್ತಕದಲ್ಲಿ ಅಭ್ಯಾಸಿಸಲಾದ ಮತ್ತಾಯ, ಲೂಕನ ಮತ್ತು ಯೋಹಾನನ ವಾಕ್ಯಭಾಗಗಳು**

ಗಮನಿಸಿ: **ಮಾರ್ಕನ ಸುವಾರ್ತೆಯನ್ನು** ಪೂರ್ಣವಾಗಿ – ಪುಟಗಳಲ್ಲಿ ಅಭ್ಯಾಸಿಸಲಾಗಿದೆ.

**ಮತ್ತಾಯನ ಸುವಾರ್ತೆ**

| **ಉಲ್ಲೇಖಗಳು** | **ಅಧ್ಯಯನದ ಹೆಸರು** | **ಅಧ್ಯಯನದ ಪುಟಗಳು** | **ಉತ್ತರದ ಪುಟಗಳು** |
|---|---|---|---|
| 1:1-17 | ಎರಡು ವಂಶಾವಳಿಗಳು | | |
| 1:18-25 | ಯೇಸುವಿನ ಜನನ | | |
| 2:1-12 | ಮೂಡಣ ದೇಶದ ಜೋಯಿಸರು | | |
| 2:13-23 | ಐಗುಪ್ತಕ್ಕೆ ಪಲಾಯನ ಮತ್ತು ನಜರೇತಿಗೆ ಹಿಂತಿರುಗಿದ್ದು | | |
| 8:5-13 | ಶತಾಧಿಪತಿಯ ನಂಬಿಕೆ | | |
| 9:27-34 | ಐದು ಸ್ವಸ್ಥತಾ ಅದ್ಭುತಗಳು | | |
| 9:35-38 | ಕೆಲಸಗಾರರ ಕೊರತೆ | | |
| 11:2-19 | ಯೇಸು ಮತ್ತು ಸ್ನಾನಿಕನಾದ ಯೋಹಾನ | | |
| 11:20-30 | ಕಷ್ಟ ಮತ್ತು ವಿಶ್ರಾಂತಿ | | |
| 12:38-42 | ಯೋನನ ಸೂಚಕಕಾರ್ಯ | | |
| ಅಧ್ಯಾಯ 13 | ದೇವರ ರಾಜ್ಯದ ಕುರಿತ ಸಾಮ್ಯಗಳು | | |
| 17:24-27 | ದೇವಾಲಯದ ತೆರಿಗೆಯನ್ನು ಕಟ್ಟುವುದು | | |
| 18:21-35 | ಕರುಣೆಯಿಲ್ಲದ ಸೇವಕ | | |
| 20:1-16 | ದ್ರಾಕ್ಷೇತೋಟದಲ್ಲಿನ ಆಳುಗಳು | | |
| 22:1-14 | ಮದುವೆ ಭೋಜನ | | |
| 25:1-13 | ಹತ್ತುಮಂದಿ ಕನ್ಯೆಯರು | | |
| 25:14-30 | ಒಕ್ಕಲಿಗರು | | |
| 25:31-46 | ಕುರಿಗಳು ಮತ್ತು ಆಳುಗಳು | | |
| 28:1-15 | ಪುನರುತ್ಥಾನ ಮತ್ತು ಕಾವಲುಗಾರರು | | |
| 28:16-20 | ಮಹಾ ಆಜ್ಞೆ (ಆದೇಶ) | | |

**ಲೂಕನ ಸುವಾರ್ತೆ**

| **ಉಲ್ಲೇಖಗಳು** | **ಅಧ್ಯಯನದ ಹೆಸರು** | **ಅಧ್ಯಯನದ ಪುಟಗಳು** | **ಉತ್ತರದ ಪುಟಗಳು** |
|---|---|---|---|
| 1:5-25 | ಸ್ನಾನಿಕನಾದ ಯೋಹಾನನ ಜನನ ಮುಂತಿಳಿಸಿದ್ದು | | |
| 1:26-38 | ಯೇಸುವಿನ ಜನನ ಮುಂತಿಳಿಸಿದ್ದು | | |

| | | | |
|---|---|---|---|
| 1:39-56 | ಮರಿಯಳು ಎಲಿಸಬೇತಳನ್ನು ಸಂಧಿಸಿದ್ದು | | |
| 1:57-80 | ಸ್ನಾನಿಕನಾದ ಯೋಹಾನನ ಜನನ | | |
| 2:8-20 | ಕುರುಬರು ಮತ್ತು ದೇವದೂತರು | | |
| 2:21-40 | ಯೇಸುವನ್ನು ಯೆರೂಸಲೇಮಿನ ದೇವಾಲಯದಲ್ಲಿ ಸಮರ್ಪಿಸಿದ್ದು | | |
| 2:41-52 | ಹನ್ನೆರಡರ ಪ್ರಾಯದಲ್ಲಿ ಯೇಸು | | |
| 3:23-38 | ಎರಡು ವಂಶಾವಳಿಗಳು | | |
| 7:11-17 | ಯೇಸು ಒಬ್ಬ ವಿಧವೆಯ ಮಗನನ್ನು ಬದುಕಿಸಿದ್ದು | | |
| 7:36-50 | ಯೇಸು ದುರಾಚಾರಿಯಾದ ಹೆಂಗಸಿನಿಂದ ಅಭಿಷೇಕಿಸಲ್ಪಟ್ಟಿದ್ದು | | |
| 9:57-62 | ಶಿಷ್ಯತ್ವದ ಲಕ್ಷಣ | | |
| 10:1-20 | ಯೇಸು ಎಪ್ಪತ್ತು ಮಂದಿಯನ್ನು ಕಳುಹಿಸಿದ್ದು | | |
| 10:25-37 | ಒಳ್ಳೆಯ ಸಮಾರ್ಯದವನು | | |
| 10:38-42 | ಮಾರ್ಥಳು ಮತ್ತು ಮರಿಯಳು | | |
| 11:37-54 | ಯೆಹೂದಿ ನಾಯಕರ 6 ಸಂಕಟಗಳು | | |
| 12:13-21 | ಬುದ್ಧಿಯಿಲ್ಲದ ಐಶ್ವರ್ಯವಂತ | | |
| 13:10-17 | ಐದು ಸ್ವಸ್ಥತಾ ಅದ್ಭುತಗಳು | | |
| 13:22-30 | ಇಕ್ಕಟ್ಟಾದ ಬಾಗಿಲು | | |
| 14:1-6 | ಐದು ಸ್ವಸ್ಥತಾ ಅದ್ಭುತಗಳು | | |
| 14:25-33 | ಶಿಷ್ಯತ್ವದ ಕ್ರಯ | | |
| ಅಧ್ಯಾಯ 15 | ಮೂರು ಕಳೆದ ಮತ್ತು ಸಿಕ್ಕಿದ ಸಾಮ್ಯಗಳು | | |
| 16:1-9 | ಮೈಗಳ್ಳನಾದ ಮನೆಕೆಲಸದವ | | |
| 16:19-31 | ಐಶ್ವರ್ಯವಂತ ಮತ್ತು ಲಾಜರನು | | |
| 17:11-19 | ಐದು ಸ್ವಸ್ಥತಾ ಅದ್ಭುತಗಳು | | |
| 17:20-37 | ದೇವರ ರಾಜ್ಯದ ಬರೋಣ | | |
| 18:1-14 | ಪ್ರಾರ್ಥನೆಯ ಕುರಿತ ಎರಡು ಸಾಮ್ಯಗಳು | | |
| 19:1-10 | ಜಕ್ಕಾಯನು | | |
| 24:13-35 | ಎಮ್ಮಾಹುವಿನ ರಸ್ತೆಯಲ್ಲಿ | | |
| 24:36-49 | ಶಿಷ್ಯರ ಒಂದು ಗುಂಪು | | |
| 24:50-53 | ಯೇಸು ಪರಲೋಕಕ್ಕೆ ಒಯ್ಯಲ್ಪಟ್ಟಿದ್ದು | | |

**ಯೋಹಾನನ ಸುವಾರ್ತೆ**

| **ಉಲ್ಲೇಖಗಳು** | **ಅಧ್ಯಯನದ ಹೆಸರು** | **ಅಧ್ಯಯನದ ಪುಟಗಳು** | **ಉತ್ತರದ ಪುಟಗಳು** |
|---|---|---|---|

| | | | |
|---|---|---|---|
| 1:1-18 | ವಾಕ್ಯವು ನರಾವತಾರವೆತ್ತಿದ್ದು | | |
| 1:43-51 | ಯೇಸು ಫಿಲಿಪ್ಪ ಮತ್ತು ನತಾನಯೇಲನನ್ನು ಕರೆದದ್ದು | | |
| 2:1-12 | ಗಲಿಲಾಯದ ಕಾನಾ ಊರಿನಲ್ಲಿ ಮದುವೆ | | |
| 3:1-18 | ಯೇಸು ಮತ್ತು ನಿಕೊದೇಮನು | | |
| 4:3-42 | ಯೇಸು ಮತ್ತು ಸಮಾರ್ಯದ ಸ್ತ್ರೀ | | |
| 5:1-15 | ಬೇತೆಸ್ಥ ಬಳಿಯ ಸ್ವಸ್ಥತೆ | | |
| 8:2-11 | ಒಬ್ಬ ಹೆಂಗಸು ವ್ಯಭಿಚಾರದಲ್ಲಿ ಸಿಕ್ಕಿದ್ದು | | |
| 9:1-41 | ಯೇಸು ಒಬ್ಬ ಹುಟ್ಟುಕುರುಡನನ್ನು ಗುಣಪಡಿಸಿದ್ದು | | |
| 11:1-44 | ಯೇಸು ಲಾಜರನನ್ನು ಬದುಕಿಸಿದ್ದು | | |
| 20:1-18 | ತೋಟದಲ್ಲಿ ಮಗ್ದಲದ ಮರಿಯಳು ಮತ್ತು ಯೇಸು | | |
| 20:19-25 | ಶಿಷ್ಯರ ಒಂದು ಗುಂಪು | | |
| 20:26-29 | ಯೇಸು ತೋಮನಿಗೆ ಕಾಣಿಸಿಕೊಂಡದ್ದು | | |
| 21:1-14 | ಗಲಿಲಾಯದ ಸಮುದ್ರದ ಬಳಿ | | |

**ಅಧ್ಯಯನದಲ್ಲಿ ಹೋಲಿಸಲಾದ ವಾಕ್ಯಭಾಗಗಳ ಪಟ್ಟಿ**

ಇದು ಅಧ್ಯಯನಗಳಲ್ಲಿ ಹೋಲಿಸಲಾದ ಪಠ್ಯಗಳ ಒಂದು ಪಟ್ಟಿಯಾಗಿದೆ. ಮೊದಲ ಪುಟದ ಸಂಖ್ಯೆಯು ಪಠ್ಯದ ಕುರಿತ ಪ್ರಶ್ನೆಯನ್ನು, ಎರಡನೆಯದರಲ್ಲಿ ನನ್ನ ಉತ್ತರವನ್ನು ತೋರಿಸುತ್ತದೆ. ಈ ಎಲ್ಲಾ ಪಠ್ಯಗಳೂ "ಸಮನಾಂತರ" ಗಳೆಂಬುದಾಗಿ ಹೆಚ್ಚಿನ ಸತ್ಯವೇದ ಓದುಗರಿಂದ ಪರಿಗಣಿಸಲಾಗಿದೆ.

| **ಪಠ್ಯ 1** | **ಪಠ್ಯ 2** | **ಪಠ್ಯ 3** | **ಪಠ್ಯ 4** | **ಪಠ್ಯದ ವಿವರಣೆ** | **ಪುಟಗಳು** |
|---|---|---|---|---|---|
| ಮತ್ತಾಯ | ಲೂಕ | | | ಎರಡು ವಂಶಾವಳಿಗಳು | |
| 1:1-17 | 3:23-38 | | | | |
| ಮತ್ತಾಯ | ಲೂಕ | | | ಯೇಸುವಿನ ಜನನ | |
| 1:18-25 | 2:1-7 | | | | |
| ಮತ್ತಾಯ | ಮಾರ್ಕ | ಲೂಕ | | ದೆವ್ವ ಹಿಡಿದವನ/ರ ಸ್ವಸ್ಥತೆ | |
| 8:28-34 | 5:1-20 | 8:26-37 | | | |
| ಮಾರ್ಕ | ಮತ್ತಾಯ | ಯೋಹಾನ | | ಯೇಸು ನೀರಿನ ಮೇಲೆ ನಡೆದದ್ದು | |
| 6:45-52 | 14:22-33 | 6:14-21 | | | |
| ಮಾರ್ಕ | ಮತ್ತಾಯ | | | ಸುರೊಫೊಯಿನಿಕ್ಯರ/ಕಾನಾನ್ಯ ಸ್ತ್ರೀ | |
| 7:24-30 | 15:21-28 | | | | |
| ಮಾರ್ಕ | ಮತ್ತಾಯ | ಲೂಕ | | ರೂಪಾಂತರ | |
| 9:2-14 | 17:1-13 | 9:29-36 | | | |
| ಮತ್ತಾಯ | ಮಾರ್ಕ | ಲೂಕ | ಯೋಹಾನ | ಯೇಸು ಅರಸನಂತೆ ಯೆರೂಸಲೇಮ್ ಪ್ರವೇಶಿಸಿದ್ದು | |
| 21:1-11 | 11:1-11 | 19:28-40 | 12:12-16 | | |
| ಮತ್ತಾಯ | ಮಾರ್ಕ | ಲೂಕ | 1 ಕೊರಿಂಥ | ಕರ್ತನ ಭೋಜನ | |
| 26:26-29 | 14:22-25 | 22:14-20 | 11:23-26 | | |
| ಮತ್ತಾಯ | ಮಾರ್ಕ | ಲೂಕ | ಯೋಹಾನ | ಮಹಾ ಆಜ್ಞೆ (ಆದೇಶ) | |
| 28:18-20 | 16:16 | 24:46-49 ಅಪೊ.1:8 | 20:21-23 | | |
| ಲೂಕ | ಯೋಹಾನ | | | ಯೇಸು ಶಿಷ್ಯರಿಗೆ ಕಾಣಿಸಿದ್ದು | |
| 24:36-49 | 19:25 | | | | |
| ಲೂಕ | ಮಾರ್ಕ | | | ಸ್ವರ್ಗಾರೋಹಣ | |
| 24:50-52 | 16:9 | | | | |

| | | | | | |
|---|---|---|---|---|---|
| ಮತ್ತಾಯ | ಲೂಕ | | | ಶತಾಧಿಪತಿಯ ನಂಬಿಕೆ | |
| 8:5-13 | 7:1-10 | | | | |
| ಮತ್ತಾಯ | ಲೂಕ | ಯೋಹಾನ | | ಅಧಿಕಾರಿಯ ಆಳಿನ/ಅಧಿಕಾರಿಯ ಮಗನ ಸ್ವಸ್ಥತೆ | |
| 8:5-13 | 7:1-10 | 4:46-54 | | | |
| ಮತ್ತಾಯ | ಲೂಕ | | | ಯೋನನಲ್ಲಿನ ಸೂಚಕಕಾರ್ಯ | |
| 12:38-42 | 11:29-32 | | | | |
| ಲೂಕ | ಮತ್ತಾಯ | | | ಶಿಷ್ಯತ್ವದ ಲಕ್ಷಣ | |
| 9:57-62 | 9:19-22 | | | | |
| ಲೂಕ | ಮತ್ತಾಯ | | | ಮಹಾಭೋಜನದ/ಮದುವೆಯ ಸಾಮ್ಯ | |
| 14:15-24 | 22:1-14 | | | | |
| ಮತ್ತಾಯ | ಲೂಕ | | | ತಲಾಂತುಗಳ ಸಾಮ್ಯ | |
| 25:14-30 | 19:12-27 | | | | |

## ಹಳೇ ಒಡಂಬಡಿಕೆಯ ಉಲ್ಲೇಖಗಳು

**ಆದಿಕಾಂಡ**

ಆದಿಕಾಂಡ

ಅಧ್ಯಾಯ 1

2:2-3

2:18-24

4:8

ಅಧ್ಯಾಯ 6-8

ಅಧ್ಯಾಯ 10

12:13

14:14

17:9-14

18:16 – 19:28

18:18

19:26

22:16-18

22:18

28:12

33:18-19

ಅಧ್ಯಾಯ 38

41:42

46:27

48:21-22

**ವಿಮೋಚನಕಾಂಡ**

ವಿಮೋಚನಕಾಂಡ

3:1-6

3:6

3:10-12

3:14

6:6

3:14

12:11

13:2-13

13:21

19:9

20:9-10

20:12-17

22:25

23:15

24:8

25:30

26:31-35

29:42

30:6-8

30:11-16

31:18

32:16

32:32-33

33:9

40:34-35

**ಯಾಜಕಕಾಂಡ**

2:13

11:7-8

11:7

12:2-8

ಅಧ್ಯಾಯಗಳು 13-14

13:2-3

14:2-32

15:25-28

16:29,31

18:6

19:18

20:10

22:4

23:42

24:5-9

24:16

**ಅರಣ್ಯಕಾಂಡ**

3:11-13, 45-47

6:2-12

9:15

11:16-17

18:14-16

21:4-9

24:17

29:7

**ಧರ್ಮೋಪದೇಶಕಾಂಡ**

5:16-21

6:4-5

6:5

14:22-29

15:11

17:6

17:7

21:17

21:22-23

22:22

22:23-24

23:20

23:25

24:1-4

24:14-15

25:3

25:5-6

29:4

30:3-4

32:6

**ಯೆಹೋಶವ**

ಅಧ್ಯಾಯ 2

**1 ಸಮುವೇಲ**

2:1-10

2:26

16:13

21:1-6

**2 ಸಮುವೇಲ**

7:5-16

7:16

ಅಧ್ಯಾಯ 11

**1 ಅರಸುಗಳು**

ಅಧ್ಯಾಯ 10

19:1-2

**2 ಅರಸುಗಳು**

1:2

1:8

1:16

**1 ಪೂರ್ವಕಾಲವೃತ್ತಾಂತ**

24:1,3,10

**2 ಪೂರ್ವಕಾಲವೃತ್ತಾಂತ**

24:21

**ಎಜ್ರ**

10:8

**ಎಸ್ತೇರ್**

4:1,3

**ಕೀರ್ತನೆಗಳು**

2:7-8

22:1

22:6

22:15

22:18

23:1

51:12

69:21

69:28

78:2

107:3

110:1

100:3

115:118

118

118:5

118:22-23

118:25

118:26

**ಯೆಶಾಯ**

1:16

5:1-7

6:9-10

6:10

7:14

9:2

11:2-4

13:8

13:10

14:12

22:13

24:23

25:6-9

25:6

29:13

29:18

34:4

35:5-6

35:15

35:6

40:3

40:4

42:7

43:6

44:3-4

49:11

50:6

50:7

51:17

52:13-53:12

ಅಧ್ಯಾಯ 53

53:3

53:4

53:7

53:8

53:9

53:12

56:7

60:1-3

60:1

61:1-2

61:1

62:5

63:16

64:8

65:17

66:24

**ಯೆರೆಮೀಯ**

3:16

6:26

7:11

8:13

25:15-18

25:15-16

31:10

31:15

31:31-34

ಯೆಹೆಜ್ಕೇಲ

16:8-13

32:7-8

34:5

34:13

36:25-28

36:25-26

ದಾನಿಯೇಲ

4:21

7:13-14

7:13

9:3

9:27

11:31

12:1

12:2

12:13

12:11

ಹೋಶೇಯ

2:2

2:19-20

9:10,16

11:1

ಯೋವೇಲ

20:10

2:23

2:28

2:28-29

2:30-31

3:1

3:13

3:15

3:18

ಅಮೋಸ

8:9

9:13

ಮೀಕ

5:2

ಜೆಕರ್ಯ

7:5

8:19

8:23

9:9

10:2

13:1

13:7

ಮಲಾಕಿ

1:2-3

2:10

3:1

4:5-6

4:5

## ಹೊಸ ಒಡಂಬಡಿಕೆಯ ಉಲ್ಲೇಖಗಳು

ನಾಲ್ಕು ಸುವಾರ್ತೆಗಳಿಗಾಗಿನ ಉಲ್ಲೇಖವನ್ನು ಸೇರಿಸಿಲ್ಲ

**ಅಪೊಸ್ತಲರ ಕೃತ್ಯಗಳು**


ಅಪೊಸ್ತಲರ ಕೃತ್ಯಗಳು

1:1

1:2 – 8:1

1:8

1:9-11

1:9

1:13

ಅಧ್ಯಾಯ 2

2:4

5:16

7:57-59

8:1-12 – 12:1

8:7

9:12,17

10:34-43

10:34-41

10:38

10:39

10:40-41

10:46

11:28

12:12

12:25

13:1 – 28:15

13:2-3

13:2

14:14

14:23

15:37-39

16:18

18:2

19:6

19:12

20:29

20:32

20:35

23:23-26

28:4-5

28:8

28:16-31

**ರೋಮಪುರದವರಿಗೆ**

1:1-4

1:1

1:9

1:16

3:10

4:25

5:15

10:9-10

12:13

15:16

15:19

16:7

**1 ಕೊರಿಂಥದವರಿಗೆ**

1 ಕೊರಿಂಥದವರಿಗೆ

3:16

5:7

6:14

6:19-20

7:10-11

7:12-15

18:13

9:3-12

9:12

9:14

9:22

10:13

11:1

11:23-26

11:25

13:14

14:37

15:3-5

**2 ಕೊರಿಂಥದವರಿಗೆ**

1:20

5:21

6:16

9:6,12-14

11:2

**ಗಲಾತ್ಯದವರಿಗೆ**

1:4

1:19

6:2

6:8

**ಎಫೆಸದವರಿಗೆ**

1:3

1:14,18

2:8-9

2:19-21

2:21

4:13

5:2

5:5

5:8

**ಫಿಲಿಪ್ಪಿಯವರಿಗೆ**

3:10-11

4:19

**ಕೊಲೆಸ್ಸೆಯವರಿಗೆ**

1:10

1:12

1:19-20

1:19

2:9-15

2:13

2:14

4:10

4:14

**1 ಥೆಸಲೋನಿಕದವರಿಗೆ**

4:17

5:5

**2 ಥೆಸಲೋನಿಕದವರಿಗೆ**

2:4

**1 ತಿಮೊಥಿ**

2:6

4:1

5:18

**2 ತಿಮೊಥಿ**

1:9

4:11

**ಫಿಲೆಮೋನ**

ವಚನ 24

**ಇಬ್ರಿಯರಿಗೆ**

2:17

2:18

3:1

3:6,14

6:11-12

9:15

9:26

10:10

**1 ಪೇತ್ರ**

1:3

1:4

1:6-7

1:8

2:4-5

2:13

2:21

5:4

5:13

**2 ಪೇತ್ರ**

1:16-18

1:16-17

1:17

3:9-10

3:10

**1 ಯೋಹಾನ**

2:2

3:2

3:17

4:14

**2 ಯೋಹಾನ**

ವಚನ 3

**ಯೂದ**

ಯೂದ

ವಚನ 7

**ಪ್ರಕಟಣೆ**

ಪ್ರಕಟಣೆ

4:10

16:19

19:20

20:10,15

**ಸಾಮಾನ್ಯ ಪದಸೂಚಿ**

ಅಬ್ಬಾ (ತಂದೆಗಾಗಿನ ಅರಾಮಿಕ್ ಪದ):

ಹೇಬೆಲ್ (ಮೊದಲ ಮನುಷ್ಯ):

ಹಾಳುಮಾಡುವ ಅಸಹ್ಯ ವಸ್ತು:

ಅಬ್ರಹಾಮ:

ಅಬ್ರಹಾಮನ ಎದೆ (ನೀತಿವಂತರ ಕೊನೆಯ ಮನೆ):

ಪಾತಾಳ (ಸೈತಾನ ಮತ್ತು ದುರಾತ್ಮಗಳ ಸ್ಥಳ):

ದೂಷಿಸು, ದೂಷಣೆ (ಯೆಹೂದಿ ನಾಯಕರು ಯೇಸುವನ್ನು ದೂಷಿಸಿದರು):

ದೂಷಿಸು, ದೂಷಣೆ (ಯೇಸು ಯೆಹೂದಿ ನಾಯಕರನ್ನು ದೂಷಿಸುವುದು):

ವ್ಯಭಿಚಾರಣಿ (ಆತ್ಮೀಕ ವ್ಯಭಿಚಾರದ ಬಗ್ಗೆ):

ವ್ಯಭಿಚಾರ:

ಯುಗ (ಪ್ರಸಕ್ತ ಯುಗ – ಬರುವ ಯುಗ):

ಜಟಾಮಾಂಸಿತೈಲದ ಭರಣಿ:

ಎಲ್ಲಾ ದೇಶಗಳ ಜನರು:

ಸಾಂಕೇತಿಕ (ರಹಸ್ಯ ಅರ್ಥದೊಂದಿಗಿನ ಪಠ್ಯ):

ಸಾಂಕೇತಿಕ, ಸಾಂಕೇತಿಕಗೊಳಿಸು):

ದೂಪವೇದಿ:

ಆಶ್ಚರ್ಯ (ಮಾರ್ಕನ ಸುವಾರ್ತೆಯಲ್ಲಿನ ವಿಷಯ ವಸ್ತು):

ಅಂದ್ರೆಯ:

ದೇವದೂತ (ಪರಲೋಕದ ಜೀವಿ ಮತ್ತು ದೇವರ ಸಂದೇಶಕ):

ಅಲ್ಲದೆ ಸೈತಾನ ಮತ್ತು ಆತನ ದೂತರನ್ನು ನೋಡಿರಿ:

ಅನ್ನಳು (ಯೆರೂಸಲೇಮಿನಲ್ಲಿನ ಪ್ರವಾದಿ):

ಅನ್ನನು (ಮಾಜಿ ಮಹಾಯಾಜಕ, ಕಾಯಫನ ಮಾವ):

ಅಭಿಷೇಕ, ಯೇಸುವಿಗೆ ತೈಲ ಹಚ್ಚುವುದು (ಅಭಿಷೇಕಿಸುವುದು):

ಅಂತ್ಯಕ್ರಿಸ್ತ:

ಅಂತಿಯೋಕ ಎಫಿಫೇನಸ್ (ಕ್ರಿ.ಪೂ. 160 ರಲ್ಲಿ ಪ್ಯಾಲೆಸ್ತೀನ್ ಆಳಿದ ಸಿರಿಯನ್ ರಾಜ)

ಅಪೊಸ್ತಲರು (ಹನ್ನೆರಡು ಮಂದಿ ಯೇಸುವಿನ ಆಪ್ತ ಶಿಷ್ಯರು)

ಅರ್ಖೆಲಾಯ (ಹೆರೋದ ಮಹಾಶಯನ ಮಗ, ಕ್ರಿ.ಪೂ. 4 – ಕ್ರಿ.ಶ. 6 ರಲ್ಲಿ ಯೂದಾಯದ ಅರಸ)

ತೋಳು (ರೂಪಾಲಂಕಾರ):

ಯೇಸುವಿನ ಸ್ವರ್ಗಾರೋಹಣ:

ನಿದ್ರೆಮಾಡು:

ಜೋಯಿಸರು (ಜ್ಞಾನಿಗಳು):

ಕೂಡಲೇ (ಮಾರ್ಕನ ಸುವಾರ್ತೆಯಲ್ಲಿ ಒಂದು ಸಾಮಾನ್ಯ ಹೇಳಿಕೆ):

ಔಗುಸ್ತ (ಕ್ರಿ.ಪೂ. 31 – ಕ್ರಿ.ಶ. 14 ರಲ್ಲಿ ಆಳಿದ ಮೊದಲ ರೋಮನ್ ಚಕ್ರವರ್ತಿ):

ಗ್ರಂಥಕರ್ತ, ಗ್ರಂಥಕರ್ತತ್ವ (ಸುವಾರ್ತೆಗಳ):

ಅಧಿಕಾರ (ಯೇಸುವಿನ):

ಅಧಿಕಾರ (ಅಪೊಸ್ತಲರ):

ಬಾಬೆಲಿನ ಸೆರೆ:

ಬಿಳಾಮ (ಹಳೇ ಒಡಂಬಡಿಕೆಯ ಮೆಸೊಪೊಟೋಮಿಯಾದ ದೇವದರ್ಶಿ):

ಸಾಹುಕಾರ, ಮಾಲೀಕ (ಧಣಿ):

ದೀಕ್ಷಾಸ್ನಾನ, ದೀಕ್ಷಾಸ್ನಾನ ಮಾಡಿಸು:

ದೀಕ್ಷಾಸ್ನಾನ (ಬಾಧೆ ಮತ್ತು ಮರಣಕ್ಕೆ ರೂಪಾಲಂಕಾರ):

ಬರಬ್ಬನು (ದ್ರೋಹಿ ಮತ್ತು ಕೊಲೆಗಾರ):

ಬಾರ್ನಬ (ಆದಿ ಸಭೆಯ ಅಪೊಸ್ತಲ, ಪೌಲನ ಸಹವರ್ತಿ):

ಬಾರ್ತೊಲೊಮಾಯ – ನೋಡಿ ನತಾನಯೇಲ

ಬಾರ್ತಿಮಾಯ (ಕುರುಡ):

ಪುಟ್ಟಿ:

ಬತ್ಸೆಬೆ (ಯೇಸುವಿನ ವಂಶಾವಳಿಯಲ್ಲಿನ ಸ್ತ್ರೀ):

ಎದೆ ಬಡಿಕೊಳ್ಳಿ (ಹೊಡೆ):

ಬೆಲ್ಜೆಬೂಲನು (ದೆವ್ವಗಳ ಒಡೆಯ):

ನಂಬುವುದು – ನೋಡಿ ನಂಬಿಕೆ:

ಬೇಥಾನ್ಯ (ಯೆರೂಸಲೇಮನ್ ಬಳಿಯ ಹಳ್ಳಿ, ಮಾರ್ಥ, ಮರಿಯ ಮತ್ತು ಲಾಜರನ ಮನೆ ಇಲ್ಲಿತ್ತು):

ಬೇಥೆಸ್ಥ (ಯೆರೂಸಲೇಮಿನಲ್ಲಿನ ಕೊಳ):

ಬೇತ್ಲೆಹೇಮ್ (ಯೂದಾಯದ ಒಂದು ಪಟ್ಟಣ, ಯೇಸು ಮತ್ತು ಅರಸನಾದ ದಾವೀದನ ಜನ್ಮಸ್ಥಳ):

ಬೇತ್ಪಗೆ (ಯೆರೂಸಲೇಮಿನ ಹತ್ತಿರದ ಹಳ್ಳಿ):

ಬೇತ್ಸಾಯಿದ (ಗಲಿಲಾಯ ಸಮುದ್ರದ ಬಳಿಯ ಪಟ್ಟಣ):

ನಿಶ್ಚಯಿಸಿಕೊಂಡ:

ಯೇಸುವಿನ ಜನನ:

ಸ್ನಾನಿಕನಾದ ಯೋಹಾನನ ಜನನ:

ಹೆರಿಗೆ ನೋವು (ಅಂತ್ಯಕಾಲದ ಬಾಧೆಗಳಿಗೆ ರೂಪಾಲಂಕಾರ):

ದೇವದೂಷಣೆ:

ಪವಿತ್ರಾತ್ಮನ ದೂಷಣೆ:

ರಕ್ತಹರಿಯುವುದು – ನೋಡಿ ಮೈಲಿಗೆ

ಆಶೀರ್ವದಿಸಲ್ಪಟ್ಟವನು (ಧನ್ಯನು, ಸರ್ವಶಕ್ತನು):

ಕುರುಡ (ಅಲಾಂಕಾರಿಕವಾಗಿ ಆತ್ಮೀಕ ಕುರುಡತನದ ಬಗ್ಗೆ):

ಬೇತ್ಸಾಯಿದದ ಬಳಿ ಕುರುಡನು ಗುಣಹೊಂದಿದ್ದು:

ಕುರುಡುತನ – ನೋಡಿರಿ ದೃಷ್ಟಿ

ಹೊಸದಾಗಿ ಹುಟ್ಟುವುದು, ನೀರಿನಿಂದ ಮತ್ತು ಆತ್ಮನಿಂದ ಹುಟ್ಟುವುದು:

ದೆವ್ವಹಿಡಿದ ಹುಡುಗ ಗುಣಹೊಂದಿದ್ದು

ರೊಟ್ಟಿ (ಒಡಂಬಡಿಕೆಯ ಆಶೀರ್ವಾದಕ್ಕೆ ರೂಪಾಲಂಕಾರ):

ರೊಟ್ಟಿ ಮುರಿಯುವುದು (ಒಟ್ಟಾಗಿ ಊಟ ಹಂಚಿಕೊಳ್ಳುವುದು):

ತಾಮ್ರದ ಸರ್ಪ (ಮೋಶೆಗೆ ದೇವರು ಅಡವಿಯಲ್ಲಿ ಮಾಡಲು ಹೇಳಿದ್ದು):

ಸಹೋದರರು (ಶಿಷ್ಯರು ಮತ್ತು ವಿಶ್ವಾಸಿಗಳನ್ನು ಸೂಚಿಸಿ):

ಯೇಸುವನ್ನು ಹೂಣಿಡುವಿಕೆ:

ನನ್ನ ತಂದೆಯ ಉತ್ತರಕ್ರಿಯೆ:

ಔಗುಸ್ತ ಕೈಸರ – ಔಗುಸ್ತನನ್ನು ನೋಡಿ.

ಕೈಸರೈ (ಯೂದಾಯದಲ್ಲಿನ ರೋಮನ್ ರಾಜಧಾನಿ):

ಕಾಯಫ (ಕ್ರಿ.ಶ. 18-36 ರಲ್ಲಿ ಯೆರೂಸಲೇಮಿನಲ್ಲಿನ ಮಹಾಯಾಜಕ)

ಒಂಟೆಯ ಸೂಜಿಕಣ್ಣಿನೊಳಗೆ ಹೋಗುವುದು (ಅಸಾಧ್ಯತೆಗೆ ರೂಪಾಲಂಕಾರ):

ಕಾನಾನ್ಯ ಸ್ತ್ರೀಯ ಮಗಳು ಗುಣಹೊಂದಿದ್ದು – ಸುರೊಫೊಯಿನಿಕ್ಯ ಹೆಂಗಸಿನ ಮಗಳು ಗುಣಹೊಂದಿದ್ದು

ಕಪೆರ್ನೌಮ್ (ಗಲಿಲಾಯ ಸಮುದ್ರ ತೀರದ ಮಹತ್ವದ ಪಟ್ಟಣ):

ಬಡಗಿ:

ತನ್ನ ಶಿಲುಬೆಯನ್ನು ಹೋರುವುದು:

ಖಾನೇಷುಮಾರಿ:

ಶತಾಧಿಪತಿ (80 ಸೈನಿಕರ ಮೇಲಿನ ರೋಮನ್ ಮಿಲಿಟರಿ ಅಧಿಕಾರಿ):

ಶತಾಧಿಪತಿಯ ಆಳು ಗುಣಹೊಂದಿದ್ದು:

ಹಿರಿಯ (ಮುಖ್ಯ) ಯಾಜಕ:

ಬಂಜೆ (ಮಕ್ಕಳಿಲ್ಲದಿರುವುದು):

ಮಕ್ಕಳು:

ಮಕ್ಕಳು (ಮುಗ್ಧ ಮತ್ತು ಸರಳ ಜನರಿಗೆ ಮತ್ತು ಹೊಸ ವಿಶ್ವಾಸಿಗಳಿಗೆ ಒಂದು ರೂಪಾಲಂಕಾರವಾಗಿದೆ)

ಮಕ್ಕಳು (ದೇವರ ಮಕ್ಕಳಿಗೆ, ಇಸ್ರಾಯೇಲರಿಗೆ ಮತ್ತು ದೇವಜನರು):

ಬೆಳಕಿನ ಮಕ್ಕಳು (ದೇವಜನರಿಗೆ ರೂಪಾಲಂಕಾರ):

ಕ್ರಿಸ್ತನು (ಇಬ್ರಿಯ ಮೆಸ್ಸೀಯನ ಗ್ರೀಕ್ ಭಾಷಾಂತರ):

ಸುನ್ನತಿ, ಸುನ್ನತಿ ಮಾಡು (ಯೆಹೂದಿ ಸಂಪ್ರದಾಯ, ಪದ್ಧತಿ):

ಸುನ್ನತಿ ಮಡು (ನಿಜವಾದ ದೇವರ ಜನರ ಬಗ್ಗೆ ಪೌಲನು ಅಲಂಕಾರಿಕವಾಗಿ ಬಳಸಿರುವುದು)

ಶುದ್ಧ – ನೋಡಿ ಅಶುದ್ಧ

ಹೊರಡಿಸುವುದು/ಯೇಸುವಿನಿಂದ ದೇವಾಲಯದ ಶುದ್ಧೀಕರಣ:

ಕ್ಲೋಫ/ಕ್ಲಿಯೋಫ (ಬಹುಶಃ ಯೇಸುವಿನ ಹಿಂಬಾಲಕರು):

ಮೋಡ/ಮೇಘ (ಅಲ್ಲದೆ ದೇವರ ಪ್ರಸನ್ನತೆ):

ಪಟಾಲಮು (600 ಸೈನಿಕರನ್ನೊಳಗೊಂಡ ರೋಮನ್ ಸೇನಾ ಘಟಕ):

ಪಾವಲಿ/ನಾಣ್ಯ:

ಆಜ್ಞೆ (ಬಹುಮುಖ್ಯವಾದದ್ದು):

ಕನಿಕರ/ಕಾಳಜಿ (ಯೇಸುವಿನ):

ಪರಹಿತ (ಬೇರೆಯವರಿಗಾಗಿ ಕಾಳಜಿ:

ದಂಡನೆ (ನ್ಯಾಯತೀರ್ಪು):

ಇಸ್ರಾಯೇಲ್ ಜನರನ್ನು ಸಂತೈಸುವವನು (ಮೆಸ್ಸೀಯನ ಹೆಸರು):

ವಿವಾದ/ಯೇಸು ಮತ್ತು ಯೆಹೂದಿ ನಾಯಕರ ನಡುವೆ:

ಕೊರ್ಬಾನ್ (ಕಾಣಿಕೆ):

ಮಂಡಳಿಗಳು:

ಒಡಂಬಡಿಕೆ, ಹಳೇ ಒಡಂಬಡಿಕೆ, ಅಬ್ರಹಾಮ ಮತ್ತು ದಾವೀದನೊಂದಿಗಿನ ದೇವರ ಒಡಂಬಡಿಕೆ:

ಲೋಭ:

ಶಿಲುಬೆ, ಶಿಲುಬೇರಿಸುವುದು (ರೋಮನ್ನರು ಅಪರಾಧಿಗಳನ್ನು ಶಿಕ್ಷಿಸುವ ಪದ್ಧತಿ), ಯೇಸುವನ್ನು ಶಿಲುಬೆಗೇರಿಸಿದ್ದು:

ಪಾತ್ರೆ (ಪಸ್ಕಹಬ್ಬದ ಊಟದ ವೇಳೆ):

ಪಾತ್ರೆ (ರೂಪಾಲಂಕಾರಗಳು):

ದೇವಾಲಯದ ಪರದೆ:

ಕತ್ತರಿಸಿಬಿಡು (ಅತಿಶಯೋಕ್ತಿಯ ಹೇಳಿಕೆ ಮತ್ತು ರೂಪಾಲಂಕಾರ):

ಕುರೇನೆ (ಉತ್ತರ ಆಫ್ರಿಕಾದ ಲಿಬಿಯಾದಲ್ಲಿನ ಒಂದು ಗ್ರೀಕ್ ಪಟ್ಟಣ):

ದಲ್ಮನೂಥ (ಗಲಿಲಾಯ ಸಮುದ್ರದ ಪಶ್ಚಿಮ ತೀರದ ಹಳ್ಳಿ):

ಕತ್ತಲು (ರೂಪಾಲಂಕಾರ):

ದಿನಾಂಕ (ಸುವಾರ್ತೆಗಳ):

ಮಗಳೇ (ಗೌರವದ ರೂಪ):

ಅಬ್ರಹಾಮನ ಸಂತತಿ:

ದಾವೀದ (ಇಸ್ರಾಯೇಲಿನ ರಾಜ):

ಮುಂಜಾನೆ (ರೂಪಾಲಂಕಾರ):

ನ್ಯಾಯತೀರ್ಪಿನ ದಿನ, ಕರ್ತನ ದಿನ:

ಸತ್ತವರ:

ಕಿವುಡ(ಮತ್ತು ಮೂಕ)ನು ದೆಕಪೊಲಿಯಲ್ಲಿ ಗುಣಹೊಂದಿದ್ದು:

ಯೇಸುವಿನ ಮರಣ:

ಮರಣದಂಡನೆ, ಮರಣಕ್ಕೆ ಒಪ್ಪಿಸು, ಕಲ್ಲೆಸೆದು:

ಶಿಲುಬೆ ಮತ್ತು ಶಿಲುಬೆಗೇರಿಸುವಿಕೆಯನ್ನು ನೋಡಿರಿ

ದೆಕಪೊಲಿ (ಹತ್ತು ಪಟ್ಟಣಗಳು, ಯೊರ್ದನಿನ ಪೂರ್ವ ರಾಷ್ಟ್ರ):

ಸಮರ್ಪಿಸು (ಯೇಸುವನ್ನು ಕರ್ತನಿಗೆ ಸಮರ್ಪಿಸಿದ್ದು):

ಆಳವಾದ ಅರ್ಥ, ಗೂಢಾರ್ಥ:

ದೆವ್ವಹಿಡಿದವನು ಬಿಡುಗಡೆಯಾದದ್ದು (ಯೇಸುವಿನಿಂದ):

ದೆವ್ವಗಳು, ದುರಾತ್ಮಗಳು:

ಹಣ (ರೋಮನ್ ನಾಣ್ಯ, ಒಂದು ದಿನದ ಕೂಲಿಗೆ ಸಮ):

ಯೆರೂಸಲೇಮ್ ಮತ್ತು ಅದರ ದೇವಾಲಯದ ನಾಶ (ಕ್ರಿ.ಶ. 70 ರಲ್ಲಿ):

ಸೈತಾನನು:

ದೆವ್ವ/ಸೈತಾನನು ಮತ್ತು ಆತನ ದೂತರು:

ಉಪಭಾಷೆ:

ಯೇಸುವಿಗೆ ಪ್ರಿಯನಾದ (ಯೋಹಾನನಿರಬಹುದು):

ಶಿಷ್ಯರುಗಳು: ಅಪೊಸ್ತಲರು ಮತ್ತು ಶಿಷ್ಯತ್ವವನ್ನು ಸಹ ನೋಡಿ.

ಶಿಷ್ಯತ್ವ:

ದೈವತ್ವ/ಯೇಸುವಿನ ಕರ್ತತ್ವ/ಒಡೆಯತ್ವ:

ವಿಚ್ಛೇದನ/ಬಿಟ್ಟುಬಿಡುವುದು, ತ್ಯಾಗಪತ್ರ:

ನಾಯಿಗಳು:

ಬಾಗಿಲು (ರೂಪಾಲಂಕಾರ):

ಒಂದು ರೂಪಾಯಿ (ಗ್ರೀಕ್ ನಾಣ್ಯಗಳು):

ಕನಸು:

ವಿಷಪದಾರ್ಥವನ್ನೇನಾದರೂ ಕುಡಿದರೆ:

ಜಲೋಧರ:

ದೂಳು/ಕಾಲಿಗೆ ಹತ್ತಿದ ದೂಳನ್ನು ಜಾಡಿಸಿ:

ಉಣ್ಣುವುದು:

ಐಗುಪ್ತ:

ಆಯ್ದ, ಆದುಕೊಂಡ (ದೇವಜನರು):

ಎಲೀಯ (ಹಳೇ ಒಡಂಬಡಿಕೆಯ ಪ್ರವಾದಿ):

ಎಲೀಯನಂತೆ ಸ್ನಾನಿಕನಾದ ಯೋಹಾನ ನೋಡಿರಿ.

ಎಲಿಸಬೇತಳು (ಯಾಜಕನಾದ ಜಕರೀಯನ ಹೆಂಡತಿ, ಸ್ನಾನಿಕನಾದ ಯೋಹಾನನ ತಾಯಿ, ಮರಿಯಳ ಸಂಬಂಧಿ).

ಎಮ್ಮಾಹು (ಯೆರೂಸಲೇಮಿನ ಹತ್ತಿರದ ಹಳ್ಳಿ):

ಚಕ್ರವರ್ತಿ – ನೊಡಿ ರೋಮನ್ ಚಕ್ರವರ್ತಿ

ಅಂತ್ಯ (ಎಲ್ಲವುಗಳ ಅಂತ್ಯ, ಯುಗದ ಅಂತ್ಯ):

ತಾಳು (ಕಡೇವರೆಗೂ):

ನಿಶ್ಚಯಗೊಂಡ, ನಿಶ್ಚಯ, ನಿಶ್ಚಿತಾರ್ಥ:

ಎಪ್ಫಥಾ ('ತೆರೆ' ಎಂಬುದಕ್ಕೆ ಅರಾಮಿಕ್ ಪದ)

ನಿತ್ಯ ಅಗ್ನಿ, ನಿತ್ಯದಂಡನೆ (ನರಕ):

ನಿತ್ಯಜೀವ:

ದುರಾತ್ಮಗಳು – ದೆವ್ವಗಳು

ಯೆಹೂದ್ಯರೊಳಗಿಂದ ಹೊರಹಾಕು/ಬಹಿಷ್ಕರಿಸು:

ನಂಬಿಕೆ, ನಂಬು:

ನಂಬಿಗಸ್ತಿಕೆ (ದೇವರ ಮತ್ತು ಯೇಸುವಿನ):

ನಂಬಿಗಸ್ತಿಕೆ, ಅಪನಂಬಿಗಸ್ತಿಕೆ (ಮನುಷ್ಯನ):

ಮನೆಯವರು/ಕುಟುಂಬ (ಯೇಸುವಿನ):

ಉಪವಾಸ:

ತಂದೆ (ತಂದೆಯ ಅರ್ಥ/ತಂದೆಯೆಂದರೆ):

ಗೆರಸೇನರ, ಗೆರಸೇನರ ಸೀಮೆಯ (ಗಲಿಲಾಯ ಸಮುದ್ರದ ಪೂರ್ವ ಭಾಗ):

ಗೆತ್ಸೇಮನೆ (ಎಣ್ಣೇಮರಗಳ ತಪ್ಪಲಿನ ಉದ್ಯಾನ, ತೋಟ):

ಭೂತ:

ದೇವರಿಗೆ ಮಹಿಮೆ ತರು:

ಕರ್ತನ ಪ್ರಭೆ (ಮಹಿಮೆ):

ಹಲ್ಲುಕಡಿಯೋಣ (ರೂಪಾಲಂಕಾರ):

ಜ್ಞಾನದ ದುರ್ಬೋಧನೆಗಳು (ಕ್ರೈಸ್ತೇತರ ಧಾರ್ಮಿಕ ಮತ್ತು ತತ್ವದ ನಂಬಿಕೆಗಳು):

ದೇವರಿಗೆ ಭಯಪಡುವ, ದೇವರಲ್ಲಿ ಭಯಭಕ್ತಿಯುಳ್ಳ:

ಗೊಲ್ಗೊಥಾ (ಅರಾಮಿಕ್ ಹೆಸರಿನ ಅರ್ಥ "ಕಪಾಲ" ಇಲ್ಲಿಯೇ ಯೇಸುವನ್ನು ಶಿಲುಬೆಗೇರಿಸಿದ್ದು):

ಒಳ್ಳೆಯ ಸಮಾರ್ಯನು (ಸಾಮ್ಯ):

ಸುವಾರ್ತೆ (ವಿವರ):

ಸುವಾರ್ತೆ (ನಾಲ್ಕು ಸುವಾರ್ತಾ ಪುಸ್ತಕಗಳು): ಯೋಹಾನನ ಸುವಾರ್ತೆ, ಲೂಕನ ಸುವಾರ್ತೆ, ಮಾರ್ಕನ ಸುವಾರ್ತೆ ಮತ್ತು ಮತ್ತಾಯನ ಸುವಾರ್ತೆಯನ್ನು ನೋಡಿರಿ.

ಸತ್ಯದ ಸುವಾರ್ತೆ:

ತೋಮನ ಸುವಾರ್ತೆ:

ದೇಶಾಧಿಪತಿ:

ಮಹಾ ಆಜ್ಞೆ/ಆದೇಶ:

ಹಿರಿಮೆ (ದೊಡ್ಡವರು) (ಪರಲೋಕದಲ್ಲಿ):

ಗ್ರೀಕ್ ಮತ್ತು ರೋಮನ್ ಸಂಸ್ಕೃತಿ, ಗ್ರೀಕೀಕರಣ:

ಬೀಜ ಬೆಳೆಯುವುದು – ದೇವರ ರಾಜ್ಯದ ಕುರಿತ ಸಾಮ್ಯ ನೊಡಿ

ಯೇಸುವಿನ ಸಮಾಧಿಬಳಿಯ ಕಾವಲುಗಾರರು:

ಅತಿಥಿ ಕೋಣೆ (ಛತ್ರ):

ನನ್ನ ರಾಜ್ಯದಲ್ಲಿ ಅರ್ಧದಷ್ಟು:

ಸ್ತುತಿಸುವ ಕೀರ್ತನೆಗಳು, ಹಲ್ಲೆಲೂಯ ಕೀರ್ತನೆಗಳು:

ಹೃದಯದ ಕಠಿಣತೆ:

ಸುಗ್ಗಿ (ಕೊನೆಯ ನ್ಯಾಯ ತೀರ್ಪಿನ ರೂಪಾಲಂಕಾರ):

ಸುಗ್ಗಿ (ಸುವಾರ್ತೆಯನ್ನು ಅಂಗೀಕರಿಸಲು ಸಿದ್ಧರಿರುವ ಜನರ ರೂಪಾಲಂಕಾರ):

ಹಗೆ ಮಾಡು/ದ್ವೇಷಿಸು:

ಗುಣಪಡಿಸು/ರಕ್ಷಿಸು/ಸ್ವಸ್ಥಮಾಡು:

ಸ್ವಸ್ಥತಾ ಅದ್ಭುತಗಳು:

ಪರಲೋಕ (ದೇವರಿಗೆ ಒಂದು ಸಮಾನಾರ್ಥಿಕ):

ಆಕಾಶವು ತೆರೆಯಿತು:

ಪರಲೋಕ ಸೈನ್ಯ:

ದೇವರ ರಾಜ್ಯದ ಸಹಬಾಧ್ಯರು:

ನರಕ/ಪಾತಾಳ:

ಗ್ರೀಕೀಕರಣ:

ಹೆರೋದ (ಮಹಾಶಯನೆಂಬುದಾಗಿ ಕರೆಯಲ್ಪಟ್ಟು ಪ್ಯಾಲೆಸ್ತೀನನ್ನು ಆಳಿದವನು):

ಹೆರೋದ ಅಂತಿಪ, ಉಪರಾಜನಾದ ಹೆರೋದ (ಕ್ರಿ.ಪೂ. 4 – ಕ್ರಿ.ಶ. 39 ರಲ್ಲಿ ಗಲಿಲಾಯವನ್ನು ಆಳಿದವನು, ಹೆರೋದ ಮಹಾಶಯನ ಮಗ, ಸ್ನಾನಿಕನಾದ ಯೋಹಾನನ್ನು ಕೊಲ್ಲಿಸಿದವನು):

ಹೆರೋದ ಫಿಲಿಪ್ಪ II (ಕ್ರಿ.ಪೂ. 4 – ಕ್ರಿ.ಶ. 34 ರಲ್ಲಿ ಉತ್ತರ ಪ್ಯಾಲೆಸ್ತೀನ್ ಆಳಿದವನು, ಹೆರೋದ ಮಹಾಶಯನ ಮಗ):

ಹೆರೋದ್ಯ ಅರಸರು:

ಹೆರೋದ್ಯರು:

ಹೆರೋಧ್ಯಳು (1 ಹೆರೋದ ಫಿಲಿಪ್ಪನ ಹೆಂಡತಿ 1 ಹೆರೋದ ಅಂತಿಪನ ಹೆಂಡತಿ, ಹೆರೋದ ಮಹಾಶಯನ ಮೊಮ್ಮಗಳು):

ರಹಸ್ಯಗಳು, ಗೂಡಾರ್ಥಗಳು:

ಹುದುಗಿಸಿಟ್ಟ ನಿಧಿ (ದ್ರವ್ಯ):

ರಹಸ್ಯವಾದ ಸಂಗತಿ:

ಮಹಾಯಾಜಕ:

ದೇವರು ಪ್ರತಿಷ್ಠಿಸಿದವನೇ (ಯೇಸುವಿಗೆ ಕೊಟ್ಟ ಹೆಸರು):

ಪವಿತ್ರಾತ್ಮ:

ಕೊಂಬು (ರೂಪಾಲಂಕಾರ):

ಹೊಸಾನ್ನ (ಜಯ) (ನಮ್ಮನ್ನು ರಕ್ಷಿಸು ಎಂಬುದಕ್ಕಾಗಿನ ಇಬ್ರಿಯ ಪದ):

ಹೋಶೇಯ (ಹಳೆ ಒಡಂಡಕೆಯ ಪ್ರವಾದಿ):

ಅತಿಥಿ ಸತ್ಕಾರ್ಯ ಉಪಚಾರ:

ಯಾಕೋಬನ ಮನೆತನ/ಇಸ್ರಾಯೇಲ್:

ನೂರರಷ್ಟು:

ಗಂಡ (ಯೋಸೇಫನ ಬಗ್ಗೆ):

ಅತಿಶಯೋಕ್ತಿ (ಅರ್ಥಲಂಕಾರ):

ಕಪಟಿ, ಕಪಟತೆ:

ನಾನೇ:

ಇಮ್ಮಾನುವೇಲ (ಯೇಸುವಿನ ಹೆಸರು):

ಆ ದಿನಗಳಲ್ಲಿ – ಮೆಸ್ಸೀಯ ಯುಗ ಮತ್ತು ರಾಜ್ಯ ನೋಡಿ

ದೂಪ:

ನಿತ್ಯಜೀವಕ್ಕೆ ಬಾಧ್ಯನಾಗುವುದು, ದೇವರ ರಾಜ್ಯಕ್ಕೆ ಭಾಧ್ಯನಾಗು:

ಬಾಧ್ಯತೆ:

ವ್ಯಂಗ್ಯ:

ಯೆಶಾಯ (ಹಳೇ ಒಡಂಬಡಿಕೆಯ ಪ್ರವಾದಿ)

ಇಸ್ರಾಯೇಲ್, ಇಸ್ರಾಯೇಲರು:

ಯಾಕೋಬ (ಇಸ್ರಾಯೇಲರ ಪಿತೃ):

ಯಾಕೋಬ ತೋಡಿಸಿದ ಬಾವಿ:

ಯಾಯೀರ (ಸಭಾಮಂದಿರದ ಅಧಿಕಾರಿ, ಈತನ ಮಗಳನ್ನೇ ಯೇಸು ಬದುಕಿಸಿದನು):

ಯಾಕೋಬ (ಯೇಸುವಿನ ತಮ್ಮ, ಯೆರೂಸಲೇಮಿನ ಸಭೆಯ ನಾಯಕ):

ಯಾಕೋಬ (ಅಲ್ಫಾಯನ ಮಗ, ಯೇಸುವಿನ ಒಬ್ಬ ಅಪೊಸ್ತಲ):

ಯಾಕೋಬ (ಜೆಬೆದಾಯನ ಮಗ, ಯೇಸುವಿನ ಒಬ್ಬ ಅಪೊಸ್ತಲ):

ಯೆರೆಮೀಯ (ಹಳೇ ಒಡಂಬಡಿಕೆಯ ಪ್ರವಾದಿ):

ಯೆರಿಕೋ (ಯೊರ್ದನ್ ಕಣಿವೆಯ ಪಟ್ಟಣ):

ಯೆರೂಸಲೇಮ್ (ಪಟ್ಟಣದ ಬಗ್ಗೆ):

ಯೆರೂಸಲೇಮ್ ದೇವಾಲಯ (ದೇವಾಲಯದ ಬಗ್ಗೆ):

ಯೆರೂಸಲೇಮ್ ದೇವಾಲಯ (ಅದರ ನಾಶನ):

ಯೇಸು (ಹೆಸರಿನ ಅರ್ಥ):

ಶಿಲುಬೆ ಮೇಲಿನ ಯೇಸುವಿನ 7 ಮಾತುಗಳು:

ಯೆಹೂದಿ ಮಹಾಸಭೆ (ಮಂಡಳಿ):

ಯೆಹೂದಿ ಗುಂಪುಗಳು:

ಯೆಹೂದ್ಯರು:

ಯೋಹಾನ (ಹೆಸರಿನ ಅರ್ಥ):

ಯೋಹಾನ (ಜೆಬೆದಾಯನ ಮಗ, ಯೇಸುವಿನ ಒಬ್ಬ ಅಪೊಸ್ತಲ, ಬಹುಶಃ ಯೋಹಾನನ ಸುವಾರ್ತೆಯ ಗ್ರಂಥಕರ್ತ):

ಸ್ನಾನಿಕನಾದ ಯೋಹಾನ:

ಎಲೀಯನಂತೆ ಸ್ನಾನಿಕನಾದ ಯೋಹಾನ:

ಯೋಹಾನನೆನಿಸಿಕೊಳ್ಳುವ ಮಾರ್ಕ (ಬಹುಶಃ ಮಾರ್ಕನ ಸುವಾರ್ತೆಯ ಗ್ರಂಥಕರ್ತ):

ಯೋಹಾನನ ಸುವಾರ್ತೆ:

ಯೋನ (ಹಳೇ ಒಡಂಬಡಿಕೆಯ ಪ್ರವಾದಿ):

ಯೊರ್ದನ್ (ಗಲಿಲಾಯದಿಂದ ಮೃತ ಸಮುದ್ರದಕ್ಕೆ ಹರಿಯುವ ಹೊಳೆ):

ಯೋಸೆ (ಯೇಸುವಿನ ತಮ್ಮ):

ಯೋಸೇಫ (ಇಸ್ರಾಯೇಲರ ಪಿತೃ):

ಯೋಸೇಫ (ಮರಿಯಳ ಗಂಡ, ಯೇಸುವಿನ ಲೌಕಿಕ ತಂದೆ):

ಅರಿಮಥಾಯದ ಯೋಸೇಫ (ಮಹಾಸಭೆಯ ಸದಸ್ಯ, ಯೇಸುವನ್ನು ತನ್ನ ಸಮಾಧಿಯಲ್ಲಿಟ್ಟವನು):

ಜೋಸೆಫಸ್ (ಯೆಹೂದಿ ಇತಿಹಾಸಕಾರ):

ಯೆಹೂದ (ಯಾಕೋಬನ ಮಗ, ಇಸ್ರಾಯೇಲ ಕುಲ, ದಕ್ಷಿಣ ಇಸ್ರಾಯೇಲು ರಾಜ್ಯ, ಅಲ್ಲದೆ ಇಸ್ರಾಯೇಲ್ ಜನಾಂಗ ಸಹ):

ಯೂದ (ಯೇಸುವಿನ ತಮ್ಮ):

ಯೂದ (ಯಾಕೋಬನ ಮಗ, ಯೇಸುವಿನ ಒಬ್ಬ ಅಪೊಸ್ತಲ ಇಸ್ಕರಿಯೋತ ಯೂದ (ಯೇಸುವಿನ ಒಬ್ಬ ಅಪೊಸ್ತಲ, ಯೇಸುವನ್ನು ಹಿಡುಕೊಟ್ಟವ):

ಯೂದಾಯ (ರೋಮನ್ ಸೀಮೆ):

ನಿರಪರಾಧಿಗಳನ್ನು ಕೊಲ್ಲುವುದು:

ಯೆಹೂದ್ಯರ ಅರಸನು:

ದೇವರ ರಾಜ್ಯ, ಪರಲೋಕ ರಾಜ್ಯ:

ನಮ್ಮ ಪಿತೃವಾದ ದಾವೀದನ ರಾಜ್ಯ:

ಮುದ್ದು (ಮುದ್ದಿಡು):

ಖೊರಾಜಿನ್ (ಗಲಿಲಾಯದಲ್ಲಿನ ಒಂದು ಊರು):

ತೋಳಗಳ ನಡುವೆ ಕುರಿಗಳನ್ನು (ಉಪಮೆ):

ದೀಪ (ಸಾಮ್ಯ) – ದೇವರ ರಾಜ್ಯದ ಸಾಮ್ಯಗಳನ್ನು ನೋಡಿ ದೀಪ, ಬೆಳಕು

ಕಡೇ ಭೋಜನ, ಕರ್ತನ ಭೋಜನ (ಶಿಷ್ಯರೊಂದಿಗೆ ಯೇಸುವಿನ ಕೊನೆಯ ಪಸ್ಕಹಬ್ಬದ ಊಟ):

ಮೋಶೆಯ ಧರ್ಮಶಾಸ್ತ್ರ, ಹಳೇ ಒಡಂಬಡಿಕೆಯ ಧರ್ಮಶಾಸ್ತ್ರ:

ದರ್ಮೋಪದೇಶಕ:

ಲಾಜರ (ಸಾಮ್ಯದಲ್ಲಿನ ಬಿಕ್ಷುಕ):

ಲಾಜರ (ಬೇಥಾನ್ಯದಲ್ಲಿನ ಮಾರ್ಥ, ಮರಿಯಳ ತಮ್ಮ), ಯೇಸು ಬದುಕಿಸಿದವ:

ದಂಡು (ದೆವ್ವಗಳ ಒಂದು ದೊಡ್ಡಗುಂಪಿನ ಹೆಸರು):

ಕುಷ್ಠರೋಗ, ಕುಷ್ಠರೋಗಿ:

ಲೇವಿ – ಮತ್ತಾಯನನ್ನು ನೋಡಿ

ಲೇವಿಯ (ಇಸ್ರಾಯೇಲ್ ಕುಲ, ಕುಲದ ಸದಸ್ಯ):

ಪ್ರಾಣ (ಎರಡು ಅರ್ಥದಲ್ಲಿ):

ಬೆಳಕು (ರೂಪಾಲಂಕಾರ) – ಬೆಳಕಿನ ಮಕ್ಕಳನ್ನು ಸಹ ನೋಡಿ

ಚಿಕ್ಕ ಮಕ್ಕಳು:

ಜೀವಕರವಾದ ನೀರು:

ರೊಟ್ಟಿ:

ಕರ್ತನು (ದೇವರು ಮತ್ತು ಯೇಸುವಿನ ಬಗ್ಗೆ):

ಕರ್ತನ ಭೋಜನ:

ಕಳೆದು ಹೋದ ಮತ್ತು ಸಿಕ್ಕಿದ ಸಾಮ್ಯಗಳು (ಕಳೆದು ಹೋದ ನಾಣ್ಯ/ಪಾವಲಿ, ಕಳೆದು ಹೋದ ಕುರಿ, ಕಳೆದು ಹೋದ ಮಗ):

ಲೋಟನ ಹೆಂಡತಿ (ಸೊದೋಮಿನ ನಾಶನದವೇಳೆ ಉಪ್ಪಿನ ಕಂಬವಾದವಳು):

ಪ್ರಿತಿ (ಯೋಹಾನನ ಸುವಾರ್ತೆಯಲ್ಲಿ ಬಳಸಿದ ಗ್ರೀಕ್ ಪದಗಳು):

ಪ್ರೀತಿಸು (ದೇವರನ್ನು ಮತ್ತು ನಿನ್ನ ನೆರೆಯವರನ್ನು):

ಪ್ರೀತಿ ಮತ್ತು ಕ್ಷಮೆ:

ಲೂಕ (ಪೌಲನ ಸಂಗಡಿಗನು, ಬಹುಶಃ ಲೂಕ ಮತ್ತು ಅ.ಕೃ. ಪುಸ್ತಕದ ಗ್ರಂಥಕರ್ತ):

ಲೂಕನ ಸುವಾರ್ತೆ:

ಜೋಯಿಸಿ – ಭವಿಷ್ಯನೋಡುವವ:

ಮಲಾಕಿ (ಹಳೇ ಒಡಂಬಡಿಕೆಯ ಪ್ರವಾದಿ):

ಮಲ್ಕನು (ಮಹಾಯಾಜಕನ ಆಳು):

ಬೇತೆಸ್ಥ ಕೊಳದ ಬಳಿ ಗುಣಹೊಂದಿದವನು:

ಹುಟ್ಟುಕುರುಡನು ಗುಣಹೊಂದಿದ್ದು:

ಜಲೋಧರವುಳ್ಳವನು ಗುಣಹೊಂದಿದ್ದು:

ಕುಷ್ಠರೋಗದಿಂದ ಗುಣಹೊಂದಿದ ಮನುಷ್ಯ:

ಕೈಬತ್ತಿ ಹೋಗಿದ್ದವನು ಗುಣಹೊಂದಿದ್ದು:

ಸೇವಕ/ಮನೆವಾರ್ತೆಯವ:

ಕರೆಯಲ್ಪಟ್ಟವರು ಬಹುಮಂದಿ, ಆಯಲ್ಪಟ್ಟವರು ಕೆಲವರು

ಮಾರ್ಕ – ನೋಡಿ ಯೋಹಾನನೆಂಬ ಮಾರ್ಕ

ಮಾರ್ಕನ ಸುವಾರ್ತೆ:

ಮಾರ್ಥ (ಮರಿಯ ಮತ್ತು ಲಾಜರನ ಸಹೋದರಿ):

ಮರಿಯಳು (ಯೇಸುವಿನ ತಾಯಿ):

ಮರಿಯಳು (ಮಾರ್ಥ ಮತ್ತು ಲಾಜರನ ಸಹೋದರಿ):

ಮಗ್ದಲದ ಮರಿಯಳು (ಯೇಸುವಿನ ಹಿಂಬಾಲಕಿ):

ಚಿಕ್ಕ ಯಾಕೋಬ ಮತ್ತು ಯೋಸೆಯರ ತಾಯಿಯಾದ ಮರಿಯಳು):

ಮರಿಯಳ ಮಗ (ಯೇಸುವಿನ ಬಗ್ಗೆ):

ಮತ್ತಾಯ (ಯೇಸುವಿನ ಒಬ್ಬ ಅಪೊಸ್ತಲ, ಬಹುಶಃ ಮತ್ತಾಯನ ಸುವಾರ್ತೆಯ ಗ್ರಂಥಕರ್ತ):

ಮತ್ತಾಯನ ಸುವಾರ್ತೆ:

ಅಳತೆ:

ಮೆಸ್ಸೀಯ, ಕ್ರಿಸ್ತನು (ಈ ಇಬ್ರಿಯ ಮತ್ತು ಗ್ರೀಕ್ ಪದಗಳ ಅರ್ಥ "ಅಭಿಷಕ್ತನು"):

ಮೆಸ್ಸೀಯನ ಆಳಿಕೆ ಮತ್ತು ರಾಜ್ಯ, "ಆ ದಿನಗಳಲ್ಲಿ":

ಮೆಸ್ಸೀಯನ ಭೋಜನ (ಊಟ):

ಮೆಸ್ಸೀಯನ ರಹಸ್ಯ (ಮಾರ್ಕನ ಸುವಾರ್ತೆಯಲ್ಲಿನ ಒಂದು ಲಕ್ಷಣ):

ರೂಪಾಲಂಕಾರ (ಅರ್ಥಾಲಂಕಾರ, ಒಂದು ರೀತಿಯ ಹೋಲಿಕೆ)

ಮಿಕ (ಹಳೇ ಒಡಂಬಡಿಕೆಯ ಪ್ರವಾದಿ):

ಬೀಸುವ ಕಲ್ಲು:

ಸಭೆಯ ಸೇವೆ:

ಅದ್ಭುತಗಳು:

ಪರಿಹಾಸ್ಯ ಮಾಡಿದರು:

ಮೋಶೆ (ಹಳೇ ಒಡಂಬಡಿಕೆಯ ನಾಯಕ, ಇಸ್ರಾಯೇಲರನ್ನು ಐಗುಪ್ತದಿಂದ ಕರತಂದವನು):

ಮೋಶೆಯೂ ಮತ್ತು ಎಲ್ಲಾ ಪ್ರವಾದಿಗಳೂ, ಮೋಶೆಯ ಧರ್ಮಶಾಸ್ತ್ರ, ಪ್ರವಾದಿಗಳು ಮತ್ತು ಕೀರ್ತನೆಗಳಲ್ಲಿ:

ಮೋಶೆಯು ಸರ್ಪವನ್ನು ಎತ್ತಿಹಿಡಿದಂತೆ:

ಪರಾತ್ಪರನು (ದೇವರ ಹೆಸರು):

ಗೆರಿಜಿಮ್ ಬೆಟ್ಟ:

ಹೆರ್ಮೋನ್ ಬೆಟ್ಟ (ಪ್ಯಾಲೆಸ್ತೀನಿನ ಉತ್ತರ ಸೀಮೆ ಮೇಲಿನ):

ಎಣ್ಣೇಮರಗಳ ಗುಡ್ಡ (ಯೆರೂಸಲೇಮಿನ ಪೂರ್ವಕ್ಕಿರುವ ಎತ್ತರವಾದ ಬೆಟ್ಟ):

ಸಾಸಿವೆ ಕಾಳು (ನಂಬಿಕೆ ಬಗ್ಗೆ):

ಸಾಸಿವೆ ಕಾಳು (ಸಾಮ್ಯ): ದೇವರ ರಾಜ್ಯದ ಕುರಿತ ಸಾಮ್ಯ ನೋಡಿರಿ.

ದೆವ್ವ ಹಿಡಿದ ಮೂಗನು ಗುಣಹೊಂದಿದ್ದು:

ಮಾಂಸ:

ರಕ್ತಬೋಳ (ಸುಗಂಧದ್ರವ್ಯಗಳಿಗಾಗಿ ಉಪಯೋಗಿಸುವ ಸುವಾಸಿತ ಮರ):

ನಾಯಿನೂರು (ಗಲಿಲಾಯದಲ್ಲಿನ ಸಣ್ಣ ಊರು):

ಪರಲೋಕದಲ್ಲಿ ಹೆಸರುಗಳು ಬರೆಯಲ್ಪಟ್ಟಿವೆ:

ಒಬ್ಬ ವ್ಯಕ್ತಿಗೂ ಹೆಸರಿಡುವುದು:

ಜಟಾಮಾಂಸಿ ತೈಲ (ಬೆಲೆಬಾಳುವ ಪರಿಮಳ ತೈಲ):

ಇಕ್ಕಟ್ಟಾದ ಬಾಗಿಲು (ರೂಪಾಲಂಕಾರ)

ನತಾನಯೇಲ (ಬಾರ್ತೊಲೊಮಾಯ ಎಂದು ಸಹ ಕರೆಯಲ್ಪಡುವ, ಯೇಸುವಿನ ಒಬ್ಬ ಅಪೊಸ್ತಲ)

ನಜರಾಯ (ಯೇಸುವಿನ ಹೆಸರು):

ನಜರೇತ್ (ಗಲಿಲಾಯದಲ್ಲಿನ ಊರು, ಯೇಸುವಿನ ತವರೂರು):

ಹತ್ತಿರವಾಗಿದೆ (ಯೇಸುವಿನೊಂದಿಗೆ ದೇವರ ರಾಜ್ಯದ ಬರೋಣದ ಬಗ್ಗೆ):

ನೀರೋ (ಕ್ರಿ.ಶ. 54-68 ರಲ್ಲಿನ ರೋಮನ್ ಚಕ್ರವರ್ತಿ):

ಬಲೆ (ಸಾಮ್ಯ) – ದೇವರ ರಾಜ್ಯದ ಕುರಿತ ಸಾಮ್ಯಗಳನ್ನು ನೊಡಿರಿ.

ಹಳೆಯ ಮತ್ತು ಹೊಸ:

ಹೊಸ ಒಡಂಬಡಿಕೆ:

ಹಳೆ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸ (ಸಾಮ್ಯ):

ನಿಕೊದೇಮನು (ರಾತ್ರಿವೇಳೆ ಯೇಸುವಿನ ಬಳಿ ಬಂದ ಫರಿಸಾಯ):

ನಿನೆವೆ (ಅಶೂರ್ಯ ಸಾಮ್ರಾಜ್ಯದ ಒಂದು ರಾಜಧಾನಿ):

ನೋಹ (ಹಳೇ ಒಡಂಬಡಿಕೆಯ ದೇವಮನುಷ್ಯ):

ಕಾಣಿಕೆ: ದಶಮಾಂಶವನ್ನು ಸಹ ನೋಡಿ

ಅಧಿಕಾರಿಯ ಮಗ ಸ್ವಸ್ಥನಾದದ್ದು:

ಗಾಯಕ್ಕೆ ಎಣ್ಣೆ ಮತ್ತು ದ್ರಾಕ್ಷಾರಸ ಹಾಕಿದ್ದು:

ಹೊಸ ವಸ್ತು ಮತ್ತು ಹಳೇ ವಸ್ತು:

ಹೊರಗೆ ಕತ್ತಲೆಗೆ (ರೂಪಾಲಂಕಾರ):

ಸಾಮ್ಯ – ಸಾಂಕೇತಿಕ (ನಡುವಿನ ಒಂದು ಹೋಲಿಕೆ):

ಸಾಮ್ಯಗಳು: ಕೆಳಕಂಡವುಗಳನ್ನು ನೋಡಿರಿ:

- ಒಳ್ಳೆಯ ಸಮಾರ್ಯದವನು:
- ಕಳೆದು ಹೋದ ಮತ್ತು ಸಿಕ್ಕಿದ ಸಾಮ್ಯಗಳು:
- ಹಳೆ ಬುದ್ದಲಿಗಳಲ್ಲಿ ಹೊಸ ದ್ರಾಕ್ಷಾರಸ:
- ಫರಿಸಾಯ ಮತ್ತು ಸುಂಕದವನು:
- ಬುದ್ಧಿಹೀನ ಐಶ್ವರ್ಯವಂತ:
- ಐಶ್ವರ್ಯವಂತ ಮತ್ತು ಲಾಜರ:
- ಮೈಗಳ್ಳನಾದ ಮನೆವಾರ್ತೆಯವ:
- ತಲಾಂತುಗಳು:
- ಹತ್ತು ಮಂದಿ ಕನ್ಯೆಯರು:
- ಒಕ್ಕಲಿಗರು:
- ಪ್ರಾರ್ಥನೆಯ ಸಾಮ್ಯಗಳು:
- ಕರುಣೆಯಿಲ್ಲದ ಸೇವಕ:
- ಹಳೆ ಬಟ್ಟೆಗೆ ಹೊಸ ತ್ಯಾಪೆ:
- ಮದುವೆ ಭೋಜನ:

- ವಿಧವೆ ಮತ್ತು ನ್ಯಾಯಾಧಿಪತಿ:
- ದ್ರಾಕ್ಷೆತೋಟದಲ್ಲಿನ ಕೆಲಸಗಾರರು (ಆಳುಗಳು):

ದೇವರ ರಾಜ್ಯದ ಸಾಮ್ಯಗಳು:

ದೇವರ ರಾಜ್ಯದ ಸಾಮ್ಯಗಳ ಪಟ್ಟಿ:

- ಬಿತ್ತುವವನು:
- ಹಣಜಿ:
- ದೀಪ:
- ಬೆಳೆಯುತ್ತಿರುವ ಬೀಜ:
- ಸಾಸಿವೆ ಕಾಳು:
- ಹುಳಿ:
- ಅಡಗಿಸಿಟ್ಟ ದ್ರವ್ಯ:
- ಮುತ್ತು:
- ಬಲೆ:

ಪಾರ್ಶ್ವವಾಯು ರೋಗಿ ಗುಣಹೊಂದಿದ್ದು:

ಶುಮಾವಾರ (ಯೇಸು ಶಿಲುಬೆಗೇರಿದ ವಾರ):

ಪಸ್ಕಹಬ್ಬ (ಯೆಹೂದಿ ಹಬ್ಬ):

ಪಸ್ಕದ ಕುರಿ (ಯೇಸುವಿನ ಬಗ್ಗೆ):

ಪಸ್ಕದ ಊಟ:

ಪೌಲ (ಕ್ರಿ.ಶ. 34 ಅಥವಾ 35 ರಲ್ಲಿ ವಿಶ್ವಾಸಿಯಾದ ಒಬ್ಬ ಫರಿಸಾಯನು, ಈತನ ಇಬ್ರಿಯ ಹೆಸರು ಸೌಲ):

ಪ್ಯಾಕ್ಸ್ ರೋಮನಾ – ರೋಮನ್ ಶಾಂತಿ ನೋಡಿರಿ:

ಮುತ್ತು (ಸಾಮ್ಯ) – ದೇವರ ರಾಜ್ಯದ ಕುರಿತ ಸಾಮ್ಯಗಳನ್ನು ನೋಡಿ

ಪಂತಾಶತ್ತಮ (ಯೆಹೂದಿ ಹಬ್ಬ):

ಪೆರಿಯ (ಯೊರ್ದನ್ ಹೊಳೆಯ ಪೂರ್ವರಾಷ್ಟ್ರ):

ಹಿಂಸೆ, ಬಾಧೆ (ಶಿಷ್ಯರ):

ಪೇತ್ರ – ಸೀಮೋನ ಪೇತ್ರನನ್ನು ನೋಡಿರಿ

ಪೇತ್ರನು ಯೇಸುವನ್ನು ಅಲ್ಲಗಳೆಯುವುದು:

ಫರೋಹ (ಐಗುಪ್ತ್ಯದ ರಾಜನ ಹೆಸರು):

ಫರಿಸಾಯ ಮತ್ತು ಸುಂಕದವನು (ಸಾಮ್ಯ):

ಫರಿಸಾಯರು (ಯೆಹೂದಿ ಧಾರ್ಮಿಕ ಗುಂಪು, ಉಪದೇಶಕರು ಮತ್ತು ಧರ್ಮೋಪದೇಶಕರು):

ಫಿಲಿಪ್ಪ (ಯೇಸುವಿನ ಒಬ್ಬ ಅಪೊಸ್ತಲ):

ಫಿಲಿಪ್ಪ, ಹೆರೋದ ಫಿಲಿಪ್ಪ I – ಹೆರೋಧ್ಯಳನ್ನು ನೋಡಿ

ಫೊಯಿನಿಕ್ಯ (ಮೆಡಿಟರೇನಿಯನ್ ತೀರದ ದೇಶ/ಸ್ಥಳ):

ಹಾವುಗಳನ್ನು ಎತ್ತುವವರು:

ಹಂದಿಗಳು (ಯೆಹೂದ್ಯರಿಗೆ ಅಶುದ್ಧವಾದ ಪ್ರಾಣಿಗಳು):

ಪಿಲಾತ – ಪೊಂತ್ಯ ಪಿಲಾತನನ್ನು ನೋಡಿ

ಯೆರೂಸಲೇಮಿಗೆ ಯಾತ್ರೆ:

ಪಿಸ್ಟಿಸ್ (ನಂಬಿಕೆ, ಭರವಸೆ, ವಿಶ್ವಾಸಕ್ಕಾಗಿನ ಹೊಸ ಒಡಂಬಡಿಕೆಯ ಗ್ರೀಕ್ ಪದ)

ಉಲ್ಲೇಖ ಸೂಚಿ/ಹೋಲಿಕೆ (ಸಾಮ್ಯ ಮತ್ತು ಸಾಂಕೇತಿಕ):

ಪೊಂತ್ಯ ಪಿಲಾತ, ಕ್ರಿ.ಶ. 26-36 ರಲ್ಲಿ ಯೂದಾಯದಲ್ಲಿನ ರೋಮನ್ ದೇಶಾಧಿಪತಿ

ಸಿಲೋವ ಕೊಳ (ಯೆರೂಸಲೇಮಿನಲ್ಲಿ):

ಬಡವರು:

ಜನಪ್ರಿಯತೆ (ಕೀರ್ತಿ) (ಯೇಸುವಿನ):

ಪ್ರಕೃತಿ ಮೇಲಿನ ಅಧಿಕಾರ (ಯೇಸುವಿನ):

ಪ್ರಾರ್ಥಿಸು, ಪ್ರಾರ್ಥನೆ:

ಪ್ರಾರ್ಥನಾ ಸಾಮ್ಯಗಳು:

ಮುಂತಿಳಿಸು, ಮುಂತಿಳಿಸುವಿಕೆ (ಯೇಸು ತನ್ನ ಬಾಧೆ ಮತ್ತು ಮರಣವನ್ನು ಮುಂತಿಳಿಸಿದ್ದು):

ಪ್ರಸಕ್ತ ಲೋಕ - ಈ ಜಗತ್ತು

ಯಾಜಕ:

ದೇಶಾಧಿಪತಿ:

ವಾಗ್ದಾನ (ದೇವರ ವಾಗ್ದಾನಗಳು) – ವಾಗ್ದಾನದ ನೆರವೇರಿಕೆ ನೋಡಿರಿ

ಪ್ರವಾದನೆ (ಮೆಸ್ಸೀಯನ ಕುರಿತು) – ನೆರವೇರಿಕೆ (ಪ್ರವಾದನೆ) ನೋಡಿರಿ

ಜ್ಞಾನೋಕ್ತಿ/ಗಾದೆ, ಜ್ಞಾನೋಕ್ತಿಯ ಹೇಳಿಕೆಗಳು:

ಪ್ರಾಂತ್ಯ (ರೋಮನ್ ಸಾಮ್ರಾಜ್ಯದಲ್ಲಿನ ಆಡಳಿತ ವಲಯ):

ಒದಗಿಸುವಿಕೆ (ದೇವರ):

ಶುದ್ಧಾಚಾರ/ಶುದ್ಧೀಕರಣ (ಹೆರಿಗೆಯಾದ ನಂತರ):

ಕೆಂಪು ಒಲ್ಲಿ/ನಿಲುವಂಗಿ:

ಉದ್ದೇಶ (ಸುವಾರ್ತೆಗಳ):

ದಕ್ಷಿಣ ದೇಶದ ರಾಣಿ (ಶೆಬದ ರಾಣಿ):

ರಬ್ಬೂನಿ, ಬೋಧಕ, ಗುರುವೇ:

ರಾಹೇಲಳು (ಯಾಕೋಬನ ಮುದ್ದಿನ ಪತ್ನಿ):

ರಾಹಾಬಳು (ಯೇಸುವಿನ ವಂಶಾವಳಿಯಲ್ಲಿ ಸೇರಿದ ಅನ್ಯ ಸ್ತ್ರೀ)

ಸತ್ತವರನ್ನು ಎಬ್ಬಿಸಿದ್ದು (ಯೇಸುವಿನಿಂದ):

ರಾಮ (ಯೆರೂಸಲೇಮಿನ ಹತ್ತಿರದ ಊರು):

ಈಡು, ಬಿಡುಗಡೆ, ಬಿಡಿಸು:

ಸಿದ್ಧತೆ, ಸಿದ್ಧನಾಗಿರುವುದು – ಎಚ್ಚರವಾಗಿರಿ ನೋಡಿ.

ಸ್ವೀಕೃತರು (ಸುವಾರ್ತೆಗಳ):

ಮೇಜಿಗೆ ಒರಗಿಕೊಂಡು:

ಬಿಡಿಸು, ಬಿಡುಗಡೆ – ನೋಡಿ ಈಡು:

ಯೇಸುವಿನ ತಿರಸ್ಕಾರ:

ಧಾರ್ಮಿಕ ಜನರು: ನೊಡಿ ಕಪಟಿಗಳು

ಪಶ್ಚಾತ್ತಾಪಪಡು/ಮನತಿರುಗು, ಪಶ್ಚಾತ್ತಾಪ:

ಕಷ್ಟಪಡುವವರ ಮತ್ತು ಭಾರಹೊರುವವರಗಾಗಿ ವಿಶ್ರಾಂತಿ:

ಪುನರುತ್ಥಾನ (ಯೇಸುವಿನ):

ಪುನರುತ್ಥಾನ (ಮನುಷ್ಯನ):

ಯೇಸುವಿನ ಬರೋಣ – ಯೇಸುವಿನ ಎರಡನೇ ಬರೋಣವನ್ನು ನೋಡಿ:

ಬುದ್ಧಿಹೀನ ಐಶ್ವರ್ಯವಂತ (ಸಾಮ್ಯ):

ಐಶ್ವರ್ಯವಂತ ಮತ್ತು ಯೇಸು:

ಐಶ್ವರ್ಯವಂತ ಮತ್ತು ಲಾಜರ (ಸಾಮ್ಯ):

ಎಡ – ಬಲ (ಎಡಗಡೆ ಮತ್ತು ಬಲಗಡೆ):

ನೀತಿವಂತ, ನೀತಿ (ಮನುಷ್ಯನ ಬಗ್ಗೆ):

ಉಂಗುರ (ಅಧಿಕಾರದ ಸಂಕೇತ):

ನಿಲುವಂಗಿ:

ರೋಮನ್ ಅಧಿಕಾರಿಗಳು:

ರೋಮನ್ ಸಂಸ್ಕೃತಿ – ಗ್ರೀಕ್ ಮತ್ತು ರೋಮನ್ ಸಂಸ್ಕೃತಿ ನೋಡಿ

ರೋಮನ್ ಚಕ್ರವರ್ತಿ:

ಪ್ಯಾಲೆಸ್ತೀನಿನ ರೋಮನ್ ಆಳ್ವಿಕೆ (ಆಕ್ರಮಣ):

ರೋಮನ್ ಶಾಂತಿ, ಪ್ಯಾಕ್ಸರೋಮನಾ:

ಮೇಲ್ಬಾವಣೆ:

ರೂತಳು (ಯೇಸುವಿನ ವಂಶಾವಳಿಯಲ್ಲಿ ಸೇರಿದ ಒಬ್ಬ ಅನ್ಯ ಸ್ತ್ರೀ):

ಸಬ್ಬತ್ (ಯೆಹೂದಿ ವಾರದ ಏಳನೇ ದಿನ, ರಜಾ ದಿನ):

ಸಬ್ಬತ್ ನಿಯಮಗಳು:

ಯಜ್ಞ (ಯೆರೂಸಲೇಮಿನ ದೇವಾಲಯದಲ್ಲಿ):

ಸದ್ದುಕಾಯರು (ಯೆರೂಸಲೇಮಿನ ದೇವಾಲಯದಲ್ಲಿ ಉಸ್ತುವಾರಿ ವಹಿಸಿದ ಯೆಹೂದಿ ಧಾರ್ಮಿಕ ಗುಂಪು):

ಸಲೋಮೆ (ಬಹುಶಃ ಜೆಬೆದಾಯನ ಹೆಂಡತಿ ಮತ್ತು ಯಾಕೋಬ ಮತ್ತು ಯೋಹಾನರ ತಾಯಿ):

ಸಲೋಮೆ (ಹೆರೋದ್ಯಳ ಮಗಳು, ಹೊಸ ಒಡಂಬಡಿಕೆಯಲ್ಲಿ ಈಗೆ ಬಗ್ಗೆ ತಿಳಿಸಿಲ್ಲ):

ಉಪ್ಪು:

ಬೆಂಕಿಯಲ್ಲಿ ಉಪ್ಪಿನ ಹದ (ಶುದ್ಧೀಕರಿಸುವ ಬಾಧೆಗೆ ಒಂದು ರೂಪಾಲಂಕಾರ):

ರಕ್ಷಣೆ, ರಕ್ಷಿಸು (ದೇವರು ಮತ್ತು ಯೇಸುವಿನ ಬಗ್ಗೆ):

ಸಮಾರ್ಯನು (ಸಮಾರ್ಯ ಊರಿನವನು):

ಸಮಾರ್ಯ ಸ್ತ್ರೀ:

ಜೋಡು/ಪಾದರಕ್ಷೆ (ಮಗನೆಂಬ ಸಂಕೇತ):

ಹಿರೀಸಭೆ (ಯೆರೂಸಲೇಮಿನಲ್ಲಿ ಯೆಹೂದಿ ಮಹಾಸಭೆ):

ಸೈತಾನ, ದುರಾತ್ಮ:

ರಕ್ಷಕ (ಯೇಸುವಿನ ಬಗ್ಗೆ):

ಧರ್ಮೋಪದೇಶಕರು:

ಗಲಿಲಾಯ ಸಮುದ್ರ (ಅಲ್ಲದೆ ಗೆನ್ನಜರೆತ್ ಮತ್ತು ತಿಬೇರಿಯ ಸಮುದ್ರವೆಂದು ಸಹ ಕರೆಯಲ್ಪಟ್ಟಿದೆ):

ಯೇಸುವಿನ ಎರಡನೇ ಬರೋಣ:

ದೇವರ ರಾಜ್ಯದ ಕುರಿತ ರಹಸ್ಯ/ಮರ್ಮಗಳು:

ನೋಡುವುದು, ಕಾಣುವುದು – ಕುರುಡತನ:

ಕತ್ತರಿ:

ಎಪ್ಪತ್ತು ಮಂದಿಯನ್ನು/ಇಬ್ಬಿಬ್ಬರಾಗಿ ಕಳುಹಿಸಿದ್ದು:

ಬೇರ್ಪಡಿಸುವಿಕೆ/ಪ್ರತ್ಯೇಕಿಸು:

ಕುರಿ ಮತ್ತು ಆಡುಗಳ ಬೇರ್ಪಡಿಸುವಿಕೆ:

ಏಳೆಪ್ಪತ್ತು ಸಾರಿ (ಕ್ಷಮೆಯ ಬಗ್ಗೆ):

ಎಪ್ಪತ್ತು/ಎಪ್ಪತ್ತೆರೆಡು:

ಮರಣ ನೆರಳು:

ಕಾಲಿನಿಂದ ದೂಳನ್ನು ಜಾಡಿಸುವುದು:

ಕುರಿ ಮತ್ತು ಆಡುಗಳು:

ಕುರಿ ಅಗಸೇ ಬಾಗಿಲು (ಯೆರೂಸಲೇಮಿನಲ್ಲಿ):

ಕುರುಬನಿಲ್ಲದ ಕುರಿಗಳಂತೆ (ಉಪಮೆ):

ಕುರುಬ (ರೂಪಾಲಂಕಾರ):

ಕುರುಬರು (ಅಕ್ಷರಶಃ ಅರ್ಥದಲ್ಲಿ):

ಯಾಜಕನಿಗೆ ತೋರಿಸಿ:

ಮೈಗಳ್ಳನಾದ ಮನೆವಾರ್ತೆಯವನು:

ಸಿದೋನ್ (ಸಿರಿಯಾದ ಪಟ್ಟಣ):

ಸೂಚಕಕಾರ್ಯ:

ಯೋನನಲ್ಲಿನ ಸೂಚಕಕಾರ್ಯ:

ಸಿಲೋವ – ಸಿಲೋವ ಕೊಳ ನೋಡಿ.

ಸಿಮೆಯೋನ (ಯೆರೂಸಲೇಮಿನಲ್ಲಿನ ಭಯಭಕ್ತಿಯ ಮನುಷ್ಯ):

ಉಪಮೆ (ಶಬ್ದಾಲಂಕಾರ, ಒಂದು ರೀತಿಯ ಹೋಲಿಕೆ):

ಸೀಮೋನ (ಹೆಸರು):

ಸೀಮೋನ (ಯೇಸುವಿನ ತಮ್ಮ):

ಸೀಮೋನ (ಒಬ್ಬ ಫರಿಸಾಯನು):

ಸೀಮೋನ ಪೇತ್ರ (ಯೇಸುವಿನ ಒಬ್ಬ ಅಪೊಸ್ತಲ):

ಸೀಮೋನ ಪೇತ್ರನ ಅತ್ತೆ ಗುಣಹೊಂದಿದ್ದು:

ಅಲೆಕ್ಷಾಂದ್ರ ಮತ್ತು ರೂಫರ ತಂದೆಯಾದ ಸೀಮೋನ:

ಕುಷ್ಠರೋಗಿಯಾದ ಸೀಮೋನ:

ಮತಾಭಿಮಾನಿಯಾದ ಸೀಮೋನ (ಯೇಸುವಿನ ಒಬ್ಬ ಅಪೊಸ್ತಲ):

ಪಾಪಿಗಳು:

ಕೂತುಕೊಂಡು: (ಯೆಹೂದಿ ನಾಯಕರು):

ನಿದ್ರೆಮಾಡು (ಸತ್ತಿರುವುದಕ್ಕೆ ರೂಪಾಲಂಕಾರ):

ಸೊದೋಮ್ (ಅಬ್ರಹಾಮನ ಕಾಲದಲ್ಲಿ ದೇವರಿಂದ ನಾಶವಾದ ಪಟ್ಟಣ):

ಸೊಲೊಮೋನ (ದಾವೀದನ ಮಗ, ಅವಿಭಜಿತ ಇಸ್ರಾಯೇಲ್ ಸಾಮ್ರಾಜ್ಯದ ಕೊನೇ ಅರಸ):

ದಾವೀದನ ಕುಮಾರ/ಮಗ (ಮೆಸ್ಸೀಯನ ಹೆಸರು):

ದೇವರ ಮಗ (ಮೆಸ್ಸೀಯನ ಹೆಸರು, ಅಲ್ಲದೆ ಇಸ್ರಾಯೇಲ್ಯರಿಗಾಗಿನ ಹೆಸರು):

ಮನುಷ್ಯಕುಮಾರನು (ಮೆಸ್ಸೀಯನ ಹೆಸರು):

ಅಬ್ರಹಾಮನ ಮಕ್ಕಳು/ಸಂತತಿ (ಒಬ್ಬ ಯೆಹೂದಿ, ಯೆಹೂದ್ಯ):

ಮಗ/ಕತ್ತೆ:

ರಾಜಕುಮಾರರು/ಅರಸನ ಮಕ್ಕಳು:

ಜೆಬೆದಾಯನ ಮಕ್ಕಳು – ಯೋಹಾನ ಯಾಕೋಬನನ್ನು ನೋಡಿ.

ಹುಳಿ ದ್ರಾಕ್ಷಾರಸ:

ಬಿತ್ತುವವನು (ಸಾಮ್ಯ) – ದೇವರ ರಾಜ್ಯದ ಕುರಿತ ಸಾಮ್ಯಗಳನ್ನು ನೋಡಿರಿ.

ಬಿತ್ತುವವನು – ಕೊಯ್ಯುವವನು:

ಹೊಸ ಭಾಷೆಗಳಲ್ಲಿ ಮಾತಾನಾಡುವುದು:

ಮಸಾಲೆಗಳು:

ನಕ್ಷತ್ರ:

ರೂಪಾಯಿ (ಗ್ರೀಕ್ ನಾಣ್ಯ):

ಸ್ತೇಫನ (ಆದಿ ಸಭೆಯ ರಕ್ತಸಾಕ್ಷಿ)

ಕಲ್ಲೆಸೆದು – ಮರಣದಂಡನೆ ನೋಡಿ.

ಬಿರುಗಾಳಿ (ಯೇಸು ಗಾಳಿಯನ್ನು ಶಾಂತವಾಗಿಸಿದ್ದು):

ನಿನ್ನ ಕೈ ಚಾಚುವಿ (ಶಿಲುಬೆಗೇರುವ ಮೂಲಕ ಪೇತ್ರನ ರಕ್ತಸಾಕ್ಷಿಯ ಕುರಿತು)

ಬಲಿಷ್ಠನು (ಸೈತಾನನಿಗೆ ರೂಪಾಲಂಕಾರ):

ರಚನೆ, ವಿನ್ಯಾಸ (ಸುವಾರ್ತೆಗಳ):

ಬಾಧೆಪಡು, ಬಾಧೆ (ಯೇಸುವಿನ):

ಬಾಧೆಪಡು, ಬಾಧೆ (ಶಿಷ್ಯರ) ಹಿಂಸೆಯನ್ನು ನೋಡಿ.

ಬಾಧೆಪಡುತ್ತಿರುವ ದೇವರ ಸೇವಕ:

ಆಲದ ಮರ:

ಸುಖರ (ಸಮಾರ್ಯದಲ್ಲಿನ ಊರು):

ಸಭಾಮಂದಿರ (ಯೆಹೂದಿ ಜನರ ಗುಂಪು ಮತ್ತು ಸಬ್ಬತ್ ಆಚರಣೆಗಾಗಿ ಇರುವ ಸ್ಥಳ):

ಸಭಾಮಂದಿರದ ಅಧಿಕಾರಿ:

ಸಮಾಂತರ (ಒಟ್ಟಾಗಿ ನೋಡುವುದು):

ಸಮಾಂತರ ಸುವಾರ್ತೆಗಳು (ಮತ್ತಾಯ, ಮಾರ್ಕ ಮತ್ತು ಲೂಕರುಗಳಿಗೆ ಇರುವ ಹೆಸರು)

ಸುರೊಫೊಯಿನಿಕ್ಯರ (ಅಥವಾ ಕಾನ್ಯನ್ಯರ) ಹೆಂಗಸಿನ ಮಗಳು ಗುಣಹೊಂದಿದ್ದು:

ದೇವದರ್ಶನ ಗುಡಾರ (ಪರ್ಣಶಾಲೆ): ಗುಡಾರ (ಪರ್ಣಶಾಲೆ) ನೋಡಿ

ಪರ್ಣಶಾಲೆಗಳ (ಗುಡಾರಗಳ) ಹಬ್ಬ (ಯೆಹೂದ್ಯರ ಮೂರು ವಾರ್ಷಿಕ ಹಬ್ಬಗಳಲ್ಲಿ ಒಂದು):

ಒಬ್ಬನು ತನ್ನ ಶಿಲುಬೆಯನ್ನು ಹೊತ್ತುಕೊಂಡು (ಬಾಧೆಪಡಲು ಸಿದ್ಧನಿರುವುದಕ್ಕೆ ರೂಪಾಲಂಕಾರ)

ತಲಾಂತು (ಗ್ರೀಕ್ ಹಣದ ಘಟಕ, 15-20 ವರ್ಷಗಳ ಕೂಲಿಗೆ ಸಮವಾದದ್ದು)

ತಲಾಂತುಗಳು (ಸಾಮ್ಯ):

ತಲಿಥಾಕೂಮ್ ("ಅಮ್ಮಣ್ಣಿ ಎದ್ದೇಳು" ಎನ್ನುವ ಅರಾಮಿಕ್ ಪದ):

ಒಬ್ಬ ಹೆಂಗಸಿನೊಂದಿಗೆ ಮಾತನಾಡುವುದು:

ತಾಮಾರ್ (ಯೇಸುವಿನ ವಂಶಾವಳಿಯಲ್ಲಿ ಸೇರಿದ ಅನ್ಯ ಸ್ತ್ರೀ):

ತೆರಿಗೆ (ತೆರಿಗೆ ಕಟ್ಟುವುದು):

ತೆರಿಗೆ ವಸೂಲಿಗಾರ:

ಬೋಧಕ (ಗುರು) – ರಬ್ಬಿ ನೋಡಿ

ಧರ್ಮೋಪದೇಶಕರು – ಫರಿಸಾಯರನ್ನು ನೋಡಿ

ಬಟ್ಟೆಯನ್ನು ಹರಿದುಕೊಂಡು (ದುಃಖದ ಸಂಕೇತ):

ದೇವಾಲಯ – ಯೆರೂಸಲೇಮ್ ದೇವಾಲಯ ನೋಡಿ

ದೇವಾಲಯ (ದೇಹಕ್ಕೆ ಒಂದು ರೂಪಾಲಂಕಾರ):

ದೇವಾಲಯದ ತೆರಿಗೆ – ತೆರಿಗೆ ನೋಡಿ

ಶೋಧಿಸು, ಪರೀಕ್ಷಿಸು:

ಸೈತಾನನಿಂದ ಶೋಧಿಸಲ್ಪಟ್ಟನು (ಯೇಸುವಿನ ಬಗ್ಗೆ):

ದಶಾಜ್ಞೆಗಳು:

ಹತ್ತು ಮಂದಿ ಕುಷ್ಠರೋಗಿಗಳು ಗುಣಹೊಂದಿದ್ದು:

ಹತ್ತು ಕನ್ಯೆಯರು (ಸಾಮ್ಯ):

ಒಕ್ಕಲಿಗರು (ಸಾಮ್ಯ):

ಗುಡಾರ, ಪರ್ಣಶಾಲೆ:

ಹತ್ತನೇ ಆಜ್ಞೆ:

ಪರೀಕ್ಷಿಸುವುದು, ಸಿಕ್ಕಿಸುವುದು, ತಪ್ಪುಹುಡುಕು (ಯೇಸುವಲ್ಲಿ):

ಸಾಕ್ಷಿ:

ಆ ದಿನ – ನ್ಯಾಯತೀರ್ಪಿನ ದಿನ ನೋಡಿರಿ

ವಿಷಯವಸ್ತು:

(ಸುವಾರ್ತೆಗಳ) ದೈವಶಾಸ್ತ್ರ:

ಈ ನನ್ನ ಸಹೋದರರಲ್ಲಿ:

ಮೂವತ್ತು ಬೆಳ್ಳಿ ನಾಣ್ಯಗಳು (ಯೇಸುವನ್ನು ಹಿಡುಕೊಡಲು):

ತೋಮನು (ಯೇಸುವಿನ ಒಬ್ಬ ಅಪೊಸ್ತಲ, ದಿದುಮನೆಂಬುದಾಗಿ ಸಹ ಕರೆಯಲ್ಪಟ್ಟವ, ಅದರರ್ಥ "ಅವಳಿ":

ಮೂರು ದಿನ ಹಗಲು ರಾತ್ರಿ:

ಸಿಂಹಾಸನ (ಅಧಿಕಾರದ ಸಂಕೇತ):

ತಿಬೇರಿಯ (ಕ್ರಿ.ಶ. 14-36 ರಲ್ಲಿನ ರೋಮನ್ ಚಕ್ರಚರ್ತಿ):

ದಶಮಾಂಶ, ಹತ್ತರಲ್ಲೊಂದು ಪಾಲು ಕೊಡು:

ಟೈಟಸ್ (ವೆಸ್ಪೇಸಿಯನ್ನ ಮಗ, ಕ್ರಿ.ಶ. 79-81 ರಲ್ಲಿನ ರೋಮನ್ ಚಕ್ರವರ್ತಿ, "ಯೆಹೂದ್ಯರ ಯುದ್ಧದ ವೇಳೆ "ರೋಮನ್ ಅಧಿಪತಿ":

ಸಮಾಧಿ, ಗವಿ:

ಮುಟ್ಟು (ಆಶೀರ್ವಧಿಸುವುದಕ್ಕೆ ಸಮಾನ):

ದಾವೀದನೂರು – ಬೇತ್ಲೆಹೇಮ್ ನೋಡಿ

ಯೇಸುವಿನ ರೂಪಾಂತರ:

ದ್ರವ್ಯ, ಹುಡುಗಿಸಿ/ಹಡಗಿಸಿಟ್ಟ/ಹೂಳಿಟ್ಟ ದ್ರವ್ಯ (ಸಾಮ್ಯ):

ದೇವರ ರಾಜ್ಯದ ಕುರಿತ ಸಾಮ್ಯ ನೋಡಿರಿ

ಪರಲೋಕದಲ್ಲಿ ಸಂಪತ್ತು (ರಕ್ಷಣೆಗೆ ರೂಪಾಲಂಕಾರ):

ಖಜಾನೆ (ಯೆರೂಸಲೇಮಿನ ದೇವಾಲಯದಲ್ಲಿನ):

ಯೇಸುವಿನ ವಿಚಾರಣೆ:

ಅರಸನಂತೆ (ವಿಜಯೋತ್ಸಾಹದಿಂದ) ಪ್ರವೇಶಿಸಿದ್ದು (ಯೇಸು ಯೆರೂಸಲೇಮಿಗೆ):

ಹನ್ನೆರಡು ಮಂದಿ – ಅಪೊಸ್ತಲರನ್ನು ನೋಡಿ

ಹನ್ನೆರಡು ವರ್ಷದವನಾದಾಗ:

ಇಬ್ಬರು ಕುರುಡರು ಗುಣಹೊಂದಿದ್ದು:

ಇಬ್ಬಿಬ್ಬರಾಗಿ:

ಎರಡು ಅಂಗಿ:

ಎರಡು ಹಂತದ ನೆರವೇರಿಕೆ:

ತೂರ್ (ಫೊಯಿನಿಕ್ಯದಲ್ಲಿನ ಅನ್ಯಜನರ ಪಟ್ಟಣ):

ಅಶುದ್ಧ, ಅಸಹ್ಯ:

ಅಶುದ್ಧಾತ್ಮ:

ತೆರೆದ ಸಮಾಧಿಗಳು:

ಕರುಣೆಯಿಲ್ಲದ ಸೇವಕ (ಸಾಮ್ಯ):

ಅನ್ಯಾಯದ ಧನ:

ಹಳೆ ಬಟ್ಟೆಗೆ ಹೊಸ ತ್ಯಾಪೆ (ಸಾಮ್ಯ):

ದ್ರಾಕ್ಷೆತೋಟ (ಇಸ್ರಾಯೇಲ್ ಸಂಕೇತ):

ದ್ರಾಕ್ಷೆತೋಟ – ದ್ರಾಕ್ಷೇತೋಟದಲ್ಲಿನ ಆಳುಗಳು ನೋಡಿ (ಸಾಮ್ಯ):

ನೀರಿನ ಮೇಲೆ ನಡೆದದ್ದು (ಯೇಸು):

ನೀರಿನ ಮೇಲೆ ನಡೆದದ್ದು (ಪೇತ್ರ):

ಯೆಹೂದ್ಯರ ಯುದ್ಧಗಳು (ಜೋಸೆಫಸ್ಸನ ಪುಸ್ತಕ):

ಕೈತೊಳ್ಕೊಳ್ಳುವುದು:

ರಾತ್ರಿಯ ಜಾವಗಳು:

ಎಚ್ಚರವಾಗಿರುವುದು, ಸಿದ್ಧರಾಗಿರುವುದು:

ಸಂಪತ್ತು, ಧನ, ಐಶ್ವರ್ಯ:

ಮದುವೆ, ಮದುವೆಯ ಅತಿಥಿ, ಮದುವೆಯ ಆಮಂತ್ರಣ, ಮದುವೆಯ ವಸ್ತ್ರ:

ಕಾನಾ ಊರಿನ ಮದುವೆ:

ಮದುವೆಯ ಭೋಜನ (ಊಟ):

ಹಣಜಿ:

ಹಣಜಿ (ಸಾಮ್ಯ) – ದೇವರ ರಾಜ್ಯದ ಸಾಮ್ಯ ನೋಡಿ

ಹೆಣವಿದ್ದಲ್ಲಿ ಹದ್ದು ಬರುವುದು (ಗಾದೆ):

ವಿಧವೆ ಮತ್ತು ನ್ಯಾಯಾಧಿಪತಿ (ಸಾಮ್ಯ):

ವಿಧವೆಯರು:

ವಿಧವೆಯರ ಕಾಣಿಕೆ:

ನಾಯಿನೂರಿನ ವಿಧವೆಯ ಮಗ:

ರಕ್ತಬೋಳ ಬೆರಸಿದ ದ್ರಾಕ್ಷಾರಸ:

ಚಳಿಗಾಲ:

ಕಾಲಿಗೆ ಹತ್ತಿದ ದೂಳನ್ನು ಜಾಡಿಸು (ಸಾಂಕೇತಿಕ):

ಜ್ಞಾನ (ದೇವರ ಮತ್ತು ಯೇಸುವಿನ):

ಜ್ಞಾನಿಗಳು – ಜೋಯಿಸರು:

ಸಾಕ್ಷಿಗಳು (ಯೆಹೂದಿ ನ್ಯಾಯಾಲಯದಲ್ಲಿನ ಸಾಕ್ಷಿ):

ಆಣೆ:

ವ್ಯಭಿಚಾರದಲ್ಲಿ ಸಿಕ್ಕ ಹೆಂಗಸು/ಸ್ತ್ರೀ:

ರಕ್ತಕುಸುಮ ರೋಗದಿಂದ ಗುಣಹೊಂದಿದ ಸ್ತ್ರೀ:

ನಡು ಬೊಗ್ಗಿ ಹೋಗಿದ್ದ ಸ್ತ್ರೀ ಗುಣಹೊಂದಿದ್ದು:

ವಾಕ್ಯ (ಯೇಸುವಿಗಾಗಿನ ಹೆಸರು):

ದ್ರಾಕ್ಷೆತೋಟದಲ್ಲಿನ ಕೆಲಸಗಾರರು (ಸಾಮ್ಯ):

ಬರೆಯುವ ಹಲಗೆ:

ತನ್ನ ಬೆರಳಿನಿಂದ ಬರೆದನು:

ಹುಳಿ (ಕೆಟ್ಟ ಪ್ರಭಾವಕ್ಕೆ ರೂಪಾಲಂಕಾರ):

ಹುಳಿ (ಬೆಳವಣಿಗೆ ಮತ್ತು ಸಕರಾತ್ಮಕ ಪ್ರಭಾವಕ್ಕೆ ರೂಪಾಲಂಕಾರ):

ಹುಳಿ ಹಿಟ್ಟು (ಸಾಮ್ಯ) – ದೇವರ ರಾಜ್ಯದ ಸಾಮ್ಯಗಳು:

ನೊಗ (ರೂಪಾಲಂಕಾರ):

ಜಕ್ಕಾಯ (ಮುಖ್ಯ ಸುಂಕದ ಗುತ್ತಿಗೆದಾರ):

ಮತಾಭಿಮಾನಿ (ಯೆಹೂದಿ ಕ್ರಾಂತಿಕಾರಿ ಗುಂಪು):

ಜಕರೀಯ (ಯಾಜಕ, ಸ್ನಾನಿಕನಾದ ಯೋಹಾನನ ತಂದೆ):

ಜಕರ್ಯ (ಹಳೇ ಒಡಂಬಡಿಕೆಲ್ಲಿ ಕಲ್ಲೆಸೆದು ಕೊಲ್ಲಲ್ಪಟ್ಟ ಯಾಜಕನ ಮಗ):

ಜಕರ್ಯ (ಹಳೇ ಒಡಂಬಡಿಕೆಯ ಪ್ರವಾದಿ):

ಜೀಯಸ್ (ಗ್ರೀಕರ ಮುಖ್ಯ ದೇವರು):